ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನಕವಿಗಳ ಕೊಡುಗೆ

(೧೦ನೇ ಶತಮಾನದಿಂದ ೧೬ನೇ ಶತಮಾನದ ಕಾಲಾವಧಿ)

'A' Grade
NAAC Accredited 2014
University with Potential for Exellence

ಸಂಶೋಧಕರು

ನೇಮಿನಾಥ ತಪಕೀರೆ ಎಂ.ಎ., ಬಿ.ಇಡಿ.

ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾರ್ಗದರ್ಶಕರು

ಪ್ರೊ. ಧನವಂತ ಹಾಜವಗೋಳ ಎಂ.ಎ., ಎಂ.ಫಿಲ್ ಪಿಎಚ್.ಡಿ.

ಪ್ರಾಧ್ಯಾಪಕರು,
ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕನ್ನಡ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಶೋಧನ

ಮಹಾಪ್ರಬಂಧ

೨೦೧೯

ಘೋಷಣಾ ಪತ್ರ

ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ **ಪ್ರೊ. ಧನವಂತ ಹಾಜವಗೋಳ** ಇವರ ಮಾರ್ಗದರ್ಶನದಲ್ಲಿ **"ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)"** ಎಂಬ ವಿಷಯವನ್ನು ಕುರಿತು ಸಂಶೋಧನೆ ಕೈಗೊಂಡು ಪಿಎಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದೇನೆ. ಪ್ರಸ್ತುತ ಈ ಮಹಾಪ್ರಬಂಧವು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಶ್ರೀ ನೇಮಿನಾಥ ತಪಕೀರೆ
ಸಂಶೋಧಕರು
ಡಾ. ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೦೩

ಸ್ಥಳ : ಧಾರವಾಡ
ದಿನಾಂಕ:

ಪ್ರಮಾಣ ಪತ್ರ

ಶ್ರೀ ನೇಮಿನಾಥ ತಪಕೀರೆ ಇವರು ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ **"ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)"** ಎಂಬ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದೆ. ಇವರು ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ಅಧ್ಯಯನ ಕೈಗೊಂಡಿದ್ದಾರೆ. ಇದು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು
ಪ್ರೊ. ಧನವಂತ ಹಾಜವಗೋಳ
ಪ್ರಾಧ್ಯಾಪಕರು
ಡಾ. ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೦೩

ಸ್ಥಳ : ಧಾರವಾಡ
ದಿನಾಂಕ:

ಕೃತಜ್ಞತೆಗಳು

ಪ್ರಸ್ತುತ "ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)" ಕುರಿತಾದ ಸಂಶೋಧನ ಮಹಾಪ್ರಬಂಧದ ರಚನೆಗೆ ಅತ್ಯುತ್ತಮ ಸಲಹೆ-ಸಹಕಾರ ಹಾಗೂ ಮಾರ್ಗದರ್ಶನವನ್ನು ನೀಡಿದ ಪ್ರೊ. ಧನವಂತ ಹಾಜವಗೋಳ ಇವರಿಗೆ ವಿನಯಪೂರ್ವಕವಾಗಿ ವಂದನೆಗಳನ್ನು ತಿಳಿಸುತ್ತೇನೆ.

ನನ್ನ ಸಂಶೋಧನ ಅಧ್ಯಯನಕ್ಕೆ ಮಾರ್ಗದರ್ಶಿ ಸಲಹೆಗಳನ್ನು ನೀಡಿದ ವಿದ್ಯಾಗುರುಗಳಾದ ಡಾ. ಎಚ್. ಎಂ. ಮಹೇಶ್ವರಯ್ಯ, ಡಾ. ಜೆ. ಎಂ. ನಾಗಯ್ಯ, ಡಾ. ಕೆ. ಆರ್. ದುರ್ಗಾದಾಸ, ಡಾ. ಶಾಂತಿನಾಥ ದಿಬ್ಬದ, ಡಾ. ಟಿ. ಎಂ. ಭಾಸ್ಕರ, ಡಾ. ರಾಜೇಂದ್ರ ಎಮ್. ನಾಯಕ, ಡಾ. ಎನ್. ವೈ. ಮಟ್ಟಿಹಾಳ, ಡಾ. (ಶ್ರೀಮತಿ) ಎಂ. ಆರ್. ಹಿರೇಮಠ, ಡಾ. ಕೃಷ್ಣ ನಾಯಕ, ಡಾ. ಪಂಡಿತ ಕೆ. ರಾಠೋಡ, ಡಾ. ನಿಂಗಪ್ಪ ಹಳ್ಳಿ, ಡಾ. ಅನಿತಾ ಗುಡಿ, ಡಾ. ಜಿನದತ್ತ ಹಡಗಲಿ, ಡಾ. ಅಪ್ಪಣ್ಣಾ ಹಂಜೆ, ಡಾ. ಎಸ್. ಪಿ. ಪದ್ಮಪ್ರಸಾದ, ಶ್ರೀ ಬಿ. ಎ. ಮೇಕಣಮರಡಿ ಇವರೆಲ್ಲರಿಗೂ ಗೌರಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ಬದುಕಿನ ನೂರಾರು ಕಷ್ಟಕೋಟಲೆಗಳಲ್ಲಿಯೂ ನನಗೆ ಉತ್ತಮ ಶಿಕ್ಷಣವನ್ನು ಕೊಡಿಸಲು ಶ್ರಮಿಸಿದ ತಂದೆ ಶ್ರೀ. ಬಸವಣ್ಣಿ ನೇಮಣ್ಣ ತಪಕೀರೆ ಹಾಗೂ ನೆನಪಲ್ಲಿ ಹಸಿರಾಗಿರುವ ತಾಯಿ ಶ್ರೀಮತಿ. ಇಂದುಮತಿ ಬಸವಣ್ಣಿ ತಪಕೀರೆ ಇವರ ಪಾದಕಮಲಗಳಲ್ಲಿ ಹಣೆಮಣಿಯುತ್ತೇನೆ.

ನನ್ನ ಪಿಎಚ್.ಡಿ. ಅಧ್ಯಯನದುದ್ದಕ್ಕೂ ಕೈಜೋಡಿಸಿ ಪ್ರೋತ್ಸಾಹಿಸಿದ ಮಡದಿ ಸನ್ಮತಿ, ಗೆಳೆಯರಾದ ಜಗದೀಶ ಮುಗಳಿ, ಉಮೇಶ ಪಾಟೀಲ, ಲಕ್ಷ್ಮೀಕಾಂತ ಹೂಗಾರ, ಭರಮಪ್ಪಾ ಭಾವಿ, ಈಶ್ವರ, ಮಹಾದೇವ, ಅಪ್ಪಣ್ಣಾ, ಸಿದ್ದಪ್ಪಾ, ಮಲ್ಲಿಕಾರ್ಜುನ ಹಾಗೂ ನನ್ನೆಲ್ಲ ಗೆಳೆಯರ ಬಳಗಕ್ಕೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಯನಕ್ಕೆ ಬೆಂಬಲ ನೀಡಿದ ಸಹೋದರ ಶಾಂತಿನಾಥ ತಪಕೀರೆ, ಮಾವನವರಾದ ಟಿ. ಎಸ್. ಪಾಟೀಲ ಹಾಗೂ ಸಕಲ ಬಂಧುವರ್ಗಕ್ಕೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ನನ್ನ ಸಂಶೋಧನೆಗೆ ಯು.ಜಿ.ಸಿ.ಯು.ಪಿ.ಇ. ಯೋಜನೆಯಲ್ಲಿ ಧನಸಹಾಯ ನೀಡಿದ ಕರ್ನಾಟಕ ವಿಶ್ವವಿದ್ಯಾಲಯಕ್ಕೂ, ಜೆ.ಆರ್.ಎಫ್./ಎಸ್.ಅರ್.ಎಫ್. ಶಿಷ್ಯವೇತನವನ್ನು ನೀಡಿದ ಯು.ಜಿ.ಸಿ.ಗೆ, ಸಕಾಲದಲ್ಲಿ ಸಹಾಯ ಸಹಕಾರವನ್ನು ಮಾಡಿದ ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಶಿ. ಶಿ. ಬಸವನಾಳ ಗ್ರಂಥಾಲಯ, ಶಿಷ್ಯವೇತನ ವಿಭಾಗದ ಸಿಬ್ಬಂದಿ ವರ್ಗದವರಿಗೆ ಹಾಗೂ ಮದ್ರಾಸ್‌ನ ಓರಿಯಂಟಲ್ ಲೈಬ್ರರಿಯವರಿಗೆ ನಮನಗಳನ್ನು ಸಲ್ಲಿಸುತ್ತೇನೆ.

ಮುಖಪುಟ ವಿನ್ಯಾಸ ಹಾಗೂ ಬೈಂಡಿಂಗ್ ಮಾಡಿಕೊಟ್ಟ ಓಂ ಝೆರಾಕ್ಸ್ ಇವರಿಗೆ ಧನವ್ಯವಾದಗಳನ್ನು ಸಲ್ಲಿಸುತ್ತೇನೆ.

-ಶ್ರೀ. ನೇಮಿನಾಥ ತಪಕೀರೆ

ಪರಿವಿಡಿ

ಪರಿವಿಡಿ

ಅಧ್ಯಾಯ : ೫ – ಕನ್ನಡ ಲೌಕಿಕ ಶಾಸ್ತ್ರ ಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ ೩೦೨–೪೫೪

ಅಧ್ಯಾಯ : ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಸಾಮಾಜಿಕ ಪ್ರಾಣಿಯಾದ ಮನುಷ್ಯ ಸಾವಿರಾರು ವರ್ಷಗಳ ಹಿಂದೆ ಇತರ ಜೀವಿಗಳೊಂದಿಗೆ ಭೂಮಿಯ ಮೇಲೆ ಜನ್ಮತಳೆದನು. ಆದರೆ ತನ್ನ ಮಾತು ಮತ್ತು ಬೌದ್ಧಿಕ ಬಲದಿಂದ ಇತರ ಎಲ್ಲ ಪ್ರಾಣಿಗಳಿಂದಲೂ ಭಿನ್ನವಾಗಿ ಬೆಳೆದ. ತನ್ನ ಅನುಭವಗಳನ್ನು ಅಭಿವ್ಯಕ್ತಪಡಿಸಲು ಭಾಷೆಯೆಂಬ ಮಾಧ್ಯಮವನ್ನು ಕಂಡುಕೊಂಡ. ಬರಬರುತ್ತ ಆ ಅನುಭವಗಳನ್ನು ಚಿಹ್ನೆಯ ರೂಪದಲ್ಲೋ ಅಥವಾ ಚಿತ್ರದ ರೂಪದಲ್ಲೋ ದಾಖಲಿಸುವುದನ್ನು ಕಲಿತುಕೊಂಡ. ತದನಂತರದಲ್ಲಿ ತನ್ನ ಭಾಷೆಗೆ ಪ್ರತ್ಯೇಕ ಲಿಪಿಯನ್ನು ಕಂಡುಕೊಂಡ. ಆ ಲಿಪಿಯ ಮೂಲಕ ದಾಖಲಿಸಿಕೊಂಡು ಬಂದಿರುವುದೇ ಶಿಷ್ಟ ಸಾಹಿತ್ಯವೆಂದು ಗುರುತಿಸಲಾಯಿತು. ಇನ್ನು ಯಾವುದೇ ರೀತಿಯಲ್ಲಿ ದಾಖಲಿಸದೇ ಬಾಯಿಂದ ಬಾಯಿಗೆ ಹರಿದು ಬಂದ ಸಾಹಿತ್ಯವು ಮೌಖಿಕ ಸಾಹಿತ್ಯವಾಯಿತು. ಶಿಷ್ಟ ಸಾಹಿತ್ಯದಲ್ಲಿ ಸೃಜನಶೀಲ ಸಾಹಿತ್ಯ ಮತ್ತು ಶಾಸ್ತ್ರಸಾಹಿತ್ಯಗಳೆಂದು ಎರಡು ಬಗೆಗಳನ್ನು ವಿದ್ವಾಂಸರು ಗುರುತಿಸುತ್ತಾರೆ. ಈ ನಿಟ್ಟಿನಲ್ಲಿ ರಚನೆಯಾದ ಸಾಹಿತ್ಯವು ಇಂದು ಬಹುಮುಖಿ ಅಧ್ಯಯನಗಳ ಆಗರವಾಗಿದೆ. ಈ ಸಾಹಿತ್ಯದ ಬಗೆಗೆ ಸಂಶೋಧನೆಯೆಡೆಗೆ ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ವಿಷಯಗಳಲ್ಲಿ ಜಿಜ್ಞಾಸೆ ಮೂಡಿತು. ಸಾಹಿತ್ಯವು ಜನಜೀವನದ ಪ್ರತಿಬಿಂಬ. ಅದರಲ್ಲಿ ಸಂಶೋಧನೆಯು ಹಿಂದೆ ಗತಿಸಿದ ಸಮಾಜದ ಜೀವಂತ ಚಿತ್ರಣವನ್ನು ನೀಡುವ ನಿಟ್ಟಿನಲ್ಲಿ ಮುನ್ನಡೆಯಿತು. ಭೂತಕಾಲದ ಸಮಾಜದ ಅರಿವಿನಿಂದ ವರ್ತಮಾನದ ಬದುಕನ್ನು ಮತ್ತು ಉತ್ತಮ ಭವಿಷ್ಯವನ್ನು ಕಟ್ಟಿಕೊಳ್ಳಲು ಸಾಧ್ಯ. ಚರಿತ್ರೆ, ಶಾಸನ, ಸಾಹಿತ್ಯ, ಹಸ್ತಪ್ರತಿ, ಭಾಷೆ, ಜನಪದ ಶೋಧ, ಸಂಸ್ಕೃತಿ ಮೊದಲಾದವುಗಳ ವ್ಯಾಖ್ಯಾನ, ವಿಶ್ಲೇಷಣೆಗೆ ತೊಡಗುವುದಲ್ಲದೆ ಮಾನವ ಜೀವನದ ಸಮಗ್ರ ಪ್ರತಿಬಿಂಬ, ಗತಿಬಿಂಬಗಳ ಪರಿಪೂರ್ಣ ದರ್ಶನ ಮಾಡಿಸುವ ಪ್ರಯತ್ನದಲ್ಲಿ ಸಂಶೋಧನೆಯು ತೊಡಗಿದೆ.

ಹಾಗೆಯೇ ಕನ್ನಡ ಸಾಹಿತ್ಯದಲ್ಲಿ ಶಾಸ್ತ್ರಸಾಹಿತ್ಯವು ಅತಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಪ್ರಾಚೀನ ಕಾಲದಲ್ಲಿ ಶಸ್ತ್ರವಿದ್ಯೆ ಎಷ್ಟು ಮಹತ್ವವನ್ನು ಪಡೆದುಕೊಂಡಿತ್ತೋ, ಶಾಸ್ತ್ರಾಧ್ಯನವೂ ಅಷ್ಟೇ ಮಹತ್ವವನ್ನು ಪಡೆದುಕೊಂಡಿತ್ತು. ಆ ಕಾಲದಲ್ಲಿ ಶಾಸ್ತ್ರ ಅಧ್ಯಯನ ಮಾಡುವುದು ಒಂದು ಅಮೂಲ್ಯ ನಿಧಿಯನ್ನು ಪಡೆದಷ್ಟೇ ಬೆಲೆಯುಳ್ಳದ್ದಾಗಿತ್ತು. ಇಂತಹ ಚಿರಂತನವಾದ ಶಾಸ್ತ್ರವು ಇಂದಿಗೂ ಬೆಳಕು ನೀಡಬಲ್ಲ ದೀವಿಗೆಯಾಗಿದೆ. ಇಂದಿನ ವೈಜ್ಞಾನಿಕ ಯುಗವನ್ನೇ ನಾಚಿಸಬಲ್ಲ ಅಪಾರವಾದ ಜ್ಞಾನಶಾಖೆಗಳನ್ನು ಭಾರತೀಯ ಪ್ರಾಚೀನ ವಿಜ್ಞಾನದಲ್ಲಿ ಕಾಣಬಹುದಾಗಿದೆ. 'ಶಾಸ್ತ್ರಸಾಹಿತ್ಯ' ಎಂಬ ಪದವು ಸಮಾಸ ಪದವಾಗಿದ್ದು ಸಾಹಿತ್ಯ ಮತ್ತು ಶಾಸ್ತ್ರ

ಎಂಬ ಎರಡು ಪದಗಳನ್ನು ಒಳಗೊಂಡಿದೆ. ಶಾಸ್ತ್ರ ವಿಚಾರಗಳನ್ನು ತಿಳಿಸುವ ಬರವಣಿಗೆ ಅಥವಾ ವಾಙ್ಮಯ ಅಥವಾ ಗ್ರಂಥರಾಶಿ ಎಂದು ಈ ಪದವನ್ನು ಅರ್ಥೈಸಬಹುದಾಗಿದೆ. ಸೃಜನಶೀಲ ಸಾಹಿತ್ಯಕ್ಕೂ ಮತ್ತು ಶಾಸ್ತ್ರಸಾಹಿತ್ಯಕ್ಕೂ ವ್ಯತ್ಯಾಸಗಳಿವೆ. ಸೃಜನಸಾಹಿತ್ಯವು ಮನಸ್ಸಿನ ಆಹ್ಲಾದಕ್ಕೆ ಹೃದಯಗಮ್ಯವಾಗಿ ಬೆಳೆದರೆ; ಶಾಸ್ತ್ರಸಾಹಿತ್ಯವು ಬುದ್ಧಿಗೆ ಪಟ್ಟುಹಾಕಿ ಬೆಳೆದುಬಂದಿತು. ಇಲ್ಲಿ 'ಶಾಸ್ತ್ರ' ಎಂಬ ಪದವೇ ಸಂಶೋಧಕರನ್ನು ವೈಚಾರಿಕತೆಗೆ ಎಳಸುತ್ತದೆ.

ಗುರುವಿನಿಂದ ಶಿಷ್ಯನಿಗೆ ಶಿಕ್ಷಣ, ದೀಕ್ಷೆಯನ್ನು ನೀಡುವುದು. ಗುರುವಿನಿಂದ ಪಡೆದುಕೊಂಡ ಶಿಕ್ಷಣವನ್ನು ಮುಂದಿನ ಪೀಳಿಗೆಗೆ ಮುಂದುವರೆಸಿಕೊಂಡು ಹೋಗುವುದು 'ಶಿಕ್ಷಾ'ಶಾಸ್ತ್ರವಾದರೆ, ಗ್ರಂಥ ರಚನೆಯಲ್ಲಾಗಲಿ ಕಾವ್ಯ ರಚನೆಯಲ್ಲಾಗಲಿ ತಪ್ಪು ಮಾಡಬಾರದು ಎಂದು ಹೇಳುವುದು 'ವ್ಯಾಕರಣಶಾಸ್ತ್ರ'ವಾಯಿತು. ಕಾವ್ಯ ರಚನೆಯ ಶೈಲಿ, ಪದ್ಯರೂಪಗಳ ಬಗ್ಗೆ ತಿಳಿಸುವುದು 'ಛಂದಸ್ಸುಶಾಸ್ತ್ರ'. ವೇದೋಪನಿಷತ್ತುಗಳಲ್ಲಿ ಹುದುಗಿರುವ ಪದಸಂಪತ್ತಿನ ಅರ್ಥ ವಿಶ್ಲೇಷಣೆ ಮಾಡುವುದು 'ನಿರುಕ್ತ'. ಆಚರಣೆಯ ಕ್ರಮವನ್ನು ತಿಳಿಸುವುದು 'ಕಲ್ಪ'. ಮುಂದೆ ಆಗು, ಹೋಗುವ ವಿಷಯಗಳ ಚಿತ್ರಣವನ್ನು ಕಟ್ಟಿಕೊಡುವುದು 'ಜ್ಯೋತಿಷ್ಯಶಾಸ್ತ್ರ'. ಹೀಗೆ ಶಾಸ್ತ್ರಸಾಹಿತ್ಯವನ್ನು ವೇದಗಳ ಅಥವಾ ವೈದಿಕ ದೃಷ್ಟಿಕೋನದಿಂದ ತಿಳಿಯಬಹುದು. ಸಂಸ್ಕೃತಿ ಬೆಳೆದಂತೆ ಶಾಸ್ತ್ರ ಪ್ರಪಂಚವೂ ಬೆಳೆಯಿತು. ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ನಾಟ್ಯಶಾಸ್ತ್ರ, ಗಣಿತಶಾಸ್ತ್ರ, ಸಂಗೀತಶಾಸ್ತ್ರ, ವೈದ್ಯಶಾಸ್ತ್ರ ಹೀಗೆ ಹತ್ತು ಹಲವಾರು ಆಯಾಮಗಳಲ್ಲಿ ಶಾಸ್ತ್ರಸಾಹಿತ್ಯವು ವಿಸ್ತಾರವನ್ನು ಪಡೆಯಿತು.

೧.೧. ಇದುವರೆಗಿನ ಅಧ್ಯಯನಗಳು:

'ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಜೈನಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)' ಎಂಬ ವಿಷಯಾಧಾರಿತ ಸಂಶೋಧನೆಯನ್ನು ಕೈಕೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೂ ಹಲವಾರು ವಿದ್ವಾಂಸರು ಸಂಶೋಧನೆಯಲ್ಲಿ ತೊಡಗಿಸಿಕೊಂಡು ಅಧ್ಯಯನ ಕಾರ್ಯಗಳನ್ನು ಕೈಗೊಂಡಿದ್ದಾರೆ. ಎಸ್. ಎನ್. ನರಸಿಂಹಯ್ಯ 'ಶ್ರೀ ಲಕ್ಷ್ಮೀನೃಸಿಂಹ ಸ್ತೋತ್ರ', ಕೌಲಗಿ ಶೇಷಾಚಾರ್ಯ 'ಅಲಂಕಾರಶಾಸ್ತ್ರ', ಕೆ. ಕೃಷ್ಣಮೂರ್ತಿಯವರ 'ಆನಂದವರ್ಧನನ ಕಾವ್ಯಮೀಮಾಂಸೆ', ಡಾ. ಎಂ. ಎಂ. ಕಲಬುರ್ಗಿಯವರ 'ಕವಿರಾಜಮಾರ್ಗ ಪರಸರದ ಕನ್ನಡ ಸಾಹಿತ್ಯ', 'ಶ್ರೀನಿವಾಸ ಗೀತಾ ನಾವಲ ಅವರ 'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಪರಿಕಲ್ಪನೆ', ಕೆ. ವರದಾಚಾರ್ಯರ 'ಕನ್ನಡ ಕೈಪಿಡಿ', ಡಿ. ವಿ. ಗುಂಡಪ್ಪನವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ', ಡಿ. ಎಸ್. ಕರ್ಕಿಯವರ 'ಕನ್ನಡ ಛಂದೋವಿಕಾಸ', ಗರಣಿ. ವೈ. 'ಛಂದಸ್ಸಾರ', ಬಿ. ಎಂ. ಶ್ರೀಯವರ 'ಕನ್ನಡ ಛಂದಸ್ಸಿನ ಚರಿತ್ರೆ', ಕವೀಶ್ವರ ನರಸಪ್ಪ 'ಛಂದೋದರ್ಪಣ', ಎಚ್. ಎಸ್. ಬಿಳಿಗಿರಿ. 'ಆಲೋಕ', ಆರ್. ರಘುನಾಥರಾವ್ 'ಕರ್ಣಾಟಕ ವ್ಯಾಕರಣೋಪನ್ಯಾಸ', ಬಸವರಾಜ ಕೊಡಗುಂಟಿಯವರ 'ಕನ್ನಡ

ವಿಭಕ್ತಿಗಳ ಐತಿಹಾಸಿಕ ಬೆಳವಣಿಗೆ : ಒಂದು ಅಧ್ಯಯನ', ಎಸ್. ಡಿ. ಕೆಂಗಲಗುತ್ತಿಯವರ 'ಕನ್ನಡ ಮಧ್ಯಕಾಲೀನ ಜೈನ ಕಾವ್ಯಗಳಲ್ಲಿ ದೇಶಿ ಚಿಂತನೆ', ರಾಜೀವ ಆರ್. ಹೆಗಡೆಯವರ 'ಸಾಳ್ವಕವಿ : ಒಂದು ಅಧ್ಯಯನ (ರಸರತ್ನಾಕರವನ್ನು ಅನುಲಕ್ಷಿಸಿ)', ಆಯ್. ಬಿ. ಸಾತಿಹಾಳ ಅವರ 'ಕನ್ನಡದಲ್ಲಿ ಶೃಂಗಾರ ಸಾಹಿತ್ಯ (ಪ್ರಾಚೀನ ಕಾವ್ಯಗಳನ್ನು ಅನುಲಕ್ಷಿಸಿ)', ಜೆ. ಎಸ್. ಕುಳ್ಳಿಯವರ Keshiraja's Sabdamani Darpana : A Linguistic Analysis, ಸಿ. ಕ್ಯಾಂಬೆಲ್ 'ಕನ್ನಡ ವ್ಯಾಕರಣ ಸಾರವು', ಲ್ಯೂಯಿ ರೈಸ್ 'ಅಮರಕೋಶವೆಂಬ ನಾಮಲಿಂಗಾನುಶಾಸನ', ಜಯರಾಯಾಚಾರ್ಯ 'ಕರ್ಣಾಟ ಭಾಷಾಕರಂ', ಸುಬ್ರಮಹ್ಮಣ್ಯಶಾಸ್ತ್ರಿ 'ನಕ್ಷತ್ರ ಚೂಡಾಮಣಿ' ಡಾ. ಕೊಟ್ರಸ್ವಾಮಿ 'ಕನ್ನಡ ಶಾಸ್ತ್ರ ಸಾಹಿತ್ಯ ಸಂಕಥನ' (೧೨ನೇ ಶತಮಾನದವರೆಗೆ), ಸುಧಾ ವೆಂಕಟರಾವ ಮನಸೂರು ಅವರ 'ಮೂರನೆಯ ಮಂಗರಸ ಮತ್ತು ಅವನ ಕೃತಿಗಳು' ಡಾ. ಆಯ್. ಎನ್. ಹುರಳಿ 'ಕನ್ನಡದಲ್ಲಿ ವೈದ್ಯಶಾಸ್ತ್ರದ ಹಸ್ತಪ್ರತಿಗಳು', ಡಾ. ಧನ್ಯಕುಮಾರ ಇಜಾರಿ 'ಜೈನ ಲೌಕಿಕ ಸಾಹಿತ್ಯ ಸಂಪದ', ಡಾ. ಜಯಶ್ರೀ ಮುದಿಗೌಡರ 'ಲೋಕೋಪಕಾರ ಒಂದು ಸಾಂಸ್ಕೃತಿಕ ಅಧ್ಯಯನ', ಡಾ. ಧನ್ಯಕುಮಾರ ಇಜಾರಿ 'ಜೈನ ವೈದ್ಯಕೀಯ ಪರಂಪರೆ', ನಿವೇದಿತಾ ಪಿ. ಎನ್. ಅವರ 'Critical Study on Sarpa Visha as in Khagendramani Darpana', ಡಾ. ನೇತ್ರಾವತಿ ಅವರ 'ಮಂಗರಾಜನ ಖಗೇಂದ್ರಮಣಿ ದರ್ಪಣ', ಡಾ. ಎ. ರಂಗಸ್ವಾಮಿ ಅವರ 'ಲೋಕೋಪಕಾರ : ಒಂದು ಅಧ್ಯಯನ' ಡಾ. ಸಿದ್ಧಾರ್ಥ 'ಬಂಧುವರ್ಮನ ಜೀವಸಂಬೋಧನ : ಒಂದು ಅಧ್ಯಯನ', ಮಹೇಂದ್ರ ಬಿ. ಹರಿಹರ ಅವರ 'ಕವಿರಾಜ ಮಾರ್ಗದ ಪದಕೋಶ', ಸಂಗಮೇಶ ಬಿರಾದಾರ ಅವರ 'ವೈಯಾಕರಣಿ ಎರಡನೆಯ ನಾಗವರ್ಮ' ಹೀಗೆ ಹತ್ತಾರು ವಿದ್ವಾಂಸರು ಶಾಸ್ತ್ರಸಾಹಿತ್ಯದ ಕುರಿತಾಗಿ ಬಿಡಿಬಿಡಿಯಾಗಿ ಸಂಶೋಧನ ಅಧ್ಯಯನವನ್ನು ಕೈಗೊಂಡಿದ್ದಾರೆ.

೧.೨. ಅಧ್ಯಯನದ ಉದ್ದೇಶ :

ಕನ್ನಡ ಸಾಹಿತ್ಯದ ಒಟ್ಟು ಇತಿಹಾಸವನ್ನು ಅವಲೋಕಿಸಿದಾಗ ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನಕವಿಗಳು ನೀಡಿರುವ ಕೊಡುಗೆ ಅಪಾರವಾದುದು. ಈ ನಿಟ್ಟಿನಲ್ಲಿ ೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿಯಲ್ಲಿ ಕನ್ನಡದ ಜೈನ ಕವಿಗಳಿಂದ ರಚಿತವಾದ ಶಾಸ್ತ್ರಕೃತಿಗಳು ಆಮೂಲಾಗ್ರವೆನಿಸಿವೆ. ಧಾರ್ಮಿಕಶಾಸ್ತ್ರ, ವ್ಯಾಕರಣ, ಛಂದಸ್ಸು, ವೈದ್ಯಕೀಯ, ವಿಷವೈದ್ಯಶಾಸ್ತ್ರ, ಜ್ಯೋತಿಷ್ಯ, ತರ್ಕಶಾಸ್ತ್ರ, ನೀತಿಶಾಸ್ತ್ರ ಮುಂತಾದ ಜ್ಞಾನ ಶಾಖೆಗಳಿಗೆ ಸಂಬಂಧಪಟ್ಟ ಶಾಸ್ತ್ರ ಕೃತಿಗಳು ಸಾಕಷ್ಟು ಪ್ರಮಾಣದಲ್ಲಿ ರಚಿತವಾಗಿವೆ. ಈ ಮೇಲೆ ತಿಳಿಸಿದ ಅಧ್ಯಯನಗಳಲ್ಲಿ ಹಲವಾರು ವಿದ್ವಾಂಸರು ಶಾಸ್ತ್ರ ಗ್ರಂಥಗಳ ಕುರಿತಾಗಿ ಪ್ರತ್ಯೇಕ ಅಧ್ಯಯನಗಳನ್ನು ಕೈಕೊಂಡು ಸಂಶೋಧನ ಲೋಕಕ್ಕೆ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದಾರೆ. ಆದರೆ ಜೈನ ಶಾಸ್ತ್ರಕವಿಗಳ ಕೊಡುಗೆಯನ್ನು ಒಟ್ಟುಗೂಡಿಸಿ ಅಥವಾ ಒಂದೇ ನೆಲಗಟ್ಟಿನಲ್ಲಿ ಸೇರಿಸಿ ದಾಖಲೀಕರಣ ಮತ್ತು ಅವರ ಕೃತಿಗಳ

ಅಧ್ಯಯನ ಇದುವರೆಗೂ ಆಗದೇ ಇರುವುದರಿಂದ ಪ್ರಮುಖ ಜೈನ ಶಾಸ್ತ್ರಕವಿಗಳನ್ನು ಹಾಗೂ ಅವರ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿ, ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಆದುದರಿಂದ ಪ್ರಸ್ತುತ **'ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)'** ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಕನ್ನಡ ನಾಡಿನಲ್ಲಿ ಜೈನ ವಿದ್ವಾಂಸರು ಮೊದಮೊದಲಲ್ಲಿ ಸಂಸ್ಕೃತ, ಪ್ರಾಕೃತಗಳಲ್ಲಿ ಧಾರ್ಮಿಕ ಕೃತಿಗಳನ್ನು ರಚಿಸತೊಡಗಿದರೂ, ಧರ್ಮ ಪ್ರಸಾರಕ್ಕೆ ಜನರ ಭಾಷೆಯಾದ ಕನ್ನಡವನ್ನು ಬಳಸಿಕೊಳ್ಳುವ ಅಗತ್ಯವನ್ನು ಕಂಡುಕೊಂಡರು. ಅವರು ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿದ್ದ ಜೈನ ಧರ್ಮ ಗ್ರಂಥಗಳನ್ನೂ, ಇತರ ಶಾಸ್ತ್ರ ಗ್ರಂಥಗಳನ್ನೂ ಹಾಗೂ ಪುರಾಣಗಳನ್ನೂ ಆಧಾರವಾಗಿಟ್ಟುಕೊಂಡು, ಜೈನಧರ್ಮ ಪ್ರಚಾರವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಕನ್ನಡದಲ್ಲಿ ಶಾಸ್ತ್ರಗ್ರಂಥ ರಚನೆಯನ್ನು ಮಾಡಿದರು. ಅವುಗಳು ಸಾರ್ವಕಾಲಿಕ ಮಾನ್ಯವಾದ ಜ್ಞಾನಕೋಶಗಳಾಗಿ ಇಂದಿಗೂ ದಾರಿದೀಪಗಳಾಗಿವೆ. ಜೈನ ಕವಿಗಳು ಶಾಸ್ತ್ರಸಾಹಿತ್ಯಕ್ಕೆ ನೀಡಿದ ಕೊಡುಗೆ ಅಗಾಧವಾದದ್ದು. ಕೇವಲ ಧಾರ್ಮಿಕ ಕ್ಷೇತ್ರದ ಶಾಸ್ತ್ರಸಾಹಿತ್ಯಕ್ಕೆ ಮಾತ್ರ ಅವರ ಕೃತಿಗಳು ಮೀಸಲಾಗಿರದೇ ವಿವಿಧ ಜ್ಞಾನಶಾಖೆಗಳಲ್ಲಿ ಶಾಸ್ತ್ರಕೃತಿಗಳನ್ನು ರಚಿಸಿದ ಶ್ರೇಯ ಜೈನಕವಿಗಳಿಗೆ ಸಲ್ಲುತ್ತದೆ.

ಧಾರ್ಮಿಕಶಾಸ್ತ್ರ, ಅಲಂಕಾರಶಾಸ್ತ್ರ, ಛಂದಸ್ಸುಶಾಸ್ತ್ರ, ವ್ಯಾಕರಣಶಾಶ್ತ್ರ, ನಿಘಂಟುಶಾಸ್ತ್ರ, ಸಾಮಾನ್ಯ ವೈದ್ಯ, ವಿಷವೈದ್ಯ ಹಾಗೂ ಪಶುವೈದ್ಯಶಾಸ್ತ್ರ, ಜ್ಯೋತಿಷ ಶಾಸ್ತ್ರ, ಗಣಿತ, ಪಾಕಶಾಸ್ತ್ರ, ವೃಷ್ಟಿಶಾಸ್ತ್ರ ಅಥವಾ ಜಲಶಾಸ್ತ್ರ, ನೀತಿಶಾಸ್ತ್ರ ಹೀಗೆ ನಾನಾ ವಿಧದಲ್ಲಿ ಪೂರ್ವಿಕರ ವಿಚಾರಗಳು ಇಂದಿಗೂ ಅನುಕರಣೀಯವಾಗಿವೆ. ಅಪಾರವಾದ ಜ್ಞಾನಭಂಡಾರವನ್ನು ಹುದುಗಿಸಿಕೊಂಡಿರುವ ಶಾಸ್ತ್ರಸಾಹಿತ್ಯದ ಅಧ್ಯಯನವು ಇಂದಿನ ಪ್ರಸ್ತುತತೆಯಾಗಿದೆ. ಭವ್ಯ ಭಾರತದ ಪರಂಪರೆಯಲ್ಲಿ ಅಮಿತ ಜ್ಞಾನ ಪ್ರಸರಣದಲ್ಲಿ ಪೂರ್ವಸೂರಿಗಳ ಕೃತಿಗಳು ಇಂದಿಗೂ ಮೂಲಮಂತ್ರವಾಗಿರುವುದು ಸ್ವಾಗತಾರ್ಹವಾದ ವಿಷಯವಾಗಿದೆ. ಇಂದಿನ ಅತ್ಯಾಧುನಿಕ ಯುಗದಲ್ಲಿಯೂ ಪೂರ್ವಜರನ್ನು ಅನುಸರಿಸುವುದು ಎಂದರೆ, ಅದಕ್ಕೆ ಅವರ ಅಪಾರವಾದ ಜ್ಞಾನನಿಧಿಯೇ ಕಾರಣ. ಈ ಅಪರಿಮಿತ ಜ್ಞಾನದ ಪರಿಚಯ ಆಗಬೇಕಾದದ್ದು ಅನಿವಾರ್ಯ ಮತ್ತು ಅಷ್ಟೇ ಅವಶ್ಯಕ. ಆದ್ದರಿಂದ ಈ ಅಮಿತವಾದ ಜ್ಞಾನಭಂಡಾರವನ್ನು ಸಂಶೋಧನೆಯ ಕೀಲಿಕೈ ಬಳಸಿ **ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)** ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನವನ್ನು ಕೈಕೊಳ್ಳಲಾಗಿದೆ.

ಅತ್ಯಮೂಲ್ಯವಾದ ಜ್ಞಾನಸಂಪತ್ತಿನ ಅಧ್ಯಯನ ಮಾಡುವುದು ಹಾಗೂ ಪ್ರಕೃತಿಯಲ್ಲಿ ಹುದುಗಿಕೊಂಡಿರುವ ಅಪಾರ ನಿಧಿ (ಸಸ್ಯ, ಜೀವಜಾಲ, ಜಲನಿಧಿ)ಯನ್ನು ಅಧ್ಯಯನದ ಮೂಲಕ ಲೋಕಕ್ಕೆ ತೋರುವುದು ಈ ಅಧ್ಯಯನದ ಉದ್ದೇಶವಾಗಿದೆ. ಪ್ರಸ್ತುತ ಸಮಾಜಕ್ಕೆ ಶಾಸ್ತ್ರಸಾಹಿತ್ಯದ ಆಳವನ್ನು ತಿಳಿಸಿಕೊಡುವ ಉದ್ದೇಶಗಳು ಹೀಗಿವೆ :

- ಶಾಸ್ತ್ರ ಕೃತಿಗಳ ಉಪಯುಕ್ತತೆಗಳನ್ನು ಇಂದಿನ-ಮುಂದಿನ ಪೀಳಿಗೆಗೆ ಅರುಹುವುದು.
- ಜೈನ ಧಾರ್ಮಿಕ ಶಾಸ್ತ್ರಗಳಲ್ಲಿ ಅಡಗಿರುವ ವೈಜ್ಞಾನಿಕ ವಿಚಾರಗಳನ್ನು ಪ್ರಚುರಪಡಿಸುವುದು.
- ಧಾರ್ಮಿಕಶಾಸ್ತ್ರ ಗ್ರಂಥಗಳಲ್ಲಿ ತಿಳಿಸಿರುವ ಅನೇಕ ಸಿದ್ಧಾಂತಗಳನ್ನು ವರ್ತಮಾನಕ್ಕೆ ಅನ್ವಯಿಸುವುದು.
- ಜೈನ ಕವಿಗಳಿಂದ ರಚಿಸಲ್ಪಟ್ಟ ವ್ಯಾಕರಣ, ಛಂದಸ್ಸು, ನಿಘಂಟು ಮುಂತಾದ ಗ್ರಂಥಗಳ ಮಹತ್ವವನ್ನು ತಿಳಿಸಿಕೊಡುವುದು.
- ಕನ್ನಡದ ಅಮೂಲ್ಯ ನಿಘಂಟು ಕೃತಿಗಳನ್ನು ಆನ್ವಯಿಕವಾಗಿ ಅಧ್ಯಯನಕ್ಕೆ ಒಳಪಡಿಸುವುದು.
- ಪ್ರಾಚೀನ ಕಾಲದ ವೈದ್ಯಪದ್ಧತಿ, ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಗಣಿತಶಾಸ್ತ್ರ, ಗ್ರಂಥಗಳನ್ನು ಸ್ಥೂಲವಾಗಿ ಅಧ್ಯಯನ ಮಾಡುವುದು.
- ಪ್ರಾಚೀನ ಕಾಲದ ಪ್ರಾಕೃತಿಕ ಜ್ಞಾನ ಸಂಪತ್ತು ಮತ್ತು ನಿಸರ್ಗ ಶ್ರೀಮಂತಿಕೆಯನ್ನು ದಾಖಲಿಸಿ ವಿಶ್ಲೇಷಿಸುವುದು.
- ವಿವಿಧ ಜ್ಞಾನಶಾಖೆಯನ್ನು ಅವಲಂಬಿಸಿ ಜೈನ ಕವಿಗಳಿಂದ ರಚಿತವಾಗಿರುವ ಶಾಸ್ತ್ರಕೃತಿಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವುದು.

೧.೩. ಅಧ್ಯಯನದ ಸ್ವರೂಪ :

ಪ್ರಸ್ತುತ **"ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)"** ಎಂಬ ವಿಷಯಾಧಾರಿತ ಸಂಶೋಧನ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಾಯಗಳನ್ನು ಯೋಜಿಸಿಕೊಂಡು ಅಧ್ಯಯನದ ಸ್ವರೂಪವನ್ನು ವಿನ್ಯಾಸಗೊಳಿಸಲಾಗಿದೆ.

ಅಧ್ಯಾಯ-೧. ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ:

ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಮೊದಲನೆಯ ಅಧ್ಯಾಯದಲ್ಲಿ, ಇದುವರೆಗಿನ ಅಧ್ಯಯನಗಳು, ಅಧ್ಯಯನದ ಉದ್ದೇಶ, ಸ್ವರೂಪ, ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನದ ವೈಧಾನಿಕತೆಗಳನ್ನು ತಿಳಿಸಲಾಗಿದೆ.

ಅಧ್ಯಾಯ-೨. ಶಾಸ್ತ್ರ ಪದದ ಅರ್ಥ, ಸ್ವರೂಪ ಮತ್ತು ಕನ್ನಡ ಶಾಸ್ತ್ರಸಾಹಿತ್ಯದ ಬೆಳವಣಿಗೆ:

ಎರಡನೆಯ ಅಧ್ಯಾಯದಲ್ಲಿ ಶಾಸ್ತ್ರ ಎಂದರೇನು? ಶಾಸ್ತ್ರ ಪದದ ಅರ್ಥ ಹಾಗೂ ಶಾಸ್ತ್ರ ಸಾಹಿತ್ಯದ ಸ್ವರೂಪವನ್ನು ತಿಳಿಸುವುದು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶಾಸ್ತ್ರ ಸಾಹಿತ್ಯವು ಬೆಳೆದು ಬಂದ ಬಗೆಯನ್ನು ತಿಳಿಸುವುದು. ಶಾಸ್ತ್ರದ ವಿವಿಧ ಶಾಖೆಗಳಾದ ಧಾರ್ಮಿಕ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಜೈನಧರ್ಮ, ವೀರಶೈವ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಧಾರ್ಮಿಕ ತತ್ತ್ವಗಳ ಹಿನ್ನೆಲೆಯಲ್ಲಿ ಕೃತಿಗಳನ್ನು ರಚಿಸಿರುವ ಕವಿಗಳು ಹಾಗೂ ಅವರ ಗ್ರಂಥಗಳನ್ನು ಹೆಸರಿಸಲಾಗಿದೆ. ಅಂತೆಯೇ ಅಲಂಕಾರ, ಛಂದಸ್ಸು, ವ್ಯಾಕರಣ, ನಿಘಂಟು, ವೈದ್ಯಶಾಸ್ತ್ರ, ಸಾಮಾನ್ಯವೈದ್ಯ, ಪಶುವೈದ್ಯ, ಜ್ಯೋತಿಷ್ಯ, ಗಣಿತಶಾಸ್ತ್ರ, ಪಾಕಶಾಸ್ತ್ರ, ಜಲಶಾಸ್ತ್ರ, ನೀತಿಶಾಸ್ತ್ರಗಳಿಗೆ ಕನ್ನಡದ ಕವಿಗಳು ನೀಡಿದ ಕೊಡುಗೆಯನ್ನು ದಾಖಲಿಸಲಾಗಿದೆ.

ಅಧ್ಯಾಯ-೩. ಕನ್ನಡ ಧಾರ್ಮಿಕ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ:

ಭಾರತದ ಪ್ರಾಚೀನ ಸಾಹಿತ್ಯವು ಮುಖ್ಯವಾಗಿ ಧಾರ್ಮಿಕ ಭಾವನೆಗಳಿಂದ ಪ್ರೇರಿತವೂ ಪ್ರಭಾವಿತವೂ ಆಗಿರುವ ಮಾನವನನ್ನು ಸಮಾಜಮುಖಿಯಾಗಿಸುವಲ್ಲಿ ಧರ್ಮವು ಪ್ರಮುಖ ಪಾತ್ರವಹಿಸುತ್ತದೆ. ಸತ್ಯ ಮತ್ತು ಸುಖಗಳ ನಿರಂತರ ಹುಡುಕಾಟದ ಮಾನವನ ಚಿಂತನೆಯೊಳಗೊಂಡಂತೆ ಪ್ರಾರಂಭ ಕಾಲದ ಧರ್ಮವು ಮನುಷ್ಯ ಮತ್ತು ವಿಶ್ವ, ಮನುಷ್ಯ ಮತ್ತು ಅವನ ಕರ್ತವ್ಯಗಳು, ಅವನ ಜೀವನೋದ್ದೇಶ, ಅದರ ಸಾಧನಾ ಮಾರ್ಗ ಇವುಗಳಿಗೆ ಸಂಬಂಧಿಸಿದ ಮೂಲಭೂತ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದೆ. ಕಾಲಕಾಲಕ್ಕೆ ಹಲವಾರು ಋಷಿಗಳು, ಯೋಗಿಗಳು ಹಾಗೂ ಜ್ಞಾನಿಗಳು ತಮ್ಮ ಉಪದೇಶ ಮತ್ತು ನಿದರ್ಶನಗಳ ಮೂಲಕ ಈ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಅವರ ಬೋಧನೆ ಮತ್ತು ಆಚರಣೆಗಳು ದಾಖಲಿಸಲ್ಪಟ್ಟು ಅವು ಆಯಾ ಧರ್ಮಗಳ ತಿರುಳಾಗಿವೆ. ಅಂತೆಯೇ ಜೈನ ಧಾರ್ಮಿಕಶಾಸ್ತ್ರ ಗ್ರಂಥಗಳು ತಮ್ಮದೇಯಾದ ಮೌಲಿಕ ನೆಲೆಗಳನ್ನು ಕಂಡುಕೊಂಡಿವೆ. ಆ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಧಾರ್ಮಿಕ ಶಾಸ್ತ್ರಸಾಹಿತ್ಯಕ್ಕೆ ಕೊಡುಗೆ ನೀಡಿದ ಕವಿಗಳನ್ನು ಮತ್ತು ಅವರ ಕೃತಿಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಜೊತೆಗೆ ಜೈನಧರ್ಮದ ಮೂಲ ತತ್ತ್ವಗಳಾದ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ್ಯ, ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ತಪಗಳಿಂದ ಮೋಕ್ಷವನ್ನು ಸಾಧಿಸುವ ಬಗೆಯನ್ನು ತಿಳಿಸುವುದು. ದ್ವಾದಶಾನುಪ್ರೇಕ್ಷೆಗಳು, ಶ್ರಾವಕಾಚಾರಗಳನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ-೪. ಕನ್ನಡ ಸಾಹಿತ್ಯಿಕ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ:

ಸಾಹಿತ್ಯ ಗ್ರಂಥಗಳನ್ನು ರಚಿಸುವಾಗ ಕರ್ತೃಗಳು ತಮ್ಮದೇಯಾದ ಶೈಲಿಯೊಂದನ್ನು ಅಳವಡಿಸಿಕೊಂಡು ಕೃತಿ ನಿರ್ಮಾಣದಲ್ಲಿ ತೊಡಗುತ್ತಾರೆ. ಒಬ್ಬ ಕವಿಯ ಶೈಲಿ, ದೃಷ್ಟಿಕೋನ,

ಕಾವ್ಯವನ್ನು ಕಟ್ಟುವ ಕಲೆ ಇನ್ನೊಬ್ಬ ಕವಿಗೆ ಒಲಿಯಲಾರದು. ಆದರೆ ಆಯಾ ಕವಿಗಳಿಂದ ರಚಿತವಾದ ಕಾವ್ಯಗಳು ಕವಿಯ ಹಾಗೂ ಆತನ ಕಾಲದ ಪ್ರತಿಬಿಂಬಗಳಾಗಿ ಒಡಮೂಡಿರುತ್ತವೆ. ಆದರೆ ಇದೆಲ್ಲದಕ್ಕೂ ಒಂದು ಕಲಾಪ್ರೌಢಿಮೆಯು ಆ ಕವಿಗೆ ಒಲಿದಿರುತ್ತದೆ. ಅದು ಅಲಂಕಾರ, ಛಂದಸ್ಸು, ವ್ಯಾಕರಣಗಳ ರೂಪದಲ್ಲಿ ಪ್ರತಿಧ್ವನಿತವಾಗುತ್ತದೆ. ಹೀಗಿರುವ ಅಲಂಕಾರ, ಛಂದಸ್ಸು ಹಾಗೂ ವ್ಯಾಕರಣಗಳು ಕಾವ್ಯಗಳಿಗೆ ಹೇಗೆ ಸೌಂದರ್ಯವನ್ನು, ಮೌಲ್ಯವನ್ನು ಒದಗಿಸಿಕೊಡುತ್ತವೆ? ಹಾಗೂ ಯಾವ ರೀತಿಯ ವಿಷಯವಸ್ತುವಿಗೆ ಯಾವ ಬಗೆಯ ಛಂದಸ್ಸನ್ನು ಅಳವಡಿಸಿಕೊಳ್ಳುವುದು? ಕವಿತಾಶೈಲಿ, ವ್ಯಾಕರಣ, ಲಯ, ಗಣ, ಅರ್ಥಗ್ರಹಿಕೆಗಳನ್ನು ತಿಳಿಸುವ ಶಾಸ್ತ್ರಗ್ರಂಥಗಳು ಕನ್ನಡದಲ್ಲಿ ರಚನೆಯಾದವು. ಈ ನಿಟ್ಟಿನಲ್ಲಿ ಕನ್ನಡದಲ್ಲಿ ಜೈನಕವಿಗಳಿಂದ ರಚನೆಯಾಗಿರುವ ಸಾಹಿತ್ಯಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ಮತ್ತು ಅವರ ಕೊಡುಗೆಗಳನ್ನು ಚರ್ಚಿಸಲಾಗಿದೆ. ಅಲಂಕಾರಶಾಸ್ತ್ರ, ಛಂದಸ್ಸುಶಾಸ್ತ್ರ, ವ್ಯಾರಕಣಶಾಸ್ತ್ರ ಮತ್ತು ನಿಘಂಟು ಶಾಸ್ತ್ರಗಳೆಂದು ವಿಂಗಡಿಸಿಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ-೫. ಕನ್ನಡ ಲೌಕಿಕ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ

ಮನುಷ್ಯ ನಿತ್ಯಜೀವನದಲ್ಲಿ ಆತನು ಲೋಕದೊಡನೆ ನಡೆಸುವ ವ್ಯವಹಾರಗಳನ್ನು ಲೌಕಿಕ ಎನ್ನಲಾಗುತ್ತದೆ. ಹೀಗಿರುವಾಗ ನಿತ್ಯ ವ್ಯವಹಾರಗಳಲ್ಲಿ ಹಲವಾರು ತೊಡಕು ತೊಂದರೆಗಳನ್ನು ಎದುರಿಸುವುದು ಸರ್ವೇ ಸಾಮಾನ್ಯ. ಹೀಗೆ ಎದುರಾಗುವ ತೊಡಕುಗಳನ್ನು ನಿವಾರಿಸಿಕೊಳ್ಳಲು ಹಲವಾರು ಪರಿಹಾರಗಳನ್ನು ಕಂಡುಕೊಂಡನು. ಆ ಪರಿಹಾರಗಳೇ ಮುಂದೆ ಆಯಾ ವಿಷಯಕ್ಕೆ ಸಂಬಂಧಿಸಿದ ಶಾಸ್ತ್ರಗಳಾಗಿ ಬೆಳೆದು ಬಂದವು. ಮಾನವನ ನಿತ್ಯ ಜೀವನಕ್ಕೆ ಮಾರ್ಗದರ್ಶಿಯಾಗಿ ನಿಲ್ಲುವ ಶಾಸ್ತ್ರಗ್ರಂಥಗಳೇ ಲೌಕಿಕ ಶಾಸ್ತ್ರಗ್ರಂಥಗಳು ಎನಿಸಿದವು. ಆರೋಗ್ಯಕ್ಕೆ ಸಂಬಂಧಿಸಿದಂತೆ ಆಯುರ್ವೇದ ಇಲ್ಲವೇ ವೈದ್ಯಶಾಸ್ತ್ರ, ತನ್ನ ಜೀವನದ ಆಗುಹೋಗುಗಳನ್ನು, ಭವಿತವ್ಯಗಳ ಕುರಿತಾಗಿರುವ ಕುತೂಹಲವನ್ನು ತಣಿಸಲು ಜ್ಯೋತಿಷ್ಯಶಾಸ್ತ್ರ, ನಿತ್ಯ ವ್ಯವಹಾರದ ಚಟುವಟಿಕೆಗಳನ್ನು ನಡೆಸಲು ಗಣಿತಶಾಸ್ತ್ರ, ಆಹಾರ ಉಪಚಾರಗಳಿಗಾಗಿ ಪಾಕಶಾಸ್ತ್ರ, ಭೂಮಿಯ ಆಳದಲ್ಲಿರುವ ನೀರನ್ನು ಕಂಡುಕೊಳ್ಳಲು ಜಲಶಾಸ್ತ್ರ, ಇವೆಲ್ಲ ಲೋಕ ವ್ಯವಹಾರಗಳಲ್ಲಿ ತೊಂದರೆಗಳು ಎದುರಾಗದಂತೆ ಇನ್ನೊಬ್ಬರಿಗೆ ಬೋಧಿಸಲು ನೀತಿಶಾಸ್ತ್ರ, ಒಬ್ಬರಿಂದೊಬ್ಬರಿಗೆ ಎದುರಾದ ತೊಂದರೆಗಳನ್ನು ಉಪಶಮನ ಮಾಡಲು ನ್ಯಾಯಶಾಸ್ತ್ರ ಹೀಗೆ ಹಲವಾರು ಜ್ಞಾನಶಾಖೆಗಳು ಶಾಸ್ತ್ರವಾಗಿ ಬೆಳೆದು ಬಂದವು. ಇಂತಹ ಅಮೂಲ್ಯ ನಿಧಿಯನ್ನು ಕನ್ನಡಕ್ಕೆ ನೀಡಿದ ಜೈನಕವಿಗಳ ಕೊಡುಗೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಬಹುಶಿಸ್ತೀಯ ನೆಲೆಗಳಿಂದ ಅಧ್ಯಯನ ಮಾಡಲಾಗಿದೆ.

ಅಧ್ಯಾಯ–೬. ಸಮಾರೋಪ:

ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಹಾಗೂ ಮುಂದಿನ ಸಂಶೋಧಕರಿಗೆ ಅನುಕೂಲಕರವಾಗುವ ಹೊಸ ಸಾಧ್ಯತೆಗಳನ್ನು ತಿಳಿಸುವುದರೊಂದಿಗೆ ಅಧ್ಯಯನವನ್ನು ಸಮಾರೋಪಗೊಳಿಸುವುದು.

ಅನುಬಂಧ:

- **ಛಾಯಾಚಿತ್ರಗಳು**
- **ಮೂಲ ಆಕರಗಳು**
- **ಪರಾಮರ್ಶನ ಗ್ರಂಥಗಳು**

ಈ ಮೇಲ್ಕಂಡಂತೆ ಪ್ರಸ್ತುತ ಅಧ್ಯಯನದ ಅಧ್ಯಾಯಗಳನ್ನು ವಿಭಾಗಿಸಿಕೊಂಡು ಅದರ ಸ್ವರೂಪವನ್ನು ಸ್ಪಷ್ಟಪಡಿಸಲಾಗಿದೆ.

೧.೪. ಅಧ್ಯಯನದ ವ್ಯಾಪ್ತಿ ಮತ್ತು ಆಕರ ಸಾಮಗ್ರಿಗಳು:

ಪ್ರಸ್ತುತ ಸಂಶೋಧನ ಶೀರ್ಷಿಕೆ **ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)**ಗೆ ಸಂಬಂಧಿಸಿದಂತೆ ೧೦ನೇ ಶತಮಾನದಿಂದ ೧೬ನೇ ಶತಮಾನದ ಕಾಲಘಟ್ಟದಲ್ಲಿ ಕನ್ನಡದಲ್ಲಿ ಶಾಸ್ತ್ರ ಕೃತಿಗಳನ್ನು ರಚಿಸಿದ ಪ್ರಮುಖ ಜೈನಕವಿಗಳ ಕೊಡುಗೆಗಳನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಶ್ರೀವಿಜಯನ 'ಕವಿರಾಜಮಾರ್ಗ'ವು ಈ ಅವಧಿಯ ಮುಂಚೆಯೇ ಅಂದರೆ ೯ನೇ ಶತಮಾನದಲ್ಲಿಯೇ ರಚಿತವಾದ ಕೃತಿ. ಆದರೆ ಇದು ಕನ್ನಡದ ಮೊದಲ ಉಪಲಬ್ಧ ಕೃತಿ ಮಾತ್ರವಲ್ಲದೇ ಮೊದಲ ಅಲಂಕಾರ ಗ್ರಂಥವಾಗಿರುವುದರಿಂದ ಈ ಕೃತಿಯನ್ನು ಹೊರತುಪಡಿಸಿ ಅಧ್ಯಯನವನ್ನು ಕೈಕೊಳ್ಳುವುದು ಕವಿಗೆ ಮತ್ತು ಕೃತಿಗೆ ಅಪಚಾರ ಮಾಡಿದಂತಾಗುತ್ತದೆ. ಅಲ್ಲದೇ ಕವಿರಾಜಮಾರ್ಗ ಕೃತಿಯನ್ನು ಹೊರತುಪಡಿಸಿ ಅಧ್ಯಯನವನ್ನು ಕೈಗೊಳ್ಳುವ ಸಂಶೋಧನೆಯು ಅಪೂರ್ಣವೆನಿಸುವ ಕಾರಣವಾಗಿ ಪ್ರಸ್ತುತ ಸಂಶೋಧನೆಯಲ್ಲಿ ೯ನೆಯ ಶತಮಾನಕ್ಕೆ ಸೇರಿದ ಕವಿರಾಜಮಾರ್ಗ ಕೃತಿಯನ್ನೂ ಸೇರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಈ ಅಧ್ಯಯನವನ್ನು ೧೦ನೇ ಶತಮಾನದಿಂದ ೧೬ನೇ ಶತಮಾನದವರೆಗೆಗಿನ ಕಾಲಘಟ್ಟದಲ್ಲಿ ಬರುವ ಜೈನ ಕವಿಗಳ ಶಾಸ್ತ್ರ ಕೃತಿಗಳ ಅಧ್ಯಯನಕ್ಕೆ ಸೀಮಿತಗೊಳಿಸಿಕೊಂಡು ವ್ಯಾಪ್ತಿಯನ್ನು ನಿಗದಿಪಡಿಸಲಾಗಿದೆ.

ಈ ವ್ಯಾಪ್ತಿಯಲ್ಲಿ ಧಾರ್ಮಿಕ ಶಾಸ್ತ್ರಸಾಹಿತ್ಯಕ್ಕೆ ಕೊಡುಗೆ ನೀಡಿದ ಶಾಸ್ತ್ರಕಾರರಾದ ಆಚಾರ್ಯ ದಿವಾಕರಣಂದಿ (೧೦೬೨)ಯ 'ತತ್ತ್ವಾರ್ಥ ಸೂತ್ರಾನುಗತ ಕರ್ಣಾಟ ಲಘುವೃತ್ತಿ',

ಬಾಲಚಂದ್ರದೇವ (೧೧೭೦)ನ 'ತತ್ತ್ವರತ್ನಪ್ರದೀಪಿಕೆ', ಆಚಣ್ಣಕವಿ (೧೧೯೦)ಯ 'ಶ್ರೀಪದಾಶೀತಿ', ಬಂಧುವರ್ಮ (೧೨೦೦)ನ 'ಜೀವಸಂಬೋಧನೆ' ಹಾಗೂ 'ಸತಿಧರ್ಮಸಾರ', ಆಯತವರ್ಮ (೧೪೦೦)ನ 'ರತ್ನಕರಂಡಕ', ವಿಜಯಣ್ಣ ಕವಿ (೧೪೪೮)ಯ 'ದ್ವಾದಶಾನುಪ್ರೇಕ್ಷೆ'ಗಳನ್ನು ಕುರಿತು ಚರ್ಚಿಸಲಾಗಿದೆ.

ಅಲಂಕಾರ ಶಾಸ್ತ್ರಕ್ಕೆ ಜೈನ ಕವಿಗಳು ನೀಡಿದ ಕೊಡುಗೆಗಳ ಕುರಿತಾಗಿ ಶ್ರೀವಿಜಯ (೮೫೦)ಕೃತ 'ಕವಿರಾಜಮಾರ್ಗ', ಎರಡನೆಯ ನಾಗವರ್ಮ (೧೧೪೫)ನ 'ಕಾವ್ಯಾವಲೋಕನ', ಸಾಳ್ವಕವಿ (೧೫೫೦)ಯ 'ರಸರತ್ನಾಕರ' ಮತ್ತು 'ಶಾರದಾವಿಲಾಸ'ಗಳ ಕುರಿತು ಚರ್ಚಿಸಲಾಗಿದೆ. ಗುಣಗಾಂಕಿಯಂ, ಇಮ್ಮಡಿ ನಾಗವರ್ಮ (೧೧೪೫)ನ 'ಛಂದೋವಿಚಿತಿ', ಗುಣಚಂದ್ರ (೧೬೫೦)ನ ಛಂದಸ್ಸಾರಗಳನ್ನು ಚರ್ಚಿಸಿ ವಿಶ್ಲೇಷಿಸಲಾಗಿದೆ. ಇನ್ನೂ ವ್ಯಾಕರಣ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಇಮ್ಮಡಿ ನಾಗವರ್ಮ (೧೧೪೫)ನ 'ಶಬ್ದಸ್ಮೃತಿ' ಹಾಗೂ 'ಕರ್ಣಾಟಕ ಭಾಷಾಭೂಷಣಂ', ಕೇಶಿರಾಜ (೧೨೬೦)ನ 'ಶಬ್ಧಮಣಿ ದರ್ಪಣಂ', ಭಟ್ಟಾಕಳಂಕದೇವ (೧೬೦೪)ನ ಶಬ್ದಾನುಶಾಸನಗಳ ಕುರಿತಾಗಿ ಅಧ್ಯಯನ ಮಾಡಲಾಗಿದೆ. ನಿಘಂಟುಶಾಸ್ತ್ರಕ್ಕೆ ಸಂಬಂಧಿಸಿದಂತೆ ಮಹಾಕವಿ ರನ್ನ (೯೯೩)ನ 'ರನ್ನಕಂದ', ಇಮ್ಮಡಿ ನಾಗವರ್ಮನ 'ಅಭಿಧಾನ ವಸ್ತುಕೋಶ', ಕೇಶಿರಾಜನ 'ಶಬ್ದಮಣಿ ದರ್ಪಣಂ', ಅಮೃತಣಂದಿಯ 'ಅಕಾರಾದಿ ನಿಘಂಟು' ಮತ್ತು 'ವೈದ್ಯ ನಿಘಂಟು'ಗಳನ್ನು ಪರಿಚಯಿಸಿ ವಿಶ್ಲೇಸಿಸಲಾಗಿದೆ.

ಇನ್ನೂ ಲೌಕಿಕ ಶಾಸ್ತ್ರ ಸಾಹಿತ್ಯಕ್ಕೆ ಜೈನಕವಿಗಳು ನೀಡಿದ ಕೊಡುಗೆಗಳನ್ನು ವೈದ್ಯಶಾಸ್ತ್ರ, ಜ್ಯೋತಿಷ್ಯ, ಗಣಿತ, ಪಾಕಶಾಸ್ತ್ರ, ವೃಷ್ಟಿಶಾಸ್ತ್ರ ಹಾಗೂ ನೀತಿಶಾಸ್ತ್ರಗಳೆಂದು ವಿಭಾಗಿಸಿಕೊಳ್ಳಲಾಗಿದೆ. ವೈದ್ಯಶಾಸ್ತ್ರವನ್ನು ಸಾಮಾನ್ಯ ವೈದ್ಯ, ವಿಷವೈದ್ಯ ಹಾಗೂ ಪಶುವೈದ್ಯ ಶಾಸ್ತ್ರಗಳೆಂದು ಉಪವಿಭಾಗಗಳನ್ನು ಅಧ್ಯಯನ ಮಾಡಲಾಗಿದೆ. ಸಾಮಾನ್ಯ ವೈದ್ಯದಲ್ಲಿ ಜಗದ್ದಳ ಸೋಮನಾಥ (೧೧೭೫)ನ ಕರ್ಣಾಟಕ ಕಲ್ಯಾಣಕಾರಕ', ದೇವೇಂದ್ರಮುನಿ (೧೨೦೦)ಯ 'ಬಾಲಗ್ರಹ ಚಿಕಿತ್ಸೆ', ಶ್ರೀಧರದೇವ (೧೫೦೦)ನ ವೈದ್ಯಾಮೃತ, ಸಾಳ್ವಕವಿ (೧೫೫೦)ಯ 'ವೈದ್ಯಸಾಂಗತ್ಯ', ಕೃತಿಗಳನ್ನು ಚರ್ಚಿಸಲಾಗಿದೆ. ವಿಷವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದನೇ ಮಂಗರಾಜ (೧೩೬೦)ನ 'ಖಗೇಂದ್ರಮಣಿ ದರ್ಪಣಂ' ಗ್ರಂಥವನ್ನು ವಿಶ್ಲೇಷಿಸಲಾಗಿದೆ. ಪಶುವೈದ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಕೀರ್ತಿವರ್ಮ (೧೧೦೦)ನ 'ಗೋವೈದ್ಯ', ಬಾಚರಸ (೧೫೦೦)ನ 'ಅಶ್ವವೈದ್ಯ' ಕೃತಿಗಳ ಕುರಿತು ಅಧ್ಯಯನ ಮಾಡಲಾಗಿದೆ. ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಶ್ರೀಧರಾಚಾರ್ಯ (೧೦೪೯)ನ 'ಜಾತಕ ತಿಲಕ', ಶುಭಚಂದ್ರನ 'ನರಪಿಂಗಲಿ' ಗ್ರಂಥಗಳನ್ನು ವಿಶ್ಲೇಷಿಸಲಾಗಿದೆ. ಗಣಿತಶಾಸ್ತ್ರಕ್ಕೆ ಸಂಬಂಧಿಸಿದಂತೆ ರಾಜಾದಿತ್ಯನ 'ವ್ಯವಹಾರ ಗಣಿತ', 'ಕ್ಷೇತ್ರಗಣಿತ', 'ವ್ಯವಹಾರರತ್ನ', 'ಲೀಲಾವತಿ',

'ಚಿತ್ರಹಸುಗೆ', ಮತ್ತು 'ಜೈನಗಣಿತಸೂತ್ರ ಟೀಕೋದಾಹರಣ' ಗ್ರಂಥಗಳನ್ನು ಪರಿಚಯಿಸಲಾಗಿದೆ. ಪಾಕಶಾಸ್ತ್ರಕ್ಕೆ ಸಂಬಂಧಿಸಿದಂತೆ ಮೂರನೆಯ ಮಂಗರಸ (೧೫೦೮)ನ 'ಸೂಪಶಾಸ್ತ್ರ', ವೃಷ್ಟಿಶಾಸ್ತ್ರಕ್ಕೆ ಸಂಬಂಧಿಸಿದಂತೆ ಅರ್ಹದ್ದಾಸ (೧೩೦೦)ಯ 'ರಟ್ಟಮತ' ಹಾಗೂ ನೀತಿಶಾಸ್ತ್ರಕ್ಕೆ ಸಂಬಂಧಿಸಿದಂತೆ ನೇಮಿನಾಥ (೧೨೦೦)ನ 'ನೀತಿವಾಕ್ಯಾಮೃತಂ ಕರ್ಣಾಟಕ ವ್ಯಾಖ್ಯಾನ' ಗ್ರಂಥಗಳನ್ನು ಕುರಿತಾಗಿ ಸ್ಥೂಲವಾಗಿ ಚರ್ಚಿಸಲಾಗಿದೆ.

೧.೫. ಅಧ್ಯಯನದ ವೈಧಾನಿಕತೆಗಳು:

ಪ್ರಸ್ತುತ **'ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ (೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿ)** ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಅಧ್ಯಯನ ವಿಧಾನಗಳನ್ನು ಅನ್ವಯಿಸಿಕೊಳ್ಳಲಾಗಿದೆ. ಪ್ರಸ್ತುತ ಸಂಶೋಧನೆಯು ವಿಶ್ಲೇಷನಾತ್ಮಕ ಮತ್ತು ಬಹುಶಿಸ್ತೀಯ ಸಂಶೋಧನಾ ವಿಧಾನಗಳ ಮೂಲಕ ಮುಂದುವರೆಯುತ್ತದೆ. ಇದಕ್ಕೆ ಪೂರಕವಾಗಿ ಸಾಮಗ್ರಿಮುಖಿ, ವಿವರಣಮುಖಿ, ಚಾರಿತ್ರಿಕ, ಸಾಮಾಜಿಕ, ಬಹುಶಿಸ್ತೀಯ ಸಂಶೋಧನಾ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಸಾಹಿತ್ಯಿಕ ಶಾಸ್ತ್ರ ಕೃತಿಗಳು ದಾಖಲಿತ, ಚಾಕ್ಷುಷ ಆಕರ ಸಾಮಗ್ರಿಗಳನ್ನು ಆಧಾರವಾಗಿಟ್ಟುಕೊಂಡು ಈವರೆಗೆ ಹೇಳಿದ, ತಿಳಿದಿರುವ ಅಂಶಗಳನ್ನು ಮೂಲ ಆಕರಗಳಿಂದ ಸ್ಪಷ್ಟಪಡಿಸುವುದು. ಅಂತೆಯೇ ಗ್ರಂಥಸ್ಥ ದಾಖಲೆಗಳು, ಲೇಖನಗಳು, ನಿಘಂಟುಗಳು, ವಿಶ್ವಕೋಶಗಳು, ಕಂಪ್ಯೂಟರ್, ದೃಶ್ಯ ಮಾಧ್ಯಮಗಳು, ಸಂಶೋಧನ ಲೇಖನಗಳು, ಟಿಪ್ಪಣಿ, ವರದಿ, ನಕ್ಷೆ, ಅಂಕಿ-ಅಂಶಗಳು ಈ ಮೊದಲಾದ ಆಕರಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

❖

ಅಧ್ಯಾಯ : ೨

ಶಾಸ್ತ್ರ ಪದದ ಅರ್ಥ, ಸ್ವರೂಪ, ಕನ್ನಡದಲ್ಲಿ ಬೆಳವಣಿಗೆ

ಅಧ್ಯಾಯ ೨

ಶಾಸ್ತ್ರಸಾಹಿತ್ಯದ ಅರ್ಥ, ಸ್ವರೂಪ, ಕನ್ನಡದಲ್ಲಿ ಬೆಳವಣಿಗೆ

ಭಾರತೀಯ ಸಂಸ್ಕೃತಿಯು ಪರಮೋತ್ಕೃಷ್ಟವಾದುದು. ಈ ನಡುವೆ ಕನ್ನಡ ನಾಡಿನ ಸಾಹಿತ್ಯ ದರ್ಶನ ಮಾಡ ಹೊರಟಾಗ ಅವಿಚ್ಛಿನ್ನವಾದ ಜ್ಞಾನಧಾರಕ ಗ್ರಂಥಗಳು ರಚಿತವಾಗಿವೆ. ಈ ಅಪೂರ್ವ ಸಾಹಿತ್ಯದ ಮೇರುಗಿರಿಯಲ್ಲಿ ಪಂಪ, ರನ್ನ, ಪೊನ್ನಾದಿ ಕವಿಗಳ ಕಾವ್ಯಗಳು ಕಣ್ಣೆದುರಿಗೆ ದೃಶ್ಯಗಳು ಚಲಿಸಿದಂತೆ ಕಥಾನಿರೂಪಣೆಯನ್ನು ಹೊಂದಿದ್ದು, ಓದುಗರ ಹೃನ್ಮನಗಳನ್ನು ಸೆಳೆದುಕೊಳ್ಳುತ್ತವೆ. "ಸಾಹಿತ್ಯವನ್ನು ನಾವು ಎರಡು ರೀತಿಯಲ್ಲಿ ವಿಭಾಗಿಸಲಾಗುತ್ತದೆ. ಒಂದು ಮೌಖಿಕ ಸಾಹಿತ್ಯ ಅಥವಾ ಜನಪದ ಸಾಹಿತ್ಯ ಇನ್ನೊಂದು ಶಿಷ್ಟಸಾಹಿತ್ಯ."[೧] ಮೊದಲನೆಯದ್ದು ಮನುಷ್ಯನ ಭಾಷೆಯ ಉಗಮದೊಂದಿಗೆ ಹುಟ್ಟಿ, ಆತನ ನಿತ್ಯ ಉಪಾಸನೆಯಲ್ಲಿ ಒಂದಾಗಿ ಬೆಳೆದು ಬಂದು ನೆಲೆಯಾಗಿರುವುದು. ಎರಡನೆಯದ್ದು ತಾನು ಲಿಪಿಯ ಮೂಲಕ ದಾಖಲಿಸುವದರೊಂದಿಗೆ ಪ್ರಚುರಗೊಂಡಿರುವಂತಹದ್ದು.

ಕನ್ನಡ ಶಿಷ್ಟ ಸಾಹಿತ್ಯದಲ್ಲಿ ವಿಭಿನ್ನವಾದ ಸಾಹಿತ್ಯ ಪ್ರಕಾರಗಳನ್ನು ಕಾಣಬಹುದು. ಇಂತಹ ವಾಙ್ಮಯವನ್ನು ಕಾವ್ಯ ಮತ್ತು ಶಾಸ್ತ್ರವೆಂದು ಸ್ಥೂಲವಾಗಿ ಎರಡು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ. ಯಾವ ಗ್ರಂಥಗಳು ವಾಚಕರಿಗೆ ಚಿತ್ತ ಸಮುನ್ನತಿಯನ್ನುಂಟು ಮಾಡಿ ಧರ್ಮಾಧರ್ಮಜ್ಞಾನ ಪ್ರವೇಶಕ್ಕೆ ದಾರಿ ಮಾಡಿಕೊಡುವವೋ ಅವುಗಳು ಕಾವ್ಯವರ್ಗಕ್ಕೆ ಸೇರುತ್ತವೆ. ಯಾವ ಗ್ರಂಥಗಳು ಸಹೃದಯನ ವಸ್ತುಜ್ಞಾನವನ್ನು ಹೆಚ್ಚುಮಾಡಿ ಅವರ ಬಹಿರಂಗದ ಆಚಾರ ವಿಚಾರಗಳಿಗೆ ಸಾಕ್ಷಾತ್ತಾಗಿ ಉಪಯುಕ್ತವಾದ ತಿಳುವಳಿಕೆಯನ್ನು ಉಂಟುಮಾಡುವವೋ ಅವುಗಳನ್ನು ಶಾಸ್ತ್ರಸಾಹಿತ್ಯದ ಗುಂಪಿಗೆ ಸೇರಿಸಬಹುದು. ಒಂದನ್ನು ಶಿಷ್ಟಸಾಹಿತ್ಯ ಎಂದು ಇನ್ನೊಂದನ್ನು ಶಾಸ್ತ್ರಸಾಹಿತ್ಯ ಎಂದು ಕರೆಯಲಾಗುತ್ತದೆ. ಒಂದು ಹೃದಯಗಮ್ಯ ಇನ್ನೊಂದು ಬುದ್ಧಿಗಮ್ಯ. "ಮೊದಲನೆಯದ್ದು, ಸೃಜನಶೀಲ ಮನಸ್ಸಿನ ಪ್ರತಿಭಾಪೂರ್ಣ ಹೊಳಹುಗಳನ್ನು ಭಾಷೆಯ ಮೂಲಕ ವೈವಿಧ್ಯಮಯವಾಗಿ ಹಿಡಿದಿಟ್ಟು, ಕಲ್ಪನಾಶೀಲವಾದ ಮನೋರಂಜಕವಾದ ಮತ್ತು ಬುದ್ಧಿ ಹಾಗೂ ಹೃದಯಗಳನ್ನು ಆವರಿಸುವ ಅಂಶಗಳನ್ನು ಒಳಗೊಂಡಿರುವುದು. ಎರಡನೆಯದ್ದು, ಹೃದಯ – ಮನಸ್ಸುಗಳಿಗಿಂತ, ಆನಂದ – ಆಹ್ಲಾದಗಳಿಗಿಂತ ಮನುಷ್ಯನ ಆರೋಗ್ಯಪೂರ್ಣ ಜೀವನಕ್ಕೆ, ಪ್ರಗತಿಗೆ ಅನುವಾಗುವಂತೆ ಮಾಡಿಕೊಡುವ ವಿವಿಧ ಚಿಂತನ ಧಾರೆಗಳನ್ನು, ಇಹದ ಬದುಕನ್ನು ಸಹ್ಯವಾಗಿಸಲು ಅಗತ್ಯವಾದ ಜ್ಞಾನ–ವಿಜ್ಞಾನಗಳ ಸಂಗಮವಾಗಿರುತ್ತದೆ."[೨] ಸಂಸ್ಕೃತ ಅಲಂಕಾರಿಕ ಕವಿಯಾದ ರಾಜಶೇಖರನು ಕಾವ್ಯ ಕವಿ, ಶಾಸ್ತ್ರಕವಿ ಮತ್ತು ಉಭಯ ಕವಿಯೆಂದು ಮೂರು ರೀತಿಯಲ್ಲಿ ಕವಿಗಳನ್ನು ಗುರುತಿಸುತ್ತಾನೆ. 'ಕಾವ್ಯಕವಿ'ಯು ರಮಣೀಯವಾಗಿ ಬರೆಯಬಲ್ಲನೇ

೧. ಪ್ರೊ. ಎಂ. ವಿ. ಸೀತಾರಾಮಯ್ಯ ; **ಶಾಸ್ತ್ರಸಾಹಿತ್ಯ** : ಪುಟ. ೧೨

೨. ಡಾ. ಧನ್ಯಕುಮಾರ ಇಜಾರಿ ; **ಜೈನ ವೈದ್ಯಕೀಯ ಪರಂಪರೆ** : ಪುಟ. ೬

ಹೊರತು ಖಚಿತತೆ ಇರಲಾರದು. 'ಶಾಸ್ತ್ರಕವಿ'ಯಾದವನು ಖಚಿತತೆಯ ಜೊತೆಗೆ ಯಾವುದೇ ವಿಷಯವನ್ನು ತರ್ಕಬದ್ಧವಾಗಿ ನಿರೂಪಿಸಬಲ್ಲನು. ಆದರೆ ಆತನ ಕಾವ್ಯಭಾಗಗಳು ನೀರಸವಾಗಬಹುದು. ಆದರೆ 'ಉಭಯಕವಿ' ಮಾತ್ರ ಕಾವ್ಯ ಮತ್ತು ಶಾಸ್ತ್ರಗಳೆರಡನ್ನೂ ಸಮರ್ಥವಾಗಿ ಬಳಸಿ ಅವುಗಳಿಗೆ ಅಪಚಾರವೆಸಗದಂತೆ ಬರೆಯಬಲ್ಲನು ಎಂದು ಹೇಳುತ್ತಾನೆ. ಈ ಮಾತಿನಿಂದ ಧ್ವನಿತವಾಗುವ ವಿಚಾರವೆಂದರೆ ಕಾವ್ಯವೇ ಬೇರೆ. ಶಾಸ್ತ್ರವೇ ಬೇರೆ. "ಕಾವ್ಯ ಅನುಭವ ಪ್ರಪಂಚಕ್ಕೆ ಸೇರಿದ್ದು. ಶಾಸ್ತ್ರ ಆಲೋಚನಾ ಪ್ರಪಂಚಕ್ಕೆ ಸೇರಿದ್ದು."[೩] ಆದರೆ ಒಬ್ಬ ಕವಿಯ ಕೃತಿಯು ಶಾಸ್ತ್ರವೋ ಅಥವಾ ಕಾವ್ಯವೋ ಎಂಬುದು ಆತನ ಮೂಲೋದ್ದೇಶವನ್ನು ಅವಲಂಬಿಸಿರುತ್ತದೆ. ಅದರಂತೆ ಕಾವ್ಯಕ್ಕೆ ಶಾಸ್ತ್ರವು ಬಿಗಿ, ತೂಕ, ಗಹನತೆಗಳನ್ನು ತಂದುಕೊಟ್ಟರೆ ಕಾವ್ಯವು ಶಾಸ್ತ್ರಕ್ಕೆ ಚೆಲುವನ್ನೂ ಓದಿಸಿಕೊಂಡು ಹೋಗುವ ಗುಣ ಸ್ಪರ್ಶವನ್ನೂ ನೀಡುತ್ತದೆ.

"ಭಾರತೀಯ ವಿಜ್ಞಾನ ಪರಂಪರೆಯಲ್ಲಿ ಸಹಸ್ರಾರು ವರ್ಷಗಳಿಂದ ತಮ್ಮ ಮೇಧಾಶಕ್ತಿಯ ಮೂಲಕ ಶಾಸ್ತ್ರಾನುಗಮನಕ್ಕೆ ಜೀವನಾನುಭವದ ಧಾರೆಯನ್ನೆರೆದು ಭೌತಿಕ ಮತ್ತು ಅಭೌತಿಕ, ಲೋಕಾರೂಢಿ, ಚಿಂತನೆ, ಜಿಜ್ಞಾಸೆಗಳ ಮೂಲಕವಾಗಿ ವಿಶೇಷ ಸಮಸ್ಯೆಗಳು ಮತ್ತು ಶಕ್ತಿಗಳ ವಿಕಸನಕ್ಕಾಗಿ ತಮ್ಮ ಅದ್ಭುತ ಶೋಧನಾ ಸಾಮರ್ಥ್ಯ, ದಣಿವರಿಯದ ಕುತೂಹಲ, ಅನ್ವೇಷಣಾ ಮನೋಭಾವ, ವಿಶ್ಲೇಷಣಾ ಶಕ್ತಿ, ಪ್ರಯೋಗಪೂರ್ಣ ಚಾಣಾಕ್ಷತೆಗಳಿಂದ ಲೋಕಾಶ್ಚರ್ಯಕರವಾದ ಜ್ಞಾನದ ಪರಿಣತಿಯ ಫಲವಾಗಿ ಹಲವಾರು ಆಚಾರ್ಯ ಪುರುಷರು ವೈವಿಧ್ಯಮಯ ಶಾಸ್ತ್ರಗ್ರಂಥಗಳನ್ನು ರಚಿಸಿದ್ದಾರೆ."[೪]

"In India Science originated from Theology ಅಂದರೆ ಭಾರತದಲ್ಲಿ ಶಾಸ್ತ್ರವು ದೈವತ ವಿಜ್ಞಾನದ ಅಂಗವಾಗಿ ಹುಟ್ಟಿತು."[೫] ಮೊದಲು ಅದು ಬ್ರಾಹ್ಮಣ ಶಾಖೆಗಳಲ್ಲಿ ಬೆಳೆಸಲ್ಪಟ್ಟಿತು. ವೇದಗಳನ್ನು ಕ್ರಮಬದ್ಧವಾಗಿ ಪಠಣ ಮಾಡುವುದು ಹಾಗೂ ಆ ಗ್ರಂಥಗಳಲ್ಲಿ ಬರುವ ಶಬ್ಧ ಮತ್ತು ಶಬ್ಧಾವಳಿಗಳ ಸ್ಪಷ್ಟ ಉಚ್ಚಾರ, ಅರ್ಥವನ್ನು ಅರಿಯುವುದು ಇದರ ಉದ್ದೇಶವಾಗಿತ್ತು. ಆ ರೂಪದಲ್ಲಿ ವ್ಯಾಕರಣ ಛಂದಸ್ಸುಗಳ ಕಡೆಗೆ ಸೆಳೆತಗಳು ಆರಂಭವಾದವು. "ಯಜ್ಞಯಾಗಾದಿಗಳಿಗೆ ಯೋಗ್ಯ ದಿನಗಳನ್ನು ಗುರುತಿಸುವ ವೈದಿಕ ಪಂಚಾಂಗದ ರಚನೆಯ ಉದ್ದಿಷ್ಟವು ಆಕಾಶ, ಗ್ರಹ, ನಕ್ಷತ್ರಾದಿ ವಿಷಯಗಳ ಅಧ್ಯಯನಕ್ಕೆ ಎಳೆಸಿತು. ಖಗೋಳಶಾಸ್ತ್ರ ಮತ್ತು ಜ್ಯೋತಿಷ್ಯ ಶಾಸ್ತ್ರಗಳು (Astronomy and Astrology) ಒಂದೇ ನಾಣ್ಯದ ಎರಡು ಮುಖಗಳಂತೆ ಉದ್ಭವಿಸಿದವು."[೬] ಹೀಗೆ ಒಂದರ ಅಗತ್ಯತೆಯೇ ಇನ್ನೊಂದರ ಶೋಧನೆಗೆ ದಾರಿದೀಪ ಎನ್ನುವಂತೆ ಮನುಷ್ಯನ ಅಗತ್ಯಗಳಿಗೆ ಅನುವಾಗುವಂತೆ ಶಾಸ್ತ್ರಸಾಹಿತ್ಯವು ತನ್ನ ಅಸ್ತಿಭಾರವನ್ನು ಹೊಂದಿತು. ಹಾಗಾಗಿ

---

೩. ಅರವಿಂದ ಮಾಲಗತ್ತಿ (ಪ್ರ. ಸಂ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ. ೩೯೪

೪. ಡಾ. ಧನ್ಯಕುಮಾರ ಇಜಾರಿ ; **ಜೈನ ವೈದ್ಯಕೀಯ ಪರಂಪರೆ** : ಪು.೬

೫. ಡಾ. ಕೆ. ಕೃಷ್ಣಮೂರ್ತಿ (ಅನು) ; **ಭಾರತೀಯ ಸಾಹಿತ್ಯ ಚರಿತ್ರೆ : ಸಂಪುಟ–೩, ಭಾಗ–೧ ಶಾಸ್ತ್ರಸಾಹಿತ್ಯ** : ಪುಟ. viii

೬. **ಅದೇ** ; ಪುಟ. ೨೩

"ವ್ಯಾಕರಣ, ಛಂದಸ್ಸು, ಶಿಕ್ಷಾ, ಕಲ್ಪ, ನಿರುಕ್ತ ಮತ್ತು ಜ್ಯೋತಿಷ್ಯಗಳು ಎಂಬ ಆರು ಪ್ರಕಾರದ ಶಾಸ್ತ್ರಗಳ ಉಲ್ಲೇಖಗಳನ್ನು ಪುರಾತನ ಕಾಲದಿಂದಲೂ ಇರುವುದನ್ನು ಗುರುತಿಸಬಹುದಾಗಿದೆ."[೭]

೨.೧. ಶಾಸ್ತ್ರ ಪದದ ಅರ್ಥ:

"ಶಾಸ್ತ್ರ ಎಂಬ ಪದವು ಮೂಲತಃ ಸಂಸ್ಕೃತ ಭಾಷೆಯಿಂದ ಬಂದಿದ್ದು. ಸಾಮಾನ್ಯ ಅರ್ಥದಲ್ಲಿ ಮಾರ್ಗದರ್ಶಿ, ಕೈಪಿಡಿ, ಉಪನ್ಯಾಸ, ಆಜ್ಞೆ, ನಿಯಮಾವಳಿ, ಪವಿತ್ರ ಗ್ರಂಥ ಎಂಬ ಅರ್ಥಗಳನ್ನು ಕೊಡುತ್ತದೆ."[೮] ಶಾಸ್ತ್ರೀಯ ಗ್ರಂಥಕ್ಕೆ ಸಂಸ್ಕೃತದಲ್ಲಿ 'ಶಾಸ್ತ್ರ' ಎಂದು ಕರೆಯಲಾಗುತ್ತದೆ. "ಶಾಸ್ತ್ರ ಪದಕ್ಕೆ ಸಂಸ್ಕೃತದಲ್ಲಿ 'ಪಠ್ಯ ಪುಸ್ತಕ ಹಾಗೂ ವಿಜ್ಞಾನ' ಎಂಬ ಅರ್ಥಗಳೂ ಉಂಟು. ಹೀಗಾಗಿ ಶಾಸ್ತ್ರವು ಒಂದು ವಿಜ್ಞಾನ ಕೃತಿಯಾಗಬಹುದು ಅಥವಾ ದೈವತ ವಿಜ್ಞಾನವಾಗಬಹುದು."[೯]

ಪ್ರಾಚೀನ ಋಷಿಗಳು ಬಾಹ್ಯಪ್ರಪಂಚನ್ನು ಹೊರಗಣ್ಣಿನಿಂದ ನೋಡಿ, ದರ್ಶಿಸಿ, ವಿಚಾರ (ಬೌದ್ಧಿಕ) ಶಕ್ತಿಯಿಂದ ಅದರ ರಹಸ್ಯವನ್ನು ಭೇದಿಸಿ, ಒಳಗಣ್ಣಿನಿಂದ 'ಸತ್ಯದರ್ಶನ' ಮಾಡಿದರು. ಹೀಗೆ ಸತ್ಯವನ್ನು ನೋಡಿ ಕಂಡು ಕೊಂಡವರಾದ್ದರಿಂದ ಅವರು ದಾರ್ಶನಿಕರು, ದ್ರಷ್ಟಾರರು ಎನಿಸಿಕೊಂಡರು. ಅವರು ಕಂಡ ಸತ್ಯಸ್ವರೂಪದ ವಿವಿಧ ಮುಖಗಳ ಸಮಷ್ಟಿಯೇ 'ದರ್ಶನ'. ಬಹು ದೀರ್ಘಕಾಲದ ಕಾಣ್ಕೆ, ವಿಚಾರ ಮಂಥನದ ಪರಿಣಾಮಫಲ ಈ 'ದರ್ಶನ'. ಸಾರಭೂತವಾದ ಜ್ಞಾನನಿಧಿಯಾದ ಈ ದರ್ಶನವೇ 'ವೇದ' (ತಿಳಿವಳಿಕೆ, ಜ್ಞಾನ<ವಿದ್=ತಿಳಿ). ಈ ವೇದಗಳನ್ನು ಯಾರೂ ಬರೆದಿಡಲಿಲ್ಲ. ಯಾವ ಒಬ್ಬ ಪುರುಷ ಇದರ ಪ್ರತಿಪಾದಕನಲ್ಲ. ಗುರು ಶಿಷ್ಯ ಪರಂಪರೆಯಿಂದ ಕಿವಿಯಿಂದ ಕಿವಿಗೆ ಸಾಗಿಬಂತು. ಹೀಗೆ ಸಾಗಿಬಂದ ವೇದಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗಿ 'ಶಿಕ್ಷಾ' (ಉಚ್ಚಾರಣಾ ಶಾಸ್ತ್ರ), 'ವ್ಯಾಕರಣ', 'ಛಂದಸ್ಸು', 'ನಿರುಕ್ತ' (ಶಬ್ಧಗಳ ಅರ್ಥವನ್ನು ಕುರಿತ ಶಾಸ್ತ್ರ), 'ಜ್ಯೋತಿಷ್ಯ', 'ಕಲ್ಪ' (ಆಚರಣೆಯ ಕ್ರಮವನ್ನು ತಿಳಿಸುವುದು) ಎಂಬ ಆರು ಶಾಸ್ತ್ರಗಳು ಬೆಳೆದುಬಂದವು. ಒಟ್ಟಿನಲ್ಲಿ ಇವು ವೇದಶಾಸ್ತ್ರವೆಂದೇ ಪ್ರಸಿದ್ಧ. 'ಶಾಸ್ತ್ರ' ಎನ್ನುವ ಮಾತಿನ ಅರ್ಥ–ಶಾಸನ ವಿಧಿಸುವುದು, ಕಟ್ಟಳೆ ಮಾಡುವುದು ಎಂದಾಗುತ್ತದೆ. "ಶಾಸನ ಮಾಡುವುದರಲ್ಲಿ ಎರಡು ರೀತಿಯಿದ್ದು, ಮೊದಲನೆಯದ್ದು ಹೀಗೆಯೇ ಮಾಡಬೇಕು ಎಂಬುದು 'ವಿಧಿ'. ಎರಡನೆಯದ್ದು ಹೀಗೆ ಮಾಡಬಾರದು ಎಂಬುದು 'ನಿಷೇಧ'. ವಿಧಿ ನಿಷೇಧಗಳೆರಡನ್ನೂ ಶಾಸ್ತ್ರವು ಹೊಂದಿರುತ್ತದೆ."[೧೦]

ಶಾಸ್ತ್ರದ ಲಕ್ಷಣದ ಕುರಿತಾಗಿ ಆಚಾರ್ಯ ಕುಮಾರಿಲ ಭಟ್ಟಪಾದರು ಹೀಗೆ ಹೇಳುತ್ತಾರೆ :

---

೭. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೧೧

೮. Monier Williams, Monier Williams; Sanskrit-English Dictionary : Article on **shastra**

೯. ಡಾ. ಕೆ. ಕೃಷ್ಣಮೂರ್ತಿ (ಅನು); **ಭಾರತೀಯ ಸಾಹಿತ್ಯ ಚರಿತ್ರೆ : ಸಂಪುಟ–೩, ಭಾಗ–೧ ಶಾಸ್ತ್ರಸಾಹಿತ್ಯ** : ಪುಟ. ೨೪

೧೦. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೧೧

"ಪ್ರವೃರ್ತಿರ್ವಾ ನಿವೃರ್ತಿರ್ವಾ ವಿಧೇನ ಕೃತಕೇನ ವಾ ।
ಪುಂಸಾಮ್ ಅನುಪದಿಷ್ಯೇತ ತತ್ ಶಾಸ್ತ್ರಮಿತಿ ಕಥ್ಯತೇ ॥"[೧೧]

ಅಂದರೆ ಪ್ರವೃತ್ತಿ ಅಥವಾ ನಿವೃತ್ತಿಗಳ ಅರಿಯುವಿಕೆಗೆ ಯಾವುದು ಶಾಶ್ವತವಾದ ಅಥವಾ ಕ್ಷಣಿಕವಾದ ಸಾಧನವೋ ಅದನ್ನೇ ಶಾಸ್ತ್ರ ಎಂದು ಎನ್ನಲಾಗುತ್ತದೆ. ಈ ಮೇಲೆ ಹೇಳಿದಂತೆ "In India Science originated from Theology ಎಂಬ ಹೇಳಿಕೆಯಲ್ಲಿ Science ಮತ್ತು Theology ಪದಗಳನ್ನು ಆಧುನಿಕ ಅರ್ಥದಲ್ಲಿ ಬಳಸಲಾಗಿದೆ. ಅದೇ ರೀತಿಯಾಗಿ The Sanskrit word for a Scientific work is '**Shastra'** ಇಲ್ಲಿ Scientific ಎನ್ನುವಲ್ಲಿ ವಿಶಾಲಾರ್ಥವಿದೆ. ಅಲ್ಲದೇ Theology ಎಂಬ ಸಿದ್ಧಾಂತವು ಭಾರತೀಯರಲ್ಲಿ ಇಲ್ಲ. ಕ್ರಿಶ್ಚಿಯನ್ನರಲ್ಲಿದೆ. Theologyಯ ಕುರಿತಾಗಿ ಶಬ್ದಕೋಶದಲ್ಲಿ Systematic Study and enquiry into the Nature and attributes of God; and the foundation of belief ಇಷ್ಟೂ ಶಬ್ಧಗಳ ಅರ್ಥವನ್ನು ಪ್ರತಿನಿಧಿಸಬಲ್ಲ ಒಂದು ಶಬ್ದ 'ದೈವತ ವಿಜ್ಞಾನ'."[೧೨] ಪ್ರಾಚೀನ ಕಾಲದ 'ಜ್ಯೋತಿಷ್ಯ'ವು ಅಂದು 'ಶಾಸ್ತ್ರ'ವಾದರೆ; ಇಂದು ವಿಜ್ಞಾನ.

"ವೇದಗಳ ಕಾಲದಲ್ಲಿ 'ಶಾಸ್ತ್ರ' ಪದವು ಧಾರ್ಮಿಕ ಬೋಧನೆ ಅಥವಾ ಉಪದೇಶ, ನಿಯಮಗಳು ಅಥವಾ ವಿಧಿಗಳು, ಪರಿಪೂರ್ಣತೆ ಎಂಬ ಅರ್ಥದಲ್ಲಿ ಬಳಕೆಯಲ್ಲಿತ್ತು. ವೇದೋತ್ತರ ಕಾಲದಲ್ಲಿ 'ಧಾರ್ಮಿಕ ವಿಷಯಗಳನ್ನು ಬೋಧನೆ ಮಾಡುವ ಹಾಗೂ ಅದರ ಬಗೆಗೆ ತಿಳುವಳಿಕೆ ನೀಡುವ ಕೈಪಿಡಿಯೇ ಶಾಸ್ತ್ರ' ಎಂಬ ಪರಿಭಾಷೆಯು ಬೆಳೆದು ಬಂದಿರುವುದನ್ನು ಕಾಣಬಹುದು."[೧೩] ಆಗಮಗಳಲ್ಲಿ "ಶಾಸ್ತ್ರ ಪದವನ್ನು ಸಾಮಾನ್ಯವಾಗಿ ಭಾರತೀಯ ಪ್ರಾತಿನಿಧಿಕ ಸಾಹಿತ್ಯ ಕ್ಷೇತ್ರದಲ್ಲಿ ಪ್ರತ್ಯಯದ ರೂಪದಲ್ಲಿ ಅವ್ಯಾಹತವಾಗಿ ಬಳಕೆ ಮಾಡಿರುವುದನ್ನು ಕಾಣಬಹುದಾಗಿದೆ."[೧೪] **ಉದಾ:** ಜ್ಯೋತಿಷ್ಯಶಾಸ್ತ್ರ, ನ್ಯಾಯಶಾಸ್ತ್ರ, ವೈದ್ಯಶಾಸ್ತ್ರ ಶಿಲ್ಪಶಾಸ್ತ್ರ ಇತ್ಯಾದಿ... "ಇದನ್ನು ಆಂಗ್ಲ ಭಾಷೆಯಲ್ಲಿ **'logy'** ಎಂಬ ಸಂವಾದಿ ಪದದಿಂದ ಬಳಕೆ ಮಾಡಲಾಗುತ್ತದೆ. **ಉದಾ:** Ecology, Sociology, Psychology etc... ಹೀಗಾಗಿ ಶಾಸ್ತ್ರ ಪದವು ನಿರ್ದಿಷ್ಟವಾದ ಜ್ಞಾನ, ವಿಜ್ಞಾನ ಎಂಬ ಅರ್ಥವನ್ನು ನೀಡುತ್ತದೆ."[೧೫]

ಒಂದು ವಿಷಯದ ಕುರಿತಾಗಿ ವಿಶಿಷ್ಟ ಜ್ಞಾನವನ್ನು ಪಡೆಯುವುದೇ ಶಾಸ್ತ್ರ. ಶಾಸ್ತ್ರ ಎಂಬ ಮಾತಿನ ಅರ್ಥ ಶಾಸನ ಮಾಡುವುದು, ವಿಧಿಸುವುದು, ಕಟ್ಟಳೆ ಮಾಡುವುದು ಎಂದಾಗುತ್ತದೆ. "ಶಾಸನಾತ್ ಶಂಸನಾತ್ ಶಾಸ್ತ್ರಂ ಶಾಸ್ತ್ರಮಿತ್ಯಭಿಧೀಯತೇ ಶಾಸನಂ ದ್ವಿವಿಧಂ ಪ್ರೋಕ್ತಂ ಶಾಸತ್ರ

---

೧೧. ಡಾ. ಸುಬ್ರಾಯ ವಿ. ಭಟ್ಟ : **ಪೂರ್ವಮೀಮಾಂಸಾ ದರ್ಶನ** ; ಪುಟ. ೧೨

೧೨. ಡಾ. ಕೆ. ಕೃಷ್ಣಮೂರ್ತಿ (ಅನು); **ಭಾರತೀಯ ಸಾಹಿತ್ಯ ಚರಿತ್ರೆ : ಸಂಪುಟ–೩, ಭಾಗ–೧ ಶಾಸ್ತ್ರಸಾಹಿತ್ಯ** : ಪುಟ. viii

೧೩. James Lochtefeld : **Illustrated Encyclopedia of Hinduism, Vol. 2** : Page 626

೧೪. ಡಾ. ಕೆ. ಕೃಷ್ಣಮೂರ್ತಿ (ಅನು); **ಭಾರತೀಯ ಸಾಹಿತ್ಯ ಚರಿತ್ರೆ : ಸಂಪುಟ–೩, ಭಾಗ–೧ ಶಾಸ್ತ್ರಸಾಹಿತ್ಯ** : ಪುಟ. ೬೨೬

೧೫. Boesche, Roger (January 2003). "**Kautilya's *Arthaśāstra* on War and Diplomacy in Ancient India"** ISSN 0899-3718

ಲಕ್ಷಣ ವೇಧಿಭಿಃ' ಎಂದು ಹೇಳಲಾಗಿದೆ. 'ಶಾಸ್' ಎಂದರೆ ಶಾಪಿಸು, ಆಜ್ಞಾಪಿಸು ಎಂದೂ 'ಶಂಸ್' ಎಂದರೆ ಪ್ರಕಟ ಮಾಡುವುದು ಎಂದೂ ಅರ್ಥವಾಗುತ್ತದೆ. ಇದರಲ್ಲಿ ವಿಧಿರೂಪ ಮತ್ತು ನಿಷೇಧರೂಪ ಎಂದು ಎರಡು ಲಕ್ಷಣಗಳಿವೆ." [೧೬] ಯೋಗಾಪೀಡಿಯಾ ಶಬ್ಧಕೋಶದ ಪ್ರಕಾರ "ಶಾಸ್ತ್ರವೆಂದರೆ ಸಾಂಸ್ಕೃತಿಕ ಶಿಸ್ತುಬದ್ಧತೆ ಅಥವಾ ಶಿಸ್ತುಬದ್ಧವಾಗಿ ನೀತಿ ನಿಯಮಾವಳಿಗಳ ಮಾರ್ಗದರ್ಶನ ನೀಡುವ ಉತ್ಕೃಷ್ಟ ಪಾರಿಭಾಷಿಕ ಕೈಪಿಡಿಯಿದ್ದಂತೆ." [೧೭] ಒಟ್ಟಿನಲ್ಲಿ ಶಾಸ್ತ್ರವೆಂದರೆ "೧. ಆಜ್ಞೆ, ಆದೇಶ ೨. ಜ್ಞಾನವನ್ನುಂಟು ಮಾಡುವ ಗ್ರಂಥ ೩. ಆಜ್ಞಾರೂಪವಾದ ಗ್ರಂಥ ೪. ಸಾಧು ಮತ್ತು ಅಸಾಧು, ಕರ್ತವ್ಯ ಮತ್ತು ಅಕರ್ತವ್ಯ, ವಿಹಿತ ಮತ್ತು ನಿಸಿದ್ಧ ವಿಷಯಗಳನ್ನು ಮತ್ತು ತತ್ತ್ವಗಳನ್ನು ತಿಳಿಸುವ ಗ್ರಂಥ." [೧೮]

೨.೨. ಶಾಸ್ತ್ರ ಸಾಹಿತ್ಯದ ಸ್ವರೂಪ:

ಪ್ರಾಚೀನ ಶಾಸ್ತ್ರಕಾರರು, ಕವಿಗಳು ಸಾಹಿತ್ಯ ಎಂಬ ಪದವನ್ನು 'ಕಾವ್ಯ' ಎಂಬ ಅರ್ಥದಲ್ಲಿ ಬಳಸಿದ್ದಾರೆ. ಕವಿತೆ, ಕಾದಂಬರಿ, ಕಥೆ, ನಾಟಕ ಮುಂತದ ಮನೋರಂಜಕ ರಚನೆಗಳನ್ನು ಒಟ್ಟುಗೂಡಿಸಿಕೊಂಡು ಹೇಳುವಾಗ 'ಸಾಹಿತ್ಯ' ಎಂಬ ಪದವನ್ನು ಕಾವ್ಯಾರ್ಥದಲ್ಲಿ ಹೇಳಲಾಗುತ್ತಿತ್ತು. ಕನ್ನಡದ ಮೊದಲ ಲಕ್ಷಣ ಗ್ರಂಥವಾದ 'ಕವಿರಾಜಮಾರ್ಗ'ದ ಕರ್ತೃ ಶ್ರೀವಿಜಯನು ಸುವಿಧೆಯನ್ನು ಹೇಳುವಾಗ "ಉಕ್ತಿ ಕಲಾಕಲಾಪಕಂ ಉಪಾಹಿತ ಸಾಹಿತ್ಯ ವಿದ್ಯೆಯೊಳ್" [೧೯] ಎಂದು ಹೇಳುತ್ತಾನೆ. ಸಾಹಿತ್ಯ ವಿದ್ಯೆ ಎಂದರೆ ಕಾವ್ಯಲಕ್ಷಣ. ಕಾವ್ಯಲಕ್ಷಣಗಳನ್ನು ತಿಳಿಸುವ ಅನೇಕ ಸಂಸ್ಕೃತ ಗ್ರಂಥಗಳು ಸಾಹಿತ್ಯ ಮೀಮಾಂಸೆ, ಸಾಹಿತ್ಯ ದರ್ಪಣ, ಸಾಹಿತ್ಯಸಾರ, ಸಾಹಿತ್ಯ ರತ್ನಾಕರ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿವೆ. ಆದ್ದರಿಂದ ಶಾಸ್ತ್ರಸಾಹಿತ್ಯವು ಕಾವ್ಯ ಲಕ್ಷಣ ಎಂಬ ಪದದ ಅರ್ಥದ ಹರಹನ್ನು ವಿಚಾರಮಾಡಿ, ಶಾಸ್ತ್ರಕ್ಕೂ-ಕಾವ್ಯಕ್ಕೂ ಇರುವ ಪರಸ್ಪರ ಸಂಬಂಧ ಹಾಗೂ ವ್ಯತ್ಯಾಸಗಳನ್ನು ತಿಳಿದುಕೊಳ್ಳಬೇಕು. ಸಂಸ್ಕೃತದ ಶಾಸ್ತ್ರಕೃತಿಗಳೆಲ್ಲವೂ ಸಾಧಾರಣವಾಗಿ ಪದ್ಯರೂಪದಲ್ಲಿಯೇ ಇವೆ. ಹಾಗೆಯೇ ಕನ್ನಡದಲ್ಲಿಯೂ ಕೂಡ ಹೆಚ್ಚಾಗಿ ಪದ್ಯರೂಪದಲ್ಲಿಯೇ ರಚನೆಯಾಗಿವೆ. ಸಾಮಾನ್ಯ ಕಾವ್ಯಗಳನ್ನು ಕಥಾರೂಪದಲ್ಲಿ ನೆನಪಿಟ್ಟುಕೊಳ್ಳಬಹುದಾಗಿತ್ತು. ಆದರೆ ಶಾಸ್ತ್ರಸಾಹಿತ್ಯ ಹಾಗಲ್ಲ. ಹಿಂದಿನ ಕಾಲದಲ್ಲಿ ಮುದ್ರಣದ ಸೌಕರ್ಯ ಇಲ್ಲದ್ದರಿಂದ ಶಿಷ್ಯರು ಶಾಸ್ತ್ರಜ್ಞಾನವನ್ನು ಗುರುಮುಖದಿಂದ ಕಲಿತು ಬಾಯಿಪಾಠದಿಂದ ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಕಾಲಾನಂತರದಲ್ಲಿ ಶಾಸ್ತ್ರವನ್ನು ಲಿಖಿತರೂಪದಲ್ಲಿ ಇಳಿಸಿದರು.

"ಪ್ರಾಚೀನ ಕಾಲದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಶಾಸ್ತ್ರಗಳೆಂದೇ ಪರಿಗಣಿಸುತ್ತಿದ್ದರು. ಛಂದಶ್ಶಾಸ್ತ್ರ, ಜ್ಯೋತಿಷ್ಯ, ಸೂಪಶಾಸ್ತ್ರ, ನಾಟ್ಯಶಾಸ್ತ್ರ ಮುಂತಾದ ಹೆಸರುಗಳಲ್ಲಿ

೧೬. ಡಾ. ಆರ್ವೀಯಸ್ ಸುಂದರಂ ; **ಶಾಸ್ತ್ರ ಸಾಹಿತ್ಯ** : ಪುಟ.೧

೧೭. https://www.yogapedia.com/definition/9690/shastra

೧೮. ಜಿ. ಎನ್. ಚಕ್ರವರ್ತಿ : **ಸಂಸ್ಕೃತ-ಕನ್ನಡ ನಿಘಂಟು** : ಗೀತಾ ಬುಕ್ ಹೌಸ್, ಮೈಸೂರು

೧೯. ಎಂ. ವಿ. ಸೀ. : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ. ೨೦೧ (೩.೨೧೮)

ಶಾಸ್ತ್ರ ಎಂಬುದು ಬಳಕೆಯಾಗುತ್ತಿತ್ತು. ಧನುರ್ವಿದ್ಯೆ ಮುಂತಾದ ಅಧ್ಯಯನ ಪದ್ಧತಿಗಳನ್ನು ವಿದ್ಯೆ ಎಂಬ ಹೆಸರಿನಿಂದ ಕರೆಯುವುದುಂಟು."[೨೦] ವಿಷಯ ಸಾಮಗ್ರಿಯ ದೃಷ್ಟಿಯಿಂದ ನೋಡಿದರೆ ಭಾರತೀಯ ಸಾಹಿತ್ಯವು 'ಸಾಹಿತ್ಯ' ಎಂಬ ಮಾತು ಅದರ ವಿಶಾಲಾರ್ಥದಲ್ಲಿ ಏನೇನನ್ನು ಒಳಗೊಳ್ಳುತ್ತದೆಯೋ ಅಷ್ಟನ್ನೂ ಶಾಸ್ತ್ರಸಾಹಿತ್ಯವು ಒಳಗೊಳ್ಳುತ್ತದೆ. ಧಾರ್ಮಿಕ ಕಾವ್ಯ, ಲೌಕಿಕ ಕಾವ್ಯ, ಮಹಾಕಾವ್ಯ, ಭಾವಗೀತೆ, ನಾಟಕ, ನೀತಿಪ್ರಧಾನ ಕಾವ್ಯ, ಜೊತೆಗೆ ನಿರೂಪಣ ಹಾಗೂ ವೈಜ್ಞಾನಿಕ ಗದ್ಯ. ಈ ಮಾತುಗಳು ಕನ್ನಡಕ್ಕೂ ಬಹುಮಟ್ಟಿಗೆ ಅನ್ವಯಿಸುತ್ತವೆ.

"ಶಾಸ್ತ್ರಸಾಹಿತ್ಯ' ಎಂಬ ಸಮಾಸ ಪದದಲ್ಲಿ 'ಶಾಸ್ತ್ರ' ಹಾಗೂ 'ಸಾಹಿತ್ಯ' ಎಂಬ ಎರಡು ಪದಗಳಿವೆ."[೨೧] ಪ್ರಾಚೀನ ಕಾಲದ ಕವಿಗಳು ಮತ್ತು ಶಾಸ್ತ್ರಕಾರರು 'ಸಾಹಿತ್ಯ' ಎಂಬ ಪದವನ್ನು 'ಕಾವ್ಯ' ಎಂಬ ಅರ್ಥದಲ್ಲಿಯೇ ಬಳಸುತ್ತ ಬಂದಿದ್ದಾರೆ. ಆದರೆ ಇಂದು 'ಪದ್ಯ ರೂಪ'ದ ಸಾಹಿತ್ಯಕ್ಕೆ ಎಂಬುದಕ್ಕೆ ಮಾತ್ರ 'ಕಾವ್ಯ' ಎಂಬ ಪದವನ್ನು ಬಳಸಲಾಗುತ್ತಿದೆ.

ಶ್ರೀವಿಜಯನು : **"ಸಕಳ ಲೌಕಿಕ ಸಾಮಯಿಕೋರು ವೈ**
ದಿಕ ವಿಶೇಷ ವಿವೇಕ ಪರಾಯಣಂ
ಪ್ರಕಟಿತೋಕ್ತಿ ವಿವಿಕ್ತ ಕಳಾಕಳಾ
ಪಕ[ನು]ಪಾಹಿತ ಸಾಹಿತ್ಯವಿದ್ಯೆಯೊಳ್" ॥೨೧೮॥"[೨೨] ಎನ್ನುತ್ತಾನೆ.

ಇಲ್ಲಿ ಸಾಹಿತ್ಯವಿದ್ಯೆ ಎಂದರೆ 'ಕಾವ್ಯ ವಿದ್ಯೆ', 'ಕಾವ್ಯಲಕ್ಷಣ', 'ಕಾವ್ಯಶಾಸ್ತ್ರ' ಎಂದು ಅರ್ಥೈಸಿಕೊಳ್ಳಬೇಕು. "ಕಾವ್ಯ ಲಕ್ಷಣಗಳನ್ನು ತಿಳಿಸುವ ಅನೇಕ ಸಂಸ್ಕೃತ ಗ್ರಂಥಗಳು ಸಾಹಿತ್ಯ ದರ್ಪಣ, ಸಾಹಿತ್ಯ ರತ್ನಾಕರ, ಸಾಹಿತ್ಯ ಮಿಮಾಂಸಾ, ಸಾಹಿತ್ಯ ಸಾರ ಎಂಬ ಹೆಸರುಗಳಿಂದಲೇ ಪ್ರಸಿದ್ಧವಾಗಿವೆ."[೨೩] ಆದುದರಿಂದ ಶಾಸ್ತ್ರ ಮತ್ತು ಕಾವ್ಯಗಳೆರಡೂ ಭಿನ್ನವಾಗಿ ನಿಲ್ಲುತ್ತವೆ. ಸಂಸ್ಕೃತ ಶಾಸ್ತ್ರ ಗ್ರಂಥಗಳೆಲ್ಲವೂ ಸಾಮಾನ್ಯವಾಗಿ ಪದ್ಯರೂಪದಲ್ಲಿಯೇ ಇವೆ. ಬಹುತೇಕವಾಗಿ ಕನ್ನಡ ಶಾಸ್ತ್ರಗ್ರಂಥಗಳು ಸಂಸ್ಕೃತವನ್ನೇ ಅನುಸರಿಸಿದುದು ಕಾಣಬರುತ್ತದೆ.

ಕಾವ್ಯಗಳು ಗದ್ಯರೂಪದಲ್ಲಿ ಇರಬಹುದಾದರೂ ಅವು ಸಾಧಾರಣವಾಗಿ ಪದ್ಯರೂಪದಲ್ಲಿಯೇ ಇರುವುದು ಹೆಚ್ಚು. ಕವಿ ಎಂದರೆ ಪದ್ಯರೂಪದ ಕಾವ್ಯ ಬರೆಯುವವನು ಎಂಬ ಭಾವನೆಯೇ ಬೆಳೆದು ಬಂದಿತು. ಪದ್ಯರಚನೆಗೆ ಅಗತ್ಯವಾದ ಶಬ್ಧಸಂಪತ್ತು, ವ್ಯಾಕರಣ, ಛಂದಸ್ಸು ಇವುಗಳಲ್ಲಿ ಪಾಂಡಿತ್ಯವನ್ನು ಸಾಧಿಸಬೇಕಾಗಿದ್ದಿತು. "ಶಾಸ್ತ್ರಕಾರರು ತಾವು ಹೇಳುವ ವಿಷಯ ಬಹುಕಾಲ ನೆನಪಿನಲ್ಲಿ ಉಳಿಯಬೇಕು ಹಾಗೂ ವಿಷಯವು ಸರಳವಾಗಿ ಮನದಟ್ಟಾಗಬೇಕೆಂಬ ಉದ್ದೇಶದಿಂದ ಅಲಂಕಾರಗಳನ್ನೊಳಗೊಂಡ ಭಾಷಾಶೈಲಿಯನ್ನು ಬಳಸಿ

---

೨೦. ಡಾ. ಆರ್ವೀಯಸ್ ಸುಂದರಂ ; **ಶಾಸ್ತ್ರ ಸಾಹಿತ್ಯ** : ಪುಟ. ೦೪
೨೧. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೦೧
೨೨. ಎಂ. ವಿ. ಸೀ. : **ಶ್ರೀವಿಜಯಕೃತ ಕವಿರಾಜಮಾರ್ಗಂ** : ಪುಟ. ೨೦೧
೨೩. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೦೨

ಗ್ರಂಥ ರಚಿಸುತ್ತಿದ್ದರು. ಹೀಗಾಗಿ ಕವಿಗೆ 'ಕಾವ್ಯವನ್ನು ಕಟ್ಟುವವನು' ಎಂಬ ಅರ್ಥದೊಂದಿಗೆ 'ವಿದ್ವಾಂಸ' ಎಂಬ ಹೆಸರೂ ಉಂಟು."[೨೪]

ಶ್ರೀಧರಾಚಾರ್ಯನು ತನ್ನ 'ಜಾತಕ ತಿಲಕಂ' ಎಂಬ ಜ್ಯೋತಿಷ್ಯಶಾಸ್ತ್ರ ಗ್ರಂಥದಲ್ಲಿ ಹೀಗೆ ಹೇಳುತ್ತಾನೆ :

"ಸುಭಗ ವಚಂ ಕಾವ್ಯ ಕವಿ
ತ್ವಭೂಷಣಂ ಶ್ರೀಧರಾಚಾರ್ಯ ರಚಿತಂ ಚಂದ್ರ
ಪ್ರಭಚರಿತಂ ಶಾಸ್ತ್ರಕವಿ
ತ್ವಭೂಷಣಂ ಧರೆಗೆ ನೆಗಳ್ದ ಜಾತಕತಿಲಕಂ"[೨೫]

ತನ್ನಿಂದ ರಚಿತವಾದ ಚಂದ್ರಪ್ರಭ ಚರಿತೆಯು ಮನೋಹರ ವಾಕ್ಯಗಳಿಂದ ಕೂಡಿ ಕಾವ್ಯಕವಿತ್ವಕ್ಕೆ ಆಭರಣವಾದರೆ; ಭೂಲೋಕದಲ್ಲಿ ಪ್ರಸಿದ್ಧವಾದ ಜಾತಕತಿಲಕವು ಶಾಸ್ತ್ರಕವಿತ್ವಕ್ಕೆ ಆಭರಣವಾಗಿದೆ. "ಇಲ್ಲಿ ಕಾವ್ಯ ಮತ್ತು ಶಾಸ್ತ್ರಗಳು ಎರಡೂ ಬೇರೆ ಬೇರೆ ಎಂಬ ವಿಚಾರಗಳನ್ನು ತಿಳಿಸುತ್ತಾನೆ. ಅಂತೆಯೇ ಶಾಸ್ತ್ರಸಾಹಿತ್ಯವು ಖಚಿತವಾಗಿದ್ದು, ಎಲ್ಲರಿಗೂ ಒಂದೇ ಸತ್ಯವನ್ನು ತಲುಪಿಸುತ್ತದೆ."[೨೬]

ಪ್ರಾಚೀನ ಕಾಲದಲ್ಲಿ ಕವಿಯಾಗಲೀ ಅಥವಾ ಶಾಸ್ತ್ರಕಾರನಾಗಲೀ ಸಾಧ್ಯವಾದಷ್ಟು ಕ್ಷೇತ್ರಗಳಲ್ಲಿ ವಿದ್ಯಾಪಾರಂಗತನಾಗಬೇಕಾಗಿತ್ತು. "ಶಸ್ತ್ರೇನ ರಕ್ಷಿತೇ ರಾಷ್ಟ್ರೇ ಶಾಸ್ತ್ರ ಚಿಂತಾಪ್ರವರ್ತತೇ"[೨೭] ಅಂದರೆ ರಾಷ್ಟ್ರ ರಕ್ಷಣೆಗಾಗಿ ಶಸ್ತ್ರ ಮತ್ತು ಮನುಕುಲದ ಏಳ್ಗೆಗಾಗಿ ಶಾಸ್ತ್ರಗಳೆರಡರಲ್ಲೂ ಪಾರಂಗತರಾಗಬೇಕಾಗಿದ್ದಿತು. ಅಂತಹ ೬೪ ಕಲೆಗಳನ್ನು ಪ್ರಾಚೀನರು ಅರಿಯಬೇಕಾಗಿತ್ತು.

ಪ್ರಾಚೀನ ಕಲೆಗಳು:

೧. ವೇದ	೨. ವೇದಾಂಗ	೩. ಇತಿಹಾಸ	೪. ಆಗಮ
೫. ನ್ಯಾಯ	೬. ಕಾವ್ಯ	೭. ಅಲಂಕಾರ	೮. ನಾಟಕ
೯. ಗಾನ	೧೦. ಕವಿತ್ವ	೧೧. ಕಾಮಶಾಸ್ತ್ರ	೧೨. ದೂತನೈಪುಣ್ಯ
೧೩. ದೇಶಭಾಷಾವಿಜ್ಞಾನ	೧೪. ಲಿಪಿಕರ್ಮ	೧೫. ವಾಚನ	೧೬. ಸಮಸ್ತಾವಧಾನ
೧೭. ಸ್ವರಪರೀಕ್ಷಾ	೧೮. ಶಾಸ್ತ್ರಪರೀಕ್ಷಾ	೧೯. ಶಕುನಪರೀಕ್ಷಾ	೨೦. ಸಾಮುದ್ರಿಕಪರೀಕ್ಷಾ
೨೧. ರತ್ನಪರೀಕ್ಷಾ	೨೨. ಸ್ವರ್ಣಪರೀಕ್ಷಾ	೨೩. ಗಜಲಕ್ಷಣ	೨೪. ಅಶ್ವಲಕ್ಷಣ
೨೫. ಮಲ್ಲವಿದ್ಯಾ	೨೬. ಪಾಕಕರ್ಮ	೨೭. ಧೋಹಳ	೨೮. ಗಂಧವಾದ
೨೯. ಧಾತುವಾದ	೩೦. ಖನಿವಾದ	೩೧. ರಸವಾದ	೩೨. ಅಗ್ನಿಸ್ತಂಭ
೩೩. ಜಲಸ್ತಂಭನ	೩೪. ವಾಯುಸ್ತಂಭ	೩೫. ಖಡ್ಗಸ್ತಂಭ	೩೬. ವಶ್ಯಾ
೩೭. ಆಕರ್ಷಣ	೩೮. ಮೋಹನ	೩೯. ವಿದ್ವೇಷಣ	೪೦. ಉಚ್ಚಾಟನ

೨೪. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೦೨
೨೫. ವಿದ್ವಾನ್ ಎಸ್. ಎನ್ ಕೃಷ್ಣಜೋಯಿಸ್ (ಸಂ) : **ಶ್ರೀಧರಾಚಾರ್ಯ ವಿರಚಿತ ಜಾತಕ ತಿಲಕಂ** : ಪುಟ. ೩೦೨
೨೬. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೨೦
೨೭. ಡಾ. ಶಿವಾನಂದ ವಿರಕ್ತಮಠ : **ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ** – ಪುಟ. ೨

೪೧. ಮಾರಣ	೪೨. ಕಾಲವಂಚನ	೪೩. ವಾಣಿಜ್ಯ	೪೪. ಪಶುಪಾಲನ
೪೫. ಕೃಷಿ	೪೬. ಸಮಶರ್ಮ	೪೭. ಲಾವುಕಯುದ್ಧ	೪೮. ಮೃಗಯಾ
೪೯. ಪುತಿಕೌಶಲ	೫೦. ದೃಶ್ಯಶರಣಿ	೫೧. ದ್ಯೂತಕರಣಿ	೫೨. ಚಿತ್ರಲೋಹ
೫೩. ಚೌರ್ಯ	೫೪. ಔಷಧಸಿದ್ಧಿ	೫೫. ಮಂತ್ರಸಿದ್ಧಿ	೫೬. ಸ್ವರವಂಚನಾ
೫೭. ದೃಷ್ಟಿವಂಚನಾ	೫೮. ಅಂಜನಾ	೫೯. ಜಲಪ್ಲವನ	೬೦. ವಾಕ್‌ಸಿದ್ಧಿ
೬೧. ಘಟಿಕಾಸಿದ್ಧಿ	೬೨. ಪಾದುಕಾಸಿದ್ಧಿ	೬೩. ಇಂದ್ರಜಾಲ	೬೪. ಮಹೇಂದ್ರಜಾಲ[೨೮]

ಕನ್ನಡದ ಆದಿಕವಿ ಪಂಪನ 'ಆದಿಪುರಾಣ' ಕಾವ್ಯದಲ್ಲಿ ಶಾಸ್ತ್ರದ ಕುರುಹುಗಳು ದೊರೆತರೂ ಅವುಗಳನ್ನು ಶಾಸ್ತ್ರವೆಂದು ಪರಗಣಿಸದೇ ಇರುವುದಕ್ಕೆ ಕಾರಣ ಈ ಮೊದಲೇ ತಿಳಿಸಿದಂತೆ ಒಂದು ಕೃತಿಯು ಕಾವ್ಯವೋ ಅಥವಾ ಶಾಸ್ತ್ರವೋ ಎಂಬುದು ಕವಿಯ ಮೂಲೋದ್ದೇಶವನ್ನು ಅವಲಂಬಿಸಿರುತ್ತದೆ. ಹೀಗಾಗಿ ಕಾವ್ಯ ಮತ್ತು ಶಾಸ್ತ್ರಗಳು ಪ್ರತ್ಯೇಕವಾಗಿ ನಿಲ್ಲುತ್ತವೆ. ಅಂತೆಯೇ ಪಂಪನು ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ಅರ್ಜುನನ ವಿದ್ಯಾಭ್ಯಾಸವನ್ನು ಹೀಗೆ ವರ್ಣಿಸುತ್ತಾನೆ :

"ಅಂತು ಪಂಚಾಂಗ ವ್ಯಾಕರಣ ವೃತ್ತಿಭೇದಮಪ್ಪ ಛಂಧೋವೃತ್ತಿಯೊಳಂಶಬ್ದಾಲಂಕಾರ ನಿಷ್ಠಿತಮಪ್ಪಲಂಕಾರದೊಳಂ ವ್ಯಾಸ ವಾಲ್ಮೀಕಿ ಕಶ್ಯಪ ಪ್ರಭೃತಿ ವಿರಚಿತಂಗಳಪ್ಪ ಮಹಾಕಾವ್ಯಂಗಳೊಳಂ ನಾಂದೀ ಪ್ರರೋಚನಾಪ್ರಸ್ತಾವ ನೇತಿವೃತ್ತ ಸಂಪ್ರವೇಶ ವಿಷ್ಕಂಭ ಕಪೋತಿಕಾ ವ್ಯಾಳಿಕಾದಿ ಲಕ್ಷಣೋಪೇತಂಗಳಪ್ಪ ನಾಟಕಂಗಳೊಳಂ ಪದಿನೆಂಟು ಧರ್ಮಶಾಸ್ತ್ರಂಗಳೊಳಂ ನಾಲ್ಕುವೇದದೊಳಮಾಱಂ ದೊಳಮಯ್ದು ತೆಱದ ಮಂತ್ರಂಗಳೊಳಮಾಱು ದರ್ಶನದೊಳಂ ಪ್ರತ್ಯಕ್ಷಾನುಮಾನ ಪ್ರಮಾಣಂಗಳೊಳಂ ಭರತಪ್ರಣೀತ ನೃತ್ಯಶಾಸ್ತ್ರದೊಳಂ ನಾರದಾದಿ ಪ್ರಣೀತ ಗಾಂಧರ್ವ ವಿದ್ಯಾ ವಿಶೇಷಂಗಳೊಳಂ ಗಜಾಗಮಜ್ಞ ರಾಜಪುತ್ರ ಗೌತಮ ವಾದ್ವಾಕಿ ಪಾಳ ಕಶ್ಯಪ ಪಸುಪತಿ ಶ್ರೀ ಹರ್ಷಾದಿ ಪುರಾಣಪುರುಷ ವಿರಚಿತಂಗಳಪ್ಪ ಹಸ್ತಿಶಾಸ್ತ್ರಂಗಳೊಳಂ ಚಿತ್ರಕರ್ಮ ಪತ್ರಚ್ಛೇದ ಗ್ರಹಗಣಿತ ರತ್ನಪರಿಕ್ಷೆಗಳೊಳಂ ದಾರುಕರ್ಮ ವಾಸ್ತುವಿದ್ಯಾ ಪೂರ್ವಯಂತ್ರ ಪ್ರಯೋಗ ವಿಷಾಪಹರಣ ಸರಭೇದ ರತಿತಂತ್ರೇಂದ್ರಜಾಲ ವಿವಿಧ ವಿದ್ಯಗಳೊಳಮನೇಕಾಕ್ಷರ ಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಣ ಶಕ್ತಿ ತೋಮರ ಮುಸಲ ಮುಸುಂಡಿ ಬಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧ ಗಳೊಳಮತಿಮತಿ ಪ್ರವೀಣನುಮಾರೂಢ ಸರ್ವಜ್ಞ ಮಹೇಂದ್ರಜಾಣನುಮಾಗಿ"[೨೯]

ಪಂಚಾಂಗ, ವ್ಯಾಕರಣ, ಛಂದಸ್ಸು, ಶಬ್ದಾಲಂಕಾರ, ರಾಮಾಯಣ, ಮಹಾಭಾರತಾದಿ ಮಹಾಕಾವ್ಯಗಳು, ಕಾವ್ಯ, ನಾಟಕ, ಹದಿನೆಂಟು ಧರ್ಮಶಾಸ್ತ್ರಗಳು, ಚತುರ್ವೇದಗಳು, ಆರು ದರ್ಶನಗಳು, ನೃತ್ಯ, ಸಂಗೀತ, ಪಶುವೈದ್ಯ, ಬಿಲ್ವಿದ್ಯೆ, ಜ್ಯೋತಿಷ್ಯ ಹೀಗೆ ಎಲ್ಲರೂ ಕಾವ್ಯ, ಶಾಸ್ತ್ರಾಗಮ ಹೀಗೆ ಅನೇಕ ವಿದ್ಯೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆಯಬೇಕಾಗಿದ್ದಿತು. ಇದು ೧೦ನೇ ಶತಮಾನದ ಅಧ್ಯಯನ ಕ್ರಮವೂ ಆಗಿದ್ದಿತ್ತೆಂದು ತಿಳಿಯಬಹುದು. ಕವಿ ಮೂರನೆಯ ಮಂಗರಸನು ತನ್ನ 'ನೇಮಿಜೀಶ ಸಂಗತಿ'ಯಲ್ಲಿ ಶಾಸ್ತ್ರದ ಕುರಿತು "ವೈರವಿಲ್ಲದುದೇ ಶಾಸ್ತ್ರ"[೩೦]

---

೨೮. ಬನ್ನಂಜೆ ಗೋವಿಂದಾಚಾರ್ಯ : **ಶ್ರೀಮದ್ಭಾಗವತ ಮಹಾಪುರಾಣ** : ಉಪನಿಷತ್ ಪ್ರವಚನ, ಪುಟ. ೧೬

೨೯. ಎನ್. ಅನಂತರಂಗಾಚಾರ್ ; **ಪಂಪಮಹಾಕವಿ ವಿರಚಿತ ಪಂಪಭಾರತ** : ಪುಟ. ೪೪ (ದ್ವಿತೀಯ ಆಶ್ವಾಸ)

೩೦. ಸಂ. ಶ್ರೀ. ಬಿ. ಬಿ. ಮಹೀಶವಾಡಿ ; **ಕವಿ ಮಂಗರಸ ವಿರಚಿತ ನೇಮಿಜಿನೇಶ ಸಂಗತಿ** : ಪುಟ. ೦೪

ಎಂದು ಹೇಳುತ್ತಾನೆ. ಅಂದರೆ ಯಾವುದೇ ಶಾಸ್ತ್ರವೂ ಒಳಿತನ್ನು ಹೊರತುಪಡಿಸಿ, ದ್ವೇಷಾಸೂಯೆಗಳನ್ನು ಬೋಧಿಸಲಾರದು ಎಂದು ಇದರರ್ಥ. ಅಂತೆಯೇ ಶಾಸ್ತ್ರದ ಮಹತ್ವವನ್ನು ತಿಳಿಸುವ ವಿಚಾರಗಳು ಭಗದ್ಗೀತೆಯಲ್ಲಿಯೂ ದೊರೆಯುತ್ತವೆ.

"ಯಃ ಶಾಸ್ತ್ರವಿಧಿಮುತ್ಸಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಮ್ ॥೨೩॥"[೩೧]

ಅಂದರೆ ಯಾರು ಶಾಸ್ತ್ರವಿಧಿಗಳನ್ನು ತ್ಯಜಿಸಿ ತನ್ನ ಅನಿಸಿಕೆಗಳಂತೆ ಕರ್ಮ ಮಾಡುವನೋ ಅವನಿಗೆ ಪೂರ್ಣತೆಯಾಗಲಿ, ಸುಖವಾಗಲಿ, ಪರಮಗತಿಯಾಗಲೀ ದೊರೆಯುವುದಿಲ್ಲ.

"ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತು ಮಿಹಾರ್ಹಸಿ ॥೨೪॥"[೩೨]

ಆದುದರಿಂದ ಮನುಷ್ಯನು ಶಾಸ್ತ್ರಕ್ಕೆ ಅನುಗುಣವಾಗಿ ಯಾವುದು ಕರ್ತವ್ಯ, ಯಾವುದು ಕರ್ತವ್ಯವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇಂತಹ ನಿಯಮ ನಿಬಂಧನೆಗಳನ್ನು ತಿಳಿದುಕೊಂಡಲ್ಲಿ ಕಾಲಕ್ರಮೇಣ ಮೇಲೆರುವಂತೆ ಮಾಡುತ್ತದೆ. ಒಟ್ಟಿನಲ್ಲಿ ಶಾಸ್ತ್ರವೆಂಬುದು ಜ್ಞಾನಧಾರಕ ಅಂಶಗಳನ್ನೊಳಗೊಂಡ ಪ್ರಭಾಶಕ್ತಿಯನ್ನು ಸೂಸುತ್ತ ಮಾನವನ ಜೀವನವನ್ನು ಔನತ್ಯಕ್ಕೆ ಏರಿಸುವ ಶಕ್ತಿಸ್ಥಾಪಕಗಳಾಗಿ ನಿಲ್ಲುತ್ತವೆ.

೨.೩. ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯದ ಬೆಳವಣಿಗೆ :

ಪ್ರಾಚೀನ ಭಾರತದಲ್ಲಿ ಬಹುಕಾಲದವರೆಗೆ ವೇದಗಳ ಪ್ರಾಬಲ್ಯವೇ ಅಧಿಕವಾಗಿತ್ತು. ಕಾಲಕ್ರಮೇಣ ವೇದಗಳ ಗಹಣತೆ ಕಡಿಮೆಯಾಗುತ್ತ ಸಾಗಿತು. ಇದಕ್ಕೆ ಕಾರಣ ಅದರಲ್ಲಿ ಸೂಚಿತ ಯಜ್ಞಯಾಗಾದಿ ಕರ್ಮ ವಿಧಿಗಳು ಮತ್ತು ಅದರ ಹೆಸರಿನಲ್ಲಿ ಅಧಿಕವಾಗುತ್ತ ಸಾಗಿದ ಬಲಿರೂಪದ ಪ್ರಾಣಿ ಹಿಂಸೆ, ಮೂಢನಂಬಿಕೆಗಳು. ಇದರಿಂದ "ವೈದಿಕ ನೆಲೆಗಟ್ಟಿನ ಮೇಲೆ ನಿಂತಿದ್ದ ಸಂಸ್ಕೃತಿಯ ಕಟ್ಟಡ ಶಿಥಲವಾಗುತ್ತ ಸಾಗಿತು. ವೈದಿಕ ಧರ್ಮವನ್ನು ವಿರೋಧಿಸಿ ಹೊಸಮತಗಳ ಉದಯವಾಯಿತು."[೩೩] ಜೈನಧರ್ಮವನ್ನು ಮಹಾವೀರರು[೩೪], ಬೌದ್ಧಧರ್ಮವನ್ನು ಗೌತಮ ಬುದ್ಧರೂ ಪ್ರಚುರಪಡಿಸಿದರು. ತಮ್ಮ "ಧರ್ಮ ಪ್ರಸಾರಕ್ಕೆ ಜನರೂಢಿ ಭಾಷೆಯಾದ ಪಾಳಿ, ಅರ್ಧಮಾಗಧಿ, ಪ್ರಾಕೃತ, ಅಪಭ್ರಂಶ ಭಾಷೆಗಳನ್ನು ಬಳಸಿಕೊಂಡರು. ಅವರು ಪ್ರಚಾರ ಮಾಡಿದ ತತ್ತ್ವ, ವಿಚಾರಗಳು ಕಾಲಕ್ರಮದಲ್ಲಿ ಆಯಾ ಮತದ 'ಶಾಸ್ತ್ರಗ್ರಂಥ'ಗಳಾಗಿ ರಚಿತವಾದವು."[೩೫]

---

೩೧. ಶ್ರೀ ಶ್ರೀಮದ್ ಎ. ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದ : **ಭಗವದ್ಗೀತಾ ಯಥಾರೂಪ** : ಪುಟ. ೭೦೨

೩೨. ಅದೇ, ೨೪ನೆಯ ಶ್ಲೋಕ. ಪುಟ. ೭೦೩

೩೩. ಕೆ. ಸದಾಶಿವ : **ಸಮಗ್ರಭಾರತದ ಇತಿಹಾಸ** : ನವಕರ್ನಾಟಕ ಪ್ರಕಾಶನ

೩೪. ಜೈನಧರ್ಮವು ಮಹಾವೀರರಿಗಿಂತಲೂ ಬಹುಕಾಲದ ಹಿಂದೆಯೇ ಸ್ಥಾಪಿತವಾಗಿತ್ತು. ಇವರಿಗಿಂತಲೂ ಹಿಂದ ೨೩ ಜನ ತೀರ್ಥಂಕರರು ಆಗಿ ಹೋಗಿದ್ದಾರೆ. ಇವರ ನಿಕಟವರ್ತಿಯಾಗಿ ನೇಮಿನಾಥ ಮತ್ತು ಪಾರ್ಶ್ವನಾಥ ತೀರ್ಥಂಕರರ ಕುರಿತಾಗಿ ಪೌರಾಣಿಕ ಮತ್ತು ಐತಿಹಾಸಿಕ ದಾಖಲೆಗಳು ಸಿಗುತ್ತವೆ. ಹೀಗಾಗಿ ಮಹಾವೀರರು ಈ ಹಿಂದೆ ಇದ್ದ ಜೈನಧರ್ಮವನ್ನು ಇನ್ನಷ್ಟು ಅಭ್ಯುದಯಕ್ಕೆ ತಂದರು ಎಂದು ಹೇಳಬಹುದು.

೩೫. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೧೩

"ಕನ್ನಡ ನಾಡಿನಲ್ಲಿ ಕ್ರಿ. ಪೂ. ೩ನೇ ಶತಮಾನಕ್ಕೂ ಮೊದಲು ಜೈನಧರ್ಮವು ಪ್ರಚುರಕ್ಕೆ ಬಂದಿತು. ಕನ್ನಡ ನಾಡಿನಲ್ಲಿನ ಜೈನ ವಿದ್ವಾಂಸರು ಮೊದಮೊದಲು ಪ್ರಾಕೃತ ಮತ್ತು ಸಂಸ್ಕೃತ ಧಾರ್ಮಿಕ ಗ್ರಂಥಗಳನ್ನು ರಚಿಸತೊಡಗಿದರೂ, ಧರ್ಮ ಪ್ರಸಾರಕ್ಕೆ ಜನಭಾಷೆಯಾದ ಕನ್ನಡ ಭಾಷೆಯಲ್ಲಿ ಕೃತಿ ರಚಿಸುವುದು ಅಗತ್ಯವೆಂಬುದು ಅವರ ಗಮನಕ್ಕೆ ಬಂದಿತು. ಹೀಗಾಗಿ ಅವರು ಪ್ರಾಕೃತ ಮತ್ತು ಸಂಸ್ಕೃತ ಭಾಷೆಯಲ್ಲಿದ್ದ ಧರ್ಮಗ್ರಂಥಗಳನ್ನು ಹಾಗೂ ಇತರ ಶಾಸ್ತ್ರಗಳನ್ನೂ, ಪುರಾಣಗಳನ್ನೂ ಆಧಾರವಾಗಿಟ್ಟುಕೊಂಡು ಕಾವ್ಯಗಳನ್ನು ರಚಿಸುತ್ತ ಬಂದರು." [೩೬] ಹೀಗೆ ಕನ್ನಡದಲ್ಲಿ ಶಾಸ್ತ್ರಗ್ರಂಥ ರಚನೆಯನ್ನು ಆರಂಭಿಸಿ ಬೆಳೆಸಿದವರು ಜೈನರು. ನಮಗೆ ಈವರೆಗೆ ದೊರೆತ ಕನ್ನಡ ಗ್ರಂಥರಾಶಿಯಲ್ಲಿ ಮೊಟ್ಟಮೊದಲ ಉಪಲಬ್ಧ ಗ್ರಂಥವೆನಿಸಿದ 'ಕವಿರಾಜಮಾರ್ಗ'ವೇ (ಕ್ರಿ. ಶ. ೮೫೦) ಮೊದಲ ಶಾಸ್ತ್ರಗ್ರಂಥವಾಗಿರುವುದು ವೈಶಿಷ್ಟ್ಯ. ಗ್ರಂಥಕರ್ತ ಶ್ರೀವಿಜಯ ಜೈನಮತೀಯನು. ನಂತರದ ಅವಧಿಯಲ್ಲಿ ವ್ಯಾಕರಣ, ಛಂದಸ್ಸು, ಜ್ಯೋತಿಷ್ಯ, ಕಾಮಶಾಸ್ತ್ರ, ವೈದ್ಯಶಾಸ್ತ್ರ, ಪಶುವೈದ್ಯ, ಸೂಪಶಾಸ್ತ್ರ ಮುಂತಾದ ವಿಷಗಳಿಗೆ ಅನುಗುಣವಾಗಿ ಕನ್ನಡ ವಾಙ್ಮಯದಲ್ಲಿ ಶಾಸ್ತ್ರಕೃತಿಗಳು ಅವ್ಯಾಹತವಾಗಿ ರಚನೆಯಾದವು. ಈ ಶಾಸ್ತ್ರ ಗ್ರಂಥಗಳನ್ನು ಬೇರೆ ಬೇರೆ ಪ್ರಭೇದಗಳಾಗಿ ವಿಂಗಡಿಸಬಹುದು. "ಸ್ಥೂಲವಾಗಿ ಹೇಳಬೇಕೆಂದರೆ ಶಾಸ್ತ್ರಗ್ರಂಥಗಳನ್ನು ಧಾರ್ಮಿಕ ಶಾಸ್ತ್ರ ಹಾಗೂ ಲೌಕಿಕ ಶಾಸ್ತ್ರ ಎಂದು ಪರಿಗಣಿಸಬಹುದು." [೩೭] ಕನ್ನಡದಲ್ಲಿ ಹುಟ್ಟಿರುವ ಶಾಸ್ತ್ರ ಗ್ರಂಥಗಳನ್ನು ಆಯಾ ಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಪಟ್ಟಿಮಾಡಲಾಗಿದೆ.

೨.೩.೧. ಧಾರ್ಮಿಕ ಶಾಸ್ತ್ರ ಗ್ರಂಥಗಳು :

ಇಲ್ಲಿ ಕಾವ್ಯಗಳು ಮತ್ತು ಶಾಸ್ತ್ರಗಳ ನಡುವಿನ ಭಿನ್ನತೆಗಳನ್ನು ನಿರ್ಣಯಿಸುವುದು ಎಲ್ಲ ಕಡೆಗಳಲ್ಲಿಯೂ ಸುಲಭವಾಗಲಾರದು. ಪ್ರಾಚೀನ ಕಾಲದಲ್ಲಿ ಕಾವ್ಯವು ಧರ್ಮಭೋಧನೆಯ ಮಾಧ್ಯಮಗಳಲ್ಲಿ ಒಂದಾಗಿತ್ತು. "ಆದಿಪುರಾಣ ಮುಂತಾದ ಜೈನಪುರಾಣಗಳಲ್ಲಿ, ಚೆನ್ನಬಸವ ಪುರಾಣದಂತಹ ವೀರಶೈವ ಪುರಾಣಗಳಲ್ಲಿ ಹಾಗೂ ಆಯಾ ಮತದ ತತ್ತ್ವ, ಬೋಧನೆಗಳನ್ನು ಕೃತಿಗಳಲ್ಲಿ ಅವಕಾಶ ಸಿಕ್ಕ ಕಡೆಗೆಲ್ಲ ನಿರೂಪಿಸುವುದನ್ನು ಕಾಣಬಹುದಾಗಿದೆ. ವಚನಗಳನ್ನು ಕೆಲವರು ಶಾಸ್ತ್ರವೆಂದು ಇನ್ನೂ ಕೆಲವರು ಸಾಹಿತ್ಯವೆಂದೂ ಗುರುತಿಸುತ್ತಾರೆ. ಇದಕ್ಕೆ ಕಾರಣ ವಚನಗಳಲ್ಲಿ ಶಾಸ್ತ್ರಾಂಶವೂ ಸಾಹಿತ್ಯಾಂಶವೂ ಹೆಚ್ಚೂ ಕಡಿಮೆ ಸಮನಾಗಿಯೇ ಇರುವುದು."[೩೮] ಇದೇ ಮಾತನ್ನು ಹರಿದಾಸ ಸಾಹಿತ್ಯದ ಅನೇಕ ಭಾಗಗಳಿಗೂ ಹೇಳಬಹುದು. ಆದರೂ ಇಂಥ ಕೃತಿಗಳನ್ನು ಬಿಟ್ಟು ಕೇವಲ ವಿಷಯ ನಿರೂಪಣೆಯೇ ಮುಖ್ಯವಾಗಿರುವ ಗ್ರಂಥಗಳನ್ನು ಗುರುತಿಸಿ ಹೆಸರಿಸಲಾಗಿದೆ.

---

೩೬. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ :** ಪುಟ. ೧೩

೩೭. ಆರ್‍ವ್ವೀಯಸ್ ಸುಂದರಂ ; **ಶಾಸ್ತ್ರ ಸಾಹಿತ್ಯ** : ಪುಟ.೦೫

೩೮. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೫

೧. ಜೈನ ಧಾರ್ಮಿಕ ಶಾಸ್ತ್ರ :

ಅನೇಕ ಸಂಸ್ಕೃತ, ಪ್ರಾಕೃತ ಗ್ರಂಥಗಳಿಗೆ ಜೈನವಿದ್ವಾಂಸರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. "ಗೃಧ್ರಪಿಂಛಾಚಾರ್ಯರ 'ತತ್ತ್ವಾರ್ಥಸೂತ್ರ'ಕ್ಕೆ ದಿವಾಕರಣಂದಿ (೧೦೬೨) ಕನ್ನಡದಲ್ಲಿ ವೃತ್ತಿಯನ್ನು ಬರೆದಿದ್ದಾರೆ. ಈ ಸಂಗತಿಯನ್ನೇ ಶಾಸನವೊಂದರಲ್ಲಿ 'ಜಡರುಂ ಬಾಳರುಂ ಬುಧ ಪ್ರಕರಮುಂ ತತ್ತ್ವಾರ್ಥಮಂ ಕಲ್ತಘಂ ಕಿಡೆ ಸಮ್ಯಕ್ತಮನೆಯ್ದಿ ಸಪ್ತ ಪರಮ ಸ್ಥಾನಾಪ್ತಿಯಂ ನಿಶ್ಚಯಂ ಪಡೆಯಲ್ ಮಾಡಿದರ್' ಎಂದು ಹೇಳಿದೆ."[೩೯] ಬಾಲಚಂದ್ರ (ಸು. ೧೧೭೦) ಉಮಾಸ್ವಾಮಿಯ 'ತತ್ತ್ವಾರ್ಥಸೂತ್ರ'ಕ್ಕೆ 'ತತ್ತ್ವರತ್ನಪ್ರದೀಪಿಕೆ' ಎಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. ಶುಭಚಂದ್ರ ರಚಿತ (ಸು. ೧೨೦೦) 'ಕಾರ್ತಿಕೇಯಾನುಪ್ರೇಕ್ಷೆ'ಗೂ, ಮಾಘಣಂದಿ (ಸು. ೧೨೫೩) 'ಪದಾರ್ಥಸಾರ' ಇತ್ಯಾದಿಗಳಿಗೂ, ಬಾಳಚಂದ್ರಪಂಡಿತ (೧೨೭೩) 'ದ್ರವ್ಯಸಂಗ್ರಹ ಸೂತ್ರ'ಕ್ಕೂ, ಪ್ರಭಾಚಂದ್ರ (ಸು. ೧೩೦೦) 'ಸಿದ್ಧಾಂತಸಾರ', 'ಚಾರಿತ್ರಸಾರ'ಗಳಿಗೂ, ಕನಕಚಂದ್ರರು (ಸು.೧೩೦೦) ಕೊಂಡ ಕುಂದಾಚಾರ್ಯರ 'ಮೋಕ್ಷಪ್ರಾಭೃತ'ಕ್ಕೂ, ಅಭಿನವಶ್ರುತಮುನಿಯು (ಸು.೧೩೬೫) ಮಲ್ಲಿಷೇಣನ 'ಸಜ್ಜನಚಿತ್ತವಲ್ಲಭ'ಕ್ಕೂ, ಕಮಲಪಂಡಿತನು ಸಮಂತಭದ್ರನ 'ರತ್ನಕರಂಡಕ'ಕ್ಕೂ ಟೀಕೆ ಬರೆದಿದ್ದಾರೆ. ಬಂಧುವರ್ಮನು 'ಜೀವಸಂಬೋಧನಂ', ವಿಜಯಣ್ಣ (೧೪೪೮)ಕವಿಯು 'ದ್ವಾದಶಾನುಪ್ರೇಕ್ಷೆ', ಆಚಣ್ಣಕವಿಯು (ಸು.೧೧೯೫) 'ಶ್ರೀಪದಾಶೀತಿ'ಯಲ್ಲಿ ಪಂಚಪದ ಮಹಿಮೆಯನ್ನು ಹೇಳಿದ್ದಾನೆ. ಚಂದ್ರಕೀರ್ತಿಯ (ಸು.೧೪೦೦) 'ಪರಮಾಗಮಸಾರ'ವು ಜೈನಧರ್ಮದ ಸಾರವನ್ನು ಕೊಡುತ್ತದೆ. "ಶಾಂತರಸನ (ಸು.೧೬೦೦) 'ಯೋಗರತ್ನಾಕರ'ದಲ್ಲಿ ಜೈನಮತಾನುಸಾರವಾಗಿ ಯಮ, ನಿಯಮ ಇತ್ಯಾದಿ ಎಂಟು ಅಂಗಗಳ ವಿವರಣೆಯಿದ್ದರೆ ಚಂದ್ರಮನ (ಸು.೧೬೫೦) 'ಲೋಕಸ್ವರೂಪ'ದಲ್ಲಿ ಮೂರು ಲೋಕಗಳ ಸ್ವರೂಪ ನಿರೂಪಿತವಾಗಿದೆ."[೪೦]

೨. ವೀರಶೈವ:

ಇಲ್ಲಿ ವೀರಶೈವದ ಕುರಿತಾಗಿ ಯಾವುದೇ ತಾತ್ತ್ವಿಕ ಭಿನ್ನಾಭಿಪ್ರಾಯಗಳನ್ನು ಚರ್ಚಿಸದೇ. ಏಕರೀತಿಯಲ್ಲಿ ಧಾರ್ಮಿಕ ವಿಚಾರಗಳನ್ನು ಅನುಲಕ್ಷಿಸಿ ಧಾರ್ಮಿಕ ಶಾಸ್ತ್ರಗ್ರಂಥಗಳನ್ನು ಹೆಸರಿಸಲಾಗಿದೆ. "ಹದಿನೈದನೆಯ ಶತಮಾನದಿಂದ ಈಚೆಗೆ ಬಂದ ವಚನಗಳ ವ್ಯಾಖ್ಯಾನ ನಡೆದದ್ದು ಮುಖ್ಯವಾಗಿ ಶಾಸ್ತ್ರದೃಷ್ಟಿಯಿಂದಲೇ ಎನ್ನಬಹುದು." [೪೧] ಅಂಥ ವ್ಯಾಖ್ಯಾನಗಳಲ್ಲಿ ಮಹಾಲಿಂಗದೇವ (ಸು.೧೪೨೫) ಬರೆದಿರುವ 'ಏಕೋತ್ತರಶತಸ್ಥಲ' ಮತ್ತು ಪ್ರಭುದೇವರ (ಸು.೧೪೩೦) 'ಲಿಂಗಲೀಲಾವಿಲಾಸ ಚಾರಿತ್ರ', ಜಕ್ಕಣಾರ್ಯನ (ಸು.೧೪೩೦) 'ಏಕೋತ್ತರಶತಸ್ಥಲ' ಇವನ್ನು ಹೆಸರಿಸಬಹುದು. ಅದೇ ಕಲ್ಲುಮಠದ ಪ್ರಭುದೇವರು ಅಲ್ಲಮನ 'ಮಂತ್ರಗೋಪ್ಯ'ಕ್ಕೂ,

---

೩೯. ಪ್ರೊ. ಅರವಿಂದ್ ಮಾಲಗತ್ತಿ (ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦**:ಪುಟ. ೩೯೫

೪೦. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೨೮೪

೪೧. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ.), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೫

ಎರಡನೆಯ ಚೆನ್ನಬಸವ (ಸು.೧೫೦೦) ಚೆನ್ನಬಸವಣ್ಣನ 'ಮಂತ್ರಗೋಪ್ಯ'ಕ್ಕೂ ಟೀಕೆ ಬರೆದಿದ್ದಾರೆ. ಗುಬ್ಬಿಯ ಮಲ್ಲಣ್ಣನು (ಸು.೧೪೭೫) ತನ್ನ 'ಗಣಭಾಷಿತ ರತ್ನಮಾಲೆ'ಯಲ್ಲಿ ನೂರೆಂದು ಸ್ಥಲಗಳ ವಿವರಣೆ ಕೊಟ್ಟಿರುವ ರೀತಿ ಹೀಗಿದೆ. ಒಂದೊಂದು ಸ್ಥಲದ ಆರಂಭದಲ್ಲೂ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಕೃತ ಆಗಮ, ಪುರಾಣಗಳಿಂದ ಶ್ಲೋಕಗಳನ್ನು ಕನ್ನಡಾನುವಾದ ಸಮೇತ ಉದಾಹರಿಸಿ, ಅದೇ ವಿಷಯವಿರುವ ವಚನಗಳನ್ನು ಅನಂತರ ಉದಾಹರಿಸುತ್ತಾನೆ. ಅನೇಕ ಶೈವಾಗಮಗಳಿಗೆ ಮತ್ತು ಇತರ ಗ್ರಂಥಗಳಿಗೆ ವೀರಶೈವ ವಿದ್ವಾಂಸರು ಬರೆದ ಟೀಕೆಗಳು ದೊರೆಯುತ್ತವೆ: ಗುಬ್ಬಿಯ ಮಲ್ಲಣ್ಣ (ಸು.೧೪೭೫) 'ವಾತುಲತಂತ್ರ'ಕ್ಕೆ ಟೀಕೆ ಬರೆದಿದ್ದರೆ, ಕಲ್ಯಾಣದ ಸ್ವಾಮಿ (ಸು.೧೫೦೦) 'ಕಾರಣಾಗಮ'ವನ್ನು ವಾರ್ಧಕದಲ್ಲಿ ಹೇಳಿದ್ದಾನೆ. ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಗ್ರಂಥಗಳ ಇತರ ಟೀಕುಗಳು ಹೀಗಿವೆ: ನೀಲಕಂಠ ಶಿವಾಚಾರ್ಯನ (ಸು.೧೪೦೦) 'ಬ್ರಹ್ಮಸೂತ್ರ ವ್ಯಾಖ್ಯಾನ'ರೂಪವಾದ 'ಕ್ರಿಯಾಸಾರ', ಸಾನಂದ ಶಿವಯೋಗಿಯ (ಸು.೧೪೮೦) 'ವೀರಶೈವ ಮಾಹೇಶ್ವರಾಚಾರ ಸಾರೋದ್ಧಾರ ಟೀಕೆ', ಗುರನಂಜನ 'ಭಟ್ಟಭಾಸ್ಕರಕೃತ ಯಜುರ್ವೇದಭಾಷ್ಯಕ್ಕೆ ಟೀಕೆ', ಉಜ್ಜಿನೀಶನ 'ವೀರಶೈವಸಿದ್ಧಾಂತ ಶಿಖಾಮಣಿ ಟೀಕೆ' ಇತ್ಯಾದಿ. ವೀರಶೈವ ಸಿದ್ಧಾಂತವನ್ನು ಪ್ರತಿಪಾದನೆ ಮಾಡುವ ಗ್ರಂಥದಲ್ಲಿ ಕೆಲವು ಹೀಗಿವೆ : ಕರಸ್ಥಲದ ನಾಗಿದೇವರ (ಸು.೧೪೩೦) 'ತಿವಿಧಿಗಳು', ಮಗ್ಗೆಯ ಮಾಯಿದೇವನ 'ಅನುಭವಸೂತ್ರ', ಗುರು ಬಸವನ ಸಪ್ತಕಾವ್ಯಗಳು,[೪೨] ನಿಜಗುಣ ಶಿವಯೋಗಿಯ 'ಪರಮಾನುಭವ ಬೋಧೆ', 'ಪರಮಾರ್ಥ ಪ್ರಕಾಶಿಕೆ', ಶಾಂತಮಲ್ಲನ (ಸು.೧೬೫೦) 'ಅನುಭಮುದ್ರೆ' ಇತ್ಯಾದಿ.[೪೩]

೩. ಅದ್ವೈತ:

"ಪರಂಜ್ಯೋತಿಯತಿಯ (ಸು.೧೪೫೦) 'ಅನುಭವಮುಕುರ', ರಂಗನಾಥನ (ಸು.೧೬೭೫) 'ಅನುಭವಾಮೃತ', ಚಿದಾನಂದನ (ಸು.೧೭೨೫) 'ಚಿತ್‌ಖಂಡಾನುಭವಸಾರ', ಚಿದಾನಂದಾವಧೂತನ (ಸು.೧೭೫೦) 'ಜ್ಞಾನಸಿಂಧು' ಇವು ಅದ್ವೈತ ವೇದಾಂತವನ್ನು ಪ್ರತಿಪಾದಿಸುತ್ತವೆ."[೪೪] ಇವುಗಳಲ್ಲಿ ರಂಗನಾಥ ಮತ್ತು ಚಿದಾನಂದಾವಧೂತರ ಗ್ರಂಥಗಳು ಬಹು ಜನಪ್ರಿಯತೆಯನ್ನು ಪಡೆದಿವೆ. "ರಾಮಬ್ರಹ್ಮಾನಂದರು (ಸು. ೧೭೦೦) ವಿದ್ಯಾರಣ್ಯರ 'ವಾಕ್ಯಸುಧೆ'ಗೂ, ಜಕ್ಕಣಾಮಾತ್ಯ (ಸು. ೧೭೫೦) ಶಂಕರರ 'ಸೌಂದರ್ಯ ಲಹರಿ'ಗೂ ಟೀಕುಗಳನ್ನು ಬರೆದಿದ್ದಾರೆ."[೪೫]

---

೪೨. ಶಿವಯೋಗಾಂಗಭೂಷಣ, ಸದ್ಗುರುರಹಸ್ಯ, ಕಲ್ಯಾಣೇಶ್ವರ, ಸ್ವರೂಪಮೃತ, ವೃಷಭಗೀತೆ, ಅವಧೂತಗೀತೆ, ಮನೋವಿಜಯ ಕಾವ್ಯ ಇವುಗಳು ಸಪ್ತಕಾವ್ಯಗಳು.

೪೩. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೫

೪೪. **ಅದೇ** : ಪುಟ ೩೬೫

೪೫. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೨೬೯

೪. ದ್ವೈತ:

"ಜಗನ್ನಾಥದಾಸರ (೧೭೭೫) 'ಹರಿಕಥಾಮೃತಸಾರ' ದ್ವೈತವೇದಾಂತ ಭೋಧಕವಾಗಿದೆ."[೪೬] ಕೆಲವು ಕಡೆ ಅನಿವಾರ್ಯವಾಗಿ ವಿಷಯನಿರೂಪಣೆ ಜಟಿಲವಾಗುವುದರಿಂದ ಅನೇಕರು ಇದಕ್ಕೆ ವ್ಯಾಖ್ಯಾನ ಬರೆದು ಅಭ್ಯಾಸಿಗಳಿಗೆ ಸಹಾಯಮಾಡಿದ್ದಾರೆ. "ಮಧ್ವಾಚಾರ್ಯರ 'ಮಹಾಭಾರತ ತಾತ್ಪರ್ಯ ನಿರ್ಣಯ'ಕ್ಕೆ ವಾದಿರಾಜರು (೧೪೮೦–೧೬೦೦) ಕನ್ನಡದಲ್ಲಿ ಟೀಕೆಯನ್ನು ಬರೆದಿದ್ದಾರೆ."[೪೭]

೫. ವಿಶಿಷ್ಟಾದ್ವೈತ:

ರಂಗರಾಜನ (ಸು. ೧೬೬೦) 'ತಾತ್ವಿಕ ಬ್ರಹ್ಮ ವಿದ್ಯಾವಿಲಾಸ' ವಿಶಿಷ್ಟಾದೈತ ಸಿದ್ಧಾಂತವನ್ನು ನಿರೂಪಿಸುತ್ತದೆ. ಅವನ ಮಗ ಚಿಕುಪಾಧ್ಯಾಯ ಅದನ್ನೇ ಚಂಪೂ ರೂಪಕ್ಕೆ ತಿರುಗಿಸಿದ್ದಾನೆ. ಅದೇ "ಚಿಕುಪಾಧ್ಯಾಯನ 'ಅರ್ಥಪಂಚಕ' ತಮಿಳಿನಿಂದ ಅನುವಾದಿತವಾದ ಗ್ರಂಥವಾಗಿದ್ದರೆ 'ತಿರುವಾಯ್ಮೊಳಿ ಟೀಕೆ ನಮ್ಮಾಳ್ವಾರರ' ತಮಿಳು ಪ್ರಬಂಧಕ್ಕೆ ವ್ಯಾಖ್ಯಾನವಾಗಿದೆ. ಇವರು ಚಿಕ್ಕ ದೇವರಾಜ ಒಡೆಯನ ಕಾಲದಲ್ಲಿದ್ದವರು ಚಿಕ್ಕದೇವರಾಜ ಒಡೆಯ ಶ್ರೀವೈಷ್ಣವ ಧರ್ಮಾನುಯಾಯಿಯಾಗಿದ್ದು ಆ ಧರ್ಮಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟುದು ಮಾತ್ರವಲ್ಲದೆ, ತಾನೇ ಸ್ವತಃ 'ಚಿಕ್ಕದೇವರಾಜಬಿನ್ನಪ'ದಲ್ಲಿ ವಿಶಿಷ್ಟಾದ್ವೈತಸಿದ್ಧಾಂತದ ಸಾರವನ್ನು ಸಂಗ್ರಹಿಸಿ ಕೊಟ್ಟ."[೪೮] ಶ್ರೀಶೈಲಾರ್ಯನ (ಸು. ೧೭೦೦) 'ತತ್ತ್ವ ತ್ರಯವಿವರಣ'ದಲ್ಲಿ ಚಿತ್ತು, ಅಚಿತ್ತು. ಈಶ್ವರ ಎಂಬ ಮೂರು ತತ್ತ್ವಗಳ ವಿವೇಚನೆಯಿದೆ.

೨.೩.೨. ಅಲಂಕಾರಶಾಸ್ತ್ರ:

ಶ್ರೀವಿಜಯಕೃತ 'ಕವಿರಾಜಮಾರ್ಗ' (ಸು.೮೫೦). ಇದು ಕನ್ನಡದ ಮೊದಲ ಉಪಲಬ್ಧ ಕೃತಿ. ಎರಡನೆಯ ನಾಗವರ್ಮನ 'ಕಾವ್ಯಾವಲೋಕನ' (ಸು.೧೦೪೨); ತಿರಮಲಾರ್ಯನ 'ಅಪ್ರತಿಮವೀರ ಚರಿತ'; ಜಾಯೇಂದ್ರಕವಿ (ಸು.೧೭೩೪) ಅಪ್ಪಯ್ಯ ದೀಕ್ಷಿತನ ಸಂಸ್ಕೃತ 'ಕುವಲಯಾನಂದ'ವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಈತನ ಇನ್ನೊಂದು ಕೃತಿ 'ರಸಮಂಜರಿ'ಯಲ್ಲಿ ನವರಸಲಂಕಾರಗಳನ್ನು ವಿವರಿಸಲಾಗಿದೆ. "ಅಳಿಯ ಲಿಂಗರಾಜನ (ಸು.೧೮೬೭) 'ನರಪತಿಚರಿತ'ದಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು ಹೇಳಲಾಗಿದೆ. ಚಾವಲಿ ರಾಮಸ್ವಾಮಿಶಾಸ್ತ್ರಿಗಳ 'ಕರ್ನಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ ಸಂಗ್ರಹ' ಇದು ಛಂದಸ್ಸು ಮತ್ತು ಅಲಂಕಾರಗಳು ಎರಡಕ್ಕೂ ಕೈಪಿಡಿಯಿದ್ದಂತಿದೆ."[೪೯] ಸು.೧೧೪೫ರಲ್ಲಿದ್ದ ನಾಗವರ್ಮ ಕನ್ನಡಕ್ಕೆ ಕೊಟ್ಟಿರುವ ಕೊಡುಗೆಗಳು ಅನೇಕ: ವ್ಯಾಕರಣ, ಅಲಂಕಾರಶಾಸ್ತ್ರ, ಕೋಶ, ಛಂದಸ್ಸು

೪೬. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೨೬೯
೪೭. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೫
೪೮. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ ೨೬೫
೪೯. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೬

ಇವುಗಳಿಗೆ ಸಂಬಂಧಿಸಿದ ಕೃತಿಗಳನ್ನು ಬರೆದಿರುವುದಲ್ಲದೆ ಇವನು ಕಾವ್ಯಗಳನ್ನೂ ಬರೆದಿದ್ದನೆಂದು ಊಹಿಸಲವಕಾಶವಿದೆ. "ಈತನ ಕನ್ನಡ 'ಕಾವ್ಯಾವಲೋಕನ'ದಲ್ಲಿ ಶಬ್ದಸ್ಮೃತಿ, ಕಾವ್ಯಮಲವ್ಯಾವೃತ್ತಿ, ಗುಣವಿವೇಕ, ರೀತಿಕ್ರಮರಸನಿರೂಪಣ, ಕವಿಸಮಯಗಳೆಂಬ ಐದು ಪರಿಚ್ಛೇದಗಳಿವೆ. ಇವನ ಸಮಕಾಲೀನನಾಗಿರಬಹುದಾದ ಉದಯಾದಿತ್ಯನ 'ಉದಯಾದಿತ್ಯಾಲಂಕಾರ' ೭೬ ಪದ್ಯಗಳ ಒಂದು ಚಿಕ್ಕ ಗ್ರಂಥ."[೫೦] ಕವಿಕಾಮನ (ಸು. ೧೨೦೦) 'ಶೃಂಗಾರರತ್ನಾಕರ' ರಸದ ವಿಷಯವನ್ನು ವಿಸ್ತಾರವಾಗಿ ಪ್ರತಿಪಾದನೆ ಮಾಡಿರುವ ಕೃತಿಗಳಲ್ಲಿ ಮೊದಲನೆಯದು. ಇದು ಮಾಧವನ 'ಮಾಧವಾಲಂಕಾರ' ಸಂಸ್ಕೃತ ಕಾವ್ಯಾದರ್ಶದ ಸರಳ ಅನುವಾದವಾಗಿದೆ.

ಆದರೆ ಮಾಧವನಿಗಿಂತ ಹೆಚ್ಚು ಗಣನೀಯ ವ್ಯಕ್ತಿ ಸು.೧೫೫೦ರಲ್ಲಿದ್ದ ಸಾಳ್ವ. ಅವನಿಗೆ ಆನಂದವರ್ಧನನ 'ಧ್ವನ್ಯಾಲೋಕ'ದ ಪರಿಚಯವಿದ್ದಿತಾದ್ದರಿಂದ ರಸ ಮತ್ತು ಧ್ವನಿಗಳನ್ನು ವಿಸ್ತಾರವಾಗಿ ಪ್ರತಿಪಾದಿಸಿದ ಕೀರ್ತಿ ಅವನಿಗೆ ಸಲ್ಲಬೇಕು. "ಅವನ 'ರಸರತ್ನಾಕರ'ದಲ್ಲಿ ರಸದ ಪ್ರತಿಪಾದನೆಯೂ ಬಹುಶಃ ಅವನದೇ ಆಗಿರಬಹುದಾದ 'ಶಾರದಾವಿಲಾಸ'ದಲ್ಲಿ ರಸದ ಮತ್ತು ಧ್ವನಿಯ ಪ್ರತಿಪಾದನೆಯೂ ಕಂಡುಬರುತ್ತದೆ."[೫೧] ಇದು ಧ್ವನಿಯ ಚರ್ಚೆಯಿರುವ ಮೊದಲ ಕನ್ನಡ ಅಲಂಕಾರಿಕ ಗ್ರಂಥ "ಚಿಕ್ಕದೇವರಾಜ ಒಡೆಯರ ಕಾಲದಲ್ಲಿದ್ದ ತಿರಮಲಾರ್ಯ ತನ್ನ 'ಅಪ್ರತಿಮ ವೀರಚರಿತ'ದಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರಗಳ ವಿವರಣೆಯನ್ನಿತ್ತಿದ್ದಾನೆ."[೫೨] ಅಪ್ಪಯ್ಯದೀಕ್ಷಿತನ ಸಂಸ್ಕೃತ 'ಕುವಲಯಾನಂದ'ವನ್ನು "೧೭೩೪ರಲ್ಲಿದ್ದ ಜಾಯೇಂದ್ರ ಕನ್ನಡಕ್ಕೆ ಅನುವಾದ ಮಾಡಿದ."[೫೩] ಅವನದೇ 'ರಸಮಂಜರಿ'ಯಲ್ಲಿ ನಾಯಕ, ನಾಯಿಕೆಯರ ಪ್ರಭೇದಗಳನ್ನು ವಿವರಿಸಲಾಗಿದೆ. "ಹತ್ತೊಂಬತ್ತನೆಯ ಶತಮಾನದ ಅಳಿಯ ಲಿಂಗರಾಜನ (ಕ್ರಿ.ಶ. ೧೮೬೭) 'ನರಪತಿಚರಿತ' ಶಬ್ದಾಲಂಕಾರ ಅರ್ಥಾಲಂಕಾರಗಳನ್ನು ಹೇಳುವಲ್ಲಿ ಸಂಸ್ಕೃತ ಕುವಲಯಾನಂದವನ್ನು ಅನುಸರಿಸಿದೆ. ಅದೇ ಶತಮಾನದ ಉತ್ತರಾರ್ಧದಲ್ಲಿದ್ದ ಚಾವಲಿ ರಾಮಸ್ವಾಮಿ ಶಾಸ್ತ್ರಿಗಳ 'ಕರ್ಣಾಟಕ ಛಂದೋಲಂಕಾರ ಸಾಹಿತ್ಯಲಕ್ಷಣಸಂಗ್ರಹ' ಛಂದಸ್ಸು ಮತ್ತು ಅಲಂಕಾರಶಾಸ್ತ್ರಗಳ ಕೈಪಿಡಿಯಾಗಿದೆ."[೫೪]

೨.೩.೩. ಛಂಧೋಗ್ರಂಥಗಳು:

ಉಪಲಬ್ಧ ಛಂದೋಗ್ರಂಥಗಳಲ್ಲಿ ಮೊದಲನೆಯ ನಾಗವರ್ಮನ (ಸು. ೯೯೦) 'ಛಂದೋಂಬುಧಿ'ಯೇ ಬಹು ಪ್ರಾಚೀನವಾದುದು. ಆದರೆ ಅದಕ್ಕಿಂತ ಹಿಂದೆ ಒಂಭತ್ತನೆಯ ಶತಮಾನದಲ್ಲಿ 'ಗುಣಾಗಾಂಕಿಯ' ಎಂಬ ಛಂದೋ ಗ್ರಂಥವಿದ್ದಿತೆಂದು ಊಹೆ

೫೦. ಸಂ: ಶಿ. ಚಿ. ನಂದೀಮಠ (ಸಂ) : **ಜಾಯಗೌಡ ವಿರಚಿತ ಕನ್ನಡ ಕುವಲಯಾನಂದ** : ಪುಟ. ೮೯

೫೧. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೬

೫೨. ಶಿ. ಚಿ. ನಂದೀಮಠ (ಸಂ) : **ಜಾಯಗೌಡ ವಿರಚಿತ ಕನ್ನಡ ಕುವಲಯಾನಂದ** : ಪುಟ. ೧೦೧

೫೩. **ಅದೇ** ಪುಟ. ೧೦೫

೫೪. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೬

ಮಾಡಬಹುದಾಗಿದೆ. ಆದರೆ ಆ ಗ್ರಂಥ ದೊರೆತಿಲ್ಲ. "ಸು.೮೫೦ರಲ್ಲಿ ರಚಿತವಾದ ಕವಿರಾಜಮಾರ್ಗದಲ್ಲಿ ಛಂದಸ್ಸಿಗೆ ಸಂಬಂಧಿಸಿದ ಅನೇಕ ಮುಖ್ಯ ಸಂಗತಿಗಳಿವೆ. ಆದರೂ ಒಂದನೆಯ ನಾಗವರ್ಮನ 'ಛಂದೋಂಬುಧಿ' ಕನ್ನಡದ ಏಕೈಕ ಅಧಿಕೃತ ಪ್ರಾಚೀನ ಛಂದೋಗ್ರಂಥ."[೫೫] ನಾಗವರ್ಮನಿಗೆ ಪಿಂಗಳನ ಛಂದಸ್ಸು ಆಧಾರಗ್ರಂಥ. ತನ್ನ ಕೃತಿಯಲ್ಲಿ ವರ್ಣವೃತ್ತ, ಮಾತ್ರಾವೃತ್ತ, ಅಂಶವೃತ್ತಗಳನ್ನು ಲಕ್ಷ್ಯ-ಲಕ್ಷಣ ಸಮೇತವಾಗಿ ವಿವರಿಸಿದ್ದಾನೆ. "ಸು. ೧೧೦೦ರಲ್ಲಿದ್ದ ಜಯಕೀರ್ತಿಯು ಸಂಸ್ಕೃತ ಲಾಕ್ಷಣಿಕನಾದರೂ ಆತನಿಗೆ ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನವಿದೆ. ಆತನ 'ಛಂದೋನುಶಾಸನ'ದ ಏಳನೆಯ ಅಧಿಕಾರದಲ್ಲಿ ಕನ್ನಡ ಅಕ್ಕರಿಕೆ, ಅಕ್ಕರ, ತ್ರಿಪದಿ ಮುಂತಾದ ಛಂಧೋಪ್ರಕಾರಗಳ ಕುರಿತು ಚರ್ಚಿಸಿದ್ದಾನೆ."[೫೬] ಮೂರನೆಯ ಸೋಮೇಶ್ವರನ 'ಮಾನಸೋಲ್ಲಾಸ' (ಇದು ವಿಶ್ವಕೋಶದಂಥ ಗ್ರಂಥ), ಶಾರ್ಙ್ಗದೇವನ 'ಸಂಗೀತರತ್ನಾಕರ'ಗಳು ಸಂಸ್ಕೃತದಲ್ಲಿದ್ದರೂ ಅವುಗಳಲ್ಲಿ ಕನ್ನಡ ಛಂದಸ್ಸಿಗೆ ಸಂಬಂಧಿಸಿದ ಅನೇಕ ಸಂಗತಿಗಳು ದೊರಕುತ್ತವೆ.

"ಸು. ೧೧೪೫ರಲ್ಲಿದ್ದ ಎರಡನೆಯ ನಾಗವರ್ಮನ 'ಛಂದೋವಿಚಿತಿ' ಎಂಬ ಗ್ರಂಥ ಉಪಲಬ್ದವಾಗಿಲ್ಲ."[೫೭] ಸು. ೧೫೦೦ರಲ್ಲಿದ್ದ ಈಶ್ವರ ಕವಿಯ 'ಕವಿಜಿಹ್ವಾಬಂಧನ'ದಲ್ಲಿ ಗಣಗಳು, ಅವುಗಳ ವರ್ಣ, ವಾಹನ, ಶತ್ರುತ್ವ ಮಿತ್ರತ್ವ ಇತ್ಯಾದಿ ವಿಷಯಗಳೂ ಪ್ರಾಸವಡಿಗಳ ವಿಷಯವೂ ಬಂದಿದೆ. "ಸು. ೧೬೫೦ರಲ್ಲಿದ್ದ ಗುಣಚಂದ್ರನ 'ಛಂದಾಸ್ಸಾರ' ಒಂದು ಪುಟ್ಟ ಗ್ರಂಥ. ಕಂದ, ಷಟ್ಪದಿ ಮುಂತಾದ ಮಾತ್ರಾ ವೃತ್ತಗಳನ್ನು, ಅಕ್ಷರವೃತ್ತಗಳನ್ನು, ಲಾವಣಿ, ಸೀಸ ಇತ್ಯಾದಿ ಪದ್ಯಗಳನ್ನು ವಿವರಿಸಿದೆ. ಶಾಲ್ಯದ ಕೃಷ್ಣರಾಜನಿಂದ (೧೭೪೮) ರಚಿತವಾದ 'ಪಟ್ಪ್ರತ್ಯಯ'ದಲ್ಲಿ ಪ್ರಸ್ತಾರ, ನಷ್ಟ, ಉದ್ದಿಷ್ಟ, ಏಕದ್ವ್ಯಾದಿಲಗಕ್ರಿಯ, ಸಂಖ್ಯಾನ, ಅಧ್ವಯೋಗ ಎಂಬ ಆರು ಪ್ರತ್ಯಯಗಳ ವಿವರಣೆಯಿದೆ."[೫೮] ಸಂಸ್ಕೃತದಲ್ಲಿ ಸುಪ್ರಸಿದ್ಧವಾದ 'ವೃತ್ತಾರತ್ನಾಕರ'ಕ್ಕೆ ಸು. ೧೭೭೫ರಲ್ಲಿ ಬರೆದ ಒಂದು ಟೀಕೆಯೂ ದೊರೆಯುತ್ತದೆ. ಅದರ ಕೃತಿಕಾರನ ಹೆಸರು ತಿಳಿದುಬಂದಿಲ್ಲ. "ಹತ್ತೊಂಬತ್ತನೆಯ ಶತಮಾನದ, ಬಹುಶಃ ಕೊಲ್ಲಿಪಾಕೆಯ ವೀರಭದ್ರಕವಿಯಿಂದ ರಚಿತವಾದ 'ನಂದಿಛಂದಸ್ಸು' ಎಂಬ ಪುಟ್ಟ ಕೃತಿಯೊಂದುಂಟು. ಇದರಲ್ಲಿ ಹೇಳಿಕೊಳ್ಳುವಂಥ ವಿಷಯವೇನೂ ಕಾಣಬರದು. ಗಂಗಾಧರ ಮಡಿವಾಳೇಶ್ವರರ (ಸು. ೧೮೭೦) 'ಕವಿತಾಪದ್ಧತಿ', ಧೋಂಡೋ ನರಸಿಂಹ ಮುಳಬಾಗಿಲು (ಸು. ೧೮೯೦) ಅವರ 'ಛಂದಸ್ಸಾರ' ಇತ್ಯಾದಿ ಕೃತಿಗಳು ಈಚಿನ ಛಂದೋಗ್ರಂಥಗಳು."[೫೯]

೫೫. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ-೧೦** : ಪುಟ.೩೯೫

೫೬. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೧೧೯

೫೭. **ಅದೇ** : ಪುಟ. ೧೨೨

೫೮. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ-೧೦** : ಪುಟ.೩೯೬

೫೯. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ-೧೦** : ಪುಟ. ೩೯೬

೨.೩.೪. ವ್ಯಾಕರಣ ಗ್ರಂಥಗಳು :

ಕವಿರಾಜಮಾರ್ಗದಲ್ಲಿ ಕನ್ನಡ ಭಾಷೆ, ಅದರ ಉಪಭಾಷೆಗಳು ಮತ್ತು ವ್ಯಾಕರಣಗಳಿಗೆ ಸಂಬಂಧಿಸಿದಂತೆ ಅನೇಕ ಸ್ವಾರಸ್ಯವಾದ ಸಂಗತಿಗಳಿದ್ದರೂ ಅದು ಮುಖ್ಯವಾಗಿ ಅಲಂಕಾರಶಾಸ್ತ್ರದ ಗ್ರಂಥವೇ ಆಗಿದೆ. ರನ್ನ (೯೯೩) ಮತ್ತು ನಯಸೇನರು (೧೧೧೨) ವ್ಯಾಕರಣಗಳನ್ನು ಬರೆದಿರುವರೆಂಬ ಊಹೆಯಿದ್ದರೂ ಅವರ ಕೃತಿಗಳು ನಮಗೆ ದೊರೆತಿಲ್ಲ. ಎರಡನೆಯ ನಾಗವರ್ಮ (ಸು. ೧೧೪೫) ನಮಗೆ ತಿಳಿದಮಟ್ಟಿಗೆ ಮೊಟ್ಟಮೊದಲ ವ್ಯಾಕರಣಕಾರ. ಅವನ ಕೃತಿಗಳು 'ಕಾವ್ಯಾವಲೋಕನ' ಮತ್ತು 'ಕರ್ಣಾಟಕ ಭಾಷಾಭೂಷಣ'. "'ಕಾವ್ಯಾವಲೋಕನ' ಪ್ರಧಾನವಾಗಿ ಅಲಂಕಾರಶಾಸ್ತ್ರ ಗ್ರಂಥವಾಗಿದ್ದರೂ ಮೊದಲನೆಯ ಅಧ್ಯಾಯವಾದ 'ಶಬ್ದಸ್ಮೃತಿ'ಯನ್ನು ವ್ಯಾಕರಣಕ್ಕೆ ಆತ ಮೀಸಲಾಗಿಟ್ಟಿದ್ದಾನೆ."[೬೦] ಅವನ 'ಭಾಷಾ ಭೂಷಣ' ಸಂಸ್ಕೃತ ಭಾಷೆಯಲ್ಲಿರುವ ಕನ್ನಡ ವ್ಯಾಕರಣ. "ಸೂತ್ರ, ವೃತ್ತಿಗಳು ಸಂಸ್ಕೃತದಲ್ಲಿ; ಆದರೆ ಲಕ್ಷ್ಯಗಳಾಗಿ ಪೂರ್ವಕವಿಗಳ ಕನ್ನಡ ಗ್ರಂಥಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾನೆ."[೬೧] ಸು. ೧೨೬೦ರಲ್ಲಿದ್ದ ಕೇಶಿರಾಜನ 'ಶಬ್ದಮಣಿದರ್ಪಣಂ' ಹಳಗನ್ನಡ ಶ್ರೇಷ್ಠ ವ್ಯಾಕರಣ ಗ್ರಂಥ. "ಕೇಶಿರಾಜ ಸ್ವತಃ ಕವಿಯಾಗಿದ್ದು, ಅನೇಕ ಕಾವ್ಯಗಳನ್ನು ರಚಿಸಿದಂತೆ ತಿಳಿದಿದ್ದರೂ ಅವು ಯಾವುವೂ ಉಪಲಬ್ಧವಾಗಿಲ್ಲ. ಸೂತ್ರಗಳು ಶಬ್ದಸ್ಮೃತಿಯಲ್ಲಿನಂತೆ ಕಂದಪದ್ಯರೂಪವಾಗಿವೆ. ಅವುಗಳಿಗೆ ಅವನೇ ಗದ್ಯದಲ್ಲಿ ವೃತ್ತಿಯನ್ನು ಕೊಟ್ಟು, ಬೇರೆ ಕಾವ್ಯಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಶಬ್ದಮಣಿದರ್ಪಣಕ್ಕೆ ನಿಟ್ಟೂರು ನಂಜಯ್ಯ (ಸು. ೧೭೨೫) ಎಂಬುವರು ಟೀಕೆಗಳನ್ನು ಬರೆದಿದ್ದಾರೆ."[೬೨]

೧೬೦೪ರಲ್ಲಿದ್ದ ಭಟ್ಟಾಕಳಂಕನ ಕರ್ಣಾಟಕ 'ಶಬ್ದಾನುಶಾಸನ' ಭಾಷಾಭೂಷಣದಂತೆಯೇ ಕನ್ನಡ ವ್ಯಾಕರಣವನ್ನು ಹೇಳುವ ಪ್ರೌಢ ಸಂಸ್ಕೃತ ಗ್ರಂಥ. "ಇವನು ಮಹಾವಿದ್ವಾಂಸನಾಗಿದ್ದು, ಪಾಣಿನಿಯ ಮಾರ್ಗದಲ್ಲಿ ನಡೆದಿದ್ದಾನೆ. ತನ್ನ ಕೃತಿಗೆ 'ಭಾಷಾಮಂಜರಿ' ಎಂಬ ವೃತ್ತಿಯನ್ನೂ 'ಮಂಜರೀ ಮಕರಂದ' ಎಂಬ ವ್ಯಾಖ್ಯಾನವನ್ನೂ ಸಂಸ್ಕೃತದಲ್ಲಿ ತಾನೇ ಬರೆದಿದ್ದಾನೆ. ಕನ್ನಡ ಅನೇಕ ಶಾಸ್ತ್ರಗ್ರಂಥಗಳಿಗೆ ಜನ್ಮವಿತ್ತಿರುವುದರಿಂದ ಮಹಾಜನಪರಿಗ್ರಾಹ್ಯವಾದುದೆಂದು ಘೋಷಿಸಿದ್ದಾನೆ."[೬೩] ಹತ್ತೊಂಬತ್ತನೆಯ ಶತಮಾನದಲ್ಲಿ ಅನೇಕ ಪಾದ್ರಿಗಳು, ಐರೋಪ್ಯ ಮತ್ತು ದೇಶೀಯ ವಿದ್ವಾಂಸರು ವ್ಯಾಕರಣಗಳನ್ನು ಬರೆದರು. "ರೆವರಂಡ್ ವಿಲಿಯಮ್ ಕ್ಯಾರಿಯವರ 'The Grammar of Karnataka Language' (ದಿ ಗ್ರಾಮರ್ ಆಫ್ ಕರ್ಣಾಟಕ ಲ್ಯಾಂಗ್ವೇಜ್) ೧೮೧೭ರಲ್ಲಿ, ಜಾನ್ ಮೆಕೆರಲ್ ಅವರ 'Karnataka Grammar' (ಕರ್ನಾಟಕ ಗ್ರಾಮರ್)

---

೬೦. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೭

೬೧. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೧೬೫

೬೨. **ಅದೇ** ; ಪುಟ. ೧೬೯

೬೩. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೭

೧೮೨೦ರಲ್ಲಿ, ರೆವರೆಂಡ್ ಝಿಗ್ಲರ್ ಅವರ 'A Practical key to Canarese Language' ೧೮೨೦ರಲ್ಲಿ ಮುದ್ರಣವಾದವು. ಥಾಮಸ್ ಹಡಸನ್ ಎವರಂಟಿ ಅವರ 'Elementary Grammar of the Karnataka' (1859), ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರ 'ಹೊಸಗನ್ನಡ ನುಡಿಗನ್ನಡಿ' ೧೮೩೮ರಲ್ಲಿ ಪ್ರಕಟವಾಯಿತು. ಇದಲ್ಲದೆ ಅವರು 'ಹಳಗನ್ನಡ ನುಡಿಗನ್ನಡಿ' ಎಂಬ ಗ್ರಂಥವನ್ನೂ ಬರೆದಂತೆ ತೋರುತ್ತದೆ. ಥಾಮಸ್ ಹಾಡ್ಸನ್ (೧೮೫೯) ಅವರ 'ವ್ಯಾಕರಣ', ಸಿ. ಕ್ಯಾಂಬೆಲ್ ಅವರ 'ಕನ್ನಡ ವ್ಯಾಕರಣ ಸಾರ', ಧೋಂಡೋ ಮುಳಬಾಗಿಲು ಅವರ 'ನುಡಿಗಟ್ಟು' (೧೮೯೨). ವೆಂಕಟರಂಗೋ ಕಟ್ಟಿಯವರ (೧೮೮೦) 'ಕನ್ನಡ ಲಘು ವ್ಯಾಕರಣ', ಆರ್. ರಘುನಾಥರಾಯರ 'ಕರ್ನಾಟಕ ಭಾಷಾವ್ಯಾಕರಣೋಪನ್ಯಾಸಮಂಜರಿ' (೧೮೯೪), ಬಿ. ಮಲ್ಲಪ್ಪನವರ 'ಶಬ್ದಾದರ್ಶ' (೧೯೦೧) ಇವು ಹೆಸರಿಸಬಹುದಾದ ಕನ್ನಡದ ಕೆಲವು ಪ್ರಮುಖ ವ್ಯಾಕರಣ ಗ್ರಂಥಗಳು."[೬೪]

೨.೩.೫. ನಿಘಂಟುಗಳು:

"ರನ್ನನ 'ರನ್ನಕಂದ' ಎಂಬುದು ಕನ್ನಡದಲ್ಲಿ ಈಗ ದೊರೆತಿರುವ ನಿಘಂಟುಗಳಲ್ಲಿ ಮೊದಲನೆಯದು. ಹಳಗನ್ನಡ ಶಬ್ದಗಳಿಗೆ ಅರ್ಥ ಹೇಳುವ ಈ ಕೃತಿಯ ಕೆಲವು ಕಂದಪದ್ಯಗಳು ಮಾತ್ರ ಸಿಕ್ಕಿವೆ."[೬೫] ಕನ್ನಡ ಶಬ್ದಗಳಿಗೆ ಅರ್ಥ ಕೊಡುವ ಇತರ ನಿಘಂಟುಗಳು ಹೀಗಿವೆ : "ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಕನ್ನಡ ಧಾತುಪಾಠ, ಪ್ರಯೋಗಸಾರ ಮತ್ತು ಅಟಕುಳ ಶಬ್ದಗಳು–ಎಂಬ ಭಾಗಗಳಲ್ಲಿ ಅನೇಕ ಅಪೂರ್ವ ಶಬ್ದಗಳಿಗೆ ಅರ್ಥ ಹೇಳಿದೆ."[೬೬] ಹಾಗೆಯೆ "ಸು. ೧೪೦೦ರಲ್ಲಿ ರಚಿತವಾದ ಗದ್ಯರೂಪದ 'ಕರ್ನಾಟಕ ಶಬ್ದಸಾರ'ದಲ್ಲಿ, ಸುಮಾರು ಅದೇ ಕಾಲದ ಕರ್ನಾಟಕ ನಿಘಂಟುವಿನ ಕಂದ, ವೃತ್ತಗಳಲ್ಲಿ ಅನೇಕ ಕನ್ನಡ ಪದಗಳಿಗೆ ಅರ್ಥ ಹೇಳಿದೆ. ಲಿಂಗಮಂತ್ರಿಯ (೧೫೩೦) 'ಕಬ್ಬಿಗರ ಕೈಪಿಡಿ', ಶೃಂಗಾರ ಕವಿಯ (ಸು. ೧೬೦೦) 'ಕರ್ಣಾಟಕ ಸಂಜೀವನ', ಸೂರ್ಯಕವಿಯ (೧೬೪೦) 'ಕವಿಕಂಠಹಾರ'. ಇವುಗಳಲ್ಲಿಯೂ ಕನ್ನಡ ಪದಗಳಿಗೆ ಅರ್ಥ ವಿವರಣೆ ನೀಡಲಾಗಿದೆ."[೬೭] ಸಂಸ್ಕೃತ ಪದಗಳಿಗೆ ಕನ್ನಡದಲ್ಲಿ ಅರ್ಥ ಹೇಳಿರುವ ಕೋಶಗಳು ಇಂತಿವೆ : ಎರಡನೆಯ ನಾಗವರ್ಮನ 'ಅಭಿದಾನ ವಸ್ತುಕೋಶ', ಎರಡನೆಯ ಮಂಗರಾಜನ (೧೩೯೮) 'ಅಭಿನವಾಭಿದಾನಂ', ಕರ್ತೃ ಗೊತ್ತಿಲ್ಲದ 'ಶಬ್ದರತ್ನಾಕರ' (ಸು. ೧೬೦೦), ಚೆನ್ನಕವಿಯ (ಸು. ೧೬೦೦) 'ನಾನಾರ್ಥಕಂದ', ದೇವೋತ್ತಮನ (ಸು. ೧೬೦೦) 'ನಾನಾರ್ಥರತ್ನಾಕರ', 'ಏಕಾಕ್ಷರ ನಿಘಂಟು' ಇತ್ಯಾದಿಗಳಲ್ಲಿ ಸಂಸ್ಕೃತ ಪದಗಳಿಗೆ ಅರ್ಥ ಹೇಳಿದೆ. ಅಮೃತನಂದಿಯ (ಸು.

---

೬೪. ಡಾ. ಚಿ. ಸಿ. ನಿಂಗಣ್ಣ : **ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ** : ಪುಟ. ೨೨೧

೬೫. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ** : ಪುಟ. ೧೮೭

೬೬. **ಅದೇ** ಪುಟ. ೧೮೯, ೧೯೦.

೬೭. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೭

೧೩೦೦) 'ಅಕಾರಾದಿ ವೈದ್ಯ ನಿಘಂಟು', ಕರ್ತೃ ಗೊತ್ತಿಲ್ಲದ 'ಧನ್ವಂತರೀಯ ನಿಘಂಟು' (ಸು. ೧೫೦೦), 'ಇಂದ್ರದೀಪಿಕಾ ನಿಘಂಟು', 'ಮದನಾರಿ ವೈದ್ಯ ನಿಘಂಟು'ಗಳಲ್ಲಿ ವೈದ್ಯಕ್ಕೆ ಸಂಬಂಧಿಸಿದ ಸಂಸ್ಕೃತ ಶಬ್ದಗಳಿಗೆ ಅರ್ಥ ದೊರೆಯುತ್ತದೆ.

ಸಂಸ್ಕೃತ ನಿಘಂಟುಗಳಿಗೆ ಕನ್ನಡ ವ್ಯಾಖ್ಯಾನಗಳು ದೊರೆಯುತ್ತವೆಯೆಂಬುದು ಗಮನಾರ್ಹವಾದ ಅಂಶ. ಭಟ್ಟ ಹಲಾಯುಧನ ಸಂಸ್ಕೃತ 'ಅಭಿಧಾನರತ್ನಮಾಲಾ' ಗ್ರಂಥಕ್ಕೆ ಕರ್ಣಾಟಕ ಟೀಕೆಯೊಂದಿದೆ. ಸಂಸ್ಕೃತದ ಸುಪ್ರಸಿದ್ಧ 'ಅಮರಕೋಶ'ಕ್ಕೆ ನಾಚಿರಾಜ (ಸು. ೧೩೦೦) 'ನಾಚಿರಾಜೀಯ'ವೆಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಅಮರಕೋಶಕ್ಕೆ ಇನ್ನೂ ಹಲವಾರು ಟೀಕೆಗಳಿವೆ. ಸಂಸ್ಕೃತದ 'ಧನಂಜಯ ನಿಘಂಟಿ'ಗೂ ವ್ಯಾಖ್ಯಾನವೊಂದು ದೊರಕುತ್ತದೆ. ಚೆನ್ನವೀರ ಕವಿಯ (ಸು. ೧೫೦೦) 'ಕಾಶಕೃತ್ಸ್ನ ಧಾತುವ್ಯಾಖ್ಯಾನ'ದಲ್ಲಿ ಸಂಸ್ಕೃತ ಧಾತುಗಳಿಗೆ ಕನ್ನಡದ ಅರ್ಥ ಹೇಳಿದೆ. ಚತುರಾಸ್ಯ ಬೊಮ್ಮರಸನ (೧೪೫೦) 'ಚತುರಾಸ್ಯ ನಿಘಂಟು', ವಿರಕ್ತ ತೋಂಟದಾರ್ಯನ (ಸು. ೧೫೬೦) 'ಕರ್ಣಾಟಕ ಶಬ್ದಮಂಜರಿ'ಗಳಲ್ಲಿ ದೇಶ್ಯ, ತತ್ಸಮ, ತದ್ಭವ ಶಬ್ದಗಳಿಗೆ ಅರ್ಥ ಹೇಳಿದೆ. 'ಕರ್ಣಾಟಕ ಶಬ್ದಮಂಜರಿ' ಬಹಳವಾಗಿ ಬಳಕೆಯಲ್ಲಿದ್ದ ಕೃತಿಯಾಗಿದ್ದು ಅದಕ್ಕೆ ನಾಲ್ಕು ಬೇರೆ ಬೇರೆ ಟೀಕೆಗಳು ದೊರೆಯುತ್ತವೆ.

'ಪದ್ಯ ನಾನಾರ್ಥ', 'ನಾನಾರ್ಥಕಂದ', 'ನಾನಾರ್ಥರತ್ನಾಕರ'ಗಳಲ್ಲಿ ಸಂಸ್ಕೃತ, ಕನ್ನಡ ಪದಗಳಿಗೆ ನಾನಾರ್ಥಗಳು ದೊರೆಯುತ್ತವೆ.[೬೮] ಮುಮ್ಮಡಿ ಕೃಷ್ಣರಾಜ ಒಡೆಯರ (೧೮೪೮) 'ಚಾಮುಂಡಿಕಾ ಲಘುನಿಘಂಟಿ'ನಲ್ಲಿ ದೇವತೆಗಳು ಮೊದಲಾದವರು ಹಿಡಿಯುವ ಆಯುಧಗಳು, ಹಸ್ತವಿಶೇಷಗಳು ಇತ್ಯಾದಿಗಳನ್ನು ಹೇಳುವ ಸಂಸ್ಕೃತ ಪದಗಳಿಗೆ ಆರ್ಥವನ್ನು ಕೊಟ್ಟಿದೆ. "ಕುಮಾರವ್ಯಾಸನೇ ಬರೆದಿರುವನೆಂಬ ಪ್ರತೀತಿ ಇರುವ 'ಭಾರತ ನಿಘಂಟಿ'ನಲ್ಲಿ ಕುಮಾರವ್ಯಾಸಭಾರತದ ಕೆಲವು ದೇಶ್ಯ ಪದಗಳಿಗೆ ಅರ್ಥ ಹೇಳುವ ೬೭ ಕಂದ ಪದ್ಯಗಳಿವೆ."[೬೯] ಹತ್ತೊಂಬತ್ತನೆಯ ಶತಮಾನದಿಂದ ಈಚೆಗೆ ಅನೇಕ ಪಾದ್ರಿಗಳು, ದೇಶೀಯ ವಿದ್ವಾಂಸರು ನಿಘಂಟುಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮುಖ್ಯವಾದುವು ಇವು : "ರೆ ರೀವ್ ಅವರ 'ಕನ್ನಡ–ಇಂಗ್ಲಿಷ್ ನಿಘಂಟು' (೧೮೩೨). ಡೇನಿಯಲ್ ಸ್ಯಾಂಡರ್‌ಸನ್ ಅವರ 'ನಿಘಂಟು' (೧೮೫೮) ರೀವ್ ಅವರ ಕೋಶದ ಪರಿಷ್ಕಾರವಾಗಿದೆ. ರೆ. ಎಫ್. ಕಿಟ್ಟೆಲ್ ಅವರ 'ಕನ್ನಡ–ಇಂಗ್ಲಿಷ್ ನಿಘಂಟು' (೧೮೯೩) ಅಂಥ ಕೃತಿಗಳಲ್ಲಿ ಸಧ್ಯಕ್ಕೆ ಅತ್ಯಂತ ಶ್ರೇಷ್ಠವಾದುದು. ಕನ್ನಡದ ಪ್ರೌಢ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಇದು ಮಾರ್ಗದರ್ಶಿಯಾಗಿ ಇಂದಿಗೂ ಉಳಿದಿದೆ. ಕನ್ನಡ ಪದಗಳಿಗೆ ಸಂವಾದಿಯಾದ ಇತರ ಮುಖ್ಯ ದ್ರಾವಿಡ ಭಾಷೆಯ ಪದಗಳನ್ನು ಕೊಟ್ಟಿರುವುದಲ್ಲದೆ ಸಂಸ್ಕೃತ ಮತ್ತು ತದ್ಭವಗಳಿಗೂ ಅರ್ಥವನ್ನು ಕೊಟ್ಟಿದೆ. ಇಲ್ಲಿ ಸಾಧ್ಯವಾದಷ್ಟು ಕಡೆ ಪ್ರಯೋಗಗಳನ್ನು

---

೬೮. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೭
೬೯. **ಅದೇ** : ಪುಟ. ೩೯೭

ಸೂಚಿಸಿದೆ."[೨೦] ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ದೇಶಿಯ ವಿದ್ವಾಂಸರು ಬರೆದ ಕೋಶಗಳು ಹೀಗಿವೆ : "ಗುರುರಾವ ವಿಠಲ ಮೋಹರೆ ಅವರ 'ಶಬ್ದಸಂಗ್ರಹ' (೧೮೭೪), ರಾಮಸ್ವಾಮಿ ಶಾಸ್ತ್ರಿ ಮತ್ತು ಹೆಸರುಘಟ್ಟದ ಹೊನ್ನಪ್ಪನವರ 'ಕರ್ಣಾಟಕ ಕಲ್ಪದ್ರುಮ' (೧೮೮೫), ಗಂಗಾಧರ ಮಡಿವಾಳೇಶ್ವರ ತುರುಮುರಿ ಅವರ 'ಶಬ್ದಮಂಜರಿ' (೧೮೯೦), ನರಸಿಂಗರಾಯರ 'ಕಿಸಂವಾರ್ ಗ್ಲಾಸರಿ' (೧೮೯೧), ಜಯರಾಯಾಚಾರ್ಯರ 'ಕರ್ಣಾಟಕ ಭಾಷಾಕರ' (೧೮೯೧)."[೨೧]

೨.೩.೬. ವೈದ್ಯಶಾಸ್ತ್ರ:

ಕನ್ನಡ ವೈದ್ಯ ಗ್ರಂಥಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದೆಂದರೆ ಚಾಳುಕ್ಯ ರಾಜಕುಮಾರ ಕೀರ್ತಿವರ್ಮನ (ಸು. ೧೧೦೦) 'ಗೋವೈದ್ಯ'. ಇದರಲ್ಲಿ ಗೋಗಳ ವ್ಯಾಧಿಗಳಿಗೆ ಔಷಧ, ಯಂತ್ರ ಕಟ್ಟುವುದು, ಬರೆ ಹಾಕುವುದು ಇತ್ಯಾದಿ ವಿಷಯಗಳನ್ನು ಹೇಳಿದೆ. ಜಗದ್ದಳ ಸೋಮನಾಥನ (ಸು. ೧೧೭೫) 'ಕರ್ಣಾಟಕ ಕಲ್ಯಾಣಕಾರಕ'ವು ೬ನೆಯ ಶತಮಾನದಲ್ಲಿದ್ದ ಪೂಜ್ಯಪಾದರ ಸಂಸ್ಕೃತ 'ಕಲ್ಯಾಣಕಾರಕ'[೨೨]ದ ಭಾಷಾಂತರ.[೨೩] "ಈ ಕೃತಿಯಲ್ಲಿ ಚಿಕಿತ್ಸೆಗಾಗಿ ಮದ್ಯ. ಮಾಂಸ, ಮಧುಗಳನ್ನು ನಿಷೇಧಿಸಿದೆಯಾದ್ದರಿಂದ ಅದು ಬಾಹಟ, ಸಿದ್ಧಸಾರ, ಚರಕರ ವೈದ್ಯಗ್ರಂಥಗಳಿಗಿಂತ ಶ್ರೇಷ್ಠವೆಂದು ಸೋಮನಾಥ ಸಾರಿದ್ದಾನೆ."[೨೪] "ಹದಿನಾರು ರೀತಿಯ ಜ್ವರಗಳಿಗೆ ನಿದಾನ ಚಿಕಿತ್ಸೆಗಳು ಇಲ್ಲಿ ಸೂಚಿತವಾಗಿವೆ. ಸು. ೧೨೦೦ರಲ್ಲಿದ್ದ ದೇವೇಂದ್ರಮುನಿ 'ಬಾಲಗ್ರಹ ಚಿಕಿತ್ಸೆ'ಯನ್ನು ಬರೆದಿದ್ದಾನೆ."[೨೫] ಸು. ೧೩೬೦ರಲ್ಲಿದ್ದ ಒಂದನೆಯ ಮಂಗರಾಜನ 'ಖಗೇಂದ್ರಮಣಿ ದರ್ಪಣ' ಸುಪ್ರಸಿದ್ಧ ವಿಷವೈದ್ಯ ಗ್ರಂಥ. ಮಂಗರಾಜ ಕವಿಯು "ಮರ, ಗಾಳಿ, ಸೂಳೆ, ಬೇಟೆ ಮುಂತಾದವನ್ನು ಹೊಗಳಿ ಕಾವ್ಯವನ್ನು ಬರೆಯುವುದಕ್ಕಿಂತ ಸರ್ವಜನೋಪಕಾರವಾದ ವೈದ್ಯಶಾಸ್ತ್ರವನ್ನು ಹೇಳುವುದರಿಂದ ಜನತೆಗೆ ಹೆಚ್ಚು ಉಪಕಾರವಾಗುತ್ತದೆ"[೨೬] ಎಂದಿದ್ದಾನೆ. ನರರಿಗೆ ಔಷಧದಿಂದ ಆರೋಗ್ಯ, ಆರೋಗ್ಯದಿಂದ ದೇಹ, ದೇಹದಿಂದ ಜ್ಞಾನ, ಪರಮಜ್ಞಾನದಿಂದ ಮೋಕ್ಷ ಎಂದು ಹೇಳಿ, ವೈದ್ಯಶಾಸ್ತ್ರದ ಪರಮಪ್ರಯೋಜನ ಮೋಕ್ಷವೇ ಎಂದು ಘೋಷಿಸಿದ್ದಾನೆ. "ಅವನ ಗ್ರಂಥಕ್ಕೆ ಮೂಲ ಪೂಜ್ಯಪಾದನ ವೈದ್ಯಗ್ರಂಥದ ಸ್ಥಾವರ ವಿಷಪ್ರಕ್ರಿಯೆ. ವಿಷವೈದ್ಯದಲ್ಲಿ 'ಖಗೇಂದ್ರ ಮಣಿದರ್ಪಣ'ಕ್ಕೆ ಸಾಟಿಯಾದ ಗ್ರಂಥ ಮತ್ತೊಂದಿಲ್ಲ."[೨೭] ಕನ್ನಡದ ಇತರ ವೈದ್ಯಗ್ರಂಥಗಳು ಹೀಗಿವೆ : "ಶ್ರೀಧರದೇವನ (ಸು. ೧೫೦೦) 'ವೈದ್ಯಾಮೃತ', ಸಾಳ್ವಕವಿಯ (ಸು.೧೫೫೦) 'ವೈದ್ಯಸಾಂಗತ್ಯ'.

---

೨೦. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : : ಪುಟ. ૩೯೭

೨೧. **ಅದೇ** : ಪುಟ.૩೯೭

೨೨. ಸಂ: ಬಿ. ಎಸ್. ಸಣ್ಣಯ್ಯ : **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** : (ಪೀಠಿಕೆ) ಪುಟ. iv.

೨೩. ಡಾ. ಧನ್ಯಕುಮಾರ ಇಜಾರಿ : **ಜೈನ ಲೌಕಿಕ ಸಾಹಿತ್ಯ ಸಂಪದ** : ಪುಟ. ೧೭

೨೪. ಆರ್. ನರಸಿಂಹಾಚಾರ್ : **ಕವಿಚರಿತೆ ಸಂಪುಟ. ೦೧** : ಪುಟ. ೩೦೫

೨೫. ಡಾ. ಧನ್ಯಕುಮಾರ ಇಜಾರಿ : **ಜೈನ ಲೌಕಿಕ ಸಾಹಿತ್ಯ ಸಂಪದ** : ಪುಟ. ೧೮

೨೬. **ಅದೇ** : ಪುಟ. ೧೮

೨೭. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.૩೯೭

ಚೆನ್ನರಾಜನ (ಸು. ೧೫೭೦) 'ವೈದ್ಯಸಾರಸಂಗ್ರಹ', ನಂಜನಾಥ ಭೂಪಾಲನ (ಸು. ೧೭೦೦) 'ವೈದ್ಯಸಾರಸಂಗ್ರಹ'. ವೀರರಾಜ ಕವಿಯ (ಸು. ೧೭೦೦) 'ವೈದ್ಯಸಂಹಿತಾಸಾರಾರ್ಣವ'. ಇದರಲ್ಲಿ 'ಧನ್ವಂತರಿ' ಮೊದಲಾದವರ ಗ್ರಂಥಗಳನ್ನು ಕ್ರೋಢೀಕರಿಸಿ, ಪರಿಷ್ಕರಿಸಿ, ಅವುಗಳ ಸಾರಾಂಶವನ್ನು ಕೊಟ್ಟಿರುವುದಾಗಿ ತಿಳಿಸಿದ್ದಾನೆ. ಬ್ರಹ್ಮನ (ಸು. ೧೭೫೦) 'ವೈದ್ಯಕಂದ', ತಿಮ್ಮರಾಜಗೌಡನ (ಸು. ೧೭೫೦) 'ಸ್ತ್ರೀವೈದ್ಯ' ಇತರ ಉಲ್ಲೇಖನೀಯ ವೈದ್ಯಗ್ರಂಥಗಳು."[೭೮]

೨.೩.೭. ಪಶುವೈದ್ಯಶಾಸ್ತ್ರ :

ಅಶ್ವಶಾಸ್ತ್ರವನ್ನು ಬರೆದ ಮೊದಲ ಕನ್ನಡ ಕೃತಿಕಾರನೆಂದರೆ ಸು. ೧೪೦೦ರಲ್ಲಿದ್ದ ಅಭಿನವಚಂದ್ರ. ಸಿಂಹದತ್ತ, ದಿನಕರತನಯ, ರೇವಂತ ಮುಂತಾದ ಪೂರ್ವಾಚಾರ್ಯರ ಮತಗಳನ್ನು ಹೊಸಗನ್ನಡದಲ್ಲಿ ಹೇಳಿರುವುದಾಗಿ ಹೇಳಿಕೊಂಡಿದ್ದಾನೆ. "ಬಹುತೇಕ ಕಂದಪದ್ಯಗಳಿರುವ ಈ ಕೃತಿಯಲ್ಲಿ ಕುದುರೆಗಳ ಸರ್ವಾಂಗಪರೀಕ್ಷೆ, ವರ್ಣ, ಸುಳಿ, ಹಲ್ಲಿನಿಂದ ವಯಸ್ಸನ್ನು ನಿರ್ಣಯಿಸುವುದು, ಚಿಕಿತ್ಸೆ ಇತ್ಯಾದಿ ವಿಷಯಗಳಿವೆ. ತನ್ನ ನಿಜಕವಿತೆಯ ಬಿನ್ನಣವನ್ನು ತಿಳಿಸಲೆಂದು ಇದನ್ನು ಪದ್ಯರೂಪವಾಗಿ ಬರೆದಿರುವುದಾಗಿ ಕವಿ ಹೇಳಿಕೊಂಡಿದ್ದಾನೆ." [೭೯] ಸು. ೧೫೦೦ ರಲ್ಲಿದ್ದ ಬಾಚರಸ ಎಂಬಾತ ಅಶ್ವವೈದ್ಯವನ್ನು ಬರೆದಿದ್ದಾನೆ. ಸು. ೧೬೨೫ರಲ್ಲಿದ್ದ ರಾಮಚಂದ್ರ ಎಂಬಾತ ಶಾಲಿಹೋತ್ರನ ಅಶ್ವಶಾಸ್ತ್ರವನ್ನು ಗದ್ಯರೂಪದಲ್ಲಿ ಕನ್ನಡಕ್ಕೆ ಭಾಷಾಂತರ ಮಾಡಿದ್ದಾನೆ. "೧೬೨೭ರಲ್ಲಿದ್ದ ಪದ್ಮಣಪಂಡಿತ ಹಯಸಾರ ಸಮುಚ್ಚಯವೆಂಬ ಗ್ರಂಥವನ್ನು ೧೬೧೭–೩೭ರಲ್ಲಿ ಆಳಿದ ಚಾಮರಾಜ ದೊರೆಗಳ ಆಜ್ಞಾನುಸಾರವಾಗಿ ಬರೆದ. ಗಜಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಗಂಗರ ದೊರೆ ಸೈಗೊಟ್ಟ ಶಿವಮಾರನ (ಸು. ೮೦೦) ಗಜಾಷ್ಟಕ ಪ್ರಾಚೀನವಾದುದು." [೮೦] ನಗರದ ೩೫ನೆಯ ಶಾಸನದಲ್ಲಿ ಶಿವಮಾರ, ಶಿವಮಾರಮತವೆಂಬ ಗಜಶಾಸ್ತ್ರವನ್ನು ಮಾಡಿದನೆಂದೂ ಆ ಗಜಾಷ್ಟಕ ಲೋಕದಲ್ಲಿ ಓವನಿಗೆಯೂ ಒನಕೆವಾಡೂ ಆಗುವಷ್ಟು ಜನಪ್ರಿಯವಾಯಿತೆಂದೂ ಹೇಳಲಾಗಿದೆ. "ಆದರೆ ಗಜಾಷ್ಟಕ ಉಪಲಬ್ಧವಾಗಿಲ್ಲ. ಸು. ೧೬೦೦ರಲ್ಲಿದ್ದ ವೀರಭದ್ರರಾಜನೆಂಬಾತ ಪಾಲಕಾಪ್ಯನ ಹಸ್ತ್ಯಾಯುರ್ವೇದಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದಾನೆ."[೮೧]

೨.೩.೮. ಜ್ಯೋತಿಷ್ಯಶಾಸ್ತ್ರ:

"ಶ್ರೀಧರಾಚಾರ್ಯನ (೧೦೪೯) 'ಜಾತಕತಿಲಕ' ಕನ್ನಡದ ಮೊತ್ತಮೊದಲ ಜ್ಯೋತಿಷ್ಯಗ್ರಂಥ. ಕವಿಯೂ ಆಗಿದ್ದ ಈತ ತನ್ನ 'ಚಂದ್ರಪ್ರಭಚರಿತೆ'ಯಲ್ಲಿ ಕಾವ್ಯಧರ್ಮವನ್ನೂ 'ಜಾತಕತಿಲಕ'ದಲ್ಲಿ

---

೭೮. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦:** ಪುಟ. ೩೯೮

೭೯. ಜಿ. ಜಿ. ಮಂಜುನಾಥನ್ (ಸಂ) : **ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ :** ಪುಟ. v (ಪೀಠಿಕೆ)

೮೦. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರಸಾಹಿತ್ಯ :** ಪುಟ. ೨೭೫

೮೧. **ಅದೇ** : ಪುಟ. ೧೯೭.

ಗಣಿತಧರ್ಮವನ್ನೂ ತಿಳಿಯಬಹುದೆಂದು ಹೇಳುತ್ತಾನೆ."[೮೨] ಜ್ಯೋತಿಶ್ಯಾಸ್ತ್ರದ ಮೂರು ಸ್ಕಂದಗಳು: ಗಣಿತ, ಹೋರಾ ಮತ್ತು ಸಂಹಿತೆ. ಸೂರ್ಯ ಚಂದ್ರರು ಎಲ್ಲಿದ್ದಾರೆ, ಗ್ರಹಣಗಳು, ವರ್ಷಮಾಸಾದಿಗಳನ್ನು ಲೆಕ್ಕಮಾಡಿ ಹೇಳುವುದು 'ಗಣಿತ'. ವಿದ್ಯುಕ್ತ ಕರ್ಮಗಳನ್ನು ಮಾಡಲು ಮುಹೂರ್ತ, ವ್ಯಕ್ತಿಯ ಜೀವನದ ಮುಂದಿನ ಘಟನೆಗಳನ್ನು ಹೇಳುವ ಫಲಭಾಗಗಳನ್ನು ತಿಳಿಸುವುದು 'ಹೋರಾ'. "ಗ್ರಹಗಳ ಸನ್ನಿವೇಶ ಮತ್ತು ಉತ್ಪಾತಗಳಿಂದ ದೇಶಕ್ಕೆ ಒಟ್ಟಾಗಿ ಸಂಭವಿಸುವ ಫಲಾಫಲಗಳನ್ನು ಹೇಳುವುದು 'ಸಂಹಿತೆ'. ಇವು ಮೂರೂ ಇಲ್ಲಿ ವರ್ಣಿತವಾಗಿವೆ. ವರಾಹ ಮಿಹಿರನ 'ಬೃಹಜ್ಜಾತಕ' ಮತ್ತು 'ಲಘುಜಾತಕ'ಗಳು, ಕಲ್ಯಾಣವರ್ಮನ 'ಸಾರಾವಳಿ' ಇತ್ಯಾದಿಗಳಿಂದ ವಿಷಯ ಸಂಗ್ರಹ ಮಾಡಿದ್ದಾನೆ."[೮೩] "ಗಂಗಾಧರನ (ಸು. ೧೫೫೦) 'ರಟ್ಟನ ಜಾತಕ'ದಲ್ಲಿ ಪ್ರಶ್ನೆಭಾಗ, ಗ್ರಹಗಳಿಗೆ ಷಡ್ಬಲ, ಆಯುರ್ದಾಯ ಇತ್ಯಾದಿ ವಿಷಯಗಳಿವೆ."[೮೪] ಅನೇಕ ಶಕುನಗ್ರಂಥಗಳು ಕೂಡ ಕನ್ನಡದಲ್ಲಿ ಹುಟ್ಟಿವೆ. "ಸು. ೧೫೦೦ರಲ್ಲಿದ್ದ ಶುಭಚಂದ್ರನ 'ನರಪಿಂಗಳಿ', ಲಕ್ಷ್ಮಣಾಂಕನ 'ಶಕುನಸಾರ', ಚಾಕರಾಜನ 'ಶಕುನಪ್ರಪಂಚ', ಸು. ೧೬೫೦ ರಲ್ಲಿದ್ದ ಮಾಧವದೇವನ 'ನರಪಿಂಗಲಿ', ದೇವನ (೧೭೨೫) 'ಶಕುನಪ್ರಪಂಚ' ಇವುಗಳು ಶಕುನಗ್ರಂಥಗಳು."[೮೫]

೨.೩.೯. ಗಣಿತಶಾಸ್ತ್ರ :

"ಗಣಿತಶಾಸ್ತ್ರಕ್ಕೆ ಸಂಬಂಧಿಸಿದಂತೆ ರಾಜಾದಿತ್ಯ ಎಂಬಾತ (ಸು. ೧೧೯೦) ಒಟ್ಟು ಆರುಗ್ರಂಥಗಳನ್ನು ಬರೆದಿದ್ದಾನೆ. 'ವ್ಯವಹಾರಗಣಿತ', 'ಕ್ಷೇತ್ರಗಣಿತ', 'ವ್ಯವಹಾರರತ್ನ', 'ಲೀಲಾವತಿ', 'ಚಿತ್ರಹಸುಗೆ', ಮತ್ತು 'ಜೈನಗಣಿತಸೂತ್ರ ಟೀಕೋದಾಹರಣ'."[೮೬] ಇವನಿಗೆ 'ಗಣಿತವಿರಿಂಚಿ', 'ಓಜೆವೆಡಂಗ', 'ಪದ್ಯವಿದ್ಯಾಧರ' ಮುಂತಾದ ಬಿರುದುಗಳಿದ್ದವು. ವ್ಯವಹಾರಗಣಿತದಲ್ಲಿ ಈತ ಸೂತ್ರಗಳನ್ನು ಪದ್ಯದಲ್ಲಿ ಬರೆದು ಟೀಕೆಯನ್ನೂ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. "ಈ ಗ್ರಂಥವನ್ನು ಜನೋಪಕಾರಕ್ಕಾಗಿ, ಅವರ ವ್ಯವಹಾರಕ್ಕೆ ಆಧಾರವಾಗಲಿ ಎಂಬ ಆಸೆಯಿಂದ ಐದು ದಿನಗಳಲ್ಲಿ ಬರೆದನಂತೆ ತನ್ನ ಗ್ರಂಥದಲ್ಲಿ ಸಹಜತ್ರಯರಾಶಿ, ವ್ಯಸ್ತತ್ರಯರಾಶಿ, ಸಹಜಪಂಚರಾಶಿ ಮುಂತಾದ ವಿಷಯಗಳನ್ನು ಪ್ರತಿಪಾದನೆ ಮಾಡಿದ್ದಾನೆ. ಆ ಕಾಲದ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ತನ್ನ ಗ್ರಂಥದಲ್ಲಿ ಈತ ತಿಳಿಸಿದ್ದಾನೆ."[೮೭] ಸು. ೧೬೫೦ರಲ್ಲಿದ್ದ ಭಾಸ್ಕರ ಕವಿಯು 'ಬೇಹಾರಗಣಿತ'ವನ್ನು ತನಗೆ ಪರಿಣಿತಿ ಲೆಕ್ಕದಲ್ಲಿ ಮಾತ್ರವಲ್ಲ, ಕವಿತಾಶಕ್ತಿಯಲ್ಲೂ ಇದೆಯೆಂದು ತೋರಿಸಲು ಬರೆದುದಾಗಿ ಹೇಳಿಕೊಂಡಿದ್ದಾನೆ. ಇವನಿಗೆ 'ಗಣಿತವಿಳಾಸ',

---

೮೨. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ (ಸಂ) : **ಶ್ರೀಧರಾಚಾರ್ಯ ವಿರಚಿತ ಜಾತಕ ತಿಲಕಂ** : ಪುಟ. ೩೦೨

೮೩. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೮.

೮೪. ಡಾ. ಧನ್ಯಕುಮಾರ ಇಜಾರಿ : **ಜೈನ ಲೌಕಿಕ ಸಾಹಿತ್ಯ ಸಂಪದ** : ಪುಟ. ೧೮೬

೮೫. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೮.

೮೬. ಡಾ. ಧನ್ಯಕುಮಾರ ಇಜಾರಿ : **ಜೈನ ಲೌಕಿಕ ಸಾಹಿತ್ಯ ಸಂಪದ** : ಪುಟ. ೧೭೪

೮೭. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೮.

‘ಶಾರದೆಗುವರ’ ಮುಂತಾದ ಬಿರುದುಗಳಿದ್ದವು. ಸು. ೧೭೦೦ರಲ್ಲಿದ್ದ ತಿಮ್ಮರಸನ ‘ಕ್ಷೇತ್ರ ಗಣಿತ’ದಲ್ಲಿನ ಸ್ವಾರಸ್ಯವಾದ ಸಂಗತಿಯೆಂದರೆ ಹೊಲಗಳನ್ನು ಅಳೆಯಲು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಗಳೆ[೮೮]ಗಳು ಬಳಕೆಯಾಗುತ್ತವೆ ಎಂದು ಹೇಳಿರುವುದು, ಹೊಲದ ಅಳತೆಗಳಾದ ಕಂಬ[೮೯] ಮುಂತಾದವುಗಳ ವಿವರಣೆ ಇಲ್ಲಿ ದೊರಕುತ್ತದೆ. ದೈವಜ್ಞವಲ್ಲಭನು (ಸು. ೧೭೦೦) ಮಹಾವೀರಾಚಾರ್ಯನ ಗಣಿತಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದಿದ್ದಾನೆ. ಇದೇ ವ್ಯಾಖ್ಯಾನವನ್ನು ತೆಲುಗಿನಲ್ಲಿಯೂ ಬರೆದಂತೆ ಕಾಣುತ್ತದೆ. ಬಾಲವೈದ್ಯರ ಚೆಲುವನ (ಸು. ೧೭೧೫) ಕನ್ನಡ ‘ಲೀಲಾವತಿ’ಯಲ್ಲಿ ಸಾಧಾರಣ ಗಣಿತ ಮತ್ತು ಕ್ಷೇತ್ರಗಣಿತಗಳೆರಡನ್ನೂ ನಿರೂಪಿಸಲಾಗಿದೆ.[೯೦]

೨.೩.೧೦. ಕಾಮಶಾಸ್ತ್ರ:

ಚಂದ್ರರಾಜನ (೧೬೪೦) ‘ಮದನತಿಲಕ’ ಕನ್ನಡದ ಮೊತ್ತಮೊದಲ ಕಾಮಶಾಸ್ತ್ರ ಗ್ರಂಥ. ಕೃತಿಕಾರ ಅರವತ್ತನಾಲ್ಕು ಕಲೆಗಳಲ್ಲೂ ನಿಪುಣನಾಗಿದ್ದ. ಅವನ ಪ್ರಕಾರ ಕಾಮ ನಿಂದನೀಯವಾದುದಲ್ಲ. ಅದರಿಂದಲೇ ಪ್ರಜಾಭಿವೃದ್ಧಿಯಾಗುವುದು ಧರ್ಮ ಅರ್ಥಗಳೆರಡೂ ಕಾಮಕ್ಕೆ ಹೇತುವಾದ್ದರಿಂದ ಕಾಮವೇ ಮುಖ್ಯವಾದುದು. “ಅವನು ವಾತ್ಸ್ಯಾಯನ, ವೈಶಿಕ, ಚಾರಾಯಣ, ಸ್ವರ್ಣನಾಭ ಮುಂತಾದ ಹಿಂದಿನ ಲೇಖಕರನ್ನು ಸ್ಮರಿಸಿ ಅವರಿಂದ ವಿಷಯಸಂಗ್ರಹಮಾಡಿ ಕೃತಿರಚನೆ ಮಾಡಿದ್ದಾನೆ. ಈ ಗ್ರಂಥದಲ್ಲಿ ಅನೇಕ ಅಪೂರ್ವ ವೃತ್ತಗಳನ್ನು ಬಳಸಿರುವುದು ಗಮನಾರ್ಹ ಸಂಗತಿ.”[೯೧] ಜನ್ನನ (೧೨೦೩) ಅನುಭವ ಮುಕುರವು ಸುಂದರಿಯರು, ಅವರ ಸೌಂದರ್ಯ, ಪ್ರೇಮಗಳನ್ನು ಕುರಿತಾದ ಗ್ರಂಥ. ಕಲ್ಲರಸನು (ಸು. ೧೪೫೦) ‘ಜನವಶ್ಯ’ದಲ್ಲಿ ವಾತ್ಸ್ಯಾಯನ ಮುಂತಾದವರ ಮತಗಳನ್ನು ಸಂಗ್ರಹಿಸಿದ್ದಾನೆ. ಕವಿ ಲಿಂಗ ಎಂಬಾತನ (ಸು. ೧೮೯೦) ಹಾಡುಗಳಲ್ಲಿ ‘ಶೃಂಗಾರರಸ’ ಪ್ರಧಾನವಾಗಿದೆ. “ಪಂಪ, ನೇಮಿಚಂದ್ರ, ಷಡಕ್ಷರಿ ಮುಂತಾದ ಕವಿಗಳ ವೇಶ್ಯಾವಾಟಿಕೆ ವರ್ಣನೆಗಳಲ್ಲಿ, ಪ್ರೇಮ ಪ್ರಸಂಗ ಚಿತ್ರಣಗಳಲ್ಲಿ ಅವರಿಗಿದ್ದ ಕಾಮಶಾಸ್ತ್ರದ ಜ್ಞಾನ ಸುವ್ಯಕ್ತವಾಗಿರುವುದನ್ನು ಗುರುತಿಸಬಹುದು.”[೯೨]

೨.೩.೧೧. ಸೂಪಶಾಸ್ತ್ರ :

"ಚಾವುಂಡರಾಯನು (ಸು. ೧೧೫೦) ‘ಲೋಕೋಪಕಾರ’ದಲ್ಲಿ ಎಂಟನೆಯ ಅಧ್ಯಾಯವನ್ನು ಸೂಪಶಾಸ್ತ್ರಕ್ಕೆ ಮೀಸಲಿಟ್ಟಾನೆ.”[೯೩] ಮೂರನೆಯ ಮಂಗರಸನ (೧೫೦೮) ‘ಸೂಪಶಾಸ್ತ್ರ’ದಲ್ಲಿ ಪಿಷ್ಟಪಾಕ, ಪಾನಕ, ಕಳಮಾನ್ನಪಾಕ, ಶಾಕಪಾಕ ಇತ್ಯಾದಿ ರೀತಿಯ ಅಡುಗೆಗಳ ನಿರೂಪಣೆಯಿದೆ. ತನ್ನ ಕೃತಿಯಲ್ಲಿ ನಳ, ಭೀಮ, ಗೌರಿಯರ ಮತಗಳನ್ನು ಸಂಗ್ರಹಿಸಿರುವುದಾಗಿ

---

೮೮. **ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ನಿಘಂಟು** : **ಗಳೆ** = ೧. ಬಿದಿರು ಕೋಲು; ೨. ಭೂಮಿಯನ್ನು ಅಳೆಯುವ ಒಂದು ಅಳತೆ; ೩. ಕೃಷಿ ಉಪಕರಣ

೮೯. ಕಂಬ = ಹೊಲವನ್ನು ಅಳೆಯಲು ಬಳಸುವ ಒಂದು ಸಾಧನ.

೯೦. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೮.

೯೧. ಡಾ. ಧನ್ಯಕುಮಾರ ಇಜಾರಿ : **ಜೈನ ಲೌಕಿಕ ಸಾಹಿತ್ಯ ಸಂಪದ** ; ಪುಟ. ೨೮೭

೯೨. ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೮.

೯೩. ಡಾ. ಜಯಶ್ರೀ ಎಸ್. ಮುದಿಗೌಡರ್ : **ಲೋಕೋಪಕಾರ ಒಂದು ಸಾಂಸ್ಕೃತಿಕ ಅಧ್ಯಯನ** : ಪುಟ. ೧೦೨

ಹೇಳಿಕೊಂಡಿದ್ದಾನೆ. “ಇಂದ್ರಿಯಗಳಲ್ಲಿ ನಾಲಗೆ ಬಹು ಮುಖ್ಯವೆಂದೂ ಅದು ತೃಪ್ತಿಹೊಂದಿದರೆ ಇಹ, ಪರ ಸೌಖ್ಯಗಳೆರಡೂ ಲಭ್ಯವಾಗುತ್ತವೆಂದೂ ಮಂಗರಸನ ನಂಬಿಕೆ. ಅವನ ಕೃತಿಯಲ್ಲಿ ಅನೇಕ ಸೊಗಸಾದ ತಿಂಡಿಗಳನ್ನು ಮಾಡುವ ಬಗೆ ಹೇಳಿದೆ. ಅವನದೇ ಕಾವ್ಯವಾದ ‘ಸಮ್ಯಕ್ತ್ವ ಕೌಮುದಿ’ಯಲ್ಲಿ ಭೋಜನದ ಸಹಜ ವಿನೋದಪೂರ್ಣ ವರ್ಣನೆ ದೊರಕುತ್ತದೆ.”[೯೪]

೨.೩.೧೨. ನೀತಿಶಾಸ್ತ್ರ :

"ದುರ್ಗಸಿಂಹನ (೧೦೩೧) ‘ಪಂಚತಂತ್ರ’ ಕಾವ್ಯವೂ ಹೌದು, ನೀತಿಶಾಸ್ತ್ರವೂ ಹೌದು. ಇದರಲ್ಲಿ ಪ್ರಾಣಿಗಳ ಕಥೆಗಳ ಮೂಲಕ ಕವಿಯು ಲೌಕಿಕ ನೀತಿಯನ್ನು ಬಿತ್ತರಿಸಿದ್ದಾನೆ. ಇದಲ್ಲದೆ ಕನ್ನಡದಲ್ಲಿ ಇನ್ನೂ ಅನೇಕ ‘ಪಂಚತಂತ್ರ’ ಕೃತಿಗಳು ದೊರಕುತ್ತವೆ. (ಉದಾ : ಶಂಕರಕವಿಯ ಕನ್ನಡ ‘ಪಂಚತಂತ್ರ’). ಚಿಕ್ಕುಪಾಧ್ಯಾಯ (೧೬೭೨) ಸಂಸ್ಕೃತ ಕಾಮಂದಕ ನೀತಿಗೆ ಗದ್ಯರೂಪವಾದ ಟೀಕೊಂದನ್ನು ಬರೆದಿದ್ದಾನೆ. ಇದಕ್ಕೆ ‘ಉಪಾಧ್ಯಾಯನಿರಪೇಕ್ಷಾ’ ಎಂಬ ಹೆಸರೂ ಉಂಟು.”[೯೫] ಆಚಾರ್ಯ ಸೋಮದೇವರು ವಿರಚಿಸಿದ ‘ನೀತಿವಾಕ್ಯಾಮೃತಂ’ ಎಂಬ ಸಂಸ್ಕೃತ ಕೃತಿಗೆ ನೇಮಿನಾಥ (೧೨೦೦) ಕವಿಯು ಕನ್ನಡ ವ್ಯಾಖ್ಯಾನವನ್ನು ಬರೆದಿದ್ದಾನೆ.

೨.೩.೧೩. ವೃಷ್ಟಿಶಾಸ್ತ್ರ :

"ಅರ್ಹದ್ದಾಸ ಕವಿಯ (ಸು. ೧೩೦೦) ರಟ್ಟಮತ ವೃಷ್ಟಿಶಾಸ್ತ್ರಕ್ಕೆ ಸಂಬಂಧಿಸಿದ ಏಕೈಕ ಗ್ರಂಥ. ಮಳೆಯ ಕುರುಹು, ಶಕುನಗಳು, ಬಿತ್ತುವ ಕಾಲ, ಉದಕಾರ್ಗಳ (ಬಾವಿ ತೋಡಿದರೆ ನೀರು ಬರುವ ಜಾಗ), ಮೋಡಗಳ ವಿಷಯ, ಕ್ಷಾಮದ ಲಕ್ಷಣ, ಭೂಕಂಪ ಇತ್ಯಾದಿ ಅನೇಕ ಸಂಗತಿಗಳು ಇಲ್ಲಿವೆ.”[೯೬]

೨.೩.೧೪. ರತ್ನಶಾಸ್ತ್ರ:

"ರತ್ನೋಜ್ವಲಸಂಹಿತೆ, ವರಾಹಮಿಹಿರ ಮತ್ತು ಗಾರ್ಗ್ಯರ ಸಂಹಿತೆಗಳು ಇವನ ಗ್ರಂಥಕ್ಕೆ ಆಧಾರಗಳು. ಬಾಲವೈದ್ಯದ ಚೆಲುವ (ಸು. ೧೭೧೫) ರತ್ನಶಾಸ್ತ್ರವನ್ನು ಬರೆದಿದ್ದಾನೆ. ಇದರಲ್ಲಿ ರತ್ನಗಳ ಹೆಸರು, ಗಣಿಗಳು, ವರ್ಣ, ಜಾತಿ, ದೋಷ, ಬೆಲೆ, ಕೃತ್ರಿಮರತ್ನ ಇತ್ಯಾದಿ ವಿಷಯಗಳಿವೆ.”[೯೭]

೨.೩.೧೫. ಜ್ಞಾನಕೋಶಗಳು:

ಅನೇಕ ವಿಷಯಗಳನ್ನೊಳಗೊಂಡ ವಿಶ್ವಕೋಶಗಳಂಥ ಕೆಲವು ಗ್ರಂಥಗಳು ಕನ್ನಡದಲ್ಲಿ ಬಂದಿವೆ. ಇವುಗಳಲ್ಲಿ ಚಾವುಂಡರಾಯನ (೧೦೨೫) ಲೋಕೋಪಕಾರ ಮೊದಲನೆಯದು. ಲೋಕಹಿತಾರ್ಥವಾಗಿ ಯಾವ ಯಾವ ವಿದ್ಯೆಗಳು ಉಂಟೋ ಅವೆಲ್ಲವೂ ತನ್ನ

---

೯೪. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦ :** ಪುಟ.೩೯೮.
೯೫. **ಅದೇ :** ಪುಟ.೩೯೮.
೯೬. ಡಾ. ಧನ್ಯಕುಮಾರ ಇಜಾರಿ : **ಜೈನ ಲೌಕಿಕ ಸಾಹಿತ್ಯ ಸಂಪದ :** ಪುಟ. ೨೩೦
೯೭. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦ :** ಪುಟ.೩೯೭

ಗ್ರಂಥದಲ್ಲಿರುವುದರಿಂದ ತನ್ನ ಗ್ರಂಥಕ್ಕೆ ಲೋಕೋಪಕಾರವೆಂಬುದು ಅನ್ವರ್ಥವಾಗಿದೆಯೆಂದು ಹೇಳಿಕೊಂಡಿದ್ದಾನೆ. "ಮೇದಿನಿಯುಪಕಾರಂ ಕಲಿವೋದುಗಳೆನಿತೋಳವವಿಲ್ಲಿ ನೆಲಸಿರ್ದು ಬುಧೋಪಾದೇಯಮಾದ ದೂಸಱುನಾದುದು ಲೋಕೋಪಕಾರಮೇನನ್ವರ್ಥಂ." [೯೮] ತನ್ನ ಗ್ರಂಥದಲ್ಲಿ ಹಲವಾರು ಲೌಕಿಕ ಶಾಸ್ತ್ರಗಳಿರುವುದರಿಂದ ಅದು ರಾಜರಿಂದ ಪೂಜಿತವಾಗಿದೆಯೆಂದೂ ಹೇಳಿಕೊಂಡಿದ್ದಾನೆ. ಹನ್ನೆರಡನೆಯ ಶತಮಾನದಲ್ಲಿ ಹುಟ್ಟಿದ ಸೋಮೇಶ್ವರನ 'ಮಾನಸೋಲ್ಲಾಸ' ಒಂದು ಜ್ಞಾನಕೋಶವಾದರೂ ಅದು ಸಂಸ್ಕೃತದಲ್ಲಿದೆ. ಕೆಳದಿಯ ಬಸವರಾಜನ ಶಿವಯೋಗಿಗಳ 'ವಿವೇಕಚಿಂತಾಮಣಿ' ಅನೇಕ ವಿಷಯಗಳನ್ನೊಳಗೊಂಡಿರುವ ಮತ್ತೊಂದು ಜ್ಞಾನಕೋಶ. ಇದರಲ್ಲಿ ಹತ್ತು ಪರಿಚ್ಛೇದಗಳಿದ್ದು ನೂರಾರು ಬೇರೆ ಬೇರೆ ಸಂಗತಿಗಳು ನಿರೂಪಿತವಾಗಿವೆ. ಇಲ್ಲಿ ಪುರಾಣ, ಉಪಪುರಾಣಗಳು, ಮತಗಳು, ದರ್ಶನಗಳು, ಆಗಮಗಳು. "ಶೈವ ಮತ್ತು ವೀರಶೈವ ಪ್ರಭೇದಗಳು, ಯೋಗ, ಬ್ರಹ್ಮಾಂಡ, ಲೋಕಗಳು, ಭೂಮಿಯ ವರ್ಣನೆ, ಛಂದಸ್ಸು, ಅಲಂಕಾರಶಾಸ್ತ್ರ, ಗಮಕಿ ವಾದಿ ವಾಗ್ಮಿಗಳ ಲಕ್ಷಣಗಳು, ರಸಸಿದ್ಧಾಂತ, ಕಾಮಶಾಸ್ತ್ರ, ಸಂಗೀತಶಾಸ್ತ್ರ, ಸಮುದ್ರಗಳು ಇತ್ಯಾದಿ ವಿಷಯಗಳಿವೆ." [೯೯] ಕುಮುದೇಂದುವಿನದೆಂದು ಹೇಳಲಾದ ಸಿರಿಭೂವಲಯ ವಿದ್ವಾಂಸರಿಂದ ಪಡೆಯಬೇಕಾದಷ್ಟು ಗಮನವನ್ನು ಪಡೆದಿಲ್ಲ. ಅದರ ಕಾಲ, ಕೃತಿಕರ್ತೃ ಇತ್ಯಾದಿಗಳೆಲ್ಲವೂ ವಾದಗ್ರಸ್ತವಾಗಿವೆ. ಅದನ್ನು ಅಧ್ಯಯನ ಮಾಡಿರುವ ಎಸ್. ಶ್ರೀಕಂಠಶಾಸ್ತ್ರಿಗಳವರ ಪ್ರಕಾರ "ಜೈನ ಮತ್ತು ಇತರ ದರ್ಶನಗಳ ಪರಿಚಯ ಮಾತ್ರವಲ್ಲದೆ, ಭಾರತೀಯ ಗಣಿತಶಾಸ್ತ್ರ, ಭೌತವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನ, ಆಯುರ್ವೇದ, ಜ್ಯೋತಿಷ್ಯ, ವಾಸ್ತು, ಶಿಲ್ಪ, ಚಿತ್ರ ಮುಂತಾದ ಲಲಿತಕಲೆಗಳು–ಇವುಗಳ ಚರ್ಚೆ ಇಲ್ಲಿ ದೊರಕುತ್ತದೆ." [೧೦೦] ರಾಮಕೃಷ್ಣ ಶಾಸ್ತ್ರಿ, (ಸು. ೧೮೦೮) 'ಭುವನಪ್ರದೀಪಿಕೆ' ಎಂಬ ತನ್ನ ಸಂಸ್ಕೃತ ಗ್ರಂಥಕ್ಕೆ ತಾನೇ ಟೀಕೆ ಬರೆದಿದ್ದಾನೆ. ಇದರಲ್ಲಿ ಸೃಷ್ಟಿ, ಕಾಲಪ್ರಮಾಣ, ಭೋಗೋಳ, ಖಗೋಳ, ಪುರಾಣಗಳು, ವರ್ಣಾಶ್ರಮ ಧರ್ಮಗಳು, ಮೈಸೂರು ದೊರೆಗಳ ಇತಿಹಾಸ ಇತ್ಯಾದಿ ಸಂಗತಿಗಳು ಬಂದಿವೆ.

೨.೩.೧೬. ಸಂಗೀತ ಶಾಸ್ತ್ರ :

ಪಂಪನ 'ಆದಿಪುರಾಣ', ಭೀಮಕವಿಯ 'ಬಸವ ಪುರಾಣ', ಪದ್ಮಣಾಂಕನ 'ಪದ್ಮರಾಜಪುರಾಣ'. ರತ್ನಾಕರನ 'ಭರತೇಶವೈಭವ' ಮುಂತಾದ ಕಾವ್ಯಗಳಲ್ಲಿ ಅನೇಕ ಸಂಗೀತದ ಪಾರಿಭಾಷಿಕ ಪದಗಳನ್ನು ಗುರುತಿಸಬಹುದು. ಶಿವಶರಣರ ಹಾಗೂ ಹರಿದಾಸರ ಸಂಗೀತಾತ್ಮಕ ಸಾಹಿತ್ಯ ಗುರುತಿಸಬಹುದಾಗಿದೆ. ಆದರೆ ಕನ್ನಡದಲ್ಲಿ ಸಂಗೀತಕ್ಕೆ ಸಂಬಂಧಿಸಿದ ಶಾಸ್ತ್ರೀಯ ನಿರೂಪಣೆ ಮೊದಲು ದೊರಕುವುದು ನಿಜಗುಣ ಶಿವಯೋಗಿಗಳ ವಿವೇಕಚಿಂತಾಮಣಿಯ

---

೯೮. ಎಚ್. ಶೇಷಯ್ಯಂಗಾರ್ (ಸಂ) : **ಲೋಕೋಪಕಾರಂ** : ಪುಟ. ೪

೯೯. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೩೯೭

೧೦೦. ಕರ್ಲಮಂಗಲ ಶ್ರೀಕಂಠಯ್ಯ (ಸಂಶೋ.), ಸುಧಾರ್ಥಿ ಹಾಸನ (ಸಂ.): **ಆಯ್ದ ಸಾಂಗತ್ಯ ಪದ್ಯಗಳ ಸಂಗ್ರಹ** : ಪುಟ. ೧೩

ನಾಲ್ಕನೆಯ ಅಧ್ಯಾಯದಲ್ಲಿ. ಶಾರ್ಙ್ಗದೇವನ 'ಸಂಗೀತ ರತ್ನಾಕರ'ವನ್ನು ಗುರುತಿಬಹುದು. "ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಿಂಹಣ ಅಥವಾ ಸಿಂಹಭೂಪಾಲ (೧೬ನೆಯ ಶತಮಾನ) ವಿರಚಿತ 'ಲಾಸ್ಯರಂಜನಂ' ಎಂಬ ಗ್ರಂಥವೊಂದಿದೆ. ಇದಕ್ಕೆ ಆಕರ ಭರತನ 'ನಾಟ್ಯ ಶಾಸ್ತ್ರ'ವಾದರೂ ಅದೊಂದನ್ನೇ ಅವಲಂಬಿಸಿ ರಚಿತವಾಗಿದೆಯೆಂದು ಹೇಳುವುದು ಕಷ್ಟ. 'ಲಾಸ್ಯ ಮುಕುರ', 'ತತ್ತ್ವಾಭಿನಯ ನಿಘಂಟು' ಎಂಬ ನಾಟ್ಯಸಂಬಂಧಿ ಗ್ರಂಥಗಳೂ ಇರುವಂತೆ ತಿಳಿದುಬರುತ್ತದೆ."[೧೧೧]

ಇಲ್ಲಿಯವರೆಗೆ ನೋಡಿದಂತೆ ಕನ್ನಡ ಶಾಸ್ತ್ರಕಾರರು ವಿಶೇಷವಾಗಿ ಸಂಸ್ಕೃತಕ್ಕೆ ಋಣಿಗಳಾಗಿದ್ದಾರೆ. ಅಲಂಕಾರವಾಗಲೀ, ವೇದಾಂತವಾಗಲೀ ಬೇರೆ ಇನ್ನಾವುದೇ ಶಾಖೆಯಾಗಲಿ ಆಯಾ ಕ್ಷೇತ್ರದಲ್ಲಿ ಕನ್ನಡಿಗರು ಹೆಚ್ಚಿನ ಸಂದರ್ಭಗಳಲ್ಲಿ ಸಂಸ್ಕೃತವನ್ನು ಅನುಸರಿಸಿದ್ದನ್ನು ಗುರುತಿಸಬಹುದು. ಆದರೂ ಅವರು ಸಾಮಾನ್ಯರಿಗಾಗಿ, ಅಂಥ ವಿದ್ಯಾವಂತರಲ್ಲದವರಿಗಾಗಿ ಲೋಕಕ್ಕೆ ಉಪಕಾರ ಮಾಡುವ ಬಯಕೆಯಿಂದಾಗಿ ಕನ್ನಡದಲ್ಲಿ ಗ್ರಂಥರಚನೆ ಮಾಡಿದ್ದು ಮೆಚ್ಚಬೇಕಾದ್ದು. ವೈದ್ಯ, ಗಣಿತ, ವೃಷ್ಟಿಶಾಸ್ತ್ರ ಮುಂತಾದುವುಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಆಯಾ ಕ್ಷೇತ್ರದಲ್ಲಿ ತಜ್ಞರಾದವರು ಓದಿ ಅವುಗಳ ಸಾರಾಸಾರವನ್ನು ಗುರುತಿಸುವ ಅಗತ್ಯ ಬಹಳವಾಗಿದೆ. ಆ ನಿಟ್ಟಿನಲ್ಲಿ ಈ ಒಟ್ಟಂದದ ಶಾಸ್ತ್ರಸಾಹಿತ್ಯಗಳಲ್ಲಿ ಪ್ರಸ್ತುತ ಅಧ್ಯಯನ ವಿಷಯದ ಮೂಲಕ ಕನ್ನಡ ಜೈನಕವಿಕೃತ ಶಾಸ್ತ್ರಸಾಹಿತ್ಯವನ್ನು ಅರಿತುಕೊಳ್ಳುವುದಾಗಿದೆ.

❖

೧೧೧. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ–೧೦** : ಪುಟ.೫೯೭.

ಅಧ್ಯಾಯ : ೩

ಕನ್ನಡ ಧಾರ್ಮಿಕ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ

ಅಧ್ಯಾಯ ೩

ಕನ್ನಡ ಧಾರ್ಮಿಕ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ

ಭಾರತದ ಪ್ರಾಚೀನ ಸಾಹಿತ್ಯವು ಮುಖ್ಯವಾಗಿ ಧಾರ್ಮಿಕ ಭಾವನೆಗಳಿಂದ ಪ್ರೇರಿತವೂ ಪ್ರಭಾವಿತವೂ ಆಗಿದೆ. "ಮಾನವನನ್ನು ಸಮಾಜಮುಖಿಯಾಗಿಸುವಲ್ಲಿ ಧರ್ಮ ಪ್ರಮುಖ ಪಾತ್ರ ವಹಿಸುತ್ತದೆ. ಸತ್ಯ ಮತ್ತು ಸುಖಗಳ ನಿರಂತರ ಹುಡುಕಾಟದ ಮಾನವನ ಚಿಂತನೆಯೊಳಗೊಂಡಂತೆ ಪ್ರಾರಂಭ ಕಾಲದ ಧರ್ಮವು ಮನುಷ್ಯ ಮತ್ತು ವಿಶ್ವ, ಮನುಷ್ಯ ಮತ್ತು ಅವನ ಕರ್ತವ್ಯಗಳು, ಅವನ ಜೀವನೋದ್ದೇಶ, ಅದರ ಸಾಧನಾ ಮಾರ್ಗ ಇವುಗಳಿಗೆ ಸಂಬಂಧಿಸಿದ ಮೂಲಭೂತ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದೆ. ಕಾಲಕಾಲಕ್ಕೆ ಹಲವಾರು ಋಷಿಗಳು, ಯೋಗಿಗಳು ಹಾಗೂ ಜ್ಞಾನಿಗಳು ತಮ್ಮ ಉಪದೇಶ ಮತ್ತು ಉದಾಹರಣೆಗಳ ಮೂಲಕ ಈ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಅವರ ಬೋಧನೆ ಮತ್ತು ಆಚರಣೆಗಳು ದಾಖಲಿಸಲ್ಪಟ್ಟು ಅವು ಆಯಾ ಧರ್ಮಗಳ ತಿರುಳಾಗಿವೆ."[೧] ಅಂತೆಯೇ ಭಾರತ ಜನನಿಯ ತನುಜಾತೆ ಕರ್ನಾಟಕ ಮಾತೆಯ ಮಡಿಲಲ್ಲಿಯೂ ಅನೇಕ ಧರ್ಮಗಳು ನೆಲೆಸಿವೆ. ಅದಕ್ಕಾಗಿಯೇ ರಾಷ್ಟ್ರಕವಿ ರಸಋಷಿ ಕುವೆಂಪು ಅವರು 'ಸರ್ವಜನಾಂಗದ ಶಾಂತಿಯ ತೋಟ' ಎಂದು ಹಾಡಿದ್ದಾರೆ.

ಅಪೂರ್ವವಾದ ಸಾಂಸ್ಕೃತಿಕ ಪರಂಪರೆಯನ್ನೂ, ವಿದ್ವಜ್ಞಾನದ ಪ್ರಚುರತೆಯನ್ನೂ ಹೊಂದಿರುವ ಭಾರತದ ಪುರಾತನ ಸಾಹಿತ್ಯವು, ಋಗ್ವೇದಾದಿ ಚತುರ್ವೇದಗಳಲ್ಲಿ ನೆಲೆಯಾಗಿದೆ. ಅವುಗಳಲ್ಲಿ "ಪ್ರಕೃತಿಯ ಶಕ್ತಿಗಳಾದ ಅಗ್ನಿ, ವಾಯು, ವರುಣ (ಜಲ), ಮಿತ್ರ (ಸೂರ್ಯ), ಆಕಾಶ (ದ್ಯಾವಾ), ಭೂಮಿ (ಪೃಥ್ವಿ) ಮೊದಲಾದವುಗಳನ್ನು ದೇವತೆಗಳೆಂದು ಮನ್ನಿಸಿ, ವಂದಿಸಿ ಪ್ರಾರ್ಥನೆಗೈಯಲಾಗಿದೆ."[೨]

"ಏಷ ಸರ್ವೇಷು ಭೂತೇಷು ಗೂಢೋತ್ಮಾ ನ ಪ್ರಕಾಶತೆ ।
ದೃಶ್ಯತೆ ತ್ವಗ್ರಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿ ॥"[೩]
ಕಠೋಪನಿಷತ್ತು ೧.೩.೧೨

ಅಂದರೆ ಪ್ರಾಣಿ ಮಾತ್ರದಲ್ಲಿ ಒಂದು ಅನಾದಿ ಅನಂತ ಸಜೀವ ತತ್ವವಿದೆ. ಅದು ಭೌತಿಕವಾದುದಲ್ಲ. ಆ ಕಾರಣದಿಂದ ಅದು ಕಾಣುವುದಿಲ್ಲ. ಅದೇ ಆತ್ಮವಾಗಿದೆ. ಮರಣದ ತರುವಾಯ ಅದು ತನ್ನ ಕರ್ಮ ಮತ್ತು ಜ್ಞಾನದ ಅವಸ್ಥೆಗೆ ಅನುಸರಿಸಿ ವೃಕ್ಷ ಮೊದಲುಗೊಂಡು ನಾನಾ ವಿಧದ ಜೀವ-ಯೋನಿಗಳಲ್ಲಿ ಸುತ್ತುತ್ತಿರುತ್ತದೆ. ಅದು ತನ್ನ ಉತ್ತಮ ಚಾರಿತ್ರ್ಯ ಮತ್ತು ಜ್ಞಾನದ ಪ್ರಭಾವದಿಂದ ನಿರ್ವಾಣ ಪದವಿ ಪ್ರಾಪ್ತಿಯಾಗುವತನಕ ಸಂಚರಿಸುತ್ತಲೇ ಇರುತ್ತದೆ.

---

೧. ತುಕೋಳ್ ಟಿ. ಕೆ., (ಅನು: ಪದ್ಮಪ್ರಸಾದ ಎಸ್.ಪಿ.) : **ಜೈನ ಧರ್ಮಕ್ಕೊಂದು ಕೈಪಿಡಿ :** ಪುಟ. ೧
೨. ಅಣ್ಣಾರಾಯ ಮಿರ್ಜಿ (ಅನು) : **ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ :** ಪು.೪೯
೩. ಬನ್ನಂಜೆ ಗೋವಿಂದಾಚಾರ್ಯ: **ಕಠೋಪನಿಷತ್** (ಉಪನಿಷತ್ ಪ್ರವಚನ) : ಪು.೪೩

ಅಂದರೆ ಪ್ರತಿಯೊಂದು ಜೀವಿಯ ಅಂತಿಮ ಗುರಿ ಮೋಕ್ಷ ಸಾಧನೆಯಾಗಿದೆ. ಮೋಕ್ಷ ಸಾಧನೆಯೆಡೆಗೆ ಸಾಗಬೇಕಾದರೆ ಉತ್ತಮೋತ್ತಮವಾದ ತತ್ತ್ವ-ವಿಚಾರಗಳೊಂದಿಗೆ ದೈವತ್ವದ ಉಪಾಸನೆಯಲ್ಲಿ ತೊಡಗಿ, ದೈವಾಧೀನವಾಗುವುದು. ಆ ನಿಟ್ಟಿನಲ್ಲಿ ಶ್ರೀಮದ್ಭಾಗವತ ಮಹಾಪುರಾಣದಲ್ಲಿ ತತ್ತ್ವಗಳು ಮತ್ತು ಭಗವಂತನ ರೂಪಗಳನ್ನು ಹೇಳಲಾಗಿದೆ.

"ಜನ್ಮಾದಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿ ಕವಯೇ ಮುಹ್ಯಂತಿಯಂ ಸೂರಯಃ ।
ತೇಜೋವಾರಿ ಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋ ಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತ ಕುಹಕಂ ಸತ್ಯಂ ಪರಂ ಧೀಮಹಿ ॥"[೪]

ಶ್ರೀಮದ್ಭಾಗವತ ಮಹಾಪುರಾಣ ೧.೧.೧

ಭಾಗವತದ ಪ್ರಥಮಸ್ಕಂಧ ಪ್ರಥಮ ಅಧ್ಯಾಯದ ಈ ಶ್ಲೋಕವು ಅತ್ಯಂತ ಅರ್ಥಪೂರ್ಣವಾಗಿದ್ದು, ವೇದಾಂತಗಳ ಸಮಗ್ರಸಾರವನ್ನು ಒಳಗೊಂಡಿದೆ. ನಾಲ್ಕು ಚರಣಗಳ ಈ ಶ್ಲೋಕದ ಪ್ರತಿಪಾದವೂ ಹತ್ತೊಂಭತ್ತು ಅಕ್ಷರಗಳನ್ನು ಒಳಗೊಂಡಿದ್ದು ಒಟ್ಟು ಎಪ್ಪತ್ತಾರು ಅಕ್ಷರಗಳು, ಮೂವತ್ತು ಪದಗಳಿವೆ. ಈ ಎಪ್ಪತ್ತಾರು ಅಕ್ಷರಗಳು ಭಗವಂತನ ಎಪ್ಪತ್ತಾರು ರೂಪಗಳನ್ನು ಪ್ರತಿನಿಧಿಸುತ್ತವೆ. ಆ ಎಪ್ಪತ್ತಾರು ರೂಪಗಳೇ ಅಖಂಡ ವಿಶ್ವದ ಸಮಗ್ರ ಚಿತ್ರಣ. "ವಿಶ್ವವೆಂದರೆ ನಾಮಾತ್ಮಕ ಮತ್ತು ರೂಪಾತ್ಮಕ ಪ್ರಪಂಚ. ಇದರಲ್ಲಿ ಇಪ್ಪತ್ತೈದು ತತ್ತ್ವಗಳು[೫] ಮತ್ತು ಐವತ್ತೊಂದು ಭಗವಂತನ ರೂಪ[೬]ಗಳನ್ನು ಒಳಗೊಂಡಿದೆ. ಈ ಪ್ರಪಂಚದಲ್ಲಿ ಯಾವುದೇ ಕಾರ್ಯ ನಡೆಯಬೇಕಾದರೆ ಅದಕ್ಕೆ ಒಂದು ಕಾರಣ ಇದ್ದೇ ಇರುತ್ತದೆ. ಅಕಾರಣವಾಗಿ ಯಾವುದೇ ಕಾರ್ಯವು ನಡೆಯಲಾರದು. ಆ ಕಾರ್ಯ ನಡೆಯುವುದಕ್ಕೆ ಚೇತನ ಶಕ್ತಿಯೇ ಭಗವಂತ."[೭] ಅಂತಹ ಚೇತನ ಶಕ್ತಿಯನ್ನು ಒಲಿಸಿಕೊಂಡು ದಿವ್ಯಾತ್ಮರಾಗುವ ಹಾದಿಯಲ್ಲಿ ಸಾಗಿ ಮೋಕ್ಷ ಸಾಧಿಸುವುದು ಪ್ರತಿಯೊಂದು ಧರ್ಮದ ಮೂಲ ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಸಾಕಷ್ಟು ಜ್ಞಾನಬೋಧಕ ಮತ್ತು ದೈವತ್ವದೆಡೆಗೆ ಇಲ್ಲವೇ ಆಧ್ಯಾತ್ಮದೆಡೆಗೆ ಸಾಗುವಂತೆ ಬೋಧಿಸುವ ಧಾರ್ಮಿಕ ಗ್ರಂಥಗಳು ಮೊದಲಿನಿಂದಲೂ ರಚನೆಯಾಗಿವೆ. ಅವು ಮೊದಲು ಶ್ರುತಿರೂಪದಲ್ಲಿದ್ದು, ಆನಂತರದ ಕಾಲದಲ್ಲಿ ಲಿಪಿಬದ್ಧವಾದವು.

---

೪. ಬನ್ನಂಜೆ ಗೋವಿಂದಾಚಾರ್ಯ : **ಶ್ರೀಮದ್ಭಾಗವತ ಮಹಾಪುರಾಣ** (ಉಪನಿಷತ್ ಪ್ರವಚನ) : ಪುಟ. ೧೦

೫. **ಅದೇ;** ಪುಟ. ೧೧: ಪುರುಷ, ಪ್ರಕೃತಿ, ಮಹತತ್ತ್ವ, ಅಹಂಕಾರತತ್ತ್ವ, ಮನಸ್ತತ್ತ್ವ, ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಪಂಚ ತನ್ಮಾತ್ರೆಯಗಳು ಮತ್ತು ಪಂಚಭೂತಗಳು.

೬. **ಅದೇ;** ಪುಟ. ೧೧
೧. ಅಜ ೨. ಆನಂದ ೩. ಇಂದ್ರ ೪. ಈಶ ೫. ಉಗ್ರ ೬. ಊರ್ಜ ೭. ಋತಂಭರ ೮. ಋಘ ೯. ಲೃಶ ೧೦. ಲ್ಫೂಜಿ ೧೧. ಏಕಾತ್ಮ ೧೨. ಐರ ೧೩. ಓಜೋಭೃತ್ ೧೪. ಔರಸ ೧೫. ಅಂತ ೧೬. ಅರ್ಧಗರ್ಭ ೧೭. ಕಪಿಲ ೧೮. ಖಪತಿ ೧೯. ಗರುಡಾಸನ ೨೦. ಘರ್ಮ ೨೧. ಙಸಾರ ೨೨. ಚಾರ್ವಾಂಗ ೨೩. ಛಂದೋಗಮ್ಯ ೨೪. ಜನಾರ್ಧನ ೨೫. ಝೂಟಿತಾರಿ ೨೬. ಞಮ ೨೭. ಟಂಕಿ ೨೮. ಠಕಲ ೨೯. ಡರಕ ೩೦. ಢರಿ ೩೧. ಣಾತ್ಮ ೩೨. ಥಾರ ೩೩. ಥಭ ೩೪. ದಂಡಿ ೩೫. ಧನ್ವಿ ೩೬. ನಮ್ಯ ೩೭. ಪರ ೩೮. ಫಲಿ ೩೯. ಬಲಿ ೪೦. ಭಗ ೪೧. ಮನು ೪೨. ಯಜ್ಞ ೪೩. ರಾಮ ೪೪. ಲಕ್ಷ್ಮೀಪತಿ ೪೫. ವರ ೪೬. ಶಾಂತಸಂವಿತ್ ೪೭. ಷಡ್ಗುಣ ೪೮. ಸಾರಾತ್ಮ ೪೯. ಹಂಸ ೫೦. ಳಾಳುಕ ೫೧. ನೃಹರ್ಯಕ್ಷ (ನೃಸಿಂಹ)

೭. **ಅದೇ:** ಪುಟ. ೧೧

ಅಂತೆಯೇ ಆಯಾಯಾ ಧರ್ಮದ ಧಾರ್ಮಿಕ ಗ್ರಂಥಗಳು ತಾತ್ತ್ವಿಕ ವಿಚಾರಗಳನ್ನು ಒಳಗೊಂಡು ಮೋಕ್ಷ ಮಾರ್ಗದ ದಾರಿಯನ್ನು ಬೋಧಿಸುತ್ತವೆ. ಅಷ್ಟೇ ಅಲ್ಲದೇ ಆಧ್ಯಾತ್ಮಿಕ ಚಿಂತನೆಯ ಜೊತೆಗೆ ದೈನಂದಿನ ಬದುಕಿಗೆ ದಾರಿದೀಪಗಳಾಗಿಯೂ ಈ ಗ್ರಂಥಗಳು ನಿಲ್ಲುತ್ತವೆ. ಅವುಗಳನ್ನೇ ಧರ್ಮಶಾಸ್ತ್ರ ಅಥವಾ ಧಾರ್ಮಿಕಶಾಸ್ತ್ರ ಗ್ರಂಥಗಳೆಂದು ಕರೆದರು. ಧಾರ್ಮಿಕ ಭಾವನೆಗಳನ್ನು, ಆಚರಣೆಗಳನ್ನು ಕಾಯ್ದುಕೊಳ್ಳಲು ಧರ್ಮಗ್ರಂಥಗಳು ಪೂರಕವಾಗಿ ನಿಲ್ಲುತ್ತವೆ. ಆ ಮೂಲಕ ಹಿಂದೂ ಧರ್ಮದಲ್ಲಿ ವೇದ, ಆಗಮ, ಬ್ರಾಹ್ಮಣಕ, ಸಂಹಿತೆ, ಅರಣ್ಯಕ, ಉಪನಿಷತ್ತುಗಳು ರಚನೆಯಾಗಿ, ಅವುಗಳ ಮೂಲಕ ತತ್ತ್ವಾಚರಣೆಗಳನ್ನು ಬೋಧಿಸುತ್ತ ಬಂದವು. "ಧರ್ಮಶಾಸ್ತ್ರವೆಂಬ ಶಬ್ದ ಅನೇಕ ವೇಳೆ 'ಕಾನೂನು ಸಾಹಿತ್ಯ' ಎಂದು ಅನುವಾದಿಸಲ್ಪಟ್ಟಿದೆ. ಆದರೆ ಈ ಶಾಸ್ತ್ರಕ್ಕೆ ವಿಷಯವಾದ 'ಧರ್ಮ' ಶಬ್ದದ ವ್ಯಾಪಕಾರ್ಥವು 'ಕಾನೂನು' ಎಂಬ ಶಬ್ದದ ಅರ್ಥಕ್ಕಿಂತ ವಿಶಾಲವಾಗಿದೆ; ಅದು 'ಮತಧರ್ಮ ಆಚಾರ ಮತ್ತು ರೂಢಿ'ಗಳನ್ನೂ ಒಳಗೊಳ್ಳುತ್ತದೆ. ಧರ್ಮದ ಮೇಲಿನ ಅತ್ಯಂತ ಪ್ರಾಚೀನ ಕೃತಿಗಳೆಂದರೆ 'ಧರ್ಮಸೂತ್ರ'ಗಳು. ಇವುಗಳು ಹಕ್ಕುಬಾಧ್ಯತೆಗಳು, ಆಹಾರನಿಯಮಗಳು, ವಿಶ್ವಸೃಷ್ಟಿಯ ತತ್ತ್ವ, ವಿಶ್ವರಚನಾ ವಿಚಾರ, ಜನ್ಮಾಂತರ ಗತಿಗಳು ಇವೆಲ್ಲವುಗಳನ್ನೂ ಒಳಗೊಂಡಿರುತ್ತವೆ."[೮]

ಅದೇ ರೀತಿಯಾಗಿ ಜೈನಧರ್ಮವು ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದು. ಈ ಧರ್ಮವು ಜಿನನನ್ನು ಆರಾಧಿಸುತ್ತದೆ. "'ಜಿನ' ಎಂದರೆ ರಾಗದ್ವೇಷಗಳನ್ನು ಗೆದ್ದವನು, ಕರ್ಮವನ್ನು ಜಯಿಸಿದ ಪವಿತ್ರಾತ್ಮನು ಎಂದರ್ಥ".[೯] ಜಿನನನ್ನು ಆರಾಧಿಸುವವರು, ಅನುಸರಿಸುವವರು ಜೈನರು. "ಅಂದರೆ 'ಜಿನರಿಂದ ಉಪದೇಶಿಸಲ್ಪಟ್ಟ ಧರ್ಮವೇ ಜೈನ ಧರ್ಮವಾಗಿದೆ'. ಇದನ್ನು ನಿರ್ಗ್ರಂಥ, ಅರ್ಹತ್, ಶ್ರಮಣಧರ್ಮವೆಂಬ ಪರ್ಯಾಯ ಹೆಸರುಗಳಿಂದಲೂ ಕರೆಯಲಾಗಿದೆ. ಜೈನ ಸಂಸ್ಕೃತಿಯ ಪ್ರಾಚೀನತೆ, ಬೆಳವಣಿಗೆ ಹಾಗೂ ತತ್ವಸಿದ್ಧಾಂತಗಳ ಕುರಿತು ಶಾಸ್ತ್ರಕೃತಿಗಳು, ಪುರಾಣಗಳು, ಜೈನ ಮತ್ತು ಜೈನೇತರ ಸಾಹಿತ್ಯಗಳು, ಪುರಾತತ್ವ ಆಕರಗಳು ಹೇರಳವಾದ ಮಾಹಿತಿಯನ್ನು ನೀಡುತ್ತವೆ."[೧೦] ಜಿನನಿಗೆ ಅರ್ಹನ್, ತೀರ್ಥಂಕರ, ಜಿನೇಶ್ವರ, ಪರಮೇಷ್ಠಿ, ವೀತರಾಗ, ಪರಮಾತ್ಮ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಮೊದಲ ತೀರ್ಥಂಕರ ಆದಿನಾಥನಿಂದ ಮಹಾವೀರನವರೆಗೆ ಒಟ್ಟು ಇಪ್ಪತ್ತನಾಲ್ಕು ಜನ ತೀರ್ಥಂಕರರು.

ಜೈನಧರ್ಮವು ಸೃಷ್ಟಿ, ಸ್ಥಿತಿ, ಲಯಗಳನ್ನು ಮತ್ತು ಅದಕ್ಕೆ ಕಾರಣಕರ್ತರನ್ನು ಕುರಿತು ಒಪ್ಪುವುದಿಲ್ಲ. ದೇವರ ಅಸ್ತಿತ್ವವನ್ನು ಒಪ್ಪುವುದಿಲ್ಲ, ದೇವರ ಅವತಾರಗಳಲ್ಲಿ ನಂಬಿಕೆಯಿಲ್ಲ, ಸ್ವಯಂ

---

೮. ಮಾರಿಸ್ ವಿಂಟರ್ನಿಟ್ಸ್ : ಡಾ. ಕೆ. ಕೃಷ್ಣಮೂರ್ತಿ (ಭಾಷಾಂತರ); **ಭಾರತೀಯ ಸಾಹಿತ್ಯ ಚರಿತ್ರೆ ಸಂಪುಟ ೩ – ಭಾಗ ೨ ಶಾಸ್ತ್ರೀಯ ಸಾಹಿತ್ಯ** ; ಪುಟ. ೧೪೫

೯. ವಿದ್ವಾನ್ ಎಚ್. ಎನ್. ರಾಘವೇಂದ್ರಾರ್ಯ ; **ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ** : ಪುಟ.೨೨೭

೧೦. ಡಾ. ಭರಮಪ್ಪಾ ಎನ್. ಭಾವಿ : **ಶ್ರೀಗಂಧ** : ಪು.೦೧

ಸಾಧನೆಯಿಂದ ಜೀವಾತ್ಮ ಹಂತ ಹಂತವಾಗಿ ಅರ್ಹಂತನಾಗುವ, ಪರಮಾತ್ಮನಾಗುವ ವಿಧಾನ ವಿವರಣೆಗಳ ಬೋಧನೆಯೇ ಜೈನಧರ್ಮದ ಮುಖ್ಯ ತಿರುಳಾಗಿದೆ. 'ಅಹಿಂಸಾ ಪರಮೋಧರ್ಮಃ' ಹಾಗೂ 'ಬದುಕು, ಬದುಕಲು ಬಿಡು' ಎಂಬ ವಾಕ್ಯಗಳಲ್ಲಿ ಜೈನಧರ್ಮದ ಸಾರ ಅಡಗಿದೆ.

"ಈ ಮತವು ತೀರ್ಥಂಕರರಿಂದ ಸ್ಥಾಪಿತವಾದುದಲ್ಲ. ಅದು ಅನಾದಿ ಕಾಲದಿಂದಲೂ ಬಂದಿದ್ದು, ಇವರು ತಮ್ಮ ತಮ್ಮ ಕಾಲಕ್ಕೆ ಆ ಧರ್ಮವನ್ನು ಪ್ರವರ್ಧನೆಗೆ ತಂದವರು."[೧೧] ಹೀಗೆ ಪ್ರವರ್ಧನೆಗೆ ಬಂದ ಜೈನಧರ್ಮವು ಕೇವಲಜ್ಞಾನ ಪ್ರಾಪ್ತಿಯಾದ ನಂತರ ತೀರ್ಥಂಕರರ ಉಪದೇಶಗಳನ್ನು, ಸಿದ್ಧಾಂತಗಳನ್ನು, ತತ್ತ್ವಗಳನ್ನು ೧೨ ಅಂಗಗಳು [೧೨] ಹಾಗೂ ೧೪ ಪೂರ್ವಗಳ[೧೩] ರೂಪದಲ್ಲಿ ಸಂಗ್ರಹಿಸಿತು. ಅವುಗಳೇ ಜೈನಾಗಮಗಳೆಂದು ಪ್ರಸಿದ್ಧಿಯಾದವು.

ಹೀಗಿರುವ ಜೈನಾಗಮಗಳನ್ನು ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ ಹಾಗೂ ದ್ರವ್ಯಾನುಯೋಗ ಎಂದು ನಾಲ್ಕು ರೀತಿಯಲ್ಲಿ ಭಾಗಗಳನ್ನು ಮಾಡಲಾಗಿದೆ. ಅವುಗಳನ್ನು ದೃಷ್ಟಿವಾದದ ಭೇದಗಳೆಂದು ಕರೆಯಲಾಗುತ್ತದೆ.

೧. **ಪ್ರಥಮಾನುಯೋಗ:** ಇದರಲ್ಲಿ ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ಬಲದೇವರು, ೯ ವಾಸುದೇವರು, ೯ ಪ್ರತಿವಾಸುದೇವರು ಹೀಗೆ ಒಟ್ಟು ೬೩ ಶಲಾಕಾಪುರುಷರ ಚರಿತ್ರೆಯನ್ನು ವಿವರಿಸಲಾಗಿದೆ. ಇದು ತೀರ್ಥಂಕರ ಪುರಾಣ, ಚಕ್ರವರ್ತಿ ಚರಿತ, ವಿದ್ಯಾಧರರ ವರ್ಣನೆ, ವಾಸುದೇವ ಆಖ್ಯಾನ, ಚಾರಣ ಕೀರ್ತನ, ಪ್ರಜ್ಞಾಶ್ರವಣ ನಿರೂಪಣೆ, ಕುರುವಂಶ ಪ್ರಶಂಸೆ,

---

೧೧. ವಿದ್ವಾನ್ ಎಚ್. ಎನ್. ರಾಘವೇಂದ್ರಾರ್ಯ : **ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ** : ಪುಟ.೨೨೭

೧೨. ಡಾ. ಸರಸ್ವತಿ ವಿಜಯಕುಮಾರ, ಭಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ.೧೭೮

ದ್ವಾದಶಾಂಗಗಳು:

೧) ಆಚಾರಾಂಗ : ಮುನಿಗಳ ಆಚಾರಗಳಾದ ಆಹಾರ ಸ್ವೀಕಾರ, ಕುಳಿತುಕೊಳ್ಳುವುದು, ಮಲಗುವುದು ಮೊದಲಾದ ವಿಧಿಗಳ ವರ್ಣನೆ.

೨) ಸೂತ್ರಕೃತಾಂಗ : ಜ್ಞಾನ, ವಿನಯಾದಿಗಳು, ಸ್ವಮತ–ಪರಮತಗಳ ವರ್ಣನೆ.

೩) ಸ್ಥಾನಾಂಗ : ಒಂದರಿಂದ ಅನೇಕ ಭೇದರೂಪ ಜೀವ ಪುದ್ಗಲಾದಿ ವರ್ಣನೆ.

೪) ಸಮವಾಯಾಂಗ : ಶಾಸ್ತ್ರಗಳ ಅಂಗೋಪಾಂಗಗಳ ನಿತ್ಯ ಸಂಬಂಧ ಜ್ಞಾನ.

೫) ವ್ಯಾಖ್ಯಾಪ್ರಜ್ಞಪ್ತಂಗ : ಗಣಧರರಿಂದ ಕೇಳಲಾದ ೬೦ ಸಾವಿರ ಪ್ರಶ್ನೆಗಳಿಗೆ ತೀರ್ಥಂಕರರು ಉತ್ತರಿಸಿದ ವರ್ಣನೆ.

೬) ಜ್ಞಾತೃಧರ್ಮ ಕಥಾಂಗ : ಜ್ಞಾತಾ ಎಂಬ ಗಣಧರ ದೇವನ ಪ್ರಶ್ನೆಗಲ ಅನುಸಾರವಾಗಿ ಉತ್ತರ ರೂಪವಾದ ಧರ್ಮಕಥೆ.

೭) ಉಪಾಸಕಾಧ್ಯಯನಾಂಗ : ಶ್ರಾವಕರು ಆಚರಿಸುವ ಕ್ರಿಯೆಯನ್ನು ತಿಳಿಸುವ ಶಾಸ್ತ್ರ.

೮) ಅಂತಕೃದ್ದಶಾಂಗ : ತೀರ್ಥಂಕರರ ಕಾಲದಲ್ಲಿ ಆದ ಮೋಕ್ಷಗಾಮಿಗಳ ವರ್ಣನೆ.

೯) ಅನುತ್ತರೋಪಪಾದಿಕ ದಶಾಂಗ : ತೀರ್ಥಂಕರರ ಕಾಲದಲ್ಲಿ ತಪಾಚರಣೆ ಮಾಡಿದ ಮುನಿಗಳ ವರ್ಣನೆ.

೧೦) ಪ್ರಶ್ನ ವ್ಯಾಕರಣಾಂಗ : ಆಕ್ಷೇಪಣೀಯ, ವಿಕ್ಷೇಪಣೀಯ, ಸಂವೇದನೀಯ, ನಿರ್ವೇದನೀಯ ಎಂಬ ನಾಲ್ಕು ಬಗೆಯ ಧರ್ಮಕಥೆಗಳ ವರ್ಣನೆ. ಹಾಗೂ ಅನೇಕ ಪ್ರಶ್ನೆಗಳಿಗೆ ಉತ್ತರಿಸುವುದು.

೧೧) ವಿಪಾಕ ಸೂತ್ರಾಂಗ : ಕರ್ಮದ ಬಂಧ, ಉದಯ, ಫಲ ಇತ್ಯಾದಿಗಳ ವರ್ಣನೆ.

೧೨) ದೃಷ್ಟಿವಾದಾಂಗ : ಪರಿಕರ್ಮ, ಸೂತ್ರ, ಪ್ರಥಮಾನುಯೋಗ, ಪೂರ್ವಗತ, ಚೂಲಿಕಾ ಅಂಶಗಳ ಮೂಲಕ ಮಿಥ್ಯಾವಾದಗಳ ನಿರಾಕರಣೆಯ ವಿವರಣೆ.

೧೩. **ಅದೇ** ; ಪುಟ.೨೧೯ **ಹದಿನಾಲ್ಕು ಪೂರ್ವಗಳು:** ೧) ಉತ್ಪಾತ ೨) ಆಗ್ರಾಯಣೀಯ ೩) ವೀರ್ಯಪ್ರವಾದ ೪) ಅಸ್ತಿನಾಸ್ತಿ ಪ್ರವಾದ ೫) ಜ್ಞಾನಪ್ರವಾದ ೬) ಸತ್ಯಪ್ರವಾದ ೭) ಆತ್ಮಪ್ರವಾದ ೮) ಕರ್ಮಪ್ರವಾದ ೯) ಪ್ರತ್ಯಾಖ್ಯಾನ ೧೦) ವಿದ್ಯಾನುವಾದ ೧೧) ಕಲ್ಯಾಣ ೧೨) ಪ್ರಾಣಾವಾಯ ೧೩) ಕ್ರಿಯಾವಿಶಾಲ ೧೪) ಲೋಕಬಿಂದುಸಾರ

ಹರಿವಂಶೋದಾಹರಣ, ಇಕ್ಷ್ವಾಕುವಂಶ ಪ್ರಕಟಣೆ, ಕಾಶೀವಂಶ ಪ್ರಕಾಶನ, ವಾದಿಭೇದನ ಪ್ರತಿಪಾದನೆ, ನಾಥವಂಶ ಪ್ರರೂಪಣೆ ಎಂದು ಹನ್ನೆರಡು ವಿಧಗಳಲ್ಲಿದೆ.[೧೪]

೨. **ಕರಣಾನುಯೋಗ**: ಇದು ಮೂರು ಲೋಕಗಳ ಸ್ವರೂಪ, ವಿವರಣೆಗಳನ್ನು ಒಳಗೊಂಡಿರುವ ಅನುಯೋಗ. ತ್ರಿಲೋಕಸಾರದಂತಹ ಗ್ರಂಥಗಳು ಕರಣಾನುಯೋಗಕ್ಕೆ ಸೇರುತ್ತವೆ. ಇದರಲ್ಲಿ ಮೂರು ಲೋಕದೊಳಗಿನ ಸ್ಥಿತಿಗತಿಗಳನ್ನು, ಆಗುಹೋಗುಗಳನ್ನು, ತೀರ್ಥಂಕರ, ಚಕ್ರವರ್ತಿ, ದೇವ, ನಾರಕಿ, ಮೊದಲಾದವರ ಆಯುಷ್ಯ, ಉತ್ಸೇಧ, ಸುಖ, ದುಃಖ, ವೈಭವ, ಭೋಗಭೂಮಿ, ಕರ್ಮಭೂಮಿ ಅವಸ್ಥೆಗಳನ್ನು ಆರು ಕಾಲಗಳ ಪರಿವರ್ತನೆ ಮೊದಲಾದ ವಿಷಯಗಳನ್ನು ಒಳಗೊಂಡ ಶಾಸ್ತ್ರಗಳೆಲ್ಲವೂ ಕರಣಾನುಯೋಗವೆನಿಸುತ್ತದೆ.[೧೫]

೩. **ಚರಣಾನುಯೋಗ**: ಇದರಲ್ಲಿ ಶ್ರಾವಕರು ಮತ್ತು ಮುನಿಗಳ ಆಚಾರವನ್ನು ತಿಳಿಸಲಾಗಿದೆ. ಉಪಾಸಕಾಧ್ಯಯನದಂತಹ ಗ್ರಂಥಗಳಲ್ಲಿ ಶ್ರಾವಕಧರ್ಮದ ಮೂಲಾಚಾರ, ಭಗವತೀ ಆರಾಧನಾದಂತಹ ಗ್ರಂಥಗಳಲ್ಲಿ ಮುನಿಧರ್ಮವನ್ನು ಪ್ರಮುಖವಾಗಿ ಹೇಳಲಾಗಿದೆ.[೧೬]

೪. **ದ್ರವ್ಯಾನುಯೋಗ**: ಇದರಲ್ಲಿ ಜೀವಾದಿ ಷಡ್ದ್ರವ್ಯಗಳನ್ನೂ, ಸಪ್ತತತ್ತ್ವಗಳನ್ನೂ ನಿರೂಪಿಸಲಾಗಿದೆ.[೧೭]

ಭಾರತೀಯ ಧರ್ಮ–ಸಂಸ್ಕೃತಿಯ ಮೂಲದಲ್ಲಿ ಆಳವಾಗಿ ಬೇರೂರಿರುವ ಜೈನಧರ್ಮದ ಚಿಂತನೆಗಳನ್ನು, ತತ್ತ್ವಗಳನ್ನು, ಬೋಧನೆಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಾಗ ಜೈನಧರ್ಮದ ವಿವೇಚನಾಯುಕ್ತ ಪರಿಭಾಷೆಗಳು ಧಾರ್ಮಿಕವಾಗಿಯೂ ಲೌಕಿಕವಾಗಿಯೂ ತಮ್ಮ ಮೇರೆಯನ್ನು ಮೀರಿ ನಿಲ್ಲುತ್ತವೆ. ಇಲ್ಲಿ ತಾತ್ತ್ವಿಕ ಸತ್ವವನ್ನು ತುಂಬಿಕೊಂಡಿರುವ ಜೈನ ಸಾಹಿತ್ಯವು ಪ್ರಾತಿನಿಧಿಕವಾಗುತ್ತದೆ. ನಿಲ್ಲುತ್ತದೆ. ಉದ್ದೀಪಿತ ಭೋಗತ್ವವು ಪರಮೋಚ್ಚ ಮಟ್ಟದಲ್ಲಿರುವಾಗಲೇ ವಿರಾಗತ್ವದ ಅನಾವರಣ ಜೈನಕಾವ್ಯಗಳ ವೈಶಿಷ್ಟ್ಯವಾಗಿದೆ. 'ಆದಿಪುರಾಣದ ನೀಲಾಂಜನೆಯ ನೃತ್ಯ', 'ಯಶೋಧರ ಚರಿತೆಯ ಅಷ್ಟಾವಂಕ ಅಮೃತಮತಿ', 'ಅಜಿತಪುರಾಣದ ಚಂಡಶಾಸನ' ಇದಕ್ಕೆ ಉತ್ತಮ ನಿದರ್ಶನಗಳು.

ಸಮಂತಭದ್ರ, ಕುಂದಕುಂದಾಚಾರ್ಯ, ಜಿನಸೇನ, ಗುಣಭದ್ರಾಚಾರ್ಯರಂತಹ ಅಪೂರ್ವ ಆಚಾರ್ಯ ಪರಂಪರೆ ಜಿನಧರ್ಮದಲ್ಲಿದೆ. ಇದನ್ನೇ ಶ್ರಮಣ ಪರಂಪರೆ ಎಂತಲೂ ಕರೆಯಲಾಗುತ್ತದೆ. ಹೀಗೆ ತೀರ್ಥಂಕರನ ಅನುಯಾಯಿಗಳಾಗಿ ಜಿನತ್ವವನ್ನು ಸಾಧಿಸಲು ಮುನ್ನಡೆದು ಆಸ್ತಿ–ಪಾಸ್ತಿ, ಮನೆ–ಮಠ, ಬಂಧು ಸಂಬಂಧಗಳನ್ನು ಕಳಚಿಕೊಂಡು ದೀಕ್ಷಿತರಾಗಿ ವೈರಾಗ್ಯ ಸಾಧನೆಗೆ ತೊಡಗಿದ ಮುನಿಗಳು ಒಂದುಕಡೆ. "ಜಿನತ್ವದ ತತ್ತ್ವಗಳನ್ನು ಪಾಲಿಸಿಕೊಂಡು ಜೈನಧರ್ಮದ ಪರಿಪಾಲನೆ

---

೧೪. ಡಾ. ಸರಸ್ವತಿ ವಿಜಯಕುಮಾರ, ಭಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೨೨೫

೧೫. **ಅದೇ** : ಪುಟ. ೯೫

೧೬. **ಅದೇ** : ಪುಟ. ೧೩೨

೧೭. **ಅದೇ** : ಪುಟ. ೧೭೫

ಮಾಡುತ್ತ ಯಾವುದೇ ಸಂಬಂಧ, ಆಸ್ತಿ–ಪಾಸ್ತಿ, ಆಸೆ–ಆಕಾಂಕ್ಷೆಗಳನ್ನು ತೊರೆಯದೇ ಕೌಟುಂಬಿಕ ಜೀವನ ನಡೆಸುವವರು ಇನ್ನೊಂದು ಕಡೆ. ಹೀಗಾಗಿ ತಾತ್ತ್ವಿಕ ಅಂಶಗಳನ್ನೊಳಗೊಂಡ ಜೈನಧರ್ಮದ ಅನುಯಾಯಿಗಳನ್ನು 'ಮುನಿಗಳು' ಹಾಗೂ 'ಶ್ರಾವಕರು' ಎಂದು ಭಿನ್ನವಾಗಿಸಲಾಯಿತು. ಅದರ ತತ್ತ್ವ ಪರಿಪಾಲನೆಯ ಆಯಕಟ್ಟಿನಲ್ಲಿ 'ಮುನಿಧರ್ಮ' ಹಾಗೂ 'ಶ್ರಾವಕಧರ್ಮ'ಗಳೆಂದು ವಿಭಜನೆಯಾದವು".[೧೮]

ಈ ಅಂಶಗಳ ಹಿನ್ನೆಲೆಯಲ್ಲಿ ನೋಡಿದಾಗ ಅನೀಶ್ವರತ್ವದ ನೆಲೆಯಲ್ಲಿರುವ ಜೈನಧರ್ಮವು ಕರ್ಮಸಿದ್ಧಾಂತದ ಮೂಲದಲ್ಲಿ ಭದ್ರವಾಗಿರುವುದು. ಆದರೆ ಎಲ್ಲೋ ಒಂದು ಕಡೆಗೆ ಈಶ್ವರತ್ವವನ್ನು ಒಪ್ಪುವ ಅಂಶ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿರುವುದು ಕಾಣಬರುತ್ತದೆ. ಅದಕ್ಕಾಗಿಯೇ 'ಶ್ರಮಣಾಚಾರ'ಗಳು ಮತ್ತು 'ಶ್ರಾವಕಾಚಾರ'ಗಳು ಎಂಬ ಭಿನ್ನತೆಗಳನ್ನು ಜಿನಧರ್ಮವು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು. ಜೈನ ಧರ್ಮವು ತನ್ನದೇ ಆದ ಅತ್ಯಮೂಲ್ಯ ವೈಚಾರಿಕ ನೆಲೆಗಳಲ್ಲಿ ಇಂದಿಗೂ ಗಟ್ಟಿತನವನ್ನು ಉಳಿಸಿಕೊಂಡು ನಿಂತಿದೆ.

ಈ ಧರ್ಮದ ಸಾರವನ್ನು ತಿಳಿಸುವ ಅನೇಕ ಕೃತಿಗಳು ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ರಚಿತವಾಗಿವೆ. ಅಂತೆಯೇ ಕನ್ನಡದಲ್ಲಿಯೂ ಜೈನಧರ್ಮದ ತಾತ್ತ್ವಿಕ ವಿಚಾರಗಳನ್ನು ತಿಳಿಸುವ ಹಲವಾರು ಶಾಸ್ತ್ರಗ್ರಂಥಗಳು ರಚಿತವಾಗಿವೆ.

> **'ಜಿನಧರ್ಮಾವಾಸಮಾದತ್ತಮಳವಿನಯದಾಗಾರಮಾದತ್ತು ಪದ್ಮಾ**
> **ಸನನಿರ್ಪಾ ಪದ್ಮಮಾದತ್ತತಿವಿಶದ ಯಶೋಧಾಮಮಾದತ್ತು ವಿದ್ಯಾ**
> **ಧನಜನ್ಮಸ್ಥಾನಮಾದತ್ತಸಮ ತರಳ ಗಂಭೀರ ಸದ್ಗೇಹಮಾದ**
> **ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳಸೆಗುಂ ಚಾರುಕರ್ಣಾಟದೇಶಂ ॥'**[೧೯]

ಈ ವರ್ಣನೆಯನ್ನು ನೋಡಿದಾಗ ಅತಿಶಯೋಕ್ತಿಯೆನಿಸದೇ ಸತ್ಯವೆನಿಸುತ್ತದೆ. "ಜೈನಧರ್ಮವು ಕರ್ನಾಟಕದಲ್ಲಿ ಕ್ರಿಸ್ತ ಶಕ ಪೂರ್ವದಿಂದಲೂ ಕರ್ನಾಟಕದಲ್ಲಿ ಪ್ರಚಲಿತದಲ್ಲಿತ್ತು. ಈ ಪ್ರಾಂತವು ದಿಗಂಬರ ಸಂಪ್ರದಾಯಕ್ಕೆ ಮುಖ್ಯ ನೆಲೆಯಾಗಿದೆ. ಪ್ರಾಚೀನ ಕಾಲದಲ್ಲಿ ಉತ್ತರ ಭಾರತದಲ್ಲಿ ದೀರ್ಘಾವಧಿ ಬರಗಾಲದ ಛಾಯೆ ಮೂಡಿದುದರಿಂದ ಭದ್ರಬಾಹು ಸ್ವಾಮಿಗಳು ಅವರ ಶಿಷ್ಯರಾದ ಚಂದ್ರಗುಪ್ತ ಮೌರ್ಯನೊಂದಿಗೆ ಸಂಘಸಹಿತ 'ಕಟವಪ್ರ' ಅಥವಾ 'ಕಳ್ವಪ್ಪು' (ಶ್ರವಣಬೆಳಗೊಳ) ಎಂಬಲ್ಲಿಗೆ ಬಂದು ನೆಲೆಸಿ, ಕೊನೆಗಾಲದಲ್ಲಿ ಸಲ್ಲೇಖನ ವ್ರತಧಾರಿಗಳಾಗಿ ಸಮಾಧಿಯನ್ನು ಹೊಂದಿದರೆಂದು ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಮೌರ್ಯರ ತರುವಾಯ ಆಂಧ್ರದ ರಾಜರು ಆಳಿದರು ಮತ್ತು ಜೈನಧರ್ಮವನ್ನು ಪ್ರೋತ್ಸಾಹಿಸಿದರು. ಇವರ ನಂತರ ಕದಂಬರೂ, ಪಲ್ಲವರೂ ಕರ್ಣಾಟಕವನ್ನಾಳಿದರು. ಕದಂಬರು ಜೈನರಿಗೆ ದಾನಕೊಟ್ಟ ಕುರಿತು

೧೮. ಡಾ. ಎಂ. ಎ. ಜಯಚಂದ್ರ (ಅನು) : **ಸವಣಸುತ್ತಂ ಜೈನಧರ್ಮದ ಪ್ರಾತಿನಿಧಿಕ ಗ್ರಂಥ** : ಪುಟ.xx
೧೯. ಆರ್. ನರಸಿಂಹಾಚಾರ್ (ಸಂ) : **ಶಾಸನ ಪದ್ಯಮಂಜರಿ** : ಪು.೨೫೦

ಹಲವಾರು ಶಿಲಾಶಾಸನಗಳು ದೊರೆಯುತ್ತವೆ. ಪ್ರಾಚೀನ ಪಲ್ಲವರೂ ಜೈನರಾಗಿರುವ ಸಂಭವವೂ ಇದೆ." [೨೦] ಎಂದು ಮಿರ್ಜಿ ಅಣ್ಣಾರಾಯರು ಅಭಿಪ್ರಾಯಪಡುತ್ತಾರೆ. ತದನಂತರದಲ್ಲಿ ಕರ್ನಾಟಕವನ್ನಾಳಿದ ಗಂಗರ ಕಾಲವನ್ನು ಜೈನಧರ್ಮವು ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದ ಕಾಲಘಟ್ಟವೆಂದರೆ ತಪ್ಪಾಗಲಾರದು. "ಗಂಗರಾಜರು ಜೈನಧರ್ಮದ ಅನುಯಾಯಿಗಳು. ಇವರು ಮೈಸೂರಿನ ಮಧ್ಯ ದಕ್ಷಿಣ ಭಾಗಗಳಲ್ಲಿ ತಮ್ಮ ರಾಜ್ಯವನ್ನು ಆರಂಭಿಸಿದರು. ಕರ್ನಾಟಕದ ರಾಜ್ಯವನ್ನು ಅತ್ಯುನ್ನತ ಶಿಖರಕ್ಕೇರಿಸಲು ಗಂಗರು ಕಾರಣರಾದರು."[೨೧]

ಇವರ ಕಾಲದಲ್ಲಿ ಜೈನಧರ್ಮವು ಕನ್ನಡ ನಾಡಿನುದ್ದಕ್ಕೂ ಉಜ್ವಲ ಬೆಳಕನ್ನು ಕಂಡಿತು. ಜೈನಧರ್ಮಕ್ಕೆ ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಸಂಪೂರ್ಣ ಬೆಂಬಲ ಸಿಕ್ಕ ಕಾಲಘಟ್ಟವದು. ಕಾಲಾಂತರದಲ್ಲಿ ಕನ್ನಡ ನೆಲವನ್ನಾಳಿದ ಹೊಯ್ಸಳ, ರಾಷ್ಟ್ರಕೂಟ, ಬದಾಮಿ ಚಾಲುಕ್ಯರು, ಕಳಚೂರಿಗಳು, ಕಲ್ಯಾಣದ ಚಾಲುಕ್ಯರು, ವಿಜಯನಗರದರಸರು ಮುಂತಾದ ರಾಜಮನೆತನಗಳ ಕಾಲಾವಧಿಯಲ್ಲಿ ಜೈನಧರ್ಮವು ಸಾಕಷ್ಟು ಏರಿಳಿತಗಳನ್ನು ಕಾಣುತ್ತದೆ. ಈ ಸಂದರ್ಭಗಳಲ್ಲಿ ರಾಜಾಶ್ರಯದಲ್ಲಿಯೂ, ಧರ್ಮದ ಆಶ್ರಯದಲ್ಲಿಯೂ, ವ್ಯಕ್ತಿಗಳ ಆಶ್ರಯದಲ್ಲಿಯೂ ಹಾಗೂ ವ್ಯಕ್ತಿಗತವಾಗಿಯೂ ಜೈನ ಸಾಹಿತ್ಯವು ರಚನೆಯಾಗುತ್ತದೆ. ಅದನ್ನೇ ಅಲಂಕಾರಿಕರು ಪ್ರಭುಸಮ್ಮಿತ, ಮಿತ್ರಸಮ್ಮಿತ, ಕಾಂತಾಸಮ್ಮಿತಗಳೆಂದು ಮೂರು ರೀತಿಯಲ್ಲಿ ವಿಭಾಗಿಸುತ್ತಾರೆ.

"ಹೀಗೆ ಮಾಡಬೇಕು, ಹೀಗೆ ಮಾಡಕೂಡದು ಎಂದು ಕರ್ತವ್ಯಾಕರ್ತವ್ಯಗಳನ್ನು ವಿಧಿಸುವ ಮತ್ತು ನಿಷೇಧಿಸುವ ವೇದ ಶಾಸ್ತ್ರಾದಿಗಳು 'ಪ್ರಭುಸಮ್ಮಿತ' (ಶಬ್ಧಪ್ರಧಾನ). ನಮ್ಮ ಬದುಕಿನ ಸಾಧಕ ಬಾಧಕಗಳು ಕಂಡು ಅರಿಯುವಂತೆ ಕಥೆಗಳನ್ನು ರಸಪ್ರಾಧಾನ್ಯವಿಲ್ಲದೆ ಹೇಳಿ, ನೀತಿಯನ್ನು ಬೋಧಿಸುವ ಪುರಾಣಾದಿಗಳು 'ಮಿತ್ರಸಮ್ಮಿತ' (ಅರ್ಥಪ್ರಧಾನ). ಮನಸ್ಸಿಗೆ ಸಂತೋಷವಾಗುವ ವಿಷಯಗಳನ್ನು ರಮಣೀಯವಾದ ರೀತಿಯಲ್ಲಿ ಹೇಳುವುದೇ 'ಕಾಂತಾಸಮ್ಮಿತ' (ರಸಪ್ರಧಾನ)."[೨೨] ಪ್ರಸ್ತುತ ಶಾಸ್ತ್ರಸಾಹಿತ್ಯವು ಪ್ರಭುಸಮ್ಮಿತದ ಭಾಗವಾಗುತ್ತದೆ. ಕನ್ನಡ ಕಾವ್ಯ ರಚನೆಯಲ್ಲಿ ತೊಡಗಿಸಿಕೊಂಡ ಬಹುತೇಕ ಜೈನ ಕವಿಗಳು ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದರನ್ನು ಸ್ಮರಿಸಿದ್ದಾರೆ. ಅಂತೆಯೇ ಆದಿಮಹಾಕವಿ ಪಂಪನು ತನ್ನ ಆದಿಪುರಾಣದ ಆರಂಭದಲ್ಲಿ :

"ಶ್ರೀಮತ್ ಸಮಂತಭದ್ರ
ಸ್ವಾಮಿಗಳ ಜಗತ್ಪ್ರಸಿದ್ಧ ಕವಿಪರಮೇಷ್ಠಿ
ಸ್ವಾಮಿಗಳ ಪೂಜ್ಯಪಾದ
ಸ್ವಾಮಿಗಳ ಪದಂಗಳೀಗೆ ಶಾಶ್ವತ ಪದಮಂ"[೨೩] (ಆದಿಪುರಾಣ ೧.೧೧)

---

೨೦. ಮಿರ್ಜಿ ಅಣ್ಣಾರಾಯ : **ಜೈನಧರ್ಮ** : ಪುಟ. ೧೦೨
೨೧. **ಅದೇ :** ಪು.೧೦೩
೨೨. ವಿ. ಸೀತಾರಾಮಯ್ಯ : **ಶಾಸ್ತ್ರ ಸಾಹಿತ್ಯ** : ಪು. ೬, ೭.
೨೩. ಕೆ. ಜಿ. ಕುಂದಣಗಾರ, ಎ. ಪಿ. ಚೌಗುಲೆ (ಸಂ) : **ಆದಿಪುರಾಣ** : ಪುಟ.೦೩

ಎಂದು ಸ್ಮರಿಸಿದ್ದಾನೆ. ಸಮಂತಭದ್ರರು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ರಚಿಸಿದ ಗ್ರಂಥಗಳಿಗೆ ಕನ್ನಡದಲ್ಲಿ ವ್ಯಾಖ್ಯಾನಗಳು ರಚಿತವಾಗಿವೆ. ಆದರೆ ಅವರು ಕನ್ನಡದಲ್ಲಿ ಗ್ರಂಥ ರಚನೆ ಮಾಡಿದುದರ ಬಗೆಗೆ ಯಾವುದೇ ಮಾಹಿತಿ ಲಭ್ಯವಿಲ್ಲ. ಇನ್ನುಳಿದಂತೆ ಕವಿಪರಮೇಷ್ಠಿಯು 'ತ್ರಿಷಷ್ಠಿ ಶಲಾಕಾ ಪುರುಷ' ಹಾಗೂ 'ಕಲ್ಯಾಣಕಾರಕ' ಎಂಬ ಗ್ರಂಥಗಳನ್ನೂ, ಪೂಜ್ಯಪಾದರು 'ಜೈನೇಂದ್ರ ವ್ಯಾಕರಣ' ಎಂಬ ಕೃತಿಗಳನ್ನು ಬರೆದರೂ ಇವರು ಕನ್ನಡದಲ್ಲಿ ಕೃತಿ ರಚಿಸಿದಂತೆ ತೋರುವುದಿಲ್ಲ. ಆದರೆ ಕನ್ನಡ ಜೈನ ಸಾಹಿತ್ಯದ ಮೇಲೆ ಈ ಮೂವರ ಪ್ರಭಾವ ಮಾತ್ರ ಅಚ್ಚಳಿಯದಂತಿದೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಶಾಸ್ತ್ರಸಾಹಿತ್ಯದ ವ್ಯಾಪಕತೆಯನ್ನು ವ್ಯಾಕರಣಕಾರನಾದ ಭಟ್ಟಾಕಳಂಕನು ತನ್ನ ಶಬ್ದಾನುಶಾಸನ ಕೃತಿಯಲ್ಲಿ "ಈ ಕರ್ಣಾಟಕ ಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಾದುದಲ್ಲ. ಏಕೆಂದರೆ ಈ ಭಾಷೆಯಲ್ಲಿಯೇ ತುಂಬಲೂರಾಚಾರ್ಯನು ರಚಿಸಿದ ತೊಂಭತ್ತಾರು ಸಾವಿರ ಗ್ರಂಥ ಸಂಖ್ಯೆಯುಳ್ಳ 'ಚೂಡಾಮಣಿ'ಯೆಂಬ ತತ್ತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನವು ದೊರೆಯುತ್ತದೆ ಎಂದು ಹೇಳಿದ್ದಾನೆ." [೨೪] ಈ ಶಾಸ್ತ್ರಗ್ರಂಥವು ಅನುಪಲಬ್ಧವಾಗಿರುವ ಕನ್ನಡ ಸಾಹಿತ್ಯಕ್ಕೆ ತುಂಬಲಾರದ ನಷ್ಟವಾಗಿದೆ.

ಧಾರ್ಮಿಕ ಶಾಸ್ತ್ರಕವಿಗಳು:

"ಹತ್ತು ಮತ್ತು ಹನ್ನೊಂದನೇ ಶತಮಾನಗಳಲ್ಲಿ ಪಂಪ, ರನ್ನ, ಪೊನ್ನ, ಜನ್ನರಂತಹ ಮೇರು ಕವಿಗಳು ತಮ್ಮ ಧಾರ್ಮಿಕ ಕಾವ್ಯಗಳಲ್ಲಿ ತಮ್ಮ ಧರ್ಮವನ್ನು ಅನುಚಾನೂಚವಾಗಿ ಪ್ರತಿಪಾದನೆ ಮಾಡಿದುದರಿಂದಾಗಿಯೋ ಅಥವಾ ಆ ಕಾಲದಲ್ಲಿ ಜೈನಧರ್ಮವು ಪ್ರವರ್ಧಮಾನ ಸ್ಥಿತಿಯನ್ನು ತಲುಪಿದ ಕಾರಣಕ್ಕಾಗಿಯೋ ಆ ೨-೩ ಶತಮಾನಗಳವರೆಗೆ ಜೈನಾಗಮಶಾಸ್ತ್ರ ಕೃತಿಗಳನ್ನು ರಚಿಸುವ ಪ್ರಮೇಯವೇ ಬರಲಿಲ್ಲವೇನೋ" [೨೫] ಎಂಬುದು ಎಂ. ವಿ. ಸೀತಾರಾಮಯ್ಯನವರ ಅಭಿಪ್ರಾಯವಾಗಿದೆ. ಅವರ ಮಾತಿನಂತೆ ಸಾಹಿತ್ಯ ಚರಿತ್ರೆಯನ್ನು ಗಮನಿಸಿದಾಗ ೧೧ನೇ ಶತಮಾನ ಹಾಗೂ ನಂತರದ ಕಾಲಾವಧಿಯಲ್ಲಿಯೇ ಜೈನ ಧಾರ್ಮಿಕ ಶಾಸ್ತ್ರಗ್ರಂಥಗಳು ರಚನೆಯಾದುದು ಎಂಬುದು ವೇದ್ಯವಾಗುತ್ತದೆ. ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಆರ್. ನರಸಿಂಹಾಚಾರ್ಯ ವಿರಚಿತ 'ಕರ್ಣಾಟಕ ಕವಿಚರಿತೆ', ಹಾಗೂ ಪ್ರೊ. ಎಂ. ವಿ. ಸೀತಾರಾಮಯ್ಯನವರ 'ಶಾಸ್ತ್ರ ಸಾಹಿತ್ಯ' ಈ ಎರಡೂ ಗ್ರಂಥಗಳನ್ನು ಆಧರಿಸಿ ೧೦ನೇ ಶತಮಾನದಿಂದ ೧೬ನೇ ಶತಮಾನದ ಅವಧಿಯ ಕನ್ನಡದ ಪ್ರಮುಖ ಜೈನ ಶಾಸ್ತ್ರ ಕವಿಗಳನ್ನು ಗುರುತಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಚಾವುಂಡರಾಯನ 'ತ್ರಿಷಷ್ಠಿ ಶಲಾಕಾ ಪುರುಷ', ಪಂಪನ 'ಆದಿಪುರಾಣ', ರನ್ನನ 'ಅಜಿತಪುರಾಣ', ಪೊನ್ನನ 'ಶಾಂತಿಪುರಾಣ' ಮುಂತಾದವು ಜೈನ ಧಾರ್ಮಿಕ ಗ್ರಂಥಗಳು. ಆದರೆ ಗ್ರಂಥವು ಒಂದು ಕೃತಿಯನ್ನು ರಚಿಸುವಾಗ ಕವಿಯ ಉದ್ದಿಷ್ಟವನ್ನು

೨೪. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರ ಸಾಹಿತ್ಯ** : ಪುಟ. ೨೩೪

೨೫. ಅದೇ : ಪುಟ. ೨೩೬

ಅನುಸರಿಸಿ ರಚಿತವಾಗಿರುತ್ತದೆ. ಅಂತೆಯೇ ಈ ಕೃತಿಗಳು ಧಾರ್ಮಿಕ ಕಾವ್ಯಗಳಾದರೂ ಶಾಸ್ತ್ರ ಕಾವ್ಯಗಳಲ್ಲ ಎಂಬುದು ಗಮನದಲ್ಲಿಡಬೇಕಾದ ಅಂಶ. ಆದುದರಿಂದ ಧಾರ್ಮಿಕ ಶಾಸ್ತ್ರಕವಿಗಳು ಎನ್ನುವಲ್ಲಿ ಪಂಪ, ಪೊನ್ನ, ರನ್ನಾದಿಗಳು ಕೃತಿಗಳನ್ನು ಆಧರಿಸಿ ಭಿನ್ನವಾಗಿ ನಿಲ್ಲುತ್ತಾರೆ. ಆ ಸಾಲಿನಲ್ಲಿ ಚಾವುಂಡರಾಯನ 'ತ್ರಿಷಷ್ಠಿ ಶಲಾಕಾ ಪುರುಷ'ವೂ ಒಂದು. ಈ ಕೃತಿಯು 'ಚಾವುಂಡರಾಯ ಪುರಾಣ'ವೆಂತಲೂ ಪ್ರಸಿದ್ಧವಾಗಿದೆ. ಈ ಕೃತಿಯಲ್ಲಿ ಜೈನಧರ್ಮದ ಇಪ್ಪತ್ನಾಲ್ಕು ಜನ ತೀರ್ಥಂಕರರು, ಹನ್ನೆರಡು ಜನ ಚಕ್ರವರ್ತಿಗಳು, ಒಂಭತ್ತು ಜನ ನಾರಾಯಣರು, ಒಂಭತ್ತು ಜನ ಪ್ರತಿನಾರಾಯಣರು, ಒಂಭತ್ತು ಜನ ಬಲಭದ್ರರು ಹೀಗೆ ಒಟ್ಟು ಅರವತ್ತಮೂರು ಜನರ ಚರಿತ್ರೆಯ ವರ್ಣನೆಯನ್ನು ಒಳಗೊಂಡಿದೆ. "ಇವರ ವಿವರಪೂರ್ಣ ವರ್ಣನೆಯುಳ್ಳ ಗ್ರಂಥವನ್ನು 'ಪ್ರಥಮಾನುಯೋಗ' ಎಂದು ಕರೆಯಲಾಗಿದೆ."[೨೬] ಈ ಗ್ರಂಥವು ಭವಾವಳಿಯ ಕಥೆಗಳನ್ನು ಒಳಗೊಂಡು ಜೈನಧರ್ಮದ ಮುಖ್ಯತತ್ತ್ವಗಳನ್ನು ನಿರೂಪಿಸುತ್ತದೆ. ಆದ್ದರಿಂದ ಕೃತಿಯನ್ನು 'ಜೈನಧರ್ಮದ ಕೈಪಿಡಿ ಎನ್ನಬಹುದು' ಎಂದು ಎಂ. ವಿ. ಸೀತಾರಾಮಯ್ಯನರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಅದು ಶಾಸ್ತ್ರ ಕೃತಿಯಲ್ಲ ಎಂಬುದನ್ನು ಗಮನದಲ್ಲಿಡಬೇಕಾದ ವಿಚಾರವಾಗಿದೆ. ಪಂಪನ 'ಆದಿಪುರಾಣ', ಬ್ರಹ್ಮಶಿವನ 'ಸಮಯಪರೀಕ್ಷೆ' ಹಾಗೂ ನಯಸೇನನ 'ಧರ್ಮಾಮೃತ'ಗಳೂ ಇದೇ ಸಾಲಿಗೆ ಸೇರುತ್ತವೆ. ಏಕೆಂದರೆ ಇವುಗಳು ಕಥಾಪ್ರಾಧಾನ್ಯತೆಯನ್ನು ನೀಡುತ್ತವೆ. ಅಲ್ಲದೇ 'ಸಮಯಪರೀಕ್ಷೆ' ಮತ್ತು 'ಧರ್ಮಾಮೃತಗಳು' ಅನ್ಯಮತಗಳ ವಿಡಂಬನೆಗೆ ಹೆಚ್ಚಿನ ಆದ್ಯತೆ ನೀಡುತ್ತವೆ.

ಕನ್ನಡದ ಆದಿಕವಿ, ಕವಿತಾಗುಣಾರ್ಣವ, ಮಹಾಕವಿ ಪಂಪನು ಕನ್ನಡ ಸಾಹಿತ್ಯದ ಮಹಾಸಾಗರದ ಅಮೂಲ್ಯ ಮುತ್ತು. 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನವಿಜಯ' ಇವು ಈತನ ಎರಡು ಕೃತಿಗಳು. ಈತನ ಕಾವ್ಯಪ್ರೌಢಿಮೆ ಅಗಾಧವಾದುದು ಈ ಮುಂಚೆಯೇ ಹೇಳಿದ ಹಾಗೆ ಪಂಪನು ಶಾಸ್ತ್ರ ಕವಿಯಾಗಿರದಿದ್ದರೂ 'ಆದಿಪುರಾಣ'ದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಶಾಸ್ತ್ರೀಯ ಅಂಶಗಳು ಕಾಣಬರುತ್ತವೆ. ಕಾವ್ಯಸೌಂದರ್ಯದ ನಡುವೆಯೇ ಅನೇಕ ಶಾಸ್ತ್ರ ವಿಚಾರಗಳನ್ನೂ ತಿಳಿಸುತ್ತಾನೆ. 'ಆದಿಪುರಾಣ'ದ ಆರಂಭದಲ್ಲಿ "ನೆಗಳ್ದಾದಿಪುರಾಣದೊಳರಿವುದು ಕಾವ್ಯಧರ್ಮ್ಮಮಂ ಧರ್ಮ್ಮಮುಮಂ"[೨೭] ಎಂದು ಹೇಳುತ್ತಾನೆ. ಕವಿಯು, ಕಾವ್ಯಧರ್ಮದ ಜೊತೆಗೆ ಧರ್ಮವನ್ನೂ ಅರಿಯುವುದು ಎಂದು ಹೇಳುತ್ತಾನೆ. ಅಂತೆಯೇ 'ವಿಕ್ರಮಾರ್ಜುನ ವಿಜಯ'ದಲ್ಲಿ "ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ"[೨೮] ಎಂದು ಹೇಳುಕೊಳ್ಳುವ ಕವಿಯ ಮಾತಿನಂತೆ ಕೃತಿಯು ಪಾರಮಾರ್ಥಿಕ ಅಂಶಗಳನ್ನೊಳಗೊಂಡ, ಆದಿ ತೀರ್ಥಂಕರನ ಚರಿತ್ರೆಯಾಗಿದೆ.

---

೨೬. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರ ಸಾಹಿತ್ಯ** : ಪುಟ. ೨೩೫

೨೭. ಎಸ್. ಜಿ. ನರಸಿಂಹಾಚಾರ್ : **ಪಂಪಕವಿ ವಿರಚಿತಂ ಆದಿಪುರಾಣಂ** ; ಪುಟ. ೦೭

೨೮. ಎನ್. ಅನಂತರಂಗಾಚಾರ್ : **ಪಂಪ ಮಹಾಕವಿ ವಿರಚಿತ ಪಂಪಭಾರತಂ** (ಗದ್ಯಾನುವಾದ) : ಪುಟ. ೭೦೫

ಈ ಕೃತಿಯು ಮುಖ್ಯವಾಗಿ ಜೈನರ ಪ್ರಥಮ ತೀರ್ಥಂಕರನಾದ ವೃಷಭದೇವ ಅಥವಾ ಆದಿನಾಥನ ಚರಿತ್ರೆಯನ್ನು ಒಳಗೊಂಡಿದ್ದು, ನೀಲಾಂಜನೆಯ ನೃತ್ಯದ ಪ್ರಸಂಗದಲ್ಲಾದ ಪಲ್ಲಟದಿಂದಾಗಿ ವೃಷಭದೇವನು ಭೋಗೋಪಭೋಗಗಳ ಮೇಲಿನ ಆಸೆಯನ್ನು ತೊರೆದು ತಪಗೈಯ್ಯುತ್ತಾನೆ. ಅಲ್ಲದೇ ವೃಷಭದೇವನ ವರಪುತ್ರರಾದ ಭರತ ಬಾಹುಬಲಿಯರ ಕಥೆಯು ಮನೋಹರವಾಗಿ ರಚಿತವಾಗಿದೆ. ಆದರೆ ೧೯೦೦ರಲ್ಲಿ 'ಆದಿಪುರಾಣ'ವನ್ನು ಸಂಪಾದಿಸಿದ ಎಸ್. ಜಿ. ನರಸಿಂಹಾಚಾರ್ ಅವರು "ಈ ಗ್ರಂಥದಲ್ಲಿ ಸ್ತ್ರೀ ವಿದ್ಯಾಭ್ಯಾಸ, ವರ್ಣಾಶ್ರಮಧರ್ಮ, ಕಾಪಿಲಸಿದ್ಧಾಂತೋತ್ಪತ್ತಿ, ಯೋಗಶಾಸ್ತ್ರೋತ್ಪತ್ತಿ, ವಿಪ್ರವರ್ಣೋತ್ಪತ್ತಿ ಇವೇ ಮೊದಲಾದವುಗಳ ವಿಷಯಗಳಲ್ಲಿ ಹೇಳಿರುವ ಅಭಿಪ್ರಾಯಗಳು ನವೀನವಾಗಿಯೂ ವಿಜಾತಿಯವಾಗಿಯೂ ಇರುವುದರಿಂದ ವಿಚಾರಾರ್ಹವಾಗಿವೆ"[೨೯] ಎಂದು ಹೇಳುತ್ತಾರೆ. ಅಂತೆಯೇ ಪಂಪನು ಆದಿನಾಥರ ಪುರಾಣವನ್ನು ಹೆಣೆಯುತ್ತ, ಲೋಕಾಕಾರದ ಕಥೆಯನ್ನು ತಿಳಿಸುವುದಾಗಿ ಹೇಳುತ್ತಾನೆ. ಅಂತೆಯೇ ಅನಂತ ಲೋಕಾಕಾರ, ತ್ರಿಲೋಕಗಳು, ಜಂಬೂದ್ವೀಪದ ಭೌಗೋಳಿಕ ವಿಚಾರಗಳು, ಚತುರ್ಗತಿ ಜೀವಗಳು, ಅಷ್ಟಾಂಗಗಳು, ಕರ್ಮಬಂಧ, ಆಸ್ರವ, ಸಂವರ, ವ್ರತಗಳು, ಸಮ್ಯಕ್ತ್ವ, ತತ್ತ್ವ, ಅಂಕಿ-ಅಂಶಗಳು, ಗುಣಸ್ಥಾನಗಳ ಕುರಿತಾಗಿ ವಿವರಿಸುತ್ತಾನೆ. ಏತನ್ಮಧ್ಯೆ ಅಲ್ಲಿ ಕಾವ್ಯವೇ ಪ್ರಧಾನವಾಗಿದೆ. ಆದುದರಿಂದ ಪ್ರಸ್ತುತ ಅಧ್ಯಾಯದಲ್ಲಿ ಶಾಸ್ತ್ರಪ್ರಧಾನವಾದ ಗ್ರಂಥಗಳನ್ನು ರಚಿಸಿದ ಕವಿಗಳ ಕೊಡುಗೆಯನ್ನು ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ.

೩.೧. ಆಚಾರ್ಯ ದಿವಾಕರಣಂದಿ (೧೦೬೨):

ಆಚಾರ್ಯ ದಿವಾಕರಣಂದಿ ಮುನಿಗಳು ಕ್ರಿ. ಶ. ೧೦೬೨ರಲ್ಲಿ[೩೦] ಬಾಳಿ ಬದುಕಿದ್ದರು. ಇವರ ಕೃತಿ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'. ಇದಕ್ಕೆ 'ತತ್ತ್ವಾರ್ಥಸೂತ್ರವೃತ್ತಿ' ಎಂಬ ಹೆಸರೂ ಇದೆ. ಆಚಾರ್ಯ ದಿವಾಕರಣಂದಿ ಮುನಿಗಳು 'ತತ್ತ್ವಾರ್ಥ ಸೂತ್ರ'ವೆಂಬ ಸಂಸ್ಕೃತ ಶಾಸ್ತ್ರ ಕೃತಿಗೆ ಕನ್ನಡದಲ್ಲಿ ವೃತ್ತಿಯನ್ನು ಬರೆಯುತ್ತಾರೆ. ಇವರ ಕುರಿತಾಗಿ ಆರ್. ನರಸಿಂಹಾಚಾರ್ ಅವರು "ಈತನಿಗೆ ಉಭಯ ಸಿದ್ಧಾಂತರತ್ನಾಕರ ಎಂಬ ಬಿರುದಿದ್ದಂತೆ ತೋರುತ್ತದೆ. ಈತನ ಗುರು ಚಂದ್ರಕೀರ್ತಿ ಭಟ್ಟಾರಕ. ಕ್ರಿ. ಶ. ೯೪೮ರ ಸೊರಬದ ೫೮ನೆಯ ಶಾಸನಲ್ಲಿ ಚಂದ್ರಕೀರ್ತಿ ಭಟ್ಟಾರಕರ ಸ್ತುತಿಯಿದೆ. ಈತನು ಪಟ್ಟಣಸ್ವಾಮಿ ನೊಕ್ಕನಿಗೆ ಗುರುವೆಂದೂ, ಸಕಲಚಂದ್ರನು ಈತನ ಶಿಷ್ಯನೆಂದೂ ತಿಳಿಯುತ್ತದೆ."[೩೧] ಎಂದಿದ್ದಾರೆ. ಈ ಕೃತಿಯ ಮೂಲ ಕರ್ತೃ ಗೃಧ್ರಪಿಂಛಾಚಾರ್ಯರು. ಇವರಿಗೆ ಉಮಾಸ್ವಾತಿ ಎಂಬ ಹೆಸರು ಕೂಡ ಇದೆ. ಇವರನ್ನು ಕನ್ನಡದ ಅನೇಕ ಕವಿಗಳು ಸ್ಮರಿಸುತ್ತಾರೆ.

---

೨೯. ಎಸ್. ಜಿ. ನರಸಿಂಹಾಚಾರ್ (ಸಂ) ; **ಪಂಪಕವಿ ವಿರಚಿತಂ ಆದಿಪುರಾಣಂ** : ಪುಟ. xix
೩೦. ಆರ್. ನರಸಿಂಹಾಚಾರ್ : **ಕರ್ಣಾಕಟ ಕವಿಚರಿತೆ ಪ್ರಥಮ ಸಂಪುಟ** : ಪು. ೧೦೩
೩೧. **ಅದೇ** : ಪುಟ. ೧೦೪

ನೇಮಿಚಂದ್ರ (೧೧೭೦) ಕವಿ:

“ಇದು ಚೋದ್ಯಂ ಜಿನಸಮಯದ
ಮೊದಲಿಗರೆನಿಸಿರ್ದ ಗೃಧ್ರಪಿಂಛಾಚಾರ್ಯರ್”[೩೨]

ಪಾರ್ಶ್ವನಾಥ ಪಂಡಿತನು ತನ್ನ ‘ಪಾರ್ಶ್ವನಾಥ ಪುರಾಣ’ದಲ್ಲಿ :

“ಅನುಪಮ ತತ್ತ್ವಾರ್ಥಂ ಪು
ಣ್ಯನಿಬಂಧನಪ್ಪುದೆಂತು ಮನಮನದೊಳ್ ನೆ
ಟ್ಟನೆ ನೆಲಸಿತಂತೆ ನೆಲಸಿ
ರ್ಕನಿಶಮುಮಾಸ್ವಾತಿಪಾದ ಯತಿಪಾದಯುಗಂ ॥೧.೧೩॥”[೩೩]

ಇಲ್ಲಿ ಕವಿಯು ಆಚಾರ್ಯರನ್ನು ಗೃಧ್ರಪಿಂಛಾಚಾರ್ಯರು ಎಂದು ಉಲ್ಲೇಖಿಸದೇ ನೇರವಾಗಿ ಉಮಾಸ್ವಾತಿ ಯತಿಗಳೆಂದು ಉಲ್ಲೇಖಿಸುತ್ತಾನೆ. ‘ಉತ್ತಮ ತತ್ತ್ವಗಳ ಅರ್ಥವು ನೆಲೆಸಿದರೆ ಅವುಗಳೇ ಪುಣ್ಯಕ್ಕೆ ಕಾರಣವಾಗುತ್ತವೆ ಎಂದು ತಿಳಿಸಿದ ಉಮಾಸ್ವಾತಿ ಮುನಿಗಳ ಪಾದಗಳೆರಡೂ ನಮ್ಮ ಮನಸ್ಸಿನಲ್ಲಿ ಸದಾ ನೆಲೆಯಾಗಲೀ’ ಎಂದು ಪ್ರಾರ್ಥಿಸುತ್ತಾನೆ. ತತ್ತ್ವಾರ್ಥಸೂತ್ರ ಜೈನಧರ್ಮದಲ್ಲಿ ದಿಗಂಬರ ಶ್ವೇತಾಂಬರ ಎರಡೂ ಪರಂಪರೆಗಳಲ್ಲಿ ಮಾನ್ಯತೆಯನ್ನು ಪಡೆದಿರುವ ಪೂಜ್ಯಗ್ರಂಥ. ದ್ರವ್ಯಾನುಯೋಗಕ್ಕೆ ಸಂಬಂಧಿಸಿದಂತೆ ಸಂಸ್ಕೃತದಲ್ಲಿ ಇದೇ ಮೊದಲ ಗ್ರಂಥ. ಈ ಗ್ರಂಥದ ಮೇಲೆ ಎರಡೂ ಪರಂಪರೆಗಳಲ್ಲಿ ವಿವಿಧ ವ್ಯಾಖ್ಯಾನಗಳು ರಚನೆಯಾಗಿರುವುದು ಇದರ ಪ್ರಾಮುಖ್ಯತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ದಿವಾಕರಣಂದಿ ಮುನಿಗಳು ಇಂಥ ಶ್ರೇಷ್ಠ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆದಿರುವುದು ಕನ್ನಡಕ್ಕೆ ಅತ್ಯಮೂಲ್ಯ ಕೊಡುಗೆಯಾಗಿದೆ.

೩.೧.೧. ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ:

ಕ್ರಿ. ಪೂ. ೬ನೇ ಶತಮಾನದಲ್ಲಿ ವೈಶಾಲಿಯ ರಾಜಕುಮಾರನಾಗಿದ್ದ ವರ್ಧಮಾನ ಮಹಾವೀರರು ತಮ್ಮ ೩೦ನೇ ವಯಸ್ಸಿನಲ್ಲಿ ಸಾಂಸಾರಿಕ ಭೋಗೋಪಭೋಗಗಳನ್ನು ತೊರೆದು ವಿರಕ್ತರಾಗಿ, ಸಮಸ್ತ ಪರಿಗ್ರಹಗಳನ್ನು ತ್ಯಜಿಸಿ ಹನ್ನೆರಡು ವರ್ಷಗಳ ಕಾಲ ಕಠಿಣವಾದ ದಿಗಂಬರ ತಪಸ್ಸಾಚರಿಸಿದ ಫಲವಾಗಿ ತಮ್ಮಲ್ಲಿದ್ದ ಘಾತಿಕರ್ಮ[೩೪]ಗಳನ್ನು ಜಯಿಸಿ ಜ್ಞಾನಸಂಪನ್ನರಾದರು. ನಂತರ ಜನತೆಗೆ ಉಪದೇಶ ನೀಡಿದರು. ಜಗತ್ತಿನ ಸಮಸ್ತ ಜೀವಕೋಟಿಯ ಆಧ್ಯಾತ್ಮಿಕ ಸಮ್ಮುನ್ನತಿಗಾಗಿ ತ್ರಿಕಾಲಾಬಾಧಿತ ಧರ್ಮತತ್ತ್ವಗಳನ್ನು ಅನೇಕಾಂತ[೩೫] ದೃಷ್ಟಿಕೋನಗಳಿಂದ ಬೋಧಿಸಿದರು. ಅವರ ಬೋಧನೆಗಳು ನೈಜವಾದವುಗಳು. ಪ್ರಾಕೃತಿಕವಾದವುಗಳು. ಅವುಗಳನ್ನೇ “ಅವರ ಶಿಷ್ಯರಾದ ಇಂದ್ರಭೂತಿ ಗೌತಮ ಗಣಧರರು ಪ್ರಾಕೃತವೆಂದು ಕರೆದರು. ಪ್ರಾಕೃತವು ಒಂದು

೩೨. ಮಂ. ಆ. ರಾಮಾನುಜಯ್ಯಂಗಾರ್ (ಸಂ) : **ನೇಮಿಚಂದ್ರ ವಿರಚಿತಮಪ್ಪ ನೇಮಿನಾಥ ಪುರಾಣಂ** : ಪುಟ. ೦೩
೩೩. ಎಂ. ಮರಿಯಪ್ಪ ಭಟ್ಟ (ಸಂ) ; **ಪಾರ್ಶ್ವನಾಥ ಪಂಡಿತ ವಿರಚಿತಂ ಶ್ರೀ ಪಾರ್ಶ್ವನಾಥ ಪುರಾಣಂ** : ಪುಟ.೦೨
೩೪. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೧೨೭
ಘಾತಿಕರ್ಮ = ಆತ್ಮನ ಗುಣಗಳಿಗೆ ಘಾತವಾಗಿರುವ ಕರ್ಮಗಳು.
೩೫. **ಅದೇ** : ಪುಟ. ೨೨. **ಅನೇಕಾಂತ** = ವಸ್ತುವಿನ ಅನೇಕ ಧರ್ಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತರ್ಕವನ್ನು ಪ್ರತಿಪಾದಿಸುವುದು.

ಜನಸಾಮಾನ್ಯರ ಭಾಷೆಯಾಗಿದ್ದಿತು. ವರ್ಧಮಾನ ಮಹಾವೀರರ ಉಪದೇಶಗಳು ಸಮಸ್ತ ಮುನಿ, ಆರ್ಯಿಕೆ, ಶ್ರಾವಕ, ಶ್ರಾವಕಿಯರಿಗೂ ಸಮರೂಪದಲ್ಲಿ ಪ್ರಾಪ್ತವಾಗುತ್ತಿತ್ತು. ಸುಮಾರು ಮೂರು–ನಾಲ್ಕು ಶತಮಾನಗಳವರೆಗೆ ಅವರ ವಚನಾಮೃತಗಳು ಶ್ರುತಿರೂಪದಲ್ಲಿ ಹರಿದು ಬಂದವು."[೩೬] ನಂತರದಲ್ಲಿ ಅದನ್ನು ಗೌತಮ ಗಣಧರರು ಹನ್ನೆರಡು ಅಂಗಗಳ ರೂಪದಲ್ಲಿ ಸಂಗ್ರಹಿಸಿದರು. ದ್ವಾದಶಾಂಗರೂಪದ ಜ್ಞಾನವನ್ನು ಪೂರ್ಣವಾಗಿ ಅರಿತವರನ್ನು ಕೇವಲಿಗಳು ಮತ್ತು ಶ್ರುತಕೇವಲಿಗಳು ಎಂದು ಎರಡು ರೀತಿಯಲ್ಲಿ ಹೇಳಲಾಗುತ್ತದೆ. ಸರ್ವಪ್ರತ್ಯಕ್ಷ ಜ್ಞಾನಿಗಳನ್ನು ಕೇವಲಿ[೩೭]ಗಳೆಂದೂ, ಸರ್ವಪರೋಕ್ಷ ಜ್ಞಾನಿಗಳನ್ನು ಶ್ರುತಕೇವಲಿ[೩೮]ಗಳೆಂದು ಕರೆಯಲಾಗುತ್ತದೆ.

ಮಹಾವೀರರ ಪರಿನಿರ್ವಾಣದ ನಂತರದ ಕಾಲದಲ್ಲಿ ಇಂದ್ರಭೂತಿ ಗೌತಮರು, ಸುಧರ್ಮಾಚಾರ್ಯರು ಮತ್ತು ಜಂಬೂಸ್ವಾಮಿಗಳು ಅನುಕ್ರಮವಾಗಿ ಸುಮಾರು ಎರಡುನೂರು ವರ್ಷಗಳ ವರೆಗೆ ತೀರ್ಥಂಕರರ ತತ್ತ್ವೋಪದೇಶಗಳನ್ನು ಪ್ರಚುರಪಡಿಸಿದರು. "ಭಗವಾನ್ ಶ್ರೀ ಮಹಾವೀರರಿಂದ ಪುನರುತ್ಥಾನಗೊಂಡ ಜೈನಧರ್ಮವು ಕೇವಲಿ, ಶ್ರುತಕೇವಲಿ ಹಾಗೂ ಆಚಾರ್ಯಪ್ರವರುಗಳ ಮೂಲಕ ಪರಂಪರಾಗತವಾಗಿ ಪ್ರವಹಿಸಿ, ವಿಶ್ವದ ಜನಕೋಟಿಯನ್ನು ಹಿಂಸೆಯಿಂದ ಅಹಿಂಸೆಯೆಡೆಗೆ, ಅಶಾಂತಿಯಿಂದ ಶಾಂತಿಸುಭಿಕ್ಷೆಯ ಕಡೆಗೆ ಅಜ್ಞಾನದಿಂದ ಸುಜ್ಞಾನದೆಡೆಗೆ ಸಾಗಿಸುತ್ತ ಬಂದಿದೆ. ಅಂತೆಯೇ ತೀರ್ಥಂಕರರ ದಿವ್ಯವಾಣಿಯು ನಾಲ್ಕುನೂರು ವರ್ಷಗಳವರೆಗೆ ಶ್ರುತಿರೂಪದಲ್ಲಿದ್ದು ತದನಂತರದಲ್ಲಿ ಪ್ರಾತಃಸ್ಮರಣೀಯರಾದ ಆಚಾರ್ಯ ಶ್ರೀ ಪುಷ್ಪದಂತ ಭೂತಬಲಿ, ಆಚಾರ್ಯ ಶ್ರೀ ಶಿವಕೋಟಿ, ಶ್ರೀ ಕುಂದಕುಂದಾಚಾರ್ಯರು, ಗಣಧರಾಚಾರ್ಯರು ಮುಂತಾದ ಮಹಾನ್ ದಾರ್ಶನಿಕರ ಮೂಲಕ ಷಟ್‌ಖಂಡಾಗಮ, ಮೂಲಾರಾಧನಾ, ಸಮಯಸಾರ, ಪ್ರವಚನಸಾರ, ಪಂಚಾಸ್ತಿಕಾಯ, ಅಷ್ಟಪಾಹುಡ ಮುಂತಾದ ಪ್ರಾಕೃತ ಭಾಷೆಯ ಗ್ರಂಥಗಳಲ್ಲಿ ಲಿಪಿಬದ್ಧಗೊಂಡವು. ಕುಂದಕುಂದಾಚಾರ್ಯರ ಸಮಕಾಲೀನರಾದ 'ಶ್ರೀ ಉಮಾಸ್ವಾಮಿ' ಆಚಾರ್ಯರು ತಮ್ಮ ಪೂರ್ವಾಚಾರ್ಯಕೃತ ಪ್ರಾಕೃತ ಗ್ರಂಥಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ, ಪ್ರಥಮಬಾರಿಗೆ ಮಹಾವೀರರ ಉಪದೇಶದ ಮೂಲತತ್ತ್ವಗಳನ್ನು ಸಂಸ್ಕೃತ ಭಾಷೆಯಲ್ಲಿ ಸೂತ್ರಗಳ ರೂಪದಲ್ಲಿ ಸಂಗ್ರಹಿಸಿದರು. ಅದು 'ತತ್ತ್ವಾರ್ಥಸೂತ್ರ ಅಥವಾ 'ಮೋಕ್ಷಶಾಸ್ತ್ರ'ವೆಂದು ಕರೆಯಲ್ಪಟ್ಟಿತು."[೩೯]

ಈ ಅಪೂರ್ವ ಕೃತಿಗೆ ಬೇರೆ ಬೇರೆ ಭಾಷೆಗಳಲ್ಲಿ ಟೀಕೆ, ಉಪಟೀಕೆಗಳು ಬಂದವು ಅದರಲ್ಲಿ ಕನ್ನಡದ ಆಚಾರ್ಯ ಶ್ರೀದಿವಾಕರಣಂದಿ ಮುನಿಗಳ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ

---

೩೬. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : ಪುಟ. i

೩೭. ಸ್ವತಃ ಜ್ಞಾನೋದಯ ಪಡೆದವರು

೩೮. ಉಪದೇಶಾಮೃತವನ್ನು ಕೇಳಿಸಿಕೊಂಡು ಜ್ಞಾನೋದಯ ಪಡೆದವರು

೩೯. **ಅದೇ** : ಪುಟ. ii

ಲಘುವೃತ್ತಿ'ಯೂ ಒಂದು. ಈ ಗ್ರಂಥದಲ್ಲಿ ಪ್ರಧಾನವಾಗಿ ದ್ರವ್ಯಾನುಯೋಗದ ವಿವರಣೆಯಿದೆ. ಒಟ್ಟು ಹತ್ತು ಅಧ್ಯಾಯಗಳನ್ನು ಒಳಗೊಂಡಿದ್ದು, ಮೊದಲ ಅಧ್ಯಾಯದಲ್ಲಿ ಜ್ಞಾನಮೀಮಾಂಸೆ, ಎರಡರಿಂದ ಐದನೆಯ ಅಧ್ಯಾಯದವರೆಗೆ ಜ್ಞೇಯ[೪೦] ಮೀಮಾಂಸೆ, ಆರರಿಂದ ಹತ್ತನೆಯ ಅಧ್ಯಾಯಗಳಲ್ಲಿ ಚಾರಿತ್ರ[೪೧] ಮೀಮಾಂಸೆಗಳು ನಿರೂಪಿತವಾಗಿವೆ.

"ನತ್ವಾ ಜಿನೇಶ್ವರಂ ವೀರಂ ವಕ್ಷ್ಯೇ ಕರ್ಣಾಟ ಭಾಷಯಾ
ತತ್ತ್ವಾರ್ಥಸೂತ್ರ-ಸೂತ್ರಾರ್ಥಂ ಮಂದಬುದ್ಧ್ಯನುರೋಧತಃ ॥

ಮೋಕ್ಷ ಶಾಸ್ತ್ರದ ಮೊದಲೊಳು ಮೋಕ್ಷಮಾರ್ಗೋಪದೇಶಕನಪ್ಪ ಅರ್ಹತ್ಪರಮೇಶ್ವರ ಪರಮ ಭಟ್ಟಾರಕಂಗೆ ಗೃದ್ಧಪಿಂಛಾಚಾರ್ಯರ್ ಮಂಗಲಾರ್ಥಂ ನಮಸ್ಕಾರಂ ಗೆಯ್ದಪರ್:

ಮೋಕ್ಷದ ಬಟ್ಟೆಗೆ ಉಪದೇಶತತ್ವದಿಂದೊಯ್ದನಂ ಕರ್ಮಂಗಳೆಂಬ ಬೆಟ್ಟುಗಳಂ ಒಡೆದೊನಂ ಎಲ್ಲಾ ತತ್ತ್ವಂಗಳಂ ಅಱಿದನೊಂ ಆ ಪರಮೇಶ್ವರನ ಗುಣಂಗಳುಂ ಪಡೆಯಲ್ವೇಡಿ ವಂದಿಸುವೆಂ"[೪೨]

ಮಹಾವೀರ ಜಿನೇಶ್ವರರು ಬೋಧಿಸಿದ ತತ್ತ್ವಾರ್ಥಸೂತ್ರ ಮತ್ತು ಅದರ ಟೀಕೆ(ಸೂತ್ರ)ಯನ್ನು ಅಲ್ಪಬುದ್ಧಿಯವರು ಅರಿಯುವಂತೆ ಕರ್ಣಾಟ ಭಾಷೆಯಲ್ಲಿ ವಿವರಿಸುತ್ತೇನೆ ಎಂದು ಗ್ರಂಥಕಾರರು ಉಲ್ಲೇಖಿಸುತ್ತಾರೆ. ಮೋಕ್ಷಶಾಸ್ತ್ರವೆಂದೇ ಪ್ರಸಿದ್ಧಿ ಪಡೆದಿರುವ ತತ್ತ್ವಾರ್ಥಸೂತ್ರದ ಮೊದಲೊಳು ಮೋಕ್ಷಮಾರ್ಗವನ್ನು ಬೋಧಿಸಿದ ಪರಮ ಭಟ್ಟಾರಕನೆನಿಸಿದ ತೀರ್ಥಂಕರರಿಗೆ ಗೃದ್ಧಪಿಂಛಾಚಾರ್ಯರು ಪ್ರಥಮ ವಂದನೆಯನ್ನು ಗೈಯ್ಯುತ್ತಾರೆ. ಹಾಗೆಯೇ ಮೋಕ್ಷಮಾರ್ಗವನ್ನು ಬೋಧಿಸಿದ ನೇತಾರನನ್ನು ತಾನೂ ಸ್ಮರಿಸುವುದಾಗಿ ದಿವಾಕರಣಂದಿ ಮುನಿಗಳು ಹೇಳುತ್ತಾರೆ. ಮೋಕ್ಷಮಾರ್ಗವನ್ನು ಬೋಧಿಸುವವನು ಬೇರಾರೂ ಅಲ್ಲ. ಕರ್ಮಕಳಂಕಗಳನ್ನು ಕಳೆದುಕೊಂಡವನು, ಸರ್ವಜ್ಞನೂ ಆಗಿರುತ್ತಾನೆ. ಆ ಮಹಿಮನು ಹೇಳಿದ ಮೋಕ್ಷಮಾರ್ಗವನ್ನು ಬೋಧಿಸುವ ಸೂತ್ರವಿದು :

"ಸಮ್ಯಗ್‌ದರ್ಶನ-ಜ್ಞಾನ-ಚಾರಿತ್ರಾಣಿ ಮೋಕ್ಷಮಾರ್ಗಃ ॥೧.೧ ॥ (ಸಂ)"[೪೩]

ಸಮ್ಯಕ್ ದರ್ಶನ, ಜ್ಞಾನ ಮತ್ತು ಚಾರಿತ್ರ್ಯಗಳೇ ಮೋಕ್ಷಕ್ಕೆ ದಾರಿಯಾಗುವವು. ಪದಾರ್ಥಗಳ ಯಥಾಸ್ವರೂಪವನ್ನು ಅರಿಯುವಲ್ಲಿ ಶ್ರದ್ಧೆಯನ್ನಿರಿಸುವುದೇ ಸಮ್ಯಕ್‌ದರ್ಶನ. ಪದಾರ್ಥಗಳು ಹೇಗಿರುವವೆಂಬುದು ತಿಳಿಯುವುದೇ ಸಮ್ಯಕ್‌ಜ್ಞಾನ. ಮೋಕ್ಷಮಾರ್ಗದ ಕಡೆಗೆ ಹೋಗುವ ಇಚ್ಛೆಯುಳ್ಳಾತನು ಕರ್ಮಗಳಿಗೆ ಕಾರಣವಾಗುವ ಹಿಂಸೆಯಿಂದ ನಿವೃತ್ತನಾಗುವುದೇ ಸಮ್ಯಕ್‌ಚಾರಿತ್ರವೆಂದು ಹೇಳುತ್ತಾರೆ. ಅವುಗಳಲ್ಲಿ ಸಮ್ಯಕ್ ದರ್ಶನದ ಕುರಿತು ಈ ಮುಂದಿನಂತೆ ವಿವರಿಸಲಾಗಿದೆ.

---

೪೦. ಜಿ. ಎನ್. ಚಕ್ರವರ್ತಿ ; **ಸಂಸ್ಕೃತ-ಕನ್ನಡ ನಿಘಂಟು** ; ಪುಟ. ೪೪೦ **ಜ್ಞೇಯ** = ಪರಬ್ರಹ್ಮ, ತಿಳಿಯಬೇಕಾದ ವಸ್ತು.
೪೧. **ಅದೇ** : ೪೦೧. **ಚಾತಿತ್ರ** = ಸ್ವಭಾವ, ಶೀಲ.
೪೨. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಪ್ರಥಮೋಧ್ಯಾಯಃ) ಪುಟ. ೧
೪೩. **ಅದೇ** : (ಪ್ರಥಮೋಧ್ಯಾಯಃ) ಪುಟ. ೧

೩.೧.೧.೧. ಸಮ್ಯಕ್‌ದರ್ಶನ:

ಔಪಶಮಿಕ[೪೪], ಕ್ಷಾಯೋಪಶಮಿಕ[೪೫] ಮತ್ತು ಕ್ಷಾಯಿಕ[೪೬] ಎಂಬ ಮೂರು ಪ್ರಕಾರಗಳಲ್ಲಿ ಸಮ್ಯಕ್‌ದರ್ಶನ ಉಂಟಾಗುತ್ತದೆ.

"ಶ್ರದ್ಧಾನಂ ಪರಮಾರ್ಥಾನಾಮಾಪ್ತಾಗಮ ತಪೋಭೃತಾಮ್ ।
ತ್ರಿಮೂಢಾಪೋಢಮಷ್ಟಾಂಗಂ ಸಮ್ಯಗ್ದರ್ಶನಮಸ್ಮಯಮ್ ॥"[೪೭] (೧.೪)

ಸತ್ಯಾರ್ಥ ಆಪ್ತ ಅಥವಾ ಅರ್ಹತ್‌ನಲ್ಲಿ, ಆಗಮಗಳಲ್ಲಿ, ಪವಿತ್ರ ಮುನಿಗಳಲ್ಲಿ ಶ್ರದ್ಧೆಯಿಂದ ನಂಬಿಕೆಯನ್ನಿಡುವದು ಸಮ್ಯಕ್‌ದರ್ಶನವಾಗುತ್ತದೆ. ಮೂರು ರೀತಿಯ ಮೂಢತೆಗಳಿಂದ[೪೮] ಹಾಗೂ ಅಷ್ಟಮದಗಳಿಂದ[೪೯] ಮುಕ್ತನಾಗಿರುವದು, ಮತ್ತು ಅಷ್ಟಾಂಗ[೫೦]ಗಳಿಂದ ಕೂಡಿರುವದು ಎಂದರ್ಥ. ವಸ್ತುಗಳ ನಿಜಸ್ವರೂಪದಲ್ಲಿರುವ ಶ್ರದ್ಧೆಯೇ ಸಮ್ಯಕ್‌ದರ್ಶನ. ಮೋಹ, ಸಂಶಯ, ವಿಪರ್ಯಾಸ, ವಿನಾಶಕವಾದವುಗಳು. ದರ್ಶನಮೋಹನೀಯ[೫೧], ಔಪಶಮಿಕ, ಕ್ಷಾಯಿಕ, ಕ್ಷಾಯೋಪಶಮಗಳು ಉದ್ಭವಿಸುವವು. ಇವುಗಳ ಬೋಧ ಸಂಯೋಗವೇ ಅತಿಶಯ ಸಮ್ಯಗ್ದರ್ಶನ.

"ತನ್ನಿಸರ್ಗಾದಧಿಗಮಾದ್ವಾ ॥೧.೩॥"[೫೨] ಅಂದರೆ ನಿಸರ್ಗದತ್ತವಾಗಿ ಇಲ್ಲವೇ ಪರಮೋಪದೇಶದಿಂದಾಗಲೀ ಸಮ್ಯಗ್ದರ್ಶನ ಉಂಟಾಗುತ್ತದೆ. ಅಂತಹ ತತ್ತ್ವ, ನಿರ್ವಿಷಯ ಶ್ರದ್ಧೆಗಳನ್ನರಿಯಲು ತಿಳಿಸುವ ವಿಷಯಗಳು ಈ ಮುಂದಿನಂತಿವೆ. ಚೇತನ ಸ್ವರೂಪವಾದುದು **ಜೀವ.** ಅಚೇತನವಾದುದು **ಅಜೀವ.** ಪುಣ್ಯ ಮತ್ತು ಪಾಪರೂಪವಾದ ಕರ್ಮವು ಆತ್ಮನನ್ನು ಪ್ರವೇಶಿಸುವುದು **ಆಸ್ರವ.** ಕರ್ಮ ಮತ್ತು ಜೀವಗಳ ಸಂಬಂಧವೇ **ಬಂಧ.** ಜೀವನಲ್ಲಿ ಹೊಸ ಕರ್ಮಗಳು ಬರದಂತೆ ತಡೆಯುವುದು **ಸಂವರ.** ಆತ್ಮನಲ್ಲಿರುವ ಕರ್ಮಗಳನ್ನು ಕ್ಷಯಿಸುವುದೇ **ನಿರ್ಜರೆ.** ಸಕಲ ಕರ್ಮಗಳಿಂದಲೂ ಹುಟ್ಟು–ಸಾವುಗಳಿಂದಲೂ ಮುಕ್ತನಾಗುವುದೇ **ಮೋಕ್ಷ.** ಇವು ಸಪ್ತ ತತ್ತ್ವಗಳು. ಅಂತೆಯೇ ಸಮ್ಯಗ್ದರ್ಶನ ಮತ್ತು ಜೀವಾದಿಗಳ ಸಂವ್ಯವಹಾರದ ದೃಷ್ಟಿಯಿಂದ ಕೆಲ ವಿಚಾರಗಳನ್ನು ಅರಿಯಬೇಕು.

---

೪೪. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೯೨
ಔಪಶಮಿಕ = ಕರ್ಮಗಳು ಉಪಶಮನಕ್ಕೆ ಬಾರದಿರುವ ಅವಸ್ಥೆಯಲ್ಲಿ ಉಂಟಾಗುವ ಭಾವ. ಸಪ್ತ ಪ್ರಕೃತಿಗಳ ಉಪಶಮದಿಂದ ಹುಟ್ಟಿದ್ದು ಉಪಶಮ ಸಮ್ಯಕ್ತ್ವ.

೪೫. **ಅದೇ** : ಪುಟ. ೧೧೭ : **ಕ್ಷಾಯೋಪಶಮ** = ಕರ್ಮದ ಕೆಲವು ಅಂಶಗಳು ನಾಶವಾಗುವುದು, ಕೆಲವು ಶಾಂತವಾಗುವುದು. ಜ್ಞಾನಾವರಣಾದಿ ಕರ್ಮಗಳು ಕಡಿಮೆಯಾಗಿ ಉಂಟಾಗುವ ಸಮ್ಯಕ್ತ್ವ.

೪೬. **ಅದೇ** : ಪುಟ. ೧೧೭, **ಕ್ಷಾಯಿಕ ಸಮ್ಯಕ್ತ್ವ** = ದರ್ಶನ ಮೋಹನೀಯ ಕರ್ಮವು ಸಂಪೂರ್ಣವಾಗಿ ಕ್ಷಯವಾದಾಗ ಉಂಟಾಗುವ ನಿರ್ಮಲ ಆತ್ಮಶ್ರದ್ಧೆ.

೪೭. ಶ್ರೀ ಎಂ. ಬಿ. ಪಾಟೀಲ (ಅನು.); **ಶ್ರೀ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡಕ ಶ್ರಾವಕಾಚಾರ** : ಪು.೧೯

೪೮. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : ಜೈನ ಪಾರಿಭಾಷಿಕ ಪದವಿವರಕೋಶ : ಪುಟ.೧೫೩
ದೇವಮೂಢತೆ, ಲೋಕಮೂಢತೆ, ಗುರುಮೂಢತೆ

೪೯. **ಅದೇ** : ಪುಟ. ೩೮ : **ಅಷ್ಟಮದ** = ಜ್ಞಾನ, ಪ್ರತಿಷ್ಠೆ (ಪೂಜೆ), ಕುಲ, ಜಾತಿ, ಬಲ, ಋದ್ಧಿ, ತಪ, ಶರೀರ ಸೌಂದರ್ಯ.

೫೦. **ಅದೇ** : ಪುಟ. ೩೧೪; ಅಷ್ಟಾಂಗಗಳು = ನಿಃಶ್ಯಂಕಿತಾಂಗ, ನಿಃಕಾಂಕ್ಷಿತಾಂಗ, ನಿರ್ವಿಚಿಕಿತ್ಸಾಂಗ, ಅಮೂಢದೃಷ್ಟಿತ್ವಾಂಗ, ಉಪಗೂಹನಾಂಗ, ಸ್ಥಿತಿಕರಣಾಂಗ, ವಾತ್ಸಲ್ಯಾಂಗ, ಪ್ರಭಾವನಾಂಗ.

೫೧. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ.೧೫೭ ; **ದರ್ಶನ ಮೋಹನೀಯ** = ಮೋಹನೀಯ ಕರ್ಮಗಳಲ್ಲಿ ಒಂದು. ತತ್ತ್ವಾರ್ಥಗಳಲ್ಲಿ ಶ್ರದ್ಧೆಯನ್ನು ಇಡದಂತೆ ಮಾಡುತ್ತದೆ.

೫೨. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಪ್ರಥಮೋಧ್ಯಾಯಃ) ಪುಟ. ೨

"ನಾಮ-ಸ್ಥಾಪನಾ-ದ್ರವ್ಯ-ಭಾವತಸ್ತನ್ನ್ಯಾಸಃ ॥೧.೫ ॥ (ಸಂ)"[೫೩]

ನಾಮ ಜೀವ, ಸ್ಥಾಪನಾ ಜೀವ, ದ್ರವ್ಯ ಜೀವ ಹಾಗೂ ಭಾವ ಜೀವವೆಂದು ಭೇದಗಳುಂಟು. ಜೀವನೆಂಬ ಹೆಸರೇ ನಾಮಜೀವ ಅಂದರೆ ಆತ್ಮ, ಆಕಾರವುಳ್ಳದ್ದು ಸ್ಥಾಪನಾಜೀವ ಎಂದರೆ ದೇಹ ಎಂದು ಅರ್ಥವಾಗುತ್ತದೆ. ಆಗಮಗಳು ದ್ರವ್ಯ ಜೀವಗಳು.

ಇದರಲ್ಲಿ ಮೂರು ಭೇದಗಳು :

ಅ) ಅರಿವವನ ಶರೀರ : ಇರದಲ್ಲಿ ಅತೀತ, ಅನಾಗತ, ವರ್ತಮಾನಗಳೆಂದು ಭೇದಗಳು.

ಆ) ಅರಿಯುವ ಆತ್ಮ : ಸುಗಮ ಜೀವ.

ಇ) ಇವೆರಡೂ ಅಲ್ಲದುದು : ಷಟ್ಕರ್ಮಗಳು.[೫೪]

ಇನ್ನು ಆಗಮಗಳನ್ನು ಅರಿತು ಸಯೋಗದಲ್ಲಿ ಕೂಡಿದ ಆತ್ಮನ ಆಗಮನವೇ ಭಾವಜೀವ. ಹೀಗೆ ಆತ್ಮವು ನವಪದಾರ್ಥಗಳು,[೫೫] ನಾಮ[೫೬], ನಿಕ್ಷೇಪ[೫೭]ಗಳ ವಿಧಿಗಳಲ್ಲಿ ಸಾಗುವುದು.

ಅಧಿಗಮ[೫೮] ಸಮ್ಯಗ್ದರ್ಶನೋತ್ಪತ್ತಿಯಾಗುವ ಬಗೆಯು :

"ಮಧ್ಯಮ ಮತಿಗಳಂ ಕುಱುತ್ತು ತತ್ತ್ವ ನಿಶ್ಚಯೋಪಾಯಮಂ ಪೇಳ್ದಪರು :
ನಿರ್ದೇಶ ಸ್ವಾಮಿತ್ವ ಸಾಧಾನಾಧಿಕರಣ ಸ್ಥಿತಿ ವಿಧಾನತಃ ॥೧.೭॥ (ಸಂ)"[೫೯]

ತತ್ತ್ವಾರ್ಥಗಳಲ್ಲಿ ಶ್ರದ್ಧೆಯನ್ನಿಡುವುದೇ ಸಮ್ಯಗ್ದರ್ಶನವೆಂದು ನಿರ್ದೇಶಿಸುತ್ತದೆ. ಅಪ್ರಮತ್ತವೆಂಬ ಏಳನೆಯ ಗುಣಸ್ಥಾನ, ಉಪಶಾಂತ ಕಷಾಯಂಬರ[೬೦] ಎಂಬ ಹನ್ನೊಂದನೆಯ ಗುಣಸ್ಥಾನದೆಡೆಗೆ ಸಾಗಿ, ಸಾಮಾನ್ಯತ್ವದಿಂದ ಕ್ಷಾಯಿಕ ಸಮ್ಯಕ್ತ್ವದೆಡೆಗೆ ಸಾಗುವ ಸಿದ್ಧರಿಗೆ ಆ ಸಮ್ಯಗ್ದರ್ಶನವು ಲಭಿಸುವುದು. ನರಕಗತಿಯಲ್ಲಿ ಪೃಥ್ವಿಯ ಮೇಲಿನ ನಾರಕ ಪರ್ಯಾಪ್ತಕ[೬೧]ರಿಗೆ ಔಪಶಮಿಕ ಹಾಗೂ ಕ್ಷಾಯೋಪಶಮಿಕಗಳೂ, ಪ್ರಥಮ ಪೃಥ್ವಿಯಲ್ಲಿನ ಪರ್ಯಾಪ್ತಕರಿಗೆ ಹಾಗೂ ಅಪರ್ಯಾಪ್ತಕರಿಗೆ ಕ್ಷಾಯಿಕ, ಕ್ಷಾಯೋಪಶಮಿಕಗಳೂ, ತಿರ್ಯಂಚ[೬೨] ಗತಿಯಲ್ಲಿ ತಿರ್ಯಕ್

---

೫೩. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಪ್ರಥಮೋಧ್ಯಾಯಃ) ಪುಟ. ೩

೫೪. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೯೫ ಮಿಥ್ಯಾತ್ವ, ಅಜ್ಞಾನ, ಅವಿರತಿ, ಯೋಗ, ಮೋಹ, ಕ್ರೋಧ.

೫೫. **ಅದೇ** : ಪು.೧೪೯ : **ನವಪದಾರ್ಥಗಳು:** ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರ, ಬಂಧ, ಮೋಕ್ಷ.

೫೬. ಅದೇ : ಪು.೧೪೯ : ಆತ್ಮನಿಗೆ ಅನೇಕ ಕರ್ಮಕಾರಣವಾಗಿ ವಿಭಿನ್ನವಾದ ಶರೀರ ಪ್ರಾಪ್ತಿಯಾಗಿ, ತೊಂಭತ್ತಮೂರು ಪ್ರಕೃತಿಗಳನ್ನು ಹೊಂದುವುದು.

೫೭. **ಅದೇ** : ಪು. ೧೯೨ : **ನಿಕ್ಷೇಪಾಧಿಕರಣ** = ಯಾವುದಾದರೂ ವಸ್ತುವನ್ನು ಭೂಮಿಯ ಮೇಲಿಡುವಾಗ ಅಜಾಗರೂಕತೆಯಿಂದ ಉಂಟಾಗುವ ಪಾಪಕರ್ಮ.

೫೮. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೧೧ : **ಅಧಿಗಮ** = ಸಮ್ಯಕ್ತ್ವವನ್ನು ಹೊಂದುವ ಎರಡು ಬಗೆಗಳಲ್ಲಿ ಒಂದು. ಕೇಳಿ ಅಥವಾ ಓದಿ ಶ್ರದ್ಧೆಯನ್ನು ಹೊಂದುವುದು.

೫೯. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಪ್ರಥಮೋಧ್ಯಾಯಃ) ಪುಟ. ೩

೬೦. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರಕೋಶ :** ಪುಟ. ೮೫ ಮೋಹನೀಯ ಕರ್ಮವು ಉಪಶಾಂತವಾಗುವುದು.

೬೧. **ಅದೇ** : ಪುಟ. ೨೧೨ : **ಪರ್ಯಾಪ್ತಕ** = ಶಕ್ತಿಪೂರ್ಣತೆಯನ್ನು ಹೊಂದಿರುವ ಜೀವ.

೬೨. **ಅದೇ:** ಪುಟ. ೧೪೯ : **ತಿರ್ಯಂಚ** = ಪಶು, ಪಕ್ಷಿ ಮೊದಲಾದ ಪ್ರಾಣಿಗತಿ.

ಪರ್ಯಾಪ್ತಕಗಳಿಗೆ ಔಪಶಮಿಕವೂ ಉಂಟು. ಆದರೆ ಸ್ತ್ರೀ, ತಿರ್ಯಂಚಗಳಿಗೆ ಮೋಕ್ಷವಿಲ್ಲ.[೬೩] ಮನುಷ್ಯಗತಿಯಲ್ಲಿ ಮನುಷ್ಯರಿಗೆ ಕ್ಷಾಯಿಕ ಮತ್ತು ಕ್ಷಾಯೋಪಶಮಿಕಗಳೂ, ಸ್ತ್ರೀವೇದ[೬೪] ಮನುಷ್ಯರಿಗೆ ಹಾಗೂ ಸಾಮಾನ್ಯದಿಂದ ದೇವಗತಿಗೆ ಹೋದವರಿಗೆ ಸಮ್ಯಕ್ತ್ವತ್ರಿತಯಗಳುಂಟು. ಭವನವಾಸಿಕ[೬೫], ವ್ಯಂತರ, ಜ್ಯೋತಿಷ್ಕ[೬೬], ದೇವ, ದೇವಿಯರಿಗೆ ಕ್ಷಾಯಿಕವಿಲ್ಲ. ಆದರೆ ಅವರ ಪರ್ಯಾಪ್ತಕರಿಗೆ ಔಪಶಮಿಕ ಮತ್ತು ಕ್ಷಾಯೋಪಶಮಿಕಗಳು ಉಂಟಾಗುವವು. ಸೌಧರ್ಮಕಲ್ಪ[೬೭] ನಿವಾಸಿಗಳಾದ ದೇವಿಯರಿಗೆ ಇಂದ್ರಿಯಗಳ ಅನುನಯದಿಂದ, ದೇಹವನ್ನು ಅವಲಂಬಿಸಿ ತ್ರಸಜೀವಿಗಳಿಗೆ, ಯೋಗಾನುವಾದದಿಂದ ಮನ, ವಚನ, ಕಾಯ ಈ ಮೂರನ್ನೂ ಸಮರ್ಪಿಸಿದವರಿಗೆ, ವೇದಾನುವಾದದಿಂದ ಮೂರು ವೇದದವರಿಗೆ (ಸ್ತ್ರೀ, ಪುರುಷ, ನಪುಂಸಕ), ಕಷಾಯಾ[೬೮]ನುವಾದದಿಂದ ಚತುಃಕಷಾಯ[೬೯]ಗಳಿಗೆ ಸಮ್ಯಕ್ತ್ವ ತ್ರಿತಯಗಳುಂಟು. ಉಳಿದವರಿಗಿಲ್ಲ. ಜ್ಞಾನಾನುವಾದದಿಂದ ಮತಿ, ಶ್ರುತ, ಅವಧಿ ಹಾಗೂ ಮನಃಪರ್ಯಾಯ ಜ್ಞಾನಿಗಳಿಗೆ ಮೂರೂ ಬಗೆಯ ಸಮ್ಯಕ್ತ್ವಗಳುಂಟು. ಇನ್ನು ಕೇಲವಜ್ಞಾನಿಗಳಿಗೆ ಕ್ಷಾಯಿಕವುಂಟು. ಲೇಶ್ಯಾನುವಾದದಿಂದ ಲೇಶ್ಯಾವರ್ಗಕ್ಕೆ ಮೂರು ಸಮ್ಯಕ್ತ್ವಗಳು, ಲೇಶ್ಯೆ[೭೦] ಇಲ್ಲದವರಿಗೆ, ಸಮುದ್ಘಾತ[೭೧] ಕೇವಲಿಗಳಿಗೆ ಕ್ಷಾಯಿಕವುಂಟಾಗುವುದು. ಭವ್ಯರಿಗೆ, ಸಂಜ್ಞಿಗಳಿಗೆ ತ್ರಿತಯ ಸಮ್ಯಕ್ತ್ವವುಂಟು. ಉಪಶಮ, ಕ್ಷಯ, ಕ್ಷಯೋಪಶಮಗಳನ್ನು ಅವಲಂಬಿಸಿ ಮೂರನೆಯ ನರಕದವರಿಗೆ, ನಾಲ್ಕನೆಯ ನರಕದಿಂದ ಏಳನೆಯ ನರಕದವರಿಗೆ, ಸಹಸ್ರಾರ, ಆನತ, ಪ್ರಾಣತ, ಆರಣ, ಅಚ್ಯುತಕಲ್ಪದ ದೇವರಿಗೆ, ಭುವನದ ಮೇಲೆ ಮನುಷ್ಯರಲ್ಲಿ ಕೆಲವರಿಗೆ ಜಾತಿಸ್ಮರಣೆಯಿಂದ, ಕೆಲವರಿಗೆ ಧರ್ಮಶ್ರವಣದಿಂದ, ಜಿನಬಿಂಬ

---

೬೩. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಪ್ರಥಮೋಧ್ಯಾಯಃ) ಪುಟ. ೫
"ಸ್ತ್ರೀ ವೇದಿ ತಿರ್ಯಗ್ ಜೀವಂಗಳ್ಗೆ ಕ್ಷಾಯಿಕಮಿಲ್ಲ।"

೬೪. ರತನಚಂದ ಕೋಟಿ (ಅನು) : **ಜೈನಧರ್ಮ ತಿಳಿಯಿರಿ** : ಪುಟ.೨೯೨. **ವೇದ** = ವಿದ್ಯಮಾನದಲ್ಲಿರುವ ಸ್ತ್ರೀತ್ವ, ಪುರುಷತ್ವ ಹಾಗೂ ನಪುಂಸಕತ್ವ ಭಾವಗಳನ್ನು 'ವೇದ'ವೆಂದು ಕರೆಯುತ್ತಾರೆ. ಜೀವದ ಕಾಮಸೇವನೆಯ (ಮೈಥುನ) ಇಚ್ಛೆಗೆ ವೇದವೆನ್ನುವರು. ಇದನ್ನು ಲಿಂಗವೆಂದೂ ಕರೆಯುವರು.
ಸ್ತ್ರೀವೇದ = ಯಾವ ಕರ್ಮದ ಉದಯದಿಂದ ಜೀವನಲ್ಲಿ ಪುರುಷನ ಜೊತೆ ಕಾಮಸೇವನೆಯ ಭಾವ ಉತ್ಪತ್ತಿಯಾಗುವುದೋ ಅದನ್ನು ಸ್ತ್ರೀವೇದ ಎಂದು ಕರೆಯುತ್ತಾರೆ.

೬೫. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೨೩೭ ಭವನವಾಸಿ, ವ್ಯಂತರ, ಜ್ಯೋತಿಷ್ಕ ಮತ್ತು ವೈಮಾನಿಕರೆಂದು ನಾಲ್ಕು ಬಗೆಯ ದೇವತೆಗಳ ವರ್ಗಗಳು. ಭವನವಾಸಿ ದೇವತೆಗಳಲ್ಲಿ ಅಸುರಕುಮಾರರು, ನಾಗಕುಮಾರರು, ಸುಪರ್ಣಕುಮಾರರು, ದ್ವೀಪಕುಮಾರರು, ಉದಧಿಕುಮಾರರು, ವಿದ್ಯುತ್ಕುಮಾರರು, ಸ್ತನಿತಕುಮಾರರು, ದಿಕ್ಕುಮಾರರು, ಅಗ್ನಿಕುಮಾರರು ಮತ್ತು ವಾತಕುಮಾರರು ಎಂದು ಹತ್ತು ಬಗೆಗಳಿವೆ. ರತ್ನಪ್ರಭ ಪೃಥ್ವಿಯಲ್ಲಿ ಸ್ಥಿತವಾದ ಸ್ಥಾನಗಳಿಗೆ ಭವನ ಎನ್ನುವರು.

೬೬. ಅದೇ : ಪುಟ. ೧೪೪ : ಜ್ಯೋತಿಷ್ಕ ದೇವತೆಗಳು – ಸೂರ್ಯ, ಚಂದ್ರ, ಗ್ರಹ, ನಕ್ಷತ್ರ, ಪ್ರಕೀರ್ಣಕ.

೬೭. ಅದೇ : ಪುಟ. ೩೩೧ : **ಸೌಧರ್ಮ ಕಲ್ಪ** = ಹದಿನಾರು ಸ್ವರ್ಗಗಳಲ್ಲಿ ಮೊದಲನೆಯದು.

೬೮. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : ಜೈನ ಪಾರಿಭಾಷಿಕ ಪದವಿವರಕೋಶ : ಪುಟ.೯೯ : ಆತ್ಮನನ್ನು ಕರ್ಮಪರಮಾಣುಗಳಿಂದ ಕಟ್ಟುವ, ಸುಖ–ದುಃಖಗಳನ್ನು ಉಂಟುಮಾಡುವ ದೋಷಗಳು.

೬೯. ಅದೇ ; ಪುಟ.೯೯. **ಚತುಃ ಕಷಾಯಗಳು** = ಕ್ರೋಧ, ಮಾನ, ಮಾಯ ಮತ್ತು ಲೋಭ.

೭೦. ರತನಚಂದ ಕೋಟಿ (ಅನು) :ಜೈನ ಧರ್ಮ ತಿಳಿಯಿರಿ : ಪುಟ.೩೦೦ : **ಲೇಶ್ಯಾ** = ಯಾವುದರ ಮೂಲಕ ಆತ್ಮನು ಪಾಪ–ಪುಣ್ಯದಿಂದ ತನ್ನನ್ನೇ ಮಗ್ನಗೊಳಿಸುತ್ತಾನೆಯೋ ಅದನ್ನು ಲೇಶೆ, ಲೇಶ್ಯಾ ಎನ್ನುವರು. ಇದರಲ್ಲಿ ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ ಹಾಗೂ ಶುಕ್ಲ ಎಂದು ಆರು ಭೇದಗಳು.

೭೧. ಅದೇ ; ಪು.೩೪೪, ೩೪೫. ವೇದನೆ ಮುಂತಾದ ನಿಮಿತ್ತಗಳಿಂದ ಜೀವವು ತನ್ನ ಮೂಲ ಶರೀರವನ್ನು ಬಿಡದೇ ಅದರ ಕೆಲವು ಆತ್ಮ ಪ್ರದೇಶಗಳು ಶರೀರದಿಂದ ಹೊರಗೆ ಹೊರಡುತ್ತಾನೆ. ಇದನ್ನು ಸಮುದ್ಘಾತ ಎನ್ನುವರು. ಇದರಲ್ಲಿ ವೇದನಾ, ಕಷಾಯ, ವೈಕ್ರಯಿಕ, ಮಾರಣಾಂತಿಕ, ತೈಜಸ, ಆಹಾರಕ, ಕೇವಲಿ ಎಂದು ಏಳು ಭೇದಗಳಿವೆ.

ದರ್ಶನದಿಂದ ಸಮ್ಯಕ್ತ್ವವುಂಟಾಗುವುದು. ಅನುದಿಶಾನುತ್ತರ ವಿಮಾನವಾಸಿಗಳಿಗೆ ಪೂರ್ವ ಗ್ರಹಿತವಾದ ಸಮ್ಯಕ್‌ದೃಷ್ಟಿಗಳು ಹುಟ್ಟುವುದರಿಂದ ಅಧಿಕರಣ, ಬಾಹ್ಯ, ಅಭ್ಯಂತರ[೨೨], ಅಭ್ಯಂತರಾಧಿಕರಣ ಸ್ವಸ್ವಾಮಿಸಂಬಂಧಕ್ಕೆ ಸಮ್ಯಕ್ತ್ವವು ಉಂಟಾಗುವುದು. ಸಂಸಾರಿಗಳಿಗೆ ಕೊನೆಯಲ್ಲಿ ಉತ್ಕೃಷ್ಟ ಅಂತರ್ಮುಹೂರ್ತದಿಂದ ಮೂವತ್ತಮೂರು ಸಾಗರೋಪಮ ಕಾಲ ಹೀನಾವಸ್ಥೆಯ ಪೂರ್ವಕೋಟಿ ಕಾಲವನ್ನು ಕಳೆಯಲು ಸಮ್ಯಕ್ತ್ವವುಂಟು.

"ಲಾವಂತಕಪ್ಪೇ ತೇರಸ ಅಚ್ಚುದಕಪ್ಪೇ ಯ ಹೊಂತಿ ಬಾವೀಸಾ
ಉವರಿಮ ಎಕ್ಕತ್ತೀಸಂ ಏವಂ ಸವ್ವಾಣಿ ಛಾವಟ್ಠೀ ॥೧.೪॥ (ಪ್ರಾಕೃತ)"[೨೩]

ಆತ್ಮನು ಲಾವಂತಕಲ್ಪದಲ್ಲಿ ಹದಿಮೂರು, ಅಚ್ಯುತ ಕಲ್ಪದಲ್ಲಿ ಇಪ್ಪತ್ತೆರಡು, ಉಪರಿಮ ಹಾಗೂ ಗ್ರೈವೇಯಕ ಕಲ್ಪಗಳಲ್ಲಿ ಮೂವತ್ತೊಂದು ಸಾಗರೋಪಮ ಆಯುಷ್ಯ ಉಳ್ಳವನಾಗಿರುತ್ತಾನೆ. ಆತ್ಮನು ಭವಗಳನ್ನು ದಾಟುತ್ತ ಕ್ರಮೇಣವಾಗಿ ಅರವತ್ತಾರು ಸಾಗರೋಪಮ ಆಯುಷ್ಯವನ್ನು ಕಳೆಯುತ್ತಾನೆ. ಇಂತಹ ಆತ್ಮಕ್ಕೆ ಸಮ್ಯಕ್‌ದರ್ಶನವು ಸಾಮಾನ್ಯರೀತಿ ಹಾಗೂ ನಿಸರ್ಗದತ್ತವಾಗಿ ಎರಡು ರೀತಿಯಲ್ಲಿ ಉಂಟಾಗುತ್ತದೆ. ಇದರಲ್ಲಿ ಔಪಶಮಿಕ, ಕ್ಷಾಯಿಕ, ಕ್ಷಾಯೋಪಶಮಿಕ ಎಂದು ಭೇದಗಳು. ಮತ್ತೇ ಅವುಗಳಲ್ಲಿ ಆಜ್ಞಾ, ಮಾರ್ಗ, ಉಪದೇಶ, ಸೂತ್ರ, ಬೀಜ, ಸಂಕ್ಷೇಪ, ವಿಸ್ತಾರ, ಅರ್ಥ, ಅವಗಾಢ ಹಾಗೂ ಪರಮಾವಗಾಢ ಎಂದು ಹತ್ತು ಭೇದಗಳುಂಟು. ಶ್ರದ್ಧೆಯನ್ನವಲಂಬಿಸಿ ಇವುಗಳ ಸಂಖ್ಯಾವಿಕಲ್ಪವಾಗುತ್ತದೆ. ಹೀಗೆ ನಿರ್ದೇಶಾನುಗತವಾಗಿ ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರಗಳು ಜೀವಾದಿ ತತ್ತ್ವಗಳಲ್ಲಿ ಆಗಮಾನುಸಾರವಾಗಿ ನೆಲೆಯಾಗುವವು.

ಜೀವನು ಗುಣಸ್ಥಾನ, ಮಾರ್ಗಸ್ಥಾನ, ಸ್ವಸ್ಥಾನ ಸಮುದ್ಘಾತಗಳನ್ನವಲಂಬಿಸಿ ಪ್ರಮಾಣಬದ್ಧ ಅಸ್ತಿತ್ವವನ್ನು ಪಡೆಯುತ್ತಾನೆ. ವೇದನೆ ಮುಂತಾದ ನಿಮಿತ್ತಗಳಿಂದಾಗಿ ಜೀವವು ತನ್ನ ಮೂಲ ಶರೀರವನ್ನು ಬಿಡದೇ ಕೇವಲ ಅದರ ಕೆಲವು ಆತ್ಮ ಪ್ರದೇಶಗಳು ಮಾತ್ರ ಹೊರಗೆ ಹೊರಡುತ್ತವೆ. ಅದನ್ನೇ ಸಮುದ್ಘಾತ ಎನ್ನುವರು. ಸ್ವಸ್ಥಾನಾದಿ ಪರಪರಿಣತಗಳಾದ ಜೀವಗಳು ಅತೀತ, ವರ್ತಮಾನ, ಅನಾಗತಗಳನ್ನು ಮುಟ್ಟಿದೆಡೆಯಲ್ಲಿ ಪರ್ಯಾಯ ಅವಸ್ಥಾಕಾಲದಿಂದ ಔಪಶಮಿಕಾದಿ ಭಾವಗಳು ಉಂಟಾಗುವುದು ಅದನ್ನು ಅಧಿಗಮ ಸಮ್ಯಕ್ತ್ವ ಎನ್ನಲಾಗುತ್ತದೆ. "ಇಂತು ಸಮ್ಯಕ್‌ದರ್ಶನಮಂ ಪೇಳ್ದು".[೨೪] ಹೀಗೆ ನಾನಾ ಬಗೆಯಲ್ಲಿ ಸಮ್ಯಕ್‌ದರ್ಶನಗಳು ಉಂಟಾಗುತ್ತವೆ ಎಂಬುದನ್ನು ಗ್ರಂಥಕಾರರು ತಿಳಿಸುತ್ತಾರೆ.

೩.೧.೧.೨. ಸಮ್ಯಕ್‌ಜ್ಞಾನ:

'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯಲ್ಲಿ ವಿಶ್ಲೇಷಿತವಾಗಿರುವ ಎರಡನೆಯ ರತ್ನ ಸಮ್ಯಕ್‌ಜ್ಞಾನ.

---

೨೨. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರಕೋಶ :** ಪುಟ. ೨೯
ಬಾಹ್ಯ, ಅಭ್ಯಂತರ ಎಂಬ ಎರಡು ರೀತಿಯ ತಪಸ್ಸುಗಳ ಭೇದಗಳು.

೨೩. ಡಾ. ಹಂಪ ನಾಗರಾಜಯ್ಯ (ಸಂ) : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಪ್ರಥಮೋಧ್ಯಾಯಃ) ಪುಟ. ೭

೨೪. **ಅದೇ :** (ಪ್ರಥಮೋಧ್ಯಾಯಃ) ಪುಟ. ೮

"ಸಮ್ಯಕ್‌ಜ್ಞಾನಮಂ ಪೇಳಲು ಬಂದುದುತ್ತರ ಸೂತ್ರಂ : (ಕ)
ಮತಿ–ಶ್ರುತಾವಧಿ–ಮನಃಪರ್ಯಯ–ಕೇವಲಾನಿ ಜ್ಞಾನಂ ॥೧.೯॥ (ಸಂ)"[೭೫]

ಮತಿ, ಶ್ರುತ, ಅವಧಿ, ಮನಃಪರ್ಯಯ ಹಾಗೂ ಕೇವಲಜ್ಞಾನ ಎಂದು ಐದು ರೀತಿಯಲ್ಲಿ ಸಮ್ಯಕ್‌ಜ್ಞಾನವು ಉಂಟಾಗುತ್ತದೆ. ಇವುಗಳಲ್ಲಿ ಮೊದಲೆರಡು ಪ್ರಕಾರಗಳು ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಮಾಣದಲ್ಲಿರುವವು.

೧) ಮತಿಜ್ಞಾನ :

ಪಂಚೇಂದ್ರಿಯಗಳು ಮತ್ತು ಮನಸ್ಸಿನ ಮೂಲಕ ಪದಾರ್ಥಗಳನ್ನು ಮನನ ಮಾಡುವುದು ಮತಿಜ್ಞಾನ. ಇದಕ್ಕೆ ಸ್ಮೃತಿ, ಸಂಜ್ಞಾ, ಚಿಂತಾ, ಅಭಿನಿಬೋಧ[೭೬], ಪ್ರತಿಭೆ, ಬುದ್ಧಿ, ಮೇಧಾ,[೭೭] ಪ್ರಜ್ಞೆಗಳೆಂಬ ಪರ್ಯಾಯನಾಮಗಳೂ ಇವೆ. ಇದರ ನಾಲ್ಕು ಭೇಧಗಳು:

೧. ಅವಗ್ರಹ : ಅಸ್ತಿತ್ವದಲ್ಲಿರುವ ಪದಾರ್ಥಗಳನ್ನು ಗ್ರಹಿಸುವುದು.

ಇದರಲ್ಲಿ ಮತ್ತೇ ಹನ್ನೆರಡು ಭೇದಗಳು :

- ❖ ಬಹು = ಒಂದು ಜಾತಿಯಲ್ಲಿ ಹಲವು ಭೇದಗಳಿವೆ ಎಂದು ಅರಿಯುವುದು.
- ❖ ಏಕ = ಒಂದು ಭೇದವೆಂದು ತಿಳಿಯುವುದು.
- ❖ ಬಹುವಿಧ = ಹಲವು ಜಾತಿಗಳಿವೆ ಎಂದು ಅರಿಯುವುದು.
- ❖ ಏಕವಿಧ= ಒಂದು ಜಾತಿಯಲ್ಲಿರುವ ಹಲವು ಭೇದಗಳಲ್ಲಿ ಒಂದು.
- ❖ ಕ್ಷಿಪ್ರ = ತೀವ್ರವಾಗಿ ಅರಿವುದು.
- ❖ ಅಕ್ಷಿಪ್ರ = ಮಂದಗತಿ.
- ❖ ಅನಿಸ್ವತ = ಬಹಿರಂಗವನ್ನು ಅರಿಯದಿರುವುದು.
- ❖ ನಿಸ್ವತ = ಬಹಿರಂಗವನ್ನು ಅರಿವುದು.
- ❖ ಅನುಕ್ತ = ಮತ್ತೊಂದು ಇಂದ್ರಿಯ ವಿಷಯವನ್ನರಿಯುವುದು.
- ❖ ಉಕ್ತ = ತನ್ನ ವಿಷಯವನ್ನರಿಯುವುದು.
- ❖ ಧ್ರುವ = ಸ್ಥಿರತೆಯನ್ನು ಅರಿಯುವುದು. ಉದಾ: ಬೆಟ್ಟ.
- ❖ ಅಧ್ರುವ = ಅಸ್ಥಿರವಾದವುಗಳನ್ನು ಅರಿಯುವುದು. ಉದಾ: ಮಿಂಚು.

೨. ಈಹಾ: ಅವಗ್ರಹದ ಮೂಲಕ ಉಂಟಾದ ಗ್ರಹಿತಾರ್ಥವನ್ನು ವಿಶೇಷವಾಗಿಸುವುದು. ಊಹೆ.

೩. ಅವಾಯ: ವಿಶೇಷದ ನಿರ್ಣಯದ ಮೂಲಕ ಉಂಟಾಗುವ ಯಥಾರ್ಥ ಜ್ಞಾನ.[೭೮] ನಿಶ್ಚಿಯಪೂರ್ವಕವಾದುದು.

---

೭೫. ಡಾ. ಹಂಪ ನಾಗರಾಜಯ್ಯ (ಸಂ) : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಪ್ರಥಮೋಧ್ಯಾಯಃ) ಪುಟ. ೮

೭೬. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೨೮
ಅಭಿನಿಬೋಧ = ಅಭಿಮುಖವಾದ ಮತ್ತು ನಿಯಮಿತವಾದ ಅರ್ಥದ ಅವಬೋಧವು ಅಭಿನಿಬೋಧವಾಗಿದೆ.

೭೭. ಜಿ. ಎನ್. ಚಕ್ರವರ್ತಿ; **ಸಂಸ್ಕೃತ ಕನ್ನಡ ನಿಘಂಟು** : ಪುಟ. ೭೮೫ ; **ಮೇಧಾ**=ಬುದ್ಧಿಶಕ್ತಿ. (ಮೇಧಾಶಕ್ತಿ, ಮೇಧಾವಿ)

೪. ಧಾರಣಾ: ನಿಶ್ಚಯಿತ ಜ್ಞಾನವನ್ನು ಮರೆಯದಂತೆ ಸಂಸ್ಕಾರಯುತವಾಗಿ ಧಾರಣ ಮಾಡುವುದು.

೨) ಶ್ರುತಜ್ಞಾನ :

"ಮತಿಜ್ಞಾನದ ಆಶ್ರಯದಿಂದ ಯುಕ್ತಿ, ತರ್ಕ, ಅನುಮಾನ ಮತ್ತು ಶಬ್ದಾರ್ಥಗಳ ಮೂಲಕ ಉಂಟಾಗುವ ಪರೋಕ್ಷ ಪದಾರ್ಥಗಳ ತಿಳುವಳಿಕೆ.**"**[೭೯] ಇದಕ್ಕೆ ಮತಿಜ್ಞಾನವೇ ಮೂಲ. ಇದರಲ್ಲಿ ಎರಡು ಭೇದಗಳು :

೧. ಅಕ್ಷರ : ಸೀಮಿತ ಲೋಕಮಾತ್ರ ವಿಚಾರಗಳು.

೨. ಅನಕ್ಷರ : ಅಸಂಖ್ಯಾತ ಲೋಕಮಾತ್ರ ವಿಚಾರಗಳು.

ಪುರುಷಾರ್ಥಗಳ ಮಹತ್ವ ತಿಳಿಸುವುದು **ಪ್ರಥಮಾನುಯೋಗ**. ಚತುರ್ಗತಿ, ಲೋಕ ಅಲೋಕಗಳ ಭೇದವನ್ನು ತಿಳಿಸುವುದು **ಕರಣಾನುಯೋಗ**. ಆಚಾರ್ಯರು ಮತ್ತು ಶ್ರಾವಕರ ಆಚರಣೆಗಳನ್ನು ತಿಳಿಸುವುದು **ಚರಣಾನುಯೋಗ**. ಸಕಲ ಪ್ರಾಣಿಗಳಿಗೂ ಹಿತವಾದ ಏಳು ತತ್ತ್ವಗಳನ್ನು ತಿಳಿಸುವುದು **ದ್ರವ್ಯಾನುಯೋಗ** ಎಂದು ಇದರಲ್ಲಿ ನಾಲ್ಕು ಭೇದಗಳಿವೆ.

೩) ಅವಧಿಜ್ಞಾನ :

ಅಸ್ತಿತ್ವದಲ್ಲಿರುವ ಅಗೋಚರ ಪದಾರ್ಥಗಳನ್ನು ಪ್ರತ್ಯಕ್ಷವಾಗಿ ಅರಿಯುವುದು. **"**ದ್ರವ್ಯ, ಕ್ಷೇತ್ರ, ಕಾಲ, ಭಾವಗಳನ್ನು ಅರಿತುಕೊಂಡು ಇಂದ್ರಿಯಗಳಿಗೆ ಅಗೋಚರವಾದ ವಿಷಯಗಳನ್ನು ತಿಳಿಯುವ ದಿವ್ಯಜ್ಞಾನ. ಇದರಲ್ಲಿ ದೇಶಾವಧಿ, ಪರಮಾವಧಿ, ಸರ್ವಾವಧಿ ಎಂದು ಮೂರು ಭೇದಗಳಿವೆ.**"**[೮೦] ದೇವಗತಿ ಮತ್ತು ನರಕಗತಿಯಲ್ಲಿರುವವರಿಗೆ ಕ್ಷಯೋಪಶಮ ಅವಧಿಜ್ಞಾನವು ಪ್ರಾಪ್ತವಾಗುವುದು. ಪರ್ಯಾಪ್ತಕರಿಗೆ, ತಿರ್ಯಕ್, ಸಂಜ್ಞಿ, ಪಂಚೇಂದ್ರಿಯ ಪರ್ಯಾಪ್ತಕರಿಗೆ ಲಭಿಸುವುದು. ಇದರಲ್ಲಿ ಆರು ಭೇದಗಳು :

೧. ಅನುಗಾಮಿ : ಸೂರ್ಯ ಪ್ರಕಾಶದಂತೆ ಎತ್ತ ಹೋದರೂ ಅತ್ತ ಬರುವುದು.

೨. ಅನನುಗಾಮಿ : ಮುಗ್ಧ ಪುರುಷನ ವಚನಗಳಲ್ಲಿ ನೆಲೆಯಾಗುವುದು.

೩. ವರ್ಧಮಾನ : ಶುಕ್ಲಪಕ್ಷದ ಚಂದ್ರನಂತೆ ಸಮ್ಯಕ್‌ದರ್ಶನ ವಿಶುದ್ಧ ಪರಿಣಾಮದಿಂದ ನಿತ್ಯ ಬೆಳವಣಿಗೆಯಾಗುವುದು.

೪. ಹೀಯಮಾನ: ಸಮ್ಯಕ್‌ದರ್ಶನ ಗುಣಗಳ ಪರಿಣಾಮವಾಗಿ ಕೃಷ್ಣಪಕ್ಷದ ಚಂದ್ರನಂತೆ ಹಾನಿಗಳು ಕುಂದುವುದು.

೫. ಅವಸ್ಥಿತ: ಸಮ್ಯಕ್‌ದರ್ಶನಾದಿ ಗುಣಗಳ ಪ್ರಭಾವದಿಂದ ಹುಟ್ಟದೇ, ಕೊನೆಯಾಗದೇ, ಕ್ಷೀಣಿಸದೇ, ಹೆಚ್ಚಾಗದೇ ಕೇವಲಜ್ಞಾನ ಪ್ರಾಪ್ತಿಯಾಗುವವರೆಗೂ ಸ್ಥಿತವಾಗಿರುವುದು.

---

೭೮. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೩೫

೭೯. **ಅದೇ** : ಪುಟ.೨೮೯.

೮೦. **ಅದೇ** ; ಪುಟ.೩೩

೬. ಅನವಸ್ಥಿತ : ಸಮ್ಯಕ್‌ದರ್ಶನಾದಿ ಗುಣವೃದ್ಧಿ ಮತ್ತು ಹಾನಿಗಳಿಂದಾಗಿ ವಾಯುವೇಗಕ್ಕೆ ಸಿಲುಕಿದ ಮಳೆಯಂತೆ ಒಮ್ಮೆ ಹೆಚ್ಚುತ್ತಲೂ, ಒಮ್ಮೆ ಕ್ಷೀಣಿಸುತ್ತಲೂ ಇರುವುದು.

೪) ಮನಃಪರ್ಯಾಯ:

ಪರರ ಮನದಲ್ಲಿರುವ ಇಂಗಿತವನ್ನು ಪ್ರತ್ಯಕ್ಷವಾಗಿ ತೋರಿಸುವುದು.

೧. ಋಜುಮತಿ : "ಪರರ ಮನಸ್ಸಿನ ಅವಕ್ರವಾದ ವಾಕ್, ಕಾಯ, ಮನಸ್ಸಿನ ಕೃತಾರ್ಥವನ್ನು ಅರಿಯುವುದು."[೮೧]

೨. ವಿಪುಲಮತಿ: "ಅನ್ಯರ ವಕ್ರವಾದ ವಾಕ್, ಕಾಯ, ಮನಗಳ ಅಂತರಾತ್ಮವನ್ನು ಅರಿಯುವುದು."[೮೨]

೫) ಕೇವಲಜ್ಞಾನ :

ತ್ರಿಕಾಲಗೋಚರ ಪದಾರ್ಥಗಳನ್ನು ಪ್ರತ್ಯಕ್ಷವಾಗಿ ತೋರಿಸುವುದು.

"ಕೇವಲಜ್ಞಾನಕ್ಕೆ ವಿಷಯನಿಬಂಧಮಂ ಪೇಳ್ವುದೀ ಸೂತ್ರಂ:
ಸರ್ವದ್ರವ್ಯ-ಪರ್ಯಾಯೇಷು ಕೇವಲಸ್ಯ ॥೧.೨೯॥ (ಸಂ)"[೮೩]

ಸರ್ವ ದ್ರವ್ಯಗಳಲ್ಲಿಯೂ ಅವುಗಳ ಎಲ್ಲ ಪರ್ಯಾಯಗಳಲ್ಲಿಯೂ ಕೇವಲಜ್ಞಾನಕ್ಕೆ ಸಂಬಂಧವಿದೆ.

"ಔರ್ವಾತ್ಮನೊಳೊರ್ಮೆ ಎನಿತು ಜ್ಞಾನಂಗಳು ಸಂಭವಿಸುವುದೆಂಬುದಂ ಪೇಳ್ವುದೀ ಸೂತ್ರಂ
ಭಾಜ್ಯಾನಿ ಯುಗಪದೇಕಸ್ಮಿನ್ನಚತುಭ್ಯಃ ॥೧.೩೦॥ (ಸಂ)"[೮೪]

ಜೀವಗಳಲ್ಲಿ ಏಕಕಾಲಕ್ಕೆ ಉಂಟಾಗುವ ಜ್ಞಾನಗಳು: ಒಂದೇ ಜ್ಞಾನವಾದರೆ ಅದು ಕೇವಲಜ್ಞಾನ ಎರಡಾದರೆ ಮತಿ ಮತ್ತು ಶ್ರುತಜ್ಞಾನ. ಮೂರಾದರೆ ಮತಿ, ಶ್ರುತ, ಅವಧಿ ಇಲ್ಲವೇ ಮನಃಪರ್ಯಾಯ. ನಾಲ್ಕಾದರೆ ಅವು ಮತಿ, ಶ್ರುತ, ಅವಧಿ, ಮನಃಪರ್ಯಾಯ. ಹೀಗೆ ಸಮ್ಯಕ್‌ಜ್ಞಾನವು ಐದು ರೀತಿಯಲ್ಲಿ ಉಂಟಾಗುವುದು ಎಂದು 'ತತ್ತ್ವಾರ್ಥ ಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯಲ್ಲಿ ತಿಳಿಸಲಾಗಿದೆ.

೧. ಸಪ್ತ ನಯಗಳು:

"ತದನಂತರ ನಯನಂ ಪೇಳ್ವುದೀ ಸೂತ್ರಂ:
ನೈಗಮ-ಸಂಗ್ರಹ-ವ್ಯವಹಾರ-ಋಜುಸೂತ್ರ
ಶಬ್ದ ಸಮಭಿರೂಢೈವಂಭೂತನಯಾಃ॥೧.೩೩॥ (ಸಂ)"[೮೫]

ಇದು ಜ್ಞಾನವನ್ನು ಸ್ಪಷ್ಟಪಡಿಸುವ ಏಳು ಹಾದಿಗಳ (ಸಪ್ತನಯ) ತತ್ತ್ವವಾಗಿದೆ.

- ❖ ನೈಗಮ ನಯ: ಭವಿಷ್ಯದಲ್ಲಿ ಉತ್ಪನ್ನವಾಗುವ ಪದಾರ್ಥಗಳ ಸಂಕಲ್ಪವನ್ನು ಗ್ರಹಿಸುವುದು.
- ❖ ಸಂಗ್ರಹ ನಯ: ಸಮಾನವಸ್ತುಗಳನ್ನು ಸಂಗ್ರಹ ಮಾಡುವುದು.

---

೮೧. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೮೭

೮೨. ಅದೇ : ಪುಟ. ೨೭೪

೮೩. ಡಾ. ಹಂಪ ನಾಗರಾಜಯ್ಯ (ಸಂ) : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ಪ್ರಥಮೋಧ್ಯಾಯಃ) ಪು. ೧೪

೮೪. ಅದೇ : (ಪ್ರಥಮೋಧ್ಯಾಯಃ) ಪುಟ. ೧೪

೮೫. ಅದೇ : (ಪ್ರಥಮೋಧ್ಯಾಯಃ) ಪುಟ. ೧೫

- ❖ ವ್ಯವಹಾರ ನಯ: ಸಂಗ್ರಹ ಮಾಡಿದ ಪದಾರ್ಥಗಳನ್ನು ವಿಧಿಪೂರ್ವಕ ಭೇದಿಸುವುದು.
- ❖ ಋಜುಸೂತ್ರ ನಯ: ವರ್ತಮಾನಕಾಲ ಸಂಬಂಧಿ ಪದಾರ್ಥಗಳನ್ನು ಗ್ರಹಿಸುವುದು.
- ❖ ಶಬ್ದ ನಯ: ಶಬ್ದದ ಮಾಧ್ಯಮದಿಂದ ಅರ್ಥದ ಬೋಧ ಮಾಡುವುದು.
- ❖ ಸಮಭಿರೂಢ ನಯ: ಶಬ್ದವು ಯಾವ ಅರ್ಥ ಅಥವಾ ಪದಾರ್ಥದ ಸಲುವಾಗಿ ಪ್ರಸಿದ್ಧವಿದೆಯೋ ಆ ಶಬ್ದವು ಪ್ರತಿಯೊಂದು ಅವಸ್ಥೆಯಲ್ಲಿಯೂ ಅದೇ ಅಥವಾ ಪದಾರ್ಥದ ವಾಚಕವಾಗವದು.
- ❖ ಏವಂಭೂತ ನಯ: ಪರ್ಯಾಯ ಅಥವಾ ಕ್ರಿಯೆಗೆ ಪ್ರಾಪ್ತವಾಗಿದೆಯೋ ಅದರ ರೂಪವನ್ನು ನಿಶ್ಚಯಿಸಿ ಹೆಸರಿಸುವುದು.

"ಈ ಎಲ್ಲ ನಯಗಳು ಅಪೇಕ್ಷಾ ಸಹಿತ ವರ್ಣನೆ ಮಾಡುತ್ತವೆ. ಇವುಗಳಿಂದ ಯಾವುದೇ ಒಂದು ನಯದ ಆಶ್ರಯ ತೆಗೆದುಕೊಳ್ಳುವ ವ್ಯಕ್ತಿಯು ತನ್ನ ಕಲ್ಯಾಣ ಮಾಡಿಕೊಳ್ಳವುದಿಲ್ಲ. ತತ್ವಬೋಧದ ಸಲುವಾಗಿ ನಯಗಳ ಸಮ್ಯಕ್ತ್ವ, ಅಂದರೆ ಅಪೇಕ್ಷಾ ಸಹಿತ ಅಲಂಬನೆಯನ್ನು ತೆಗೆದುಕೊಳ್ಳಬೇಕು."[೮೬] ಇವುಗಳಿಗೆ ವ್ಯತಿರಿಕ್ತವಾದ ಅಂಶಗಳು ದುರ್ನಯಗಳು ಎನಿಸಿಕೊಳ್ಳುತ್ತವೆ.

ಹೀಗೆ ಮೋಕ್ಷಶಾಸ್ತ್ರದ ಪ್ರಥಮಾಧ್ಯಾಯವು ಸಮ್ಯಕ್ತ್ವ, ದರ್ಶನ, ಜ್ಞಾನ, ನಯಗಳನ್ನು ವಿಶ್ಲೇಷಿಸುತ್ತದೆ.

"ಸಮ್ಯಗ್ದರ್ಶನ ಜ್ಞಾನಂಗಳ್ಗೆ ವಿಷಯಭಾವದಿಂ ಪೇಳೆಪಟ್ಟ ಜೀವಕ್ಕೆ ಸ್ವತತ್ತ್ವಮೇನೆಂದೊಡೆ ಪೇಳ್ದಪರು:

ಔಪಶಮಿಕ ಕ್ಷಾಯಿಕೌ ಭಾವೌ ಮಿಶ್ರಶ್ಚ
ಜೀವಸ್ಯ ಸ್ವತತ್ತ್ವಮೌದಯಿಕ ಪಾರಿಣಾಮಿಕೌ ಚ ॥೨.೪॥"[೮೭]

ಸಮ್ಯಕ್‌ದರ್ಶನ, ಜ್ಞಾನಗಳಿಗೆ ವಿಷಯಭಾವದಿಂದ ಜೀವನಲ್ಲಿ ಐದು ಆತ್ಮ ತತ್ತ್ವಗಳು ಉಂಟಾಗುತ್ತವೆ.

೨. **ಆತ್ಮತತ್ತ್ವಗಳು:**

- ❖ ಔಪಶಮಿಕ ಭಾವ: ಕರ್ಮಗಳ ಉಪಶಮನದಿಂದ ಉಂಟಾಗುವುದು.
- ❖ ಕ್ಷಾಯಿಕ ಭಾವ: ಕರ್ಮಗಳ ನಿರ್ಮೂಲನೆಯೇ ಕ್ಷಾಯಿಕಭಾವ.
- ❖ ಕ್ಷಾಯೋಪಶಮ: ಕರ್ಮಗಳು ಮಂದವಾಗಿ ನಿರ್ಮೂಲವಾಗುವುದು.

} ತ್ರಿತಯಗಳು

- ❖ ಔದಯಿಕ ಭಾವ: ಕರ್ಮದ ಉದಯದಲ್ಲಿ ಉಂಟಾಗುವ ಭಾವ.
- ❖ ಪಾರಿಣಾಮಿಕ: ಸ್ವಭಾವದಿಂದ ಉಂಟಾಗುವುದು.

ಹೀಗೆ ಉಂಟಾಗುವ ಐದೂ ಭಾವಗಳನ್ನು ಹದಿನಾಲ್ಕು ಗುಣಸ್ಥಾನಗಳಲ್ಲಿ ಯೋಜಿಸಿ ಗುರುತಿಸಲಾಗುತ್ತದೆ.

---

೮೬. ಶೇಖರಚಂದ್ರ ಜೈನ (ಹಿಂದಿ), ರತನಚಂದ ಕೋಟಿ (ಕ. ಅನು) ; **ಜೈನಧರ್ಮ ತಿಳಿಯಿರಿ** : ಪುಟ. ೩೩೫
೮೭. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ದ್ವಿತೀಯೋಧ್ಯಾಯಃ) ಪು. ೧೭

i. **ಗುಣಸ್ಥಾನಗಳು:**

೧. ಮಿಥ್ಯಾದೃಷ್ಟಿ		
೨. ಸಾಸಾದನ	}	ಮಿಥ್ಯಾತ್ರಯಗಳು
೩. ಮಿಶ್ರ/ಸಮ್ಯಗ್ಮಿಥ್ಯಾದೃಷ್ಟಿ		

೪. ಅಸಂಯತ

೫. ದೇಶಸಂಯತ

೬. ಪ್ರಮತ್ತ

೭. ಅಪ್ರಮತ್ತ

೮. ಅಪೂರ್ವ ಕರಣೋಪಶಮಕ

೯. ಅನಿವೃತ್ತ ಕರಣೋಪಶಮಕ

೧೦. ಸೂಕ್ಷ್ಮ ಸಾಂಪರಾಯ ಕರಣೋಪಶಮಕ

೧೧. ಉಪಶಾಂತ ಕಷಾಯ ಕರಣೋಪಶಮಕ

೧೨. ಕ್ಷೀಣಕಷಾಯ ಕ್ಷಪಕ

೧೩. ಸ್ವಸ್ಥಾನ ಜಿನ

೧೪. ಸಮುದ್ಘಾತ ಜಿನ

"ಸ್ವಸ್ಥಾನ ಜಿನ ಹಾಗೂ ಸಮುದ್ಘಾತ ಜಿನರನ್ನು ಸಯೋಗ ಕೇವಲಿ ಮತ್ತು ಅಯೋಗ ಕೇವಲಿಗಳು ಎಂತಲೂ ಕರೆಯಲಾಗುತ್ತದೆ. ಒಂದರಿಂದ ನಾಲ್ಕು ಗುಣಸ್ಥಾನಗಳು ದರ್ಶನ ಮೋಹನೀಯ ಕರ್ಮದ ನಿಮಿತ್ತದಿಂದ, ಐದರಿಂದ ಹನ್ನೆರಡನೆಯ ಗುಣಸ್ಥಾನಗಳು ಚಾರಿತ್ರ ಮೋಹನೀಯ ಕರ್ಮದ ನಿಮಿತ್ತದಿಂದ, ಹದಿಮೂರನೆಯ ಮತ್ತು ಹದಿನಾಲ್ಕನೆಯ ಗುಣಸ್ಥಾನಗಳು ಯೋಗದ ನಿಮಿತ್ತದಿಂದ ಉಂಟಾಗುತ್ತವೆ."[೮೮]

ii. **ಭಾವಗಳು:**

ಜೀವದ ಅಂತರಂಗದಲ್ಲಿ ಪ್ರತಿಕ್ಷಣ ಭಾವಗಳು ಏಳುತ್ತಲೇ ಇರುತ್ತವೆ. ಇದು ಜೀವದ ವಿಶೇಷಗುಣವಾಗಿದೆ. ಭಾವಗಳು ಜೀವದಲ್ಲಿ ಮಾತ್ರ ಕಾಣುತ್ತವೆ. ಅಜೀವದಲ್ಲಿ ಇಲ್ಲ. ಉತ್ತಮ ಭಾವಗಳಿಂದ ಸದ್ಗತಿಯೂ ಮತ್ತು ಕೆಟ್ಟ ಭಾವಗಳಿಂದ ದುರ್ಗತಿಯೂ ಪ್ರಾಪ್ತವಾಗುವುದು.

ಮಿಥ್ಯಾತ್ರಯಗಳಲ್ಲಿ ಭಾವತ್ರಯಗಳು :

೧. ಕ್ಷಾಯೋಪಶಮಿಕ

೨. ಔದಾಯಿಕ   ೩ * ೩ = ೯

೩. ಪಾರಿಣಾಮಿಕ

---

೮೮. ಶೇಖರಚಂದ್ರ ಜೈನ (ಹಿಂದಿ), ರತನಚಂದ ಕೋಟಿ (ಕ. ಅನು) ; **ಜೈನಧರ್ಮ ತಿಳಿಯಿರಿ** : ಪುಟ.೨೨೪

ಅಸಂಯತ ಮತ್ತು ಉಪಶಮಕ ಚತುಷ್ಕಗಳಲ್ಲಿ

೧. ಔಪಶಮಿಕ

೨. ಕ್ಷಾಯಿಕ

೩. ಕ್ಷಾಯೋಪಶಮಿಕ   ೫ * ೫ = ೨೦

೪. ಔದಾಯಿಕ

೫. ಪಾರಿಣಾಮಿಕ

ಕ್ಷಪಕ ಚತುಷ್ಕಗಳಲ್ಲಿ

೧. ಕ್ಷಾಯಿಕ

೨. ಕ್ಷಾಯೋಪಶಮ   ೪ * ೪ = ೧೬

೩. ಔದಯಿಕ

೪. ಪಾರಿಣಾಮಿಕ

ಜಿನದ್ವಯರಲ್ಲಿ

೧. ಕ್ಷಾಯಿಕ

೨. ಔದಾಯಿಕ   ೩ * ೨ = ೬

೩. ಪಾರಿಣಾಮಿಕ

ಸಿದ್ಧಪರಮೇಷ್ಠಿಗಳಲ್ಲಿ

೧. ಕ್ಷಾಯಿಕ

೨. ಪಾರಿಣಾಮಿಕ   ೨

ಹೀಗೆ ೨ ಔಪಶಮಿಕ ಭಾವಗಳು, ೯ ಕ್ಷಾಯಿಕ ಭಾವಗಳು, ೧೮ ಕ್ಷಾಯೋಪಶಮ ಭಾವಗಳು, ೨೧ ಔದಯಿಕ ಭಾವಗಳು ಹಾಗೂ ೩ ಪಾರಿಣಾಮಿಕ ಭಾವಗಳು ಸೇರಿ ಒಟ್ಟು ೫೩ ಭಾವಗಳು ಪ್ರಭಾವವನ್ನು ಬೀರುತ್ತವೆ. ಇವುಗಳಲ್ಲಿ ಉಪಶಮ ಸಮ್ಯಕ್ತ್ವ ಮತ್ತು ಉಪಶಮ ಚಾರಿತ್ರಗಳು ಔಪಶಮಿಕ ಭಾವದ ಭೇದಗಳು. ಕೇವಲಜ್ಞಾನ, ಕೇವಲ ದರ್ಶನ, ಕ್ಷಾಯಿಕ ದಾನ, ಕ್ಷಾಯಿಕ ಲಾಭ, ಕ್ಷಾಯಿಕ ಭೋಗ, ಕ್ಷಾಯಿಕ ಉಪಭೋಗ, ಕ್ಷಾಯಿಕ ವೀರ್ಯ, ಕ್ಷಾಯಿಕ ಸಮ್ಯಕ್ತ್ವ, ಕ್ಷಾಯಿಕ ಸಮ್ಯಕ್ತ್ವಗಳೆಂದು ೯ ಕ್ಷಾಯಿಕಭಾವದ ಭೇದಗಳು. ೫ ಜ್ಞಾನಗಳು, ೫ ಅಜ್ಞಾನಗಳು, ದರ್ಶನ, ದಾನ, ೩ ವೇದಕ ಸಮ್ಯಕ್ತ್ವಗಳು, ಕ್ಷಾಯೋಪಶಮಿಕಗಳು, ಸಂಯಮ, ದೇಶಸಂಯಮ, ಅಸಂಯಮ ಎಂದು ೧೮ ಕ್ಷಾಯೋಪಶಮಿಕ ಭಾವಗಳು. ಚತುರ್ಗತಿಗಳು, ಆರು ಕಷಾಯಗಳು, ಮೂರು ವೇದಗಳು (ಪುರುಷ, ಸ್ತ್ರೀ, ನಪುಂಸಕ), ಮಿಥ್ಯಾತ್ವಗಳು, ಅಜ್ಞಾನ, ಅಸಂಯತ, ಅಸಿದ್ಧ, ಲೇಶ್ಯಗಳು ಮುಂತಾಗಿ ೨೧ ಔದಯಿಕ ಭಾವಗಳು. ಜೀವತತ್ತ್ವ, ಭವ್ಯತತ್ತ್ವ, ಅಭವ್ಯತತ್ತ್ವಗಳು ಪಾರಿಣಾಮಿಕ ಭಾವಗಳು.

೩.೧.೧.೩. ಸಮ್ಯಕ್ ಚಾರಿತ್ರ್ಯ:

"ಯತ್ ಚರ್ಯತೇ ತಚ್ಚಾರಿತ್ರಂ'. ಅಂದರೆ ಯಾವುದರ ಆಚರಣೆ ಮಾಡಲಾಗುತ್ತದೆಯೋ ಅದು ಚಾರಿತ್ರವಾಗಿದೆ. ಪಾಪದಿಂದ ನಿವೃತ್ತಿ ಮತ್ತು ಆತ್ಮಸ್ವರೂಪದಲ್ಲಿ ಪ್ರವೃತ್ತಿ ಅಂದರೆ ಪಾಪಕರ್ಮಗಳಿಂದ ದೂರಾಗಿ ಶುಭಕಾರ್ಯಗಳಲ್ಲಿ ತೊಡಗುವುದು ಚಾರಿತ್ರವಾಗಿದೆ. 'ಆಚಾರಃ ಪ್ರಥಮೋ ಧರ್ಮಃ' ಅಂದರೆ ಆಚಾರವೇ ಮೊದಲ ಧರ್ಮವಾಗಿದೆ. ಆಚರಣೆಯು ಶುದ್ಧವಾಗಿದ್ದರೆ ವಿಚಾರಗಳು ಶುದ್ಧವಾಗಿರುತ್ತವೆ. ಇದರಿಂದ ಮುಕ್ತಿಮಾರ್ಗ ಸುಗಮವಾಗುತ್ತದೆ."[೮೯] ಇಲ್ಲಿ ಪಂಚಾಣುವ್ರತಗಳನ್ನು ಪಾಲಿಸಿ, ಪಂಚಪಾಪಗಳನ್ನು ಕಳೆದುಕೊಂಡು ಕಷಾಯಗಳಿಂದ ದೂರವಾಗುವುದೇ ಚಾರಿತ್ರ ಎನಿಸಿಕೊಳ್ಳುತ್ತದೆ.

ಅನಂತ ಆಕಾಶದಲ್ಲಿ ಘನೋದಧಿ, ಘನವಾತ, ತನುವಾತಗಳೆಂಬ ಮೂರು ರೀತಿಯ ಗಾಳಿಯಿರುತ್ತದೆ. ಈ ಗಾಳಿಗಳ ಮಧ್ಯದಲ್ಲಿಯೇ ಅಧೋಲೋಕ, ಮಧ್ಯಲೋಕ, ಊರ್ಧ್ವಲೋಕಗಳು ನಿಷ್ಪನ್ನವಾಗಿವೆ. ಅಧೋಲೋಕವು ಏಳು ನರಕಗಳನ್ನು ಒಳಗೊಂಡಿದ್ದು, ಬೆತ್ತದ ಕುರ್ಚಿಯ ಆಕಾರದಲ್ಲಿದೆ. ಮಧ್ಯಲೋಕವು ಚಪ್ಪಟೆಯಾಗಿದೆ. ಊರ್ಧ್ವಲೋಕವು ಮದ್ದಳೆಯನ್ನು ನೇರವಾಗಿ ನಿಲ್ಲಿಸಿದಾಗ ಕಾಣುವ ಆಕೃತಿಯನ್ನು ಹೊಂದಿದೆ. "ಈ ಲೋಕವು ಕೆಳಗಿನಿಂದ ಮೇಲೆ ೧೪ ರಜ್ಜುಗಳಷ್ಟು ಎತ್ತರವನ್ನು ಹೊಂದಿದೆ. ಪೂರ್ವ-ಪಶ್ಚಿಮ ಹಾಗೂ ದಕ್ಷಿಣೋತ್ತರವಾಗಿ ಏಳೇಳು ರಜ್ಜುಗಳಷ್ಟು ವಿಸ್ತಾರವನ್ನು ಹೊಂದಿದೆ. ಈ ಲೋಕದ ಸುತ್ತಲೂ ಮರಕ್ಕೆ ತಿರುಳಿರುವಂತೆ ಒಂದು ರಜ್ಜುವಿನಷ್ಟು ಅಗಲವಾಗಿ ಚೌಕಾಕಾರದಲ್ಲಿ ತ್ರಸನಾಳಿ ಇರುವುದು. ಇಲ್ಲಿ ತ್ರಸ ಜೀವಿಗಳು ಓಡಾಡುತ್ತಿರುತ್ತವೆ. ಉಳಿದ ಭಾಗದಲ್ಲಿ ಸ್ಥಾವರ ಜೀವಿಗಳಿರುತ್ತವೆ. ಲೋಕಗಳು ಮಹಾಮೇರುವನ್ನು ಸುತ್ತುತ್ತಿರುತ್ತವೆ. ಈ ಮಹಾಮೇರುವಿನ ತುದಿಯಲ್ಲಿ ಮೋಕ್ಷಲೋಕವಿರುವುದು. ಅದನ್ನು ಸಿದ್ಧಶಿಲೆ ಎಂದು ಕರೆಯಲಾಗುತ್ತದೆ."

೩.೧.೧.೪. ಜೀವತತ್ತ್ವಗಳು:

ಚೈತನ್ಯವೇ ಜೀವದ ಪ್ರಮುಖ ಲಕ್ಷಣ ಎಂದು ಹೇಳುವ ಜೈನಾಗಮಗಳು, ಜೀವವಿಕಾಸ ತತ್ತ್ವವನ್ನು ಮನೋಹರವಾಗಿಯೂ, ವಿಜ್ಞಾನಕ್ಕೆ ಹತ್ತಿರವಾಗಿಯೂ ಪ್ರತಿಪಾದಿಸುತ್ತವೆ. ಅಂತೆಯೇ ಜೀವತತ್ತ್ವ, ಭವ್ಯತತ್ತ್ವ, ಅಭವ್ಯತತ್ತ್ವಗಳು ಜೀವದ ಸಾಧಾರಣ ಪಾರಿಣಾಮಿಕ ಭಾವಗಳು. ಅಸ್ತಿತ್ವ, ನಿತ್ಯತ್ವ, ನಾಸ್ತಿತ್ವ, ಪ್ರದೇಶತ್ವ, ಪಾರಿಣಾಮಿತ್ವ, ಲಘುತ್ವ ಹಾಗೂ ಪ್ರಮೇಯತ್ವಗಳು ಜೀವ-ಅಜೀವಗಳ ಅಸಾಧಾರಣ ಪಾರಿಣಾಮಿಕ ಭಾವಗಳು.

"ಅದಱ ಭೇದ ಪ್ರಭೇದಮಂ ಪೇೞಲು ಬಂದುದುತ್ತರ ಸೂತ್ರಂ :
ಸದ್ವಿವಿಧೋಷ್ಟಚತುರ್ಭೇಧಃ ॥೨.೮॥ (ಸಂ)"[೯೦]

೮೯. ಶೇಖರಚಂದ್ರ ಜೈನ (ಹಿಂದಿ), ರತನಚಂದ ಕೋಟಿ (ಕ. ಅನು) ; **ಜೈನಧರ್ಮ ತಿಳಿಯಿರಿ** : ಪುಟ. ೧೮೪

೯೦. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ದ್ವಿತೀಯೋಧ್ಯಾಯಃ) ಪುಟ.೨೦

"ಭೂತ, ಭವಿಷ್ಯ, ವರ್ತಮಾನ ಮೂರು ಕಾಲಗಳಲ್ಲಿ ಯಾವುದಕ್ಕೆ ಇಂದ್ರಿಯ ಪ್ರಾಣ, ಬಲಪ್ರಾಣ, ಆಯುಪ್ರಾಣವು, ಉಚ್ಛ್ವಾಸ-ನಿಶ್ವಾಸಗಳಿವೆಯೋ ಅದುವೇ ಜೀವ."[೯೧] ಜೀವಗಳಲ್ಲಿ ಸಂಸಾರಿಗಳು ಮತ್ತು ಮುಕ್ತಾತ್ಮರೆಂದು ಪ್ರಕಾರಗಳು. ಮುಕ್ತಾತ್ಮರೆಂದರೆ ಹುಟ್ಟು-ಸಾವುಗಳನ್ನು ಗೆದ್ದವರು. ಅಂದರೆ ಮೋಕ್ಷವನ್ನು ಸಾಧಿಸಿದವರು ಎಂದರ್ಥ. ಪ್ರಸ್ತುತ ಗ್ರಂಥದಲ್ಲಿ ಮುಕ್ತರ ಕುರಿತಾಗಿ ಕವಿಯು ಚರ್ಚಿಸುವುದಿಲ್ಲ. ಮುಕ್ತಿಯನ್ನು ಸಾಧಿಸಬೇಕಾದವರಿಗೆ ಇದು ಬೋಧನೆಯಾಗಿದೆ.

೧) ಸಂಸಾರಿಗಳು:

"ಸಂಸರಣ ಅಂದರೆ ಪರಿವರ್ತನೆ. ಪರಿವರ್ತನೆಯನ್ನು ಉಂಟುಮಾಡುವುದೇ ಸಂಸಾರ. ಕರ್ಮ ವಿಪಾಕದಿಂದ ಆತ್ಮನಿಗೆ ಭವಾಂತರ ಪ್ರಾಪ್ತಿಯಾಗುವುದು ಸಂಸಾರ. ಇದರಲ್ಲಿ ದ್ರವ್ಯ, ಕ್ಷೇತ್ರ, ಕಾಲ, ಭವ, ಭಾವಗಳೆಂದು ಐದು ವಿಧಗಳು. ಮಿಥ್ಯಾದರ್ಶನ, ಅವಿರತಿ, ಪ್ರಮಾದ, ಕಷಾಯ, ಯೋಗ, ಉಪಾರ್ಜಿತ, ಜ್ಞಾನಾವರಣೀಯಾದಿ ಕರ್ಮಗಳು ಸಂಸಾರ ಕಾರಣಗಳು. ಇದರಡಿಯಲ್ಲಿರುವ ಜೀವಗಳೇ ಸಂಸಾರಿಗಳು."[೯೨] ಸಂಸಾರಿಗಳಲ್ಲಿ ತ್ರಸ[೯೩], ಸ್ಥಾವರ[೯೪]ಗಳು ಎಂದು ಎರಡು ಭೇದಗಳು. ತ್ರಸಜೀವಿಗಳಲ್ಲಿ ದ್ರವ್ಯೇಂದ್ರಿಯ ಮತ್ತು ಭಾವೇಂದ್ರಿಯಗಳೆಂದು ಎರಡು ಭೇದಗಳು. ನಾರಕ, ಮನುಷ್ಯ, ದೇವ ಹಾಗೂ ತಿರ್ಯಂಚ ಎಂಬ ಚತುರ್ಗತಿಯಲ್ಲಿ ಸುತ್ತುವ ಆತ್ಮಗಳೇ ಸಂಸಾರಿಗಳು.

೧. ದ್ರವ್ಯೇಂದ್ರಿಯಗಳು: ಕ್ಷಯೋಪಶಮ ಜೀವ ಪ್ರದೇಶಗಳಾದ ಬಾಹ್ಯಾಂತರ ಮತ್ತು ಉಪಕರಣ ಸ್ಥಾನದಾಕಾರವನ್ನುಳ್ಳದ್ದು. ಸ್ಪರ್ಶನಕ್ಕೆ ಅನೇಕಾಕಾರಗಳುಂಟು. ರಸನ, ಘ್ರಾನ, ಚಕ್ಷುಃ, ಶ್ರೋತಗಳನ್ನು ಉಳ್ಳವುಗಳು. ಇದರಲ್ಲಿ ಬಾಹ್ಯಾಭ್ಯಂತರ ನಿರ್ವತ್ತಿ, ಬಾಹ್ಯಾಭ್ಯಂತರೋಪಕರಣ ಎಂದು ಎರಡು ಭೇದಗಳಿವೆ.

೨. ಭಾವೇಂದ್ರಿಯಗಳು: ಇದರಲ್ಲಿ ಅರ್ಥಗ್ರಹಣ ಶಕ್ತಿ ಮತ್ತು ಅರ್ಥಗ್ರಹಣ ವ್ಯಾಪಾರವೆಂದು ಭೇದಗಳಿವೆ.

"ಆ ಇಂದ್ರಿಯಗಳಾವ ಸ್ವರೂಪಮಪ್ಪ ಪೆಸರನುಳ್ಳುವೆಂದೊಡೆ ಪೇಳ್ವುದೀ ಸೂತ್ರಂ :
ಸ್ಪರ್ಶ ರಸ ಗಂಧ ವರ್ಣ ಚಕ್ಷುಃ ಶ್ರೋತ್ರಾಣಿ ॥ ೨.೧೯ ॥ (ಸಂ)"[೯೫]

ಸಸ್ಯ-ವನಸ್ಪತಿಗಳು ಏಕೇಂದ್ರಿಯಗಳು, ಕ್ರಿಮಿ-ಕೀಟಕಗಳು ದ್ವೀಂದ್ರಿಯಗಳು, ಇರುವೆ-ಚಿಟ್ಟೆಗಳು ತ್ರೀಂದ್ರಿಯಗಳು, ದುಂಬಿ ಮೊದಲಾದವುಗಳು ಚತುರಿಂದ್ರಿಯಗಳು, ಮನುಷ್ಯ,

---

೯೧. ಎರ್ತೂರು ಶಾಂತಿರಾಜ ಶಾಸ್ತ್ರಿ ; **ದ್ರವ್ಯ ಸಂಗ್ರಹಃ ಜೈನ ಸಿದ್ಧಾಂತ ಸಂಗ್ರಹ** ; ಪುಟ. ೪

೯೨. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ३೦೨

೯೩. **ಅದೇ** : ಪುಟ. ೧೫೨. **ತ್ರಸ** = ಎರಡರಿಂದ ಐದು ಇಂದ್ರಿಯಗಳನ್ನು ಹೊಂದಿರುವ ಜೀವಗಳು.

೯೪. **ಅದೇ** : ಪುಟ. ೩೩೩. **ಸ್ಥಾವರ** = ಏಕೇಂದ್ರಿಯ ಜೀವ. ಸ್ಪರ್ಶೇಂದ್ರಿಯದ ಮೂಲಕ ನೋಡುತ್ತವೆ, ತಿನ್ನುತ್ತವೆ, ಸ್ವಾಮಿತ್ವವನ್ನು ಹೊಂದುತ್ತವೆ.

೯೫. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ದ್ವಿತೀಯೋಧ್ಯಾಯಃ) ಪು. ೨೨

ಪಶುವಾದಿಗಳು ಪಂಚೇಂದ್ರಿಯ ಜೀವಿಗಳು. ಇವುಗಳಲ್ಲಿ ಸಮನಸ್ಕ ಮತ್ತು ಅಮನಸ್ಕ ಎಂದು ಎರಡು ಭೇದಗಳು.

ಸಮನಸ್ಕ ಸಂಸಾರಿಗಳ ಲಕ್ಷಣಗಳು:

- ಶಿಕ್ಷಾ = ಗ್ರಹಣ ಶಕ್ತಿಯುಳ್ಳದ್ದು. (ಮನುಷ್ಯಾದಿ ಜೀವಿಗಳು)
- ಕ್ರಿಯಾ = ಕರ–ಚರಣ ಚಲನ–ವಲನವುಳ್ಳದ್ದು.
- ಉಪದೇಶ = ಒಳಿತು ಕೆಡುಕುಗಳ ಚಿಂತನೆ ಮಾಡುವುದು.
- ಆಲಾಪ = ಶ್ಲೋಕಾದಿಗಳ ಪಠಣ ಮಾಡುವುದು.

ಹಿತಾಹಿತ ವಿಷಯ ಪರಿಣಾಮವಾಗಿ 'ಮನಃ ಪ್ರಣಿಧಾನ' ಪೂರ್ವಕವಾಗಿ ಪೂರ್ವ ಶರೀರ ಮತ್ತು ಉತ್ತರಶರೀರಾಭಿಮುಖವಾಗಿರುವ ಜೀವಗಳಿಗೆ ನಿರ್ಮನಸ್ಕಗಳೆನ್ನುವರು. ಇದು ವಿಗ್ರಹಗತ ಕಾರ್ಮಣಯೋಗದ ಫಲವಾಗಿದೆ.

"ಗಮನಮನುಳ್ಳ ಜೀವ–ಪುದ್ಗಲಂಗಳ್ಗೆ ಗಮನಮೆಂತಕ್ಕುಮೆಂದೊಡೆ ಪೇಳುವುದುತ್ತರ ಸೂತ್ರಂ:
ಅನುಶ್ರೇಣಿಗತಿಃ ॥೨.೨೬॥"[೯೬]

ಊರ್ಧ್ವಲೋಕ[೯೭] ದಿಂದ ಅಧೋಗಮನ, ಅಧೋಲೋಕ[೯೮] ದಿಂದ ಊರ್ಧ್ವಗಮನ, ತಿರ್ಯಕ್‌ಲೋಕದಿಂದ ಊರ್ಧ್ವ ಇಲ್ಲವೇ ಅಧೋಗಮನ ಹೀಗೆ ಆತ್ಮನು ಜೀವ–ಪುದ್ಗಲಗಳಲ್ಲಿ ಆಕಾಶಪ್ರದೇಶದಿಂದ ಪಂಕ್ತಿರೂಪದಲ್ಲಿ ಕ್ರಮಾನುಗತಾಗಿ ಸಂಚರಿಸುತ್ತಾನೆ. ಸಂಸಾರಿ ಜೀವಗಳಿಗೆ ಬಾಣದಂತೆ ನೇರವಾಗಿರುವ ಇಷುಗತಿ, ಗುಂಡಿನಂತೆ ಗೋಲಾಕಾರವಾಗಿರುವ ಪಾಣಿಮುಕ್ತಗತಿ, ನೇಗಿಲದಂತೆ ವಕ್ರವಾಗಿರುವ ಲಾಂಗಲಗತಿ, ಮೂರು ವಕ್ರತೆಗಳನ್ನುಳ್ಳ ಗೋಮೂತ್ರಗತಿಗಳೆಂದು ನಾಲ್ಕು ಪ್ರಕಾರಗಳು. ಹೀಗಿರುವ ಜೀವ (ಸಂಸಾರ) ಪ್ರಕಾರಗಳ ನಿಷ್ಪತ್ತಿ ವಿಷಯವನ್ನು ಈ ಮುಂದಿನಂತೆ ವಿವರಿಸಲಾಗಿದೆ. ಸುತ್ತಲಿರುವ ಜೀವ ಪುದ್ಗಲಗಳ ವಶದಿಂದ ಶುಕ್ಲ[೯೯] ಹಾಗೂ ಶೋಣಿತ[೧೦೦]ಗಳ ಸಂಯೋಗದಿಂದ ಜೀವೋತ್ಪತ್ತಿಯಾಗಿ ಶರೀರಾಚ್ಛಾದಿತವಾಗುವುದು. ಹೀಗಿರುವ ಜನ್ಮವಿಶೇಷಗಳ ಆಧಾರವನ್ನು ಈ ಕೆಳಗಿನಂತೆ ಹೇಳಲಾಗುತ್ತದೆ.

ಗಾಹೆ: **"ಣಿಚ್ಚದರ ಧಾಉ ಸತ್ತಯ ತರುದಸ ವಿಯಳಿಂದಿಯೇಸು ಛಚ್ಚೇವ ॥**
ಸುರಣಿರಯ ತಿರಿಯ ಚಉರೋ ಚೋದ್ದಸ ಮಣುಯೇಏ ಸದಸಹಸ್ಸಾ ॥೨.೧೨॥ (ಪ್ರಾ)"[೧೦೧]

---

೯೬. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ದ್ವಿತೀಯೋಧ್ಯಾಯಃ) ಪು. ೨೩

೯೭. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರಕೋಶ :** ಪುಟ. ೮೬
ಊರ್ಧಲೋಕ = ವೈಮಾನಿಕ ದೇವತೆಗಳು ವಾಸಿಸುವ ಲೋಕ. ಸುಮೇರು ಪರ್ವತದ ಶಿಖರದಿಂದ ಒಂದು ಕೂದಲಿನ ಅಂತರದಲ್ಲಿ ಊರ್ಧ್ವಲೋಕವು ಸ್ಥಿತವಾಗಿದೆ.

೯೮. **ಅದೇ** : ಪುಟ. ೧೧ : **ಅಧೋಲೋಕ** = ಕೆಳಗಿನ ಲೋಕ ನರಕ. ಮಧ್ಯಲೋಕದ ಕೆಳಗಿರುವ ಲೋಕ. ಇಲ್ಲಿ ಒಂದರ ಕೆಳಗೆ ಒಂದರಂತೆ ರತ್ನಪ್ರಭ, ಶರ್ಕಪ್ರಭ, ವಾಲುಕಾಪ್ರಭ, ಪಂಕಪ್ರಭ, ಧೂಮಪ್ರಭ, ತಮಃಪ್ರಭ, ಮಹಾತಮಃಪ್ರಭ ಎಂದು ಏಳು ನರಕಭೂಮಿಗಳಿವೆ.

೯೯. ಜೆ. ಎನ್. ಚಕ್ರವರ್ತಿ ; **ಕನ್ನಡ ಸಂಸ್ಕೃತ ನಿಘಂಟು** : ಪುಟ. ೯೨೮ : **ಶುಕ್ಲ** = ಬಿಳಿವರ್ಣ, ವೀರ್ಯ.

೧೦೦. **ಅದೇ** ; ಪುಟ. ೯೩೩ : **ಶೋಣಿತ** = ರುಧಿರ, ಕೆಂಪು, ಅಂಡ.

೧೦೧. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ದ್ವಿತೀಯೋಧ್ಯಾಯಃ) ಪು. ೨೫

ನಿತ್ಯನಿಗೋದ, ಚತುರ್ಗತಿನಿಗೋದಗಳಲ್ಲಿ ಹಾಗೂ ಧಾತು ಚತುಷ್ಕಗಳಲ್ಲಿ ಏಳೇಳು ಲಕ್ಷ, ವೃಕ್ಷಜಾತಿಗಳಲ್ಲಿ ೧೦ ಲಕ್ಷ, ಪ್ರತ್ಯೇಕವಾಗಿ ಮೂರು ಗತಿಗಳಲ್ಲಿ ಎರಡೆರಡು ಲಕ್ಷ, ದೇವ, ನಾರಕ, ತಿರ್ಯಂಚಗಳಲ್ಲಿ ನಾಲ್ಕು ನಾಲ್ಕು ಲಕ್ಷ, ಮನುಷ್ಯಗತಿಯಲ್ಲಿ ೧೪ ಲಕ್ಷ, ಹೀಗೆ ಜೀವನು ಶೀತ, ಪುದ್ಗಲ ಹಾಗೂ ಸ್ಕಂದಗಳ ಶರೀರರೂಪದಿಂದ ನವವಿಧ ೮೪ ಲಕ್ಷ ಯೋನಿ(ಗರ್ಭ)ಗಳಲ್ಲಿ ಆತ್ಮನು ಜನ್ಮ ತಳೆಯುತ್ತಾನೆ.

ನವವಿಧ ಯೋನಿಗಳಲ್ಲಿ ಜನ್ಮ ಪಡೆಯುವುದು:

೧. ನಿತ್ಯನಿಗೋದ
೨. ಚತುರ್ಗತಿ ನಿಗೋದ
೩. ಪೃಥ್ವಿ — ೬ ಗತಿ * ೭ ಲಕ್ಷ = ೪೨ ಲಕ್ಷ
ಅಪ್ — ಧಾತು
ತೇಜ — ಚತುಷ್ಕಗಳು
ವಾಯು
೪. ವೃಕ್ಷಜಾತಿ —— ೧೦ ಲಕ್ಷ
೫. ವಿಕಲತ್ರಯ —— ೩ ಗತಿ * ೨ ಲಕ್ಷ = ೦೬ ಲಕ್ಷ
೬. ದೇವ
೭. ನಾರಕ — ೩ ಗತಿ * ೪ ಲಕ್ಷ = ೧೨ ಲಕ್ಷ
೮. ತಿರ್ಯಂಚ
೯. ಮಾನವಗತಿ —— ೧೪ ಲಕ್ಷ

---

೮೪ ಲಕ್ಷ

ಅಂದರೆ ಲೋಕದಲ್ಲಿ ೮೪ ಲಕ್ಷ ಜೀವರಾಶಿಗಳಿವೆ. ಅವೆಲ್ಲವೂ 'ಪುನರಪಿ ಜನನಂ ಪುನರಪಿ ಮರಣಂ' ಎಂಬಂತೆ ಲೋಕಾಲೋಕಗಳಲ್ಲಿ ಸಂಚರಿಸುತ್ತಲೇ ಇರುತ್ತವೆ. ಇದಕ್ಕೆ ಪುಷ್ಠಿ ನೀಡುವಂತೆ ಆಧುನಿಕ ವಿಜ್ಞಾನಿಗಳು ಇಂದು ಒಟ್ಟು "ವೃಕ್ಷ, ಏಕಕೋಶ, ಜಲಚರ, ವಾಯುಚರ, ಕೀಟಕ, ಸರೀಸೃಪ, ಸಸ್ತನಿ ಜೀವಗಳನ್ನು ಸೇರಿ ಒಟ್ಟು ೮.೭ ಮಿಲಿಯನ್ ಜೀವರಾಶಿಗಳಿವೆ. ೬.೫ ಮಿಲಿಯನ್ ಜೀವರಾಶಿಗಳು ಭೂಮಿಯ ಮೇಲಿದ್ದರೆ. ಇನ್ನುಳಿದ ೨.೨ ಮಿಲಿಯನ್ ಜೀವರಾಶಿಗಳು ಜಲಚರಗಳು" [೧೦೨] ಎಂದು ಅಂದಾಜಿಸಿದ್ದಾರೆ. ಒಂದು ಮಿಲಿಯನ್ ಅಂದರೆ ೧೦,೦೦,೦೦೦ (ಹತ್ತು ಲಕ್ಷ). ಅಂದರೆ ಒಟ್ಟು ೮೭,೦೦,೦೦೦ ಜೀವರಾಶಿಯನ್ನು ವಿಜ್ಞಾನಿಗಳು ಎಂದು ಊಹಿಸುತ್ತಾರೆ. ಅಂದರೆ ಪ್ರಾಚೀನ ಕಾಲದಲ್ಲಿ ಯಾವುದೇ ರೀತಿಯ ಅತ್ಯಾಧುನಿಕ

---

೧೦೨. **Science Daily : 24th August 2011** ; About 8.7 million (give or take 1.3 million) is the new, estimated total number of species on Earth - the most precise calculation ever offered - with 6.5 million species on land and 2.2 million in oceans. Announced by the Census of Marine Life, the figure is based on a new analytical technique.

ಉಪಕರಣಗಳಿಲ್ಲದೆಯೂ ಇಷ್ಟು ನಿಖರವಾಗಿ ಹೇಳಿರುವುದು ನಿಜಕ್ಕೂ ಸೋಜಿಗದ ವಿಷಯ ಎಂಬುದರಲ್ಲಿ ಎರಡು ಮಾತಿಲ್ಲ.

ಇವುಗಳಲ್ಲಿ ಜರಾಯುಜ, ಅಂಡಜ, ಪೋತಜ ಹಾಗೂ ಗರ್ಭಜಗಳೆಂದು ಭೇದಗಳು. ಶರೀರಗ್ರಹಣವೇ ಜನ್ಮವೆಂದು ಹೇಳಲಾಗುತ್ತದೆ. ಆ ಶರೀರಗಳು ಕೆಳಗಿನಂತಿವೆ.

೧. ಔದಾರಿಕ: ಉದಾರ ಭಾವಾರ್ಥವನ್ನು ಹೊಂದಿರುವುದೇ ಔದಾರಿಕ.

೨. ವೈಕ್ರಯಿಕ: ನಾನಾ ಪ್ರಕಾರದ ಶರೀರನ್ನು ಪಡೆಯುವುದು.

೩. ಆಹಾರಕ: ಆಹರಣವೆಂದರೆ ಗ್ರಹಣ. ಯಾವುದು ಗ್ರಹಣ ಮಾಡುವುದೋ ಅದು ಆಹಾರಕ.

೪. ತೈಜಸ: ತೇಜ ಮತ್ತು ಪ್ರಭಾರೂಪಗಳನ್ನು ಹೊಂದಿರುವುದು.

೫. ಕಾರ್ಮಣ: ಕರ್ಮಗಳ ಆಧಾರಕವೂ, ಉತ್ಪಾದಕವೂ ಸುಖ–ದುಃಖಗಳ ಮೂಲವಾಗಿರುವ ಶರೀರ.

"ಇವುಗಳಲ್ಲಿ ತೈಜಸ ಮತ್ತು ಕಾರ್ಮಣ ಶರೀರಗಳು ತುಂಬಾ ಸೂಕ್ಷ್ಮವಾಗಿರುತ್ತವೆ. ಅದು ವಜ್ರಾದಿ ಪಟಲಗಳಲ್ಲಿಯೂ ನುಗ್ಗಿ ಹೊರಬರುತ್ತದೆ. ಆದುದರಿಂದ ಇವುಗಳೊಂದಿಗೆ ಇರುವ ಜೀವನು ಅವಗ್ರಹಗತಿಯನ್ನು ಪಡೆದು ಬಹಳ ದೂರದಲ್ಲಿರುವ ಕ್ಷೇತ್ರಗಳಲ್ಲಿಯೂ ಹುಟ್ಟಬಲ್ಲವನಾಗುತ್ತಾನೆ. ಎಂತಹ ದೃಢವಾದ ಪದಾರ್ಥವೂ ಕಾರ್ಮಣ ಮತ್ತು ಜೀವನ ಗತಿಯನ್ನು ತಡೆಯಲಾರದು."[೧೦೩]

> **"ಆ ಸಂಸಾರಿಗಳಾವ ಲಿಂಗಮನುಳ್ಳರೆಂದೊಡೆ ಪೇಳ್ದಪರು :**
> **ನಾರಕಸಮ್ಮೂರ್ಚ್ಛಿನೋ ನಪುಂಸಕಾನಿ ॥೨.೫೦॥**
> **ನ ದೇವಾಃ ॥೨.೫೧॥**
> **ಶೇಷಾಸ್ತ್ರಿವೇದಾಃ ॥೨.೫೨॥"**[೧೦೪]

ಜೈನಾಗಮಗಳಲ್ಲಿ ಲಿಂಗವೆನ್ನುವ ಪದಕ್ಕೆ 'ವೇದ'ವೆಂಬ ಪದವನ್ನು ಸಂವಾದಿಯಾಗಿ ಬಳಸಲಾಗುತ್ತದೆ. ನಾರಕ ಜೀವಿಗಳು ನಪುಂಸಕರು. ದೇವಲೋಕದಲ್ಲಿ ಪುಲ್ಲಿಂಗ ಮಾತ್ರ. ಇನ್ನುಳಿದ ಎಲ್ಲ ಜೀವಗಲ್ಲಿಳಯೂ ತ್ರಿವೇದಗಳಿವೆ. ಅಂದರೆ ತ್ರಿಲಿಂಗಗಳಿವೆ. ಎಂದು ಕವಿ ದಿವಾಕರಣಂದಿಯು ಪ್ರಸ್ತುತಪಡಿಸಿದ್ದಾನೆ.

❖ ನಾರಕ ಗತಿ (ಅಧೋಲೋಕ):

ನಾರಕ, ಮಾನವ, ದೇವ ಹಾಗೂ ತಿರ್ಯಂಚ ಎಂಬ ಚತುರ್ಗತಿಗಳಲ್ಲಿ ಸಂಸಾರಿ ಜೀವಗಳು ತೊಳಲುತ್ತವೆ. ನರಕ ಗತಿಯಲ್ಲಿ ಅನೇಕ ಪ್ರಕಾರದ ದುಃಖಾಗ್ನಿಗಳು ಎದುರಾಗುತ್ತವೆ. ನರಕವು ಅತೀ ಯಾತನಾಮಯವಾದ ಲೋಕವಾಗಿದೆ ಎಂದು ಹೇಳುತ್ತ ದಿವಾಕರಣಂದಿ ಮುನಿಗಳು ನರಕಲೋಕವನ್ನು ಚಿತ್ರಿಸುತ್ತಾರೆ.

---

೧೦೩. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೧೦೬

೧೦೪. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ದ್ವಿತೀಯೋಧ್ಯಾಯಃ) ಪು. ೨೯

"ರತ್ನ ಶರ್ಕರಾ ವಾಲುಕಾ ಪಂಕ ಧೂಮ ತಮೋ ಮಹಾತಮಃ
ಪ್ರಭಾಭೂಮಯೋ ಘನಾಂಬುವಾತಾಕಾಶಪ್ರತಿಷ್ಠಾಃ ಸಪ್ತಾಧೋಧಃ ॥೩.೧॥"[೧೦೫]

ರತ್ನಪ್ರಭ, ಶರ್ಕರಪ್ರಭ, ವಾಲುಕಾಪ್ರಭ, ಪಂಕಪ್ರಭ, ಧೂಮಪ್ರಭ, ತಮಃಪ್ರಭ, ಮಹಾತಮಃಪ್ರಭಗಳೆಂದು ಏಳು ನರಕಗಳು ಒಂದರ ಕೆಳಗೆ ಒಂದರಂತೆ ಮಧ್ಯಲೋಕದ ಕೆಳಗಿವೆ. ಇದುವೇ ಅಧೋಲೋಕ. ಘನೋದಧಿ[೧೦೬], ಘನವಾತ,[೧೦೭] ತನುವಾತ[೧೦೮]ಗಳು ಇವುಗಳನ್ನು ಆವರಿಸಿವೆ. ಈ ಏಳೂ ಭೂಮಿಗಳಲ್ಲಿ ಕ್ರಮಾನುಗತವಾಗಿ ೩೦ ಲಕ್ಷ, ೨೫ ಲಕ್ಷ, ೧೫ ಲಕ್ಷ, ೧೦ ಲಕ್ಷ, ೩ ಲಕ್ಷ, ೫ ಲಕ್ಷ, ಐದು ಕಡಿಮೆ ೧ ಲಕ್ಷ (೯೯೯೯೯೫) ಹಾಗೂ ೫ ಲಕ್ಷ ನರಕ ಬಿಲಗಳಿವೆ. ಇವುಗಳಲ್ಲಿ ಕ್ರಮಾನುಗತವಾಗಿ ನಾಲ್ವತ್ತೊಂಭತ್ತು ಶ್ರೇಣಿಗಳಿವೆ. ಅಂದರೆ ನಾರಕ ಪಟಲಗಳಿವೆ.[೧೦೯] ಹೀಗಿರುವ ಈ ಪೃಥ್ವಿಗಳಲ್ಲಿ ಇಂದ್ರಕ ಎಂಬ ಹೆಸರಿನ ೯೦೬೪ ಮತ್ತು ಪ್ರಕೀರ್ಣಕ ಎಂಬ ಹೆಸರಿನ ೮೩೯೦೩೪೭ ಬಿಲಗಳಿವೆ. ಅವು ಹೂಗಳು ಚೆಲ್ಲಾಪಿಲ್ಲಿಯಾದಂತೆ ಚದುರಿಕೊಂಡಿವೆ. ಇವೆಲ್ಲಾ ಸೇರಿ ನಲವತ್ತೊಂಭತ್ತು ಕಡಿಮೆ ೮೪ ಲಕ್ಷ (ಅಂದರೆ ೮೩೯೯೯೫೧) ಬಿಲಗಳಿವೆ. ಇದರಲ್ಲಿ ೮೨೨೫೦೦೦ ಬಿಲಗಳು ಉಷ್ಣದಿಂದಲೂ ಇನ್ನುಳಿದ ೧೭೪೯೫೧ ಬಿಲಗಳು ಶೀತದಿಂದಲೂ ಕೂಡಿರುತ್ತವೆ.

ಪ್ರಥಮ ಪೃಥ್ವಿಯಲ್ಲಿ ಅಂದರೆ ರತ್ನಪ್ರಭದಲ್ಲಿರುವ ಸೀಮಂತಕ ಎಂಬ ಪಟಲದಲ್ಲಿರುವ ಒಂದು ಬಿಲವು ಭೂಮಿಗಾತ್ರದಲ್ಲಿದೆ. ಇಲ್ಲಿ ಬಿಲವೆಂದರೆ ಭೌತಶಾಸ್ತ್ರದಲ್ಲಿ ತಿಳಿಸುವ ಕೃಷ್ಣಕುಹರ ಅಥವಾ ಕಪ್ಪುಕುಳಿಗಳಾಗಿರಬಹುದೆಂದು ಊಹಿಸಬಹುದಾಗಿದೆ. "ಕಪ್ಪು ಕುಳಿ ಬಾಹ್ಯಾಕಾಶದ ಪ್ರದೇಶವಾಗಿದೆ. ಈ ಪ್ರದೇಶದಿಂದ ಬೆಳಕೂ ಕೂಡ ತಪ್ಪಿಸಿಕೊಂಡು ಹೋಗುವುದು ಅಸಾಧ್ಯ. ಇದು ಅತ್ಯಂತ ಸಾಂದ್ರೀಕೃತ ದ್ರವ್ಯರಾಶಿಯ ಸಂಗ್ರಹದಿಂದ ಉಂಟಾಗಿ ರೂಪ ವಿಕೃತಿಯ ಫಲಿತಾಂಶವಾಗಿದೆ. ಕಪ್ಪು ಕುಳಿಯ ಸುತ್ತಲೂ ಗುರುತಿಸಲಾಗದಂತಹ ಹೊರಮ್ಮೆ ಇದ್ದು, ಇದು

---

೧೦೫. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ತೃತೀಯೋಧ್ಯಾಯಃ) ಪು. ೩೧

೧೦೬. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರಕೋಶ** : ಪುಟ. ೧೨೭. **ಘನೋದಧಿ** = ಲೋಕವನ್ನು ಸುತ್ತಿರುವ ಮೂರು ಪ್ರಕಾರದ ಗಾಳಿಗಳಲ್ಲಿ ಒಂದು. ಕೆಳಗಿನದು. ಇದು ಎರಡು ಹರಿದಾರಿಗಳಷ್ಟು ವ್ಯಾಪಿಸಿಕೊಂಡಿದೆ. ಗೋಮೂತ್ರದ ಬಣ್ಣವನ್ನು ಹೊಂದಿದೆ.

೧೦೭. **ಅದೇ** : ಪುಟ.೧೨೭ : **ಘನವಾತ** = ಇದು ಘನೋದಧಿಯ ಮೇಲ್ಪದರ ರೂಪದಲ್ಲಿ ಒಂದು ಹರದಾರಿಯವರೆಗೆ ವ್ಯಾಪಿಸಿದೆ.

೧೦೮. **ಅದೇ** : ಪುಟ.೧೪೭ : **ತನುವಾತ** = ಇದು ಘನವಾತದ ಮೇಲ್ಪದರಾಗಿ ವ್ಯಾಪಿಸಿಕೊಂಡಿದೆ.

೧೦೯. **ಅದೇ** : ಪುಟ.೯೧ : **ನಾರಕ ಪಟಲ** = ನರಕಗಳಲ್ಲಿಯ ನಲವತ್ತೊಂಭತ್ತು ಭಾಗ.

೧) **ರತ್ನಪ್ರಭ** : ೧. ಸೀಮಂಕರ ೨. ನಿರಯ ೩. ರೌರುಕ ೪. ಭ್ರಾಂತ ೫. ಉದ್ಭ್ರಾಂತ ೬. ಸಭ್ರಾಂತ ೭. ಅಸಭ್ರಾಂತ ೮. ವಿಭ್ರಾಂತ ೯. ತಪ್ತ ೧೦. ತ್ರಸಿತ ೧೧. ವಕ್ರಾಂತ ೧೨. ಅವಕ್ರಾಂತ ೧೩. ವಿಕ್ರಾಂತ.

೨) **ಶರ್ಕರಾಪ್ರಭ:** ೧. ಸ್ತನಕ ೨. ತನಕ ೩. ಮನಕ ೪. ವನಕ ೫. ಘಾತ ೬. ಸಂಘಾತ ೭. ಜಿಹ್ವಾ ೮. ಈಹ್ವಕ ೯. ಲೋಲ ೧೦. ಲೋಲಕ ೧೧. ಸ್ತನಲೋಕ.

೩) **ವಾಲುಕಾಪ್ರಭ:** ೧. ತಪ್ತ ೨. ಶೀತ ೩. ತಪಸ ೪. ತಾಪನ ೫. ನಿದಾಘ ೬. ಪ್ರಜ್ವಲಿತ ೭. ಉಜ್ವಲಿತ ೮. ಸಂಜ್ವಲಿತ ೯. ಸಂಪ್ರಜ್ವಲಿತ.

೪) **ಪಂಕಪ್ರಭ:** ೧. ಆರ ೨. ಮಾರ ೩. ತಾರ ೪. ತತ್ತ ೫. ತಮಕ ೬. ಬಾದ ೭. ಖಡಖಡ

೫) **ಧೂಮಪ್ರಭ:** ೧. ತಮಕ ೨. ಭ್ರಮಕ ೩. ಝಷಕ ೪. ವಾವಿಲ ೫. ತಿಮಿಶ್ರ

೬) **ತಮಃಪ್ರಭ:** ೧. ಹಿಮ ೨. ವರ್ದಲ ೩. ಲಲ್ಲಕ

೭) **ಮಹಾತಮಃಪ್ರಭ:** ೧. ಅವಧಿಸ್ಥಾನ

ಹಿಂತಿರುಗಲಾರದ ಬಿಂದುವನ್ನು ಸೂಚಿಸುತ್ತದೆ. ಈ ಹೊರಮೈಯನ್ನು 'Event Horizon' ಎಂದು ಕರೆಯಲಾಗುತ್ತದೆ. ಏಕೆಂದರೆ ಉಷ್ಣಬಲ ವಿಜ್ಞಾನದ ಪರಿಪೂರ್ಣ ಕಪ್ಪು ಕಾಯದ ರೀತಿಯಲ್ಲಿ ಇದಕ್ಕೆ ತಲುಪುವ ಎಲ್ಲ ಬೆಳಕನ್ನು ಹೀರಿಕೊಳ್ಳುತ್ತದೆಯೇ ಹೊರತು ಪ್ರತಿಫಲಿಸುವುದಿಲ್ಲ."[೧೧೦] ಈ ವಿಚಾರಕ್ಕೆ ಪುಷ್ಠಿ ನೀಡುವಂತೆ ನಾರಕ ಲೋಕವು ಶೀತೋಷ್ಣಗಳಿಂದ ನಿರಂತರ ಬಾಧಿತವಾಗುತ್ತದೆ ಎಂದು ಪ್ರಸ್ತುತ ಶಾಸ್ತ್ರಗ್ರಂಥವು ಉಲ್ಲೇಖಿಸುತ್ತದೆ.

ಇಲ್ಲಿ ನಾರಕರು ಲೇಶ್ಯಗಳ ಪರಿಣಾಮದಿಂದಾಗಿ ಅಂತರಂಗ ಬಹಿರಂಗಗಳಲ್ಲಿ ಶಿತೋಷ್ಣಾದಿ ವೇದನೆಗಳಿಂದ ನಿರಂತರ ದುಃಖಹೇತುಗಳಾಗಿ ಬದುಕುತ್ತಾರೆ.

"ಇಂತಜೀವರ ಪರಿಣಾಮಂಗಳು ಆಱು ಲೇಶ್ಯಂಗಳ್ಗಂ ಕ್ರಮದಿಂ ಹತ್ತಿಸಿ ಅಱೆದುಕೊಳ್ವುದು ॥"[೧೧೧]

ಇಂತಹ ನಾರಕಿಗಳ ಜೀವವು ಆರು ಲೇಶ್ಯಗಳ ಪರಿಣಾಮಗಳಿಂದ ವರ್ತಿಸುತ್ತದೆ. "ಯಾವುದು ಕರ್ಮಗಳನ್ನು ಲಿಪ್ತಗೊಳಿಸುತ್ತದೇಯೋ ಅದು ಲೇಶ್ಯೆಯಾಗಿದೆ. ಇಲ್ಲಿ ಲಿಪ್ತ ಎಂದರೆ ಲೇಪಿಸುವುದು ಎಂದರ್ಥ. ಯಾವುದರ ಮೂಲಕ ಆತ್ಮನು ಪಾಪ–ಪುಣ್ಯದಿಂದ ತನ್ನನ್ನೇ ಮಗ್ನಗೊಳಿಸುತ್ತದೇಯೋ ಅದನ್ನು ಲೇಶ್ಯಾ ಎಂದು ಕರೆಯುತ್ತಾರೆ."[೧೧೨]

೧) **ಕೃಷ್ಣಲೇಶ್ಯೆ:** ತೀವ್ರ ಕಷಾಯಗಳ ಫಲದಿಂದ ಮುಂಗೋಪಿಯೂ, ಕಲಹಶೀಲನೂ, ಅಸಂತೋಷಿಯೂ, ನಿರ್ದಯಿಯೂ, ಆಲಸಿಯೂ, ವಾಮಾಚಾರಿಯೂ, ಪುಕ್ಕಲನೂ, ಹಿಂಸಾನಂದಿಯೂ, ದುಷ್ಟನೂ ಆಗಿರುತ್ತಾನೆ.

೨) **ನೀಲಲೇಶ್ಯೆ:** ಮಂದಬುದ್ಧಿಯವನೂ, ಅಜ್ಞಾನಿಯೂ, ವಿಷಯಲೋಲುಪನೂ, ಮಾನ ಕಷಾಯವನ್ನುಳ್ಳಾತನೂ, ಮೋಸಗಾರನೂ, ದಾನಾದಿ ಗುಣಗಳಿಗೆ ಅಡ್ಡಿಪಡಿಸುವವನೂ, ಅತೀ ನಿದ್ರಾಸಕ್ತನೂ, ಧನ–ಧಾನ್ಯಗಳನ್ನು ಮಿತಿಯಿಲ್ಲದಂತೆ ಸಂಗ್ರಹಿಸುವವನೂ ಆಗಿರುತ್ತಾನೆ.

೩) **ಕಾಪೋತಲೇಶ್ಯೆ:** ಅನ್ಯರ ಮೇಲೆ ಮುನಿಯುವವನೂ, ಅನ್ಯರನ್ನು ನಿಂದಿಸುವವನೂ, ದೂಷಿಸುವವನೂ, ಶೋಕ–ಭಯಗಳನ್ನುಳ್ಳಾತನೂ, ಅಸೂಯೆ ಪಡುವವನೂ, ತನ್ನನೇ ಹೊಗಳಿಕೊಳ್ಳುವವನೂ (ಆತ್ಮಪ್ರಶಂಸಕ), ಬೇರೆಯರ ಮೇಲೆ ನಂಬಿಕೆಯಿಲ್ಲದವನೂ, ಅನ್ಯರು ತನ್ನಂತೆಯೇ ಇರಬೇಕು ಎನ್ನುವವನೂ, ಅನ್ಯರ ಹೊಗಳಿಕೆಗೆ ದಾಸನಾಗುವವನೂ, ಬುದ್ಧಿಗೇಡಿಯೂ, ಯುದ್ಧದಲ್ಲಿ ಹೋರಾಡದೇ ಸಾವು ಬಯಸುವವನೂ ಆಗಿರುತ್ತಾನೆ.

೪) **ಪೀತ ಲೇಶ್ಯೆ:** ಸಮದರ್ಶಿ, ದಯೆ, ದಾನದಲ್ಲಿ ನಿರತ, ಮೃದುಸ್ವಭಾವಿ, ಜ್ಞಾನಿ, ತನ್ನ ಕರ್ತವ್ಯವನ್ನು ಅರಿತಿರುವವ, ಸೇವಿಸಲು ಯಾವುದು ಯೋಗ್ಯ ಯಾವುದು ಅಯೋಗ್ಯ ಎಂದು ತಿಳಿದಿರುವವ, ಸತ್ಯವಾದಿ.

---

೧೧೦. *Davies, P. C. W. :* **ಲೇಖನ : ಕಪ್ಪುಕುಳಿ :** https://kn.wikipedia.org/s/i2s
(1978). "Thermodynamics of Black Holes"

೧೧೧. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ತೃತೀಯೋಧ್ಯಾಯಃ): ಪು. ೩೩

೧೧೨. ಶೇಖರಚಂದ್ರ ಜೈನ (ಹಿಂದಿ), ರತನಚಂದ ಕೋಟಿ (ಕ. ಅನು); **ಜೈನಧರ್ಮ ತಿಳಿಯಿರಿ** : ಪು. ೩೦೦

೫) **ಪದ್ಮಲೇಶ್ಯೆ:** ತ್ಯಾಗಿ, ಸತ್ಯಶೀಲ, ಕ್ಷಮಾಧಾರಿ, ಜಿನಧರ್ಮವನ್ನು ಪ್ರಕಾಶಿಸುವವನೂ, ಉತ್ತಮ ಕಾರ್ಯಗಳಲ್ಲಿ ತೊಡಗಿರುವವರು.

೬) **ಶುಕ್ಲಲೇಶ್ಯೆ:** ಪಕ್ಷಪಾತ ರಹಿತರೂ, ಯಾರ ಮೇಲೂ ರಾಗದ್ವೇಷಗಳನ್ನು ಹೊಂದದೇ ಶತ್ರುಗಳನ್ನು ಪ್ರೀತಿಸುವವರೂ, ಪಾಪಕರ್ಮಗಳನ್ನು ದೂರ ಮಾಡುವವರೂ ಆಗಿದ್ದಾರೆ.

ಕೃಷ್ಣಲೇಶ್ಯೆ, ನೀಲಲೇಶ್ಯೆ, ಕಾಪೋತಲೇಶ್ಯೆಗಳು ಕಾಲಕಾಲಕ್ಕೆ ರತ್ನಪ್ರಭದಿಂದ ಮಹಾತಮಃಪ್ರಭದವರೆಗೂ ಅಂದರೆ ಪ್ರಥಮ ಪೃಥ್ವಿಯಿಂದ ಸಪ್ತಮ ಪೃಥ್ವಿಯವರೆಗೆ ಕ್ಷೀಣವೂ, ಮಧ್ಯಮವೂ ಹಾಗೂ ಉತ್ಕೃಷ್ಟವೂ ಆಗುತ್ತ ಬದಲಾಗುತ್ತಿರುತ್ತವೆ. ಅಲ್ಲದೇ ಪ್ರಥಮ ಪೃಥ್ವಿಯಿಂದ ಪಂಚಮ ಪೃಥ್ವಿಯವರೆಗೆ ಅಂದರೆ ಧೂಮಪ್ರಭದವರೆಗೆ ಎಲ್ಲವನ್ನೂ ಒಟ್ಟುಗೂಡಿಸಿ ನಾಲ್ಕು ಭಾಗ ಮಾಡಿದರೆ ಅದರಲ್ಲಿ ಮೂರು ಭಾಗಗಳು ಅತೀ ಉಷ್ಣದಿಂದ ಕೂಡಿರುತ್ತವೆ. ಇನ್ನು ಆರು ಮತ್ತು ಏಳನೆಯ ಪೃಥ್ವಿಗಳು ಅತಿ ಶೀತದಿಂದ ಕೂಡಿರುತ್ತವೆ. ಹೀಗಿರುವ ಈ ಲೋಕಗಳಲ್ಲಿ ಸುಖಕ್ಕೆ ಸ್ಥಾನವೇ ಇಲ್ಲದೇ ದುಃಖಾಗ್ನಿಯಂತಹ ಅಶುಭಕರ ವೇದನೆಗಳನ್ನು ಅನುಭವಿಸುತ್ತಾರೆ ಎಂದು ಗ್ರಂಥವು ನಿರೂಪಿಸುತ್ತದೆ.

ಜೇಷ್ಠಮಾಸದ ಮಧ್ಯಾಹ್ನದೊಳು ಆಕಾಶದಲ್ಲಿ ಮೋಡಗಳಿರದೇ ಸೂರ್ಯನಿಂದ ಸೂಸುವ ಪಟುತರ ಕಿರಣಗಳ ಪರಿಣಾಮವಾಗಿ ದಾವಾಗ್ನಿಯ ದಳ್ಳುರಿಯಲ್ಲಿ ಬಿದ್ದು ಹಸಿವು, ತೃಷೆಗಳಿಂದ ವ್ಯಾಪ್ತವಾಗಿ ಪೈತ್ತಿಕಜ್ವರ [೧೧೩] ಗಳಿಗೆ ತುತ್ತಾಗಿ ನರಳುವನು. ಹಾಗೆಯೇ ಮಾಘಮಾಸದಲ್ಲಿ ಅತಿ ಶೀತಬಾಧೆಯಿಂದ ಬಳಲುವರು ಎಂದು ಕವಿಯು ತಿಳಿಸುತ್ತಾರೆ. ಸಾಮಾನ್ಯವಾಗಿ ಜೇಷ್ಠಮಾಸವು ಗ್ರೆಗೋರಿಯನ್ ಕ್ಯಾಲೆಂಡರ್‌ನ ಜೂನ್ ತಿಂಗಳಲ್ಲಿಯೇ ಬರುತ್ತದೆ. ಅಂದರೆ ಅದು ಮಳೆಗಾಲ. ಮಳೆಗಾಲದ ಸಂದರ್ಭದಲ್ಲಿಯೂ ಮಳೆಮೋಡಗಳು ಕಾಣಿಸಿಕೊಳ್ಳದೇ ಬಿಸಿಲಿನ ಆರ್ಭಟವೇ ಹೆಚ್ಚಾಗಿ, ಬರಗಾಲದ ಛಾಯೆಯನ್ನು ಮೂಡಿಸುವ ತಾಪಮಾನ, ನೀರಿನ ಕೊರತೆಯ ಫಲವಾಗಿ ವಾತಪಿತ್ತಗಳಂತಹ ರೋಗಗಳಿಗೆ ತುತ್ತಾಗುವುದು ಸಾಮಾನ್ಯವಾಗಿ ಕಾಣಬರುತ್ತದೆ. ಮಾಘಮಾಸದಲ್ಲಿ ಮಂಜಿನಿಂದ ಆವೃತವಾದ ವಾತಾವರಣ ಉಂಟಾಗಿ ಸೂರ್ಯನ ಕಿರಣಗಳು ಭುವಿಯನ್ನು ಸ್ಪರ್ಶಿಸುವುದೂ ಅಸಾಧ್ಯವಾಗಿ ಹೇಳಲಾರದಷ್ಟು ಅತೀಶೀತವುಂಟಾಗಿ ಇರುವ ಅಲ್ಪಸ್ವಲ್ಪ ನೀರೂ ಘನೀಭೂತವಾಗಿ ಕುಡಿಯಲು ನೀರಿಲ್ಲದೆಯೂ, ಶೀತವಾತಗಳಿಗೆ ಒಳಗಾಗಿ ನೋವು ಪಡುತ್ತಾನೆ. ಹೀಗೆ ಪೃಥ್ವಿಯು ಅಕಾಲಗಳಲ್ಲಿ ಶೀತೋಷ್ಣ ದುಃಖಗಳಿಗೆ ಒಳಗಾಗಿ ನಾನಾ ರೀತಿಯ ತಾಪವಿತಾಪಗಳಿಗೆ ಒಳಗಾಗುತ್ತದೆ.

"ಪ್ರಥಮ ದ್ವಿತೀಯ ತೃತೀಯ ಚತುರ್ಥ ಪೃಥ್ವಿಗಳೊಳುಷ್ಣವೇದನೆಗಳು।"[೧೧೪]

---

೧೧೩. ಗುರುನಾಥ ಜೋಶಿ : **ಕನ್ನಡ ಕನ್ನಡ ಶಬ್ದಕೋಶ** : ಪುಟ. ೪೧೮; **ಪೈತ್ತಿಕ** = ಪಿತ್ತಪ್ರಕೋಪದಿಂದಾದ

೧೧೪. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ತೃತೀಯೋಧ್ಯಾಯಃ) ಪು. ೩೭

ಮುಂದುವರೆದು, ಒಂದರಿಂದ ನಾಲ್ಕರವರೆಗಿನ ಪೃಥ್ವಿಗಳು ಉಷ್ಣವೇದನೆಯಲ್ಲಿಯೇ ಮುಳುಗಿರುತ್ತವೆ. ಇನ್ನು ಪಂಚಮ ಪೃಥ್ವಿಯಲ್ಲಿ ಅಂದರೆ ಧೂಮಪ್ರಭದ ಮೇಲಿರುವ ಎರಡುಲಕ್ಷ ಇಪ್ಪತ್ತೈದುಸಾವಿರ ಬಿಲಗಳು ಉಷ್ಣವೇದಕಗಳೂ, ಕೆಳಗಿರುವ ಇಪ್ಪತ್ತೈದುಸಾವಿರ ಬಿಲಗಳು ಶೀತವೇದಕಗಳೂ ಆಗಿರುತ್ತವೆ. ತಮಃಪ್ರಭ ಹಾಗೂ ಮಹಾತಮಃ ಪ್ರಭಗಳಲ್ಲಿಯಂತೂ ಅತಿಯಾದ ಶೀತವೇ ಒಡಗೂಡಿರುತ್ತದೆ. ಒಟ್ಟಿನಲ್ಲಿ ಎಂಭತ್ತೆರಡು ಲಕ್ಷ ಇಪ್ಪತ್ತೈದು ಸಾವಿರ ಬಿಲಗಳು ಉಷ್ಣವೇದನೆಯಿಂದಲೂ ಒಂದುಲಕ್ಷ ಎಪ್ಪತ್ತೈದು ಸಾವಿರ ಬಿಲಗಳು ಶೀತವೇದನೆಯಿಂದಲೂ ಕೂಡಿರುತ್ತವೆ. ಆತ್ಮನು ಈ ದುಃಖಾದುಃಖಗಳಿಂದ ಸಂಪೂರ್ಣವಾಗಿ ಹೊರನಡೆಯಬೇಕಾದರೆ ಒಂದೊಂದು ಪೃಥ್ವಿಯಿಂದಲೂ ಕ್ರಮಾನುಗತವಾಗಿ ಒಂದು, ಮೂರು, ಏಳು, ಹತ್ತು, ಹದಿನೇಳು, ಇಪ್ಪತ್ತೆರಡು, ಮೂವತ್ತಮೂರು ಸಾಗರೋಪಮ ವರ್ಷಗಳನ್ನು ಕಳೆದು ಉನ್ನತಿಯನ್ನು ಹೊಂದಬೇಕಾಗುತ್ತದೆ. ಇದು ಜೀವನು ಯಾವ ಪೃಥ್ವಿ (ನರಕ)ಯಲ್ಲಿದ್ದಾನೆ ಎಂಬುದನ್ನು ಅವಲಂಬಿಸಿರುತ್ತದೆ. ಹೀಗಿರುವ ಇಲ್ಲಿ ಆದಿ–ಅಂತ್ಯಗಳಲ್ಲಿ ಹೀನ ಮತ್ತು ಉತ್ಕೃಷ್ಟ ಆವಸ್ಥೆಗಳು ಲಭಿಸುತ್ತವೆ. ಅವುಗಳನ್ನು ಅವಲಂಬಿಸಿ ಹಾನಿ, ವೃದ್ಧಿಗಳೂ ಸಂಭವಿಸುತ್ತವೆ. ಎಂದು ಕವಿ ದಿವಾಕರಣಂದಿಯು ನರಕಲೋಕವನ್ನು ಚಿತ್ರಿಸುತ್ತಾನೆ.

ಜಂಬೂದ್ವೀಪ (ಮಧ್ಯಲೋಕ):

"ದ್ವೀಪ ಸಮುದ್ರಾತ್ಮಕಂ ತಿರ್ಯಗ್ಲೋಕಂ ಅದಜೆನವಾವುದನಾದಿಯಾಗುಳ್ಳವೆಂತಪ್ಪ ಪೆಸರನುಳ್ಳುವೆಂದೊಡೆ ಪೇಳ್ದಪರು:

ಜಂಬೂದ್ವೀಪಮುಂ ಲವಣಸಮುದ್ರಮುಮಂ ಆದಿಯಾಗುಳ್ಳ ದ್ವೀಪಂಗಳುಂ ಸಮುದ್ರಂಗಳುಮವು ಒಳ್ಳದುವಪ್ಪ ಪೆಸರನುಳ್ಳುವು ಒಳಗೊಳಗಣ ದ್ವೀಪಸಮುದ್ರಂಗಳಂ ಪೊರಗಣ ಪೊರಗಣ ದ್ವೀಪಸಮುದ್ರಂಗಳು ಸುತ್ತಿರ್ದುವು ವಲಯಾಕಾರಂಗಳು ತನ್ಮಧ್ಯೇ ಮೇರುವಂ ನಡುವಾಗುಳ್ಳುದು ಬಟ್ಟಿತ್ತು ಯೋಜನ ಶತ ಸಹಸ್ರ ವಿಸ್ತಾರಮನುಳ್ಳುದು ಜಂಬೂದ್ವೀಪಮುಂ ಅಲ್ಲಿರ್ದ ಕ್ಷೇತ್ರಂಗಳು ಭರತವರ್ಷಮುಂ ಹೈಮವತವರ್ಷಮುಂ ವಿದೇಹವರ್ಷಮುಂ ರಮ್ಯಕವರ್ಷಮುಂ ಹೈರಣ್ಯವತವರ್ಷಮುಂ ಐರಾವತವರ್ಷಮುಮೆಂದಿವು ಕ್ಷೇತ್ರಂಗಳು ಆ ಕ್ಷೇತ್ರಂಗಳ ವಿಭಾಗ ಹೇತುಗಳಾವುವೆಂದೊಡೆ ಪೇಳ್ದಪರು:

ತದ್ವಿಭಾಜಿನಃ ಪೂರ್ವಾಪರಾಯತಾ ಹಿಮವನ್ ಮಹಾಹಿಮವನ್
ನಿಷಧ ನೀಲ ರುಗ್ಮಿ ಶಿಖರಿಣೋ ವರ್ಷಧರ ಪರ್ವತಾಃ॥೩.೧೧॥"[೧೧೩]

('ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯಿಂದ)

"ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿ ಪರಿವೃತಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತೈರಾವತಂಗಳೆಂಬೇಟು ಜನಪದಂಗಳಿಂದಂ ಪೂರ್ವಾಪರಾಯತಂಗಳುಂ ಹೇಮಾರ್ಜುನ ತಪನೀಯ ವೈಡೂರ್ಯ ವಜ್ರ ರಜತ ಹೇಮ ಮಯಂಗಳುಂ ಮಣಿವಿಚಿತ್ರ ಪಾರ್ಶ್ವಂಗಳುಮಧಸ್ಥೋಪರಿಣತಮಳ ಸಮಾನವಿಸ್ತಾರಂಗಳುಮಪ್ಪ ಹಿಮವನ್ಮಹಾ ಹಿಮವನ್ನಿಷಧನೀಳರುಗ್ಮಿ ಶಿಖರಗಳೆಂಬ ವರ್ಷಧರ ಮಹೀಧರಂಗಳಿಂದಂ ಇನ್ನೂಱುಕನಕಗಿರಿಗಳಿಂದಂ ನಾಲ್ಕು ನಾಭಿಗಳಿಂದಂ ಮೂವತ್ತ ನಾಲ್ಕು ವಿಜಯಾರ್ಧ ಪರ್ವತಂಗಳಿಂದಮನಿತೆ ವೃಷಭಾದ್ರಿಗಳಿಂದಂ ಚತುರ್ದಶಮಹಾವಾಹಿನಿಗಳಿಂದಮೆಸೆದು

---

೧೧೩. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ತೃತೀಯೋಧ್ಯಾಯಃ) ಪು. ೩೮

ಅತಿವೃತ್ತದೆ ರವಿಬಿಂಬಾ
ಕೃತಿ ಯೋಜನಶತಸಹಸ್ರ ವಿಷ್ಕಂಭ ವಿ
ಶ್ರುತ ಜಂಬೂವೃಕ್ಷ ಮಹಾ
ಪ್ರತೀತಿಯಿಂ ನೆಗಟ್ದಿಳೆಗೆಜಂಬೂದ್ವೀಪಂ”[೧೧೬]

(‘ಆದಿಪುರಾಣ’ದಿಂದ)

ತಿರ್ಯಗ್ಲೋಕದ ಮಧ್ಯದಲ್ಲಿ ಅಸಂಖ್ಯಾತ ಲವಣಸಮುದ್ರಗಳ ನಟ್ಟನಡುವೆ ಜಂಬೂದ್ವೀಪವು ನೆಲೆಯಾಗಿದೆ. ಇಲ್ಲಿ ಅಕೃತ್ರಿಮ ಪರಿವಾರ ವೃಕ್ಷಗಳಿಂದ ಕೂಡಿದ ಸಹಸ್ರಾರು ಜಂಬೂವೃಕ್ಷಗಳಿವೆ. ಇವುಗಳಿಂದಲೇ ಇದಕ್ಕೆ ಜಂಬೂದ್ವೀಪವೆಂದು ಹೆಸರು ಬಂದಿದೆ. ಜಂಬೂದ್ವೀಪವು ಒಂದುಲಕ್ಷ ಯೋಜನ[೧೧೭] ಗಳಷ್ಟು ಅಂದರೆ ಸು. ೧೮,೫೦,೦೦೦ ಚ. ಕಿ. ಮೀ.ಗಳಷ್ಟು ವಿಸ್ತಾರ ಹೊಂದಿದೆ. ಇದರ ಮಧ್ಯದಲ್ಲಿ ಮೇರುಪರ್ವತವು ವಿರಾಜಮಾನವಾಗಿದೆ. ಇದರಲ್ಲಿ ಭರತವರ್ಷ, ಹೈಮವತ, ಹರಿವರ್ಷ, ವಿದೇಹ, ರಮ್ಯಕ, ಹೈರಣ್ಯವತ, ಐರಾವತಗಳೆಂದು ಸಪ್ತವಲಯಗಳು ನೆಲೆಸಿವೆ. ಪೂರ್ವ–ಪಶ್ಚಿಮಕ್ಕೆ ಲವಣಸಮುದ್ರಗಳೂ, ಉತ್ತರಕ್ಕೆ ಹಿಮವಂತ ಮತ್ತು ಮಹಾಹಿಮವಂತಗಳೂ ದಕ್ಷಿಣಕ್ಕೆ ನೀಲಪರ್ವತ ಮತ್ತು ವರ್ಷಧಾರಾ ಪರ್ವತಗಳೂ ಮೇರೆಗಳಾಗಿವೆ. ಅಂದರೆ ಇಂದಿನ ಪಶ್ಚಿಮದ ಅರಬ್ಬೀ ಸಮುದ್ರದಿಂದ ಪೂರ್ವದ ಬಂಗಾಳ ಕೊಲ್ಲಿಯವರೆಗೂ, ಉತ್ತರದ ಹಿಮಾಲಯದಿಂದ ದಕ್ಷಿಣದ ನೀಲಗಿರಿ ಪರ್ವಗಳವರೆಗೂ ಜಂಬೂದ್ವೀಪವು ವ್ಯಾಪಿಸಿತ್ತು ಎಂದು ಇಲ್ಲಿ ಊಹಿಸಬಹುದಾಗಿದೆ.

“ಹೇಮಾರ್ಜುನ ತೇಪನೀಯ ವೈಢೂರ್ಯ ರಜತ ಹೇಮಮಯಾಃ ॥೩.೧೨॥”[೧೧೮]

ಪ್ರದೇಶ	**ವರ್ಣ**	**ಎತ್ತರ**
೧. ಭರತವರ್ಷ	ಹೊನ್ನು	ನೂರು ಯೋಜನ
೨. ಹೈಮವತವರ್ಷ	ಬೆಳ್ಳಿ	ಇನ್ನೂರು ಯೋಜನ
೩. ಹರಿವರ್ಷ	ಸುವರ್ಣ	ನಾನೂರು ಯೋಜನ
೪. ವಿದೇಹವರ್ಷ	ವೈಢೂರ್ಯ	ನಾನೂರು ಯೋಜನ
೫. ರಮ್ಯಕ ವರ್ಷ	ರಜತ	ಇನ್ನೂರು ಯೋಜನ
೬. ಹೈರಣ್ಯವತವರ್ಷ	ಹೊನ್ನು	ನಾನೂರು ಯೋಜನ
೭. ಐರಾವತರ್ಷ	ಹೊನ್ನು	ನೂರು ಯೋಜನ

೧೧೬. ಎಸ್. ಜಿ. ನರಸಿಂಹಾಚಾರ್ (ಸಂ); **ಪಂಪಕವಿ ವಿರಚಿತಂ ಆದಿಪುರಾಣಂ** : ಪುಟ. ೧೦

೧೧೭. ಗುರುನಾಥ ಜೋಶಿ : **ಕನ್ನಡ ಕನ್ನಡ ಶಬ್ದಕೋಶ :** ಪುಟ.೫೪೯ ; **ಒಂದು ಯೋಜನ** = ಸುಮಾರು ೯ ಮೈಲು. ಒಂದು ಮೈಲು ಸುಮಾರು ಒಂದೂವರೆ ಕಿಲೋ ಮೀಟರ್.
* ಜಿ. ಎನ್. ಚಕ್ರವರ್ತಿ ; ಸಂಸ್ಕೃತ ಕನ್ನಡ ನಿಘಂಟು : **ಯೋಜನ** = ಸುಮಾರು ೧೨ ಮೈಲು.
* ಸ್ಟಾರ್ ಡಿಕ್ಷನರಿ : **ಯೋಜನ** = ೧೨ ಮೈಲು. ಈ ಮೇಲಿನ ನಿಘಂಟುಗಳನ್ನು ನೋಡಿದರೆ ಯಾವುದು ಸರಿಯಾದುದು ಎಂದು ನಿರ್ಧರಿಸುವುದು ಕಷ್ಟ. ಅದುದರಿಂದ ಇವುಗಳ ಸರಾಸರಿಯನ್ನು ತೆಗೆದುಕೊಳ್ಳುವುದು. ಸರಾಸರಿ ೧೩ ಮೈಲು.

೧೧೮. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ತೃತೀಯೋಧ್ಯಾಯಃ) ಪು. ೩೯

ಇವುಗಳ ನಡುವೆ ಆರು ಕುಲಗಿರಿಗಳಿದ್ದು ಒಂದೊಂದು ಪರ್ವತದ ಮೇಲೂ ಕ್ರಮವಾಗಿ ಪದ್ಮ, ಮಹಾಪದ್ಮ, ತಿಗಿಂಛ, ಕೇಸರಿ, ಪುಂಡರೀಕ, ಮಹಾಪುಂಡರೀಕ ಎಂದು ಆರು ಸರೋವರಗಳು ಸ್ಥಿತವಾಗಿವೆ. ಪದ್ಮ ಸರೋರವು ಪೂರ್ವ–ಪಶ್ಚಿಮಕ್ಕೆ ಸಾವಿರ ಯೋಜನಗಳಷ್ಟು ಉದ್ದ, ಉತ್ತರ ದಕ್ಷಿಣಕ್ಕೆ ಎರಡನೂರು ಯೋಜನಗಳಷ್ಟು ಅಗಲ, ಹತ್ತು ಯೋಜನದಷ್ಟು ಆಳವಾದ ವಿಸ್ತಾರವನ್ನು ಹೊಂದಿದೆ. ಅದರ ನೀರಿನ ಮೇಲೆ ಅರ್ಧ ಯೋಜನದಷ್ಟು ಆಳ, ಒಂದು ಕ್ರೋಶ[೧೧೯]ದಷ್ಟು ಅಗಲದ ಎಲೆಗಳು ಹಾಗೂ ಎರಡು ಕ್ರೋಶದಷ್ಟು ಕಾಂಡವನ್ನು ಹೊಂದಿದ್ದು ಒಂದು, ಯೋಜನದಷ್ಟು ವಿಸ್ತಾರದ ತಾವರೆ ಹೂಗಳು ಅರಳುತ್ತವೆ. ಆ ಪುಷ್ಪಗಳ ಮಧ್ಯದಲ್ಲಿ ಶ್ರೀ, ಹ್ರೀ, ಧೃತಿ ಕೀರ್ತಿ, ಬುದ್ಧಿ, ಲಕ್ಷ್ಮೀ ಮುಂತಾಗಿ ೧೪೦೧೧೫ ಪರಿವಾರ, ಸಾಮಾನಿಕ, ಸಸಾಮಾನಿ, ಪರಿಷದ್ದೇವತೆಗಳು[#] ನೆಲೆಸಿರುವವರು.

ಇನ್ನು ಇಲ್ಲಿ ಪ್ರವಹಿಸುವ ನದಿಗಳ ಕುರಿತಾಗಿ–

"ಮುಂಪೇಳ್ದ ಕ್ಷೇತ್ರಂಗಳ ಮಧ್ಯಕ್ಕೆ ಸಂದ ಮಹಾನದಿಗಳವಾವುವೆಂದೊಡೆ ಪೇಳ್ದಪರು :
ಗಂಗಾ ಸಿಂಧು ರೋಹಿ ದ್ರೋಹಿತಾಸ್ಯಾ ಹರಿದ್ಧರಿಕಾಂತಾ ಸೀತಾ ಸೀತೋದಾ ನಾರೀ
ನರಕಾಂತಾ ಸುವರ್ಣಕೂರಾ ರೂಪ್ಯಕೂಲಾ ರಕ್ತಾ ರಕ್ತೋದಾಃ ಸರಿತ್ತನ್ಮಧ್ಯಗಾಃ॥೩.೨೦॥"[೧೨೦]

ಗಂಗಾ, ಸಿಂಧು ರೋಹಿತೆ, ರೋಹಿತಾಸೆ, ಹರಿತೆ, ಹರಿಕಾಂತೆ, ಸೀತಾ, ಸೀತೋದಾ, ನಾರೀ, ನರಕಾಂತೆ, ಸುವರ್ಣಕೂಲೆ, ರೂಪ್ಯಕೂಲೆ, ರಕ್ತೆ, ರಕ್ತೋದೆ ಎಂಬ ಹದಿನಾಲ್ಕು ಮಹಾನದಿಗಳಿರುವವರು. ಇನ್ನು ಇವುಗಳಿಗೆ ಪ್ರತ್ಯೇಕವಾಗಿ ಪರಿವಾರ ನದಿಗಳು ಅಂದರೆ ಉಪನದಿಗಳೂ ಇವೆ. ಭರತ ಮತ್ತು ಐರಾವತ ವರ್ಷಗಳಲ್ಲಿ ಪ್ರತ್ಯೇಕ ೧೪೦೦೦ ತೊರೆಗಳಿವೆ. ಇನ್ನೂ ಎಲ್ಲಾ ಪ್ರದೇಶಗಳ ತೊರೆಗಳನ್ನು ಒಟ್ಟುಗೂಡಿಸಿದರೆ ೧೦,೬೪,೦೦೦ ಆಗುತ್ತವೆ. ಹೀಗಿರುವ ಈ ಎಲ್ಲ ಪ್ರದೇಶಗಳಲ್ಲಿ ಭರತಕ್ಷೇತ್ರವು ವಿಶಿಷ್ಟವೂ ವೈವಿಧ್ಯಪೂರ್ಣವೂ ಆಗಿರುವುದು.

"ಭರತಃ ಷಡ್ವಿಂಶತಿ ಪಂಚಯೋಜನ ಶತವಿಸ್ತಾರಃ
ಷಟ್‌ಚೈಕೋನವಿಂಶತಿ ಭಾಗಾ ಯೋಜನಸ್ಯ॥೩.೨೫॥"[೧೨೧]

ಭರತಕ್ಷೇತ್ರವು ಐನೂರಾ ಇಪ್ಪತ್ತಾರು ಯೋಜನಗಳಷ್ಟು ವಿಸ್ತಾರವುಳ್ಳದ್ದು. ಜಂಬೂದ್ವೀಪವನ್ನು ಒಟ್ಟು ಹತ್ತೊಂಭತ್ತು ಭಾಗ ಮಾಡಿದರೆ ಅದರ ಆರುಭಾಗಗಳಷ್ಟು ವರ್ಷಧರ ಪರ್ವತಗಳು. ಇದರ ಮುಂದೆ ಭರತಕ್ಷೇತ್ರವು ತೀರಾ ಚಿಕ್ಕದು. ವರ್ಷಧರ ಪರ್ವತಗಳು ವಿದೇಹ ಕ್ಷೇತ್ರದವರೆಗೂ ಹರಡಿಕೊಂಡಿವೆ. ಈ ವಿಚಾರಗಳನ್ನು ನೋಡಿದರೆ ಈ ವರ್ಷಧರ ಪರ್ವತಗಳು ಇಂದಿನ ಮಳೆಕಾಡು ಎನಿಸಿದ ಪಶ್ಚಿಮಘಟ್ಟದ ಸಹ್ಯಾದ್ರಿ ಕಾಡು ಪ್ರದೇಶವೇ ಇರಬಹುದೆಂದು ಊಹಿಸಬಹುದಾಗಿದೆ.

---

೧೧೯. ಜಿ. ಎನ್. ಚಕ್ರವರ್ತಿ ; **ಸಂಸ್ಕೃತ ಕನ್ನಡ ನಿಘಂಟು** : ಪುಟ.೩೨೬; **ಕ್ರೋಶ** = ಒಂದು ಯೋಜನದ ನಾಲ್ಕನೆಯ ಒಂದುಭಾಗ; ಮೂರು ಮೈಲು.

[#] ಗಣದೇವತೆಗಳು

೧೨೦. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : ೪೧, ೪೨

೧೨೧. **ಅದೇ** : (ತೃತೀಯೋಧ್ಯಾಯಃ) ಪು. ೪೩

➢ ಕಾಲಗಳು:

ಹೀಗಿರುವ ಈ ಲೋಕವಿಸ್ತಾರಗಳಲ್ಲಿ ಕಾಲಕಾಲಕ್ಕೆ ಪ್ರಾಕೃತಿಕ, ಸಾಮಾಜಿಕ, ಸಾಂಸ್ಕೃತಿಕ ಏರಿಳಿತಗಳೂ ಉಂಟಾಗುತ್ತವೆ. ಈ ಏರಿತಗಳ ಕಾಲವನ್ನು 'ಉತ್ಸರ್ಪಣಿ' ಮತ್ತು 'ಅವಸರ್ಪಿಣಿ' ಎಂದು ಎರಡು ಭೇದಗಳಿವೆ. "ಉತ್ಸರ್ಪಿಣಿ ಕಾಲದಲ್ಲಿ ಧರ್ಮ, ಸತ್ಯ, ನ್ಯಾಯ, ಸಂಪತ್ತು, ಶಕ್ತಿ, ಎತ್ತರ, ಸುಖಗಳು ಹೆಚ್ಚುತ್ತಾ ಹೋಗುತ್ತವೆ. ಅವಸರ್ಪಿಣಿ ಕಾಲದಲ್ಲಿ ಅವು ಕ್ರಮವಾಗಿ ಕಡಿಮೆಯಾಗುತ್ತಾ ಬರುತ್ತವೆ."[೧೨೨] ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಒಂದೊಂದು ಕಾಲದಲ್ಲೂ ಆರು ಭೇದಗಳಿವೆ.

> **"ಸುಸಮ ಸುಸಮಂ ಚ ಸುಸಮಂ**
> **ಸುಸಮಾದಿ ಅಂತ ದುಸ್ಸಮಂ ಕಮಸೋ**
> **ದುಸ್ಸಮಮದಿ ದುಸ್ಸಮಮಿಸಿ ಪಡಮೋ**
> **ಬಿದಿಯೋ ದು ವಿಪರೀಜ್ ॥೩.೩೪॥ (ಪ್ರಾ)"**[೧೨೩]

ಅವಸರ್ಪಿಣಿ ಕಾಲ:

೧. ಸುಷಮಾ – ಸುಷಮಾ : ಅತಿ ಸುಖವುಳ್ಳದ್ದು. ಉತ್ತಮ ಭೋಗಭೂಮಿ[೧೨೪] ಕಾಲ.

೨. ಸುಷಮಾ : ಸುಖವುಳ್ಳದ್ದು. ಮಧ್ಯಮ ಭೋಗಭೂಮಿ ಕಾಲ.

೩. ಸುಷಮಾ – ದುಷಮಾ : ಹೆಚ್ಚು ಸುಖ, ಅಲ್ಪ ದುಃಖವುಳ್ಳದ್ದು.

೪. ದುಷಮಾ – ಸುಷಮಾ : ಹೆಚ್ಚು ದುಃಖ, ಕಡಿಮೆ ಸುಖವುಳ್ಳದ್ದು.

೫. ದುಷಮಾ : ಬರಿಯ ದುಃಖವುಳ್ಳದ್ದು.

೬. ದುಷಮಾ – ದುಷಮಾ : ಅತೀ ದುಃಖವುಳ್ಳದ್ದು.

ಉತ್ಸರ್ಪಿಣಿ ಕಾಲ:

೧. ದುಷಮಾ – ದುಷಮಾ : ಅತೀ ದುಃಖವುಳ್ಳದ್ದು.

೨. ದುಷಮಾ : ಬರಿಯ ದುಃಖವುಳ್ಳದ್ದು.

೩. ದುಷಮಾ – ಸುಷಮಾ : ಹೆಚ್ಚು ದುಃಖ, ಕಡಿಮೆ ಸುಖವುಳ್ಳದ್ದು.

೪. ಸುಷಮಾ – ದುಷಮಾ : ಹೆಚ್ಚು ಸುಖ, ಅಲ್ಪ ದುಃಖವುಳ್ಳದ್ದು.

೫. ಸುಷಮಾ : ಸುಖವುಳ್ಳದ್ದು.

೬. ಸುಷಮಾ – ಸುಷಮಾ : ಅತಿ ಸುಖವುಳ್ಳದ್ದು.

ಇವು ಉತ್ಸರ್ಪಿಣಿ ಕಾಲದಲ್ಲಿ 'ದುಷಮಾ–ದುಷಮಾ'ದಿಂದ ಆರಂಭವಾಗಿ ಕೆಳಗಿನಿಂದ ಮೇಲಕ್ಕೆ ವಿಲೋಮಾನುಲೋಮವಾಗಿ ಘಟ್ಟಗಳು ಒಂದರ ಹಿಂದೆ ಒಂದು ಸುತ್ತುತ್ತಿರುತ್ತವೆ.

---

೧೨೨. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ :** ಪು.೩೫,೮೨.

೧೨೩. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ತೃತೀಯೋಧ್ಯಾಯಃ) ಪು. ೪೪


೧೨೪. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪು. ೨೪೧
ಭೋಗಭೂಮಿ = ಸಂತೃಪ್ತ ಜೀವನದ ಕಾಲ. ಹಿಮ, ಮಳೆ ಬಿಸಿಲುಗಳ ಬಾಧೆಯಿಲ್ಲ. ಹಗಲು ರಾತ್ರಿಗಳ ಭೇದವಿಲ್ಲ. ಅಪಮೃತ್ಯುವಿನ ಸಂಕವಿಲ್ಲ. ಕಲ್ಪವೃಕ್ಷಗಳಿಂದಲೇ ಎಲ್ಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವರು.

ಕೋಷ್ಟಕ ೩.೧

ಕ್ರ. ಸಂ.	ಕಾಲ	ಅವಧಿ	ಆಯುಷ್ಯ		ಎತ್ತರ		ವರ್ಣ	ಆಹಾರ ಕ್ರಮ ದಿನಗಳು	ಭೂಮಿಯ ಲಕ್ಷಣ
			ಪ್ರಥಮ	ದ್ವಿತೀಯ	ಪ್ರಥಮ	ದ್ವಿತೀಯ			
೧	ಸುಷಮಾ–ಸುಷಮಾ	೪ ಕೋಟಾ ಕೋಟಿ ಸಾಗರೋಪಮ	೩ ಪಲ್ಯ	೨ ಪಲ್ಯ	೩ ಕ್ರೋಶ	೨ ಕ್ರೋಶ	ಉದಯಿಸುತ್ತಿರುವ ರವಿಯ ಬಣ್ಣ	೩ ದಿನದ ತರುವಾಯ	ಉತ್ತಮ ಭೋಗಭೂಮಿ
೨	ಸುಷಮಾ	೩ ಕೋಟಾ ಕೋಟಿ ಸಾಗರೋಪಮ	೨ ಪಲ್ಯ	೧ ಪಲ್ಯ	೨ ಕ್ರೋಶ	೧ ಕ್ರೋಶ	ಪೂರ್ಣ ಚಂದ್ರನ ಬಣ್ಣ	೨ ದಿನದ ತರುವಾಯ	ಮಧ್ಯಮ ಭೋಗಭೂಮಿ
೩	ಸುಷಮಾ–ದುಷಮಾ	೨ ಕೋಟಾ ಕೋಟಿ ಸಾಗರೋಪಮ	೧ ಪಲ್ಯ	೧ ಪೂರ್ವ ಕೋಟಿ	೧ ಕ್ರೋಶ	೨೦೦ ಬಿಲ್ಲು	ಎಳೆ ಬಿದಿರಿನ ಬಣ್ಣ	೧ ದಿನದ ತರುವಾಯ	ಜಘನ್ಯ ಭೋಗಭೂಮಿ
೪	ದುಷಮಾ–ಸುಷಮಾ	೪೨೦೦೦ ಕಡಿಮೆ ಒಂದು ಕೋಟಾಕೋಟಿ ವರ್ಷ	೧ ಪೂರ್ವ ಕೋಟಿ	೧೨೦ ವರ್ಷ	೨೦೦ ಬಿಲ್ಲು	ಏಳು ಮೊಳ	ಐದು ಬಣ್ಣಗಳನ್ನುಳ್ಳ ಮನುಷ್ಯರು	ಪ್ರತಿದಿನ	ಕರ್ಮಭೂಮಿ
೫	ದುಷಮಾ	೨೧೦೦೦ ವರ್ಷಗಳು	೧೨೦ ವರ್ಷ	೨೦ ವರ್ಷ	ಏಳು ಮೊಳ	ಎರಡು ಮೊಳ	ಗುರುತಿಸಲು ಆಗದ ಬಣ್ಣ	ಅನೇಕ ಸಲ	ಕರ್ಮಭೂಮಿ
೬	ದುಷಮಾ ದುಷಮಾ	೨೧೦೦೦ ವರ್ಷಗಳು	೨೦ ವರ್ಷ	೧೫ ವರ್ಷ	ಎರಡು ಮೊಳ	ಒಂದು ಮೊಳ	ಹೊಗೆಯ ಬಣ್ಣ	ಮೇಲಿಂದ ಮೇಲೆ	ಕರ್ಮಭೂಮಿ

(ಈ ಕೋಷ್ಟಕವನ್ನು 'ತತ್ತ್ವಾರ್ಥ ಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯ ತೃತೀಯ ಅಧ್ಯಾಯದ ೩೪ರಿಂದ ೩೯ನೆಯ ಪ್ರಾಕೃತ ಗಾಹೆಗಳನ್ನು ಅನುಸರಿಸಿ ತಯಾರಿಸಲಾಗಿದೆ)

ಚಿತ್ರ ೩.೧



ಹಾಗಾಗಿ ಜಗತ್ತು ಒಮ್ಮೆ ಸುಖದಿಂದ ದುಃಖದ ಕಡೆಗೂ, ಇನ್ನೊಮ್ಮೆ ದುಃಖದಿಂದ ಸುಖದ ಕಡೆಗೂ ಚಲಿಸುತ್ತಿರುತ್ತದೆ. ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎರಡನ್ನೂ ಸೇರಿಸಿ ಒಂದು ಕಲ್ಪವೆಂದು ಕರೆಯಲಾಗುತ್ತದೆ. ಆಯಾಯಾ ಕಾಲಘಟ್ಟಗಳ ಅವಧಿ, ಮನುಷ್ಯರ ಆಯುಷ್ಯ, ಆಹಾರ ಕ್ರಮ, ಆಹಾರ ಸ್ವೀಕರಣ ಕ್ರಮಗಳನ್ನು ಕೋಷ್ಠಕ ೩.೧ರಲ್ಲಿ ವಿವರಿಸಲಾಗಿದೆ.

ಕಾಲಗಳನ್ನು ಹೇಳುವಾಗ ಪೂರ್ವಾಂಗ, ಪೂರ್ವ, ಪೂರ್ವಕೋಟಿ ಎಂಬ ಪದಗಳು ಸಾಮಾನ್ಯವಾಗಿ ಈ ಕೃತಿಯುದ್ದಕ್ಕೂ ಬರುತ್ತವೆ. ಅವುಗಳ ವಿವರ ಕೆಳಗಿನಂತಿದೆ.

"ಇಲ್ಲಿಗುಪಯೋಗಿಯಪ್ಪುದೀ ಗಾಥೆ:

ಪುವ್ವಸ್ಸದು ಪರಿಮಾಣಂ ಸದರಿಂ ಖಳು ಕೋಡಿಸದಸಹಸ್ಸಾ ಇಂ।
ಛಪ್ಪಣ್ಣಂ ಚ ಸಹಸ್ಸಾ ಬೋದ್ಧವ್ವಾ ವಾಸಗಣಣಾಏ ॥೩.೭೯॥ (ಪ್ರಾಕೃತ)

ಪೂರ್ವದ ಪ್ರಮಾಣವೇನೆಂದೊಡೆ ಎಪ್ಪತ್ತುಲಕ್ಷ ಅಯ್ವತ್ತಾರು ಸಹಸ್ರಕೋಟಿಗಳಪ್ಪುವೆಂದಿತು ಅಱಿಯಲು ಪಡುವುದು ವರ್ಷಗಳ ಸಂಖ್ಯೆಯಿಂದಂ ।೭೦೫೬೦೦೦೦೦೦೦೦೦೦॥"[೧೨೫] (ಕನ್ನಡ ವೃತ್ತಿ)

ಅಂದರೆ ೭೦ ಲಕ್ಷ ೫೬ ಸಾವಿರಕೋಟಿ ವರ್ಷಗಳು.

ಪೂರ್ವಾಂಗ = ೮೪,೦೦೦೦

೧೨೫. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ತೃತೀಯೋಧ್ಯಾಯಃ)ಪು. ೪೯

ಪೂರ್ವ = ೮೪,೦೦೦೦^{೨} = ೮೪,೦೦೦೦ * ೮೪,೦೦೦೦

= ೭,೦೫,೬೦,೦೦,೦೦,೦೦,೦೦೦

ಪೂರ್ವಕೋಟಿ = ೭,೦೫,೬೦,೦೦,೦೦,೦೦,೦೦೦ * ೧,೦೦,೦೦,೦೦೦

= ೭೦,೫೬,೦೦,೦೦,೦೦,೦೦,೦೦,೦೦,೦೦೦

ಪಲ್ಯ ಎಂದರೆ ಅಸಂಖ್ಯಾತ ವರ್ಷಗಳು.

- **ಕುಲಂಕರರು (ಮನುಗಳು):**

ಈ ಕಾಲಘಟ್ಟಗಳ ಅವಧಿಯು ಪೂರ್ಣವಾಗಲು ದೀರ್ಘಾವಧಿ ಅಸಂಖ್ಯ ಕೋಟಿ ವರ್ಷಗಳು ಬೇಕು. ಈ ಕಾಲಪರಿವರ್ತನೆಯು ಭರತ ಮತ್ತು ಐರಾವತ ಕ್ಷೇತ್ರಗಳ ಆರ್ಯ ಖಂಡಗಳಲ್ಲಿ ಮಾತ್ರ ಆಗುತ್ತದೆ. ಉಳಿದ ಕ್ಷೇತ್ರಗಳಲ್ಲಿ ಆಗುವುದಿಲ್ಲ. ಒಂದನೆಯ ಮತ್ತು ಎರಡನೆಯ ಕಾಲಘಟ್ಟಗಳಲ್ಲಿ ಭೋಗಭೂಮಿಯ ಕಾಲದಲ್ಲಿ ಭೂಮಿಯ ಮೇಲಿನ ಎಲ್ಲ ಜೀವಿಗಳು ಕಲ್ಪವೃಕ್ಷಗಳಿಂದಲೇ ತಮ್ಮ ನಿತ್ಯಾವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಆದುದರಿಂದ ಈ ಕಾಲವನ್ನು ಭೋಗಭೂಮಿ ಎಂದು ಕರೆಯುತ್ತಿದ್ದರು. ಆದರೆ ಕಾಲದ ಮೂರನೆಯ ಘಟ್ಟದಲ್ಲಿ ಕಲ್ಪವೃಕ್ಷಗಳು ಮಾಯವಾದವು. ಅದಕ್ಕಾಗಿ ಕೆಲಸಕಾರ್ಯಗಳನ್ನು ಮಾಡಬೇಕಾಯಿತು. ಆದ್ದರಿಂದಲೇ ಈ ಕಾಲವನ್ನು ಕರ್ಮಭೂಮಿಕಾಲ ಎಂದು ಕರೆಯಲಾಯಿತು. ಮನುಷ್ಯರು ತಮ್ಮ ತಮ್ಮ ಅವಶ್ಯಕತೆಗಳನ್ನು ತಾವೇ ಪೂರೈಸಿಕೊಳ್ಳಬೇಕಾಯಿತು. ಆಗ ೧೪ ಜನ ಕುಲಂಕರರು ಹುಟ್ಟುವರು. ಇವರನ್ನು ಕುಲಧರರು, ಕುಳಕರ, ಮನುಗಳು ಎನ್ನುವರು. ಈ ಮನುಗಳೇ ಮನುಷ್ಯರಿಗೆ ಬದುಕುವ ಕಲೆಯನ್ನು ಕಲಿಸಿದರು. ವಿವಿಧ ರೀತಿಯ ಅಂಧಕಾರಗಳನ್ನು ಒಬ್ಬೊಬ್ಬರಾಗಿ ದೂರಮಾಡಿದ ಹದಿನಾಲ್ಕು ಜನ ಮನುಗಳ ವಿವರ ಕೆಳಗಿನಂತಿದೆ.

೧. ಪ್ರತಿಶ್ರುತಿ : ಸೂರ್ಯ, ಚಂದ್ರರ ಕುರಿತ ಭಯ ದೂರ ಮಾಡಿದ.

೨. ಸನ್ಮತಿ : ನಕ್ಷತ್ರಗಳ ಕಲ್ಪನೆ ತಿಳಿಸಿಕೊಡುತ್ತಾನೆ.

೩. ಕ್ಷೇಮಂಕರ : ಕ್ರೂರಮೃಗಗಳ ಭಾದೆಯಿಂದ ಉಳಿಸಿ, ಕ್ಷೇಮವನ್ನುಂಟು ಮಾಡಿದನು.

೪. ಕ್ಷೇಮಂಧರ : ಜಗತ್ತಿನಲ್ಲಿ ಸುಖ-ಕ್ಷೇಮಗಳು ಸ್ಥಿರವಾಗಿ ನೆಲೆಸುವಂತೆ ಯತ್ನಿಸುತ್ತಾನೆ.

೫. ಸೀಮಂಕರ : ಜನರಲ್ಲಿ ತಮ್ಮ ತಮ್ಮ ಸೀಮೆಯನ್ನು ಗೊತ್ತುಮಾಡಿಕೊಂಡು, ವ್ಯವಸ್ಥಿತವಾಗಿ ಭೂಮಿಯನ್ನು ಹಂಚಿಕೆ ಮಾಡಿಕೊಟ್ಟನು. ಕೃಷಿಯನ್ನು ಆರಂಭಿಸಿದರು.

೬. ಸೀಮಂಧರ : ಭೂಭಾಗದ ಸೀಮೆಗಳನ್ನು ನಿಶ್ಚಿತ ಸ್ವರೂಪಕ್ಕೆ ಒಳಪಡಿಸಿದ.

೭. ವಿಮಲವಾಹನ : ಆನೆ-ಕುದುರೆಗಳನ್ನು ಪಳಗಿಸಿ ಅವುಗಳ ಮೇಲೆ ಸವಾರಿ ಮಾಡುವ ವಿದ್ಯೆಯನ್ನು ತಿಳಿಸಿದನು. ಕ್ಷಾತ್ರಯುಗ ಆರಂಭವಾಯಿತು.

೮. ಚಕ್ಷುಷ್ಮಂತ : ಮಕ್ಕಳ ರಕ್ಷಣೆ, ಲಾಲನೆ-ಪಾಲನೆಯ ಕುರಿತು ಜನರಿಗೆ ತಿಳಿಸಿದನು. ಕುಟುಂಬ ವ್ಯವಸ್ಥೆಯು ಆರಂಭವಾಯಿತು.

೯. ಯಶಸ್ವಿ : ಮಕ್ಕಳಿಗೆ ಹೆಸರಿಡುವುದನ್ನು ಪ್ರಚಾರದಲ್ಲಿ ತಂದನು. ಇಲ್ಲಿಂದಲೇ ಒಬ್ಬೊಬ್ಬರಿಗೆ ಒಂದೊಂದು ಹೆಸರು ಬಂದಿತು. ಈ ಕಾಲದಲ್ಲಿಯೇ ಭಾಷೆಯು ಬೆಳೆಯಲು ಆರಂಭವಾಯಿತು.

೧೦. ಅಭಿಚಂದ್ರ : ಅಭಿಚಂದ್ರ ಮತ್ತು ಆತನ ಹೆಂಡತಿ ಶ್ರೀಮತಿಯೂ ಸೇರಿ ಮಕ್ಕಳಿಗೆ ಚಂದ್ರನ್ನು ತೋರಿಸಿ ಆಡುವುದನ್ನು ಕಲಿಸಿದರು. ಚಿಕ್ಕಮಕ್ಕಳ ಲಾಲಿಗಳ ಆರಂಭವಾಯಿತು. ಈ ಕಾಲದಲ್ಲಿಯೇ ಕಾವ್ಯದ ಉಗಮವಾಗಿರಬಹುದೆಂದು ಊಹಿಸಬಹುದಾಗಿದೆ.

೧೧. ಚಂದ್ರಾಭ : ಋತುಮಾನಗಳ ಕಲ್ಪನೆ ನೀಡಿ, ಮಡದಿ, ಮಕ್ಕಳೊಂದಿಗೆ ಬದುಕುವ ಕಲೆಯನ್ನು ಕಲಿಸಿದನು.

೧೨. ಮರುದೇವ : ನದಿ, ಸರೋವರಗಳನ್ನು ದಾಟಲು ದೋಣಿ ಕಟ್ಟುವ ಕಲೆ ಕಲಿಸಿದನು.

೧೩. ಪ್ರಷೇನಜಿತ : ಮಕ್ಕಳ ಆರೈಕೆಯ ಕುರಿತು ತಿಳಿಸಿದ. ಹೆರಿಗೆಯ ವಿಧಾನಗಳಲ್ಲಿ ಸುಧಾರಣೆಯಾಯಿತು. ಹೆರಿಗೆ ಸಂದರ್ಭದಲ್ಲಿ ಮಗುವಿನ ಮೇಲಿನ ಮಾಂಸವೇಷ್ಟವನ್ನು ತೆಗೆಯುವ ವಿಧಾನ ತಿಳಿಸಿದನು.

೧೪. ನಾಭಿ : ಮಕ್ಕಳ ಹೊಕ್ಕಳ ಬಳ್ಳಿಯ ಹುರಿ ಕೊಯ್ಯುವದನ್ನು ತಿಳಿಸಿದ. ಇವನ ಕಾಲಕ್ಕೆ ನಾಗರಿಕತೆಯು ಸಾಕಷ್ಟು ಪ್ರಮಾಣದಲ್ಲಿ ಸುಧಾರಣೆಯನ್ನು ಕಂಡಿತು. ಕೃಷಿಯಲ್ಲಿಯೂ ಸುಧಾರಣೆಗಳು ಕಂಡವು.[೧೨೬]

ಈ ಮನುಗಳಿಂದಲೇ ಮನುಷ್ಯರು ಎಂಬ ಹೆಸರು ಬಂತು. ಹದಿನಾಲ್ಕನೆಯ ಮನುವಾದ ನಾಭಿರಾಜ ಮತ್ತು ಮರುದೇವಿಯರ ಪುತ್ರನೇ ಋಷಭದೇವ. ಇವನೇ ಜೈನ ಧರ್ಮ ಬೆಳಗಿದ ಮೊದಲ ತೀರ್ಥಂಕರ. "ಋಷಭದೇವನು ಪ್ರಜೆಗಳಿಗೆ ಕೃಷಿ, ಅಸಿ (ಖಡ್ಗದ ಉಪಯೋಗ), ಮಷೀ (ಅಡುಗೆ ಮಾಡುವ), ಶಿಲ್ಪ, ವಾಣಿಜ್ಯ ಮತ್ತು ವಿದ್ಯಾ ಎಂಬ ಆರು ಕರ್ಮಗಳನ್ನು ಜೀವನಕ್ಕಾಗಿ ಬೋಧಿಸಿದನು. ಇದರಿಂದಾಗಿಯೇ ಈತನಿಗೆ 'ಪ್ರಜಾಪತಿ' ಎಂಬ ಹೆಸರಾಯಿತು." [೧೨೭] ಈತನೊಂದಿಗೆ ಜೈನಧರ್ಮದಲ್ಲಿ ತೀರ್ಥಂಕರರ ಪರಂಪರೆ ಆರಂಭವಾಯಿತು. ಇದು ನಾಲ್ಕನೆಯ ಕಾಲಘಟ್ಟ.

> **"ನಾಲ್ಕನೆಯ ಕಾಲದೊಳು ಇಪ್ಪತ್ತನಾಲ್ವರು**
> **ತೀರ್ಥಂಕರಪರಮದೇವರುಂ ಪನ್ನೀರ್ವರು ಸಕಲ**
> **ಚಕ್ರವರ್ತಿಗಳುಂ ಇಪ್ಪತ್ತಣ್ಬರು ತ್ರಿಖಂಡ ಭರತಾಧಿಪರಿಗಳುಂ**
> **ಅಪ್ಪರು ಅವರ್ಗಳು ತ್ರಿಷಷ್ಠಿ ಶಲಾಕಾ ಪುರುಷರಪ್ಪರು ॥"**[೧೨೮]

---

೧೨೬. ಮಿರ್ಜಿ ಅಣ್ಣಾರಾಯ : **ಜೈನಧರ್ಮ** : ಪು. ೨೫, ೨೬, ೨೭.
೧೨೭. ಮಿರ್ಜಿ ಅಣ್ಣಾರಾಯ : **ಜೈನಧರ್ಮ** : ಪು.೨೯
೧೨೮. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ತೃತೀಯೋಧ್ಯಾಯಃ) ಪು.೪೬

ಈ ಚತುರ್ಥಕಾಲದಲ್ಲಿ ೨೪ ಜನ ತೀರ್ಥಂಕರರು,[೧೨೯] ಹನ್ನೆರಡು ಜನ ಚಕ್ರವರ್ತಿಗಳು,[೧೩೦] ಒಂಭತ್ತು ಜನ ನಾರಾಯಣರು,[೧೩೧] ಒಂಭತ್ತು ಜನ ಪ್ರತಿನಾರಾಯಣರು,[೧೩೨] ಒಂಭತ್ತು ಜನ ಬಲಭದ್ರರು[೧೩೩] ಜನ್ಮವೆತ್ತಿ, ಜನರಿಗೆ ಧರ್ಮಬೋಧೆಯನ್ನು ಮಾಡುತ್ತಾರೆ. ಒಟ್ಟು ಅರವತ್ತಮೂರು ಜನರಿದ್ದ ಇವರನ್ನು 'ತ್ರಿಷಷ್ಠಿ ಶಲಾಕಾ ಪುರುಷರು' ಎನ್ನುವರು. ಸಂಸಾರ ಸಾಗರವನ್ನು ಸ್ವತಃ ಪಾರು ಮಾಡುವ ಮತ್ತು ಬೇರೆಯವರನ್ನೂ ಸಹ ಪಾರುಮಾಡುವ ಮಾರ್ಗವನ್ನು ಹೇಳುವ ಹಾಗೂ ಧರ್ಮ ತೀರ್ಥದ ಪ್ರವರ್ತಕ ಮಹಾಪುರುಷರಿಗೆ ತೀರ್ಥಂಕರರೆಂದು ಕರೆಯುತ್ತಾರೆ. ವರ್ತಮಾನ ಕಾಲದಲ್ಲಿ ವೃಷಭದೇವನಿಂದ ಮೊದಲ್ಗೊಂಡು ವರ್ಧಮಾನ ಮಹಾವೀರನವರೆಗೆ ಆಗಿಹೋದ ಇಪ್ಪತ್ತನಾಲ್ಕು ಜನ ತೀರ್ಥಂಕರರು ಕ್ರಮವಾಗಿ ಜನಿಸಿ ಜನರಿಗೆ ಧರ್ಮತೀರ್ಥವನ್ನು ಉಪದೇಶಿಸಿದರು.

- **ಲೋಕದ ಹುಟ್ಟು, ಬೆಳವಣಿಗೆ:**

ಐದನೆಯ ಕಾಲಘಟ್ಟದಲ್ಲಿ ಕಡೆಯ ದಿನದ ಹುಣ್ಣಿಮೆಯ ಮಧ್ಯಾಹ್ನದಂದು ಧರ್ಮವೂ ಅರಸುತನವೂ ಬೆಂಕಿ ಬಿದ್ದಂತೆ ಸರ್ವನಾಶವಾಗುವುದು. ಅಲ್ಲಿಗೆ ಮನುಷ್ಯರು ನಗ್ನರಾಗಿ, ಮೀನುಗಳನ್ನು ತಿಂದು ಬದುಕುವರು. ಆರನೆಯ ಕಾಲಘಟ್ಟವು ಅತಿವೇಗದ ಗಾಳಿ, ಅತೀಶೀತಗಳಿಂದ ಕೂಡಿರುವುದು. ಅಲ್ಲದೇ ಮಂಜುಗಡ್ಡೆ, ಕ್ಷಾರ (ಆಮ್ಲ), ವಿಷ, ಕಲ್ಲು, ಅಗ್ನಿ, ಧೂಳು, ಹೊಗೆಗಳೆಂಬ ಏಳು ಮಳೆಗಳು ಒಂದೊಂದೂ ಏಳೇಳು ದಿನಗಳವರೆಗೆ ಸುರಿಯುವವು. ಇಲ್ಲಿಗೆ ಅವಸರ್ಪಿಣಿ ಕಾಲವು ಮುಗಿಯುವುದು. ಇದು ಲೋಕದ ಮರುಸೃಷ್ಟಿಗೆ ಪೂರ್ವಪೀಠಿಕೆಯ ಕಾಲ. ಮತ್ತೆ ಉತ್ಸರ್ಪಿಣಿ ಕಾಲ ಆರಂಭವಾಗುವುದು.

ಉತ್ಸರ್ಪಿಣಿ ಕಾಲದ ಮೊದಲ ಘಟ್ಟದಲ್ಲಿ ಜಲ, ಕ್ಷೀರ, ತುಪ್ಪ, ಅಮೃತ, ರಸಗಳೆಂಬ ಪಂಚಧಾತುಗಳ ಮೋಡಗಳು ಏಳೇಳು ದಿನಗಳವರೆಗೆ ಮಳೆಗರೆಯುವವು. ಅಲ್ಲಿ ಮನುಷ್ಯರು ಮತ್ತೇ ನಗ್ನರಾಗಿ ಕಂದಮೂಲಾದಿ ಆಹಾರಗಳನ್ನು ಸೇವಿಸುತ್ತ ನಾಗರೀಕತೆಯ ಬೆಳವಣಿಗೆ ಆಗುವುದು. ಎರಡನೆಯ ಕಾಲಘಟ್ಟದಲ್ಲಿ ಕುಲಧರರು ಜನಿಸುವರು. ಮೂರನೆಯ ಕಾಲಘಟ್ಟದಲ್ಲಿ

---

೧೨೯. ಶ್ರೀ. ಸಿ. ರಾಮಚಂದ್ರ ಸ್ಯಾದ್ವಾದಿ : **ಜಿನಧರ್ಮ ದರ್ಪಣ – ಪ್ರಶ್ನೋತ್ತರಮಾಲಾ** : ಪು.೧೧೪-೧೨೫
ವೃಷಭನಾಥ, ಅಜಿತನಾಥ, ಶಂಭವ, ಅಭಿನಂದನ, ಸುಮತಿನಾಥ, ಪದ್ಮಪ್ರಭ, ಸುಪಾರ್ಶ್ವ, ಚಂದ್ರಪ್ರಭ, ಪುಷ್ಪದಂತ, ಶೀತಲ, ಶ್ರೇಯಾಂಸ, ವಾಸುಪೂಜ್ಯ, ವಿಮಲ, ಅನಂತ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರಹನಾಥ, ಮಲ್ಲಿನಾಥ, ಮುನಿಸುವ್ರತ, ನಮಿನಾಥ, ನೇಮಿನಾಥ, ಪಾರ್ಶ್ವನಾಥ, ವರ್ಧಮಾನ

೧೩೦. ಜಿ. ಬ್ರಹ್ಮಪ್ಪ : **ರತ್ನಾಕರನ ಶತಕ ಸಾಹಿತ್ಯ** : ಪುಟ.೨೯೪ (ಭರತ, ಸಗರ, ಮಘವಾ, ಸನತ್ಕುಮಾರ, ಶಾಂತಿನಾಥ, ಕುಂಥುನಾಥ, ಅರಹನಾಥ, ಸುಭೌಮ, ಪದ್ಮನಾಭ, ಹರಿಷೇಣ, ಜಯಸೇನ, ಬ್ರಹ್ಮದತ್ತ.)

೧೩೧. **ಅದೇ,** ಪುಟ.೨೯೪, ೨೯೫ [ತ್ರಿಪುಷ್ಟ, ದ್ವಿಪುಷ್ಟ, ಸ್ವಯಂಭು, ಪುರುಷೋತ್ತಮ, ನರಸಿಂಹ, ಪುಂಡರೀಕ, ದತ್ತದೇವ, ಲಕ್ಷ್ಮಣ, ಕೃಷ್ಣ. (ಇವರನ್ನು 'ವಾಸುದೇವರು' ಎಂತಲೂ ಕರೆವರು.)]

೧೩೨. **ಅದೇ :**ಪುಟ.೨೯೫ {[ಅಶ್ವಗ್ರೀವ, ತಾರಕ, ಮೇರಕ, ನಿಷುಂಭ, ಮಧುಕೀಟಕ(ಮಧುಕೈಟಭ), ಪ್ರಲ್ಹಾದ ಬಲಿಸೇನ, ರಾವಣ, ಜರಾಸಂಧ (ಇವರನ್ನು 'ಪ್ರತಿವಾಸುದೇವರು' ಎಂತಲೂ ಕರೆಯುವರು)]}

೧೩೩. ಜಿ. ಬ್ರಹ್ಮಪ್ಪ. **: ರತ್ನಾಕರನ ಶತಕ ಸಾಹಿತ್ಯ** : ಪುಟ.೨೯೫ [ವಿಜಯ, ಅಚಲ, ಧರ್ಮಪ್ರಭ, ಸುಪ್ರಭ, ಸುದರ್ಶನ, ನಂದಿಸೇನ, ನಂದಿಮಿತ್ರ, ರಾಮಚಂದ್ರ, ಬಲರಾಮ(ಪದ್ಮ)]

ತ್ರಿಷಷ್ಠಿ ಶಲಾಕಾ ಪುರುಷರು ಜನಿಸುವರು. ನಾಲ್ಕನೆಯ ಕಾಲಘಟ್ಟದಲ್ಲಿ ಭೋಗಭೂಮಿ ಅವಧಿ ಆರಂಭವಾಗುವುದು. ನಂತರ ಉಳಿದ ಕಾಲಗಳು ಪ್ರಥಮ ಕಾಲದ ಪ್ರಥಮದಂತೆ ವರ್ತಿಸುವವು. ಹರಿಕ್ಷೇತ್ರ ಮತ್ತು ರಮ್ಯಕ ಕ್ಷೇತ್ರಗಳಲ್ಲಿ ದ್ವಿತೀಯ ಕಾಲದ ಪ್ರಥಮದಂತೆ, ಹೈಮವತ ಮತ್ತು ಹೈರಣ್ಯವತಗಳಲ್ಲಿ ತೃತೀಯಕಾಲದ ಪ್ರಥಮದಂತೆ, ವಿದೇಹ ಕ್ಷೇತ್ರದಲ್ಲಿ ಚತುರ್ಥಕಾಲದ ಪ್ರಥಮದಂತೆ ಆಯುರ್ಬಲಗಳು ವರ್ತಿಸುವವು. ಭರತ ಮತ್ತು ಐರಾವತ ಕ್ಷೇತ್ರಗಳ ಮ್ಲೇಚ್ಛಖಂಡಗಳಲ್ಲಿ ದುಷಮಾ–ಸುಷಮಾ ಅಂದರೆ ನಾಲ್ಕನೆಯ ಕಾಲಘಟ್ಟವು ಸಂಭವಿಸುವುದು.

ಖಗೋಳ ವಿಜ್ಞಾನಿಗಳ ಪ್ರಕಾರ "ವಿಶ್ವವು ಕೋಟ್ಯಂತರ ವರ್ಷಗಳ ಅವಧಿಯಲ್ಲಿ ವಿಸ್ತರಣೆಯಲ್ಲಿದ್ದಾಗ ನಿಧಾನವಾಗಿ ಭೂಮಿಯು ಅಸ್ತಿತ್ವಕ್ಕೆ ಬಂದಿತು. ೧೩೭೦ ಕೋಟಿ ವರ್ಷಗಳಷ್ಟು ದೀರ್ಘಾಯುವಾದ ಬ್ರಹ್ಮಾಂಡದಲ್ಲಿ ಉಂಟಾದ ಮಹಾಸ್ಫೋಟದ ಫಲವಾಗಿ ಸುಮಾರು ೪೬೦ ಕೋಟಿ ವರ್ಷಗಳ ಹಿಂದೆ ಸೌರಮಂಡಲವು ಸೃಷ್ಟಿಯಾಯಿತು. ಸುಮಾರು ೨೪೦೦ ಕೋಟಿ ಕಿ. ಮೀಟರ್‌ಗಳಷ್ಟು ಉದ್ದಗಲದ ಅಂತರಿಕ್ಷದಲ್ಲಿ ಅನಿಲ ಮತ್ತು ಧೂಳುಗಳ ಮಹಾ ಉತ್ಪಾತವಾಗಿ ಅವು ಘನೀಭವಿಸುತ್ತ ಬ್ರಹ್ಮಾಂಡ ಸೃಷ್ಟಿಯಾಯಿತು. ಕತ್ತಲೆಯ ಕೂಪದಂತಿದ್ದ ಬ್ರಹ್ಮಾಂಡದಲ್ಲಿ ನಕ್ಷತ್ರ, ಗ್ರಹ, ಉಪಗ್ರಹ, ಕ್ಷುದ್ರಗ್ರಹಗಳು ಹುಟ್ಟಿಕೊಂಡವು. ಧೂಳಿಯ ಕಣಗಳ ಘನೀಭವಿತ ರೂಪವಾದ ಭೂಮಿಯ ಮೇಲೆ ದಟ್ಟವಾದ ಮೋಡಗಳಿಂದ ವರ್ಷಾನುಗಟ್ಟಲೇ ನಾನಾ ರೀತಿಯ ಮಳೆಗಳು ಉಂಟಾದವು. ನಂತರ ಸಂಗ್ರಹಿತ ನೀರಿನಿಂದಲೇ ಸೂಕ್ಷ್ಮಜೀವಿಗಳಿಂದ ಹಿಡಿದು ದೊಡ್ಡ ಗಾತ್ರದ ಜೀವಿಗಳು ಸೃಷ್ಟಿಯಾದವು."[೧೩೪]

ಈ ಮುಂಚೆಯೇ ಹೇಳಿದಂತೆ "ಸೃಷ್ಟಿಯನ್ನು ಪರಮಾತ್ಮನು ನಿರ್ಮಾಣ ಮಾಡಿಲ್ಲ. ಅದು ಪ್ರಕೃತಿ ಧರ್ಮಕ್ಕೆ ಅನುಸರಿಸಿ ರೂಪುಗೊಂಡಿದೆ. ಹೀಗಾಗಿ ಪ್ರಕೃತಿಯಲ್ಲಿನ ಮುಖ್ಯ ಘಟಕಗಳು ಯಾವುವೆಂದು ವೈಜ್ಞಾನಿಕ ದೃಷ್ಟಿಕೋನದಿಂದ ವಿವೇಚಿಸುವುದು ಸಮಂಜಸವಾಗಿದೆ." [೧೩೫] ಅಂತೆಯೇ ಜೈನಧರ್ಮವು ಅದನ್ನು ನಿರೂಪಿಸುತ್ತದೆ. ತತ್ತ್ವಾರ್ಥಸೂತ್ರವು ಇದನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತದೆ. ಸಚೇತನ ಮತ್ತು ಅಚೇತನಗಳೆಂದು ಎರಡು ತತ್ತ್ವಗಳನ್ನು ಗುರುತಿಸಿ ಅವುಗಳ ಆಧಾರದಲ್ಲಿಯೇ ಸೃಷ್ಟಿ ನಿಯಮವನ್ನು ರೂಪಿಸುತ್ತದೆ. ವೈಜ್ಞಾನಿಕ ದೃಷ್ಟಿಕೋನದಿಂದ ಇಲ್ಲಿ ಸಚೇತನಗಳೆಂದರೆ 'ಸಜೀವಿಗಳು'. ಅಚೇನತಗಳೆಂದರೆ 'ನಿರ್ಜೀವಿಗಳು'. ಅಂತೆಯೇ ವಿಶ್ವವು ಪರಮಾಣುಗಳ ಸಂಯೋಗದಿಂದ ಸೃಷ್ಟಿಯಾಗಿದೆ. ಅವುಗಳ ನೆಲೆಯಲ್ಲಿಯೇ ಜೀವಿಗಳ ಉಗಮ ವಿಕಾಸಗಳಾದವು. ಅವುಗಳನ್ನೇ ಹಿಂದೂ ದರ್ಶನಗಳು ಪಂಚ ಮೂಲಧಾತುಗಳೆಂದು ಕರೆಯುತ್ತವೆ. ಇವುಗಳ ಒಟ್ಟುಗೂಡುವಿಕೆಯಿಂದಲೇ ಲೋಕವು ಸೃಷ್ಟಿಯಾಗಿದೆ ಎಂಬುದು ಜೈನ

---

೧೩೪. ಕಮಲಾಕರ (ಲೇ) ಲೇಖನ: **ಭೂಮಿ ಹುಟ್ಟಿದ್ದು ಹೇಗೆ?**. www.vartamana.com : ಜಾಲತಾಣದಿಂದ. ದಿನಾಂಕ:೧೨ ಆಗಸ್ಟ್, ೨೦೧೨.

೧೩೫. ಮಿರ್ಜಿ ಅಣ್ಣಾರಾಯ : **ಜೈನಧರ್ಮ** ; ಪುಟ. ೩೯೩

ತತ್ತ್ವಗಳ ಹೂರಣವಾಗಿದೆ. ಈ ಎಲ್ಲ ವಿಚಾರಗಳನ್ನು ಗಮನಿಸಿದರೆ ಆಧುನಿಕ ವಿಜ್ಞಾನಿಗಳು ವ್ಯಾಖ್ಯಾನಿಸಿದ ಸೃಷ್ಟಿಯ ನಿಯಮವನ್ನೇ ಹೋಲುತ್ತದೆ.

ಈ ಮುಂಚೆಯೇ ಹೇಳಿದ ಹಾಗೆ ಭರತಕ್ಷೇತ್ರವು ಜಂಬೂದ್ವೀಪದ ೧೯೦ರಲ್ಲಿ ಒಂದು ಭಾಗ ಅಂದರೆ ೫೨೬ ಯೋಜನಗಳಷ್ಟಿದೆ. ಇದನ್ನು ಪ್ರವೇಶಿಸಲು ನಾಲ್ಕು ದಿಕ್ಕುಗಳಿಗೆ ಕ್ರಮವಾಗಿ ವಿಜಯ, ವೈಜಯಂತ, ಜಯಂತ, ಅಪರಾಜಿತ ಎಂಬ ನಾಲ್ಕು ಮಹಾದ್ವಾರಗಳಿವೆ. ಸಮುದ್ರದ ಕಡೆಗೆ ಎಂಟು ಯೋಜನ ಉದ್ದದ ಪ್ರಾಕಾರಗಳಿವೆ. ಪ್ರಾಕಾರಗಳ ಮೇಲೆ ಎರಡು ಕ್ರೋಶ ಎತ್ತರ ಹಾಗೂ ಐನೂರು ಬಿಲ್ಲುಗಳಷ್ಟು ಅಗಲದ ಪದ್ಮವೇದಿಕೆಗಳಿವೆ. ಇಲ್ಲಿ ಸಮುದ್ರದಲ್ಲಿನ ಪರಿಣಾಮವಾಗಿ ಶುಕ್ಲಪಕ್ಷದಲ್ಲಿ ಜಲವೃದ್ಧಿಯೂ, ಕೃಷ್ಣಪಕ್ಷದಲ್ಲಿ ವಾತವೃದ್ಧಿಯೂ ಆಗುವುದು. ಹುಣ್ಣಿಮೆಯಂದು ೧೬೦೦೦ ಯೋಜನಗಳಷ್ಟು ಹಾಗೂ ಅಮವಾಸೆಯ ದಿನ ೧೧೦೦೦ ಯೋಜನಗಳಷ್ಟು ವಿಸ್ತಾರದಲ್ಲಿ ಸಮುದ್ರದಲ್ಲಿ ಉಬ್ಬರವಿಳಿತಗಳು ಉಂಟಾಗುವವು. ಲವಣ ಸಮುದ್ರದ ಕಾಳೋದಕ ಸಮುದ್ರದ ಉತ್ತರಕ್ಕೆ ೩೨ ಹಿಮ ರಜತಾಚಲಗಳು, ಶಿಖರೀ ಪರ್ವತಗಳಿದ್ದು, ಅಲ್ಲಿ ೯೬೦೦೦ ಕುಮಾನುಷ್ಯ (ವಿಕಾರ ರೂಪದ ಮನುಷ್ಯರು) ದ್ವೀಪಗಳಿವೆ.

ಇಲ್ಲಿಯ ಮನುಷ್ಯರು ಒಂದು ತೊಡೆಯವರು, ಬಾಲವುಳ್ಳವರು, ಕೋಡುಗಳುಳ್ಳವರು, ಮಾತು ಗೊತ್ತಿರದವರು, ಮುರಿದ ಕಿವಿ, ವಿಕಾರ ಕಣ್ಣುಗಳನ್ನುಳ್ಳವರು, ಮೊಲದಂತೆ ಸಣ್ಣ ಆಕಾರವುಳ್ಳವರೂ ಆಗಿರುತ್ತಾರೆ. ಅಲ್ಲದೇ :

“ಸಿಂಹಮುಖರುಂ, ಅಶ್ವಮುಖರುಂ, ಸ್ವಾನಮುಖರುಂ, ಮಹಿಷ ಮುಖರುಂ, ಘೂಕ ಮುಖರುಂ, ಕಪಿವದನರುಂ, ಝುಸ (ಮೊಸಳೆ, ಮೀನು) ಮುಖರುಂ, ಕಾಳ ಮುಖರುಂ, ಮೇಷ ಮುಖರುಂ, ಗೋಮುಖರುಂ, ಮೇಘ ಮುಖರುಂ, ವಿದ್ಯನ್ಮುಖರುಂ, ದರ್ಪಣ ಮುಖರುಂ, ಇಭ (ಆನೆ) ವದನರುಮೆಂದಿಂತು ಪ್ರಣಿಧಿಗೆ ಸಂದ ದ್ವೀಪದ ವರ್ಗಗಳು॥”[೧೩೬]

ಹೀಗೆ ವಿವಿಧ ವಿಕಾರರೂಪದ ಮನುಷ್ಯರು ಈ ಕುಮಾನುಷ್ಯದ್ವೀಪ ಸಮೂಹಗಳಲ್ಲಿ ಕಾಣಸಿಗುತ್ತಾರೆ. ಈ ವಿಚಾರಗಳನ್ನು ಅಧ್ಯಯನಿಸಿದರೆ ಇವೆಲ್ಲವೂ ಆಗಿನ ಕಾಲದ ಆದಿವಾಸಿ ಜನಾಂಗವನ್ನು ಕುರಿತಾಗಿ ಉಲ್ಲೇಖಿಸಿರಬಹುದೆಂದು ಊಹಿಸಬಹುದಾಗಿದೆ. ಈ ವಿಷಯಗಳಿಗೆ ಪುಷ್ಠಿ ನೀಡುವಂತೆ ಆಫ್ರಿಕಾದ ಕಾಡುಗಳಲ್ಲಿ, ಈಶಾನ್ಯ ಭಾರತದ ಕಾಡುಗಳಲ್ಲಿ, ಹಾಗೂ ಅಂಡಮಾನ್–ನಿಕೋಬಾರ್ ದ್ವೀಪಗಳಲ್ಲಿ ಇಂದಿಗೂ ನಗ್ನರೂಪದಲ್ಲಿಯೇ ಇರುವ ಮಾನವ ಜನಾಂಗಗಳು ಕಾಣಸಿಗುತ್ತವೆ. ಅಲ್ಲಿಯ ಕೆಲ ಜನಾಂಗಗಳಿಗೆ ಇಂದಿಗೂ ಭಾಷೆಯ ಸ್ಪರ್ಶವಾಗಲೀ, ಆಧುನಿಕತೆಯ ಗಾಳಿಯಾಗಲೀ ಸೋಂಕಿಲ್ಲದಿರುವುದು ಕಂಡುಬರುತ್ತದೆ. ಉದಾಹರಣೆ: ಅಂಡಮಾನ್ ದ್ವೀಪಗಳಲ್ಲಿರುವ ಜಾರವಾ ಅಥವಾ ಜಾರ್ ಜನಾಂಗ. ಡಾ. ಎಚ್. ಎಸ್. ಅನುಪಮಾ ಅವರು ತಮ್ಮ ‘ಅಂಡಮಾನ್–ಕಂಡಹಾಗೆ’ ಎಂಬ ಪ್ರವಾಸಕಥನದಲ್ಲಿ “ಜಾರವಾ ಜನಾಂಗವು ಆದಿಮಾನವನ ಕೊನೆಯಕೊಂಡಿ” ಎಂದು ಬಣ್ಣಿಸುತ್ತಾರೆ.

---

೧೩೬. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ತೃತೀಯೋಧ್ಯಾಯಃ) ಪು.೫೩

ಮುಂದುವರೆದು, **"ಒಂದು ತೊಡೆಯವರ್ಗಳು ಗುಹೆಯೊಳಿರ್ಪರು ಕರಮಿನಿದಪ್ಪ ವೃತ್ತಿಕೆಯಿಂದ ತಿಂಬರು ಉಳಿದವರ್ಗಳು ಮರದ ಮೊದಲಾದೆಡೆಯೊಳಿರ್ಪರು ಪುಷ್ಪ ಫಲಂಗಳಿಂದಂ ಜೀವಿಸುವರು"**[೧೩೬] ಕೆಲವರು ಗುಹಾವಾಸಿಗಳೂ, ಕೆಲವರು ಮರದ ವಾಸಿಗಳೂ ಆಗಿರುವ ಇವರು ಕಂದಮೂಲಗಳನ್ನು, ಫಲ–ಪುಷ್ಪಗಳನ್ನು ತಿಂದು ಜೀವಿಸುವರು. ಇಲ್ಲಿಯ ಜನರು ಜೊತೆಯಾಗಿಯೇ ಹುಟ್ಟಿ ಜೊತೆಯಾಗಿ ಸಾಯುತ್ತಾರೆ.

ಹೀಗಿರುವ ಈ ಜಂಬೂದ್ವೀಪದಲ್ಲಿ ಒಂದು, ಧಾತಕೀಖ(ಷ)ಂಡದಲ್ಲಿ ಎರಡು, ಪುಷ್ಕರಾರ್ಧ ದ್ವೀಪಗಳಲ್ಲಿ ಎರಡು ಮೇರು ಪರ್ವತಗಳಿರುತ್ತವೆ. ಇವುಗಳನ್ನು ಪಂಚಮೇರು ಪರ್ವತಗಳು ಎನ್ನುತ್ತಾರೆ. ಇವುಗಳಲ್ಲಿ ವಿದೇಹದ ಮಧ್ಯದಲ್ಲಿ ವೃತ್ತಾಕಾರದ ಒಂದು ಮೇರುಪರ್ವತವಿದೆ. ಅದನ್ನು ಸುಮೇರು ಪರ್ವತ ಎಂತಲೂ ಕರೆಯುತ್ತಾರೆ. ಅದು ತೊಂಭತ್ತೊಂಭತ್ತು ಯೋಜನದಷ್ಟು ಎತ್ತರವೂ, ಭೂಮಿಯ ಮೇಲೆ ಹತ್ತು ಯೋಜನದಷ್ಟು ಅಗಲವೂ, ಶಿಖರದ ಮೇಲೆ ೧೦೦೦ ಯೋಜನದಷ್ಟು ಅಗಲನ್ನೂ ಹೊಂದಿದೆ. ಇಲ್ಲಿ ನಾಲ್ಕು ವನಗಳಿವೆ. ಭೂಮಟ್ಟದಲ್ಲಿ ಭದ್ರಸಾಲವನ, ಮೇಲಿನ ಕಣಿವೆಯಲ್ಲಿ ೫೦೦ ಯೋಜನದ ಎತ್ತರದ ಮೇಲೆ ನಂದನವನ, ಅದರ ಮೇಲಿನ ಕಣಿವೆಯಲ್ಲಿ ೬೫೦೦೦ ಯೋಜನ ಎತ್ತರದ ಮೇಲೆ ಸೌಮನಸವನ, ಅದಕ್ಕಿಂತ ಮೇಲೆ ೩೬೦೦೦ ಯೋಜನ ಎತ್ತರದ ಮೇಲೆ ಪಾಂಡುಕವನಗಳು ಸ್ಥಿತವಾಗಿವೆ. ಇವು ಕ್ರಮವಾಗಿ ೫೦೦, ೫೫೫, ೨೮೦೦೦ ಹಾಗೂ ೮೪೦೦೦ ಯೋಜನ ಎತ್ತರವನ್ನುಳ್ಳವಾಗಿವೆ. ಪಾಂಡುಕವನದಲ್ಲಿ ಪಾಂಡೂಕಬಲ, ರಕ್ತೆ, ರಕ್ತಕಂಬಳಕವೆಂಬ ಜಲಸೆಲೆಗಳಿದ್ದು, ಇವು ಈಶಾನ್ಯಾಭಿಮುಖವಾಗಿ ಹರಿಯುತ್ತವೆ. ಇವು ಕ್ರಮವಾಗಿ ಬೆಳ್ಳಿ, ಸುವರ್ಣ, ಪದ್ಮರಾಗ ಹಾಗೂ ಮಾಣಿಕ್ಯಗಳ ವರ್ಣವನ್ನು ಹೊಂದಿವೆ.

ಭರತಕ್ಷೇತ್ರದ ಅಪರವಿದೇಹ, ಐರಾವತ, ಪೂರ್ವ ವಿದೇಹಗಳ ಪೂರ್ವ, ಪಶ್ಚಿಮ, ದಕ್ಷಿಣೋತ್ತರಗಳಲ್ಲಿರುವ ಜಲಸೆಲೆಗಳು ಜಿನಬಿಂಬಗಳನ್ನನುರಸಿ ಹರಿಯುತ್ತವೆ. ಎಲ್ಲಾ ಸೆಲೆಗಳು ಅರ್ಧಚಂದ್ರಾಕೃತಿಯಲ್ಲಿದ್ದು, ೧೦೦ ಯೋಜನ ಉದ್ದ, ೫೦ ಯೋಜನ ಅಗಲ, ೮ ಯೋಜನ ಎತ್ತರನ್ನೂ ಹೊಂದಿವೆ. ಅದರ ಮೇಲೆ ಜಿನ, ಸೌಧರ್ಮೇಂದ್ರರ ಮೂರು ಮೂರು ಪೀಠಗಳಿವೆ. ಆ ಪೀಠಗಳು ೫೦೦ ಬಿಲ್ಲುಗಳಷ್ಟು ಎತ್ತರವೂ, ಅಷ್ಟೇ ಅಗಲವನ್ನೂ ಹೊಂದಿವೆ. ಎಲ್ಲಾ ಪೀಠಗಳು ಪೂರ್ವಾಭಿಮುಖವಾಗಿವೆ. ಮುಂದುವರೆದು, ಪುಷ್ಕರಾರ್ಧ ಹಾಗೂ ಸ್ವಯಂಭೂರಮಣ ದ್ವೀಪಾರ್ಧದಲ್ಲಿ ಮಾನುಷೋತ್ತರ ಪರ್ವತ, ಸ್ವಯಂಪ್ರಭಾ ಪರ್ವತಗಳೂ, ಕುಂಡಲ ದ್ವೀಪದಲ್ಲಿ ಕುಂಡಲವರ ಪರ್ವತ ಹಾಗೂ ರುಚಕವರ ದ್ವೀಪಾರ್ಧದಲ್ಲಿ ರುಚಕರ್ವ ಪರ್ವತಗಳಿವೆ. ಈ ದ್ವೀಪಗಳನ್ನು ಅದೇ ಹೆಸರಿನ ಸಮುದ್ರಗಳು ಸುತ್ತುವರಿದಿವೆ. ಇಂತಹ ಭೂಭಾಗ ಮತ್ತು ಸಮುದ್ರದಲ್ಲಿ ೧೦೦೦೦ ಯೋಜನ ಗಾತ್ರದ ತಾವರೆ, ೧೨ ಯೋಜನ ಗಾತ್ರದ ಶಂಖಹುಳು, ೧

೧೩೬. ಡಾ. ಹಂಪ ನಾಗರಾಜಯ್ಯ (ಸಂ): **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ತೃತೀಯೋಧ್ಯಾಯಃ) ಪು. ೫೩

ಯೋಜನ ಗಾತ್ರದ ದುಂಬಿಗಳು, ೧೦೦೦ ಯೋಜನ ದೇಹಗಾತ್ರದ ಮೀನುಗಳು, ಹೀಗೆ ಮಹಾಗಾತ್ರದ ತ್ರಸಜೀವಿಗಳಿರುವವು.

"ಶಂಖಪುಳು ಮೊದಲಾದ ವಿಕಲೇಂದ್ರಿಯ ತ್ರಯಂಗಳುತ್ಕೃಷ್ಟ ಸ್ಥಿತಿ ಪನ್ನೆರಡು ವರ್ಷಮುಂ ನಲ್ವತ್ತೊಂಬತ್ತು ದಿವಸಮುಂ। ಆಱುದಿನಂಗಳು ಕ್ರಮದಿನಪ್ಪುವು ಮತ್ಸ್ಯಂಗಳ್ಗೆ ಪೂರ್ವಕೋಟಿ ಉತ್ಕೃಷ್ಟ ಸ್ಥಿತಿ ಉಡು ಓತಿ ಮೊದಲಾದ ಸರೀಸೃಪಂಗಳ್ಗಂ ಒಂಭತ್ತು ಪೂರ್ವಗಳುತ್ಕೃಷ್ಟಸ್ಥಿತಿಯಕ್ಕುಂ।" (ಕ. ವೃತ್ತಿ)[೧೩೮]
ಹೀಗೆ ಶಂಖಹುಳು ಸರೀಸ್ರೃಪಗಳು, ಮತ್ಸ್ಯಗಳು, ಸರ್ಪಗಳು, ಪಕ್ಷಿಗಳು, ಮುಂತಾದ ತಿರ್ಯಂಚಗಳ ಆಯುಷ್ಯಗಳನ್ನೂ ವಿವರಿಸಲಾಗಿದೆ.

ಜಂಬೂದ್ವೀಪವನ್ನು ಆದಿಯಾಗಿ ಎಂಟನೆಯ ದ್ವೀಪವನ್ನು 'ನಂದೀಶ್ವರದ್ವೀಪ' ಎಂದು ಕರೆಯಲಾಗುತ್ತದೆ. ಇದು ೧,೬೩,೦೦,೦೦,೦೦,೦೦೦ ಹಾಗೂ ೮೪,೦೦,೦೦೦ ಯೋಜನಗಳಷ್ಟು ಉದ್ದಗಲಗಳನ್ನು ಹೊಂದಿದೆ. ಈ ದ್ವೀಪದ ನಾಲ್ದೆಸೆಗಳಲ್ಲಿಯೂ ಪರ್ವತಗಳಿವೆ. ಇದರ ಪ್ರತಿಯೊಂದು ದಿಕ್ಕಿನಲ್ಲಿ ಅಂಜನ ಪರ್ವತವಿದ್ದು, ಅದರ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಬಾವಿಗಳಿವೆ. ಪ್ರತಿಯೊಂದು ಬಾವಿಯ ನಡುವೆ ಒಂದೊಂದು ದಧಿಮುಖ, ಎರಡೆರಡು ರತಿಕರ ಪರ್ವತಗಳಿವೆ. ಹೀಗೆ ಒಟ್ಟು ೪ ಅಂಜನ ಪರ್ವತಗಳು, ೧೬ ದಧೀಮುಖ ಪರ್ವತಗಳು ಹಾಗೂ ೩೨ ರತಿಕರ ಪರ್ವತಗಳು ಸೇರಿ ಒಟ್ಟು ೫೨ ಪರ್ವತಗಳೂ, ೧೬ ಬಾವಿಗಳೂ, ೬೪ ವನಗಳಿವೆ. ಪ್ರತಿಯೊಂದು ಪರ್ವತದ ಮೇಲೂ ಒಂದೊಂದು ಜಿನಾಲಯಗಳಿವೆ. ಅಲ್ಲಿ ಪ್ರತಿನಿತ್ಯವೂ ಸೌಧರ್ಮೇಂದ್ರ ಮೊದಲಾದ ದೇವತೆಗಳು ಪೂಜೆಯನ್ನು ಮಾಡುತ್ತಾರೆ. ವರ್ಷಂಪ್ರತಿ ಆಶಾಢ, ಕಾರ್ತೀಕ, ಪಾಲ್ಗುಣ ಮಾಸಗಳ ಶುಕ್ಲಪಕ್ಷದ ಅಷ್ಟಮಿಯಿಂದ ಪೌರ್ಣಮಿಯವರೆಗೆ ಸೌಧರ್ಮೇಂದ್ರ, ಈಶಾನ್ಯೇಂದ್ರ, ಚಮರೇಂದ್ರ, ವೈರೋಚನೇಂದ್ರರು ಪ್ರದಕ್ಷಿಣಾ ಕ್ರಮವಾಗಿ ನಾಲ್ಕೂ ದಿಕ್ಕುಗಳಲ್ಲಿ ಅಷ್ಟವಿಧಾರ್ಚನೆ ಮಾಡುವರು.

ಹೀಗಿರುವ ಇಲ್ಲಿ ನಾಲ್ಕು ಗೋಪುರದ್ವಾರಗಳು, ಮೂರು ಕೋಟೆಗಳು, ರಾಜಮಾರ್ಗಗಳು, ಮಾನಸ್ತಂಭಗಳು ಒಂಭತ್ತು ಒಂಭತ್ತು ಸ್ತೂಪಗಳು, ವನಗಳು, ಧ್ವಜಭೂಮಿಗಳು, ಚೈತ್ಯಾಲಗಳು, ನಂದೆ ಮೊದಲಾದ ಸರೋವರಗಳು ಎಲ್ಲವೂ ಶೋಭಿಸುತ್ತವೆ. ಸಿಂಹ, ಗಜ, ವೃಷಭ, ಗರುಡ, ಮಯೂರ, ಚಂದ್ರ, ಸೂರ್ಯ, ಹಂಸ, ಕಮಲ, ಚಕ್ರ ಹೀಗೆ ಹತ್ತು ರೀತಿಯ ೧೦೮ ಮಹಾಧ್ವಜಗಳು ಹಾಗೂ ೧೦೮ ಕ್ಷುಲ್ಲಕ ಧ್ವಜಗಳು ಆ ಧ್ವಜಭೂಮಿಯ ಮೇಲೆ ರಾರಾಜಿಸುತ್ತವೆ. ಇಲ್ಲಿ ಸಂಗೀತ ಗೃಹಗಳೂ, ಕ್ರೀಡಣ ಗೃಹಗಳೂ, ಪಾಠಶಾಲೆಗಳೂ ಇವೆ. ಇವುಗಳ ಬಲಬದಿಯಲ್ಲಿ ಶ್ರೀದೇವಿ–ಸರ್ವಾಹ್ಣ ಯಕ್ಷರೂ, ಎಡಬದಿಯಲ್ಲಿ ಶ್ರುತದೇವಿ–ಸನತ್ಕುಮಾರ ಯಕ್ಷರೂ ಅಷ್ಟವಿಧ ಮಂಗಲಾರ್ಚನೆಗಳನ್ನು ನಡೆಸುತ್ತಿರುವರು. ಚಿನ್ನದ ಕಳಶ, ಕನ್ನಡಿ, ಬೀಸಣಿಗೆ, ಧ್ವಜ, ಚಾಮರ, ಬೆಳ್ಗೊಡೆ ಮುಂತಾಗಿ ೧೦೮ ಮಂಗಲ ದ್ರವ್ಯಗಳು ಅಲ್ಲಿರುವವು. ಚಿನ್ನ ಹಾಗೂ ಬೆಳ್ಳಿಯಲ್ಲಿ ನಿರ್ಮಿಸಿದ ಜಿನರು ಮತ್ತು ಸಿದ್ಧರ ವಿಗ್ರಹಗಳೂ ಸ್ಥಾಪಿತವಾಗಿರುವವು.

---

೧೩೮. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ತೃತೀಯೋಧ್ಯಾಯಃ) ಪು. ೫೮

೭,೭೨,೦೦,೦೦೦ ಭವನಗಳು, ೮೪,೯೭,೦೨೩ ವೈಮಾನಿಕ, ३೯೮ ಮನುಷ್ಯ, ೫೨ ನಂದೀಶ್ವರ, ४ ಕುಂಡಳ, ४ ರುಚಕವರ ಸೇರಿ ಒಟ್ಟು ೮,೫೬,೯೭,೪೮೧ ಚೈತ್ಯಾಲಯಗಳು ಅಲ್ಲಿ ಸ್ಥಿತವಾಗಿವೆ. ಇವೆಲ್ಲವೂ ಅಕೃತ್ರಿಮ ಚೈತ್ಯಾಲಯಗಳಾಗಿವೆ.

"ಮುನ್ನಾದ ಆಗುತಿರ್ದ ಆಗಲ್ವೇಡಿರ್ದ ಕೃತ್ರಿಮಂಗಳುಂ ಆಜೆಂ ಮಾಡೆಪಡದ ಅಕೃತ್ರಿಮಂಗಳಪ್ಪ ವ್ಯಂತರದೇವರ್ಕಳಿಂ ಭವನಾಸಿದೇವರ್ಕಳಿಂ ಜ್ಯೋತಿಷ್ಕದೇವರ್ಕಳಿಂ ಕಲ್ಪವಾಸಿ ದೇವರ್ಕಳಿಂ ಚಕ್ರವರ್ತಿ ಮೊದಲಾದ ಮನುಷ್ಯರಿಂ ವಿದ್ಯಾಧರರ್ಕಳಿಂ ವಂದಿಸಲ್ಪಟ್ಟ ಮೂಱುಂ ಲೋಕದ ಜಿನಗೃಹಂ ವಂದಿಸುವೆಂ"[೧೩೯] ಹೀಗೆ ಎಲ್ಲರಿಗೂ ಗ್ರಂಥಕಾರರು ವಂದಿಸಿ ಮುಂದುವರೆಯುತ್ತಾರೆ.

❖ **ಮನುಷ್ಯ ಗತಿ:**

"ಎರಡುವರೆ ದ್ವೀಪದೊಳುಂ ಎರಡುವರೆ ಸಮುದ್ರದೊಳುಂ ದೊರೆಕೊಳ್ವ ಮುನುಷ್ಯಜೆತ್ತೆಱನೆಂಬುದಂ ಪೇಳ್ದಪರು:

ಆರ್ಯಾ ಮ್ಲೇಚ್ಛಾಶ್ಚ ॥೩.೩೭॥ (ಸಂ)[೧೪೦]

ಇಲ್ಲಿ ಆರ್ಯ ಮತ್ತು ಮ್ಲೇಚ್ಛರು ಎಂಬ ಎರಡು ರೀತಿಯ ಭೇದದ ಮನುಷ್ಯರಿದ್ದಾರೆ. ಅವರ ಕುರಿತಾದ ವಿವರ ಕೆಳಗಿನಂತಿದೆ.

೧) **ಆರ್ಯರು:**

ಗುಣವಂತರಿಂದ ಪೂಜಿಸಲ್ಪಡುವವರೇ ಆರ್ಯರು. ಇವರಲ್ಲಿ ಋದ್ಧಿ ಪ್ರಾಪ್ತಾರ್ಯರು ಮತ್ತು ಅನೃದ್ಧಿ ಪ್ರಾಪ್ತಾರ್ಯರು ಎಂದು ಎರಡು ಭೇದಗಳು. ಇಲ್ಲಿ ಋದ್ಧಿ ಎಂದರೆ ಶಕ್ತಿ ಎಂದರ್ಥ.

I. ಋದ್ಧಿಪ್ರಾಪ್ತಾರ್ಯರು: ಬುದ್ಧಿ, ಕ್ರಿಯೆ, ವಿಕ್ರಿಯೆ, ತಪ, ಬಲ, ಔಷಧಿ, ರಸ, ಕ್ಷೀಣ ಎಂದು ಋದ್ಧಿಪ್ರಾಪ್ತಾರ್ಯರಲ್ಲಿ ಎಂಟು ಭೇದಗಳು.

೧. ಬುದ್ಧಿ ಋದ್ಧಿ: ಇದರಲ್ಲಿ ಹದಿನೆಂಟು ಭೇದಗಳು.

i. ಕೇವಲಜ್ಞಾನ: ಸಮಸ್ತ ವಸ್ತುಗಳನ್ನು ಒಂದೇ ಸಲದಲ್ಲಿ ಅರಿಯುವುದು.

ii. ಅವಧಿ ಜ್ಞಾನ: ಪುದ್ಗಲಗಳನ್ನು ದಾಟುವುದು.

iii. ಮನಃ ಪರ್ಯಾಯ ಜ್ಞಾನ: ಪರರ ಮನದಿಂಗಿತವನ್ನು ಅರಿಯುವುದು.

iv. ಬೀಜಬುದ್ಧಿ: ಒಂದರಿಂದ ಅನೇಕಾರ್ಥವನ್ನು ತಿಳಿಯುವುದು. ಉದಾ: ನೂರಾರು ತರಹದ ಧಾನ್ಯಗಳಿರುವಲ್ಲಿ ನೋಡದೆಯೇ ಕೇಳಿದ ಧಾನ್ಯವನ್ನೇ ಆರಿಸುವುದು.

v. ಕೋಷ್ಠಬುದ್ಧಿ: ಪರರ ಉಪದೇಶದಿಂದ ಅರಿತುಕೊಂಡದನ್ನು ಹೇಳುವುದು.

vi. ಪದಾನುಸಾರಿತ್ವ: ಕಲಿತಿದ್ದನ್ನು ಕಲಿತಂತೆಯೇ, ತಿಳಿದದ್ದನ್ನು ತಿಳಿದಂತೆಯೇ ವಿವರಿಸುವುದು.

---

೧೩೯. ಡಾ. ಹಂಪ ನಾಗರಾಜಯ್ಯ: **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ತೃತೀಯೋಧ್ಯಾಯಃ) ಪು. ೬೫

೧೪೦. ಅದೇ : (ತೃತೀಯೋಧ್ಯಾಯಃ) ಪುಟ. ೬೫

vii. ಸಂಭಿನ್ನಶ್ರೋತೃತ್ವ: ಹನ್ನೆರಡು ಯೋಜನ ಉದ್ದ, ಒಂಭತ್ತು ಯೋಜನ ಅಗಲದ ಚಕ್ರವರ್ತಿಯ ಸಾಮ್ರಾಜ್ಯದಲ್ಲಿರುವ ಎಲ್ಲಾ ಜೀವಿಗಳ ಭಾಷೆಗಳನ್ನು ಏಕಕಾಲದಲ್ಲಿಯೇ ಆಲಿಸಿ ಅವುಗಳನ್ನು ತಪ್ಪಿಲ್ಲದಂತೆ ಬಿಡಿಸಿ ಹೇಳುವುದು.

viii. ದೂರಾಸ್ವಾದನ: ಯೋಜನ ದೂರದಿಂದಲೇ ಪಂಚರಸಗಳಲ್ಲಿ ಯಾವ ರಸವೆಂದು ಅರಿಯುವುದು.

ix. ದೂರಸ್ಪರ್ಶ: ಎಂಟು ರೀತಿಯ ಸ್ಪರ್ಶಗಳಲ್ಲಿ ಆ ಸ್ಪರ್ಶವು ಯಾವುದೆಂದು ಯೋಜನ ದೂರದಿಂದಲೇ ಅರಿಯುವುದು.

x. ದೂರದರ್ಶನ: ಪಂಚವರ್ಣಗಳಲ್ಲಿ ಯಾವ ವರ್ಣವೆಂದು ಯೋಜನ ದೂರದಿಂದಲೇ ಅರಿಯುವುದು.

xi. ದೂರಾಘ್ರಾಣ: ಯೋಜನ ದೂರದಿಂದಲೇ ವಾಸನೆಯನ್ನು ತಿಳಿಯುವುದು.

xii. ದೂರಶ್ರವಣ: ಎಷ್ಟೇ ದೂರದಿಂದ ಶಬ್ದ ಬಂದರೂ ಅದು ಇದರಿಂದಲೇ ಹೊರಟ ಧ್ವನಿಯೆಂದು ಅರಿಯುವುದು.

xiii. ದಶಪೂರ್ವಿತ್ವ: ರೋಹಿಣೀ ಮೊದಲಾದ ಐನೂರು ಮಹಾವಿದ್ಯಾದೇವತೆಗಳು, ಅಂಗುಷ್ಠಪ್ರಸೇನೆ ಮೊದಲಾದ ಏಳುನೂರು ಕ್ಷುಲ್ಲಕ ವಿದ್ಯಾದೇವತೆಗಳು ಏಕಕಾಲಕ್ಕೆ ಪ್ರಶ್ನಿಸುತ್ತಿರಲು ವಿಚಲಿತನಾಗದೇ ಉತ್ತರಿಸುವುದು.

xiv. ಚತುರ್ದಶಪೂರ್ವಿತ್ವ: ಹದಿನಾಲ್ಕು ಪೂರ್ವ [೧೪೧] ಕಾಲದ ವಿದ್ಯೆಯನ್ನು ಹೊಂದಿರುವುದು.

xv. ಅಷ್ಟಾಂಗ ನಿಮಿತ್ತಜ್ಞತೆ: ಇದರಲ್ಲಿ ೮ ಪ್ರಕಾರಗಳು:

- ಅಂತರಿಕ್ಷ ನಿಮಿತ್ತ: ಸೂರ್ಯ–ಚಂದ್ರ, ನಕ್ಷತ್ರಾದಿಗಳನ್ನು ಅವಲೋಕಿಸಿ ಶುಭಾಶುಭಗಳನ್ನು ತಿಳಿಸುವುದು.
- ಭೌಮ ನಿಮಿತ್ತ: ಭೂಮಿಯ ಮೇಲೆ ಹಾಗೂ ತಗ್ಗು ಪ್ರದೇಶಗಳಲ್ಲಿರುವ ತೇವವನ್ನು ನೋಡಿ ಶುಭಾಶುಭಗಳನ್ನು ತಿಳಿಸುವುದು.
- ಅಂಗನಿಮಿತ್ತ: ತಿರ್ಯಂಚ ಮತ್ತು ಮನುಷ್ಯರ ರಕ್ತ, ವರ್ಣ, ಗಂಧವನ್ನಾಧರಿಸಿ ಅಂಗಪ್ರತ್ಯಯಗಳನ್ನು ನೋಡಿ ಶುಭಾಶುಭಗಳನ್ನು ತಿಳಿಸುವುದು.

---

೧೪೧. ಮಿರ್ಜಿ ಅಣ್ಣಾರಾಯ ; **ಜೈನಧರ್ಮ :** ಪು. ೧೨೫ : **೧೪ ಪೂರ್ವಗಳು** = ೧. ಉತ್ಪಾತ ೨. ಅಗ್ರಾಯಣೀಯ ೩. ವೀರ್ಯಾನುಪ್ರಾದ ೪. ಅಸ್ತಿನಾಸ್ತಿಪ್ರವಾದ ೫. ಜ್ಞಾನಪ್ರವಾದ ೬. ಸತ್ಯಪ್ರವಾದ ೭. ಆತ್ಮಪ್ರವಾದ ೮. ಕರ್ಮಪ್ರವಾದ ೯. ಪ್ರತ್ಯಾಖ್ಯಾನ ೧೦. ವಿದ್ಯಾನುವಾದ ೧೧. ಕಲ್ಯಾಣ ೧೨. ಪ್ರಾಣಾವಾಯ ೧೩. ಕ್ರಿಯಾ ೧೪. ಲೋಕಬಿಂದುಸಾರ

- ಸ್ವರನಿಮಿತ್ತ: ಧ್ವನಿಯನ್ನು ಕೇಳಿ ಶುಭಾಶುಭಗಳನ್ನು ತಿಳಿಸುವುದು.
- ವ್ಯಂಜನ ನಿಮಿತ್ತ: ಮೈಮೇಲಿನ ಲಕ್ಷಣಗಳನ್ನು ನೋಡಿ ಶುಭಾಶುಭಗಳನ್ನು ತಿಳಿಸುವುದು.
- ಲಕ್ಷಣ ನಿಮಿತ್ತ: ಶರೀರದ (ಕೈ–ಕಾಲು) ಮೇಲೆ ಇರುವ ಹಲ, ಚಕ್ರ, ಶಂಖ, ಸ್ವಸ್ತಿಕ ಮುಂತಾದವುಗಳನ್ನು ನೋಡಿ ಶುಭಾಶುಭಗಳನ್ನು ತಿಳಿಸುವುದು.
- ಅವಿಚ್ಛನ್ನ ನಿಮಿತ್ತ: ಮೂಷಕ ಮೊದಲಾದ ಪ್ರಾಣಿಗಳಿಂದ ಆದ ಛೇದನವನ್ನು ನೋಡಿ, ಶಸ್ತ್ರ ಕಂಟಕ ಮುಂತಾದ ವಿಚಾರಗಳ ಶುಭಾಶುಭಗಳನ್ನು ತಿಳಿಸುವುದು.
- ಸ್ವಪ್ನ ನಿಮಿತ್ತ: ಬಿದ್ದಿರುವ ಕನಸುಗಳನ್ನು ಆಧರಿಸಿ ಶುಭಾಶುಭಗಳನ್ನು ತಿಳಿಸುವುದು.

xvi. ಪ್ರಜ್ಞಾ ಶ್ರವಣತ್ವ: ದ್ವಾದಶಾಂಗ ಚತುರ್ದಶ ಪೂರ್ವಗಳನ್ನು ಕೇಳಿದೊಡನೆಯ ಸೂಕ್ಷ್ಮಾರ್ಥವನ್ನು ಅರಿಯುವುದು.

xvii. ಪ್ರತ್ಯೇಕ ಬುದ್ಧತ್ವ: ಪರರ ಉಪದೇಶವಿಲ್ಲದೇ ಸ್ವತಃ ಸಂಯಮೋತ್ಕರ್ಷದಿಂದ ಸಕಲ ಶ್ರುತಜ್ಞಾನವನ್ನು ಅರಿಯುವುದು.

xviii. ವಾದಿತ್ವ: ದೇವೇಂದ್ರಾದಿಗಳ ಸಮನಾಗುವ ಪ್ರತಿಜ್ಞೆಯನ್ನು ಉಳ್ಳದ್ದು.

೨. **ಕ್ರಿಯಾಋದ್ಧಿ:** ಚಾರಣತ್ವ ಮತ್ತು ಆಕಾಶಗಾಮಿತ್ವ ಎಂದು ಎರಡು ಭೇದಗಳು:

i. ಚಾರಣತ್ವ : ಇದರಲ್ಲಿ ಜಲಚಾರಣತ್ವ, ಜಂಘಚಾರಣತ್ವ, ತಂತುಚಾರಣತ್ವ, ಪುಷ್ಪಚಾರಣತ್ವ, ಪತ್ರಚಾರಣತ್ವಗಳೆಂದು ಪ್ರಕಾರಗಳುಂಟು.

ii. ಆಕಾಶಗಾಮಿತ್ವ: ಕುಳಿತುಕೊಳ್ಳುವುದು, ನಿಲ್ಲುವುದು, ನೆಲದ ಮೇಲೆ ಕಾಲೂರದೆ ನಡೆಯುವುದು.

೩. **ವಿಕ್ರಿಯಾ ಋದ್ಧಿ:** ಇದರಲ್ಲಿ ಅಣಿಮೆ, ಮಹಿಮೆ, ಲಘಿಮೆ, ಗರಿಮೆ, ಪ್ರಾಪ್ತ ಪ್ರಾಗಮ್ಯ, ಈಶಿತ್ವ, ವಶಿತ್ವ, ಅಪ್ರತಿಘಾತ, ಅಂತರ್ಧಾನ, ಕಾಮರೂಪಿತ್ವ ಎಂಬ ಭೇದಗಳಿವೆ.

೪. **ತಪ ಋದ್ಧಿ**: ಇದರಲ್ಲಿ ಉಗ್ರತಪ, ದೀಪ್ತತಪ, ತಪ್ತತಮ, ಮಹಾತಪ, ಘೋರತಪ, ಘೋರಪರಾಕ್ರಮ ತಪ, ಘೋರ ಬ್ರಹ್ಮಚರ್ಯ ತಪ ಹೀಗೆ ಏಳು ಭೇದಗಳು.

೫. **ಬಲ ಋದ್ಧಿ**: ಇದರಲ್ಲಿ ಮನೋ, ವಾಕ್, ಕಾಯಬಲಗಳೆಂದು ಎಂದು ಮೂರು ಭೇದಗಳು.

೬. **ಔಷಧಿ ಋದ್ಧಿ**: ಕೆಲವು ತಪೋಧನರ ದೇಹಗಳಲ್ಲಿ ಔಷಧ ಗುಣಗಳು ಇರುತ್ತವೆ. ಅವನ್ನು ನಾನಾ ರೀತಿಯ ವ್ಯಾಧಿಗಳಿಂದ ಬಳಲುತ್ತಿರುವವರ ಔಷಧರೂಪದಲ್ಲಿ ಬಳಸುತ್ತಾರೆ. ಇದರಲ್ಲಿ ಎಂಟು ಭೇದಗಳುಂಟು.

i. ಆಮೌಷಧಿ: ಚರಣ–ಕರಗಳನ್ನು ಮುಟ್ಟಿದಕೂಡಲೇ ಎಂತಹ ಮಹಾವ್ಯಾಧಿಗಳು ವಾಸಿಯಾಗುವವು.

ii. ಕ್ಷೇಳೌಷಧಿ: ಉಗಳನ್ನು ಗಾಯದ ಮೇಲೆ ಹಚ್ಚಿದರೆ ವಾಸಿಯಾಗುವುದು.

iii. ಜಲ್ಲೌಷಧಿ: ಬೆವರಿನಿಂದ ವ್ಯಾಧಿಗಳು ವಾಸಿಯಾಗುವುದು.

iv. ಮಲೌಷಧಿ: ಕೆಲವರ ಕಿವಿ, ಮೂಗು, ಕಣ್ಣು, ದಂತಗಳಿಂದ ಹೊರಸೂಸುವ ತ್ಯಾಜ್ಯದಿಂದ ಔಷಧವಾಗುವುದು.

v. ವಿಡೌಷಧಿ: ಕೆಲವರ ಮಲ-ಮೂತ್ರಾದಿಗಳು ಔಷಧಕ್ಕೆ ಒದಗುವುದು.

vi. ಸರ್ವೌಷಧಿ: ಕೆಲವರ ಕೈ, ಮೈ, ಕಾಲು ಸೋಂಕಿನಿಂದ ಜಲ, ಗಾಳಿ ಮುಂತಾದವು ಔಷಧಯುಕ್ತವಾಗುವವು.

vii. ಆಸ್ಯಾವಿಷೌಧಿ: ಕೆಲವರ ಧ್ವನಿಯನ್ನು ಕೇಳುವುದರಿಂದ ವಿಷ ಕುಡಿದವನೂ ಬದುಕುಳಿಯಬಲ್ಲಷ್ಟು ಶಕ್ತನಾಗುವನು (ಅಮೃತವಾಣಿ).

viii. ದೃಷ್ಟ್ಯವಿಷೌಧಿ: ವಿಷಪೂರಿತ ದೇಹದ ಮೇಲೆ ಕಣ್ಣಾಡಿಸಿದರೆ ಸಾಕು ವಿಷವು ಇಳಿದು ಹೋಗುವುದು.

೭. **ರಸ ಋದ್ಧಿ**: ಇದರಲ್ಲಿ ಆಸ್ಯವಿಷತ್ವ, ದೃಷ್ಟಿವಿಷತ್ವ, ಕ್ಷೀರಾಸ್ರವಿತ್ವ, ಮಧ್ವಾಸ್ರವಿತ್ವ, ಆಜ್ಯಾ(ಘೃತ) ಸ್ರವಿತ್ವ, ಅಮೃತಾಸ್ರವಿತ್ವವೆಂದು ಆರು ಭೇದಗಳು.

೮. **ಕ್ಷೇತ್ರ ಋದ್ಧಿ:** ಇದರಲ್ಲಿ ಅಕ್ಷೀಣ ಮಹಾನಸ ಮತ್ತು ಅಕ್ಷೀಣ ಮಹಾಲಯ ಎಂದು ಎರಡು ಭೇದಗಳುಂಟು.

II. ಅನೃದ್ಧಿ (ಋದ್ಧಿರಹಿತ) ಪ್ರಾಪ್ತಾರ್ಯರು: ಇವರಲ್ಲಿ ಐದು ಭೇದಗಳು.

೧. **ಕ್ಷೇತ್ರಾರ್ಯರು:** ಕಾಶಿ, ಕೋಸಲ ಮುಂತಾದ ಪ್ರದೇಶಗಳಲ್ಲಿ ಜನಿಸಿದವರು.

೨. **ಜಾತ್ಯಾರ್ಯರು:** ಇಕ್ಷ್ವಾಕು, ಚಂದ್ರ ಮುಂತಾದ ವಂಶಗಳಲ್ಲಿ ಜನಿಸಿದವರು.

೩. **ಕರ್ಮಾರ್ಯರು:** ಇವರಲ್ಲಿ ಮೂರು ಭೇದಗಳು:

i. ಸಾವದ್ಯ ಕರ್ಮಾರ್ಯರು: ಇವರಲ್ಲಿ ಆರು ಭೇದಗಳು

- ಅಸಿ: ಭರ್ಜಿ, ಬಾಣ-ಬಿಲ್ಲು ಮುಂತಾದ ಶಸ್ತ್ರ ವಿದ್ಯೆಯನ್ನು ಅರಿಯುವುದು.
- ಮಸಿ: ಲೇಖನ ನಿಪುಣರು.
- ಕೃಷಿ: ನೇಗಿಲು, ಕೂರಿಗೆಗಳನ್ನು ಬಳಸಿ ವ್ಯವಸಾಯ ಮಾಡುವುದು.
- ವಿದ್ಯಾ: ಆಲೇಖ್ಯ, ಗಣಿತ, ಕಲೆ ಮುಂತಾದ ೬೪ ವಿದ್ಯೆಗಳನ್ನು ಪಡೆದವರು.
- ಶಿಲ್ಪ: ನಾಪಿತ, ಬಡಗಿ, ಸುವರ್ಣಕಾರರು, ದೇವಾಲಯ-ಮನೆ ನಿರ್ಮಾಣ ಮಾಡುವವರು ಮುಂತಾದವರು.

* ವಾಣಿಜ್ಯ: ಚಂದನಾದಿ ಗಂಧ, ಘೃತಾದಿರಸ, ಧಾನ್ಯ ಮುಂತಾದ ನಾನಾ ದ್ರವ್ಯಗಳ ಸಂಗ್ರಹ ಕೌಶಲ್ಯತೆ.

ii. ಅಲ್ಪಸಾವದ್ಯ ಕರ್ಮಾರ್ಯರು: ಶ್ರಾವಕ, ಶ್ರಾವಕಿಯರೆಲ್ಲರೂ ಅಲ್ಪಸಾವದ್ಯರು.

iii. ಅಸಾವದ್ಯ ಕರ್ಮಾರ್ಯರು: ಕರ್ಮಕ್ಷಯಾರ್ಥವಾಗಿ ವಿರತಿಯನ್ನು ಹೊಂದಿದವರು.

೪. **ಚಾರಿತ್ರಾರ್ಯರು:** ಇವರಲ್ಲಿ ಅಭಿಗತ ಚಾರಿತ್ರಾರ್ಯರು ಅಭಿಗಮ ಚಾರಿತ್ರಾರ್ಯರು ಎಂದು ಎರಡು ಭೇದಗಳು.

೫. **ದರ್ಶನಾರ್ಯರು:** ಆಜ್ಞಾ, ಮಾರ್ಗ, ಉಪದೇಶ, ಸೂತ್ರ, ಬೀಜ, ಸಂಕ್ಷೇಪ, ವಿಸ್ತಾರ, ಅರ್ಥ, ಅವಗಾಢ ಹಾಗೂ ಪರಮಾವಗಾಢ ಎಂದು ಹತ್ತು ಬಗೆಯ ದರ್ಶನಗಳನ್ನು ಹೊಂದಿದವರು.

ಈ ಎಲ್ಲ ರೀತಿಯ ವಿಶೇಷ ಶಕ್ತಿಯುಳ್ಳಾತರನ್ನೂ, ವಿದ್ಯಾಪಾರಂಗತರನ್ನೂ ಆರ್ಯರೆಂದು ಕರೆಯಲಾಗುತ್ತದೆ ಎಂದು ಗ್ರಂಥಕಾರರು ಹೇಳುತ್ತಾರೆ.

೨) **ಮ್ಲೇಚ್ಛರು:**

ಇವರಲ್ಲಿ ಅಂತರದ್ವೀಪಜರು, ಕರ್ಮಭೂಮಿಜರು ಎಂದು ಎರಡು ಭೇದಗಳು.

i. **ಅಂತರದ್ವೀಪಜರು:** ಲವಣ ಮತ್ತು ಕಾಳೋದಕ ಸಮುದ್ರಗಳ ಉಭಯತಟಗಳಲ್ಲಿ ೯೬ ಅಂತರ ದ್ವೀಪಗಳಿವೆ. ಅಲ್ಲಿ ಜನಿಸಿದವರನ್ನು ಅಂತರದ್ವೀಪಜರು ಎನ್ನುವರು.

ii. **ಕರ್ಮಭೂಮಿಜರು:** ಪಂಚಭರತ, ಪಂಚ ಐರಾವತ, ಪಂಚ ವಿದೇಹ, ಗಂಗಾ-ಸಿಂಧು ನದೀದ್ವಯ, ಷಟ್ಖಂಡಗಳನ್ನೂ ಸೇರಿ ಶಕ, ಯವನ, ಶಬರ, ಪುಳಿಂದಗಳೆಂಬಲ್ಲಿ ಜನಿಸಿದವರು.

ಹೀಗೆ 'ತತ್ತ್ವಾರ್ಥ ಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯ ಮೂರನೆಯ ಅಧ್ಯಾಯದಲ್ಲಿ ಜೀವರು, ಜೀವಗಳ ಹುಟ್ಟು, ಅವುಗಳ ಗತಿಗಳು, ಜಂಬೂದ್ವೀಪದ ಅಂಶಗಳೂ ಮನೋಜ್ಞವಾಗಿ ವರ್ಣಿತವಾಗಿವೆ.

❖ **ದೇವಗತಿ:**

"ದೇವಗತಿಯ ವಿಕಲ್ಪಮಂ ಪೇಳಲೆಂದು ಬಂದುದೀ ಸೂತ್ರಂ :
ದೇವಾಶ್ಚತುರ್ನಿಕಾಯಾಃ ॥೪.೧॥"[೧೪೨]

ಭವನವಾಸಿ, ವ್ಯಂತರ, ಜ್ಯೋತಿಷ್ಕ ಹಾಗೂ ವೈಮಾನಿಕರೆಂದು ದೇವತೆಗಳಲ್ಲಿ ನಾಲ್ಕು (ಚತುರ್ನಿಕಾಯ) ಭೇದಗಳು. ಇವರಲ್ಲಿ ಮತ್ತೆ ಪ್ರತಿಯೊಂದು ನಿಕಾಯ ದೇವತೆಗಳಲ್ಲಿ ಇಂದ್ರ, ಸಾಮಾನಿಕ, ತ್ರಾಯಸ್ತ್ರಿಂಶ (೩೩ ದೇವತೆಗಳು ಒಟ್ಟಿಗೇ ಇರುವುದರಿಂದ ಈ ಹೆಸರು ಬಂದಿದೆ.), ಪಾರಿಷತ್, ಆತ್ಮರಕ್ಷ, ಲೋಕಪಾಲ, ಆನೀಕ, ಪ್ರಕೀರ್ಣಕ, ಅಭಿಯೋಗ್ಯ, ಕಿಲ್ವಿಷಿಕ ಎಂದು ಹತ್ತು

---

೧೪೨. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ಚತುರ್ಥಾಧ್ಯಾಯಂ) ಪುಟ. ೭೩

ಭೇದಗಳಿವೆ. ಆದರೆ ವ್ಯಂತರ ಮತ್ತು ಜ್ಯೋತಿಷ್ಕ ದೇವತೆಗಳಲ್ಲಿ ತ್ರಾಯಸ್ತ್ರಿಂಶ ಹಾಗೂ ಲೋಕಪಾಲರು ಇರುವುದಿಲ್ಲ. ಮತ್ತೆ ಇವರಲ್ಲಿರುವ ಭಿನ್ನ ಪ್ರಭೇದಗಳನ್ನು ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧) ಭವನಾಸಿಗಳು:

೧. ಅಸುರಕುಮಾರ ೨. ನಾಗಕುಮಾರ ೩. ವಿದ್ಯುತ್‌ಕುಮಾರ ೪. ಸುಪರ್ಣಕುಮಾರ

೫. ಅಗ್ನಿಕುಮಾರ ೬. ವಾತಕುಮಾರ ೭. ಸ್ತನಿತ್ಕುಮಾರ ೮. ಉದಧಿಕುಮಾರರು

೯. ದ್ವೀಪಕುಮಾರ ೧೦. ದಿಕ್ಕುಮಾರ

ಎಂದು ಹತ್ತು ಪ್ರಕಾರದ ಭವನವಾಸಿ ದೇವತೆಗಳಿರುವರು.

೨) ವ್ಯಂತರ ದೇವತೆಗಳು:

ಇವರಲ್ಲಿ ಎಂಟು ಪ್ರಕಾರದ ಭೇದಗಳಿರುವವು. ೧. ಕಿನ್ನರರು ೨. ಕಿಂಪುರಷರು ೩. ಮಹೋರಗರು ೪. ಗಂಧರ್ವರು ೫. ಯಕ್ಷರು ೬. ರಾಕ್ಷಸರು ೭. ಭೂತರು ೮. ಪಿಶಾಚರು.

೩) ಜ್ಯೋತಿಷ್ಕರು:

ಇವರಲ್ಲಿ ಐದು ಭೇದಗಳಿವೆ. ೧. ಚಂದ್ರರು ೨. ಆದಿತ್ಯರು ೩. ಗ್ರಹಗಳು ೪. ನಕ್ಷತ್ರಗಳು ೫. ಪ್ರಕೀರ್ಣಕ ತಾರಕೆಗಳು. ಇವೆಲ್ಲವೂ ಮೇರು ಪರ್ವತವನ್ನು ನಿರಂತರ ಪ್ರದಕ್ಷಿಣೆ ಮಾಡುತ್ತಿರುತ್ತವೆ.

ಭೂಮಿಯಿಂದ ಮೇಲೆ ೭೯೦ ಯೋಜನದ ಮೇಲೆ ತಾರಕೆಗಳು, ಅದರಿಂದ ೧೦ ಯೋಜನದ ಮೇಲೆ ಆದಿತ್ಯರು, ಅದರಿಂದ ೮೦ ಯೋಜನದ ಮೇಲೆ ಚಂದ್ರರು, ಅದರಿಂದ ೪ ಯೋಜನದ ಮೇಲೆ ನಕ್ಷತ್ರ ಲೋಕಗಳು, ಅದರಿಂದ ೪ ಯೋಜನದ ಮೇಲೆ ಬುಧನೂ ಅದರ ಮೇಲೆ ೩ ಯೋಜನದಲ್ಲಿ ಶುಕ್ರನೂ, ಅದರ ಮೇಲೆ ೩ ಯೋಜನದ ಮೇಲೆ ಗುರುವು, ಅದರಿಂದ ೩ ಯೋಜನದ ಮೇಲೆ ಅಂಗಾರಕನೂ, ಅದರಿಂದ ೩ ಯೋಜನದ ಮೇಲೆ ಶನಿಯೂ ಸ್ಥಾಪಿತರಾಗಿದ್ದಾರೆ.

ಇವರು ಸಂಚರಿಸಲು ಸಹಾಯಕವಾಗುವವರುಗಳೇ ವೈಮಾನಿಕರು. ಚಂದ್ರನ ವಿಮಾನವು ೧/೫೬ ಯೋಜನ ಅಗಲವೂ, ಶುಕ್ರ, ಗುರು, ಶನಿ, ಬುಧ ಮುಂತಾದವರ ವಿಮಾನಗಳು ಒಂದೊಂದು ಕ್ರೋಶದಷ್ಟಿವೆ. ಹೀಗಿರುವ ವಿಮಾನಗಳು ಸಿಂಹ, ಗಜ, ವೃಷಭ, ಜಡೆಯುಳ್ಳ ಕುದುರೆಗಳಂತೆ ಆಕಾರವನ್ನುಳ್ಳವು. ಚಂದ್ರಾದಿತ್ಯರ ವಿಮಾನಗಳು ಪೂರ್ವ ಪಶ್ಚಿಮವಾಗಿ ಸಾಗುತ್ತವೆ. ಉಳಿದಂತೆ ಗ್ರಹ, ನಕ್ಷತ್ರ, ಪ್ರಕೀರ್ಣಕಗಳ ವಿಮಾನಗಳು ಸೇರಿ ಒಟ್ಟು ೧೬೦೦೦ ವಿಮಾನಗಳಿವೆ. ಜಂಬೂದ್ವೀಪಾದಿಯಾಗಿ ಪುಷ್ಕರಾರ್ಧಗಳ ಸುತ್ತಲೂ ಎರಡೆರಡು ಚಂದ್ರ ಸೂರ್ಯರು ಪರ್ಯಟನೆ ಮಾಡುವರು. ಅದೇ ರೀತಿಯಾಗಿ ಎಲ್ಲ ಜ್ಯೋತಿಷ್ಕರೂ ೫೦,೦೦೦ ಯೋಜನಗಳ

ಅಂತರದಲ್ಲಿ ಸುತ್ತುತ್ತಲೇ ಇರುತ್ತವೆ. ಅಲ್ಲಿ ನಾಲ್ಕು ಜ್ಯೋತಿಷ್ಕ ಲೋಕಗಳಿವೆ. ಹೀಗಾಗಿ ಅಲ್ಲಿರುವುದು ಒಟ್ಟು ೧೪೪೪ ಚಂದ್ರರು, ಅಷ್ಟೇ ಸಂಖ್ಯೆಯ ಸೂರ್ಯರು ಸುತ್ತುತ್ತಿರುವರು.

೮೮ ಗ್ರಹಗಳು, ೨೮ ನಕ್ಷತ್ರಲೋಕಗಳು, ೬೬,೯೭,೫೦,೦೦,೦೦,೦೦,೦೦,೦೦,೦೦೦ (ಅರವತ್ತಾರು ಸಾವಿರ ಒಂಭತ್ತನೂರ ಎಪ್ಪತ್ತೈದು ಕೋಟಿ ಕೋಟಿ) ತಾರೆಗಳು ಇವು ಒಬ್ಬ ಚಂದ್ರನ ಪರಿವಾರ. ಇನ್ನು ಒಟ್ಟು ೧೪೪೪ ಚಂದ್ರರ ಪರಿವಾರವು:

= ೧೪೪೪ * ೬೬,೯೭,೫೦,೦೦,೦೦,೦೦,೦೦,೦೦,೦೦೦

= ೯,೬೪,೪೪,೦೦,೦೦,೦೦,೦೦,೦೦,೦೦,೦೦,೦೦೦

= ೯೬೪೪೪೪ * ೧೦^{೧೭}

ಈ ಜ್ಯೋತಿಷ್ಕರ ಚಲನೆಯ ಆಧಾರದ ಮೇಲೆಯೇ ವ್ಯವಹಾರಿಕ ಕಾಲವು ನಡೆಯುತ್ತಿರುವುದು. ಇದರಿಂದಲೇ ಮುಹೂರ್ತಾದಿ ಕಾಲಗಳನ್ನು ನಿರ್ಣಯಿಸಲಾಗುವುದು.

೪) ವೈಮಾನಿಕರು:

ಸ್ವರ್ಗದ ಭವನಗಳಿಗೆ ವಿಮಾನಗಳೆನ್ನುತ್ತಾರೆ. ಯಾರು ವಿಮಾನಗಳಲ್ಲಿ ವಾಸಿಸುತ್ತಾರೋ ಅವರವನ್ನು ವೈಮಾನಿಕರು ಎನ್ನುತ್ತಾರೆ. ೧೬ ಕಲ್ಪಗಳಲ್ಲಿ ಕ್ರಮಾನುಗತವಾಗಿ ವೈಮಾನಿಕರು ಇರುವರು.

"ಎನಿತು ವಿಕಲ್ಪ ವಿಮಾನಂಗಳೊಳಾ ವೈಮಾನಿಕ ದೇವರಿಪ್ಪರೆಂದೊಡೆ ಪೇಳದ್ದರು:

ಸೌಧರ್ಮೇಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾವಂತ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ ಸಹಸ್ರಾರೇಷ್ವಾನತ ಪ್ರಣತಯೋರಾರಣಾಚ್ಯತಯೋರ್ನವಸು ಗ್ರೈವೇಯಕೇಷ್ವನುದಿಶೇಷು ವಿಜಯ ವೈಜಯಂತಾಪರಾಜಿತೇಷು ಸರ್ವಾರ್ಥಸಿದ್ಧೌ ಚ ॥"[೧೪೩]

ಸೌಧರ್ಮ-ಈಶಾನ, ಸನತ್ಕುಮಾರ-ಮಾಹೇಂದ್ರ, ಬ್ರಹ್ಮ-ಬ್ರಹ್ಮೋತ್ತರ, ಲಾವಂತ-ಕಾಪಿಷ್ಠ, ಶುಕ್ರ-ಮಹಾಶುಕ್ರ, ಸತಾರ-ಸಹಸ್ರಾರ, ಆನತ-ಪ್ರಾಣತ, ಆರಣ-ಅಚ್ಯುತ ಎಂಬ ೧೬ ಕಲ್ಪಗಳಲ್ಲಿ ಇಂದ್ರಾದಿ ದೇವತೆಗಳು ನೆಲೆಸಿರುವರು. ಅಲ್ಲಿ ಅರ್ಚಿ, ಅರ್ಚಿಮಾಲಿನಿ, ವಜ್ರರರೋಚಿ, ಸೌಮ್ಯೆ, ಸೌಮ್ಯರೂಪೆ, ಅಂಕೆ, ಸ್ಪಟಿಕೆ, ಆದಿತ್ಯ, ಇಂದ್ರಕ, ಅನುತ್ತರೆ (ವಿಜಯ, ವೈಜಯಂತ, ಜಯಂತ, ಅಪರಾಜಿತ ಹಾಗೂ ಸವಾರ್ಥ ಸಿದ್ಧಿಗಳನ್ನು ಈ ಐದು ಪ್ರಕಾರಗಳನ್ನು ಸೇರಿಸಿ ಅನುತ್ತರೆ ಎನ್ನುವರು) ಹಾಗೂ ಗ್ರೈವೇಯಕ ಎಂಬ ೧೧ ಹೆಸರಿನ ಲಕ್ಷಾಂತರ ವಿಮಾನಗಳಿವೆ. ಅವುಗಳ ಸಂಖ್ಯೆಯು ಕ್ರಮವಾಗಿ ಕೆಳಗಿನಂತಿವೆ:

೧) ಸೌಧರ್ಮ – ೩೨,೦೦,೦೦೦ (ಮೂವತ್ತೆರಡು ಲಕ್ಷ)

೨) ಈಶಾನ – ೨೮,೦೦,೦೦೦ (ಇಪ್ಪತ್ತೆಂಟು ಲಕ್ಷ)

೩) ಸನತ್ಕುಮಾರ – ೧೨,೦೦,೦೦೦ (ಹನ್ನೆರಡು ಲಕ್ಷ)

---

೧೪೩. ಡಾ. ಹಂಪ ನಾಗರಾಜಯ್ಯ: **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ಚತುರ್ಥಾಧ್ಯಾಯಂ) ಪು. ೮೫

೪)	ಮಾಹೇಂದ್ರ	–	೮,೦೦,೦೦೦ (ಎಂಟು ಲಕ್ಷ)
೫)	ಬ್ರಹ್ಮ	–	೪,೦೦,೦೦೦ (ನಾಲ್ಕು ಲಕ್ಷ)
೬)	ಬ್ರಹ್ಮೋತ್ತರ	–	
೭)	ಲಾವಂತ	–	೫೦,೦೦೦ (ಐವತ್ತು ಸಾವಿರ)
೮)	ಕಾಪಿಷ್ಠ	–	
೯)	ಶುಕ್ರ	–	೪೦,೦೦೦ (ಆರು ಸಾವಿರ)
೧೦)	ಮಹಾಶುಕ್ರ	–	
೧೧)	ಸತಾರ	–	೬೦೦೦ (ಆರು ಸಾವಿರ)
೧೨)	ಸಹಸ್ರಾರ	–	
೧೩)	ಆನತ	–	೭೦೦ (ಏಳು ನೂರು)
೧೪)	ಪ್ರಾಣತ	–	
೧೫)	ಆರಣ	–	
೧೬)	ಅಚ್ಯುತ	–	

ಒಟ್ಟು ವಿಮಾನಗಳ ಸಂಖ್ಯೆ– **೮೪,೯೬,೭೦೦** (ಎಂಭತ್ತು ನಾಲ್ಕು ಲಕ್ಷ ತೊಂಭತ್ತಾರು ಸಾವಿರ ಏಳುನೂರು)

ಒಟ್ಟು ೧೬ ಕಲ್ಪಗಳನ್ನೂ ಸೇರಿ ೬೩ ಇಂದ್ರಕಗಳಿವೆ. ಅವುಗಳು: ೧. ಋತ್ರೀಂದ್ರಕ ೨. ವಿಮಳೇಂದ್ರಕ ೩. ಚಂದ್ರೇಂದ್ರಕ ೪. ವಲ್ಗೀಂದ್ರಕ ೫. ವೀರೇಂದ್ರಕ ೬. ಅರುಣೇಂದ್ರಕ ೭. ನಂದನೇಂದ್ರಕ ೮. ನಳಿನೇಂದ್ರಕ ೯. ಕಾಂಚಣೇಂದ್ರಕ ೧೦. ರೋಹಿತೇಂದ್ರಿಕ ೧೧. ಚರ್ಚೇಂದ್ರಕ ೧೨. ಮರುದೇಂದ್ರಕ ೧೩. ಋದ್ಧಿಶೇಂದ್ರಕ ೧೪. ವೈಢೂರ್ಯೇಂದ್ರಕ ೧೫. ರುಚಕೇಂದ್ರಕ ೧೬. ರುಚಿರಾಕೇಂದ್ರಕ ೧೭. ಸ್ಪಟಿಕೇಂದ್ರಕ ೧೮. ತಪನೀಯೇಂದ್ರಕ ೧೯. ಮೇಘೇಂದ್ರಕ ೨೦. ಅಭ್ರೇಂದ್ರಕ ೨೧. ಹಾರಿದ್ರೇಂದ್ರಕ ೨೨. ಪದ್ಮೇಂದ್ರಕ ೨೩. ಲೋಹಿತೇಂದ್ರಕ ೨೪. ವಜ್ರೇಂದ್ರಕ ೨೫. ನಂದ್ಯವರ್ತೇಂದ್ರಕ ೨೬. ಪ್ರಭಂಕೇಂದ್ರಕ ೨೭. ಪೃಷ್ಠಕೇಂದ್ರಕ ೨೮. ಗಜೇಂದ್ರಕ ೨೯. ಮಿತ್ರೇಂದ್ರಕ ೩೦. ಪ್ರಭೇಂದ್ರಕ ೩೧. ಅಂಜನೇಂದ್ರಕ ೩೨. ವನೇಂದ್ರಕ ೩೩. ಮಾಲೇಂದ್ರಕ ೩೪. ನಾಗೇಂದ್ರಕ ೩೫. ಗರುಡೇಂದ್ರಕ ೩೬. ಲಾಂಗಲೇಂದ್ರಕ ೩೭. ಬಲಭದ್ರೇಂದ್ರಕ ೩೮. ಚಕ್ರೇಂದ್ರಿಕ ೩೯. ಅರಿಷ್ಠೇಂದ್ರಕ ೪೦. ಸುರಸಮಿತೀಂದ್ರಿಕ ೪೧. ಬ್ರಹ್ಮೇಂದ್ರಕ ೪೨. ಬ್ರಹ್ಮೋತ್ತರೇಂದ್ರಕ ೪೩. ಬ್ರಹ್ಮಹೃದಯ ೪೪. ಲಾವಂತೇಂದ್ರಕ ೪೫. ಶುಕ್ರೇಂದ್ರಕ ೪೬. ಶತಾರೇಂದ್ರಕ ೪೭. ಆನತೇಂದ್ರಕ ೪೮. ಪ್ರಾಣತೇಂದ್ರಕ ೪೯. ಪುಷ್ಪಕೇಂದ್ರಕ ೫೦. ಸಾತಕೇಂದ್ರಕ ೫೧. ಆರಣೇಂದ್ರಕ ೫೨.

ಅಚ್ಯುತೇಂದ್ರಕ ೫೩. ಸುದರ್ಶನೇಂದ್ರಕ ೫೪. ಅಮೋಘೇಂದ್ರಕ ೫೫. ಸುಪ್ರಬುದ್ಧೇಂದ್ರಕ ೫೬. ಯಶೋಧರೇಂದ್ರಕ ೫೭. ಸುಭದ್ರನೇಂದ್ರಕ ೫೮. ಸುವಿಶಾಲೇಂದ್ರಕ ೫೯. ಸುಮನಸ ೬೦. ಸೌಮನಸ ೬೧. ಪ್ರೀತಿಂಕರೇಂದ್ರಕ ೬೨. ಆದಿತ್ಯೇಂದ್ರಕ ೬೩. ಸರ್ವಾರ್ಥಸಿದ್ಧಿ.

ಮಂದರ ಪರ್ವತದ ಶಿಖರದ ಮೇಲೆ ಉತ್ತರ ಭೋಗಭೂಮಿಯಿಂದ ಕೂದಲೆಳೆಯ ಅಂತರದಲ್ಲಿ ಋತೀಂದ್ರಕರು, ಸಿದ್ಧಕ್ಷೇತ್ರದಿಂದ ೧೨ ಯೋಜನ ಕೆಳಗೆ ಸರ್ವಾರ್ಥಸಿದ್ಧಿಯು ಸ್ಥಿತವಾಗಿವೆ. ಎಲ್ಲ ೧೬ ಕಲ್ಪಗಳಲ್ಲಿಯ ವಿಮಾನಗಳು ಕಪ್ಪು, ಹಸಿರು, ನೀಲಿ, ಕೆಂಪು ಹಾಗೂ ಶುಕ್ಲ ಎಂದು ಐದು ವರ್ಣಗಳಲ್ಲವೆ. ಹೀಗೆ ವೈಮಾನಿಕ ದೇವತೆಗಳನ್ನು ವರ್ಣಿಸಲಾಗಿದೆ. ಮುಂದುವರೆದು:

"ವೈಮಾನಿಕರಾವ ಲೇಶ್ಯೆಯನುಳ್ಳರೆಂದೊಡೆ ಪೇಳ್ದಪರು :

ಪೀತ ಪದ್ಮ ಶುಕ್ಲ ಲೇಶ್ಯಾ ದ್ವಿತ್ರಿ ಶೇಷೇಷು ॥೪.೨೨॥"[೧೪೪]

ಪೀತಲೇಶ್ಯೆ, ಪದ್ಮಲೇಶ್ಯೆ, ಶುಕ್ಲಲೇಶ್ಯೆಗಳನ್ನುಳ್ಳವರು ಲೌಕಾಂತಿಕ ದೇವರು. ಬ್ರಹ್ಮ ಲೋಕವನ್ನೇ ಆಲಯವಾಗುಳ್ಳವರನ್ನು ಲೌಕಾಂತಿಕ ದೇವರು ಎನ್ನುವರು. ಬ್ರಹ್ಮಲೋಕವೆಂಬುದು ಜನ್ಮ–ಜರಾ–ಮೃತ್ಯುಗಳನ್ನು ಒಳಗೊಂಡ ಸಂಸಾರಗಳಿಂದ ಸಮ್ಮಿಳಿತವಾಗಿದೆ. ಹೀಗಿರುವ ಇಲ್ಲಿ ಚತುರ್ಗತಿಯ ಜೀವಗಳು ಸ್ಥಿತವಾಗಿವೆ. ಅವರಲ್ಲಿ ನಾಲ್ಕನೆಯ ಗತಿಯಲ್ಲಿರುವ ದೇವತೆಗಳೇ ಲೌಕಾಂತಿಕರು. ಅವರೆಲ್ಲರೂ ಮುಂದಿನ ಜನ್ಮದಲ್ಲಿ ಮನುಷ್ಯಗತಿ [೧೪೫] ಪಡೆದು ಮೋಕ್ಷವನ್ನು ಸಾಧಿಸುವರು ಆದುದರಿಂದ ಅವರಿಗೆ 'ಲೌಕಾಂತಿಕ'ರು ಎಂಬ ಹೆಸರು ಅನ್ವರ್ಥಕವಾಗಿದೆ. ಅಂತೆಯೇ ಸೌಧಮೇಂದ್ರನ ಮೊದಲಾಗಿ ಎಲ್ಲ ಇಂದ್ರರೂ, ಶಂಕರನು ಆತನ ಮಹಾದೇವಿಯೊಂದಿಗೆ ಮನುಷ್ಯಗತಿಯಲ್ಲಿಯೇ ಮುಕ್ತಿಯನ್ನು ಹೊಂದುವರು. ಅವರ ಹೆಸರುಗಳನ್ನು ಹೀಗೆ ಹೇಳಲಾಗಿದೆ.

"ಸಾರಸ್ವತರುಂ ಆದಿತ್ಯರುಂ ವಹ್ನಿಗಳುಂ ಅರುಣರುಂ ಗರ್ದತೋಯರುಂ ತುಷಿತರುಂ ಅವ್ಯಾಭಾದರುಂ ಅರಿಷ್ಟರುಂ ಲೌಕಾಂತಿದೇವರಪ್ಪರು"[೧೪೬] **(ಕ. ವೃ)**

ಸಾರಸ್ವತಾದಿ ದೇವತೆಗಳು ಈಶಾನಾದಿಯಾಗಿ ಕ್ರಮವಾಗಿ ಎಂಟೂ ದಿಕ್ಕುಗಳಲ್ಲಿರುವರು. ಈ ದೇವತೆಗಳ ವಿಮಾನಗಳೂ ಈಶಾನಾದಿಯಾಗಿ ಕ್ರಮವಾಗಿ ಎಂಟು ದಿಕ್ಕುಗಳಲ್ಲಿ ಇರುವವು. ಇಲ್ಲಿ ೭೭೦ ಸಾರಸ್ವತರು, ೭೭೦ ಆದಿತ್ಯರು, ೮೦೦೮ ವಹ್ನಿಯರು, ೮೦೦೮ ಅರುಣರು, ೯೦೦೯ ಗರ್ದತೋಯರು, ೯೦೦೯ ತುಷಿತರು, ೧೧೦೧೧ ಅವ್ಯಭಾದರು ಹಾಗೂ ೧೧೦೧೧ ಅರಿಷ್ಟರು ಎಂಬ ಲೌಕಾಂತಿಕ ದೇವರು ಇರುವರು.

---


೧೪೪. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಚತುರ್ಥಾಧ್ಯಾಯಂ) ಪು. ೯೬

೧೪೫. ಚತುರ್ಗತಿಗಳಲ್ಲಿ ಎಷ್ಟೇ ಜನ್ಮವೆತ್ತಿದರೂ ಮನುಷ್ಯಗತಿಯನ್ನು ಹೊರತುಪಡಿಸಿ ಬೇರಾವ ಗತಿಯಲ್ಲಿಯೂ ಮೋಕ್ಷವಿಲ್ಲ ಎಂದು ಜೈನಾಗಮಗಳು ಹೇಳುತ್ತವೆ.

೧೪೬. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಚತುರ್ಥಾಧ್ಯಾಯಂ) ಪು. ೯೯

ಸಾರಸ್ವತ-ಆದಿತ್ಯರ ನಡುವೆ ಅಶ್ವಾಭ-ಸೂರ್ಯಾಭ, ಆದಿತ್ಯ-ವಹ್ನಿಯರ ನಡುವೆ ಚಂದ್ರಾಭ-ಸತ್ಯಾಭ, ವಹ್ನಿ-ಅರುಣರ ನಡುವೆ ಶ್ರೇಯಸ್ಕರ ಕ್ಷೇಮಂಕರ, ಅರುಣ-ಗರ್ದತೋಯರ ನಡುವೆ ವೃಷಭೇಷ್ಠ-ಕಾಮಂಧರರು, ಗರ್ದತೋಯ-ತುಷಿತರ ನಡುವೆ ನಿರ್ವಾಣ-ಬೋಧಿರಂತರಕ್ಷಿತರು, ತುಷಿತ-ಅವ್ಯಾಭಾದರ ನಡುವೆ ಆತ್ಮರಕ್ಷಿತ-ಸರ್ವರಕ್ಷಿತ, ಅವ್ಯಾಭಾದ ಅರಿಷ್ಟರ ನಡುವೆ ಅಶ್ವ-ವಿಶ್ವರೆಂಬ ದೇವರಿರುವರು (ನೋಡಿ ಚಿತ್ರ ೩.೨). ಇವರ ವಿಮಾನಗಳು ಅವರವರ ಹೆಸರಿನಲ್ಲಿಯೇ ಇರುತ್ತವೆ. ಈ ಎಲ್ಲ ಲೌಕಾಂತಿಕರು ಮುಂದೆ ಮನುಷ್ಯಗತಿಯನ್ನು ಪಡೆದು ಮುಕ್ತಿಯನ್ನು ಸಾಧಿಸುವರು.

ಚಿತ್ರ ೩.೨



ಲೌಕಾಂತಿಕ ದೇವರು ಹಾಗೂ ಅವರಿಗೆ ಪರ್ಯಾಯ
ರೂಪದಲ್ಲಿರುವ ದೇವರನ್ನು ತೋರಿಸುವ ನಕ್ಷೆ:

"ದೇವರ್ಗಾಯುಷ್ಯಸ್ಥಿತಿಯಂ ಪೇಳ್ದಲ್ಲಿ ಅನ್ನೆವರಂ ಮೊದಲ ನಿಕಾಯದಾಯುಷ್ಯ ಸ್ಥಿತಿಯಂ ಪೇಳ್ದಪರು:
ಸ್ಥಿತಿರಸುರನಾಗ ಸುಪರ್ಣ ದ್ವೀಪ ಶೇಷಾಣಾಂ ಸಾಗರೋಪಮ
ತ್ರಿಪಲ್ಯೋಪಮಾರ್ದ್ಧ ಹೀನಮತಾ ॥೪.೨೮॥"[೧೪೭]

೧೪೭. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಚತುರ್ಥಾಧ್ಯಾಯಂ) ಪು. ೧೦೧

ಅಸುರರು, ನಾಗರು, ಸುವರ್ಣದ್ವೀಪರು ಮುಂತಾದವರು ಕ್ರಮವಾಗಿ ಸಾಗರೋಪಮ, ತ್ರಿಪಲ್ಯೋಪಮ, ಅರ್ಧಹೀನಪ್ರಮಾಣ ಆಯುಷ್ಯವನ್ನು ಹೊಂದಿರುವರು. ಚಮರ, ವೈರೋಚನ ಸ್ತ್ರೀ ದೇವಿಯರಿಗೆ ಕ್ರಮವಾಗಿ ಎರಡು ಹಾಗೂ ಮೂರು ಪಲ್ಯ ಆಯುಷ್ಯವು. ನಾಗ, ಗರುಡ ಹಾಗೂ ಇನ್ನುಳಿದ ಅಷ್ಟವಿಧದ ಸ್ತ್ರೀ ದೇವಿಯರಿಗೆ ಕ್ರಮವಾಗಿ ಪಲ್ಯದ ಎಂಟನೆಯ ಒಂದು ಭಾಗ, ಮೂರು ಪೂರ್ವಕೋಟಿ ಹಾಗೂ ಮೂರು ಕೋಟಿವರ್ಷ ಆಯುಷ್ಯವು. ಈ ರೀತಿಯಲ್ಲಿ ದೇವತೆಗಳ ಭೇದಗಳು, ಅವರ ಸಂಖ್ಯೆ, ಮೋಕ್ಷದ ಕುರಿತು ವರ್ಣನೆಯನ್ನು ಮಾಡಲಾಗಿದೆ.

ದೇವತೆಗಳ ಆಯುಷ್ಯ:

ದೇವರು, ನಾರಕರು, ಲೌಕಾಂತಿಕರು ಇತರ ಕಾಯ ಜೀವಗಳ ಆಯುಷ್ಯವನ್ನು ಈ ಮುಂದಿನಂತೆ ವಿವರಿಸಲಾಗಿದೆ.

"ನಾರಕಾಣಾಂ ಚ ದ್ವಿತೀಯಾದಿಷು ॥೪.೩೫॥ (ಸಂ)

ಎರಡನೆಯ ಪೃಥ್ವಿ ಮೊದಲಾದುವಱೊಳು ನಾರಕರ್ಗಂ ಕೆಳಗಣ ಕೆಳಗಣ ಜಘನ್ಯಸ್ಥಿತಿಯಕ್ಕುಂ ಮೇಗಣ ಮೇಗಣ ಸಮಯಾಧಿಕಮಪ್ಪುತ್ಕೃಷ್ಟ ಸ್ಥಿತಿ ಎಡೆ ಇಡೆಪಡೆದುದು ॥"[೧೪೮]

ಎರಡನೆಯ ಪೃಥ್ವಿ ಅಂದರೆ ಶರ್ಕರಪ್ರಭದಿಂದ ಕೆಳಗಣ ನರಕಗಳಲ್ಲಿ ಆಯುಷ್ಯವು ಕಡಿಮೆಯಾಗುತ್ತ ಹೋಗುವುದು. ನರಕಗಳ ಮೇಲೆ ಮೇಲೆ ಹೋದರೆ ಆಯುಷ್ಯವು ಹೆಚ್ಚಾಗುತ್ತ ಹೋಗುವುದು. ಅಂತೆಯೇ ಮೊದಲ ಪೃಥ್ವಿಯಲ್ಲಿ ೧೦,೦೦೦ ವರ್ಷಗಳು. ಇಲ್ಲಿರುವ ಭವನವಾಸಿಗಳಿಗೆ ೧೦,೦೦೦ ವರ್ಷ, ವ್ಯಂತರ ಜೀವಿಗಳಿಗೆ ೧೦,೦೦೦ ವರ್ಷ, ಜ್ಯೋತಿಷ್ಕರಿಗೆ ಪಲ್ಯೋಪಮ, ಅದಕ್ಕಿಂತಲೂ ಹೆಚ್ಚಿನ ಆಯುಷ್ಯವು. ಚಂದ್ರ, ಆದಿತ್ಯ, ಶುಕ್ರರಿಗೆ ಕ್ರಮವಾಗಿ ಒಂದುಪಲ್ಯದ ಮೇಲೆ ಲಕ್ಷವರ್ಷ, ಸಾವಿರ ವರ್ಷ, ನೂರು ವರ್ಷಗಳ ಆಯುಷ್ಯವು. ಗುರುವಿಗೆ ಒಂದು ಪಲ್ಯ, ಮಂಗಳ, ಬುಧ, ಶನಿಗಳಿಗೆ ಅರ್ಧ-ಅರ್ಧಪಲ್ಯ, ತಾರಕಿಗಳಿಗೆ ಒಂದು ಪಲ್ಯದ ನಾಲ್ಕನೆಯ ಒಂದು ಭಾಗ ಆಯಸ್ಸು.

ದೇವತೆಗಳ ಆಹಾರ ಕ್ರಮ, ಉಚ್ಛ್ವಾಸಗಳ ಕುರಿತು ಕೆಳಗಿನಂತೆ ವಿಶ್ಲೇಷಿಸಲಾಗಿದೆ.

"ಅಸುರೇ ತಿತ್ತಿಸು ಸಾಸಾಹಾರಾ ಪಕ್ಖಂ ಸಮಾ ಸಹಸ್ಸಂ ತು
ಸಮುಹುತ್ತ ದಿಣಾಣದ್ಧಂ ತೇರಸ ಹೊಂತಿ ದೇವೀಯೋ ॥೪.೧೮೩॥ (ಪ್ರಾಕೃತ)

ಅಸುರ ಉ । ದಿ ೧೫ ನಾ ಸು. ದ್ವೀ. ಮಾಸ ಸ. ದಿ ಅವಾವ
ಆ. ವ. ೧೦೦೦ ಮು ೨೫/೨ ಮು ೧೨ ೧೫/೨ ದಿ ೨೫/೨ ದಿ ೧೫ ೧೫/೨

ದೇವತೆಗಳು	**ಉಚ್ಛ್ವಾಸ**	**ಆಹಾರ ಕ್ರಮ**
ಅಸುರಕುಮಾರರು	ಪಕ್ಷಕ್ಕೊಮ್ಮೆ	ಸಾವಿರ ವರ್ಷಕ್ಕೊಮ್ಮೆ
ನಾಗಕುಮಾರರು	ಹನ್ನೆರಡೂವರೆ ಮುಹೂರ್ತ[೧೪೯]	ಹನ್ನೆರಡೂವರೆ ದಿನಕ್ಕೊಮ್ಮೆ

೧೪೮. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** ಪುಟ. ೧೦೪ (ಚತುರ್ಥಾಧ್ಯಾಯಂ)

ಸುಪರ್ಣಕುಮಾರರು	ಹನ್ನೆರಡೂವರೆ ಮುಹೂರ್ತ	ಹನ್ನೆರಡೂವರೆ ದಿನಕ್ಕೊಮ್ಮೆ
ದ್ವೀಪಕುಮಾರರು	ಹನ್ನೆರಡೂವರೆ ಮುಹೂರ್ತ	ಹನ್ನೆರಡೂವರೆ ದಿನಕ್ಕೊಮ್ಮೆ
ವಿದ್ಯುತ್‌ಕುಮಾರ	ಹನ್ನೆರಡೂವರೆ ಮುಹೂರ್ತ	ಹನ್ನೆರಡೂವರೆ ದಿನಕ್ಕೊಮ್ಮೆ
ಸನತ್‌ಕುಮಾರ	ಹನ್ನೆರಡೂವರೆ ಮುಹೂರ್ತ	ಹನ್ನೆರಡೂವರೆ ದಿನಕ್ಕೊಮ್ಮೆ
ದಿಕ್ಕುಮಾರ	ಏಳೂವರೆ ಮುಹೂರ್ತ	ಏಳೂವರೆ ದಿನ
ಅಗ್ನಿಕುಮಾರ	ಏಳೂವರೆ ಮುಹೂರ್ತ	ಏಳೂವರೆ ದಿನ
ವಾತಕುಮಾರ	ಏಳೂವರೆ ಮುಹೂರ್ತ	ಏಳೂವರೆ ದಿನ

ಲೌಕಾಂತಿಕ ದೇವರಿಗೆ ಎಂಟು ಸಾಗರೋಪಮ ಆಯಸ್ಸು, ಹಾಗೂ ಅವರೆಲ್ಲರಿಗೂ ೫ ಮೊಳ ದೇಹಗಾತ್ರ. ಹೀಗೆ ದೇವಗಣದ ವೈಶಿಷ್ಟ್ಯಗಳನ್ನು ದಿವಾಕರಣಂದಿಯ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯಲ್ಲಿ ವಿವರಿಸಲಾಗಿದೆ.

❖ **ತಿರ್ಯಂಚಗಳು:**

"ತಿರ್ಯಗ್ ಜೀವಂಗಳಾವುವೆಂದೊಡೆ ಪೇಳ್ದಪರು :

ಔಪಾದಿಕ ಮನುಷ್ಯೇಭ್ಯಃ ಶೇಷಾರ್ಯಗ್ಯೋನಯಃ ॥೪.೨೭॥"[೧೫೦]

ದೇವರು, ನಾರಕರು ಹಾಗೂ ಮನುಷ್ಯರನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ಜೀವಿಗಳನ್ನು ತಿರ್ಯಂಚಗಳು ಎಂದು ಕರೆಯಲಾಗುತ್ತದೆ. ಇವು ಕೇವಲ ಕೆಲವೇ ಪ್ರದೇಶಗಳಿಗೆಮಾತ್ರ ಸೀಮಿತವಾಗಿರದೆ ಸರ್ವಲೋಕವ್ಯಾಪಿಗಳಾಗಿವೆ. ಇವು ಏಕೇಂದ್ರಿಯಗಳಿಂದ ಹಿಡಿದು ಪಂಚೇಂದ್ರಿಯಗಳಲ್ಲಿಯೂ ಇವೆ. ಜೈನಾಗಮಗಳಲ್ಲಿ ಸೂಚಿತ ಜೀವಜಾಲ ನಕ್ಷೆ ನೋಡಿ (ಚಿತ್ರ ೩.೩).


ಜಗತ್ತು ಅಥವಾ ವಿಶ್ವದ ಹುಟ್ಟು ಇಲ್ಲವೇ ಉಗಮದ ಕುರಿತಂತೆ ತಿಳಿದುಕೊಳ್ಳಲು ಇಂದು ಆಧುನಿಕ ವಿಜ್ಞಾನದ ಸಹಾಯದಿಂದ ಸಾಕಷ್ಟು ಅಧ್ಯಯನಗಳು, ಪ್ರಯೋಗಗಳು ನಡೆದೇ ಇವೆ. ಅಂತೆಯೇ ಈ ಕುತೂಹಲವೇನೂ ಇಂದು ನೆನ್ನೆಯೇದೇನಲ್ಲ. ಮನುಷ್ಯನಿಗೆ ಯಾವಾಗ ಸ್ವತಃ ಬುದ್ಧಿಶಕ್ತಿಯು ಹೊಸದರ ಹುಡುಕಾಟಕ್ಕೆ ತೊಡಗಿಕೊಂಡಿತೋ ಸೃಷ್ಟಿಯ ಉಗಮ, ವಿಕಾಸದ ಹಾದಿಯನ್ನು ಅರಿಯುವ ಕುತೂಹಲವೂ ಅಂದೇ ಶುರುವಾಯಿತು. ಇಂದಿನವರೆಗೂ ಅದರ ಕುರಿತಾದ ಕುತೂಹಲ ತಣಿದಿಲ್ಲ.

ಸೃಷ್ಟಿಯ ಉಗಮದ ಕುರಿತ ಊಹಾಪೋಹಗಳೂ ಆರಂಭವಾದವು. ಒಂದೊಂದು ಧರ್ಮಗಳೂ ಒಂದೊಂದು ಸಿದ್ಧಾಂತಗಳನ್ನು ಮಂಡಿಸಿದವು. ಹಾಗೆಯೇ ಜೈನಧರ್ಮವೂ ಸೃಷ್ಟಿಯ ಕುರಿತು ತನ್ನ ಸಿದ್ಧಾಂತವನ್ನು ರೂಪಿಸಿ ಮಂಡಿಸಿತು. ಸೃಷ್ಟಿಕ್ರಿಯೆಗೆ

೧೪೯. ಜಿ ಎನ್. ಚಕ್ರವರ್ತಿ : **ಕನ್ನಡ ಸಂಸ್ಕೃತ ನಿಘಂಟು** : ಪುಟ. ೭೮೦; **ಮುಹೂರ್ತ** = ಹಗಲು ಹದಿನೈದನೆಯ ಒಂದು ಭಾಗ. ಅಂದರೆ ನಾಲ್ವತ್ತೆಂಟು ನಿಮಿಷ.

೧೫೦. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಚತುರ್ಥಾಧ್ಯಾಯಂ) ಪು. ೧೦೦

ಚಿತ್ರ ೩.೩



ಜೀವಗಳು ಮತ್ತು ಜೀವಗಳ ಪ್ರಕಾರಭೇದಗಳನ್ನು ತಿಳಿಸುವ ನಕ್ಷೆ

ಕಾರಣವಾದ ಪದಾರ್ಥಗಳನ್ನು ದ್ರವ್ಯಗಳೆಂದು ಕರೆಯಲಾಗಿದೆ. ಆ ದ್ರವ್ಯಗಳು ಅಜೀವಗಳು. ಅಜೀವಗಳಿಂದಲೇ ಸೃಷ್ಟಿ ಆರಂಭವಾಯಿತು. ಅಂತಹ ಅಜೀವ ಕಾಯಗಳ ಕುರಿತಾಗಿ ಜೈನಾಗಮಗಳು ಇಂದಿನ ವಿಜ್ಞಾನಕ್ಕೆ ತೀರಾ ಹತ್ತಿರವಾದ ಸಿದ್ಧಾಂತವನ್ನು ಮಂಡಿಸುತ್ತವೆ.

೩.೧.೧.೫. ಅಜೀವ ತತ್ತ್ವಗಳು (ಕಾಯಗಳು):

"ಸಮ್ಯಗ್ದರ್ಶನ ವಿಷಯಂಗಳಪ್ಪಜೀವಾದಿಗಳೊಳು ಜೀವಾದಿಪದಾರ್ಥಂ ಪೇಳೆಪಟ್ಟಂತೀಗಳ್ ಅಜೀವ ಪದಾರ್ಥಮಂ ಪೇಳಲ್ವೇಡಿ ಬಂದುದೀ ಸೂತ್ರಂ:

ಅಜೀವಕಾಲಾ ಧರ್ಮಾಧರ್ಮಾಕಾಶ ಪುದ್ಗಲಾಃ ॥೫.೧॥"[೧೫೧]

ಈ ಮುಂಚೆಯೇ ಹೇಳಿದ ಹಾಗೆ ಚೈತನ್ಯವಿಲ್ಲದ್ದನ್ನು ಅಜೀವ ಎನ್ನುವರು. ಯಾವ ವಸ್ತುವಿನಲ್ಲಿ ನೋಡುವ, ತಿಳಿಯುವ ಶಕ್ತಿಯಿಲ್ಲವೋ ಅದು ಅಜೀವ. ಜೈನಾಗಮಗಳಲ್ಲಿ ಧರ್ಮ, ಅಧರ್ಮ, ಆಕಾಶ, ಕಾಲ, ಪುದ್ಗಲಗಳೆಂದು ಅಜೀವ ಭೇದಗಳನ್ನು ಹೇಳಲಾಗಿದೆ. ಅವುಗಳನ್ನೇ ದ್ರವ್ಯ ಎಂದು ಕರೆಯಲಾಗುತ್ತದೆ. ಅಸ್ತಿತ್ವವೇ ದ್ರವ್ಯಗಳ ಸಾಧಾರಣ ಲಕ್ಷಣವಾಗಿದೆ.

೧) ಪುದ್ಗಲ ದ್ರವ್ಯ:

"ಪುದ್ಗಲಂಗಳ್ಗಮೂರ್ತತ್ವಮೆಯ್ದಿದೊಡದಂ ಮಾಣಿಸಲ್ವೇಡಿ ಬಂದುದೀ ಸೂತ್ರಂ :
ರೂಪಿಣಃ ಪುದ್ಗಲಾಃ ॥೫.೫॥"[೧೫೨]

ರೂಪ, ರಸ, ಗಂಧ ಮತ್ತು ಸ್ಪರ್ಶಗಳನ್ನುಳ್ಳವುಗಳೇ ಪುದ್ಗಲಗಳು. ಇವುಗಳು ಅಗಣಿತ ಸಂಖ್ಯೆಯಲ್ಲಿರುತ್ತವೆ. ಇವುಗಳಿಗೆ ನಿರ್ದಿಷ್ಟ ಪ್ರದೇಶವೆಂಬುದಿಲ್ಲ.

"ಶರೀರ ವಾಙ್ಮನ ಪ್ರಣಾಪಾನಾಃ ಪುದ್ಗಲಾನಾ ॥೫.೧೯॥ (ಸಂ)
ಶರೀರಮುಂ ಸತ್ಯಾದಿವಚನಮುಂ ದ್ರವ್ಯಮನಮುಂ ಉಚ್ಛ್ವಾಸ
ನಿಶ್ವಾಸಮೆಂದಿವು ಪುದದ್ಗಲನಾಂ॥ (ಕ. ವೃ)"[೧೫೩]

ಶರೀರ, ಮಾತು, ಆಹಾರ, ಉಸಿರಾಟಗಳಲ್ಲಿ ಮಾಧ್ಯಮಗಳಾಗಿ ಕಾರ್ಯ ನಿರ್ವಹಿಸುತ್ತವೆ. ಅವುಗಳಲ್ಲಿ ಆಹಾರಕ, ತೈಜಸ್, ಕಾರ್ಮಣ, ವಾಕ್ (ಭಾಷಾ) ಹಾಗೂ ಮನ ಎಂದು ಐದು ಭೇದಗಳು. ಎಲ್ಲ ಪುದ್ಗಲಗಳಲ್ಲಿ ತನ್ನದೇ ಆದ ಐದು ಗುಣಭೇದಗಳಿವೆ.

"ಸ್ಪರ್ಶ ರಸ ಗಂಧ ವರ್ಣವಂತಃ ಪುದ್ಗಲಾಃ ॥೫.೨೩॥ (ಸಂ)

ಕರ್ಕಶ ಮೃದು ಗುರು ಲಘು ಶೀತೋಷ್ಣ ಸ್ನಿಗ್ಧ ರೂಕ್ಷಮೆಂಬೆಂಟು ಸ್ಪರ್ಶಂಗಳು ತಿಕ್ತ ಕಟುಕಕಷಾಯಾಮ್ರ ಮಧುರಮೆಂಬಯ್ದು ರಸಂಗಳು ಸುಗಂಧ ದುರ್ಗಂಧಮೆಂಬೆರಡು ಗಂಧಗಳು ಕೃಷ್ಣ ನೀಲ ರುಧಿರಪೀತ ಶುಕ್ಲವರ್ಣಮುಮೆಂದಿವನುಳ್ಳವು ಪುದ್ಗಲಂಗಳು ॥"[೧೫೪]

೧. ಸ್ಪರ್ಶ: ಇದರಲ್ಲಿ ಕರ್ಕಶ, ಮೃದು, ಗುರು. ಲಘು, ಶೀತ, ಉಷ್ಣ, ಸ್ನಿಗ್ಧ ಹಾಗೂ ರೂಕ್ಷಗಳೆಂದು ಎಂಟು ಭೇದಗಳಿವೆ.

---

೧೫೧. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ:** (ಪಂಚಮೋಧ್ಯಾಯಂ) ಪು. ೧೦೬
೧೫೨. **ಅದೇ** : (ಪಂಚಮೋಧ್ಯಾಯಂ) ಪು. ೧೦೭
೧೫೩. **ಅದೇ** : (ಪಂಚಮೋಧ್ಯಾಯಂ) ಪುಟ. ೧೧೦
೧೫೪. **ಅದೇ** : (ಪಂಚಮೋಧ್ಯಾಯಂ) ಪುಟ. ೧೧೧

೨. ರಸ: ತಿಕ್ತ (ಕಹಿ), ಕಷಾಯ (ವಗರು) ಖಾರ, ಆಮ್ರ (ಹುಳಿ), ಮಧುರ (ಸಿಹಿ).


೩. ಗಂಧ: ಸುಗಂಧ, ದುರ್ಗಂಧ ಎಂದು ಎರಡು ಭೇದಗಳು.

೪. ವರ್ಣ: ಕೃಷ್ಣ (ಕಪ್ಪು), ನೀಲ, ಕೆಂಪು, ತಾಮ್ರ, ಬಿಳಿ ಎಂದು ಐದು ಮೂಲವರ್ಣಗಳು.

ಪುದ್ಗಲದ ಪರ್ಯಾಯಗಳು: ಶಬ್ದ, ಬಂಧ, ಸೌಕ್ಷ್ಮ, ಸ್ಥೌಲ್ಯ, ಸಂಸ್ಥಾನ, ಭೇದ, ತಮ, ಛಾಯೆ, ಉಷ್ಣ (ಸೂರ್ಯನ ಬೆಳಕು ಬಿಸಿ) ಹಾಗೂ ಉದ್ಯೋತ (ಚಂದ್ರನ ಬೆಳಕು ತಂಪು) ಎಂದು ಹತ್ತು ಭೇದಗಳು.

❖ **ಶಬ್ದ:** ಇದರಲ್ಲಿ ಭಾಷಾತ್ಮಕ ಮತ್ತು ಅಭಾಷಾತ್ಮಕ ಎಂಬ ಶಬ್ದ ಪರ್ಯಾಯದ ಭೇದಗಳಿವೆ. ಈ ವಿವರವನ್ನು ತಿಳಿಸುವಂತೆ ಚಿತ್ರ ೩.೪ರಲ್ಲಿ ಚಿತ್ತರಿಸಲಾಗಿದೆ.

ಚಿತ್ರ ೩.೪



❖ **ಬಂಧ:** ಪ್ರತಿಯೊಂದು ಜೀವ, ಅಜೀವಗಳು ಬಂಧತತ್ತ್ವದಲ್ಲಿ ಪರಸ್ಪರ ಅವಲಂಬಿತವಾಗಿರುತ್ತವೆ. ಇದರ ಕುರಿತು ಚಿತ್ರ ೩.೫ರಲ್ಲಿ ಚಿತ್ರಿಸಲಾಗಿದೆ. ಸಮಾನ ಗುಣದ ವಸ್ತುಗಳಲ್ಲಿ ಬಂಧವು ಏರ್ಪಡುವುದಿಲ್ಲ.


❖ **ಸೌಕ್ಷ್ಮ:** ಇವುಗಳಲ್ಲಿ ಅಂತ್ಯ ಮತ್ತು ಅಪೇಕ್ಷಿತ ಎಂದು ಎರಡು ಭೇದಗಳು.

❖ **ಸ್ಥೌಲ್ಯ:** ಇದರಲ್ಲಿಯೂ ಅಂತ್ಯ ಮತ್ತು ಅಪೇಕ್ಷಿತ ಎಂದು ಎರಡು ಭೇದಗಳು.


➢ ಅಂತ್ಯ: ಜಗದ್ವ್ಯಾಪಿ ಮಹಾಸ್ಕಂಧ.

➢ ಅಪೇಕ್ಷಿತ: ಬದರ (ಬೋರೆಹಣ್ಣು), ಆಮಲಕ (ಆಮ್ಲಯುಕ್ತ, ನಿಂಬೆ ಜಾತಿಯ ಹಣ್ಣು), ಬಿಲ್ವಾದಿಗಳು (ಬೇಲ, ಬಿಲ್ವ ಮುಂ.).

ಚಿತ್ರ ೩.೫



- **ಸಂಸ್ಥಾನ:** ಸಂಸ್ಥಾನವೆಂಬುದು ಆಕೃತಿ ರೂಪದಲ್ಲಿರುವುದು. ಇದರಲ್ಲಿ ಎರಡು ಭೇದಗಳು.
  - ನಿಯಮಿತ: ವೃತ್ತ, ತ್ರಸ್ಯ, ಚತುರಸ್ರ ಮುಂತಾದವು.



  - ಅನಿಯಮಿತ: ಅನೇಕ ವಿಧಗಳು ಇವುಗಳಲ್ಲಿ ನಿರ್ದಿಷ್ಟವಾದ ಆಕಾರವೆಂಬುದಿಲ್ಲ. ಉದಾ: ಮೋಡ, ನೀರು, ಮಂಜು ಇತ್ಯಾದಿ.
- **ಭೇದ:** ಇದರಲ್ಲಿ ಆರು ಪ್ರಕಾರಗಳು:
  - ಉತ್ಕರ: ಕಟ್ಟಿಗೆ, ಎಲೆ, ತಾಳಪತ್ರೆಗಳನ್ನು ಸೀಳುವುದು.
  - ಚೂರ್ಣ: ಹಿಟ್ಟು, ಗೋಧೂಳಿ, ಮಣ್ಣು ಇತ್ಯಾದಿ.
  - ಖಂಡ: ಗಡಿಗೆ, ಮಡಿಕೆಗಳು ಒಂದಕ್ಕೊಂದು ತಾಗುವುದು.
  - ಚೂರ್ಣಿಕಾ: ಹಸಿ ಧಾನ್ಯಗಳ ಚೂರ್ಣ. ಉದಾ: ಉದ್ದು, ಹೆಸರು, ಕಡಲೆಕಾಳು.
  - ಪ್ರತರ: ಮಧ್ಯದಲ್ಲಿ ಒಂದು ಪರದೆಯಿರುವುದು.
  - ಅಣುಚಟನ: ಬಿಸಿ ಪದಾರ್ಥಗಳು.

❖ **ತಮ:** ಯಾವುದು ದೃಷ್ಟಿಯನ್ನು ಪ್ರತಿಬಂಧಿಸುವುದೋ ಅದುವೇ ತಮ. ಅಂದರೆ ಕತ್ತಲು.

❖ **ಛಾಯೆ:** ವರ್ಣಾದಿ ಪ್ರಕಾರಗಳನ್ನು ಪ್ರತಿಬಿಂಬಿಸುವುದು ಛಾಯೆ ಎನಿಸಿಕೊಳ್ಳುತ್ತದೆ.

❖ **ಉಷ್ಣ:** ಸೂರ್ಯನಿಂದ ಹೊರಡುವ ಬಿಸಿ ಬೆಳಕು.

❖ **ಉದ್ಯೋತ:** ಚಂದ್ರನಿಂದ ಹೊರಡುವ ತಂಪಾದ ಬೆಳಕು.

ಹೀಗಿರುವ ಈ ಪುದ್ಗಲಗಳು 'ಅಣು' ಮತ್ತು 'ಸ್ಕಂಧ' ಎರಡು ಭೇದಗಳಲ್ಲಿವೆ.

"ಅಣವಸ್ಕಂಧಾಸ್ಚ ॥೫.೨೫॥"[೧೫೫]

- **ಅಣು:** ದ್ರವ್ಯದ ಅತೀ ಚಿಕ್ಕ ಕಣವು ಅಣುವಾಗುತ್ತದೆ. ಅಣುವನ್ನು ಭೇದಿಸಿದರೆ ಪರಮಾಣುವಾಗುತ್ತದೆ. ಇದಕ್ಕೆ ಆದಿ, ಮಧ್ಯ, ಕೊನೆ ಇರುವುದಿಲ್ಲ. ಇದನ್ನು ಮತ್ತೆ ಭೇದಿಸಲು ಸಾಧ್ಯವಿಲ್ಲ. ಇದು ಸಾಮಾನ್ಯ ದೃಷ್ಟಿಗೋಚರವಾದುದಲ್ಲ.
- **ಸ್ಕಂಧ:** ಪರಮಾಣುಗಳ ನಡುವಿನ ಬಂಧವೇ ಸ್ಕಂಧ. ಸಂಘಾತದಿಂದ ಸ್ಕಂದವಾಗುವುದು. ಎರಡು ಅಥವಾ ಎರಡಕ್ಕಿಂತ ಹೆಚ್ಚು ಪುದ್ಗಲ ದ್ರವ್ಯದ ಅಣುಗಳು ಸೇರಿ ಉಂಟಾಗುವ ದ್ರವ್ಯಕ್ಕೆ ಸ್ಕಂಧ ಎನ್ನುವರು. ಪುದ್ಗಲ ಪರಮಾಣುಗಳಲ್ಲಿರುವ ಸ್ನಿಗ್ಧ ಮತ್ತು ರೂಕ್ಷ ಗುಣಗಳಿಂದಾಗಿ ಬಂಧ ಉಂಟಾಗುತ್ತದೆ. "ಸಮಾನ ಗುಣಗಳಿರುವ ದ್ರವ್ಯಗಳಲ್ಲಿ ಈ ಬಂಧವು ಏರ್ಪಡುವುದಿಲ್ಲ. ಒಂದು ವೇಳೆ ಸ್ನಿಗ್ಧ ಪರಮಾಣುಗಳಲ್ಲಿ ಬಂಧವು ಏರ್ಪಡಬೇಕು. ಅಂದರೆ ಇನ್ನೊಂದು ಸ್ನಿಗ್ಧ ಪುದ್ಗಲ ದ್ರವ್ಯದ ಪರಮಾಣುವಿನೊಂದಿಗೆ ಬಂಧವು ಏರ್ಪಡುತ್ತದೆ. ರೂಕ್ಷ ದ್ರವ್ಯಗಳ ಗುಣವೂ ಹೀಗೆಯೇ ಇರುತ್ತದೆ."[೧೫೬] ಪೃಥ್ವಿ, ನೀರು, ನೆರಳು, ಬೆಳಕು, ಕತ್ತಲು ಇವೆಲ್ಲವೂ ಇದಕ್ಕೆ ಉದಾಹರಣೆಗಳು.

ಹೀಗೆ "ದ್ರವ್ಯ ಮತ್ತು ಶಕ್ತಿಯನ್ನು ಸೂಚಿಸುವ 'ಪುದ್ಗಲ' ಎಂಬ ಪದವೇ ಜೈನ ಸಿದ್ಧಾಂತದಲ್ಲಿ ವಿಶಿಷ್ಟವಾದುದು. ಪುದ್ಗಲ ಎಂಬುದಕ್ಕೆ ಆಕಾರ ಮತ್ತು ರೂಪವಿದೆ. ಅದಕ್ಕೆ ತನ್ನದೇ ಆದ ಬದಲಾವಣೆಗಳಿವೆ. ಶಬ್ದ, ಸಂಲಗ್ನತ್ವ, ಸೂಕ್ಷ್ಮತ್ವ, ಸ್ಥೂಲತ್ವ, ಆಕಾರ, ವಿಭಾಜಕತೆ, ಅಂಧಕಾರ, ಪ್ರತಿರೂಪ, ಕಳೆ ಮತ್ತು ಶಾಖಗಳ ಆಧಾರದಲ್ಲಿ ಘನ, ದ್ರವ, ಅನಿಲಗಳ ಶಕ್ತಿಗಳ ಒಳಗೊಳ್ಳುವ ದ್ರವ್ಯಗಳನ್ನು ಸೂಚಿಸುತ್ತದೆ. ಇದನ್ನೇ ಐನ್‌ಸ್ಟೀನ್ $E=mc^2$ ಎಂಬ ಸಿದ್ಧಾಂತವನ್ನು ನಿರೂಪಿಸಿದ್ದಾನೆ. ಇಲ್ಲಿ ಸೂಚಿಸಿರುವ ಸ್ನಿಗ್ಧತ್ವವೇ 'ಲೋಳೆತನ' ಅಥವಾ 'ಪ್ಲಾಸ್ಮಾ' ಸ್ಥಿತಿ. ರೂಕ್ಷತ್ವವು ಒಣಗಿರುವಿಕೆ. ಇವೆರಡರ ನಡುವೆ ನಡೆಯುವ ಋಣ ವಿದ್ಯುತ್ ಕಣಗಳ ಸಂಯೋಜನೆಯಿಂದಲೇ ದ್ರವ್ಯಗಳು ರೂಪುಗೊಳ್ಳುತ್ತವೆ."[೧೫೭]

---

೧೫೫. ಡಾ. ಹಂಪ ನಾಗರಾಜಯ್ಯ: **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : ಪು. ೧೧೩ (ಪಂಚಮೋಧ್ಯಾಯಂ)
೧೫೬. ಶೇಖರಚಂದ್ರ ಜೈನ (ಹಿಂದಿ), ರತನಚಂದ ಕೋಟಿ (ಕ. ಅನು); **ಜೈನಧರ್ಮ ತಿಳಿಯಿರಿ** : ಪು. ೧೪೫
೧೫೭. ಎಸ್. ಪಿ. ಪದ್ಮಪ್ರಸಾದ್ (ಅನು); **ಜೈನಧರ್ಮಕ್ಕೊಂದು ಕೈಪಿಡಿ** : ಪುಟ. ೮೩

ಪುದ್ಗಲ ಪರಮಾಣುಗಳು ಅತೀ ಸೂಕ್ಷ್ಮವಾಗಿದ್ದು, ಸಾಮಾನ್ಯ ಸೂಕ್ಷ್ಮದರ್ಶಕಕ್ಕೂ ಕಾಣಿಸದಂತಿರುತ್ತವೆ. ಇಂದಿನ ಆಧುನಿಕ ವಿಜ್ಞಾನವು ಭೇದಿಸಲು ಹೊರಟಿರುವ ಸೃಷ್ಟಿಯ ನಿಗೂಢತೆಗಳನ್ನು ಜೈನಾಗಮಗಳು ಸಾವಿರಾರು ವರ್ಷಗಳ ಹಿಂದೆಯೇ ಹೇಳಿದ್ದಾರೆ ಎಂಬುದು ಈ ಮೂಲಕ ಸಾಬೀತಾಗುತ್ತದೆ. ಹೀಗಾಗಿ ಜೈನ ಧರ್ಮವೆಂದರೆ ವಿಜ್ಞಾನಕ್ಕೆ ಹತ್ತಿರವಾದ ಧರ್ಮ ಎಂದು ಹೇಳುವುದರಲ್ಲಿ ಯಾವ ತಪ್ಪಿಲ್ಲ ಎಂಬುದು ನಿಶ್ಚಿತ. "ಹತ್ತೊಂಬತ್ತನೆಯ ಶತಮಾನದ ಕೊನೆಯವರೆಗೂ ಅಣುಗಳು ಜಡತ್ವದಿಂದ ಕೂಡಿದ್ದು, ಅಭೇದ್ಯವಾದವುಗಳು, ಚಟುವಟಿಕೆ ಇಲ್ಲದವುಗಳೆಂದು ಭಾವಿಸಿದ್ದರು. ಆದರೆ ಮುಂದೆ ಅಣುಗಳನ್ನು ಒಡೆಯಬಹುದೆಂದು ಪ್ರಯೋಗದಿಂದ ಸಿದ್ಧಮಾಡಿ ತೋರಿಸಿದರು. ಮೇಲಾಗಿ, ಅವುಗಳು ಬಹಳ ಚುರುಕಾಗಿ ಓಡಾಡುವ ವಿದ್ಯುತ್ ಕಣಗಳ ಸಂಸ್ಥೆಯೆಂದೂ ತೋರಿದ್ದಾರೆ."[೧೫೮] ಅಂತೆಯೇ ಕಾಲಾನಂರತರದ ಸಂಶೋಧನೆಗಳಿಂದ, ಅಂದು ಜೈನಾಗಮದಲ್ಲಿ ಹೇಳಿದ ಅಣು ವಿದಳನ ತತ್ತ್ವವನ್ನೇ ಇಂದಿನ ವಿಜ್ಞಾನಿಗಳು ಪ್ರೋಟಾನ್, ಎಲೆಕ್ಟ್ರಾನ್, ನ್ಯೂಟ್ರಾನ್ ಎಂದು ಹೆಸರಿಸಿದ್ದಾರೆ. ಅಣುಗಳ ಸಂಯೋಗದಿಂದ ದ್ರವ್ಯೋತ್ಪತ್ತಿಯಾಗುವುದು ಎಂದು ವಿಜ್ಞಾನವೂ ಹೇಳುತ್ತದೆ. ಅಣುಗಳ ವಿದಳಣವಾದರೆ ಅಗಾಧವಾದ ಶಬ್ದವೂ, ಅಪ್ರಮಾಣವಾದ ಶಕ್ತಿಯೂ ಬಿಡುಗಡೆಯಾಗುವುದು. ಎರಡು ಭಿನ್ನವಾದ ಅಣುಗಳ ಸಂಯೋಗದಿಂದ ಇನ್ನೊಂದು ಅಣುವು ಹುಟ್ಟುವುದು. ಉದಾ: ನೀರು ಎಂಬ ದ್ರವ್ಯದಲ್ಲಿ ಆಮ್ಲಜನಕ ಒಂದು ಅಣು ಹಾಗೂ ಜಲಜನಕದ ಎರಡು ಅಣುಗಳ ಸಂಯೋಗವಾಗುವುದು. ಹೀಗೆ ಪ್ರತಿಯೊಂದು ಭೌತಿಕ ವಸ್ತುಗಳು ಅಣುಗಳ ಸಂಯೋಗದಿಂದಲೇ ಆಗಿರುವುದು.

೨) ಆಕಾಶ ದ್ರವ್ಯ:

ಇದು ಎಲ್ಲ ದ್ರವ್ಯಗಳಿಗೂ ಆಶ್ರಯತಾಣವಾಗಿದೆ. ಆಕಾಶವು ನಿತ್ಯ, ವ್ಯಾಪಕ ಹಾಗೂ ಅನಂತವೂ ಆಗಿದೆ. ಇದರಲ್ಲಿ ಲೋಕಾಕಾಶ ಮತ್ತು ಅಲೋಕಾಕಾಶಗಳೆಂದು ಎರಡು ಭೇದಗಳಿವೆ. ಲೋಕಾಕಾಶದಲ್ಲಿಯೇ ಎಲ್ಲ ದ್ರವ್ಯಗಳು ಅಡಗಿರುತ್ತವೆ. ಜೀವವು ಎಂದಿಗೂ ಲೋಕಾಕಾಶವನ್ನು ಬಿಟ್ಟು ಹೋಗಲಾರದು. "ಆಕಾಶ ದ್ರವ್ಯವು ಅವಕಾಶವನ್ನು ಕೊಡುವುದಾಗಿದೆ. ಅಂದರೆ ಇದಕ್ಕೆ ಇಂತಿಷ್ಟೇ ಎಂಬ ಪ್ರದೇಶದ ಮಿತಿಯಿಲ್ಲ."[೧೫೯] ಸಾಮಾನ್ಯವಾಗಿ ಗೋಚರಿಸುವ ತಿಳಿನೀಲ ಆಕಾಶವು ಅದು ನಿಜವಾದ ಆಕಾಶವಲ್ಲ. ಕ್ಷುದ್ರ ಅಣುಗಳ ಬಣ್ಣ. ಆಕಾಶವು ಅನಂತವಾಗಿದೆ. "ಆಕಾಶವು ಒಂದು ನಿರ್ಮಲ ಅಂತರಿಕ್ಷ. ಹಾಗೆಯೇ ಅದು ಇತರ ಎಲ್ಲ ಪದಾರ್ಥಗಳಿಗೆ ಸ್ಥಳಾವಕಾಶವನ್ನೊದಗಿಸಿ ಕೊಟ್ಟಿದೆ. ಅದಕ್ಕೆ ರೂಪವಿಲ್ಲ. ಪ್ರಪಂಚದ ಎಲ್ಲ ವಸ್ತುಗಳೂ ಅದರಲ್ಲಿವೆ.

---

೧೫೮. ಮಿರ್ಜಿ ಅಣ್ಣಾರಾಯ : **ಜೈನಧರ್ಮ** ; ಪುಟ. ೪೦೩

೧೫೯. ಶೇಖರಚಂದ್ರ ಜೈನ (ಹಿಂದಿ), ರತನಚಂದ ಕೋಟಿ (ಕ. ಅನು); **ಜೈನಧರ್ಮ ತಿಳಿಯಿರಿ** : ಪು. ೧೪೯

ಜೈನ ಭೌತಶಾಸ್ತ್ರದ (Metaphysics) ಪ್ರಕಾರ ಲೋಕವು ಮೂರು ಪ್ರಕಾರವಾಗಿದೆ. ಊರ್ಧ್ವಲೋಕ, ಮಧ್ಯಲೋಕ ಮತ್ತು ಮಧ್ಯಲೋಕ. ಇದುವೇ ಲೋಕಾಕಾಶ. ಲೋಕಾಕಾಶದಿಂದ ಆಚೆಗೆ ಇರುವುದೇ ಅಲೋಕಾಕಾಶ. ಚಲನಶೀಲತ್ವವಾಗಲಿ, ಜಡತ್ವವಾಗಲೀ ಅಲ್ಲಿಲ್ಲ. ಅದು ಅನಂತವಾದುದು. ಶಾಶ್ವತವಾದುದು."[೧೬೦] ಅಂತೆಯೇ ಮಿರ್ಜಿ ಅಣ್ಣಾರಾಯರು 'ಜೈನಧರ್ಮ' ಗ್ರಂಥದಲ್ಲಿ "ಲೋಕಾಕಾಶವು ಸೀಮಿತವಾಗಿದ್ದು, ಆಕಾಶವು ಅನಂತವಾಗಿದೆ. ಐನ್‌ಸ್ಟೀನ್‌ನ ಸಾಪೇಕ್ಷತಾವಾದದ ಸಿದ್ಧಾಂತದಿಂದ (Theory of Relativity) ಈ ವಿಷಯವು ಸ್ಪಷ್ಟವಾಗುತ್ತದೆ. ವಸ್ತುವಿನ ಸತ್ತೆಯು ಆಕಾಶದ ಸೀಮಾಪರಿಣಾಮಕ್ಕೆ ಕಾರಣವಾಗುವುದು. ವಿಜ್ಞಾನಿಗಳು ಆಕಾಶವನ್ನು ಶೂನ್ಯವೆಂದು ತಿಳಿಯುವುದಿಲ್ಲ. ಆದರೆ ವಿಜ್ಞಾನವು ಆಕಾಶದ ವಿಷಯದಲ್ಲಿ ನಿತ್ಯತೆ, ಅನಾದಿ, ಅನಂತತ್ವ, ವ್ಯಾಪಕತ್ವಗಳನ್ನು ಸ್ವೀಕರಿಸಿದೆ. ಆದರೆ ಆಕಾಶವನ್ನು ಒಂದು ದ್ರವ್ಯವೆಂದು ಮಾತ್ರ ಸ್ವೀಕರಿಸುವುದಿಲ್ಲ."[೧೬೧]

೩) ಧರ್ಮ ದ್ರವ್ಯ:

"ಯಾವ ದ್ರವ್ಯವು ಸ್ವತಃ ನಡೆಯುತ್ತಿರುವ ಜೀವ ಮತ್ತು ಪುದ್ಗಲಗಳ ಗಮನದಲ್ಲಿ ಮಾಡದೇ ಇನ್ನೊಂದು ಪುದ್ಗಲ ದ್ರವ್ಯಕ್ಕೆ ಸಹಾಯಕವಾಗಿದೆಯೋ ಅದುವೇ ಧರ್ಮದ್ರವ್ಯವಾಗಿದೆ."[೧೬೨] ಅದನ್ನೇ ಉಪಕಾರವೆಂದೂ ಕರೆಯುವರು. "ಧರ್ಮ ಎನ್ನುವುದು ಚಲಿಸುತ್ತಿರುವ ಪುದ್ಗಲದ ಚಲನೆಗೆ ಸಹಾಯಕವಾಗಿರುವುದು."[೧೬೩] ಪ್ರತಿಯೊಂದು ಪದಾರ್ಥವು ತನ್ನ ಕ್ರಿಯಾವರ್ತಗಳಿಂದ ಇನ್ನೊಂದರ ಮೇಲೆ ಪ್ರಭಾವವನ್ನು ಬೀರುತ್ತಲೇ ಇರುತ್ತದೆ. ಅದನ್ನು ಉಪಗ್ರಹ ಅಥವಾ ಉಪಕಾರ ಎನ್ನುತ್ತಾರೆ. ಇನ್ನು ಪುದ್ಗಲಗಳಿಂದಾಗುವ ಉಪಕಾರಗಳು ಆಹಾರ, ಶ್ವಾಸೋಚ್ಛ್ವಾಸ, ಶರೀರ ನಿರ್ಮಾಣ, ಮಾತು, ನೀರು ಇವೆಲ್ಲವೂ ಪುದ್ಗಲಗಳಿಂದೊದಗುವ ಉಪಕಾರಗಳು. ಹೀಗಾಗಿಯೇ **"ಪರಸ್ಪರೋಪಗ್ರಹೋ ಜೀವಾನಾಂ ॥೫.೨೧।೦।"**[೧೬೪] ಎಂದು ಹೇಳಾಗಿದೆ. "ವಿಜ್ಞಾನದಲ್ಲಿ ಪ್ರಕಾಶದ (Light) ಅಭ್ಯಾಸಮಾಡುವಾಗ ಪ್ರಕಾಶಕಿರಣಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ Ether of Spaceದ ಮಾಧ್ಯಮದಿಂದ ಹೋಗುತ್ತವೆ. ಕೇವಲ ಶ್ಯೂನ್ಯದಲ್ಲಿ ಹೋಗಲಾರವು. ಈ ಈಥರ್ ಒಂದು ಪದಾರ್ಥ ಅಥವಾ ದೃಶ್ಯವಸ್ತುವೇನೂ ಅಲ್ಲ ಎಂದೂ ಹೇಳಲಾಗುತ್ತದೆ. ಸರ್ವತ್ರ ವ್ಯಾಪಿಸಿದ್ದೂ, ಗಮನಕ್ಕೆ ಸಹಕಾರಿಯೂ ಆಗಿರುವುದು ಈಥರ್

---

೧೬೦. ಎಸ್. ಪಿ. ಪದ್ಮಪ್ರಸಾದ್ (ಅನು); **ಜೈನಧರ್ಮಕ್ಕೊಂದು ಕೈಪಿಡಿ** : ಪುಟ. ೮೬

೧೬೧. ಮಿರ್ಜಿ ಅಣ್ಣಾರಾಯ ; **ಜೈನಧರ್ಮ** : ಪುಟ. ೪೧೧.

"Einstine's Theory of Relativity now offers a way out of this dllemma 'Space is finite but it has no end'. 'Finite but unbounded' is the usual phrase.

೧೬೨. ಶೇಖರಚಂದ್ರ ಜೈನ (ಹಿಂದಿ), ರತನಚಂದ ಕೋಟಿ (ಕ. ಅನು); **ಜೈನಧರ್ಮ ತಿಳಿಯಿರಿ :** ಪು. ೧೪೮

೧೬೩. ಎಸ್. ಪಿ. ಪದ್ಮಪ್ರಸಾದ್ (ಅನು) ; **ಜೈನಧರ್ಮಕ್ಕೊಂದು ಕೈಪಿಡಿ** : ಪುಟ. ೮೫

೧೬೪. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಪಂಚಮೋಧ್ಯಾಯಂ) ಪುಟ ೧೧೧

ಆಗಿದೆ. ಇದು 'ಗತಿಮಾಧ್ಯಮ'ವಾಗಿದೆ. ಆಧುನಿಕರ ಈಥರ್ ಸಿದ್ಧಾಂತದ ಬಹುತೇಕ ಗುಣಗಳೆಲ್ಲವೂ 'ಧರ್ಮದ್ರವ್ಯ'ದಲ್ಲಿವೆ."[೧೬೫]

೪) ಅಧರ್ಮ ದ್ರವ್ಯ:

"ಯಾವ ದ್ರವ್ಯವು ಇನ್ನೊಂದು ದ್ರವ್ಯಕ್ಕೆ ಉದಾಸೀನದಿಂದ ಸಹಾಯಕವಾಗುತ್ತದೆಯೋ ಅದು ಅಧರ್ಮ ದ್ರವ್ಯ. ಇದು ನಿಷ್ಕ್ರಿಯವಾದುದು. ಯಾರಿಗೂ ತಡೆಯೊಡ್ಡುವುದಿಲ್ಲ. ಆದರೆ ಒಂದಕ್ಕೊಂದು ಪುದ್ಗಲಗಳು ಆಕರ್ಷಣೀಯವಾದವುಗಳು. ಇವು ತಮ್ಮಿಂದ ಪರೋಪಕಾರನ್ನೇ ಮೂಲವಾಗಿಸಿಕೊಳ್ಳುವವು. ಇದು ಯಾರ ಕೈಗೂ ಸಿಗಲಾರದು. ಆದುದರಿಂದಲೇ ಇದನ್ನು ಅಧರ್ಮ ದ್ರವ್ಯ ಎನ್ನಲಾಗಿದೆ. ಉದಾ: ನೆರಳು."[೧೬೬] "ಇದೇ ಮಾರ್ಗದಲ್ಲಿ ಪ್ರಯೋಗಗಳು ಬೆಳೆದು ವಸ್ತು-ವಸ್ತುಗಳಲ್ಲಿರುವ ಆಕರ್ಷಣ ಶಕ್ತಿಯಿಂದಲೇ ಜಗತ್ತಿನಲ್ಲಿ ಸ್ಥಿರತೆಯುಂಟಾಗುತ್ತದೆ. ನ್ಯೂಟನ್ ಈ 'ಆಕರ್ಷಣ ಶಕ್ತಿ'ಯ ಸಿದ್ಧಾಂತವನ್ನು ಶೋಧಿಸಿದನು."[೧೬೭]

೫) ಕಾಲ ದ್ರವ್ಯ:

ಒಂದು ಪರಮಾಣುವು ಮಂದಗತಿಯಲ್ಲಿ ಒಂದು ಆಕಾಶಪ್ರದೇಶದಿಂದ ಇನ್ನೊಂದು ಆಕಾಶಪ್ರದೇಶವನ್ನು ಪ್ರವೇಶಿಸಲು ತೆಗೆದುಕೊಳ್ಳುವ ಸಮಯವೇ ಕಾಲವಾಗಿದೆ. "ಎಲ್ಲ ದ್ರವ್ಯಗಳ ಪರಿಣಮನದಲ್ಲಿ ಯಾವುದು ಸಹಕಾರಿಯಾಗಿರುವುದೋ ಅದುವೇ ಕಾಲದ್ರವ್ಯವಾಗಿರುತ್ತದೆ. ವಸ್ತು ಮಾತ್ರದ ಪರಿವರ್ತನೆಯಲ್ಲಿ ಈ ದ್ರವ್ಯವು ಸಹಾಯವಾಗಿರುತ್ತದೆ. ಈ ಪರಿವರ್ತನೆಯು ಸ್ವಾಭಾವಿಕವಾಗಿರುತ್ತದೆ. ಕಾಲಕ್ಕೆ ತನ್ನದೇ ಆದ ಅಸ್ತಿತ್ವವಿದೆ. ಕಾಲದ ಅತೀ ಸಣ್ಣ ಘಟಕವೇ ಸಮಯ. ಅಂತೆಯೇ ಕಾಲದ ಅತಿ ದೊಡ್ಡ ಘಟಕ 'ಮಹಾಕಲ್ಪ'ವಾಗಿದೆ. ಒಂದು ವೇಳೆ ಕಾಲದ್ರವ್ಯದ ಅಭಾವವಾದರೆ ಜಗತ್ತಿನ ವಿಕಾಸವೇ ನಿಂತು ಹೋಗುತ್ತದೆ."[೧೬೮] ಜನಜನಿತ ಅಭಿಪ್ರಾಯದಂತೆ ಕಾಲವು ಸೆಕೆಂಡ್, ನಿಮಿಷ, ಗಂಟೆ, ದಿನ, ವಾರ, ತಿಂಗಳು, ವರ್ಷ ಇವುಗಳಿಂದ ಗುರುತಿಸಲ್ಪಟ್ಟಿರುತ್ತದೆ. ಅದರ ಆಧಾರದ ಮೇಲೆ ಒಂದು ವಸ್ತುವನ್ನು ಹಳತು ಹೊಸತು ಎಂದು ಕರೆಯಲಾಗುತ್ತದೆ. ಅಂತೆಯೇ "ಕಾಲವು ಶಾಶ್ವತವಾದುದು ಮತ್ತು ಅನಂತವಾದುದು. ನೈಜ ಕಾಲದ ಇರುವಿಕೆಯನ್ನು ಒಂದು ವಸ್ತುವಿನಲ್ಲಾಗುವ ಬದಲಾವಣೆಯ ಮೂಲಕ ತಿಳಿಯಬಹುದು."[೧೬೯]

ಹೀಗೆ 'ತತ್ತ್ವಾರ್ಥ ಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯಲ್ಲಿ ಅಜೀವ ದ್ರವ್ಯಗಳ ವಿವರಗಳನ್ನು ತಿಳಿಸಲಾಗಿದೆ. ದ್ರವ್ಯಗಳು ಘನ, ದ್ರವ, ಅನಿಲ ಹಾಗೂ ಗುರುತಿಸಲಾಗದ

---

೧೬೫. ಮಿರ್ಜಿ ಅಣ್ಣಾರಾಯ ; **ಜೈನಧರ್ಮ** : ಪುಟ. ೪೧೨

೧೬೬. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೧೧

೧೬೭. ಮಿರ್ಜಿ ಅಣ್ಣಾರಾಯ ; **ಜೈನಧರ್ಮ** : ಪುಟ. ೪೧೨

೧೬೮. ಶೇಖರಚಂದ್ರ ಜೈನ (ಹಿಂದಿ), ರತನಚಂದ ಕೋಟಿ (ಕ. ಅನು); **ಜೈನಧರ್ಮ ತಿಳಿಯಿರಿ :** ಪು. ೧೫೦

೧೬೯. ಎಸ್. ಪಿ. ಪದ್ಮಪ್ರಸಾದ್ (ಅನು) ; **ಜೈನಧರ್ಮಕ್ಕೊಂದು ಕೈಪಿಡಿ** : ಪುಟ. ೮೭

ರೀತಿಯಲ್ಲಿಯೂ ಇರುತ್ತವೆ. ಹೀಗೆ ಅವೆಲ್ಲವೂ ತಮ್ಮದೇ ಆದ ಗುಣಲಕ್ಷಣಗಳನ್ನು ಹೊಂದಿರುತ್ತವೆ. ಪ್ರಸ್ತುತ ಗ್ರಂಥದಲ್ಲಿ ನಿರೂಪಿಸಿದ ಈ ಎಲ್ಲ ವಿಚಾರಗಳು ಆಧುನಿಕ ವಿಜ್ಞಾನಕ್ಕೆ ತೀರಾ ಹತ್ತಿರವೆಂಬುದು ಅಷ್ಟೇ ಸ್ವೀಕಾರಾರ್ಹವಾಗಿದೆ.

೩.೧.೧.೬. ಆಸ್ರವ

"ಜೈನಧರ್ಮವು ಕರ್ಮ ಸಿದ್ಧಾಂತದ ತಳಹದಿಯ ಮೇಲೆ ನಿಂತಿದೆ."[೧೭೦] ಈ ಕರ್ಮಗಳ ಕಾರಣವಾಗಿಯೇ ಒಳಿತು ಕೆಡುಕುಗಳು ಉಂಟಾಗುವವು. ಜೀವನ ತಾನು ಮಾಡಿದ ಕರ್ಮದ ಫಲಗಳನ್ನು ಈ ಜನ್ಮದಲ್ಲಿ ತೀರಿಸಲು ಆಗಿಲ್ಲದಿದ್ದರೆ ಅವು ಆತನೊಂದಿಗೆ ಮುಂದಿನ ಭವದಲ್ಲಿ ಕೂಡಿಕೊಳ್ಳುತ್ತವೆ. ಅವುಗಳ ಫಲಾಫಲಗಳೇ ತಾನು ಈಗ ಕಳೆಯುವ ದಿನಗಳಾಗಿರುತ್ತವೆ. ಹೀಗಿರುವ ಕರ್ಮಕಾರಣಗಳನ್ನು 'ಆಸ್ರವ' ಎನ್ನಲಾಗುತ್ತದೆ.

"ಆವುದೊಂದಱಿಂ ಕರ್ಮ ಸ್ರವಿಸುಗುಮದಾಸ್ರವಮೆಂದು ಪೇಳೆ ಪಟ್ಟುದವುಂ ಯೋಗದಿನಾಸ್ರವಮಪ್ಪುದಱಿಂ ಅದನೆ ಪೇಳ್ದಪರು

ಕಾಯ ವಾಙ್ಮನಃ ಕರ್ಮಯೋಗಃ ॥೬.೧॥"[೧೭೧]

ಮನ, ಕಾಯ, ವಚನಗಳಿಂದ ಶುಭಾಶುಭಗಳು ಉಂಟಾಗುತ್ತವೆ. ಹೀಗಾಗಿ ಅವುಗಳಿಂದ ಶುಭಾಶುಭ ಆಸ್ರವಗಳುಂಟಾಗುತ್ತವೆ. ಅಂದರೆ ಕರ್ಮಫಲಗಳು ಪ್ರಾಪ್ತವಾಗುತ್ತವೆ ಇಲ್ಲವೇ ಆತ್ಮನನ್ನು ಪ್ರವೇಶಿಸುತ್ತವೆ. ಒಳಿತಿಗೆ ಒಳಿತು. ಕೆಡುಕಿಗೆ ಕೆಡುಕು. ಹೀಗೆ ಒದಗುವ ಫಲಗಳನ್ನು ಯೋಗಗಳು ಎನ್ನುವರು.

"ಎಂತಪ್ಪ ಕರ್ಮಕ್ಕೆ ಎಂತಪ್ಪ ಯೋಗಂ ಕಾರಣಮೆಂದೊಡೆ ಪೇಳ್ದಪರು :

ಕಷಾಯದೊಳ್ಕೂಡಿದನುಂ ಕಷಾಯಮಿಲ್ಲದನುಮೆಂದೀ ಇವರ್ಗಂ ಸಾಂಪರಾಯಿಕಾಸ್ರವಮುಂ ಈರ್ಯಾಪಥಾಸ್ರವಮುಮೆಂಬೀ ಎರಡು ಕ್ರಮದಿನಪ್ಪುವು ॥"[೧೭೨]

ಕಷಾಯ, ಅಕಷಾಯಗಳನ್ನು ಅವಲಂಬಿಸಿ ಇದರಲ್ಲಿ ಸಾಮಪರಾಯಿಕ ಆಸ್ರವ ಮತ್ತು ಈರ್ಯಾಪಥಾಸ್ರವ ಎಂದು ಎರಡು ಪ್ರಕಾರಗಳನ್ನು ಹೇಳಲಾಗುತ್ತದೆ.

೧) ಸಾಂಪರಾಯಿಕಾಸ್ರವ:

"ಸಾಂಪರಾಯವೆಂದರೆ ಸಂಸಾರ. ಅದರ ಪ್ರಯೋಜನವಾಗುಳ್ಳುದೇ ಕರ್ಮಸಾಂಪರಾಯಿಕ. ಕಷಾಯ ನಮನ್ವಿತನಿಗೆ ಸಾಂಪರಾಯಿಕ ಆಸ್ರವಾಗುತ್ತದೆ."[೧೭೩]

"ಸಾಂಪರಾಯಿಕಾಸ್ರವಮಂ ಪೇಳ್ದಪರು :

ಅಯ್ದುಂ ನಾಲ್ಕುಂ ಅಯ್ದುಂ ಇಪ್ಪತ್ತೈದುಂ ಎಂದೀ ಸಂಖ್ಯಾಭೇದವನ್ನುಳ್ಳ ಇಂದ್ರಿಯಂಗಳೂ ಕಷಾಯಂಗಳೂ ಅವ್ರತಂಗಳುಂ ಕ್ರಿಯೆಗಳುಮೆಂದಿವು ಸಾಂಪರಾಯಿಕಾಸ್ರವದ ಭೇದಂಗಳು ॥"[೧೭೪]

---

೧೭೦. ಎಸ್. ಪಿ. ಪದ್ಮಪ್ರಸಾದ್ (ಅನು) ; **ಜೈನಧರ್ಮಕ್ಕೊಂದು ಕೈಪಿಡಿ** : ಪುಟ.೧೧೪

೧೭೧. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಷಷ್ಠಮೋಧ್ಯಾಯಃ) ಪು. ೧೧೭

೧೭೨. **ಅದೇ** : (ಷಷ್ಠಮೋಧ್ಯಾಯಃ) ಪುಟ. ೧೧೮

೧೭೩. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೩೨೨

೧೭೪. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಷಷ್ಠಮೋಧ್ಯಾಯಃ) ಪು. ೧೧೮

ಸಾಂಪರಾಯಿಕ ಆಸ್ರವದಲ್ಲಿ ಈ ಕೆಳಗಿನಂತೆ ಭೇದಗಳು ಬರುತ್ತವೆ.

- ❖ ಪಂಚೇಂದ್ರಿಯಗಳು: ಚಕ್ಷು, ಘ್ರಾನ, ಶ್ರೋತ್ರ, ರಸನ, ಸ್ಪರ್ಶನ.
- ❖ ಕಷಾಯಗಳು: "ಆತ್ಮನನ್ನು ಕರ್ಮಪರಮಾಣುಗಳಿಂದ ಕಟ್ಟುವ ಸುಖ–ದುಃಖಗಳನ್ನು ಉಂಟುಮಾಡುವ ದೋಷಗಳನ್ನು ಕಷಾಯಗಳು ಎನ್ನುವರು."[೧೭೫] ಇದರಲ್ಲಿ ಕ್ರೋಧ, ಮಾನ, ಮಾಯ, ಲೋಭ ಎಂದು ನಾಲ್ಕು ಭೇದಗಳು.
- ❖ ಅವ್ರತಗಳು: ಇದರಲ್ಲಿ ಹಿಂಸೆ, ಚೌರ್ಯ, ಅಸತ್ಯ, ಅಬ್ರಹ್ಮಚರ್ಯ, ಪರಿಗ್ರಹ ಎಂದು ಐದು ಭೇದಗಳು.
- ❖ ಕ್ರಿಯೆಗಳು: ಸಮ್ಯಕ್ತ್ವ, ಮಿಥ್ಯಾತ್ವ, ಪ್ರಯೋಗ, ಸಮಾಧಾನ, ಈರ್ಯಾಪಥ, ಪ್ರದೋಷ, ಕಾಯ, ಅಧಿಕರಣ, ಪರಿತಾಪ, ಪ್ರಾಣಾತಿಘಾತ, ಸ್ಪರ್ಶ, ದರ್ಶನ, ಪ್ರತ್ಯಾಯಿಕ, ಸಮಂತಾನುಪಾತ, ಅನುಭೋಗ, ಸ್ವಹಸ್ತ, ನಿಸರ್ಗ, ವಿದಾರಣ, ಆಜ್ಞಾವ್ಯಾಪಾದನ, ಅನಾಕಾಂಕ್ಷಣ, ಪ್ರಾರಂಭ, ಪರಿಗ್ರಹ, ಮಾಯೆ, ಮಿಥ್ಯಾದರ್ಶನ, ಅಪ್ರತ್ಯಾಖ್ಯಾನ ಹೀಗೆ ಇದರಲ್ಲಿ ಇಪ್ಪತ್ತೈದು ಭೇದಗಳು.

೧. ಸಾಂಪರಾಯಿಕ ಆಸ್ರವದ ವಿಶೇಷಗಳು:

"ತೀವ್ರ ಮಂದ ಜ್ಞಾತಾಜ್ಞಾತ ಭಾವಾಧಿರಣ ವಿರ್ಯೇಭ್ಯಸ್ತದ್ವಿಶೇಷಃ ॥೬.೬॥"[೧೭೬]

- ❖ **ತೀವ್ರಭಾವ**: ಕ್ರೋಧಾದಿ ಆವೇಶಗಳಿಂದ ಇಂದ್ರಿಯಾದಿಗಳಲ್ಲಿ ಉಂಟಾಗುವ ತೀವ್ರತೆ
- ❖ **ಮಂದಭಾವ**: ಮಂದಕ್ರೋಧಭಾವ ವಶದಿಂದ ಉಂಟಾಗುವ ಮಂದಬುದ್ಧಿ.
- ❖ **ಜ್ಞಾತಭಾವ**: ಹಿಂಸಾದಿಗಳ ಕೆಟ್ಟವು ಎಂದು ಗೊತ್ತಿದ್ದರೂ ಅದನ್ನೇ ಮಾಡುವುದು.
- ❖ **ಅಜ್ಞಾತಭಾವ**: ಮದದಿಂದ, ಪ್ರಮಾದದಿಂದ ಅಥವಾ ಅರಿವಿಲ್ಲದೇ ತಪ್ಪು ಮಾಡುವುದು.
- ❖ **ಅಧಿಕರಣ**: ಜೀವ, ಅಜೀವ ದ್ರವ್ಯಗಳ ಮೂಲಕ ಕರ್ಮಪ್ರಾಪ್ತಿಯಾಗುವುದು ಅಧಿಕರಣ ಎನಿಸಿಕೊಳ್ಳುತ್ತವೆ. ಅದರಲ್ಲಿ ಭೇದಗಳು:

- ➢ **ಜೀವಾಧಿಕರಣ:** ಕೊಲೆ ಮೊದಲಾದ ವಿಷಯಗಳಲ್ಲಿ ಉತ್ಸಾಹ ತೋರುವುದು, ಕೊಲ್ಲುವುದು, ಕೊಲೆ ಮಾಡುವಂತೆ ಪ್ರೇರೇಪಿಸುವುದು, ಅನುಮತಿಸುವುದು. ಕ್ರೋಧ, ಮಾನ, ಮಾಯ, ಲೋಭ ಎಂಬ ವಿಶೇಷಗಳಿಂದ ಜೀವಾಧಿಕರಣದ ಭೇದಗಳನ್ನು ಗುರುತಿಸಲಾಗುತ್ತದೆ.

"ಆದ್ಯಂ ಸಂರಂಭ ಸಮಾರಂಭಾರಂಭ ಯೋಗ ಕೃತ
ಕಾರಿತಾನುಮತ ಕಷಾಯ ವಿಶೇಷ್ಯೈ ॥೬.೮॥"[೧೭೭]

---

೧೭೫. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೯೯
೧೭೬. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಷಷ್ಠಮೋಧ್ಯಾಯಃ) ಪು. ೧೧೮
೧೭೭. **ಅದೇ** : (ಷಷ್ಠಮೋಧ್ಯಾಯಃ) ಪುಟ. ೧೧೯

- ಸಂರಂಭ (ಉತ್ಸಾಹ): ಕಾಯಭೇದಗಳು ಕ್ರೋಧಕೃತ, ಮಾನಕೃತ, ಮಾಯಾಕೃತ, ಲೋಭಕೃತ, ಕ್ರೋಧಕಾರಿತ, ಮಾನಕಾರಿತ, ಮಾಯಾಕಾರಿತ, ಲೋಭಕಾರಿತ, ಕ್ರೋಧಾನುಮತ, ಮಾಯಾನುಮತ, ಲೋಭಾನುಮತಕಾಯ ಎಂದು ಹನ್ನೆರಡು ಕಾಯಸಂರಂಭ ಭೇದಗಳಿವೆ. ಹೀಗೆಯೇ ವಾಕ್ ಮತ್ತು ಮನೋಭೇದಗಳು ಕೂಡ ಹನ್ನೆರಡು, ಹನ್ನೆರಡು. ಎಲ್ಲವನ್ನೂ ಸೇರಿಸಿ ಇದರಲ್ಲಿ ಒಟ್ಟು ೩೬ ಭೇದಗಳುಂಟು.
- ಸಮಾರಂಭ: ಹಿಂಸೋಪಕರಣಗಳನ್ನು ಸಂಗ್ರಹಿಸುವುದು. ಇದರಲ್ಲಿಯೂ ಸಂರಂಭಗಳಲ್ಲಿರುವ ಹಾಗೆಯೇ ಮನೋ, ವಾಕ್, ಕಾಯದ ೩೬ ಭೇದಗಳಿವೆ.
- ಆರಂಭ: ಪ್ರಾಣಿಗಳ ದೇಹದಿಂದ ಪ್ರಾಣವನ್ನು ಅಗಲಿಸುವುದು. ಇವು ಮನೋ, ವಾಕ್, ಕಾಯಗಳ ಯೋಗದಿಂದ ನಡೆಯುತ್ತವೆ. ಇಂತಹ ಕಾರ್ಯಗಳನ್ನು ಮಾಡುವುದು, ಮಾಡಿಸುವುದು, ಅದನ್ನು ಒಪ್ಪಿಕೊಳ್ಳುವುದು ಇದರಡಿಯಲ್ಲಿ ಬರುತ್ತವೆ. ಇದರಲ್ಲಿಯೂ ೩೬ ಭೇದಗಳಿವೆ.

ಒಟ್ಟು ಸಂರಂಭ, ಸಮಾರಂಭ ಮತ್ತು ಆರಂಭಗಳ ಜೀವಾಧಿಕರಣ ಭೇದಗಳು ೧೦೮.

- **ಅಜೀವಾಧಿಕರಣ:** ಶರೀರದಿಂದ ಅಥವಾ ಕೈಯಿಂದ ಒಂದು ಉಪಕರಣವನ್ನು ಕೆಳಗೆ ಇಡುವುದರಲ್ಲಿ ನಾಲ್ಕು ರೀತಿಗಳಿವೆ. ೧. ಥಟ್ಟನೆ ಇಡುವುದು ೨. ಹುಷಾರಾಗಿ ಸಾವಧಾನವಾಗಿ ಇಡುವುದು ೩. ರಭಸವಾಗಿ ಎಸೆಯುವುದು ೪. ಮೊದಲು ಎಸೆದು ಆಮೇಲೆ ನೋಡದಿರುವುದು. ಇವುಗಳು ಅನ್ನ, ಪಾನ, ಮನೋ, ವಾಕ್, ಕಾಯ, ನಿರ್ವರ್ತನೆ, ನಿಕ್ಷೇಪ ಹಾಗೂ ಸಂಯೋಗಗಳಿಂದ ಉಂಟಾಗುತ್ತವೆ.

- **ವೀರ್ಯೋಭ್ಯ:** ದ್ರವ್ಯಶಕ್ತಿ.

ಇವು ಸಾಮಾನ್ಯ ಸಾಂಪರಾಯಿಕ ಆಸ್ರವಗಳ ಭೇದಗಳು.

೨) ಜ್ಞಾನವರಣ, ದರ್ಶನಾವರಣ ಆಸ್ರವಗಳು:

ಇನ್ನು ಜ್ಞಾನಾವರಣ ಮತ್ತು ದರ್ಶನಾವರಣ ಕರ್ಮಗಳ ಆಸ್ರವವನ್ನು ಈ ಕೆಳಗಿನಂತೆ ಹೇಳಲಾಗಿದೆ.

"ಜ್ಞಾನದರ್ಶನಂಗಳೊಳಮವನುಳ್ಳರೊಳಪ್ಪ ಮುಳಿಸುಂ ಮಱಸುಗೆಯುಂ ಮಾತ್ಸರ್ಯಮುಂ ವಿಘ್ನಮುಂ ಪಳಿವುದುಂ ಬಾಧೆಯುಮೆಂದಿವು ಜ್ಞಾನಾವರಣೀಯ ದರ್ಶನಾವರಣೀಯಮುಮೆಂಬೀ ಎರಡಾಸ್ರವಂಗಳು"[೧೭೮]

ಇನ್ನೊಬ್ಬರ ಮೇಲೆ ವಿನಾಕಾರಣ ಮುನಿಸಿಕೊಳ್ಳುವುದು, ಕದಿಯುವುದು, ಮತ್ಸರಪಡುವುದು, ಕೆಡುಕನ್ನು ಬಯಸುವುದು, ಹಳಿಯುವುದು, ನೋಯಿಸುವುದು ಇವೆಲ್ಲವೂ

---

೧೭೮. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : ಪುಟ. ೧೨೦ (ಷಷ್ಠಮೋಧ್ಯಾಯಃ)

ಜ್ಞಾನಾವರಣೀಯ,[೧೭೯] ದರ್ಶನಾವರಣೀಯ[೧೮೦] ಎಂಬ ಎರಡು ರೀತಿಯ ಕರ್ಮಾಸ್ರವಗಳು. ಇಂತಹ ವಿಚಾರಗಳನ್ನೇ ೧೨ನೆಯ ಶತಮಾನದಲ್ಲಿ ಬಸವಣ್ಣನವರು ತಮ್ಮ ವಚನವೊಂದರಲ್ಲಿ ವ್ಯಕ್ತಪಡಿಸಿದ್ದಾರೆ.

"ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ"[೧೮೧]

ಇಲ್ಲಿ ಅಂತರಂಗವೆಂಬುದು ಆಂತರಿಕ ಬುದ್ಧಿ ಎಂದುಕೊಂಡರೆ, ಆ ಆಂತರಿಕ ಬುದ್ಧಿ ವಿಚಾರ ಮಾಡುವ ಸಾಮರ್ಥ್ಯವು ಕುಗ್ಗಿದಾಗ, ಅಂದರೆ ಅದರ ನೈಜ ಕಾರ್ಯವು ಸ್ಥಗಿತವಾಗಾದ ಜ್ಞಾನ ಬಲವು ಕಡಿಮೆಯಾಗುವುದು. ಅದಕ್ಕೆ ಭ್ರಮೆಯು ಆವೃತವಾಗುವುದು. ಅದುವೇ ಜ್ಞಾನಾವರಣ. ಮತ್ತೆ ಇದರಲ್ಲಿ ಅಸಾತಾವೇದನೀಯ ಹಾಗೂ ಸಾತಾವೇದನೀಯ ಆಸ್ರವಗಳೆಂದು ಎರಡು ಭೇದಗಳುಂಟು.

೧. **ಅಸಾತಾವೇದನೀಯ ಆಸ್ರವ:** ತನ್ನಲ್ಲಿ, ಅನ್ಯರಲ್ಲಿ ಇಲ್ಲವೇ ಇಬ್ಬರಲ್ಲಿಯೂ ಶೋಕ, ದುಃಖ, ಸಂತಾಪ, ನೋವು, ಆಕ್ರಂದನವನ್ನು ಉಂಟುಮಾಡುವುದು. ಹಾಗೂ ಅನ್ಯ ಜೀವಗಳನ್ನು ಹಿಂಸಿಸಿ ಕೊಲ್ಲುವುದು.

೨. **ಸಾತಾವೇದನೀಯ ಆಸ್ರವ:** ಪ್ರಾಣಿಗಳಲ್ಲಿ ದಯೆಯನ್ನು ತೋರುವುದು. ಸಂಯಮವನ್ನು ವಹಿಸಿಕೊಳ್ಳುವುದು. ನಿರ್ಜರೆ[೧೮೨] ಯನ್ನು ಹೊಂದಿ, ಕ್ಷಮಾ ಗುಣವನ್ನು ಬೆಳೆಸಿಕೊಂಡು, ಸಮಾಧಾನಿಯಾಗಿರುವುದು. ಭೋಗಗಳಲ್ಲಿ ಲಾಲಸೆಯಿಲ್ಲದೆ ಲೋಭಿಯಾಗದೇ ಬದುಕುವುದು.

೩) ದರ್ಶನಮೋಹನೀಯ ಆಸ್ರವ:

ದರ್ಶನಮೋಹನೀಯ ಕರ್ಮಗಳಿಂದಲೂ ಆಸ್ರವವುಂಟಾಗುವುದು.

"ದರ್ಶನಮೋಹನೀಯದಾಸ್ರವಮಂ ಪೇಳ್ದಪರು :

ಕೇವಲಿ ಶ್ರುತ ಸಂಘ ಧರ್ಮದೇವಾವರ್ಣವಾದೋ ದರ್ಶನಮೋಹಸ್ಯ ||೬.೧೩||"[೧೮೩]

---

೧೭೯. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ :** ಪುಟ.೧೪೨
ಜ್ಞಾನಾವರಣ = ಜ್ಞಾನಕ್ಕೆ ಪ್ರತಿಬಂಧಕವಾದ ಕರ್ಮ. ಜ್ಞಾನವನ್ನು ಆವರಿಸುವುದು. ಅಂದರೆ ಒಳ್ಳೆಯ ಕರ್ಮಗಳನ್ನು ಮಾಡದಂತೆ ಜ್ಞಾನವನ್ನು ಆವರಿಸಿ ವಿಚಾರ ಶಕ್ತಿಯನ್ನು ಕುಂದಿಸುವುದು.

೧೮೦. **ಅದೇ** : ಪುಟ. ೧೫೯. **ದರ್ಶನಾವರಣೀಯ** = ಆತ್ಮನ ದರ್ಶನ ಶಕ್ತಿಯನ್ನು ಮರೆಮಾಚುವುದು. ಅಂತರಂಗ ಪದಾರ್ಥದ ಅರಿವಿನ ಪ್ರತಿರೋಧಕವಾಗಿದೆ.

೧೮೧. ಸಂ. ಡಾ. ವೀರಣ್ಣ ರಾಜೂರ : **ವಚನಗಳಲ್ಲಿ ವಿಜ್ಞಾನ** : ಪುಟ.೨೯

೧೮೨. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ :** ಪುಟ. ೧೯೫
ನಿರ್ಜರ = ಕರ್ಮವನ್ನು ಆತ್ಮಪ್ರದೇಶದಿಂದ ಹೊರಹಾಕುವುದು. ಅಂದರೆ ಪೂರ್ವಬದ್ಧ ಕರ್ಮವನ್ನು ಹೊರಹಾಕುವುದು ನಿರ್ಜರೆಯಾಗಿದೆ.

೧೮೩. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಷಷ್ಟಮೋಧ್ಯಾಯಃ) ಪು. ೧೨೧

೧. ಕೇವಲಿ: ಕೇವಲಿಗಳು ಆಹಾರಜೀವಿಗಳೆಂದು ನಂಬುವುದು ಮತ್ತು ಇತರರಿಗೆ ಹಾಗೆಯೇ ಹೇಳುವುದು.

೨. ಶ್ರುತ: ಮಾಂಸಭಕ್ಷಣವು ಸರಿಯೆಂದು ಹೇಳುವುದು.

೩. ಸಂಘ: ಪವಿತ್ರವಾದ ರತ್ನತ್ರಯಗಳನ್ನು ಅವಹೇಳನ ಮಾಡುವ ಚಾತುರ್ವರ್ಣ ಸಂಘಗಳು.

೪. ಧರ್ಮ: ಜಿನಧರ್ಮವನ್ನು ಅವಹೇಳನ ಮಾಡುವುದು.

೫. ದೇವ: ದೇವರು ಮದ್ಯ ಮಾಂಸಗಳನ್ನು ಸ್ವೀಕರಿಸುತ್ತಾರೆ ಎಂದು ಹೇಳುವುದು.

೬. ಅವರ್ಣನಾ: ಅನ್ಯರನ್ನು ಹಳಿಯುವುದು, ನಿಂದಿಸುವುದು.

ಹೀಗೆ ತತ್ತ್ವಾರ್ಥದಲ್ಲಿರುವ ಶ್ರದ್ಧೆಯನ್ನು ಹಾಳುಮಾಡುವುದು ಮತ್ತು ಪ್ರೇರೇಪಿಸುವುದು ದರ್ಶನ ಮೋಹನೀಯ ಆಸ್ರವವಾಗಿದೆ.

೪) ಚಾರಿತ್ರ ಮೋಹನೀಯ ಆಸ್ರವ:

"ಕಷಾಯೋದಯದಿನಾದ ತೀವ್ರಮಪ್ಪ ಪರಿಣಾಮಂ ಚಾರಿತ್ರಮೋಹನೀಯದಾಸ್ರವ ಕಾರಣಮಕ್ಕುಂ"[೧೮೪]

ಕಷಾಯೋತ್ಪತ್ತಿಯ ತೀವ್ರ ಪರಿಣಾಮವಾಗಿ ಚಾರಿತ್ರ ಮೋಹನೀಯ ಆಸ್ರವವು ಉಂಟಾಗುವುದು. ಇದು ಆಚಾರ ದೋಷಯುತವಾದ ಗುಣವನ್ನುಂಟು ಮಾಡುತ್ತದೆ. ಇದರಲ್ಲಿನ ಭೇದಗಳು:

೧. ಕಷಾಯವೇದನೀಯ ಆಸ್ರವಗಳು: ಇದರಲ್ಲಿ ಸ್ವಪರ, ಕಷಾಯೋತ್ಪಾದನ, ತಪಸ್ವೀ ಜನವೃತ್ತದೂಷಣ, ಸಂಕ್ಲಿಷ್ಟಲಿಂಗ ವ್ರತಧಾರಣ ಎಂದು ಉಪಭೇದಗಳಾಗಿವೆ.

೨. ಹಾಸ್ಯವೇದನೀಯ ಆಸ್ರವಗಳು: ಉಪಹಾಸ, ಅತಿಹಾಸ, ಬಹು ವಿಪ್ರಾಲೋಪಹಾಸ, ಶೀಲತಾದಿಹಾಸಗಳು ಇದರ ಭೇದಳಾಗಿವೆ.

೩. ರತಿವೇದನೀಯ ಆಸ್ರವಗಳು: ವಿಚಿತ್ರ ಕ್ರೀಡಾಪರತೆ, ವ್ರತಶೀಲ, ಅಧಿಕ ರುಚಿಗಳು ಇದರಲ್ಲಿನ ಉಪಭೇದಳಾಗಿವೆ.

೪. ಅರತಿವೇದನೀಯ ಆಸ್ರವಗಳು: ಪರಾರತಿ ದುರ್ಭಾವನೆ, ರತಿವಿನಾಶನ, ಪಾಪಶೀಲ ಸಂಸರ್ಗ, ಕುಶಲ ಕ್ರಿಯಾಪ್ರೋತ್ಸಾಹಗಳು ಇದರ ಭೇದಳಾಗಿವೆ.

೫. ಶೋಕವೇದನೀಯ ಆಸ್ರವಗಳು: ಸ್ವಶೋಕೋತ್ಪಾದನ, ಪರಶೋಕ ಸ್ತುತಾಭಿಮಾನ ಇದರ ಭೇದಳಾಗಿವೆ.

೬. ಭಯವೇದನೀಯ ಆಸ್ರವಗಳು: ಸ್ವಭಯ ಪರಿಣಾಮ, ಪರ ಭಯೋತ್ಪಾದನ, ನಿರ್ದಯತ್ವ, ತ್ರಾಸನಗಳು ಇದರಲ್ಲಿನ ಭೇದಳಾಗಿವೆ.

---

೧೮೪. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಷಷ್ಠಮೋಧ್ಯಾಯಃ) ಪು. ೧೨೧

೭. ಜುಗುಪ್ಸಾವೇದನೀಯ ಆಸ್ರವಗಳು: ಅಕುಶಲ ಕ್ರಿಯಾಚಾರ, ಪರಿವಾದ ಶೀಲತ್ವಗಳು ಇದರಲ್ಲಿನ ಭೇದಳಾಗಿವೆ.

೮. ಸ್ತ್ರೀವೇದನೀಯ ಆಸ್ರವಗಳು: ಅಭಿದಾಯಿತ್ವ, ಸಂಧಾನ ಪರತ್ವ, ಪ್ರವೃದ್ಧರಾಗ, ಪರಾಂಗನ ಆಗಮನ ಆದರಗಳು ಇದರಲ್ಲಿನ ಭೇದಳಾಗಿವೆ.

೯. ಪುರುಷವೇದನೀಯ ಆಸ್ರವಗಳು: ಸ್ತೋಕ, ಕ್ರೋಧ, ಉತ್ಸಿಕ್ತ (ಕೊಬ್ಬಿದ), ಸ್ವದಾರ ಸಂತೋಷಗಳು ಇದರಲ್ಲಿನ ಭೇದಳಾಗಿವೆ.

೧೦. ನಪುಂಸಕವೇದನೀಯ ಆಸ್ರವಗಳು: ಪ್ರಚುರಕಷಾಯ, ಗುಹ್ಯೇಂದ್ರಿಯ ವ್ಯಪರೋಹಣ, ಸ್ತ್ರೀಪುಂಸಾಂಗ ವ್ಯಸನಿತ್ವ, ಪರಾಂಗನಾವಸ್ಕಂಧನ, ರಾಗತೀವ್ರಾನಾಚಾರ ಇವುಗಳು ಇದರ ಉಪಭೇದಳಾಗಿವೆ.

೫) ಅಶುಭ ಕರ್ಮದಾಸ್ರವಗಳು:

"ಅಶುಭ ನಾಮ ಕರ್ಮದಾಸ್ರವ ಕಾರಣಮಂ ಪೇಳ್ದಪರು:
ಯೋಗವಕ್ರತಾವಿಸಂವಾದನಂ ಚಾಶುಭಸ್ಯ ನಾಮ್ನಃ ॥೬.೨೨॥"[೧೮೫]

೧. ಯೋಗವಕ್ರತಾ: ಸ್ವಗತ ಕಾಯ, ಮನೋ, ವಾಕ್ ಯೋಗಗಳಿಂದ ಕುಟಿಲತೆಗಳಲ್ಲಿ ತೊಡಗಿಕೊಳ್ಳುವುದು.

೨. ವಿಸಂವಾದನ: ಪರಗತ ಕಾಯ, ಮನೋ, ವಾಕ್ ಯೋಗಗಳಿಂದ ಅನ್ಯರನ್ನು ಪ್ರೇರೇಪಿಸುವುದು. ಮಿಥ್ಯಾದರ್ಶನ, ಪರನಿಂದಾತ್ಮಕ ವಿಷಯಗಳಲ್ಲಿ ತೊಡಗಿಸಿಕೊಳ್ಳುವುದು. ಅನ್ಯರ ಒಳಿತನ್ನು ದೂರುವುದು.

ಈ ಯೋಗಗಳಿಂದ ಪಾಪಾಸ್ರವವು ಪ್ರಾಪ್ತವಾಗುತ್ತದೆ.

೬) ಶುಭ ಕರ್ಮದಾಸ್ರವಗಳು:

"ತದ್ವಿಪರೀತಂ ಶುಭಸ್ಯ ॥೬.೨೩॥"[೧೮೬]

ಈ ಯೋಗಗಳಿಂದ ಪುಣ್ಯಾಸ್ರವವು ಉಂಟಾಗುವುದು. ವಿನಯ ಸಂಪನ್ನತಾ, ಕಷಾಯ,[೧೮೭] ನೋಕಷಾಯ[೧೮೮]ಗಳಿಂದ ನಿವೃತ್ತಿ, ಶೀಲವ್ರತ, ಅನತಿಚಾರ, ಅಭೀಷ್ಣ, ಜ್ಞಾನೋಪಯೋಗ, ಧರ್ಮಾನುರಾಗ, ಸಂಸಾರಭೀರುತ್ವ, ಶಕ್ತಿತಃ, ತ್ಯಾಗ, ತಪಸೀ, ಸಾಧುಸಮಾಧಿ (ಮುನಿಗಳ ತಪೋಭಂಗ ಮಾಡುವವರನ್ನು ತಡೆಯುವುದು), ವೈಯಾವೃತ್ಯಕರಣ (ಉತ್ತಮರಿಗೆ ದುಃಖವುಂಟಾದರೆ ಅವರನ್ನು ರಮಿಸುವುದು), ಭಕ್ತಿ, ಆವಶ್ಯಕ ಪರಿಹಾಣಿ, ಮಾರ್ಗ ಪ್ರಭಾವನಾ

---

೧೮೫. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಷಷ್ಟಮೋಧ್ಯಾಯಃ) ಪು. ೧೨೪

೧೮೬. **ಅದೇ** : (ಷಷ್ಟಮೋಧ್ಯಾಯಃ) ಪುಟ. ೧೨೪

೧೮೭. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೯೫
ಕಷಾಯ = ರಾಗದ್ವೇಷಗಳ ನಿಮಿತ್ತದಿಂದ ಕಾರ್ಮಣ ವರ್ಗಗಳು ಆತ್ಮಪ್ರದೇಶವನ್ನು ಸೇರುವುದು.

೧೮೮. **ಅದೇ** : ಪುಟ. ೨೦೧; **ನೋಕಷಾಯ** = ಕಿಂಚಿತ್ ಕಷಾಯಗಳನ್ನು ನೋಕಷಾಯಗಳು ಎನ್ನುವರು. ಇವುಗಳಲ್ಲಿ ಒಂಭತ್ತು ಭೇದಗಳು: ಹಾಸ್ಯ, ರತಿ, ಅರತಿ, ಶೋಕ, ಭಯ, ಜಿಗುಪ್ಸೆ, ಸ್ತ್ರೀವೇದ, ಪುಂವೇದ, ನಪುಂಸಕವೇದ.

(ಜ್ಞಾನ, ತಪ, ಪೂಜಾವಿಧಾನಗಳಿಂದ ಧರ್ಮವನ್ನು ಬೆಳಗುವುದು), ಪ್ರವಚನವತ್ಸಲತ್ವಮಿತಿ, ಷೋಡಶ ಭಾವನೆಗಳು.

೨. **ನೀಚಗೋತ್ರದ ಆಸ್ರವಗಳು:** ಇದರಲ್ಲಿ ಪರರನ್ನು ಹಳಿಯುವುದು, ಆತ್ಮ ಪ್ರಶಂಸೆ ಮಾಡಿಕೊಳ್ಳುವುದು ಎಂದು ಎರಡು ಭೇದಗಳು.

೩. **ಉಚ್ಚಗೋತ್ರದ ಆಸ್ರವಗಳು:** ವಿನಯವೃತ್ತಿ, ಅಷ್ಟಮದಗಳನ್ನು ಪರಿಹರಿಸಿಕೊಳ್ಳುವುದು ಇದರಲ್ಲಿರುವ ಭೇದಗಳು.

೪. **ಅಂತರಾಯದ ಆಸ್ರವ:** ದಾನಾದಿ ಕಾರ್ಯಗಳಿಗೆ ವಿಘ್ನವನ್ನುಂಟು ಮಾಡುವುದು.

ಹೀಗೆ ಕರ್ಮಗಳ ಫಲಗಳಿಂದ ಪುಣ್ಯಾಸ್ರವ ಹಾಗೂ ಪಾಪಾಸ್ರವಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ಮಾರ್ಮಿಕವಾಗಿ ವಿವರಿಸಲಾಗಿದೆ. ಒಟ್ಟಿನಲ್ಲಿ ಉತ್ತಮ ಕಾರ್ಯಗಳಿಗೆ ಮಾಡುವುದರಿಂದ ಶುಭ ಕರ್ಮಫಲಗಳೂ, ದುಷ್ಟಕಾರ್ಯಗಳಿಗೆ ಅಶುಭ ಕರ್ಮಫಲಗಳೂ ಲಬ್ಧಿಯಾಗುತ್ತವೆ.

೭) ಅಣುವ್ರತಗಳು:

ಜೈನಧರ್ಮವು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹ ಎಂಬ ಪಂಚಾಣುವ್ರತಗಳನ್ನು ಅವಲಂಬಿಸಿ ನೆಲೆಯಾಗಿರುವುದು. ಅದರನ್ವದಾರನನ್ನು ವ್ರತಿ, ವ್ರತಿಕ ಎಂದು ಕರೆಯಲಾಗುತ್ತದೆ. ಅವುಗಳನ್ನು ಪಾಲನೆ ಮಾಡದಿರುವವನ್ನು ಅವ್ರತಿ ಎಂದು ಕರೆಯಲಾಗುತ್ತದೆ. ಹೀಗಿರುವ ಈ ಪಂಚಾಣುವ್ರತಗಳ ಲಕ್ಷಣಾದಿಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

"ಹಿಂಸಾನೃತಸ್ತೇಯಾಬ್ರಹ್ಮ ಪರಿಗ್ರಹೇಭ್ಯೋ ವಿರತಿರ್ವ್ರತಂ ॥೭.೧॥"[೧೮೯]

ಹಿಂಸಿಸುವುದು, ಸುಳ್ಳಾಡುವುದು, ಕಳ್ಳತನ ಮಾಡುವುದು, ವಿಷಯಾಸಕ್ತಿಯನ್ನು ಹೊಂದುವುದು, ಅತಿಸಂಗ್ರಹವೆಂಬ ಈ ವಿಷಯಗಳಿಂದ ನಿವೃತ್ತಿ ಅಥವಾ ವಿರತಿ ಹೊಂದುವುದೇ ವ್ರತವೆನಿಸಿಕೊಳ್ಳುವುದು. ಇದರಲ್ಲಿ ಅಣುವ್ರತ ಮತ್ತು ಮಹಾವ್ರತಗಳೆಂದು ಭೇದಗಳು.

ಅಣುವ್ರತಗಳು ಐದು. ಅವು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹ. ಇವುಗಳನ್ನು ಪಂಚಾಣುವ್ರತಗಳೆಂದು ಕರೆಯಲಾಗುತ್ತದೆ.

೧. ಅಣುವ್ರತದ ಭಾವನೆಗಳು:

"ಅವಂ ದೃಢ ಮಾಡಲುವೇಡಿ ಕಾರಣ ವಿಶೇಷಂ ಪೇಳ್ದಪರು :
ತತ್ ಸ್ಥೈರ್ಯಾರ್ಥಂ ಭಾವನಾಃ ಪಂಚ ಪಂಚ ॥೭.೩॥"[೧೯೦]

ಐದು ಅಣುವ್ರತಗಳಲ್ಲಿ ಮತ್ತೆ ಐದೈದು ಭಾವನೆಗಳಿವೆ.

೧೮೯. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ಸಪ್ತಮೋಧ್ಯಾಯಃ) ಪು. ೧೨೬
೧೯೦. **ಅದೇ :** (ಸಪ್ತಮೋಧ್ಯಾಯಃ) ಪು. ೧೨೭

೨. ಅಹಿಂಸಾವ್ರತದ ಭಾವನೆಗಳು :

- ❖ ವಚನಗುಪ್ತಿ: ಮೌನವಾಗಿರುವುದು.
- ❖ ಮನೋಗುಪ್ತಿ: ರಾಗದ್ವೇಷಗಳಿಂದ ಮನಸ್ಸು ವಿಮುಖವಾಗುವುದು.
- ❖ ಈರ್ಯಾಸಮಿತಿ: ಸೂಕ್ಷ್ಮಜೀವಿಗಳಿಗೆ ಹಿಂಸೆಯಾಗದಂತೆ ನಡೆದುಕೊಳ್ಳುವುದು
- ❖ ಆದಾನನಿಕ್ಷೇಪ ಸಮಿತಿ: ಪ್ರಾಣಿ ಹಿಂಸೆಯಾಗದಂತೆ ಉಪಕರಣಗಳನ್ನು ಕೆಳಗಿಡುವಾಗ ಜೋಪಾನವಾಗಿ ಇಡುವುದು.
- ❖ ಆಲೋಕಿತಪಾನ–ಭೋಜನ: ಸೂರ್ಯಾಸ್ತದ ಒಳಗಾಗಿ ಪಾನ–ಭೋಜನಗಳನ್ನು ಮುಗಿಸುವುದು. ಯಾವುದೇ ರೀತಿಯಲ್ಲಿ ಜೀವ ಹಿಂಸೆಯಾಗಬಾರದೆಂಬ ಸೂಕ್ಷ್ಮ ವಿಚಾರವನ್ನು ಈ ಮೂಲಕ ವ್ಯಕ್ತಪಡಿಸುವುದಾಗಿದೆ.

೩. ಸತ್ಯವ್ರತದ ಭಾವನೆಗಳು:

- ❖ ಕ್ರೋಧಪ್ರತ್ಯಾಖ್ಯಾನ: ಸಿಟ್ಟನ್ನು ತೊರೆಯುವುದು.
- ❖ ಲೋಭಪ್ರತ್ಯಾಖ್ಯಾನ: ಲೋಭವನ್ನು ತೊರೆಯುವುದು
- ❖ ಭೀರುತ್ವ ಪ್ರತ್ಯಾಖ್ಯಾನ: ಭಯವನ್ನು ತೊರೆಯುವುದು.
- ❖ ಹಾಸ್ಯಪ್ರತ್ಯಾಖ್ಯಾನ: ಹಾಸ್ಯವನ್ನು ತೊರೆಯುವುದು.
- ❖ ಅನುವೀಚಿ ಭಾಷಣ: ನಿಷೇಧಿತ ಪದಗಳನ್ನು ಬಳಸಿ ಮಾತನಾಡದಿರುವುದು.

೪. ಅಸ್ತೇಯವ್ರತದ ಭಾವನೆಗಳು:

- ❖ ಶ್ಯೂನ್ಯಾಗಾರವಾಸ: ಗಿರಿ, ಗುಹೆ, ವೃಕ್ಷಾದಿಗಳಲ್ಲಿ ವಾಸಿಸುವುದು.
- ❖ ವಿಮೋಚಿತಾವಾಸ: ಜನವಾಸಗಳಿರುವಲ್ಲಿ ವಾಸಿಸದಿರುವುದು.
- ❖ ಪರೋಪರೋಧಾಕರಣ: ಪರರಿಗೆ ತೊಂದರೆಯಾಗದಂತಿರುವುದು.
- ❖ ಭೈಕ್ಷಶುದ್ಧಿ: ಆಚಾರ ಶಾಸ್ತ್ರೋಕ್ತ ಮಾರ್ಗವನ್ನು ಅನುಸರಿಸುವುದು.
- ❖ ಸಧರ್ಮ ವಿಸಂವಾದ: ಸ್ವ ಧರ್ಮದವರೊಡನೆ ಪುಸ್ತಕಾದಿಗಳಿಗಾಗಿ ನನ್ನದು ನಿನ್ನದು ಎಂದು ಭಾವನೆಯನ್ನು ತೋರದಿರುವುದು.

೫. ಬ್ರಹ್ಮಚರ್ಯವ್ರತದ ಭಾವನೆಗಳು:

- ❖ ಸ್ತ್ರೀರಾಗ ಕಥಾ ಶ್ರವಣತ್ಯಾಗ: ಅನ್ಯಲಿಂಗಗಳ ವಿಷಯಕ್ಕೆ ಸಂಬಂಧಿಸಿ ಕಥೆಗಳನ್ನು ಕೇಳುವುದನ್ನು ತೊರೆಯುವುದು.
- ❖ ಅಂಗ ನಿರೀಕ್ಷಣ ತ್ಯಾಗ: ಅನ್ಯಲಿಂಗಗಳಲ್ಲಿ ರಾಗಕ್ಕೆ ಪ್ರತಿಸ್ಪಂದಿಸುವ ಅಂಗಾಂಗಗಳನ್ನು ನೋಡುವುದನ್ನು ತೊರೆಯುವುದು.

❖ ಪೂರ್ವರತಾನುಸ್ಮರಣ ತ್ಯಾಗ: ಹಿಂದೆ ರತಿ ರಾಗ ವಿಷಯಗಳಲ್ಲಿ ತೊಡಗಿಸಿಕೊಂಡದನ್ನು ನೆನೆಸಿಕೊಳ್ಳದಿರುವುದು.

❖ ವೃಷೇಷ್ಟ ರಸತ್ಯಾಗ: ಇಂದ್ರಿಯಗಳ ನಿಯಂತ್ರಣ ಮಾಡುವುದು.

❖ ಸ್ವಶರೀರ ಸಂಸ್ಕಾರ ತ್ಯಾಗ: ತನ್ನ ಶರೀರದ ಅಂಗ ಸೌಷ್ಠವದ ಕಡೆಗೆ ಗಮನ ಕೊಡದಿರುವುದು.

೬. **ಅಪರಿಗ್ರಹವ್ರತದ ಭಾವನೆಗಳು:**

❖ ಮನೋಜ್ಞ: ಇಷ್ಟವಾದ ವಸ್ತುಗಳನ್ನು ಸಂಗ್ರಹಿಸದಿರುವುದು.

❖ ಅಮನೋಜ್ಞ: ಇಷ್ಟವಲ್ಲದ ವಸ್ತುಗಳನ್ನು ಸಂಗ್ರಹಿಸದಿರುವುದು.

❖ ಇಂದ್ರಿಯ ವಿಷಯ: ಪಂಚೇಂದ್ರಿಯಗಳ ಇಷ್ಟ ವಿಷಯಗಳನ್ನು ತೊರೆಯುವುದು.

❖ ರಾಗ ವರ್ಜನೆ: ವಿಷಯ ರಾಗಗಳನ್ನು ತೊರೆಯುವುದು.

❖ ದ್ವೇಷ: ಮನಸ್ಸಿನಲ್ಲಿನ ದ್ವೇಷವನ್ನು ತೊರೆಯುವುದು.

ಲೋಕ ಸ್ವಭಾವದಿಂದ ಜೀವನು ಅನಾದಿ ನಿಧನ. ಅಧೋಲೋಕ, ಮಧ್ಯಲೋಕ, ಊರ್ಧ್ವಲೋಕಗಳಲ್ಲಿ ಸಂಸಾರಾದಿಗಳಲ್ಲಿ ತೊಳಲುತ್ತ, ಅನಂತಕಾಲದಿಂದ ನಾನಾ ವಿಧ ಯೋನಿಗಳಲ್ಲಿ ಜನಿಸಿ ಅನೇಕ ವಿಧ ದುಃಖಗಳನ್ನು ಅನುಭವಿಸುತ್ತ ಸಾಗುವನು. ಇಂತಹ ಭವಗಳಲ್ಲಿ ಆಯುಷ್ಯವು ನೀರಿನ ಮೇಲಿನ ಗುಳ್ಳೆಯಂತೆ, ಕಾಮನಬಿಲ್ಲಿನಂತೆ, ಮಿಂಚಿನಂತೆ ಕ್ಷಣಿಕವಾದುದು. ಹೀಗಿರುವಾಗ ನಿಸ್ಸಾರವಾದ ದೇಹದ ಮೇಲೆ ಆದರವನ್ನು ತೋರದೇ ಇರುವುದು ಉತ್ತಮ ಗುಣವಾಗಿದೆ. ಆದುದರಿಂದ ಪಂಚಾಣುವ್ರತಗಳ ಪರಿಪಾಲನೆ ಮುಖ್ಯವಾಗುತ್ತದೆ ಎಂದು ಹೇಳುತ್ತಾನೆ.

೭. **ಅವ್ರತದ ಲಕ್ಷಣಗಳು:** .

ಅಣುವ್ರತಗಳನ್ನು ಪಾಲಿಸುವ ಮೊದಲು ಹಿಂಸಾದಿ ಅವ್ರತಗಳ ಲಕ್ಷಣಗಳನ್ನು ಅರಿಯಬೇಕು.

❖ **ಹಿಂಸೆ:** ಹದಿನೈದು ಪ್ರಮಾದಗಳ ಪರಿಣಾಮದಿಂದ ಮನೋ, ವಾಕ್, ಕಾಯಗಳ ಮೂಲಕ ಪ್ರಾಣಿ ಮುಂತಾದ ಜೀವಿಗಳ ದೇಹದಿಂದ ಪ್ರಾಣವನ್ನು ತೆಗೆಯುವುದು.

❖ **ಅನೃತ (ಅಸತ್ಯ):** ಜೀವಿಗಳಿಗೆ ದುಃಖವನ್ನುಂಟು ಮಾಡುವಂತೆ ಸುಳ್ಳನ್ನಾಡುವುದು.

❖ **ಸ್ತೇಯ:** ಹಳ್ಳಿಯ ಬೀದಿ, ಜನರು ಇರದ ಪ್ರದೇಶದಲ್ಲಿ, ರಾಜಬೀದಿಗಳಲ್ಲಿ ಬಿದ್ದ, ಮರೆತ, ಬಚ್ಚಿಟ್ಟ, ಎಸೆದ ಧನ–ಕನಕ, ಮುತ್ತು–ಮಾಣಿಕ್ಯ, ವಸ್ತ್ರಾದಿಗಳನ್ನು ತೆಗೆದುಕೊಳ್ಳುವುದು ಇಲ್ಲವೇ ಕದಿಯುವುದು.

❖ **ಅಬ್ರಹ್ಮ:** ಅನ್ಯ ಸ್ತ್ರೀ ಪುರುಷರಲ್ಲಿ ಮೈಥುನವನ್ನು ಹೊಂದುವುದು.

❖ **ಪರಿಗ್ರಹ:** ಇದರಲ್ಲಿ ಬಹಿರಂಗ ಪರಿಗ್ರಹ ಮತ್ತು ಅಂತರಂಗ ಪರಿಗ್ರಹವೆಂದು ಎರಡು ಭೇದಗಳಿವೆ.

➢ **ಬಹಿರಂಗ ಪರಿಗ್ರಹ:**

"ಕ್ಷೇತ್ರಂ ವಾಸ್ತು ಧನಂ ಧಾನ್ಯಂ ದ್ವಿಪದಂ ಚ ಚತುಷ್ಪದಂ
ಯಾನಂ ಶಯ್ಯಾಸನಂ ಕುಪ್ಯಂ ಭಾಂಡಂಚೇತಿ ಬಹಿರ್ದಶ ॥೭.೧೮॥"[೯೧]

ಭೂಮಿ, ಮನೆ, ಹಣ, ಹೊನ್ನು, ಧಾನ್ಯ, ಎರಡು ಕಾಲಿನ (ಮನುಷ್ಯ) ಮತ್ತು ನಾಲ್ಕು ಕಾಲಿನ (ಪ್ರಾಣಿಗಳು) ಜೀವಿಗಳನ್ನು, ಪೀಠೋಪಕರಣ, ಹಾಸಿಗೆ, ಆಸನ, ಬಟ್ಟೆಗಳನ್ನು ಅಗತ್ಯಕ್ಕಿಂತ ಹೆಚ್ಚು ಸಂಗ್ರಹಿಸುವುದು ಎಂಬಿವು ಹತ್ತು ಬಹಿರಂಗ ಪರಿಗ್ರಹಗಳಾಗಿವೆ.

➢ **ಅಂತರಂಗ ಪರಿಗ್ರಹ:** ಮಿಥ್ಯಾತ್ವ, ಅಭಿಲಾಷೆ, ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಕ್ರೋಧ, ಮಾಯ, ಮೋಹ, ಮಾನ, ರಾಗ, ದ್ವೇಷಗಳೆಂಬ ಹದಿನಾಲ್ಕು ಅನಿಷ್ಟಗಳನ್ನು ಅಂತರಂಗದಲ್ಲಿಟ್ಟುಕೊಳ್ಳುವುದು ಅಂತರಂಗ ಪರಿಗ್ರಹ ಎನಿಸಿಕೊಳ್ಳುತ್ತದೆ.

ವ್ರತಿಗಳ ಭೇದಗಳು:

ವ್ರತಿಯನ್ನು ಕೇವಲ ಈ ಮೇಲಿನ ಗುಣಗಳಿಂದ ಮಾತ್ರವಲ್ಲದೇ ಈ ಮುಂದೆ ಹೇಳುವ ಕೆಲವು ವಿಶೇಷಣಗಳ ಆಧಾರದ ಮೇಲೆ ಗುರುತಿಸಬೇಕಾಗುತ್ತದೆ ಎಂದು ಕೃತಿಕಾರರು ಹೇಳುತ್ತಾರೆ. ಅಂತಹ ವ್ರತಿಗಳಲ್ಲಿ ಎರಡು ಭೇದಗಳಿವೆ.

"ಆ ವ್ರತಿ ಇತ್ತೆಱನೆಂದು ಪೇಳ್ದಪರು
ಅಗಾರ್ಯ್ಯನಗಾರಶ್ಚ ॥೭.೧೯॥"[೯೨]

ವ್ರತಿಗಳಲ್ಲಿ ಅಗಾರಿ ಮತ್ತು ಅನಗಾರೀ ಎಂದು ಎರಡು ಭೇದಗಳು. ಅಗಾರಿ ಎಂದರೆ ಮನೆಯುಳ್ಳಾತ ಅಂದರೆ ಗೃಹಸ್ಥ. ಗೃಹಸ್ಥನನ್ನು ಶ್ರಾವಕನೆಂದೂ ಕರೆಯುವರು. ಶ್ರಾವಕ ಎಂದರೆ "ಶ್ರದ್ಧಾಪೂರ್ವಕವಾಗಿ ಗುರು ಮೊದಲಾದವರಲ್ಲಿ ಧರ್ಮಶ್ರವಣ ಮಾಡುವವನು" [೯೩] ಎಂದರ್ಥವಾಗುತ್ತದೆ. ಅನಗಾರಿ ಎಂದರೆ ಮನೆಯಿಲ್ಲದವನು ಮುನಿ, ಶ್ರಮಣ ಎಂದರ್ಥ.

೧) ಅಗಾರಿ (ಅಣುವ್ರತಿಗಳು):

"ಅಣುವ್ರತೋಗಾರೀ ॥೭.೨೦॥"[೯೪]

ಅಣುವ್ರತಗಳನ್ನು ಪಾಲಿಸುವವನು ಅಗಾರಿ. ಗೃಹಸ್ಥ. ಇಲ್ಲಿ ಅಣು ಎಂದರೆ ಕಿರಿದು ಎಂದರ್ಥ. ಏಕೆಂದರೆ ಇವನಿಗೆ ಎಲ್ಲ ವಿಧದ ವ್ರತಗಳನ್ನು ನೂರಕ್ಕೆ ನೂರರಷ್ಟು ಪರಿಪಾಲಿಸಲು ಸಾಧ್ಯವಿಲ್ಲ. ಇವನು ಗೃಹಸ್ಥನಾದುದರಿಂದ ಒಂದಲ್ಲ ಒಂದು ಕಡೆಗೆ ಒಂದಲ್ಲ ಒಂದು ರೀತಿಯಲ್ಲಿ

---

೯೧. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಸಪ್ತಮೋಧ್ಯಾಯಃ) ಪು. ೧೩೦
೯೨. **ಅದೇ:** (ಸಪ್ತಮೋಧ್ಯಾಯಃ) ಪು. ೧೩೧
೯೩. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೨೮೬
೯೪. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಸಪ್ತಮೋಧ್ಯಾಯಃ) ಪು. ೧೩೧

ಆಸೆ ಆಮಿಷಗಳಲ್ಲಿ ತೊಡಗಿರುವುದರಿಂದ ಆತನಿಗೆ ಈ ವ್ರತಗಳನ್ನು ಎಷ್ಟು ಸಾಧ್ಯವೋ ಅಷ್ಟಾದರೂ ನಿಯಮಗಳನ್ನು ನಿಷ್ಠೆಯಿಂದ ಪಾಲಿಸಲಿ ಎಂಬ ಉದ್ದೇಶದಿಂದ ಈ ವಿಶೇಷಣಗಳನ್ನು ಆತನಿಗೆ ಗುರುತಿಸಲಾಗಿದೆ.

೧. **ಪಂಚಾಣುವ್ರತಗಳು:**

- ಅಹಿಂಸೆ: ತ್ರಸ ಪ್ರಾಣಿಗಳನ್ನು ಕೊಲ್ಲುವುದನ್ನು ಬಿಡುವುದು.
- ಸತ್ಯ: ಸ್ನೇಹ ಮೋಹಾದಿ ವಶದಿಂದ ಸುಳ್ಳನ್ನು ಹೇಳದಿರುವುದು.
- ಅಸ್ತೇಯ: ರಾಜ, ಚೋರಾದಿ ಭಯವಶದಿಂದ ಅನ್ಯರು ಬಚ್ಚಿಟ್ಟ, ದಾರಿಯಲ್ಲಿ ಬಿದ್ದ, ಮರೆತುಹೋದ ಸುವರ್ಣಾದಿಗಳನ್ನು ತೆಗೆದುಕೊಳ್ಳದಿರುವುದು.
- ಬ್ರಹ್ಮಚರ್ಯ: ಅನ್ಯ ಸ್ತ್ರೀಯರನ್ನು ತಾಯಿ, ತಂಗಿ, ಮಗಳೆಂದು ಭಾವಿಸುವುದು.
- ಅಪರಿಗ್ರಹ: ಧನ-ಧಾನ್ಯಾದಿಗಳನ್ನು ಅಗತ್ಯಕ್ಕಿಂತ ಹೆಚ್ಚಿಗೆ ಸಂಗ್ರಹಿಸದೇ ಇರುವುದು.

೨. **ಅಗಾರಿಯ ವಿಶೇಷಗಳು:** ಅಗಾರಿಯು ಕೆಲವು ವಿಶೇಷ ಆಚರಣೆಗಳನ್ನು ಕೈಕೊಳ್ಳಬೇಕು.

- ದಿಗ್ವಿರತಿ: ಹತ್ತು ದಿಕ್ಕುಗಳಲ್ಲಿ ತಾನೇ ಒಂದು ಮೇರೆಯನ್ನು ಮಾಡಿಕೊಂಡು ಈ ಮೇರೆಯನ್ನು ಮೀರಿ ಮುಂದೆ ಹೋಗಲಾರೆ ಎಂದು ನಿಶ್ಚಯಿಸಿಕೊಳ್ಳುವುದು.
- ದೇಶವಿರತಿ: ತನ್ನ ಶಕ್ತಿಗೆ ತಕ್ಕಂತೆ ತಾನು ಕೆಲವು ದಿವಸಗಳ ಕಾಲವೋ ಇಲ್ಲವೇ ಕೆಲವು ಮಾಸಗಳ ಕಾಲವೋ ಒಂದು ಗ್ರಾಮ ಅಥವಾ ಪ್ರದೇಶದಿಂದ ಆಚೆ ಹೋಗಲಾರೆನು ಎಂದು ನಿಶ್ಚಯಿಸಿಕೊಳ್ಳುವುದು.
- ಅನರ್ಥದಂಡ ವಿರತಿ: ಪ್ರಯೋಜನವಿಲ್ಲದ ಅಥವಾ ಪಾಪಕ್ಕೆ ಕಾರಣವಾಗುವ ವಿಚಾರ, ವಿಷಯಗಳಲ್ಲಿ ತೊಡಗಿಸಿಕೊಳ್ಳುವುದನ್ನು ವರ್ಜಿಸುವುದು.
- ಸಾಮಾಯಿಕ ವ್ರತ: ಪ್ರತಿ ದಿನ ತ್ರಿಭುವನ ಸ್ವಾಮಿಯೆನಿಸಿದ ತೀರ್ಥಂಕರರ ಧ್ಯಾನದಲ್ಲಿ ತೊಡಗಿಸಿಕೊಳ್ಳುವುದು.
- ಪ್ರೋಷಧೋಪವಾಸ ವ್ರತ: ಪರ್ವ ದಿನಗಳಂದು ಆಹಾರ ವರ್ಜನೆ ಮಾಡುವುದು.
- ಉಪಭೋಗ-ಪರಿಭೋಗ ಪರಿಮಾಣ ವ್ರತ: ಆಹಾರ, ಪಾನಾದಿಗಳನ್ನು, ವಸ್ತ್ರಾಭರಣಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸದಿರುವುದು.
- ಅತಿಥಿ ಸಂವಿಭಾಗ ವ್ರತ: ವಾರ, ದಿನ ಮುಂತಾದ ತಿಥಿಯ ನಿಯಮವಿಲ್ಲದೇ ಮನೆಗೆ ಆಗಮಿಸಿದ ಮುನಿಗಳಿಗೆ ತನ್ನ ಶಕ್ತ್ಯಾನುಸಾರ ಸಪ್ತಗುಣ ಸಂಪನ್ನನಾಗಿ ಯೋಗ್ಯಾಹಾರವನ್ನು ನೀಡುವುದು.
- ಸಲ್ಲೇಖನ: ವೃದ್ಧಾಪ್ಯದ ಕೊನೆಗಾಲದಲ್ಲಿ ಸಲ್ಲೇಖನವನ್ನು ಸ್ವೀಕರಿಸಿದವರಿಗೆ ಪ್ರೀತಿಯಿಂದ ಸೇವೆಯನ್ನು ಮಾಡುವುದು. ಮತ್ತು ಕೊನೆಗಾಲದಲ್ಲಿ ಸಲ್ಲೇಖನವನ್ನು ಸ್ವೀಕರಿಸುವುದು.

೨) ಅನಗಾರಿ (ಮಹಾವ್ರತಿಗಳು):

ಮುನಿಗಳು ಪಾಲಿಸುವ ಅಹಿಂಸಾದಿ ಪಂಚಾಣುವ್ರತಗಳನ್ನು ಮಹಾವ್ರತಗಳು ಎಂದು ಕರೆಯುವರು. ಮುನಿಗಳನ್ನು ಅನಗಾರೀ ಎಂದು ಹೇಳಲಾಗುತ್ತದೆ. ಅಂದರೆ ಮನೆಯಿಲ್ಲದವರು ಎಂದರ್ಥ. ಮುನಿಗಳನ್ನು ಶ್ರಮಣರು ಎಂತಲೂ ಕರೆಯಲಾಗುತ್ತದೆ.

ಅತಿಚಾರಗಳು:

"ಅತಿಚಾರವೆಂದರೆ ದರ್ಶನ ಮೋಹದ ಉದಯದಿಂದ ತತ್ತ್ವಾರ್ಥ ಶ್ರದ್ಧೆಯಲ್ಲಿ ಅಪಚಾರವುಂಟಾಗುವುದು. ಹಾಗೂ ಮಾಡಲು ಯೋಗ್ಯವಾದ ಕಾರ್ಯವನ್ನು ಮಾಡದೇ ಯೋಗ್ಯವಲ್ಲದ ಕಾರ್ಯವನ್ನು ಮಾಡುವುದು."[೧೯೫]

೧) **ಸಮ್ಯಕ್‌ದರ್ಶನದ ಅತಿಚಾರ:** ಇಂತಹ ಮಹಾವ್ರತಗಳಿಗೆ ಕಿರೀಟಪ್ರಾಯವೆನಿಸಿದ ಸಮ್ಯಕ್ ದರ್ಶನಕ್ಕೆ ಕೆಲವು ಸಲ ಅತಿಚಾರ ಉಂಟಾಗುತ್ತದೆ.

"ಮಹಾವ್ರತಂಗಳ್ಗೆ ಸಂಧಾರಣಮಪ್ಪ ಸಮ್ಯಗ್ದರ್ಶನದತಿಚಾರಂಗಳಂ ಪೇಳ್ದಪರು:

ಶಂಕಾಕಾಂಕ್ಷಾ ವಿಚಿಕಿತ್ಸಾನ್ಯದೃಷ್ಟಿ ಪ್ರಶಂಸಾ ಸಂಸ್ತವಾಃ
ಸಮ್ಯಗ್ ದೃಷ್ಟೇರತೀಚಾರಾಃ ॥೭.೨೩॥"[೧೯೬]

- ❖ ಶಂಕೆ: ಅರಿಹಂತರು ಉಪದೇಶಿಸಿದ ಪ್ರವಚನಗಳನ್ನು ಸುಳ್ಳು ಎಂದು ಶಂಕಿಸುವುದು.
- ❖ ಆಕಾಂಕ್ಷೆ: ವಿಷಯೋಪಭೋಗಗಳಲ್ಲಿ ಅಭಿಲಾಷೆಯನ್ನು ವ್ಯಕ್ತಪಡಿಸುವುದು.
- ❖ ವಿಚಿಕಿತ್ಸಾ: ರತ್ನತ್ರಯರೆನಿಸಿದ ಪವಿತ್ರಾತ್ಮರ ಸೇವೆಮಾಡುವುದಕ್ಕೆ ಹೇಸುವುದು.
- ❖ ಅನ್ಯದೃಷ್ಟಿ ಪ್ರಶಂಸಾ: ಮಿಥ್ಯಾವಿಷಗಳತ್ತ ತನ್ನ ಜ್ಞಾನ ಚಾರಿತ್ರಗಳನ್ನು ಎಳಸುವುದು.
- ❖ ಸಂಸ್ತವ: ಸ್ವಕಾರ್ಯ ನಿಮಿತ್ತ ಅನ್ಯರಲ್ಲಿ ಇಲ್ಲದ ಗುಣಗಳು ಇವೆಯೆಂದು ಹೊಗಳುವುದು.

೨) **ವ್ರತಶೀಲಗಳ ಅತಿಚಾರಗಳು:** ಐದು ವ್ರತಗಳಿಗೆ ಐದೈದು ಅತಿಚಾರಗಳನ್ನು ಹೇಳಲಾಗಿದೆ.

೧. **ಅಹಿಂಸಾ ವ್ರತದ ಅತಿಚಾರ:**

"ಬಂಧ ವಧ ಚ್ಛೇದಾತಿಭಾರೋಪಣಾನ್ನ-ಪಾನ ನಿರೋಧಾಃ॥೭.೨೫॥"[೧೯೭]

- ❖ ಬಂಧ: ಪ್ರಾಣಿಗಳನ್ನು ಹಗ್ಗದಿಂದ ಕಟ್ಟುವುದು.
- ❖ ವಧ: ಪ್ರಾಣಿಗಳನ್ನು ವಿನಾಕಾರಣ ಹೊಡೆಯುವುದು.
- ❖ ಛೇದ: ಪ್ರಾಣಿಗಳ ಮೂಗು, ಕಿವಿಗಳನ್ನು ಕತ್ತರಿಸುವುದು.
- ❖ ಅತಿಭಾರೋಪಣ: ಅತಿಯಾದ ಭಾರವನ್ನು ಪ್ರಾಣಿಗಳ ಮೇಲೆ ಹೇರುವುದು.
- ❖ ಅನ್ನಪಾನ ನಿರೋಧ: ಪ್ರಾಣಿಗಳಿಗೆ ಆಹಾರ, ನೀರುಗಳನ್ನು ಕೊಡದಿರುವುದು.

---

೧೯೫. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ :** ಪುಟ. ೮
೧೯೬. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಸಪ್ತಮೋಧ್ಯಾಯಃ) ಪು. ೧೩೨
೧೯೭. **ಅದೇ** : (ಸಪ್ತಮೋಧ್ಯಾಯಃ) ಪುಟ. ೧೩೩

೨. ಸತ್ಯವ್ರತದ ಅತಿಚಾರಗಳು:

> **“ಮಿಥ್ಯೋಪದೇಶ ರಹೋವ್ಯಾಖ್ಯಾನ ಕೂಟಲೇಖಕ್ರಿಯಾ**
> **ನ್ಯಾಸಾಪಹಾರ ಸಾಕಾರ ಮಂತ್ರ ಭೇದಾಃ ॥೭.೨೬॥”**[೧೯೮]

- ❖ ಮಿಥ್ಯೋಪದೇಶ: ಅನ್ಯರಿಗೆ ಒಳಿತಾಗುವ ಅಥವಾ ಒಳಿತುಂಟು ಮಾಡುವ ಕಾರ್ಯವನ್ನು ತಿರುಚಿ ಹೇಳುವುದು.
- ❖ ರಹೋವ್ಯಾಖ್ಯಾನ: ಸ್ತ್ರೀ ಪುರುಷರ ಏಕಾಂತವನ್ನು ಕದ್ದು ನೋಡುವುದು ಮತ್ತು ಅದನ್ನು ಅನ್ಯರ ಮುಂದೆ ಹೇಳುವುದು.
- ❖ ಕೂಟಲೇಖ ಕ್ರಿಯಾ: ಅನ್ಯರನ್ನು ವಂಚಿಸುವ ಮಾತುಗಳನ್ನಾಡುವುದು.
- ❖ ನ್ಯಾಸಾಪಹಾರ: ಮುಚ್ಚಿಟ್ಟಿರುವ ಧನವನ್ನು ಇದ್ದಷ್ಟು ಹೇಳದೇ ಕಡಿಮೆಯಿದೆಯೆಂದು ಹೇಳುವುದು.
- ❖ ಸಾಕಾರ ಮಂತ್ರ ಭೇದ: ಅನ್ಯರ ಮನಸ್ಸಿನ ಇಂಗಿತವನ್ನು ಅರಿತು ಮತ್ತೊಬ್ಬರ ಮುಂದೆ ಅದನ್ನು ಹೇಳುವುದು.

೩. ಅಸ್ತೇಯಾಣುವ್ರತದ (ಅಚೌರ್ಯ) ಅತಿಚಾರಗಳು:

- ❖ ಸ್ತೇನಪ್ರಯೋಗ: ಅನ್ಯರನ್ನು ಕಳ್ಳರೆಂದು ಆರೋಪಿಸುವುದು, ಅನ್ಯರಿಂದ ಹೇಳಿಸುವುದು ಮತ್ತು ಒಪ್ಪಿಕೊಳ್ಳುವುದು.
- ❖ ತದಾಹೃತದಾನ: ಹೇಳದೆ ಇನ್ನೊಬ್ಬರ ವಸ್ತುಗಳನ್ನು ತೆಗೆದುಕೊಳ್ಳುವುದು.
- ❖ ವಿರುದ್ಧರಾಜ್ಯಾತಿಕ್ರಮ: ರಾಜ್ಯಾಧಿಕಾರವು ಪಲ್ಲಟವಾಗುವ ಸಂದರ್ಭದಲ್ಲಿ ಹೆಚ್ಚಿನ ಮೌಲ್ಯದ ವಸ್ತುಗಳನ್ನು ಕಡಿಮೆ ಬೆಲೆಗೆ ಕೊಳ್ಳುವುದು.
- ❖ ಹೀನಾಧಿಕ ಮಾನೋನ್ಮಾನ: ಅನ್ಯರಿಂದ ಹೆಚ್ಚಿನ ಮೌಲ್ಯದ ವಸ್ತುವನ್ನು ತೆಗೆದುಕೊಂಡು ಅವರಿಗೆ ಕಡಿಮೆ ಹಣ ಕೊಡುವುದು.
- ❖ ಪ್ರತಿರೂಪಕ ವ್ಯವಹಾರ: ಸುವರ್ಣಾದಿ ವಸ್ತುಗಳ ಪ್ರತಿರೂಪಗಳನ್ನು ತಯಾರಿಸಿ ವಂಚನೆಯಿಂದ ಮಾರುವುದು.

೪. ಬ್ರಹ್ಮಚರ್ಯ ವ್ರತದ ಅತಿಚಾರಗಳು:

- ❖ ಪರವಿವಾಹಕರಣ: ಇಚ್ಛೆಗೆ ವಿರುದ್ಧವಾಗಿ ಮದುವೆ ಮಾಡಿಸುವುದು.
- ❖ ಇತ್ವರಿಕಾ-ಪರಿಗೃಹೀತಾಗಮನ: ಸ್ತ್ರೀ ಪರಪುರುಷನನ್ನೂ, ಪುರುಷ ಪರಸ್ತ್ರೀಯನ್ನೂ ರಮಿಸುವುದು.
- ❖ ಅನಂಗಕ್ರೀಡಾ: ಮೈಥುನ ಅಂಗಗಳನ್ನು ಹೊರತುಪಡಿಸಿ ಬೇರೆ ಅಂಗಗಳಲ್ಲಿ ಕಾಮಕ್ರೀಡೆಯಲ್ಲಿ ತೊಡಗುವುದು.

---

೧೯೮. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ:** (ಸಪ್ತಮೋಧ್ಯಾಯಃ) ಪುಟ. ೧೩೨

❖ ಕಾಮತೀವ್ರಾಭಿನಿವೇಶ: ಕಾಮತೀವ್ರತೆಯಿಂದ ತಾನಿರುವ ಸ್ಥಳವನ್ನೂ ಲೆಕ್ಕಿಸದೇ ಮೈಥುನದಲ್ಲಿ ತೊಡಗುವುದು.

❖ ಸ್ವದಾರ ಸಂತೋಷ: ಅನ್ಯ ಲಿಂಗಗಳಿಲ್ಲದೇ ತಾನೊಬ್ಬನೇ ಸುಖಿಸುವುದು.

೫. ಅಪರಿಗ್ರಹ ವ್ರತದ ಅತಿಚಾರಗಳು:

"ಕ್ಷೇತ್ರವಾಸ್ತು ಹಿರಣ್ಯ ಸುವರ್ಣ ಧನಧಾನ್ಯ
ದಾಸೀ ದಾಸ ಕುಪ್ಯ ಪ್ರಮಾಣಾತಿಕ್ರಮಾಃ॥೭.೨೯॥"[೧೯೯]

❖ ಕ್ಷೇತ್ರ ವಾಸ್ತು: ಹೊಲ–ಮನೆಗಳು.

❖ ಹಿರಣ್ಯ–ಸುರ್ಣ: ಮುತ್ತು–ರತ್ನ, ಚಿನ್ನ, ಬೆಳ್ಳಿ.

❖ ಧನಧಾನ್ಯ: ಅತಿಯಾದ ಹಣ, ಧಾನ್ಯಗಳು

❖ ದಾಸೀದಾಸ: ಸೇವಕ–ಸೇವಕಿಯರು, ಭಂಟರನ್ನು ಇಟ್ಟುಕೊಳ್ಳುವುದು.

❖ ಶ್ರೀಖಂಡ: ಕರ್ಪೂರಾದಿ ಸುಗಂಧ ದ್ರವ್ಯಗಳನ್ನು ಸಂಗ್ರಹಿಸುವುದು.

೬. ದಿಗ್ವಿರತಿ ಶೀಲದ ಅತಿಚಾರಗಳು:

❖ ಊರ್ಧ್ವಾತಿಕ್ರಮಣ: ಲೋಭವಶದಿಂದ ಪರ್ವತ ಶಿಖರಗಳನ್ನು ಏರುವುದು.

❖ ಅಧೋತಿಕ್ರಮಣ: ಆಳವಾದ ಜಾಗಗಳಲ್ಲಿ ಇಳಿಯುವುದು.

❖ ತಿರ್ಯಗ್ ವ್ಯತಿಕ್ರಮಣ: ಭೂಮಿಯ ಆಳದಲ್ಲಿ ಪ್ರಾಣಿಗಳು ಕೊರೆದಿರುವ ಬಿಲಗಳಲ್ಲಿ ಪ್ರವೇಶಿಸುವುದು.

❖ ಕ್ಷೇತ್ರವೃದ್ಧಿ: ಅಧಿಕ ಆಕಾಂಕ್ಷೆಯಿಂದ ಆಸ್ತಿಯನ್ನು ವಿಸ್ತರಿಸುವುದು.

❖ ಸ್ಮೃತ್ಯಂತರಾದಾನ: ತಾನು ಅಂದುಕೊಂಡ ಮೇರೆಗಳನ್ನು ಮೀರಿ ದಾಟುವುದು.

೭. ದೇಶವಿರತಿ ಶೀಲದ ಅತಿಚಾರಗಳು:

❖ ಆನಯನ: ಗುರುತಿಸಿದ ಪ್ರದೇಶದಿಂದಾಚೆ ಇರುವವರನ್ನು ಕರೆಸಿಕೊಳ್ಳುವುದು.

❖ ಪ್ರೇಷ್ಯಪ್ರಯೋಗ: ತಾನು ಪ್ರಮಾಣಿಸಿದ ಪ್ರದೇಶದಿಂದ ಆಚೆಗೆ ಹೊರಗಿರುವಂತೆ ಮಾಡು ಎಂದು ಹೇಳುವುದು.

❖ ಶಬ್ದಾನುಪಾತ: ಪ್ರಮಾಣಿಸಿದ ಕ್ಷೇತ್ರದಲ್ಲಿ ತಾನಿದ್ದರೂ ಹೊರಗಿರುವವರನ್ನು ಕುರಿತು ಧ್ವನಿಯೆತ್ತಿ ಮಾತಾಡುವುದು.

❖ ರೂಪಾನುಪಾತ: ತಾನು ಪ್ರಮಾಣಿಸಿದ ಕ್ಷೇತ್ರದಲ್ಲಿದ್ದೂ ಆಚೆಗಿನ ವಿಷಯಗಳ ಕುರಿತು ವಿಚಾರಿಸುವುದು.

❖ ಪುದ್ಗಲಾಪೇಕ್ಷ: ಪ್ರಮಾಣಿಸಿದ ಪ್ರದೇಶಗಳ ಆಚೆಗಿನ ವಿಷಯ, ವ್ಯಕ್ತಿಗಳ ಕುರಿತು ಕುತೂಹಲಿಯಾಗಿರುವುದು.

---

೧೯೯. ಡಾ. ಹಂಪ ನಾಗರಾಜಯ್ಯ: **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ಸಪ್ತಮೋಧ್ಯಾಯಃ) ಪು. ೧೩೪

೮. ಅನರ್ಥ ದಂಡವಿರತಿ ಶೀಲದ ಅತಿಚಾರಗಳು:

❖ ಕಂದರ್ಪ: ರಾಗಾತಿರೇಕದಿಂದ ಅಶ್ಲೀಲತೆಯಿಂದ ಕೂಡಿದ ಮಾತುಗಳನ್ನಾಡುವುದು.

❖ ಕೌತ್ಕುಚ್ಯ: ಅನ್ಯರ ದೇಹಸೌಷ್ಠವ ನೋಡಿ ಹಾಸ್ಯವಾಗಿ ಅಸಹ್ಯ ರೀತಿಯಲ್ಲಿ ಮಾತಾಡುವುದು.

❖ ಮೌಖರ್ಯ: ಹುರುಳಿಲ್ಲದ ಮಾತುಗಳನ್ನು ಆಡುವುದು.

❖ ಅಸಮೀಕ್ಷ್ಯಾಧಿಕರಣ: ಪ್ರಯೋಜನವಿಲ್ಲದೇ ಮನ, ವಚನ, ಕಾಯಗಳನ್ನು ಕೆಡಿಸಿಕೊಳ್ಳುವುದು.

❖ ಉಪಭೋಗ–ಪರಿಭೋಗ ಅನರ್ಥ: ಅನಗತ್ಯವಾದ ಭೋಗೋಪಭೋಗ ವಸ್ತುಗಳನ್ನು ಹೆಚ್ಚೆಚ್ಚಾಗಿ ಸಂಗ್ರಹಿಸುವುದು.

೯. ಸಾಮಾಯಿಕ ಶೀಲದ ಅತಿಚಾರಗಳು:

ದುಸ್ಚೇಷ್ಟಗಳು, ಅನಾದರ, ಇಲ್ಲದಿರುವುದನ್ನು ಇದೆಯೆಂದು, ಇರುವುದನ್ನು ಇಲ್ಲವೆಂದು ಹೇಳುವುದು, ಏಕಾಗ್ರತೆಯನ್ನು ಕಳೆದುಕೊಳ್ಳುವುದು. ಇವು ಸಾಮಾಯಿಕ ಶೀಲದ ಅತಿಚಾರಗಳು.

೧೦. ಪ್ರೋಷದೋಪವಾಸ ಶೀಲದ ಅತಿಚಾರಗಳು:

"ಅಪ್ರತ್ಯವೇಕ್ಷಿತಾಪ್ರಮಾರ್ಜಿತೋತ್ಸರ್ಗಾದಾನ
ಸಂಸ್ತರೋಪಕ್ರಮಣಾನಾದರಸ್ಮೃತ್ಯಪಸ್ಥಾನಾನಿ ॥೭.೩೪॥"[೨೦೦]

❖ ಅಪ್ರತ್ಯವೇಕ್ಷಿತ ಅಪ್ರಮಾರ್ಜಿತ ಉತ್ಸರ್ಗ: ಜನನಿಬಿಡ ಪ್ರದೇಶದಲ್ಲಿ ಅನ್ಯರಿಗೆ ತೊಂದರೆಯಾಗುವಂತೆ ಮಲ, ಮೂತ್ರಾದಿ ವಿಸರ್ಜನೆ ಮಾಡುವುದು.

❖ ಅಪ್ರತ್ಯವೇಕ್ಷಿತ ಅಪ್ರಮಾರ್ಜಿತದಾನ: ಹುಳುಕಾಗಿರುವ ಪೂಜಾಸಾಮಗ್ರಿಗಳನ್ನು ನೋಡದೇ ಖರೀದಿಸುವುದು.

❖ ಸಂಸ್ತರೋಪಕ್ರಮಣ: ಜೀವಗಳಿರುವುದನ್ನು ನೋಡದೆ ಹಾಸುಗೆಯನ್ನು ಹಾಸುವುದು.

❖ ಅನಾದರ: ಹಸಿವು, ನೀರಡಿಕೆಗಳಿಂದ ಉತ್ಸಾಹನ್ನು ಕಳೆದುಕೊಳ್ಳುವುದು.

❖ ಸ್ಮೃತ್ಯನುಪಸ್ಥಾನ: ಏಕಾಗ್ರತೆ ಇಲ್ಲದಿರುವುದು.

೧೧. ಉಪಭೋಗ–ಪರಿಭೋಗಶೀಲದ ಅತಿಚಾರಗಳು:

❖ ಸಚಿತ್ತಾಹಾರ: ಸೇವಿಸಲು ಯೋಗ್ಯವಲ್ಲದ ಫಲಾದಿಗಳನ್ನು ಸೇವಿಸುವುದು.

❖ ಸಂಬಂಧಾಹಾರ: ಬೆರಕೆ ಮಾಡಿದ ಆಹಾರವನ್ನು ಸ್ವೀಕರಿಸುವುದು,

❖ ಸಮ್ಮಿಶ್ರಾಹಾರ: ಸೂಕ್ಷ್ಮ ಜಂತುಗಳು ಸೇರಿದ ಪದಾರ್ಥಗಳಿಂದ ಜಂತುಗಳನ್ನು ಬೇರ್ಪಡಿಸದೆ ಆಹಾರವನ್ನು ಸ್ವೀಕರಿಸುವುದು.

---

೨೦೦. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ಸಪ್ತಮೋಧ್ಯಾಯಃ) ಪು. ೧೩೫

- ❖ ಅಭಿಷವಾಹಾರ: ಅಂಬಲಿ ಮೊದಲಾದ ದ್ರವಾಹಾರಗಳು, ತಂಗಳು ಅನ್ನವನ್ನು ಉಣ್ಣುವುದು.
- ❖ ದುಃಪಕ್ವಾಹಾರ: ಹೊತ್ತಿದ ಅಥವಾ ಬೇಯದ ಆಹಾರವನ್ನು ಉಣ್ಣುವುದು.

೧೨. ಅತಿಥಿ ಸಂವಿಭಾಗಶೀಲದ ಅತಿಚಾರಗಳು:

- ❖ ಸಚಿತ್ತ ನಿಕ್ಷೇಪ: ಪದ್ಮ ಪತ್ರಾದಿಗಳ ಮೇಲೆ ಆಹಾರವನ್ನು ನೀಡುವುದು.
- ❖ ಸಚಿತ್ತ ಪಿಧಾನ: ಮುಚ್ಚಿದ ಆಹಾರವನ್ನು ಕೊಡುವುದು.
- ❖ ಪರವ್ಯಪದೇಶ: ಪರರಿಗೆ ಕೆಲಸ ಮಾಡುವಂತೆ ಹೇಳುವುದು.
- ❖ ಮಾತ್ಸರ್ಯ: ಬೇರೆಯವರು ದಾನ ಮಾಡುವುದನ್ನು ಕಂಡು ಸೈರಿಸದಿರುವುದು.
- ❖ ಕಾಲಾತಿಕ್ರಮ: ಮನೆಗೆ ಅತಿಥಿಗಳು, ಮುನಿಗಳು ಬರುವುದು ತಿಳಿದು ಅವರಿಗಿಂತಲೂ ಮೊದಲು ತಾನು ಉಣ್ಣುವುದು.

೧೩. ಸಲ್ಲೇಖದ ಅತಿಚಾರಗಳು:

> **"ಜೀವಿತಮರಣಾಶಂಸಾ ಮಿತ್ರಾನುರಾಗ**
> **ಸುಖಾನುಬಂಧ ನಿದಾನಾನಿ ॥೭.೩೭॥**[೨೦೧]

- ❖ ಜೀವಿತಾಶಂಸಾ: ಬದುಕುವುದನ್ನು ಬಯಸುವುದು.
- ❖ ಮರಣಶಂಸಾ: ಆದಷ್ಟು ಬೇಗ ಸಾವು ಬರಲಿ ಎಂದು ಭಾವಿಸುವುದು.
- ❖ ಮಿತ್ರಾನುರಾಗ: ಗೆಳೆಯರನ್ನು ನೆನೆಸಿಕೊಂಡು ದುಃಖಪಡುವುದು.
- ❖ ಸುಖಾನುಬಂಧ: ಮುಂಚೆ ಅನುಭವಿಸಿದ ಸುಖೋಪಭೋಗಗಳನ್ನು ನೆನೆಸಿಕೊಳ್ಳುವುದು.
- ❖ ನಿದಾನ: ಸುಖಭೋಗಗಳನ್ನು ಬಯಸುವುದು.

ಹೀಗೆ ಈ ಅತಿಚಾರಗಳೆಲ್ಲವೂ ಆಯಾ ವ್ರತಗಳ ವಿರುದ್ಧ ನಡೆಗಳಾಗಿದ್ದು, ಈ ವ್ರತಗಳನ್ನು ಸ್ವೀಕಾರ ಮಾಡಿದವರು ಅವುಗಳಿಗೆ ಅಪಚಾರವಾಗದಂತೆ ನಡೆದುಕೊಳ್ಳುವುದಾಗಿದೆ. ಆದುದರಿಂದ ತನಗೂ, ಪರರಿಗೂ ಉಪಕಾರವೆಂದು ಕೊಡುವುದು ದಾನ, ತನಗೆ ಉಪಕಾರವೆಂದು ಅರಿತವನಿಗೆ ಪುಣ್ಯಸಂಚಯ ಹಾಗೂ ಪರೋಪಕಾರವೆಂದು ಕೊಡುವವನಿಗೆ ಸಮ್ಯಕ್‌ಜ್ಞಾನಾದಿಗಳು ವೃದ್ಧಿಯಾಗುತ್ತವೆ. ಹೀಗೆ ಆಸ್ರವ ಮತ್ತು ವ್ರತಗಳು, ವ್ರತಗಳ ಅತಿಚಾರಗಳು ಎಂದು ಕವಿ ಗ್ರಂಥದಲ್ಲಿ ನಿರೂಪಿಸಿದ್ದಾನೆ.

೩.೧.೧.೭. ಬಂಧ:

ಜೀವವು ಭಾವೋದ್ರೇಕ, ತಿರಸ್ಕಾರ ಮೊದಲಾದ ಇಲ್ಲವೇ ಈ ಹಿಂದೆ ಹೇಳಿದ ಅತಿಚಾರ ಕಾರಣಗಳಿಂದ ಪ್ರಚೋದನೆಗೊಂಡಾಗ ಕರ್ಮವನ್ನು ಜೀವಕ್ಕೆ ಕಟ್ಟಿಹಾಕುವ ಮನಸ್ಸಿನ

---

೨೦೧. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಸಪ್ತಮೋಧ್ಯಾಯಃ) ಪು. ೧೩೬

ಪ್ರಜ್ಞಾಪೂರ್ವ ಸ್ಥಿತಿಯೇ ಬಂಧ. ಆತ್ಮನೊಳಗೆ ಪ್ರವೇಶಿಸಿದ ಕರ್ಮಾಣುಗಳು ಮತ್ತು ಆತ್ಮನ ನಡುವೆ ಸ್ಥಾಪಿತವಾಗುವ ಸಂಬಂಧವನ್ನು ಹಲವು ಪ್ರದೇಶಗಳಲ್ಲಿರುವ ದ್ರವ್ಯವನ್ನು ಅರಗಿಸಿಕೊಳ್ಳುವ ಅಥವಾ ತನ್ನೊಡನೆ ಒಂದಾಗಿಸಿಕೊಳ್ಳುವ ಪ್ರಕ್ರಿಯೆಯೇ ಬಂಧ. ಒಟ್ಟಿನಲ್ಲಿ ಜೀವ–ಕರ್ಮ ಇವೆರಡರ ಅನ್ಯೋನ್ಯ ಪ್ರದೇಶಾನುಪ್ರದೇಶಾತ್ಮಕವಾಗುವಿಕೆಯೇ ಬಂಧ. ಇವು ಹಾಲು ಮತ್ತು ನೀರು ಬೆರೆತಂತೆ ಒಂದರಲ್ಲಿ ಒಂದು ಲೀನವಾಗಿರುತ್ತವೆ.

"ಬಂಧಮಂ ಪೇಳ್ವುದೀ ಮುಂದಣ ಸೂತ್ರಂ:

ಸಕಷಾಯತ್ವಾಜ್ಜೀವಃ ಕರ್ಮಣೋ ಯೋಗ್ಯಾನ್ ಪುದ್ಗಲಾನಾದತ್ತೇಸ ಬಂಧಃ ॥೮.೨॥"[೨೦೨]

ಕರ್ಮವಶದಿಂದ ಸಂಸಾರೀ ಜೀವಗಳು ಕಷಾಯಗಳಿಂದ ಕೂಡಿದ ಕಾರಣವಾಗಿ ಆಯಾ ಕರ್ಮಕ್ಕೆ ಯೋಗ್ಯವಾದ ಪುದ್ಗಲಗಳು ಜೊತೆಯಾಗುವವು ಇದನ್ನೇ ಬಂಧ ಎನ್ನಲಾಗುತ್ತದೆ.

"ಮಿಥ್ಯಾತ್ವಮುಂ ಅವ್ರತಮುಂ ಪ್ರಮಾದಮುಂ ಕಷಾಯಮುಂ ಯೋಗಮುಮೆಂಬಿವು ಬಂಧಕಾರಣಂಗಳು॥"[೨೦೩]

ಮಿಥ್ಯಾತ್ವಗಳು, ಅವ್ರತಗಳು, ಪ್ರಮಾದಗಳು, ಕಷಾಯಗಳು ಹಾಗೂ ಯೋಗಗಳು ಬಂಧತತ್ತ್ವಕ್ಕೆ ಕಾರಣವಾಗುವವು.

೧) ಬಂಧದ ಭೇದಗಳು:

ಪ್ರಕೃತಿ, ಸ್ಥಿತಿ, ಅನುಭಾಗ ಹಾಗೂ ಪ್ರದೇಶ ಎಂದು ನಾಲ್ಕು ಕರ್ಮದ ಭೇದಗಳಾಗಿವೆ.

೧. **ಪ್ರಕೃತಿ ಬಂಧ:** ಜ್ಞಾನ, ಸ್ವಭಾವದಿಂದ ಪುದ್ಗಲಗಳ ಕಾರ್ಮಣ ಉಂಟಾಗುವುದು. ಪ್ರಕೃತಿ ಎಂದರೆ ಸ್ವರೂಪ. ಇದರಲ್ಲಿ ಜ್ಞಾನಾವರಣ, ದರ್ಶನಾವರಣ, ವೇದನೀಯ, ಮೋಯನೀಯ, ಆಯು, ನಾಮ, ಗೋತ್ರ ಹಾಗೂ ಅಂತರಾಯ ಎಂದು ಎಂಟು ಪ್ರಕಾರಗಳುಂಟು.

❖ ಜ್ಞಾನಾವರಣ: ವಿಚಾರ ಮಾಡುವ ಶಕ್ತಿಯನ್ನು ಕುಂದಿಸುವುದು. ಇದರಲ್ಲಿ ಐದು ಅಂತರ್ಭೇದಗಳು, ಮತಿಜ್ಞಾನ, ಶ್ರುತ ಜ್ಞಾನ, ಅವಧಿಜ್ಞಾನ, ಮನಃಪರ್ಯಯ ಜ್ಞಾನ ಹಾಗೂ ಕೇವಲ ಜ್ಞಾನಗಳ ಮೇಲೆ ಪೊರೆಯಂತೆ ಆಚ್ಛಾದಿತವಾಗುವುದು.

❖ ದರ್ಶನಾವರಣ: ದೃಷ್ಟಿ ಗೋಚರವಾಗದಂತೆ ಆಚ್ಛಾದಿತವಾಗಿರುವುದು. ಇದರಲ್ಲಿ ಚಕ್ಷು, ಅಚಕ್ಷು, ಅವಧಿ, ಕೇವಲ, ನಿದ್ರಾ, ನಿದ್ರಾನಿದ್ರಾ, ಪ್ರಚಲಾ, ಪ್ರಚಲಾಪ್ರಚಲಾ, ಸ್ತ್ಯಾನಗೃದ್ಧಿಯೆಂದು ನವಭೇದಗಳು.

❖ ವೇದನೀಯ: ಸುಖ ದುಃಖಗಳನ್ನು ಉಂಟುಮಾಡುವುದೇ ವೇದನೀಯ. ಇದರಲ್ಲಿ ಸಾತಾವೇದನೀಯ, ಅಸಾತಾವೇದನೀಯ ಎಂದು ಎರಡು ಭೇದಗಳು.

❖ ಮೋಹನೀಯ: ಮದ್ಯಾದಿಗಳಂತೆ ಸಮ್ಮೋಹಗೊಳಿಸುವುದೇ ಮೋಹನೀಯ. ಇರರಲ್ಲಿ ದರ್ಶನ ಮೋಹನೀಯ, ಚಾರಿತ್ರ ಮೋಹನೀಯ, ಕಷಾಯ ವೇದನೀಯ ಹಾಗೂ ನೋಕಷಾಯ ವೇದನೀಯ ಎಂದು ನಾಲ್ಕು ಅಂತಭೇದಗಳಿವೆ.

---

೨೦೨. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ಅಷ್ಟಮೋಧ್ಯಾಯಂ) ಪು. ೧೩೮

೨೦೩. **ಅದೇ :** (ಅಷ್ಟಮೋಧ್ಯಾಯಂ) ಪು. ೧೩೮

❖ಆಯುಷ್ಯ: ಪಡೆದಿರುವ ಜನ್ಮದಿಂದ ಮುಕ್ತಿಹೊಂದದಂತೆ ಜೀವವನ್ನು ಹಿಡಿದಿಟ್ಟುಕೊಂಡಿರುವುದೇ ಆಯುಷ್ಯ. ಇದರಲ್ಲಿ ನಾರಕಾಯುಷ್ಯ, ತಿರ್ಯಗಾಯುಷ್ಯ, ಮನುಷ್ಯಾಯುಷ್ಯ, ದೇವಾಯುಷ್ಯ ಎಂದು ನಾಲ್ಕು ಭೇದಗಳು.

❖ನಾಮ: ನಾನಾ ಸಂಸ್ಥಾನ (ಯೋನಿ)ಗಳಲ್ಲಿ ಜನ್ಮವೆತ್ತಿ ಅವುಗಳ ಹೆಸರನ್ನು ಪಡೆಯುವುದು. ಇದರಲ್ಲಿ ಗತಿನಾಮ, ಜಾತಿನಾಮ, ಶರೀರನಾಮ, ಬಂಧನನಾಮ, ಸಂಘಾತನಾಮ, ಸಂಸ್ಥಾನನಾಮ (ಇದರಲ್ಲಿ ಸಮಚತುರಸ್ರ, ನ್ಯಗ್ರೋದ, ಸ್ವಾತಿ, ವಾಮನ, ಕುಬ್ಜ ಎಂದು ಐದುಪ್ರಕಾರಗಳಿವೆ.), ಅಂಗೋಪಾಂಗನಾಮ, ಸಂಹನನನಾಮ, ವರ್ಣನಾಮ, ಗಂಧನಾಮ, ರಸನಾಮ, ಸ್ಪರ್ಶನಾಮ, ಅನುಪೂರ್ವಿನಾಮ, ಅಗುರು–ಲಘುನಾಮ, ಉಪಘಾತ ನಾಮ, ಪರಘಾತ ನಾಮ, ಉಚ್ಛ್ವಾಸ ನಾಮ, ಆತಪನಾಮ, ಉದ್ಯೋತನಾಮ, ವಿಹಾಯೋಗತಿನಾಮ, ತ್ರಸನಾಮ, ಸ್ಥಾವರನಾಮ, ಬಾದರನಾಮ, ಸೂಕ್ಷ್ಮನಾಮ, ಪರ್ಯಾಪ್ತನಾಮ, ಅಪರ್ಯಾಪ್ತನಾಮ, ಪ್ರತ್ಯೇಕ ಶರೀರನಾಮ, ಸಾಧಾರಣ ಶರೀರನಾಮ, ಶುಭನಾಮ, ಅಶುಭನಾಮ, ಸುಭಗನಾಮ, ದುರ್ಭಗನಾಮ, ಸುಸ್ವರನಾಮ, ದುಸ್ವರನಾಮ, ಆದೇಯನಾಮ, ಅನಾದೇಯನಾಮ, ಯಶಕೀರ್ತಿನಾಮ, ಅಯಶಕೀರ್ತಿನಾಮ, ಸೇತರಾಣಿನಾಮ, ನಿರ್ಮಾಣನಾಮ, ತೀರ್ಥಕರನಾಮ, ಸ್ಥಿರನಾಮ ಹಾಗೂ ಅಸ್ಥಿರನಾಮಗಳೆಂದು ಎಂದು ೪೨ ಉಪಭೇದಗಳನ್ನು ಹೇಳಲಾಗಿದೆ. ಈ ಎಲ್ಲ ನಾಮಶರೀರಗಳು ಸಪ್ತಧಾತುಗಳಿಂದ ಉಂಟಾಗಿರುವವು.

“ರಸಾದ್ರಕ್ತಂ ತತೋ ಮಾಂಸಂ ಮಾಂಸಾನ್ಮೇಧಃ ಪ್ರವರ್ತತೇ ।
ಮೇಧಸೋಸ್ಥಿ ತತೋ ಮಜ್ಜಾ ತಸ್ಮಾಚ್ಚುಕ್ಲಂ ತತಃ ಪ್ರಜಾಃ ॥೮.೧೯೪॥”[೨೦೪]

ಅಂದರೆ ಉಂಡ ಆಹಾರವು ರಸವಾಗಿ, ರಸವು ರಕ್ತವಾಗಿ, ರಕ್ತವು ಮಾಂಸವಾಗಿ, ಮಾಂಸವು ಮೇಧಸ್ಸಾಗಿ (ಕೊಬ್ಬು), ಮೇಧಸ್ಸು ಎಲುಬಾಗಿ (ಅಸ್ತಿಮಜ್ಜೆ), ಎಲುಬು ಮೂಳೆಯಾಗಿ, ಮೂಳೆಯಿಂದ ಶುಕ್ಲೋತ್ಪತ್ತಿಯಾಗಿ ಜೀವೋತ್ಪತ್ತಿಯಾಗುವುದು. ಹೀಗೆ ಈ ಸಪ್ತಧಾತುಗಳು ಪ್ರತಿ ಜೀವಿಯ ಉದಯಕ್ಕೆ ಕಾರಣವು.

❖ಗೋತ್ರ: ಕುಲಗಳನ್ನು ತಿಳಿಸುವುದು. ಇದರಲ್ಲಿ ಉಚ್ಚ ಮತ್ತು ನೀಚ ಎಂದು ಎರಡು ಭೇದಗಳು.

❖ಅಂತರಾಯ: ದಾನಾದಿಗಳಿಗೆ ವಿಘ್ನವನ್ನುಂಟು ಮಾಡುವುದು. ದಾನ, ಲಾಭ, ಭೋಗ, ಉಪಭೋಗ, ಶಕ್ತಿಯೆಂದು ಇದರ ಅಂತರ್ಭೇದಗಳು.

ಇವು ಬಂಧದ ಸ್ವರೂಪಗಳಾಗಿವೆ.

---

೨೦೪. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ಅಷ್ಟಮೋಧ್ಯಾಯಂ) ಪು. ೧೩೮

೨. ಸ್ಥಿತಿ ಬಂಧ:

"ಈ ಕರ್ಮಪ್ರಕೃತಿಗಳುತ್ಕೃಷ್ಟ ಸ್ಥಿತಿಯಂ ಪೇೞ್ದಪರು:
ಮೊದಲ ಮೂಱು ಪ್ರಕೃತಿಗಳ್ಗಂ ಅಂತರಾಯಕ್ಕಂ
ಮೂವತ್ತು ಸಾಗರೋಪಮ ಕೋಟಿಕೋಟಿ ಉತ್ಕೃಷ್ಟಸ್ಥಿತಿ ॥"[೨೦೫]

ಸ್ಥಿತಿ ಎಂದರೆ ಅವಧಿ. "ಸ್ಥಿತಿಯು ಅವಧಿಯು ಕರ್ಮದ ಅವಧಿ ಎಷ್ಟಿದೆಯೋ ಅಷ್ಟು ಇರಲೇಬೇಕು. ಈ ಅವಧಿಯು, ಆ ಕರ್ಮವನ್ನು ತೊಡೆದುಹಾಕಲು ಜೀವವು ಎಷ್ಟು ಕಾಲವನ್ನು ತೆಗೆದುಕೊಳ್ಳುತ್ತದೆಯೋ ಅದು ಅದರ ಶಕ್ತಿಯನ್ನು ಅವಲಂಬಿಸಿರುತ್ತದೆ. ಬಂಧದ ಕಾಲಾವಧಿ ಅದರ ಕಷಾಯಗಳ ಶಕ್ತಿಯನ್ನು ಅವಲಂಬಿಸಿರುತ್ತದೆ."[೨೦೬]

ಮೊದಲ ಮೂರು ಅಂದರೆ ಜ್ಞಾನಾವರಣೀಯ, ದರ್ಶನಾವರಣೀಯ, ವೇದನೀಯ ಹಾಗೂ ಅಂತರಾಯಗಳಿಗೆ ಮೂವತ್ತು ಕೋಟಿಕೋಟಿ ಸಾಗರೋಪಮ ಅವಧಿ, ಮೋಹನೀಯಕ್ಕೆ ಎಪ್ಪತ್ತು ಕೋಟಿ ಕೋಟಿ ಸಾಗರೋಪಮ ಅವಧಿ, ನಾಮ ಮತ್ತು ಗೋತ್ರಪ್ರಕೃತಿಗಳಿಗೆ ಇಪ್ಪತ್ತು ಕೋಟಿ ಕೋಟಿ ಸಾಗರೋಪಮ ಅವಧಿ, ಆಯುಷ್ಯ ಪ್ರಕೃತಿಗೆ ಮೂವತ್ತಮೂರು ಕೋಟಿ ಕೋಟಿ ಸಾಗರೋಪಮ ಅವಧಿಗಳು ಬೇಕು. ಅಸಾತಾವೇದನೀಯ, ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಸ್ತ್ರೀವೇದ, ಪುಂವೇದ, ನಪುಂಸಕವೇದ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ ಹೀಗೆ ನಾನಾ ವಿಧದ ಜೀವಿಗಳಿಗೆ ಆಯಾಯಾ ಕರ್ಮಾನುಸಾರ ಅವಧಿ ಇರುತ್ತದೆ. ಅದು ಪಾಪಕರ್ಮ ಮತ್ತು ಪುಣ್ಯಕರ್ಮವನ್ನು ಅವಲಂಬಿಸಿರುತ್ತದೆ. "ಪಾಪಕರ್ಮಗಳ ಹೆಚ್ಚಿದ್ದಾಗ ನರಳಾಟ ಹೆಚ್ಚು, ಪುಣ್ಯಕರ್ಮಗಳಿದ್ದಾಗ ನರಳಾಟವಿರದು. ಕರ್ಮಕಾರಗಳ ಕನಿಷ್ಠ ಅವಧಿ ಒಂದು ಮುಹೂರ್ತ. ಅಂದರೆ ೪೮ ನಿಮಿಷ. ಪುಣ್ಯಕರ್ಮಗಳ ಫಲಗೊಳ್ಳುವಿಎಯ ಶಕ್ತಿ ತೀವ್ರವಾಗಿದ್ದರೆ ಅದರ ಫಲವಾದ ಸುಖ ಕೂಡ ದೊಡ್ಡದಾಗಿರುತ್ತದೆ."[೨೦೭]

೩. ಅನುಭಾಗ ಬಂಧ:

ಕರ್ಮಗಳ ಶಕ್ತಿಯೇ ಅನುಭಾಗ. ಅಜ್ಞಾನದ ಜನಿತಕ್ಕೆ ಕಾರಣವಾಗುವ ಬಂಧವೇ ಅನುಭಾಗ. "ಕರ್ಮಗಳ ಫಲವು ಪಾಪಕರ್ಮಗಳಿಂದಾಗುವ ತೊಂದರೆಗಳು ಹಾಗೂ ಪುಣ್ಯಕರ್ಮಗಳಿಂದಾಗುವ ಸಂತಸಗಳು ತೀವ್ರವಾಗಿರಬಹುದು. ಅದು ಭಾವೋದ್ರೇಕ ಹಾಗೂ ಚಟುವಟಿಕೆಗಳನ್ನು ಅವಲಂಬಿಸಿರುತ್ತದೆ."[೨೦೮]

"ಉತ್ಕೃಷ್ಟ ವಿಶೋಧಿಯಿಂದಂ ಶುಭ ಪ್ರಕೃತಿಗಳ್ಗೆ ಉತ್ಕೃಷ್ಟಾನುಭಾಗಮಕ್ಕುಂ ತೀವ್ರ ಸಂಕ್ಲೇಶದಿಂದಂ ಅಶುಭಪ್ರಕೃತಿಗಳ್ಗೆ ತೀೞವ್ರಾನುಭಾಗಮಕ್ಕುಂ ವಿಪರೀತದಿಂದಂ ಎಲ್ಲಾ ಪ್ರಕೃತಿಗಳನುಭಾಗಂ ಜಘನ್ಯಮಕ್ಕುಂ"[೨೦೯]

---

೨೦೫. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಅಷ್ಟಮೋಧ್ಯಾಯಂ) ಪು. ೧೩೮

೨೦೬. ಎಸ್. ಪಿ. ಪದ್ಮಪ್ರಸಾದ್ (ಅನು); **ಜೈನಧರ್ಮಕ್ಕೊಂದು ಕೈಪಿಡಿ** : ಪುಟ. ೧೫೬

೨೦೭. **ಅದೇ** : ಪುಟ. ೧೫೬

೨೦೮. **ಅದೇ** : ಪುಟ. ೧೫೬

೨೦೯. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ಅಷ್ಟಮೋಧ್ಯಾಯಂ) ಪು. ೧೫೬

ಶುಭ ಪ್ರಕೃತಿಗಳು ಉತ್ಕೃಷ್ಟವಾಗಿದ್ದಾಗ ಉತ್ಕೃಷ್ಟ ಅನುಭಾಗವೂ, ಅಶುಭಪ್ರಕೃತಿಗಳಿಗೆ ಜಘನ್ಯ ಅನುಭಾಗವೂ ಉಂಟಾಗುತ್ತದೆ.

೪. ಪ್ರದೇಶ ಬಂಧ:

ಶರೀರನಾಮ ಕರ್ಮೋದಯದಿಂದ ತ್ರಿಕಾಲದ ಸಮಯ (ಪ್ರಾಪ್ತ ಜನ್ಮ)ಗಳಲ್ಲಿ ಯೋಗವಿಶೇಷದಿಂದ ಪ್ರದೇಶಬಂಧವು ಏರ್ಪಡುವುದು. "ಆತ್ಮನೊಳಗೆ ನಿರಂತರ ಕರ್ಮದ ಹರಿವು ಆದಾಗ, ಅದು ತನ್ನ ಜಾಗವನ್ನು ಆಕ್ರಮಿಸಿಕೊಳ್ಳುವ ದ್ರವ್ಯವನ್ನೇ ಆಕ್ರಮಿಸಿಕೊಳ್ಳುತ್ತದೆ. ಇದರ ಚಟುವಟಿಕೆಗಳ ಆಧಾರದ ಮೇಲೆ ಬಂಧದ ವ್ಯಾಪ್ತಿ ನಿರ್ಧಾರವಾಗುವುದರಿಂದ ಇದನ್ನು ಪ್ರದೇಶ ಬಂಧ ಎನ್ನುತ್ತಾರೆ. ವಿಶ್ವದಲ್ಲಿನ ಕರ್ಮಾವಕಾಶವೆಲ್ಲವೂ ಕರ್ಮಾಣುಗಳಿಂದಲೇ ತುಂಬಿಕೊಂಡಿದೆ. ಆತ್ಮನು ಕಷಾಯಗಳ ಮೇಲೆ ಕರ್ಮಾಣುಗಳನ್ನು ಪ್ರಾಪ್ತವಾಗಿಸಿಕೊಳ್ಳುತ್ತಾನೆ."[೨೧೦]

೩.೧.೧.೮. ಸಂವರ:

"ಆಸ್ರವನಿರೋಧಃ ಸಂವರಃ ॥೯.೧॥"[೨೧೧]

ಕರ್ಮದ ಆಸ್ರವವಾಗದಂತೆ ತಡೆಯುವುದೇ ಸಂವರ. "ಕರ್ಮಗಳಿಂದ ಆತ್ಮವನ್ನು ಮುಕ್ತಗೊಳಿಸುವ ಪ್ರಕ್ರಿಯೆಯೇ ಸಂವರ. ಇದು ಆಸ್ರವಕ್ಕೆ ವಿರುದ್ಧವಾದುದು. ಇದು ಹೊಸ ಕರ್ಮಾಣುಗಳ ಆಗಮನವನ್ನು ತಡೆಯುವುದರಿಂದ ಇದು ಆಧ್ಯಾತ್ಮಿಕ ಬೆಳವಣಿಗೆಯ ಮುನ್ಸೂಚನೆ. ಮೋಹದಿಂದ ಬಿಡುಗಡೆ ಹೊಂದಿರುವುದು ಹಾಗೂ ಬಯಕೆಯಿಲ್ಲದಿರುವಿಕೆಗಳು ಕರ್ಮಾಣುಗಳ ಒಳ ಪ್ರವೇಶವನ್ನು ತಡೆಯುತ್ತದೆ."[೨೧೨]

೧) ಸಂವರ ಭೇದಗಳು:

ಕರ್ಮದ ಆಸ್ರವವನ್ನು ತಡೆಯುವಲ್ಲಿ ಸಂವರದ ಕಾರ್ಯ ಮುಖ್ಯವಾದುದು. ಸಂವರದಲ್ಲಿ ಗುಪ್ತಿ, ಸಮಿತಿ, ಧರ್ಮ, ಅನುಪ್ರೇಕ್ಷೆ, ಪರೀಷಹಜಯ, ಚಾರಿತ್ರ ಎಂದು ೬ ಭೇದಗಳಿವೆ.

"ಸ ಗುಪ್ತಿ ಸಮಿತಿ ಧರ್ಮಾನುಪ್ರೇಕ್ಷಾ ಪರೀಷಹಜಯ ಚಾರಿತ್ರೈಃ॥೯.೨॥"[೨೧೩]

೧. **ಗುಪ್ತಿ:** "ಯಾವುದರ ಬಲದಿಂದ ಸಂಸಾರಕ್ಕೆ ಕಾರಣವಾದ ಆತ್ಮನ ಗೋಪನ ಉಂಟಾಗುವುದೋ ಅಂದರೆ ರಕ್ಷಣೆ ಉಂಟಾಗುವುದೋ ಅದುವೇ ಗುಪ್ತಿ."[೨೧೪] ಇದರಲ್ಲಿ ಮೂರು ಭೇದಗಳು. ಅವು ಮನೋಗುಪ್ತಿ, ವಚನಗುಪ್ತಿ, ಕಾಯಗುಪ್ತಿಗಳು.

- ❖ ಮನೋಗುಪ್ತಿ: ಮನಸ್ಸಿನ ನಿಯಂತ್ರಣ.
- ❖ ವಚನಗುಪ್ತಿ: ಮಾತಿನ ನಿಯಂತ್ರಣ.
- ❖ ಕಾಯಗುಪ್ತಿ: ಶರೀರ ನಿಯಂತ್ರಣ.

---

೨೧೦. ಎಸ್. ಪಿ. ಪದ್ಮಪ್ರಸಾದ್ (ಅನು); **ಜೈನಧರ್ಮಕ್ಕೊಂದು ಕೈಪಿಡಿ** : ಪುಟ. ೧೫೭
೨೧೧. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ನವಮೋಧ್ಯಾಯಃ) ಪು. ೧೬೨
೨೧೨. ಎಸ್. ಪಿ. ಪದ್ಮಪ್ರಸಾದ್ (ಅನು) : **ಜೈನಧರ್ಮಕ್ಕೊಂದು ಕೈಪಿಡಿ** : ಪುಟ. ೧೫೭
೨೧೩. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ನವಮೋಧ್ಯಾಯಃ) ಪು. ೧೬೨
೨೧೪. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೧೨೬

೨. **ಪಂಚ ಸಮಿತಿ:** ಪ್ರಾಣಿಹಿಂಸೆಯ ಪರಿಹಾರಕ್ಕಾಗಿ ಸಮ್ಯಕ್ತ್ವದ ಪ್ರವೃತ್ತಿಯೇ ಸಮಿತಿ. ಇದರಲ್ಲಿ ಐದು ಬಗೆಗಳು.

- ❖ ಈರ್ಯಾಸಮಿತಿ: ಜೀವಿಗಳಿಗೆ ಭಾದೆಯಾಗದಂತೆ ಹಗಲು ಬೆಳಕಿನಲ್ಲಿ ಕೆಳಗೆ ನೋಡಿಕೊಂಡು ನಡೆಯುವುದು.
- ❖ ಭಾಷಾಸಮಿತಿ: ಹಿತ–ಮಿತವಾದ ಮಾತುಗಳು, ನಿರ್ಧಾರಾತ್ಮಕ ಮಾತುಗಳನ್ನು ಆಡುವುದು.
- ❖ ಏಷಣಾಸಮಿತಿ: ಜ್ಞಾನ, ತಪ ಹಾಗೂ ತಪಗಳ ನಿಮಿತ್ತವಾಗಿ ಪರರಿಂದ ಆಹಾರವನ್ನು ಸ್ವೀಕರಿಸುವಾಗ ಯಾವುದೇ ರಾಗದ್ವೇಷಗಳಿಲ್ಲದೇ ಪಡೆಯುವುದು.
- ❖ ಆದಾನ ನಿಕ್ಷೇಪ ಸಮಿತಿ: ಧಾರ್ಮಿಕ ಕಾರ್ಯಗಳಿಗೆ ಸಾಮಗ್ರಿಯನ್ನು ತರುವಾಗ ಪ್ರಾಣಿಗಳಿಗೆ ಯಾವುದೇ ರೀತಿಯಲ್ಲಿ ಹಿಂಸೆಯಾಗದಂತೆ ನೋಡಿಕೊಳ್ಳುವುದು.
- ❖ ಉತ್ಸರ್ಗ ಸಮಿತಿ: ಪ್ರಾಣಿ–ಪಕ್ಷಿಗಳಿಗೆ ತೊಂದರೆಯಾಗದ ಸ್ಥಳಗಳಲ್ಲಿ ಮಾತ್ರ ಮಲ–ಮೂತ್ರ ವಿಸರ್ಜನೆ ಮಾಡುವುದು.

೩. **ಧರ್ಮ:** ಧರ್ಮವು ಹತ್ತು ಗುಣಗಳನ್ನು ಒಳಗೊಂಡಿದೆ. ಆ ಗುಣಗಳ ವಿಶೇಷತೆಗಳನ್ನು ತಿಳಿಸಲು ಸಾಮಾನ್ಯ ಪದಗಳ ಹಿಂದೆ **'ಉತ್ತಮ'** ಎಂಬ ಪದವನ್ನು ಸೇರಿಸಿ ಹೇಳಲಾಗುತ್ತದೆ.

- ❖ ಉತ್ತಮ ಕ್ಷಮಾಧರ್ಮ: ಕ್ಷಮಾಗುಣನ್ನು ಬೆಳೆಸಿಕೊಳ್ಳುವುದು.
- ❖ ಉತ್ತಮ ಮಾರ್ಧವಧರ್ಮ: ಅಂಹಕಾರವನ್ನು ತೊರೆವುದು.
- ❖ ಉತ್ತಮ ಆರ್ಜವಧರ್ಮ: ಮಾಯೆಯನ್ನು ತೊರೆಯುವುದು.
- ❖ ಉತ್ತಮ ಶೌಚಧರ್ಮ: ಲೋಭಾದಿಗಳನ್ನು ತೊರೆದು ಮನಶ್ಶುದ್ಧಿಯಾಗುವುದು.
- ❖ ಉತ್ತಮ ಸತ್ಯಧರ್ಮ: ಸತ್ಯವಚನಗಳನ್ನೇ ಆಡುವುದು.
- ❖ ಉತ್ತಮ ಸಂಯಮಧರ್ಮ: ಪ್ರಾಣಿಗಳಿಗೆ ನೋಯಿಸುವುದನ್ನು ತಡೆಯುವುದು. ಸಹನೆ.
- ❖ ಉತ್ತಮ ತಪ ಧರ್ಮ: ಕರ್ಮಕ್ಷಯಾರ್ಥವಾಗಿ ಇಂದ್ರಿಯಗಳ ದರ್ಪಗಳನ್ನು ಕಳೆಯುವುದು.
- ❖ ಉತ್ತಮ ತ್ಯಾಗ ಧರ್ಮ: ಯೋಗ್ಯರಲ್ಲಿ ದಾನವನ್ನು ಮಾಡುವುದು.
- ❖ ಉತ್ತಮ ಆಕಿಂಚನ್ಯ ಧರ್ಮ: ಶರೀರಾದಿಗಳ ಮೋಹವನ್ನು ಕಳೆದುಕೊಳ್ಳುವುದು.ಷ
- ❖ ಉತ್ತಮ ಬ್ರಹ್ಮಚರ್ಯ ಧರ್ಮ: ಪರಸ್ತ್ರೀ, ಪರಪುರುಷರಲ್ಲಿ ವಿರತಿಯನ್ನು ಹೊಂದುವುದು.

೪. **ಅನುಪ್ರೇಕ್ಷೆಗಳು:** ಶರೀರಾದಿಗಳ ಸ್ವಭಾವನ್ನು ಪುನರ್ಮನನ ಮಾಡುವುದೇ ಅನುಪ್ರೇಕ್ಷೆ. ಇದರಲ್ಲಿ ಹನ್ನೆರಡು ಬಗೆಗಳಿವೆ. ಅವುಗಳನ್ನು ದ್ವಾದಶಾನುಪ್ರೇಕ್ಷೆಗಳು ಎನ್ನುವರು.

- ❖ ಅನಿತ್ಯ: ಆತ್ಮನ ಜ್ಞಾನದ ಹೊರತಾಗಿ ಶರೀರೇಂದ್ರಿಯಗಳು ಕ್ಷಣಿಕವಾದವುಗಳು.
- ❖ ಅಶರಣ: ಸಂಸಾರ ದುಃಖದಿಂದ ಕೂಡಿದ್ದು. ಇದರಿಂದ ಮುಕ್ತನಾಗಲು ಆತ್ಮನಿಗೆ ಶರಣಾಗುವುದು.
- ❖ ಸಂಸಾರ: ಚತುರ್ಗತಿಗಳ ನಾನಾ ಯೋನಿಗಳಲ್ಲಿ ಜನಿಸಿ ತೊಳಲುವುದು.
- ❖ ಏಕತ್ವ: ಹುಟ್ಟು, ಸಾವುಗಳ ಈ ಜೀವನದ ನಡುವೆ ಆತ್ಮ ಒಬ್ಬನೇ ದಾರಿದೀಪ.
- ❖ ಅನ್ಯತ್ವ: ಪ್ರಾಪ್ತ ಶರೀರವೂ ತನ್ನದಲ್ಲ.
- ❖ ಅಶುಚಿತ್ವ: ಸಪ್ತಧಾತು, ಮಲ–ಮೂತ್ರಾದಿಗಳಿಂದ ಕೂಡಿದ ಈ ಶರೀರವೂ ಎಂದಿಗೂ ಅಶುಚಿಯಾದುದು.
- ❖ ಆಸ್ರವ: ಮಿಥ್ಯಾತ್ವದಿಂದ ಬರುವ ಕರ್ಮಗಳು.
- ❖ ಸಂವರ: ಕರ್ಮಗಳನ್ನು ತಡೆಯುವುದು.
- ❖ ನಿರ್ಜರೆ: ಕರ್ಮಗಳಿಂದ ನಿವೃತ್ತಿ ಹೊಂದುವುದು.
- ❖ ಲೋಕ: ಲೋಕ ಸೃಷ್ಟಿಗೆ ಸಂದ ಅನಾದಿ ನಿಧನ ಪುದ್ಗಲಗಳ ಬಗೆಗೆ ಚಿಂತಿಸುವುದು.
- ❖ ಬೋಧಿದುರ್ಲಭ: ಮೋಕ್ಷಪ್ರಾಪ್ತಿಗಾಗಿ ಪಡೆಯುವ ಜ್ಞಾನದ ಕುರಿತಾಗಿ ಚಿಂತಿಸುವುದು.
- ❖ ಧರ್ಮ: ನಿಜವಾದ ಧರ್ಮದ ತತ್ತ್ವಗಳು ಮತ್ತು ಅದರ ಸ್ವರೂಪದ ಕುರಿತು ಚಿಂತಿಸುವುದು.

೫. **ಪರೀಷಹಜಯ:** ಕರ್ಮ ನಿರ್ಜರೆಯನ್ನು ಮಾಡಿಕೊಳ್ಳುವ ಮಾರ್ಗದಲ್ಲಿ ಎದುರಾಗುವ ತೊಂದರೆಗಳನ್ನು ಪರೀಷಹಗಳು ಎನ್ನುವರು. ಆತ್ಮಕಲ್ಯಾಣಕ್ಕಾಗಿ ಚಿಂತಿಸುವಾಗ ಎದುರಾಗುವ ತೊಂದರೆಗಳನ್ನು ಜಯಿಸುವುದೇ ಪರೀಷಹಜಯ.

"ಮಾರ್ಗಾಚ್ಯವನ ನಿರ್ಜರಾರ್ಥಂ ಪರಿಷೋಢವ್ಯಾಃ ಪರೀಷಹಾಃ ॥೯.೮॥"[೨೧೫]

ಇದರಲ್ಲಿ ೨೨ ಭೇದಗಳಿವೆ.

- ❖ ಕ್ಷುತ್: ಹಸಿವು.
- ❖ ಪಿಪಾಸಾ: ನೀರಡಿಕೆ.
- ❖ ಶೀತ: ತಂಪಿನಿಂದಾಗುವ ಬಾಧೆ.
- ❖ ಉಷ್ಣ: ಉಷ್ಣದಿಂದಾಗುವ ಬಾಧೆ.
- ❖ ದಂತಮಶತ: ಸೊಳ್ಳೆ, ಜಿಗನೆಗಳ ಕಡಿತದಿಂದ ಉಂಟಾಗುವ ನೋವು.

---

೨೧೫. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ನವಮೋಧ್ಯಾಯಃ) ಪು. ೧೬೪

❖ ನಾಗ್ನ್ಯ: ನಗ್ನತ್ವದಿಂದ ಉಂಟಾಗುವ ನಾಚಿಕೆ.

❖ ಅರತಿ: ಇಷ್ಟಪಡದಿರುವುದು.

❖ ಸ್ತ್ರೀ: ಸ್ತ್ರೀಯರನ್ನು ನೋಡಿ ಉಂಟಾಗುವ ಮಾನಸಿಕ ಚಾಂಚಲ್ಯತೆ.

❖ ಚರ್ಯಾ: ನಡೆಯುವುದರಿಂದ ಉಂಟಾಗುವ ಬಳಲಿಕೆ.

❖ ನಿಷದ್ಯಾ: ಒಂದೇ ಸ್ಥಳದಲ್ಲಿ ಕುಳಿದು ಧ್ಯಾನ ಮಾಡುವಾಗ ಉಂಟಾಗುವ ದೈಹಿಕ ತೊಂದರೆಗಳು.

❖ ಶಯ್ಯಾ: ಹಾಸಿಗೆ ಇಲ್ಲದೇ ಮಲಗುವುದು.

❖ ಆಕ್ರೋಶ: ಇನ್ನೊಬ್ಬರ ನಡಾವಳಿಗಳನ್ನು ಕಂಡು ಉಂಟಾಗುವ ಕೋಪ.

❖ ವಧ: ಜೀವಿಗಳನ್ನು ಸಾಯಿಸುವುದು.

❖ ಯಾಚನೆ: ಅನ್ಯರಿಂದ ಪಡೆದುಕೊಳ್ಳಬೇಕೆಂಬ ವಾಂಛೆ.

❖ ಅಲಾಭ: ಭಿಕ್ಷೆ ದೊರೆಯದಿದ್ದಾಗ ಉಂಟಾಗುವ ಬೇಸರ.

❖ ರೋಗ: ದೈಹಿಕ ಬಾಧೆಗಳು.

❖ ತೃಣಸ್ಪರ್ಶ: ಹುಲ್ಲು, ಮುಳ್ಳುಗಳು ಚುಚ್ಚುದಾಗ ಉಂಟಾಗುವ ನೋವುಗಳು.

❖ ಮಲ: ಸ್ವಶರೀರವು ಅಶುಚಿಯೆಂದು ತಿಳಿಯುವುದು.

❖ ಸತ್ಕಾರ: ಇತರರಿಂದ ಗೌರವಾದರಗಳನ್ನು ಪಡೆಯಬೇಕೆಂಬ ಆಸೆ.

❖ ಪ್ರಜ್ಞಾ: ತನ್ನ ಜ್ಞಾನದ ಕುರಿತಾದ ಅಹಂಕಾರ.

❖ ಅಜ್ಞಾನ: ತಿಳಿದಿಲ್ಲದಿದ್ದರೂ ತಿಳಿದಿದೆಯೆನ್ನುವುದು.

❖ ಆದರ್ಶನ: ಮೋಕ್ಷ ಪ್ರಾಪ್ತಿಯಾಗಲಿಲ್ಲವೆಂಬ ಬೇಸರ.

ಈ ೨೨ ಪರೀಷಹಗಳನ್ನು ದಾಟುವುದರಿಂದ ಮೋಕ್ಷದ ದಾರಿ ಸುಗಮವಾಗುವುದು.

೬. **ಚಾರಿತ್ರ:** ಪಾಪಕ್ರಿಯೆಗಳಿಂದ ಸಾಧಿಸುವ ನಿವೃತ್ತಿಯೇ ಚಾರಿತ್ರ. ಇದರಲ್ಲಿ ಐದು ಭೇದಗಳು.

❖ ಸಾಮಾಯಿಕ: ಸರ್ವಜೀವಿಗಳಲ್ಲಿ ಸಮತಾಭಾವವನ್ನು ಹೊಂದುವುದು.

❖ ಚೇದೋಪಸ್ಥಾಪನಾ: ಪ್ರಮಾದಗಳಿಂದಾದ ದೋಷಗಳನ್ನು ಪ್ರಾಯಶ್ಚಿತವಿಧಿಯಿಂದ ಕಳೆದುಕೊಳ್ಳುವುದು.

❖ ಪರಿಹಾರವಿಶುದ್ಧಿ: ಗುಪ್ತಿಸಮಿತಿಗಳಿಂದ ದೋಷಗಳನ್ನು ಕಳೆದುಕೊಳ್ಳುವುದು.

❖ ಸೂಕ್ಷ್ಮಸಾಂಪರಾಯ: ಕಷಾಯಗಳನ್ನು ಕಳೆದುಕೊಳ್ಳುವುದು.

❖ ಯಥಾಖ್ಯಾತಮಿತಿ: ಆತ್ಮನ ಯಥಾಸ್ವರೂಪವನ್ನು ಕಂಡುಕೊಳ್ಳುವುದು.

ಹೀಗೆ ಲೌಕಿಕ ಬದುಕಿನ ಕಷ್ಟಗಳನ್ನು ಅರ್ಥೈಸಿಕೊಂಡು ಆತ್ಮಕಲ್ಯಾಣಕ್ಕಾಗಿ ಸಂವರವು ದಾರಿದೀಪವಾಗುತ್ತದೆ. ಧರ್ಮಶ್ರದ್ಧೆಯು ಹೊಸ ಕರ್ಮಾಣುಗಳ ಒಳಹರಿವನ್ನು ತಡೆಯುತ್ತದೆ. ಅದರಿಂದ ಮೋಕ್ಷಮಾರ್ಗವು ಸುಲಭವಾಗುತ್ತದೆ ಎಂದು ಗ್ರಂಥಕಾರರು ತಿಳಿಸುತ್ತಾರೆ.

೩.೧.೧.೯. ನಿರ್ಜರೆ:

ಸಂವರವು ಕರ್ಮಗಳು ಒಳಬರದಂತೆ ತಡೆದರೆ ನಿರ್ಜರವು ಕರ್ಮಗಳಿಂದ ಮುಕ್ತಿಯನ್ನು ಕೊಡಿಸುತ್ತದೆ. ಅಂದರೆ ಕರ್ಮಗಳನ್ನು ಕಳೆಯುತ್ತದೆ. "ಒಳಸೇರಿರುವ ಕರ್ಮಗಳು ಕಳಚಿಹೋಗುವಂತೆ ಮಾಡುವ ಪ್ರಕ್ರಿಯೆಯೇ ನಿರ್ಜರಾ. ಒಂದರ್ಥದಲ್ಲಿ ಇದು ಕರ್ಮನಾಶದ ಪ್ರಕ್ರಿಯೆ. ಹೀಗೆ ನಾಶವಾಗುವ ಮೂಲಕ ಅಥವಾ ಅನುಭವಿಸಲ್ಪಡುವ ಮೂಲಕ ಕರ್ಮಗಳನ್ನು ಕಳಚಿಕೊಂಡಾಗ ಆತ್ಮನು ತನ್ನ ಪರಿಶುದ್ಧ ಸ್ವರೂಪವನ್ನು ಪುನಃ ಗಳಿಸಿಕೊಳ್ಳುತ್ತಾನೆ."[೨೧೬] ಪ್ರಸ್ತುತ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯಲ್ಲಿ ನಿರ್ಜರೆಯ ಬಗೆಗೆ ಪ್ರತ್ಯೇಕವಾಗಿ ಹೇಳಿಲ್ಲ. ಸಂವರದ ಕುರಿತು ಹೇಳುವಾಗಲೇ ಇದರ ಪ್ರಸ್ತಾಪವನ್ನು ಮಾಡಲಾಗಿದೆ. ಆದರೆ ಜೈನಾಗಮಗಳ ಸೈದ್ಧಾಂತಿಕ ನೆಲೆಯಲ್ಲಿ ನಿರ್ಜರವೂ ಕೂಡ ಅಷ್ಟೇ ಪ್ರಾಮುಖ್ಯತೆಯ್ನು ಹೊಂದಿದೆ. ಆದರೆ ದ್ವಾದಶಾನುಪ್ರೇಕ್ಷೆಗಳ ಕುರಿತು ಅಧ್ಯಯನ ಮಾಡುವಾಗ ಇದರ ಕುರಿತು ಸವಿಸ್ತಾರವಾಗಿ ಅರಿತುಕೊಳ್ಳಬಹುದು. ಸಂವರದ ಕುರಿತು ಹೇಳುವಾಗ ನಿರ್ಜರವನ್ನು ಪ್ರಸ್ತಾಪಿಸಿದ ಸೂತ್ರ:

"ತಪಸಾ ನಿರ್ಜರಾ ॥೯.೩॥
ತಪದಿಂ ಸಂವರೆಯುಂ ನಿರ್ಜರೆಯುಮಕ್ಕುಂ॥"[೨೧೭]

ಅಂದರೆ ತಪಸ್ಸಿನಿಂದ ಸಂವರವೂ, ನಿರ್ಜವೂ ಉಂಟಾಗುತ್ತವೆ.

೩.೧.೧.೧೦. ತಪ:

ಪರಮಾನಂದ ಸ್ವರೂಪದಲ್ಲಿ ಪರದ್ರವ್ಯದ ಇಚ್ಛೆಯ ನಿರೋಧವನ್ನು ಮಾಡಿ, ಸಹಜಾನಂದ ರೂಪದ ಪರಿಣಾಮವನ್ನು ಹೊಂದುವುದೇ ತಪಾಚರಣೆಯಾಗಿದೆ. ಇದರಲ್ಲಿ ತಪದಲ್ಲಿ ಬಾಹ್ಯ ಮತ್ತು ಅಭ್ಯಂತರ ಎಂದು ಎರಡು ಭೇದಗಳು.

೧) **ಬಾಹ್ಯತಪ:** ಇದರಲ್ಲಿ ಆರು ಭೇದಗಳಿವೆ.

೧. ಅನಶನ: ಕರ್ಮಗಳನ್ನು ಕಳೆಯಲು ಮಂತ್ರಸಾಧನಾದಿ ಫಲಾಪೇಕ್ಷೆಗಳಿಲ್ಲದೇ ಉಪವಾಸ ಮಾಡುವುದು.
೨. ಅವಮೋದರ್ಯ: ದಿನವೂ ಸ್ವೀಕರಿಸುವ ಆಹಾರದಲ್ಲಿ ಕೆಲವು ತುತ್ತುಗಳನ್ನು ಕಡಿಮೆ ಮಾಡಿ ಉಣ್ಣುವುದು.
೩. ವೃತ್ತಿಪರಿಸಂಖ್ಯಾನ: ರಕ್ಷಣೆ ಕಾರಣಾರ್ಥವಾಗಿ ಭೋಜನ, ಭಾಜನಾದಿಗಳಿಗೆ ಕೆಲವೇ ಮನೆಗಳಿಂದ ಆಹಾರ ಸ್ವೀಕಾರ ಮಾಡುವೆನೆಂದು ಸಂಕಲ್ಪ ಮಾಡುವುದು.

---

೨೧೬. ಎಸ್. ಪಿ. ಪದ್ಮಪ್ರಸಾದ್ (ಅನು); **ಜೈನಧರ್ಮಕ್ಕೊಂದು ಕೈಪಿಡಿ** : ಪುಟ. ೧೬೫
೨೧೭. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ನವಮೋಧ್ಯಾಯಃ) ಪು. ೧೬೨

೪. ರಸಪರಿತ್ಯಾಗ: ಹಾಲು, ತುಪ್ಪ ಮೊದಲಾದ ಪದಾರ್ಥಗಳನ್ನು ವರ್ಜಿಸುವುದು.

೫. ವಿವಿಕ್ತ ಶಯನಾಸನ: ಧ್ಯಾನ, ಅಧ್ಯಯನಕ್ಕೆ ಶುದ್ಧವಾದ ಸ್ಥಳದಲ್ಲಿ ಏಕಾಂತದಲ್ಲಿರುವುದು.

೬. ಕಾಯಕ್ಲೇಶ: ಕಲ್ಲು, ನೆಲ, ಮರದ ಕೆಳಗೆ ಮಲಗುವುದನ್ನು ರೂಢಿಸಿಕೊಳ್ಳುವುದು.

ಇವು ಬಾಹ್ಯ ತಪದ ಭೇದಗಳು.

೨) ಅಭ್ಯಂತರ ತಪ:

"ಪ್ರಾಯಶ್ಚಿತ ವಿನಯ ವೈಯಾವೃತ್ಯ ಸ್ವಾಧ್ಯಾಯ ವ್ಯುತ್ಸರ್ಗಧ್ಯಾನಾನ್ಯುತ್ತರಂ ॥೯.೨೦॥"[೨೧೮]

ಇದರಲ್ಲಿ ೬ ಭೇದಗಳು

೧. ಪ್ರಾಯಶ್ಚಿತ: ರಾಗಾದಿ ಪರಿಣಾಮದಿಂದಾದ ದ್ರವ್ಯ ಕರ್ಮವನ್ನು ದೂರಮಾಡುವುದು. "ಪ್ರಾಯ ಎಂದರೆ ಲೋಕ, ಚಿತ್ತವೆಂದರೆ ಮನಸ್ಸು. ಅಂದರೆ ಮುನಿಗಳ ಮನಸ್ಸು ಯಾವುದರಲ್ಲಿ ನಿರತವಾಗಿರುತ್ತದೆಯೋ ಅದು ಪ್ರಾಯಶ್ಚಿತ."[೨೧೯] ಇದರಲ್ಲಿ ಆಲೋಚನಾ, ಪ್ರತಿಕ್ರಮಣ, ತದುಭಯ, ವಿವೇಕ, ವ್ಯುತ್ಸರ್ಗ, ತಪ, ಛೇದ, ಪರಿಹಾರ, ಉಪಸ್ಥಾಪನ ಎಂದು ಒಂಭತ್ತು ಪ್ರಕಾರಗಳಿವೆ.

೨. ವಿನಯ: ಕಷಾಯೇಂದ್ರಿಯಗಳನ್ನು ತಗ್ಗಿಸುವುದು. ಇದರಲ್ಲಿ ಜ್ಞಾನ, ದರ್ಶನ, ಚಾರಿತ್ರ, ಅಭ್ಯುತಾನಗಳು ಎಂದು ನಾಲ್ಕು ಭೇದಗಳು.

೩. ವೈಯಾವೃತ: ತಪಸ್ಸಿನ ಸಂದರ್ಭದಲ್ಲಿ ಶರೀರದ ಪೀಡೆಯ ಸಮಯದಲ್ಲಿ ಅದನ್ನು ನಿವಾರಿಸಲು ಮಾಡುವ ಕ್ರಿಯೆ. ಇದರಲ್ಲಿ ಆಚಾರ್ಯ, ಉಪಾಧ್ಯಾಯ, ಶೈಕ್ಷ್ಯ, ಗ್ಲಾನ, ಗಣ, ಕುಲ, ಸಂಘ, ಸಾಧು, ಮನೋಜ್ಞ ಎಂದು ಒಂಭತ್ತು ಭೇದಗಳು.

೪. ಸ್ವಾಧ್ಯಾಯ: ಆಗಮಗಳ ವಾಚನವೇ ಸ್ವಾಧ್ಯಾಯ. ಇದರಲ್ಲಿ ವಾಚನಾ, ಪೃಚ್ಛನಾ, ಅನುಪ್ರೇಕ್ಷಾ, ಆಮ್ನಾಯ ಹಾಗೂ ಧರ್ಮೋಪದೇಶ ಎಂದು ಐದು ಭೇದಗಳು.

೫. ವ್ಯುತ್ಸರ್ಗ: ಮೋಹೋದಯದಿಂದಾದ ರಾಗಾದಿ ಪರಿಣಾಮಗಳನ್ನು ತೊರೆಯುವುದು. ಇದರಲ್ಲಿ ಇದರಲ್ಲಿ ಉಪಧ್ಯ ಮತ್ತು ಪರಿಗ್ರಹ ನಿವೃತ್ತಿ ಎಂದು ಎರಡು ಭೇದಗಳು.

೬. ಧ್ಯಾನ: ಒಂದೇ ವಸ್ತುವಿನಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದು. ಇದರಲ್ಲಿ ಉತ್ತಮ ಸಂಹನನ, ಏಕಾಗ್ರತೆ, ಚಿಂತಾನಿರೋಧಗಳು ಧ್ಯಾನದ ಲಕ್ಷಣಗಳು. ಇದರಲ್ಲಿ ಆರ್ತ, ರೌದ್ರ, ಧರ್ಮ ಹಾಗೂ ಶುಕ್ಲ ಎಂದು ನಾಲ್ಕು ಭೇದಗಳು. ಇವುಗಳಲ್ಲಿ ಮತ್ತೆ ಅಂತರ್ಭೇದಗಳಿವೆ.

- ❖ ಆರ್ತಧ್ಯಾನ: ಇದರಲ್ಲಿ ಅಮನೋಜ್ಞ, ಮನೋಜ್ಞ, ವೇದನೀಯ, ನಿದಾನ ಎಂದು ೪ ಪ್ರಕಾರಗಳು.
- ❖ ರೌದ್ರಧ್ಯಾನ: ಹಿಂಸಾದಿ ಪಂಚ ಅವ್ರತಗಳೇ ಇದರ ಭೇದಗಳು.

---

೨೧೮. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ನವಮೋಧ್ಯಾಯಃ) ಪು. ೧೬೮

೨೧೯. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೨೨೯

❖ ಧರ್ಮಧ್ಯಾನ: ಆಜ್ಞಾ, ಅಪಾಯ, ವಿಪಾಕ, ಸಂಸ್ಥಾನ, ವಿಚಯಾಯ ಎಂದು ಇದರ ಭೇದಗಳು.

❖ ಶುಕ್ಲಧ್ಯಾನ: ಪೃಥಕ್ತ್ವವಿತರ್ಕ, ಏಕತ್ವವಿತರ್ಕ, ಸೂಕ್ಷ್ಮಕ್ರಿಯಾ ಪ್ರತಿಪಾತಿ, ವ್ಯುಪರತಕ್ರಿಯಾ ನಿವೃತ್ತಿ ಎಂದು ೪ ಭೇದಗಳು.

ಈ ಎಲ್ಲ ವಿಚಾರಗಳನ್ನು ಸಾರಾಂಶ ರೂಪದಲ್ಲಿ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯ ೯ನೆಯ ಅಧ್ಯಾಯದ ಕೊನೆಯಲ್ಲಿ ಗ್ರಂಥಕಾರನು ಚರ್ಚೆ ಮಾಡಿದ್ದಾನೆ. ಅದರ ಸಂಕ್ಷಿಪ್ತ ರೂಪ ಹೀಗಿದೆ: ಧ್ಯಾನಿಸುವ ಆಗಮ ದ್ರವ್ಯವು ಮನೋ, ವಚನ, ಕಾಯಗಳ ಯೋಗದ ಮೂಲಕ ಪರಿವರ್ತನೆಯನ್ನು ಉಂಟುಮಾಡುವ ವಿಚಾರಗಳೇ ಧ್ಯಾನಾದಿ ಯೋಗಗಳು. ಅನಾದಿ ಸಂಸಾರ ಸಾಗರವನ್ನು ದಾಟಲು ಹೇಳುವ ಪರಮಯತಿ ಸ್ವರೂಪದಿಂದಾದ ಪುರುಷಕಾರ ಸಾಮರ್ಥ್ಯದಿಂದ ದ್ರವ್ಯ ಪರಮಾಣುಗಳನ್ನು ಅವಲಂಬಿಸಿ ಸಮಸ್ತ ಅವಶೇಷ, ಚಿಂತಾ ವ್ಯಾಪಾರಗಳನ್ನು ಬಿಟ್ಟು, ಮಹಾಸಂವರದಿಂದ ಕರ್ಮಪ್ರಕೃತಿಗಳ ಸ್ಥಿತಿಯನ್ನು ಕುಂದಿಸುತ್ತ, ನಿರ್ಜರೆಯ ಮೂಲಕ ಅವುಗಳನ್ನು ಉಪಶಮ ಮಾಡಿಕೊಳ್ಳುವುದು.

ಹೀಗೆ ತಪಾಚಾರಗಳಿಂದ ಕರ್ಮನಿರ್ಜರೆಯನ್ನು ಹೊಂದುವವರು ಯಾರು ಎಂದು ಗ್ರಂಥಕಾರರು ಈ ಕೆಳಗಿನಂತೆ ಪಟ್ಟಿಯನ್ನು ಕೊಡುತ್ತಾರೆ.

“ಸಮ್ಯಕ್ತ್ವಾಭಿಮುಖನಪ್ಪ ಮಿಥ್ಯಾ ದೃಷ್ಟಿಯುಂ, ದೇಶವ್ರತಿಯುಂ, ಸಕಲವ್ರತಿಯುಂ, ಅನಂತಾನುಬಂಧಿಗಳನುಳಿದ ಪನ್ನೆರಡು ಕಷಾಯಂಗಳ ಸ್ವರೂಪಮಾಗೆ ಮಾಳ್ಪ ಅಸಂಯುತನಾದಿಯಾಗಿ ನಾಲ್ಕು ಗುಣಸ್ಥಾನದೊಳು ಇರ್ದಾವನಾನುರ್ಮೋವರ್ನುಂ ದರ್ಶನಮೋಹನೀಯಮಂ ಕಿಡಿಸುತ್ತಿದನುಂ ಚಾತ್ರಮೋಹನೀಯಮನುಪಶಮಿಸುತ್ತಿರ್ದನುಂ ಉಪಶಾಂತ ಕಷಾಯನುಂ ಚಾರಿತ್ರಮೋಹನೀಯಮಂ ಕಿಡಿಸುತ್ತಿರ್ದನುಂ ಕ್ಷೀಣ ಕಷಾಯನುಂ ಸ್ವಸ್ಥಾನ ಸಮುದ್ಘಾತ ಜಿನರುಮೆಂಬಿವರ್ಗಳು ಕ್ರಮದಿಂ ಅಸಂಖ್ಯೇಯಗುಣ ಅಸಂಖ್ಯಾತ ಗುಣಶ್ರೇಣಿ ಕರ್ಮನಿರ್ಜರೆಯನುಳ್ಳರು ॥”[೨೨೦]

ಮಿಥ್ಯಾದೃಷ್ಟಿಯುಳ್ಳಾತನು, ದೇಶವ್ರತಿಯು, ಸಕಲವ್ರತಿಯು, ನಾಲ್ಕು ಅಸಂಯತಗಳೂ ಹಾಗೂ ಗುಣಸ್ಥಾನಗಳನ್ನು ಹೊಂದಿದವನಾಗಿ ಕಷಾಯಗಳಿಂದ ಮುಕ್ತನಾದವನು, ದರ್ಶನ ಮೋಹನೀಯ, ಚಾರಿತ್ರ ಮೋಹನೀಯಗಳಿಂದ ಹೊರಬಂದವನು, ಸ್ವಸ್ಥಾನ, ಸಮುದ್ಘಾತ ಜಿನರು ಇವರೆಲ್ಲರೂ ಕ್ರಮವಾಗಿ ಅಸಂಖ್ಯೇಯ ಗುಣ ಹಾಗೂ ಅಸಂಖ್ಯಾತ ಗುಣಶ್ರೇಣಿಗಳನ್ನು ಹೊಂದಿ ಕರ್ಮನಿರ್ಜರೆಯನ್ನು ಸಾಧಿಸುವರು.

ಈ ಮುಂದಿನಂತೆ ಸಮ್ಯಕ್‌ದೃಷ್ಟಿ ಆಧಾರದಿಂದ ಕರ್ಮ ನಿರ್ಜರೆಗೆ ಒಳಗಾಗುವ ನಿರ್ಗ್ರಂಥರ ಗುಣಭೇದಗಳನ್ನು ಹೇಳಲಾಗಿದೆ.

“ಪುಲಾಕ ವಕುಶ ಕುಶೀಲ ನಿರ್ಗ್ರಂಥ ಸ್ನಾತಕಾ ನಿರ್ಗ್ರಂಥ ॥೯.೪೬॥”[೨೨೧]

---

೨೨೦. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** : (ನವಮೋಧ್ಯಾಯಃ)ಪು. ೧೭೮

೨೨೧. **ಅದೇ** : (ನವಮೋಧ್ಯಾಯಃ) ಪು. ೧೭೮

- **ಪುಲಾಕ:** ಉತ್ತರ ಗುಣಭಾವನೆಯಿಲ್ಲದೆ ಮೂಲ ಗುಣಭಾವನೆಗಳಲ್ಲಿ ಸಂಪೂರ್ಣತೆಯನ್ನು ಹೊಂದದವರು
- **ವಕುಶ:** ಅಖಂಡವ್ರತಿಗಳಾಗಿಯೂ ಶರೀರೋಪಕರಣ ಸಂಸ್ಕಾರಗಳಲ್ಲಿ ಆಸಕ್ತಿಯುಳ್ಳವರು.
- **ಕುಶೀಲ:** ಸಂಜ್ವಲನ ಕಷಾಯವನ್ನುಳಿದು ಇನ್ನುಳಿದ ಎಲ್ಲ ಕಷಾಯಗಳನ್ನು ಗೆದ್ದವರು.
- **ನಿರ್ಗ್ರಂಥ:** ಕಡಿಮೆ ಸಮಯದಲ್ಲಿಯೇ ಕೇವಲದರ್ಶನವನ್ನು ಸಾಧಿಸಿಕೊಳ್ಳುವವರು.
- **ಸ್ನಾತಕಾ:** ಜ್ಞಾನವರಣಾದಿ ಘಾತಿಕರ್ಮಗಳನ್ನು ಕ್ಷಯಿಸಿ, ಸಂಯೋಗ ಯೋಗಿಗಳಾದ ಕೇವಲಿಗಳು.

ಹೀಗೆ ಶುದ್ಧೋಪಯೋಗಾನುಭವವೆ ಸಂವರಪೂರ್ವಕವಾಗಿ ನಿರ್ಜರೆಗೆ ಹೇತುವಾಗುತ್ತದೆ. "ಕರ್ಮದ ಪರಿಪಾಕವು ಪ್ರಾಪ್ತವಾಗಿ ಶುಭಾಶುಭ ವಿಪಾಕದಿಂದ ಆ ಕರ್ಮವು ಬಿಟ್ಟುಹೋಗುವಂತೆ ನಿರ್ಜರೆಯು ಮಾಡುತ್ತದೆ. ಚತುರ್ಗತಿ ಸರ್ವಜೀವಿಗಳಿಗೆ ಸವಿಪಾಕ ನಿರ್ಜರೆಯೂ, ಸಮ್ಯಕ್‌ದೃಷ್ಟಿ ವ್ರತಧಾರಿಗಳಿಗೆ ವಿಪಾಕ ನಿರ್ಜರೆಯೂ ಉಂಟಾಗುತ್ತದೆ. ಜೀವ ಶುದ್ಧ ಪರಿಣಾಮದಿಂದ ಉಂಟಾಗುವುದು ಭಾವನಿರ್ಜರೆಯಾದರೆ, ಅದರಿಂದ ಬಿಡುಗಡೆಯಾಗುವ ಕರ್ಮಪುದ್ಗಲವು ದ್ರವ್ಯ ನಿರ್ಜರೆಯಾಗಿದೆ. ಕಾಯಕ್ಲೇಶಾದಿಗಳಿಂದ ಉಂಟಾಗುವುದು ಅಕಾಮ ನಿರ್ಜರೆಯಾಗಿದೆ. ಹೀಗೆ ತಪಸ್ಸಿನಿಂದ ಸಂವರ ಮತ್ತು ನಿರ್ಜರತ್ವಗಳು ಉಂಟಾಗುತ್ತವೆ."[೨೨೨]

೩.೧.೧.೧೧. ಮೋಕ್ಷ:

ಸಂಪೂರ್ಣ ಕರ್ಮಗಳನ್ನು ನಾಶಮಾಡಿ ಜನನ–ಮರಣಗಳಿಂದ ಬಿಡುಗಡೆ ಹೊಂದುವುದೇ ಮೋಕ್ಷವಾಗಿದೆ. ಇಂತಹ ಮೋಕ್ಷವು ಲಭಿಸಬೇಕಾದರೆ ಕೇವಲಜ್ಞಾನಪ್ರಾಪ್ತಿಯಾಗಬೇಕು.

"ಮೋಹಕ್ಷಯಾತ್ ಜ್ಞಾನದರ್ಶನಾವರಣಾಂತರಾಯ ಕ್ಷಯಾಚ ಕೇವಲಂ ॥೧೦.೧॥"[೨೨೩]

ಮೋಹನೀಯ, ಜ್ಞಾನಾವರಣೀಯ, ದರ್ಶನಾವರಣೀಯ ಹಾಗೂ ಅಂತರಾಯಗಳೆಂಬ ಈ ನಾಲ್ಕು ಘಾತಿಕರ್ಮಗಳನ್ನು ಕಳೆದುಕೊಳ್ಳುವುದರಿಂದ ಕೇವಲ ಜ್ಞಾನೋತ್ಪತ್ತಿಯಾಗುವುದು. ಇದರಿಂದ ಭಾವಮೋಕ್ಷ ಪ್ರಾಪ್ತಿಯಾಗುತ್ತದೆ. ಹೀಗೆ ಜ್ಞಾನಪ್ರಾಪ್ತಿಯಿಂದ ಬಂಧಗಳೆಲ್ಲ ಬಿಡುಗಡೆಯಾಗುವುದರಿಂದಲೂ, ನಿರ್ಜರೆಯಿಂದಲೂ ಕರ್ಮಗಳೆಲ್ಲವೂ ಕ್ಷಯಿಸುವುದರಿಂದ ಮೋಕ್ಷಪ್ರಾಪ್ತಿಯಾಗುವುದು. "ಯಾರು ತ್ರಿಲೋಕ ಚೂಳಿಕೆಯ ಸಮಾನವಾದ ನಿರ್ಮಲ ವಿವೇಕರೂಪ ದೀಪಿಕೆಯ ಪ್ರಕಾಶವನ್ನುಳ್ಳವನಿರುವುದರಿಂದ ಯಥಾಸ್ಥಿತ ಪದಾರ್ಥನಿಶ್ಚಯದಿಂದ ಉತ್ಸುಕತೆಯ ನಿವರ್ತನ ಮಾಡಿ, ಸ್ವರೂಪ ಮಂಥರನಿರುವುದರಿಂದ ಯಾವಾಗಲೂ

---

೨೨೨. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ :** ಪುಟ. ೧೯೮

೨೨೩. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ದಶಮೋಧ್ಯಾಯಃ) ಪು. ೧೭೮

ಉಪಶಾಂತಾತ್ಮಕನಾಗಿ ವರ್ತಿಸುತ್ತ, ಸ್ವರೂಪವೊಂದರಲ್ಲಿಯೇ ಅಭಿಮುಖರೂಪದಿಂದ ವಿಚರಿಸುತ್ತಿರುವುದರಿಂದ ಅಯಥಾಚಾರ ರಹಿತನಾಗಿ ವರ್ತಿಸುತ್ತ ನಿತ್ಯಜ್ಞಾನಿಯಾಗಿದ್ದಾನೆ. ಇಂತಹ ಸಂಪೂರ್ಣ ಶ್ರಾಮಣ್ಯವುಳ್ಳ ಶ್ರಮಣನನ್ನು ಮೋಕ್ಷತತ್ತ್ವವೆಂದು ಕರೆಯುವುದು."[೨೨೪]

ಬಂಧಗಳಿಂದಲೂ, ಸತ್ತ್ವ ಪ್ರಕೃತಿಗಳಿಂದಲೂ ನಿರ್ಮೂಲವಾಗುವುದೇ ಮೋಕ್ಷ. ಔಪಶಮಿಕ, ಕ್ಷಾಯಿಕ ಸಮ್ಯಕ್ತ್ವಗಳಿಂದ ಮೋಕ್ಷ ಸಾಧನೆಯಾಗುವುದು ಎಂದು ಗ್ರಂಥಕಾರರು ತಿಳಿಸುತ್ತಾರೆ. ಕುಂಭಾರನ ತಿಗುರಿಯಂತೆ ಪೂರ್ವ ಪ್ರಯೋಗದಿಂದ ತಿರುಗುತ್ತಲೇ ಇರುವ ಜನ್ಮಾಂತರಗಳಿಂದ ಜ್ಞಾನವೆಂಬ ಅಗ್ನಿಶಿಖೆಯಿಂದ ಕರ್ಮಮಲಗಳನ್ನು ತೊಳೆಯುವುದು ಮೋಕ್ಷಕ್ಕೆ ಕಾರಣವಾಗುವುದು. ಈ ಮುಂದಿನಂತೆ ಮೋಕ್ಷವು ಒದಗುವ ಸಂದರ್ಭಗಳನ್ನು ತಿಳಿಸಲಾಗಿದೆ.

"ಕ್ಷೇತ್ರಮುಂ ಕಾಲಮುಂ ಲಿಂಗಮುಂ ತೀರ್ಥಮುಂ ಚಾರಿತ್ರಮುಂ ಪ್ರತ್ಯೇಕಬದ್ಧರುಂ ಬೋಧಿತಬುದ್ಧರುಂ ಜ್ಞಾನಮುಂ ಅಂತರಮುಂ ಸಂಖ್ಯೆಯುಂ ಅಲ್ಪ ಬಹುತ್ವಮೆಂದಿವಱಿಂದಮುಂ ವರ್ತಮಾನಾತೀತಾನುಗ್ರಾಹಿ ನಯದ್ವಯ ವಿವಕ್ಷಾವಶದಿಂ ಸಿದ್ಧರು ಪೇಳಲ್ಪಡುವರು॥"[೨೨೫]

೧) **ಕ್ಷೇತ್ರ:** ಕ್ಷೇತ್ರದ ಪ್ರತ್ಯುತ್ಪನ್ನಗ್ರಾಹಿಯಾದ ಋಜುಸೂತ್ರನಯದ [೨೨೬] ಅಪೇಕ್ಷೆಯಿಂದ ಸಿದ್ಧಕ್ಷೇತ್ರಗಳಲ್ಲಿಯೂ, ಸ್ವಪ್ರದೇಶದಲ್ಲಿಯೂ, ಆಕಾಶದಲ್ಲಿಯೂ, ಏವಂಭೂತ ನಯದ ಅಪೇಕ್ಷೆಯಿಂದ ಹದಿನೈದು ಕರ್ಮಭೂಮಿಗಳೊಳು ಮೋಕ್ಷ ಸಿದ್ಧಿಸುವುದು.

೨) **ಕಾಲ:** ಏವಂಭೂತ ನಯಾಪೇಕ್ಷೆಯಿಂದ ಉತ್ಸರ್ಪಿಣಿ, ಅವಸರ್ಪಿಣಿ ಕಾಲಗಳೆರಡರಲ್ಲಿಯೂ ಮೋಕ್ಷ ಸಿದ್ಧಿಸುವುದು. ವಿಶೇಷವಾಗಿ ಅವಸರ್ಪಿಣಿಯ ತೃತೀಯ ಕಾಲದ ಕೊನೆಯಲ್ಲಿ, ಚತುರ್ಥ ಕಾಲದ ಮೊದಲಲ್ಲಿ ಹುಟ್ಟಿದವರಿಗೆ ಮೋಕ್ಷ ಸಿದ್ಧಿಸುವುದು. ದುಷಮಾ–ದುಷಮಾದಲ್ಲಿ ಮುಕ್ತಿಯಿಲ್ಲ.

೩) **ಗತಿ**: ಋಜುಸೂತ್ರನಯದ ಅಪೇಕ್ಷೆಯಿಂದ ಸಿದ್ಧಗತಿಯಲ್ಲಿಯೂ, ಭೂತ, ನೈಗಮನಯಗಳ ಅಪೇಕ್ಷೆಯಿಂದ ಮನುಷ್ಯಗತಿಯಲ್ಲಿಯೂ ಪ್ರಾಪ್ತಿಯಾಗುವುದು.

೪) **ಲಿಂಗ:** ಮೂರು ಲಿಂಗಗಳಲ್ಲಿ ಪುಲ್ಲಿಂಗಕ್ಕೆ ಮೋಕ್ಷ ಪ್ರಾಪ್ತಿಯಾಗುವುದು.

೫) **ತೀರ್ಥ**: ಕೆಲವರಿಗೆ ತೀರ್ಥಂಕರರು ಮೋಕ್ಷ ಪಡೆದ ಸ್ಥಳದಲ್ಲಿ ಮುಕ್ತಿ ದೊರೆಯುವುದು.

೬) **ಚಾರಿತ್ರ:** ಋಜುಸೂತ್ರ ನಯದ ಅಪೇಕ್ಷೆಯಿಂದ ಮೋಕ್ಷವಾಗುವುದು.

೭) **ಪ್ರತ್ಯೇಕ ಬುದ್ಧಬೋಧಿತ:** ಅನ್ಯರಿಂದ ಬೋಧಿಸಿಕೊಂಡು ಬೋದನೆಯನ್ನು ಪಡೆದ ಆತ್ಮವು ಸಿದ್ಧಿಯನ್ನು ಪಡೆಯಬಹುದು.

---

೨೨೪. ಶ್ರೀ. ಎಂ. ಬಿ. ಪಾಟೀಲ ; **ಪ್ರವಚನಸಾರ :** ಪುಟ ೪೦೩

೨೨೫. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ದಶಮೋಧ್ಯಾಯಃ) ಪು. ೧೮೩

೨೨೬. ನೋಡಿ, **ಅಧ್ಯಾಯ – ೩.೧.೧.೨. ಸಪ್ತ ನಯಗಳು** ; ಪುಟ. ೫೮

೮) **ಜ್ಞಾನ:** ಋಜುಸೂತ್ರ ನಯದ ಅಪೇಕ್ಷೆಯಿಂದ ಕೇವಲ ಜ್ಞಾನದಿಂದ ಮೋಕ್ಷವಾಗುವುದು.

೯) **ಅವಗಾಹನಾ:** ಮೂರುವರೆ ಕೈಯಳತೆಯ ಪ್ರದೇಶದಿಂದ ೫೨೫ ಬಿಲ್ಲುಗಳಷ್ಟು ಪ್ರದೇಶದಲ್ಲಿ ಮೋಕ್ಷ ಪ್ರಾಪ್ತವಾಗುವುದು.

೧೦) **ಅಂತರ:** ಒಂದು ಜನ್ಮದಲ್ಲಿ ಸಿದ್ಧತ್ವ ಪಾಪ್ತಿಯಾಗಿದ್ದರೆ ಮುಂದಿನ ಭವದಲ್ಲಿ ಮೋಕ್ಷವು ಕಡಿಮೆ ಅವಧಿಯಲ್ಲಿಯೇ ಉಪಲಬ್ಧವಾಗುತ್ತದೆ.

೧೧) **ಸಂಖ್ಯಾ:** ಒಂದು ಕಾಲ ಕನಿಷ್ಠ ಒಂದು ಜೀವಕ್ಕೆ, ಉತ್ಕೃಷ್ಟ ಕಾಲದಲ್ಲಿ ಒಂದು ಸಮಯದಲ್ಲಿ ೧೦೮ ಜೀವಕ್ಕೆ ಮೋಕ್ಷ ಪ್ರಾಪ್ತವಾಗುವುದು.

ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಜೀವನಿಗೆ ಆತ್ಮಕಲ್ಯಾಣ ಪ್ರಾಪ್ತವಾಗುವುದು. ಸಾಧಕನು ತನ್ನ ಸಾಧನೆಯಿಂದ ಆತ್ಮನನ್ನು ಅತ್ಯಂತ ಶುದ್ಧರೂಪದಲ್ಲಿ ಒಯ್ದು ನಿಲ್ಲಿಸುವುದೇ ಮುಕ್ತಿ. ಮುಕ್ತಸ್ಥಿತಿಯಲ್ಲಿರುವ ಆತ್ಮನು ಸರ್ವಜ್ಞನೂ, ಸರ್ವದರ್ಶಿಯೂ ಆಗಿರುವನು. ಅವನಿಗೆ ಅನಂತ ಸುಖವು ಲಭಿಸುವುದು. ಕರ್ಮಬಂಧಗಳ ಅಭಾವದಿಂದ ಕರ್ಮನಿರ್ಜರೆಯಾಗಿ, ಸಕಲ ಕರ್ಮಗಳ ನಾಶವಾಗುವುದೇ ಮುಕ್ತಿಯೆನಿಸಿಕೊಳ್ಳುತ್ತದೆ. "ಸಮ್ಯಕ್‌ದರ್ಶನ–ಜ್ಞಾನ–ಚಾರಿತ್ರದ ಏಕತೆಯಿಂದಲೂ ಮೋಕ್ಷ ಪ್ರಾಪ್ತವಾಗುವುದು. ಅದನ್ನೇ 'ಸಮ್ಯಗ್ದರ್ಶನಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ|' ಎಂದು ಹೇಳಲಾಗಿದೆ. ಅತಿಶಯಪೂರ್ವಕವಾದ ನಿಯಮದಿಂದ ಮೋಕ್ಷದ ಸಾಧಕವಾದ ಆ ಸಮ್ಯಗ್ದರ್ಶನ ಜ್ಞಾನ ಚಾರಿತ್ರದ ಏಕೀಭಾವವು ಅದು ಮೋಕ್ಷಮಾರ್ಗವೆಂದು ತಿಳಿಯುವುದು. ಅದು ಇಲ್ಲದಿದ್ದರೆ ಮೋಕ್ಷಮಾರ್ಗವಿಲ್ಲ."[೨೨೭]

"ಈಯಂದದ ಮೋಕ್ಷ ಸುಖದ ಪಡೆಪು ತತ್ತ್ವಾರ್ಥಭಾವನಾ ಫಲಮೆಂದು ನಿಶ್ಚಯಿಸುವುದು| ಇಂತು ತತ್ತ್ವಾರ್ಥದಜೆತಂ ಕಾರಣಮಪ್ಪ ಮೋಕ್ಷಶಾಸ್ತ್ರದೊಳು||"[೨೨೮]

ಹೀಗೆ ತತ್ತ್ವಾರ್ಥಸೂತ್ರವೆಂಬ ಮೋಕ್ಷಶಾಸ್ತ್ರದಲ್ಲಿ ಮೋಕ್ಷ ಸುಖದ ಫಲವನ್ನು ನಿಶ್ಚಯಿಸುವುದಾಗಿದೆ ಎಂದು ಹತ್ತನೆಯ ಅಧ್ಯಾಯದ ಕೊನೆಯಲ್ಲಿ ಗ್ರಂಥಕಾರನು ಹೀಗೆ ಹೇಳುತ್ತಾನೆ. "ಇದು ಸಕಲಾಗಮ ಸಂಪನ್ನ ಶ್ರೀಮಚ್ಚಂದ್ರಕೀರ್ತಿ ಭಟ್ಟಾರಕ ಪದ್ಮನಂದಿ ಸಿದ್ಧಾಂತದೇವ ಶ್ರೀಪಾದ ಪ್ರಸಾದಾಸಾಧಿತ ಸಮಸ್ತ ಸಿದ್ಧಾಂತಾಮೃತ ಪಾರಾವಾರಗ ಶ್ರೀಮದ್ದಿವಾಕರ ಭಟ್ಟಾರಕ ಮುನೀಂದ್ರವಿಚಿತ ತತ್ತ್ವಾರ್ಥಸೂತ್ರಾನುಗತ ಲಘುವೃತ್ತಿ" ಅಂದರೆ ತಾನು ಈ ಗ್ರಂಥವನ್ನು ರಚಿಸುವಾಗ ಚಂದ್ರಕೀರ್ತಿ ಭಟ್ಟಾರಕರಿಂದಲೂ, ಪದ್ಮನಂದಿ ಸಿದ್ಧಾಂತದೇವರಿಂದ ಆಶೀರ್ವಾದ ಪಡೆದುಕೊಂಡಿದ್ದನೆಂದು ಹೇಳಿ, ತನ್ನನ್ನು ದಿವಾಕರ ಭಟ್ಟಾರಕ ಎಂದು ಕರೆದುಕೊಂಡಿದ್ದಾನೆ.

---

೨೨೭. ಶ್ರೀ ಎಂ. ಬಿ. ಪಾಟೀಲ : **ಮೋಕ್ಷಮಾರ್ಗ ಪ್ರಕಾಶಕ** : ೩೫೪

೨೨೮. ಡಾ. ಹಂಪ ನಾಗರಾಜಯ್ಯ : **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ :** (ದಶಮೋಧ್ಯಾಯಃ) ಪು. ೧೮೭

೩.೨. ಬಾಲಚಂದ್ರದೇವ (೧೧೮೧) :

ಕನ್ನಡದ ಜೈನ ಧಾರ್ಮಿಕ ಶಾಸ್ತ್ರ ಕವಿಗಳಲ್ಲಿ ಬಾಲಚಂದ್ರದೇವನೂ ಒಬ್ಬನು. ಇವನು ಸಂಸ್ಕೃತದ 'ಪ್ರಾಭೃಕತ್ರಯ', 'ತತ್ತ್ವಾರ್ಥಸೂತ್ರ' ಹಾಗೂ 'ಪ್ರರಮಾತ್ಮಪ್ರಕಾಶಿಕಾ' ಗ್ರಂಥಗಳಿಗೆ ಕನ್ನಡ ವ್ಯಾಖ್ಯಾನವನ್ನು ಬರೆದಿದ್ದಾನೆ. "ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛದ ಕುಂದಕುಂದಾನ್ವಯಕ್ಕೆ ಸೇರಿದವನು. ಇವನ ಗುರು ೧೧೭೬ರಲ್ಲಿ ಗತಿಸಿದ ನಯಕೀರ್ತಿ. ಈತನ ಅಣ್ಣ ದಾಮಣಂದಿ. ಬಾಲಚಂದ್ರದೇವನಿಗೆ 'ಆಧ್ಯಾತ್ಮಿ ಬಾಳಚಂದ್ರ' ಎಂದು ಹೆಸರಿತ್ತು. ಈತನು ೧೧೮೧ರಲ್ಲಿದ್ದನು."[೨೨೯] ಈತನು ಆಚಾಯ ಉಮಾಸ್ವಾಮಿ ಕೃತ ಸಂಸ್ಕೃತದ 'ತತ್ತ್ವಾರ್ಥಸೂತ್ರ'ಕ್ಕೆ ಬರೆದಿರುವ 'ತತ್ತ್ವರತ್ನಪ್ರದೀಪಿಕೆ' ಎಂಬ ಕನ್ನಡ ವ್ಯಾಖ್ಯಾನವು ಲಭ್ಯವಾಗಿದೆ.

೩.೨.೧. ತತ್ತ್ವರತ್ನಪ್ರದೀಪಿಕೆ:

ಬಾಲಚಂದ್ರದೇವನು ತಾನು ಕುಮುದಚಂದ್ರಭಟ್ಟಾರಕನಿಗೆ ಬೋಧಿಸುವ ಸಲುವಾಗಿ 'ತತ್ತ್ವರತ್ನಪ್ರದೀಪಿಕೆ'ಯೆಂಬ ಕನ್ನಡ ವ್ಯಾಖ್ಯಾವನ್ನು ಬರೆದಿರುವುದಾಗಿ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಹೇಳಿಕೊಂಡಿದ್ದಾನೆ.

"ಇದು ಕುಮುದಚಂದ್ರಭಟ್ಟಾರಕಪ್ರತಿಬೋಧನಾರ್ಥಂ ಸಮಸ್ತ ಸೈದ್ಧಾಂತಿಕ
ಚಕ್ರವರ್ತಿ ಶ್ರೀ ನಯಕೀರ್ತಿಸಿದ್ಧಾಂತದೇವನಂದನ ವಿನಯಜನಾನಂದನ
ನಿಜರುಚಿಸಾಗರನಂದಿ ಪರಮಾತ್ಮದೇವಸೇವಾಸಾದಿತಾತ್ಮ ಸ್ವಭಾವ
ನಿತ್ಯಾನಂದ ಬಾಲಚಂದ್ರದೇವವಿರಚಿತ ತತ್ತ್ವರತ್ನಪ್ರದೀಪಿ
ಕಾಖ್ಯ ತತ್ತ್ವಾರ್ಥ ತಾತ್ಪರ್ಯ ವೃತ್ತಿಯೊಳ್"[೨೩೦]

ಪ್ರತಿ ಅಧ್ಯಾಯವು ಈ ಪದ್ಯದಿಂದಲೇ ಕೊನೆಯಾಗುತ್ತದೆ.

ಈ ಮುನ್ನವೇ ಹೇಳಿದಂತೆ ಸಂಸ್ಕೃತದಲ್ಲಿ ಆಚಾರ್ಯ ಉಮಾಸ್ವಾಮಿಯವರು 'ತತ್ತ್ವಾರ್ಥಸೂತ್ರ' ಎಂಬ ಆಗಮಾಂಶಗಳನ್ನು ಒಳಗೊಂಡ ಗ್ರಂಥವನ್ನು ಬರೆದರು. [೨೩೧] ತರುವಾಯದಲ್ಲಿ ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಟೀಕಾಗ್ರಂಥಗಳೂ, ವ್ಯಾಖ್ಯಾನ ಗ್ರಂಥಗಳೂ, ವೃತ್ತಿಗಳೂ ಬಂದವು. ಅಂತೆಯೇ ಕನ್ನಡದಲ್ಲಿಯೂ ಕೂಡ ಟೀಕೆ, ವ್ಯಾಖ್ಯಾನ, ವೃತ್ತಿಗಳು ರಚನೆಯಾದವು. ಅವುಗಳಲ್ಲಿ ಆಚಾರ್ಯ ದಿವಾಕರಣಂದಿ ಮುನಿಗಳ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ' ಹಾಗೂ ಬಾಲಚಂದ್ರದೇವನ 'ತತ್ತ್ವರತ್ನಪ್ರದೀಪಿಕೆ' ಈ ಎರಡು ಕೃತಿಗಳು ಪ್ರಮುಖವಾದವುಗಳು. ಇವೆರಡೂ ಗ್ರಂಥಗಳಿಗೂ ಉಮಾಸ್ವಾಮಿಗಳ 'ತತ್ತ್ವಾರ್ಥಸೂತ್ರ'ವೇ ಮೂಲ ಆಕರ. ಈಗಾಗಲೇ ದಿವಾಕರಣಂದಿ ಕೃತ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯನ್ನು ಇದೇ ಅಧ್ಯಾಯದಲ್ಲಿ ವಿಸ್ತೃತವಾಗಿ ಅಧ್ಯಯನ ಮಾಡಿ ವಿಶ್ಲೇಷಿಸಲಾಗಿದೆ. ಅದೇ ರೀತಿಯಾಗಿ ಪ್ರಸ್ತುತ ಬಾಲಚಂದ್ರದೇವ ಕೃತ 'ತತ್ತ್ವರತ್ನಪ್ರದೀಪಿಕೆ'ಗೂ 'ತತ್ತ್ವಾರ್ಥಸೂತ್ರ'ವೇ

---

೨೨೯. ಆರ್. ನರಸಿಂಹಾಚಾರ್ : **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** ; ಪುಟ. ೩೮೭
೨೩೦. ಎಚ್. ದೇವಿರಪ್ಪ : **ತತ್ತ್ವರತ್ನಪ್ರದೀಪಿಕೆ ;** ಪುಟ. ೭೭
೨೩೧. ನೋಡಿ, **ಅಧ್ಯಾಯ :** ೩.೧.೧. ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ ; ಪುಟ. ೪೯, ೫೦

ಆಕರವಾಗಿರುವುದರಿಂದ ವಿಷಯ ನಿರೂಪಣೆ, ಶೈಲಿಯನ್ನು ಹೊರತುಪಡಿಸಿದರೆ ಎರಡೂ ಕೃತಿಗಳಲ್ಲಿ ಚರ್ಚಿತವಾಗಿರುವ ವಿಷಯಗಳು ಮಾತ್ರ ಒಂದೇ ಆಗಿರುತ್ತದೆ. 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯಲ್ಲಿ ವೃತ್ತಿಗಳ ಮೂಲಕ ವಿಷಯವನ್ನು ನಿರೂಪಣೆ ಮಾಡಿದ್ದರೆ, 'ತತ್ತ್ವರತ್ನಪ್ರದೀಪಿಕೆ'ಯಲ್ಲಿ ಗದ್ಯದ ಮೂಲಕ ವ್ಯಾಖ್ಯಾನವನ್ನು ನೀಡಿ ವಿಷಯವನ್ನು ನಿರೂಪಿಸಲಾಗಿದೆ. ಹೀಗಾಗಿ ಈಗಾಗಲೇ ಈ ಗ್ರಂಥದಲ್ಲಿನ ಸಂಪೂರ್ಣ ವಿಷಯವು ದಿವಾಕರಣಂದಿ ಕೃತ ಗ್ರಂಥದ ವಿವರಣೆಯಲ್ಲಿ ವಿಶ್ಲೇಷಿಸಲಾಗಿದೆ. ಹೀಗಾಗಿ ವಿಷಯದ ಪುನರಾವರ್ತನೆ ಎನಿಸಬಾರದೆಂಬ ಉದ್ದೇಶದಿಂದ 'ತತ್ತ್ವರತ್ನಪದೀಪಿಕೆ'ಯಲ್ಲಿನ ವಿಷಯವನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯಲ್ಲಿರುವಂತೆ 'ತತ್ತ್ವರತ್ನಪ್ರದೀಪಿಕೆ'ಯಲ್ಲಿಯೂ ಹತ್ತು ಪ್ರಕರಣಗಳಿವೆ. ಗ್ರಂಥಾರಂಭದಲ್ಲಿ ಕವಿಯು, ಆಚಾರ್ಯ ಸಮಂತಭದ್ರರು ಹಾಗೂ ಪೂಜ್ಯಪಾದರಿಗೆ ವಂದಿಸಿದ್ದಾನೆ. ದಿವಾಕರಣಂದಿ ಮುನಿಗಳು ಹೇಳಿದಂತೆಯೇ ಬಾಲಚಂದ್ರದೇವನೂ –

"ನತ್ವಾ ಜಿನೇಶ್ವರಂ ವೀರಂ ವಕ್ಷ್ಯೇ ಕರ್ಣಾಟಭಾಷಯಾ ।
ತತ್ತ್ವಾರ್ಥಸೂತ್ರಸೂತ್ರಾರ್ಥಂ ಮನ್ದಬುದ್ಧ್ಯನುರೋಧತಃ ॥"[೨೩೨]

ಎಂದು ಮಹಾವೀರ ಜಿನೇಶ್ವರರಿಗೆ ವಂದಿಸಿ, ಮಂದಬುದ್ಧಿಯವರು ಅರಿಯುವಂತೆ ಕರ್ಣಾಟಕ ಭಾಷೆಯಲ್ಲಿ ತತ್ತ್ವಾರ್ಥ ಸೂತ್ರಾರ್ಥವನ್ನು ಹೇಳುವುದಾಗಿ ತಿಳಿಸುತ್ತಾನೆ.

ಆದಿಯಲ್ಲಿ ಕಥೆಯನ್ನು ನಿರೂಪಿಸುವಂತೆ ಗ್ರಂಥವನ್ನು ವಚನದ ಮೂಲಕ ಆರಂಭಿಸುತ್ತಾನೆ. 'ತತ್ತ್ವಾರ್ಥಸೂತ್ರ'ವು ಜೈನಧರ್ಮದ ದಿಗಂಬರ ಮತ್ತು ಶ್ವೇತಾಂಬರ ಪಂಥಗಳೆರಕ್ಕೂ ಆದ್ಯ ಗ್ರಂಥವಾಗಿದೆ ಎಂದು ಈ ಹಿಂದೆಯೇ ಉಲ್ಲೇಖಿಸಲಾಗಿದೆ.[೨೩೩] ಅಂತೆಯೇ 'ತತ್ತ್ವರತ್ನಪ್ರದೀಪಿಕೆ'ಯ ಆರಂಭದಲ್ಲಿ :

"ಸೌರಾಷ್ಟ್ರದೇಶಮಧ್ಯಸ್ಥಿತ ಊರ್ಜಯಮತಗಿರಿ ಸಮೀಪವರ್ತಿ ಗಿರಿ ನಗರಾಭಿಧಾನಪತ್ತನದೊಳ್ ಆಸನ್ನಭವ್ಯನುಂ ಸ್ವಪರಹಿತಾರ್ಥಿಯುಂ ದ್ವಿಜಕುಲೋತ್ಪನ್ನನುಂ ಶ್ವೇತಾಂಬರ ಭಕ್ತನುಮಪ್ಪ ದ್ವೈಪಾಯಕನೆಂಬನೊರ್ವಂ ಸಿತಪಟಮತಾನುಕೂಲ ಸಕಲಶಾಸ್ತ್ರಂಗಳನಱಿದು ಮೋಕ್ಷಮಾರ್ಗ ಪ್ರತಿಪಾದಕ ಶಾಸ್ತ್ರಕರಣೋದ್ಯತಚಿತ್ತಂ 'ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ' ಎಂದೊಂದು ಸೂತ್ರಮಂ ಪಲಗೆಯೊಳ್ಬರೆದು ಏನಾನುಮೊಂದು ಕಾರಣಂ ಕುಱಿತ್ತು ಪೋಪುದುಂ"[೨೩೪]

ಎಂದು ಗ್ರಂಥವನ್ನು ಆರಂಭಿಸುತ್ತಾನೆ. ಸೌರಾಷ್ಟ್ರದೇಶದ ಶ್ವೇತಾಂಬರ ವ್ಯಾಪಾರಿಯೊಬ್ಬ ಮೋಕ್ಷಮಾರ್ಗದ ಕುರಿತಾದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಗೃಧ್ರಪಿಂಛಾಚಾರ್ಯರೆನಿಸಿದ ಉಮಾಸ್ವಾಮಿಗಳ್ಳಲ್ಲಿಗೆ ಹೋಗಿ ಪ್ರಶ್ನಿಸುತ್ತಾನೆ. ಆಗ ಅವರು ಆತನಿಗೆ ಮೋಕ್ಷಮಾರ್ಗವನ್ನು

---

೨೩೨. ಎಚ್. ದೇವಿರಪ್ಪ : **ತತ್ತ್ವರತ್ನಪ್ರದೀಪಿಕೆ** ; ಪುಟ. ೦೧

೨೩೩. ನೋಡಿ, **ಅಧ್ಯಾಯ** : ೩.೧.೧. ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ ; ಪುಟ. ೪೯, ೫೦

೨೩೪. ಎಚ್. ದೇವಿರಪ್ಪ : **ತತ್ತ್ವರತ್ನಪ್ರದೀಪಿಕೆ** ; ಪುಟ. ೦೧

ಸೂತ್ರದ ಮೂಲಕ ಬೋಧಿಸುತ್ತಾರೆ. ಅದುವೇ ತತ್ತ್ವಾರ್ಥಸೂತ್ರವಾಗಿದೆ ಎಂದು ಬಾಲಚಂದ್ರದೇವ ಕವಿ ಕಥಾನಿರೂಪಣಾ ಶೈಲಿಯಲ್ಲಿ ಗ್ರಂಥವನ್ನು ಆರಂಭಿಸುತ್ತಾನೆ. ಇಲ್ಲಿ ಗಮನಾರ್ಹವಾದ ವಿಷಯವೆಂದರೆ **ಪ್ರಪ್ರಥಮ ಬಾರಿಗೆ 'ಶ್ವೇತಾಂಬರ' ಎಂಬ ಪದವು ಉಲ್ಲೇಖವಾಗಿರುವುದು.** ಅಲ್ಲದೇ ಶ್ವೇತಾಂಬರ ಪದಕ್ಕೆ ಸಂವಾದಿಯಾಗಿ **'ಸಿತಪಟಮತ'** ಎಂಬ ಪದದ ಬಳಕೆ ಮಾಡಿರುವುದನ್ನೂ ಇಲ್ಲಿ ಗುರುತಿಸಬಹುದಾಗಿದೆ. ಮುನ್ನಿನ ಕನ್ನಡದ ಯಾವುದೇ ಗ್ರಂಥದಲ್ಲಿಯೂ ಈ ಪದವು ಬಳಕೆಯಾಗಿಲ್ಲ. ಆದುದರಿಂದ ಶ್ವೇತಾಂಬರ ಪದದ ಬಳಕೆ ಪ್ರಸ್ತುತ ಗ್ರಂಥದಲ್ಲಿ ಮೊಟ್ಟಮೊದಲ ಬಾರಿಗೆ ಗುರುತಿಸಬಹುದು.

"ಸಮ್ಯಗ್ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ॥"[೨೩೫]

ಎಂಬ ಸೂತ್ರಕ್ಕೆ ಈ ಸೂತ್ರಕ್ಕೆ:

"ಸಮ್ಯಗ್ದರ್ಶನಮುಂ, ಸಮ್ಯಗ್‌ಜ್ಞಾನಮುಂ, ಸಮ್ಯಕ್ಚಾರಿತ್ರಮುಂ ಎಂದಿವು ಮೋಕ್ಷದ ಬಟ್ಟೆಯಕ್ಕುಂ. ಸಮ್ಯಗೆಂಬುದರರ್ಥಂ ಪ್ರಶಂಸೆಯೊಳ್ವರ್ತಿಸುವುದಱಿಂ ಸಮ್ಯಗ್ದರ್ಶನಂ ಸಮ್ಯಗ್‌ಜ್ಞಾನಂ ಸಮ್ಯಕ್ಚಾರಿತ್ರಮೆಂದು ಅದು ಬೇಱೆವೇಱೆ ಯೋಜಿಸೆಪಡೆಗುಂ. ಪದಾರ್ಥಂಗಳ ಯಥಾಸ್ವರೂಪದಱಿತಕ್ಕೆ ಕಾರಣಮಪ್ಪ ನಂಬುಗೆಯಂ ಕೊಳಲ್ವೇಡಿ ದರ್ಶನಕ್ಕೆ ಸಮ್ಯಗ್ವಿಶೇಷಣಂ. ಜೀವಾದಿಪದಾರ್ಥಂಗಳ್ ಎಂತಿರ್ದುವು ಅವಂ ಆ ಪ್ರಕಾರದಿಂ ಅಱಿವುದು ಸಮ್ಯಗ್‌ಜ್ಞಾನಂ. ಅದಕ್ಕೆ ವಿಮೋಹ ಸಂಶಯ ಸಂಸಾರಕಾರಣನಿವೃತ್ತಿಯಂ ಕುಱಿತ್ತು ಉದ್ಯುಕ್ತನಪ್ಪನ ಕರ್ಮಾದಾನನಿಮಿತ್ತ ಕ್ರಿಯಾವಿರತಿ ಸಮ್ಯಕ್ಚಾರಿತ್ರಂ"[೨೩೬]

ಎಂದು ವ್ಯಾಖ್ಯಾನವನ್ನು ನೀಡುತ್ತಾನೆ. ಇದೇ ರೀತಿಯಾಗಿ ಒಂದೊಂದು ಸೂತ್ರಕ್ಕೂ ಗದ್ಯರೂಪದಲ್ಲಿ ವ್ಯಾಖ್ಯಾನವನ್ನು ನೀಡಲಾಗಿದೆ.

ತತ್ತ್ವರತ್ನಪ್ರದೀಪಿಕೆಯಲ್ಲಿ ನಿರೂಪಿತವಾಗಿರುವ ವಿಷಯದ ಸಂಕ್ಷಿಪ್ತ ರೂಪ ಹೀಗಿದೆ:

ಪ್ರಥಮ ಪ್ರಕರಣವು ಮಂಗಲಾಚರಣದ ಮೂಲಕ ಆರಂಭವಾಗುತ್ತದೆ. ಮುಂದುವರೆದು, ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಗಳು ಮೋಕ್ಷಕ್ಕೆ ಮಾರ್ಗವಾಗುತ್ತವೆ. ಸಮ್ಯಕ್ತ್ವವು ನೈಸರ್ಗಿಕವಾಗಿ ಇಲ್ಲವೇ ಬೋಧನೆಯಿಂದ ಲಭಿಸುವುದು. ಪದಾರ್ಥಗಳ ಯಥಾಸ್ವರೂಪದಲ್ಲಿ ನಂಬುಗೆಯಿಡುವುದೇ ಸಮ್ಯಕ್‌ದರ್ಶನ. ಜೀವಾದಿಗಳು ಹೇಗಿರುವವು ಎಂಬುದನ್ನು ಅರಿಯುವುದೇ ಸಮ್ಯಕ್‌ಜ್ಞಾನ. ಸಂಸಾರಕಾರಣದಿಂದ ನಿವೃತ್ತನಾಗಲು ಬಯಸುವವನ ಕರ್ಮಕ್ಷಯ ಮಾಡುವುದೇ ಸಮ್ಯಕ್‌ಚಾರಿತ್ರ. ಸಮ್ಯಕ್‌ಜ್ಞಾನದಲ್ಲಿ ಮತಿ, ಶ್ರು, ಅವಧಿ, ಮನಃಪರ್ಯಾಯ ಹಾಗೂ ಕೇವಲ ಎಂದು ಐದು ಭೇದಗಳು ಎಂದು ಹೇಳಿ, ಸಪ್ತನಯಗಳನ್ನು ತಿಳಿಸಲಾಗಿದೆ. ಇದರಲ್ಲಿ ೩೩ ಸೂತ್ರಗಳಿಗೆ ವ್ಯಾಖ್ಯಾನವನ್ನು ನೀಡಲಾಗಿದೆ.

ದ್ವಿತೀಯ ಪ್ರಕರಣದಲ್ಲಿ ಸಮ್ಯಕ್ತ್ವದ ಔಪಶಮಿಕ, ಕ್ಷಾಯಿಕ, ಕ್ಷಯೋಪಶಮಿಕ ಎಂಬ ಭೇದಗಳನ್ನು ಹೇಳಿ ಸಮ್ಯಕ್‌ಚಾರಿತ್ರದ ಮೂಲಕ ಮೋಕ್ಷ ಸಾಧನೆ ಮಾಡಬೇಕಾದರೆ ಮೋಕ್ಷವು

---

೨೩೫. ಎಚ್. ದೇವಿರಪ್ಪ : **ತತ್ತ್ವರತ್ನಪ್ರದೀಪಿಕೆ** ; ಪುಟ. ೦೫
೨೩೬. **ಅದೇ** ; ಪುಟ. ೦೫, ೦೬

ಯಾರು ಯಾರಿಗೆ ಪ್ರಾಪ್ತವಾಗುವುದು ಎಂಬುದನ್ನು ತಿಳಿಸಲಾಗಿದೆ. ಜೀವಗಳಲ್ಲಿ ಮುಕ್ತರು ಮತ್ತು ಸಂಸಾರಿಗಳೆಂದು ಎರಡು ಭೇದಗಳಿವೆ. ನಾರಕವಾಸಿಗಳೆಲ್ಲವೂ ನಪುಂಸಕರು, ದೇವಗತಿಯಲ್ಲಿರುವವರು ಪುರುಷರು, ಮನುಷ್ಯ ಮತ್ತು ತಿರ್ಯಂಚಗಳಲ್ಲಿ ಸ್ತ್ರೀ, ಪುರುಷ ಹಾಗೂ ನಪುಂಸಕರು ಎಂದು ತ್ರಿವೇದಗಳು. ಇಲ್ಲಿ ವೇದಗಳು ಎಂದರೆ ಲಿಂಗಗಳು. ಸ್ತ್ರೀಯರಿಗೆ ಮೋಕ್ಷವಿಲ್ಲ ಎಂದು ಹೇಳಲಾಗಿದೆ. ಇದರಲ್ಲಿ 'ತತ್ತ್ವಾರ್ಥಸೂತ್ರ'ದ ೫೩ ಸೂತ್ರಗಳಿಗೆ ವ್ಯಾಖ್ಯಾನವನ್ನು ನೀಡಲಾಗಿದೆ.

ತೃತೀಯ ಪ್ರಕರಣದಲ್ಲಿ ಅಧೋಲೋಕದ ರತ್ನಪ್ರಭ, ಶರ್ಕರಪ್ರಭ, ವಾಲುಕಾಪ್ರಭ, ಪಂಕಪ್ರಭ, ಧೂಮಪ್ರಭ, ತಮಃಪ್ರಭ, ಮಹಾತಮಃಪ್ರಭ ಎಂಬ ಏಳು ನರಕಗಳು, ನರಕಬಿಲಗಳು ಹಾಗೂ ನಾರಕಗತಿಯ ಕುರಿತಾಗಿ ತಿಳಿಸಲಾಗಿದೆ. ಮಧ್ಯಲೋಕದ ಜಂಬೂದ್ವೀಪ, ಕಾಲಗಳ ವ್ಯತ್ಯಾಸಗಳ ಕುರಿತಾಗಿ ತಿಳಿಸಲಾಗಿದೆ. ಮನುಷ್ಯಗತಿಯಲ್ಲಿ ಆರ್ಯ ಮತ್ತು ಮ್ಲೇಚ್ಛರ ವ್ಯತ್ಯಾಸಗಳನ್ನೂ; ಉತ್ಸರ್ಪಿಣಿ, ಅವಸರ್ಪಿಣಿ ಕಾಲಕ್ಕೆ ತಕ್ಕಂತೆ ಬದಲಾಗುವ ಕರ್ಮಭೂಮಿ, ಭೋಗಭೂಮಿ ಹಾಗೂ ಅದಕ್ಕೆ ತಕ್ಕಂತೆ ಜಂಬೂದ್ವೀಪದಲ್ಲಿ ಆಗುವ ಬದಲಾವಣೆಗಳು ಮತ್ತು ಮನುಷ್ಯರ ಆಯುಸ್ಸನ್ನು ಕುರಿತು ೩೯ ಸೂತ್ರಗಳ ವ್ಯಾಖ್ಯಾನದ ಮೂಲಕ ತಿಳಿಸಲಾಗಿದೆ.

ಚತುರ್ಥ ಪ್ರಕರಣದಲ್ಲಿ ದೇವಗತಿ ಹಾಗೂ ದೇವತೆಗಳಲ್ಲಿನ ಭವನವಾಸಿ, ವೈಮಾನಿಕ, ವ್ಯಂತರ ಹಾಗೂ ಜ್ಯೋತಿಷ್ಕ ಎಂದು ನಾಲ್ಕು ಭೇದಗಳ ಕುರಿತು ೪೨ ಸೂತ್ರಗಳಿಗೆ ವ್ಯಾಖ್ಯಾನವನ್ನು ನೀಡಲಾಗಿದೆ.

ಪಂಚಮ ಪ್ರಕರಣದಲ್ಲಿ ಅಜೀವದ್ರವ್ಯ, ಆಕಾಶದ್ರವ್ಯ, ಪುದ್ಗಲದ್ರವ್ಯ, ಧರ್ಮದ್ರವ್ಯ, ಅಧರ್ಮದ್ರವ್ಯ, ಕಾಲದ್ರವ್ಯಗಳನ್ನು ತಿಳಿಸಲಾಗಿದೆ. ಮುಂದುವರೆದು ಸಂಸ್ಥಾನಭೇದಗಳು, ಶಬ್ಧಬಂಧ, ಪುದ್ಗಲಗಳ ಸ್ವರೂಪ, ಪುದ್ಗಲಗಳ ಪರಿಣಾಮವಾಗಿ ಜೀವ ಅಜೀವಗಳ ನಡುವೆ ಉಂಟಾಗುವ ಬಂಧವನ್ನು ತಿಳಿಸಲಾಗಿದ್ದು, ಒಟ್ಟು ೪೨ ಸೂತ್ರಗಳಿಗೆ ವ್ಯಾಖ್ಯಾನವನ್ನು ನೀಡಲಾಗಿದೆ.

ಷಷ್ಠಮ ಪ್ರಕರಣದಲ್ಲಿ ಜೀವಾಜೀವಗಳ ಮಧ್ಯೆ ಬಂಧದಿಂದ ಕಾಯ, ವಚನ, ಮನ ಎಂಬ ಮೂರು ಮಾರ್ಗಗಳ ಮೂಲಕ ಉಂಟಾಗುವ ಕರ್ಮಗಳ ಆಸ್ರವವನ್ನು ತಿಳಿಸಲಾಗಿದೆ. ಸಕಷಾಯ, ಅಕಷಾಯ, ಸಾಂಪರಾಯಿಕ ಎಂಬ ಭೇದಗಳಲ್ಲಿ ಕರ್ಮದ ಆಸ್ರವವಾಗುವ ಬಗೆಯನ್ನು ತಿಳಿಸಲಾಗಿದೆ. ಉಮಾಸ್ವಾಮಿ ಕೃತ 'ತತ್ತ್ವಾರ್ಥಸೂತ್ರ'ದ ಆರನೆಯ ಅಧ್ಯಾಯದ ಒಟ್ಟು ೨೭ ಸೂತ್ರಗಳಿಗೆ ಬಾಲಚಂದ್ರದೇವನು ವ್ಯಾಖ್ಯಾನವನ್ನು ನೀಡಿದ್ದಾನೆ.

ಸಪ್ತಮ ಪ್ರಕರಣದಲ್ಲಿ ಹಿಂಸೆ, ಅನೃತ, ಸ್ತೇಯ, ಅಬ್ರಹ್ಮ ಹಾಗೂ ಪರಿಗ್ರಹಗಳೆಂಬ ಐದು ಅವ್ರತಗಳನ್ನು ತಿಳಿಸಲಾಗಿದೆ. ಹಾಗೆಯೇ ಕಾಯಗುಪ್ತಿ, ವಚನಗುಪ್ತಿ, ಕಾಯಗುಪ್ತಿಗಳಿಂದ ಆಗುವ ಈ ಅವ್ರತಗಳನ್ನು ನಿವಾರಿಸಿಕೊಳ್ಳಲು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಅಪ್ರರಿಗ್ರಹಗಳೆಂಬ ಪಂಚಾಣುವ್ರತಗಳ ಪಾಲನೆ ಮಾಡಬೇಕು ಎಂದು ತಿಳಿಸಿದ್ದಾನೆ. ಅಗಾರಿಗಳು

ಅಂದರೆ ಗೃಹಸ್ಥರು ಪಾಲಿಸುವ ವ್ರತಗಳು ಅಣುವ್ರತಗಳಾದರೆ, ಮುನಿಗಳು ಆಚರಿಸುವ ವ್ರತಗಳು ಮಹಾವ್ರತಗಳಾಗಿವೆ. ಇವುಗಳ ಪಾಲನೆಯಲ್ಲಿ ಆಗುವ ವ್ಯತ್ಯಯಗಳು ಅತಿಚಾರಗಳಾಗಿವೆ ಎಂದು ೩೯ ಸೂತ್ರಗಳ ವ್ಯಾಖ್ಯಾನಗಳನ್ನು ನೀಡಲಾಗಿದೆ.

ಅಷ್ಟಮ ಪ್ರಕರಣದಲ್ಲಿ ಮಿಥ್ಯಾತ್ವ, ದರ್ಶನ, ಅವಿರತಿ, ಪ್ರಮಾದ, ಕಷಾಯ ಹಾಗೂ ಯೋಗಗಳಿಂದ ಬಂಧವುಂಟಾಗುವುದು. ಅವುಗಳಲ್ಲಿ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ನಾಮ, ಗೋತ್ರ, ಅಂತರಾಯ ಎಂಬ ಐದು ಭೇದಗಳು. ಕರ್ಮಗಳ ಆಸ್ರವದಿಂದ ಈ ಬಂಧಗಳು ಉಂಟಾಗುತ್ತವೆ ಎಂದು ೨೭ ಸೂತ್ರ ವಿವರಣೆಯ ಮೂಲಕ ತಿಳಿಸಲಾಗಿದೆ.

ನವಮ ಪ್ರಕರಣದಲ್ಲಿ ಆಸ್ರವ ನಿರೋಧವೇ ಸಂವಂರ. ಅಂದರೆ ಕರ್ಮಗಳು ಒಳ ಬರದಂತೆ ತಡೆಯುವುದು. ಇದನ್ನು ತ್ರಿಗುಪ್ತಿ, ಪಂಚಸಮಿತಿ, ದ್ವಾದಶ ಅನುಪ್ರೇಕ್ಷೆಗಳು, ದಶಧರ್ಮಗಳು, ೨೨ ಪರೀಷಹಗಳ ಮೂಲಕ ಸಾಧಿಸಬಹುದು ಎಂದು ಹೇಳಿ, ನಂತರ ತಪಸ್ಸಿನ ಮೂಲಕ ಕರ್ಮ ನಿರ್ಜರೆ ಮಾಡಿಕೊಳ್ಳುವ ಬಗೆಗೆ ತಿಳಿಸಲಾಗಿದೆ. ಇಲ್ಲಿ ನಿರ್ಜರೆ ಎಂದರೆ ಆತ್ಮನನ್ನು ಈಗಾಗಲೇ ಪ್ರವೇಶಿಸಿರುವ ಕರ್ಮಗಳನ್ನು ಕಳೆದುಕೊಳ್ಳುವುದು. ಇದನ್ನು ಸಾಧಿಸಲು ತಪಸ್ಸಿನಿಂದ ಮಾತ್ರ ಸಾಧ್ಯ. ತಪಸ್ಸಿನಲ್ಲಿ ಬಾಹ್ಯತಪ ಮತ್ತು ಅಭ್ಯಂತರ ತಪಗಳೆಂದು ಎರಡು ಭೇದಗಳಿವೆ. ಈ ಎರಡು ಈ ರೀತಿಯ ತಪಸ್ಸಿನಿಂದ ದರ್ಶನ, ಜ್ಞಾನ, ಚಾರಿತ್ರಗಳು ಉಂಟಾಗುತ್ತವೆ ಎಂದು ೪೭ ಸೂತ್ರಗಳಿವೆ ವ್ಯಾಖ್ಯಾನವನ್ನು ನೀಡಲಾಗಿದೆ.

ದಶಮ ಪ್ರಕರಣದಲ್ಲಿ **"ಮೋಹಕ್ಷಯಾತ್ ಜ್ಞಾನದರ್ಶನಾವರಣಾನ್ತರಾಕ್ಷಯಾಚ್ಚ ಕೇವಲಮ್"**[೨೩೭] ಮೋಹನೀಯ, ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ ಹಾಗೂ ಘಾತಿಕರ್ಮಗಳನ್ನು ಕ್ಷಯಿಸುವುದೇ ಕೇವಲಜ್ಞಾನ. ಈ ಕೇವಲಜ್ಞಾನದ ಪರಿಣಾಮವಾಗಿಯೇ ಮೋಕ್ಷ ಪ್ರಾಪ್ತಿಯಾಗುವುದು ಎಂದು ೯ ಸೂತ್ರಗಳ ವ್ಯಾಖಾನದ ಮೂಲಕ ಜ್ಞಾನಚಂದ್ರದೇವನು ನಿರೂಪಿಸಿದ್ದಾನೆ.

"ಇಂತು ಸಚ್ಚಿದಾನಂದ ಸಮನ್ವಿತ ಸ್ವರೂಪಮಪ್ಪ ನಿಜಪರಮಾತ್ಮಾರಾಧನೆಯಂ ಮನದೊಳ್ ವಚನದೊಳ್ ಕಾಯದೊಳ್ ವಿರಹಿತನಿಖಿಲರಾಗಾದಿಪರಭಾವನಾಗಿ ಆವನಾನೋರ್ವನಾಸನ್ನ ಭವ್ಯಂ ತಾಳುಗುಂ ಆತಂ ಪರಮಜಿನ ಸಿದ್ಧಪರಮೇಷ್ಠಿ ಸೇವಿತೆಯುಂ ನಿಜಪರಮಾತ್ಮಾರಾಧನಾ ಸಂಜಾತೆಯುಂ ಅಪ್ಪ ನಿಃಶ್ರೇಯಸಶ್ರೀಯಂ ನೆಟ್ಟನೆ ಎಯ್ದುವಂ ಎಂದಿಂತು ಚಿದಾನಂರೂಪಜನಿತಪರಮಾತ್ಮತತ್ತ್ವಮಂ ತ್ರಿಕರಣಶುದ್ಧನಾಗಿ ಸವಿಕಲ್ಪನಿರ್ವಿಕಲ್ಪರೂಪದಿಮ ನಿರಂತರಂ ಚಿಂತಿಸುವುದಂ ಭಾವನೆಯೆಂಬುದು ನಿತ್ಯಾನಂದ ಶ್ರೀ ಗೃಧ್ರಪಿಂಛಾಚಾರ್ಯ ದೇವರಭಿಪ್ರಾಯಂ ಸರ್ವನಿರೂಪಣಾರ್ಥಂ ಉತ್ತರ ಸೂತ್ರಾವತಾರಂ"[೨೩೮]

ಎಂದು ಗೃಧ್ರಪಿಂಛಾಚಾರ್ಯರು ರಚಿಸಿರುವ 'ತತ್ತ್ವಾರ್ಥಸೂತ್ರ'ಕ್ಕೆ ಬಾಲಚಂದ್ರದೇವನು 'ತತ್ತ್ವರತ್ನಪ್ರದೀಪಿಕೆ' ಎಂಬ ವ್ಯಾಖ್ಯಾನವನ್ನು ಬರೆದು ಗ್ರಂಥವನ್ನು ಸಂಪನ್ನಗೊಳಿಸಿದ್ದಾನೆ.

---

೨೩೭. ಎಚ್. ದೇವಿರಪ್ಪ : **ತತ್ತ್ವರತ್ನಪ್ರದೀಪಿಕೆ** ; ಪುಟ. ೩೬೦

೨೩೮. **ಅದೇ** ; ಪುಟ. ೩೭೮

ಈ ರೀತಿಯಾಗಿ ಸಮ್ಯಕ್‌ದರ್ಶನ ಜ್ಞಾನಗಳ ಬಲದಿಂದ ಜಂಬೂದ್ವೀಪದಲ್ಲಿರುವ ಜೀವಾಜೀಗಳು ಕಾಲನುಕಾಲದಲ್ಲಿ ಸಪ್ತತತ್ತ್ವಗಳ ಮೂಲಕ ಮೋಕ್ಷಪ್ರಾಪ್ತಿಯನ್ನು ಪಡೆಯುವ ಬಗೆಯನ್ನು ದಿವಾಕರಣಂದಿ ಬರೆದಿರುವ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ' ಹಾಗೂ ಬಾಲಚಂದ್ರದೇವ ವಿರಚಿತ 'ತತ್ತ್ವರತ್ನಪ್ರದೀಪಿಕೆ' ಗ್ರಂಥಗಳಲ್ಲಿ ತಿಳಿಸಲಾಗಿದೆ. ಅದಕ್ಕೆಂದೇ 'ತತ್ತ್ವಾರ್ಥಸೂತ್ರ' ಗ್ರಂಥವನ್ನು 'ಮೋಕ್ಷಶಾಸ್ತ್ರ ಎಂದು ಕರೆಯಲಾಗಿದೆ. ಕರ್ಮವೆನ್ನುವುದು ಸೂಕ್ಷ್ಮ ದ್ರವ್ಯವಾಗಿದ್ದು, ಅದು ಆತ್ಮನೊಂದಿಗೆ ಸಂಯೋಗ ಹೊಂದುವ ಮೂಲಕ ಜೀವದ ಆಧ್ಯಾತ್ಮಿಕ ಭವಿತವ್ಯದ ಮೇಲೆ ಪರಿಣಾಮ ಬೀರುತ್ತದೆ. ಅದು ಸ್ವಯಂ ಪ್ರೇರಿತವಾಗಿ ಕಾರ್ಯನಿರ್ವಹಿಸುತ್ತದೆ. ಕರ್ಮವು ತಡೆಯಲಸಾಧ್ಯವಾದ ನೈತಿಕ ನಿಯಮದಂತೆ ಕೆಲಸಮಾಡುತ್ತದೆ. ಅಂತಹ ಕರ್ಮಗಳ ತಡಗೋಡೆಯನ್ನು ದಾಟಿ ಮೋಕ್ಷವನ್ನು ಸಾಧಿಸುವ ಬಗೆಯನ್ನು ಪ್ರಸ್ತುತ ಗ್ರಂಥಗಳು ಉಪದೇಶಿಸುತ್ತದೆ. ಒಟ್ಟಿನಲ್ಲಿ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ ಎಂಬಿವು ಜೈನದರ್ಶನದ ಸಪ್ತ ತತ್ತ್ವಗಳಾಗಿವೆ. 'ಜೀವ' ಮತ್ತು 'ಅಜೀವ'ಗಳಿಗೆ ಸಂಬಂಧಕಲ್ಪನೆ ಮಾಡುವುದಕ್ಕೆ ಕರ್ಮವೆಂದು ಕರೆಯುತ್ತಾರೆ. ಆತ್ಮವು ಕರ್ಮವೆಂಬ ಜಡವಸ್ತುವಿನಿಂದ ವ್ಯಾಪ್ತವಾಗಿರುತ್ತದೆ. ಇದರಿಂದ ಬಿಡುಗಡೆ ಹೊಂದುವುದೇ ಅದರ ಪ್ರಧಾನಗುರಿ. ಜೀವಿಯು ಮಾಡುವ ಶುಭಾಶುಭ ಕ್ರಿಯೆಗಳಿಂದಾಗಿ, ಕರ್ಮವು ಆತ್ಮನ ಒಳಗೆ ಹರಿದು ಬರುವುದಕ್ಕೆ 'ಆಸ್ರವ'ವೆಂದು ಹೆಸರು. ಇದರ ಪರಿಣಾಮವಾಗಿ 'ಬಂಧ' ಒದಗುತ್ತದೆ. ಕರ್ಮಬಂಧಗಳಿಂದ ಆತ್ಮನನ್ನು ವಿಮುಕ್ತಗೊಳಿಸುವ ಪ್ರಕ್ರಿಯೆಯಲ್ಲಿ ಮಹತ್ವದ ಮೊದಲ ಹೆಜ್ಜೆಯೇ ಕರ್ಮದ ಒಳಹಂತವನ್ನು ನಿಲ್ಲಿಸುವುದು. ಇದನ್ನೇ 'ಸಂವರ' ಎನ್ನುತ್ತಾರೆ. ಒಳಸೇರಿದ ಕರ್ಮಗಳು ಕಳಚಿ ಹೋಗುವಂತೆ ಮಾಡುವ ಪ್ರಕ್ರಿಯೆಯೇ 'ನಿರ್ಜರಾ'. ಆತ್ಮವು ಕರ್ಮಗಳಿಂದ ಸಂಪೂರ್ಣ ವಿಯೋಗ ಹೊಂದುವ ಲಕ್ಷಣವೇ 'ಮೋಕ್ಷ'ವಾಗಿದೆ.

೩.೩. ಆಚಣ್ಣ (೧೧೯೫):

ಆಚಣ್ಣ ಕವಿಯ ಕಾಲ ಕ್ರಿ.ಶ.ಸು. ೧೧೯೫. ವಸುಧೈಕ ಬಾಂಧವನೆಂಬ ಬಿರುದುಳ್ಳ ರೇಚರಸದಂಡನಾಥನ ಆಶ್ರಯದಲ್ಲಿದ್ದ. ಈತನಿಗೆ ಆಚರಾಜ ಎಂದು ಇನ್ನೊಂದು ಹೆಸರೂ ಇದೆ. ಭಾರದ್ವಾಜ ಗೋತ್ರದಲ್ಲಿ ಜನಿಸಿದವರು. ತಂದೆ ಕೇಶವರಾಜ, ತಾಯಿ ಮಲ್ಲಾಂಬಿಕೆ. ಈತನ ಗುರು ನಂದಿಯೋಗೀಶ್ವರ. "ತಾರೇಶೋಜ್ವಳಕೀರ್ತಿ ಜೈನರುಚಿ ಎಂದು ವಿಶೇಷಿಸಿಕೊಂಡಿರುವುದರಿಂದ ಕವಿ ಪ್ರಖ್ಯಾತನೆಂದೂ ಜಿನಮತದಲ್ಲಿ ಬಹು ಶ್ರದ್ಧೆಯುಳ್ಳವನೆಂದೂ ಪರಿಶುದ್ಧವಾದ ಆಚಾರವಂತನೆಂದೂ ಗೊತ್ತಾಗುತ್ತದೆ. ಈತನಿಗೆ ವಾಣೀವಲ್ಲಭನೆಂಬ ಬಿರುದಿತ್ತು."[೨೩೯]

ಆಚಣ್ಣನು 'ವರ್ಧಮಾನಪುರಾಣ' ಹಾಗೂ 'ಶ್ರೀಪದಾಶೀತಿ' ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ವರ್ಧಮಾನ ಪುರಾಣವು ೨೪ನೇ ತೀರ್ಥಂಕರನಾದ ವರ್ಧಮಾನ ಮಹಾವೀರನ

೨೩೯. ಕನ್ನಡ ವಿಶ್ವಕೋಶ ಸಂಪುಟ – ೧ : ಪುಟ. ೭೦೬

ಪಾವನ ಚರಿತವಾಗಿದೆ. ಇದನ್ನು ಚಂಪೂ ಶೈಲಿಯಲ್ಲಿ ರಚಿಸಿದ್ದಾನೆ. ಬಂಧ ಪ್ರೌಢವಾಗಿಯೂ ಸಂಸ್ಕೃತದ ಭೂಯಿಷ್ಠವಾಗಿಯೂ ಇದೆ. ರಸಭಾವಗಳನ್ನು ಮನಮುಟ್ಟುವಂತೆ ವರ್ಣಿಸುವ ಕವಿತಾಸಾಮರ್ಥ್ಯ ಆಚಣ್ಣನಿಗಿತ್ತು. ಸುಂದರ ನುಡಿಗಟ್ಟುಗಳೂ ಸಂದರ್ಭೋಚಿತ ಗಾದೆ ಮಾತುಗಳೂ ಆತನ ಶೈಲಿಗೆ ಮೆರುಗು ನೀಡುತ್ತವೆ.

'ಶ್ರೀಪಾದಶೀತಿ' ಎಂಬ ಕೃತಿಯು ೯೨ ಕಂದಗಳಿರುವ ಒಂದು ಪುಟ್ಟ ಗ್ರಂಥವಾಗಿದೆ. ಇದು ಪಂಚಪದಗಳ ಮಹಿಮೆಯನ್ನು ತಿಳಿಸುವ ಶಾಸ್ತ್ರಕೃತಿಯಾಗಿದೆ. ಇದರಲ್ಲಿ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು ಇವರ ಮಹಿಮಾವರ್ಣನೆ ಅಡಕವಾಗಿದೆ. ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಆಚಣ್ಣನ 'ಶ್ರೀಪದಾಶೀತಿ' ಗ್ರಂಥವನ್ನು ಅಧ್ಯಯನ ಮಾಡಲಾಗಿದೆ.

೩.೩.೧. ಶ್ರೀಪದಾಶೀತಿ :

ಆಚಣ್ಣ ಕವಿಯು ರಚಿಸಿರುವ 'ಶ್ರೀಪದಾಶೀತಿ' ಎಂಬ ಗ್ರಂಥವು ೯೨ ಕಂದಪದ್ಯಗಳನ್ನು ಒಳಗೊಂಡಿರುವ ಪುಟ್ಟ ಕೃತಿಯಾಗಿದೆ. ಈ ಕೃತಿಯಲ್ಲಿ ಕವಿಯು ಜೈನಧರ್ಮದ ಮೂಲಮಂತ್ರವೆನಿಸಿದ ಪಂಚಪದವನ್ನು ಕುರಿತು ವಿಶ್ಲೇಷಣೆ ಮಾಡಿದ್ದಾನೆ. ಪಂಚಪದವು ಅರಿಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಹಾಗೂ ಸರ್ವ ಸಾಧುಗಳೆಂಬ ಪಂಚಪರಮೇಷ್ಠಿಗಳಿಗೆ ಸಂಬಂಧಪಟ್ಟಿದೆ. ಪ್ರಸ್ತುತ ಗ್ರಂಥವು ಈ ಪಂಚಪದದ ಮಹಿಮೆಯನ್ನು ತಿಳಿಸುತ್ತದೆ.

"ಶ್ರೀಮತ್ಪಂಚಪದಂ ಗುರು
ನಾಮಾದಿ ತ್ರಿತಳಮತುಳರಮ್ಯಂ ಹರ್ಮ್ಯಂ
ಧಾಮಮಯಂ ಸುಖಕಲಶೋ
ದ್ದಾಮಂ ವಿಶ್ರಾಮಧಾಮಮಕ್ಕೆಮಗನಿಶಂ ॥೧॥"[೨೪೦]

ಗುರುನಾಮಾದಿಯಾಗಿರುವ ಪಂಚಪದವು ಮೂರುಲೋಕಗಳಲ್ಲಿ ರಮ್ಯವೂ, ಶ್ರೀಮಂತವೂ, ಆಶ್ರಯಧಾಮವೂ, ಸುಖಸಾಧನವೂ, ಶಾಂತಿಯುತವೂ ಆಗಿದೆ. ಅದು ನವಪದಾರ್ಥ, ನವನಿಧಿಗೆ ಸಮನಾದುದು. ಇದರಿಂದಲೇ ಮೋಕ್ಷಸಾಧನವಾದ ರತ್ನತ್ರಯಗಳನ್ನು ಹೊಂದಲು ಸಾಧ್ಯವಾಗುವುದು. ಪಂಚಪದದಿಂದಲೇ ಸೌಖ್ಯಲಕ್ಷ್ಮೀಯೂ, ಅಕ್ಷರಲಕ್ಷ್ಮೀಯೂ ಒಲಿಯುವರು. ಹೀಗೆ ಆಚಣ್ಣ ಕವಿಯು ತನ್ನ ಕೃತಿಯನ್ನು ಆರಂಭಿಸುತ್ತಾನೆ.

ಮುಂದುವರೆದು, "ಇದರ ಅರ್ಥಮಂ ಪರಮಾರ್ಥ ತೀರ್ಥಪರಂಪರಾ ಪ್ರಸಿದ್ಧ ವಿಶುದ್ಧೋಪದೇಶದಿಂ ವಿಶದಂ ಮಾಳ್ಪೆಂ"[೨೪೧] ಅಂದರೆ ಪರಮಾರ್ಥ ತೀರ್ಥಪರಂಪರೆಯ ಉಪದೇಶದಿಂದ ಬಂದ ಪಂಚಪದವವನ್ನು ವಿಶದಪಡಿಸುವುದಾಗಿ ತಿಳಿಸುತ್ತಾನೆ.

---

೨೪೦. ಜಿ. ಜಿ. ಮಂಜುನಾಥನ್ : **ಆಚಣ್ಣ – ಅಗ್ಗಳ ಸಂಪುಟ : ಶ್ರೀಪದಾಶೀತಿ** ; ಪುಟ. ೨೯೧
೨೪೧. **ಅದೇ** ; ಪುಟ. ೨೯೧

ಪರಮೇಷ್ಠಿಗಳನ್ನು ನೆನೆಯುವ ಪಂಚಪದವು ೩೫ ಅಕ್ಷರಗಳನ್ನು ಹೊಂದಿದೆ.

ಪಂಚಣಮೋಕಾರ ಮಂತ್ರ

ಪಂಚಪದ	**ಅಕ್ಷರಗಳು**	**ಮಾತ್ರೆಗಳು**
"ಣಮೋ ಅರಿಹಂತಾಣಂ	೭	೧೧
ಣಮೋ ಸಿದ್ಧಾಣಂ	೫	೯
ಣಮೋ ಆಇರಿಯಾಣಂ	೭	೧೧
ಣಮೋ ಉವಜ್ಝಾಯಾಣಂ	೭	೧೨
ಣಮೋ ಲೋಏ ಸವ್ವಸಾಹೂಣಂ"[೨೪೨]	೯	೧೫
ಒಟ್ಟು	**೩೫**	**೫೮**

ಈ ಮೂಲಕ ಅರಿಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಹಾಗೂ ಲೋಕದಲ್ಲಿರುವ ಸರ್ವ ಸಾಧುಗಳಿಗೆ ನಮಸ್ಕಾರಗಳನ್ನು ತಿಳಿಸುವುದು ಜೈನಧರ್ಮದ ಪರಿಭಾಷೆಯಾಗಿದೆ. ಈ ಪಂಚಪದವು ಪ್ರಾಕೃತ ಭಾಷೆಯಲ್ಲಿದೆ.

ಈ ಪಂಚಪದವನ್ನು ಪಠಣ ಮಾಡುವಾಗ ಪ್ರತಿ ಪದದ ಆದಿಯಲ್ಲಿ 'ಓಂ ಹ್ರಾಂ' ಎಂದು ಸೇರಿಸಿ ಉಚ್ಚಾರ ಮಾಡುವುದು ಅಘೋರ ಪಂಚನಮಸ್ಕಾರವಾಗಿದೆ ಎಂದು ಹೇಳಿದ್ದಾನೆ.

"ಪೊಳೆವಮೃತಾಂಶುವ ಕಳೆಯಿಂ
ಕಳೆಯೆನಿಸುವ ಬೆಳಗಿನಿಂದಮೆನ್ನಯ ಭಾಲ
ಸ್ಥಳದೊಳ್ ತಿಲಕಶ್ರೀಯುಂ
ತುಳುಂಕುವೀ ಬ್ರಹ್ಮಬೀಜಮೆನಗೀಗಳೆವಂ ॥೧೨॥"[೨೪೩]

ಪಂಚಪದವು ಅಮೃತಾಂಶವನ್ನೊಳಗೊಂಡ ಕಳೆಯಿಂದ ಹೊಳೆಯುವ ತಿಲಕಶ್ರೀಯಂತೆ ಹಣೆಯಲ್ಲಿನ ಬ್ರಹ್ಮಬೀಜವಾಗುವುದು. ತ್ರೈಲೋಕ್ಯದಲ್ಲಿ ನಿಜರುಚಿ ನವಾಮೃತವಾಗಿ, ಶಿವಪದವನೊದಗಿಸುವ ಗುರುಪದವಾಗಿ ತೋರುವುದು ಎಂದು ಆಚಣ್ಣಕವಿ ಹೇಳುತ್ತಾನೆ. ಇಲ್ಲಿ ಶಿವಪದವನ್ನು ತೋರುವುದು ಎಂದರೆ ಮೋಕ್ಷವನ್ನು ತೋರಿಸುವುದು ಎಂದರ್ಥವಾಗುತ್ತದೆ. ಗುರುಗಳು ಹೇಗೆ ಬೋಧನೆಮಾಡಿ ಜ್ಞಾನವನ್ನು ಮೂಡಿಸುತ್ತಾರೋ ಹಾಗೆ ಪಂಚಪದವು ಸಮ್ಯಕ್ತ್ವವನ್ನು ನೀಡಿ ಮೋಕ್ಷಮಾರ್ಗವನ್ನು ತೋರುತ್ತದೆ.

ಮಂಗಲಕರವಾದ ಪಂಚಪದವನ್ನು ಅಥವಾ ಣಮೋಕಾರ ಮಂತ್ರವನ್ನು ಯಾವ ಸ್ಥಳದಲ್ಲಿಯೇ ಆಗಲಿ, ಯಾವುದೇ ಅವಸ್ಥೆಯಲ್ಲಿಯೇ ಆಗಲಿ, ಯಾವುದೇ ವ್ಯಕ್ತಿಯೇ ಆಗಲಿ ಪಠಣ ಮಾಡಬಹುದು. ಆದರೂ ಮುಂಜಾನೆ ಎದ್ದಮೇಲೆ, ರಾತ್ರಿ ಮಲಗುವ ಮುನ್ನ ಪಠಣ

೨೪೨. ಜಿ. ಜಿ. ಮಂಜುನಾಥನ್ : **ಆಚಣ್ಣ – ಅಗ್ಗಳ ಸಂಪುಟ : ಶ್ರೀಪದಾಶೀತಿ** ; ಪುಟ. ೨೯೨
೨೪೩. **ಅದೇ** ; ಪುಟ. ೨೯೩

ಮಾಡುವುದು ಶ್ರೇಯಸ್ಕರ ಎನ್ನುತ್ತಾನೆ ಕವಿ. "ಬ್ರಹ್ಮಮುಹೂರ್ತೇ ಉತ್ತಿಷ್ಠೇತ್ ಪರಮೇಷ್ಠಿ ಸ್ತುತಿಂ ಪಠನಂ"[೨೪೪] ಅಂದರೆ ಪ್ರಾತಃಕಾಲದಲ್ಲಿ ಪರಮಮಂಗಲಮಯವಾದ ಮಂತ್ರವನ್ನು ಜಪಿಸಬೇಕು. 'ಣಮೋ' ಪದದಿಂದ ಆರಂಭವಾಗುವ ಮಂತ್ರವು ಅಹಂಕಾರವನ್ನು ತೊಳೆಯುತ್ತದೆ. ಸಮರ್ಪಣಾ ಭಾವದಿಂದ ನಮಸ್ಕಾರ ಮಾಡುವವನ ಬಳಿಗೆ ಎಂದಿಗೂ ಅಹಂಕಾರ ಸುಳಿಯುವುದಿಲ್ಲ. ಘಾತಿಕರ್ಮಗಳನ್ನು ದೂರಮಾಡಿ ಮೋಕ್ಷಮಾರ್ಗಕ್ಕೆ ದಾರಿತೋರುತ್ತದೆ ಎಂದು ತಿಳಿಸಿದ್ದಾನೆ.

ಹೀಗಿರುವ ಪಂಚಪರಮೇಷ್ಠಿ ಮಂತ್ರದಿಂದ ಆಗುವ ಲಾಭಗಳನ್ನು ಆಚಣ್ಣಕವಿಯು ತನ್ನ 'ಶ್ರೀಪದಾಶೀತಿ' ಗ್ರಂಥದಲ್ಲಿ ವಿಶದಪಡಿಸುತ್ತ,

"ಸುಖದ ಕಣಿ ಸುಖದ ತಿಂತಿಣಿ
ಸುಖದ ಬನಂ ಸುಖದ ಸುಗ್ಗಿ ಸುಖದ ಬಸಂತಂ
ಸುಖದ ತಿಳಿ ಸುಖದ ಪೊಂಪುಳಿ
ಸುಖದೊರ್ಬುಳಿ ಸುಖದ ಸೋನೆಯೆನಿಸದೆ ನಿಸದಂ ॥೬೩॥

ಸುಖದ ತನಿರಸದ ಪೆರ್ಮಡು
ಸುಖದೊತ್ತಿನಸುತ್ತು ಸುಖದ ತಣ್ಬುಟಿಲೆನಿಕುಂ
ಸುಖದ ಡೊಣೆ ಸುಖದ ದೀರ್ಘಿಕೆ
ಸುಖದ ಕೊಳಂ ಸುಖದ ಯಂತ್ರಧಾರಾಗಾಂ॥೬೪॥"[೨೪೫]

ಎನ್ನುತ್ತಾನೆ. ಅದುವೇ ಹರುಷದ ಕಣಿ, ಚಿಂತೆಯನ್ನು ದೂರಮಾಡುವ ಚಿಂತಾಮಣಿ, ಬೇಡಿದ್ದನ್ನು ದಯಪಾಲಿಸುವ ಕಾಮಧೇನು. ಅರಿಯದವನಿಗೆ ಅರಿವುಮೂಡಿಸಿ ಶಿವಾಸ್ಪದವನ್ನು ಮಾಡಿಕೊಡುವ ಇದು ವಿಶ್ವರಕ್ಷಾ ಅಕ್ಷರವಾಗಿದೆ ಎನ್ನುತ್ತಾನೆ.

ಭೂತಳದೊಳೀ ಸಿರಿಪದಾ
ಶೀತಿ ಸುಧಾವೃಷ್ಟಿ ಸಕಳಜನತಾಸಸ್ಯ
ವ್ರಾತಕ್ಕೆ ತಣಿಯೆ ಕಱೆಗುಂ ನಿ
ತಕದಿಂ ಫಲಸಮೃದ್ಧಯಂ ಮಾಳ್ಕನಿಶಂ ॥೮೯॥

ಜಿನಸಮಯ ಸಮುದ್ಧರಣಂ
ಜಿನಮತಸಿದ್ಧಾಂತವಾರ್ಧಿವರ್ಧನ ಚಂದ್ರಂ
ಜಿನರಂತೆ ಭವ್ಯಸೇವ್ಯಂ
ಜಿನಮುನಿಯಾಚಣ್ಣನಮಗಳಗುಣಗಣನಿಳಯಂ॥೯೨॥"[೨೪೬]

ಭೂಲೋಕಕ್ಕೆ ಈ ಪಂಚಪದವನ್ನು ಪಠಿಸುವವರಿಗೆ ಶ್ರೀಪದಾಶೀತಿಯು ಅಮೃತವರ್ಷದಂತೆ, ಸಕಲ ಜನತೆಗೆ ಇಷ್ಟವಾಗುವ ರತ್ನದಂತೆ ಸದಾಕಾಲವೂ ಫಲಸಮೃದ್ಧಿಯನ್ನೂ, ಪರಮಸುಖವನ್ನೂ ನೀಡುತ್ತದೆ. ಜಿನಧರ್ಮವೆಂಬ ಕಡಲು ವೃದ್ಧಿಸುವಂತೆ ಬೋಧನೆ ಮಾಡಿದ ಜಿನರಂತೆ ಜಿನಮುನಿ ಆಚಣ್ಣನು ಅಮಳಗುಣಗಣ ನಿಲಯನಾಗಿದ್ದಾನೆ. ಎಂದು ಹೇಳುತ್ತಾನೆ. ಇಲ್ಲಿ ಕವಿಯು ತನ್ನನ್ನು

---

೨೪೪. ರತನಚಂದ ಕೋಟಿ (ಅನು) : **ಜೈನಧರ್ಮ ತಿಳಿಯಿರಿ** : ಪುಟ. ೧೭
೨೪೫. ಜಿ. ಜಿ. ಮಂಜುನಾಥನ್ : **ಆಚಣ್ಣ – ಅಗ್ಗಳ ಸಂಪುಟ : ಶ್ರೀಪದಾಶೀತಿ** ; ಪುಟ. ೩೦೦
೨೪೬. **ಅದೇ** ; ಪುಟ. ೩೦೦

ಜಿನಮುನಿ ಎಂದು ಹೇಳಿಕೊಂಡಿರುವುದರಿಂದ ಆತನು 'ವರ್ಧಮಾನ ಪುರಾಣ'ವನ್ನು ಬರೆದಾದ ಮೇಲೆ ಮುನಿದೀಕ್ಷೆಯನ್ನು ಪಡೆದುಕೊಂಡಿರಬಹುದು ಎಂದು ಊಹಿಸಬಹುದಾಗಿದೆ. ಏಕೆಂದರೆ ವರ್ಧಮಾನ ಪುರಾಣದ ಯಾವುದೇ ತನ್ನನ್ನು 'ಜಿನಮುನಿ' ಎಂದು ಕರೆದುಕೊಂಡಿಲ್ಲ. ಅಲ್ಲಿಯ ಪ್ರತಿಯೊಂದು ಅಧ್ಯಾಯಗಳೂ –

"ಇದು ನಿಖಿಳಭುವನ ಜನವಿನೂತ ಸ್ಫೀತಮಹಿಮಾವದಾತ ವೀತರಾ
ಸರ್ವಜ್ಞತಾ ಸಮೇತ ಖ್ಯಾತಜಿನಸಮಯಕಮಳಿನೀ ಕಳಹಂಸಾಯಮಾನ ಮಾನಿತ
ಶ್ರೀ ನಂದಿಯೋಗೀಂದ್ರಪ್ರಸಾದ ವಾಚಾಮಹಿತ ಕೇಶವರಾಜಾನಂದನಂದನ
ವಾಣೀವಲ್ಲಭ ವಿಸ್ತಾರಿತಮಪ್ಪ ವಸುದೈಕಬಾಂಧವ ಶ್ರೀವರ್ಧಮಾನ ಪುರಾಣದೊಳ್
ವೀರಸ್ವಾಮಿ ನಿರ್ವಾಣಭೂಮಿಗಮನವರ್ಣನಂ"[೨೪೭]

ಎಂತಲೇ ಕೊನೆಯಾಗುತ್ತವೆ. ಆದುದರಿಂದ ವರ್ಧಮಾನ ಪುರಾಣವನ್ನು ರಚಿಸುವ ಸಂದರ್ಭದಲ್ಲಿ ಈತನು ಗೃಹಸ್ಥನಾಗಿದ್ದಂತೆ ತೋರುತ್ತದೆ. ತರುವಾಯದಲ್ಲಿ ರಚಿಸಿದ 'ಶ್ರೀಪದಾಶೀತಿ'ಯ ಕೊನೆಯಲ್ಲಿ 'ಜಿನಮುನಿಯಾಚಣ್ಣ' ಎಂದು ಹೇಳಿಕೊಂಡಿದ್ದಾನೆ. ಇದರಿಂದ ಮುನಿ ದೀಕ್ಷೆಯನ್ನು ಸ್ವೀಕರಿಸಿದ ನಂತರ ಪ್ರಸ್ತುತ ಕೃತಿಯನ್ನು ರಚಿಸಿದ್ದಾನೆ ಎಂದು ಊಹಿಸಬಹುದು.

೩.೪. ಬಂಧುವರ್ಮ (೧೨೦೦):

ಬಂಧುವರ್ಮನ ಕುರಿತು ನಾಗರಾಜಕವಿ, ಕಮಲಭವ, ಮಂಗರಸರು ಸ್ಮರಿಸಿರುವುದನ್ನು ಅನುಸರಿಸಿ 'ಕವಿಚರಿತೆ'ಕಾರರು "ಇವನು ಜೈನಕವಿ. ಇವನ ಕಾಲ ಸು.೧೨೦೦. ವೈಶ್ಯನಾಗಿದ್ದನು." [೨೪೮] ಎಂದು ಹೇಳುತ್ತಾರೆ. ಬಂಧುವರ್ಮ ೧೩ನೆಯ ಶತಮಾನದ ಪ್ರಾರಂಭದಲ್ಲಿದ್ದ ಜೈನಕವಿ. 'ಹರಿವಂಶಾಭ್ಯುದಯ', 'ಸತಿಧರ್ಮಸಾರ' ಹಾಗೂ 'ಜೀವಸಂಬೋಧನಂ' ಈತನ ಕೃತಿಗಳು.

ಸು.೧೨೩೫ರಲ್ಲಿದ್ದ ಕಮಲಭವ ಕವಿಯು:

"ಜಿನಸಮಯಪ್ರಕಾಶಕೃತ ಪಂಪನ ಪೆಂಪುವೆತ್ತ ಪೊ
ನ್ನನ ಕವಿನಾಗಚಂದ್ರನ ನೆಗಳ್ತೆಯ ರನ್ನನ ಬಂಧುವ
ರ್ಮನ ಬುಧ ನೇಮಿಚಂದ್ರನ ಜಗನ್ನುತ ಜನ್ನನ ರುಜಿಪ್ಪಗ್ಗಳ
ಯ್ಯನ ಕೃತಿ ಸೌಂದರೀ ಸುಭಗಮಾವಗಮಿರ್ಕೆಮದೀಯ ಕಾವ್ಯದೊಳ್॥

ಎಂದು ತನ್ನ ಕೃತಿಯ ಆರಂಭದಲ್ಲಿ ಪೂರ್ವಕವಿಗಳನ್ನು ಸ್ಮರಿಸುವಾಗ ಕವಿ ಬಂಧುವರ್ಮನನ್ನೂ ಸ್ಮರಿಸಿಕೊಂಡಿದ್ದಾನೆ." [೨೪೯] ಎಂದು 'ಜೀವಸಂಬೋಧನಂ' ಕೃತಿಯನ್ನು ಮೊದಲು ಸಂಪಾದಿಸಿದ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರಾಗಿದ್ದ ಎಚ್. ಶೇಷ ಅಯ್ಯಂಗಾರ ಅವರು ಕವಿ ಕಾವ್ಯ ವಿಚಾರದಲ್ಲಿ ತಿಳಿಸುತ್ತಾರೆ. ಕವಿ ಬಂಧುವರ್ಮನನ್ನು ಸು. ೧೩೩೧ರಲ್ಲಿದ್ದ ನಾಗರಾಜಕವಿಯು ತನ್ನ ಪುಣ್ಯಾಸ್ರವ ಗ್ರಂಥದಲ್ಲಿ ಸ್ಮರಿಸಿಕೊಂಡಿದ್ದಾನೆ.

---

೨೪೭. ಜಿ. ಜಿ. ಮಂಜುನಾಥನ್ : **ಆಚಣ್ಣ – ಅಗ್ಗಳ ಸಂಪುಟ : ಶ್ರೀಪದಾಶೀತಿ** ; ಪುಟ. ೩೦೦
೨೪೮. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ ಪ್ರಥಮ ಸಂಪುಟ**: ಪುಟ.೩೬೨
೨೪೯. ಎಚ್. ಶೇಷ ಅಯ್ಯಂಗಾರ್ (ಸಂ); **ಜೀವಸಂಬೋಧನಂ** : ಪುಟ.೦೬

“ಕವಿಗಳೊಳು ಬಂಧುವರ್ಮಂ
ಕವಿಯಿವರ್ಗಳ ಮುಂದೆ ಕವಿಗಳೆಂಬವರೆಲ್ಲಂ
ಛವಿಗೆಟ್ಟಿರ್ಪರ್ತೊರ್ಳಗುವ
ರವಿಯಮ ಬಳಸಿರ್ದ ಬಹುಳ ಭಗಣಂಗಳವೋಲ್ ॥೧.೧೭॥”[೨೫೦]

ಬಂಧುವರ್ಮ ಕವಿಯ ಮುಂದೆ ಕವಿಗಳೆಂಬುವವರಿಲ್ಲ ಎಂದು ವರ್ಣಿಸುತ್ತಾನೆ. ‘ಜೀವಸಂಬೋಧನಂ’ ಕೃತಿಯನ್ನು ಪೂರ್ತಿಯಾಗಿ ಅವಲೋಕಿಸಿದಾಗ ಆತ ಬಳಸಿರುವ ಅಲಂಕಾರ, ಸಂದರ್ಭಕ್ಕೆ ತಕ್ಕಂತೆ ಬಳಸಿರುವ ನಾಣ್ನುಡಿಗಳು ಆತನ ಕವಿತ್ವಶಕ್ತಿಯನ್ನು ಪ್ರತಿಬಿಂಬಿಸುತ್ತದೆ. ಮಂಗರಸನು ತನ್ನ ‘ನೇಮಿಜಿನೇಶ ಸಂಗತಿ’ಯ ಆರಂಭದಲ್ಲಿ ಪೂರ್ವಕವಿಗಳನ್ನು ಸ್ಮರಿಸುವ ಸಂದರ್ಭದಲ್ಲಿ ಬಂಧುವರ್ಮನನ್ನು ಸ್ಮರಿಸಿಕೊಂಡಿದ್ದಾನೆ.

“ಬಂಧುರಭರತ ಯಾದವವಂಶವನು ಕೃತಿ
ಬಂಧದೊಳಗೆ ಸೇರಿಸಿದ
ಬಂಧುವರ್ಮನನು ನೆನೆದು ನೇಮಿಚರಿತಪ್ರ
ಬಂಧವ ನಾನುಸುರುವೆನು ॥೧.೨೮॥”

ನೇಮಿಜಿನೇಶನ ಕಥೆಯನ್ನು ಹೇಳುವ ಮೊದಲು ಈ ಮುಂಚೆಯೇ ಭರತ (ಕುರು)ವಂಶ, ಹರಿ (ಯಾದವ)ವಂಶದ ಕಥೆಯನ್ನು ಕೃತಿಬಂಧೊಳಗೆ ಸೇರಿಸಿದ ಬಂಧುವರ್ಮನ್ನು ನೆನೆಯುತ್ತಾನೆ.[೨೫೧] ಇದು ಬಂಧುವರ್ಮನ ಕುರಿತು ಕವಿಗಳು ಸ್ಮಸಿರಿಕೊಂಡ ಬಗೆಯಾದರೆ, ಕವಿಯು ತನ್ನ ಕೃತಿಯಲ್ಲಿ ಸ್ವವಿಚಾರದ ಕುರಿತು ಹೆಚ್ಚಿಗೇನು ಹೇಳಿಕೊಳ್ಳದಿರುವುದು ವಿಷಾದನೀಯ. ತನ್ನ ‘ಜೀವಸಂಬೋಧನಂ’ ಕೃತಿಯ ಆರಂಭದಲ್ಲಿ:

“ಅನುಪಮ ಕಾವ್ಯದಱಿವಿಲ್ಲದನಂ ಜಡನೆಂದು ಪಾಪಕ
ರ್ಮನ ದೆಸೆಯೊಲ್ಲೆನೆಂದು ಪುಸಿವಾತನನೇಟಿದನೆಂದು ಕಾವ್ಯಚೋ
ರನನುಱದೇವನೆಂದು ಮನಸಂದು ಸರಸ್ವತಿ ಬಂದು ಬಂಧುವ
ರ್ಮನ ಮುಖಪದ್ಮದೊಳ್ ನೆಲಸಿ ನಿಂದು ವಿರಾಜಿಸುತಿರ್ಕೆ ರಾಗದಿಂ ॥೧.೬॥”[೨೫೨]

ಹಾಗೂ ಕೃತಿಯ ಕೊನೆಯ ಪದ್ಯದಲ್ಲಿ ತನ್ನ ಹೆಸರನ್ನು ಪ್ರಸ್ತಾಪಿಸುತ್ತಾನೆ.

“ನುತ ವೈಶ್ಯೋತ್ತಮ ಬಂಧುವರ್ಮ ರಚಿತಂ ಶ್ರೀ ಜೀವಸಂಬೋಧನೋ
ನ್ನತ ನಾಮಪ್ರವಿರಾಜಿತಂ ನೆಗಟ್ದನುಪ್ರೇಕ್ಷಾಧಿಕಾರಾಭ್ಯುಪಾ
ಶ್ರಿತಮಂ ಭಾವಿಸೆ ಬೋಧಿ ನಿಲ್ಕುಮದಱಿಂದಷ್ಟಾಘ ಸಂಬಂಧನ
ಕ್ಷತಿಯಂ ನೆಟ್ಟನೆ ಮಾಡಿ ಗೆಲ್ದು ಪಡೆವರ್ ಸಂಶುದ್ಧಿಯಿಂ ಸಿದ್ಧಿಯಂ॥೧೨.೬೪॥”[೨೫೩]

ಸರಸ್ವತಿಯು ಮೆಚ್ಚಿ ತನ್ನ ಮುಖ ಪದ್ಮದಿಂದ ಜೀವಸಂಭೋಧನೆಯನ್ನು ಹೇಳಿಸಿದ್ದಾಳೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಹೀಗಿರುವ ಈತ ತಾನು ‘ನುತ ವೈಶ್ಯೋತ್ತಮ’ ಎಂದು

೨೫೦. ದೇ. ಜವರೇಗೌಡ (ಸಂ): **ನಾಗರಾಜ ಕವಿ ವಿರಚಿತ ಪುಣ್ಯಾಸ್ರವ** : ಪುಟ.೦೩
೨೫೧. ಶ್ರೀ. ಬಿ. ಬಿ. ಮಹೀಶವಾಡಿ (ಸಂ); **ಮಂಗರಸ ವಿರಚಿತ ನೇಮಿಜಿನೇಶ ಸಂಗತಿ** : ಪುಟ.೦೬
೨೫೨. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೦೪
೨೫೩. **ಅದೇ** : ಪುಟ. ೩೯೮

ಹೇಳಿಕೊಂಡಿರುವುದರಿಂದ ವ್ಯಾಪಾರಿಯಾಗಿದ್ದನೆಂದು ಊಹಿಸಬಹುದಾಗಿದೆ. ಈ ವಿಚಾರ ಕವಿಚರಿತೆಕಾರರ ಮಾತಿಗೆ ಸರಿದೂಗುತ್ತದೆ.

೩.೪.೧. ಜೀವಸಂಬೋಧನಂ :

ಗ್ರಂಥದ ಸಂಪಾದಕರಾದ ಬಿ. ಎಸ್. ಸಣ್ಣಯ್ಯನವರು ಪೀಠಿಕೆಯಲ್ಲಿ ಹೀಗೆ ಹೇಳುತ್ತಾರೆ. "ಜೈನಾಗಮಗಳಲ್ಲಿ ಅನುಪ್ರೇಕ್ಷೆಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಹಾಗಾಗಿ ಅನುಪ್ರೇಕ್ಷೆಗಳನ್ನೊಳಗೊಂಡು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಸಾಕಷ್ಟು ಗ್ರಂಥಗಳು ರೂಪುಗೊಂಡಿವೆ. ಬಂಧುವರ್ಮನು ಈ ಹಿಂದಣ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ, ಅದರಿಂದ ಉತ್ತೇಜಿತನಾಗಿ ಈ ಕೃತಿಯನ್ನು ರಚಿಸಿದ್ದಾನೆ. ಹನ್ನೆರಡು ಅನುಪ್ರೇಕ್ಷೆಗಳಿಗೆ ಕುಂದಕುಂದಾಚಾರ್ಯರ ಕೃತಿಗಳಲ್ಲಿ ನಿರೂಪಿತವಾಗಿರುವ ಕ್ರಮವೇ ಮುಂದಿನವರಿಗೆ ಆಧಾರ. ಬಂಧುವರ್ಮನು ತನ್ನ ಪೂರ್ವಿಕರಾದ ಉಮಾಸ್ವಾತಿ ಶಿವಾರ್ಯ, ವಟ್ಟಕೇರ, ಕುಂದಕುಂದ, ಕಾರ್ತಿಕೇಯರಿಂದ ಪ್ರಭಾವಿತನಾಗಿರುವುದನ್ನು ಕಾಣಬಹುದು."[೨೫೪] ಕೃತಿಯು ಚಂಪೂ ಶೈಲಿಯಲ್ಲಿ ರಚಿತವಾಗಿದೆ. ಕೃತಿಯ ಉದ್ದಕ್ಕೂ ವೃತ್ತಗಳನ್ನು, ಕಂದಪದ್ಯಗಳನ್ನು, ರಗಳೆಗಳನ್ನು, ಅಕ್ಕರಗಳನ್ನು ಬಳಸಿದ್ದಾನೆ. ಅಲ್ಲದೇ ದೇಶೀಯತೆಯನ್ನೂ ಹುದುಗಿಸಿದ್ದಾನೆ. ಇದು ಅವನ ಕವಿತ್ವವನ್ನು ಪ್ರಕಟಿಸುತ್ತದೆ. ಇದೊಂದು ಶಾಸ್ತ್ರಗ್ರಂಥವಾದರೂ ಕಾವ್ಯವಾಗಿ ರೂಪುಗೊಂಡಿದೆ.

ಜೀವಸಂಬೋಧನೆ ಜೈನಧರ್ಮಕ್ಕೆ ಸಂಬಂಧಪಟ್ಟ ದ್ವಾದಶಾನುಪ್ರೇಕ್ಷೆಗಳನ್ನು ವಸ್ತುವಾಗುಳ್ಳ ಸ್ವತಂತ್ರ ಶಾಸ್ತ್ರ ಗ್ರಂಥ. ಇದರಲ್ಲಿ ೧೨ ಅಧಿಕಾರಗಳಿವೆ. ರಚನೆಯಲ್ಲಿ ಮೊದಲಿಗೆ ಎದ್ದುಕಾಣುವ ಆಕರ್ಷಕ ಅಂಶವೆಂದರೆ ಜೀವವನ್ನು ಸಂಬೋಧಿಸಿ ಕಾವ್ಯನಿರೂಪಿಸುವ ತಂತ್ರ. ಇದರಿಂದಾಗಿ ಗ್ರಂಥದುದ್ದಕ್ಕೂ ಆತ್ಮೀಯತೆ ಕಂಡುಬರುತ್ತದೆ. "ಕೃತಿಯ ಒಟ್ಟು ರಚನೆ ಜೈನಪುರಾಣಗಳಿಗೆ ಸಮೀಪವಾಗಿದೆ. ಅಜ್ಞಾನದಿಂದ ಜೀವ (ಆತ್ಮ)ನು ತಕ್ಕ ರೀತಿಯಲ್ಲಿ ನಿಶ್ಚಯಿಸುವ ಶಕ್ತಿಯಿಲ್ಲದೆ ಸಂಸಾರದಲ್ಲಿ ತೊಳಲುವುದನ್ನು ತಪ್ಪಿಸಿಕೊಳ್ಳುವುದು ಹೇಗೆಂಬುದನ್ನು ತಿಳಿಯುವಂತೆ ತಾನು ಕಾವ್ಯ ನಿರೂಪಿಸುತ್ತಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಇದರಿಂದಾಗಿ ಕಾವ್ಯ ನೀತಿಪ್ರದವೂ ವೈರಾಗ್ಯ ಬೋಧಕವೂ ಆಗಿದೆ. ತಾನು ಹೇಳುವ ತತ್ತ್ವನಿರೂಪಣೆ ನೀರಸವಾಗದಂತೆ ಸಂದರ್ಭೋಚಿತವಾಗಿ ಕಥೆಗಳನ್ನು ತಂದು ಧಾರ್ಮಿಕ ಅಂಶವನ್ನು ಮತ್ತು ಕಾವ್ಯಾಂಶವನ್ನು ಹಾಸುಹೊಕ್ಕಾಗಿ ನೇಯ್ದಿದ್ದಾನೆ. ಕೃತಿಯು ಜೈನಮತೀಯ ಗ್ರಂಥವಾದರೂ ಇದರಲ್ಲಿ ಪರಮತ ಸಹಿಷ್ಣುತೆ, ವಿಶಾಲದೃಷ್ಟಿ ಕಂಡುಬರುತ್ತವೆ. ವೃತ್ತ ಕಂದ ಗದ್ಯ ರಗಳೆ–ಇವುಗಳ ರಚನೆಯಲ್ಲಿ ಬಿಗಿಯಿದೆ. ಗಾದೆಗಳೂ ಪಡೆನುಡಿಗಳೂ ಹಿತಮಿತವಾಗಿ ಬೆರೆತು ಕಾವ್ಯಶೈಲಿ ಸುಲಲಿತವಾಗಿದ್ದು ಮನಸೆಳೆಯುವಂತಿದೆ."[೨೫೫]

---

೨೫೪. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. vii (ಪೀಠಿಕೆ)
೨೫೫. **ಕನ್ನಡ ವಿಷಯ ವಿಶ್ವಕೋಶ** : ಪುಟ. ೩೬೩

ಹಲವಾರು ಅವಸ್ಥಾಂತಗಳನ್ನು ಹೊಂದುತ್ತ ತಿರುಗುವ ಆತ್ಮಕ್ಕೆ ನೂರಾರು ಬಂಧಗಳು ಒದಗುತ್ತವೆ. ಆ ಬಂಧಗಳಿಂದ ಬಿಡುಗಡೆಯಾಗುವ ದಾರಿಯನ್ನು ಸುಗಮವಾಗಿಸುವುದೇ ಅನುಪ್ರೇಕ್ಷೆ.

"ಶ್ರೀ ನಾರೀರಮಣೀಯಪಾದಕಮಲಂ ಶುದ್ಧಂ ಪ್ರಸಿದ್ಧಂ ಲಸತ್
ಜ್ಞಾನಾಕಾರನಪಾರ ದೃಗ್ಬಲಸುಖಾಖಾತ್ಯಂ ವಿನೂತಂ ವಿನೇ
ಯಾನೀಕ ಪ್ರವಿರಾಜಿತಂ ತ್ರಿಭುವನಾಧೀಶಂ ಜಿನೇಶಂ ಸಮಾ
ಧಾನಪ್ರಾಪ್ತಿಯನೀಗೆ ಭವ್ಯನಿರಕ್ಕೌಚಿತ್ಯಮಂ ಸ್ತುತ್ಯಮಂ ॥೧.೧॥"[೨೫೬]

ಶ್ರೀ ಲಕ್ಷ್ಮೀದೇವಿಯ ಪಾದಕಮಲಗಳಂತೆ ಪಾದಗಳನ್ನುಳ್ಳವನೂ, ನಿರ್ಮಲನೂ, ಶ್ರೇಷ್ಠನೂ, ಜ್ಞಾನಿಯೂ ಅಗಾಧದೃಷ್ಟಿಯುಳ್ಳವನೂ ವಿನಯಿಯೂ, ತ್ರಿಭುವನಾಧಿಪತಿಯೂ ಆದ ಜಿನೇಂದ್ರರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಹಾಗೂ ಸರ್ವಸಾಧುಗಳು ಸಮಸ್ತ ಜೀವಗಳಿಗೆ ಕರ್ಮಕಳೆಯುವ ಮಾರ್ಗವನ್ನು ತಿಳಿಸಿ ಶಾಶ್ವತ ಸುಖ–ಶಾಂತಿಯನ್ನು ದಯಪಾಲಿಸಲಿ ಎಂದು ಪಂಚ ಪರಮೇಷ್ಠಿಗಳಲ್ಲಿ ಕವಿಯು ಪ್ರಾರ್ಥಿಸಿಕೊಂಡು ಕೃತಿಯನ್ನು ಆರಂಭಿಸುತ್ತಾನೆ. ಕಾವ್ಯಧರ್ಮದ ಅರಿವಿಲ್ಲದವನನ್ನು ನಿಷ್ಪ್ರಯೋಜಕನೆಂದು, ಪಾಪಕರ್ಮ ನಿರತನಾದವನು ಬೇಡವೆಂದು, ಸುಳ್ಳುಗಾರ ಕಾವ್ಯಚೋರರನ್ನು ತಿರಸ್ಕರಿಸಿ, ಸರಸ್ವತಿದೇವಿಯು ಬಂಧುವರ್ಮನ ಮುಖಪದ್ಮದಲ್ಲಿ ವಿರಾಜಿಸಿದ್ದಾಳೆ ಎಂದು ತನ್ನ ಕಾವ್ಯನಿಷ್ಠೆಯನ್ನು ಹೇಳಿಕೊಂಡಿದ್ದಾನೆ. ಮತಿಗೇಡಿಗಳಂತೆ ಸರಿಯಾದ ದಾರಿಯಲ್ಲಿ ನಡೆಯದೇ ಕಷ್ಟಗಳನ್ನು ಅನುಭವಿಸುತ್ತಿರುವ ಜೀವರಾಶಿಗಳಿಗೆ ಹಿತವಾದ ಮಾತುಗಳನ್ನು ಹೇಳಬೇಕೆಂದು ಬಯಸಿ 'ಜೀವಸಂಬೋಧನೆ'ಯನ್ನು ಹೇಳುತ್ತಿರುವುದಾಗಿ ತಿಳಿಸುತ್ತಾನೆ.

ಈ ಮೊದಲೇ ಹೇಳಿದ ಹಾಗೆ ಪ್ರಸ್ತುತ ಬಂಧುವರ್ಮನ 'ಜೀವಸಂಬೋಧನಂ' ಕೃತಿಯಲ್ಲಿ ಹನ್ನೆರಡು ಅಧ್ಯಾಯಗಳಿವೆ. ಒಂದೊಂದು ಅಧ್ಯಾಯದಲ್ಲಿಯೂ ಒಂದೊಂದು ಅನುಪ್ರೇಕ್ಷೆಗಳನ್ನು ಹೇಳುತ್ತ ಹೋಗುತ್ತಾನೆ. ಹೀಗಾಗಿ ಇದು ದ್ವಾದಶಾನುಪ್ರೇಕ್ಷೆಗಳನ್ನು ಬೋಧಿಸುತ್ತದೆ. ಹನ್ನೆರಡು ಅನುಪ್ರೇಕ್ಷೆಗಳನ್ನು ಹೇಳುವಾಗಲೂ ಒಂದೊಂದು ಅನುಪ್ರೇಕ್ಷೆಯ ತರುವಾಯ ಒಂದೊಂದು ದೃಷ್ಟಾಂತ ಕಥೆಗಳನ್ನು ಹೇಳಿಕೊಳ್ಳುತ್ತ ಹೋಗುವುದರಿಂದ ಶಾಸ್ತ್ರವನ್ನು ಅರಿತುಕೊಳ್ಳಲು ಇದು ಸುಲಭವಾದ ಮಾರ್ಗವೆನಿಸುತ್ತದೆ. ಇಲ್ಲಿ ಅನುಪ್ರೇಕ್ಷೆ ಎಂಬ ಪದಕ್ಕೆ ಪುನಃ ಪುನಃ ನೆನೆಯುವುದು, ಕಂಡುಕೊಳ್ಳುವುದು, ಭಾವನೆ, ಚಿಂತನೆ ಎಂಬರ್ಥಗಳಿವೆ. ಅಂದರೆ ಆತ್ಮನನ್ನು ನೆನೆಯುವುದು ಎಂದರ್ಥ. ಹೀಗಾಗಿ ಜೀವ ಸಂಬೋಧನೆಯೆಂಬುದು ಆತ್ಮ ಸಂಬೋಧನೆ ಎಂದು ಅರಿಯುವುದು. ಅಂದರೆ ಆತ್ಮನನ್ನು ಸಂಬೋಧಿಸಿಕೊಳ್ಳುವುದು. ಆತ್ಮನ ಕಲ್ಯಾಣಾರ್ಥವಾಗಿ ಇಲ್ಲಿರುವ ತೊಳಲಾಟ, ನರಳಾಟ, ಕ್ಷಣಿಕತೆಗಳನ್ನು ನೆನೆದು ಕೊನೆಗೆ ಆತ್ಮ

೨೫೬. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೦೩

ಸಾಕ್ಷಾತ್ಕಾರವನ್ನು ಸಾಧಿಸಲು ಮಾರ್ಗವನ್ನು ತೋರಿ ಆತ್ಮೋನ್ನತಿಯನ್ನು ಹೊಂದುವುದೇ 'ಜೀವಸಂಬೋಧನಂ' ಕೃತಿಯ ಉದ್ದೇಶವಾಗಿದೆ.

ಜೀವದ್ರವ್ಯವು ಜ್ಞಾನ, ದರ್ಶನ, ಕರ್ತೃತ್ವ, ಭೋಗತ್ವ, ಸ್ವದೇಹ ಪರಿಣಾಮತ್ವ, ಊರ್ಧ್ವಗತಿ ಸ್ವಭಾವಗುಣಗಳ ಪರಿಣಾಮಗಳನ್ನು ಹೊಂದಿದೆ. ಇವುಗಳಲ್ಲಿ ಮುಕ್ತರು ಮತ್ತು ಸಂಸಾರಿಗಳೆಂದು ಎರಡು ವಿಧಗಳು. ಅಷ್ಟಕರ್ಮಗಳನ್ನು ನಿರ್ಮೂಲ ಮಾಡಿ, ಮೂರೂ ಲೋಕದ ಮೇಲೆ ತುತ್ತತುದಿಯಲ್ಲಿ ಸ್ಥಿತವಾಗಿರುವ ಜೀವ (ಆತ್ಮ)ಗಳೆಲ್ಲವೂ ಮುಕ್ತಜೀವಗಳಾಗಿವೆ. ಗತಿ, ಇಂದ್ರಿಯ, ಕಾಯ, ಯೋಗ, ವೇದ, ಕಷಾಯ, ಜ್ಞಾನ, ಸಂಯಮ, ದರ್ಶನ, ಲೇಶ್ಯೆ, ಭವ್ಯ, ಸಮ್ಯಕ್ತ್ವ, ಸಂಜ್ಞೆ, ಆಹಾರಗಳೆಂಬ ಹದಿನಾಲ್ಕು ಮಾರ್ಗಣೆಗಳಲ್ಲಿ ಮಿಥ್ಯಾತ್ವಾದಿ ಬಂಧಗಳಿಂದ ಚತುರ್ಗತಿಳಲ್ಲಿ ಸುತ್ತುವ ಜೀವಗಳೆಲ್ಲವೂ ಸಂಸಾರಿ ಜೀವಗಳಾಗಿವೆ. ಅಲೋಹ ಶಿಲೆಯಲ್ಲಿ ಶಿಲಾರೂಪದ ಸುವರ್ಣವಿರುವಂತೆ ಅಭವ್ಯ ರಾಶಿಗಳಲ್ಲಿ ಭವ್ಯಜೀವಗಳಿರುವವು. ಹೀಗಿರುವ ಭವ್ಯಜೀವಗಳು ಅನಂತ ಚತುಷ್ಟಯಗಳಲ್ಲಿ ಬಹುವಿಧ ದುಃಖದಲ್ಲಿ ತೊಳಲುತ್ತಿರುತ್ತವೆ. ಇದರಿಂದ ಬಿಡುಗಡೆ ಹೊಂದಬೇಕಾದರೆ ಸರಿಯಾದ ಉಪದೇಶ ಬೇಕು. ಆದುದರಿಂದ ಉಪದೇಶರೂಪದಲ್ಲಿ ಆತ್ಮಸಂಬೋಧನೆ, ಆರಾಧನೆಯ ರೂಪದಲ್ಲಿ ಈ ಗ್ರಂಥವು ರಚಿತವಾಗಿದೆ.

ಈ ಆರಾಧನೆಗಳು ನಾಲ್ಕು ರೂಪದಲ್ಲಿರುತ್ತವೆ.

೧) ದರ್ಶನಾರಾಧನೆ: ಶಂಕೆ ಮೊದಲಾದ ಅಷ್ಟಮಲಗಳನ್ನು ತೊಲಗಿಸಿ ನಿಶ್ಶಂಕೆಯೇ ಮೊದಲಾದ ಅಷ್ಟಗುಣಗಳನ್ನು ಹೊಂದುವುದು.

೨) ಜ್ಞಾನಾರಾಧನೆ: ಆತ್ಮನಲ್ಲಿರುವ ಅಜ್ಞಾನವನ್ನು ಹೋಗಲಾಡಿಸಿ ಸುಜ್ಞಾನವನ್ನುಂಟು ಮಾಡುವುದು.

೩) ಚಾರಿತ್ರಾರಾಧನೆ: ಪ್ರಮಾದ ಪರಿಣಾಮವುಂಟಾಗದಂತೆ ಪಾಪಕ್ರಿಯೆಗಳನ್ನು ಬಿಡುವುದು.

೪) ತಪಾರಾಧನೆ: ಯಾವುದೇ ಅಪೇಕ್ಷೆಗಳಿಲ್ಲದೆ ಅನಶನಾದಿ ತಪಗಳಲ್ಲಿ ನಿರತನಾಗುವುದು.

"ಇಂತನುಪಮಮೆನಿಸಿದ ನಾ
ಲ್ಕುಂ ತೆಱದಾರಾಧನಾ ಮಹಾವಸ್ತುಗಳಂ
ನೀಂ ತಾಳ್ದಿರ್ದೊಡೆ ನೆಟ್ಟನ
ನಂತ ಸುಖಾಸ್ಪದಮನೆಯ್ದಿ ಶಾಶ್ವತನಪ್ಪೈ॥೧.೯॥"[೨೫೭]

ಇಂತಹ ಅಮೂಲ್ಯವಾದ ಆರಾಧನೆಗಳ ಫಲವಾಗಿ ಶಾಶ್ವತ ಸುಖವುಂಟಾಗಿ ಮುಕ್ತಿ ದೊರೆಯುತ್ತದೆ. ಚತುರ್ಗತಿಗಳನ್ನು ಹೊಂದಿ ಮಾನವ ಜನ್ಮಕ್ಕೆ ಬಂದಿರುವ ಜೀವನು ಯೋಗ್ಯ ಆಚಾರ್ಯರನ್ನು ಸಂಧಿಸಿ, ದಯಾಮೂಲವಾದ ಧರ್ಮವನ್ನು ಕೇಳಬೇಕು. ಅದನ್ನು ಅರಿತುಕೊಂಡು ವ್ರತ ಶೀಲಾಚಾರಗಳನ್ನು ಕೈಕೊಂಡು ಶ್ರಾವಕನಾಗಬೇಕು. ನಂತರ ತಪೋನುಷ್ಠಾನುಕ್ರಮದಿಂದ

---

೨೫೭. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೦೭

ಏಕಾದಶ ಗುಣಸ್ಥಾನಕ್ಕೆ ಅನುಗುಣವಾಗಿ ಇಂದ್ರಿಯಗಳನ್ನು ಜಯಿಸಿ ಆಗಮ ಭಾವನೆಗಳಿಂದ ಜ್ಞಾನಿಯಾಗುವುದು. ಸಮ್ಯಕ್‌ಜ್ಞಾನಿಯು ಚಾರಿತ್ರಸಂಪನ್ನನಾಗಿ ಕೊನೆಗೆ ಶುಭಧ್ಯಾನದಿಂದ ಕರ್ಮವನ್ನು ಕಳೆದುಕೊಂಡು ಶುದ್ಧಾತ್ಮನಾಗುವನು. ಆ ಕಾರಣಗಳಿಂದಾಗಿ ಶುಭಧ್ಯಾನಮೂಲವಾದ ಅಧ್ರುವ, ಅಶರಣ, ಸಂಸಾರ, ಏಕತ್ವ, ಅನ್ಯತ್ವ, ಅಶುಚಿತ್ವ, ಆಸ್ರವ, ಸಂವರ, ನಿರ್ಜರ, ಲೋಕ, ಬೋಧಿದುರ್ಲಭ ಹಾಗೂ ಧರ್ಮ ಎಂದು ಹನ್ನೆರಡು ವಿಧವಾದ ಅನುಪ್ರೇಕ್ಷೆಗಳು ಇರುವವು. ಎಂದು ಹೇಳಿ ಕವಿ ಬಂಧುವರ್ಮನು ಒಂದೊಂದು ಅಧ್ಯಾಯದಲ್ಲಿಯೂ ಒಂದೊಂದು ಅನುಪ್ರೇಕ್ಷೆಯನ್ನು ಈ ಮುಂದಿನಂತೆ ವಿಶ್ಲೇಷಿಸುತ್ತಾನೆ.

೩.೪.೧.೧. ಅಧ್ರುವಾನುಪ್ರೇಕ್ಷೆ:

> **"ಜೀವನೆ ನೀನಿದಂ ಬಗೆದು ಕೇಳ್ ಧ್ರುವಮಧ್ರುವಮೆಂಬ ವಸ್ತು**
> **ಸದ್ಭಾವವಿಕಾರಮಿರ್ತೆಱದೆ ನಿನ್ನೊಡನಿರ್ದುವು ಬೇಱಿಬೇಱಿ ನೋ**
> **ಡಾವುವಿವೆಂಬ ಕಾಣ್ಬಱಿವ ನಿನ್ನ ನಿಜೋತ್ತಮ ಶಕ್ತಿಗಳ್ ಧ್ರುವಂ**
> **ಭಾವಿಸಿ ನೋಡೆ ಕರ್ಮಕೃತ ದೇಹ ಕಳತ್ರ ಧನಂಗಳಧ್ರುವಂ॥೧.೧೦॥"**[೨೫೮]

ಜೀವನೇ ಕೇಳು ಧ್ರುವ ಮತ್ತು ಅಧ್ರುವ ಎಂದು ಎರಡು ರೀತಿಯ ಭಾವಗಳು ಆತ್ಮನಲ್ಲಿರುವವು. ಆತ್ಮನಲ್ಲಿರುವ ಉತ್ತಮ ಶಕ್ತಿಗಳೇ ಧ್ರುವ. ಅಂದರೆ ನಿತ್ಯ, ಶಾಶ್ವತವಾದುದು. ಕರ್ಮದಿಂದ ಆವೃತವಾದ ದೇಹ, ಹೆಂಡತಿ, ಧನಗಳು ಅಧ್ರುವ. ಅದು ಹೇಗೆಂದರೆ ಶರೀರ, ಬಂಧುಜನ ಮತ್ತು ದ್ರವ್ಯವು ಕೊರಕಲ್ಲಿನಲ್ಲಿನ ಮರ, ಮಂಜಿನ ಸಮೂಹ, ಹಣ್ಣಾದ ಮರ, ನೀರ ಗುಳ್ಳೆ, ಕಾಮನಬಿಲ್ಲು, ಸಮುದ್ರದ ಅಲೆಗಳು, ಗೋಧೂಳಿಯು, ಗಿರಿನಿರ್ಝರಗಳು, ಮುಗಿಲೊಡ್ಡುಗಳು ಹೇಗೆ ಕ್ಷಣಿಕವೋ ಹಾಗೆಯೇ ದೇಹ, ಹೆಂಡತಿ, ಧನಗಳೂ ಕೇವಲ ಕ್ಷಣಿಕವಾದವುಗಳು. ಅಂದರೆ ಅನಿತ್ಯ, ಅಶಾಶ್ವತವಾದವುಗಳು. ಹೀಗಾಗಿ ಅಧ್ರುವಾನುಪ್ರೇಕ್ಷೆಗೆ ಅನಿತ್ಯಾನುಪ್ರೇಕ್ಷೆ ಎಂಬ ಹೆಸರೂ ಇದೆ. ಹೀಗಿರುವ ಕ್ಷಣಿಕ ಜೀವನಕ್ಕೆ ಯಮನೆಂಬ ಪಾತಕಿಯು ಆಯುಸ್ಸು ತೀರುತ್ತಿದ್ದಂತೆಯೇ ಎಳೆದೊಯ್ಯುವನು. ಅವನು ತಿಳಿದವರೂ, ಪರಿಚಿತರೂ, ಬಲಾಢ್ಯರೂ, ನೆಂಟರಿಷ್ಟರೂ ಯಾರು ಮೊರೆಯಿಟ್ಟರೂ ಲೆಕ್ಕಿಸದೇ ಜೀವವನ್ನು ಕೊಂಡೊಯ್ಯುತ್ತಾನೆ. ಇದೆಲ್ಲಾ ಗೊತ್ತಿದ್ದು, ಇನ್ನೊಂದು ದುಃಖವನ್ನು ಮೈಮೇಲೆ ಎಳೆದುಕೊಳ್ಳುವುದು ಸರಿಯೇ? ಆಯು, ಆಯ ತೀರಿದರೆ ಅದನ್ನು ನೆಂಟರಿಷ್ಟರು ಹಂಚಿಕೊಳ್ಳುವರೇ? ಖಜಾನೆಯನ್ನು ಕಾಯಲು ಕಳ್ಳನನ್ನು ನೇಮಿಸಿದಂತೆ ಆಗುವುದು. ಆದುದರಿಂದ ನಮಗೆ ಎಂದಿಗೂ ಸಾವಿಲ್ಲವೆಂದು, ಅಜರಾಮರರೆಂದು ಬುದ್ಧಿಭ್ರಮೆಯಿಂದ ನಡೆಯುವುದು ಸರಿಯಲ್ಲ. ಒಮ್ಮೆಲೆ ಬಂದೆರಗುವ ಯಮನನ್ನು ತಡೆಯಲು ಅವರಾರೂ ಬರಲಾರರು. ಹೀಗಿರಬೇಕೆಂದು ಯೋಚಿಸದೇ ಶಾಶ್ವತವಾಗಿರುವುದನ್ನು ಯೋಚಿಸು. ದ್ರವ್ಯವನ್ನು ತೊರೆದು ಬಾಳುವ ಸಂತೋಷವನ್ನು ಯೋಜಿಸಿ ನೋಡು.

---

೨೫೮. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೦೮

"ನಿಲ್ಲದುದಮನೆಂತು ನಿನ
ಗಲ್ಲದುದುಮನೋವಿ ಕಾವೋಡೀ ಕಾಲದೊಳಿಂ
ಬಲ್ಲದುದುಮನಂತ್ಯದೊಳೊಡ
ಸಲ್ಲದುದುಮನಜಿರು ಧನಮನೆನಗೆನುತಿರ್ಪಾ॥೧.೧೭॥

ಆಯುಮಿಲ್ಲದ ಮಾನಸವಾಟಿಗ್ಗೆ ಮೆಟಿಳ್ವಿಟ್ಟೊಡಂ ಸೈಪಿಲ್ಲದರ್ಥಕ್ಕಾಸೆವಟ್ಟೊಡಮೇಕೆ ನಿಲ್ಕುಂ ಆಯುಂ ಸೈಪುಮುಳ್ಳನಮೇಕೆ ಸಾವಮೇಕೆತವುವಮೆಂಬುದಂ ಬಗೆವುದು ಮತ್ತಮಿಂತಪ್ಪುದು."[೨೫೯]

ಮೋಹರಾಜನೆಂಬ ಖಳನಿಗೆ ಒಲಿದರೆ ಸೋಲು ಬಂದೆರಗುವುದು. ಇದುವೇ ಕರ್ಮದ ಮೊದಲ ಬೀಜ. ಚಿಂತೆಯನ್ನು ಹೆಚ್ಚಿಸುವ ಸಂಪತ್ತಿನಲ್ಲಿನ ಮೋಹವನ್ನು ತ್ಯಜಿಸಿದ ಮಾನವರೇ ಈ ಲೋಕದ ನಿಜವಾದ ದೇವರು. ಮನೆಯಲ್ಲಿನ ಕಸವನ್ನೊಯ್ದು ಹೊಲದಲ್ಲಿ ಹಾಕಿದಾಗ ಅದು ಗೊಬ್ಬರವಾಗಿ ಉತ್ತಮ ವೃಕ್ಷ ಬೆಳೆಯುವುದು. ಅಂತೆಯೇ ಧನವನ್ನು ಮನೆಯಲ್ಲಿ ಅಡಗಿಸಿಡುವ ಬದಲು ಧರ್ಮಕ್ಕೆ ವ್ಯಯ ಮಾಡಿದರೆ ಅದರಿಂದ ಪುಣ್ಯವೆಂಬ ಮಹಾವೃಕ್ಷ ಬೆಳೆಯುವುದು. ಎಷ್ಟೋ ಸಲ ಮಾನವನ ಬದುಕಿಗೆ ಆಧಾರವಾಗಿರುವ ಅನ್ನ, ನೀರುಗಳೇ ಪ್ರಾಣವನ್ನು ಕಿತ್ತುಕೊಳ್ಳುತ್ತವೆ. ಹೀಗಿರುವಾಗ ಯಮನನ್ನು ತಡೆಯಲು ಸಾಧ್ಯವಾಗದು. ಆತ್ಮನು ಮಾನವಬಾಳಿಗೆ ಅಂಜಿ, ಧರ್ಮವನ್ನು ಆಶ್ರಯಿಸಿ ಸಾಕಷ್ಟು ಗಳಿಸಿದ ಮೇಲೆ ಧರ್ಮದಲ್ಲಿ ನಿರತನಾಗುವೆನೆಂದು ಸುಮ್ಮನಿರುವುದು ತರವಲ್ಲ. ಮೃತ್ಯುವು ಅದಕ್ಕಾಗಿ ಕಾದು ಕುಳಿತಿರುವುದಿಲ್ಲ. ಅದು ಯಾವಾಗ ಬೇಕಾದರೂ ಪ್ರಾಣವನ್ನು ಎಗರಿಸಬಹುದು. ಆದುದರಿಂದ "ತಡೆಯದೆ ಧರ್ಮದೊಳ್ ನಗಟಿಮೆಂಬುದು ಗೋಸಣೆ ಜೈನಮಾರ್ಗದೊಳ್"[೨೬೦] ಎನ್ನುತ್ತಾನೆ.

ಬೇರೆ ಜೀವಿಗಳ ಬಗೆಗೆ ಯಮನ ಉದ್ದೇಶ ಏನಿದೆಯೋ ತಿಳಿಯಲಾರದು. ಆದರೆ ಮನುಷ್ಯಗತಿಯಲ್ಲಿರುವವರನ್ನು ಮಾತ್ರ ಅತಿಯಾದ ಸಿಟ್ಟಿನಿಂದ ಕೊಲ್ಲಬಯಸುವನು. ಮುದುಕ–ಮಗು, ಒಳ್ಳೆಯವನು–ಕೆಟ್ಟವನು, ನೀಚ–ಉತ್ತಮ, ಬಡವ–ಬಲ್ಲಿದ, ಹೇಡಿ–ವೀರ, ತ್ಯಾಗಿ–ಲೋಭಿ ಎಂದು ಮೃತ್ಯುರಾಜನು ಎಂದೂ ಯೋಚಿಸಲಾರನು. ಮದಿಸಿದ ಆನೆಯಂತೆ ಯಾವಾಗಲಾದರೂ ಬಂದು ಎರಗುವನು. ಇದನ್ನು ತಿಳಿದೂ ಧರ್ಮಮಾಡುವುದರಲ್ಲಿ ತಡಮಾಡಬಾರದು. ಮರದಲ್ಲಿರುವ ಒಂದು ಹಣ್ಣು ಕ್ಷಣಮಾತ್ರದಲ್ಲೇ ತೊಟ್ಟು ಕಳಚಿ ಬೀಳುವುದು. ಅಂತೆಯೇ ಹುಟ್ಟು ಸಾವುಗಳೂ ಕೂಡ. ಕಳೆಯನ್ನು ತೆಗೆಯದ ಹೊಲದಲ್ಲಿ ಒಕ್ಕಲುತನದ ವೃದ್ಧಿಯು ಹೇಗೆ ಆಗುವುದಿಲ್ಲವೋ ಹಾಗೆಯೇ ಧರ್ಮದಲ್ಲಿ ತೊಡಗಿಸಿಕೊಳ್ಳದವನ ಜ್ಞಾನವೂ ವೃದ್ಧಿಯಾಗದು.

"ಕಾಲನ ದೂತರು ಕಾಲ್ಪಿಡಿದೆಳೆವಾಗ
ತಾಳು ತಾಳೆಂದರೆ ಕೇಳುವರೆ
ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ
ಸುಳ್ಳಿನ ಸಂಸಾರ ಸುಳಿಗೆ ಸಿಕ್ಕಲು ಬೇಡಿ ॥"[೨೬೧]

---

೨೫೯. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೦೭
೨೬೦. **ಅದೇ** : ಪುಟ. ೦೮
೨೬೧. ಎಂ. ವಿ. ಸೀತಾರಾಮಯ್ಯ (ಸಂ); **ದಾಸ ಸಾಹಿತ್ಯ** : ಪುಟ. ೧೭೬

ಯಮಧೂತರು ಬಂದು ಪ್ರಾಣವನ್ನು ಸೆಳೆಯುವ ಮುನ್ನ ಸಂಸಾರದಲ್ಲಿ ಸಿಲುಕಿ ತೊಳಲದೇ ಧರ್ಮದಲ್ಲಿ ತೊಡಗಿಸಿಕೊ ಎಂದು ಹೇಳುತ್ತಾರೆ.

> **"ಉರಿವ ಕೊಂಡಕ್ಕೆ ಬಂದ ವೇಳೆವಡಿಚಂಗಂ ಮನುಷ್ಯಭವಕ್ಕೆ ವಂದ ಜೀವಕ್ಕೆ ಗತಿಯಂ ಬಗೆಯಲಲ್ಲದೆ ಪೆಱತು ಮೋಹದೊಳ್ ನೆಗಟಲೆಡೆಯಿಲ್ಲಂ ಮುನ್ನಂ ಮಱೆದು ನೆಗೞ್ದು ಕೆಟ್ಟುದಿಂತಲ್ತೆ**
>
> **ಇದು ಪೊಲ್ಲದಿದೊಳ್ಳಿತ್ತೆಂ**
> **ಬುದನಱಿಯದೆ ನೆಗೞ್ದು ಕೆಟ್ಟೆಮುಂ ನೀಂ ನಿನಗ**
> **ಪ್ಪುದನಱಿದೊಳ್ಪಂ ಮಾೞ್ಪುದು**
> **ಪುದಿದಂತಕ ಜಠರದಹನನಳುರದೆ ಬೇಗಂ ॥೧.೨೫॥"**[೨೬೨]

ಉರಿವ ಕೆಂಡದ ಕೊಂಡವನ್ನು ಹಾಯುವ ಭಕ್ತನಿಗೂ, ಮಾನವ ಜನ್ಮಕ್ಕೆ ಬಂದ ಜೀವನಿಗೂ ಉತ್ತಮಗತಿಯನ್ನು ಹೊಂದುವ ಬಯಕೆ ಇರುವುದೇ ಹೊರತು ಬೇರೆಯ ಮೋಹಗಳಿಗೆ ಅವಕಾಶವಿಲ್ಲ. ಒಳ್ಳೆಯದು ಯಾವುದೆಂದು ತಿಳಿದು ನಡೆದರೆ ಯಮನಿಗೆ ಅಂಜಬೇಕಾದ ಮಾತಿಲ್ಲ. ಇರುಳು ಕಂಡ ಹಳ್ಳದಲ್ಲಿ ಹಗಲು ಬೀಳುವುದು ಬೇಡ. ಹಲವು ಗತಿಗಳಲ್ಲಿ ಸುತ್ತಿ ಸಂಸಾರವೆಂಬ ದಟ್ಟಡವಿಯ ದುಃಖಾಗ್ನಿಯು ಸದಾ ಮುತ್ತಿರಲು ಆತ್ಮನೇ ಅದರಲ್ಲಿ ಬೆಂದು ನೋಯುತ್ತಿರುವೆ. ದುರ್ಮೋಹಕ್ಕೆ ಒಳಗಾಗಿ ಕೆಡಬೇಡ. ಮಿಂಚಿನ ಬೆಳಕನ್ನು ನಂಬಿ ಕತ್ತಲೆಯಲ್ಲಿ ಹೊರ ಹೋಗುವಂತೆ ಅಲ್ಪಸುಖದಾಸೆಯಿಂದ ಪಾಪವನ್ನು ಹೆಚ್ಚಿಸಿಕೊಳ್ಳುವುದು ಬೇಡ. ಹೀಗಾದರೆ ತಿನ್ನಬಯಸುವ ಭೂತದೆಡೆಗೆ ಬಯಸಿ ಹೋದಂತಾಗುವುದು. ಹೇಗೆಂದರೆ ಆಡನ್ನು ಕತ್ತರಿಸಲು ಹೊರಟವನು ಕತ್ತಿಯನ್ನು ಮರೆತು ಹೊರಟಾಗ ಆ ಕತ್ತಿಯನ್ನು ಆಡು ಕಾಲು ಕೆದರಿ ನೆನಪಿಸಿದಂತೆ ಕೊಲ್ಲುವ ಯಮನಿಗೆ ಪಾಪದ ನೆರವು ಮಾಡಿಕೊಡುವುದು ಬೇಡ. ಮಳೆಯ ನೀರನ್ನು ನಂಬಿ ಪಾತ್ರೆಯಲ್ಲಿದ್ದ ನೀರನ್ನು ಚೆಲ್ಲುವ ಮೂಢನಂತೆ ಕಾಲಸಂದಂತೆ ಆಯು ಕ್ಷಯಿಸುವುದನ್ನು ಅರಿತೂ ಶರೀರಮೋಹಕ್ಕೆ ಒಳಗಾದರೆ ಆ ಹುಚ್ಚನಿಗೂ ಈ ಬಾಳಿಗೂ ಯಾವ ವ್ಯತ್ಯಾಸವೂ ಇಲ್ಲ. ನಷ್ಟವಾಗುವ ಶರೀರವನ್ನು ನಚ್ಚಿಕೊಂಡಿರುವುದು ಬೇಡ.

ಗುಡುಗು ಮಿಂಚುಗಳು ಮಳೆಯ ಬರವನ್ನು ಸೂಚಿಸುವಂತೆ, ನಿತ್ಯ ಒದಗುವ ನಿದ್ರೆ, ಎಚ್ಚರಗಳು ಹುಟ್ಟು–ಸಾವನ್ನು ಅನುಕರಿಸುವಂತಿದ್ದರೂ ಆತ್ಮ ಮೋಹವು ಅಚ್ಚರಿದಾಯಕವಾದುದು. ಅಡಿಗಡಿಗೆ ಆಯು ಕುಂದುವುದು. ಸೈನ್ಯವನ್ನು ಕಂಡು ಆಯುಧವನ್ನು ಮರೆತರೆ ಕೇಡನ್ನು ಕಂಡು ಧರ್ಮವನ್ನು ಮರೆತರೆ ಆತನ ಸಾವಿಗೂ, ಈತನ ನೋವಿಗೂ ವ್ಯತ್ಯಾಸವೇನಿದೆ? ಎಷ್ಟೋ ಸಲ ನ್ಯಾಯವಾಗಿ ಗಳಿಸಿದ ಧನವೇ ಅನ್ಯಾಯವಾಗಿ ಹೋಗುವಾಗ ಅದರ ಕುರಿತಾದ ಮೋಹ ಇರುವುದು ಬೇಡ. ಹೀಗಾಗಿ ಉತ್ತಮ ಕೆಲಸಕ್ಕೆ ಹಣವನ್ನು ವ್ಯಯಿಸಲು ಸುಖವಾಗುವುದು. ಕೇಡುಗಾಲದಲ್ಲಿ ಅಮೃತವೂ ವಿಷವಾಗುವಂತೆ ಕಲಿಕಾಲದಲ್ಲಿ ಸಂಪತ್ತಿನಿಂದ ಯಾವ ಸುಖವೂ ಒದಗುವುದಿಲ್ಲ. ಏನೂ ಇಲ್ಲದವನನ್ನು ಬಡವ ಎಂದು ಕರೆಯಬಹುದು. ಆದರೆ ಒಂಟಿ

---

೨೬೨. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೧೬

ಮರಿಜಿಂಕೆಯೊಂದು ಬೇಟೆಗಾರರ ನಡುವೆ ಸಿಲುಕಿದಂತೆ ಸಂಪತ್ತುಳ್ಳವನನ್ನು ಎಲ್ಲ ದಿಕ್ಕುಗಳಿಂದಲೂ ಎಲ್ಲರೂ ಹಿಡಿದು ನುಂಗುತ್ತಾರೆ.

ಅಂತಹ ಸಂಪತ್ತು ಹಿರಿದಾದ ದುಃಖದಿಂದಲೇ ಕೈಗೂಡುವುದು. ಒಂದು ವೇಳೆ ಕೈಗೂಡಿದರೂ ಸ್ಥಿರವಾಗಿರದೇ ಇನ್ನಾವುದೋ ಮುಖದಿಂದ ಹೊರಹೋಗುವುದು. ಹೀಗಾಗಿ ಸಂಪತ್ತು, ಶರೀರ, ಪತ್ನಿಯರಿಂದ ದುಃಖವೇ ಉಂಟಾಗುವುದು. ನೆಂಟರಗಲಿಕೆಗಿಂತ ನಲ್ಲರ ಅಗಲಿಕೆಯು ಹೆಚ್ಚು ನೋವುಂಟುಮಾಡುವಂತೆ ಲೋಭಿಯ ಧನನಾಶವೂ ಮತ್ತು ಹೇಡಿಯ ಸಾವೂ ಹೆಚ್ಚು ದುಃಖವನ್ನು ಉಂಟುಮಾಡುತ್ತವೆ. ಹೇಯವಾದ ಶರೀರಕ್ಕೆ ರೋಗ–ರುಜಿನಗಳುಂಟಾಗಿ ಅನಿತ್ಯತೆಯಿಂದ ದುಃಖವೊದಗಿದಾಗ ಸುಖವೆಂಬುದೆಲ್ಲಿಯದು? ಆದುದರಿಂದ ಆತ್ಮನಿಗೆ ಅನಂತ ಸುಖವನ್ನೀಯುವ ಕಾರ್ಯವನ್ನೇ ಮಾಡು. ಅದು ಕೇವಲ ನಿರ್ಮೋಹದಿಂದ ಮಾತ್ರ ಸಾಧ್ಯ.

"ಬಿತ್ತಿಂ ಬೇರು ಮೊಳೆಯುಂ
ಮತ್ತೆಂತೊಡನಕ್ಕುಮಂತೆ ಮೋಹೋದಯದಿಂ
ದೆತ್ತಂ ರಾಗದ್ವೇಷೋ
ತ್ಪತ್ತಿ ವಿಮೋಹಮನೆ ಕೆಡಿಸು ಕೆಡುಸುವೊಡಘಮಂ॥೧.೩೯॥"[೨೬೩]

ಬೀಜದಿಂದ ಬೇರುಬಿಟ್ಟು, ಮೊಳಕೆಯೊಡೆದು ಮರವಾಗುವಂತೆ ಮೋಹದಿಂದ ರಾಗದ್ವೇಷಗಳೊದಗುತ್ತವೆ. ಪಾಪಕ್ಷಯವಾಗಬೇಕಾದರೆ ಮೋಹವನ್ನು ತ್ಯಜಿಸು. ಅದರಿಂದಲೇ ಕರ್ಮನಾಶವಾಗುವುದು. ಕರ್ಮಕ್ಷಯದಿಂದ ಮಾತ್ರ ಶಾಶ್ವತ ಸುಖ ಲಬ್ಧಿಯಾಗುವುದು.

"ಅಸ್ಥಿರಂ ಪರಿಜನನಃ ಸ್ವಜನಃ ಪುತ್ರಕಲತ್ರಂ ಸುಮಿತ್ರ ಲಾವಣ್ಯಂ।
ಗೃಹ ಗೋಧನಾದಿದಿಕಂ ಸರ್ವೇಃರ್ವಂ ನವಧನ ವೃಂದೇನ ಸದೃಶಂ॥೧.೦೬॥"[೨೬೪]

ಅಂದರೆ ಆಕಾಶದಲ್ಲಿರುವ ಮೋಡವೂ ಬಿರುಗಾಳಿಯಿಂದ ಸ್ಥಿರವಾಗಿರದೆ ಹೇಗೆ ನಾಶವಾಗುವುದೋ ಹಾಗೆಯೇ ಪುತ್ರರೂ, ಮಿತ್ರರೂ, ಆಪ್ತೇಷ್ಟರೂ, ಹೆಂಡಿರು, ರೂಪವೂ, ಗೃಹ, ಗೋವು, ಧನಾದಿಗಳೂ ಯಾವತ್ತಿದ್ದರೂ ನಾಶವಾಗುವುವೇ. ಹೀಗಾಗಿ ಎಲ್ಲವೂ ನಶ್ವರವಾದವುಗಳು. ಅದನ್ನು ಅರಿತು ನಡೆಯಬೇಕು.

ಇದು ಶುದ್ಧಚಾರಿತ್ರದಿಂದ ಮಾತ್ರ ಸಾಧ್ಯ. ಶುದ್ಧಚಾರಿತ್ರವು ಜ್ಞಾನದಿಂದ ಸಾಧ್ಯ. ಈ ಜ್ಞಾನವು ಆಗಮದಿಂದ ಉಂಟಾಗುವುದು. ಆಗಮವು ಶುದ್ಧಪರಮಾತ್ಮನಿಂದಾದುದರಿಂದ ಆತನೇ ಎಲ್ಲ ಸುಖಕ್ಕೆ ಕಾರಣನಾಗಿದ್ದಾನೆ. ನಿರ್ದೋಷಿಯಾದ ಪರಮಾತ್ಮನನ್ನು ನಂಬಿ ರತ್ನತ್ರಯಗಳನ್ನು ಸಾಧಿಸಿದ ಜೀವನು ಕರ್ಮಕ್ಷಯ ಮಾಡಿ ಸುಖಿಯಾಗುವನು ಎಂದು ಬಂಧುವರ್ಮನು ಉಪದೇಶಿಸಿತ್ತಾನೆ.

---

೨೬೩. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ**; ಪುಟ. ೧೨

೨೬೪. ಸ್ಯಾದ್ವಾದಕೇಸರಿ ೦೧೮ ಶ್ರೀ ಆಚಾರ್ಯ ಪಾಯಸಾಗರ ಮುನಿಗಳು ; **ಸ್ವಾಮಿ ಕಾರ್ತಿಕೇಯಾನುಪ್ರೇಕ್ಷಾ (ಕನ್ನಡ ಟೀಕೆ)** : ಪುಟ. ೦೪

೩.೪.೧.೨. ಅಶರಣಾನುಪ್ರೇಕ್ಷೆ:

“ಶ್ರೀಯುಮಘವಶದೆ ಕಟ್ಟಿ
ದಾರ್ಯಯುಂ ಕಿಡುವಲ್ಲಿ ನಿನಗೆ ಶರಣೆಲ್ಲಾರುಂ
ಬಾಯಂ ಬಿಟ್ಟು ವಿಮೋಹದಿ
ನಾಯಾಸಂಬಟ್ಟು ಕಟ್ಟು ನೆಗಟಲ್ ಜೀವಾ ॥೨.೧॥”[೨೮೬]

ಪಾಪದಿಂದ ಗಳಿಸಿದ ಸಂಪತ್ತೂ ಹಾಗೂ ಆಯುಸ್ಸೂ ಮುಗಿದಾಗ ಸಹಾಯಕ್ಕಾಗಿ ಯಾರೂ ಬರಲಾರರು. ಎಲೆ ಆತ್ಮನೇ ಮೋಹವಶದಿಂದ ಆಯಾಸಗೊಂಡು ಕೆಡುವುದು ಬೇಡ. ಯಾವುದೂ ರಕ್ಷಣೆಗೆ ಬಾರದು ಎಂದು ತಿಳಿದ ಮೇಲೂ ಅಲ್ಲಿ ಆಶ್ರಯವನ್ನು ಬೇಡುವುದು ಸರಿಯಲ್ಲ. ಕೊನೆಗೆ ಯಮನಿಂದ ನಾಶವಾಗುವುದು ನಿಶ್ಚಿತ. ಮೊಲೆವಾಲೇ ನಂಜಾದರೆ, ರಕ್ಷಕರೇ ಬಾಣ ಬಿಡುವುದಾದರೆ ಅಲ್ಲಿ ಭ್ರಾಂತಿಯಿಂದ ಇರುವುದು ತರವಲ್ಲ. ಕರ್ಮದಿಂದೊದಗುವ ಕಷ್ಟವನ್ನೂ, ಮೃತ್ಯು ಬಂದಾಗ ಆಗುವ ಸಾವನ್ನೂ ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಯಮನೆಂಬ ಕಳ್ಳನು ಸಂಸಾರವೆಂಬ ಕಾಡಿನಲ್ಲಿರಿಸಿ ಮೋಹವೆಂಬ ಸೊಕ್ಕೇರುವಂತೆ ಮಾಡುತ್ತಾನೆ. ಆ ಸೊಕ್ಕು ಏರಿದ ಮೇಲೆ ಕೊಲ್ಲಲು ಬರುತ್ತಾನೆ. ಆಗ ಕಾಯುವವರು ಯಾರು? ಎಂತಹ ಯಂತ್ರ, ಮಂತ್ರ, ತಂತ್ರಗಳೂ ಸಾವನ್ನು ತಪ್ಪಿಸಲು ಸಾಧ್ಯವಿಲ್ಲ. ಕತ್ತಿಹಿಡಿದು ಕಾಯುವ ರಾಜನೂ ಚಾಮರದ ಗಾಳಿಗೆ ಆರುವ ದೀಪದಂತೆ ಸಾಯುತ್ತಾನೆ.

ದೇವರೆನಿಸಿದ ಶಿವನು ತನ್ನ ತಲೆಯ ಮೇಲೆ ಚಂದ್ರನನ್ನು ಇರಿಸಿಕೊಂಡರೂ ಆ ಚಂದ್ರನ ಕಳೆಯನ್ನು ಇನ್ನಷ್ಟು ಹೆಚ್ಚಿಸಲು ಸಾಧ್ಯವಾಗಲಿಲ್ಲ. ದಿನ ಬೆಳಗುವ ಸೂರ್ಯನನ್ನೇ ಆ ರಾಹು-ಕೇತುಗಳು ನುಂಗುವಾಗ ತ್ರಿಲೋಕಕ್ಕೇ ಭಯವನ್ನುಂಟುಮಾಡಿದ ಯಮರಾಜನು ಅಲ್ಪನಾದ ಮಾನವನನ್ನು ನುಂಗ ಬಂದರೆ ಕಾಯಲು ಯಾರೂ ಇರುವುದಿಲ್ಲ. ಅಮವಾಸ್ಯೆಯ ದಿನ ಚಂದ್ರನು ಸೂರ್ಯನ ಮೊರೆ ಹೋಗುತ್ತಾನೆ. ಆದರೆ ತಾನು ಹೋದಂತೆಯೇ ಮತ್ತೆ ಮರಳುತ್ತಾನೆ. ಅಂತೆಯೇ ಯಾರೂ ಯಾರಿಗೆ ಆಶ್ರಯದಾತರಲ್ಲ. ಪೃಥ್ವೀಮಂಡಲದ ಸುತ್ತಲೂ ಅಸಂಖ್ಯಾತ ದ್ವೀಪ ಸಮುದ್ರಗಳಿರುವವು. ಅದರ ಹೊರಗೆ ಘನೋದಧಿ, ಘನಾನಿಲ, ತನುವಾತಗಳೆಂಬ ಮೂರು ವಾಯು ಮಂಡಲಗಳಿರುವವು. ಅದರಾಚೆಗೆ ಅನಂತವಾದ ಆಕಾಶವಿರುವುದು. ಇಂತಹ ಮಹಾಲೋಕದಲ್ಲಿ ವಿಧಾತ್ರನೆಂಬ ಮಹಾಮಂತ್ರವಾದಿಯೂ ಕಾಯಲಾರನು. ಅಂದಮೇಲೆ ರಕ್ಷಣೆಗಾಗಿ ಅನ್ಯರನ್ನು ಆಶ್ರಸುವುದೇಕೆ?

“ಎನಿತೊಳವು ಕಾವುಪಾಯಮ
ನನಿತಱಿಕೊಳಂ ತೆಟ್ಟನನ್ಯರಿಂ ತನ್ನಿಂದಂ
ತನುವಂ ಕಾಯಲ್ ಬಾರದು
ನಿನಗಾಗ್ರಹಮೇಕೆ ಪೇಟಿ ಮೆಯ್ಯೊಳ್ ಜೀವಾ ॥೨.೧೧॥

---

೨೮೬. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** ; ಪುಟ.೪೭

ಬಲೆಯೊಳ್ ತೊಡರ್ದ ಪಕ್ಕಿಗೆ ಬರ್ದುಂಕುವಾಸೆಯಿಲ್ಲದಂತೆ ಮೋಹದೊಳ್ ತೊಡರ್ದ ಮನುಷ್ಯಂಗೆ ಆವುದಾಸೆ ಸರ್ವಸಂಗಪರಿತ್ಯಾಗಂಗೆಯ್ದ ಮಹರ್ಷಿಯಾದೊಡಂ"[೨೬೬]

ರಕ್ಷಿಸುವ ಹಲವಾರು ಉಪಾಯಗಳಿಂದಲೂ, ಅನ್ಯರು ಮತ್ತು ತನ್ನಿಂದಲೂ ಶರೀರವನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲವೆಂದಾಗ ಅಂತಹ ಶರೀರದ ಮೇಲೆ ಮೋಹಬೇಡ. ಬಲೆಯಲ್ಲಿ ಸಿಕ್ಕ ಹಕ್ಕಿಯು ಬದುಕುವ ಆಸೆಯನ್ನು ಬಿಡಬೇಕಾದಂತೆ, ಮೋಹವಶನಾದವನು ಎಲ್ಲ ಆಸೆಗಳನ್ನೂ ಬಿಡಬೇಕಾಗುತ್ತದೆ. ಇದರಿಂದ ಸರ್ವಸಂಗಪರಿತ್ಯಾಗಿಯಾದ ಮಹರ್ಷಿಯೂ ಹೊರತಲ್ಲ. ಮಡುವಿನಲ್ಲಿ ಬಿದ್ದವನು ನೀರಿನಿಂದ ಮೇಲೆ ಬಂದಮೇಲೆ ಚಳಿಯಿಂದ ನಡುಗುತ್ತಾನೆ. ಆದರೆ ಅದೇ ಮಡುವಿನಲ್ಲಿರುವವನು ಅಂಜುವುದಿಲ್ಲ. ಹಾಗೆಯೇ ಎಲ್ಲವನ್ನೂ ತ್ಯಜಿಸಿದ ಮುನಿಯು ಸಂಸಾರಿಗಳಿಂದ ಆಹಾರ ಸ್ವೀಕರಣ ಮಾಡುವುದಕ್ಕೆ ಬೆಚ್ಚುವನು. ಅಂದಮೇಲೆ ಸಂಸಾರದಲ್ಲಿರುವ ಆತ್ಮನೇ ಇನ್ನೂ ಅದರ ಬಯಕೆಯನ್ನು ಬಿಡದೇ ಯಾವ ಆಸೆಯ ಮೇಲೆ ನಿಂತಿರುವೆ? ಇನ್ನೂ ಅಲ್ಪ ಮೋಹಕ್ಕೊಳಗಾದ ಮಹರ್ಷಿಗೆ ಸಂಕ್ಷಿಪ್ತವಾಗಿ ಉಪದೇಶಿಸುವುದಾಗಿ ಹೇಳುತ್ತಾನೆ.

ತಮ್ಮೊಡನೆ ಬಂದ ಹೇಯ ಕರ್ಮಗಳು ಉತ್ತಮವಾದ ತಪದಿಂದ ನಾಶವಾಗುತ್ತವೆ. ಯುದ್ಧರಂಗಲ್ಲಿ ಹೆದರಿ ಓಡಿ ಹೋಗುವವನು ಸೋಲನ್ನು ಒಪ್ಪಿಕೊಂಡಂತೆಯೇ. ಅಂತೆಯೇ ಮಾಡುವ ತಪದಿಂದ ಹಿಂದೆ ಸರಿಯುವುದು ಬೇಡ. ಕರ್ಮಗಳನ್ನು ತೊಲಗಿಸದೇ ಪಾಪವಶನಾಗುವುದು ಬೇಡ. ಸೂಜಿಯ ಹಿಂದೆ ದಾರ ಬರುವಂತೆ ದೋಷದ ಹಿಂದೆ ಪಾಪವೂ ಬರುತ್ತದೆ. ಗುಣವಂತರಾಗಬೇಕೆಂದವರು ಹೇಗಾದರೂ ಯೋಗ್ಯರೀತಿಯಲ್ಲಿಯೇ ಬದುಕಬೇಕು. ಮನೆಯಲ್ಲಿರುವ ಹಣವನ್ನೇ ಕಾಯಲು ಆಗುವುದಿಲ್ಲ ಎಂದಮೇಲೆ ಗುಣಗಳನ್ನು ಕಾಯ್ದುಕೊಳ್ಳಲು ಸಾಧ್ಯವೇ? ಅಂತೆಯೇ ತಪಸ್ವಿಯಾದವನು ಹಿಂದಣ ಸಂಸಾರದತ್ತ ಚಿತ್ತೈಸುವುದು ಬೇಡ.

ಪತ್ನಿಯೊಡನೆ ಸುಖಪಡುವ ಸಂಸಾರಜೀವನವನ್ನು ತ್ಯಜಿಸಿ, ದಿಕ್ಕುಗಳನ್ನೇ ಉಡುಗೆಯಾಗಿಸಿಕೊಂಡು, ಗುಣವನ್ನೇ ಆಭರಣವಾಗಿಸಿಕೊಂಡು ಶ್ರೇಷ್ಠತಪಾಚರಣೆಯಿಂದ ಉಂಟಾಗುವ ಸುಖವನ್ನು ಗೃಹಸ್ಥಾಶ್ರಮವು ನೀಡಲು ಅಸಾಧ್ಯ. ಕಳ್ಳನೂರಿಗೆ ಒಬ್ಬನೇ ಹಣದೊಡನೆ ಹೋಗುವುದು, ತಪವನ್ನು ಕೈಕೊಂಡು ಒಬ್ಬನೇ ಮನೆಯೊಳಗಿರುವುದು ಇವೆರಡರಿಂದಲೂ ಕೇಡುಂಟಾಗುವುದು.

"ಪರಹಿತದೆ ನೆಗಟ್ವೆನಾನಿಂ
ಪರತ್ರೆಯಂ ಪಡೆವೆನೆಂಬ ಮುನಿಪಾ ನೀಂ ಮ
ಚ್ಚರಮಂ ಚಿತ್ತದೊಳಿನಿತು ಮ
ನಿರಲೀಯದಿರಿತ್ತೊಡದುವೆ ಕಿಡಿಕುಂ ನಿನ್ನಂ ||೨.೧೭||"[೨೬೭]

ಪರಹಿತಕ್ಕಾಗಿ ಜೀವಿಸಿ ಮೋಕ್ಷವನ್ನು ಪಡೆಯುವೆನೆಂಬ ವಿಚಾರವನ್ನು ಮುನಿಯಾದವನು ಎಂದೂ ಇಟ್ಟುಕೊಳ್ಳಬಾರದು. ಒಂದು ವೇಳೆ ಇಟ್ಟುಕೊಂಡರೆ ಅದು ಆತ್ಮನನ್ನು ಹಾಳು

---

೨೬೬. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** ; ಪುಟ. ೨೪
೨೬೭. **ಅದೇ** ; ಪುಟ. ೨೬

ಮಾಡುತ್ತದೆ. ಕೋಟೆಯನ್ನು ಹೊಕ್ಕವನಿಗೆ ಮನೋಕ್ಷೋಭೆಯುಂಟಾದರೆ, ತಪದಲ್ಲಿ ನಿರತನಾದವನಿಗೆ ಮತ್ಸರವುಂಟಾದರೆ ಆತನ ಕೋಟೆಯೂ ಈತನ ತಪವೂ ವ್ಯರ್ಥವಾಗುವವು. ಆದುದರಿಂದ ಜನಮನ್ನಣೆಯನ್ನು ಗಳಿಸಬೇಕೆಂಬ ಭಾವನೆ ಬೇಡ. ಬಲವಂತದಿಂದ ಹಾಲು ಕರೆಯಲು ಹೋದರೆ ಹಸು ಒದೆಯುವಂತೆ ಸಾಕಷ್ಟು ದಿನ ತಪಸ್ಸುಮಾಡಿ, ಮನ್ನಣೆ ಪಡೆಯಬೇಕೆಂಬ ಆಸೆಗೆ ಒಳಗಾಗಿ ಮುಂದಿನ ಉತ್ತಮ ಫಲಗಳನ್ನು ಹಾಳುಮಾಡಿಕೊಳ್ಳುವುದು ಬೇಡ. ಇದು ಮುನಿಗಳಿಗೆ ಹೇಳಿದ ವಿಚಾರವಾದರೆ ಸರ್ವಜೀವಿಗಳಿಗೆ ತಿಳಿ ಹೇಳುವ ವಿಚಾರ ಮುಂದಿನಂತಿದೆ.

"ಬೆಜ್ಜಂ ಪಂದೆಯ ಪೇಟ್ವಟಿ
ಗಜ್ಜಂಗಳುಮಾಸೆವಡಿಪ ಕುಹಕದ ಫಲಮುಂ
ಬಿಜೆಗಳುಮೆಮಗೆ ಕಾಪೆಂ
ಬುಜ್ಜುಗಮಟೆಪಟೆಪು ಕಲಾರ್ಕುಮೆ ನರರಂ ॥೨.೧೯॥"[೨೬೮]

ಔಷಧವೂ, ಹೇಡಿಯಾದವನು ಹೇಳುವ ಕೆಲಸಗಳೂ, ಆಸೆಯನ್ನುಂಟು ಮಾಡುವ ಕುತ್ಸಿತ ಫಲಗಳೂ ವಿದ್ಯೆಗಳೂ ರಕ್ಷಿಸುತ್ತವೆಂಬ ನಂಬಿಕೆ ವಿನಾಶಕಾರಿಯಾಗಿರುವುದೇ ಹೊರತು ಅವು ಯಾವುವೂ ಕಾಯಲು ಸಮರ್ಥವಲ್ಲ. ಉಪ್ಪಿನಕಾಯಿ, ಹಪ್ಪಳಗಳು ಊಟಕ್ಕೆ ಸಹಕಾರಿಯೇ ಹೊರತು, ಅದುವೇ ಊಟವಾಗದು. ಅಂತೆಯೇ ಔಷಧವು ಕೇವಲ ನೆಪ ಮಾತ್ರ. ಅವು ಆಯುಸ್ಸನ್ನು ಹೆಚ್ಚಿಸಲಾರವು. ಹೀಗಿರುವಾಗ ಅದಕ್ಕಾಗಿ ಹಂಬಲಿಸುವುದೇಕೆ? ಯಮರಾಜನು ಬಂದಾಗ ಅವು ಯಾವುವೂ ಕಾಯಲಾರವು.

ಅಗಣಿತವಾದ ಐಶ್ವರ್ಯ, ನಿಂತ ನೆಲೆಯೇ ಸ್ವರ್ಗ, ಅಮೃತವೇ ಆಹಾರ, ದೇವಾನುದೇವತೆಗಳಿಂದ ಆರೈಕೆ, ವಜ್ರಾಯುಧವೇ ಆಯುಧ, ಅಸಾಧ್ಯವೆಂಬುದು ಯಾವುದೂ ಇಲ್ಲ, ಆತನ ಸೌಂದರ್ಯಕ್ಕೆ ಸರಿಸಾಟಿಯಿಲ್ಲ ಹೀಗಿರುವ ಇಂದ್ರನೇ ಕಾಲವಶದಿಂದ ಕೆಳಗಿಳಿಯುತ್ತಾನೆ. ಅಂದಮೇಲೆ ಸಾಮಾನ್ಯರನ್ನು ರಕ್ಷಿಸಲು ಬರುವವರು ಯಾರೂ ಇಲ್ಲ. ಅಂತೆಯೇ ಲೋಕದಲ್ಲಿ ಹಿರಿಯರೂ, ಅಸಾಧ್ಯರೂ ಆದ ಇಂದ್ರ, ಸಕಲಚಕ್ರವರ್ತಿಗಳನ್ನೇ ಜೀವ ತೆಗೆಯುವ ಯಮರಾಜನು ಸಾಮಾನ್ಯರನ್ನು ಬಿಡಲು ಸಾಧ್ಯವಾಗದ ಮಾತು ಎಂದು ಅಶರಣಾನುಪ್ರೇಕ್ಷೆಯ ಕುರಿತಾಗಿ ಬಂಧುವರ್ಮನು ಬೋಧಿಸುತ್ತಾನೆ.

೩.೪.೧.೩. ಏಕತ್ವಾನುಪ್ರೇಕ್ಷೆ:

ಕಂ॥ **"ಒರ್ವನೆ ನರಕದೊಳಿರ್ದಂ**
ದೊರ್ವನೆ ತಿರ್ಯಂಚನಾಗಿ ತಿರಿತರುತಿರ್ದಂ
ದೊರ್ವನೆ ಸಗ್ಗದೊಳಿರ್ದಂ
ದೊರ್ವನೆ ಮನುಜತ್ವಮೆಯ್ದೆ ವಂದೆಯ್ದಲೊಡಂ ॥೩.೧॥"[೨೬೯]

---

೨೬೮. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** ; ಪುಟ. ೨೬

ನಾರಕ, ತಿರ್ಯಂಚ, ದೇವ ಹಾಗೂ ಮನುಷ್ಯ ಈ ನಾಲ್ಕುಗತಿಗಳಲ್ಲಿಯೂ ಹುಟ್ಟಿದರೂ ಆತ್ಮನು ಒಂಟಿಯಾಗಿಯೇ ಹುಟ್ಟುವನು. ಅದುವೇ ಏಕತ್ವ, ಏಕಾಂಗಿತ್ವ ಎನಿಸಿಕೊಳ್ಳುವುದು. ಬರುವಾಗ ಒಬ್ಬನೇ ಹೋಗುವಾಗಲೂ ಒಬ್ಬನೇ ಎಂಬುದನ್ನು ಅರಿಯುವುದಾಗಿದೆ. ಜೀವನ ಗಳಿಸಿದ ಪಾಪ–ಪುಣ್ಯಗಳಿಗೆ ತಾನೊಬ್ಬನೇ ಹೊಣೆಗಾರನು. ಆಪ್ತರು, ಬಂದುಗಳು, ಮಿತ್ರರು, ಪತ್ನಿಯರು, ಪುತ್ರರು ಯಾರೂ ಸಹಾಯಕರಾಗಲಾರರು. ಅದನ್ನು ಅರಿತುಕೊಂಡು ಎಲ್ಲ ವ್ಯಾಮೋಹಗಳನ್ನು ಬಿಟ್ಟು, ಏಕತ್ವವನ್ನು ಭಾವಿಸಬೇಕೆಂದು ಹೇಳುತ್ತಾನೆ ಕವಿ. ಮಾತೆಯ ಗರ್ಭದಲ್ಲಿದ್ದುಕೊಂಡು ಒಬ್ಬನೇ ದುಃಖವನ್ನುಂಡು, ಒಬ್ಬನೇ ಬೆಳೆದ ಯೌವನಸ್ಥನಾಗಿ. ಒಬ್ಬನೇ ಮುಪ್ಪಿನಲ್ಲಿ ನೋವನುಭವಿಸಿ, ಸಾಯುವಾಗಲೂ ಆತ್ಮ ಒಬ್ಬನೇ. ಇಲ್ಲಿ ಆತ್ಮನೊಂದಿಗೆ ಯಾರೂ ಇರಲಾರರು. ಬರಲಾರರು. ಚತುರ್ಗತಿಗಳಲ್ಲಿಯೂ ಆತ್ಮನೊಬ್ಬನೇ.

ಇಲ್ಲಿ ಪುಣ್ಯಬಂಧವೊಂದೇ ಸಾಕೆಂದು ಭಾವಿಸುವುದೊಳಿತು. ಆದುದರಿಂದ ಅತೀತ, ಅನಾಗತ, ವರ್ತಮಾನಗಳೆಂಬ ಮೂರು ಕಾಲಗಳಲ್ಲಿಯೂ ಆತ್ಮನೊಬ್ಬನೇ ಎಂಬುದನ್ನು ಏಕಾಗ್ರಚಿತ್ತದಿಂದ ತಿಳಿದುಕೊಳ್ಳಬೇಕು. ಒಡನೆ ಬದಿರುವ ಶರೀರವೂ ಸಾವಿನೊಂದಿಗೆ ದೂರಾಗುವುದು. ಇದನ್ನರಿತು ಮೋಹವಶನಾಗದೇ ಇರುವುದು ಒಳಿತು. ನೆಂಟರಿಷ್ಟರೆಲ್ಲ ಕೇವಲ ಸಂಪತ್ತಿರುವವರೆಗೆ ಮಾತ್ರ ಜೊತೆಗಿರುವರು. ಅವರನ್ನು ನೆಚ್ಚಿ ಕೆಡುವುದು ಬೇಡ. ಧನ, ಇಂದ್ರಿಯಮದ, ಕೋಪ, ಉತ್ಸಾಹ, ದುರ್ವ್ಯಸಗಳಿಂದ ಭ್ರಾಂತಿಯಿಂದಿರುವುದು ಬೇಡ ಎಂದು ಕವಿಯು ಪ್ರತಿಪಾದಿಸುತ್ತಾನೆ.

ಇಲ್ಲಿ ಕನಕದಾಸರ ಕೀರ್ತನೆಯೊಂದು ಪ್ರಸ್ತುತವೆನಿಸುತ್ತದೆ.:

"ಏಸೋ ಕಾಯಂಗಳ ಕಳೆದು ಎಂಭತ್ನಾಲ್ಕು ಲಕ್ಷ
ಜೀವರಾಶಿಯನ್ನು ದಾಟಿ ಬಂದ ಈ ಶರೀರ
ತಾನಲ್ಲ ತನ್ನದಲ್ಲ ಆಸೆ ತರವಲ್ಲ ಮುಂದೆ ಬಾಹೋದಲ್ಲ
ದಾಸನಾಗು ಶಿಷ್ಯನಾಗು..."[೨೭೦]

"ಮರದಲ್ಲಿ ಹಣ್ಣುಗಳಿರುವವರೆಗೆ ಮಾತ್ರ ಪಕ್ಷಿಗಳು ಆ ಮರವನ್ನು ಆಶ್ರಯಿಸಿ, ಬಳಿಕ ಅಲ್ಲಿಂದ ತೊಲಗುವಂತೆ ತನ್ನಲ್ಲಿ ಸಂಪತ್ತಿರುವವರೆಗೆ ಮಾತ್ರ ಪುತ್ರಮಿತ್ರಾದಿಗಳು ಆಶ್ರಯಿಸಿ, ಪುರಸ್ಕರಿಸುವರು. ಬಳಿಕ ಮುಖವೆತ್ತಿ ನೋಡಿಯೂ ನೋಡದವರಂತೆ ಹೋಗುವರು."[೨೭೧] ಹೀಗಿರುವಲ್ಲಿ ಸಂಸಾರವನ್ನು ಗೆಲ್ಲಲು ಆತ್ಮನೊಬ್ಬನೇ ಸಾಕು. ಎಂಬ ಸಂದೇಶವನ್ನು ಸಾರುತ್ತಾನೆ ಕವಿ ಬಂಧುವರ್ಮ.

ನಿಶ್ಚಿತ ಮನದಿಂದ ಏಕವಿಹಾರಿಯಾಗಿ ಸಂಪತ್ತನ್ನೂ ಶರೀರಸುಖವನ್ನೂ ತೊರೆದಂದೇ ಕಾರ್ಯಸಿದ್ಧಿಯಾಗುವುದು. ಇದನ್ನು ತಿಳಿದವನು ಎಲ್ಲ ಭವಗಳಲ್ಲಿಯೂ ಸುಖಿಯಾಗಿರುವನು.

---

೨೬೯. ಪಂಡಿತ ಎಚ್. ಶೇಷ ಅಯ್ಯಂಗಾರ್ (ಸಂ); **ಜೀವಸಂಬೋಧನಂ** : ಪುಟ. ೪೩

೨೭೦. ಕಾ. ಚಿಕ್ಕಣ್ಣ (ಸಂ); **ಬಯಲು ಆಲಯದೊಳಗೊ** : ಪುಟ.೨೫೧

೨೭೧. ಪಂಡಿತ ಎರ್ತೂರು ಶಾಂತಿರಾಜಶಾಸ್ತ್ರಿ ; **ದ್ವಾದಶಾನುಪ್ರೇಕ್ಷೆ** : ಪುಟ.೧೨

ಕೋಪತಾಪಾದಿಗಳನ್ನು ಬಿಟ್ಟು, ಮನಶ್ಶುದ್ಧಿಯಿಂದ ಉತ್ತಮ ಗುಣಗಳಿಗೆ ಆಶ್ರಿತನಾಗಿ ಆತ್ಮಸುಖದ ಬೆಳೆಯನ್ನು ಬೆಳೆಯಬೇಕು. ಹೊಲದಲ್ಲಿರುವ ಕಳೆಯನ್ನು ತೆಗೆಯದೇ ನೆಲವನ್ನು ಹದಮಾಡದೇ ಬೀಜಬಿತ್ತಿದರೆ, ಮನದಲ್ಲಿನ ರಾಗದ್ವೇಷವನ್ನು ತ್ಯಜಿಸಿಯೂ ಶುದ್ಧಚಾರಿತ್ರನಾಗಿರದಿದ್ದರೆ ಆ ಬೆಳೆಗೂ, ಈತನಿಗೂ ಸುಗತಿ ದೊರೆಯಲು ಸಾಧ್ಯವಿಲ್ಲ. ಮಣ್ಣನ್ನು ಎಷ್ಟು ತೊಳೆದರೂ ಅಷ್ಟು ಕೆಸರೇ ಹುಟ್ಟುವಂತೆ ಪಾಪದಲ್ಲಿರುವವನಿಗೆ ದುಃಖವು ಹೆಚ್ಚಾಗುತ್ತದೆ.

"ಬಿಸುಟು ಪರಿಗ್ರಹದ್ವಯಮನೇಕವಿಹಾರದ ವೃತ್ತಿಯಿಂ ತೊಟಿ
ಲ್ದೆಸೆಯೆ ಗುಣೋತ್ಕರಂ ತನುವೊಡಂಬಡೆ ಭಾವಿಸುತುತ್ತರೋತ್ತರಂ
ಪಸರಿಸಿ ಚಿತ್ತಮಾಟಿಕೆ ಗಿರಿ ಕಂದರ ಗಹ್ವರದಲ್ಲಿ ಪೊಕ್ಕು ಜಾ
ನಿಸುವುದು ಯೋಗಿಯಾಗಿದುರಿತಂ ಕಿಡುವನ್ನೆಗಮೇಕಚಿತ್ತದಿಂ ॥೩.೨೦॥"[೨೭೨]

ಸಮರವಿದ್ಯೆಯನ್ನು ಕಲಿಯಬೇಕೆನ್ನುವವನು ತನ್ನ ಸಂಸಾರವನ್ನು ಬಿಟ್ಟು ಪರದೇಶಕ್ಕೆ ಹೋಗುವಂತೆ ಇಹಲೋಕದ ಎಲ್ಲ ಕರ್ಮಗಳಿಂದ ಮುಕ್ತನಾಗಬಯಸುವವನು ಅಂತರಂಗ–ಬಾಹ್ಯ ಎಂಬ ಎರಡು ಪರಿಗ್ರಹಗಳನ್ನೂ ತೊರೆದು ತಪಕ್ಕೆ ತೆರಳಬೇಕು. ಆತ ವಸ್ತ್ರವನ್ನುಡುವಂತೆ ಈತ ದಿಕ್ಕನ್ನು ಉಡುವುದು. ಆತನು ಚಾಣಾಕ್ಷತೆಯಿಂದ ಕತ್ತಿಯನ್ನು ಬಳಸುವಂತೆ ಈತ ಸಂಯಮಾಚರಣೆಯನ್ನು ಮಾಡುವುದು. ಆತನು ದೇಶಾಂತರದಲ್ಲಿ ಸಂಚರಿಸಿ ಯುದ್ಧದ ಉದ್ದೇಶಗಳನ್ನು ಅರಿಯುವಂತೆ ಈತನು ಏಕಾಂಗಿಯಾಗಿ ಚಾರಿತ್ರಭಾವನೆ, ಜ್ಞಾನಭಾವನೆಗಳಲ್ಲಿ ತೊಡಗಿಸಿಕೊಳ್ಳಬೇಕು. ಆತನು ತನ್ನನ್ನು ಎದುರಿಸುವ ಸೈನಿಕರೊಡನೆ ಹೋರಾಡುವಂತೆ ಈತನು ದುರಿತಗಳನ್ನು ಕಳೆಯುವ ಸಲ್ಲೇಖನಕಾರ್ಯವನ್ನು ಮಾಡಿ ಗಿರಿ ಗಹ್ವರವನ್ನು ಪ್ರವೇಶಿಸಿ ತಪಾಚರಣೆ ಮಾಡುವುದು. ಆತ ರಣರಂಗದಲ್ಲಿ ಕತ್ತಿಯಿಂದ ಹೋರಾಡಿ ಗೆಲ್ಲುವಂತೆ ಈತನು ಶುಕ್ಲಧ್ಯಾನದಿಂದ ಕರ್ಮಗಳನ್ನು ಗೆಲ್ಲುವುದು. ಆತ ಜಯಶೀಲನಾಗಿ ವಿಜಯಪತಾಕೆಯನ್ನು ಹಾರಿಸುವಂತೆ ಈತನು ಮೋಕ್ಷವನ್ನು ಪಡೆಯಬೇಕು. ಹೀಗೆ ಏಕತ್ವವನ್ನು ಸಾಧಿಸಲು ಒಂದಕ್ಕೊಂದು ಉಪಮೆಗಳನ್ನು ಕೊಡುತ್ತಾನೆ ಕವಿ.

ಹುಟ್ಟು ಪಡೆಯದಿರುವುದೇ ಮುಕ್ತಿ. ಪಾಪವಿಲ್ಲದಿರುವುದೇ ಶ್ರೇಷ್ಠಧರ್ಮ. ವೈಪರೀತ್ಯದಿಂದ ಕೂಡಿದ ಜ್ಞಾನವು ದುಃಖವನ್ನುಂಟುಮಾಡದಿದ್ದಲ್ಲಿ ಅದುವೇ ಸುಖವು. ಮೂರೂ ಲೋಕದ ಸುಖಗಳಲ್ಲಿ ದೇವೇಂದ್ರ, ನಾಗೇಂದ್ರ, ಸಕಲ ಚಕ್ರವರ್ತಿಗಳ ಸುಖವನ್ನೆಲ್ಲವನ್ನೂ ಒಂದು ಮಾಡಿದರೂ ಸಿದ್ಧರ ಸುಖದ ಒಂದು ಕ್ಷಣಕ್ಕೂ ಸಮಾನವಾಗಲಾರದು. ಆದುದರಿಂದ ಮೋಕ್ಷಲಕ್ಷ್ಮಿಯನ್ನು ಒಲಿಸಿಕೊಳ್ಳಲು ಇಂದ್ರಿಯಸುಖವನ್ನು ತೊರೆದು ದಯಾಪರನಾಗಿ, ಉತ್ತಮಕಾರ್ಯದಲ್ಲಿ ತೊಡಗಿಸಿಕೊಂಡು, ತಪವನ್ನು ಪ್ರೀತಿಯಿಂದ ಸ್ವೀಕರಿಸಿ, ದುಷ್ಟಕಷಾಯಗಳಿಂದ ದೂರವಾಗಿ ಜಿನಭಕ್ತಿಯಲ್ಲಿ ದೃಢವಾಗಿರಬೇಕು ಎಂದು ಕವಿ ಬಂಧುವರ್ಮನು ಬೋಧಿಸುತ್ತಾನೆ.

---

೨೭೨. ಪಂಡಿತ ಎಚ್. ಶೇಷ ಅಯ್ಯಂಗಾರ್ (ಸಂ); **ಜೀವಸಂಬೋಧನಂ**; ಪುಟ. ೪೯

೩.೪.೧.೪. ಅನ್ಯತ್ವಾನುಪ್ರೇಕ್ಷೆ:

ಕಂ॥ “ಧನಮುಂ ಕಳತ್ರಜನಮುಂ
ತನುವುಂ ತವದಗಲದಟಿಯದಿರವದಱಿಂದಂ
ಮನದೊಳವರ್ಕಾಟಿಸಿ ಕೆ
ಮ್ಮನೆ ಮಱುಗದಿರನ್ಯವಸ್ತು ನಿನಗೆಂತಕ್ಕುಂ ॥೪.೧॥”[೨೭೩]

ಸಂಪತ್ತೂ, ಪತ್ನಿಯೂ, ಬಂಧುಗಳೂ, ಶರೀರವೂ ಇವೆಲ್ಲವೂ ಕ್ಷೀಣಿಸದೇ, ಅಗಲದೇ, ಅಳಿಯದೇ ಇರಲಾರವು. ಆದುದರಿಂದ ಅವುಗಳಿಗೆ ವಿನಾಕಾರಣ ಆಸೆಪಟ್ಟು ಮರುಗುವುದು ಬೇಡ. ಅನ್ಯವಸ್ತುಗಳಾಗಿರುವ ಇವುಗಳು ಎಂದಿಗೂ ಸ್ವಂತವಾಗಲಾರವು. ಆದುದರಿಂದ ಅವುಗಳೇ ಬೇರೆ ಆತ್ಮನೇ ಬೇರೆ ಎಂದು ಭಾವಿಸುವುದು. ಅವು ತನ್ನವೆಂದು ತಿಳಿದರೆ ಅವುಗಳಿಂದ ಎಂದಿಗೂ ಆತ್ಮಹಿತವಾಗುವುದಿಲ್ಲ. ಪ್ರವಾಹದ ಮೊದಲು ಕಲಕು ನೀರು ಬರುವಂತೆ ಸಂಪತ್ತು ಬರುವಾಗ ದುಃಖವು ಬರುತ್ತದೆ. ಕೈಬಿಟ್ಟು ಹೋಗುವಾಗ ಚಿಂತೆಗೀಡು ಮಾಡುತ್ತದೆ. ಹೀಗೆ ಬರುವಾಗ, ಇರುವಾಗ, ಹೋಗುವಾಗ ಚಿಂತೆ, ನೋವು, ದುಃಖವನ್ನು ಉಂಟುಮಾಡುವ ಸಂಪತ್ತಿನ ಆಸೆ ಬೇಡ. ಉಂಡ ಸಿಹಿಯ ಸವಿಯನ್ನರಿಯುವ ನಾಲಗೆಯ ತುದಿಯಲ್ಲಿ ಸೇರಿದ ಕ್ಷಣದಲ್ಲಿಯೇ ಉದರದೆಡೆಗೆ ಸಾಗುತ್ತದೆ. ಆ ಸವಿಯು ಹೆಚ್ಚು ಹೊತ್ತು ಇರುವುದಿಲ್ಲ. ಅಂತೆಯೇ ಸಂಪತ್ತೂ ಸಹ.

ಕೋಪಗೊಂಡ ದೃಷ್ಟಿವಿಷಸರ್ಪವು ನೋಡಿಯೇ ಕೊಲ್ಲುವಂತೆ ಸ್ತ್ರೀಯರು ತಮ್ಮ ಕಡೆಗಣ್ಣಿನ ನೋಟದಿಂದಲೇ ಕೊಲ್ಲುತ್ತಾರೆ. ಕೋಪಗೊಳ್ಳದ ಸರ್ಪವು ಕಚ್ಚುವುದಿಲ್ಲ. ಒಂದುವೇಳೆ ಕಚ್ಚಿದರೂ ಚಿಕಿತ್ಸೆಯಿದೆ. ಆದರೆ ಲಲನೆಯರೆಂಬ ಉಗ್ರಸರ್ಪಗಳ ಓರೆನೋಟ ಕೋಪ, ಪ್ರೀತಿ ಯಾವುದರಿಂದಲೂ ಜೀವವು ಘಾಸಿಗೊಳ್ಳುತ್ತದೆ. ಕೊರಳಲ್ಲಿ ಕಾರ್ಕೋಟಕ ವಿಷವಿದ್ದರೂ ಹರನಿಗೆ ತೊಂದರೆ ಕೊಡಲಿಲ್ಲ. ಆದರೆ ಸ್ತ್ರೀಯರ ನೋಟವೇ ಅವನನ್ನು ನಾಶಮಾಡಿತು. ಆದುದರಿಂದ ಪುತ್ರ, ಮಿತ್ರ, ಕಳತ್ರ, ಸಹಜಾತರಾರೂ ಎಂದಿಗೂ ಜೀವನಿಗೆ ಸಹಾಯಕರಾಗಲಾರರು ಎಂದು ಉಪದೇಶಿಸುತ್ತಾನೆ.

ಉರಿಯ ಛಾಯೆಯನ್ನು ನೆರಳೆಂದು ಭಾವಿಸಿ ಆಶ್ರಯಿಸಿದರೆ, ನೆಂಟರನ್ನು ನಂಬಿ ಮೋಹವಶನಾದರೆ ಆತನಿಗೆ ತಂಪೂ ಈತನಿಗೆ ಸುಖವೂ ಲಭಿಸದು. ಇರುಳು ಹಗಲಿನ ಮಧ್ಯದ ಸಮಯವು ಬಹು ಚಿಕ್ಕದಾಗಿರುವಂತೆ ಕೆಡುವ ಶರೀರದೊಡನೆ ಕೆಡದ ಜೀವನು ಬಹುಕಾಲವಿರಲಾಗದು. ಆದುದರಿಂದ ಶರೀರವು ಹಿತವೆಂದು ಬಗೆಯದಿರುವುದು ಒಳಿತು. ಎಷ್ಟುದಿನ ಶರೀರವು ಆತ್ಮನೊಂದಿಗಿರುವುದೋ ಅಷ್ಟುದಿನ ಪಾಪಕರ್ಮಗಳಿಂದ ಕಟ್ಟಿಹಾಕುವುದು. ಕರ್ಮವನ್ನು ಹೆಚ್ಚಿಸುವ ಶರೀರದ ಮೇಲೆ ಹೆಚ್ಚಿನ ಮೋಹ ಬೇಡ. ಆದುದರಿಂದ ಒಡಲೆಂಬ ವೈರಿಯನ್ನು ತಪಸ್ಸಿನಿಂದ ತೊಲಗಿಸುವುದು. ತನಗಲ್ಲದ ವೇಶ್ಯೆಗೆ ಎಲ್ಲವನ್ನೂ ಕೊಟ್ಟು ಕೆಡುವಂತೆ, ಆತ್ಮನಿಗಲ್ಲದ ಶರೀರವನ್ನು ಅತಿಯಾಗಿ ನಂಬಿ, ಪ್ರೀತಿಸಿ ಕೆಡುವುದು ಬೇಡ. ಹೊಟ್ಟೆಪಾಡಿಗಾಗಿ

---

೨೭೩. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ): **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೧೦೯

ಸೇವಕನಾಗಿದ್ದವನು ಒಂದು ಹೊತ್ತಿನ ಕೂಳು ತಪ್ಪಿದರೆ ಬಿಟ್ಟು ಹೋಗುವಂತೆ ಆಹಾರವಿಲ್ಲದಿದ್ದರೆ ಬಡವಾಗಿ ನಾಶವಾಗುವ ಶರೀರವನ್ನು ಅತಿಯಾಗಿ ನಂಬುವುದು ಬೇಡ. ಹೀಗೆ ತನ್ನನ್ನು ತಾನೆಂದು ಭಾವಿಸಿ ಬೇರೆಯದನ್ನು ಬೇರೆಯದೆಂದೇ ತಿಳಿಯುವುದು. ಯಾವ ಆಮಿಷದಿಂದಲೂ ಬುದ್ಧಿಹೀನನಾಗದೆ, ಯಾರಿಂದಲೂ ಮಾರ್ಗದಪ್ಪದಿರುವುದೇ ಮಹಾವ್ರತವಾಗಿದೆ. ತಾನುಣದಿದ್ದುದು ದುರ್ಭಿಕ್ಷವು, ತನ್ನನ್ನು ಸೂರೆಗೊಂಡುದು ಕರ್ಮಬಂಧವು, ಕರ್ಮಬಂಧಗಳನ್ನು ಹೆಚ್ಚಿಸುವ ದೇಹ ಪಾಪದರೂಪವು ಇದನ್ನು ಅರಿಯದಿದ್ದರೆ ಆತ್ಮವು ನಾಶವಾಗುವುದು. ಎಂದು ಬಂಧುವರ್ಮನು ತನ್ನ 'ಜೀವಸಂಬೋಧನಂ' ಗ್ರಂಥದಲ್ಲಿ ಬೋಧಿಸುತ್ತಾನೆ.

೩.೪.೧.೫. ಸಂಸಾರಾನುಪ್ರೇಕ್ಷೆ:

ತಿರ್ಯಂಚ, ಮನುಷ್ಯ, ನಾರಕ ಹಾಗೂ ದೇವಗತಿಗಳಲ್ಲಿ ಜೀವನು ಅನೇಕಾಕೃತಿಗಳಲ್ಲಿ ಜನ್ಮ ತಳೆಯುವನು. ಅವು ಏಕೇಂದ್ರಿಯ ಬಾದರ ಪರ್ಯಾಪ್ತಕ-ಅಪರ್ಯಾಪ್ತಕ, ಸೂಕ್ಷ್ಮೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಅಂಸಜ್ಞಿ ಪಂಚೇಂದ್ರಿಯ, ಸಂಜ್ಞಿ ಪಂಚೇಂದ್ರಿಯಗಳು. ಈ ರೀತಿಯ ಆಕೃತಿಗಳನ್ನು ಪಡೆದುಕೊಳ್ಳುವುದೇ ಚತುರ್ಗತಿ ಸಂಸಾರವಾಗಿದೆ. ಇಲ್ಲಿ ಹುಟ್ಟುವ ಜೀವಗಳನ್ನೇ ಸಂಸಾರಿಗಳು[೨೭೪] ಎನ್ನುತ್ತಾರೆ. ಇವೆಲ್ಲ ಗತಿಗಳೂ ಪರಮಾಣುಗಳಿಂದ ಕೂಡಿದ್ದು, ಇವೆಲ್ಲವುಗಳ ಆಯುಸ್ಸು ಮತ್ತು ರೂಪಗಳು ಕಾಲದಲ್ಲಾಗುವ ಬದಲಾವಣೆಯ ಆಧಾರದಲ್ಲಿ ಪರಿವರ್ತನೆ ಹೊಂದುತ್ತವೆ.

ಹೀಗೆ ೮೪ ಲಕ್ಷ ಜೀವರಾಶಿಗಳನ್ನು ಅನುಸರಿಸಿ ನಾಲ್ಕುಗತಿಗಳಲ್ಲಿ ಜನಿಸುತ್ತ ಈ ಮೊದಲಿನ ಭವಗಳಲ್ಲಿ ಹುಟ್ಟಿದ ಸ್ಥಳದಲ್ಲಿಯೇ ಹುಟ್ಟಿದರೆ ಅದು **ಕ್ಷೇತ್ರಪರಾವರ್ತನೆ.** ತ್ರಿಲೋಕದಲ್ಲಿರುವ ಪರಮಾಣುಗಳು ಸಂಯೋಗ ಹೊಂದಿ, ಅವುಗಳ ಪರಿವರ್ತನೆ ಆಗುವುದು **ಪರಮಾಣು ಪರಾವರ್ತನೆ.** ಒಮ್ಮೆ ಧರಿಸಿದ ರೂಪವನ್ನೇ ಧರಿಸಿದರೆ ಅದು **ರೂಪಪರಾವರ್ತನೆ.** ಒಮ್ಮೆ ಪಡೆದ ಹೆಸರನ್ನೇ ಮರುಭವದಲ್ಲಿ ಪಡೆದರೆ ಅದು **ನಾಮಪರಾವರ್ತನೆ.** ಒಂದು ಕಾಲದಲ್ಲಿ ಹುಟ್ಟಿದ್ದು ಕಾಲಚಕ್ರದಲ್ಲಿ ಆ ಕಾಲವು ಮರಳಿದಾಗ ಅಲ್ಲಿ ಮರುಜನ್ಮಪಡೆಯುವುದು **ಕಾಲಪರಾವರ್ತನೆ.** ಮೊದಲ ಜನ್ಮದ ಪರಿಣಾಮಗಳನ್ನು ಮರುಜನ್ಮದಲ್ಲಿ ಹೊಂದುವುದು **ಪರಿಣಾಮ ಪರಾವರ್ತನೆ.** ಮೊದಲಿದ್ದಷ್ಟೇ ಆಯುಷ್ಯವನ್ನು ಮರುಭವದಲ್ಲಿ ಹೊಂದುವುದು **ಆಯುಷ್ಯಪರಾವರ್ತನೆ.** ಹೀಗೆ ಸಪ್ತ ಪರಾವರ್ತನಗಳಲ್ಲಿ ಆತ್ಮನು ತೊಳಲುತ್ತಾನೆ. ಮನಸ್ಸಿನಲ್ಲಾದ ಶುಭಮತಿಯೆಂಬ ಗಾಳಿಯನ್ನು, ಘನವೆಂಬ ಅಗ್ನಿ ಸೇರಿಕೊಂಡು, ಸಂಸಾರವೆಂಬ ಉರಿಯುವ ಕಾಡ್ಗಿಚ್ಚಿನ ಹೊಡೆತಕ್ಕೆ ಲೋಕದ ಜೀವವೆಂಬ ಮೃಗಸಮೂಹವು ಬಲಿಯಾಗುವುದು. ಕಾಡ್ಗಿಚ್ಚಿನಲ್ಲಿ ಸಿಕ್ಕ ಮೃಗಕ್ಕೂ, ಸಂಸಾರದೊಳಗಣ ಜೀವಕ್ಕೂ ಮರುಕಪಡುವವರು ಯಾರೂ ಇರಲಾರರು. ಕಡೆಗೋಲನ್ನು ಕಡೆಯುವಾಗ ಹಗ್ಗವು ಒಂದು ಕಡೆಗೆ ಸುತ್ತಿದಾಗ ಇನ್ನೊಂದು ಕಡೆಗೆ

---

೨೭೪. ನೋಡಿ, ಅಧ್ಯಾಯ– ೩.೧.೧.೪. ಜೀವತತ್ತ್ವಗಳು : **'ಸಂಸಾರಿಗಳು'** ; ಪುಟ. ೬೩

ಬಿಚ್ಚಿಕೊಳ್ಳುತ್ತದೆ. ಅಂತೆಯೇ ಶುಭಾಶುಭ ಕರ್ಮಗಳು, ಒಂದು ಒದಗಿದಾಗ ಇನ್ನೊಂದು ಅಳಿಯುತ್ತದೆ. ಹೀಗೆ ಜೀವನು ಒಂದಲ್ಲ ಒಂದು ರೀತಿಯಲ್ಲಿ ತೊಳಲುತ್ತಿರುತ್ತಾನೆ.

> **"ದುರಿತಂ ನೀರ್ ಬಹುದುಃಖಮುಗ್ರ ಮಕರಗ್ರಾಹಾದಿಗಳ್ ಚಿಂತೆಗಳ್**
> **ತೆರೆಗಳ್ ಹಿಂಸೆ ಮಹೋಗ್ರ ಬಾಡಬಮುಖಂ ಮಿಥ್ಯಾತ್ವ ಸಂಯೋಗ ದು**
> **ಷ್ಪರಿಣಾಮಂಗಳಗಾಧಮಪ್ಪ ಸುಟಿಗಳ್ ತಾಮಾಗೆ ಘೂರ್ಣಿಪ್ಪ ದು**
> **ಸ್ತರ ಸಂಸಾರಸಮುದ್ರದಲ್ಲಿ ಸುಟಿಗುಂ ಜೀವಂಗಳಜ್ಞಾನದಿಂ॥೫.೬॥"[೨೭೫]**

ಕಷ್ಟವೇ ನೀರಾಗಿ, ಬಹುದುಃಖವೇ ಮಕರಾದಿ ಉಗ್ರಪ್ರಾಣಿಗಳಾಗಿ, ಚಿಂತೆಗಳೇ ತೆರೆಗಳಾಗಿ, ಹಿಂಸೆಯೇ ಬಡಬಾಗ್ನಿಯಾಗಿ, ಮಿಥ್ಯಾತ್ವದಿಂದ ಉಂಟಾದ ದುಷ್ಪರಿಣಾಮಗಳೇ ಸುಳಿಗಳಾಗಿ ಭೋರ್ಗರೆಯುವ ಸಂಸಾರಸಾಗರದಲ್ಲಿ ಅಜ್ಞಾನದಿಂದ ಜೀವಗಳು ತೊಳಲುತ್ತಿರುವವು. ಹೀಗಿದ್ದು ಸಂಸಾರದಲ್ಲಿದ್ದವನ ಕೇಡಿಗೂ, ಸಮುದ್ರದಲ್ಲಿ ಸತ್ತವನ ಸಾವಿಗೂ ಸಂದೇಹಪಡುವುದೇನಿಲ್ಲ. ಆದುದರಿಂದ ಲೋಕದಲ್ಲಿ ಸುಖವಿಲ್ಲವೆಂದು ಬಗೆಯುವುದು.

ಇಂದ್ರಿಯಗಳ ಮೂಲಕ ದೊರೆಯುವ ಸಂಸಾರಸುಖವು ಅಲ್ಪಮಾತ್ರ. ಕ್ಷಣಮಾತ್ರದ ಸುಖಕ್ಕಾಗಿ ಶರೀರವನ್ನು ನೋಯಿಸುವುದು ಉಚಿತವಾದುದಲ್ಲ. ಕಳೆದ ಅನಂತ ಭವಗಳಲ್ಲಿ ವೈರಿಗಳಿಂದಲೂ, ದುರ್ವ್ಯಸನಗಳಿಂದಲೂ ಕೆಟ್ಟಿರುವ ಜೀವನು ದೊರೆತ ಭವದಲ್ಲಿ ಉತ್ತಮವಾಗಿ ನಡೆದು ಸುಖವಾಗಿರುವುದು ಉತ್ತಮ. ಬೇಸಗೆಯಲ್ಲಿ ಬಾಯಾರಿಕೆಯಿಂದ ತೊರೆಯ ಸಮೀಪ ನೀರನ್ನು ಅರಸುತ್ತ ಬಂದ ಪ್ರಾಣಿಯು ನೀರನ್ನು ತಲುಪುವ ಮುನ್ನವೇ ಕೆಸರಲ್ಲಿ ಸಿಕ್ಕು ಸಾಯುವಂತಾಗುವುದು ಬೇಡ. ಸಂಸಾರದಲ್ಲಿ ಮನೆಯೇ ಸೆರೆಮನೆಯಾಗಿ, ಸಂಪತ್ತೇ ಇಂಧನವಾಗಿ, ಮಕ್ಕಳೇ ಅನಿಷ್ಟಗಳಾಗಿ ಹೆಂಡತಿಯೇ ಪಾಪವಾಗಿ, ಬಂಧುಜನಗಳೇ ಮಹಾಮೋಹಬಂಧವಾಗಿರುವರು.

ಬಡವನು ಸಂಪತ್ತಿಗಾಗಿ ದುಃಖಿಸಿದರೆ, ಅದೇ ಸಂಪತ್ತಿನಿಂದಾಗಿ ಶ್ರೀಮಂತನು ದುಃಖಿಸುತ್ತಾನೆ. ಆದುದರಿಂದ ಹಣಕ್ಕಾಗಿ ಹಂಬಲಿಸುವುದು ಬೇಡ. ಉತ್ತಮಧರ್ಮದಿಂದ ಮೋಕ್ಷವನ್ನು ಪಡೆದು ಸುಖವಾಗಿರುವುದು. ಸಂಸಾರವನ್ನು ನೆಚ್ಚಿ ನಡೆಯುವವನ ಸ್ಥಿತಿಯು ಕಳ್ಳನನ್ನು ನಂಬಿ ದಾರಿಯಲ್ಲಿ ಹೋದಂತಾಗುತ್ತದೆ. ಹೀಗಾಗಿಬ ಒಳಿತನ್ನು ಮಾತ್ರ ನಂಬಿ ನಡೆಯುವುದು. ಬಾಲ್ಯದಲ್ಲಿ ತಿಳಿವಳಿಕೆಯಿಲ್ಲದೇ, ಯೌವನದಲ್ಲಿ ಪತ್ನಿಯರೊಡನೇ, ಮುಪ್ಪಿನಲ್ಲಿ ಶಕ್ತಿಯಿಲ್ಲದೇ ಹೀಗೆ ಸಂಸಾರದಲ್ಲಿ ತೊಳಲುವುದೇ ಆಗಿರುವುದು. ಸಮುದ್ರದಲ್ಲಿ ಸ್ನಾನಕ್ಕೆ ಹೋದವನು ತೆರೆಗಳು ನಿಂತಮೇಲೆ ಮೀಯುವೆನೆಂದು, ಸಂಸಾರದಲ್ಲಿರುವವನು ಉತ್ತಮ ಸ್ಥಿತಿಯೊದಗಿದಾಗ ಧರ್ಮ ಮಾಡುವೆನೆಂದು ಹೇಳಿದರೆ ಆತನಿಗೆ ಮೀಯಲೂ ಈತನಿಗೆ ಧರ್ಮಮಾಡಲು ಸಾಧ್ಯವಾಗುವುದೇ ಇಲ್ಲ.

---

೨೭೫. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೬೦

ಸಂಸಾರದ ಒಂದು ಭವದಲ್ಲಿ ಆಪ್ತಸ್ನೇಹಿತನಾದವನು ಮತ್ತೊಂದರಲ್ಲಿ ಬದ್ಧವೈರಿಯಾಗಿ ಕೊಲ್ಲಬಯಸುವವನೂ ಆಗಿರಬಹುದು. ಒಂದೆಡೆ ಸುಂದರನಾದವನು ಇನ್ನೊಂದೆಡೆ ಕುರೂಪಿಯೂ ಆಗಿರಬಹುದು. ಅಲ್ಲದೇ ನಾರಕಿಯಾಗಿದ್ದವನು ಪುಣ್ಯಕರ್ಮಗಳಿಂದ ಉತ್ತಮಗತಿಯನ್ನು ಹೊಂದಿದವನೂ ಆಗಿರಬಹುದು. ಅರಸಾದವನು ಕರ್ಮವಶದಿಂದ ಕೆಟ್ಟ ಜನ್ಮವನ್ನೂ ಪಡೆಯಬಹುದು. ಈಗ ಮಗನಾಗಿದ್ದವನು ಮುಂದಿನ ಭವದಲ್ಲಿ ತಂದೆಯಾಗಬಹುದು. ಈಗ ಮಗಳಾಗಿರುವವಳು ಮುಂದಿನ ಭವದಲ್ಲಿ ಹೆಂಡತಿಯೂ ಆಗಬಹುದು. ಒಂದೆಡೆ ಮದಗಜವಾಗಿರುವುದು ಮತ್ತೊಂದೆಡೆ ನರಿಯಾಗಿಯೂ ಹುಟ್ಟುವುದು. ಒಂದು ಭವದಲ್ಲಿ ನಾಯಿಯಾಗಿದ್ದು ಇನ್ನೊಂದು ಭವದಲ್ಲಿ ಮೃಗರಾಜನೂ ಆಗುವನು. ಒಂದೆಡೆ ಹುಲ್ಲಾಗಿದುದು, ಇನ್ನೊಂದೆಡೆ ಕ್ರಿಮಿಯಾಗುವುದು. ಒಂದೆಡೆ ಹೇಡಿಯಾದವನು ಇನ್ನೊಂದೆಡೆ ವೀರನಾಗುವನು ಎಂದು ಬಂಧುವರ್ಮನು ಉಪದೇಶಿಸುತ್ತಾನೆ.

೩.೪.೧.೬. ಲೋಕಾನುಪ್ರೇಕ್ಷೆ:

"ಅಡಿ ವ್ರೇತಾಸನದಂತಿರೆ
ನಡು ಝುಲ್ಲರಿಯಂತೆ ಮೇಗು ಮುರಜದ ತೆಱದಿಂ
ದೆಡೆವಿಡದೆ ಮೂಱು ಲೋಕಮು
ಮೊಡನನಿಲತ್ರಯದೆ ಸುತ್ತಿ ನಿಂದತ್ತೆತ್ತಂ॥೬.೧॥"[೨೭೬]

ಮೂರುಲೋಕಗಳಲ್ಲಿ ಅಧೋಲೋಕವು ಕಾಲು ಅಗಲವಿರುವ ಆಸನದಂತಿರುವುದು. ಮಧ್ಯಲೋಕವು ಜಾಲರಿಯಂತೆ ಹಾಗೂ ಊರ್ಧ್ವಲೋಕವು ಮದ್ದಳೆಯ ಆಕಾರದಲ್ಲಿದೆ. ಈ ಮೂರೂ ಲೋಕವನ್ನು ಅನಿಲತ್ರಯಗಳು ಸುತ್ತಿಕೊಂಡಿದೆ. ಹೀಗಿರುವ ಈ ಲೋಕವು ಹದಿನಾಲ್ಕು ರಜ್ಜುಪ್ರಮಾಣದಷ್ಟು ಎತ್ತರವೂ, ನಾಲವತ್ತೆರಡು ರಜ್ಜುಪ್ರಮಾಣದಷ್ಟು ವಿಸ್ತಾರವೂ ಆಗಿದೆ. ಅಧೋಲೋಕವೆಂಬ ನರಕದಲ್ಲಿ ಏಳು ಉಗ್ರಭೂಮಿಗಳಿವೆ[೨೭೭]. ಇಲ್ಲಿ ಹಿಂಸಾನಂದ, ಮೃಷಾನಂದ, ಸ್ತೇಯಾನಂದ, ಸಂರಕ್ಷಣಾನಂದವೆಂದು ನಾಲ್ಕು ವಿಧಗಳಿರುವವು. ನಾರಕಿಗಳು ತಾವು ಮಾಡಿದ ಪೂರ್ವಕೃತಪಾಪಗಳ ಸ್ಮರಣೆಯಿಂದ ತೊಳಲುತ್ತಾರೆ. ನರಕದಲ್ಲಿ ಭಯಂಕರವಾದ ಮೂವತ್ತೆರಡು ವಿಧದ ಆಯುಧ[೨೭೮]ಗಳಿಂದ ಇರಿದು, ತರಿದು, ಕೊರೆದು, ಮುರಿದು, ಪರಿದು, ಜಡಿದು, ಬಡಿದು, ಕಡಿದು, ತಿದಿಯುಗಿದು, ಸುಗಿದು, ಬಿದಿದು, ಬಗಿದು, ನೂಕಿ, ಸೋಕಿ, ಅವುಕಿ, ಕಟ್ಟಿ, ಬೆಟ್ಟಿ, ಮೆಟ್ಟಿ, ಕುಟ್ಟಿ, ಸುರುಳಿಸಿ, ಮರಳಿಸಿ, ಹೊರಳಿಸಿ, ಚುಚ್ಚಿ, ಸೀಳಿ, ಹೋಳುಮಾಡಿ, ಕರಿದು, ಪೀರ್ದು, ಅರಿದು, ಪಾರ್ದು, ನೇರ್ದು, ಕಿತ್ತು ಪರಸ್ಪರ ಹಿಂಸಿಸಿಕೊಳ್ಳುತ್ತಾರೆ. ಅದರಿಂದ ಕನಲಿ, ಒನಲಿ,

---

೨೭೬. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ.೧೫೭

೨೭೭. ನೋಡಿ, ಅಧ್ಯಾಯ ೩.೧.೧.೪. **'ನಾರಕರು'** ; ಪುಟ. ೬೩

೨೭೮. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ವಿರಚಿತ ಜೀವಸಂಬೋಧನಂ**; ಪುಟ. ೧೫೮. **ಮೂವತ್ತೆರಡು ಪ್ರಕಾರದ ಆಯುಧಗಳು** = ಅಸಿ, ಮುಸಲ, ಕಣೆಯ, ಕಂಪಣ, ಪರಶು, ತೋಮರ, ಮುಸುಂಡಿ, ಪಿಂಡಿವಾಳ, ಮುದ್ಗರ, ಗದೆ, ಚಕ್ರ, ತ್ರಿಶೂಲ ಮುಂತಾದವು.

ಬಳಲಿ, ಅಳಲಿ, ಜೋಲ್ದು, ನೇಲ್ದು, ಸುಯ್ದು, ಬಯ್ದು, ಬೆಂದು, ನೊಂದು, ಕಂದಿ, ಕುಂದಿ, ಬೇಸತ್ತು, ಆಸತ್ತು, ಮಮ್ಮಲಮರುಗಿ ನೋವನುಭವಿಸುತ್ತ, ಸಹಜ, ಶರೀರ, ಮಾನಸ, ಆಗಂತುಕವೆಂಬ ನಾಲ್ಕು ರೀತಿಯ ಮಹಾದುಃಖಗಳನ್ನು ಮೂವತ್ತಮೂರು ಸಾಗರೋಪಮ ಕಾಲದವರೆಗೂ ಅನುಭವಿಸುತ್ತಾರೆ.

ಮಧ್ಯಲೋಕವು ಅಗಾಧವಾದ ದ್ವೀಪ ಮತ್ತು ಸಮುದ್ರಗಳಿಂದ ಆವೃತವಾಗಿದ್ದು, ಅಲ್ಲಿ ತಿರ್ಯಂಚಾದಿ ಏಕೇಂದ್ರಿಯದಿಂದ ಪಂಚೇಂದ್ರಿಯ, ಪೃಥ್ವಿ, ಅಪ್ಪು, ತೇಜ, ವಾಯು, ವನಸ್ಪತಿ ಜೀವಿಗಳು ಇರುವವು. ಇಲ್ಲಿ ಕರ್ಮಭೂಮಿ, ಭೋಗಭೂಮಿಗಳಿರುವವು. ಮದ್ಯಾಂಗ, ತೂರ್ಯಾಂಗ, ವಿಭೂಷಣಾಂಗ, ಜ್ಯೋತಿರಾಂಗ, ಗೃಹಾಂಗ, ಭೋಜನಾಂಗ, ಭಾಜನಾಂಗ, ದೀಪಾಂಗ, ವಸ್ತ್ರಾಂಗ, ಮೂಲ್ಯಾಂಗವೆಂಬ ಹತ್ತು ರೀತಿಯ ಕಲ್ಪವೃಕ್ಷಗಳಿರುವವು. ಅವು ಬೇಕಾದ ವಸ್ತುಗಳನ್ನೀಯುವವು. ಮನುಷ್ಯರು ಇಲ್ಲಿಯೇ ಸ್ಥಿತವಾಗಿರುವರು.

ಇನ್ನು ಇದರ ಮೇಲೆ ಊರ್ಧ್ವಲೋಕವು. ಇದನ್ನು ದೇವಲೋಕವೆನ್ನುವರು. ಇಲ್ಲಿ ದಿಕ್ಕುಮಾರರು, ಭವನವಾಸಿಗಳು, ವ್ಯಂತರರು, ಜ್ಯೋತಿಷ್ಕರು, ವೈಮಾನಿಕರು ಎಂಬ ದೇವತೆಗಳಿರುವರು.[೨೭೯] ಎಂದು ಕವಿಯು ವಿವರಿಸುತ್ತಾನೆ. ಇನ್ನು ಈ ಮೂರೂ ಲೋಕಗಳ ಮೇಲೆ ಶುದ್ಧ ಸ್ಫಟಿಕಮಯವಾಗಿರುವ ನಾಲ್ವತ್ತೈದು ಯೋಜನ ವಿಸ್ತಾರದ ಸಿದ್ಧಕ್ಷೇತ್ರವಿರುವುದು. ಅಲ್ಲಿ ಶ್ರೇಷ್ಠ ತಪಸ್ವಿಗಳೂ, ಮಹಿಮಾನ್ವಿತರೂ, ಷೋಡಷ ಭಾವನಾ[೨೮೦] ಪೂರ್ಣರೂ, ಅತ್ಯುತ್ತಮ ವ್ರತನಿಷ್ಠರೂ, ಕರ್ಮಮುಕ್ತರೂ, ನೆಲೆಸಿರುವರು. ಅವರು ಮೋಕ್ಷವನ್ನು ಸಾಧಿಸಿದ ಸಿದ್ಧಪರಮೇಷ್ಠಗಳು. ಇವರು ಅಷ್ಟಗುಣ ಸಂಪನ್ನರಾಗಿರುತ್ತಾರೆ. ಮೂರೂ ಲೋಕಗಳಲ್ಲಿ ಮನುಷ್ಯಗತಿಯನ್ನಲ್ಲದೇ ಇನ್ನಾವುದರಲ್ಲಿಯೂ ಮೋಕ್ಷವಿಲ್ಲ. ಮೋಕ್ಷಸಾಧನೆಗೆ ಮನುಷ್ಯಗತಿಯೇ ಶ್ರೇಷ್ಠವಾಗಿದೆ. ಇದಕ್ಕೆ ಬೇಕಾಗಿರುವುದು ಶುದ್ಧ ತಪಸ್ಸು ಮತ್ತು ಧರ್ಮಬೋಧೆಗಳು. ಹೀಗೆ ಮುಕ್ತಿಶ್ರೀಯನ್ನು ಬಯಸುವವನು ತಪ ಮತ್ತು ಶ್ರುತ ಬಯಸುವನು ಎಂದು ಕವಿ ವಿವರಿಸುತ್ತಾನೆ.

ಪರಮಾಣು ಅತಿ ಚಿಕ್ಕದು, ಆಕಾಶ ಅತೀ ದೊಡ್ಡದು. ಆದುದರಿಂದ ಇಲ್ಲಿ ದೈನ್ಯತೆಯು ಚಿಕ್ಕದಾಗಿ ಅಭಿಮಾನವು ಗಗನಕ್ಕಿಂತ ಮಿಗಿಲಾಗಿರಲಿ. ಆದುದರಿಂದ ಹರವಿನಲ್ಲಿರುವ ಹಾಲು ಹನಿ ಹುಳಿಬಿದ್ದರೆ ಮೊದಲಿನ ಗುಣವೆಲ್ಲವನ್ನೂ ಕಳೆದುಕೊಳ್ಳುತ್ತದೆ. ಗುಣಕ್ಕೆ ಕೇಡಾಗದಂತೆ ನೋಡಿಕೊಳ್ಳುವುದು. ಶರೀರವನ್ನು ಪೋಷಿಸಿ ವ್ಯಸನಿಯಾಗಿ, ತಾನು ಬಯಸಿದಂತೆ ಆಗದು

---

೨೭೯. ನೋಡಿ, ಅಧ್ಯಾಯ–೩.೧.೧.೪. **'ದೇವಗತಿ'** ; ಪುಟ. ೮೭

೨೮೦. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೨೯೫
ಷೋಡಶ ಭಾವನೆಗಳು = ದರ್ಶನ ವಿಶುದ್ಧಿ, ವಿನಯ ಸಂಪನ್ನತೆ, ಶೀಲವ್ರತಳಲ್ಲಿ ಅನತಿಚಾರ, ಅಭೀಕ್ಷ್ಣ ಜ್ಞಾನೋಪಯೋಗ, ಸಂವೇಗ, ಶಕ್ತಿ ತಸ್ತ್ಯಾಗ, ಶಕ್ತಿ ತಸ್ತಪ, ಸಾಧು, ಸಮಾಧಿ, ವೈಯಾವ್ರತ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಉಪಾಧ್ಯಾಯಭಕ್ತಿ, ಪ್ರವಚನಭಕ್ತಿ, ಆವಶ್ಯಕಾಪರಿಹಾಣಿ, ಮಾರ್ಗಪ್ರಭಾವನೆ, ಪ್ರವಚನ ವತ್ಸಲತ್ವಗಳೆಂಬ ಹದಿನಾರು ಭಾವನೆಗಳು.

ಎಂದು ಗೊತ್ತಿದ್ದೂ ಸಾಧಿಸಲು ಪ್ರಯತ್ನಿಸಿ ದುಃಖಕ್ಕೆ ಈಡಾಗುವುದು ಬೇಡ. ಎಲ್ಲವನ್ನೂ ಭಕ್ಷಿಸುವ ಕಾಲನು ತ್ರಿಲೋಕವನ್ನು ನುಂಗದಿರಲಾರನು. ಆದುದರಿಂದ ಆ ಮಹಾಪಾತಕನಿಗಂಜಿಯಾದರೂ ಮಹಾವ್ರತಗಳನ್ನು ಕೈಕೊಳ್ಳಬೇಕು. ಆದುದರಿಂದ ಸಮ್ಯಕ್‌ಜ್ಞಾನಿ, ಅಭಿಮಾನಿ, ಶ್ರೇಷ್ಠದಾನಿಗೆ ಉನ್ನತ ಸುಖವು ಪ್ರಾಪ್ತವಾಗುತ್ತದೆ ಎಂದು ಲೋಕಾನುಪ್ರೇಕ್ಷೆಯ ಕುರಿತಾಗಿ ಬಂಧುವರ್ಮ ಬಂಧುವರ್ಮನು ಉಪದೇಶಿಸುತ್ತಾನೆ.

೩.೪.೧.೬. ಅಶುಚಿತ್ವಾನುಪ್ರೇಕ್ಷೆ:

ಕಂ॥

"ಅಟಿವುದು ಪೊರ್ದಿದುದಂ ಪೆಟ
ಗುಟಿವುದು ನೀಂ ಪೋಗೆ ದುಃಖಮಂ ನಿನಗೆಂತುಂ
ಘಟಿಯಿಸುವುದಶುಚಿ ನೀನೀ
ಕೊಟಿಯೊಡಲಂ ಮಚ್ಚಿದಂದಮಾವುದೊ ಜೀವಾ ॥೬.೧॥"[೨೮೧]

ಆತ್ಮನನ್ನು ಕುರಿತಾಗಿ ಹೀಗೆ ಹೇಳುತ್ತಾನೆ ಕವಿ. ಶರೀರವು ಆತ್ಮನು ಪಡೆದ ಭಾಗ್ಯವೆಲ್ಲವನ್ನೂ ಹಾಲು ಮಾಡುತ್ತದೆ. ಆತ್ಮವು ಅಳಿದರೆ ಅದು ಹಿಂದುಳಿಯುತ್ತದೆ. ದುಃಖವನ್ನುಂಟುಮಾಡಿ ದೋಷವನ್ನು ಹೊದಿಸುತ್ತದೆ. ಅಶುಚಿಯನ್ನೂ, ಅಯೋಗ್ಯವಾದುದನ್ನು ಆಶ್ರಯಿಸುವುದನ್ನೂ ಹಗೆಯನ್ನೂ, ಹೇಸಿಗೆಯುಂಟುಮಾಡುವ ಹೊಲಸನ್ನೂ ಒಂದೇ ಶರೀರದಲ್ಲಿಯೇ ಹೊಂದಿರುವುದನ್ನು ಕಂಡು ಅದನ್ನು ಮೆಚ್ಚಿ ಮೈಮರೆಯುವುದು ಬೇಡ. ಮೊದಲು ಬಾಲ್ಯವು ತಿಳುವಳಿಕೆಯಿಲ್ಲದೇ ಕಳೆದುಹೋಗುತ್ತದೆ. ಅನಂತರ ಕಷ್ಟಗಳೇ ತುಂಬಿದ್ದು, ಉಗ್ರವಾದ ಮುಪ್ಪು ಮನನೋಯಿಸುತ್ತಾ ರೋಗರುಜಿನಗಳೆಂಬ ಹುಳುಗಳು ಆವರಿಸುತ್ತವೆ. ಹುಳುಕು ಕಬ್ಬು ತಿನ್ನಲು ಯೋಗ್ಯವಲ್ಲ. ಆದರೆ ಬೀಜಕ್ಕೆ ಯೋಗ್ಯವಾದುದು. ಅಂತೆಯೇ ಮಾನವ ಶರೀರವು ಸುಖದ ಅನುಭವಕ್ಕೆ ಯೋಗ್ಯವಲ್ಲ. ಆದರೆ ಸುಗತಿಯನ್ನು ಪಡೆಯಲು ಅತ್ಯಂತ ಯೋಗ್ಯವಾದುದು. ಧರ್ಮಾನುರಾಗಿಯಾದವನು ಎಲ್ಲೆಡೆಯೂ ಶ್ರೇಷ್ಠನಾಗಿಯೇ ಕಾಣುತ್ತಾನೆ. ಮನ್ಮಥ ಮದದಿಂದ ಸೊಕ್ಕಿರುವ ಜೀವನು ಮೊಲೆಯನ್ನು ಹೊನ್ನಕೊಡವೆಂದೂ, ಜಘನವನ್ನು ಆನೆಯ ಕುಂಭಸ್ಥಳವೆಂದೂ, ಕಣ್ಣನ್ನು ತಾವರೆಯೆಂದೂ, ಮೊಗವನ್ನು ಚಂದ್ರನೆಂದೂ ದೇಹವನ್ನು ಲತೆಯೆಂದು ಸ್ತ್ರೀಯರ ಅಂಗಾಂಗಗಳನ್ನು ಬಣ್ಣಿಸುವನು. ಆದರೆ ಅದೆಲ್ಲವೂ ಕೇವಲ ದೇಹಕಾಮನೆಯಷ್ಟೇ. ದೇಹವು ತಾನೂ ಕೆಟ್ಟು ತನ್ನನ್ನು ನೆಚ್ಚಿದ ಆತ್ಮವನ್ನೂ ಹಾಳುಮಾಡುತ್ತದೆ. ಆದುದರಿಂದ ದುಃಖವನ್ನುಂಟು ಮಾಡುವ ಶರೀರವನ್ನು ಮೆಚ್ಚುವುದರಿಂದ ವಿನಾಶವನ್ನು ಬಯಸಿದಂತಾಗುತ್ತದೆ.

ಶರೀರವನ್ನು ನಂಬಿ ಸದ್ಗುಣವನ್ನು ಬಿಟ್ಟು, ತನ್ನ ನಿಜಸ್ವರೂಪವನ್ನು ಅರಿಯದೇ ಹಲವಾರು ಜನ್ಮಗಳು ಕಳೆದಿವೆ. ಹಾಗಾಗಿ ಆತ್ಮವನ್ನು ಹಾಳುಮಾಡುವ ಶರೀರವನ್ನು ನೆಚ್ಚಿ

೨೮೧. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ): **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ.೨೦೮

ಕೆಡುವುದು ಬೇಡ. ಸಾವು ತಂದೆಯಾಗಿ, ಹುಟ್ಟು ತಾಯಿಯಾಗಿ, ಕಷ್ಟಗಳು ಸಹೋದರರಾಗಿ, ಮುಪ್ಪು ಸ್ನೇಹಿತನಾಗಿರುವ ದೇಹದ ಮೇಲೆ ಅವಲಂಬನೆ ಬೇಡ. ಶರೀರವು ಜೊತೆಗಿದೆ ಎಂಬ ಮೋಹದಿಂದ ಅದನ್ನೇ ಆಶ್ರಯಿಸುವುದು ದುಃಖಕರವಾದುದು. ಶರೀರವು ಪರಮಾತ್ಮ ಪದವಿಯನ್ನು ಪಡೆಯುವ ಶಕ್ತಿಯನ್ನುಳ್ಳ ಆತ್ಮನನ್ನು ರಕ್ಷಿಸುವುದರಿಂದಲೇ ಸೋಲಿಸಿ ಹಾಳುಮಾಡುತ್ತದೆ. ಅಂದಮೇಲೆ ಕೆಡದಿರುವ ಬೇರೆ ವಸ್ತುಗಳಿಲ್ಲ. ಶರೀರ ಹುಟ್ಟಿದಂದೇ ಇಂದ್ರಿಯಗಳು ಹುಟ್ಟಿದವು. ಇಂದ್ರಿಯಗಳಿಂದಲೇ ಮಹಾದುಃಖವುಂಟಾಗುವುದು. ಅದರಿಂದಲೇ ಅನಂತ ಬಂಧಗಳು ಒದಗುವವು. ಇದರ ಹೆಚ್ಚಳವಾದರೆ ಅದರ ಪರಿಣಾಮವಾಗಿ ಅತಿಯಾದ ಪಾಪವುಂಟಾಗುವುದು. ಇವೆಲ್ಲವನ್ನೂ ಉಂಟುಮಾಡುವ ಒಡಲನ್ನು ನೆಚ್ಚುವುದು ಬೇಡ. ಇಲ್ಲಿಯವರೆಗೆ ಹಾಳಾಗಿದ್ದು ಸಾಕು. ಎಂದು ಕವಿ ಉಪದೇಶಿಸುತ್ತಾನೆ.

ಉ॥ **"ಧಾತು ಮಲಾದಿ ದೋಷ ಸಹಿತಂ ಪೊಱಗುಗ್ರದುರಂತಕರ್ಮಸಂ**
ಘಾತವಿಭಾಗಮತ್ತೊಳಗೆ ಬೋಧದ ಭಾಗಮದೆತ್ತ ನೆಟ್ಟನಿಂ
ತೀ ತನುವಿತ್ತಣಿರ್ದೆರಡು ಭಾಗಮುಮಂ ಬಿಸುಟಂತರಂಗದೊಳ್
ಪ್ರೀತಿಯಿನಾತ್ಮನಂ ನಿಱಿಪುದಲ್ಲದೊಡೀ ತನುಮೊಳ್ಳಿಕೆಯ್ಯುಗಮೇ ॥೭.೧೮॥"[೨೮೨]

ದೇಹದ ಒಂದು ಭಾಗವು ಧಾತು, ಮಲಾದಿಗಳಿಂದ ದೋಷಪೂರಿತವಾಗಿದ್ದರೆ, ಇನ್ನೊಂದು ಭಾಗವು ದುರಂತಕರ್ಮಗಳಿಂದ ಕೂಡಿದೆ. ಹೀಗಾಗಿ ಈ ಎರಡೂ ಭಾಗಗಳನ್ನು ಬಿಟ್ಟು ಅಂತರಂಗದಲ್ಲಿ ಪ್ರೀತಿಯಿಂದ ಆತ್ಮನನ್ನು ನೆಲೆಗೊಗೊಳಿಸಿದರೆ ಒಳಿತಾಗದೇ? ಎಂದು ಕವಿ ಪ್ರಶ್ನಿಸುತ್ತಾನೆ. ದೇಹದಲ್ಲಿ ಸೇರಿಕೊಂಡು ದೇಹಿಯಾಗಿರುವ ಆತ್ಮನು ದೇಹಕ್ಕಾಗುವ ನೋವನ್ನು ತನ್ನದೆಂದು ಬಗೆದು ದುಃಖಿಸುವುದು ಬೇಡ. ವಾತ, ಪಿತ್ತ, ಕಫಗಳೆಂಬ ದೋಷಸಮೂಹಗಳನ್ನು ಎದುರಿಸುವ ಶರೀರವು ಮೂತ್ರಪುರೀಷಹದ ಕೊಂಡವಾಗಿದೆ. ದೇಹವು ಅಶುಚಿಯಾಗಿದ್ದು ಅದರಲ್ಲಿ ಉತ್ತಮ ಗುಣವಿಲ್ಲ. ಜಗತ್ತಿನಲ್ಲಿ ಇದಕ್ಕಿಂತ ಕನಿಷ್ಟವಾದುದು ಬೇರಾವುದೂ ಇಲ್ಲ. ಮುಡಿದು ಬೀಸಾಡಿದ ಹೂವನ್ನೂ, ಉಟ್ಟು ಬಿಟ್ಟ ಸೀರೆಯನ್ನೂ, ಕೆಳಗುದುರಿದ ಕಸ್ತೂರಿಯನ್ನೂ, ಮಿಂದ ನೀರನ್ನೂ, ಉಂಡು ತಟ್ಟೆಯಲ್ಲಿ ಉಳಿದ ಅನ್ನವನ್ನೂ ಮರಳಿ ಮುಟ್ಟಲು ಹೇಯವೆನಿಸುತ್ತದೆ. ಅಂದಮೇಲೆ ಶರೀರ ಮುಟ್ಟಿದದುದರಿಂದ ಶುಚಿಯಾಗಿದ್ದ ವಸ್ತುಗಳೆಲ್ಲವೂ ಅಶುಚಿಯಾಗುವವು. ಹೀಗಿದ್ದು ಮೂಳೆ, ಮಾಂಸ, ನರಗಳ ಒಡಲಾಗಿರುವ ದೇಹವು ಎಂದಿಗೂ ಶುಚಿಯಲ್ಲದುದು. ವೇಶ್ಯೆಯರನ್ನು ನೆಚ್ಚಿ ಹೆಂಡಿರನ್ನು ಬಿಡುವಂತೆ ಶರೀರವನ್ನು ನೆಚ್ಚಿ ಗುಣಗಳನ್ನು ಬಿಡುವುದು ಬೇಡ. ಆದುದರಿಂದ ಅಶುಚಿಯಾದ ದೇಹವನ್ನು ಧರ್ಮದಲ್ಲಿ ನೆಲೆಗೊಳಿಸಿ ಮೋಕ್ಷಫಲವನ್ನು ಪಡೆಯುವುದು ಒಳ್ಳೆಯದು. ತಾಯ ಬಸಿರಲ್ಲಿ ಕರ್ಮದಿಂದ ತ್ಯೆಜಿಸಿದ ವಸ್ತುವನ್ನೇ ಉಂಡು, ಅಮೇಧ್ಯದಲ್ಲಿ ಜಂತುಗಳೊಡನೆ ನೆಲೆಸಿ, ಹಸಿವು ದಾಹಗಳನ್ನು

೨೮೨. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ): **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೨೧೭

ಅನುಭವಿಸಿದ ಶರೀರದಲ್ಲಿ ಮತ್ತೆ ಹುಟ್ಟದಿರುವಂತೆ ಕಾರ್ಯ ಕೈಗೊಳ್ಳುವುದು ಉಚಿತವಾದುದು. ಆದುದರಿಂದ ಅಶುಚಿತ್ವದಿಂದ ಶುಚಿಯಾಗುವುದೇ ಗುರಿಯಾಗಬೇಕು ಎಂದು ಕವಿ ನಿರ್ದೇಶಿಸುತ್ತಾನೆ.

೩.೪.೧.೮. ಆಸ್ರವಾನುಪ್ರೇಕ್ಷೆ:

"ತನು ಧನ ವನಿತಾ ಜನನೀ
ಜನಕ ವಿಮೋಹದೆ ಕಷಾಯಮೊದವುಗುಮದಱಿಂ
ಜನಿಯಿಸುಗುಮೈದುಮಾಸ್ರವ
ಘನವಿಪುಳದ್ವಾರಮಲ್ಲಿ ಪುಗುಗುಂ ಪಾಪಂ ॥೮.೧॥"[೨೮೩]

ದೇಹ, ಸಂಪತ್ತು, ಹೆಂಡತಿ, ತಾಯಿ, ತಂದೆ ಎಂಬ ಮೋಹದಿಂದ ಕಷಾಯವೊದಗುತ್ತದೆ. ಅದರಿಂದ ಹಿಂಸೆ, ಅನೃತ, ಅಸ್ತೇಯ, ಅಬ್ರಹ್ಮ, ಪರಿಗ್ರಹಗಳೆಂಬ ಐದು ವಿಧದ ಅಸ್ರವಗಳು ಉಂಟಾಗಿ ಪಾಪವೊದಗುತ್ತದೆ. ಅದು ಎಲ್ಲಿಯೂ ನಿಲ್ಲಗೊಡದೆ ಮನಃಕೃತ, ಮನಃಕಾರಿತ, ಮನಸಾನುಮೋದಿತ, ವಚನಕೃತ, ವಚನಕಾರಿತ, ವಚನಾನುಮೋದಿತ, ಕಾಯಕೃತ, ಕಾಯಕಾರಿತ, ಕಾಯಾನುಮೋದಿತ ಎಂಬನವವಿಧ ಹಿಂಸೆಗಳಿಂದ ನವವಿಧಪಾಪಗಳು ಉಂಟಾಗಿ, ಭಯಂಕರವಾದ ವೇದನೆಯ ನರಕವನ್ನು ಅನುಭವಿಸುವಂತೆ ಮಾಡುತ್ತದೆ. ಕರ್ಮವಶದಿಂದ ತನ್ನನ್ನು ತಾನೇ ಕಟ್ಟಿಸಿಕೊಂಡಂತಾಗುತ್ತದೆ. ಸಿಂಗಾರಗೊಂಡು ಕಾಡಿಗೆ ಹೊರಟ ಬೇಡರೊಡನೆ ಪಾಪವೂ ಬೆನ್ನತ್ತಿರುತ್ತದೆ. ದೂರದಲ್ಲಿರುವ ಹೊಗೆಯು ಬೆಂಕಿಯ ಇರುವನ್ನು ಸೂಚಿಸುವಂತೆ ಹೀನ ಕೆಲಸಗಳು ಮುಂದಣ ದುಃಖವನ್ನು ಸೂಚಿಸುತ್ತವೆ. ನಾಲ್ಕು ರೀತಿಯಲ್ಲಿರುವ ಅನೃತ[೨೮೪] ಎಂಬುದು ದೃಢವಾಗಿರುವ ಕಲ್ಪವೃಕ್ಷವನ್ನೇ ಬೇರುಸಮೇತ ಉರುಳಿಸಬಲ್ಲದು. ಸಿರಿವಂತನು ಕಳ್ಳರು ಮನೆಯನ್ನು ಹೊಕ್ಕರೂ ಹೆದರದಿದ್ದರೆ, ಗುಣವಂತನು ಪಾಪವು ಮನವನ್ನು ಪ್ರವೇಶಿಸಿದರೂ ಹೆದರದಿದ್ದರೆ ಅವರಿಬ್ಬರೂ ಕೇಡನ್ನು ಅನುಭವಿಸುವರು. ಮೋಸಮಾಡಬೇಕೆಂಬ ಉದ್ದೇಶವೂ, ಇನ್ನೊಬ್ಬರಿಗೆ ಗೊತ್ತಾಗದಂತೆ ತಿನ್ನುವುದು, ದುರ್ಮಾರ್ಗದಲ್ಲಿ ಸಂಪತ್ತು ಗಳಿಸುವುದು, ಅನ್ಯರಿಗೆ ನೋವಾಗುವಂತೆ ಧನವನ್ನು ಸಂಗ್ರಹಿಸುವುದು ಇವುಗಳು ಕಳ್ಳತನಗಳೆನಿಸಿಕೊಳ್ಳುತ್ತವೆ. ಇದರಿಂದ ಪಾಪವುಂಟಾಗಿ ವಿಷಸಮುದ್ರದಲ್ಲಿ ಮೀಯುವಂತಾಗುತ್ತದೆ.

ಬ್ರಹ್ಮಚರ್ಯದಿಂದ ಪಾಪಸಮೂಹವು ದಿಕ್ಕೆಟ್ಟು ಓಡುತ್ತದೆ. ಆದುದರಿಂದ ಅದನ್ನು ಪಾಲಿಸಬೇಕು. ಕರ್ಮಪಾಶವನ್ನು ಹಾಕುವ ಅಬ್ರಹ್ಮವು ಹತ್ತು ವಿಧದಲ್ಲಿರುವುದು.

---

೨೮೩. ಪಂಡಿತ ಎಚ್. ಶೇಷ ಅಯ್ಯಂಗಾರ್ (ಸಂ); **ಜೀವಸಂಬೋಧನಂ** : ಪುಟ. ೧೩೬

೨೮೪. ತುಕೋಳ್ ಟಿ. ಕೆ., (ಅನು: ಪದ್ಮಪ್ರಸಾದ ಎಸ್.ಪಿ.), **ಜೈನ ಧರ್ಮಕ್ಕೊಂದು ಕೈಪಿಡಿ** : ಪು. ೨೩೦
ನಾಲ್ಕು ರೀತಿಯ ಸುಳ್ಳುಗಳು:
೧.ಒಂದು ವಸ್ತು ನಿಜವಾಗಿಯೂ ಇದ್ದರೂ ಅದರ ಸ್ಥಾನ, ಕಾಲ ಹಾಗೂ ಸ್ವರೂಪವನ್ನು ಅಲ್ಲಗಳೆಯುವುದು.
೨.ಒಂದು ವಸ್ತು ನಿಜವಾಗಿಯೂ ಇಲ್ಲದಿದ್ದರೂ ಅದರ ಸ್ಥಾನ, ಕಾಲ ಹಾಗೂ ಸ್ವರೂಪವನ್ನು ಅಂಗೀಕರಿಸುವುದು.
೩.ಇರುವ ವಸ್ತುವನ್ನು ಬೇರೊಂದು ವಸ್ತುವೆಂದು ವಾದಿಸುವುದು.
೪.ಒಂದು ಮಾತು ನಿಜವಾಗಿಯೂ ಅಪ್ರಿಯವೂ, ಅಯೋಗ್ಯವೂ, ಪಾಪಹಿತವೂ ಆಗಿರುವುದು.

ಇಂದ್ರಿಯವರ್ಧನವಾಗುವ ಆಹಾರಸೇವನೆ, ತಾಂಬೂಲ ಸೇವನೆ, ಬಟ್ಟೆ-ಹೊದಿಕೆಗಳನ್ನು ಹೊದೆಯುವುದು, ಮೆತ್ತನೆಯ ಹಾಸಿಗೆಯಲ್ಲಿ ಮಲಗುವುದು, ಹಲ್ಲು-ಉಗುರು ಮತ್ತು ಶರೀರದ ಮಲಾದಿಗಳನ್ನು ತೆಗೆಯುವುದು, ಸ್ತ್ರೀ ಪ್ರಸಂಗದಲ್ಲಿರುವುದು, ಸುಗಂಧದ್ರವ್ಯ ಲೇಪನ, ಸುಗಂಧಪುಷ್ಪಗಳನ್ನು ಆಘ್ರಾಣಿಸುವುದು, ಗೀತವಾದ್ಯಗಳನ್ನು ಕೇಳುವುದು, ನೃತ್ಯ-ನಾಟಕಗಳನ್ನು ನೋಡುವುದು. ಇವು ಹತ್ತು ಬ್ರಹ್ಮಚರ್ಯ ವ್ರತದ ಅತಿಚಾರಗಳಾಗಿವೆ. ಅವು ಬ್ರಹ್ಮಚರ್ಯಕ್ಕೆ ಬಾಧೆಯನ್ನುಂಟು ಮಾಡುತ್ತವೆ. "ಬ್ರಹ್ಮಚರ್ಯಮೆಂಬುದು ದೇವವ್ರತಮಾವ ವ್ರತಕ್ಕಮುತ್ಕೃಷ್ಟಮಂತಾ ಮಹಾವ್ರತಮಂ ತಾಳ್ದಿದ ಸತ್ಪುರುಷರೀ ಪೇಟ್ದ ಪತ್ತುಂ ತೆಱದತೀಚಾರಂಗಳಂ ಪೊರ್ದದೆ ಕರಂ ಪ್ರಯತ್ನದೊಳಿರ್ಪುದಿಂತು"[೨೮೫]. ಬ್ರಹ್ಮಚರ್ಯವೆಂಬುದು ದೇವವ್ರತವಿದ್ದಂತೆ ಅದಕ್ಕೆ ಸಮನಾದುದು ಬೇರಾವುದಿಲ್ಲ ಎಂದು ಕವಿಯು ವಿವರಿಸುತ್ತಾನೆ.

ತೆರಳಿಯ ಹುಳು ತನ್ನನ್ನು ಮರೆಮಾಚಿಕೊಳ್ಳಲು ತನ್ನ ಸುತ್ತ ನೂಲನ್ನು ಹೆಣೆದುಕೊಂಡು ಅದರಲ್ಲಿಯೇ ಬಂಧಿಯಾಗುವಂತೆ ಅಂತೆಯೇ ಜೀವನು ಹೆಂಡಿರು, ಮಕ್ಕಳು, ಧನ-ಧಾನ್ಯಗಳನ್ನು ಹೆಚ್ಚಿಸಿಕೊಳ್ಳಲು ಬಾಹ್ಯ, ಅಭ್ಯಂತರವೆಂಬ ಎರಡು ರೀತಿಯ ಪರಿಗ್ರಹಗಳನ್ನು ಮಾಡಿ ಪಾಪವನ್ನು ಹೊಂದುತ್ತಾನೆ. ಹೀಗಾಗಿ ವಿಷಯಾಸಕ್ತರ ವಿಷಯವೆಲ್ಲವೂ ವಿಷಸಮಾನವಾದುದು. ಅದರಿಂದ ಕಷಾಯವೊದಗಿ ನಾಶಹೊಂದುತ್ತಾರೆ. ಎಣ್ಣೆ ಹಚ್ಚಿದ ಶರೀರಕ್ಕೆ ಬೇಗನೆ ಧೂಳು ಹಿಡಿಯುವಂತೆ ಮಿಥ್ಯಾತ್ವವೆಂಬ ವ್ಯಸನವು ಅಂಟಿಕೊಂಡರೆ ಆತ್ಮನಿಗೆ ಅರಿವಾಗುವುದು ದೂರವಾಗುತ್ತದೆ. ತಪಸ್ವಿಯಾದವರಿಗೂ ಕವಿಯು ಉಪದೇಶಿಸುತ್ತಾನೆ. ಈ ನಿಟ್ಟಿನಲ್ಲಿ ಗೃಹಸ್ಥರಿಗೆ ಅಲ್ಪ ಸಮಾಧಾನದ ವಿಷಯವನ್ನೂ ತಿಳಿಸುತ್ತಾನೆ. ಗೃಹಸ್ಥರ ವ್ಯಸನವು ನೋಡಲು ಹೊಲಸಾಗಿ ಕಂಡರೂ ಯಾರೋ ಒಬ್ಬನಿಗೆ ಅದರಿಂದ ಒಳ್ಳೆಯದಾಗಬಹುದು, ಕಳ್ಳತನದಿಂದ ಬದುಕುವವನು ಸ್ವಲ್ಪ ಒಳ್ಳೆಯವನಾಗಿರಬಹುದು. ಆದರೆ ತಪಸ್ವಿಯಾದವನು ಕೆಟ್ಟದ್ದನ್ನು ಆಶ್ರಯಿಸಿ ಕೆಡುವುದು ಬೇಡ. ಎಂದು ಉಪದೇಶಿಸಿ ಭಾವ ಮತ್ತು ಪರಿಗ್ರಹಗಳನ್ನು ತ್ಯಜಿಸಿದ ಮುನೀಂದ್ರರನ್ನೇ ಆವರಿಸುವ ಪಾಪವು ಗೃಹಸ್ಥರನ್ನು ಕೆಡಿಸದೇ ಇರುವುದೇ? ಎಂದು ಪ್ರಶ್ನಿಸುತ್ತಾನೆ.

ಕಂ॥ **"ನಾಲ್ಕುಂ ಕಷಾಯದಿಂದಂ**
ನಾಲ್ಕುಂ ಕರ್ಮಮಗಳೊದವೆ ಸಂಸೃತಿಯಂ ನೀ
ಗಲ್ಕಂ ಸಲೆ ಮುಕ್ತಿಗೆ ಪೋ
ಗಲ್ಕಂ ದೊರೆಕೊಳ್ಳದೆಂಬ ಕಥೆಗಳನಱಿಯಾ ॥೮.೧೯॥"[೨೮೬]

ನಾಲ್ಕು ಕಷಾಯಗಳಿಂದ ನಾಲ್ಕು ಕರ್ಮಗಳು ಒದಗುತ್ತವೆ. ಅಂತಹ ಕರ್ಮಗಳುಂಟಾದರೆ ಸಂಸಾರದಿಂದ ಮುಕ್ತನಾಗಲೂ, ಮೋಕ್ಷವನ್ನು ಪಡೆಯಲೂ ಸಾಧ್ಯವಿಲ್ಲವೆಂದು ಬಂಧುವರ್ಮನು ಬೋಧಿಸುತ್ತಾನೆ.

---

೨೮೫. ಪಂಡಿತ ಎಚ್. ಶೇಷ ಅಯ್ಯಂಗಾರ್ (ಸಂ); **ಜೀವಸಂಬೋಧನಂ :** ಪುಟ. ೧೫೯

೨೮೬. ಅದೇ ; ಪುಟ. ೧೪೩

೩.೪.೧.೯. ಸಂವರಾನುಪ್ರೇಕ್ಷೆ:

ಕಂ॥

> “ಪರಿಣಾಮದ ಪೊಲ್ಲಮೆಗಳ್
> ದೊರೆಕೊಳೆ ಬಿಡದೊದವಿ ಬಪ್ ಪಾಪಾಸ್ರವಮಂ
> ಬರಳಿಯದೆ ಪದಿಮೂಱುಂ
> ಚರಿತ್ರದಿಂ ನೆಗಟ್ಟ್ವ ಮಾಟ್ಕಿ ಸಂವರೆಯಕ್ಕುಂ ॥೯.೧॥”[೨೮೭]

ಕೆಟ್ಟ ಪರಿಣಾಮಗಳಿಂದ ಬೆನ್ನಟ್ಟಿ ಬರುವ ಪಾಪಾಸ್ರವವನು ದೂರಮಾಡಿ, ಪಂಚಾಣುವ್ರತಗಳು, ಪಂಚಸಮಿತಿಗಳು [೨೮೮] ಹಾಗೂ ಮೂರು ಗುಪ್ತಿಗಳನ್ನು [೨೮೯] ಸೇರಿ ಹದಿಮೂರು ಚಾರಿತ್ರಗಳನ್ನು ಮೈಗೂಡಿಸಿಕೊಳ್ಳುವುದೇ ಸಂವರೆಯಾಗಿದೆ. ಪಂಚಾಣುವ್ರತಗಳಿಂದ ಶುದ್ಧವಾಗಿ, ಪಂಚಸಮಿತಿಳಿಂದ ಪಾಪವು ಮನಸ್ಸನ್ನು ಪ್ರವೇಶಿಸದಂತೆ ನೋಡಿಕೊಂಡು, ತ್ರಿಗುಪ್ತಿಗಳಿಂದ ಕೂಡಿದ್ದರೆ ದುಷ್ಕರ್ಮಗಳು ಎಂದಿಗೂ ಉಂಟಾಗಲಾರವು. ತ್ರಿಗುಪ್ತಿಗಳು ಮನೆಗೆ ಚೌಕಟ್ಟು, ಬಾಗಿಲು ಕೀಲುಗಳಿದ್ದಂತೆ. ಕಳ್ಳರೆಂಬ ಕರ್ಮಗಳು ಪ್ರವೇಶಿಸದಂತೆ ತಡೆಯುತ್ತವೆ. ಆದುದರಿಂದ ನಿರ್ದೋಷಿಯಾಗಿದ್ದು, ಮತ್ತೊಬ್ಬರನ್ನು ಹಳಿಯದೇ ತನ್ನ ಶಕ್ತಿಯರಿತು ಧರ್ಮಮಾಡುವುದು. ಆಸೆಯನ್ನು ದೂರಮಾಡಿ, ಅಭಿಮಾನವನ್ನು ಹೆಚ್ಚಿಸಿಕೊಂಡು ಅಶೌಚಗುಣ ಬಾರದಂತೆ ನಿರ್ಮಲವಾಗಿರುವುದು.

ಉತ್ತಮ ಜ್ಞಾನದಿಂದ ಅಜ್ಞಾನವನ್ನು ತೊಲಗಿಸುವುದು, ಸತ್ಯವ್ರತದಿಂದ ಸುಳ್ಳನಡಗಿಸುವುದು, ಸಂಯಮದಿಂದ ಇಂದ್ರಿಯಗಳನ್ನು ನಿಯಂತ್ರಿಸುವುದು, ದಯೆಯಿಂದ ಸಾವನ್ನು ನಿವಾರಿಸುವುದು, ವೈರಾಗ್ಯದಿಂದ ರಾಗವನ್ನು ಜಯಿಸುವುದು. ಅತಿಮೋಹವು ಮನಸ್ಸನ್ನು ಆವರಿಸಿದರೆ ಪರಿಮಾಣವೆಂಬ ಸುವ್ರತದಿಂದ ಅದನ್ನು ನಾಶಮಾಡುವುದು. ಭವಜಲಧಿಯನ್ನು ದಾಟಲು ಜಿನಧರ್ಮವೆಂಬ ಉತ್ತಮ ದೋಣಿಯನ್ನೇರಿ, ನಡೆಯುತ್ತಿರುವಾಗ ಪ್ರಮಾದವೆಂಬ ದೋಷದ ರಂಧ್ರದಿಂದ ಮಲಿನವಾದ ನೀರು ಒಳನುಗ್ಗಿದರೆ ಶುದ್ಧಚಾರಿತ್ರವೆಂಬ ಬಂಧದಿಂದ ಮುಚ್ಚಿದರೆ ನೋವಿನಿಂದ ಪಾರಾಗುವುದು ಸಾಧ್ಯ. ಆದುದರಿಂದ ಆಸೆಯೆಂಬ ಕಷಾಯವು ಒಳಹೋಗದಂತೆ ಕಾಯವುದು ಅವಶ್ಯಕ.

ದರ್ಶನಶುದ್ಧಿಯೆಂಬ ವನದುರ್ಗ, ಶ್ರೇಷ್ಠವಾದ ಜ್ಞಾನವೆಂಬ ಜಲದುರ್ಗ, ಉತ್ತಮ ಚಾರಿತ್ರವೆಂಬ ಗಿರಿದುರ್ಗದೊಳಗೆ ಆತ್ಮನಿರಲು ಭವದ ದುರಿತಗಳೆಂಬ ಶತ್ರುಗಳು ಒಳಬರಲಾಗದು. ಸಮ್ಯಗ್ದರ್ಶನ ಜ್ಞಾನ, ಚಾರಿತ್ರಗಳೆಂಬ ಮೂರು ರೀತಿಯ ಗುಣಗಳಿಂದ ಬಲಯುತನಾಗಿದ್ದರೆ ಪಾಪಗಳು ಮುಟ್ಟಲಾರವು. ಕೊಡುವ ಸಾಮರ್ಥ್ಯವುಳ್ಳವನು ಒಡೆಯನಾಗುತ್ತಾನೆ. ಮೋಹವನ್ನು

---

೨೮೭. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ): **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೨೫೮

೨೮೮. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೨೦೪
ಪಂಚಸಮಿತಿ = ಈರ್ಯಾಸಮಿತಿ, ಭಾಷಾಸಮಿತಿ, ಏಷಣಾಸಮಿತಿ, ಆದಾನ ನಿಕ್ಷೇಪಣಾ ಸಮಿತಿ, ಉತ್ಸರ್ಗಸಮಿತಿ. ಇವು ಸಂಯಮ ಪೋಷಕವಾದ ಆಚಾರಗಳು.
ನೋಡಿ, ಅಧ್ಯಾಯ–೩.೧.೧.೮. ಸಂವರ : ಪುಟ. ೧೨೩ : **ಪಂಚಸಮಿತಿ**

೨೮೯. **ನೋಡಿ, ಅಧ್ಯಾಯ–೩.೧.೧.೮. ಸಂವರ** : ಪುಟ. ೧೨೨ : **ತ್ರಿಗುಪ್ತಿ**

ಮೆಟ್ಟಿ ಗೆದ್ದು, ವಿಷಯಗಳನ್ನು ನಾಶಮಾಡಿ, ಕಷಾಯವನ್ನು ಅತ್ಯುತ್ಸಾಹದಿಂದ ಒತ್ತಿ ಸಮಿತಿಯನ್ನು ಕೂಡಿಕೊಂಡು, ತ್ರಿಗುಪ್ತಿಗಳನ್ನು ಹೊಂದಿ, ಜ್ಞಾನದಿಂದ ಮಹಾವ್ರತಗಳನ್ನು ಆಚರಿಸಿ, ಪಾಪವೆಂಬ ಕಳ್ಳರು ಒಳಬರದಂತೆ ಗುಣವಂತನಾಗಿರಬೇಕು.

ಸಸಿಯ ಕೋಮಲತೆಯೇ ಮುಂದಣ ಫಲದ ಸೂಚನೆಯನ್ನು ನೀಡುವಂತೆ ಋಷಿಯ ಗುಣದ ಶ್ರೇಷ್ಠತೆಯೇ ಮುಂದಣ ಮೋಕ್ಷ ಸುಖವನ್ನು ಸೂಚಿಸುತ್ತದೆ. ದ್ರವ್ಯ, ಭಾವ ಎಂಬ ಎರಡು ತಪಗಳಲ್ಲಿ ಭಾವತಪವು ಶ್ರೇಷ್ಠವಾದುದು. ಅದು ವೈರಾಗ್ಯದಿಂದ ಸಾಧ್ಯ. ವೈರಾಗ್ಯವು ಅಪರಿಗ್ರಹದಿಂದ ಸಿದ್ಧಿಸುವುದು. ಅದಕ್ಕಾಗಿ ಗ್ರಂಥಾಭ್ಯಾಸ ಮಾಡುವುದು, ಇಂದ್ರಿಯಗಳ ಆಸೆಗಳು ಅಡಗುವಂತೆ ಶರೀರವನ್ನು ಕುಂದಿಸುವುದು. ಆಗಮಾಭ್ಯಾಸವು ತಪಕ್ಕೆ ಸಾರರೂಪವಾದುದು. ಹಿಂಸಾದಿ ಸರ್ಪಗಳಿರುವ ಸಂಸಾರವೆಂಬ ಕುಳಿಯಲ್ಲಿದ್ದು ಹೊರಬಂದಿರುವ ಮುನಿಯು ಸಂಸಾರದೆಡೆಗೆ ಮರಳುವುದು ಬೇಡವೆಂದು ಉಪದೇಶಿಸುತ್ತಾನೆ ಕವಿ.

೩.೪.೧.೧೦. ನಿರ್ಜರಾನುಪ್ರೇಕ್ಷೆ:

> **"ಎರಡುಂ ತೆಱದ ಪರಿಗ್ರಹ**
> **ಭರಮಂ ಕಳೆದಿಕ್ಕಿ ತಾಳ್ದಿ ಸಂಯಮಮಂ ಪ**
> **ನ್ನೆರಡುಂ ತೆಱದ ತಪಂಗಳ್**
> **ಕರಮೊಪ್ಪಿರೆ ನೆಗೞೆ ಕರ್ಮನಿರ್ಜರೆಯಕ್ಕುಂ ॥೧೦.೧॥"**[೨೯೦]

ಬಾಹ್ಯ, ಅಭ್ಯಂತರವೆಂಬ ಎರಡು ರೀತಿಯ ಪರಿಗ್ರಹಗಳನ್ನು ತ್ಯಜಿಸಿ, ಪ್ರಾಣ, ಇಂದ್ರಿಯಗಳೆಂಬ ಎರಡು ಸಂಯಮವನ್ನು ಹೊಂದಿ, ಅನಶನ, ಅವಮೌದಾರ್ಯ ಮುಂತಾದ ಹನ್ನೆರಡು ಬಗೆಯ ತಪದಲ್ಲಿ ತೊಡಗಿಸಿಕೊಂಡರೆ ಶುದ್ಧಪರಿಣಾಮ ಉಂಟಾಗಿ, ಕರ್ಮನಿರ್ಜರೆ[೨೯೧] ಉಂಟಾಗುತ್ತದೆ. ಜ್ಞಾನಿಯೂ, ಹಿತಕಾರಿಯೂ, ಅಹಿಂಸಾನಿರತನೂ, ಅನ್ಯರಿಗೆ ಒಳಿತನ್ನು ಬಯಸುವವನೂ, ಸಂಸಾರ ಭಯವುಳ್ಳವನೂ, ಮಹಾತಪಸ್ವಿಯೂ ಆದವನ ಅಷ್ಟಕರ್ಮಬಂಧಗಳಿಂದ ಮುಕ್ತನಾಗಿಸಿ, ಮುಕ್ತಿನಿವಾಸಕ್ಕೆ ಕರೆದೊಯ್ಯುವುದು. ನಾಲ್ಕು ಕಷಾಯಗಳು ದೂರಾದರೆ ಕರ್ಮಗಳೂ ತಾನಾಗಿಯೇ ದೂರಾಗುತ್ತವೆ. ಗಾಳಿಯೊಂದಿಗೆ ಸೇರಿದ ಬೆಂಕಿ ಸೌದೆಯನ್ನು ಸುಟ್ಟುಹಾಕುವಂತೆ ಚಾರಿತ್ರವುಳ್ಳ ತಪದಿಂದ ಕರ್ಮಬಂಧಗಳು ನಾಶವಾಗುತ್ತವೆ.

ಕಾದು ಆರಿದ ಹಾಲಿನಿಂದ ಪಿತ್ತವು ಶಮನವಾಗುವಂತೆ, ಅರಿತು ಸ್ವಸ್ಥನಾದವನಿಂದ ಕರ್ಮಗಳು ಶಮನವಾಗುತ್ತವೆ. ಸಿದ್ಧಸುಖವನ್ನು ಪಡೆಯಲು ಪ್ರಾಣಿಹಿಂಸೆ ಮಾಡದಿರುವುದು ಲೇಸು. ಬೆಂಕಿ ಬಿದ್ದಾಗ ಬಾವಿಯನ್ನು ತೋಡುವಂತೆ ಸಾವು ಬಂದಾಗ ಧರ್ಮದಲ್ಲಿ ತೊಡಗುವೆನೆಂಬುದು ತಪ್ಪಾಗುತ್ತದೆ. ಇನ್ನು ಗುಪ್ತಿತ್ರಯಗಳನ್ನು ಪಾಲಿಸುವುದರಿಂದಲೂ

---

೨೯೦. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ): **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೨೮೦

೨೯೧. ನೋಡಿ, ಅಧ್ಯಾಯ–೩.೧.೧.೯ : **ನಿರ್ಜರೆ** : ಪುಟ. ೧೨೬

ಕರ್ಮಗಳನ್ನು ಕಳೆದುಕೊಳ್ಳಬಹುದಾಗಿದೆ. ಆದುದರಿಂದ ಬಂಧನ ಕಾರಣಗಳನ್ನೆಲ್ಲ ತೊರೆದು, ಸದ್ಗುಣಗಳಲ್ಲಿ ಆಸಕ್ತಿಯನ್ನು ತೋರುವುದು. ನದಿಯನ್ನು ದಾಟಲು ಹರಿಗೋಲು ಸಹಾಯವಾಗುವಂತೆ ಮುಕ್ತಿಶ್ರೀಯನ್ನು ಪಡೆಯಲು ಮಾನವಜನ್ಮವು ಸಹಾಯಕವಾಗಿದೆ. ಇದರಿಂದಲೇ ಸುಗತಿಯ ಮಾರ್ಗವು ದೊರೆಯುವುದು. ಕತ್ತಲೆಯನ್ನು ಕಳೆಯಲು ದೀಪ ಹಚ್ಚುವಂತೆ ಕರ್ಮಗಳನ್ನು ಕಳೆಯಲು ತಪದಲ್ಲಿ ತೊಡಗಬೇಕು. ಸಾಧ್ಯ ಅಸಾಧ್ಯ ಎಂಬಿವೆರಡರಲ್ಲಿ ಅಸಾಧ್ಯವಾದುದನ್ನು ಬಿಟ್ಟು, ಸಾಧ್ಯವಾದುದನ್ನು ಹಿಡಿದರೆ ಗುರಿಯು ನಿಚ್ಚಳವಾಗುತ್ತದೆ. ಹಾಗೆ ದೃಢ ಮನಸ್ಸಿನಿಂದ ಗಾಢ ಚಿಂತನೆ ಮಾಡಿದರೆ ಕರ್ಮಬಂಧನ ನಾಶವಾಗುವುದರಲ್ಲಿ ಸಂದೇಹವಿಲ್ಲ ಎಂದು ಕವಿ ವಿವರಿಸುತ್ತಾನೆ.

ಧರ್ಮಕ್ಕಾಗಿ ಪಾಪದಿಂದ ಕೂಡಿದ ಧನವನ್ನು ವ್ಯಯಿಸುವುದು ಬೇಡ. ಬಡತನದ ದುಃಖವನ್ನು ದೂರಮಾಡಲು, ಹಣವನ್ನು ಗಳಿಸಿದರೆ ಇನ್ನಷ್ಟು ದುಃಖವನ್ನುಂಟು ಮಾಡುತ್ತದೆ. ವ್ಯಾಪಾರಿಯು ಮಾರುವ ವಸ್ತುಗಳನ್ನು ಹೊರದಿದ್ದರೆ, ಭವ್ಯನು ಕರ್ಮಗಳನ್ನು ಕೆಡಿಸುವ ಮಹಾವ್ರತಗಳನ್ನು ಅಳವಡಿಸಿಕೊಳ್ಳದಿದ್ದರೆ ಆತನಿಗೆ ಹಣವೂ ಈತನಿಗೆ ಗುಣವೂ ಲಭಿಸಲಾರವು. ಮಧುರರಸ ಸೇವನೆಯಿಂದ ಪಿತ್ತಪ್ರಕೋಪಗಳು ದೂರಾಗುವಂತೆ ಜಿನೇಂದ್ರನ ಆಗಮನದಿಂದ ಚಿತ್ತವು ನಿರ್ಮಲವಾಗುವುದು. ಬೆಳಕೂ, ಬೆಂಕಿಯನ್ನೂ ಒಳಗೊಂಡಿರುವ ದೀಪವು ಕಾಡಿಗೆಯನ್ನು ಹೊರಚೆಲ್ಲುವಂತೆ, ಭವ್ಯನು ಉಜ್ವಲ ಜ್ಞಾನ ಮತ್ತು ಕ್ರಿಯೆಯಿಂದ ದುಷ್ಕರ್ಮಗಳನ್ನು ಕಳೆದುಕೊಳ್ಳಬೇಕು.

"ರಾಗದ್ವೇಷಂಗಳನುೞಿ
ದಾಗಳು ಮಱೆದಾರ್ತು ನೆಗೞ್ವ ತಪದೊಂದು ಮಹೋ
ದ್ಯೋಗದ ಸುಧ್ಯಾನಂ ನಿಂ
ದಾಗಡೆ ಸೋರಲ್ ತಗುಳ್ಗುಮಘ ವಿಷಯಂಗಳ್ ॥೧೦.೨೦॥"[೨೯೨]

ರಾಗದ್ವೇಷಗಳನ್ನು ತ್ಯಜಿಸಿ, ಉತ್ತಮ ಜ್ಞಾನದಿಂದ ತಪಾಚರಣೆಯಲ್ಲಿ ತೊಡಗಿಸಿಕೊಂಡರೆ ಪಾಪಕರ್ಮವು ನಿವಾರಣೆಯಾಗುತ್ತದೆ. ಹಲವಾರು ಬಂಧನಗಳಿಂದ ಮುಕ್ತನಾದವನಿಗೆ ಹೀನವಾದ ಅಷ್ಟಕರ್ಮಗಳೆಂಬ ಶತ್ರುಗಳು ಎಂದಿಗೂ ಎದುರಾಗಲಾರವು. ಸಲ್ಲೇಖನ ಕಾಲದಲ್ಲಿ ಶುದ್ಧಧ್ಯಾನದಲ್ಲಿ ತೊಡಗಿದ ತಪಸ್ವಿಯಿಂದ ಕರ್ಮಕಳಂಕವು ತೊಲಗುತ್ತದೆ. ಉಗ್ರತಪಸ್ಸಿನ ಬೆಳಕಿನಲ್ಲಿ ತತ್ತ್ವವನ್ನು ನೋಡಿ ತಿಳಿದುಕೊಂಡ ಮನಸ್ಸಿನಿಂದ ಕರ್ಮಗಳು ನಿವಾರಣೆಯಾಗುತ್ತವೆ. ಅಂತೆಯೇ ಪುಣ್ಯಪ್ರಾಪ್ತಿಯಾದವನಲ್ಲಿ ಪಾಪವು ಅಡಗಿಹೋಗುತ್ತದೆ. ಅಡಗಿದುದು ಅಳಿಯುತ್ತದೆ. ಅಂತಹ ಶ್ರೇಷ್ಠ ವಿಯೋಗಿಗೆ ಕೂಡಲೇ ಮುಕ್ತಿಯೂ ದೊರೆಯುತ್ತದೆ. ಅವನು ತಪಶಕ್ತಿಯಿಂದ ಕರ್ಮಗಳನ್ನು ಕಳೆದುಕೊಂಡು ಪರಮಯೋಗಿಯಾಗುತ್ತಾನೆ ಎಂದು ಉಪದೇಶಿಸುವ ಕವಿ ಬಂಧುವರ್ಮನು ಬೋಧಿಸುತ್ತಾನೆ.

೨೯೨. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ): **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೨೯೩

೩.೪.೧.೧೧. ಬೋಧಿದುರ್ಲಭಾನುಪ್ರೇಕ್ಷೆ:

> **“ಮಾನಿತ ಗುಣತತ್ತ್ವಪರಿ**
> **ಜ್ಞಾನಮೆ ತಾಂ ಬೋಧತತ್ವಮೆಂಬುದು ಮಳಸಂ**
> **ತಾನಕ್ಷಯಕರಮಪ್ಪುದು**
> **ತಾನಾಪ್ತಾಗಮ ಪದಾರ್ಥನಿರ್ಣಯರೂಪಂ ॥೧೧.೧॥”**[೨೯೩]

ಶುದ್ಧ ಗುಣತತ್ತ್ವ ಪರಿಜ್ಞಾನವೇ ಬೋಧಿತತ್ತ್ವ ಎನಿಸಿಕೊಳ್ಳುತ್ತದೆ. ಇದರಿಂದ ದೋಷಗಳನ್ನು ಪರಿಹಾರ ಮಾಡಿ, ಆಗಮ ಪದಾರ್ಥಗಳ ನಿರ್ಣಯವಾತ್ತದೆ.

ಶ್ಲೋಕ॥ **“ಕ್ಷುಧಾ ತೃಷಾ ಭಯಂ ದ್ವೇಷೋ ರಾಗೋ ಮೋಹಸ್ಚ ಚಿಂತನಂ**
ಜರಾ ರುಜಾ ಚ ಮೃತ್ಯುಶ್ಚ ಸ್ವೇದಃ ಖೇದೋ ಮದೋ ರತಿಃ
ವಿಸ್ಮಯಂ ಜನನಂ ನಿದ್ರಾ ವಿಷಾದೋಷ್ಟಾದಶ ಸ್ಮೃತಾಂ ॥”[೨೯೪]

ಹಸಿವು, ಬಾಯಾರಿಕೆ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಮುಪ್ಪು, ರೋಗ, ಮರಣ, ಸ್ವೇದ, ಖೇದ, ಮದ, ರತಿ, ವಿಸ್ಮಯ, ಜನನ, ನಿದ್ರೆ, ವಿಷಾದ ಎಂಬ ಹದಿನೆಂಟು ದೋಷಗಳಿವೆ. ಈ ಹದಿನೆಂಟು ದೋಷಗಳನ್ನು ವರ್ಜಿಸುವುದು. ಷಡ್ದ್ರವ್ಯಗಳೂ, ನವ ಪದಾರ್ಥಗಳೂ, ತ್ರಿಲೋಕದ ಸ್ವರೂಪ, ಪಂಚಾಸ್ತಿಕಾಯಗಳು, ಚತುರ್ಗತಿ ಸ್ವರೂಪ, ಆರು ಜೀವಕಾಯಗಳು, ಅಷ್ಟಕರ್ಮಗಳು ಈ ವಸ್ತುಸ್ಥಿತಿಗಳ ನಿಜಸ್ಥಿತಿಗಳನ್ನು ಅರಿತು ನಡೆದುಕೊಳ್ಳುವುದೇ ಬೋಧಿಲಕ್ಷಣವಾಗಿದೆ. ಸಮ್ಯಕ್‌ಜ್ಞಾನ, ಚಾರಿತ್ರ, ದರ್ಶನಗಳ ಸ್ವರೂಪಗಳನ್ನರಿತು, ಗುಣಸ್ಥಾನಗಳ ಉತ್ತುಂಗ ಶಿಖರವನ್ನೇರುವುದೇ ಬೋಧನೆಯಾಗಿದೆ. ಚತುರತೆ, ಆಯುಧ ಮತ್ತು ಮನಸ್ಸಿಲ್ಲದವನು ಎಷ್ಟು ಶಕ್ತಿಯುತನಾಗಿದ್ದರೂ ವೈರಿಯನ್ನು ಗೆಲ್ಲಲಾಗದು. ಅಂತೆಯೇ ಜ್ಞಾನ, ಶಕ್ತಿ, ಆಸಕ್ತಿಯಿಲ್ಲದವನು ಎಷ್ಟು ತಪಸ್ಸು ಮಾಡಿದರೂ ಕರ್ಮಗಳನ್ನು ಗೆಲ್ಲಲಾಗದು. ಜ್ಞಾನದ ಮಹಾನುಭಾವದಿಂದ ಮೂರು ಲೋಕಸ್ವರೂಪಗಳನ್ನು ತಿಳಿದುಕೊಳ್ಳುವುದು ಸಾಧ್ಯ.

ಜೀವವು ದೋಷಪೂರಿತವಾದುದು. ಈ ದೋಷವು ಆಸ್ರವದಿಂದ ಉಂಟಾಗುತ್ತದೆ. ಪ್ರಮಾದವಶದಿಂದ ದೋಷವು ಹೆಚ್ಚಿದರೆ ಕರ್ಮವೂ ಹೆಚ್ಚುತ್ತದೆ. ಅದನ್ನು ಸಂಯಮದಿಂದ ನಿರ್ವಹಿಸಿದರೆ ಕಾಲಲಬ್ಧಿಯುಂಟಾಗುವುದು. ಅದರಿಂದ ತತ್ತ್ವರುಚಿ ಹುಟ್ಟಿ, ಜೀವವು ಮುಕ್ತಿಯನ್ನು ಪಡೆಯುತ್ತದೆ. ರಾಜಾಜ್ಞೆಯಿಂದ ಸೆರೆಮನೆಯಲ್ಲಿರುವವನ ಸಂಕೋಲೆಗಳವನ್ನು ಬಿಡಿಸಿದರೆ, ಗುರುಮತದಿಂದ ಕರ್ಮಬಂಧಗಳು ಕಳಚಿದರೆ ಆ ಸಂಕೋಲೆಯ ಬಂಧಕ್ಕೂ ಈ ಕರ್ಮದ ಬಂಧಕ್ಕೂ ಮುಕ್ತಿಯೊದಗುವುದು. ಆದುದರಿಂದ ಜೀವನು ಆಲಸಿತನವನ್ನು ಬಿಡುವುದು ಒಳಿತು. ಬೇಸಿಗೆಯಲ್ಲಿ ಒಣಗಿದ ಹುಲ್ಲಿಗೆ ಬೆಂಕಿ ತಗುಲಿದರೆ ಒಂದೇ ಗಳಿಗೆಯಲ್ಲಿ ಸುಟ್ಟುಹೋಗುವುದು. ಹಾಗೆಯೇ ಕಾಲಲಬ್ಧಿಯಿಂದ ಸಮ್ಯಕ್‌ಜ್ಞಾನ ಲಭಿಸಿದರೆ ಕರ್ಮನಾಶವಾಗುವುದು.

---

೨೯೩. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ): **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೩೧೨
೨೯೪. ಪಂಡಿತ ಎಚ್. ಶೇಷ ಅಯ್ಯಂಗಾರ್ (ಸಂ); **ಜೀವಸಂಬೋಧನಂ** : ಪುಟ. ೧೮೫

"ರಾಗಂ ಧರ್ಮದೊಳ್ ಕೂಡಿದೊಡೊಳ್ಳಿತ್ತು ಪಾಪದೊಳ್ ಕೂಡಿದೊಡೊಳ್ಳಿತ್ತೆ?" [೨೯೫]

ರಾಗವು ಧರ್ಮದಿಂದ ಕೂಡಿದರೆ ಒಳಿತಾಗುವುದೇ ಹೊರತು ಪಾಪದಿಂದ ಕೂಡಿದರೆ ಒಳಿತಾಗುವುದೇ? ಎಂದು ಕವಿ ಪ್ರಶ್ನಿಸುತ್ತಾನೆ. ರಾಗದ್ವೇಷಗಳು ಧರ್ಮಕರ್ಮಗಳನ್ನು ಹೊರತುಪಡಿಸಿದರೆ ಬೇರೆಲ್ಲಿಯೇ ಇದ್ದರೂ ಒಳಿತಾಗದು. ಗುಣವಂತರು ತಮಗೊದಗಿದ ದೋಷಪೂರಿತವಾದ ನಶ್ವರ ಶರೀರವನ್ನು ತೊರೆದು ಉದಾತ್ತತೆಯಿಂದ ಸಿದ್ಧರಾಗಿರುವರು. ಆದುದರಿಂದ ಅವರು ಬಂದ ಕಷ್ಟಕ್ಕೆ ಹೆದರಲಾರರು. ಬೆಂಕಿ ತಗುಲಿದಾಗ ಮನೆಯಿಂದ ಹೊರಹೋಗುವಂತೆ, ಜ್ಞಾನಿಯಾದವನು ರೋಗ ಅಧಿಕವಾದಾಗ ಮದ್ದಿನಿಂದ ನಿವಾರಿಸಬೇಕು. ಸಾಧ್ಯವಾಗದಿದ್ದಲ್ಲಿ ಸಲ್ಲೇಖನದಿಂದ ಶರೀರವನ್ನೇ ಬಿಡಬೇಕು. ಅದರಿಂದ ಅರಿವು ಮತ್ತು ಶಕ್ತಿಗಳು ಹೆಚ್ಚಿನ ಕಾರ್ಯಕ್ಷಮತೆಯನ್ನು ಹೊಂದುತ್ತವೆ ಎಂಬ ವಿವರಣೆ ನೀಡುತ್ತಾನೆ ಕವಿ. ಹೀಗೆ ಸಕಲ ಕರ್ಮಕ್ಷಯವನ್ನು ಮಾಡಿ ಮುಕ್ತಿಶ್ರೀಯನ್ನು ಸೇರಲು ಇರುವ ಬೋಧಿಯೆಂಬ ಅನರ್ಘ್ಯ ಮಹಾರತ್ನವು ಸಂಸಾರಿಜೀವಕ್ಕೆ ದೊರೆಯುವುದು ದುರ್ಲಭ. ಅದು ಹೇಗೆಂದರೆ ಸ್ಥಾವರದಿಂದ ತ್ರಸವೂ, ತ್ರಸದಿಂದ ಸಕಲೇಂದ್ರಿಯತ್ವವೂ, ಸಕಲೇಂದ್ರಿಯದಿಂದ ಸಂಜ್ಞಿಯೂ, ಸಂಜ್ಞಿಯಿಂದ ಮನುಷ್ಯತ್ವವೂ ಲಭಿಸುತ್ತದೆ. ಅದರಿಂದ ಕುಲ, ದೇಶ, ರೂಪ, ಸತ್ವ, ಸೇವೆಗಳು ಲಭಿಸುತ್ತವೆ. ಆ ಸೇವೆಯಿಂದಲೇ ವಿಮಳಬೋಧೆಯು ದೊರೆಯುತ್ತದೆ. ಹೀಗಾಗಿ ಬೋಧಿರತ್ನವೆಂಬುದು ಅಮೂಲ್ಯವಾದುದು. ಒಮ್ಮೆ ಕಳೆದುಕೊಂಡರೆ ಅದು ಮತ್ತೆ ದೊರೆಯಲಾರದು. ಆದುದರಿಂದ ತಪದಿಂದ ಮಹಾಬೋಧಿರತ್ನವನ್ನು ಪಡೆದು ಮುಕ್ತಿಶ್ರೀಯೊಡನೆ ಬಾಳುವುದು ಅಮೋಘವಾದುದು ಎಂದು ಬಂಧುವರ್ಮನು ಉಪದೇಶಿಸುತ್ತಾನೆ.

೩.೪.೧.೧೨. ಧರ್ಮಾನುಪ್ರೇಕ್ಷೆ:

"ಧರ್ಮಮನಾದಿಯಿನೊದವಿದ
ಕರ್ಮದ ಕೇಡಿಂಗೆ ಮೂಲಮದಱಿಂ ಜೀವ
ಕ್ಕಾರ್ಮಂ ಪೆಱದಾವುದೊ ಸಾ
ಸಿರ್ಮಡಿಯಾಗೊದವಿ ಸುಖಮನೀಗುಂ ಕಾಗುಂ ॥೧೨.೧॥" [೨೯೬]

ಧರ್ಮವು ಅನಾದಿಕಾಲದಿಂದ ಒದಗಿಬಂದ ಕರ್ಮವನ್ನು ನಾಶಮಾಡುತ್ತದೆ. ಅಲ್ಲದೇ ಸಾವಿರಪಟ್ಟು ಹೆಚ್ಚಾದ ಸುಖವನ್ನು ನೀಡಿ, ಧರ್ಮವು ಕಾಪಾಡುತ್ತದೆ. ಹೀಗಿರುವ ಧರ್ಮವು ಶ್ರಾವಕಧರ್ಮ ಮತ್ತು ದಶಧರ್ಮ ಎಂದು ಎರಡು ಬಗೆಯಲ್ಲಿದೆ. ಶ್ರಾವಕಧರ್ಮದಲ್ಲಿ ದಾನ, ಪೂಜೆ, ಶೀಲ ಹಾಗೂ ಉಪವಾಸಗಳೆಂದು ನಾಲ್ಕು ವಿಧಗಳಿವೆ. ಅಂತೆಯೇ ದಶಧರ್ಮದಲ್ಲಿ ಉತ್ತಮ ಕ್ಷಮಾ, ಮಾರ್ದವ, ಆರ್ಜವ, ಸತ್ಯ, ಶೌಚ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯವೆಂಬ ಈ ಹತ್ತು ಯತಿಧರ್ಮಗಳು. ಈ ಎರಡರಲ್ಲಿ ಯಾವುದಾದರೂ ಒಂದನ್ನು

---

೨೯೫. ಪಂಡಿತ ಎಚ್. ಶೇಷ ಅಯ್ಯಂಗಾರ್ (ಸಂ); **ಜೀವಸಂಬೋಧನಂ** : ಪುಟ. ೧೮೯

೨೯೬. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ಸಂಪುಟ – ಜೀವಸಂಬೋಧನಂ** : ಪುಟ. ೧೬೧

ತಪ್ಪದೇ ಅನುಸರಿಸುವುದರಿಂದ ಕರ್ಮಕ್ಷಯವಾಗುವುದರಲ್ಲಿ ಸಂದೇಹವಿಲ್ಲ. ಅಂತೆಯೇ ಪೂರ್ವಜನ್ಮಕೃತ ಸದ್ಧರ್ಮದಿಂದ ಮುಂದಣ ಜನ್ಮದಲ್ಲಿ ಪುಣ್ಯವು ಒದಗುತ್ತದೆ.

ದೊಡ್ಡ ಮರವೊಂದನ್ನು ಕತ್ತರಿಸಿ, ಅದರ ಹಣ್ಣನ್ನು ತಿನ್ನಬಯಸುವವನಂತೆ ಧರ್ಮಪೋಷಣೆಯನ್ನು ಬಿಟ್ಟು ಶರೀರಪೋಷಣೆ ಮಾಡುವುದು ಅಚಾತುರ್ಯದ ಕೆಲಸವೆನಿಸುತ್ತದೆ. ಆದುದರಿಂದ ಸರಿಯಾದ ಮಾರ್ಗದಲ್ಲಿ ನಡೆದು ಧರ್ಮವನ್ನೇ ಅನುಸರಿಸುವುದು ಉತ್ತಮವಾದುದು. ಲೋಕದಲ್ಲಿ ಕಲ್ಪವೃಕ್ಷ ಮತ್ತು ಚಿಂತಾಮಣಿಗಳೂ ಸಹ ಧರ್ಮಕ್ಕೆ ಸಮಾನವಾಗಲಾರವು. ಧರ್ಮವು ತನ್ನನ್ನು ಪ್ರೀತಿಸಿ ಬಂದವರನ್ನು ಕರ್ಮವಿಮುಕ್ತರನ್ನಾಗಿ ಮಾಡಿ ಕಾಪಾಡುತ್ತದೆ. ಬಲ್ಲಿದನು ಧನವನ್ನು ಧರ್ಮಕ್ಕೀಯಬೇಕು, ಬಡವನು ಗುಣವನ್ನಾಶ್ರಿಸಬೇಕು. ಇದರಿಂದ ಚಿತ್ತಶುದ್ಧಿಯನ್ನು ಹೊಂದಿ, ಧರ್ಮವನ್ನು ಸಾಧಿಸುವುದು. ಕುಲ, ರೂಪ, ಆಯು, ಶಕ್ತಿ, ಗುಣ, ಸೌಭಾಗ್ಯ, ತೇಜಸ್ಸು, ಆಜ್ಞೆ, ವಿನಯ, ಚಾತುರ್ಯತೆ, ಶೌರ್ಯ, ವಿದ್ಯೆ, ಪ್ರಭುತ್ವ, ಧೈರ್ಯಗಳೆಲ್ಲವೂ ಅತಿಶಯವಾದ ಧರ್ಮದಿಂದಲೇ ಒದಗುತ್ತವೆ.

> **"ಇಂದ್ರತ್ವಂ ಬಲದೇವರಾದಿ ಖಚರೇಂದ್ರೋತ್ಪತ್ತಿ ಷಟ್ಖಂಡ ಭೂ**
> **ಪೇಂದ್ರತ್ವಂ ನಿರುಜತ್ವಮಂತೆ ವಿಜಿಗೀಷುತ್ವಂ ತಪೋಯೋಗಯೂ**
> **ಥೇಂದ್ರತ್ವಂ ಬಹುಶಾಸ್ತ್ರಪಾರಗಗುಣಂ ತ್ರೈಲೋಕ್ಯಸಂಪೂಜ್ಯ ಜೈ**
> **ನೇಂದ್ರ ಶ್ರೀಪದಮೆಂಬಿನಿತ್ತುಮೊಗೆಗುಂ ಸದ್ಧರ್ಮದಿಂ ಜೀವನೇ ॥೧೨.೧೨॥"**[೨೯೭]

ಇಂದ್ರ, ಬಲದೇವ, ಖಚರತ್ವ, ಷಟ್ಖಂಡಾಧಿಪತ್ಯ ಪದವಿಗಳೂ, ಆರೋಗ್ಯಭಾಗ್ಯ, ಜಯ, ತಪೋಯೋಗ, ಬಹುಶಾಸ್ತ್ರ ಪಾರಂಗತ್ವ, ತ್ರೈಲೋಕ್ಯಪೂಜತ್ವ, ಜೈನೇಂದ್ರ ಶ್ರೀಪದವಿಗಳು ಸದ್ಧರ್ಮದಿಂದ ಮಾತ್ರವೇ ಲಭಿಸುತ್ತವೆ. ಕರೆದ ಹಾಲನ್ನು ಕೆಡದಂತೆ ಕಾಯಿಸುವಂತೆ ಶ್ರಾವಕಧರ್ಮವನ್ನಾಚರಿಸಿ, ಶರೀರವನ್ನು ವಶಮಾಡಿಕೊಂಡು ವಿಷಯ ಕಷಾಯಗಳಿಂದ ಮುಕ್ತವಾಗಿ, ತಪಸ್ಸು ಮಾಡಿ ಮನಸ್ಸನ್ನು ಹದಗೊಳಿಸುವುದು. ಕಾದು ಆರಿದ ಹಾಲಿಗೆ ಮೊಸರಾಗಲು ಹೆಪ್ಪು ಹಾಕುವಂತೆ ಸಂಯಮವನ್ನು ರೂಢಿಸಿಕೊಳ್ಳುವುದು. ಮೊಸರನ್ನು ಕಡೆದಾಗ ಬೆಣ್ಣೆ ಬರುವಂತೆ ಮನುಷ್ಯನಾಗಿ ಹುಟ್ಟಿದವನು ತಪಸ್ಸೆಂಬ ಮಹಾವ್ರತವನ್ನು ಕೈಕೊಳ್ಳುವುದು. ಬೆಣ್ಣೆಯನ್ನು ಕಾಯಿಸಿದಾಗ ಹದವಾದ ತುಪ್ಪವಾಗುವಂತೆ ಋದ್ಧಿಪ್ರಾಪ್ತನಾದ ಮುನಿಯು ಶುಕ್ಲಧ್ಯಾನದಿಂದ ಶುಭಾಶುಭ ಕರ್ಮಗಳು ನಾಶವಾಗಲು ಜ್ಞಾನಾದಿ ಗುಣಗಳಿಂದ ಕೂಡಿದಾಗ ಪರಮಾತ್ಮನಾಗುವನು. ಆತ್ಮಶುದ್ಧಿಯಿಂದ ಉತ್ತಮ ಧರ್ಮದಲ್ಲಿ ನಿರತರಾದಷ್ಟೂ ಹೆಚ್ಚು ಉತ್ತಮ ಫಲವು ದೊರೆಯುವುದು. ಸೃಷ್ಟಿ, ಸ್ಥಿತಿ, ಲಯಗಳೆಲ್ಲವೂ ಜೊತೆಯಾಗಿಯೇ ಬಂದವುಗಳು. ಒಂದು ವಸ್ತುವಿನಿಂದ ಇನ್ನೊಂದು ಉತ್ಪತ್ತಿಯಾದಾಗ ಒಂದು ನಾಶವಾಗುತ್ತದೆ. ಎಂದು ಹೇಳುವ ವಿಚಾರಾರ್ಹವಲ್ಲದ ಧರ್ಮವನ್ನು ಕೇಳಿ ಕೆಡುವುದು ಬೇಡ ಎಂದು ಉಪದೇಶಿಸುತ್ತಾ, ಅಂತಹ ಅನ್ಯಧರ್ಮಗಳಿಗಿಂತ ಜೈನೇಂದ್ರಮತವೇ ಶ್ರೇಷ್ಠವಾದುದು ಎಂದು ಪ್ರತಿಪಾದಿಸಿತ್ತಾನೆ.

---

೨೯೭. ಬಿ. ಎಸ್. ಸಣ್ಣಯ್ಯ (ಸಂ); **ಬಂಧುವರ್ಮ ಸಂಪುಟ – ಜೀವಸಂಬೋಧನಂ :** ಪುಟ. ೧೬೭

ಉ॥ "ಅನ್ಯ ಮತಂಗಳೇವುವವು ಪೊಲ್ಲವು ಸಲ್ಲವು ನಿಲ್ಲವೆಂದು ನೀಂ
ಮಾನ್ಯ ಲಸಜ್ಜಿನೇಂದ್ರ ಮತದೊಳ್ ನುತದೊಳ್ ಹಿತದೊಳ್ ತಗಳ್ದು ಸಾ
ಮಾನ್ಯ ದಯಾಮಯಪ್ರಸರದೊಳ್ ಜಿನಧರ್ಮದೊಳಟಿಳ್ತಿವಟ್ಟು ದು
ರ್ಮಾನ್ಯ ಗತಿಪ್ರಕಾರಿನಘಾರಿಯನೋಡಿಸು ಭವ್ಯಜೀವನೇ ॥೧೨.೨೦॥

ವ॥ ಆನೆಗಂಡಡಿಯನಱಸುವಂತೆ ದಯಮೂಲಮಪ್ಪ ಜಿನೇಂದ್ರಧರ್ಮಮಂ ಕಂಡು ಪೆಱದಂ ನೀನಱಸದಿರು ಮತ್ತಮೆಂತಾನುಮೀಗಡಿನ ಸುಖಮಿರ್ಪುದಂ ಧರ್ಮಂ ಬರಿಸುವುದೆಂದು ನಂಬುವುದು ಬೆರ್ಚಲ್ವೇಡಾ"[೨೯೮]

ಅನ್ಯಮತಗಳೆಲ್ಲವೂ ಕನಿಷ್ಠವಾದವುಗಳು. ಅವು ಸ್ವೀಕರಿಸಲು ಯೋಗ್ಯವಲ್ಲದವುಗಳು. ಅಸ್ಥಿರವೂ ಹೌದು. ಇದನ್ನರಿತು ಹಿತಕರವೂ, ಶ್ರೇಷ್ಠವೂ ಆದ ಜಿನಧರ್ಮವನ್ನು ಒಪ್ಪಿಕೊಳ್ಳುವುದು. ದಯಾಮಯವಾದ ಜಿನಧರ್ಮದಲ್ಲಿ ಪ್ರೀತಿಯಿಡುವುದು. ಅದರಿಂದ ಮಾನ್ಯವಲ್ಲದ, ಉತ್ತಮಗತಿಯನ್ನು ನೀಡದ ಪಾಪವನ್ನು ದೂರಮಾಡುವ ಧರ್ಮದಲ್ಲಿ ನಂಬಿಕೆಯಿಡುವುದು. ಒಂದು ಆನೆಯು ಇನ್ನೊಂದು ಆನೆಯ ಹೆಜ್ಜೆಯನ್ನರಸಿಕೊಂಡು ಹೋಗುವಂತೆ ದಯಾಮೂಲವಾದ ಜಿನಧರ್ಮವನ್ನು ಕಂಡ ಮೇಲೆ ಬೇರೆಯದನ್ನು ಹುಡುಕುವುದು ಬೇಡ. ಏನಾದರೂ ಒದಗಿರುವ ಸುಖವು ಧರ್ಮದಿಂದಲೇ ಸಾಧ್ಯವಾದುದು ಎಂದು ನಂಬುವುದು. ಧರ್ಮದಿಂದ ದೂರವಾದರೆ ಕೇಡಾಗುವುದು. ಧರ್ಮಧರನಾಗದಿದ್ದರೆ ಪುಣ್ಯವೊದಗದು.

ಮನದಲ್ಲುಂಟಾದ ಧರ್ಮದ ಆಚರಣೆಯನ್ನು ಬಿಡದೇ ಕೈಗೊಂಡು ಶುದ್ಧಧ್ಯಾನದಲ್ಲಿದ್ದರೆ ಸಫಲನಾಗುವನು. ಅವು, ಆಜ್ಞಾವಿಚಯ, ಅಪಾಕವಿಚಯ, ವಿಪಾಕವಿಚಯ, ಸಂಸ್ಥಾನವಿಚಯ ಎಂದು ನಾಲ್ಕು ರೀತಿಯ ಧರ್ಮಧ್ಯಾನಗಳಿರುವವು. ಅವುಗಳಲ್ಲಿ ನಿರತನಾದರೆ ಪರಮಸುಖಿಯಾಗುವನು ಎಂದು ಕವಿಯು ಉಪದೇಶಿಸುತ್ತಾನೆ. ಹೀಗೆ ದಾನ, ಪೂಜೆ, ಶೀಲ ಹಾಗೂ ಉಪವಾಸಗಳೆಂಬ ಶ್ರಾವಕಧರ್ಮದಲ್ಲಿ ಸ್ವಲ್ಪವೇ ತೊಡಗಿಕೊಂಡರೂ ಹಿರಿದಾದ ಫಲಗಳನ್ನು ಪಡೆಯಬಹುದು ಎಂದು ಬಂಧುವರ್ಮನು ಕೊನೆಯ ಧಮಾನುಪ್ರೇಕ್ಷೆಯಲ್ಲಿ ಉಪದೇಶಿಸುತ್ತಾನೆ.

ಹೀಗೆ ಶ್ರೇಷ್ಠವಾದ ಆತ್ಮಶುದ್ಧಿಯಿಂದ ಸುಚರಿತ್ರವೂ, ಸುಚರಿತ್ರದಿಂದ ಉನ್ನತ ಧರ್ಮವೂ ಉಂಟಾಗುತ್ತದೆ. ಈ ಧರ್ಮವೇ ಪರಮಸೌಖ್ಯಕ್ಕೆ ಮೂಲವಾಗಿದೆ. ಎಂದು ಹೇಳುತ್ತ ಧರ್ಮಾನುಪ್ರೇಕ್ಷೆ ಮತ್ತು ದೃಷ್ಟಾಂತ ಕಥೆಗಳನ್ನು ನಿರೂಪಿಸುತ್ತಾನೆ ಕವಿ. ಹಾಗೆಯೇ ಹನ್ನೆರಡನೆಯ ಅಧ್ಯಾಯ ಹಾಗೂ ಗ್ರಂಥದ ಕೊನೆಯಲ್ಲಿ ಹೀಗೆ ಹೇಳುತ್ತಾನೆ.

ಮ॥ "ನುತ ವೈಶ್ಯೋತ್ತಮ ಬಂಧುವರ್ಮ ರಚಿತಂ ಶ್ರೀ ಜೀವಸಂಬೋಧನೋ
ನ್ನತ ನಾಮಪ್ರವಿರಾಜಿತಂ ನೆಗಟ್ದನುಪ್ರೇಕ್ಷಾಧಿಕಾರಾಭ್ಯುಪಾ
ಶ್ರಿತಂ ಭಾವಿಸೆ ಬೋಧಿ ನಿಲ್ಕುಮದಱಿಂದಷ್ಟಾಘ ಸಂಬಂಧನ
ಕ್ಷತಿಯಂ ನೆಟ್ಟನೆ ಮಾಡಿ ಗೆಲ್ದು ಪಡೆವರ್ ಸಂಶುದ್ಧಿಯಿಂ ಸಿದ್ಧಿಯಂ ॥೧೨.೬೪॥

೨೯೮. ಪಂಡಿತ ಎಚ್. ಶೇಷ ಅಯ್ಯಂಗಾರ್ (ಸಂ); ಜೀವಸಂಬೋಧನಂ : ಪುಟ. ೨೨೧

ಗದ್ಯ॥ ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ ಬಂಧುವರ್ಮ ನಿರ್ಮಿತಮಪ್ಪ ಜೀವಸಂಬೋಧನಾ ಗ್ರಂಥಾವತಾರದೊಳ್”[೨೯೯]

ವೈಶ್ಯೋತ್ತಮನಾದ ಬಂಧುವರ್ಮನಿಂದ ಶ್ರೇಷ್ಠವಾದ 'ಶ್ರೀ ಜೀವಸಂಬೋಧನ'ವೆಂಬ ಗ್ರಂಥವು ರಚಿತವಾಯಿತು. ಇದು ಉನ್ನತವಾದ ಅನುಪ್ರೇಕ್ಷೆಗಳಿಂದ ಕೂಡಿದೆ. ಇದನ್ನು ಅನುಷ್ಠಾನ ಮಾಡಿಕೊಂಡವರಿಗೆ ಬೋಧಿಜ್ಞಾನವುಂಟಾಗಿ ಅಷ್ಟಕರ್ಮಗಳು ನಾಶಹೊಂದುವವು. ಅವರು ಇದರಿಂದ ಸಂಶುದ್ಧಿಯನ್ನೂ, ಸಿದ್ಧಿಯನ್ನೂ ಪಡೆಯುವರು. ಇದು ಜಿನಶಾಸನ ದೇವರಿಂದ ಪ್ರಭಾವಿತನಾದ ಬಂಧುವರ್ಮ ನಿರ್ಮಿತ ಜೀವಸಂಬೋಧನ ಗ್ರಂಥ ಎಂದು ಹೇಳಿಕೊಂಡಿದ್ದಾನೆ.

ಹೀಗೆ ಬಂಧುವರ್ಮನು ತನ್ನ 'ಜೀವಸಂಬೋಧನಂ' ಗ್ರಂಥದಲ್ಲಿ ಹನ್ನೆರಡು ಅನುಪ್ರೇಕ್ಷೆಗಳನ್ನೂ ಹಾಗೂ ಅವುಗಳಿಗೆ ದೃಷ್ಟಾಂತ ಕಥೆಗಳನ್ನೂ ನಿರೂಪಿಸಿದ್ದಾನೆ. ಗ್ರಂಥದಲ್ಲಿ ಪ್ರತಿ ಅಧ್ಯಾಯದ ಕೊನೆಯಲ್ಲಿ **"ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ ಬಂಧುವರ್ಮ ನಿರ್ಮಿತಮಪ್ಪ ಜೀವಸಂಬೋಧನಾ ಗ್ರಂಥಾವತಾರದೊಳ್"** ಎಂದು ಹೇಳಿ, ಆಯಾಯಾ ಅನುಪ್ರೇಕ್ಷೆ ಹಾಗೂ ದೃಷ್ಟಾಂತ ಕಥೆಯ ಹೆಸರಿಸುತ್ತಾನೆ.

ಈ ಗ್ರಂಥವಿಚಾರವನ್ನು ಒಟ್ಟಂದದಲ್ಲಿ ಹೇಳುವುದಾದರೆ, ಮಡದಿ, ಮಕ್ಕಳು, ಸಂಪತ್ತು ಶರೀರಾದಿಗಳೆಲ್ಲವೂ ಕೇವಲ ಕ್ಷಣಿಕಮಾತ್ರವಾದವುಗಳು. ಇವೆಲ್ಲವೂ ಒಮ್ಮೆ ಆತ್ಮನಿಂದ ದೂರಹೋಗುವುದು ನಿಶ್ಚಿತವಾಗಿದೆ. ಎಲ್ಲಿಯೇ ಹೋದರೂ ಆತ್ಮನೊಬ್ಬನೇ. ಆದುದರಿಂದ ಪಾಪಕರ್ಮಗಳನ್ನು ಕಳೆದುಕೊಳ್ಳಲು ಮೋಹಪಾಶದಿಂದ ಹೊರಬಂದು, ಆತ್ಮಧ್ಯಾನದಲ್ಲಿ ತೊಡಗಿಸಿಕೊಂಡು ಸಾಗುವುದು. ಚತುರ್ಗತಿಗಳಲ್ಲಿ ಸಾಗುವ ಜೀವನು ಶುಭಾಶುಭ ಕರ್ಮಗಳಿಗೆ ಪಾತ್ರನಾಗುತ್ತಾನೆ. ಅಂತಹ ಕರ್ಮಗಳೆಲ್ಲವನ್ನೂ ಕಳೆದುಕೊಂಡು, ಸುಗತಿಯನ್ನು ಹೊಂದಿ ಮುಕ್ತಿಶ್ರೀಯನ್ನು ಪಡೆಯುವುದಾಗಿದೆ. ಇಲ್ಲಿ ಯಾವುದೂ ಶಾಶ್ವತವಾದುದಲ್ಲ. ಸಾವು ನಿಶ್ಚಿತ. ಆದುದರಿಂದ ಇಲ್ಲಿ ತಾನೊಬ್ಬನೇ ಎಂದು ಬಗೆದು, ಉಳಿದುದೆಲ್ಲವೂ ಪರವೆಂದು ತಿಳಿಯುವುದು. ಸಂಸಾರ ಸಾಗರದಲ್ಲಿ ತೊಳಲುವುದರಿಂದ ಮುಕ್ತನಾಗಿ, ಲೋಕದಲ್ಲಿ ಮರುಹುಟ್ಟು ಪಡೆಯದಂತೆ, ಆತ್ಮಶುದ್ಧಿಯನ್ನು ಅರಿತು, ಕರ್ಮದಾಸ್ರವ ಮಾಡಿದಾಗ ಸಂವರೆ ಮತ್ತು ನಿರ್ಜರೆಗಳು ಉಂಟಾಗುತ್ತವೆ. ಅದು ಬೋಧನೆಯಿಂದ, ಧರ್ಮ ಶ್ರವಣದಿಂದ ಸಾಧ್ಯ. ಹೀಗೆ ಅನುಪ್ರೇಕ್ಷೆಗಳನ್ನು ಒಳಗೊಂಡು ಧರ್ಮವನ್ನು ಪಾಲಿಸಿದಾಗ ಮೋಕ್ಷಪ್ರಾಪ್ತಿಯಾಗುವುದು. ಅದನ್ನು ಯಾವುದೂ ಅಡ್ಡಿಪಡಿಸಲಾರದು ಎಂಬುದು ಇದರ ತಿರುಳಾಗಿದೆ.

೩.೪.೨. ಸತಿಧರ್ಮಸಾರ:

ಇದು ಬಂಧುವರ್ಮನಿಂದ ರಚಿತವಾದ ಇನ್ನೊಂದು ಅಪರೂಪದ ಗ್ರಂಥ. 'ಜೀವಸಂಬೋಧನಂ'ನಲ್ಲಿ ಅನುಪ್ರೇಕ್ಷೆಗಳನ್ನು ನಿರೂಪಿಸಿರುವ ಬಂಧುವರ್ಮನು

೨೯೯. ಪ್ರೊ. ಬಿ. ಎಸ್. ಸಣ್ಣಯ್ಯ (ಸಂ): **ಬಂಧುವರ್ಮ ವಿರಚಿತ ಜೀವಸಂಬೋಧನಂ** : ಪುಟ. ೩೮

‘ಸತಿಧರ್ಮಸಾರ’ದಲ್ಲಿ ಶ್ರಾವಕಿಯರು ಹೇಗಿರಬೇಕು? ಅವರ ಆಚರಣೆಗಳು ಯಾವ ರೀತಿಯಲ್ಲಿರಬೇಕು? ಗೃಹಿಣಿಯಾದವಳ ಕರ್ತವ್ಯಗಳು ಏನು ಎಂಬುದರ ಕುರಿತಾಗಿ ಮಾರ್ಮಿಕವಾಗಿ ನಿರೂಪಿಸಿದ್ದಾನೆ. ಅಂತೆಯೇ ಇದು ಶ್ರಾವಕಿಯರಿಗೆ ನೀತಿನಿಯಮಗಳ ಗ್ರಂಥವಾಗಿದೆ. ‘ಜೀವಸಂಬೋಧನಂ’ನಲ್ಲಿ ಸ್ಮರಿಸಿರುವಂತೆ ಇಲ್ಲಿಯೂ ಪಂಚಪರಮೇಷ್ಠಿಗಳನ್ನು ಸ್ಮರಿಸಿ ವಂದಿಸುತ್ತಾನೆ. ಕೃತಿಯು ಕಂದರೂಪದಲ್ಲಿದ್ದು, ೧೯೩ ಪದ್ಯಗಳಿವೆ.

“ಪೃಥುವಿಯೊಳು ಜೈನರೆನಿಸುವ
ಸತಿಯರಿಗಿನಲ್ಪದಿಂದ ಧರ್ಮಾಧರ್ಮ
ಸ್ಥಿತಿಯಂ ಜಿನಪತಿ ನುಡಿಯಂ
ಹಿತವಹ ಸತಿಧರ್ಮಸಾರವ ವಿರಚಿಸುವೆಂ ॥೦೮॥

ದೇವರು ಶಾಸ್ತ್ರಂ ಗುರುಗಳ
ಭಾವವನತಿಕಿರಿದೆ ವ್ರತ ಚರಿತ್ರವ ಕಿರಿದಂ
ಸಾವದ್ಯರಹಿತ ಕಿರಿದಂ
ಶ್ರಾವಕವಧುಗಳಿಗೆ ಅರಿದವರಿಗೆ ಪೇಳ್ವೆಂ ॥೦೯॥”[೩೦೦]

ಭುವಿಯಲಿ ಜೈನ ಸತಿಯರಿಗೆ ಧರ್ಮಾಧರ್ಮ ಸ್ಥಿತಿಯನು, ತೀರ್ಥಂಕರರೇ ಉಪದೇಶಿಸುವಂತೆ ಹಿತವಾಗುವಂತೆ ಸತಿಧರ್ಮಸಾರವನ್ನು ರಚಿಸುವೆನೆಂದು ಕವಿ ಹೇಳಿಕೊಳ್ಳುತ್ತಾನೆ. ದೇವರು, ಶಾಸ್ತ್ರ, ಗುರುಗಳು ಭಾವಗಳನ್ನು, ವ್ರತ, ಚರಿತ್ರೆಗಳನ್ನು ಅತಿಕಿರಿದಾಗಿ ಅರಿಯದಿರುವ ಶ್ರಾವಕವಧುಗಳಿಗೆ ತಿಳಿಯಹೇಳುವೆ ಎಂದು ಕವಿಯು ಪ್ರಸ್ತಾಪಿಸುತ್ತಾನೆ. ವ್ರತ–ನಿಯಮಗಳ ಆಚರಣೆಯು ಜೈನಧರ್ಮದ ಮೂಲ ಅಂಗವಾಗಿದೆ. ನವವಿವಾಹಿತ ಹೆಣ್ಣುಮಗಳು ಗಂಡನಮನೆ ಸೇರಿದಾಗ ಅವಳು ಆ ಮನೆಯಲ್ಲಿನ ಆಚಾರ–ವಿಚಾರ, ಸಂಸ್ಕೃತಿ–ಸಂಪ್ರದಾಯಗಳಿಗೆ ಅನುಗುಣವಾಗಿ ಹೇಗೆ ನಡೆದುಕೊಳ್ಳಬೇಕೆಂದು ಕವಿ ಬಂಧುವರ್ಮನು ತಿಳಿಹೇಳುತ್ತಾನೆ. ಅಡುಗೆಗೆ ಬೇಕಾಗುವ ನೀರು, ಪಾತ್ರೆ, ಹಾಲು, ಹಣ್ಣು, ತರಕಾರಿ, ಬೆಂಕಿ, ವಸ್ತ್ರ ಮುಂತಾದವುಗಳಿಂದ ಸೂಕ್ಷ್ಮಜೀವಿಗಳಿಗೆ ಯಾವುದೇ ರೀತಿಯಲ್ಲಿಯೂ ಹಿಂಸೆಯಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಸತಿಯ ಧರ್ಮವಾಗಿದೆ. ಪಂಚಾಣುವ್ರತಗಳನ್ನು ಪಾಲಿಸುವಂತೆಯೂ ಕವಿಯು ಬೋಧಿಸುತ್ತಾನೆ. ಜೀವಿಗಳನ್ನು ಕೊಲ್ಲುವುದರಿಂದ ಸುಳ್ಳು ಹೇಳುವುದರಿಂದ ಘೋರ ನರಕವು ಪ್ರಾಪ್ತವಾಗುವುದು.

“ಸತಿಯು ಪತಿಯ ಮನೆಯಲ್ಲಿ ಗೃಹಿಣಿಯಾಗಿ ಅಡಿಗೆ ಮನೆಯ ಕಾರ್ಯಗಳಾದ ನೀರು ಸೋಸಿ ತುಂಬಿಕೊಳ್ಳುವ ವಿಧಿ, ಒಲೆ ಹಚ್ಚುವ ಕ್ರಮ, ಹಾಲು ಕರೆಯುವ ಪದ್ಧತಿ, ಹಾಲನ್ನು ಸೋಸಿ ಕಾಯಿಸುವುದು, ತರಕಾರಿಗಳಲ್ಲಿ ಯಾವುದು ಸೇವ್ಯ, ಯಾವುದು ಅಸೇವ್ಯ, ಪಾತ್ರೆಗಳ ಉಪಯೋಗ, ಮುಟ್ಟು–ಮೈಲಿಗೆಯ ವಿಚಾರ, ಮುನಿ, ಶ್ರಾಮಕ ಮತ್ತು ಅತಿಥಿಗಳಿಗೆ ಆಹಾರ

---

೩೦೦. ಬಿ. ಎಸ್. ಸಣ್ಣಯ್ಯ (ಸಂ); **ಸತಿಧರ್ಮಸಾರ** : ಪುಟ. ೦೩

ತಯಾರಿಸುವ ಕ್ರಮ ಈ ಎಲ್ಲ ಗೃಹಿಕಾರ್ಯಗಳಲ್ಲಿ ತ್ರಸ ಜೀವಿಗಳಿಗೆ ಹಿಂಸೆಯಾಗದಂತೆ ಜಾಗೃತಳಾಗಿ ಕೆಲಸ ಮಾಡಬೇಕೆಂದು ಬಂಧುವರ್ಮನು ಉಪದೇಶಿಸುತ್ತಾನೆ." [೩೦೧] ಮುಂದುವರೆದು ಜೈನ ಶ್ರಾವಕಿಯರಿಗೆ ಹಲವಾರು ಉಪಯುಕ್ತವಾಗುವ ಅಂಶಗಳನ್ನು ವಿವರಿಸುತ್ತ ಹೋಗುತ್ತಾನೆ. ಪಾತ್ರೆ ತೊಳೆಯುವುದು, ಮನೆಯನ್ನು ಶುದ್ಧವಾಗಿಟ್ಟುಕೊಳ್ಳುವುದು, ಇತರರೊಂದಿಗೆ ಹೇಗೆ ವರ್ತಿಸಬೇಕೆಂಬುದನ್ನೂ ಉಪದೇಶಿಸುತ್ತಾನೆ.

"ಜಿನರಲ್ಲದನ್ಯದೈವವ
ಮನ ವಚನಂ ಕಾಯಮೆಂಬ ತ್ರಿಕರಣದಿಂದಂ
ನೆನೆಯದಿರು ಪೂಜೆ ಮಾಡದಿ
ರನವರತಂ ಮಾಡು ಜಿನರ ಪೂಜೆ ॥೧೬॥

ಜಿನಧರ್ಮವ ಬಿಡುವವರಂ
ಅನುವಿಂದಂ ತಿಳುಪಿಯವರ ಧರ್ಮದಿ ನಿಲಿಸಲ್
ಜನಿಯಿಸುವುದು ಬಹಳ
ಮಿನಿತೞಿಳಂ ತಾನುಮಕ್ಕು ಆಱಿನೆಯಂಗಂ ॥೧೮॥"[೩೦೨]

ತೀರ್ಥಂಕರರನ್ನಲ್ಲದೆ ಅನ್ಯದೈವನ್ನು ಮನ, ವಚನ, ಕಾಯಗಳೆಂಬ ತ್ರಿಕರಣದಿಂದ ಎಂದಿಗೂ ನೆನೆಯದೇ ಕೇವಲ ಜಿನಪೂಜೆಯಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕೆಂದು ಬೋಧಿಸುತ್ತಾನೆ. ಕೃತಿಯ ಸಂಪಾದಕರಾದ ಬಿ. ಎಸ್. ಸಣ್ಣಯ್ಯ ಅವರು "ಈ ಕೃತಿಯಲ್ಲಿ ಕವಿಯ ಲೋಕಾನುಭವವೂ ಉತ್ತಮ ರೀತಿಯ ನಡೆವಳಿಕೆಯಲ್ಲಿ ಈತನಿಗಿರುವ ಆಸಕ್ತಿಯೂ ಗೋಚರವಾಗುತ್ತದೆ. ಅಲ್ಲದೆ ಜೈನಧರ್ಮದ ಶ್ರೇಷ್ಠತೆಯ ಬಗೆಗೆ ಅಪಾರ ನಂಬುಗೆಯನ್ನು ಹೊಂದಿದ್ದಾನೆ. ಪ್ರೀತಿ ವಾತ್ಸಲ್ಯಗಳಿಂದ ಇತರ ಧರ್ಮದವರನ್ನು ಸದ್ಧರ್ಮದತ್ತ ತರುವುದು ಉತ್ತಮವೆಂಬ ಬುದ್ಧಿವಾದವನ್ನು ಮಾಡಿದ್ದಾನೆ." [೩೦೩] ಎಂದು ಹೇಳುತ್ತಾರೆ.

೩.೪.೨.೧. ಶ್ರಾವಕಿಯರಿಗೆ ವ್ರತ ಸಲಹೆಗಳು:

ಜೀವಗಳನ್ನು ಕೊಲ್ಲಬಾರದು, ಸುಳ್ಳು ಹೇಳಬಾರದು, ಕಳ್ಳತನ ಮಾಡಬಾರದು, ಪರಪುರುಷರಲ್ಲಿ ಮೋಹವನ್ನು ತಾಳಬಾರದು. ಅದರಿಂದ ಅಪಕೀರ್ತಿಯುಂಟಾಗುತ್ತದೆ. ಸಪ್ತಧಾತುಗಳಿಂದಾಗಿರುವ ಶರೀರದ ಮೇಲಿರುವ ಮೋಹವನ್ನು ತೊರೆಯುವುದು. ಮುನಿಗಳನ್ನು, ಆರ್ಯಿಕೆಯರನ್ನೂ ನೋಡಿ ಜಿಗುಪ್ಸೆಯನ್ನು ಹೊಂದದೇ ಧರ್ಮ ಪರಿಪಾಲನೆ ಪಾಡುವುದು. ಪುರಾಣ ಪ್ರವಚನಗಳನ್ನು ಶುದ್ಧ ಮನಸ್ಸಿನಿಂದ ಆಲಿಸಿ ಅಣುವ್ರತಗಳನ್ನು ಪಾಲಿಸಬೇಕು. ನಿತ್ಯವೂ ದಶದಿಕ್ಕುಗಳಲ್ಲಿ ಒಂದು ಮೇರೆಯನ್ನು ಮಾಡಿಕೊಂಡು ಅದನ್ನು ದಾಟಿ ಆಚೆ ಹೋಗಲಾರೆ ಎಂದು ಸಂಕಲ್ಪಸಿಕೊಳ್ಳುವ ವ್ರತವನ್ನು ಮುನಿಗಳ ಸನ್ನಿಧಿಯಲ್ಲಿ ಕೈಕೊಳ್ಳುವುದು. ಇದಕ್ಕೆ 'ದಿಗ್‌ವ್ರತ'

---

೩೦೧. ದೊರೆಸ್ವಾಮಿ (ಸಂಶೋ.) ; **ಕನ್ನಡದ ಶ್ರಾವಕಾಚಾರ ಕೃತಿಗಳು : ಒಂದು ಅಧ್ಯಯನ** ; ಪುಟ. ೪೯

೩೦೨. ಬಿ. ಎಸ್. ಸಣ್ಣಯ್ಯ : **ಬಂಧುವರ್ಮ** ; ಪುಟ. ೨೧

೩೦೩. **ಅದೇ** : ಪುಟ. ೨೨

ಎಂದು ಕರೆಯಲಾಗುತ್ತದೆ. ತ್ರಿಕಾಲಗಳಲ್ಲಿ ಜಿನಸ್ತುತಿಯಲ್ಲಿ ತೊಡಗಬೇಕು. ಅಷ್ಟಮಿ ಮತ್ತು ಚತುರ್ದಶಿಗಳಂದು ಉಪವಾಸವನ್ನು ಕೈಕೊಳ್ಳಬೇಕು. ಇದರೊಂದಿಗೆ ಪ್ರೋಷದೋಪವಾಸವನ್ನೂ ಕೈಕೊಳ್ಳುವುದು ಉತ್ತಮವಾದುದು. ಹೆಂಡತಿ, ಹೊನ್ನುಗಳನ್ನಿಟ್ಟುಕೊಂಡು ತಪಾಚರಣೆ ಕೈಕೊಳ್ಳುವವನನ್ನು ಗುರು ಎಂದು ಮನ್ನಿಸದಿರು. ಗೃಹ, ಪರ್ವತ, ಹೊಸ್ತಿಲು, ಆಭರಣಗಳನ್ನು ಪೂಜಿಸಕೂಡದು. ಅವು ದೇವರಲ್ಲ. ಜಿನನೇ ದೇವನು. ಅಲ್ಲದೇ ಆಹಾರದಾನ, ಅಭಯದಾನ, ಔಷಧದಾನ ಹಾಗೂ ಶಾಸ್ತ್ರದಾಗಳು ಬಹು ಶ್ರೇಷ್ಠವಾದವುಗಳು ಅವುಗಳನ್ನು ಸಕಾಲದಲ್ಲಿ ಕೈಕೊಳ್ಳಬೇಕು. ಎಂಬುದು ಶ್ರಾವಕಿಯರಿಗೆ ಬಂಧುವರ್ಮನ ಉಪದೇಶವಾಗಿದೆ.

೩.೪.೨.೨. ನಿತ್ಯಕಾರ್ಯಗಳಲ್ಲಿ ಶ್ರಾವಕಿಯರಿಗೆ ಸಲಹೆಗಳು:

ಹಾಲು, ನೀರುಗಳನ್ನು ಶೋಧಿಸದೇ ಬಳಸಕೂಡದು. ಏಕೆಂದರೆ ನೀರಿನಲ್ಲಿ ಕಣ್ಣಿಗೆ ಕಾಣದ ತ್ರಸಜೀವಿಗಳಿರುತ್ತವೆ. ಆದುದರಿಂದ ನೀರನ್ನು ಶುದ್ಧಗೊಳಿಸದೇ ಕುಡಿಯುವುದರಿಂದ ಮಾಂಸ ಸೇವನೆ ಮಾಡಿದ ದೋಷವು ತಗುಲುತ್ತದೆ. ಇನ್ನು ನೀರನ್ನು ಶೋಧಿಸಿದ ನಂತರ ಆ ವಸ್ತ್ರವನ್ನು ನೀರನ್ನು ಎಲ್ಲಿಂದ ತೆಗೆದುಕೊಂಡಿರುತ್ತೇವೆಯೋ ಅಲ್ಲಿಯೇ ಶುದ್ಧೀಕರಿಸಬೇಕು. ಇದರಿಂದ ಅದರಲ್ಲಿರುವ ಬಹುಜೀವಿಗಳ ನಾಶವು ತಪ್ಪುತ್ತದೆ. ಇಲ್ಲಿ ವೈಜ್ಞಾನಿಕವಾಗಿ ವಿಚಾರ ಮಾಡಬೇಕಾದ ಅಂಶವಿದೆ. ಅದೇನೆಂದರೆ ನೀರನ್ನು ಶೋಧಿಸಿದ ಬಟ್ಟೆಯನ್ನು ನೀರು ತಂದಲ್ಲಿಯೇ ಶುದ್ಧೀಕರಿಸಿ ಎಂದು ಹೇಳುತ್ತಾನೆ ಕವಿ. ಅದಕ್ಕೆ ಕಾರಣವೆಂದರೆ ಸಾಮಾನ್ಯವಾಗಿ ಒಂದು ಜೀವಿಯು ಒಂದು ಪರಿಸರಕ್ಕೆ ಹೊಂದಿಕೊಂಡಿರುತ್ತದೆ. ಅದೇ ಜೀವಿಯು ಇನ್ನೊಂದು ಪ್ರದೇಶಕ್ಕೆ ಹೋದರೆ ಅಲ್ಲಿನ ಪರಿಸರಕ್ಕೆ ಒಗ್ಗಿಕೊಳ್ಳುವುದು ಕಷ್ಟವೆನಿಸುತ್ತದೆ. ಆ ರೀತಿಯಾಗಿ ನೀರನ್ನು ತಂದು ಶೋಧಿಸಿದಾಗ, ಆ ಬಟ್ಟೆಯಲ್ಲಿ ಉಳಿಯುವ ತ್ರಸ ಜೀವಿಯು ತನ್ನ ಮೂಲ ಪರಿಸರಕ್ಕೆ ಹೊಂದಿಕೊಂಡಷ್ಟು ಇನ್ನೊಂದು ಪರಿಸರಕ್ಕೆ ಹೊಂದಿಕೊಳ್ಳಲಾರದು. ಬೇರೆ ನೀರಿನಲ್ಲಿ ಶುದ್ಧೀಕರಿಸಿದರೆ ಆ ಜೀವಿಗಳು ಸಾಯುವ ಸಾಧ್ಯತೆಯೂ ಇರುತ್ತದೆ. ಆದುದರಿಂದ ಆ ಜೀವಿಗಳನ್ನು ಮೊದಲಿದ್ದ ಪರಿಸರಕ್ಕೆ ಬಿಡುವ ಉದ್ದೇಶದಿಂದ ಕವಿಯು ಅತೀ ಸೂಕ್ಷ್ಮ ವಿಚಾರವನ್ನು ಪ್ರಸ್ತಾಪಿಸುತ್ತಾನೆ.

ಹಾಲನ್ನು ಕರೆಯುವಾಗ ಹಸುವಿಗೆ ಹಿಂಸೆಯಾಗದಂತೆ ಕರೆಯಬೇಕು. ಅನಂತರ ಜೀವ ಹಿಂಸೆಯಾಗದಂತೆ ಹಾಲನ್ನು ಕಾಪಾಡಬೇಕು. ಹಾಲು ಕರೆದ ನಂತರ ಅದನ್ನು ಸೋಸಿ, ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಸ್ವಚ್ಛವಾದ ಪಾತ್ರೆಯನ್ನು ಬಳಸಿ ಕಾಯಿಸಬೇಕು. ತಡವಾದರೆ ಅದರಲ್ಲಿ ಜೀವಗಳು ಹುಟ್ಟುವ ಸಾಧ್ಯತೆಯಿರುತ್ತದೆ. ಕಾಸಿದ ಹಾಲಿನ ಮೇಲೆ ತೆಳುವಾದ ಬಟ್ಟೆಯನ್ನು ಮುಚ್ಚಬೇಕು. ಹಾಲನ್ನು ಹೆಪ್ಪು ಹಾಕಬೇಕಾದರೆ ಮೊಸರು ಅಥವಾ ಮಜ್ಜಿಗೆಯನ್ನು ಬಳಸಬಾರದು, ಅದು ಶುದ್ಧವಾದುದಲ್ಲ. ಆದುದರಿಂದ ಹೆಪ್ಪು ಹಾಕಲು ಮಾದಲ ಹಣ್ಣು ಇಲ್ಲವೇ ಬೆಳ್ಳಿಯ ಕಡ್ಡಿಯನ್ನು ಬಳಸಬೇಕೆಂದು ಉಪದೇಶಿಸುತ್ತಾನೆ.

“ಮೊಸರಂ ಕಡೆವರೆ ತಂಗೀ
ಬಿಸಿನೀರಿಂ ತೊಳೆವುದು ನೀಂ ಕಡೆಗೋಲಿಂ
ಹಸನಾಗಿ ಕಡೆದು ತೊಳೆವುದು
ತ್ರಸವುಂ ಪುಟ್ಟುವವು ತೊಳೆಯದಿರ್ದಡಮೋಘಂ ॥೭೨॥

ಕಡೆದ ಬಳಿಕ್ಕಂ ಬೆಣ್ಣೆಯ
ತಡೆಯದೆ ಒಂದೆರಡು ಘಳಿಗೆಯೊಳಗಂ ತಂಗೀ
ಬಿಡದೆ ಕಾಸುವುದು ನಿಚ್ಚಂ
ಕಿಡುವುದು ತ್ರಸ ಹುಟ್ಟಿ ಬೆಣ್ಣೆ ತಡಮಾಡಿದೊಡಂ ॥೭೩॥”[೩೦೪]

ಮೊಸರನ್ನು ಕಡೆಯುವುದಾದಲ್ಲಿ ಮೊದಲು ಬಿಸಿನೀರಿನಲ್ಲಿ ಕಡೆಗೋಲನ್ನು ತೊಳೆಯಬೇಕು. ಕಡೆದಾದ ಮೇಲೆ ತೊಳೆದರೆ ಅಲ್ಲಿ ತ್ರಸಜೀವಿಗಳು ಹುಟ್ಟುತ್ತವೆ. ಆದುದರಿಂದ ಕಡೆದ ಮೇಲೆ ಕಡೆಗೋಲನ್ನು ಹಾಗೆಯೇ ಇಡಬೇಕು. ಕಡೆದ ಮೇಲೆ ಬಂದ ಬೆಣ್ಣೆಯನ್ನು ತಡಮಾಡದೇ ಒಂದೆರಡು ಘಳಿಗೆಯಲ್ಲಿ ಕಾಯಿಸಬೇಕು ಇಲ್ಲದಿದ್ದರೆ ಅಲ್ಲಿಯೂ ತ್ರಸಜೀವಿಗಳು ಉತ್ಪತ್ತಿಯಾಗುತ್ತವೆ. ಆನಂತರ ಕಾಯಿಸಿದರೆ ಅಗಾಧಪ್ರಮಾಣದ ಜೀವಹಾನಿ ಮಾಡಿದ ಪಾಪವು ಸುತ್ತಿಕೊಳ್ಳುತ್ತದೆ. ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪಗಳು ತಮ್ಮ ಬಣ್ಣ, ವಾಸನೆಯನ್ನು ಕಳೆದುಕೊಂಡರೆ ಅವುಗಳಲ್ಲಿ ತ್ರಸಜೀವಿಗಳು ಹುಟ್ಟಿಕೊಂಡಿವೆ ಎಂದರ್ಥ. ಎಮ್ಮೆ ಅಥವಾ ಹಸು ಕರುಹಾಕಿದ ಮೇಲೆ ಹದಿನೈದು ದಿನಗಳವರೆಗೆ ಅವುಗಳ ಹಾಲನ್ನು ಬಳಸಬಾರದು. ಆ ಹಾಲು ಸೇವಿಸಲು ಯೋಗ್ಯವಲ್ಲ.

“ಜೈನರಲ್ಲದವರ ಮನೆಯಲಿ
ಜೈನರ್ ಕೊಳಲಹುದೆ ಪಾಲು ತುಪ್ಪವ ಮೊಸರಂ
ಜೈನರಲ್ಲಶುದ್ಧ ದುರ್ಲಭ
ಜೈನರುಮಲ್ಲದರ ಮನೆಯ ರಸ ತ್ರಸದಮಯಂ ॥೮೦॥[೩೦೫]

ಜೈನರಲ್ಲದವರ ಮನೆಯಿಂದ ಹಾಲು, ಮೊಸರು, ತುಪ್ಪಗಳನ್ನು ಕೊಳ್ಳುವುದು ತರವಲ್ಲ. ಏಕೆಂದರೆ ಅವುಗಳು ಅಶುದ್ಧವಾಗಿರಬಹುದು. ಅದರಿಂದ ತ್ರಸಸಜೀವಿಗಳು ಸೇರಿಕೊಂಡಿರುವ ಸಾಧ್ಯತೆಯಿರುತ್ತದೆ. ಆದುದರಿಂದ ಅದು ಶುದ್ಧವಾದುದಲ್ಲವೆಂದು ತಿಳಿಯುವುದು. ಮದ್ಯಮಾಂಸಗಳನ್ನು ಸೇವಿಸುವವರು ಹಾಲು, ನೀರುಗಳನ್ನು ಮುಟ್ಟಿದರೆ ಜೈನರು ಅದನ್ನು ತೆಗೆದುಕೊಳ್ಳಬಾರದು. ಒಂದು ವೇಳೆ ತೆಗೆದುಕೊಂಡರೆ ಅದನ್ನು ಸಿದ್ಧಿಕೆಯ ರಸದಿಂದ ಶುದ್ಧೀಕರಿಸಬೇಕು ಎಂದು ಉಪದೇಶಿಸುತ್ತಾನೆ. ಹುಳುಕಾಗಿರುವ ಧಾನ್ಯಗಳನ್ನು ಬೀಸಿ ಆಹಾರಕ್ಕಾಗಿ ಬಳಸಬಾರದು. ಅದರಲ್ಲಿ ಲಕ್ಷಾಂತರ ತ್ರಸಜೀವಿಗಳಿರುತ್ತವೆ. ಅದರಿಂದ ಮಾಂಸಭಕ್ಷಣೆ ಮಾಡಿದ ದೋಷವು ಒದಗುತ್ತದೆ. ಅಲ್ಲದೇ ಬಹುಜೀವಿ ಹಿಂಸೆಗೆ ಕಾರಣವಾಗುತ್ತದೆ. ಗೋಧಿಯ ಹಿಟ್ಟನ್ನು

---

೩೦೪. ಬಿ. ಎಸ್. ಸಣ್ಣಯ್ಯ (ಸಂ); **ಸತಿಧರ್ಮಸಾರ :** ಪುಟ. ೨೦
೩೦೫. **ಅದೇ** ; ಪುಟ. ೨೨

ಬೀಸಿದ ನಾಲ್ಕು ದಿನಗಳವರೆಗೆ ಮಾತ್ರ ಬಳಸಬೇಕು. ಐದನೆಯ ದಿನದಿಂದ ಅದರಲ್ಲಿ ತ್ರಸಜೀವಿಗಳು ಹುಟ್ಟಿಕೊಳ್ಳುತ್ತವೆ. ಒಲೆ ಉರಿಸಲು ಬಳಸುವ ಸೌದೆ, ಬೆರಣಿಗಳನ್ನು ಸರಿಯಾಗಿ ನೋಡಿ ತೆಗೆದುಕೊಳ್ಳಬೇಕು. ಇಲ್ಲವಾದಲ್ಲಿ ಅದರಲ್ಲಿರುವ ಜೀವಿಗಳನ್ನು ಸುಡುವುದರಿಂದ ದೋಷ ತಗುಲುತ್ತದೆ. ಒಬ್ಬರು ಬಳಸುವ ಆಹಾರದ ಪಾತ್ರೆಯನ್ನು ಇನ್ನೊಬ್ಬರ ಬಳಕೆಗೆ ಕೊಡಬಾರದು. ಇದರಿಂದ ಆ ಪಾತ್ರೆಗಳಲ್ಲಿರುವ ಸೂಕ್ಷ್ಮಜೀವಿಗಳಿಗೆ ತೊಂದರೆ ಕೊಟ್ಟಂತಾಗಿ ದೋಷ ತಗುಲುವುದು. ಇನ್ನು ಉಪ್ಪಿನಕಾಯಿಯಲ್ಲಿ ಸಾಕಷ್ಟು ತ್ರಸಜೀವಿಗಳಿರುವುದರಿಂದ ಅದನ್ನು ತಿನ್ನಲೇಬಾರದೆಂದು ಉಪದೇಶಿಸುತ್ತಾನೆ.

೩.೪.೨.೩. ಆತಿಥ್ಯೋಪಚಾರ:

"ಗುರುಗಳು ಬಾವರಿಯಿಂ ಬರೆ
ಹರುಷದಿನಿದಿರ್ವೋಗಿ ನಮಿಸಿ ಬಲಗೊಂಡುಂ ನೀಂ
ವರಜಲದಿ ಉದಕಸಿದ್ಧಿಯ
ಸ್ಥಿರದಿಂ ಕೊಟ್ಟವರ ಕುಳ್ಳಿರಿಸು ತೆಱಪಿನೊಳಂ ॥೧೨೧॥

ಚರಿಗೆಗೆ ಗುರುಗಳು ಬಂದಿರೆ
ಪರಿಹರಿಸುಂ ಕೋಪಗಳನು ನಿಷ್ಠುರವಚನವ
ಅರಸನಲಿ ಸೊಸೆಯರಲಿಯುಂ
ವರಸುತ ಸಂತೆ ದಾಸಿಯರಲಿ ದುರ್ನುಡಿ ಬೇಡಂ॥೧೨೭॥

ಗುರುಗಳ ನಿಲಿಡುವ ಅನುವಂ
ಗುರುಗಳಿಗಂ ಶೋಧಿಸುವದ ಬಡಿಸುವ ಅನುವಂ
ಗುರುಗಳಿಗೆ ವಂದಿಸುವುದಂ
ವರತೆಱದಿಂದಱಿಯದಿರಲು ಜೈನಿತಿಯಲ್ಲಂ ॥೧೨೮॥"[೩೦೬]

ಗುಣಮುನಿಗಳು ಮನೆಗೆ ಆಗಮಿಸಿದಾಗ ಸಕಾಲದಲ್ಲಿ ಮಾಡುವ ದಾನಕ್ಕಿಂತ ಮತ್ತೊಂದು ಪುಣ್ಯವಿಲ್ಲ. ನವವಿಧ ಶುದ್ಧಿಯಿಂದ ಮುನಿಗಳಿಗೆ ಆಹಾರವನ್ನು ನೀಡಿದರೆ ಅಗಣಿತ ಪುಣ್ಯ ಲಭಿಸುವುದು. ಅದರಿಂದ ಮೋಕ್ಷಮಾರ್ಗ ತೆರೆದುಕೊಳ್ಳುವುದು. ಮುನಿಗಳು ಮನೆಗೆ ಬಂದಾಗ ಸಂತಸದಿಂದ ಎದುರುಗೊಂಡು, ಸೂಕ್ತವಾದ ಸ್ಥಳದಲ್ಲಿ ಅವರನ್ನು ಕೂಡ್ರಿಸಿ, ಪಾದಶುದ್ಧಿಮಾಡಿ, ಜಲ, ಗಂಧ, ಅಕ್ಷತೆ, ಚರು, ಪುಷ್ಪ, ದೀಪ, ಧೂಪ, ಫಲಗಳಿಂದ ಅಷ್ಟವಿಧಾರ್ಚನೆ ಮಾಡಿ, ನಮಸ್ಕರಿಸಬೇಕು. ಮುನಿಗಳಿಗೆ ಶುದ್ಧ ಧಾನ್ಯದಿಂದ ಆಹಾರ ತಯಾರಿಸಿ, ನೀಡಬೇಕು. ಮುನಿಗಳು ಆಹಾರ ಸ್ವೀಕರಿಸುವಾಗ ಮನೆಯವರೊಂದಿಗೆ ಮಾತಾಡಕೂಡದು. ಅತೀ ಬಿಸಿಯಾದ ಇಲ್ಲವೇ ತಣ್ಣನೆಯ ಮತ್ತು ಬಿಸಿನೀರನ್ನು ಮಿಶ್ರಮಾಡಿ ಕೊಡಬಾರದು. ಕಾಸಿದ ನೀರನ್ನು ಆರಿಸಿ ಮುನಿಗಳಿಗೆ ನೀಡಬೇಕು. ಚತುರ್ದಾನಗಳಲ್ಲಿ ಆಹಾರದಾನವು ಮಹತ್ವವಾಗಿದೆ. ಆದುದರಿಂದ ಆಹಾರದಾನ ಮಾಡುವಾಗ ಶ್ರದ್ಧೆಯು ಬಹುಮುಖ್ಯವಾದುದು. ಧರ್ಮಕ್ಕಾಗಿ ದಾನ ಮಾಡುವಾಗ

೩೦೬. ಬಿ. ಎಸ್. ಸಣ್ಣಯ್ಯ (ಸಂ) ; **ಸತಿಧರ್ಮಸಾರ** ; ಪುಟ. ೩೩, ೩೫

ದುಃಖಿಸಬಾರದು. ಜಿನ ಪೂಜೆಯ ಜೊತೆಗೆ ಹಲವಾರು ರೀತಿಯಲ್ಲಿ ಸದ್ಧರ್ಮ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಮೋಕ್ಷಮಾರ್ಗಕ್ಕೆ ದಾರಿಯಾಗುತ್ತದೆ ಎಂದು ಕವಿಯು ಉಪದೇಶಿಸುತ್ತಾನೆ.

ಹೀಗೆ ಬಂಧುವರ್ಮನು ತನ್ನ 'ಸತಿಧರ್ಮಸಾರ'ದಲ್ಲಿ ಜೈನ ಶ್ರಾವಕಿಯರಿಗೆ ಸೂಕ್ಷ್ಮ ವಿಚಾರಗಳನ್ನು ಬೋಧಿಸುತ್ತಾನೆ. ಒಬ್ಬ ಅಣ್ಣನಾದವನು ತನ್ನ ತಂಗಿಗೆ ಹೇಗೆ ಶಾಂತವಾಗಿ ಸಮಾಧಾನದಿಂದ ಉಪದೇಶಿಸುತ್ತಾನೋ ಹಾಗೆಯೇ ಬಂಧುವರ್ಮನು ಇಲ್ಲಿ ಸಾಕಷ್ಟು ಕಡೆಯಲ್ಲಿ 'ತಂಗಿ' ಎಂದೇ ಸಂಬೋಧಿಸಿ ಬೋಧಿಸುತ್ತಾನೆ. ಒಟ್ಟಿನಲ್ಲಿ ಸ್ತ್ರೀಯರು ದೈನಂದಿನ ಕಾರ್ಯ ಚಟುವಟಿಕೆಗಳಲ್ಲಿ ಯಾವರೀತಿಯ ಎಚ್ಚರಿಕೆಗಳನ್ನು ವಹಿಸಬೇಕು, ಅಡ್ಡಿ ಆತಂಕಗಳನ್ನು ಹೇಗೆ ನಿವಾರಿಸಿಕೊಳ್ಳಬೇಕೆಂಬ ಉಪದೇಶವನ್ನು ಬಂಧುವರ್ಮನ 'ಸತಿಧರ್ಮಸಾರ'ವು ನೀಡುತ್ತದೆ.

೩.೫. ಬಾಲಚಂದ್ರ ಮುನಿ (೧೨೨೪) :

ಬಾಲಚಂದ್ರಮುನಿಯು 'ದ್ವಾದಶಾನುಪ್ರೇಕ್ಷೆ' ಎಂಬ ಗ್ರಂಥವನ್ನು ಬರೆದಿದ್ದು ಇದು ಕೇವಲ ೧೪ ವೃತ್ತ ಪದ್ಯಗಳನ್ನು ಒಳಗೊಂಡಿದೆ. ಈತನ ಕಾಲ ಸುಮಾರು ಕ್ರಿ.ಶ.೧೨೨೪ ಎಂದು ಊಹಿಸಲಾಗಿದೆ. ಬಾಲಚಂದ್ರ ಮುನಿಯು ಬರೆದಿರುವ 'ದ್ವಾದಶಾನುಪ್ರೇಕ್ಷೆ'ಯಿಂದ ಕೃತಿಯಿಂದ ಆತನ ಕುರಿತಾದ ಯಾವುದೇ ವೈಯಕ್ತಿಕ ವಿಚಾರಗಳು ತಿಳಿಯಲಾರವು. ವಿಜಯಣ್ಣ ಕವಿಯ 'ದ್ವಾದಶಾನುಪ್ರೇಕ್ಷೆ'ಯನ್ನು ಸಂಪಾದಿಸಿರುವ ಕೆ. ಆರ್. ಶೇಷಗಿರಿ ಅವರು ಕೃತಿಯ ಕೊನೆಗೆ ಅನುಬಂಧದಲ್ಲಿ ಬಾಲಚಂದ್ರ ಮುನಿಯ 'ದ್ವಾದಶಾನುಪ್ರೇಕ್ಷೆ'ಯನ್ನು ಉಲ್ಲೇಖಿಸಿದ್ದಾರೆ.

೩.೫.೧. ದ್ವಾದಶಾನುಪ್ರೇಕ್ಷೆ:

ಬಾಲಚಂದ್ರ ಮುನಿಯು ಬರೆದಿರುವ 'ದ್ವಾದಶಾನುಪ್ರೇಕ್ಷೆ'ಯಲ್ಲಿ ಕೇವಲ ೧೪ ವೃತ್ತಗಳಿವೆ. ಕೃತಿಯು ಉತ್ಪಲಮಾಲೆಯಲ್ಲಿದೆ. ಕೆಲವು ವೃತ್ತಗಳು ತೃಟಿತವಾಗಿವೆ. ಪ್ರತಿ ವೃತ್ತದ ಕೊನೆಯಲ್ಲಿಯೂ 'ಜಿನೇಶ್ವರಾ' ಎಂಬ ಅಂಕಿತವಿದೆ. ಕೃತಿಯ ಮೊದಲನೆಯ ವೃತ್ತದಲ್ಲಿ ಘಾತಿಕರ್ಮಗಳನ್ನು ನಾಶಪಡಿಸಿ, ತ್ರಿಲೋಕಗಳಲ್ಲಿ ಸೌಖ್ಯಸಂಪಾದನಾತ್ಮಕವಾದ ಆತ್ಮಕಲ್ಯಾಣವನ್ನು ಬೋಧಿಸುವ ಅನುಪ್ರೇಕ್ಷೆಗಳನ್ನು ತಿಳಿಸುವುದಾಗಿ ಹೇಳಿಕೊಂಡಿದ್ದಾನೆ. ಎರಡರಿಂದ ೧೩ನೇ ವೃತ್ತ, ಅಂದರೆ ಒಟ್ಟು ೧೨ ವೃತ್ತಗಳಲ್ಲಿ ಹನ್ನೆರಡು ಅನುಪ್ರೇಕ್ಷೆಗಳನ್ನು ಬೋಧಿಸುತ್ತಾನೆ. ಬಂಧುವರ್ಮ ವಿರಚಿತ 'ಜೀವಸಂಬೋಧನಂ' ಕೃತಿಯ ಅಧ್ಯಯನದ ಸಂದರ್ಭದಲ್ಲಿ ವಿಸ್ತೃತವಾಗಿ ದ್ವಾದಶಾನುಪ್ರೇಕ್ಷೆಗಳ ಕುರಿತಾಗಿ ವಿಶ್ಲೇಷಿಸಿರುವುದರಿಂದ ಇಲ್ಲಿ ಬಾಲಚಂದ್ರ ಮುನಿಯ ಕೆಲವು ವೃತ್ತಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ.

> **"ಬೇಡಿದ ಭಂಗಿಯಿನ್ನೆರಪಿದೆನ್ನ ಧನಂ ನವರತ್ನ ಸಂಚಯಂ**
> **ನಾದೆ ಮನಕ್ಕೆ ಬರ್ಪ ವನಿತಾನಿಕರಂ ಕಮನೀಯ ಯೌವನಂ**
> **ನೋಡೊಡಲೆಂಬಿವಾವ ತೆಱದಿಂ ಕಿಡುಗುಂ ಕಿಡದೊಪ್ಪುವಾತ್ಮನೊ**
> **ಳ್ಕೊ...................ಮಂ ಗುಣ ಗುಣೋತ್ತಮಮಂ ದಯೆಗೆಯ್ ಜಿನೇಶ್ವರಾ ॥೦೨॥**

ಬೇಱಿ ಶರೀರಮುಂ ದುರಿತಮುಂ ದುರಿತೋದಯ ಹೇತುಮಪ್ಪುವುಂ
ಬೇಱಿನೆ ಪುತ್ರ ಮಿತ್ರ ವನಿತಾತತಿ ಭಾವಿಪೊಡಾವ ಭಂಗಿಯುಂ
ಬೇಱಿ ದಿಶಕ್ಕೆ ತಾನೆನಗೆಂಬಱಿವಂ ಮೆಱಿವಾತ್ಮತತ್ತ್ವಮಂ
ತೋಱುವುದೇನು ಮತ್ತೆನಗೆ ನೀನಿರೆ ತೋಱುವರಾರ್ ಜಿನೇಶ್ವರಾ ॥೦೫॥

ಲೋಕದ ಮೇಗಣಿಂ ಕೆಳಗು ಮುಟ್ಟಿವಿನಂ ಪದಿನಾಲ್ಕು ರಜ್ಜು ನಿ
ರ್ವ್ಯಾಕುಳಮೊಂದು ನೀಮಯ್ದು ನಡುವೊಂತಳೆವೇಳ್ಸಲೆ ವಾಯುಮೇಷ್ಟಿತಂ
ಲೋಕಮನೇಕ ಜೀವನಿವಹಕ್ಕೆಡೆಯಾಯ್ತುದಱಿೊಳ್ವಿಶಿಷ್ಠ ಸೌ
ಖ್ಯಾಕರಮಾತ್ಮ ತತ್ತ್ವಮತಿಶುದ್ಧಮದಂ ದಯಗೆಯ್ ಜಿನೇಶ್ವರಾ ॥೦೭॥

ನಿರ್ಜರೆ ಸರ್ವಜೀವತತಿಗಂ ದುರಿತೋದಯದಿಂದಮಕ್ಕುಮಾ
ನಿರ್ಜರೆ ದೇಶನಿರ್ಜರೆಯೆನಿಪ್ಪುದು ತಾನೆ ನಿಜಾತ್ಮನೊಳ್ನಿಲಲ್
ನಿರ್ಜರೆ ಸರ್ವನಿರ್ಜರೆಯೆನಿಪ್ಪುದರಿಂದಱಿದಾತ್ಮ ಕರ್ಮಮಂ
ನಿರ್ಜರಿಸಲ್ಕೆ ಹೇತು ನಿಜಶುದ್ಧಮದಂ ದಯೆಗೆಯ್ ಜಿನೇಶ್ವರಾ ॥೧೧॥

ಏನಱಿಯುಂಟೆ ಬೇ............ಶುದ್ಧದೊಳಾದ ಭೇದಮಂ
ತಾನಱಿಯುತ್ತಮಿರ್ಪಿರವು ಬೋಧಿಯುಮೆಂದಱಿದಾತ್ಮತತ್ತ್ವಮಂ
ಧ್ಯಾನಿಸಿ ಕರ್ಮಮಂ ಕಿಡಿಸಿ ಮುಕ್ತಿಗೆ ಸಲ್ವ ನಿಜಸ್ವರೂಪಮಂ
ನೀನಱಿದೀವುದಾವುದುಮದೇವುದು ಪೇಳೆನಗಂ ಜಿನೇಶ್ವರಾ ॥೧೩॥

ಆದುದು ಬಾಳಚಂದ್ರ ಮುನಿವಾಕ್ಯದೊಳಾಗಮದೋಜೆಯಿಂದಮೀ
ದ್ವಾದಶಭೇದಮುಂ ಜಿನಗುಣಸ್ತವನಂಗಳೇನಾತ್ಮತತ್ತ್ವಸಂ
ಪಾದನ ಹೇತುವಪ್ಪುವಿವನೋದಿಸುವೋದುವ ಕೇಳುತಿರ್ಪವಂ
ಗಾದರದಿಂದ ಮಾಡುವುದು ಮುಕ್ತಿಯನಕ್ಷಯಮಂ ಜಿನೇಶ್ವರಾ ॥೧೪॥"[೩೦೭]

(ಬಾಲಚಂದ್ರ ಮುನಿಯ ದ್ವಾದಶಾನುಪ್ರೇಕ್ಷೆಯಿಂದ)

ಹೀಗೆ ಬಾಲಚಂದ್ರ ಮುನಿಯು ತನ್ನ ದ್ವಾದಶಾನುಪ್ರೇಕ್ಷೆ ಕೃತಿಯಲ್ಲಿ ಕ್ರಮವಾಗಿ ಅನಿತ್ಯ, ಅಶರಣ, ಸಂಸಾರ, ಏಕತ್ವ, ಅನ್ಯತ್ವ, ಲೋಕ, ಆಸ್ರವ, ಸಂವರ, ನಿರ್ಜರ, ಬೋಧಿದುರ್ಲಭ ಹಾಗೂ ಧರ್ಮಾನುಪ್ರೇಕ್ಷೆಗಳನ್ನು ಬೋಧಿಸಿದ್ದಾನೆ.

೩.೬. ಆಯತವರ್ಮ (೧೪೦೦) :

ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ "ಈತನು ರತ್ನಕರಂಡಕವನ್ನು ಬರೆದಿದ್ದಾನೆ. ಇವನು ಜೈನಕವಿ; ವರ್ಧಮಾನ ಸಿದ್ಧಾಂತದೇವನ ಶಿಷ್ಯನು. ಇವನ ವಿಷಯವಾಗಿ ಇವನ ಗ್ರಂಥದಿಂದ ಇನ್ನೇನೂ ತಿಳಿಯುವುದಿಲ್ಲ. ಇವನ ಕಾಲವನ್ನು ನಿಶ್ಚಯಿಸುವುದಕ್ಕೂ ಸರಿಯಾದ ಆಧಾರವಿಲ್ಲ; ಸುಮಾರು ೧೪೦೦ ಇದ್ದಿರಬಹುದೆಂದು ತೋರುತ್ತದೆ."[೩೦೮] ಎಂದು ಆಯತವರ್ಮನ ಕಾಲದ ಕುರಿತಾಗಿ ಊಹಿಸುತ್ತಾರೆ. ಈತನ 'ರತ್ನಕರಂಡಕ' ಗ್ರಂಥವು ಚಂಪೂರೂಪದಲ್ಲಿದೆ. ಆಯತವರ್ಮನು ತನ್ನ ಕೃತಿಗೆ ಆಕರ ಯಾವುದೆಂದು ಎಲ್ಲಿಯೂ

೩೦೭. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ** : ಪುಟ. ೨೫೯

೩೦೮. ಆರ್. ನರಸಿಂಹಾಚಾರ್ ; **ಕರ್ಣಾಟಕ ಕವಿಚರಿತೆ ಪ್ರಥಮ ಸಂಪುಟ** : ಪು. ೫೧೭

ಉಲ್ಲೇಖ ಮಾಡಿರುವುದಿಲ್ಲ. ಆದರೆ ಈ ಕೃತಿಯನ್ನು ಶ್ರೀ ಸಮಂತಭದ್ರಾಚಾರ್ಯದೇವರ ಸಂಸ್ಕೃತ 'ರತ್ನಕರಂಡಕ ಶ್ರಾವಕಾಚಾರ'ವನ್ನು ಅನುಸರಿಸಿ ರಚಿತವಾಗಿದೆ ಎಂದು ವೇದ್ಯವಾಗುತ್ತದೆ. ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರಗಳನ್ನು ನಿರೂಪಿಸುವ ಮೂರು ಪರಿಚ್ಛೇದಗಳಿವೆ. ಇದರಲ್ಲಿ ಲೋಕಸ್ವರೂಪ, ಜಂಬೂದ್ವೀಪ, ಅದರಲ್ಲಿರುವ ವಿವಿಧ ಪ್ರದೇಶಗಳು, ಕುಲ ಪರ್ವತಗಳು, ಮಹಾನದಿಗಳು, ಕಾಲಗಳು, ಚತುರ್ಗತಿ ಜೀವಗಳು, ಲೋಕಗಳ ವಿಭಾಗಗಳು ಮುಂತಾದ ಅಂಶಗಳನ್ನು ಕವಿಯು ನಿರೂಪಿಸಿದ್ದಾನೆ. ಈಗಾಗಲೇ ಇದೇ ಅಧ್ಯಾಯದಲ್ಲಿ ದಿವಾಕರಣಂದಿಯ 'ತತ್ತ್ವಾರ್ಥ ಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯನ್ನು ಅಧ್ಯಯನ ಮಾಡುವಾಗ ಈ ಅಂಶಗಳನ್ನು ಸುದೀರ್ಘವಾಗಿ ಚರ್ಚಿಸಲಾಗಿದೆ. ಆದುದರಿಂದ ವಿಷಯ ಪುನರುಕ್ತಿಯ ಕಾರಣವಾಗಿ ಇಲ್ಲಿ ವಿಷಯವನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

೩.೬.೧. ರತ್ನ ಕರಂಡಕ:

ಶ್ರೀವೃಷಭ ಜಿನೇಂದ್ರರಾದಿಯಾಗಿ ಮಹಾವೀರರವರೆಗೆ ೨೪ ತೀರ್ಥಂಕರರನ್ನು ಸ್ಮರಿಸಿಕೊಂಡು ಗ್ರಂಥಾರಂಭ ಮಾಡುತ್ತಾನೆ. ಅಂತೆಯೇ ಮಂಗಳಾರ್ಥವಾಗಿ ಇಷ್ಟದೇವತೆಗೆ ನಮಸ್ಕರಿಸಿ, ಧರ್ಮಧ್ಯಾನಾರ್ಥಕ್ಕಾಗಿ ಭವ್ಯಪ್ರಾಣಿಗಳಿಗೆ ಹಿತವೆನಿಸುವಂತೆ ರತ್ನಕರಂಡಕವೆಂಬ ಪರಮಾಗಮ ಗ್ರಂಥವನ್ನು ಅಗಾರಿಗಳು, ಅನಗಾರಿಗಳಿಗೆ ಧರ್ಮಸ್ವರೂಪವನ್ನು ಅರಿತುಕೊಂಡಷ್ಟು "ಕಿರಿದಂ ಪೇಳ್ವೆನೆಂತೆಂದೊಡೆ ಸಮ್ಯಗ್ದರ್ಶನ ಜ್ಞಾನಚಾರಿತ್ರಾಣಿ ಧರ್ಮಾಃ ಎಂಬುದು ಸರ್ವಜ್ಞಭಾಷಿತಂ"[೩೦೯] ಉಕ್ತಿಯನ್ನು ಪುನರುಚ್ಚರಿಸುತ್ತಾನೆ.

ಜೈನಧರ್ಮವು ವೈದಿಕಧರ್ಮಕ್ಕಿಂತಲೂ ಭಿನ್ನವಾಗಿದ್ದು, ಇದರಲ್ಲಿ ಶ್ರಾವಕಧರ್ಮ ಮತ್ತು ಶ್ರಮಣಧರ್ಮಗಳು ಎಂದು ಎರಡು ವಿಧಗಳಿದ್ದು, ಅವುಗಳೇ ಜೈನಧರ್ಮಗಳ ಆಧಾರಸ್ತಂಭಗಳಾಗಿವೆ ಎಂಬ ವಿಷಯವನ್ನು ಈಗಾಗಲೇ ಈ ಅಧ್ಯಾಯದ ಆರಂಭದಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲದೇ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ'ಯನ್ನು ಅಧ್ಯಯನ ಮಾಡುವಲ್ಲಿ ಅಗಾರಿಗಳು, ಅನಗಾರಿಗಳು ವಿಷಯಗಳಲ್ಲಿ 'ಶ್ರಾವಕ' ಅಂದರೆ ಗೃಹಸ್ಥ, 'ಶ್ರಮಣ' ಅಂದರೆ ಮುನಿಗಳ ವಿಚಾರವಾಗಿ ಚರ್ಚಿಸಲಾಗಿದೆ. ಆದರೆ ಇಲ್ಲಿ ಶ್ರಾವಕನೆಂದರೆ ಯಾರು? ಅವನು ಹೇಗಿರಬೇಕು? ಅವನು ಆಚರಿಸಬೇಕಾದ ವ್ರತಗಳು ಯಾವುವು? ಎಂಬ ವಿಚಾರಗಳನ್ನು ಕವಿಯು ತನ್ನ 'ರತ್ನಕರಂಡಕ' ಗ್ರಂಥದಲ್ಲಿ ಒಡಮೂಡಿಸಿದ್ದಾನೆ.

"ತತ್ವದ ರುಚಿ ಸಮ್ಯಕ್ತ್ವಂ
ತತ್ವಂಗಳನೊಳ್ಪಿತಾಗಿಯರಿವುದು ಬೋಧ
ತತ್ವಂ ತನ್ನೊಳ್ ನೆರೆದಿರೆ
ಸತ್ವಂಗಳನೋವಿ ಕಾವುದದುವೆ ಚರಿತ್ರಂ ॥೧.೦೨॥"[೩೧೦]

೩೦೯. ಡಾ. ವೈ. ಸಿ. ಭಾನುಮತಿ (ಸಂ): **ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು** : ಪುಟ. ೧
೩೧೦. **ಅದೇ** ; ಪುಟ. ೧

ತತ್ತ್ವದ ರುಚಿಯೇ ಸಮ್ಯಕ್ತ್ವವು. ಅದನ್ನು ಅರಿತುಕೊಳ್ಳುವುದೇ ಬೋಧ. ಅರಿತುಕೊಂಡ ತತ್ತ್ವಗಳಿಗೆ ಕುಂದುಬರದಂತೆ ತನ್ನಲ್ಲಿ ನೆಲೆಗೊಳ್ಳುವಂತೆ ಮಾಡುವುದೇ ಸತ್ವ. ನೆಲೆಗೊಂಡ ತತ್ತ್ವಗಳನ್ನು ಜೋಪಾನವಾಗಿ ಕಾಯ್ದುಕೊಳ್ಳುವುದೇ ಚಾರಿತ್ರ. ಅದುವೇ ಮೋಕ್ಷಪುರಕ್ಕೆ ಸಾಗಲು ಇರುವ ಮೆಟ್ಟಿಲುಗಳು ಎಂಬುದು ಕವಿಯ ಅಭಿಪ್ರಾಯವಾಗಿದೆ. ಅಂತೆಯೇ ಅಷ್ಟಮದಗಳನ್ನು, ತ್ರಿಮೂಢತ್ವಗಳನ್ನು ಕಳೆದುಕೊಂಡು ವಿಶುದ್ಧನಾಗುವುದೇ ಸಮ್ಯಕ್ತ್ವವಾಗಿದೆ. ತತ್ತ್ವಾರ್ಥಸೂತ್ರದಲ್ಲಿ ಹೇಳುವಂತೆಯೇ ಇಲ್ಲಿಯೂ ಸಮ್ಯಕ್ತ್ವವು ನಿಸರ್ಗದತ್ತವಾಗಿ ಇಲ್ಲವೇ ಬೋಧನೆಯಿಂದಾಗಲೀ ಲಭಿಸುತ್ತದೆ ಎಂದು ಕವಿಯು ಹೇಳುತ್ತಾನೆ.

ಮದ, ರಾಗ, ದ್ವೇಷಗಳು ಮೊದಲಾಗಿ ಹದಿನೆಂಟು ದೋಷರಹಿತನಾಗಿರುವ ಪರಮಾತ್ಮನೇ ಸರ್ವಜ್ಞನಾಗಿರುವನು. ಇನ್ನು ರಾಗ, ದ್ವೇಷಾದಿಗಳನ್ನು ಒಳಗೊಂಡವರೆಲ್ಲ ಸಂಸಾರಿಗಳು. ತ್ರೈಲೋಕ್ಯಹಿತವೆನಿಸಿದ ಅಹಿಂಸೆ, ಸತ್ಯ, ದಯಾಮೂಲವೆನಿಸಿದ ಧರ್ಮಕ್ಕೆ ಕೇಡಾಗದಂತೆ ಪರಿಪಾಲಿಸುವುದು. ಇನ್ನು ವ್ರತವನ್ನೇ ಸಂಪತ್ತೆಂದು ತಿಳಿದುಕೊಂಡು, ಪಂಚಸಮಿತಿ, ತ್ರಿಗುಪ್ತಿ, ತ್ರಿದಂಡ,[೩೧೧] ತ್ರಿಶಲ್ಯ,[೩೧೨] ತ್ರಿಗಾರವ,[೩೧೩] ತ್ರಿಮೂಢರಹಿತನಾಗಿ ಹನ್ನೆರಡು ವಿಧದ ತಪಗಳಲ್ಲಿ ತೊಡಗಿಸಿಕೊಂಡು, ಚಾರಿತ್ರ ಸಮೇತನಾಗಿ ದಶಧರ್ಮಗಳನ್ನೇ ದೋಣಿಯಾಗಿಸಿಕೊಂಡು ಸಂಸಾರ ಸಾಗರವನ್ನು ದಾಟಬಯಸುವವನೇ ತಪಸ್ವಿ ಎನಿಸಿಕೊಳ್ಳವನು. ಈ ರೀತಿಯಲ್ಲಿ ಸಂಸಾರ ಸಾಗರವನ್ನು ದಾಟಬಯಸುವವನು ಕಡ್ಡಾಯ ವ್ರತಪಾಲನೆಯನ್ನು ಮಾಡಲೇಬೇಕು. ಅವುಗಳೇ ಅಣುವ್ರಗಳು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹವೆಂಬ ಐದು ಅಣುವ್ರತಗಳು. ಈ ಅಣುವ್ರತಗಳನ್ನು ಅಗಾರಿ ಹಾಗೂ ಅನಗಾರಿಗಳು ಚಾಚೂ ತಪ್ಪದಂತೆ ಪರಿಪಾಲಿಸಬೇಕು. ಮಿಥ್ಯಾತ್ವಗಳಿಂದ ಮುಕ್ತನಾಗಿರಬೇಕು. ಅಷ್ಟಮದಗಳನ್ನು ಬಿಡಬೇಕು. ತಾನೇ ಬಹುಶ್ರುತ ಎಂದುಕೊಳ್ಳುವುದು ಜ್ಞಾನಮದ. ತನಗೆ ಸಮನಾದ ಪೂಜ್ಯರಿಲ್ಲ ಎಂಬುದು ಪೂಜಾಮದ. ತನ್ನಂಥ ಕುಲಜರಿಲ್ಲ ಎಂಬುದು ಕುಲಮದ. ತಾನೇ ಶುದ್ಧಜಾತಿ ಎಂಬುದು ಜಾತಿಮದ. ತಾನೇ ವೀರ್ಯವಂತ ಎಂಬುದು ಸತ್ವಮದ. ತನಗಿಂತ ಸಿರಿವಂತರಿಲ್ಲ ಎಂಬುದು ಸಿರಿಮದ. ತನಗಿಂತ ಚೆಲುವರಿಲ್ಲ ಎಂಬುದು ರೂಪಮದ. ಇವುಗಳನ್ನೆಲ್ಲನ್ನೂ ವಿನಯವೆಂಬ ಜಲವರ್ಷದಿಂದ ಗೆಲ್ಲಬೇಕು.

"ಶ್ರಾವಕಾಚಾರವು ರತ್ನತ್ರಯಗಳಾದ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ್ಯಗಳ ಮೇಲೆ ನಿಂತಿದೆ. ಜೈನಧರ್ಮವು ಶ್ರಾವಕನಿಂದ ದೇವಪೂಜೆ, ಗುರೂಪಾಸನೆ, ಸ್ವಾಧ್ಯಾಯ ಮತ್ತು

---

೩೧೧. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ :** ಪುಟ. ೧೫೩ **ತ್ರಿದಂಡ** = ಕಾಯದಂಡ, ಮನೋದಂಡ, ವಾಕ್‌ದಂಡಗಳೆಂಬ ಮೂರುವಿಧವಾದ ಪಾಪಕ್ಕೆ ಕಾರಣವಾಗುವ ಪ್ರವೃತ್ತಿಗಳು.

೩೧೨. **ಅದೇ** ; ಪುಟ. ೧೫೫. **ತ್ರಿಶಲ್ಯ** = ವ್ರತ ಪಾಲನೆಯನ್ನು ಅಡ್ಡಿಪಡಿಸುವ ಮಿಥ್ಯೆ, ಮಾಯೆ, ನಿದಾನಗಳು ಎಂಬ ಮೂರು ರೀತಿಯ ದುಷ್ಪರಿಣಾಮಗಳು.

೩೧೩. **ಅದೇ** ; ಪುಟ. ೧೫೩. **ತ್ರಿಗಾರವ** = ಋದ್ಧಿಗಾರವ, ರಸಗಾರವ, ಸಾತಾಗಾರವ ಎಂಬ ಮೂರು ರೀತಿಯ ಅಹಂಕಾರಗಳು.

ಸಂಯಯಗಳೆಂಬ ಕರ್ತವ್ಯಗಳನ್ನು ನಿರೀಕ್ಷಿಸುತ್ತದೆ. ಶ್ರಾವಕಾಚಾರಗಳನ್ನು ಆತನನ್ನು ಈ ನಿಟ್ಟಿನಲ್ಲಿ ಪುಷ್ಠಿಗೊಳಿಸುತ್ತವೆ. ಅಹಿಂಸೆಯೇ ಜೈನ ಧರ್ಮದ ಜೀವಾಳ. ಆದುದರಿಂದ ಶ್ರಾವಕಾಚಾರಗಳು ಅಹಿಂಸೆಯನ್ನು ಹೆಜ್ಜೆಹೆಜ್ಜೆಗೂ ಪ್ರತಿಪಾದಿಸುತ್ತವೆ. ಹೀಗಾಗಿ ಶ್ರಾವಕರು ಆಹಾರಕ್ರಮದಲ್ಲಿ ಬಹಳ ಕಟ್ಟುನಿಟ್ಟಾಗಿರಬೇಕಾಗುತ್ತದೆ. ಅಡುಗೆಗಾಗಿ ಬಳಸುವ ಹಿಟ್ಟನ್ನು ಬೇಸಿಗೆಯಲ್ಲಿ ಏಳು ದಿನ, ಮಳೆಗಾಲದಲ್ಲಿ ಐದು ದಿನ ಮತ್ತು ಚಳಿಗಾಲದಲ್ಲಿ ಕೇವಲ ಮೂರು ದಿನ ಮಾತ್ರ ಬಳಸಬೇಕೆಂಬುದು ನಿಯಮ. ಇಲ್ಲವಾದಲ್ಲಿ ತ್ರಸಜೀವಿಗಳು ಉತ್ಪತ್ತಿಯಾಗಿ ಅವುಗಳಿಗೆ ಹಿಂಸೆಯಾಗುತ್ತದೆ. ಮನ, ವಚನ, ಕಾಯಗಳಿಂದ ಕೊಲೆ, ಕಳುವು ಮುಂತಾದ ಪಾತಕಗಳನ್ನು ಮಾಡಬಾರದೆಂಬುದು ಶ್ರಾವಕಾಚಾರದ ನಿಯಮ."[೩೧೪] ಸಮ್ಯಕ್‌ದರ್ಶನ ಶುದ್ಧನಾದ ಮನುಷ್ಯನು ದೇವನೆನಿಸಿಕೊಳ್ಳುತ್ತಾನೆ. ಸಮ್ಯಕ್ತ್ವವಿಲ್ಲದ ಮುನಿಗಿಂತ ಸಮ್ಯಕ್ತ್ವ ಹೊಂದಿರುವ ಸಾಮಾನ್ಯ ಗೃಹಸ್ಥ ಶ್ರೇಷ್ಠನೆನಿಸಿಕೊಳ್ಳುತ್ತಾನೆ. ಸಮ್ಯಕ್‌ದರ್ಶನದಿಂದ ಮಾನವನು ಸ್ವರ್ಗಸುಖವನ್ನು ಅನುಭವಿಸುತ್ತಾನೆ. ಮುಂದೆ ಭೂಮಿಯಲ್ಲಿ ಹುಟ್ಟಿ, ಚಕ್ರವರ್ತಿಯಾಗಿ ಸಾಮ್ರಾಜ್ಯ ಸುಖವನ್ನು ಅನುಭವಿಸಿ ತೀರ್ಥಂಕರನಾಗಿ ಧರ್ಮಚಕ್ರವನ್ನು ಗಳಿಸುತ್ತಾನೆ. ವಸ್ತುವಿನ ಯಥಾವತ್ ಸ್ವರೂಪವನ್ನು ತಿಳಿಸುವುದು ಸಮ್ಯಕ್‌ಜ್ಞಾನ.

ಪ್ರಸ್ತುತ ಗ್ರಂಥದ ಮೊದಲೆರಡು ಅಧ್ಯಾಯಗಳು ಲೋಕಸ್ವರೂಪ ಮತ್ತು ಜೀವಿಗಳ ಹುಟ್ಟು ಬೆಳವಣಿಗೆ, ಚತುರ್ಗತಿ ಮುಂತಾದ ವಿಷಯಗಳನ್ನು ನಿರೂಪಿಸಿದರೆ, ಕೊನೆಯ ಅಧ್ಯಾಯವು ಶ್ರಾವಕಾಚಾರಗಳಿಗೆ ಸೀಮಿತವಾಗಿದೆ. ಇಲ್ಲಿ ಪಂಚಾಣುವ್ರತಗಳು ಮತ್ತು ಅವುಗಳಿಗೆ ಅತಿಚಾರಗಳನ್ನು ಹೇಳುತ್ತಾನೆ. ಇವುಗಳನ್ನು ನಿಷ್ಠೆಯಿಂದ ಪರಿಪಾಲಿಸಿಕೊಂಡು, ಕೊನೆಯಲ್ಲಿ ಸಲ್ಲೇಖನದೊಂದಿಗೆ ಸಮಾಧಿಮರಣವನ್ನು ಹೊಂದುವುದು ಶ್ರಾವಕಾಚಾರಗಳ ತಿರುಳಾಗಿದೆ. ಶ್ರಾವಕರಲ್ಲಿ ಪಾಕ್ಷಿಕ ಶ್ರಾವಕರು ಹಾಗೂ ನೈಷ್ಠಿಕ ಶ್ರಾವಕರು ಎಂದು ಎರಡು ಭೇದಗಳನ್ನು ಹೇಳುತ್ತಾನೆ ಕವಿ.

"ಎಸಗಿ ಮಸಗಿ ಪರಿವ ಪಾರುವ ಪ್ರಾಣಿಗಳಂ ದೇವತೆ ಕಾರಣಮಾಗಿಯುಂ ನಂಟರ್ಕಾರಣಮಾಗಿಯುಂ ಪಿತರ್ಕಾರಣಮಾಗಿಯುಂ ಮಂತ್ರ ಕಾರಣಮಾಗಿಯುಂ ಔಷಧಂ ಕಾರಣಮಾಗಿಯುಂ ಭಯಂ ಕಾರಣಮಾಗಿಯುಂ ವಿನೋದ ಕಾರಣಮಾಗಿಯುಂ ಮನೋವಚನ ಕಾಯಗಳಿಂ ಕೊಲ್ಲದುದುಂ ಕೊಲಿಸದುದುಂ ಕೊಲೆಗೊಡಂಬದುದುಮಿದು ಮೊದಲಣು ಬ್ರತಮದಕ್ಕೆ ಛೇದನ ಬಂಧನ ಪೀಡನ ಅತಿಭಾರಾರೋಪಣಾನ್ನಪಾನ ನಿರೋಧಂಗಳೆಂದಯ್ದು ಅತಿಚಾರಮಕ್ಕುಮವನಾಗಲೀಯದುದು ಕೊಲ್ಲದ ಬ್ರತಮೆಂಬ ತೊತ್ತು ಮೊದಲಾಗೊಡೆಯ ಜೀವ ಕಿವಿ ಮೂಗು ಮೊದಲಾಗೊಡೆಯವನಂಗಚ್ಛೇದಂ ಮಾಳ್ಪುದು ಛೇದನಂ ಸಂಕಲೆ ನೇಣ್ಮೊದ ಲಾಗೊಡೆಯವರೊಳು ಬಂಧಿಸುವುದು ಬಂಧನಂ ಬಡಿಗೆ ಚಮ್ಮಟಿಗೆ ಮೊದಲಾಗೊಡೆಯವರೊಳು ಪೀಡಿಸುವುದುಂ ಪೀಡನಂ ಅಳವಿಯಲ್ಲದ ಪೊರೆಯ ಪೊಸುವುದತಿ ಭಾರಾರೋಪಣಂ ಉಂಡ ಪೊತ್ತರೊ..."[೩೧೫]

---

೩೧೪. ನೇಮಿನಾಥ ತಪಕೀರೆ (ಲೇ) : **ಲೇಖನ – ಜೈನ ಧರ್ಮದಲ್ಲಿ ಶ್ರಾವಕಾಚಾರಗಳು** : (International Journal of Kannada research ISSN: 2454–5813 IJKR 2018; 4(1): 26-28)

೩೧೫. ಡಾ. ವೈ. ಸಿ. ಭಾನುಮತಿ (ಸಂ); **ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು** : ಪುಟ. ೪೧

ಅಹಿಂಸಾಣುವ್ರತ:

ಅರಿತೋ, ಅರಿಯದೆಯೋ ಪ್ರಾಣಿಗಳನ್ನಾಗಲೀ, ಪಕ್ಷಿಗಳನ್ನಾಗಲೀ ದೇವತೆಗಳ ಹೆಸರಿನಲ್ಲಿಯೋ, ಬಂಧುಗಳ ಹೆಸರಿನಲ್ಲಿಯೋ, ಹಿರಿಯರ ಕಾರಣವಾಗಿಯೋ, ಮಂತ್ರ ಕಾರಣವಾಗಿಯೋ, ಔಷಧಕ್ಕಾಗಿಯೋ, ಭಯದಿಂದಾಗಿಯೋ, ವಿನೋದಕ್ಕಾಗಿಯೋ, ಮನೋ, ವಚನ, ಕಾಯಗಳಿಂದ ಕೊಲ್ಲದಿರುವುದು, ಕೊಲ್ಲಿಸದಿರುವುದು, ಕೊಲ್ಲಲು ಅನುಮತಿಸದಿರುವುದು ಅಹಿಂಸೆ ಎನಿಸಿಕೊಳ್ಳುತ್ತದೆ. ಛೇದನ, ಬಂಧನ, ಪೀಡನ, ಅತಿಭಾರಾರೋಪಣ, ಅನ್ನಪಾನ ನಿರೋಧ ಎಂದು ಐದು ರೀತಿಯ ಅಹಿಂಸೆಯ ಅತಿಚಾರಗಳುಂಟು.

ಸತ್ಯಾನುವ್ರತ:

"ಪುಸಿ ನುಡಿಯದುದುಂ
ಪುಸಿನುಡಿಯಿಸದುದುಮೊಡಂಬಡದುದುಂ ಅಧಿಕಂ
ಪುಸಿನುಡಿ ಪೆಂಪೊಡ
ರಿಸೆ ತಾನದು ಮುನಿನುಡಿಯೆ ಪುಸಿಯ ತೊರವಿಯಕ್ಕು ॥೩.೪॥"[೩೧೬]

ಕ್ರೋಧದಿಂದಾಗಲೀ, ಲೋಭದಿಂದಾಗಲೀ, ದ್ವೇಷದಿಂದಾಗಲೀ, ಮೋಹದಿಂದಾಗಲೀ, ಮದದಿಂದಾಗಲೀ ಜೀವಿಗಳಿಗೆ ಸಾವು–ನೋವುಂಟಾಗುವಂತೆ ಸುಳ್ಳು ಹೇಳಬಾರದು. ಇನ್ನೊಂಬರಿಂದ ಸುಳ್ಳು ಹೇಳಿಸಬಾರದು. ರಹೋಭಾಖ್ಯಾನಂ, ಪೈಶೂನ್ಯ, ಕೂಟಲೇಖಕ್ರಿಯೆ, ನ್ಯಾಸಾಪಹಾರ ಎಂಬಿವು ಸತ್ಯವ್ರತದ ಅತಿಚಾರಗಳು.

ಅಚೌರ್ಯವ್ರತ:

"ಪರಧನಮಂ ಪೆರರಿಂದಂ
ಪರಿಹರಿಸಲ್ಪಡದುದಂ ಪೆರ್ೞಯದುದಾ
ದರದಿಂ ತಾಂ ಕೊಳ್ಳದುದುಂ
ನಿರುತಂ ಪಿರಿದಪ್ಪ ಕಳವನೊಲ್ಲದ ನಿಯಮಂ॥೩.೦೫॥"[೩೧೭]

ಬಯಲು ಪ್ರದೇಶದಲ್ಲಿಯೋ, ದಾರಿಯಲ್ಲಿಯೋ ಬಿದ್ದಿರುವ, ಮರೆತು ಹೋಗಿರುವ, ಬಚ್ಚಿಟ್ಟಿರುವ ವಸ್ತುಗಳನ್ನು ನೋಡುವುದು, ತೆಗೆದುಕೊಳ್ಳುವುದು ಇಲ್ಲವೇ ಪರರಿಗೆ ಕೊಡುವುದನ್ನಾಗಲೀ, ಇನ್ನೊಬ್ಬರಿಗೆ ತೆಗೆದುಕೊಳ್ಳುವಂತೆ ಪ್ರೋತ್ಸಾಹವನ್ನಾಗಲೀ ಮಾಡಬಾರದು.

ಬ್ರಹ್ಮಚರ್ಯವ್ರತ:

ಅನ್ಯಸ್ತ್ರೀಯಲ್ಲಿ ಪುರುಷನು, ಅನ್ಯಪುರುಷರನಲ್ಲಿ ಸ್ತ್ರೀಯು ಅನುರಕ್ತರಾಗಕೂಡದು.

ಅಪ್ರರಿಗ್ರಹವ್ರತ:

ಅಗತ್ಯವೆನಿಸಿದ್ದಕ್ಕಿಂತಲೂ ಹೆಚ್ಚು ಸಂಪತ್ತನ್ನು ಸಂಗ್ರಹಿಸಿಡುವುದನ್ನಾಗಲೀ, ಬಚ್ಚಿಡುವುದನ್ನಾಗಲೀ ಮಾಡಕೂಡದು. ಈ ಪಂಚಾಣುವ್ರತಗಳನ್ನು ಪ್ರತಿಯೊಬ್ಬ ಶ್ರಾವಕನೂ ಚಾಚೂ ತಪ್ಪದಂತೆ ಪಾಲಿಸಬೇಕೆಂದು ಕವಿಯು ಉಪದೇಶಿಸುತ್ತಾನೆ.

---

೩೧೬. ಡಾ. ವೈ. ಸಿ. ಭಾನುಮತಿ (ಸಂ); **ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು** ; ಪುಟ. ೪೧
೩೧೭. **ಅದೇ** ; ಪುಟ. ೪೧

ದಿಗ್ವಿರತಿ, ಅನರ್ಥದಂಡವಿರತಿ, ಭೋಗೋಪಭೋಗ ಪರಿಮಾಣ, ದೇಶಾವಕಾಶಿಕ, ಸಾಮಾಯಿಕ, ಪ್ರೋಷಧೋಪವಾಸ, ವೈಯಾಪೃತ್ಯ ಎಂಬಿವು ಶಿಕ್ಷಾವ್ರತಗಳು. ಇವುಗಳನ್ನು ಪಾಲಿಸುವವರು ರಾತ್ರಿ ಊಟ ಮಾಡಕೂಡದು. ಔದುಂಬರ ಫಲಗಳನ್ನು, ಜೇನುತುಪ್ಪ, ಮದ್ಯ, ಮಾಂಸ, ಗೆಡ್ಡೆ, ಕಂದಮೂಲಗಳನ್ನು ಸೇವಿಸಬಾರದು. ಸಾಮಾಯಿಕ ಪ್ರೋಷಧ, ಅತಿಥಿ ಪೂಜೆ, ಸಲ್ಲೇಖನಗಳು ಇದರಲ್ಲಿಯೇ ಬರುತ್ತವೆ. ಬಸದಿ, ಕ್ಷೇತ್ರಶುದ್ಧಿಯುಳ್ಳ ಪ್ರದೇಶದಲ್ಲಿ ವಿಷಯ, ಕಷಾಯಗಳಿಂದ ಅಗಲಿ ಮೌನದಿಂದ ತ್ರಿಭುವನ ಸ್ವಾಮಿಯಾದ ಜಿನೇಶ್ವರನನ್ನು ತ್ರಿಕರಣ ಶುದ್ಧದಿಂದ ಪಂಚೇಂದ್ರಿಯಗಳನ್ನು ಹರಿಯಲು ಬಿಡದೇ ಅನ್ನ, ಪಾನ, ಖಾದ್ಯ, ಲೇಹ್ಯ ಎಂಬ ಚತುರ್ಥ ವಿಧದ ಆಹಾರವನ್ನು ಅಷ್ಟಮಿ ಮೊದಲಾದ ಪರ್ವದಿನಗಳಂದು ತೊರೆಯುವುದು ಪ್ರೋಷಧೋಪವಾಸ.

ಸಕಲ ಪರಿಗ್ರಹಗಳನ್ನು ತ್ಯಜಿಸಿ ತಪವನ್ನು ಸ್ವೀಕರಿಸುವುದೇ ಸಲ್ಲೇಖನ. ಕಾಯ ಮತ್ತು ಕಷಾಯಗಳನ್ನು ಕೃಶಗೊಳಿಸುವುದು. ಇದರಲ್ಲಿ ಎರಡು ಪ್ರಕಾರಗಳುಂಟು. ಒಂದು ಬಾಹ್ಯ. ಎರಡನೆಯದ್ದು ಅಭ್ಯಂತರ. ಬಾಹ್ಯ ಸಲ್ಲೇಖನವು ಶರೀರಕ್ಕೆ ಸಂಬಂಧಿಸಿದ್ದು. ಅಭ್ಯಂತರ ಸಲ್ಲೇಖನವು ಕಷಾಯಗಳಿಗೆ ಸಂಬಂಧಿಸಿದ್ದು. ತನ್ನ ಜೀವಿತಾವಧಿವರೆಗೆ ಮಾಡಿದ ಪಾಪಕರ್ಮಗಳನ್ನು ಗುರುಗಳ ಮುಂದೆ ಅರುಹಬೇಕು. ನಂತರ ಪರಿಗ್ರಹಗಳನ್ನು ಬಿಟ್ಟು ಕ್ರಮೇಣ ಆಹಾರ ಕಡಿಮೆ ಮಾಡುತ್ತ, ನೀರನ್ನೂ ಕುಡಿಯದೆ, ಪಂಚ ನಮಸ್ಕಾರ ಮಾಡುತ್ತ ಶರೀರ ತ್ಯಾಗ ಮಾಡಬೇಕು. ಸಲ್ಲೇಖನ ವ್ರತದಿಂದ ಪೂಜೆ, ಅರ್ಥ, ಐಶ್ವರ್ಯಗಳು ವೃದ್ಧಿಯಾಗುತ್ತವೆ ಎಂದು ಕವಿಯು ಉಪದೇಶಿಸುತ್ತಾನೆ. ಹೀಗೆ ಜಿನಧರ್ಮಾನುಸಾರಿಯಾದ ಶ್ರಾವಕನು ತಾನು ಅನುಸರಿಸಬೇಕಾದ ಆಚರಣೆಗಳನ್ನು ಆಯತವರ್ಮನು ತನ್ನ 'ರತ್ನಕರಂಡಕ' ಶ್ರಾವಕಾಚಾರದಲ್ಲಿ ತಿಳಿಸಿದ್ದಾನೆ.

೩.೭. ಕಲ್ಯಾಣಕೀರ್ತಿ (೧೪೩೯) :

ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ ಅವರು "ಇವನು ಜೈನಕವಿ. ಮೂಲಸಂಭದ ದೇಶೀಯಗಣದ ಲಲಿತಕೀರ್ತಿ ಈತನ ದೀಕ್ಷಾಗುರು. ಈತನು ಜ್ಞಾನಚಂದ್ರಾಭ್ಯುದಯ, ಕಾಮನ ಕಥೆ, ಅನುಪ್ರೇಕ್ಷೆ, ಜಿನಸ್ತುತಿ, ತತ್ವಭೇದಾಷ್ಟಕ ಎಂಬ ಗ್ರಂಥಗಳನ್ನು ಬರೆದಿದ್ದಾನೆ"[೩೧೮] ಎಂದು ಹೇಳಿ ಸುಮಾರು ೧೩೬೨ ಎಂದು ಈತನ ಕಾಲವನ್ನು ಗುರುತಿಸುತ್ತಾರೆ. ಜ್ಞಾನಚಂದ್ರನೆಂಬ ರಾಜನು ತಪಸ್ಸನ್ನಾಚರಿಸಿ ಮುಕ್ತಿಯನ್ನು ಪಡೆದ ಬಗೆಯನ್ನು ೬೦೮ ಷಟ್ಪದಿಗಳ ಮೂಲಕ ನಿರೂಪಿತವಾಗಿರುವ ಕಥೆ 'ಜ್ಞಾನ ಚಂದ್ರಾಭ್ಯುದಯ'. ೪ ಸಂಧಿ ಹಾಗೂ ೩೩೧ ಪದ್ಯಗಳನ್ನೊಳಗೊಂಡು ಜೈನ ಮತಾನುಸಾರವಾಗಿ 'ಕಾಮನ ಕಥೆ'ಯನ್ನು ನಿರೂಪಿಸುವುದು ಈತನ ಇನ್ನೊಂದು ಕೃತಿಯಾಗಿದೆ. ತೀರ್ಥಂಕರರ ಸ್ತುತಿಯನ್ನೊಳಗೊಂಡ ೨೭

೩೧೮. ಆರ್. ನರಸಿಂಹಾಚಾರ್ : **ಕರ್ಣಾಟಕ ಕವಿಚರಿತೆ (ದ್ವಿತೀಯ ಸಂಪುಟ)** ; ಪುಟ. ೪೩

ಕಂದಪದ್ಯಗಳಿರುವ ಕೃತಿ 'ಜಿನಸ್ತುತಿ'; ಒಂಭತ್ತು ವೃತ್ತಗಳನ್ನೊಳಗೊಂಡ 'ತತ್ತ್ವಭೇದಾಷ್ಟಕ'ಗಳು ಈತನ ಇತರ ಕೃತಿಗಳಾಗಿವೆ. ಹನ್ನೆರಡು ಅನುಪ್ರೇಕ್ಷೆಗಳನ್ನು ಬೋಧಿಸುವ ಈತನ ಇನ್ನೊಂದು ಕೃತಿಯ ಹೆಸರೇ 'ಅನುಪ್ರೇಕ್ಷೆ' ಎಂದಿದೆ.

೩.೭.೧. ಅನುಪ್ರೇಕ್ಷೆ:

ಕಲ್ಯಾಣಕೀರ್ತಿಯು ಬರೆದಿರುವ 'ಅನುಪ್ರೇಕ್ಷೆ'ಯು ೭೬ ಪದ್ಯಗಳನ್ನೊಳಗೊಂಡಿದೆ. ದ್ವಾದಶ ಅನುಪ್ರೇಕ್ಷೆಗಳನ್ನು ಬೋಧಿಸುವ ಈ ಗ್ರಂಥದಲ್ಲ ಯಾವುದೇ ಅಧ್ಯಾಯಗಳನ್ನು ವಿಂಗಡಿಸಿಕೊಂಡಿಲ್ಲ. ಕುಂದಕುಂದಾಚಾರ್ಯರ ಗಾಹೆಗಳಿಗೆ ಕನ್ನಡದಲ್ಲಿ ಅರ್ಥವನ್ನು ಹೇಳಿರುವುದಾಗಿ ಕವಿಯು ಹೇಳಿಕೊಂಡಿದ್ದಾನೆ.

"ಪಂಚ ಕಲ್ಯಾಣಕೀರ್ತಿಯಿಂ । ಸಂಚಯಂಗಳ ಭವ್ಯರ
ಹಿಂಚದೆ ತಣಿಪಿದವರನು । ಮುಂಚೆ ವಂದಿಪೆ ಜಿನರನು ॥೦೨॥

ಪನ್ನೆರಡನುಪ್ರೇಕ್ಷೆಯಂ । ಚೆನ್ನ ಕನ್ನಡದಿಂದ ನಾ
ಮುನ್ನ ನಾನನಭಿವರ್ಣಿಪೆಂ । ಇನ್ನು ಭವ್ಯರು ಕೇಳಿರೈ ॥೦೩॥"[೩೧೯]

ಎಂದು ಹೇಳಿ ಕವಿ ಕಲ್ಯಾಣಕೀರ್ತಿಯು ಕ್ರಮವಾಗಿ ಒಂದೊಂದು ಅನುಪ್ರೇಕ್ಷೆಗಳನ್ನು ತಿಳಿಸುತ್ತಾ ಸಾಗುತ್ತಾನೆ. ಅನುಪ್ರೇಕ್ಷೆಗಳ ಕುರಿತಾಗಿ ಈಗಾಗಲೇ ಬಂಧುವರ್ಮ 'ಜೀವಸಂಬೋಧನಂ' ಕೃತಿಯ ಅಧ್ಯಯನದಲ್ಲಿ ವಿಸ್ತೃತವಾಗಿ ತಿಳಿಸಲಾಗಿದೆ. ಅಲ್ಲದೇ ವಿಜಯಣ್ಣ ಕೃತ 'ದ್ವಾದಶಾನುಪ್ರೇಕ್ಷೆ'ಯಲ್ಲಿಯೂ ಅನುಪ್ರೇಕ್ಷೆಗಳನ್ನು ಚರ್ಚಿಸಿರುವುದರಿಂದ ಇಲ್ಲಿ ಕಲ್ಯಾಣಕೀರ್ತಿಯ 'ಅನುಪ್ರೇಕ್ಷೆಯ ಕೆಲವು ಪದ್ಯಗಳನ್ನು ಉಲ್ಲೇಖಿಸಲಾಗಿದೆ.

"ವಂದಿದಾ ಬಂಧುಜನಗಳು । ತಂದೆ ತಾಯಿಗಳೆಲ್ಲರು
ಥಂದ ಥಂದದ ತನುಜರು । ಒಂದು ನಿತ್ಯಂಗಳಲ್ಲವು ॥೦೪॥

ಸಾರರೂಪಿನ ಲೀಲೆಯುಂ । ಚಾರು ಯೌವನದೇಳ್ಗೆಯುಂ
ಸ್ಫಾರಜೀವಿತದವಧಿಯುಂ । ನೀರಬುದ್ಬುದದಂದವೈ ॥೦೭॥"[೩೨೦]

ಬಂಧುಜನಗಳೂ, ತಂದೆ-ತಾಯಿಗಳೂ, ಪುತ್ರ-ಪೌತ್ರರೂ ಇವರಾರೂ ನಿತ್ಯರಲ್ಲ. ಭವ್ಯವಾದ ಸೌಧಗಳು, ಯಾನ, ವಾಹನ, ಶಯನ, ಮಾನಿನಿಯರ ಪ್ರೇಮ ಇವೆಲ್ಲವೂ ಸೂರ್ಯ ಕಿರಣ ಸೋಕಿದ ಮಂಜಿನಂತೆ ಕಾನನದ ನದಿಯಂತೆ ನೀರ ಮೇಲಿನ ಗುಳ್ಳೆಯಂತೆ ಅಶಾಶ್ವತವಾದವುಗಳು ಎಂದು ಬೋಧಿಸುತ್ತಾನೆ.

"ಉತ್ತಮ ಮಂತ್ರ ತಂತ್ರವು । ಮತ್ತಮಾ ಕ್ರಿಯೆಮಣಿಗಳು
ಮೃತ್ಯುಕಾಲದೊಳಕ್ಕಟ । ಸತ್ಯದಿಂ ಶರಣಾಗವು ॥೧೨॥

ಪಡೆದು ನಾಲ್ಕು ಬಲಗೆಳಂ । ಸುದತಿಯರ್ಕಳು ತನುಜರಂ
ಕಡಿದು ಕೈಗಳ ಕಾಲ್ಗಳ । ಒಡೆದು ಸಾವಾಗ ಕಾವರೆ ॥೧೩॥

---

೩೧೯. ಕೆ. ಆರ್. ಶೇಷಗಿರಿ (ಸಂ); ದ್ವಾದಶಾನುಪ್ರೇಕ್ಷೆ : ಪುಟ. ೪೦೫
೩೨೦. ಅದೇ : ಪುಟ. ೪೦೫

ಹೀನಮಾನ ದುರಿತಂಗಳಿಂ । ಜ್ಞಾನದರ್ಶನ ಲಕ್ಷಣಂ
ನೀನನಾದಿಯು ನಿತ್ಯನುಂ ಪೀನ ಜನ್ಮಾನೇಕನುಂ ॥೨೨॥

ಲೋಕದಾ ಕ್ಷೇತ್ರದೊಳಗಘ । ಪಾಕದಿಂದವಗಾಹಿಸಿ
ಸ್ವೀಕರಿಸದೆ ದೇಹಮಂ ಏಕದೇಹವ ಕಾಣೆ ನಾಂ ॥೩೦॥

ಉತ್ಸರ್ಪಣಾವಸರ್ಪಣಾ । ಸತ್ಯಮಾಯದಲೀಗಳಾ
ವತ್ಸ ಸಾವುತ ಪುಟ್ಟುತಾ । ಚಿತ್ಸ್ವರೂಪನೆ ತೊಳಲಿದೈ ॥೩೧॥

ಎಲುಗಳಿಂ ರಸಘಾಯದಿಂ । ಮಲದ ಮೂತ್ರ ರಾಶಿಯಿಂ
ಬಳಸಿದ ಕರುಳೋಳೆಯಿಂ । ಕೊಳತುನಾರದೆ ದೇಹವು ॥೪೫॥

ಸುರಭಿ ನಿರ್ಮಲ ವಸ್ತುವಂ । ಧರಿಸಿ ದೇಹದೊಳಾಕ್ಷಣಂ
ಪಿರಿದು ದುರ್ಗಂಧದಾಗಿ ತಾಂ । ಮರಳಿ ಮುಟ್ಟಲು ಬಾರದು ॥೪೬॥

ತೊಲಗದಾಸ್ರವನಿವಹದಿಂ । ದಲಘು ಭೀಕರ ಸಂಸೃತಿ
ಜಲನಿಧಿಯೊಳು ಮುಳುಗುತಂ । ಹಲವು ದುಃಖವನುಂಡನೀ ॥೫೨॥

ಕೋಪಕಾರಣವಸುಗಳು । ಆಪತ್ತು ಬಿಡದಿರುತಿರೆ
ಕೋಪವಾಗದೊಡಾತಗೆ । ವ್ಯಾಪಿಸಿ ಕ್ಷಮೆಯಪ್ಪುಗುಂ ॥೬೦॥

ಕುಲದ ಜಾತಿಯ ರೂಪಿನ । ಹಲವು ಶಾಸ್ತ್ರದ ಬುದ್ಧಿಯ
ಬಲದ ಗರ್ವವನುಳಿವುದು । ಲಲಿತ ಮಾರ್ದ ಧರ್ಮವೈ ॥೬೧॥

ಮಡದಿ ರೂಪವ ಕಂಡವಂ । ಗುಡಿಗೆ ಕಾಮ ವಿಕಾರವು
ಕಡುಗಲಿ ಗಿರಿಧೀರನುಂ । ಪಡೆಗು ತಾಂ ಬ್ರಹ್ಮಚರ್ಯಮಂ ॥೭೦॥

ಕೇಳು ಕಲ್ಯಾಣ ಕೀರುತಿ । ಲೀಲೆಯಿಂದನುಪ್ರೇಕ್ಷೆಯಂ
ಬಾಲಕರ್ಗೋದುವಂದದಿಂ । ಲೀಲೆಯಿಂದಿಂತು ಪೇಳಿದಂ ॥೭೫॥

ದಿವ್ಯಾದ್ರಿ ತಾರಂಭರಂ । ಭವ್ಯರಿಂ ಜಿನಮುನಿಗಳಿಂ
ಸೇವ್ಯವಾದೆನ್ನ ಕಾವ್ಯವು । ಶ್ರವ್ಯವಾಗಲಿ ಜಯಿಸಲಿ ॥೭೬॥"[೩೨೧]

ಹೀಗೆ ಕಲ್ಯಾಣಕೀರ್ತಿಯು ಕ್ರಮವಾಗಿ ಅನಿತ್ಯ, ಅಶರಣ, ಅನ್ಯತ್ವ, ಏಕತ್ವ, ಸಂಸಾರ, ಅಶೌಚ, ಲೋಕ, ಆಸ್ರವ, ಸಂವರ, ನಿರ್ಜರ, ಬೋಧಿದುರ್ಲಭ ಹಾಗೂ ಧರ್ಮಾನುಪ್ರೇಕ್ಷೆಗಳೆಂಬ ಹನ್ನೆರಡು ಅನುಪ್ರೇಕ್ಷೆಗಳನ್ನು ಬೋಧಿಸುತ್ತಾನೆ. ಕೃತಿಯ ಕೊನೆಯಲ್ಲಿ ಬಾಲಕರಿಗೆ ಓದಲು ಅನುವಾಗುವಂತೆ ಅನುಪ್ರೇಕ್ಷೆಗಳ ಲೀಲೆಗಳನ್ನು ಹೇಳಿದುದಾಗಿ ತಿಳಿಸಿ, ಭವ್ಯರಿಂದ ಜಿನಮುನಿಗಳಿಂದ ಒಪ್ಪಿವಾಗಿರುವ ಕಾವ್ಯವು ಜನಮನದಲ್ಲಿ ನೆಲೆಯಾಗಲಿ ಎಂದು ಆಶಿಸುತ್ತಾನೆ.

೩.೮. ವಿಜಯಣ್ಣ ಕವಿ (೧೪೪೮):

ಹತ್ತನೆಯ ಶತಮಾನದ ಪೂವಾರ್ಧದಿಂದ ಹನ್ನರಡನೆಯ ಶತಮಾನದ ಉತ್ತರಾರ್ಧದವರೆಗೆ ಕನ್ನಡ ಸಾರಸ್ವತ ಲೋಕದಲ್ಲಿ ಜೈನ ಕವಿಗಳು ಪಾರಮ್ಯವನ್ನು ಸಾಧಿಸಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಆನಂತರದ ಕಾಲದಲ್ಲಿಯೂ ತಮ್ಮದೇ ಆದ ಸಾಹಿತ್ಯ ಸೇವೆಯಿಂದ ತಮ್ಮ ಇರುವನ್ನು ಗುರುತಿಸಿಕೊಂಡಿದ್ದಾರೆ ಎಂಬುದರಲ್ಲಿ ಯಾವ ಸಂದೇಹವೂ

೩೨೧. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ :** ಪುಟ. ೪೦೫, ೪೦೬, ೪೦೮, ೪೦೯, ೪೧೦, ೪೧೨

ಇಲ್ಲ. ಅಂತೆಯೇ ಹದಿನೈದನೆಯ ಶತಮಾನದ ಮಧ್ಯಭಾಗಲ್ಲಿ ಶಾಸ್ತ್ರಕಾರನಾಗಿ ಗುರುತಿಸಿಕೊಂಡ ಜೈನಕವಿ ವಿಜಯಣ್ಣ. ಕವಿಚರಿತೆಕಾರರು ವಿಜಯಣ್ಣನ ಕುರಿತಾಗಿ "ಈತನು ದ್ವಾದಶಾನುಪ್ರೇಕ್ಷೆಯನ್ನು ಬರೆದಿದ್ದಾನೆ. ಇವನು ಜೈನಕವಿ. ಕುಂತಳದೇಶದ ಬೆಳುವಲ ನಾಡೊಳಗಣ ಅಮ್ಮೆನಭಾವಿಯ ಶಾಂತಿನಾಥ ಬಸದಿಯಲ್ಲಿ, ಆ ಊರಪ್ರಭು ಹೊನ್ನಬಂದಿಯ ದೇವರಾಜನ ಆಜ್ಞಾನುಸಾರವಾಗಿ ಶಕವರ್ಷ ೧೩೭೦ರ ವಿಭವಸಂವತ್ಸರದಲ್ಲಿ ಅಂದರೆ ೧೪೪೮ರಲ್ಲಿ ಕೃತಿಯನ್ನು ರಚಿಸಿದ್ದು, ಈತನ ಗುರು ಪಾರ್ಶ್ವಕೀರ್ತಿ ಆಗಿರಬಹುದು."[೩೨೨] ಎಂದು ಸಂದೇಹ ವ್ಯಕ್ತಪಡಿಸುತ್ತಾ, ಆತನ ಕಾಲವನ್ನು ೧೪೪೮ ಎಂದೇ ಗುರುತಿಸುತ್ತಾರೆ.

೩.೮.೧. ದ್ವಾದಶಾನುಪ್ರೇಕ್ಷೆ:

ಪ್ರಸ್ತುತ 'ದ್ವಾದಶಾನುಪ್ರೇಕ್ಷೆ' ಗ್ರಂಥವನ್ನು ಸಂಪಾದಿಸುರುವ ಕೆ. ಆರ್. ಶೇಷಗಿರಿಯವರು ಪೀಠಿಕಾಭಾಗದಲ್ಲಿ ಹೀಗೆ ಹೇಳುತ್ತಾರೆ. "ಜೈನತತ್ತ್ವಗಳನ್ನು ಅನುಸರಿಸುವಾಗ ದ್ವಾದಶ ಅನುಪ್ರೇಕ್ಷೆಗಳ ಪಾತ್ರವು ಬಹು ಮುಖ್ಯವಾದುದು. ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅನುಪ್ರೇಕ್ಷೆಯನ್ನಾಧರಿಸಿದ ಹಲವಾರು ಗ್ರಂಥಗಳು ರಚನೆಯಾಗಿವೆ. ಆ ಸಾಲಿನಲ್ಲಿ ಕುಂದಕುಂದರ 'ಬಾರಿಸ ಅಣುವೆಕ್ಖಾ' ವಠ್ಠಕೇರರ 'ಮೂಲಾಚಾರ', ಉದ್ಯೋತನಸೂರಿಯ 'ಕುವಲಯಮಾಲಾ', ವೀರನಂದಿಯ 'ಆಚಾರಸಾರ', ಹೇಮಚಂದ್ರನ 'ಯೋಗಶಾಸ್ತ್ರ' ಮುಂತಾದ ಕೃತಿಗಳಿವೆ. ಅಂತೆಯೇ ೧೫೫೬ರಲ್ಲಿದ್ದ ಶುಭಚಂದ್ರ ಹಾಗೂ ಸ್ವಾಮಿಕುಮಾರನೆಂಬ ಕವಿಗಳಿಂದ ಪ್ರಾಕೃತದ ಭಾಷೆಯ 'ಕೃತಿಯೇಯಾಣುಪೆಕ್ಖಾ' ಎಂಬ ಗ್ರಂಥಕ್ಕೆ ಸಂಸ್ಕೃತದಲ್ಲಿ ಟೀಕೆಯನ್ನು ಬರೆದಿದ್ದಾರೆ. ಆ ನಿಟ್ಟಿನಲ್ಲಿ ಕನ್ನಡದಲ್ಲಿ ರಚಿತವಾದ ವಿಜಯಣ್ಣ ಕವಿಯ 'ದ್ವಾದಶಾನುಪ್ರೇಕ್ಷೆ'ಯೂ ಒಂದು."[೩೨೩]

ಈ ಪೂರ್ವದಲ್ಲಿ ಪ್ರಸ್ತುತ ಅಧ್ಯಾಯದಲ್ಲಿಯೇ ದ್ವಾದಶಾನುಪ್ರೇಕ್ಷೆಗಳನ್ನು ಬೋಧಿಸುವ ಬಂಧುವರ್ಮಕೃತ 'ಜೀವಸಂಬೋಧನಂ' ಗ್ರಂಥವನ್ನು ಅಧ್ಯಯನ ಮಾಡಲಾಗಿದೆ. ಅದು ಅನುಪ್ರೇಕ್ಷೆಗಳನ್ನು ಬೋಧಿಸುವ ಕನ್ನಡದ ಮೊದಲ ಗ್ರಂಥವೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಉಚಿತವಾಗಿದೆ. ಪ್ರಸ್ತುತ 'ದ್ವಾದಶಾನುಪ್ರೇಕ್ಷೆ' ಗ್ರಂಥದಲ್ಲಿಯೂ ಒಂದೊಂದು ಪರಿಚ್ಛೇದದಲ್ಲಿ ಒಂದೊಂದು ಅನುಪ್ರೇಕ್ಷೆಯನ್ನು ಬೋಧಿಸುತ್ತ ಸಾಗಿದ್ದಾನೆ. ಆದರೆ ಇಲ್ಲಿ ದೃಷ್ಟಾಂತ ಕಥೆಗಳಿಲ್ಲದಿರುವುದು ಗಮನಿಸಬೇಕಾದ ಅಂಶವಾಗಿದೆ. ಗ್ರಂಥವು ಸಾಂಗತ್ಯ ಛಂದಸ್ಸಿನಲ್ಲಿದ್ದು, ಅಲ್ಲಲ್ಲಿ ಕಂದಪದ್ಯ, ವಚನ, ಮತ್ತೇಭವಿಕ್ರೀಡಿತ, ಶಾರ್ದೂಲವಿಕ್ರೀಡಿತ, ಉತ್ಪಲಮಾಲೆ, ಬಂಧುರ ವೃತ್ತ, ಉಜ್ವಲವೃತ್ತ, ಚಂಪಕಮಾಲೆ, ಮಾಲಿನೀವೃತ್ತ ಹಾಗೂ ಗದ್ಯಗಳನ್ನೂ ಒಳಗೊಂಡು ರಚಿತವಾಗಿದೆ.

---

೩೨೨. ಆರ್. ನರಸಿಂಹಾಚಾರ್ ; **ಕರ್ಣಾಟಕ ಕವಿಚರಿತೆ ದ್ವಿತೀಯ ಸಂಪುಟ** : ಪು. ೪೬

೩೨೩. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ** : ಪುಟ. xiv (ಪೀಠಿಕೆ)

೩.೮.೨. ಅಧ್ರುವಾನುಪ್ರೇಕ್ಷೆ:

"ದ್ವಾದಶಾನುಪ್ರೇಕ್ಷೆಯ ಕೇಳಿ ಭವ್ಯರು
ಸಾಧಿಸಿ ಸ್ವರ್ಗ ಮೋಕ್ಷವನು"[೩೨೪]

ಈ ಮಾತನ್ನು ಗ್ರಂಥಾರಂಭದಲ್ಲಿಯೇ ಕವಿ ಉಚ್ಚರಿಸುತ್ತಾನೆ. ಅಂದರೆ ದ್ವಾದಶಾನುಪ್ರೇಕ್ಷಗಳನ್ನು ಕೇಳಿ ತಿಳಿದುಕೊಂಡು ಶ್ರಾವಕರು ಸ್ವರ್ಗದ ಮೋಕ್ಷವನ್ನು ಪಡೆಯಬೇಕೆಂಬುದು ಕವಿ ವಿಜಯಣ್ಣನ ಆಶಯವಾಗಿದೆ. ಹಾಗೆಯೇ ವೃಷಭಾದಿ ತೀರ್ಥಂಕರರಿಗೆ, ಸಿದ್ಧರಿಗೆ, ಆಚಾರ್ಯರಿಗೆ, ಉಪಾಧ್ಯಾಯರಿಗೆ, ಸರ್ವಸಾಧುಗಳಿಗೆ ವಿನಯದಿಂದ ವಂದಿಸಿ, ಶ್ರುತಸಾಗರ, ವೃಷಭಸೇನ, ಗೌತಮ ಗಣಧರ, ವಿಜಯಕೀರ್ತಿ ಮುನಿಗಳು, ಪಾರ್ಶ್ವಕೀರ್ತಿ ಮುನಿಗಳನ್ನು ಸ್ಮರಿಸಿಕೊಂಡಿದ್ದಾನೆ. ಮುಂದೆ:

"ದೇವಶಾಸ್ತ್ರ ಗುರುವಿಗೆ ವಂದಿಸಿ ಮುಂದೆ
ಭಾವಿಸುವಾನುಪ್ರೇಕ್ಷೆಗಳ
ಶ್ರಾವಕರಿಗೆ ಹನ್ನೆರಡು ಪೇಳುವೆ
ಭಾವಮಪೂರ್ವಕವಾಗಿ ಕೇಳಿ ॥೧.೧೭॥"[೩೨೫]

ದೇವರಿಗೆ, ಆಗಮಗಳಿಗೆ, ಗುರುಗಳಿಗೆ ವಂದಿಸಿ, ಶ್ರಾವಕರಿಗಾಗಿ ಹನ್ನೆರಡು ಅನುಪ್ರೇಕ್ಷೆಗಳನ್ನು ಉಪದೇಶಿಸುತ್ತ, ಭಾವಪೂರ್ವಕವಾಗಿ ಕೇಳಿರಿ ಎಂದು ಸಹೃದಯರಲ್ಲಿ ಕವಿ ವಿನಂತಿಸಿಕೊಳ್ಳುತ್ತಾನೆ. ಮುಂದುವರೆದು ಅಧ್ರುವಾನುಪ್ರೇಕ್ಷೆಯನ್ನು ವಿವರಿಸುತ್ತಾನೆ. ಲೋಕದಲ್ಲಿ ಮುಕ್ತಿಜೀವ, ಸಂಸಾರಿಜೀವಗಳೆಂದು ಎರಡು ವಿಧಗಳಿವೆ. ಅಷ್ಟಕರ್ಮಗಳಿಂದ ಮುಕ್ತರಾದವರು ಮುಕ್ತಿಜೀವರು. ಜ್ಞಾನಾವರಣಾದಿ ಎಂಟು ಕರ್ಮಗಳನ್ನು ಹೊಂದಿ, ಮೂಢತ್ವದಿಂದ ಮಿಥ್ಯಾತ್ವವನ್ನು ರೂಢಿಸಿಕೊಂಡು, ಹುಟ್ಟು-ಸಾವುಗಳ ಚಕ್ರದಲ್ಲಿ ತೊಳಲುವ ಜೀವಿಗಳು ಸಂಸಾರಿಗಳು.

"ಲಕ್ಷಯೆಂಬತ್ತುನಾಲಕು ಯೋನಿಗಳಲ್ಲಿ
ದುಃಖಪೂರತೆಯೊಳು ಕೂಡಿ
ಸಿಕ್ಕದೆ ಹುಟ್ಟುತ್ತ ಹೊಂದುತ್ತಲಿರ್ಪವು
ಅಕ್ಕಟ ಕರ್ಮದ ವಂಶದಿಂ ॥೧.೨೬॥"[೩೨೬]

ಅವು ಹಲವಾರು ಜನ್ಮಾಂತರಗಳನ್ನು ದಾಟಿ, ಅಗಾಧ ಪ್ರಮಾಣದ ದುಃಖವನ್ನು ಅನುಭವಿಸುತ್ತವೆ. ಅಂತಹ ಭವ್ಯಜೀವಗಳಿಗೆ ಉಪದೇಶ ಮಾತ್ರದಿಂದ ರಕ್ಷಣೆ ದೊರೆಯುತ್ತದೆ. ಮನುಷ್ಯಗತಿಯಿಂದ ಮಾತ್ರ ಉತ್ತಮ ಧರ್ಮವನ್ನು ಪಾಲಿಸಲು ಸಾಧ್ಯವಾಗುವುದು. ದರ್ಶನಯುಕ್ತವಾದ ಜ್ಞಾನವೇ ಭವಜೀವನದಿಂದ ಮುಕ್ತಿ ಸಾಧಿಸಲು ದಾರಿತೋರುತ್ತದೆ. ಆದುದರಿಂದ ಮೋಕ್ಷಪದವಿಯನ್ನು ಬಯಸುವವನು ಐಶ್ವರ್ಯ, ಮಹಡಿ, ಮನೆ, ಶಕ್ತಿ, ಆರೋಗ್ಯ,

---

೩೨೪. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ** ; ಪುಟ. ೦೧
೩೨೫. **ಅದೇ:** ಪುಟ. ೦೬
೩೨೬. **ಅದೇ** : ಪುಟ. ೧೦

ಯೌವ್ವನ, ರೂಪ, ಆಯಸ್ಸು, ಸೌಂದರ್ಯಗಳೆಲ್ಲವೂ ಕೇವಲ ಕಾಮನಬಿಲ್ಲಿನಂತೆ ಅಸ್ಥಿರವಾದವುಗಳೆಂದು ಅರಿತುಕೊಂಡು ಧರ್ಮದಲ್ಲಿ ನಂಬಿಕೆಯಿಡುವುದು. ಅದಕ್ಕಾಗಿಯೇ ಸದ್ಧರ್ಮವನ್ನು ನೆಚ್ಚಿಕೊಂಡು ನಡೆಯಬೇಕು ಎಂದು ಕವಿ ವಿಜಯಣ್ಣನು ಅಧುವಾನುಪ್ರೇಕ್ಷೆಯನ್ನು ಉಪದೇಶಿಸುತ್ತಾನೆ.

೩.೮.೩. ಅಶರಣಾನುಪ್ರೇಕ್ಷೆ:

ಚಂದ್ರಾರ್ಕಕೋಟಿ ತೇಜೋಪುಂಜರಾದ ದ್ವಿತೀಯ ತೀರ್ಥಂಕರ ಅಜಿತನಾಥರಿಗೆ ವಂದಿಸಿ, ಅಶರಣಾನುಪ್ರೇಕ್ಷೆಯನ್ನು ನಿರೂಪಿಸಿದ್ದಾನೆ ಕವಿ. ಕರ್ಮವಶದಿಂದ ದೊರೆತ ಈ ಶರೀರವು ಆಯುಷ್ಯ ತೀರಲು, ನೆಚ್ಚಿಕೊಂಡು ಜವನಿಗೆ ಶರಣಾದವರಿಲ್ಲ. ಬಂಧು, ಮಿತ್ರರೆಲ್ಲರೂ ಹತ್ತಿರವಿದ್ದರೂ ಬಾಯಿಬಿಡುವರೇ ಹೊರತು, ಸಾವನ್ನು ತಡೆದವರಿಲ್ಲ. ಇದು ದೇವೇಂದ್ರ, ಧರಣೇಂದ್ರನ್ನೂ ಬಿಡಲಾರದು. ರಾಜ, ಸೇವಕ, ಸನ್ಯಾಸಿ, ಸಂಸಾರಿ, ಧನಿಕ, ಧೀನನೆಂಬ ಯಾವ ಭೇದಗಳೂ ಯಮನಿಗಿಲ್ಲ.

"ಸುರಲೋಕಂಗಳ ಪೊಕ್ಕಡಂ ಇರದೆ ತಾಂ ಪಾತಾಳಮಂ ಪೊಕ್ಕಡಂ
ಗಿರಿದುರ್ಗಂಗಳ ಪೊಕ್ಕಡಂ ಶರಧಿಯಂ ಪಾಯ್ದಲ್ಲಿ ಪೊಕ್ಕಿರ್ದಡಂ
ಭರದಿಂ ಪರ್ವತದಗ್ರದಲ್ಲಿ ಗುಹೆಯಂ ಪೊಕ್ಕಿರ್ದಡೆಂತೆಲ್ಲಿಯುಂ
ಶರಣಿಲ್ಲಂ ಪೆಱತಾವ ಠಾವು ನಿನಗಂ ಸದ್ಧರ್ಮ ದುರ್ಗಂ ವಿನಾ ॥೨.೧೫॥"[೩೨೭]

ಸಾವೆಂಬುದು ಬಂದೊದಗಿದರೆ ದೇವಲೋಕ, ಪಾತಾಳಲೋಕ, ಗಿರಿ, ದುರ್ಗ, ಸಮುದ್ರ ಎಲ್ಲಿಯೇ ಬಚ್ಚಿಟ್ಟುಕೊಂಡರೂ ಅದು ಹುಡುಕಿಕೊಂಡು ಬಂದು ಕೊಲ್ಲುತ್ತದೆ. ಈ ಹುಟ್ಟು ಸಾವುಗಳಾಟವನ್ನು ಗೆಲ್ಲಬೇಕಾದರೆ ರತ್ನತ್ರಯಗಳಿಂದ ಕೂಡಿದ ಸದ್ಧರ್ಮವೊಂದೇ ಪರಿಹಾರವಾಗಿದೆ. ಹೀಗೆ ಕವಿ ವಿಜಯಣ್ಣನು ಅಶರಣಾನುಪ್ರೇಕ್ಷೆಯನ್ನು ನಿರೂಪಿಸುತ್ತಾನೆ.

೩.೮.೪. ಏಕತ್ವಾನುಪ್ರೇಕ್ಷೆ:

ಕವಿಯು ಮೂರನೆಯ ತೀರ್ಥಂಕರ ಶಂಭವನಾಥನ ವರಪದಕಮಲಗಳಿಗೆರಗಿ ಏಕತ್ವಾನುಪ್ರೇಕ್ಷೆಯನ್ನು ವಿವರಿಸುತ್ತಾನೆ. ಪೂರ್ವಕೃತ ಕರ್ಮಫಲಗಳಿಂದಾಗಿ ನಾನಾ ಯೋನಿಗಳಲ್ಲಿ ಹುಟ್ಟಿ, ಸಂಸಾರ ಶರಧಿಯಲ್ಲಿ ದುಃಖವನ್ನು ಅನುಭವಿಸಲು ಆತ್ಮನೊಬ್ಬನೇ ಇರುವನು.

"ಏಕಃ ಜೀವೇ ಜಾಯತೇ ಏಕಃ ಗರ್ಭೇ ಗೃಹ್ಣಾತಿ ದೇಹಂ
ಏಕಃ ಬಾಲಃ ಯುವಃ ಏಕಃ ವೃದ್ಧ ಜರಾಗೃಹಿತಃ ॥೭೪॥"[೩೨೮]

ಎಲ್ಲಿ ಹೋದರೂ ಆತ್ಮನೊಬ್ಬನೇ ಇರುವನು. ಗರ್ಭದಲ್ಲಿಯೂ, ಬಾಲಕನಾದಾಗಲೂ, ಯೌವ್ವನ ಪ್ರಾಪ್ತಿಯಾದಾಗಲೂ, ಕೊನೆಗೆ ವೃದ್ಧನಾಗಿ ರೋಗರುಜಿನಗಳು ಅಡರಿಕೊಂಡಾಗಲೂ ಜೀವನು ಏಕಾಂಗಿಯಾಗಿಯೇ ಇರುವನು. ಆತ್ಮನ ಸಹಾಯಕ್ಕೆ ಬೇರಾರೂ ಬರಲಾರರು. ನೆಚ್ಚಿದ ದೇಹ, ಹೆಂಡಿರು, ಮಕ್ಕಳು ಇವಾವುವೂ ಆತ್ಮನಿಗೊದಗುವುದಿಲ್ಲ.

---

೩೨೭. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ** : ಪುಟ. ೧೫

೩೨೮. ಸ್ಯಾದ್ವಾದಕೇಸರಿ ೧೦೮ ಶ್ರೀ ಆಚಾರ್ಯ ಪಾಯಸಾಗರ ಮುನಿಗಳು ; **ಸ್ವಾಮಿ ಕಾರ್ತಿಕೇಯಾನುಪ್ರೇಕ್ಷಾ (ಕನ್ನಡ ಟೀಕೆ)** : ಪುಟ. ೩೦

"ಒರ್ವನೆ ಸ್ವರ್ಗದಲ್ಲಿ ಸುರದೇವಿ ಮನೋಹರ ರೂಪನಾಗಿಯುಂ
ಒರ್ವನೆ ಕರ್ಮದಿಂ ನರಕ ದುಃಖ ಸಮೂಹವನೆಯ್ದುವಲ್ಲಿಯುಂ
ಒರ್ವನೆ ಸಾವಪುಟ್ಟುವೆಡೆಯೊಳ್ ಬಲುಬಂಧನದಲ್ಲಿ ಬೀಳ್ವಡಂ
ಒರ್ವನೆ ಸರ್ವಕರ್ಮಕ್ಷಯವೆಯ್ದಿಸಿ ಮೋಕ್ಷಮನೆಯ್ದುವಲ್ಲಯುಂ ॥೩.೧೭॥"[೨೨೯]

ಸ್ವರ್ಗದಲ್ಲಿ ಸುರದೇವತೆಯರ ಮನೋಹರ ಸುಂದರನಾಗಿಯೂ ಒಬ್ಬನೇ, ಕರ್ಮದಿಂದೊಗಿದ ನರಕದ ದುಃಖ ಸಮೂಹವನ್ನು ಅನುಭವಿಸುವವನೂ ಒಬ್ಬನೇ, ಹುಟ್ಟು-ಸಾವುಗಳಲ್ಲಿಯೂ ಒಬ್ಬನೇ, ಕೊನೆಗೆ ಸರ್ವಕರ್ಮಗಳನ್ನು ಕ್ಷಯಿಸಿ ಮುಕ್ತಿ ಸಾಧಿಸುವಲ್ಲಿಯೂ ಆತ್ಮನೊಬ್ಬನೇ ಎಂಬುದನ್ನು ಅರಿತು ಧರ್ಮಾನುರಾಗಿಯಾಗಿ ಸಾಗಬೇಕೆಂದು ವಿಜಯಣ್ಣ ಕವಿಯು ನಿರೂಪಿಸುತ್ತಾನೆ.

೩.೮.೫. ಅನ್ಯತ್ವಾನುಪ್ರೇಕ್ಷೆ:

ನಾಲ್ಕನೆಯ ತೀರ್ಥಂಕರನಾದ ಅಭಿನಂದನ ಅಡಿಗಳಿಗೆ ಎರಗಿ, ಅನ್ಯತ್ವಾನುಪ್ರೇಕ್ಷೆಯನ್ನು ಕವಿ ವಿಜಯಣ್ಣನು ಉಪದೇಶಿಸುತ್ತಾನೆ. ಧನ, ಧಾನ್ಯ, ಮಡದಿ, ಮಕ್ಕಳು ಎಂದಿಗೂ ಆತ್ಮನಿಂದ ಬೇರೆಯಾದವುಗಳೇ. ಆದುದರಿಂದ ಅವು ಅನ್ಯವೆಂದು ಅರಿತು ನಡೆಯುವುದು ಮುಖ್ಯವಾಗಿದೆ. ಅದರಿಂದ ಸಂಸಾರ ಸಾಗರದಿಂದ ಹೊರಬರಲು ಚಿಂತಿಸುವುದು ಉತ್ತಮ. ಕರ್ಮಗಳಲ್ಲಿ ಮುಳುಗಿರುವವರು ಧರ್ಮದಲ್ಲಿ ತೊಡಗಿಸಿಕೊಳ್ಳಬೇಕೆಂದರೆ ಪಾಪವನ್ನು ಮಾಡದೇ ಗುಣವ್ರತ, ಚಾರಿತ್ರಗಳನ್ನು ಆಚರಿಸಬೇಕು.

"ಸಮ್ಮಂಧವಲ್ಲದ ವಸ್ತುಗಳನು ನಂಬಿ
ದುರ್ಮನದಿಂ ಮತಿಗೆಟ್ಟು
ಕರ್ಮವಶಕೆ ಗುಜಿಯಾಗದೆ ಜೀವನೆ
ಧರ್ಮವೆ ನಿನಗೆಂದು ನಂಬು ॥೪.೧೫॥"[೨೩೦]

ತನ್ನದಲ್ಲದ ವಸ್ತುವಿಗೆ ಆಸೆಪಟ್ಟು, ಕರ್ಮಕ್ಕೆ ಗುರಿಯಾಗದೆ ಧರ್ಮವನ್ನು ನಂಬಿ, ಜಗತ್ತಿನಲ್ಲಿರುವ ವಸ್ತುಗಳೆಲ್ಲವೂ ಅನ್ಯವೆಂದೂ, ಆತ್ಮನು ಮಾತ್ರ ತನ್ನದೆಂದು ಬಗೆದು ನಡೆಯುವುದು. ಇದರಿಂದ ಉತ್ತಮ ಗತಿ ಪ್ರಾಪ್ತವಾಗುವುದೆಂದು ಕವಿಯು ನಿರೂಪಿಸುತ್ತಾನೆ.

೩.೮.೬. ಸಂಸಾರಾನುಪ್ರೇಕ್ಷೆ:

ಐದನೆಯ ತೀರ್ಥಂಕರನಾದ ಸುಮತಿನಾಥನಿಗೆ ನಮಿಸಿ ಸಂಸಾರಾನುಪ್ರೇಕ್ಷೆಯನ್ನು ಉಪದೇಶಿಸುವುದಾಗಿ ಕವಿಯು ಹೇಳುತ್ತಾನೆ. ಆತ್ಮನು ಹಲವಾರು ಯೋನಿಗಳಲ್ಲಿ ಜನ್ಮವೆತ್ತಿ ಆ ಜೀವಸಮಾಸಗಳಲ್ಲಿ ತೊಳಲುವುದೇ ಸಂಸಾರವಾಗಿದೆ. ಇದರಲ್ಲಿ ದ್ರವ್ಯಸಂಸಾರ, ಕ್ಷೇತ್ರಸಂಸಾರ, ಕಾಲಸಂಸಾರ, ಭವಸಂಸಾರ, ಭಾವಸಂಸಾರಗಳೆಂದು ಐದು ವಿಧಗಳಿವೆ.

"ಏಕಂ ತ್ಯಜತಿ ಶರೀರಂ ಅನ್ಯತ್ ಗೃಹ್ಣಾತಿನವಂ ನವಂಜೀವಂ

೨೨೯. ಕೆ. ಆರ್. ಶೇಷಗಿರಿ (ಸಂ); ದ್ವಾದಶಾನುಪ್ರೇಕ್ಷೆ : ಪುಟ. ೧೯
೨೩೦. ಅದೇ ; ಪುಟ. ೩೩

ಪುನಃ ಪುನಃ ಅನ್ಯತ್ ಅನ್ಯತ್ ಗೃಹ್ಣಾತಿ ಮುಂಚತಿ ಬಹುವಾರಂ ॥೩೨॥"[೩೩೧]

ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಗ್ರಹಣಮಾಡುವುದೇ ಸಂಸಾರವಾಗಿದೆ. ಹೀಗೆ ನಾಲ್ಕೂ ಗತಿಗಳಲ್ಲಿ ಸಂಚರಿಸುತ್ತ ಬೇರೆ ಬೇರೆ ಜೀವಗಳ ದೇಹವನ್ನು ಗ್ರಹಣಮಾಡುತ್ತ ಅದರಲ್ಲಿ ಭ್ರಮಣ ಮಾಡುವುದೇ ಸಂಸಾರಚಕ್ರವಾಗಿದೆ. ಹೀಗಿರುವ ಆತ್ಮನು ೮೪ ಲಕ್ಷ ಯೋನಿಗಳಲ್ಲಿ ಜನ್ಮ ತಳೆಯುತ್ತಾನೆ. ಇಂತಹ ಸಂಸಾರ ಸಾಗರದಿಂದ ಮುಕ್ತನಾಗಲು ಚಿಂತಿಸಬೇಕೆಂಬುದು ವಿಜಯಣ್ಣನ ಉಪದೇಶವಾಗಿದೆ.

೩.೮.೭. ಲೋಕಾನುಪ್ರೇಕ್ಷೆ:

ಆರನೆಯ ತೀರ್ಥಂಕರನಾದ ಪದ್ಮಪ್ರಭನಿಗೆ 'ವಂದಿಸಿ ಉರುತರ ಲೋಕವ ಪೇಳ್ವೆ' ಎಂದು ಲೋಕಾನುಪ್ರೇಕ್ಷೆಯನ್ನು ನಿರೂಪಿಸುತ್ತಾನೆ ಕವಿ ವಿಜಯಣ್ಣನು. ಅಪ್ರಮಾಣವಾದ ಆಕಾಶದ ಮಧ್ಯದಲ್ಲಿ ಪ್ರಮಾಣಯುತವಾದ ಲೋಕಗಳಿವೆ. ಅವುಗಳನ್ನು ಮೂರು ವಿಧದ ಅನಿಲಗಳು ಆವರಿಸಿಕೊಂಡಿವೆ. ಅಲ್ಲದೇ ಜಂಬೂದ್ವೀಪ, ಧಾತಕೀಖಂಡ, ಆರ್ಯಾಖಂಡ, ಮ್ಲೇಚ್ಛಖಂಡಗಳಿರುವವು. ಇಲ್ಲಿಯೇ ನಾರಕರು, ದೇವತೆಗಳು, ತಿರ್ಯಂಚಗಳು ಹಾಗೂ ಮಾನುಷರು ನೆಲೆಯಾಗಿರುವರು.

"ಕೊಲೆ ಪುಸಿ ಚೌರ್ಯ ಮದ್ಯ ವನಿತಾ ರತಿಸೇವೆ ಅತೀವಕಾಂಕ್ಷೆಯಂ
ತೊಲಗಿಸಿ ತಾಂ ದೃಢವ್ರತಿಕನಾಗಿ ಚತುರ್ವಿಧ ದಾನದಲ್ಲಿಯುಂ
ನೆಲಸಿದ ಭಕ್ತಿಯರ್ತಿಯ ಕಷಾಯ ಸಮನ್ವಿತನಾದ ಜೀವನುಂ
ಸಲೆ ನೆಲೆಯಪ್ಪ ಸ್ವರ್ಗದೊಳು ಪುಟ್ಟಿ ಸುಖಾಸ್ಪದಿಯಕ್ಕಮೋಘದಿಂ ॥೬.೨೯॥"[೩೩೨]

ಹಿಂಸೆ, ಅನೃತ, ಕಳ್ಳತನ, ಮದ್ಯಸೇವನೆ, ಅನ್ಯಸ್ತ್ರೀಗಮನದಲ್ಲಿರುವ ಆಕಾಂಕ್ಷೆಯನ್ನು ತೊಲಗಿಸಿ, ದೃಢವ್ರತಿಕನಾಗಿ ನಾಲ್ಕು ವಿಧದ ದಾನದಲ್ಲಿ ತೊಡಗಿಸಿಕೊಳ್ಳುವುದು. ಭಕ್ತಿಯಿಂದ ಕಷಾಗಳೆಲ್ಲವನ್ನು ಕಳೆದುಕೊಂಡು ಸುಖಾವಾಸವಾದ ಅಮೋಘಸ್ವರ್ಗದಲ್ಲಿ ನೆಲೆಯಾಗುವ ಆಶಯವನ್ನು ಹೊಂದಬೇಕು ಎಂದು ವಿವರಿಸುತ್ತ, ಏತನ್ಮಧ್ಯೆ ಸುಪಾರ್ಶ್ವನಾಥ, ಚಂದ್ರಪ್ರಭ, ಪುಷ್ಪದಂತ, ಶೀತಲನಾಥ, ಶ್ರೇಯಾಂಸನಾಥ ತೀರ್ಥಂಕರರನ್ನೂ ಸ್ಮರಿಸಿಕೊಳ್ಳುತ್ತಾನೆ ಕವಿ. ಸಮ್ಯಕ್ತ್ವ, ಅಣುವ್ರತಗಳನ್ನು ಪಾಲಿಸುತ್ತ, ಸಕಲ ಧರ್ಮಧ್ಯಾನಪರನಾಗಿ, ಸಂಸಾರ, ವೇದನೀಯ ದುರ್ಮೋಹಗಳನ್ನು ದೂರವಾಗಿಸುವುದು.

"ನರತಿರ್ಯಂಚದ ದುಃಖಂ
ಕರ ಪಾಪದ ಫಲದಿನಕ್ಕು ಪುಣ್ಯದ ಫಲದಿಂ
ಸುರಲೋಕಂಗಳ ಸುಖಮುಂ
ಪರಮಾರ್ಥಂ ತಪ್ಪದೆಂದು ಚಿಂತಿಸು ಜೀವಾ ॥೬.೩೦೬॥"

---

೩೩೧. ಸ್ಯಾದ್ವಾದಕೇಸರಿ ೧೦೮ ಶ್ರೀ ಆಚಾರ್ಯ ಪಾಯಸಾಗರ ಮುನಿಗಳು ; **ಸ್ವಾಮಿ ಕಾರ್ತಿಕೇಯಾನುಪ್ರೇಕ್ಷಾ (ಕನ್ನಡ ಟೀಕೆ)** : ಪುಟ. ೧೫
೩೩೨. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ** : ಪುಟ. ೮೪

ನರಕ, ತಿರ್ಯಂಚದ ದುಃಖವು ಪಾಪದ ಫಲವಾದರೆ, ಸುರಲೋಕದ ಸುಖಗಳು ಲಭಿಸುತ್ತವೆಂಬುದನ್ನು ಜೀವನು ಅರಿತುಕೊಳ್ಳಬೇಕು. ಹೀಗಿರುವ ಲೋಕದಲ್ಲಿ ಆತ್ಮನು ಅಲೆಯುವನೆಂಬುದನ್ನು ಪುನರ್ಮನನ ಮಾಡುವುದು ಪ್ರತಿ ಜೀವಿಯ ಗುಣವಾಗಬೇಕೆಂದು ಕವಿ ವಿಜಯಣ್ಣನು ಉಪದೇಶಿಸುತ್ತಾನೆ.

೩.೮.೮. ಅಶುಚಿತ್ವಾನುಪ್ರೇಕ್ಷೆ:

ಕವಿ ವಿಜಯಣ್ಣನು ಏಳನೆಯ ತೀರ್ಥಂಕರನಾದ ವಾಸುಪೂಜ್ಯನಿಗೆ ನಮಿಸಿ ಅಶುಚಿತ್ವದ ಕುರಿತು ಹೇಳುತ್ತಾನೆ.

"ಎಲುವಿನ ಬಲುಗಂಬ ಪಂಜರ ಮಾಂಸದ
ನೆಲೆಯೆ ಗೋಡೆ ನೋಡೀಗ
ಬಲು ನರಗಳ ಕಟ್ಟು ತೊಗಲಿನ ಹೊದಕೆಯ
ಮಲಮೂತ್ರದಿ ಪರಿಪೂರ್ಣ ॥೭.೦೩॥

ಶುಕ್ಲ ಶೋಣಿತ ಬೀಜ ಬೀಭತ್ಸು ನೋಡಲು
ದುಃಖ ಬಹಳ ವ್ಯಾಧಿಗಳು
ಮಿಕ್ಕ ಕ್ರಿಮಿಗಳತಿ ಪರಿಪೂರ್ಣಂಗಳು
ತಕ್ಕದೆಂದೇಕೆ ಬಣ್ಣಿಸುವೆ ॥೭.೦೪॥

ಒಂಬತ್ತು ಬಾಗಿಲುಗಳೊಳನವರತವು
ತುಂಬಿ ಸುರಿವ ದುರ್ಗಂಧ
ನಂಬುಗೆಯಿಲ್ಲಾಕ್ಷಣದಿ ನಿಲ್ಲದಜಿಕೊಳು
ಸಂಭ್ರಮ ಬೇಡೆಲೆ ಜೀವ ॥೭.೦೫॥"[೩೩೩]

ದೇಹವೆಂಬುದು ಎಲುಬಿನ ಕಂಬಗಳಿಂದ ಕೂಡಿದ ಪಂಜರ, ಮಾಂಸದ ಗೋಡೆ, ನರಗಳ ಕಟ್ಟು, ಚರ್ಮದ ಹೊದಿಕೆ. ಮಲಮೂತ್ರಾದಿಗಳಿಂದ ಕೂಡಿದ ಶುಕ್ಲ, ಶೋಣಿತಗಳಿಂದ ವ್ಯಾದಿಗಳಿಗೆ ಆಗರವಾಗಿ, ದುಃಖಹೇತುವಾಗಿದೆ. ನವದ್ವಾರಗಳಿಂದ ಸದಾ ದುರ್ಗಂಧವೇ ಹೊರಹೊಮ್ಮುತ್ತಿರುವುದು. ಇಂತಹ ದೇಹದ ಮೇಲೆ ಅತಿ ನಂಬುಗೆಯಿಡುವುದು ಮೂಢತನವೇ ಸರಿ. ಈ ಶರೀರವೆಂಬುದು ಮುಂದೆ ಉತ್ತಮಗತಿಗಳನ್ನು ಪಡೆಯಲು ಮಾಧ್ಯಮವಾಗಬೇಕೆ ಹೊರತು ಭೋಗಿಸುವುದಕ್ಕಲ್ಲ. ವ್ರತ, ಗುಣ, ಚಾರಿತ್ರಗಳಿಂದ ಶರೀರವನ್ನು ದಂಡಿಸಿದರೆ ಮಾತ್ರ ಅನಂತ ಸುಖವನ್ನು ಪಡೆಯಲು ಸಾಧ್ಯವಾಗುವುದು. ಅದು ಸಮ್ಯಕ್‌ದರ್ಶನಾದಿಗಳಿಂದ ಸಾಧಿತವಾಗುವುದು. ಈ ಸಮ್ಯಕ್‌ದರ್ಶನಾದಿಗಳೇ ಆತ್ಮನಿಗೆ ಅಂತ್ಯಶುದ್ಧಿಕಾರಣಗಳು ಎಂದು ತಿಳಿಸುವುದೇ ಅಶುಚಿತ್ವಾನುಪ್ರೇಕ್ಷೆ ಎಂದು ಕವಿಯು ಉಪದೇಶಿಸುತ್ತಾನೆ.

---

೩೩೩. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ** : ಪುಟ. ೮೫

೩.೮.೯. ಆಸ್ರವಾನುಪ್ರೇಕ್ಷೆ:

ಕವಿಯು ಹದಿಮೂರನೆಯ ತೀರ್ಥಂಕರನಾದ ವಿಮಲನಾಥರಿಗೆ ವಂದಿಸಿ, ಕರ್ಮದಾಸ್ರವವನ್ನು ತಿಳಿಯ ಹೇಳುತ್ತಾನೆ. ತನು, ಮನ, ಕಾಯಗಳಿಂದ ಶುಭಾಶುಭ ಕರ್ಮಗಳು ಬಂದು ಸೇರುವುದೇ ಆಸ್ರವಾಗಿದೆ. ಅವ್ರತಗಳ ಆಚರಣೆಯಿಂದ ಕಷಾಯಗಳೊದಗುತ್ತವೆ. ಅದರ ಪರಿಣಾಮವೇ ಅಶುಭ ಕರ್ಮದಾಸ್ರವವಾಗಿದೆ.

೩.೮.೧೦. ಸಂವರಾನುಪ್ರೇಕ್ಷೆ:

"ಪರಮಾನಂತ ಚತುಷ್ಟಯ ನಿಳಯಗೆ
ಸುರ ನರ ಖಚರ ವಂದಿತಗೆ
ನಿರುತಮನಂತನಾಥಗೆ ನಾನು ವಂದಿಸಿ
ಅಱೆಪುವೆ ಸಂವರತತಿಯ ॥೯.೧॥

ಪರಿಣಾಮದ ಪೊಲ್ಲಮೆಯಿಂದ ನಿಲ್ಲದೆ
ಬರುತಿಹ ಪಾಪಾಸ್ರವವ
ಬರಲೀಯದೆ ಸಮ್ಯಕ್ತ್ವಚಾರಿತ್ರವ
ಧರಿಯಿಸುವುದೆ ಸಂವರೆಯು ॥೯.೨॥"[೩೩೪]

ಸುರ, ನರ, ಖೇಚರರಿಂದ ವಂದಿತನಾಗಿ ಅನಂತಚತುಷ್ಟಯ[೩೩೫]ಗಳನ್ನು ಹೊಂದಿದ ಹದಿನಾಲ್ಕನೆಯ ತೀಥಂಕರನಾದ ಅನಂತನಾಥನಿಗೆ ವಂದಿಸಿ ಸಂವರಾನುಪ್ರೇಕ್ಷೆಯನ್ನು ನಿರೂಪಿಸುತ್ತಾನೆ. ಕೆಟ್ಟ ಪರಿಣಾಮಗಳಿಂದ ಪಾಪಾಸ್ರವಗಳು ಆಗದಂತೆ ತಡೆಯುವ ಸಮ್ಯಚಾರಿತ್ರಗಳನ್ನು ಧರಿಸುವುದೇ ಸಂವರವಾಗಿದೆ. ಅವ್ರತಗಳನ್ನು ಜಯಿಸಿ, ಅಷ್ಟಮದಗಳನ್ನು ಆರ್ಜವಗುಣದಿಂದ ಅಳಿಸುವುದು. ಹೀಗೆ ಭವಾಂತರಗಳಲ್ಲಿ ಪ್ರಾಪ್ತಿಯಾದ ದುಃಖವನ್ನು ಕ್ಷಯಿಸಿ, ಲೋಭವನ್ನು ನಿರ್ಮಲಗುಣದಿಂದ ನಿಮೂಲವಾಗಿಸುವುದು. ಶುಭಯೋಗಗಳಿಂದ ಅಶುಭಯೋಗಗಳನ್ನು ತಡೆಯುವುದು. ಶುದ್ಧೋಪಯೋಗದಿಂದ ಶೂಭೋಪಯೋಗಗಳನ್ನು ಗೆಲ್ಲುವುದು. ಹೀಗೆ ಸಂಸಾರ ಸಾಗರವನ್ನು ದಾಟಿ ಮೋಕ್ಷಪದವಿಯನ್ನು ಪಡೆಯುವುದೇ ಸಂವರಾನುಪ್ರೇಕ್ಷೆ ಎಂದು ವಿಜಯಣ್ಣ ಕವಿಯು 'ದ್ವಾದಶಾನುಪ್ರೇಕ್ಷೆ' ಗ್ರಂಥದಲ್ಲಿ ನಿರೂಪಿಸುತ್ತಾನೆ.

೩.೮.೧೧. ನಿರ್ಜರಾನುಪ್ರೇಕ್ಷೆ:

ಕವಿಯು ಹದಿನೈದನೆಯ ತೀರ್ಥಂಕರನಾದ ಧರ್ಮನಾಥನಿಗೆ ನಮಿಸಿ, ಕರ್ಮನಿರ್ಜರೆಯನ್ನು ಬೋಧಿಸುವುದಾಗಿ ಹೇಳುತ್ತಾನೆ. ಹಿರಿದಾದ ಕರ್ಮಬಂಧದಲ್ಲಿ ಜೀವನಿಗೆ

---

೩೩೪. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ** : ಪುಟ. ೧೦೪

೩೩೫. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ : **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೧೨
ಅನಂತಚತುಷ್ಟಯ = ತೀರ್ಥಂಕರರಾಗುವವರೆಗೆ ಕರ್ಮಪರಿಣಾಮಗಳು ನಷ್ಟವಾದಮೇಲೆ ಉಂಟಾಗುವ ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತವೀರ್ಯಗಳು ಎಂಬ ನಾಲ್ಕು ಗುಣಗಳು. ಇವು ಸಹಜಶುದ್ಧ ನಿಶ್ಚಯದಿಂದ ಅನಾದಿ, ಅನಂತ, ಅಮೂರ್ತ, ಅತೀಂದ್ರಿಯ ಸ್ವಭಾವದಿಂದ ಕೂಡಿದ ಮತ್ತು ಶುದ್ಧ ಸಹಜಾನಂದ, ಸಹಜದರ್ಶನ, ಸಹಜಚಾರಿತ್ರ ಮತ್ತು ಸಹಜಪರಮ ವೀತರಾಗ ಸುಖಾತ್ಮಕವಾದ ಶುದ್ಧ ಅಂತಸ್ತತ್ತ್ವ ಸ್ವರೂಪವು ಅನಂತ ಚತುಷವಟಯದ ಸ್ವಭಾವವಾಗಿದೆ. ಜ್ಞಾನಾವರಣ, ದರ್ಶನಾವರಣ, ಮೋಹನೀಯ ಹಾಗೂ ಅಂತರಾಯ ಕರ್ಮಗಳ ನಾಶದಿಂದ ಅನಂತಚತುಷ್ಟಯಗಳು ಪ್ರಾಪ್ತವಾಗುವವು.

ಭಾವಕರ್ಮಗಳೂ, ದ್ರವ್ಯಕರ್ಮಗಳೂ ಬಂದು ಸೇರಿಕೊಳ್ಳುತ್ತವೆ. ಅವುಗಳನ್ನು ಬರದಂತೆ ತಡೆಯುವುದೇ ನಿರ್ಜರೆಯಾಗಿದೆ. ಅದರಲ್ಲಿ ಅಕಾಮ ನಿರ್ಜರೆ ಹಾಗೂ ಸಕಾಮ ನಿರ್ಜರೆಗಳೆಂದು ಎರಡು ಭೇದಗಳಿವೆ. ಪೂರ್ವಜನ್ಮಕೃತ ಕರ್ಮಗಳನ್ನು ಅನುಭವಿಸುವುದು ಅಕಾಮ ನಿರ್ಜರೆ. ಒದಗಿದ ಭವದಲ್ಲಿಯ ಶುಭಕರ್ಮಗಳನ್ನು ಅನುಭವಿಸುವುದು ಸಕಾಮ ನಿರ್ಜರೆಯಾಗಿದೆ. ಕರ್ಮದ ಪಿಡುಗನ್ನು ಕಳೆದುಕೊಳ್ಳಬೇಕಾದರೆ ಹನ್ನೆರಡು ಬಗೆಯ ತಪಸ್ಸುಗಳನ್ನಾಚರಿಸಬೇಕು. ಅಂತೆಯೇ ಇಂದ್ರಿಯ ನಿಗ್ರಹವನ್ನೂ ಮಾಡಬೇಕು. ಕರಣತ್ರಯ [೩೩೬] ಗಳನ್ನು ಆಚರಿಸಿ, ಶ್ರದ್ಧಾನುರೂಪವಾದ ಸಮ್ಯಕ್ತ್ವವನ್ನು ಪಡೆಯುವುದು. ಚಾರಿತ್ರ, ಮೋಹನೀಯ, ಅಪ್ರತ್ಯಾಖ್ಯಾನ, ಕ್ಷಯೋಪಶಮ ವ್ರತಗಳನ್ನು ಕೈಕೊಳ್ಳುವುದು.

"ಪಿರಿದಪ್ಪ ಕರ್ಮಬಂಧನ
ನಿರುತಮಸಂಖ್ಯಾತ ಗುಣದಿ ನಿರ್ಜರೆಯಕ್ಕುಂ ॥೧೦.೧೩॥"

ಅಸಂಖ್ಯಾತ ಗುಣಗಳಿಂದ ಹಿರಿದಾದ ಕರ್ಮಬಂಧನವನ್ನು ತಡೆಯುವುದೇ ನಿರ್ಜರೆಯಾಗಿದೆ. ಹೀಗೆ ಕವಿ ವಿಜಯಣ್ಣನು ನಿರ್ಜರಾನುಪ್ರೇಕ್ಷೆಯನ್ನು ವಿವರಿಸುತ್ತಾನೆ.

೩.೮.೧೨. ಧರ್ಮಾನುಪ್ರೇಕ್ಷೆ:

ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನಿಗೆ ವಂದಿಸಿ, ಲೋಕಕ್ಕೆ ಲೇಸೆನಿಸುವ ಧರ್ಮವನ್ನು ಹೇಳುವುದಾಗಿ ಕವಿ ತಿಳಿಸುತ್ತಾನೆ. ಈ ಮೊದಲೊದಗಿದ ಕರ್ಮಗಳನ್ನು ಧರ್ಮದ ನೆಲೆಯಿಂದ ತೊಡೆದುಹಾಕಬೇಕು. ಅದಕ್ಕಾಗಿ ನಿರ್ಮಲಸುಖಕ್ಕೆ ಕಾರಣವೆನಿಸುವ ದಯಾಮೂಲದ ಸದ್ಧರ್ಮವನ್ನು ಅನುಸರಿಸುವುದು ಎಂದು ಕರೆ ನೀಡುತ್ತಾನೆ. ಹದಿನೆಂಟು ಬಗೆಯ ದೋಷಗಳಿಂದ ನಿವೃತ್ತನಾದ ಜಿನೇಂದ್ರನ ಮುಖದಿಂದ ಹೊರಬಂದ ಉಪದೇಶವೇ ಧರ್ಮವಾಗಿದೆ. ಇದರಲ್ಲಿ ಶ್ರಾವಕಧರ್ಮ ಹಾಗೂ ಮುನಿಧರ್ಮಗಳೆಂದು ಎರಡು ಭೇದಗಳಿವೆ. ಅವುಗಳನ್ನು ಬಹುವಿಧವಾಗಿ ಅರಿತುಕೊಂಡು ನಡೆದುಕೊಳ್ಳಬೇಕು. ಸೂಯೋದಯದ ಮುನ್ನ ಹಾಗೂ ಸೂರ್ಯಾಸ್ತದ ನಂತರ ಆಹಾರ ಸ್ವೀಕಾರವನ್ನು ವರ್ಜಿಸಬೇಕು. ಆದರೆ ರಾತ್ರಿ ವೇಳೆಯಲ್ಲಿ ಅನಿವಾರ್ಯವೆನಿಸಿದಾಗ ನೀರು, ಔಷಧಿ, ಕರ್ಪೂರ, ಲವಂಗ, ವೀಳ್ಯದೆಲೆ, ಏಲಕ್ಕಿಗಳನ್ನು ಸ್ವೀಕರಿಸಬಹುದೆಂದು ಕವಿಯು ಉಪದೇಶಿಸುತ್ತಾನೆ.

"ಸತ್ಪಾತ್ರ ದಾನ ಸಂಸಾರಸಮುದ್ರಕೆ
ವಿಸ್ತರ ಛೈತ್ರವೆನಿಸುಗುಂ
ಮತ್ತೆ ಹಿಂಸಾದಿ ಪಾಪಾಗ್ನಿಯ ಕೆಡಿಸುವ
ಉತ್ತಮ ಜಲಸಮವೆನಿಕುಂ ॥೧೧.೩೬೧" ।"[೩೩೭]

೩೩೬. ಡಾ. ಸರಸ್ವತಿ ವಿಜಯಕುಮಾರ್, ಬಾ. ವೇ. ಶ್ರೀಧರ ; **ಜೈನ ಪಾರಿಭಾಷಿಕ ಪದವಿವರ ಕೋಶ** : ಪುಟ. ೯೪ ; **ಕರಣ** = ಅಧಃಪ್ರವೃತ್ತಿಕರಣ, ಅಪೂರ್ವಕರಣ, ಅನಿವೃತ್ತಕರಣ ಇವು ಮೂರು ಕರಣ ಶುದ್ಧಿಗಳಿಂದ ಸಮ್ಯಕ್ತ್ವ ಸಾಧನೆಯೆಂಬುದು ಸುಲಭವಾಗುತ್ತದೆ.

೩೩೭. ಕೆ. ಆರ್. ಶೇಷಗಿರಿ (ಸಂ); **ದ್ವಾದಶಾನುಪ್ರೇಕ್ಷೆ** : ಪುಟ. ೧೭೨

ಸತ್ಪಾತ್ರರಿಗೆ ಆಹಾರದಾನ, ಅಭಯದಾನ, ಔಷಧದಾನ, ಶಾಸ್ತ್ರದಾನಗಳನ್ನು ಮಾಡಬೇಕು. ಅದುವೆ ಸಂಸಾರಸಾಗರದಿಂದಾಚೆಗೆ ಕರೆದೊಯ್ಯುವ ದೋಣಿಯಂತೆ ಕಾರ್ಯನಿರ್ವಹಿಸುತ್ತದೆ. ಅಂತೆಯೇ ಹಿಂಸಾದಿ ಪಾಪಾಗ್ನಿಗಳನ್ನು ಆರಿಸುವ ಜಲವೆನಿಸುತ್ತದೆ. ಗಂಧಪುಷ್ಪ, ತಾಂಬೂಲಾದಿ ಭೋಗವಸ್ತುಗಳನ್ನು ಪ್ರಮಾಣವರಿತು ಅನುಭವಿಸುವುದು. ಇದನ್ನು ಭೋಗೋಪಭೋಗ ವ್ರತ ಎಂದು ಕರೆಯಲಾಗುತ್ತದೆ. ಇದರಲ್ಲಿ ತ್ರಸಾಘಾತ, ಪ್ರಮಾದ, ಬಹುವಧೆ, ಅನುಪ, ಸೇವ್ಯ ಎಂದು ಐದು ಭೇದಗಳಿವೆ. ಭೋಗೋಪಭೋಗಕ್ಕೆ ಸಚ್ಚಿತ್ತಾಹಾರ, ಸಚಿತ್ತ ಸಂಬಧಾಹಾರ, ಸಚ್ಚಿತ್ತ ಸಮ್ಮಿಶ್ರಾಹಾರಮ ಅಭಿಷವಾಹಾರ, ದುಃಪಕ್ವಾಹಾರಗಳೆಂದು ಐದು ಅತಿಚಾರಗಳಿವೆ. ಇನ್ನು ಯತಿಗಳು ದಶಧರ್ಮಗಳನ್ನು ತಪ್ಪದೇ ಪಾಲಿಸಬೇಕು. ಅದರಿಂದಲೇ ಕೈವಲ್ಯಪದವಿ ದೊರೆಯುವುದು ಎಂದು ಉಪದೇಶಿಸುತ್ತ, ಕುಂಂಥುನಾಥ, ಅರಹನಾಥ, ಮಲ್ಲಿನಾಥ, ಮುನಿಸುವ್ರತ, ನಮಿನಾಥ, ನೇಮಿನಾಥ ಹಾಗೂ ಪಾರ್ಶ್ವನಾಥ ತೀರ್ಥಂಕರರನ್ನು ಸ್ಮರಿಸಿಕೊಂಡು ನಮಿಸುತ್ತಾನೆ.

"ಇದುವೆ ಜಿನೇಶ್ವರ ಪೇಳಿದ ಸದ್ಧರ್ಮ
ಇದುವೆ ಕರ್ಮಕ್ಷಯಧರ್ಮ
ಇದುವೆ ಮುದದಿ ತಾಳಿ ನಡೆಸುವ ಭವ್ಯರು
ಸದಮಳ ಪದವನೆಯ್ದುವರು ॥೧೧.೭೮೦॥

ಕಾಮಸನ್ನಿಭನಪ್ಪ ರೂಪು ಸೌಭಾಗ್ಯವು
ಕಾಮಿತ ಫಲಸಿದ್ಧಿಗಳು
ಪ್ರೇಮಮಾರೋಗ್ಯವು ಬುದ್ಧಿ ಚಾತುರ್ಯವು
ಈ ಮಹಾಧರ್ಮದಿಂದಹವು ॥೧೧.೨೮೧॥

ಚೆಲುವು ವಿಲಾಸ ವಿವೇಕಂ
ಬಲ ಪರಿಜನ ಕಾಮ ಭೋಗಮುಪಭೋಗಂಗಳ್
ಸಲೆ ರಾಜ್ಯೈಶ್ವರ್ಯಂಗಳ್
ವಿಲಸತ್ಸದ್ಧರ್ಮದಿಂದಲಕ್ಕುಮಮೋಘಂ ॥೧೧.೭೮೬॥"[೩೩೮]

ಸರಿಯಾದ ದಾರಿಯಲ್ಲಿ ತತ್ತ್ವಪಾಲನೆ ಮಾಡುವುದರಿಂದ ರಾಜಾಧಿರಾಜಪದವಿಯೂ, ದೇವೇಂದ್ರ ಪದವಿಯೂ, ತೇಜಸ್ಸು, ಧೈರ್ಯ, ಸೌಂದರ್ಯ, ಶೌರ್ಯ, ಸೌಭಾಗ್ಯಗಳು ದೊರೆಯುವವು. ಆದುದರಿಂದ "ಸದ್ಧರ್ಮವೊಂದೇ ನಿಯಮದಿಂದಕ್ಕುಮೆಂದು ಚಿಂತಿಸುವುದು ಧರ್ಮಾನುಪ್ರೇಕ್ಷೆಯಕ್ಕುಂ"[೩೩೯] ಎಂದು ಹೇಳುತ್ತಾನೆ ಕವಿ. ಸದ್ಧರ್ಮವೆನಿಕೊಂಡ ಜಿನಧರ್ಮವು ಧರ್ಮಾನುಪ್ರೇಕ್ಷೆಯ ನೆರಳಿನಲ್ಲಿಯೇ ಮುನಿಧರ್ಮ, ಶ್ರಾವಕಧರ್ಮಗಳಿಂದ ಉತ್ಕೃಷ್ಟವಾಗಿ ನೆಲೆನಿಂತಿದೆ.

---

೩೩೮. ಕೆ. ಆರ್. ಶೇಷಗಿರಿ (ಸಂ) ; **ದ್ವಾದಶಾನುಪ್ರೇಕ್ಷೆ** ; ಪುಟ. ೨೪೨, ೨೪೩.
೩೩೯. **ಅದೇ :** ಪುಟ. ೨೪೪

೩.೮.೧೩. ಬೋಧಿದುರ್ಲಭಾನುಪ್ರೇಕ್ಷೆ:

ಕೊನೆಯ ಅನುಪ್ರೇಕಷೆಯಾಗಿ ಬೋಧಿದುರ್ಲಭವನ್ನು ಬೋಧಿಸುವ ಮುನ್ನ ಕವಿಯು ಕೊನೆಯ ತೀರ್ಥಂಕರನಾದ ವರ್ಧಮಾನ ಮಹಾವೀರರಿಗೆ ನಮಿಸುತ್ತಾನೆ. ಆತ್ಮವು ಅನಂತಕಾಲದಲ್ಲಿ ನಿಗೋಧದಲ್ಲಿ ತೀವ್ರವಾದ ನೋವನ್ನು ಅನುಭವಿಸಿ, ಪೃಥ್ವ್ಯಾದಿಗಳಲ್ಲಿ ನೆಲೆಸುವುದು ಕಷ್ಟಕರವಾದುದು. ಹೀಗಿರುವಾಗ ತ್ರಸ ಜೀವಿಯಾಗಿ, ಬಹುಕಾಲದವರೆಗೆ ಬಳಲಿ ಪಕ್ಷಿಯಾಗುವುದು. ನಂತರ ಕ್ರೂರಮೃಗವಾಗಿ ಅನೇಕ ಪಾಪಕಾರ್ಯಗಳನ್ನು ಕೈಕೊಂಡು ನರಕ ಜೀವನವನ್ನು ಅನುಭವಿಸುತ್ತದೆ. ಹೀಗಿರುವ ಜೀವನು ಮನುಷ್ಯ ಜನ್ಮವನ್ನು ಪಡೆಯುವುದು ಅತ್ಯಂತ ದುರ್ಲಭವಾದುದು. ಹಾಗೆ ಪಡೆದ ಜನ್ಮದಲ್ಲಿ ಎಲ್ಲವೂ ಯೋಗ್ಯವಾಗಿರುವುದೂ ಅಷ್ಟೇ ದುರ್ಲಭವಾದುದು. ಹೀಗೆ ಅನೇಕ ಭವಾಂತರಗಳನ್ನು ಪಡೆದು ಮನುಷ್ಯ ಜನ್ಮಕ್ಕೆ ಬಂದಿರುವ ಆತ್ಮನು ಮೋಕ್ಷಮಾರ್ಗವನ್ನು ಮಾತ್ರ ಹುಡುಕಬೇಕೇ ಹೊರತು, ಅನ್ಯ ವಿಷಯಗಳಲ್ಲಿ ತೊಡಗಿಕೊಳ್ಳಬಾರದು. ಒಂದುವೇಳೆ ಹಾಗಾದರೆ ಅದು ಬೂದಿಯನ್ನು ಪಡೆಯುವ ಸಲುವಾಗಿ ಅನರ್ಘ್ಯ ರತ್ನವನ್ನು ಸುಟ್ಟಂತಾಗುತ್ತದೆ. ಆದುದರಿಂದ ಅಂತಹ ದುರ್ಲಭವೆನಿಸಿದ ಬೋಧನೆಯು ಲಭಿಸಿದಾಗ ಮೋಕ್ಷಮಾರ್ಗವು ತೆರೆದುಕೊಳ್ಳುತ್ತದೆ. ಆ ಬೋಧನೆಯ ಲಾಭಕ್ಕಾಗಿ ಚಿಂತಿಸುವುದೇ ಬೋಧಿದುರ್ಲಭಾನುಪ್ರೇಕ್ಷೆ ಎನಿಸಿಕೊಳ್ಳುತ್ತದೆ. ಎಂದು ಉಪದೇಶಿಸಿದ ವಿಜಯಣ್ಣ ಕವಿಯು ಹನ್ನೆರಡನೆಯ ಅಧ್ಯಾಯದ ಕೊನೆಯಲ್ಲಿ ಸ್ವವಿಚಾರವನ್ನು ಪ್ರಸ್ತಾಪಿಸುತ್ತಾನೆ.

"ವರಕುಂತಳ ದೇಶದ ಬೆಳುವಲದೊಳು
ಪುರವೆಸೆದಿಹುದತಿ ಚೆಲುವಿಂ
ಪರಿವೇಷ್ಟಿತ ಕೋಂಟೆ ನಾಲ್ಕು ಗೋಪುರದ್ವಾರ
ದೊರೆವೆತ್ತಮ್ಮೆನಬಾವಿ ॥೧೨.೩೩॥

ಆ ಪುರಾಧಿಪನೊಡನಖಿಳ ಗುಣಾಢ್ಯನು
ರೂಪು ಸೌಭಾಗ್ಯ ಸಂಪನ್ನ
ಭೂಪತಿಗಳೊಳಧಿಕನು ಜಿನಧರ್ಮ ಪ್ರ
ದಿಪಕನಧಿಕ ಸದೃಷ್ಟಿ ॥೧೨.೩೪॥

ಇಂತಪ್ಪ ಶಾಸ್ತ್ರವಮ್ಮೆನಬಾವಿಯ ಶ್ರೀ
ಶಾಂತಿನಾಥನ ಬಸದಿಯಲಿ
ಸಂತೋಷದಿಂ ಹೊನ್ನ ಬಂದಿಯ ದೇವೇಂದ್ರ
ನಿಂತು ಸಂಪೂರ್ಣ ಮಾಡಿಸಿದ ॥೧೨.೩೯॥"[೩೪೦]

ಕುಂತಳದೇಶದ ಬೆಳುವಲ ನಾಡಿನಲ್ಲಿ ಅಮ್ಮೆನಬಾವಿಯನ್ನು ಗುಣಾಢ್ಯನೆನಿಸಿದ, ಸೌಭಾಗ್ಯಸಂಪನ್ನನಾದ ಜಿನಪ್ರದೀಪಕನೆನಿಸಿದ ದೇವಭೂಪನು ಆಳುತ್ತಿದ್ದನು. ಆ ಭೂಪತಿಯು ನಾಡಿನ ಮೇಲೆ ಅತಿಯಾದ ಅಭಿಮಾನವನ್ನುಳ್ಳವನಾಗಿದ್ದನು. ಪ್ರಾಕೃತ ಹಾಗೂ ಸಂಸ್ಕೃತಗಳು

೩೪೦. ಕೆ. ಆರ್. ಶೇಷಗಿರಿ (ಸಂ); ದ್ವಾದಶಾನುಪ್ರೇಕ್ಷೆ : ಪುಟ. ೨೫೧, ೨೫೨.

ಕರ್ಣಾಟಕದ ಜನತೆಗೆ ತಿಳಿಯುವುದಿಲ್ಲವೆಂದು ಲೋಕೋಪಕಾರದ ನಿಮಿತ್ತವಾಗಿ ಶಾಸ್ತ್ರವನ್ನು ಹೊಸಕನ್ನಡದಲ್ಲಿ ಸುಂದರವಾಗಿ ನಿರೂಪಿಸಬೇಕೆಂದು ಮುದದಿಂದ ಹೇಳಿದನು. ಆದುದರಿಂದ ವಿಭವ ಸಂವತ್ಸರದ ಮಧುಮಾಸ ಅಂದರೆ ಫಾಲ್ಗುಣಮಾಸದಲ್ಲಿ ಶಾಸ್ತ್ರ ಸಂಪೂರ್ಣವಾಯಿತು. ಹೀಗಿರುವ ಈ ಶಾಸ್ತ್ರವನ್ನು ಅಮ್ಮೆನಬಾವಿಯ ಶ್ರೀ ಶಾಂತಿನಾಥ ಬಸದಿಯಲ್ಲಿ ಹೊನ್ನಬಂದಿಯ ದೇವೇಂದ್ರನು ಮುಂದೆ ನಿಂತು ಸಂಪೂರ್ಣ ಮಾಡಿಸಿದನು ಎಂದು ಕವಿಯು ವಿಶ್ಲೇಷಿಸುತ್ತಾನೆ. ಅಂತೆಯೇ ಪ್ರತಿ ಅಧ್ಯಾಯದ ಕೊನೆಯಲ್ಲಿ **"ಇತಿ ಶ್ರೀಮದ್ದೇವೇಂದ್ರ ವೃಂದಮಣಿಮಕುಟ ಕಿರಣರಂಜಿತ ಪಾದಾರವಿಂದದ್ವಂದ್ವ ಭಗವದರ್ಹತ್ಪರಮೇಶ್ವ ಮುಖಕಮಲವಿನಿರ್ಗತ ದ್ವಾದಶಾನುಪ್ರೇಕ್ಷೆಯೊಳ್ ... ನಿರೂಪಣಂ ..."** ಎಂದು ಹೇಳಿ ಅನುಪ್ರೇಕ್ಷೆಯ ಹೆಸರನ್ನೂ, ಪರಿಚ್ಛೇದದ ಸಂಖ್ಯೆಯನ್ನೂ ಪ್ರಸ್ತಾಪಿಸುತ್ತಾನೆ.

ಹೀಗೆ ವಿಜಯಣ್ಣ ಕವಿಯು ತನ್ನ 'ದ್ವಾದಶಾನುಪ್ರೇಕ್ಷೆ' ಗ್ರಂಥದಲ್ಲಿ ಅನುಪ್ರೇಕ್ಷೆಗಳನ್ನು ವಿಶದಪೂರ್ವಕವಾಗಿ ಉಪದೇಶಿಸುತ್ತಾನೆ. ಪ್ರಸ್ತುತ ಅಧ್ಯಾಯದಲ್ಲಿಯೇ ಬಂಧುವರ್ಮ ಕವಿಯ 'ಜೀವಸಂಬೋಧನಂ' ಕೃತಿಯೂ ದ್ವಾದಶಾನುಪ್ರೇಕ್ಷೆಗಳನ್ನು ಬೋಧಿಸುತ್ತದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಉಚಿತವಾಗಿದೆ. ಇವೆರಡೂ ಗ್ರಂಥಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ ಕೊನೆಯ ಎರಡು ಅಧ್ಯಾಯಗಳಾದ ಬೋಧಿದುರ್ಲಭಾನುಪ್ರೇಕ್ಷೆ ಹಾಗೂ ಧರ್ಮಾನುಪ್ರೇಕ್ಷೆ ಹಿಂದುಮುಂದಾಗಿವೆ. ವಿಜಯಣ್ಣ ಕವಿಯು ಲೋಕಾನುಪ್ರೇಕ್ಷೆ ಪರಿಚ್ಛೇದವನ್ನು ಬಂಧುವರ್ಮನಿಗಿಂತ ವಿಸ್ತಾರವಾಗಿ ಬೋಧಿಸುತ್ತಾನೆ. ಆ ವಿಸ್ತೃತ ವಿಷಯದ ವಿಚಾರಗಳು ಇದೇ ಅಧ್ಯಾಯದಲ್ಲಿ ಅಧ್ಯಯನ ಮಾಡಿರುವ ದಿವಾಕರಣಂದಿಯ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ' ಗ್ರಂಥದಲ್ಲಿ ಪ್ರಸ್ತಾಪಿತವಾಗಿರುವುದರಿಂದ ವಿಜಯಣ್ಣನ ಲೋಕಾನುಪ್ರೇಕ್ಷೆಯನ್ನು ಇಲ್ಲಿ ವಿಸ್ತರಿಸಿರುವುದಿಲ್ಲ. ಕವಿಯು ಉಳಿದ ಹತ್ತು ಅನುಪ್ರೇಕ್ಷೆಗಳಿಗೆ ಹೋಲಿಸಿದರೆ ಲೋಕಾನುಪ್ರೇಕ್ಷೆಗಳು ಅತೀ ವಿಸ್ತೃತವಾಗಿ ಪ್ರಸ್ತುತಪಡಿಸಿದ್ದಾನೆ. ಒಟ್ಟಾರೆಯಾಗಿ ಗ್ರಂಥದಲ್ಲಿ ಜೈನಧರ್ಮದ ವಿಚಾರಗಳನ್ನು ಬಿಡಿಮುತ್ತುಗಳಂತೆ ಬಿಡಿಸಿಟ್ಟು, ಓದುಗನಿಗೆ ಸುಲಭವಾಗಿ ಮುಟ್ಟುವಂತೆ ಸಾಂಗತ್ಯದಲ್ಲಿ ನಿರೂಪಿಸಿದ್ದಾನೆ. ಹಾಗೆಯೇ ಈ ಮೊದಲೇ ಹೇಳಿದಂತೆ ಬಂಧುವರ್ಮನು 'ಜೀವಸಂಬೋಧನಂ'ನ ಒಂದೊಂದೂ ಅಧ್ಯಾಯಗಳಲ್ಲಿ ಅನುಪ್ರೇಕ್ಷೆಯನ್ನು ನಿರೂಪಿಸಿದ ಮೇಲೆ ದೃಷ್ಟಾಂತ ಕಥೆಗಳನ್ನು ನಿರೂಪಿಸುತ್ತಾನೆ. ಆದರೆ ವಿಜಯಣ್ಣನ ಕೃತಿಯಲ್ಲಿ ಕಥೆಗಳಿಲ್ಲ. ಆದರೆ ಅಲ್ಲಲ್ಲಿ ಪುರಾಣ ವ್ಯಕ್ತಿಗಳ ಹೆಸರುಗಳನ್ನು ಪ್ರಸ್ತಾಪಿಸುತ್ತಾನೆ. ಆ ಹೆಸರುಗಳು ಹೀಗಿವೆ: ವಿದ್ಯುಚ್ಚೋರ, ನಾಗಶ್ರೀ, ಬಲದೇವ, ವಾಸುದೇವ, ರಾವಣ, ಸುಭೌಮ, ಅಮಿತಾರಿಶಕ್ತಿ, ಅಮೃತಮತಿ, ಪಾಂಡವರು, ಬಕ, ಚಾರುದತ್ತ, ಬ್ರಹ್ಮದತ್ತ, ಶ್ರೀಮತಿ, ವಜ್ರಜಂಘ, ಶ್ರೇಯಾಂಸ, ಶ್ರೀಷೇಣ, ದಂಡಕ, ವೃಷಭಸೇನೆ, ಕೌಂಡೇಶ, ಸೂರಕ, ಮಂಡೂಕ, ಉದ್ದಾಯನ, ಪ್ರಭಾವತಿ.

ಇಬ್ಬರೂ ಕವಿಗಳು ತಮ್ಮ ಗ್ರಂಥಗಳಲ್ಲಿ ತಮ್ಮದೇ ಆದ ಕಾವ್ಯ ಪ್ರೌಢಿಮೆಯನ್ನು ಮೆರೆದಿದ್ದಾರೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಲೇ ಬೇಕಾದ ವಿಷಯ. ಸಾಂಧರ್ಬಿಕವಾಗಿ ಅಲಂಕಾರಗಳನ್ನೂ, ಛಂದಸ್ಸಿನ ಮಟ್ಟುಗಳನ್ನು ಬದಲಾಯಿಸಿಕೊಂಡು ಕೃತಿರತ್ನಮಾಲೆಗಳನ್ನು ಹೆಣೆಯುತ್ತಾರೆ. ಅಲ್ಲದೇ ಬಂಧುವರ್ಮನ 'ಜೀವಸಂಬೋಧನಂ' ಹಾಗೂ ವಿಜಯಣ್ಣ ಕವಿಯ 'ದ್ವಾದಶಾನುಪ್ರೇಕ್ಷೆ' ಗ್ರಂಥಗಳಲ್ಲಿ ವಿಷಯಸಾಮ್ಯತೆಯಿದೆ ಎಂಬುದು ಉಲ್ಲೇಖನೀಯ.

ಒಟ್ಟಂದದಲ್ಲಿ ಈ ಮೇಲಿನ ಎಲ್ಲ ಕೃತಿಗಳ ಅಧ್ಯಯನ ಮಾಡಿದಾಗ ವೇದ್ಯವಾಗುವ ಮುಖ್ಯವಿಚಾರವೆಂದರೆ, ಮೋಕ್ಷವೇ ಇವುಗಳ ಗುರಿಯಾಗಿದೆ. ಎಲ್ಲ ಗ್ರಂಥಗಳೂ ಅದನ್ನೇ ಪುನರುಚ್ಚರಿಸುತ್ತವೆ. ಎಲ್ಲ ಧರ್ಮಗಳಲ್ಲಿಯೂ ಜೈನಧರ್ಮದಲ್ಲಿಯೂ ವೈರಾಗ್ಯಕ್ಕೆ ಪ್ರಾಧಾನ್ಯತೆಯಿದೆ. ಎಲ್ಲ ಧರ್ಮಗಳಿಗೆ ತುಲನೆ ಮಾಡಿದರೆ ಜೈನಧರ್ಮದಲ್ಲಿ ವೈರಾಗ್ಯಪರತೆ ಸ್ವಲ್ಪ ಹೆಚ್ಚಾಗಿಯೇ ಕಾಣುತ್ತದೆ. ಅಂತೆಯೇ ಜೈನ ಧಾರ್ಮಿಕ ಶಾಸ್ತ್ರಗ್ರಂಥಗಳೂ ಕೂಡ ಬೆಳೆದು ಬಂದವು. ವೈರಾಗ್ಯ ನಿರೂಪಣೆ, ಭವ್ಯತೆ, ಜೈನಧರ್ಮ ಗ್ರಂಥಗಳ ಮೂಲತತ್ತ್ವ. ಲೋಕಸ್ವರೂಪ, ಜಂಬೂದ್ವೀಪ, ಭಾರತ ಹೈಮವತ ಮುಂತಾಗಿರುವ ಏಳು ಜನಪದಗಳು, ಇವುಗಳನ್ನು ಸುತ್ತುವರೆದ ಕುಲಪರ್ವತಗಳು, ಪರ್ವತದ ಮೇಲಿರುವ ಕೊಳಗಳು, ಮಹಾನದಿಗಳು, ಉತ್ಸರ್ಪಿಣಿ ಅವಸರ್ಪಿಣಿ ಎಂಬ ಕಾಲಘಟ್ಟಗಳು, ಮನುಷ್ಯರು, ಲೋಕವಿಭಾಗ, ಚತುರ್ಗತಿ ಸ್ವರೂಪ ಮೊದಲಾದ ಅಂಶಗಳು ಜೈನಧಾರ್ಮಿಕ ಶಾಸ್ತ್ರ ಗ್ರಂಥಗಳಲ್ಲಿ ಅತೀ ಹೆಚ್ಚು ಚರ್ಚೆಗೊಳಗಾಗುವ ಅಂಶಗಳು. 'ರತ್ನಕರಂಡಕ'ದಲ್ಲಿ ಅಷ್ಟಮದಗಳನ್ನು ತ್ಯಜಿಸಿ ದೇವ, ಗುರು, ಶಾಸ್ತ್ರಗಳಲ್ಲಿ ನಂಬಿಕೆಯಿಡುವ ಸಮ್ಯಕ್‌ದರ್ಶನವನ್ನು ವಿವರಿಸಲು ಆತ್ಮಾಗಮ ತಪಸ್ವಿಗಳ ಲಕ್ಷಣ ಲೋಕದೇವ ಪಾಷಂಡಿ ಮೂಢತೆಗಳ ಸ್ವರೂಪ ಅಂಗಗಳ ಲಕ್ಷಣಗಳನ್ನು ನಿರೂಪಿಸಲಾಗಿದೆ. ಸಮ್ಯಕ್‌ದರ್ಶನದ ಪ್ರಭಾವನೆಯಿಂದ ಚಂಡಾಲನೂ ದೇವನಾಗಬಲ್ಲ. ಸಮ್ಯಕ್‌ದೃಷ್ಟಿ ಹೊಂದಿದ ಜೀವವು ಕುದೇವ, ಕುಶಾಸ್ತ್ರ, ಕುಲಿಂಗಿಗಳಿಗೆ ತಲೆಬಾಗುವುದಿಲ್ಲ. ಸಮ್ಯಕ್‌ದರ್ಶನವಿಲ್ಲದೇ ಸಮ್ಯಕ್‌ಜ್ಞಾನ ಹಾಗೂ ಸಮ್ಯಕ್‌ಚಾರಿತ್ರ್ಯಗಳು ವಶವಾಗುವುದಿಲ್ಲ. ಮೋಹಿಯಾದ ಮುನಿಗಿಂತ ನಿರ್ಮೋಹಿಯಾದ ಗೃಹಸ್ಥನು ಮೋಕ್ಷಮಾರ್ಗಿಯಾಗುತ್ತಾನೆ. ಸಮ್ಯಕ್‌ದರ್ಶನವುಳ್ಳ ಜೀವಿಯು ಅವ್ರತಿಯಾಗಿದ್ದರೂ ಹೀನಜನ್ಮವೆತ್ತದ ದೀರ್ಘಾಯುಷಿಯೂ, ಸಂಪದ್ಭರಿತನೂ ಆಗುತ್ತಾನೆ. ಮೋಕ್ಷವೆಂಬ ಹಣ್ಣು ಸಾಧಾರಣವಾಗಿ ಸಿಗಲಾರದು ಅದಕ್ಕೆ ವ್ರತಗಳೆಂಬ ಪ್ರಯತ್ನವು ಬೇಕು. ಆ ವ್ರತಗಳ ಪರಿಣಾಮವಾಗಿ, ಉತ್ತಮ ಕಾರ್ಯಗಳನ್ನು ಕೈಕೊಳ್ಳುವುದು. ಅವುಗಳಿಂದ ಕರ್ಮಗಳನ್ನು ಕಳೆದುಕೊಂಡಾಗ, ಸಮ್ಯಕ್‌ದರ್ಶನ, ಜ್ಞಾನ, ಚಾರಿತ್ರ್ಯಗಳು ಉಂಟಾಗುತ್ತವೆ. ಅವುಗಳ ಫಲವಾಗಿ ದೇವ, ಮಾನವ, ನಾರಕ, ತಿರ್ಯಂಚಗಳೆಂಬ ಸಂಸಾರಗತಿಗಳಿಂದ ಬಿಡುಗಡೆ ಹೊಂದಿ ಮೋಕ್ಷ ಸಾಧಿಸುವುದು. ಎಲ್ಲ ಬಂಧಗಳಿಂದ ಮುಕ್ತವಾಗುವುದು ಎಂದು ಗ್ರಂಥಗಳು ಬೋಧಿಸುತ್ತವೆ.

❖

ಅಧ್ಯಾಯ : ೪

ಕನ್ನಡ ಸಾಹಿತ್ಯಿಕ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ

ಅಧ್ಯಾಯ ೪

ಕನ್ನಡ ಸಾಹಿತ್ಯಿಕ ಶಾಸ್ತ್ರಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ

ಒಂದು ಸೌಧವನ್ನು ನಿರ್ಮಿಬೇಕಾದರೆ ಹೇಗೆ ಕಲ್ಲು, ಮಣ್ಣು, ಸಿಮೆಂಟು, ಇಟ್ಟಿಗೆ, ಗಾರೆ ಮುಂತಾದ ಸಾಮಗ್ರಿಗಳು ಅವಶ್ಯಕವೋ ಹಾಗೆಯೇ ಒಂದು ಮೇರುಸಾಹಿತ್ಯ ಕೃತಿಯ ರಚನೆಗೂ ಅದರದೇಯಾದ ಸಾಮಗ್ರಿಗಳ ಅವಶ್ಯಕತೆಯಿದೆ. ಅಂದರೆ ಶಬ್ದಗಳೆಂಬ ಇಟ್ಟಿಗೆ, ವ್ಯಾಕರಣವೆಂಬ ಗಾರೆ, ಛಂದಸ್ಸೆಂಬ ಸಲಕರಣೆಗಳಿಂದ ಸಾಹಿತ್ಯದ ಸೌಧವನ್ನು ಕಟ್ಟಿ 'ಅಲಂಕಾರ'ವೆಂಬ ಬಣ್ಣ ಬಳೆಯುವುದು. ಹೀಗೆ ಮಾಡುವುದರಿಂದ ಆ ಸೌಧವು ನೋಡುಗರ ನೋಟವನ್ನು ಹೇಗೆ ಸೆಳೆಯುವುದೋ ಹಾಗೆ, ಈ ಕಾವ್ಯಕೃತಿಯೆಂಬ ಸೌಧವು ಓದುಗರ ಗಮನವನ್ನು ಸೆಳೆಯುತ್ತದೆ. ಆದುದರಿಂದ ಪ್ರಾಚೀನ ಕಾಲದ ಶಾಸ್ತ್ರಾಭ್ಯಾಸದಲ್ಲಿ ವ್ಯಾಕರಣ ಹಾಗೂ ಛಂದಸ್ಸುಗಳು ಪ್ರಧಾನವಾದ ಸ್ಥಾನವನ್ನು ಹೊಂದಿದ್ದವು. ಅಂತಹ ಅಪೂರ್ವವಾದ ಹಲವಾರು ಶಾಸ್ತ್ರಗ್ರಂಥಗಳು ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ದೊರೆಯುತ್ತವೆ. ಅಂತೆಯೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೂ ಕೂಡ ಸಾಕಷ್ಟಿವೆ. ಹೀಗೆ ಕನ್ನಡ ಸಾಹಿತ್ಯ ಸಾರಸ್ವತಲೋಕದಲ್ಲಿ ರಚಿತವಾಗಿರುವ ಅಲಂಕಾರ, ವ್ಯಾಕರಣ, ಛಂದಸ್ಸು ಹಾಗೂ ನಿಘಂಟುಶಾಸ್ತ್ರಕ್ಕೆ ಜೈನ ಶಾಸ್ತ್ರಕವಿಗಳು ನೀಡಿದ ಕೊಡುಗೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

"ವೇದಗಳನ್ನು ಕಲಿಯುವಲ್ಲಿ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯ, ಕಲ್ಪಗಳ ತಿಳುವಳಿಕೆ ಅತ್ಯಗತ್ಯ. ಇವು ವೇದದ ಷಡಂಗಗಳೆಂದು ಪ್ರಸಿದ್ಧವಾಗಿವೆ. ಹಾಗೆಯೇ ಸಂಸ್ಕೃತವಾಗಲೀ ಇಲ್ಲವೇ ಕನ್ನಡವಾಗಲೀ ಕಾವ್ಯಗಳ ಅಭ್ಯಾಸಕ್ಕೆ ವ್ಯಾಕರಣ, ನಿಘಂಟು, ಛಂದಸ್ಸು ಮತ್ತು ಅಲಂಕಾರಗಳು ಅಷ್ಟೇ ಮಹತ್ವಪೂರ್ಣವಾದವುಗಳು. ಇವುಗಳನ್ನು ಕಾವ್ಯಾಭ್ಯಾಸದ 'ಚತುರಂಗ' ಎಂದು ಕರೆಯಬಹುದು"[೧] ಎನ್ನುತ್ತಾರೆ ಎಂ. ವಿ. ಸೀತಾರಾಮಯ್ಯನವರು.

೪.೧. ಅಲಂಕಾರಶಾಸ್ತ್ರ:

ಅಲಂಕರಿಸುವುದು ಮತ್ತು ಅಲಂಕರಿಸಿಕೊಳ್ಳುವುದು ಮನುಷ್ಯನಲ್ಲಿ ಪೂರ್ವಗತವಾಗಿಯೇ ಬಂದಿರುವ ಪ್ರವೃತ್ತಿಯಾಗಿದೆ. ತಮ್ಮನ್ನು ತಾವು ವಿವಿಧ ಸಂದರ್ಭಗಳಲ್ಲಿ ಅಲಂಕರಿಸಿಕೊಳ್ಳುವುದರ ಜೊತೆಗೆ ತಮ್ಮ ಸುತ್ತಲಿನ ಪರಿಸರವನ್ನು ಅಲಂಕರಿಸುವುದನ್ನೂ ಕಾಣಬಹುದು. ಅದರ ಮುಖ್ಯ ಉದ್ದೇಶ ಇದ್ದ ಸೌಂದರ್ಯವನ್ನು ಎದ್ದು ಕಾಣುವಂತೆ ಮಾಡುವುದೇ ಆಗಿದೆ. ಇದು ಲೌಕಿಕ ಪ್ರಪಂಚದ ಅಲಂಕಾರದ ವಿಷಯ. ಆದರೆ ಕವಿನಿರ್ಮಿತ ಕಾವ್ಯ ಪ್ರಪಂಚವು ಇದಕ್ಕಿಂತಲೂ ಭಿನ್ನವಾದುದು. ಅದರಲ್ಲಿ ಸೃಜನಶೀಲ ಕವಿಯು ತನ್ನ ಕಾವ್ಯಕನ್ನಿಕೆಯನ್ನು ಮಾಧುರ್ಯವಾದ ಮಾತುಗಳಿಂದ, ಉಕ್ತಿವೈಚಿತ್ರ್ಯಗಳಿಂದ ಅಲಂಕರಿಸಿ ಆಕರ್ಷಕವಾಗಿಸಲು ಪ್ರಯತ್ನಿಸುತ್ತಾನೆ.

---

೧. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರ ಸಾಹಿತ್ಯ ;** ಪುಟ.೧೫೪

ಹೀಗೆ ಲೌಕಿಕಪ್ರಪಂಚ ಮತ್ತು ಕಾವ್ಯಪ್ರಪಂಚ ಈ ಎರಡರಲ್ಲೂ ಬರುವ 'ಅಲಂಕಾರ' ಶಬ್ದದ ಪರಿಚಯ ಸಾಮಾನ್ಯವಾಗಿ ಎಲ್ಲರಿಗೂ ಇರುವುದಾದರೂ, ಆ ಶಬ್ದದ ಉತ್ಪತ್ತಿ ಹೇಗೆಂಬುದು ವಿಚಾರಾರ್ಹ ಅಂಶ. ಈ ಬಗ್ಗೆ ಜೆ. ಗೊಂಡಾ ಎಂಬ ವಿದ್ವಾಂಸರೊಬ್ಬರು ತಮ್ಮ 'The meaning of the word Alankara' ಎಂಬ ಲೇಖನದಲ್ಲಿ "'ಅಲಂಕಾರ' ಪದವು ಮೂಲತಃ ಸಂಸ್ಕೃತದ 'ಅಲಂ' ಶಬ್ದದಿಂದ ಹುಟ್ಟಿದೆ. 'ಅಲಂ' ಇದರ ಅರ್ಥ ಶಕ್ತವಾಗಿಸು, ಯುಕ್ತವಾಗಿಸು ಎಂದು. ಯಾವುದು ಶಕ್ತವಾಗಿಸುತ್ತದೆಯೊ, ಇಲ್ಲವೇ ಶಕ್ತಿಯನ್ನು ಉಂಟುಮಾಡುತ್ತದೆಯೊ ಅದು ಅಲಂಕಾರ. ವೇದ ಮಂತ್ರಗಳಲ್ಲಿ ಕಾಣಬರುವ ಯಮಕ ಪ್ರಾಸ ಮತ್ತು ಉಕ್ತಿಸಾಮ್ಯ ಮೊದಲಾದವು ಮಂತ್ರಗಳಿಗೆ ದೈವೀ ಶಕ್ತಿಯನ್ನುಂಟು ಮಾಡುವವೆಂಬ ನಂಬಿಕೆ ಅಂದಿನವರದಾಗಿತ್ತು. ಆದುದರಿಂದಲೇ ಅವುಗಳನ್ನು ಅಲಂಕಾರಗಳೆಂದು ಕರೆದಿರಬೇಕೆನಿಸುತ್ತದೆ"[೨] ಎಂದು ತೀ. ನಂ. ಶ್ರೀಕಂಠಯ್ಯನವರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಉಲ್ಲೇಖಿಸುತ್ತಾರೆ. "ಅದೇ ರೀತಿ ಭಾಷೆ ಸಶಕ್ತವಾಗಬೇಕಾದರೆ, ಅದೂ ಕೂಡ ಅಲಂಕೃತವಾಗಿರಬೇಕೆಂಬ ಭಾವನೆ ಸಹಜವಾಗಿಯೆ ಸಾಹಿತ್ಯ ಪ್ರಪಂಚದಲ್ಲಿಯೂ ಬಲಗೊಂಡು ಉಕ್ತಿಸೌಂದರ್ಯಕ್ಕೆ ಹೆಚ್ಚಿನ ಒತ್ತು ಬಿದ್ದ ಫಲವಾಗಿ ಅದು ಬೋಧೆಯನ್ನುಂಟು ಮಾಡುವ ಅಲಂಕಾರವಾಗಿ ಪರಿಣಮಿಸಿತು. ಹೀಗೆ ಪ್ರಾಸ, ಯಮಕ, ಉಪಮೆ ಇತ್ಯಾದಿಗಳು ಕಾವ್ಯಾಲಂಕಾರಗಳಾಗಿ ನಿಂತವು."[೩]

ಜನರೂಢಿಯಲ್ಲಿರುವ ಶಬ್ದಗಳನ್ನು ಕಾವ್ಯದಲ್ಲಿ ಬಳಸಲಾಗುತ್ತದೆಯಾದರೂ ಅವುಗಳಿಗೊಂದು ಬಗೆಯ ವಿಶೇಷತೆ ಇರುತ್ತದೆ. ಅದರಿಂದಾಗಿ ನಿತ್ಯ ಬಳಕೆಯ ಮಾತುಗಳಿಂದ ಮನಸ್ಸಿನ ಮೇಲೆ ಆಗುವ ಪರಿಣಾಮಕ್ಕಿಂತ ಕಾವ್ಯದಲ್ಲಿ ಬಳಕೆಯಾಗುವ ಕವಿಯ ಮಾತುಗಳಿಂದ ಆಗುವ ಪರಿಣಾಮ ವಿಶಿಷ್ಟವಾಗಿರುತ್ತದೆ. ಒಂದು ವಿಷಯವನ್ನು ಜನಸಾಮಾನ್ಯರ ಮಾತುಗಳಿಗಿಂತ ಕವಿಯು ಮನೋಹರವಾಗಿ, ಚಮತ್ಕಾರಪೂರ್ಣವಾಗಿ ಹೇಳುತ್ತಾನೆ. "ಹೀಗೆ ನಿತ್ಯಬಳಕೆಯ ಮಾತುಗಳಲ್ಲಿ ಇಲ್ಲದ ಒಂದು ವಿಶಿಷ್ಟ ಸೌಂದರ್ಯ ಕವಿಯ ಶಬ್ದಗಳಲ್ಲಿ ಇರುತ್ತದೆ. ಅವನು ರಚಿಸಿದ ಕಾವ್ಯದ ಅರ್ಥದಲ್ಲಿಯೂ ಇರುತ್ತದೆ. ಇಂತಹ ಶಬ್ದ ಮತ್ತು ಅರ್ಥಸೌಂದರ್ಯ ಸಮ್ಮಿಳಿತ ಸಾಹಿತ್ಯವನ್ನು ಓದಿದಾಗ ಲೌಕಿಕವಲ್ಲದ ಒಂದು ವಿಶಿಷ್ಟ ಬಗೆಯ ಆನಂದ ಸಹೃದಯನಿಗೆ ಉಂಟಾಗುತ್ತದೆ. ಕಾವ್ಯದಲ್ಲಿರುವ ಇಂತಹ ಶಬ್ದಾರ್ಥ ಸೌಂದರ್ಯಕ್ಕೆ ಅಲಂಕಾರವೆಂದೂ ಕಾವ್ಯಾನಂದಕ್ಕೆ 'ರಸ' ಎಂದೂ ಲಕ್ಷಣಶಾಸ್ತ್ರದಲ್ಲಿ ಹೇಳಲಾಗುತ್ತದೆ."[೪]

ಇರುವ ಸೌಂದರ್ಯ ಎದ್ದು ಕಾಣುವಂತೆ ಹಾಕಿಕೊಳ್ಳುವ ಆಭರಣಗಳಿಗೂ, ಕಾವ್ಯದಲ್ಲಿ ಬರುವ ಅಲಂಕಾರಗಳಿಗೂ ಒಂದಿಷ್ಟು ಸಾಮ್ಯವಿದ್ದರೂ ಕಾವ್ಯ ಮತ್ತು ಅಲಂಕಾರಗಳಲ್ಲಿರುವ ತಾದಾತ್ಮ್ಯ ಹಾಕಿಕೊಳ್ಳುವ ಆಭರಣಗಳಲ್ಲಿರುವುದಿಲ್ಲವೆಂಬುದು ಗಮನಿಸಬೇಕಾದ ಅಂಶವಾಗಿದೆ.

---

೨. ಪ್ರೊ. ತೀ. ನಂ. ಶ್ರೀಕಂಠಯ್ಯ : **ಭಾರತೀಯ ಕಾವ್ಯಮೀಮಾಂಸೆ** ; ಪುಟ.೦೭
೩. ಡಾ. ಬಿ. ವಿ. ಮಲ್ಲಾಪುರ : **ಅಲಂಕಾರಶಾಸ್ತ್ರಕಾರರು ಒಂದು ಸಮೀಕ್ಷೆ** ; ಪುಟ. ೦೧
೪. **ಅದೇ** ; ಪುಟ. ೦೨

ಕಾವ್ಯದಲ್ಲಿರುವ ಶಬ್ದಸೌಂದರ್ಯವನ್ನು ಶಾಸ್ತ್ರೀಯವಾಗಿ ಪರಿಶೀಲಿಸಿದಾಗ ಪ್ರಾಸ, ಅನುಪ್ರಾಸಾದಿ ಶಬ್ದಾಲಂಕಾರಗಳ ಹಿಂದಿರುವ ಕಾವ್ಯತತ್ತ್ವ ಗೋಚರವಾಗುತ್ತದೆ. ಅದೇ ರೀತಿ ಅರ್ಥ ಸೌಂದರ್ಯವನ್ನು ಶಾಸ್ತ್ರೀಯವಾಗಿ ಪರಿಭಾವಿಸಿದಾಗ ಅರ್ಥಾಲಂಕಾರಗಳ ರಹಸ್ಯ ಬಿಚ್ಚಿಕೊಳ್ಳುತ್ತದೆ. ಆದುದರಿಂದ ಶಬ್ದ ಮತ್ತು ಅರ್ಥಗಳನ್ನು ಬಿಡಿಬಿಡಿಯಾಗಿ ವಿವೇಚಿಸಿದಷ್ಟಕ್ಕೆ ಶಾಸ್ತ್ರಕಾರನ ಕೆಲಸ ಮುಗಿಯುವುದಿಲ್ಲ. ಅವುಗಳನ್ನು ಇಡಿಯಾಗಿ ದರ್ಶಿಸುವ ದೃಷ್ಟಿಯೂ ಅವನಲ್ಲಿರಬೇಕಾದುದು ಬಹಳ ಮುಖ್ಯ. ಭಾಷೆಗೊಂದು ಲಿಪಿ ಸಿದ್ಧವಾಗಿ, ಲಿಖಿತರೂಪದ ಗ್ರಂಥಗಳು ಹುಟ್ಟಿಕೊಳ್ಳುವುದಕ್ಕಿಂತ ಮೊದಲು ಸಾಹಿತ್ಯ ರಚನೆ ನಡೆದೇಯಿತ್ತು. ಅದು ಮೌಖಿಕರೂಪದಲ್ಲಿ ಮುಂದುವರಿದುಕೊಂಡು ಬರುತ್ತಿತ್ತು. ಆ ಸಾಹಿತ್ಯದಲ್ಲಿಯೂ ಮಾತಿಗೆ ರಮಣೀಯತೆಯನ್ನು ತರುವ ಉಕ್ತಿ ವೈಚಿತ್ರ್ಯಗಳು ಇದ್ದವು.

ಪ್ರಾಚೀನ ಕೃತಿಗಳಲ್ಲಿ ಅಲಂಕಾರಗಳ ಬಳಕೆ ಕಂಡು ಬರುವುದಾದರೂ, ಅವುಗಳನ್ನು ಒಂದು ವ್ಯವಸ್ಥೆಗೆ ಒಳಪಡಿಸಿ ಕಾವ್ಯಶಾಸ್ತ್ರ ರಚಿಸುವ ಕಾರ್ಯ ತಡವಾಗಿ ನಡೆಯಿತು. ಮೊದಲು ಕಾವ್ಯ, ತದನಂತರ ಶಾಸ್ತ್ರ ಇದು ನಿಯಮ. "ಕಾವ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಅಲಂಕಾರ, ಗುಣ, ದೋಷಗಳ ಹೆಸರು ಮೊದಲು ಕಾಣಿಸಿಕೊಳ್ಳುವುದು ಭರತಮುನಿಯ 'ನಾಟ್ಯಶಾಸ್ತ್ರ'ದಲ್ಲಿ. ಅದರ ಕಾಲ ಕ್ರಿ.ಶ.೩೦೦ರ ಹಿಂದೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಕಾವ್ಯ ಲಕ್ಷಣಗಳಾದ ಈ ಅಲಂಕಾರ, ಗುಣ, ದೋಷಾದಿಗಳಿಗೆ ಪ್ರಸ್ತುತ ಕೃತಿಯಲ್ಲಿ ಸ್ವತಂತ್ರಸ್ಥಾನ ಸಿಕ್ಕಿಲ್ಲ. ಭರತಮುನಿಯ ಮುಖ್ಯ ಉದ್ದೇಶ 'ನಾಟ್ಯಶಾಸ್ತ್ರ' ಹೇಳುವುದೇ ಆಗಿರುವುದರಿಂದ ಕಾವ್ಯಶಾಸ್ತ್ರ ಅದರ ಒಂದು ಅಂಗವಾಗಿ ಮಾತ್ರ ಇಲ್ಲಿ ಬಂದಿದೆ."[೫]

ದಂಡಿಯ "ಕಾವ್ಯಶೋಭಾಕರಾನ್ ಧರ್ಮಾನಲಂಕಾರಾನ್ ಪ್ರಚಕ್ಷತೇ"[೬] ಎಂಬಂತಹ ಮಾತುಗಳನ್ನು ನೋಡಿದಾಗ, ಕಾವ್ಯಕ್ಕೆ ಶೋಭೆಕೊಡುವ ಎಲ್ಲವನ್ನು ಪ್ರಾಚೀನರ 'ಅಲಂಕಾರ' ಶಬ್ದದ ಪರಿಕಲ್ಪನೆ ಹಾಗೂ ಅದರ ಅರ್ಥವ್ಯಾಪ್ತಿ ವಿಶಾಲವಾದುದಾಗಿತ್ತು. ಅವರು ಮೊದಲು ಆಕರ್ಷಿತರಾದುದು ಮತ್ತು ಅವರ ಲಕ್ಷ್ಯ ಕಾವ್ಯದಲ್ಲಿ ಮೊದಲು ಹರಿದುದು ಅದರಲ್ಲಿದ್ದ ಅನುಪ್ರಾಸ, ಯಮಕ ಮೊದಲಾದ ಶಬ್ದಾಲಂಕಾರ ಹಾಗೂ ಉಪಮೆ, ರೂಪಕಾದಿ ಅರ್ಥಾಲಂಕಾರಗಳತ್ತ. ಆದುದರಿಂದ ಕಾವ್ಯಶಾಸ್ತ್ರವನ್ನು 'ಅಲಂಕಾರಶಾಸ್ತ್ರ' ಎಂದೇ ಕರೆದರು. ಕಾಲಕಳೆದಂತೆ ಕಾವ್ಯತತ್ತ್ವ ಕುರಿತು ಚಿಂತನ ಮಂಥನ ವಿಚಾರ, ವಿಮರ್ಶೆ, ವಿವೇಚನೆಗಳು ಹಲವಂದದಿಂದ ನಡೆದು ಕಾವ್ಯದ ನಿಜವಾದ ರಹಸ್ಯವನ್ನು ಕಂಡು ಹಿಡಿಯಲಾಯಿತು. ಆಗ 'ಅಲಂಕಾರ' ಶಬ್ದವು 'ಶಬ್ದಾಲಂಕಾರ', 'ಅರ್ಥಾಲಂಕಾರ' ಎಂಬ ಸೀಮಿತ ಅರ್ಥ ಪಡೆಯಿತು. "ಕಾವ್ಯದ ಹೊರ ರೂಪ, ಒಳ ತಿರುಳು ಎರಡಕ್ಕೂ ಅಲಂಕಾರ ಎಂಬ ಮಾತನ್ನು ಅನ್ವಯಿಸಬಹುದು. ಕಾವ್ಯದ ಈ ಲಕ್ಷಣವನ್ನು ವಿವರಿಸುವ

---

೫. ಡಾ. ಬಿ. ವಿ. ಮಲ್ಲಾಪುರ : **ಅಲಂಕಾರಶಾಸ್ತ್ರಕಾರರು ಒಂದು ಸಮೀಕ್ಷೆ** ; ಪುಟ. ೦೫
೬. ಪ್ರೊ. ತೀ. ನಂ. ಶ್ರೀಕಂಠಯ್ಯ : **ಭಾರತೀಯ ಕಾವ್ಯಮೀಮಾಂಸೆ** ; ಪುಟ.೦೭

ಶಾಸ್ತ್ರಕ್ಕೆ 'ಅಲಂಕಾರಶಾಸ್ತ್ರ' ಎಂಬ ಹೆಸರು ರೂಢಿಗೆ ಬಂದಿತು. ಈ ಶಾಸ್ತ್ರಕ್ಕೆ 'ಕಾವ್ಯಮೀಮಾಂಸೆ' ಎಂಬ ಹೆಸರೂ ಬಳಕೆಯಲ್ಲಿದೆ. 'ಮೀಮಾಂಸೆ' ಎಂಬ ಶಬ್ದಕ್ಕೆ 'ತಿಳಿಯಬೇಕೆಂಬ ಇಚ್ಛೆ' ಎಂದರ್ಥ. 'ಕಾವ್ಯಮೀಮಾಂಸೆ' ಎಂದರೆ 'ಕಾವ್ಯ ವಿಚಾರವನ್ನು ತಿಳಿಯುವ ಪ್ರಯತ್ನ' ಎಂದು ಹೇಳಬಹುದು. ಇದಕ್ಕೆ ಕಾವ್ಯಶಾಸ್ತ್ರ, ಸಾಹಿತ್ಯಶಾಸ್ತ್ರ ಎಂಬ ಹೆಸರುಗಳೂ ರೂಢಿಯಲ್ಲಿವೆ."[೭] ಕಾವ್ಯಶಾಸ್ತ್ರಕ್ಕೆ ಬಂದ 'ಕಾವ್ಯಮೀಮಾಂಸೆ' ಅರ್ಥಪೂರ್ಣ ಹೆಸರನ್ನು ಮೊದಲು ಪ್ರಯೋಗಿಸಿದವನು ರಾಜಶೇಖರನೆಂದು ತೋರುತ್ತದೆ. ಅವನ ಕೃತಿಯ ಹೆಸರೇ 'ಕಾವ್ಯಮೀಮಾಂಸೆ'. "ಚರಿತ್ರೆಯ ದೃಷ್ಟಿಯಿಂದ ಮೊದಲು ಕೇವಲ ಅಲಂಕಾರಶಾಸ್ತ್ರವಾಗಿದ್ದುದು, ಬರಬರುತ್ತಾ ಹೆಚ್ಚು ಆಳಕ್ಕೆ ಇಳಿದು ಹೆಚ್ಚು ವಿಶಾಲವಾಗಿ ಹರಡಿ 'ಕಾವ್ಯಮೀಮಾಂಸೆ'ಯಾಗಿ ಪರಿಣಮಿಸಿತೆನ್ನಬಹುದು."[೮] 'ಅಲಂಕಾರ' ಶಬ್ದ ತನ್ನ ವ್ಯಾಪಕಾರ್ಥವನ್ನು ಕಳೆದುಕೊಂಡು ಪರಿಮಿತಾರ್ಥ ಪಡೆದರೂ 'ಸೌಂದರ್ಯ' ಎಂಬ ಅದರ ಹಿಂದಿನ ವಿಶಾಲಾರ್ಥ ಸಂಪೂರ್ಣ ಮರೆಯಾಗಲಿಲ್ಲವೆಂಬುದು ಗಮನಿಸಬೇಕಾದ ಅಂಶ. ಇಂದಿಗೂ 'ಅಲಂಕಾರಶಾಸ್ತ್ರ' ಮತ್ತು 'ಕಾವ್ಯಮೀಮಾಂಸೆ' ಶಬ್ದಗಳು ಸಮಾನಾರ್ಥ ಕೊಡುವ ಪದಗಳಾಗಿ ಬಳಕೆಯಲ್ಲಿವೆ.

ಭಾರತೀಯ ಸಂಸ್ಕೃತ ಅಲಂಕಾರಶಾಸ್ತ್ರದ ಸಾಲಿನಲ್ಲಿ ಭರತನ 'ನಾಟ್ಯಶಾಸ್ತ್ರ', ಭಾಮಹನ 'ಕಾವ್ಯಾಲಂಕಾರ', ದಂಡಿಯ 'ಕಾವ್ಯಾದರ್ಶ', ಉದ್ಭಟನ 'ಕಾವ್ಯಾಲಂಕಾರ ಸಾರಸಂಗ್ರಹ', ವಾಮನನ 'ಕಾವ್ಯಾಲಂಕಾರ ಸೂತ್ರವೃತ್ತಿ', ರುದ್ರಟನ 'ಕಾವ್ಯಾಲಂಕಾರ', ರುದ್ರಭಟ್ಟನ 'ಶೃಂಗಾರತಿಲಕ', ರಾಜಶೇಖರನ 'ಕಾವ್ಯಮೀಮಾಂಸೆ', ಆನಂದವರ್ಧನನ 'ಧ್ವನ್ಯಾಲೋಕ', ಅಭಿನವಗುಪ್ತನ 'ಧ್ವನ್ಯಾಲೋಕಲೋಚನ', ಭಟ್ಟತೌತನ 'ಕಾವ್ಯಕೌತುಕ', ಕುಂತಕನ 'ವಕ್ರೋಕ್ತಿಜೀವಿತ' ಮುಂತಾದ ಕೃತಿಗಳು ಕಾವ್ಯತತ್ತ್ವ, ಕವಿಸಮಯ, ಕಾವ್ಯದ ಲಕ್ಷಣಗಳು, ಧ್ವನಿ, ಅಲಂಕಾರ, ರಸಸಿದ್ಧಾಂತ, ರೀತಿ ಸಿದ್ಧಾಂತ, ಕಾವ್ಯದೋಷ, ಪ್ರತಿಭೆ ಮುಂತಾದ ವಿಷಯಗಳನ್ನು ವಿಶದೀಕರಿಸುತ್ತವೆ.

ಅದೇ ರೀತಿಯಾಗಿ ಕನ್ನಡ ಸಾಹಿತ್ಯದ ಚರಿತ್ರೆಯ ಪುಟಗಳನ್ನು ತಿರುವಿಹಾಕಿದಾಗ ಶ್ರೀವಿಜಯನ 'ಕವಿರಾಜಮಾರ್ಗ', ಪೊನ್ನನ 'ಭುವನೈಕ ರಾಮಾಭ್ಯುದಯ' (ಅನುಪಲಬ್ಧ), ೨ನೆಯ ನಾಗರ್ಮನ 'ಕಾವ್ಯಾವಲೋಕನ' ಸಾಳ್ವಕವಿಯ 'ರಸರತ್ನಾಕರ' ಮತ್ತು 'ಶಾರದಾವಿಲಾಸ' (ಅಪೂರ್ಣ ಲಭ್ಯ) ಗ್ರಂಥಗಳು ಜೈನ ಅಲಂಕಾರಿಕರ ಶಾಸ್ತ್ರಕೃತಿಗಳಾಗಿವೆ. ಇವುಗಳಲ್ಲಿ ಪ್ರಸ್ತುತ ಅಧ್ಯಯನ ವ್ಯಾಪ್ತಿಯ ಕಾಲಘಟ್ಟಕ್ಕೆ ಅಂದರೆ ೧೦ನೆಯ ಶತಮಾನದಿಂದ ೧೬ನೆಯ ಶತಮಾನದ ಅವಧಿಯ ಲಾಕ್ಷಣಿಕರೆಂದರೆ ೨ನೆಯ ನಾಗವರ್ಮ ಮತ್ತು ಸಾಳ್ವಕವಿ. ಕವಿರಾಜಮಾರ್ಗಕಾರನಾದ ಶ್ರೀವಿಜಯನ ಕಾಲ ಸುಮಾರು ಕ್ರಿ.ಶ. ೮೫೦. ಅಂದರೆ ೯ನೆಯ ಶತಮಾನ. ಆದರೆ ಪ್ರಸ್ತುತ ಅಧ್ಯಯನದಲ್ಲಿ 'ಕವಿರಾಜಮಾರ್ಗ'ದಂತಹ ಮೇರುಕೃತಿಯನ್ನು ಹೊರಗಿಟ್ಟು ಅಧ್ಯಯನ

೭. ಪ್ರೊ. ಎಂ. ವಿ. ಸೀತಾರಾಮಯ್ಯ : **ಶಾಸ್ತ್ರ ಸಾಹಿತ್ಯ** ; ಪುಟ. ೨೫
೮. ಪ್ರೊ. ತೀ. ನಂ. ಶ್ರೀಕಂಠಯ್ಯ : **ಭಾರತೀಯ ಕಾವ್ಯಮೀಮಾಂಸೆ** ; ಪುಟ.೧೯

ಮಾಡುವುದು ತೂಕರಹಿತವೂ, ಅಸಮಂಜಸವೂ ಎನಿಸುವುದು. ಆದುದರಿಂದ ಶ್ರೀವಿಜಯನನ್ನೂ ಒಳಗೊಂಡು ಅಧ್ಯಯನವನ್ನು ಮಾಡಲಾಗಿದೆ. ಹಾಗೆಯೇ ಎಂ. ಎಂ. ಕಲಬುರ್ಗಿಯವರು 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ', ಮಹೇಂದ್ರ ಜಿ. ಹರಿಹರ ಅವರು 'ಕವಿರಾಜಮಾರ್ಗದ ಪದಕೋಶ', ಸಂಗಮೇಶ ಬಿರಾದಾರ ಅವರು 'ವೈಯಾಕರಣಿ ಎರಡನೆಯ ನಾಗವರ್ಮ', ರಾಜೀವ ಆರ್. ಹೆಗಡೆಯವರು 'ಸಾಳ್ವಕವಿ : ಒಂದು ಅಧ್ಯಯನ (ರಸರತ್ನಾಕರವನ್ನು ಅನುಲಕ್ಷಿಸಿ)' ಎಂದು ಈ ಅಲಂಕಾರ ಕೃತಿಗಳನ್ನು ಪ್ರಧಾನವಾಗಿಸಿಕೊಂಡು ಸಂಶೋಧನ ಅಧ್ಯಯನವನ್ನು ಕೈಕೊಂಡಿದ್ದಾರೆ ಎಂಬುದು ಇಲ್ಲಿ ಉಲ್ಲೇಖನೀಯ.

೪.೧.೧. ಶ್ರೀವಿಜಯ (ಕ್ರಿ.ಶ.೮೫೦):

ಕನ್ನಡ ಭಾಷೆಗೆ ಸುಮಾರು ೨೦೦೦ ವರ್ಷಗಳ ಇತಿಹಾಸವಿದೆ. ಈ ಇತಿಹಾಸದಲ್ಲಿ ಅಧಿಕೃತ ದಾಖಲೆಯೆಂದರೆ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನ. ಅಂತೆಯೇ ಮೊದಲು ಉಪಲಬ್ಧವಾಗಿರುವ ಕನ್ನಡ ಗ್ರಂಥ 'ಕವಿರಾಜಮಾರ್ಗ'. ಇದರ ಕರ್ತೃ ಶ್ರೀವಿಜಯ. ಈತನು ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಆಸ್ಥಾನಕವಿಯಾಗಿದ್ದನು. ಪ್ರಸ್ತುತ ಕೃತಿಯ ಕರ್ತೃವಿನ ಕುರಿತಾಗಿ ನೃಪತುಂಗ ಮತ್ತು ಶ್ರೀವಿಜಯ ಎಂಬ ಹೆಸರುಗಳ ನಡುವೆ ಸಾಕಷ್ಟು ಜಿಜ್ಞಾಸೆಗಳಿದ್ದರೂ ಬಹುತೇಕ ವಿದ್ವಾಂಸರು ಶ್ರೀವಿಜಯನೇ ಎಂದು ಅಂತಿಮ ನಿರ್ಧಾರಕ್ಕೆ ಬಂದಿದ್ದಾರೆ. ಅಂತೆಯೇ ನೃಪತುಂಗನ ಒಪ್ಪಿಗೆಯ ಮೇರೆಗೆ 'ಕವಿರಾಜಮಾರ್ಗ' ಗ್ರಂಥವನ್ನು ರಚಿಸಿದ್ದಾನೆ ಎಂದು ಒಮ್ಮತದ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಗ್ರಂಥದ ಪರಿಚ್ಛೇದಗಳ ಕೊನೆಯ ಪದ್ಯಗಳಲ್ಲಿ ಉಲ್ಲೇಖವಾಗಿರುವ 'ಶ್ರೀವಿಜಯಪ್ರಭೂತ', 'ಶ್ರೀವಿಜಯಪ್ರಭೂತಿ' ಎಂಬ ಹೆಸರುಗಳಿಂದ ಈ ಗ್ರಂಥದ ಕರ್ತೃ ಶ್ರೀವಿಜಯನೇ ಆಗಿರುವನೆಂದು ಒಪ್ಪಿಕೊಳ್ಳಲಾಗಿದೆ.

"ಶ್ರೀವಿಜಯನು ಲೋಕವ್ಯವಹಾರಗಳಲ್ಲಿಯೂ ಜೈನ, ವೈದಿಕ ಧರ್ಮಗಳೆರಡರಲ್ಲಿಯೂ ನಿಷ್ಣಾತನಾಗಿದ್ದನು. ಉಕ್ತಿಕಲೆಯಲ್ಲಿ ಪ್ರವೀಣ; ಸಾಹಿತ್ಯ ವಿದ್ಯೆಯಲ್ಲಿ ಪ್ರತಿಭಾವಂತ; ಕಾವ್ಯಲಕ್ಷಣ ಲಕ್ಷ್ಯಗಳಲ್ಲಿ ಅಭಿಜ್ಞ; ಸಮಸ್ತ ಭಾಷಾ ವಿಶೇಷ ವಿಷಯ ಕುಶಲಿ; ದೇವತಾಗುರುವೃದ್ಧರನ್ನು ಚೆನ್ನಾಗಿ ಸೇವಿಸತಕ್ಕವನು; ಪರಮ ಕಾರುಣಿಕ; ದೋಷರಹಿತ; ಸಮಸ್ತ ಜನರಲ್ಲಿಯೂ ಆದರವನ್ನು ಹುಟ್ಟಿಸತಕ್ಕವನು; ಪರರ ಗುಣದಲ್ಲಿ ಅಸಹನೆಯಿಲ್ಲದವನು; ಆತ್ಮಗುಣೋದತವೇ ಮೈವೆತ್ತಂತಿರುವವನು. ಇಂಥವನು ನಿರ್ಮಲವಾದ ಕೀರ್ತಿವಿತಾನವನ್ನು ನಿರ್ಮಿಸುವ ಉದ್ದೇಶದಿಂದ ಜಗತ್ತಿನ ಅಗಾಧವಾದ ಅಂತರ್ಭುಪ್ರದೇಶವನ್ನು ಬೆಳಗತಕ್ಕ ದೀಪಸದೃಶವಾದ 'ನುತಕಾವ್ಯ'ವನ್ನು (ಎಂದರೆ ಲಕ್ಷ್ಯಲಕ್ಷಣ ಸಮನ್ವಿತವಾದ ಕವಿರಾಜಮಾರ್ಗವನ್ನು) ಹೇಳಿದನು. ಇವನು ಅಭಿಮಾನಿ, ಮಾಹಾಪುರುಷವ್ರತನಿಶ್ಚಿತ, ಆದ್ದರಿಂದ ಯಾರಿಂದಲೂ ಯಾವ ಬಗೆಯ ಹೊಗಳಿಕೆಯನ್ನೂ ನಿರೀಕ್ಷಿಸತಕ್ಕವನಲ್ಲ; ಇತ್ಯಾದಿಯಾಗಿ ಅವನ ಗುಣಪ್ರಶಂಸೆ ಸಾಗಿದೆ."[೯]

೯. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ. ೫೮ (ಪೀಠಿಕೆ)

'ಕವಿರಾಜಮಾರ್ಗ'ವು ಸಂಸ್ಕೃತ ಲಾಕ್ಷಣಿಕ ದಂಡಿಯ 'ಕಾವ್ಯಾದರ್ಶ'ವನ್ನು ಅನುಸರಿಸಿ ರಚಿತವಾಗಿದೆ. ಕೃತಿಯಲ್ಲಿ ಕವಿಯು ಪೂರ್ವಕವಿಗಳನ್ನು ಸ್ಮರಿಸಿಕೊಂಡಿದ್ದಾನೆ. ಈತನಿಗೆ ಕನ್ನಡ ನಾಡು–ನುಡಿಯ ಬಗೆಗೆ ಅಪಾರ ಪ್ರೀತಿ ಮತ್ತು ಕಾಳಜಿ ಇರುವುದನ್ನು ವ್ಯಕ್ತಪಡಿಸಿದ್ದಾನೆ. ಕವಿಯು ತನ್ನ ಕಾಲದಲ್ಲಿದ್ದ ಕರುನಾಡಿನ ವಿಸ್ತೀರ್ಣವನ್ನು ತಿಳಿಸುತ್ತಾನೆ.

"ಕಾವೇರಿಯಿಂದಮಾ ಗೋ
ದಾವರಿಮರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯವಿಲೀನವಿಶದ ವಿಷಯ ವಿಶೇಷಂ ॥೦೧.೩೬॥"[೧೦]

ಕನ್ನಡನಾಡು ಕಾವೇರಿಯಿಂದ ಗೋದಾವರಿ ನದಿಯವರೆಗಿನ ಬಹುವಿಸ್ತಾರವಾದ ಪ್ರದೇಶವನ್ನು ತನ್ನಲ್ಲಿ ಅಡಗಿಸಿಕೊಂಡಿತ್ತು. ಹೀಗಿರುವ ಈ ನಾಡಿನಲ್ಲಿ ಕಿಸುವೊಟಿಲು (ಪಟ್ಟದಕಲ್ಲು), ಕೊಪಣ (ಕೊಪ್ಪಳ), ಪುಲಿಗೆಱೆ (ಲಕ್ಷ್ಮೇಶ್ವರ), ಒಕುಂದ (ಒಕ್ಕುಂದ)ಗಳ ನಡುವಿನ ಪ್ರದೇಶವು ತಿರುಳಗನ್ನಡ ನಾಡಾಗಿತ್ತು. ಇಲ್ಲಿಯ ಜನತೆ ಮಹಾಮೇಧಾವಿಗಳಾಗಿದ್ದು "ಕುಱಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿ"[೧೧]ಗಳಾಗಿದ್ದರು. ಅಲ್ಲದೇ ಸುಂದರರೂ, ಯುದ್ಧವೀರರೂ, ಉತ್ತಮ ಆಡಳಿತಗಾರರೂ, ಅಭಿಮಾನಧನರೂ ಆಗಿದ್ದರೆಂದು ತನ್ನ ಕನ್ನಡಾಭಿಮಾನವನ್ನು ಕೃತಿಯಲ್ಲಿ ವ್ಯಕ್ತಪಡಿಸಿದ್ದಾನೆ.

೪.೧.೧.೧. ಕವಿರಾಜಮಾರ್ಗ:

'ಕವಿರಾಜಮಾರ್ಗ'ವು ಕಾವ್ಯ ಕೃತಿಯಲ್ಲ. ಕಾವ್ಯ ಲಕ್ಷಣ ಗ್ರಂಥವಾಗಿದೆ. ಈ ಕೃತಿಯು ಕನ್ನಡ ವಿದ್ವತ್ವಲಯಕ್ಕೆ ಲಭ್ಯವಾಗಿದ್ದು ಎಚ್. ಎಸ್. ವಿಲ್ಸನ್ ಹಾಗೂ ಕರ್ನಲ್ ಮೆಕೆಂಜೆಯವರ ಪರಿಶ್ರಮದಿಂದ. ಇವರು ಮೊಟ್ಟಮೊದಲು ಈ ಗ್ರಂಥದ ಹಸ್ತಪ್ರತಿಗಳನ್ನು ಸಂಗ್ರಹಿದರು (೧೮೩೮). ನಂತರ ಕೆ. ಬಿ. ಪಾಠಕ್ ಅವರು ೧೮೯೮ರಲ್ಲಿ ಸಂಪಾದಿಸಿ, ಪ್ರಕಟಿಸಿದರು. ಅಂದಿನಿಂದ ಇಂದಿನವರೆಗೆ ಸಾಕಷ್ಟು ವಿದ್ವಾಂಸರು ಈ ಕೃತಿಪರೀಕ್ಷೆಗೆ ತೊಡಗಿಸಿಕೊಂಡಿದ್ದಾರೆ. ಅಂತೆಯೇ "ಕನ್ನಡ ಸಾಹಿತ್ಯದಲ್ಲಿಯೂ ಕನ್ನಡ ಕಾವ್ಯಮೀಮಾಂಸೆಯ ಬೆಳವಣಿಗೆಯಲ್ಲಿಯೂ ಕವಿರಾಜಮಾರ್ಗಕ್ಕೆ ನಾನಾ ಕಾರಣಗಳಿಂದ ಅತ್ಯಂತ ಮಹತ್ವದ ಸ್ಥಾನವಿದೆ. ಈವರೆಗೆ ದೊರೆತಿರುವ ಅತ್ಯಂತ ಪ್ರಾಚೀನ ಕನ್ನಡ ಗ್ರಂಥಗಳಲ್ಲಿ ಇದೇ ಮೊದಲನೆಯದು. ಇದು ಕಾವ್ಯಶಾಸ್ತ್ರವನ್ನು ನಿರೂಪಿಸುವ ಸ್ವತಂತ್ರದೃಷ್ಟಿಯ ಲಕ್ಷಣಗ್ರಂಥ; ಆದ್ದರಿಂದ ಇದು ರಚಿತವಾಗುವ ವೇಳೆಗೆ ಕನ್ನಡ ಸಾಹಿತ್ಯ ಒಂದು ಪ್ರೌಢಾವಸ್ಥೆಯ ಹಂತವನ್ನು ಮುಟ್ಟಿತ್ತು ಎಂದು ಊಹಿಸಬಹುದು."[೧೨] ಅಲ್ಲದೇ ಕವಿಯು ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ, ಶ್ರೀವಿಜಯ, ಕವೀಶ್ವರ

---

೧೦. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ. ೧೧೧
೧೧. ಅದೇ ; ಪುಟ. ೧೧೧ (೦೧.೩೮)
೧೨. ಅದೇ ; ಪುಟ. ೧೨ (ಪೀಠಿಕೆ)

ಪಂಡಿತ, ಚಂದ್ರ, ಲೋಕಪಾಲ ಮುಂತಾದ ಗದ್ಯ ಮತ್ತು ಪದ್ಯಕವಿಗಳ ಹೆಸರುಗಳನ್ನು ಉಲ್ಲೇಖಿಸಿರುವುದು ಈ ಊಹೆಯನ್ನು ಪುಷ್ಠೀಕರಿಸುತ್ತದೆ. ಆದರೆ ಆ ಕವಿಗಳು ರಚಿಸಿದ ಯಾವುದೇ ಗ್ರಂಥವು ಲಭಿಸದೇ ಇರುವುದು ವಿಪರ್ಯಾಸವೇ ಸರಿ. ಹೀಗೆ ಈ ಕಾವ್ಯಗಳ "ನಿರತಿಶಯ ವಸ್ತುವಿಸ್ತರ ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ" [೧೩] ಕವಿರಾಜಮಾರ್ಗವನ್ನು ರಚಿಸಿದುದಾಗಿ ಹೇಳುತ್ತಾನೆ.

ಮುಂದುವರೆದು, ಎಂ. ವಿ. ಸೀತಾರಾಮಯ್ಯನವರು ಹೀಗೆ ಹೇಳುತ್ತಾರೆ "ಗ್ರಂಥದ ಹೆಸರಿನ ಸಮಸ್ತ ಪದವನ್ನು : ಅ) ಕವಿಗಳ + ರಾಜಮಾರ್ಗ ಬ) ಕವಿರಾಜರ + ಮಾರ್ಗ ಕ) ಕವಿರಾಜನ + ಮಾರ್ಗ ಎಂದು ಬಿಡಿಸಬಹುದಾಗಿದೆ." [೧೪] ಗ್ರಂಥವು ೧) ದೋಷಾದೋಷಾನುವರ್ಣನ ನಿರ್ಣಯಂ ೨) ಶಬ್ದಾಲಂಕಾರವರ್ಣನನಿರ್ಣಯಂ ೩) ಅರ್ಥಾಲಂಕಾರ ಪ್ರಕರಣಂ ಎಂಬ ಮೂರು ಪರಿಚ್ಛೇದಗಳನ್ನು ಒಳಗೊಂಡಿದ್ದು, ಒಟ್ಟು ೫೪೧ ಪದ್ಯಗಳಿವೆ. ಅಲ್ಲಲ್ಲಿ ವೃತ್ತಗಳು, ಶ್ಲೋಕ ಮತ್ತು ಗೀತಿಕೆಗಳ ಬಳಕೆಯನ್ನು ಹೊರತುಪಡಿಸಿದರೆ ಉಳಿದಂತೆ ಕೃತಿಯುದ್ದಕ್ಕೂ ೪೭೧ ಕಂದಪದ್ಯಗಳಿವೆ.

೧) ದೋಷಾದೋಷಾನುವರ್ಣನ ನಿರ್ಣಯಂ:

ಗ್ರಂಥಾರಂಭದಲ್ಲಿ ಕವಿಯು ಆಶ್ರಯದಾತ ನೃಪತುಂಗನನ್ನು ನಾರಾಯಣನೊಂದಿಗೆ ಅಭೇದ ಕಲ್ಪನೆಯ ದೇವತಾ ಸ್ತೋತ್ರದೊಂದಿಗೆ ಪ್ರಶಂಸಿಸಿ, ವಾಗ್ದೇವಿಯನ್ನು ಸ್ಮರಿಸಿ "ಹಂಸೀ ಭಾವದಿ ನೆಲೆಗೊಳಗೆ ಮನ್ಮಾನಸದೊಳ್" [೧೫] ಎಂದು ಬೇಡಿಕೊಳ್ಳುತ್ತಾನೆ. ಮುಂದುವರೆದು, ಸ್ವವಿಚಾರದ ಕುರಿತಾಗಿ ವ್ಯಾಕರಣ, ಕಾವ್ಯ, ನಾಟಕ, ಅಲಂಕಾರಗಳಲ್ಲಿ ಪ್ರವೀಣನಾಗಿರುವುದರಿಂದಲೇ ಅತಿಶಯದವಳನೆನಿಸಿದ ನೃಪತುಂಗನ ಪಟ್ಟಣವಾದ ಮಾನ್ಯಖೇಟವನ್ನು ಪ್ರವೇಶಿಸುವಂತಾಯಿತು. ಇಲ್ಲದಿದ್ದಲ್ಲಿ ಈ ಭಾಗ್ಯವು ಲಭಿಸುತ್ತಿರಲಿಲ್ಲವೆಂದು ಹೇಳಿಕೊಂಡಿದ್ದಾನೆ.

ಈ ಪರಿಚ್ಛೇದದಲ್ಲಿ ಕಾವ್ಯ ಎಂದರೇನು? ಕಾವ್ಯವು ಯಾವ ಸ್ವರೂಪದಲ್ಲಿದೆ? ಎಂಬುದನ್ನು ಹೇಳುವ ಮುಂಚೆ ಕಾವ್ಯಗುಣ, ದೋಷಗಳು ಅಗಣಿತವಾಗಿರುವವು. ಅದಕ್ಕಾಗಿ ಪೂರ್ವಕಾವ್ಯಗಳ ರಚನೆಯನ್ನು ತಾನು ಮೊದಲು ಅರಿತಲ್ಲದೇ, ಕವಿಯು ತನ್ನ ಕೃತಿಗಳಲ್ಲಿ ಬೆಡಗು ಭಿನ್ನಾಣಗಳನ್ನು ಚಿತ್ರಿಸಲು ಸಾಧ್ಯವೇ? ಎಂದು ಪ್ರಶ್ನಿಸುತ್ತಾನೆ. ಗುರುವಿನ ಉಪದೇಶವನ್ನು ಕೇಳಿಸಿಕೊಂಡು ಶಾಸ್ತ್ರ ವಿಷಯಗಳನ್ನು ದಡ್ಡನೂ ಅರಿತುಕೊಳ್ಳಬಹುದು. ಆದರೆ ಕಾವ್ಯಚತುರತೆಯು ಹಾಗಲ್ಲ. ಅದು ಕೇವಲ ಪ್ರತಿಭೆಯುಳ್ಳವರಿಗೆ ಮಾತ್ರ ಒಲಿಯುವಂತಹದ್ದು.

"ಪ್ರತಿಭಾವತ್ವಮುಮಕೃತ
ಚತುರತೆಯುಂ ಪರಮಬುಧಜನೋಪಾಸಮುಂ

೧೩. ಡಾ. ಕೆ. ಕೃಷ್ಣಮೂರ್ತಿ (ಸಂ) ; **ನೃಪತುಂಗದೇವಾನುಮತಂ ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ** ; ಪುಟ. ೫೩
೧೪. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ.೬೧ (ಪೀಠಿಕೆ)
೧೫. ಅದೇ ; ಪುಟ. ೧೦೫

ಶ್ರುತಪರಿಚಯಮುಂ ತರ್ಕುಂ
ಪ್ರತೀತಿಯಂ ವಾಗ್ವಿದಗ್ಧತಾ ನಿಪುಣತೆಯೊಳ್ ॥೧.೧೧॥"[೧೬]

ಪ್ರತಿಭೆ, ಚಾತುರ್ಯ, ವಿದ್ವಜ್ಜನರ ಸೇವೆ, ಶಾಸ್ತ್ರ ಪರಿಚಯಗಳೆಲ್ಲವೂ ಮಾತುಗಾರಿಕೆ ಮತ್ತು ಅತಿಶಯವಾದ ಜ್ಞಾನವನ್ನು ತಂದುಕೊಡಬಲ್ಲವು. ಯಾವನು ಕಾವ್ಯವು ನಿಚ್ಚಂ ಪೊಸದೆನಿಸುವಂತೆ ರಚಿಸಲು ಸೋಲುತ್ತಾನೋ ಆತನು ಕಾವ್ಯರಚನೆಗೆ ತೊಡಗದಿರುವುದೇ ಒಳಿತು. ಸತ್ಕಾವ್ಯವೆಂಬುದು ಒಂದೇ ಸಮನಾಗಿರುವ ಮಣಿಗಳನ್ನು ಒಂದು ದಾರದಲ್ಲಿ ಪೋಣಿಸಿದಾಗ ಹೇಗೆ ಸೊಗಯಿಸುವುದೋ ಹಾಗಿರುತ್ತದೆ. ಬೇರೆ ಕವಿಗಳ ಮಾತುಗಳನ್ನೇ ತನ್ನ ಕೃತಿಯಲ್ಲಿ ಪದೇ ಪದೇ ಬಳಸುವವನು ಕುಕವಿಯೆನಿಸಿಕೊಳ್ಳುತ್ತಾನೆ. ಅನ್ಯರ ಮನದಿಂಗಿತವನ್ನು ಅರಿತಂತೆ ಹೇಳುವವ 'ಮಾತರಿತವ'. ಕಿರಿದರಲ್ಲಿ ಹಿರಿದರ್ಥ ಹೇಳಬಲ್ಲವನು ಚತುರ. ಆ ಮಾತುಗಳನ್ನು ಛಂದೋಬಂಧದಲ್ಲಿ ಹಿಡಿದಿಡುವವನು ಅವನಿಗಿಂತಲೂ ಜಾಣ. ಅದರಿಂದ ಮಹಾಕೃತಿಗಳನ್ನು ರಚಿಸಬಲ್ಲವನು ಎಲ್ಲರಿಗಿಂತಲೂ ಜಾಣನು. ಹೀಗಿರುವ ಈ ಜಗತ್ತಿನಲ್ಲಿ ಮಾತು ಬಲ್ಲವರು ಅತೀ ವಿರಳರು. ಅವರಲ್ಲಿ ನೀತಿ, ಕಾವ್ಯ ಲಕ್ಷಣವನ್ನು ತಿಳಿದುಕೊಂಡ ಕವಿಶ್ರೇಷ್ಠರು ಇನ್ನೂ ವಿರಳರು ಎಂದು ಕವಿರಾಜಮಾರ್ಗಕಾರನು ಹೇಳುತ್ತಾನೆ.

ಶ್ರೇಷ್ಠಕವಿಗಳ ಪ್ರಧಾನ ಕಾವ್ಯಗಳು ಇದು ಪಾಪ, ಇದು ಪುಣ್ಯ, ಇದು ಲೋಕಹಿತಕರವಾದುದು, ಇದು ಸುಖದಾಯಕವಾದುದು, ಇದು ದುಃಖಕಾರಕವಾದುದು ಎಂದು ತಿಳಿಯಹೇಳುತ್ತವೆ. ಲೋಕ ಹಿತಕಾರಿಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಅಂತಹ ಕಾವ್ಯಗಳಿಂದಲೇ ವ್ಯಕ್ತವಾಗಿವೆ.

"ಕವಿಭಾವಕೃತಾನೇಕ
ಪ್ರವಿಭಾಗ ವಿವಿಕ್ತ ಸೂಕ್ತಮಾರ್ಗಂ ಕಾವ್ಯಂ
ಸವಿಶೇಷ ಶಬ್ದರಚನಂ
ವಿವಿಧಾರ್ಥವ್ಯಕ್ತಿ ವರ್ತಿತಾಲಂಕಾರಂ ॥೦೧.೨೨॥"[೧೭]

ಕವಿಯ ಭಾವನೆಗಳಿಗೆ ತಕ್ಕಂತೆ ಪ್ರತ್ಯೇಕವಾದ ಮಾರ್ಗಗಳಾಗಿ ಅನುಸರಿಸಿ, ವಿಶೇಷ ಪದಗಳ ಬಳಕೆಯಿಂದ ರಚಿತವಾಗಿ ವಿವಿಧವಾದ ಅರ್ಥಪ್ರಕಟನೆಯ ಪರಿಗಳನ್ನು ಸಾಲಂಕಾರವೆನಿಸುವುದೇ 'ಕಾವ್ಯ' ಎಂದು ಶ್ರೀವಿಜಯ ಅಭಿಪ್ರಾಯಪಡುತ್ತಾನೆ. ಮುಂದುವರೆದು, ಕಾವ್ಯವು ಗದ್ಯರೂಪದಲ್ಲಿ, ಪದ್ಯರೂಪದಲ್ಲಿ ಇಲ್ಲವೇ ಸಮ್ಮಿಶ್ರಿತವಾಗಿಯೂ ಇರಬಹುದು. ಅಂತಹ ಕಾವ್ಯಗಳು ಅಗಣಿತರೂಪದಲ್ಲಿ ದೊರೆಯುತ್ತವೆ ಎನ್ನುತ್ತಾನೆ. ಹೀಗಿರುವಲ್ಲಿ ಕನ್ನಡದಲ್ಲಿ ಬೆದಂಡೆ ಮತ್ತು ಚತ್ತಾಣಗಳೆಂಬ ಎರಡು ಕಾವ್ಯಭೇದಗಳನ್ನು ತಿಳಿಸಿದ್ದಾನೆ.

---

೧೬. ಡಾ. ಕೆ. ಕೃಷ್ಣಮೂರ್ತಿ (ಸಂ) ; **ನೃಪತುಂಗದೇವಾನುಮತಂ ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ** ; ಪುಟ. ೫೫
೧೭. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ.೧೦೮

ಪ್ರಕೃತಿ ಸೌಂದರ್ಯವನ್ನು ನೋಡುವ ಕಣ್ಣಲ್ಲಿ ಸಣ್ಣ ಕಸವು ಸೇರಿಕೊಂಡರೆ ಹೇಗೋ, ಹಾಗೆ ಒಂದು ಸುಂದರವಾದ ಕಾವ್ಯದಲ್ಲಿ ಸಣ್ಣ ದೋಷ ಸೇರಿಕೊಂಡರೂ ಅದು ಆ ಕಾವ್ಯ ಸೌಂದರ್ಯವನ್ನು ಕೆಡಿಸುತ್ತದೆ. ತನ್ನ ಕಣ್ಣಿಗೆ ಹಚ್ಚಿಕೊಂಡ ಕಾಡಿಗೆ ಹೇಗೆ ತನಗೆ ಕಾಣಿಸಲಾರದೋ, ಹಾಗೆಯೇ ತಾನು ರಚಿಸಿದ ಕಾವ್ಯವು ಶ್ರೇಷ್ಠವೆಂದು ಬೀಗುವುದಕ್ಕೆ ಮುನ್ನ ಇನ್ನೊಬ್ಬರ ಮುಂದೆ ಅದನ್ನು ತೋರಿಸುವುದರಿಂದ ಅದರಲ್ಲಿರುವ ದೋಷಗಳನ್ನು ಹೋಗಲಾಡಿಸಬಹುದು. ಅಂತೆಯೇ ಕಾವ್ಯಗಳಲ್ಲಿನ ಪ್ರಮುಖವಾದ ತ್ರಿವಿಧ ದೋಷಗಳನ್ನು ಗುರುತಿಸಲಾಗಿದೆ.

ಅ) ವ್ಯಾಕರಣದೋಷಗಳು

ಆ) ಛಂದೋದೋಷಗಳು

ಇ) ಅಲಂಕಾರದೋಷಗಳು

ಪೂರ್ವಕಾವ್ಯಗಳೇ ಇಂದಿನ ಕಾವ್ಯಗಳಿಗೆ ಯೋಗ್ಯವಾದ ಲಕ್ಷಣಗಳು. ಆದರೆ "ಶಾಸ್ತ್ರಜ್ಞಾನವಿಲ್ಲದವರು ದೇಸಿಯಲ್ಲವೆಂದು ತಿಳಿದಿದ್ದರೂ ಹಳಗನ್ನಡವನ್ನೇ ಕೆಡಿಸಿ ಹೇಳುವರು."[೧೮] ಎಂದು ಹೇಳಿ, ಅದಕ್ಕೆ ಪೊಡವಿಪತಿ ಗೊರವ, ಪೇಳ್ವಡೆಯದು, ಅದೆಕರಸಿ, ಕಬ್ಬಿಗರ್ ದೂಱ್, ಹಡುವಸು, ಮರೆಸು, ಎಟ್ಟಿಸು, ಎಮ್ಮುಡಿಯೊಳಂ, ಆರ್ಗೆ ಈ ಮುಂತಾದ ಪದಗಳನ್ನು ಉದಾಹರಣೆ ಕೊಡುತ್ತಾನೆ. ಸಮಸಂಸ್ಕೃತದ ಸಂದರ್ಭದಲ್ಲಿ ನೇರವಾಗಿ ಹೊಂದಿಕೊಳ್ಳುವಂತಿದ್ದರೆ ಮಾತ್ರ ಕನ್ನಡವನ್ನು ಪ್ರಯೋಗಿಸಬೇಕು. ಅದುವೇ ಶಾಸ್ತ್ರ ಬಲ್ಲವರು ತಿಳಿಸುವ ಮಾರ್ಗವಾಗಿದೆ. ಕನ್ನಡಕ್ಕೆ ಹೊಂದಲಾರದ ಪದಪ್ರಯೋಗವನ್ನು ಮಾಡುವುದು ತಪ್ಪು ಎಂದು ಮಾರ್ಗಕಾರ ಹೇಳುತ್ತಾನೆ.

ಸಂಸ್ಕೃತ ಮತ್ತು ಕನ್ನಡವನ್ನು ಸರಿಯಾಗಿ ಅರಿತುಕೊಳ್ಳದೇ ಪದಗಳನ್ನು ಸೇರಿಸಿದರೆ ಕುದಿಯುತ್ತಿರುವ ಹಾಲಿನಲ್ಲಿ ಮಜ್ಜಿಗೆಯ ಹನಿಗಳನ್ನು ಸೇರಿಸಿದಂತೆ ಅರಿಸಮಾಸದೋಷ ಉಂಟಾಗುತ್ತದೆ. ಶ್ರುತಿದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿಕಷ್ಟ ಎಂದು ನಾಲ್ಕು ರೀತಿಯ ಕೃತಿದೋಷಗಳನ್ನು ಗುರುತಿಸಿ, ಉದಾಹರಣೆಗಳನ್ನು ಕೊಡುತ್ತಾನೆ. ದುಷ್ಟರ ಸಹವಾಸವನ್ನು ತೊರೆಯುವಂತೆ ಹೀಗಿರುವ ನಾಲ್ಕು ದೋಷಗಳನ್ನು ತೊರೆಯಬೇಕು. ದುಷ್ಕರವಾದ ಚಿತ್ರಬಂಧದ ಪ್ರಯೋಗದಲ್ಲಿ ಶ್ರುತಿಕಷ್ಟವು ದೋಷವೆನಿಸದು. ಅಂತೆಯೇ ಹಾಸ್ಯದ ಸಂದರ್ಭಗಳಲ್ಲಿ ಇನ್ನುಳಿದ ಮೂರು ದೋಷಗಳೂ ದೋಷವೆನಿಸಲಾರವು. ಅವುಗಳನ್ನು ಅರಿತು ಪ್ರಯೋಗ ಮಾಡಬೇಕು.

ಮುಂದುವರಿದು ಕವಿ ಶ್ರೀವಿಜಯನು ತನ್ನ ಕವಿರಾಜಮಾರ್ಗದಲ್ಲಿ ಯತಿಭಂಗಾದಿಯಾಗಿ ಹದಿನಾರು ದೋಷಗಳನ್ನು ಹೇಳುತ್ತಾನೆ.

---

೧೮. ಡಾ. ಕೆ. ಕೃಷ್ಣಮೂರ್ತಿ (ಸಂ) ; **ನೃಪತುಂಗದೇವಾನುಮತಂ ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ** ; ಪುಟ. ೬೪

೧. ಯತಿಭಂಗ: "ಯತಿಯೆಂಬುದುಸಿರ್ವ ತಾಣಂ ಕೃತಾಸ್ಪದಂ ವೃತ್ತಜಾತಿಪದ ಪದ್ಧತಿಯೊಳ್" [೧೯] ಎಂದು ಹೇಳಿ. "ತಡವರಿಸುತ್ತ ತೊಡರಿಕೊಳ್ಳುವಂತೆ ಯತಿಯನ್ನು ಹೇಳಿದರೆ ಅದೇ ಯತಿಭಂಗ. ಸಡಿಲಿಸದೆ, ಎಚ್ಚರ ತಪ್ಪದೆ ಅದನ್ನು ಶಾಸ್ತ್ರೋಕ್ತವಾದ ಸ್ಥಾನದಲ್ಲಿ ಸರಿಯಾಗಿ ನಿಲ್ಲುವಂತೆ ಹೇಳಿದರೆ ದೋಷವಾಗದು."[೨೦] (೧.೭೩)

"ದೋಸಮನೆ ಗುಣದವೋಲು
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್
ದೇಸಿಯನೆ ನಿಜೆಸಿ ಖಂಡ
ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ ॥೦೧.೭೫॥[೨೧]

ಕನ್ನಡದಲ್ಲಿ ಪೂರ್ವಾಚಾರ್ಯರು ದೋಷವನ್ನೇ ಗುಣವೆಂದು ಭಾವಿಸಿ ಯತಿಯನ್ನು ಮೀರಿದರು.

೨. **ಅರ್ಥಶೂನ್ಯ:** ಒಂದು ಸಮುದಾಯಾರ್ಥವನ್ನು ವಿಚಾರಿಸಿದಾಗ ಒಟ್ಟಾರೆ ಅರ್ಥ ದೊರೆಯದಿರುವುದೇ 'ಅರ್ಥಶೂನ್ಯ'. (೧.೭೯)

೩. **ವಿರುದ್ಧಾರ್ಥ:** ಹಿಂದೆ ಹೇಳಿದ ಮಾತಿಗೂ ಮತ್ತು ಈಗ ಹೇಳುವ ಮಾತು ಮತ್ತು ಸಂಗತಿಗೂ ಪರಸ್ಪರ ಹೊಂದಾಣಿಕೆಯಾಗದಿರುವುದು. (೧.೮೧)

೪. **ಪುನರುಕ್ತಾರ್ಥ:** ಹಿಂದಿನ ವಾಕ್ಯದ ಅರ್ಥವನ್ನೇ ಕೊಡುವ ಇನ್ನೊಂದು ಪದಸರಣಿಯನ್ನು ಪ್ರಯೋಗಿಸುವುದು. (೧.೮೪)

೫. **ಯಥಾಸಂಖ್ಯ:** ಮೊದಲು ಹೇಳಿದ ಮತ್ತು ತದನಂತರದಲ್ಲಿ ಹೇಳಿದ ಉಕ್ತಿಕ್ರಮಕ್ಕನುಗುಣವಾಗಿಯೇ ತಿರುಗಿ ಹೇಳುವುದು. (೧.೮೬)

೬. **ವ್ಯವಹಿತ:** ಪ್ರಯೋಗಿತ ಅಲಂಕಾರದಲ್ಲಿ ಅನ್ವಯಾರ್ಥವು ಸಂಬಂಧಿಸಿದ ವಾಕ್ಯಕ್ಕೆ ದೂರವಾಗಿರುವುದು. (೧.೯೦)

೭. **ಛಂದೋಭಂಗ:** ಗುರು, ಲಘುಗಳ ವಿನ್ಯಾಸಕ್ರಮದಲ್ಲಿ ವ್ಯತ್ಯಾಸವಾಗುವುದು. (೧.೯೨)

೮. **ವಿಸಂಧಿ:** ಛಂದಸ್ಸಿಗೆ ಹೊಂದಿಕೆಯಾಗದೆಂಬ ಕಾರಣಕ್ಕೆ, ವ್ಯಾಕರಣ ನಿಯಮದ ಪ್ರಕಾರ ಸಂಧಿಯಾಗುವ ಜಾಗದಲ್ಲಿ ಸಂಧಿಕಾರ್ಯ ಮಾಡದೇ ಇರುವುದು. (೧.೯೫)

೯. **ನೇಯಾರ್ಥ:** ಕವಿಯ ಉದ್ದೇಶದನ್ವಯ ಕಾವ್ಯದಲ್ಲಿ ಅರ್ಥ ಹುಟ್ಟದೇ ಇರುವುದು. (೧.೧೦೧)

೧೦. **ಆಗಮವಿರುದ್ಧ:** ಹಿಂದೆ ಹೇಳಿದ ಆಗಮಶಾಸ್ತ್ರಗಳಿಗೆ ವಿರುದ್ಧವಾಗಿರುವ ಕವಿವಚನ (೧.೧೦೪)

೧೧. **ಸಮಯವಿರುದ್ಧ:** ಹಲವಾರು ಶ್ರೇಷ್ಠ ತತ್ತ್ವಜ್ಞಾನಿಗಳು ಹಿಂದೆ ಹೇಳಿದ ದರ್ಶನಶಾಸ್ತ್ರವೇ ಸಮಯ. ಅದಕ್ಕೆ ವಿಪರೀತಮತಿಯ ಅರ್ಥವನ್ನು ಕಲ್ಪಿಸುವುದೇ ಸಮಯವಿರುದ್ಧ (೧.೧೦೫)

೧೨. **ನ್ಯಾಯವಿರುದ್ಧ:** ಹಿಂದೆ ನ್ಯಾಯಶಾಸ್ತ್ರಗಳಲ್ಲಿ ಹೇಳಿದ ವಿಚಾರಗಳಿಗೆ ವಿರುದ್ಧವಾದ ಪ್ರಯೋಗ. (೧.೧೦೬)

---

೧೯. ಡಾ. ಕೆ. ಕೃಷ್ಣಮೂರ್ತಿ (ಸಂ) ; **ನೃಪತುಂಗದೇವಾನುಮತಂ ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ** ; ಪುಟ. ೬೯
೨೦. ಡಾ. ಎಸ್. ಎಸ್. ಅಂಗಡಿ (ಸಂ) : **ಸರಳ ಕವಿರಾಜಮಾರ್ಗ** : ಪುಟ. ೭೩
೨೧. ಡಾ. ಕೆ. ಕೃಷ್ಣಮೂರ್ತಿ (ಸಂ) ; **ನೃಪತುಂಗದೇವಾನುಮತಂ ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ** ; ಪುಟ. ೭೧

೧೩. **ಕಲಾವಿರುದ್ಧ:** ನಿರುಪಮವಾದ, ಗಮಕ ಸ್ವರಾದಿ ಸಂಗೀತ ಮುಂತಾಗಿ ಅರವತ್ತನಾಲ್ಕು ಕಲೆಗಳ ಲಕ್ಷಣಗಳು ಸರಿಯಾಗಿ ಬಾರದೇ ನಿಂದಿಸುವುದು. (೧.೧೦೭)

೧೪. **ಕಾಲವಿರುದ್ಧ:** ಕವಿಯಾದವನಿಗೆ ಕಾಲದಪರಿವೆ ಅತೀ ಅಗತ್ಯ. ಹಗಲು, ಇರುಳು, ವಾರ, ತಿಥಿ, ಮಾಸಗಳು ಹೊಂದಿಕೆಯಾಗದಿರುವುದು ಕಾಲವಿರುದ್ಧ. (೧.೧೦೮)

೧೫. **ಲೋಕವಿರುದ್ಧ:** ಊರ್ಧ್ವಲೋಕ, ಮಧ್ಯಲೋಕ, ಅಧೋಲೋಕಗಳೆಂದಿದ್ದು. ಅವಕ್ಕೆ ವಿರುದ್ಧವಾಗಿ ಹೇಳುವುದೇ ಲೋಕವಿರುದ್ಧ. (೧.೧೦೯)

೧೬. **ದೇಶವಿರುದ್ಧ:** ದೇಶಾವಾಸಗಳಿಗೆ ವಿರುದ್ಧವಾದ ಪ್ರಯೋಗವೇ ದೇಶವಿರುದ್ಧ. (೧.೧೧೦)

ಹೀಗೆ ಕಾವ್ಯದೋಷಗಳನ್ನು ಹೇಳುವ ಶ್ರೀವಿಜಯನು ಮುಂದುವರೆಯುತ್ತಾ:

"ಕಾರಕದೋಷಮುಂ ವಚನದೋಸಮುಮಾ ಗುರುದೋಷಮುಂ ಲಘೂ
ಚ್ಚಾರಿತ ಶಬ್ದದೋಷಮುಮದಂತೆ ಸಮುಚ್ಚಯಜಾತದೋಷಮುಂ
ಭೂರಿ ವಿಕಲ್ಪದೋಷಮುಮದಿನ್ನವಧಾರಣದೋಷಮುಂ ವಿಶಂ
ಕಾ ರಚಿತೋರು ದೋಷಮುಮನೀ ತೆಱದಿಂ ತಿಱೆಸಲ್ಗೆ ಪಂಡಿತರ್॥೦೧.೧೧೩॥"[೨೨] ಹೇಳುತ್ತಾನೆ.

ಕಾರಕದೋಷ: ನಾಮ, ವಿಭಕ್ತಿಗಳ ಪ್ರಯೋಗದಲ್ಲಿ ದೋಷ ಮಾಡುವುದು.

ವಚನದೋಷ: ಏಕವಚನ, ಬಹುವಚನಗಳ ಪ್ರಯೋಗದಲ್ಲಿ ದೋಷ ಮಾಡುವುದು.

ಗುರು, ಲಘುದೋಷ: ಛಂದಸ್ಸಿನ ನಿಯಮಗಳಿಗೆ ವಿರುದ್ಧವಾಗಿ ಗುರು, ಲಘುಗಳ ಪ್ರಯೋಗ ಮತ್ತು ಉಚ್ಚಾರಣೆ ಮಾಡುವುದು.

ಸಮುಚ್ಚಯ ದೋಷ: ಸ್ವರ ಸಮುಚ್ಚಯಗಳ ಅಪ್ರಯೋಗ.

ವಿಕಲ್ಪದೋಷ: ಒಂದು ವಿಷಯವನ್ನು ಅದೋ ಇದೋ ಎಂದು ನಿಖರವಾಗಿ ಹೇಳದಿರುವುದು.

ಅವಧಾರಣದೋಷ: ನಿಯತಾರ್ಥದಲ್ಲಿ ಸ್ವರಗಳ ಪ್ರಯೋಗದಲ್ಲಿ ವಿಫಲವಾಗುವುದು.

ವಿಶಂಕಾದೋಷ: ಅವನೋ, ಇವನೋ ಎಂದು ಸಂಶಯಾಸ್ಪದವಾಗಿ ಹೇಳುವುದು.

ಹೀಗೆ ಕವಿರಾಜಮಾರ್ಗಕಾರನಾದ ಶ್ರೀವಿಜಯನು ಪ್ರಥಮ ಪರಿಚ್ಛೇದದಲ್ಲಿ ಕಾವ್ಯದ ದೋಷಗಳನ್ನು ಪಟ್ಟಿಮಾಡಿ ಕೊಡುತ್ತಾನೆ. ಕಾವ್ಯ ಪ್ರಯೋಗ ಮಾಡುವಾತನು ಈ ದೋಷಗಳನ್ನು ಅರ್ಥೈಸಿಕೊಂಡು ಸ್ವಚ್ಛಂದವಾದ ಕೃತಿಯನ್ನು ರಚಿಸಬೇಕೆಂದು ಆಶಯವನ್ನು ವ್ಯಕ್ತಪಡಿಸುತ್ತಾನೆ.

೨) ಶಬ್ದಾಲಂಕಾರವರ್ಣನ ನಿರ್ಣಯಂ:

"ಎರಡನೆಯ ಪರಿಚ್ಛೇದದಲ್ಲಿ ಶ್ರೀವಿಜಯನು ಕಾವ್ಯವಧುವಿನ ಶರೀರದ ಕಾಂತಿಯನ್ನು ಶೋಭಾಯಮಾನವಾಗಿ ಮಾಡುವ ಗುಣಗಳನ್ನು ಎಂದರೆ 'ಶಬ್ದಾಲಂಕಾರ' ಮತ್ತು 'ಅರ್ಥಾಲಂಕಾರ' ಎಂದು ವಿಭಜಿಸಿದ್ದಾನೆ. ಕವಿಯಾದವನು ಕಾವ್ಯ ರಚಿಸುವಾಗ ಇಲ್ಲಿಗೆ ಈ ಶಬ್ದ ತಕ್ಕುದು, ಇಲ್ಲಿ ಈ ಶಬ್ದ ತಕ್ಕುದಲ್ಲ ಎಂದು ಮಾಲೆಗಾರ ಹೂಗಳನ್ನು ಆರಿಸಿ ಆರಿಸಿ ಮಾಲೆಯನ್ನು

೨೨. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ.೧೨೩

ಕಟ್ಟುವಂತೆ ಶಬ್ದ ಸಂದೋಹವನ್ನು ಹೆಕ್ಕಿ ಹೆಕ್ಕಿ ಜೋಡಿಸಿ ಹೆಣೆಯುತ್ತಾನೆ ಎಂದು ಕಾವ್ಯ ರಚನೆಯ ಪದ್ಧತಿಯನ್ನು ವಿವರಿಸಿದ್ದಾನೆ. ಹಾಗೆ ಜೋಡಿಸದೆ ಇದ್ದರೆ ಕಾವ್ಯದಲ್ಲಿಯ ಶಬ್ದಗಳು ನೆಲ್ಲು ಮತ್ತು ಮೊಸರನ್ನು ಕಲೆಸಿಕೊಟ್ಟಂತೆ ಆಗುತ್ತದೆ."[೨೩]

"ಪರಮ ಶ್ರೀಕೃತಿವಧುವಾ
ಶರೀರಶೋಭಾಕರಂಗಳಪ್ಪ ಗುಣಂಗಳ್
ನಿರತಿಶಯಾಲಂಕಾರ
ಪ್ರರೂಪಿತಂಗಳ್ ಪುರಾಣ ಕವಿ ವಿದಿತಂಗಳ್ ॥೨.೦೧॥"[೨೪]

ಪರಮಾಲಂಕಾರಭೂಷಿತೆಯಾದ ಕಾವ್ಯಕನ್ನಿಕೆಯ ಶರೀರದ ಸೌಂದರ್ಯವನ್ನು ಹೆಚ್ಚಿಸುವ ಅಂಶಗಳೇ ಉತ್ತಮವಾದ ಅಲಂಕಾರ ಸ್ವರೂಪಗಳೆಂದು ಪೂರ್ವಕವಿಗಳು ಹೇಳಿರುವರು. ಅಂತೆಯೇ ಶ್ರೀವಿಜಯನೂ ತನ್ನ 'ಕವಿರಾಜಮಾರ್ಗ' ಗ್ರಂಥದ ಎರಡನೆಯ ಪರಿಚ್ಛೇದದಲ್ಲಿ ಅಲಂಕಾರಗಳ ವರ್ಣನೆಯಲ್ಲಿ ತೊಡಗುತ್ತಾನೆ. ನೃಪತುಂಗನ ಚಾರುವಿಚಾರಸಣಿಯ ಮಾರ್ಗದಂತೆ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳು ಎಂದು ಎರಡು ಭೇದಗಳಿವೆ. ಇವೆಡರಲ್ಲಿ ಪ್ರಧಾನವಾಗಿರುವ 'ಶಬ್ದಾಲಂಕಾರ'ವನ್ನು ಮೊದಲು ವಿವರಿಸುತ್ತೇನೆ ಎಂದು ಹೇಳಿ ಮುಂದುವರೆಯುತ್ತಾನೆ ಕವಿ.

"ಇಲ್ಲಿಗಿದು ತಕ್ಕುದಿಲ್ಲಿಗೆ
ಪೊಲ್ಲದಿದೆಂದಱಿದು ಸಮಱಿ ಬಲ್ಲಂತೆಲ್ಲಂ
ನೆಲ್ಲುಂ ಮೊಸರುಂ ಗುಡಿದಂ
ತಲ್ಲದೆ ತಲ್ಲಣಿಸದಲಸದಿಡು ಮೃದುಪದಮಂ ॥೨.೦೪॥"[೨೫]

ಈ ಪದವು ಇಲ್ಲಿಗೆ ಉಚಿತವಾದುದು, ಇಲ್ಲಿ ಅನುಚಿತವಾದುದು ಎಂದು ವಿವೇಚಿಸಿ, ಕೃತಿಯಲ್ಲಿ ಕ್ಲೇಶವಿಲ್ಲದಂತೆ ಅಂದವಾಗಿಸಿ, ಮೃದುಪದಗಳನ್ನು ಬಳಸಿ ಕಾವ್ಯ ರಚಿಸುವುದು. ಒಂದು ವೇಳೆ ಶಬ್ದಕ್ಕೆ ಅರ್ಥಕ್ರಮವು ತಪ್ಪಿದಲ್ಲಿ ಮೆಣಸನ್ನು ಮುತ್ತಿನೊಡನೆ ಪೋಣಿಸಿದಂತಾಗುತ್ತದೆ. ಆದುದರಿಂದ ಹೊಂದಾಣಿಕೆಯಾಗುವ ಅರ್ಥದ ಶಬ್ದವನ್ನೇ ಬಳಸಬೇಕು ಎನ್ನುತ್ತಾನೆ ಶ್ರೀವಿಜಯ. ಲಘು ಅಕ್ಷರಗಳಿಂದ ಕೂಡಿದ ಪದದ ಕೊನೆಯ ಅಕ್ಷರದ ಬಳಿಯೇ ಒತ್ತಕ್ಷರದಿಂದ ಆರಂಭವಾಗುವ ಪದವನ್ನು ಸೇರಿಸಿದರೆ ಕೂಸಿನ ತಲೆಯ ಮೇಲೆ ದೊಡ್ಡ ಹೊರೆಯನ್ನು ಹೇರಿದಂತಾಗುತ್ತದೆ. ಇದು ಕ್ಲೇಶಕರವಾದುದು.

ಕ್ರಿಯೆ, ಕ್ರಿಯಾವಿಶೇಷಣ ಇವೆಲ್ಲ ಒಂದರ ಜೊತೆಗೆ ಇನ್ನೊಂದು ಸುಭಗ ಗತಿಯಲ್ಲಿ ಹೊಂದಿಕೊಂಡಿರಬೇಕು. ಒಂದು ಕ್ರಿಯಾಪದಕ್ಕೆ ಎರಡು ಕ್ರಿಯಾವಿಶೇಷಣಗಳನ್ನು ಬಳಸಿದರೆ ಒಂದು

---

೨೩. ಸೀತಾರಾಮ್ ಜಾಗೀರದಾರ್ : **ಕವಿರಾಜಮಾರ್ಗ** ; ಪುಟ. ೨೯
೨೪. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ. ೧೩೩
೨೫. **ಅದೇ** ; ಪುಟ. ೧೩೩

ಕರುವನ್ನು ಎರಡು ಹಸುಗಳಿಗೆ ಬಿಟ್ಟಂತೆ ಆಗುತ್ತದೆ ಎನ್ನುತ್ತಾನೆ. ಮುಂದುವರೆದು "'ಇನ್', 'ಅಂತೆ', 'ಮತ್ತೆ', 'ಬಟಿ', 'ಮಿಗೆ', 'ಮುಂ', 'ನಿಲೆ', 'ತಾಂ', 'ಮೇಣ್', 'ಪೆಱಂ', 'ಗಡಂ', 'ಗಳಂ', 'ಆದಂ', 'ಕೆನ್ನಂ', 'ನಿಲ್' ಎಂಬಿವನ್ನು ಅನಪೇಕ್ಷಿತ ಸ್ಥಳಗಳಲ್ಲಿ ಜೋಡಿಸಲು ಕಲಿಯದಿರಿ"[೨೬] ಎಂದು ಹೇಳುತ್ತಾನೆ. ಇದೇ ಪರಿಚ್ಛೇದದಲ್ಲಿ ಪ್ರಥಮಾದಿ ವಿಭಕ್ತಿ ಪ್ರತ್ಯಯಗಳು, ದ್ವಿರುಕ್ತಿಗಳನ್ನೂ ತಿಳಿಸಿ, ಪ್ರಾಸ ವಿಚಾರವನ್ನು ಹೇಳುತ್ತಾನೆ.

> **"ನುತ ಶಬ್ದಾಲಂಕಾರದೊ**
> **ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ**
> **ಕೃತಕೃತ್ಯಮಲ್ಲವಲ್ಲಭ**
> **ಮತದಿಂದದಱ ಪ್ರಪಂಚಮೀತೆಱನಕ್ಕುಂ ॥೨.೩೦॥**
>
> **ವಿನುತ ಪ್ರಾಸಂ ಶಾಂತೋ**
> **ಪನತಂ ವರ್ಗೋದಿತಂ ಸಮೀಪಗತಂ ಮ**
> **ತ್ತನುಗತಮಂತಗತಂ ಸಂ**
> **ಜನಿತ ವಿಭೇದೋಕ್ತಿಯಿಂದಮಿಂತಾಱು ತೆಱಂ ॥೨.೩೧॥"**[೨೭]

ಪ್ರಖ್ಯಾತವಾದ ಶಬ್ದಾಲಂಕಾರಗಳಲ್ಲಿ ಪ್ರಾಸವು ಕನ್ನಡಕ್ಕೆ ಅತಿಶಯವಾದುದು. ಅಂತೆಯೇ 'ವಿನುತಪ್ರಾಸ', 'ಶಾಂತಪ್ರಾಸ', ವರ್ಗಪ್ರಾಸ', 'ಸಮೀಪಪ್ರಾಸ', 'ಅನುಪ್ರಾಸ', ಅಂತ್ಯಪ್ರಾಸ'ಗಳೆಂದು ಭೇದಗಳನ್ನು ತಿಳಿಸಿದ್ದಾನೆ ಮಾರ್ಗಕಾರ.

ವಿನುತಪ್ರಾಸ: ಪಾದದ ಎರಡನೆಯ ಅಕ್ಷರದ ಸ್ವರೂಪವನ್ನು ತಿಳಿದು, ಮುಂದಿನ ಎಲ್ಲ ಸಾಲುಗಳಲ್ಲಿ ಅದನ್ನೇ ಬಳಸುವುದು. ಇಲ್ಲಿ ಸಮಾನಾಕ್ಷರದ ಎಲ್ಲ ಮಾತ್ರೆಗಳೂ ಒಂದೇ ವಿಧವಾಗಿ ಸೇರಿಕೊಂಡು ಉತ್ತಮ ಕಾವ್ಯಕ್ಕೆ ಶೋಭಾಯಮಾನವಾಗುವುದು.

ಶಾಂತಪ್ರಾಸ: ಒಂದೇ ಸಮಾನವಾದ ಸ್ವರದಿಂದ ಕೂಡಿದ ಸಂಯುಕ್ತಾಕ್ಷರಗಳು ಬರುವ ಕ್ರಮದಲ್ಲಿ ವ್ಯತ್ಯಾಸಗಳನ್ನು ಸ್ವೀಕರಿಸುವುದೇ ಶಾಂತಪ್ರಾಸ. ಪ್ರಾಸಸ್ಥಾನದಲ್ಲಿ ಬರುವ ಅಕ್ಷರಗಳು ಭಿನ್ನ ಸ್ವರಗಳನ್ನು ಹೊಂದಿರುವಂತೆ ಭಿನ್ನ ವ್ಯಂಜನಗಳಿಂದಲೂ ಸಂಯುಕ್ತವಾಗಿರುತ್ತವೆ.

ವರ್ಗಪ್ರಾಸ: ಒಂದು ಪಾದದ ಎರಡನೆಯ ಅಕ್ಷರವು ಒಂದು ವ್ಯಂಜನವಾಗಿದ್ದು, ಮುಂದಿನ ಸಾಲುಗಳಲ್ಲಿ ಅದೇ ವರ್ಗದ ವರ್ಣವು ಬರುವುದು.

ಸಮೀಪಪ್ರಾಸ: ಉದ್ದೇಶಪೂರ್ವಕವಾಗಿ 'ಶ', 'ಷ', 'ಸ' ಕಾರಗಳನ್ನು ಅನುಕ್ರಮವಾಗಿ ಬಳಸುವುದು.

ಅನು(ಗತ)ಪ್ರಾಸ: ಸಮಾನಾಕ್ಷರಗಳು ಜೋಡಿಯಾಗಿ ಬರುವುದು. ಉದಾ: ನನ, ನನಿ, ನೆನೆ.

ಅಂತ್ಯಪ್ರಾಸ: ಒಂದು ಪಾದಾಂತ್ಯದಲ್ಲಿ ಇಟ್ಟ ಅಕ್ಷರವನ್ನೇ ಮುಂದಿನ ಎಲ್ಲ ಪಾದಾಂತ್ಯದಲ್ಲಿ ಹೇಳುವುದು ಅಂತ್ಯಪ್ರಾಸ.

---

೨೬. ಡಾ. ಕೆ. ಕೃಷ್ಣಮೂರ್ತಿ (ಸಂ) : **ನೃಪತುಂಗದೇವಾನುಮತಂ ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ** ; ಪುಟ. ೧೦೨

೨೭. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ.೧೩೮

ಪ್ರಾಸ ವಿಚಾರವಾದ ಮೇಲೆ ಕವಿರಾಜಮಾರ್ಗಕಾರನು 'ಮಾರ್ಗವಿಚಾರ'ವನ್ನು ಪ್ರಸ್ತಾಪಿಸುತ್ತಾನೆ.

ಗೀತಿಕೆ ॥

"ಅಱಿದು ಪೀನಂ ಮಾರ್ಗಗತಿಯಂ
ತಱಿಸಲಲಾದಾರ್ಗಂ ಬಹು ವಿಕಲ್ಪದೊಳ್
ಕುಱಿತು ಪೂರ್ವಶಾಸ್ತ್ರಪದವಿಧಿಯಂ
ತೆಱೆತ್ತಿದಿರೆ ಪೇೞ್ವೆನಿನಿಸಂ ಕನ್ನಡದೊಳ್ ॥೨.೪೬॥"[೨೮]

ಅನೇಕ ಪ್ರಕಾರಗಳನ್ನೊಳಗೊಳ್ಳುವ ಕಾವ್ಯಮಾರ್ಗದ ಸೂಕ್ಷ್ಮಗತಿಯನ್ನೆಲ್ಲ ಪೂರ್ಣವಾಗಿ ತಿಳಿದು ನಿಶ್ಚಯಿಸಿ ಹೇಳುವುದು ಯಾರಿಗೂ ಆಗದು. ಹೀಗಿರುವಲ್ಲಿ ಪೂರ್ವದ ಲಕ್ಷಣಶಾಸ್ತ್ರದ ಸರಣಿಯಿಂದ ವಿಶದವಾಗಿ ಅಲ್ಪದರಲ್ಲಿಯೇ ತಿಳಿಸುತ್ತೇನೆ ಎನ್ನುತ್ತಾನೆ. ಕೈಕಾಲು, ಮೈ, ತಲೆ, ಮುಖ ಮೊದಲಾದ ದೇಹದ ಅವಯವಗಳು ತಮ್ಮ ತಮ್ಮ ಸ್ಥಾನದಲ್ಲಿ ಒಂದೇ ರೀತಿಯಲ್ಲಿ ಎಲ್ಲ ಮನುಷ್ಯರಲ್ಲಿ ಸೇರಿಕೊಂಡಿದ್ದರೂ ಒಬ್ಬರನ್ನೊಬ್ಬರು ಹೇಗೆ ಹೋಲುವುದಿಲ್ಲವೋ ಹಾಗೆಯೇ ಒಬ್ಬೊಬ್ಬ ಕವಿಯ ಅಲಂಕಾರ, ಪ್ರಯೋಗ ಮಾರ್ಗಗಳೂ ಹಾಗೆಯೇ ಒಂದನ್ನೊಂದು ಹೋಲಲಾರವು. ಅಂತೆಯೇ ಪೂರ್ವಕವಿಗಳಲ್ಲಿ ದಕ್ಷಿಣ ಮಾರ್ಗ ಮತ್ತು ಉತ್ತರ ಮಾರ್ಗಗಳನ್ನು ಗುರುತಿಸುತ್ತಾನೆ. ಕಾವ್ಯದ ಉಕ್ತಿಭೇದಗಳನ್ನು ಅನುಸರಿಸಿ, 'ವಕ್ರತೆ' ಹಾಗೂ 'ಸ್ವಭಾವ'ಗಳನ್ನು ಗುರುತಿಸಿ, ಅವುಗಳಿಗೆ 'ವಕ್ರೋಕ್ತಿ' ಮತ್ತು 'ಸ್ವಭಾವೋಕ್ತಿ' ಎಂದು ಕರೆಯಲಾಗುತ್ತದೆ. ವಕ್ರೋಕ್ತಿಯು ಉತ್ತರಮಾರ್ಗವನ್ನು ಎತ್ತಿಹಿಡಿದರೆ; ಸ್ವಭಾವೋಕ್ತಿಯು ದಕ್ಷಿಣಮಾರ್ಗವನ್ನು ಎತ್ತಿಹಿಡಿಯುತ್ತದೆ.[೨೯] ದಕ್ಷಿಣಮಾರ್ಗವು ಹತ್ತು ಗುಣಗಳನ್ನೊಳಗೊಂಡಿದೆ.

"ಸಮ ಮಧುರ ನಿಬಿಡ ಕಾಂತ ಸು
ಕುಮಾರ ಸುಸಮಾಹಿತ ಪ್ರಸನ್ನೋದಾರ
ಪ್ರಮಿತ ಗ್ರಾಮ್ಯೋಜಸ್ವಿ
ಕ್ರಮದಿಂ ದಶಭೇದಮಲ್ಲಿ ದಕ್ಷಿಣ ಮಾರ್ಗಂ ॥೨.೫೪॥"[೩೦]

ಸಮಬಂಧ: ಕೇಳುವಾಗ ಕಿವಿಗೆ ಎಡರು ತೊಡರಾಗದಂತೆ ವಿರಚಿತವಾಗಿರುವುದು. ಇದನ್ನು ಮೃದುಬಂಧ, ಸ್ಫುಟಬಂಧವೆಂತಲೂ ಕರೆಯಲಾಗುತ್ತದೆ. ಮೃದುವರ್ಣಗಳ ಬಳಕೆಯಿಲ್ಲದೇ ಕಿವಿಗೆ ಹಿತವಿಲ್ಲದಂತೆ ಭಾಸವಾಗುವುದು 'ವಿಷಮಗುಣ'ವೆನಿಸಿಕೊಳ್ಳುತ್ತದೆ.

ಮಾಧುರ್ಯಗುಣ: ಸಿಹಿಯಾದ ಪಾನಕವು ಹೇಗೆ ನಾಲಿಗೆಗೆ ರುಚಿಸುವುದೋ ಹಾಗೆ ಕಿವಿಗೆ ಹಿತವೆನಿಸುವ ಪದರಚನೆಯೇ ಮಾಧುರ್ಯ. ಉತ್ತರಮಾರ್ಗದ ಮಧುರಗುಣವೇ ದಕ್ಷಿಣಮಾರ್ಗದಲ್ಲಿ ಪ್ರಸನ್ನವಾಗಿದೆ.

---

೨೮. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ.೧೪೦

೨೯. ಡಾ. ಕೆ. ಕೃಷ್ಣಮೂರ್ತಿ (ಸಂ) : **ನೃಪತುಂಗದೇವಾನುಮತಂ ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ** ; ಪುಟ. ೧೧೪
"ವರ್ಣಿತ ಪದಾರ್ಥಗಳ ಜಾತಿ, ಗುಣ, ದ್ರವ್ಯ, ಕ್ರಿಯೆಗಳ ಸಹಜ ಸ್ವಭಾವದ ಆಖ್ಯಾನವೇ ಸ್ವಭಾವೋಕ್ತಿ; ಕವಿಪ್ರತಿಭೆಯ ಕಲ್ಪನಾಚಮತ್ಕಾರದಿಂದ ದೊಡ್ಡದು ಮಾಡಿ ಬಣ್ಣಿಸುವುದೇ ಅತಿಶಯೋಕ್ತಿ ಅಥವಾ ವಕ್ರೋಕ್ತಿ ಎಂದು ದಂಡಿ, ಭಾಮಹರ ಅಭಿಪ್ರಾಯವಾಗಿದೆ. ವಕ್ರೋಕ್ತಿಯೇ ಅರ್ಥಾಲಂಕಾರಗಳೆಲ್ಲಕ್ಕೂ ಮೂಲಭೂತ ತತ್ತ್ವವೆಂಬುದು ಭಾಮಹನ ಮತ; ದಂಡಿಗೂ ಇದು ಒಪ್ಪಿಗೆಯೇ. ಆದರೆ ದಂಡಿ ಸ್ಪಷ್ಟವಾಗಿ ಸ್ವಭಾವೋಕ್ತಿಯನ್ನೂ ಒಂದು ಅಲಂಕಾರದವೆಂದು ಪರಿಗಣಿಸುತ್ತಾನೆ. ಕುಂತಕನೂ ಸರ್ವಥಾ ಸ್ವಭಾವವು 'ಅಲಂಕಾರ್ಯ'ವೇ ಹೊರತು 'ಅಲಂಕಾರವೆಂದೆನಿಸದು ಎಂದು ವಾದಿಸುತ್ತಾನೆ."

೩೦. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ.೧೪೨

ನಿಬಿಡಗುಣ: ವರ್ಣಗಳು ಸಂಧಿಯಾಗಿ ಒಂದನ್ನೊಂದು ಅಗಲದೇ ಸೇರಿಕೊಂಡಿದ್ದರೆ ನಿಬಿಡವೆನಿಸಿಕೊಳ್ಳುತ್ತದೆ. ಇದಕ್ಕೆ ವಿರುದ್ಧವಾಗಿ ಅಲ್ಪಪ್ರಾಣಗಳ ಬಳಕೆಯಾಗಿದ್ದರೆ 'ಶಿಥಿಲಬಂಧ' ಎನಿಸಿಕೊಳ್ಳುತ್ತದೆ. 'ನಿಬಿಡ' ಮತ್ತು 'ಶಿಥಿಲ'ಗಳೆರಡೂ ಉತ್ತರಮಾರ್ಗದಲ್ಲಿಯೂ ಗೋಚರಿಸುತ್ತವೆ.

ಕಾಂತಗುಣ: ಚಿರಪ್ರಸಿದ್ಧವಾದ ವಿಷಯವನ್ನು ರಮಣೀಯವಾಗಿ ಸರ್ವಜನಾಕರ್ಷಕವಾಗಿ ಹೇಳುವುದೇ 'ಕಾಂತ'ಗುಣ. ಉತ್ತರಮಾರ್ಗದಲ್ಲಿಯೂ ಕಾಂತಗುಣವು ತನ್ನದೇಯಾದ ಸ್ಥಾನವನ್ನು ಹೊಂದಿದೆ.

ಸುಕುಮಾರ: ಸುಕುಮಾರತರ ಅಥವಾ ಅತ್ಯಂತ ಕೋಮಲವಾದ ಪದಪುಂಜಗಳಿಂದ ಕೂಡಿದ ಪದರಚನೆಯೇ ಸುಕುಮಾರತ್ವ. ಇದು ಉತ್ತರಮಾರ್ಗದಲ್ಲಿ 'ವಿಪರ್ಯಯವಾದ ನಾನಾಕ್ಷರಗಳ ಸಮುಚ್ಚಯ'ವೆನಿಸಿಕೊಂಡಿದೆ.

ಸಮಾಹಿತಗುಣ: ಒಂದರ ಅರ್ಥವನ್ನು ಇನ್ನೊಂದರ ಮೇಲೆ ರಮಣೀಯವಾಗಿ ಆರೋಪಿಸಿ ಹೇಳುವುದೇ ಸಮಾಹಿತ.

ಪ್ರಸನ್ನಗುಣ: ಸಾಮಾನ್ಯರಿಗೆ ಸುಲಭ ಗ್ರಾಹ್ಯವಾಗಿರುವುದೇ 'ಪ್ರಸನ್ನ'. ದಕ್ಷಿಣಮಾರ್ಗದಲ್ಲಿ ಸರಳವಾಗಿಯೂ, ಉತ್ತರಮಾರ್ಗದಲ್ಲಿ ಪ್ರೌಢವಾಗಿಯೂ ಬಳಕೆಯಾಗುತ್ತದೆ.

ಉದಾರಗುಣ: ವಸ್ತುವಿನ ಸ್ವಭಾವಸಿದ್ಧ ಸ್ಥಿತಿಯನ್ನು ಅತಿಶಯವಾಗಿ, ಉತ್ಪ್ರೇಕ್ಷೆಯ ರೂಪದಲ್ಲಿ ಹೇಳುವುದೇ ಉದಾರಗುಣ.

ಗ್ರಾಮ್ಯ: ದನಗಾಹಿಗಳು, ಹೆಂಗಸರು, ಚಂಚಲರು, ಹರಟೆಮಲ್ಲರು, ಜೂಜುಗಾರರು ಆಡುವ ಮಾತುಗಳೇ ಗ್ರಾಮ್ಯ. ದಕ್ಷಿಣೋತ್ತರ ಎರಡೂ ಮಾರ್ಗಗಳಲ್ಲಿಯೂ ಇದರ ಬಳಕೆಯನ್ನು ಬಿಡಬೇಕೆಂದು ಹೇಳುತ್ತಾನೆ.

ಓಜೋಗುಣ: ಕಾವ್ಯದಲ್ಲಿ ಪ್ರಯೋಗಿಸುವ ಸಮಾಸಪದಗಳು ಸರಿಯಾಗಿ ಹೊಂದುವಂತೆ ವಿಚಾರಮಾಡಿ ಹೇಳುವುದೇ 'ಓಜೋಗುಣ'. ಇದು ಗದ್ಯಕ್ಕೆ ಶ್ರೇಷ್ಠವಾದ ಅಲಂಕಾರಗಳನ್ನು ಒದಗಿಸುತ್ತದೆ.

ಹೀಗೆ ಮಾರ್ಗದ ಹತ್ತು ಗುಣಗಳನ್ನು ಹೇಳುವ ಶ್ರೀವಿಜಯನು ಮುಂದುವರೆದು, ಬಿಡಿಬಿಡಿಯಾದ ಪದಗಳಲ್ಲಿ ಮೊದಲು 'ಕಾರಕ'ವನ್ನೂ ಹಾಗೂ 'ಕ್ರಿಯೆ'ಯನ್ನೂ ಅಳವಡಿಸಿಕೊಂಡು ಬಳಿಕ ದೀರ್ಘವಾದ ಸಮಾಸಪದಗಳನ್ನು ಉಚ್ಚಾರಣೆಗೆ ಬರುವಂತೆ ಬಳಸಬೇಕೆಂದು ಹೇಳುತ್ತಾನೆ. ಒಂದುವೇಳೆ ಮೊದಲೇ ಸಮಾಸಪದವನ್ನು ಪ್ರಯೋಗಿಸಿ, ನಂತರ ಬಿಡಿ ಪದಗಳನ್ನಿಟ್ಟರೆ ಅದು ವಿರಸವೆನಿಸುತ್ತದೆ ಎಂದು ಹೇಳಿ ಸಮಾಸ ವಿಚಾರವನ್ನು ತಿಳಿಸುತ್ತಾನೆ.

"ಬೆರಸಿರೆ ಸಮಾಸದೊಳ್ ಬಂ
ಧುರಮಾಗದು ಕಾವ್ಯಬಂಧಮೆಂದುಂ ಕೃತಿಯೊಳ್

ದೊರೆಕೊಳ್ವ ಪದವಿಶೇಷ್ಯಾಂ
ತರಮುದಱಿಂ ವ್ಯಸ್ತಮಾಗಿ ಪೇೞ್ಗೆದನೆಂದುಂ ॥೨.೯೨॥”[೩೧]

ಒಂದು ಕೃತಿಯಲ್ಲಿ ಪ್ರಯೋಗವಾಗುವ ಬೇರೆ ಬೇರೆ ವಿಶೇಷ್ಯ ಪದಗಳು ಸಮಾಸ ರೂಪದಲ್ಲಿ ಬೆರೆತು ಬಂದಿದ್ದರೆ ಕಾವ್ಯಬಂಧವು ಅಂದವಾಗದು. ಆದ್ದರಿಂದ ವಿಶೇಷ್ಯ ಪದವನ್ನು ವ್ಯಸ್ತವಾಗಿ, ಅಂದರೆ ಸಮಾಸ ಮಾಡದೇ ಬಿಡಿಯಾಗಿಯೇ ಹೇಳಬೇಕು. “ವಿಶೇಷ್ಯವು ನೇರವಾಗಿ ಕ್ರಿಯೆಯನ್ನೇ ನೋಡುವುದರಿಂದ, ಕ್ರಿಯೆಯೊಡನೆ ನೇರವಾಗಿ ಅನ್ವಯಿಸುವುದರಿಂದ ಅದು ‘ಸಾಪೇಕ್ಷ ಸಮಾಸ’ ಎನಿಸುವುದು. ಸಾಪೇಕ್ಷವೆಂದರೆ ಅರ್ಥಪೂರ್ಣವಾಗಿ ಬೇರೊಂದು ಪದದ ನೆರವನ್ನು ಪಡೆಯುವಂತಹದ್ದು.”[೩೨]

ದಕ್ಷಿಣೋತ್ತರ ಮಾರ್ಗಗಳೆರಡನ್ನೂ ಗುಣಾತಿಶಯ ಸಮೇತರಾದ ಕವೀಶ್ವರರು ಪರಾಮರ್ಶಿಸಿ, ಸೊಗಯಿಸುವ ಪದರಚನೆಗೈಯ್ಯುವಾಗ ವಿಶಿಷ್ಟರಸ ಪದಗಳನ್ನು ಬಳಸಬೇಕು. ಅದನ್ನೇ ‘ರಸೋಚಿತ ಗುಣವಿಶೇಷ’ ಎಂದು ಕರೆಯುತ್ತಾನೆ ಕವಿರಾಜಮಾರ್ಗಕಾರ. ಸ್ಫುಟವಾದ ಪದರಚನೆಯಿಂದ **ವೀರರಸ;** ಮೃದುವಾದ ಪದಬಂಧದಿಂದ **ಕರುಣರಸ;** ನಿಬಿಡ ಉಕ್ತಿಗಳಿಂದ **ಅದ್ಭುತರಸ;** ಅತ್ಯಂತ ಸುಕುಮಾರವೆನಿಸುವ ಉಕ್ತಿಗಳಿಂದ **ಶೃಂಗಾರರಸ;** ಪ್ರಸನ್ನ ಬಂಧುರೋಕ್ತಿಗಳಿಂದ **ಶಾಂತರಸ;** ಹರ್ಷಾತಿರೇಕ ಮಧುರ ವಚನಗಳಿಂದ **ಹಾಸ್ಯರಸ;** ಶಿಥಿಲಬಂಧದಿಂದ **ಭೀಭತ್ಸರಸ;** ವಿಷಮಬಂಧದಿಂದ **ಭಯಾನಕರಸ;** ಊರ್ಜಿತ ಅಥವಾ ಓಜೋಮಯ ಉಕ್ತಿಗಳಿಂದ **ರೌದ್ರರಸ**ಗಳನ್ನು ಬಿಂಬಿಸಬೇಕೆಂದು ಹೇಳುತ್ತಾನೆ.

ಗೋಮೂತ್ರಿಕ, ಯಮಕ, ಗೋಪಿತಕ್ರಿಯ, ಅರ್ಧಭ್ರಮ, ಚಕ್ರಬಂಧ, ಮುರಜಬಂಧಗಳು ವಿಶಿಷ್ಟವಾದ ಹೆಸರುಳ್ಳ ‘ದುಷ್ಕರ’ ಕಾವ್ಯಬಂಧಗಳಾಗಿವೆ ಎಂದು ಹೇಳಿ, ಇವುಗಳಿಗೆ ಲಕ್ಷಣಗಳನ್ನು ವಿವರಿಸುತ್ತಾನೆ. ಪದವು ಪುನರುಕ್ತವಾಗುವುದು **ಪ್ರತ್ಯಾಗತ;** ಪಾದವನ್ನು ವಿಲೋಮವಾಗಿ ಓದುವುದು **ಸಮಸ್ತಗತ ಪ್ರತ್ಯಾಗತ;** ಪದ್ಯದ ಪೂರ್ವಾರ್ಧವನ್ನು ವಿಲೋಮವಾಗಿ ಓದುವುದು **ಅರ್ಧಗತ ಪ್ರತ್ಯಾಗತ;** ನಾಲ್ಕು ರೀತಿಯ ಗೂಢಾರ್ಥವನ್ನು ಒಳಗೊಂಡಿದ್ದು **ಗೂಢಚತುರ್ಥ;** ಪದ್ಯದಲ್ಲಿ ಒಂದೇ ಅಕ್ಷರವು ಪುನರಾವರ್ತಿತವಾಗಿದ್ದರೆ **ಏಕಾಕ್ಷರ (ವೃತ್ಯಾನುಪ್ರಾಸ);** ಪದ್ಯದಲ್ಲಿ ಎರಡು ಅಕ್ಷರಗಳು ಪುನರಾವರ್ತಿತವಾಗಿದ್ದರೆ **ದ್ವ್ಯಕ್ಷರ (ಛೇಕಾನುಪ್ರಾಸ);** ಪದ್ಯದಲ್ಲಿ ತಾಲವ್ಯಾಕ್ಷರಗಳನ್ನು ಹೊರತುಪಡಿಸಿದ ಧ್ವನಿಗಳನ್ನೊಳಗೊಂಡಿರುವುದೇ **ಅತಾಲವ್ಯ;** ಪದ್ಯದಲ್ಲಿ ಓಷ್ಠ್ಯಧ್ವನಿಗಳು ಇರದೇ ಇರುವುದೇ **ನಿರೋಷ್ಠ್ಯ;** ಎರಡು ಅಕ್ಷರಗಳು ಎಲ್ಲ ಪಾದಗಳಲ್ಲಿಯೂ ಆವೃತ್ತಿಯಾದರೆ ಅದು **ಸರ್ವತೋಭದ್ರ (ಛೇಕಾನುಪ್ರಾಸದ ಉಪ ಪ್ರಭೇದ);** ಒಂದು ಪದ್ಯದಲ್ಲಿರುವ ವಿಷಯವನ್ನು

---

೩೧. ಡಾ. ಎಸ್. ಎಸ್. ಅಂಗಡಿ (ಸಂ) : **ಸರಳ ಕವಿರಾಜಮಾರ್ಗ** : ಪುಟ. ೧೩೯
೩೨. **ಅದೇ** : ಪುಟ. ೧೪೦

ಪ್ರಶ್ನಿಸಿದಾಗ ಅಲ್ಲಿ ನಿಷೇಧಾರ್ಥಕ ಉತ್ತರ ಬಂದರೆ ಅದು **ನಿರುತ್ತರ;** ಹಲವಾರು ವಿಷಯಗಳನ್ನು ಕೇಳಿದಾಗ ಚಿತ್ತಚಂಚಲವಾಗುವುದೇ **ಗೋಮೂತ್ರಿಕ;** ಆದಿ, ಮಧ್ಯ, ಅಂತ್ಯಪ್ರಾಸಗಳು ನಿಯತವಾಗಿ ಬರುವುದೇ **ಯಮಕಭೇದ;** ಶಬ್ದವೈಚಿತ್ರ್ಯವನ್ನು ಒಳಗೊಂಡಿರುವುದೇ **ಮುರಜಬಂಧ** (ಚಿತ್ರಕವಿತ್ವದ ಒಂದು ಪ್ರಭೇದವಾಗಿದೆ.); ಗುಪ್ತಾರ್ಥವನ್ನು ಒಳಗೊಂಡಿರುವುದೇ **ಕ್ರಿಯಾಗೋಪಕ**. ಹೀಗೆ ಕವಿರಾಜಮಾರ್ಗಕಾರನು ಬಂಧಗಳ ಪ್ರಭೇದಗಳನ್ನು ಗುರುತಿಸಿ ಅವುಗಳ ಲಕ್ಷಣಗಳನ್ನು ತಿಳಿಸುತ್ತಾನೆ. ಅಲ್ಲದೇ 'ನುಸುಳು', 'ಅಸ್ಪಷ್ಟಾಕ್ಷರ', 'ವರ್ಣವ್ಯತ್ಯಯ', ಬಿಂದುಚ್ಯುತಕ', 'ಒರ್ನುಡಿ', 'ವರ್ಣಚ್ಯುತಕ', 'ಸಮಂತಿ' ಎಂಬ ವಿಶಿಷ್ಟ ಪದಬಂಧಗಳನ್ನೂ ಹೆಸರಿಸುತ್ತಾನೆ.

"ಹೀಗೆ ವಿದ್ವಾಂಸರ ಗುಣಗಣನೆಗೂ ಮೀರಿದ ಶಬ್ದ ತತ್ತ್ವ ಸಾಗರದ ಒಳಗೆ ನಾನಾ ರೀತಿಯ ಅಲಂಕಾರಗಳೆಂಬ ತರಂಗಮಾಲೆಗಳಿವೆ. ವಾಗೀಶ್ವರ (ನೃಪತುಂಗ)ನ ಉಕ್ತಿಮಾಲೆಗಳಿಂದ ಆ ಆಳವಾದ ಕಡಲಿನ ಅಂತರಾಳ ಕೂಡ ಬಂಧುರವಾಗಿ ಕಡೆಯಲ್ಪಟ್ಟದ್ದೆನಿಸಿ ಪ್ರತೀಕವಾಗಿ ಶಾಶ್ವತವಾಗಿ ನಿಲ್ಲುವಂತಾಗಿದೆ. ಈ ಅಧ್ಯಾಯದಲ್ಲಿ ಮಾರ್ಗಕಾರನು ತನ್ನ ಗಂಭೀರ ಶೈಲಿಯ ಅಗ್ಗಳಿಕೆಯನ್ನು ಹೆಮ್ಮೆಯಿಂದ ಬಣ್ಣಿಸಿರುವನು. ಇದು ಶಬ್ದಾಲಂಕಾರ ಪ್ರಕರಣವಾದ್ದರಿಂದ ಕವಿ ತನ್ನ ಶಾಬ್ದಿಕ ಸಾಮರ್ಥ್ಯವನ್ನು ಕುರಿತು ಹೇಳುವುದು ಉಚಿತವಾಗಿದೆ. ಶಬ್ದ ತತ್ತ್ವಕ್ಕೆ ಸಂಬಂಧಪಟ್ಟ ಶಾಸ್ತ್ರ ಸಂಪ್ರದಾಯಗಳನ್ನು ಚೆನ್ನಾಗಿ ಆಲೋಚಿಸಿ ವಿಚಾರಮಾಡಿ ಸಂಸ್ಕೃತ, ಪ್ರಾಕೃತ ಮುಂತಾದ ಭಾಷಾವಿಷಯಕವಾದ ಉಕ್ತಿಗಳನ್ನು ಲಕ್ಷಿಸಿ, ಪ್ರಾಚೀನ ಕವಿಶ್ರೇಷ್ಠರ ಪ್ರಯೋಗಗಳಿಂದ ಸಿದ್ಧವಾದ ಗುಣೋತ್ಕರ್ಷವನ್ನು ಆಲೋಚಿಸಿ ಕೃತಿಯನ್ನು ರಚಿಸಿದ್ದಾನೆ."[೩೩]

೩) ಅರ್ಥಾಲಂಕಾರ ಪ್ರಕರಣ:

ಮೂರನೆಯ ಪರಿಚ್ಛೇದವು ಅರ್ಥಾಲಂಕಾರಗಳಿಗೆ ಮೀಸಲಾಗಿದೆ. ಅರ್ಥಾಲಂಕಾರಗಳು ಕಾವ್ಯಕ್ಕೆ ವೈಭವವನ್ನು ಒದಗಿಸುತ್ತವೆ ಎಂದು ಹೇಳುತ್ತಾನೆ ಶ್ರೀವಿಜಯ. ಪರಿಚ್ಛೇದದ ಆರಂಭದ ಪದ್ಯಗಳಲ್ಲಿ ಅಲಂಕಾರಗಳ ಪಟ್ಟಿ ಕೊಡುತ್ತಾನೆ:

"ವರಜಾತಿ ರೂಪಕಾರ್ಥಾಂ
ತರವಿನ್ಯಾಸಾತಿರೇಕ ಯಾಥಾಸಂಖ್ಯಾ
ಸ್ಥಿರದೀಪಕೋಪಮಾ ಬಂ
ಧುರಾತಿಶಯ ಸದೃಶಯೋಗಿತಾಕ್ಷೇಪಂಗಳ್ ॥೩.೦೨॥
ಶ್ಲೇಷೋತ್ಪ್ರೇಕ್ಷಾ ಸೂಕ್ಷ್ಮ ವಿ
ಶೇಷ ಸಮಾಹಿತ ಸಮಾಸ ಪರ್ಯಾಯೋಕ್ತಾ
ನ್ವೇಷ ವಿರೋಧಾಪ್ರಸ್ತುತ
ಶೇಷನಿದರ್ಶನ ಸಹೋಕ್ತಿ ಸಂಕೀರ್ಣಂಗಳ್ ॥೩.೦೩॥

೩೩. ಡಾ. ಎಸ್. ಎಸ್. ಅಂಗಡಿ (ಸಂ) : **ಸರಳ ಕವಿರಾಜಮಾರ್ಗ** : ಪುಟ. ೧೭೨, ೧೭೩

ನುತಪರಿವೃತ್ತಿ ವ್ಯಾಜ
ಸ್ತುತಿ ಹೇತು ವಿಭಾಜನಾ ಲವೋದಾತ್ತಾಪ
ಹ್ನುತಿ ರಸವದೂರ್ಜಿತ ವ್ಯಾ
ವೃತಿ ಪ್ರಿಯತರಾಶಿಗಳ್ ಕ್ರಮಾದ್ಯಕ್ತಂಗಳ್ ॥೩.೦೪॥"[೩೪]

ಹೀಗೆ ಪಟ್ಟಿಯನ್ನು ನೀಡಿ ಅವುಗಳಿಗೆ ಲಕ್ಷಣಗಳನ್ನು ತಿಳಿಸುತ್ತಾನೆ.

೧. **ಜಾತಿ:** ಎಲ್ಲ ವಸ್ತುಗಳ ಸ್ವಭಾವನ್ನು ಹೇಳುವುದೇ ಜಾತಿ. ಇದನ್ನು ಸ್ವಭಾವೋಕ್ತಿ ಎಂತಲೂ ಕರೆಯಬಹುದು. ಇದರಲ್ಲಿ ಜಾತಿಸ್ವಭಾವಾಖ್ಯಾನ, ಕ್ರಿಯಾಸ್ವಭಾವಾಖ್ಯಾನ, ಗುಣಸ್ವಭಾವಾಖ್ಯಾನ, ದ್ರವ್ಯಸ್ವಭಾವಾಖ್ಯಾನಗಳೆಂದು ಭೇದಗಳಿವೆ.

೨. **ರೂಪಕ:** ಬೇರೆ ಪದಾರ್ಥಗಳ ರೂಪ, ಗುಣಗಳನ್ನು ಒಂದು ವಸ್ತುವಿನೊಡನೆ ಅಭೇದಾರೋಪ ಮಾಡಿ ರೂಪಿಸುವುದೇ ರೂಪಕಾಲಂಕಾರ. ಇದರಲ್ಲಿ ಸಮಸ್ತರೂಪಕ, ವ್ಯಸ್ತರೂಪಕ, ಸಾವಯವರೂಪಕ, ಅವಯರೂಪಕ, ವಿಷಮರೂಪಕ, ವಿಶೇಷಣರೂಪಕ, ವಿರುದ್ಧರೂಪಕ, ಹೇತುರೂಪಕ, ಶ್ಲಿಷ್ಟರೂಪಕ, ವಿಭಿನ್ನರೂಪಕ, ರೂಪಕ–ರೂಪಕ, ರೂಪಕಾಹ್ನುತಿ, ಯುಕ್ತರೂಪಕ, ವ್ಯಾಜರೂಪಕಗಳೆಂದು ಹದಿನಾಲ್ಕು ಭೇದಗಳಿವೆ.

೩. **ಅರ್ಥಾಂತರನ್ಯಾಸ:** ವರ್ಣಿಸಿದ ಒಂದು ಅರ್ಥವನ್ನು ಸಮರ್ಥಿಸಲು ಮತ್ತೊಂದು ಅರ್ಥವನ್ನು ಪ್ರತಿಪಾದಿಸುವುದೇ ಅರ್ಥಾಂತರನ್ಯಾಸ. ಇದರಲ್ಲಿ ಸಕಲವ್ಯಾಪಿ, ವಿಶೇಷಪ್ರಕಾಶಕ, ಅಯುಕ್ತಕಾರಿ, ಯುಕ್ತಾಯುಕ್ತ, ಶ್ಲೇಷಸಹಿತ, ವಿರುದ್ಧಾತ್ಮಕ, ವಿಪರ್ಯಾಯ ಹಾಗೂ ಯುಕ್ತಾರ್ಥಗಳೆಂದು ಎಂಟು ಭೇದಗಳಿವೆ.

೪. **ವ್ಯತಿರೇಕ:** ಎರಡು ವಸ್ತುಗಳ ಸಾದೃಶ್ಯ ಅರ್ಥಬಲದಿಂದ ಪ್ರತೀತವಾಗುವ ಅಥವಾ ಶಬ್ದತಃ ಉಕ್ತವಾಗುವ ಗುಣಾಧಿಕ್ಯವಾದ ಭೇದಗಳನ್ನು ಇನ್ನೊಂದರಲ್ಲಿ ತೋರಿಸುವುದೇ ವ್ಯತಿರೇಕ. ಇದರಲ್ಲಿ ಏಕವ್ಯತಿರೇಕ, ಉಭಯವ್ಯತಿರೇಕ, ಶ್ಲೇಷವ್ಯತಿರೇಕ, ಸಾಕ್ಷೇಪವ್ಯತಿರೇಕ, ಸಹೇತುಕ ವ್ಯತಿರೇಕ, ಸದೃಶ–ವ್ಯತಿರೇಕ, ಪ್ರತೀಯಮಾನ ವ್ಯತಿರೇಕ, ಪ್ರತೀಯಮಾನ–ಸಾದೃಶ ವ್ಯತಿರೇಕ, ಸಜಾತಿ ವ್ಯತಿರೇಕಗಳೆಂದು ಒಂಭತ್ತು ಭೇದಗಳಿವೆ.

೫. **ಯಾಥಾಸಂಖ್ಯಾ:** ಲೋಕಾರೂಢಿಯಾದ ಸಂಖ್ಯೆಗಳನ್ನೇ ಹೋಲುವ ಇನ್ನೊಂದು ಸಂಖ್ಯೆಯನ್ನು ಬಳಸುವುದು. ಇದರಲ್ಲಿ ಅನ್ವಿತ ಹಾಗೂ ಅನನ್ವಿತ ಎಂದು ಎರಡು ಭೇದಗಳಿವೆ.

೬. **ದೀಪಕ:** ಒಂದೆಡೆಯಲ್ಲಿ ವಾಚಕವಾದ ಪದವು ಇನ್ನೊಂದೆಡೆಯಲ್ಲಿ ಪ್ರಯುಕ್ತವಾಗಿ, ಇಡೀ ವಾಕ್ಯಸಮುದಾಯಕ್ಕೆ ಉಪಯುಕ್ತವಾಗಿದ್ದರೆ ಅದನ್ನು ದೀಪಕ ಎನ್ನಲಾಗುತ್ತದೆ. ಇದರಲ್ಲಿ ಆದಿದೀಪಕ, ಅಧಿದೀಪಕ, ಗುಣಾನುಗತ–ಆದಿದೀಪಕ, ದ್ರವ್ಯಾನುಗತ–ಆದಿದೀಪಕ ಎಂದು ನಾಲ್ಕು ಭೇದಗಳಿವೆ.

---

೩೪. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ.೧೬೧

೭. **ಉಪಮಾ:** ಬೇರೆ ಬೇರೆಯಾದ ವಸ್ತುಪ್ರಕಾರಗಳನ್ನು ಇನ್ನೊಂದು ವಸ್ತುವಿನೊಂದಿಗೆ ಹೋಲಿಸುವುದೇ ಪ್ರಸಿದ್ಧವಾದ ಉಪಮಾಲಂಕಾರ. ಇದರಲ್ಲಿ ವಸ್ತೂಪಮೆ, ಧರ್ಮೋಪಮೆ, ವಿಪರ್ಯಯೋಪಮೆ, ಅನ್ಯೋನ್ಯೋಪಮೆ, ನಿಯಮೋಪಮೆ, ಅನಿಯಮೋಪಮೆ, ಅತಿಶಯೋಪಮೆ, ಉಪಮೋತ್ಪ್ರೇಕ್ಷೆ, ಅದ್ಭುತೋಪಮೆ, ಮೋಹೋಪಮೆ, ಸಂಶಯೋಪಮೆ, ಊರ್ಜಿತೋಪಮೆ, ಶ್ಲೇಷೋಪಮೆ, ನಿಂದೋಪಮೆ, ಪ್ರಶಂಸೋಪಮೆ, ವಿರೋಧೋಪಮೆ, ತತ್ತ್ವಾಖ್ಯಾನೋಪಮೆ, ಅಸಾಧಾರಣೋಪಮೆ, ಅಭೂತೋಪಮೆ, ಅಸಂಭವೋಪಮೆ, ಬಹೂಪಮೆ, ಮಾಲೋಪಮೆ, ವಾಕ್ಯೋಪಮೆ, ಸಂಧಾನೋಪಮೆ, ಪ್ರತಿವಸ್ತೂಪಮೆ, ಹೇತೂಪಮೆ ಎಂದು ಇಪ್ಪತ್ತಾರು ಭೇದಗಳನ್ನು ಗುರುತಿಸುತ್ತಾನೆ.

೮. **ಅತಿಶಯೋಕ್ತಿ:** ಲೋಕವ್ಯವಹಾರದ ಮೇರೆಯನ್ನು ಮೀರಿದ ವಿಷಯವನ್ನು ವರ್ಣನಾತ್ಮಕವಾಗಿ ಬಿಂಬಿಸುವುದು ಅತಿಶಯೋಕ್ತಿ.

೯. **ಸದೃಶಯೋಗಿತಾ:** ಸ್ತುತಿ, ನಿಂದೆಗಳ ಅಭಿವ್ಯಕ್ತಿಗಾಗಿ ಒಂದು ವಸ್ತುವನ್ನು ಗುಣಾತಿಶಯವಿರುವ ಇನ್ನೊಂದು ವಸ್ತುವಿನೊಂದಿಗೆ ಸಮೀಕರಿಸುವುದು.

೧೦. **ಆಕ್ಷೇಪ:** ಹೇಳಿದ ಒಂದು ಅರ್ಥವನ್ನು ಅಲ್ಲವೆಂದು ಪ್ರತಿಪಾದಿಸುವುದೇ ಆಕ್ಷೇಪ. ಇದರಲ್ಲಿ ವೃತ್ತಾಕ್ಷೇಪ, ಅನುಶಯಾಕ್ಷೇಪ, ಶ್ಲೇಷಾಕ್ಷೇಪ, ಉಪಮಾಕ್ಷೇಪ, ಸಂಶಯಾಕ್ಷೇಪ, ಹೇತ್ವಾಕ್ಷೇಪ ಎಂದು ಆರು ಭೇದಗಳಿವೆ.

೧೧. **ಶ್ಲೇಷ:** ಏಕರೂಪಾನ್ವಿತ ಪದದಿಂದ ಅನೇಕಾರ್ಥಗಳು ಉಂಟಾಗುವುದೇ ಶ್ಲೇಷೆ.

೧೨. **ಉತ್ಪ್ರೇಕ್ಷಾ:** ವಸ್ತುಸ್ಥಿತಿಯು ಭಿನ್ನವಾಗಿದ್ದರೂ ಅದನ್ನು ಮರೆಮಾಚಿ ಮತ್ತೊಂದು ಅರ್ಥವನ್ನು ಕಲ್ಪಿಸುವುದು ಉತ್ಪ್ರೇಕ್ಷಾಲಂಕಾರ.

೧೩. **ಸೂಕ್ಷ್ಮ:** ಅಂತರಂಗದಲ್ಲಿ ಗುಪ್ತವಾಗಿರುವ ಅಂಗಕ್ರಿಯೆಗಳು, ಮನೋಗತವನ್ನು ಪ್ರಕಟಿಸುವ ಸನ್ನೆಗಳನ್ನು, ಸಂಕೇತಗಳನ್ನು ಬಳಸುವುದೇ ಸೂಕ್ಷ್ಮ ಅಲಂಕಾರ.

೧೪. **ವಿಶೇಷ:** ಒಂದು ವಸ್ತುವಿನ ಗುಣ, ಜಾತಿ ಮುಂತಾದವುಗಳ ಗುಣಪೂರ್ಣತೆಯನ್ನು ಹೇಳದೆ ಅವುಗಳ ಕೊರತೆಯನ್ನು ಗುರುತಿಸುವುದೇ ವಿಶೇಷೋಕ್ತಿ ಅಲಂಕಾರ.

೧೫. **ಸಮಾಹಿತ:** ತಾನು ಬಗೆದ ಒಂದು ಕಾರ್ಯವು ದೈವವಶಾತ ತಾನಾಗಿಯೇ ಪೂರ್ಣಗೊಂಡರೆ ಅದನ್ನು ಸಮಾಹಿತ ಅಲಂಕಾರ ಎನ್ನುವರು.

೧೬. **ಸಮಾಸೋಕ್ತಿ:** ಮನಸ್ಸಿನಲ್ಲಿ ಒಂದರ್ಥವನ್ನು ಇಟ್ಟುಕೊಂಡು, ತತ್ಸಮಾನವಾದ ಇನ್ನೊಂದು ಅರ್ಥದ ಕುರುಹುಗಳನ್ನಷ್ಟೇ ನಿರ್ದೇಶಿಸುವುದೇ ಸಮಾಸೋಕ್ತಿ.

೧೭. **ಪರ್ಯಾಯೋಕ್ತಿ:** ಮನಸ್ಸಿನಲ್ಲಿ ವಿವಕ್ಷಿತವಾಗಿರುವ ಅರ್ಥವನ್ನು ನೇರವಾಗಿ ಹೇಳದೇ ಉಪಾಯವಾಗಿ ಬೇರೆ ರೀತಿಯಲ್ಲಿ ಹೇಳುವುದೇ ಪರ್ಯಾಯೋಕ್ತಿ ಅಲಂಕಾರ.

೧೮. **ವಿರೋಧ:** ಒಂದರಲ್ಲಿ ಒಂದು ಹೊಂದದ ವಿರುದ್ಧಪದಗಳನ್ನು ಒಂದುಗೂಡಿಸಿ ಸ್ಪಷ್ಟವಾಗಿ ತಿಳಿಸುವುದೇ ವಿರೋಧ ಅಲಂಕಾರ.

೧೯. **ಅಪ್ರಸ್ತುತ:** ಅಪ್ರಸ್ತುತವಾದ ವಸ್ತುವನ್ನೇ ಸುವಿಸ್ತಾರವಾಗಿ ವರ್ಣಿಸುವುದು ಅಪ್ರಸ್ತುತ ಅಲಂಕಾರ.

೨೦. **ನಿದರ್ಶನ:** ಒಂದು ವಸ್ತುವನ್ನು ವರ್ಣಿಸುವಾಗ ಅದೇ ಗುಣ ಇಲ್ಲವೇ ದೋಷಗಳನ್ನು ಇನ್ನೊಂದಕ್ಕೆ ನಿದರ್ಶನವಾಗಿ ಕೊಡುವುದು ನಿದರ್ಶನಾಲಂಕಾರ.

೨೧. **ಸಹೋಕ್ತಿ:** ಗುಣ, ಜಾತಿ ಮುಂತಾದವುಗಳಿಂದ ಎರಡರ ಜತೆಜತೆಯಾದ ಸ್ಥಿತಿಯನ್ನು ಹೇಳುವುದೇ ಸಹೋಕ್ತಿ ಅಲಂಕಾರ.

೨೨. **ಸಂಕೀರ್ಣ:** ಈ ಹಿಂದೆ ತಿಳಿಸಿದ ಅಲಂಕಾರಗಳನ್ನು ಒಂದನ್ನೊಂದು ಮಿಶ್ರಮಾಡುವುದೇ ಸಂಕೀರ್ಣ ಅಲಂಕಾರ.

೨೩. **ಪರಿವೃತ್ತಿ:** ಎರಡು ವಸ್ತುಗಳ ವಿನಿಮಯ ಅಥವಾ ಒಂದನ್ನು ಕೊಟ್ಟು ಇನ್ನೊಂದನ್ನು ತೆಗೆದುಕೊಳ್ಳುವುದೇ ಪರಿವೃತ್ತಿ ಅಲಂಕಾರ.

೨೪. **ವ್ಯಾಜವೃತ್ತಿ:** ಗುಣಸಂಪದವನ್ನೇ ದೋಷವೆನ್ನುವಂತೆ ಅತಿಶಯವಾಗಿ ಕಲ್ಪನೆಮಾಡಿ ಹೇಳುವುದೇ ವ್ಯಾಜವೃತ್ತಿ ಅಲಂಕಾರ.

೨೫. **ಹೇತ್ವಲಂಕಾರ**: ಒಂದು ಘಟನೆಗೆ ಕಾರಣವಾಗಿರುವುದನ್ನು ಹೇಳುವುದೇ ಹೇತ್ವಲಂಕಾರ.

೨೬. **ವಿಭಾವನಾ:** ಒಂದು ಘಟನೆಯನ್ನು ಅಳಿಸಿ, ಕಾರ್ಯಕ್ಕೆ ಸ್ವಸಂಸ್ಕಾರದ ಗುಣಾತಿಶಯವನ್ನೇ ಕಾರಣಸ್ಥಾನದಲ್ಲಿ ಕಲ್ಪಿಸುವುದು ವಿಭಾವನಾಲಂಕಾರ.

೨೭. **ಲೇಶ:** ಗುಣದಲ್ಲಿಯೂ ಒಂದಿಷ್ಟು ಅವಗುಣವನ್ನೂ, ದೋಷಗಳಲ್ಲಿ ಗುಣಗಳನ್ನೂ ವರ್ಣಿಸುವುದೇ ಲೇಶಾಲಂಕಾರ.

೨೮. **ಉದಾತ್ತ:** ಆಶಯದ ಮಹತ್ವವನ್ನೂ ವಿಭವದ ಮಹತ್ವವನ್ನೂ ಅಧಿಕವಾಗಿ ಉತ್ಪ್ರೇಕ್ಷಿಸಿ ಹೇಳುವುದೇ ಉದಾತ್ತಾಲಂಕಾರ.

೨೯. **ಅಪಹ್ನುತಿ:** ವರ್ಣಮಾನ್ಯವಾದ ವಿಷಯದ ಸ್ವರೂಪವನ್ನು ಮರೆಮಾಚಿ ಬೇರೊಂದನ್ನು ಹೇಳುವುದೇ ಅಪಹ್ನುತಿ ಅಲಂಕಾರ. ಇದರಲ್ಲಿ ಮೋಹಾಪೋಹ, ಧರ್ಮಾಪೋಹ ಹಾಗೂ ಗುಣಾಪೋಹ ಎಂದು ಮೂರು ಭೇದಗಳಿವೆ.

೩೦. **ರಸವತ್:** ನವವಿಧ ರಸಗಳನ್ನೂ ಹೃದಯಸ್ಪರ್ಶಿಯಾಗಿ ನಿರೂಪಿಸುವ ಕಾವ್ಯರಚನೆಯೇ ರಸವದಲಂಕಾರ. ಇದರಲ್ಲಿ ವೀರ, ಅದ್ಭುತ, ಕರುಣ, ಶೃಂಗಾರ, ಭಯಾನಕ, ರೌದ್ರ, ಭೀಭತ್ಸ, ಹಾಸ್ಯ ಹಾಗೂ ಶಾಂತರಸಗಳನ್ನು ವರ್ಣಿಸುವುದು.

೩೧. **ಊರ್ಜಿತ:** ಆತ್ಮಾಭಿಮಾನ ಅಥವಾ ಅಹಂಕಾರದ ಏರಿಕೆಯ ಅತಿಶಯವನ್ನು ಪ್ರಕಟಿಸುವುದೇ ಊರ್ಜಿತಲಂಕಾರ.

೩೨. **ವ್ಯಾವೃತ್ತಿ:** ಮೊದಲು ಹೇಳಿದ ಮಾತನ್ನು ಮತ್ತೆ ಮತ್ತೆ ಉಚ್ಚರಿಸುವುದೇ ವ್ಯಾವೃತ್ತಿ.

೩೩. **ಪ್ರಿಯತರ:** ಪ್ರಿಯವೂ, ಕುಶಲಪೂರ್ವವೂ, ಉಚಿತವೂ, ನಯವಿನಯಾದಿ, ಗುಣೋಪೇತವೂ ಆದ ಮಧುರವಚನ ತುಂಬಿರುವುದೇ ಪ್ರಿಯತರ ಅಲಂಕಾರ.

೩೪. **ಆಶೀಃರಲಂಕಾರ:** ಮನಸ್ಸಿನ ಇಷ್ಟಾರ್ಥ ಹಿರಿದಾಗಿ ಕೈಗೂಡಲಿ ಎಂದು ಹಿರಿಯರು ಆಶೀರ್ವಾದ ಮಾಡಿ ಹರಸುವುದೇ 'ಆಶೀಃರಲಂಕಾರ'.

೩೫. **ಭಾವಿಕಾಲಂಕಾರ:** ಕವಿಗಳು ಪರಿಭಾವಿಸಿ ಮನದಲ್ಲಿ ಅಂದುಕೊಂಡ ಅರ್ಥವೇ ಭಾವವಾಗುವುದು ಭಾವಿತಾಲಂಕಾರ.

೩೬. **ಧ್ವನ್ಯಲಂಕಾರ:** ಧ್ವನಿಯೆಂಬ ಅಲಂಕಾರವು ಶಬ್ದದಿಂದ ಸೂಚಿತವಾಗುತ್ತದೆ. ಅದು ಶಬ್ದದಿಂದ ಅರ್ಥಾಂತರವನ್ನು ಸೂಚಿಸುತ್ತದೆ.[೩೫]

ಹೀಗೆ ಒಟ್ಟು ೩೬ ಅಲಂಕಾರಗಳನ್ನು ಗುರುತಿಸಿ, ಅವುಗಳ ಲಕ್ಷಣಗಳನ್ನು ವಿವರಿಸುತ್ತಾನೆ ಕವಿರಾಜಮಾರ್ಗಕಾರ ಶ್ರೀವಿಜಯ. ಮುಂದುವರೆದು ಮಹಾಕಾವ್ಯಗಳ ಲಕ್ಷಣಗಳನ್ನೂ ತಿಳಿಸುತ್ತಾನೆ.

ಮಹಾಕಾವ್ಯಗಳ ಲಕ್ಷಣಗಳು: "ಅತಿಶಯಮಿತಿಹಾಸೋಪಾಶ್ರಯಂ ಮೇಣ್ ಕಥಾವಿ
ಶ್ರುತಚತುರವಿಕಾಸೋತ್ಪಾದಿತಾರ್ಥೋತ್ಕರಂ ಮೇ
ಣತಿಕುಶಲಸಲೀಲಾಚಾರ ಲೋಕೋಪಕಾರೋ
ದಿತ ಪರಮಗುಣ್ಯೈಕೋದಾರಧೀರಾಧಿಕಾರಂ ॥೩.೨೦೯॥"[೩೬]

ಇತಿಹಾಸಾಧಾರಿತ ಕಥಾಹಂದರವನ್ನೊಳಗೊಂಡಿದ್ದು, ವಿಶ್ರುತವೂ, ಚತುರವೂ ಆದ ಕವಿಕಲ್ಪನೆಯಿಂದ ಕೂಡಿರಬೇಕು. ಲೋಕೋಪಕಾರಿಯಾದ ವಿಚಾರಗಳನ್ನೊಳಗೊಂಡಿರಬೇಕು (೩.೨೧೦). ಪರಮಸುಖ ಸಂಪತ್ತನ್ನು ನೀಡುವ ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬ ಪುರುಷಾರ್ಥಗಳ ನೆಲೆಯಲ್ಲಿ ಶ್ರದ್ಧೆಯಿರಬೇಕು. ವಸ್ತು ವಿಷಯಗಳ ವರ್ಣನೆಯಲ್ಲಿ ನಿರ್ಣಯಾತ್ಮಕ ವಿಚಾರಗಳನ್ನೊಳಗೊಂಡಿರಬೇಕು (೩.೨೧೧). ಮನ್ಮಥ ಕ್ರೀಡಾವಿಲಾಸಗಳಿಂದ ಕೂಡಿದ್ದು, ಇಂಪಾದ ಧ್ವನಿಯಿಂದ ಗೋಷ್ಠಿಯನ್ನು ವರ್ಣಿಸುವಂತಿರಬೇಕು (೩.೨೧೨). ನಾನಾ ವಿನೋದಾವಳಿಗಳಿಂದ ಕೂಡಿದ್ದು, ಮದುಪಾನ ಗೋಷ್ಠಿ, ಶತ್ರು ವೃತ್ತಾಂತ, ಸಮಾಗಮ, ವಿರಹಗಳ ಸಂಗಮವಾಗಿರಬೇಕು (೩.೨೧೩). ರಾಜನೀತಿಯ ವಿಚಾರಗಳನ್ನೊಳಗೊಂಡಿರಬೇಕು (೩.೨೧೪). ಸುಂದರವಾದ ಅಲಂಕಾರಗಳನ್ನು ಬಳಸಿ, ಛಂದೋನಿಯಮಗಳಿಗೆ ಬದ್ಧವಾಗಿ ಕಾವ್ಯರಚನೆ

---

೩೫. ಡಾ. ಕೆ. ಕೃಷ್ಣಮೂರ್ತಿ (ಸಂ) : **ನೃಪತುಂಗದೇವಾನುಮತಂ ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ ;** ಈ ಮೇಲೆ ಹೇಳಿದ ೩೬ ಅಲಂಕಾರಗಳನ್ನು 'ಕವಿರಾಜಮಾರ್ಗ'ದ ೩ನೆಯ ಪರಿಚ್ಛೇದ 'ಅರ್ಥಾಲಂಕಾರ ವರ್ಣನ ಪ್ರಕರಣ'ದ ೬ನೆಯ ಪದ್ಯದಿಂದ ೨೦೯ರವರೆಗಿನ ಪದ್ಯಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿದೆ. ಪುಟ. ೧೪೪ ರಿಂದ ೨೧೦.

೩೬. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ ;** ಪುಟ.೧೯೯

ಮಾಡಿರಬೇಕು (೩.೩೧೫). ತಪೋನಿಷ್ಠೆಯಿಂದ ಸಾಧಿತವಾಗುವ ಇಷ್ಟಾರ್ಥಗಳನ್ನು ಒಳಗೊಂಡಿರಬೇಕು (೩.೩೧೬). ದೋಷಮುಕ್ತವಾದ ಶತ್ರು ಸಂಪತ್ತನ್ನು ವಶಪಡಿಸಿಕೊಳ್ಳುವ ವೀರವೃತ್ತಾಂತವನ್ನು ಒಳಗೊಂಡಿರಬೇಕು (೩.೩೧೭). ಹೀಗೆ ಮಹಾಕಾವ್ಯವು ಬೇರೆ ಬೇರೆ ವರ್ಣನಾಂಶಗಳನ್ನು ಒಳಕೊಂಡು ನೃಪತುಂಗನ ಯಶಸ್ಸಿನಂತೆಯೇ ಕಲ್ಪಾಂತದವರೆಗೂ ಚಿರಸ್ಥಾಯಿಯಾಗಿ ನಿಲ್ಲುವುದು ಎಂಬುದು ಶ್ರೀವಿಜಯನ ಅಭಿಮತವಾಗಿದೆ.

'ಕವಿರಾಜಮಾರ್ಗ'ವು ಕವಿಯಾಗಬಯಸುವ ವ್ಯಕ್ತಿಗೆ ಬೇಕಾದ ವಿಷಯಗಳನ್ನು ತಿಳಿಸುವ ಕಾವ್ಯಮೀಮಾಂಸೆಯ ಕೈಪಿಡಿಯಿದ್ದಂತೆ. ಕಾವ್ಯಮೀಮಾಂಸೆಗೆ ಬೇಕಾಗುವ ಭಾಷೆಯ ಸಮಸ್ಯೆಗಳು, ಶಬ್ದ, ಅದರ ನಾದಸ್ವರೂಪ ಮತ್ತು ಅರ್ಥವ್ಯಾಪ್ತಿಗಳನ್ನು ತಿಳಿಸಲು ರಚಿಸಿದ ಈ ಗ್ರಂಥವು ತನ್ನ ಕಾಲದ ಧಾರ್ಮಿಕ, ಸಾಮಾಜಿಕ, ರಾಜಕೀಯ ಜನಜೀವನದ ಮೇಲೂ ಅಲ್ಪಸ್ವಲ್ಪ ಬೆಳಕನ್ನು ಬೀರಬಲ್ಲದು. ಮೂಲತಃ ಅಲಂಕಾರ ಶಾಸ್ತ್ರಗ್ರಂಥವನ್ನು ರಚಿಸಲು ಹೊರಟ ಶ್ರೀವಿಜಯನು ಅನುಷಂಗಿಕವಾಗಿ ಇತರ ವಿಷಯಗಳನ್ನು ಕುತೂಹಲಕರವಾಗಿ ಕೃತಿಯಲ್ಲಿ ಬಿಂಬಿಸುತ್ತಾನೆ. ಕವಿಗಳ ಅನುಭವ, ಸಹೃದಯತೆಯಿಂದಾಗಿ ಗ್ರಂಥದಲ್ಲಿ ಹಲವಾರು ಮೌಲ್ಯಗಳು ಸ್ಥಾನ ಪಡೆದುಕೊಂಡು ಅಧ್ಯಯನಕ್ಕೆ ಆಯಾಮಗಳನ್ನು ಒದಗಿಸಿಕೊಟ್ಟಿದೆ. ಪೂರ್ಣಗ್ರಂಥವು ನಿರೂಪಣೆಯಲ್ಲಿ ಭಾಮಹ, ದಂಡಿ ಮೊದಲಾದ ಸಂಸ್ಕೃತ ಲಾಕ್ಷಣಿಕರನ್ನು ಅನುಸರಿಸಿದರೂ ಲಕ್ಷ್ಯ ಪದ್ಯಗಳಲ್ಲಿ ಅನೇಕ ಕಡೆಗಳಲ್ಲಿ ಸ್ವಾತಂತ್ರ್ಯವನ್ನು ಮೆರೆದಿದ್ದಾನೆ. ಸಾಹಿತ್ಯದ ಸ್ವರೂಪ, ಪ್ರಯೋಜನ, ತರತಮಗಳು, ಸಾಹಿತ್ಯಕಾರನ ಸಾಧನೆ, ಅನುಸರಿಸಬೇಕಾದ ಮಾರ್ಗ ಅಥವಾ ಶೈಲಿ, ಸಮತೋಲನ ವಿಧಾನ ಇತ್ಯಾದಿಗಳ ಬಗೆಗೆ ವಿವರಿಸುತ್ತ ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು ವಿಶದಪೂರ್ಣವಾಗಿ ಬಿಚ್ಚಿಡುತ್ತಾನೆ. ಹೀಗೆ ಕೃತಿಯನ್ನು ಒಪ್ಪ ಓರಣವಾಗಿ ನಿರೂಪಣೆ ಮಾಡುತ್ತಾನೆ.

೪.೧.೨. ಇಮ್ಮಡಿ ನಾಗವರ್ಮ (೧೧೪೫):

ವ್ಯಾಕರಣ, ಛಂದಸ್ಸು, ನಿಘಂಟುಗಳೊಂದಿಗೆ ವರ್ಧಮಾನ ಪುರಾಣವನ್ನು ರಚಿಸಿ, ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಎರಡನೆಯ ನಾಗವರ್ಮನು **'ಕವಿತಾಗುಣೋದಯ'**, **'ಕವಿಕರ್ಪೂರ'** ಎಂಬ ಬಿರುದುಗಳನ್ನು ಹೊಂದಿದ್ದನು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಒಟ್ಟು ಮೂರು ಜನ 'ನಾಗವರ್ಮ'ರು ಆಗಿ ಹೋಗಿದ್ದಾರೆ. "ಛಂದೋಂಬುದಿ, ಕಾದಂಬರಿಗಳ ರಚಕನಾದ ಬ್ರಾಹ್ಮಣ ನಾಗವರ್ಮನೊಬ್ಬನು. ವಸ್ತುಕೋಶ, ಕಾವ್ಯಾವಲೋಕನ, ಭಾಷಾಭೂಷಣಗಳನ್ನು ರಚಿಸಿದ ಜೈನ ನಾಗವರ್ಮನೊಬ್ಬನು. ಚಂದ್ರಚೂಡಾಮಣಿ ಶತಕವನ್ನು ಬರೆದ ಬ್ರಾಹ್ಮಣ ನಾಗವರ್ಮನೊಬ್ಬನು ಎಂದು ಅನನ್ಯರಾದ ನಾಗವರ್ಮರು ಮೂವರಾದರೂ ಇದ್ದರು ಎಂಬಲ್ಲಿ ಸಂಶಯವಿಲ್ಲ."[೩೭] ಕವಿಚರಿತೆಕಾರರು ನಾಗವರ್ಮನ ಕಾಲದ ಬಗೆಗೆ ಹೀಗೆ

---

೩೭. ಎಸ್. ಪಿ. ಪಾಟೀಲ ; **ಎರಡನೆಯ ನಾಗವರ್ಮನ ವರ್ಧಮಾನ ಪುರಾಣ** ; ಪುಟ.೦೫

ಹೇಳುತ್ತಾರೆ “ನಾಗವರ್ಮನಿಗೆ ಅಭಿನವಶರ್ವವರ್ಮ ಎಂಬ ಬಿರುದು ಇದ್ದಂತೆ ತಿಳಿದುಬರುತ್ತದೆ. ಆದುದರಿಂದ ಈ ನಾಗವರ್ಮನೇ ಜಗದೇಕಮಲ್ಲನ ಆಸ್ಥಾನದಲ್ಲಿ ಕಟಕೋಪಾಧ್ಯಾಯನಾಗಿಯೂ ಜನ್ನನಿಗೆ ಉಪಾಧ್ಯಾಯನಾಗಿಯೂ ಇದ್ದಿರಬೇಕು. ಈತನು ನಯಸೇನನ (೧೧೧೨) ಹೆಸರನ್ನು ಹೇಳುವುದರಿಂದ ಆತನಿಗಿಂತ ಈಚೆಗೆ ಇದ್ದನೆಂಬುದು ಸ್ಪಷ್ಟವಾಗುತ್ತದೆ. ಚಾಳುಕ್ಯರಾಜರಲ್ಲಿ ಜಗದೇಮಲ್ಲನು ೧೧೩೮ರಿಂದ ೧೧೫೦ರವರೆಗೆ ಆಳಿದಂತೆ ತಿಳಿದುಬರುತ್ತದೆ. ಆದುದರಿಂದ ನಾಗವರ್ಮನು ಈತನಲ್ಲಿ ಸುಮಾರು ೧೧೪೫ರಲ್ಲಿ ಕಟಕೋಪಾಧ್ಯಾಯನಾಗಿ ಇದ್ದಿರಬಹುದು. ಇವನು ಈ ಜಗದೇಕಮಲ್ಲನ ಕಾಲವಾದ ಮೇಲೆ ಬಹುದಿವಸ ಬದುಕಿದ್ದು, ಜನ್ನನಿಗೆ ಉಪಾಧ್ಯಾಯನಾಗಿದ್ದನು. ಆದುದರಿಂದ ಈತನ ಕಾಲವನ್ನು ೧೧೪೫ ಎಂದು ಊಹಿಸಬಹುದಾಗಿದೆ.” [೩೮] ಈತನ ತಂದೆ ದಾಮೋದರ. ನಾಗವರ್ಮನು ‘ಕಾವ್ಯಾವಲೋಕನ’, ‘ಕರ್ಣಾಟಕ ಭಾಷಾಭೂಷಣ’, ‘ಅಭಿಧಾನ ವಸ್ತುಕೋಶ’, ‘ಛಂದೋವಿಚಿತಿ’ (ಅನುಪಲಬ್ಧ), ‘ವರ್ಧಮಾನ ಪುರಾಣ’ ಎಂಬ ಕೃತಿಗಳನ್ನು ರಚಿಸಿದ್ದಾನೆ. ಪ್ರಸ್ತುತ ಭಾಗದಲ್ಲಿ ಅಲಂಕಾರಶಾಸ್ತ್ರ ಕೃತಿಯಾದ ಕಾವ್ಯಾವಲೋಕನವನ್ನು ಕುರಿತಾಗಿ ಚರ್ಚಿಸಲಾಗಿದೆ.[೩೯]

೪.೧.೨.೧. ಕಾವ್ಯಾವಲೋಕನ:

ಕಾವ್ಯಾವಲೋಕನ ಕೃತಿಯು ಅಲಂಕಾರಶಾಸ್ತ್ರ ಸಂಬಂಧಿಸಿದ ಗ್ರಂಥವಾಗಿದೆ. ಸಾಹಿತ್ಯಾಭ್ಯಾಸಿಗಳಿಗೆ, ಕಾವ್ಯ ಕಟ್ಟುವವರಿಗೆ ಕಾವ್ಯಾವಲೋಕನವು ದಾರಿದೀಪವಾಗಿದೆ. ಕವಿರಾಜಮಾರ್ಗದ ತರುವಾಯ ಕನ್ನಡದಲ್ಲಿ ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ವಿಶ್ಲೇಷಿಸುವ ಪುರಾತನ ಕೃತಿಯೇ ‘ಕಾವ್ಯಾವಲೋಕನ’. ಕವಿರಾಜಮಾರ್ಗವು ಸಂಸ್ಕೃತದ ಕೃತಿಯನ್ನು ಅನುಸರಿಸಿ ರಚಿತವಾಗಿದೆ. ಆದರೆ “ಕನ್ನಡದಲ್ಲಿ ಸ್ವತಂತ್ರ ರಚನೆ, ವಿವೇಚನೆ, ಅಲಂಕಾರ ಕುರಿತ ಸಮಸ್ತ ವಿಷಯಗಳ ವಿಶ್ಲೇಷಣೆ ಹಾಗೂ ಅಗಾಧ ಭಾಷಾ ಪ್ರೌಢಿಮೆಯಿಂದಾಗಿ ಎರಡನೆಯ ನಾಗವರ್ಮನ ಅಲಂಕಾರ ಕೃತಿ ಕಾವ್ಯಾವಲೋಕನಕ್ಕೆ ಕನ್ನಡದಲ್ಲಿ ಪ್ರಥಮ ಪುರಾತನ ಗ್ರಂಥವೆಂಬ ಹೆಗ್ಗಳಿಕೆಗೆ ಪ್ರಾಪ್ತಿಯಾಗಿದೆ.”[೪೦] ನಾಗವರ್ಮನು ಗ್ರಂಥಾರಂಭದಲ್ಲಿ ವರ್ಧಮಾನ ತೀರ್ಥಂಕರನ್ನು ಸ್ಮರಿಸಿಕೊಂಡು ಮುಂದುವರೆದು:

> **“ಕವಿಗಳ್ಗಿದು ಕೈಗನ್ನಡಿ**
> **ಕವಿತೆಗೆ ಬಾಟಿಸ್ಮೊದಲುದಾತ್ತ ವಾಗ್ದೇವತೆಗು**
> **ದ್ಭವಹೇತು ಕೋಶಗೃಹಮೆನೆ**
> **ಭುವನದೊಳಿದು ಪರೆದು ನಿಲ್ವುದೊಂದಚ್ಚರಿಯೇ ॥೧.೦೪॥”**[೪೧]

---

೩೮. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** ; ಪುಟ. ೧೬೭

೩೯. ಇದೇ ಅಧ್ಯಾಯದ ವ್ಯಾಕರಣಶಾಸ್ತ್ರ ಭಾಗದಲ್ಲಿ ‘ಕರ್ಣಾಟಕ ಭಾಷಾಭೂಷಣ’ ಹಾಗೂ ನಿಘಂಟುಶಾಸ್ತ್ರ ಭಾಗದಲ್ಲಿ ಅಭಿಧಾನವಸ್ತುಕೋಶವನ್ನು ಕುರಿತು ಚರ್ಚಿಸಲಾಗಿದೆ. ಅಲ್ಲದೇ ಪ್ರಸ್ತುತ ‘ಕಾವ್ಯಾವಲೋಕನ’ ಕೃತಿಯ ಮೊದಲ ಅಧ್ಯಾಯವಾದ ‘ಶಬ್ದಸ್ಮೃತಿ’ಯು ವ್ಯಾಕರಣಕ್ಕೆ ಸಂಬಂಧಿಸಿದ್ದು, ಅದರ ಕುರಿತಾಗಿ ವ್ಯಾಕರಣಶಾಸ್ತ್ರ ಭಾಗದಲ್ಲಿಯೇ ಚರ್ಚಿಸಲಾಗಿದೆ.

೪೦. ಡಾ. ಎಂ. ಮಹ್ಮದ್ ಭಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೬೦

೪೧. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೦೩

ಎಂದು ತನ್ನ ಕೃತಿಯ ಬಗೆಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಕವಿಗಳಿಗೆ ಕೈಗನ್ನಡಿಯಾದಂತೆ ಕವಿತೆಗೆ ಜೀವನಾಧಾರ, ವಾಗ್ದೇವಿಯ ಜನ್ಮಸ್ಥಾನ ಎಂದು ಹೇಳುತ್ತಾನೆ. "ಈತನು ಹಲವಾರು ಸಂಸ್ಕೃತ ಲಾಕ್ಷಣಿಕರಿಂದ ವಿಷಯ ಸಾರವನ್ನು ಹೀರಿದ್ದರೂ ಆತನ 'ಕಾವ್ಯಾವಲೋಕನ'ವು ಅವರ ಅಭಿಪ್ರಾಯಗಳ ಸಂಕಲನವಲ್ಲ. ಆತನ ವೈಯಕ್ತಿಕತೆ ಗ್ರಂಥದ ಬಹುಭಾಗಲ್ಲಿ ಚೆನ್ನಾಗಿ ತೋರಿದೆ. ವಿಷಯಗಳ ಜೋಡಣೆಯೂ ನಿರೂಪಣ ವಿಧಾನವೂ ಆತನವೇ ಆಗಿದೆ. ಹಾಗೆ ನೋಡಿದರೆ ಕಾವ್ಯಾವಲೋಕನವು ಹಳೆಯ ಕವಿಗಳ ಕಾವ್ಯಾರಾಮದಿಂದ ಆರಿಸಿಟ್ಟಿರುವ ಬುಟ್ಟಿಯಿದು."[೪೨] ಶಾಸ್ತ್ರ ಸಾಹಿತ್ಯಕ್ಕೆ ಸಂಬಂಧಿಸಿದ ವ್ಯಾಕರಣ, ಅಲಂಕಾರ ವಿಷಯವೇ ಶುಷ್ಕ, ನೀರಸ ಎಂಬ ಅಪಖ್ಯಾತಿಯನ್ನು ನಾಗವರ್ಮನು ತನ್ನ 'ಬಹುಜ್ಞತೆ'ಯಿಂದ ಹೋಗಲಾಡಿಸಿದ್ದಾನೆ. "ಅಲಂಕಾರ, ವ್ಯಾಕರಣ ವಿಷಯಗಳನ್ನು ಸ್ವಾರಸ್ಯಪೂರ್ಣವಾಗಿ ಮಾಡಲು ನಾಗವರ್ಮನು ಪೂರ್ವಕವಿಗಳ ಗ್ರಂಥಗಳಿಂದ, ಶಾಸನಗಳಿಂದ ಅಖಂಡ ಪದ್ಯಗಳನ್ನು ಎತ್ತಿಕೊಂಡಿದ್ದಾನೆ. ಈ ಪ್ರಯೋಗಗಳಲ್ಲಿ ಬಹುಪಾಲು ಸ್ವಾರಸ್ಯವಾಗಿವೆ. ಉಲ್ಲೇಖಗೊಂಡ ಕವಿಗಳಲ್ಲಿ ಪಂಪ, ಗುಣವರ್ಮ, ಪೊನ್ನ, ರನ್ನ, ನಾಗಚಂದ್ರರ ಪ್ರಯೋಗಗಳನ್ನು ಸುಲಭವಾಗಿ ಗುರುತಿಸಬಹುದು."[೪೩]

"ಸಮುಚಿತ ಶಬ್ದಸ್ಮೃತಿ ಕಾ
ವ್ಯಮಲವ್ಯಾವೃತ್ತಿ ಗುಣವಿವೇಕಂ ರೀತಿ
ಕ್ರಮ ರಸ ನಿರೂಪಣಂ ಕವಿ
ಸಮಯಮಿವಿಂತಯ್ದುಮಿದಱೊಳಧಿಕರಣಂಗಳ್ ॥೧.೦೫॥"[೪೪]

ಪ್ರಸ್ತುತ ನಾಗವರ್ಮನ ಅಲಂಕಾರ 'ಕಾವ್ಯಾವಲೋಕನ' ಗ್ರಂಥದಲ್ಲಿ ಒಟ್ಟು ಐದು ಅಧಿಕರಣಗಳಿದ್ದು, ಒಟ್ಟು ೨೪೭ ಸೂತ್ರಗಳಿವೆ. ಈ ಸೂತ್ರಗಳಿಗೆ ವಿಶ್ಲೇಷಣೆ ಹಾಗೂ ವಿಷಯಕ್ಕೆ ಸಂಬಂಧಿಸಿದ ಉದಾಹರಣೆಗಳನ್ನು ಸೂತ್ರದ ಮುಂದೆ ನೀಡಿದ್ದಾನೆ. ಇದರಲ್ಲಿ ಮೊದಲನೆಯ ಅಧಿಕರಣವಾದ 'ಶಬ್ದಸ್ಮೃತಿ'ಯು ವ್ಯಾಕರಣ ವಿಷಯಕ್ಕೆ ಸಂಬಂಧಿಸಿದ್ದು, ಸುಧೀರ್ಘವಾಗಿ ಚರ್ಚಿಸಿದ್ದಾನೆ. ಈ ಮುಂಚೆಯೇ ಹೇಳಿದಂತೆ ಮೊದಲನೆಯ ಅಧಿಕರಣದ ಕುರಿತಾಗಿ ವ್ಯಾಕರಣಶಾಸ್ತ್ರ ಭಾಗದಲ್ಲಿ ವಿಶ್ಲೇಷಿಸಲಾಗಿದೆ. ಇನ್ನುಳಿದ ನಾಲ್ಕು ಅಧಿಕರಣಗಳ ವಿಷಯವನ್ನು ಮಾತ್ರ ಪ್ರಕೃತ ಭಾಗದಲ್ಲಿ ಚರ್ಚಿಸಲಾಗಿದೆ.

೧) ದ್ವಿತೀಯ ಅಧಿಕರಣಂ : ಕಾವ್ಯಮಲವ್ಯಾವೃತ್ತ್ಯಧಿಕರಣಂ

"ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇೞ್ವೊಡಂತಾ
ಪ್ರತಿಭಾನಂ ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ ಶಾಸ್ತ್ರಾ
ನ್ವಿತನಪ್ಪಂ ವೃದ್ಧನಾಲಸ್ಯಮನುೞಿದೆಸಪುದ್ಯೋಗಮಭ್ಯಾಸಕರ್ಮಂ ॥೪೨೪॥"[೪೫]

---

೪೨. ಡಾ. ಎಂ. ಮಹ್ಮದ್ ಭಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೬೦
೪೩. ಪ್ರೊ. ಎಚ್. ಎಂ. ಶಂಕರ : **ಎರಡನೇ ನಾಗವರ್ಮ** ; ಪುಟ.೧೫
೪೪. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೧೩
೪೫. ಎಚ್. ದೇವೀರಪ್ಪ (ಸಂ) : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೯೨

ನಾಗವರ್ಮನು 'ಕಾವ್ಯಾವಲೋಕನ'ದ ಎರಡನೆಯ ಅಧಿಕರಣದಲ್ಲಿ ಕಾವ್ಯದ ಹೇತು, ಪ್ರಯೋಜನ ಹಾಗೂ ಲಕ್ಷಣಗಳನ್ನು ಕುರಿತು ಚರ್ಚಿಸಿದ್ದಾನೆ. ಸಹಜ ಸಿದ್ಧವಾದ ಕಾವ್ಯೋತ್ಪತ್ತಿಗೆ ನಾಲ್ಕು ಪ್ರಮುಖ ಕಾರಣಗಳನ್ನು ಹೇಳುತ್ತಾನೆ. ಪ್ರತಿಭೆ, ವಿದ್ಯಾ ಪ್ರಚಯ ಪರಿಚಯ, ಹಿರಿಯರಲ್ಲಿ ಗೌರವ ಹಾಗೂ ಸತತ ಅಭ್ಯಾಸಗಳು ಕಾವ್ಯೋತ್ಪತ್ತಿಗೆ ಪೂರಕ ಎಂದುಚ್ಚರಿಸುತ್ತಾನೆ. ಕಾವ್ಯವು ಗುಣಪೂರ್ಣವಾಗಿಲ್ಲದಿದ್ದರೂ ಇರಬಹುದು. ಆದರೆ ಅದು ದೋಷರಹಿತವಾಗಿರಬೇಕು. ಹಾಗಾಗಬೇಕಾದರೆ ಕಾವ್ಯದಲ್ಲಿ ಬರಬಹುದಾದಂತಹ ಶಬ್ದದೋಷಗಳನ್ನು ಕಾವ್ಯಾಭ್ಯಾಸಿಗಳು ತಿಳಿದಿರಬೇಕು ಎಂದು ಹೇಳಿ ಪ್ರಸ್ತುತ ಅಧಿಕರಣದಲ್ಲಿ ಕಾವ್ಯದೋಷಗಳ ಕುರಿತಾಗಿ ಚರ್ಚಿಸಿದ್ದಾನೆ.

ಕಾವ್ಯದಲ್ಲಿ ಶಬ್ದ ಮತ್ತು ಅರ್ಥಗಳು ಸಾಪೇಕ್ಷವಾಗಿರುವವರು ಮನಸ್ಸಿಗೆ ಮುದನೀಡುವ ಅರ್ಥಬರುವಂತೆ ಪದಪ್ರಯೋಗವನ್ನು ಮಾಡಬೇಕಾಗುತ್ತದೆ. ಅಂತಹ ಪದಬಂಧದಿಂದಲೇ ಕಾವ್ಯದ ರಸಭಾವಗಳು ಹೊರಹೊಮ್ಮುತ್ತವೆ. ಒಂದುವೇಳೆ ಆ ಬಂಧದಲ್ಲಿನ ಒಂದು ಪದವನ್ನು ತೆಗೆದು ಇನ್ನೊಂದು ಪದವನ್ನು ಪ್ರಯೋಗಿಸಿದರೂ ಆ ಪದ್ಯಭಾಗದ ಅರ್ಥಕ್ಕೆ ಚ್ಯುತಿ ಬರದಂತೆ ರಚಿಸಬೇಕೆಂದು ಹೇಳಿ ಅದುವೇ ಕಾವ್ಯಸಿದ್ಧಿ ಎಂದು ಪ್ರತಿಪಾದಿಸುತ್ತಾನೆ. ಹೀಗಿರುವಲ್ಲಿ –

೧. ಪದದೋಷ ಪ್ರಕರಣಂ:

"ಸಮುಚಿತವಾದ ಒಂದೇ ಒಂದು ಪದವೂ ಉದ್ದಿಷ್ಟಾರ್ಥವನ್ನು ಸಮರ್ಥವಾಗಿ ಬಿಂಬಿಸಲು ಸಾಧ್ಯ. ಈ ಕಾರಣದಿಂದಲೇ ಮೊದಲು ದೋಷಗಳನ್ನು ತಿಳಿದುಕೊಳ್ಳಬೇಕು. ಸಾಮಾನ್ಯವಾಗಿ ಪದ–ಪದಾರ್ಥ, ಸಂಧಿಗಳಲ್ಲಿ ಸಂಭವಿಸುವವು. ಅಸಮರ್ಥ, ಅಪ್ರತೀತ, ವಿಸಂಧಿ, ವಿಪರೀತ ಕಲ್ಪನಾ, ಕಷ್ಟ, ನೀರಸ ಎಂಬಿವು ಪದದೋಷಗಳು ಉಂಟಾಗುತ್ತವೆ."[೪೬]

ಅಸಮರ್ಥ: ಪದಕ್ಕೆ ಉದ್ದಿಷ್ಟಾರ್ಥವನ್ನು ಬಿಂಬಿಸುವ ಸಾಮರ್ಥ್ಯ ಇಲ್ಲದಿರುವುದು.

ಅಪ್ರತೀತ: ಯಾವ ವಿಧದಿಂದಲೂ ಹೊಳೆಯದಷ್ಟು ಗೂಢಾರ್ಥದಿಂದ ಕೂಡಿರುವುದು. ಇಲ್ಲಿ ಕವಿಯ ಉದ್ದೇಶ ಸ್ಪಷ್ಟವಾಗಿರುವುದಿಲ್ಲ.

ವಿಸಂಧಿ: ಸಂಧಿಯಾಗಬೇಕಾದೆಡೆಯಲ್ಲಿ ಸಂಧಿಮಾಡದಿರುವುದು ಅಥವಾ ಕಿವಿಗೆ ಅಹಿತವಾದ ಸಂಧಿಯನ್ನು ಮಾಡುವುದು.

ವಿಪರೀತ ಕಲ್ಪನೆ: ತನ್ನ ಕಲ್ಪನೆಗೆ ವಿರುದ್ಧವಾದ ಅರ್ಥ ಸ್ಫುರಿಸುವಂತಿರುವುದು ಅಥವಾ ವಿರುದ್ಧಾರ್ಥ ಹೊಳೆಯುವುದು.

ಶ್ರುತಿಕಷ್ಟ: ಕೇಳಲು ಅಹಿತಕರವಾದ ಪದಪ್ರಯೋಗ ಮಾಡುವುದು.

ಕೆಲವೆಡೆಯಲ್ಲಿ ಅಸಭ್ಯಕ್ರಿಯೆಯ ಸ್ಮರಣೆಯನ್ನು ಕಾಣಬಹುದು. ಅವುಗಳು ದುಷ್ಟಪ್ರತೀತಿ ಎನಿಸಿಕೊಳ್ಳುತ್ತವೆ. ಅವುಗಳು ಗ್ರಾಮ್ಯಪದಗಳು. ಇಂತಹ ಪದಪ್ರಯೋಗಗಳನ್ನು ಮಾಡುವುದು

೪೬. ಡಾ. ಎಂ. ಮಹ್ಮದ್ ಭಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೮೮

ದೋಷವಲ್ಲ ಎಂಬುದು ನಾಗವರ್ಮನ ಅಭಿಮತ. ಏಕೆಂದರೆ ಬೇರೊಬ್ಬನ ಮಾತಿನ ಅನುದಾನ ಮಾತ್ರ ಇರುವುದರಿಂದ ಅಲ್ಲಿ ಅದು ನಿರ್ದೋಷವೆನಿಸುತ್ತದೆ.

೨. ವ್ಯಾಕ್ಯವಾಕ್ಯಾರ್ಥ ದೋಷಾನುಕೀರ್ತನ ಪ್ರಕರಣಂ:

ಸೂತ್ರ ೧೦೪॥ **"ವಿದಿತಾರ್ಥಂ ಕ್ಷೋದಕ್ಷಮ**
ಮುದಾತ್ತಶಬ್ದಂ ಪರಸ್ಪರಂ ಸಾಪೇಕ್ಷಂ
ಪದಸಮುದಾಯಂ ವಾಕ್ಯಂ
ವ್ಯುದಸ್ತಕಾಂಕ್ಷಂ ತದೇಕವಸ್ತುನಿಬದ್ಧಂ ॥೩.೪೫೩॥"[೪೭]

"ಸ್ಪಷ್ಟಾರ್ಥವುಳ್ಳ ಪರಸ್ಪರ ಸಾಪೇಕ್ಷ ಉದಾತ್ತ ಪದಸಮುದಾಯವೇ ವಾಕ್ಯ." [೪೮] ಕ್ಷೋದಕ್ಷಮವೂ, ಅಸಂಕೀರ್ಣವೂ, ಶುದ್ಧಪದ ಸಂಪೂಜಿತವೂ ಆಗಿರುವುದೇ ವಾಕ್ಯ. ಒಂದುವೇಳೆ ಅದಾಗದಿದ್ದಲ್ಲಿ ವಾಕ್ಯದೋಷವೆನಿಸುವುದು. ನಾಗವರ್ಮನು ಹೀಗಿರುವ ವಾಕ್ಯದೋಷಗಳನ್ನು ಎಂಟು ಪ್ರಕಾರಗಳಲ್ಲಿ ಗುರುತಿಸುತ್ತಾನೆ.

ವ್ಯವಹಿತ: ಸಾಪೇಕ್ಷವಾದ ಪದಗಳ ಅನ್ವಯಕ್ಕೆ ಕುಂದುಂಟು ಮಾಡುವುದೇ ವ್ಯವಹಿತ.

ಏಕಾರ್ಥ: ಪದಗಳ ಪುನರುಕ್ತಿಯೇ ಏಕಾರ್ಥ. ಆದರೆ ಕ್ರೋಧ, ವಿಷಾದಗಳ ಸಂದರ್ಭಗಳಲ್ಲಿ ದ್ವಿರುಕ್ತಿಯು ದೋಷವಲ್ಲ.

ವ್ಯರ್ಥ: ಪೂರ್ವಾಪರ ವಿರುದ್ಧಾರ್ಥಗಳನ್ನು ಹೊಂದಿರುವುದೇ ವ್ಯರ್ಥ.

ಅಪಕ್ರಮ: ಉದ್ದೇಶಿತ ಕ್ರಮದಂತೆ ವಾಕ್ಯಪ್ರಯೋಗವಿಲ್ಲದೇ ಇರುವುದು.

ಲೋಕವಿರುದ್ಧಕ್ರಮ: ಕಾಲ, ಗುಣ, ಸ್ವಭಾವ, ದೇಶಗಳಿಗೆ ವಿರುದ್ಧವಾದ ವಸ್ತುಗಳನ್ನು ವರ್ಣಿಸುವುದು ಲೋಕವಿರುದ್ಧಕ್ರಮವೆನಿಸಿಕೊಳ್ಳುತ್ತದೆ.

ಶಾಸ್ತ್ರವಿರುದ್ಧ: ಪೂರ್ವಕವಿಗಳಿಂದ ನಿರ್ಮಿತವಾದ ಶಾಸ್ತ್ರಗಳಿಗೆ ವಿರುದ್ಧವಾಗಿ ವರ್ಣನೆ ಮಾಡುವುದು.

ಯತಿಭಂಗ: ಪದ್ಯವನ್ನು ಓದುವಾಗ ನಿಯತವಾದ ಸ್ಥಳದಲ್ಲಿ ಉಸಿರನ್ನು ನಿಲ್ಲಿಸುವುದೇ ಯತಿ. ಒಂದುವೇಳೆ ನಿಯತವಾದ ಸ್ಥಾನದಲ್ಲಿ ಯತಿಯಿಲ್ಲದಿದ್ದರೆ ಅದು ಯತಿಭಂಗವೆನಿಸುವುದು.

ಭಿನ್ನವೃತ್ತ: ಛಂದಸ್ಸಿಗೆ ನಿರ್ದಿಷ್ಟವಾದ ಮಾತ್ರೆಗಳನ್ನು ಪ್ರಯೋಗಿಸುವಲ್ಲಿ ದೋಷಿತವಾಗುವುದು.

ಹೀಗೆ ನಾಗವರ್ಮನು 'ಕಾವ್ಯಮಲವ್ಯಾವೃತ್ಯಧಿಕರಣ'ದಲ್ಲಿ ಕಾವ್ಯ ರಚನೆಯಲ್ಲಿ ಆಗಬಹುದಾದ ಪದದೋಷ ಹಾಗೂ ವಾಕ್ಯದೋಷಗಳನ್ನು ಕುರಿತಾಗಿ ಉದಾಹರಣೆಗಳ ಸಹಿತವಾಗಿ ವಿಶ್ಲೇಷಿಸುತ್ತಾನೆ.

---

೪೭. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಕಾವ್ಯಾವಲೋಕನಂ** ; ಪುಟ. ೭೭
೪೮. ಡಾ. ಎಂ. ಮಹ್ಮದ್ ಭಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೯೦

೨) ತೃತೀಯ ಅಧಿಕರಣಂ : ಗುಣವಿವೇಕಾಧಿರಣಂ:

"ಇದು ಸೌಂದರ್ಯಗುಣಪ್ರಕಾಶಮಿದು ತಾನಗ್ರಾಮ್ಯತಾಧಾನಮಿಂ
ತಿದು ಭಾಸ್ವತ್ವರಭಾಗರಮ್ಯಮಿದು ಬಂಧಾಕ್ಲೇಷವಿಚ್ಛಿತ್ತಿಗಾ
ಸ್ಪದಮೆಂದಿಂತುಚಿತಪ್ರಯೋಗವಿಧಿಯಿಂ ಸಯ್ತುಪ್ಪಿನಂ ತಿರ್ದಿ ಪೇ
ಳ್ವುದು ಪೂಮಾಲೆಯನಿಂಬಿನಿಂ ಸಮೆವವೊಲ್ ಸತ್ಕಾವ್ಯಮಂ ಕಬ್ಬಿಗಂ ॥೩.೪೮॥

ಸೂತ್ರಂ ೧೦೬॥ **ನಿರತಿಶಯಕಾವ್ಯಶೋಭಾ**
ಕರಂಗಳಾಗಿರ್ಪ ಧರ್ಮಮವು ಗುಣಮಕ್ಕುಂ
ಪರಮ ಪುರಾಣಕವೀಶ್ವರ
ನಿರೂಪಿತಂಗಳ್ ವಿಚಿತ್ರಮಾರ್ಗಯುತಂಗಳ್ ॥೩.೪೯॥"[೪೯]

ಕಾವ್ಯ ಸೌಂದರ್ಯಕ್ಕೆ ಕಾರಣವಾಗುವ ಗುಣಗಳನ್ನೂ, ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳನ್ನು ಪ್ರಸ್ತುತ ಮೂರನೆಯ ಅಧಿಕರಣದಲ್ಲಿ ನಾಗವರ್ಮನು ವಿವರಿಸಿದ್ದಾನೆ. "ಪದಸಂಘಟನಾಶ್ರಯವಾದವುಗಳು ಗುಣಗಳು; ಶಬ್ದಾರ್ಥಾಶ್ರವಾದವುಗಳು ಅಲಂಕಾರಗಳು." [೫೦] 'ನಿರತಿಶಯವಾದ ಕಾವ್ಯಕ್ಕೆ ಶೋಭಾಕರಣವಾಗಿರುವ ಧರ್ಮವೇ ಗುಣ; ಅವು ಪೂರ್ವಕವಿಗಳು ನಿರೂಪಿಸಿದ ವಿಚಿತ್ರಮಾರ್ಗಗಳೆನಿಸಿವೆ.'

೧. ಮಾರ್ಗವಿಭಾಗ ದರ್ಶನ ಪ್ರಕರಣಂ:

ಸಮ, ಸಂಶ್ಲಿಷ್ಟ, ಅರ್ಥವ್ಯಕ್ತಿ, ಮಧುರ, ಕಾಂತ, ಪ್ರಸನ್ನ, ಸುಕುಮಾರ, ಓಜಸ್ಸು, ಉದಾರ, ಸಮಾಧಿ ಎಂಬ ಹತ್ತು ಗುಣಗಳನ್ನು ನಾಗವರ್ಮನು ಗುರುತಿಸಿ ವಿಶ್ಲೇಷಿಸುತ್ತಾನೆ.

ಸಮ: ಪದಬಂಧವು ಸಡಿಲವೂ, ಬಿಗಿಯೂ ಆಗಿರದೇ ಏಕರೀತಿಯಾಗಿರುವುದೇ ಸಮ. ಉದಾ: ಮೃದು, ಸ್ಫುಟ, ಮಿಶ್ರ.

ಸಂಶ್ಲಿಷ್ಟ: ಮೃದು ಪದಗಳಿಂದಲೇ ರಚನೆಗೊಂಡರೂ ಪದಬಂಧವು ಶಿಥಿಲವಾಗದೇ ಬಿಗಿಯಾಗಿರುವುದೇ ಸಂಶ್ಲಿಷ್ಟ.

ಅರ್ಥವ್ಯಕ್ತಿ: ಪದ್ಯದ ಅರ್ಥವು ಪದಗಳಿಂದಲೇ ಸ್ಪಷ್ಟವಾಗುವಂತಿರುವುದೇ ಅರ್ಥವ್ಯಕ್ತಿ.

ಮಧುರ: ಪದಗಳು ಕಿವಿಯ ಮೇಲೆ ಬೀಳುವಾಗಲೇ ಮನಸ್ಸುಗಳನ್ನು ಸೆಳೆಯುವುದು.

ಕಾಂತಗುಣ: ಅಗ್ರಾಮ್ಯ ಪದಸಮುದಾಯಗಳಿಂದ ರಸಭರಿತವಾದ ಮಧುರ ಪದಬಂಧ.

ಪ್ರಸನ್ನ: ರೂಢಿಗತವಾದ ಪದಸಮುದಾಯದಿಂದ ರಚಿತವಾಗಿರುವುದು.

ಸುಕುಮಾರ: ಪುರುಷಾಕ್ಷರಗಳಿಲ್ಲದೇ ಲಲಿತ ಪದಪುಂಜಗಳಿಂದಾದುದೇ ಸುಕುಮಾರತ್ವ.

ಓಜೋಗುಣ: ದೀರ್ಘ ಸಮಾಸಗಳಿಂದ ಬಿಗಿಯಾಗಿರುವುದೇ ಓಜೋಗುಣ.

ಉದಾರಗುಣ: ಲೋಕೋತ್ತರವಾದ ವರ್ಣನೆಗಳಿಂದ ಕೂಡಿದ್ದು ಅತ್ಯುತ್ಕರ್ಷವನ್ನು ತರುವುದು.

---

೪೯. ಎಮ್. ಎಸ್. ಬಸವಲಿಂಗಯ್ಯ, ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ.೯೦
೫೦. ಡಾ. ಎಂ. ಮಹ್ಮದ್ ಭಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೯೪

ಸಮಾಧಿ: ಒಂದು ವಸ್ತುವಿನ ಧರ್ಮವನ್ನು ಮತ್ತೊಂದು ವಸ್ತುವಿನಲ್ಲಿ ಆರೋಪಿಸುವುದೇ ಸಮಾಧಿತ್ವ.

ಹೀಗೆ ಒಟ್ಟು ೧೦ ಕಾವ್ಯಗುಣಗಳನ್ನು ನಾಗವರ್ಮನು ತಿಳಿಸುತ್ತಾನೆ.

೨. ಶಬ್ದಾಲಂಕಾರ ನಿರ್ಣಯಪ್ರಕರಣಂ:

ನಿಸರ್ಗ ಸುಂದರಿಯಾದ ಕಾವ್ಯಕನ್ನಿಕೆಗೆ ಶಬ್ದಾಲಂಕಾರ ಹಾಗೂ ಅರ್ಥಾಲಂಕಾರಗಳೆಂದು ಎರಡು ಬಗೆಯ ಅಲಂಕಾರಗಳಿವೆ ಎಂದು ನಾಗವರ್ಮನು ಹೇಳುತ್ತಾನೆ.

ಸೂತ್ರಂ ೧೨೬॥ **"ಅವಱೊಳ್ ಶಬ್ದಾಲಂಕಾ**
ರ ವಿಭಾಗಂ ಯಮಕಮೆಸೆವನುಪ್ರಾಸಂ ಚಿ
ತ್ರವಿಚಿತ್ರಭಿತ್ತಿ ವಕ್ರೋ
ಕ್ತಿ ವಿಶೇಷಮುಮೆನೆ ಚತುರ್ವಿಧಂ ತಾನಕ್ಕುಂ ॥೩.೫೨೪॥"[೫೧]

ಶಬ್ದಾಲಂಕಾರಗಳಲ್ಲಿ ನಾಲ್ಕು ವಿಧಗಳನ್ನು ತಿಳಿಸುತ್ತಾನೆ.

ಯಮಕ: ಅವ್ಯವಹಿತವಾಗಿಯಾಗಲೀ ಇಲ್ಲವೇ ವ್ಯವಹಿತವಾಗಿಯಾಗಲೀ ಪ್ರಯೋಗವಾದ ಪದಸಮುದಾಯದ ಆವೃತ್ತಿಯೇ ಯಮಕ.

ಅನುಪ್ರಾಸ: ಪದದಲ್ಲಾಗಲೀ, ಪಾದದಲ್ಲಾಗಲೀ ಸಾದೃಶಾಕ್ಷರಗಳ ಅಥವಾ ಸವರ್ಣಾಕ್ಷರಗಳ ಪುನರಾವರ್ತನೆಯೇ ಅನುಪ್ರಾಸ.

ಚಿತ್ರ: ಪದ್ಯದಲ್ಲಿ ಪದಗಳನ್ನು ಯಾವುದಾದರೊಂದು ಆಕೃತಿಯಾಗುವಂತೆ ವಿನ್ಯಾಸಗೊಳಿಸುವುದು.

ವಕ್ರೋಕ್ತಿ: ಪದವಿಂಗಡನೆಗೆ ಒಡಂಬಟ್ಟು ಭಿನ್ನವಾದ ಅರ್ಥಾಂತರಗಳನ್ನು ನೀಡುವುದೇ ವಕ್ರೋಕ್ತಿ.

೩. ಅರ್ಥಾಲಂಕಾರ ಪ್ರಕರಣಂ:

"ಉಕ್ತಿ, ವೈಚಿತ್ರ್ಯ ವಶದಿಂದ ಅರ್ಥಾಲಂಕಾರಗಳು ಹಲವು ಬಗೆಯಲ್ಲಿವೆ. ಆದರೂ ಅವುಗಳ ಮೂಲವು ವಾಸ್ತವ, ಉಪಮೆ, ಅತಿಶಯೋಕ್ತಿ ಮತ್ತು ಶ್ಲೇಷ ಎಂದು ನಾಲ್ಕು ವಿಧಗಳು. ವಿಶೇಷವೆಂದರೆ ಎಲ್ಲಾ ಬಗೆಯ ಅಲಂಕಾರಗಳಲ್ಲೂ ಮೇಲೆ ಹೇಳಿದ ಈ ನಾಲ್ಕರಲ್ಲಿ ಯಾವುದಾರೊಂದು ಛಾಯೆ ಇದ್ದೇ ಇರುತ್ತದೆ. ಅಲಂಕಾರಕ್ಕೆ ಸಾಮಾನ್ಯ ಸ್ಥಿತಿಯಲ್ಲೂ ಚಮತ್ಕೃತಿ, ವಿಶೇಷ ಇರಬೇಕು. ಇಲ್ಲವಾದರೆ ಅದು ಅಲಂಕಾರ ಎನಿಸುವುದಿಲ್ಲ. ಗುಣರಹಿತವಾದ ಕಾವ್ಯದಲ್ಲಿರುವ ಅಲಂಕಾರವು ವಿಡಂಬನೆಯಾಗುವುದು. ಅಲಂಕಾರದಿಂದ ಅರ್ಥಭಾವಗಳು ಹೆಚ್ಚು ಉಜ್ವಲವಾಗಿ ಬೆಳಗುವಂತಿರಬೇಕು ಎಂದು ಹೇಳುವ ನಾಗವರ್ಮ, ಈ ಕುರಿತು ಅರ್ಥಾಲಂಕಾರ ಪ್ರಕರಣದಲ್ಲಿ ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾನೆ."[೫೨]

ವಾಸ್ತವ:

ಸೂತ್ರಂ ೧೪೫॥ **"ಜಾತಿ ಸಹೋಕ್ತಿ ಭಾವ ಪರಿವೃತ್ತಿ ಯಥಾಕ್ರಮ ಪರ್ಯಾಯಾವಳೀ**
ಹೇತು ಸಮುಚ್ಚಯಾನುಮಿತಿ ಸೂಕ್ಷ್ಮಲವ ವ್ಯತಿರೇಕ ದೀಪಕಾ

೫೧. ಎಮ್. ಎಸ್. ಬಸವಲಿಂಗಯ್ಯ, ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ.೯೫
೫೨. ಡಾ. ಎಂ. ಮಹ್ಮದ್ ಭಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೯೮

ಖ್ಯಾತಿ ಸಮಾಹಿತಾವೃತಿ ಪರಸ್ತಪರ ಸಾರ ನಿಮೀಲನಂಗಳೆಂ

ದೀ ತೆಱದಿಂದಮೊಂದಿ ನೆಗೞ್ಗಂ ನೆಱೆ ವಾಸ್ತವಭೇದವೃತ್ತಿಗಳ್ ॥೩.೬೦೭॥”[೫೩]

ವಸ್ತುವಿನ ಸ್ವಭಾವವೇ ಸ್ವಭಾವೋಕ್ತಿ. ಇದರಿಂದ ಚಮತ್ಕಾರವುಂಟಾಗುವುದು. ಇದರಲ್ಲಿ ಜಾತಿ, ಸಹೋಕ್ತಿ, ಭಾವ, ಪರಿವೃತ್ತಿ, ಯಥಾಕ್ರಮ, ಪರ್ಯಾಯ, ಆವಳಿ, ಹೇತು, ಸಮುಚ್ಚಯ, ಅನುಮಿತಿ, ಸೂಕ್ಷ್ಮ, ಲವ, ವ್ಯತಿರೇಕ, ದೀಪಕ, ಸಮಾಹಿತ, ಆಕೃತಿ, ಪರಸ್ಪರ, ಸಾರ, ನಿಮೀಲನ ಎಂದು ವಾಸ್ತವ ಭೇದಗಳನ್ನು ನಾಗವರ್ಮನು ಗುರುತಿಸುತ್ತಾನೆ.

ಮುಂದುವರೆದು ಉಪಮಾ, ಪ್ರತಿ ವಸ್ತೂಪಮೆ, ರೂಪಕ, ಸಮಾಸೋಕ್ತಿ, ಕ್ರಮ, ಆಕ್ಷೇಪ, ಸಾಮ್ಯ, ಪರಾಖ್ಯಾನ, ನಿದರ್ಶನ, ಉತ್ತರ, ಸಂದೇಹ, ಭ್ರಮ, ಅಪಹ್ನುತಿ, ವ್ಯಪದೇಶ, ಸ್ಮರಣ, ಪ್ರತೀಪ, ಸಮಯೋಗ, ಅಪ್ರಸ್ತುತ ಹಾಗೂ ಅರ್ಥಾಂತರನ್ಯಾಸ ಎಂದು ಹತ್ತೊಂಭತ್ತು ಪ್ರಕಾರದ ಉಪಮಾ ಮೂಲದ ಅಲಂಕಾರಗಳನ್ನು ಗುರುತಿಸುತ್ತಾನೆ (ಸೂತ್ರಂ–೧೫೮). “ಈ ಅಲಂಕಾರಗಳಲ್ಲಿ ಉಪಮಾಲಂಕಾರದ ಹೊರತು ಉಳಿದವುಗಳಲ್ಲಿ ಉಪಮೆಯು ಧ್ವನಿತವಾಗುತ್ತಿದ್ದರೂ ಧ್ವನ್ಯಮಾನವಾದ ಉಪಮೆಗಿಂತ ವಾಚ್ಯಕಕ್ಷೆಯಲ್ಲಿ ತೋರುವ ಅರ್ಥವೇ ಹೆಚ್ಚು ಚಮತ್ಕಾರ ವಿಶಿಷ್ಟವಾಗಿರುತ್ತದೆ. ಇವುಗಳಲ್ಲಿ ವ್ಯಂಗ್ಯವು ಗೌಣವಾಗಿ, ಗುಣೀಭೂತ ವ್ಯಂಗವು ಅಲಂಕಾರಗಳೆಂದು ಕರೆಸಿಕೊಳ್ಳುತ್ತವೆ.”[೫೪]

ಉಪಮೆ:

ಪ್ರಕೃತಿಯಲ್ಲಿರುವ ವಸ್ತುಗಳೆಲ್ಲ ಭಿನ್ನವಾಗಿದ್ದರೂ ಅವುಗಳಲ್ಲಿ ಒಂದಕ್ಕೆ ಇನ್ನೊಂದು ಸಾದೃಶವಾಗಿ ತೋರುತ್ತವೆ. ಅವುಗಳನ್ನು ಪರಸ್ಪರ ಹೋಲಿಸಿ ಹೇಳುವುದೇ ಉಪಮೆ. ಸಾದೃಶ ಉಪಮೆಗಳು ಪ್ರಯೋಜಕವಾಗುವುದಿಲ್ಲ. ವರ್ಣನೆಗೆ ಪ್ರಕೃತ ವಸ್ತುವೇ ಉಪಮೆ. “ಅಪ್ರಕೃತವಾದ ವಸ್ತುವಿಗಿಂತ ಭಿನ್ನವಾದ ಚಮತ್ಕಾರ ಉಂಟಾಗುವಂತೆ ಉಪಮಾನಕ್ಕೆ ಎಣೆಯಾಗಿ ಬಂದರೆ ಉಪಮಾಲಂಕಾರವಾಗುವುದು. ಉಪಮಾನವು ಉಪಮೇಯಕ್ಕಿಂತ ಗುಣದಲ್ಲಿ ಅಧಿಕವಾಗಿರಬೇಕು. ಸಾದೃಶ್ಯವೂ ಅನೇಕ ವಿಷಯಗತವಾಗಿರುವುದರಿಂದ ಇದರಲ್ಲಿ ಅನೇಕ ಭೇದಗಳುಂಟು. ಉದಾ: ಧರ್ಮ, ಹೇತು, ವಸ್ತುರೂಪ ಇವುಗಳಿಂದ ಸಾದೃಶ್ಯವನ್ನು ಹೇಳಿದರೆ ಅವು ಧರ್ಮೋಪಮೆ, ಹೇತೋಪಮೆ ಮತ್ತು ವಸ್ತೂಪಮೆ ಎಂದು ಕರೆಸಿಕೊಳ್ಳುತ್ತವೆ.”[೫೫]

ಶ್ಲೇಷೋಪಮೆ: ಒಂದು ವಸ್ತುವಿನ ಸಾದೃಶ್ಯವನ್ನು ಇನ್ನೊಂದು ವಸ್ತುವಿಗೆ ಕಲ್ಪಿಸುವುದು. ಅನ್ಯೋನ್ಯೋಪಮೆ, ವಿಪರ್ಯಾಸೋಪಮೆ, ಬಹೂಪಮೆ, ಮಾಲೋಪಮೆ, ಕಲ್ಪಿತೋಪಮೆ, ವಾಕ್ಯೋಪಮೆ, ಪ್ರತ್ಯಯೋಪಮೆ, ಸಮಾಸೋಪಮೆಗಳನ್ನು ಇದರಲ್ಲಿ ಗುರುತಿಸಲಾಗಿದೆ.

---

೫೩. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೧೩೧

೫೪. ಡಾ. ಎಂ. ಮಹ್ಮದ್ ಭಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೯೮

೫೫. ಅದೇ ; ಪುಟ. ೯೮

ಉಪಮಾದೋಷಂಗಳ್ (ಸೂತ್ರ–೧೬೦): ಲಿಂಗದೋಷ, ವಚನದೋಷ, ಅಧಿಕೋಪಮೆ, ಅಸಾದೃಶ್ಯ ಎಂದು ಉಪಮಾದೋಷಗಳನ್ನು ನಾಗವರ್ಮನು ಉಲ್ಲೇಖಿಸುತ್ತಾನೆ.

ರೂಪಕ (ಸೂತ್ರ–೧೬೧): ಸಾಮ್ಯಪ್ರತೀತಿಯಿಂದ ಸಮಾನವಸ್ತುವಿನಲ್ಲಿ ಭೇದವನ್ನು ತೋರದೇ ಪ್ರತಿಪಾದಿಸುವುದೇ ರೂಪಕ. ಇದರಲ್ಲಿ ಪ್ರತಿವಸ್ತೂಪಮೆ, ಅಸಮಸ್ತರೂಪಕ, ಸಮಸ್ತರೂಪಕ, ವಿಭಕ್ತಿರೂಪಕ, ಸಾವಯವರೂಪಕ, ನಿರವಯವರೂಪಕ, ಸಕಲರೂಪಕ, ಹೇತುರೂಪಕ, ರೂಪಕರೂಪಕ, ಮಾಲಾರೂಪಕ ಹಾಗೂ ವಿಶೇಷಗುಣ ರೂಪಕಗಳನ್ನು ಉಲ್ಲೇಖಿಸುತ್ತಾನೆ.

ಸಮಾಸೋಕ್ತಿ (ಸೂತ್ರ–೧೬೨): ಸಮಾಸ ವಿಶೇಷಣವುಳ್ಳ ಉಪಮಾನ ಕಥನ ಮಾತ್ರದಿಂದಲೇ ಉಪಮೇಯವಾಗುವುದು. ಇಲ್ಲಿ ವ್ಯಂಗ್ಯಾರ್ಥಕ್ಕಿಂತ ವಾಚ್ಯಾರ್ಥವೇ ಚಮತ್ಕಾರಪೂರ್ಣವಾಗುವುದು.

ಆಕ್ಷೇಪ: "ಪ್ರತಿಷೇಧಪರವಾದ ಉಕ್ತಿಯಿಂದ ವಸ್ತುಸ್ಥಿತಿಯನ್ನು ಖಂಡಿಸಿದಂತೆ ನುಡಿಯುವುದು."[೫೬]

ಸಾಮ್ಯ (ಸೂತ್ರ–೧೬೩): ಪ್ರಸಿದ್ಧವಾದ ವಸ್ತುವಿನೊಂದಿಗೆ ಸಾಮ್ಯವನ್ನು ಹೋಲಿಸಿ, ನಾವೀನ್ಯವನ್ನುಂಟು ಮಾಡುವುದು.

ಪರಾಖ್ಯಾನ: ಅಸಮಾನ ವಿಶೇಷಣ ಗುಣಸಮವಾದ ಉಪಮಾನಗಳಿಂದಲೇ ಮತ್ತೊಂದು ವಸ್ತುವಿಗೆ ಹೋಲಿಸುವುದು.

ದೃಷ್ಟಾಂತ (ಸೂತ್ರ–೧೬೪): ಉಪಮೇಯದಲ್ಲಿ ಹೇಳಿದ ಅರ್ಥವನ್ನೇ ಅಪ್ರಕೃತವಾದುದರಲ್ಲಿ ಸಾದೃಶ್ಯವಾಗುವಂತೆ ನಿರೂಪಿಸುವುದು.

ಸಂಶಯ (ಸೂತ್ರ–೧೬೫): ಇದು ಉಪಮೇಯವೋ ಅಥವಾ ಉಪಮಾನವೋ ಎಂದು ಸಂದೇಹವುಂಟಾಗುವುದು.

ಅಪಹ್ನುತಿ: ನೈಜತೆಯನ್ನು ಮರೆಮಾಚಿ ಇಲ್ಲವೇ ಅಲ್ಲಗಳೆದು ಇನ್ನೊಂದು ಸಾದೃಶ್ಯದೊಂದಿಗೆ ಆರೋಪಿಸುವುದು.

ವ್ಯಪದೇಶ (ಸೂತ್ರ–೧೬೬): ನ್ಯಗ್ನಭೂತವಾದ ಉಪಮೇಯದ ಸ್ಥಾನದಲ್ಲಿ ಉಪಮಾನವೇ ಪ್ರಧಾನವೆಂಬಂತೆ ವರ್ಣಿಸುವುದು.

ಸ್ಮರಣ: ಪ್ರಸ್ತುತ ಸಾದೃಶ್ಯದಿಂದ ಅಪ್ರಸ್ತುತ ಸ್ಮರಣೆಯುಂಟಾಗುವುದು.

ಪ್ರತೀಪ (ಸೂತ್ರ–೧೬೭): ಅನುಕಂಪದಿಂದ ಇಲ್ಲವೇ ಕುತ್ಸಿತಭಾವದಿಂದ ಪ್ರಸ್ತುತಕ್ಕೆ ಅಪ್ರಸ್ತುತತೆಯನ್ನು ಸಾಮ್ಯವಾಗಿ ಹೇಳುವುದು.

ಸಮಯೋಗ: ಪ್ರಸ್ತುತ, ಅಪ್ರಸ್ತುಗಳ ಗುಣದೋಷಗಳ ಸಾಮ್ಯತೆಗಳನ್ನು ಒಂದೇ ಎಂದು ಪ್ರತಿಪಾದಿಸುವುದು.

ಅಪ್ರಸ್ತುತ ಪ್ರಶಂಸೆ (ಸೂತ್ರ–೧೬೮): ಅಪ್ರಸ್ತುತ ವಿಷಯವನ್ನು ಪ್ರಶಂಸಿಸುವಾಗಲೇ ಪ್ರಸ್ತುತಾರ್ಥವು ಗೋಚರಿಸುವುದು.

---

೫೬. ಡಾ. ಎಂ. ಮಹ್ಮದ್ ಬಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೧೦೦

ಅರ್ಥಾಂತರನ್ಯಾಸ: ಪ್ರಸ್ತುತ ವಿಷಯವನ್ನು ಸಮರ್ಥಿಸಲು ಇನ್ನೊಂದು ವಿಷಯವನ್ನು ಪ್ರಸ್ತಾಪಿಸುವುದು.

ಅತಿಶಯ (ಸೂತ್ರ-೧೬೯): ಒಂದು ವಿಷಯವನ್ನು ಅಥವಾ ವಸ್ತುವನ್ನು ಲೋಕಾರೂಢಿಗಿಂತಲೂ ಅತೀ ಹೆಚ್ಚೆಂದು ವರ್ಣಿಸುವುದು. ಇದರಲ್ಲಿ ವಿರೋಧ ಮತ್ತು ಉತ್ಪ್ರೇಕ್ಷೆಗಳೆಂದು ಭೇದಗಳನ್ನು ನಾಗವರ್ಮನು ಉಲ್ಲೇಖಿಸುತ್ತಾನೆ.

ಮುಂದುವರೆದು, ವಿಭಾವನೆ, ವಿರೋಹಿತ, ಪೂರ್ವ, ಅಹೇತು, ತದ್ಗುಣ, ಪರಸ್ಪರಾಸಂಗತಿ, ವಿಶೇಷೋಕ್ತಿ, ಶಬ್ದಶ್ಲೇಷ, ತತ್ತ್ವ, ವ್ಯಾಜಸ್ತುತಿ, ವಿರೋಧಾಭಾಸ, ಅವಯವ, ಅಧಿಕ, ಅವಿಶೇಷ, ಅಸಂಭವ, ಭಂಗಶ್ಲೇಷ, ವಕ್ರೋಕ್ತಿಗಳನ್ನೂ ಉಲ್ಲೇಖಿಸುತ್ತಾನೆ.

೩) ಚತುರ್ಥ ಅಧಿಕರಣಂ : ರೀತಿಕ್ರಮ ರಸ ನಿರೂಪಣಾಧಿಕರಣಂ

ನಾಗವರ್ಮನು ಪ್ರಸ್ತುತ ನಾಲ್ಕನೆಯ ಅಧಿಕರಣದಲ್ಲಿ ರೀತಿ, ಕ್ರಮ ಹಾಗೂ ರಸ ಪ್ರಕರಣಗಳನ್ನು ಕುರಿತು ಚರ್ಚಿಸಿದ್ದಾನೆ.

೧. ರೀತಿ ಪ್ರಕರಣಂ:

ಸೂತ್ರ-೧೮೭: **“ರೀತಿ ವಿನೂತವಸ್ತುಕೃತಿಗೊಪ್ಪುವ ಮೆಯ್ ರಸಭಾವವೃತ್ತಿನಿ**
ರ್ಣೀತಿಯೆ ಜೀವಮಂತದಱೆನನ್ವಿತನಪ್ಪ ಕವೀಶ್ವರಂ ಬುಧ
ವ್ರಾತಮೊಱಲ್ದು ಬಿಚ್ಚಟಿಸಿ ನಚ್ಚುವಳಂಕೃತಿ ಕೂಡದಿರ್ದೊಡಂ
ರೀತಿಯೊಳೊಂದೆ ಪೇೞ್ವುದು ರಸಂ ಬಿಡೆ ಬಂಧುರಕಾವ್ಯ ಬಂಧಮಂ ॥೪.೭೮೦॥”[೫೭]

ವಿಶಿಷ್ಟವಾದ ಪದರಚನೆ ಅಥವಾ ಶೈಲಿಯೇ ರೀತಿ ಎಂಬುದು ನಾಗವರ್ಮನ ಅಭಿಮತವಾಗಿದೆ. ಹೀಗಿರುವ ಕಾವ್ಯಕಲೆಯಲ್ಲಿ ವೈದರ್ಭೀ, ಪಾಂಚಾಲೀ ಹಾಗೂ ಗೌಡೀ ಎಂಬ ರೀತಿಗಳನ್ನು ಗುರುತಿಸಿ, ಯಾವ ರೀತಿಯ ಕಾವ್ಯಶೈಲಿಯು ಯಾವ ರಸನಿರೂಪಣೆಗೆ ಬಂಧುರವಾದುದು ಎಂದು ವಿವರಿಸುತ್ತಾನೆ.

ವೈದರ್ಭೀ (ಸೂತ್ರ-೧೮೯): ಅಸಮಸ್ತ ಪದಪ್ರಯೋಗ ಮಾಡುವುದೇ ವೈದರ್ಭೀ. ಇದು ಶೃಂಗಾರ, ಕರುಣ, ಹಾಸ್ಯರಸಗಳ ನಿರೂಪಣೆಗೆ ಯೋಗ್ಯವಾದುದು.

ಪಾಂಚಾಲೀ (ಸೂತ್ರ-೧೯೦): ಎರಡು ಮೂರು ಅಕ್ಷರಗಳಿಂದಾದ ಸಣ್ಣ ಸಣ್ಣ ಪದಗಳಿದ್ದು, ವಿಚಿತ್ರ ಅಲಂಕಾರಗಳಿಂದ ಕೂಡಿರುವುದು. ಇದು ಅದ್ಭುತ ರಸ ಮತ್ತು ವೀರರಸಗಳ ನಿರೂಪಣೆಗೆ ಯೋಗ್ಯವಾದುದು.

ಗೌಡೀ (ಸೂತ್ರ-೧೯೧): ದೀರ್ಘಸಮಾಸಗಳಿಂದ ಕೂಡಿರುವುದೇ ಗೌಡರೀತಿ. ಇದು ಅದ್ಭುತ, ರೌದ್ರ, ಭಯಾನಕ ಹಾಗೂ ಭೀಭತ್ಸ ರಸಗಳ ನಿರೂಪಣೆಗೆ ಯೋಗ್ಯವಾದುದು.

---

೫೭. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೧೬೯

೨. ರಸಪ್ರಕರಣಂ:

"ವಿಭಾವಾನುಭಾವ ವ್ಯಭಿಚಾರಿ ಸಂಯೋಗಾದ್ರಸನಿಷ್ಪತ್ತಿಃ"[೫೮] ಎಂಬುದು ಭರತನ ಪ್ರಸಿದ್ಧ ಉಕ್ತಿಯಾಗಿದೆ. ಭಾವ, ವಿಭಾವ, ಅನುಭಾವ, ಸಂಚಾರಿಭಾವಗಳ ಸಂಯೋಗದಿಂದ ರಸ ನಿಷ್ಪನ್ನವಾಗುವುದು ಎನ್ನುತ್ತಾನೆ. ಶೃಂಗಾರ, ಹಾಸ್ಯ, ಕರುಣ, ವೀರ, ಭಯಾನಕ, ರೌದ್ರ, ಭೀಭತ್ಸ ಹಾಗೂ ಅದ್ಭುತಗಳೆಂದು ಎಂಟು ರಸಗಳನ್ನು ಪ್ರಸ್ತಾಪಿಸುತ್ತಾನೆ. ಅಂತೆಯೇ ಎರಡನೆಯ ನಾಗವರ್ಮನೂ ಕೂಡ ತನ್ನ 'ಕಾವ್ಯಾವಲೋಕನ' ಅಲಂಕಾರ ಗ್ರಂಥದಲ್ಲಿಯೂ ಈ ಎಂಟು ರಸಗಳನ್ನೇ ಪ್ರಸ್ತಾಪಿಸುತ್ತಾನೆ. ಆ ಎಂಟು ರಸಗಳಿಗೆ ಈ ಮುಂದಿನಂತೆ ಸ್ಥಾಯೀಭಾವಗಳನ್ನು ಹೇಳುತ್ತಾನೆ.

ಸೂತ್ರ-೧೯೬: **"ರತಿ ಪರಿಹಾಸಂ ಶೋಕೋ**
ದ್ಗತಮುತ್ಸಾಹಂ ಭಯಂ ಪ್ರಕೋಪಂ ವಿಜುಗು
ಪ್ಸತೆ ವಿಸ್ಮಯಾಶಯತ್ವಂ
ಪ್ರತಿನಿಯತಸ್ಥಾಯಿಭಾವಮಿವು ತಾಮಕ್ಕುಂ ॥೪.೭೪॥"[೫೯]

ರತಿ, ಹಾಸ, ಶೋಕ, ಉತ್ಸಾಹ, ಭಯ, ಕ್ರೋಧ, ಜುಗುಪ್ಸೆ ಹಾಗೂ ವಿಸ್ಮಯಗಳೆಂದು ಎಂಟು ರಸಗಳಿಗೆ ಎಂಟು ಸ್ಥಾಯೀಭಾವಗಳಿವೆ.

ಸೂತ್ರ-೧೯೭: **"ಮತಿ ನಿರ್ವೇದಾವಹಿತ್ಥಶ್ರಮ ಮದ ಜಡತಾ ಗ್ಲಾನಿ ಚಿಂತೋಗ್ರತೇರ್ಷ್ಯಾ**
ಧೃತಿ ನಿದ್ರಾವೇಗ ಶಂಕಾತ್ರಸನಚಪಲತಾಲಸ್ಯಸುಪ್ತಾವ ಬೋಧ
ಸ್ಮೃತಿಗರ್ವಾಮರ್ಷದೈನ್ಯೋತ್ಸುಕ ರತಿಮುದಪಸ್ಮಾರಲಜ್ಜಾ ವಿಷಾದ
ಸ್ಥಿತಿ ಚಿತ್ತಭ್ರಂಶ ಮೋಹಾಮಯಮೃತಿಗಳಿವಿಂತೆಯ್ದೆಸಂಚಾರಿ ಭಾವಂ ॥೪.೭೫॥"[೬೦]

ಮತಿ, ನಿರ್ವೇದ, ಅವಹಿತ, ಶ್ರಮ, ಮದ, ಜಡತೆ, ಗ್ಲಾನಿ (ಬಳಲಿಕೆ), ಚಿಂತೆ, ಉಗ್ರತೆ, ಈರ್ಷೆ (ಅಸೂಯೆ), ಧೃತಿ, ನಿದ್ರೆ, ಆವೇಗ, ಶಂಕೆ, ತ್ರಸನ, ಚಪಲತೆ, ಆಲಸ್ಯ, ಸುಪ್ತ, ಬೋಧ, ಸ್ಮೃತಿ, ಹರ್ಷ, ಗರ್ವ, ದೈನ್ಯತೆ, ಉತ್ಸುಕತೆ, ರತಿ, ಮುದ, ಅಪಸ್ಮಾರ, ಲಜ್ಜೆ, ವಿಷಾದ, ಚಿತ್ತಭ್ರಮೆ, ಮೋಹ ಹೀಗೆ ಭರತನು 'ನಾಟ್ಯಶಾಸ್ತ್ರದಲ್ಲಿ ಹೇಳಿರುವಂತೆಯೇ ನಾಗವರ್ಮನೂ ಮೂವತ್ತಮೂರು ಸಂಚಾರಿ ಅಥವಾ ವ್ಯಭಿಚಾರಿ ಭಾವಗಳನ್ನು ಉಲ್ಲೇಖಿಸುತ್ತಾನೆ. ಈ ವಿಭಾವ, ಅನುಭಾವ ಹಾಗೂ ಸಂಚಾರಿಭಾವಗಳಿಂದಲೇ ರಸನಿಷ್ಪನ್ನವಾಗುವುದು ಎಂದು ಭರತನು ಪ್ರತಿಪಾದಿಸುತ್ತಾನೆ. ಅಂತೆಯೇ ನಾಗವರ್ಮನೂ ಕೂಡ. ಹೀಗಾಗಿ :

ಸೂತ್ರ-೨೦೦: **"ಭಾವಂ ವಿಭಾವಮೆಸೆವನು**
ಭಾವಂ ಸಂಚಾರಿಭಾವಮೆಂದಿಂತಿವಚೆಂ

---

೫೮. ಪ್ರೊ. ತೀ. ನಂ. ಶ್ರೀಕಂಠಯ್ಯ : **ಭಾರತೀಯ ಕಾವ್ಯಮೀಮಾಂಸೆ** ; ಪುಟ.೨೬೫
೫೯. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೧೭೩
೬೦. ಎಮ್. ಎಸ್. ಬಸವಲಿಂಗಯ್ಯ, ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ.೧೪೬

ದಾವಿಷ್ಕೃತಮಕ್ಕುಂ ರಸ
ಮಾವುದುಮೆಂದಱಿಗೆ ಭರತಶಾಸ್ತ್ರಕ್ರಮದಿಂ ॥೪.೭೮॥"[೬೧]

ಎಂದು ಹೇಳಿ ನಾಗವರ್ಮನು ಭರತನ ಮಾತನ್ನು ಪುಷ್ಠೀಕರಿಸುತ್ತಾನೆ.

ಶೃಂಗಾರರಸ: ಸ್ತ್ರೀ ಪುರುಷರ ಅನ್ಯೋನ್ಯತೆ, ಅನುರಾಗಗಳನ್ನು ನಿರೂಪಿಸುವುದು. ಇದರಲ್ಲಿ ಎರಡು ಭೇದಗಳಿವೆ. ಸ್ತ್ರೀ ಪುರುಷರ ಸಮಾಗಮವನ್ನು ನಿರೂಪಿಸುವುದು ಸಂಭೋಗ ಶೃಂಗಾರ. ಸ್ತ್ರೀ ಪುರುಷರ ವಿರಹ ಚಿತ್ರಣವನ್ನು ನಿರೂಪಿಸುವುದು ವಿಪ್ರಲಂಭ ಶೃಂಗಾರ.

ಹಾಸ್ಯರಸ: ವಿಕಾರವಾದ ಅಂಗ, ವೇಷ, ಭಾಷೆಗಳಿಂದ ನಗುವನ್ನು ತರಿಸುವುದು. ಇದರಲ್ಲಿ ಉತ್ತಮ, ಮಧ್ಯಮ, ಜಘನ್ಯವೆಂದು ಭೇದಗಳಿವೆ.

ಕರುಣರಸ: ತನಗಿಷ್ಟವಾದುದು ದೂರವಾದಾಗ ಶೋಕಿಸುವುದು.

ವೀರರಸ: ಕೀರ್ತಿಸಂಪಾದನೆಗೆ ಉತ್ಸಾಹವನ್ನು ತೋರುವುದು.

ರೌದ್ರರಸ: ನಿಂದೆ, ಅಪಮಾನಗಳಿಂದ ರೋಷಾವಿಷ್ಟವಾಗುವುದು.

ಭಯಾನಕರಸ: ಭೀತಿಯುಂಟಾದಾಗ ತಳೆಯುವ ಭಾವ.

ಭೀಭತ್ಸ ರಸ: ಮನಸ್ಸಿಗೆ ಅಸಹ್ಯವಾಗಿ ವಿರಕ್ತಿಯನ್ನು ಹೊಂದುವುದು.

ಅದ್ಭುತರಸ: ತನ್ನಿಂದಾಗಲೀ ಇಲ್ಲವೇ ಪರರಿಂದಾಗಲೀ ಉಂಟಾಗುವ ಆಶ್ಚರ್ಯಕರ ಘಟನೆಗಳಿಗೆ ಬೆರಗಾಗುವುದು.

ಹೀಗೆ ಎಂಟು ರಸಗಳನ್ನು ನಿರೂಪಿಸಿ ಅವುಗಳ ವರ್ಣಗಳನ್ನೂ ತಿಳಿಸುತ್ತಾನೆ.

ಕೋಷ್ಟಕ ೪.೧

ಕ್ರ. ಸಂ.	ರಸ	ಸ್ಥಾಯೀಭಾವ	ವರ್ಣ
೧	ಶೃಂಗಾರ	ರತಿ	ಶ್ಯಾಮಲ ವರ್ಣ
೨	ಹಾಸ್ಯ	ಹಾಸ	ಶ್ವೇತ ವರ್ಣ
೩	ಕರುಣ	ಶೋಕ	ಕಪೋತವರ್ಣ
೪	ವೀರ	ಉತ್ಸಾಹ	ಕೆಂಪು
೫	ರೌದ್ರ	ಕ್ರೋಧ	ರಕ್ತ ವರ್ಣ
೬	ಭಯಾನಕ	ಭಯ	ಕಪ್ಪು
೭	ಭೀಭತ್ಸ	ಜುಗುಪ್ಸೆ	ನೀಲವರ್ಣ
೮	ಅದ್ಭುತ	ವಿಸ್ಮಯ	ಸ್ವರ್ಣವರ್ಣ

ವಿರೋಧಿರಸಗಳು: ಒಂದು ರಸದ ವಿವರಣೆ ಮಾಡುವಾಗ ಕೆಲವೊಂದು ರಸಗಳು ಬಂದರೆ ಅಲ್ಲಿ ವಿರೋಧವುಂಟಾಗುತ್ತದೆ. ಶೃಂಗಾರ–ಭೀಭತ್ಸ, ಶೃಂಗಾರ–ಕರುಣ, ಶೃಂಗಾರ–ಶಾಂತ, ವೀರ ಭಯಾನಕ, ಶಾಂತ–ರೌದ್ರ ಇವುಗಳು ನಾಗವರ್ಮನ ಪ್ರಕಾರ ಪರಸ್ಪರ ವಿರೋಧರಸಗಳಾಗಿವೆ.

---

೬೧. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೧೭೪

೪) ಪಂಚಮ ಅಧಿಕರಣಂ : ಕವಿಸಮಯಾಧಿಕರಣಂ

"ಲೋಕದಲ್ಲಿ ಇಲ್ಲದ, ಶಾಸ್ತ್ರಗಳಿಗೂ ಸಮ್ಮತವಲ್ಲದ ಅಥವಾ ಶಾಸ್ತ್ರದಲ್ಲಿ ಪ್ರಸಿದ್ಧವಲ್ಲದೆಯೂ ಇರುವ ಅನೇಕ ಸಂಗತಿಗಳನ್ನು ಕವಿಗಳು ಒಬ್ಬರಾದ ಮೇಲೆ ಮತ್ತೊಬ್ಬರು ಒಂದೇ ರೀತಿಯಲ್ಲಿ ಹೇಳುತ್ತಾ ಬಂದು ರೂಢಿಗೆ ತಂದಿರುತ್ತಾರೆ. ಇದೂ ಒಂದು ರೀತಿಯ ಅಲೌಕಿಕತೆ. ಅವಾಸ್ತವವೂ, ಅಶಾಸ್ತ್ರೀಯವೂ ಆದ ಕೆಲವು ವಿಷಯಗಳು ಶಿಷ್ಟ ಸಮ್ಮತವಾಗಿ ಕವಿಸಮಯ ಎನಿಸಿವೆ."[೬೨]

ಸೂತ್ರ-೨೧೫: **"ಆತತ ಸತ್ಕವಿಸಮಯಂ**
ಜಾತಿದ್ರವ್ಯ ಕ್ರಿಯಾಗುಣಾಶ್ರಯಮಸದಾ
ಖ್ಯಾತಿ ಸದಕೀರ್ತನಂ ನಿ
ರ್ಣೀತಂ ನಿಯಮಾರ್ಥಮೈಕ್ಯಮೆನೆ ನಾಲ್ಕು ತೆಱಂ ॥೫.೮೪೫॥"[೬೩]

ನಾಗವರ್ಮನು ಪ್ರಸ್ತುತ 'ಕಾವ್ಯಾವಲೋಕನ'ದ ಐದನೆಯ ಅಧಿಕರಣದಲ್ಲಿ ಅಸದಾಖ್ಯಾತಿ, ಸದಕೀರ್ತನ, ನಿಯಮ ಹಾಗೂ ಐಕ್ಯ ಎಂಬ ನಾಲ್ಕು ಕವಿಸಮಯಗಳನ್ನು ಗುರುತಿಸುತ್ತಾನೆ. ಈ ನಾಲ್ಕೂ ಕವಿಸಮಯಗಳಲ್ಲಿ ಜಾತಿ, ದ್ರವ್ಯ, ಕ್ರಿಯೆ ಹಾಗೂ ಗುಣಗಳೆಂದು ನಾಲ್ಕು ಭೇದಗಳಿವೆ.

ಅಸದಾಖ್ಯಾತಿ: ಕೆಲವು ವಸ್ತುಗಳು ಎಲ್ಲಾ ಕಡೆಗೆ ಸಾಮಾನ್ಯವಾಗಿ ದೊರೆಯದಿದ್ದರೂ ಅವು ದೊರೆಯುತ್ತವೆ ಎಂದು ವರ್ಣಿಸುವುದು. ಉದಾ: ನದಿಯಲ್ಲಿ ಕಮಲಗಳು ಅರಳುತ್ತವೆ.

ಸದಕೀರ್ತನ: ಒಂದು ವಸ್ತು ಒಂದು ಪ್ರದೇಶದಲ್ಲಿ ಯಥೇಚ್ಚವಾಗಿ ದೊರೆಯುತ್ತಿದ್ದರೂ ಅದು ಇಲ್ಲವೆಂದು ವರ್ಣಿಸುವುದು. ಉದಾ: ಮಲಯ ಪರ್ವತಗಳಲ್ಲಿ ಮಾತ್ರ ಶ್ರೀಗಂಧವು ದೊರೆಯುತ್ತದೆ.

ನಿಯಮಾರ್ಥ: ಲೋಕದಲ್ಲಿ ಹಲವಾರು ಕಡೆಯಲ್ಲಿ ಇರುವುದನ್ನು ಅಥವಾ ಸಂಭವಿಸಬಹುದಾದುದನ್ನು ಕೇವಲ ನಿಶ್ಚಿತ ಪ್ರದೇಶದಲ್ಲಿ ಮಾತ್ರ ಇರುವುದು ಮತ್ತು ಸಂಭವಿಸುವುದು ಎಂದು ವರ್ಣಿಸುವುದು.

ಐಕ್ಯ: ವಸ್ತು, ರೀತಿ, ಭಿನ್ನ ಭಿನ್ನವಾದವುಗಳಲ್ಲಿ ಅಭೇದವನ್ನು ಕಲ್ಪಿಸಿ ವರ್ಣಿಸುವುದೇ ಐಕ್ಯ. ಉದಾ: ಕಪ್ಪು ಮತ್ತು ಹಸಿರು ಎರಡೂ ಒಂದೇ ಎಂದು ವರ್ಣಿಸುವುದು.

ಹೀಗೆ ಕವಿಸಮಯಗಳನ್ನು ತಿಳಿಸಿ, ಗ್ರಂಥದ ಕೊನೆಯಲ್ಲಿ ಕಾವ್ಯಗಳ ಪ್ರಭೇದಗಳನ್ನು ಉಲ್ಲೇಖಿಸುತ್ತಾನೆ.

ಕಾವ್ಯಪ್ರಭೇದಗಳು:

ಸೂತ್ರ-೨೩೮: **"ಗದ್ಯಮಯಂ ಪದ್ಯಮಯಂ**
ತದ್ಯಮಳವಿಮಿಶ್ರಮೆಂದು ಕೃತಿಮೂಱುತೆಱಂ
ಗದ್ಯದೊಳೆ ಸಮೆದುಮಂತವು
ಹೃದ್ಯವಚಃ ಪ್ರೌಢಿಗಳ್ ಕಥಾಖ್ಯಾಯಿಕೆಯೊಳ್ ॥೫.೯೪೯॥"[೬೪]

---

೬೨. ಡಾ. ಎಂ. ಮಹ್ಮದ್ ಬಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೧೧೦
೬೩. ಎಮ್. ಎಸ್. ಬಸವಲಿಂಗಯ್ಯ, ರಂಗಸ್ವಾಮಿ ಅಯ್ಯಂಗಾರ್ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ.೧೫೬
೬೪. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೨೦೯

ಇಮ್ಮಡಿ ನಾಗವರ್ಮನು ಕಾವ್ಯವು ಗದ್ಯಮಯವೂ, ಪದ್ಯಮಯವೂ ಇಲ್ಲವೇ ಇವೆರಡೂ ಮಿಶ್ರಿತವಾದ ಚಂಪೂಮಯವಾಗಿಯೂ ಮೂರು ಭೇದಗಳಲ್ಲಿ ರಚಿತವಾಗುತ್ತವೆ. ಅಲ್ಲದೇ ಕನ್ನಡ ಕಾವ್ಯಗಳಲ್ಲಿ ಕುಳಕ, ಕೋಶ, ಮೆಲ್ವಾಡು, ಪಾಡುಗಬ್ಬ, ಬೆದಂಡೆಗಬ್ಬ, ಭಾಜನೆಗಬ್ಬ, ಇಡುಕುಂಗಬ್ಬ, ಮುಕ್ತಕ, ಕಥನಗಳೆಂದು ಕಾವ್ಯಭೇದಗಳನ್ನೂ ಗುರುತಿಸುತ್ತಾನೆ.

೪.೧.೩. ಸಾಳ್ವಕವಿ (೧೫೫೦):

"ಸಾಳುವ ವಂಶಜರು ಕನ್ನಡ ಸಾಹಿತ್ಯ, ಸಂಸ್ಕೃತಿ ಹಾಗೂ ವಿಶೇಷವಾಗಿ ಜೈನಧರ್ಮಕ್ಕೆ ಮಹತ್ತರ ಸೇವೆಯನ್ನು ಸಲ್ಲಿಸಿದ್ದಾರೆ. ಇಂಥ ಸಾಳುವ ವಂಶ ಗಗನಾಂಗಣದಲ್ಲಿ ಮೂಡಿಬಂದ ತೇಜಸ್ವಿ ದಿನಕರ, ಸಾಳ್ವಕವಿ. ಈತ ಸಾಳ್ವಮಲ್ಲ ಮತ್ತು ಸಾಳ್ವದೇವ ಎಂಬ ಇಬ್ಬರು ಪ್ರಭಾವಶಾಲಿ ರಾಜರ ಕಾಲದಲ್ಲಿದ್ದನು. ಅವರಿಂದ ರಾಜಮನ್ನಣೆ ಪಡೆದವನು. ಈ ಕವಿಗೆ ಆಶ್ರಯ ನೀಡಿದ ಅರಸರ ಬಗೆಗೆ ವಿಪುಲವಾದ ಮಾಹಿತಿಗಳು, ಶಾಸನಗಳು ಹಾಗೂ ಸಾಹಿತ್ಯಕೃತಿಗಳು ದೊರೆಯುತ್ತವೆ." [೬೫] ೧೯೩೨ರಲ್ಲಿ ಪ್ರಥಮ ಬಾರಿಗೆ ರಸರತ್ನಾಕರವನ್ನು ಸಂಪಾದಿಸಿದ ಎ. ವೆಂಕಟರಾವ್ ಹಾಗೂ ಎಚ್. ಶೇಷ ಅಯ್ಯಂಗಾರ ಅವರು ಸುದೀರ್ಘವಾದ ಪ್ರಸ್ತಾವನೆಯನ್ನು ಬರೆದು, ಸಾಳ್ವಕವಿಯ ಆಶ್ರಯದಾತನ ಕುರಿತಾಗಿ "ವಸುಧಾಮೇರು ಎಂಬ ರಾಜನು ನಗಿರೆ ಪ್ರದೇಶವನ್ನು ಆಳಿದನು. ಇವನಿಗೆ 'ಕವಿಸರೋವರರಾಜಹಂಸ', 'ಜಿನಧರ್ಮಧ್ವಜ', 'ತ್ರಿಭುವನ ಕಠಾರಿತ್ರಿನಯಣ', 'ಸಮ್ಯಕ್ತ್ವ ಚೂಡಾಮಣಿ', 'ಜಿನದೇವರಥಯಾತ್ರಾಪ್ರವರಕ' ಎಂಬ ಬಿರುದುಗಳಿದ್ದವು. ಇವನೇ ಸಾಳ್ವಕವಿಯ ಪೋಷಕನಾಗಿದ್ದನು. ಇವನಲ್ಲಿ ಸಾಳ್ವನು ಪಟ್ಟದ ಕವಿಯಾಗಿದ್ದನು" [೬೬] ಎಂದು ಹೇಳುತ್ತಾರೆ. ಉಪಲಬ್ಧ ಸಾಳ್ವಕವಿಯ ಕೃತಿಗಳಲ್ಲಿ ಕಾಲವನ್ನು ಸೂಚಿಸುವ ಯಾವುದೇ ಪದ್ಯಗಳು ದೊರೆಯುವುದಿಲ್ಲ. ಆದರೆ ಲಭ್ಯ ದಾಖಲೆಗಳನ್ನು ಪರಾಮರ್ಶಿಸಿ, ಆರ್. ನರಸಿಂಹಾಚಾರ್ಯರು ಈತನ ಕಾಲವನ್ನು ೧೫೫೦ [೬೭] ಎಂದು ಉಲ್ಲೇಖಿಸುತ್ತಾರೆ. "ಇವನು ಜೈನಕವಿ; ಇವನ ತಂದೆ ಧರ್ಮಚಂದ್ರ, ಗುರು ದೇಶೀಗಣದ ವಿಜಯಕೀರ್ತಿಯ ಮಗ ಶ್ರುತಕೀರ್ತಿ. ಸಾಳ್ವಕವಿಗೆ ಸಾಜಕವಿ, ಕರ್ಣಾಟಕಲಕ್ಷಣದೋಜ ಎಂಬ ಬಿರುದುಗಳು ಇದ್ದಂತೆ ತೋರುತ್ತದೆ. ಪೂರ್ವಕವಿಗಳಾದ ರುದ್ರಭಟ್ಟ, ನಾಗವರ್ಮ ಹಾಗೂ ಕವಿಕಾಮರನ್ನು ಸ್ಮರಿಸಿದ್ದಾನೆ." [೬೮] "ನಗಿರೆಯ ನಗರವನ್ನು ಆಳಿದ ಸಾಳ್ವ ವಂಶದ ಅರಸರು ಮೂಲತಃ ಈಗಿನ ಹೊನ್ನಾವರ ತಾಲ್ಲೂಕಿನ ಶರಾವತಿ ದಂಡೆಯಲ್ಲಿರುವ 'ಸಾಳುವಳ್ಳಿ' ಎಂಬ ಗ್ರಾಮದವರು ಎನ್ನಲಾಗಿದೆ. ಈಗಲೂ ಸಾಣೆಕೆರೆ, ಸಾಳೂರು, ಸಾಣೆಕಟ್ಟೆ, ಸುಂಕ ಸಾಳ ಮುಂತಾದ

---

೬೫. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ. xv (ಪ್ರಸ್ತಾವನೆ)

೬೬. ಎ. ವೆಂಕಟರಾವ್, ಪಂಡಿತ ಎಚ್. ಶೇಷ ಅಯ್ಯಂಗಾರ (ಸಂ) : **ಕವಿಸಾಳ್ವ ಕೃತಮಪ್ಪ ರಸರತ್ನಾಕರಂ** ; ಪುಟ. iii

೬೭. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ ದ್ವಿತೀಯ ಸಂಪುಟ** ; ಪುಟ.೧೯೪

೬೮. **ಅದೇ** ; ಪುಟ.೧೯೫

ಗ್ರಾಮಗಳ ಸ್ಥಳವಾಚಿಕೆಗಳಲ್ಲಿ ಸಾಳ ಎಂಬ ಪದವಿದೆ. ಅಲ್ಲದೇ ಸಾಳ್ವಕವಿಯು ನಗಿರೆಯ ಪ್ರದೇಶವನ್ನು ತನ್ನ ಕೃತಿಗಳಲ್ಲಿ ಬಣ್ಣಿಸಿರುವುದರಿಂದ ಇವನು ನಗಿರೆ ಪ್ರದೇಶದವನಿರಬೇಕೆಂದು ಹಂಪನಾ ಅವರು ಅಭಿಪ್ರಾಯಪಡುತ್ತಾರೆ."[೧೯] ಸಾಳ್ವಭಾರತ (ನೇಮಿನಾಥ ಚರಿತೆ), ರಸರತ್ನಾಕರ, ಶಾರದಾವಿಲಾಸ ಹಾಗೂ ವೈದ್ಯಸಾಂಗತ್ಯಗಳು ಈತನ ಕೃತಿಗಳು. ರಸರತ್ನಾಕರ ಹಾಗೂ ಶಾರದಾವಿಲಾಸಗಳು ಅಲಂಕಾರ ಗ್ರಂಥಗಳಾಗಿದ್ದು, ವೈದ್ಯಸಾಂಗತ್ಯವು ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥವಾಗಿದೆ.

೪.೧.೩.೧. ರಸರತ್ನಾಕರ:

ಇದೊಂದು ಅಲಂಕಾರ ಗ್ರಂಥವಾಗಿದೆ. ವಾಡಿಕೆಯಂತೆ ಜಿನಸ್ತುತಿಯೊಂದಿಗೆ ಕೃತಿಯನ್ನು ಆರಂಭಿಸುತ್ತಾನೆ. ಇದರಲ್ಲಿ ಶೃಂಗಾರ ಪ್ರಪಂಚ ವಿವರಣಂ, ನವರಸ ಪ್ರಪಂಚಂ, ನಾಯಕ ನಾಯಿಕಾ ವಿವರಣಂ, ವ್ಯಭಿಚಾರ ಭಾವ ವಿವರಣಂ ಎಂಬ ನಾಲ್ಕು ಪ್ರಕರಣಗಳಿವೆ. ಸೂತ್ರ ಹಾಗೂ ವೃತ್ತಗಳ ರೂಪದಲ್ಲಿದೆ. ಅಲ್ಲಲ್ಲಿ ವಚನಗಳ ಬಳಕೆಯನ್ನೂ ಮಾಡಿದ್ದಾನೆ. ಪೂರ್ವಕೃತ ಗ್ರಂಥಗಳಿಂದ ಉದಾಹರಣೆಗಳನ್ನು ನೀಡಿದ್ದಾನೆ.

೧) ಪ್ರಥಮ ಪ್ರಕರಣಂ : ಶೃಂಗಾರ ಪ್ರಪಂಚ ವಿವರಣಂ

"ರಸಮಿಲ್ಲದ ಕಾವ್ಯಂ ನೀ
ರಸಮುದಱಿಂ ಕೃತಿಗೆ ರಸಮೆ ಸಾರಂ ನೆಗೞ್ದೀ
ರಸರತ್ನಾಕರದೊಳ್ ನೆಱೆ
ರಸಭಾವಮನಱಿದ ಕವಿಯ ಕಬ್ಬಮೆ ಸಾರಂ ॥೧.೦೪॥"[೨೦]

ಅಲಂಕಾರಶಾಸ್ತ್ರದಲ್ಲಿ ಅಲಂಕಾರಕ್ಕೆ ಪ್ರಮುಖ ಸ್ಥಾನವಿದೆ. ರಸವಿಲ್ಲದ ಕಾವ್ಯವು ನೀರಸವು, ರಸವೇ ಸಾರವು ಎಂದು ಹೇಳುತ್ತಾನೆ. 'ಕಾವ್ಯಾವಲೋಕನ'ದಲ್ಲಿ ಎರಡನೆಯ ನಾಗವರ್ಮನು ರಸಪ್ರಕರಣದಲ್ಲಿ ತಿಳಿಸಿರುವ ರಸಗಳಿಗೆ ತನ್ನ 'ರಸರತ್ನಾಕರ'ದಲ್ಲಿ ವಿವರಗಳನ್ನು ನೀಡುತ್ತಾನೆ ಸಾಳ್ವಕವಿ. ಆದರೆ ನಾಗವರ್ಮನು ರಸವು ಕಾವ್ಯಕ್ಕೆ ಅಗತ್ಯವೇ; ಆದರೂ ಕೆಲವೆಡೆಯಲ್ಲಿ ರಸವಿರದಿದ್ದಲ್ಲಿ ತಪ್ಪಿಲ್ಲ ಎಂದು ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಸಾಳ್ವಕವಿಯು ಕಾವ್ಯಕ್ಕೆ ರಸವೇ ಪ್ರಧಾನ. ರಸವಿಲ್ಲದ ಕಾವ್ಯವು ನೀರಸವೆಂದು ಪ್ರತಿಪಾದಿಸುತ್ತಾನೆ. ಮುಂದುರೆದು –

"ಕವಿಯೆಂಬ ಪೆಸರ್ಗೆ ಮಚ್ಚರಿ
ಪವಿವೇಕಿಗಳಿರದಲೆಗಳೆಗೊಳ್ಗಬ್ಬಿಗರೀ
ವಿವಿಧ ರಸಾಮೃತಮಂ ಸಲೆ
ಸವಿದಮರ್ದುಣಿಯಂತೆ ಸುಖಿಸುತಿರ್ಕನವರತಂ ॥೧.೦೭॥

೧೯. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ : **ಸಾಳ್ವಕವಿ ಭಾರತ ಒಂದು ಚಾರಿತ್ರಿಕ ಅಧ್ಯಯನ** ; ಪುಟ.೧೦
೨೦. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ.೫೪೫

ಅನಾರ್ಯರೆಂದೆ ತಿಳಿದಮ್ಮ
ತಾನಂದಿ ರುದ್ರಭಟ್ಟನಾ ತೆಱದಿಂ ವಿ
ದ್ಯಾನಾಥ ಹೇಮಚಂದ್ರರ
ಭೂನುತ ಮಾರ್ಗಾದಿಯಂದಮಂ ವಿರಚಿಸಿದೆಂ ||೧.೦೮||"[೨೧]

"ರಸರತ್ನಾಕರ ರಚನೆಯಾಗುವ ವೇಳೆಗೆ ಬಂದಿದ್ದ ಅಲಂಕಾರ ಗ್ರಂಥಗಳನ್ನು ಇರುಳುಗಣ್ಣಿನ ಅಥವಾ ನೆಲಗಣ್ಣಿನ ಕನ್ಯಗೆ ಹೋಲಿಸಿದ್ದಾನೆ. ನೆಲಗಣ್ಣಿನ ಹುಡುಗಿ ತನ್ನ ಬಾಹ್ಯಸೌಂದರ್ಯದಿಂದ ಆಕರ್ಷಿಸಿದರೂ ಆಕೆಯ ದೈಹಿಕ ಆಕರ್ಷಣೆಗೆ ಮೋಹಿತನಾದ ಹುಡುಗ ಈಕೆಯೊಂದಿಗೆ ತೃಪ್ತಿಕರವಾಗಿ ಸಾಂಸಾರಿಕ ಜೀವನವನ್ನು ನಿಭಾಯಿಸಲು ಕಷ್ಟವಾಗುತ್ತದೆ. ಅಂತೆಯೇ ರಸರಹಿತವಾದ ಕಾವ್ಯವೂ ಕೂಡ ಎಂದು ಸಾಳ್ವಕವಿಯು ವಿವರಣೆ ನೀಡುತ್ತಾನೆ."[೨೨] ಕೃತಿಯ ಆರಂಭದಲ್ಲಿ ಎರಡನೆಯ ನಾಗವರ್ಮನು ಹೇಳಿದ–

ಸೂತ್ರ–೦೧: "ಭಾವಂ ವಿಭಾವಮೆಸೆವನು
ಭಾವಂ ಸಂಚಾರಿಭಾವಮೆಂದಿಂತಿವಱಿಂ
ದಾವಿಷ್ಕೃತಮಕ್ಕುಂ ರಸ
ಮಾವುದುಮೆಂದಱಿಗೆ ಭರತಶಾಸ್ತ್ರಕ್ರಮದಿಂ ||೪.೭೮||"[೨೩]

ಸೂತ್ರವನ್ನು ಪುನರುಚ್ಚರಿಸಿ, ಭಾವ, ವಿಭಾವ, ಅನುಭಾವ ಹಾಗೂ ಸಂಚಾರಿಭಾವಗಳಿಂದ ರಸೋತ್ಪತ್ತಿಯಾಗುವುದು ಎಂದು ಹೇಳಿ, ಭರತ ಹಾಗೂ ನಾಗವರ್ಮರ ಮಾತುಗಳನ್ನು ಪುಷ್ಠೀಕರಿಸುತ್ತಾನೆ. ಚಿತ್ತವೃತ್ತಿಯು ಭಾವಗಳು ಸ್ಥಾಯೀಭಾವಗಳನ್ನು ಉದ್ಬೋಧಗೊಳಿಸುವುದರಿಂದ ಸ್ಥಾಯೀ, ವ್ಯಭಿಚಾರಿಭಾವಗಳು ಸಂಯೋಗವಾಗಿ ಅನುಭಾವವುಂಟಾಗುವುದು. ಅದರಿಂದಲೇ ರಸೋತ್ಪತ್ತಿಗೆ ದಾರಿಯಾಗುವುದು ಎಂದು ಪ್ರತಿಪಾದಿಸುತ್ತಾನೆ ಸಾಳ್ವಕವಿ.

ಸೂತ್ರ–೦೭: "ರತಿ ಪರಿಹಾಸಂ ಶೋಕೋ
ದ್ಗತಿಯುತ್ಸಾಹಂ ಪ್ರಕೋಪ ವಿಸ್ಮಯ ಭಯಸಂ
ತತಿ ವಿಜುಗುಪ್ಸತೆಯೆಂದು
ನ್ನತಿವಡೆಗುಂ ಸ್ಥಾಯಿಭಾವಮೊಪ್ಪುವ ಶಮಮುಂ ||"[೨೪]

ಎರಡನೆಯ ನಾಗವರ್ಮನು ಎಂಟು ರಸಗಳೆಂದು ಪ್ರತಿಪಾದಿಸಿದರೆ ಸಾಳ್ವಕವಿಯು 'ಶಾಂತ' ಎಂಬ ಒಂಭತ್ತನೆಯ ರಸವನ್ನು ಹೇಳಿ 'ಶಮ' ಅದರ ಸ್ಥಾಯೀಭಾವ ಎಂದು ಪ್ರತಿಪಾದಿಸುತ್ತಾನೆ. ಶಾಂತ ರಸವನ್ನು ಪ್ರತಿಪಾದಿಸುವಾಗ 'ಮತ್ತೆ ನುತ ಶಾಂತರಸಂ'[೨೫] ಎಂದು

---

೨೧. ರಾಮಚಂದ್ರ ಕೊಟ್ಟಲಗಿ (ಸಂ) : **ರಸರತ್ನಾಕರಂ** ; ಪುಟ. ೦೨, ೦೩

೨೨. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ : **ಸಾಳ್ವಕವಿ ಭಾರತ ಒಂದು ಚಾರಿತ್ರಿಕ ಅಧ್ಯಯನ** ; ಪುಟ.೨೯, ೩೦.

೨೩. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ.೫೪೭

೨೪. **ಅದೇ** ; ಪುಟ.೫೪೯

೨೫. ಎ. ವೆಂಕಟರಾವ್, ಪಂಡಿತ ಎಚ್. ಶೇಷ ಅಯ್ಯಂಗಾರ (ಸಂ) : **ಕವಿಸಾಳ್ವ ಕೃತಮಪ್ಪ ರಸರತ್ನಾಕರಂ** ; ಪುಟ. ೦೮
ಸೂತ್ರ–೧೧: **"ವರಶೃಂಗಾರಂ ಹಾಸ್ಯಂ
ಕರುಣಂ ವೀರಂ ಪ್ರರೌದ್ರಮದ್ಭುತಮಿರದು
ಬ್ಬರಿಪ ಭಯಾನಕ ಭೀಭ
ತ್ಸರಸಂಗಳಿವೆಂಟು ಮತ್ತೆ ನುತ ಶಾಂತರಸಂ"**

ಹೇಳುವುದು ಹೊಸದಾಗಿ ಶಾಂತರಸವನ್ನು ಸೇರಿಸುತ್ತಿದ್ದೇನೆ ಎಂಬರ್ಥದಲ್ಲಿ ಸಾಳ್ವಕವಿಯು ಸಮರ್ಥಿಸಿಕೊಳ್ಳುತ್ತಾನೆ. ಮುಂದುವರೆದು ನಾಗವರ್ಮನನ್ನು ಅನುಸರಿಸಿ ಮೂವತ್ಮೂರು ವ್ಯಭಿಚಾರೀ ಭಾವಗಳನ್ನು ಗುರುತಿಸುತ್ತಾನೆ.

ಮುಂದುವರೆದು ಸಾಳ್ವಕವಿಯು 'ಶೃಂಗಾರರಸವೇ ಎಲ್ಲ ರಸಗಳಿಗೂ ಅಧಿಕವಾದುದು ಆದುದರಿಂದ ಶೃಂಗಾರರಸವನ್ನೇ ಮೊದಲು ಹೇಳಲಾಗುತ್ತದೆ' [೭೬] ಎಂದು ಪ್ರತಿಪಾದಿಸುತ್ತಾನೆ. ಶೃಂಗಾರ ರಸವನ್ನು ಕೇವಲ ಸ್ತ್ರೀ–ಪುರುಷರ ಲೈಂಗಿಕ ವ್ಯವಹಾರಗಳಿಗೆ ಮಾತ್ರ ಸೀಮಿತಗೊಳಿಸದೇ ಅದರಾಚೆಗೂ ಶೃಂಗಾರ ರಸದ ಸ್ಥಾಯೀಭಾವಗಳನ್ನು ಗುರುತಿಸುತ್ತಾನೆ. ಸಹೋದರ–ಸಹೋದರಿಯರು, ತಾಯಿ–ಮಗ, ತಂದೆ–ಮಗಳು ಇಂತಹ ಅಂತರ್ಭಾವಗಳೂ ಇದೇ ಸಾಲಿಗೆ ಸೇರುತ್ತವೆ ಇದಕ್ಕೆ ಸ್ನೇಹವು ಸ್ಥಾಯೀಭಾವವಾಗಿರುತ್ತದೆ ಎನ್ನುತ್ತಾನೆ.

ಸ್ತ್ರೀ ಪುರುಷರ ಲೈಂಗಿಕ ವ್ಯವಹಾರಗಳಿಗೆ 'ರತಿ'ಯು ಸ್ಥಾಯೀಭಾವವಾಗಿರುತ್ತದೆ. ಇದರಲ್ಲಿ ಸಂಭೋಗ ಶೃಂಗಾರ ಮತ್ತು ವಿಪ್ರಲಂಭ ಶೃಂಗಾರಗಳನ್ನು ಹೇಳುತ್ತಾನೆ. ಆಲಂಬನ ಶೃಂಗಾರದಲ್ಲಿ ಆಲಂಬನ ಶೃಂಗಾರ ಮತ್ತು ಉದ್ದೀಪಿತ ಶೃಂಗಾರಗಳನ್ನು ಗುರುತಿಸುತ್ತಾನೆ. ಆಲಿಂಗನ, ಚುಂಬನ, ಉದ್ದೀಪನ, ಚೇಷ್ಟೆ, ವಿಲಸಿತ ಭಾವ, ಕಣ್ಸನ್ನೆ, ನಗೆ, ಲಲ್ಲೆಗರೆಯುವುದು, ಮೆಲ್ಮಾತು, ಪಿಸುಮಾತು, ಸ್ಪರ್ಶನಗಳು ಶೃಂಗಾರ ರಸದ ಹಾವಭಾವಗಳು ಎಂದು ಹೇಳಿ ಇಡೀ ಪ್ರಥಮ ಅಧ್ಯಾಯವನ್ನು ಶೃಂಗಾರರಸಕ್ಕಾಗಿಯೇ ಮೀಸಲಿಟ್ಟಿದ್ದಾನೆ ಸಾಳ್ವಕವಿ.

೨) ದ್ವಿತೀಯ ಪ್ರಕರಣಂ : ನವರಸ ಪ್ರಪಂಚ ವಿವರಣಂ

ಮೊದಲನೆಯ ಪ್ರಕರಣದಲ್ಲಿ ಶೃಂಗಾರರಸವನ್ನೇ ವಿಶದಪೂರ್ಣವಾಗಿ ಹೇಳಿರುವ ಸಾಳ್ವಕವಿಯು, ಎರಡನೆಯ ಪ್ರಕರಣದಲ್ಲಿ ಇನ್ನುಳಿದ ಎಂಟು ರಸಗಳನ್ನು ವಿಶ್ಲೇಷಿಸುತ್ತಾನೆ. ಎಲ್ಲ ರಸಗಳು ಉದ್ದೀಪಿತಭಾವ, ಆಲಂಭನಭಾವ, ವಿಭಾವ, ಅನುಭಾವ ಹಾಗೂ ವ್ಯಭಿಚಾರಿ ಭಾವಗಳಿಂದ ಉಂಟಾಗುತ್ತವೆ ಎಂದು ಪ್ರತಿಪಾದಿಸುತ್ತಾನೆ.

ಹಾಸ್ಯರಸವು ಹಾಸ ಎಂಬ ಸ್ಥಾಯೀಭಾವದಿಂದ ಉಂಟಾಗುತ್ತದೆ. ಹಾಸ್ಯರಸದಲ್ಲಿ ಸ್ಮಿತ, ಹಸಿತ, ವಿಹಸಿತ, ಉಪಹಸಿತ, ಅಪಹಸಿತ, ಅತಿಹಸಿತ ಎಂದು ಭೇದಗಳಿವೆ. ಇವುಗಳಲ್ಲಿ ಮೊದಲ ಎರಡು ನಗೆಗಳು ಉತ್ತಮ; ನಂತರದ ಎರಡು ನಗೆಗಳು ಮಧ್ಯಮ; ಕೊನೆಯ ಎರಡು ನಗೆಗಳು ಅಧಮ ಎಂದು ತಿಳಿಸುತ್ತಾನೆ.

ಕರುಣರಸವು ಇಷ್ಟವಸ್ತುಗಳ ವಿಯೋಗದಿಂದಾಗಿ ಶೋಕವೆಂಬ ಸ್ಥಾಯೀಭಾವದಿಂದ ಉಂಟಾಗುತ್ತದೆ. ಸ್ವರಭೇದ, ಕ್ಲೇಶ, ಮೂರ್ಛೆ, ಸ್ತಂಭನ, ಕಂಪನ, ಶಂಕೆ, ಔತ್ಸುಕ್ಯ, ಗ್ಲಾನಿ ನಿರ್ವೇದ, ಮೋಹ, ಶ್ರಮ, ತ್ರಾಸ, ವಿಷಾದ, ದೈನ್ಯ, ಜಡತೆ, ಅಪಸ್ಮಾರ, ಆಲಸ್ಯ, ಮರಣ, ಪ್ರಭೃತಿ ಈ

---

೭೬. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ.೫೫೧
"ಎಲ್ಲಾ ರಸದೊಳಂ ಶೃಂಗಾರರಸಮೆ ಲೋಕಕ್ಕೆ ಸೊಗಯಿಪ್ಪುದಾದ ಕಾರಣದೆ ಮೊದಲೊಳೀ ಶೃಂಗಾರರಸಂ ಪೇೞಿಪಟ್ಟುದು"

ವ್ಯಭಿಚಾರಿ ಭಾವಗಳು ಕರುಣರಸದಲ್ಲಿ ಉಂಟಾಗುತ್ತವೆ ಎಂದು ಸಾಳ್ವಕವಿಯು ತನ್ನ 'ಸಾಳ್ವರತ್ನಾಕರ'ದಲ್ಲಿ ಪ್ರತಿಪಾದಿಸುತ್ತಾನೆ.[೭೭]

ಸೂತ್ರ–೫೨: **"ಪ್ರಭವಿಪುದುತ್ಸಾಹ ಸ್ಥಾ**
ಯಿಭಾವದಿಂ ವೀರರಸಮೆ ಮೂದೆಱನಕ್ಕುಂ
ಅಭಿಗತ ದಾನಾದಿ ಜಯ
ಪ್ರಭಾದಿಂ ಸುಕವಿನಿಕರಮಾರ್ಗಕ್ರಮದೊಳ್ ॥"[೭೮]

ಉತ್ಸಾಹವೆಂಬ ಸ್ಥಾಯಿಭಾವದಿಂದಾಗಿ ವೀರರಸವು ಹುಟ್ಟುವುದು. ಇದರಲ್ಲಿ ದಾನವೀರ, ದಯಾವೀರ ಹಾಗೂ ಉಭಯವೀರ ಎಂದು ಮೂರು ಭೇದಗಳನ್ನು ಹೇಳುತ್ತಾನೆ. ಸ್ಥೈರ್ಯ, ಧೈರ್ಯ, ಗಾಂಭೀರ್ಯ, ತ್ರಿಕರಣ ಶುದ್ಧತ್ವ, ವಿವೇಕ, ತ್ಯಾಗ, ಕೃಪೆ ಅಭಯವಚನ, ಪ್ರಸಾದ, ಪುಲಕ, ಹರ್ಷ, ಉತ್ಸಾಹಗಳು ಇದರ ವ್ಯಭಿಚಾರಿ ಭಾವಗಳು.[೭೯]

ಮುಂದುವರೆದು ಕ್ರೋಧವೆಂಬ ಸ್ಥಾಯಿಭಾವದಿಂದ ರೌದ್ರರಸವು ಜನ್ಮತಳೆವುದು. ಮತ್ಸರ, ದ್ವೇಷ, ಕಟುವಾದ ಮಾತುಗಳು ಈ ರಸಕ್ಕೆ ಉದ್ದೀಪನವನ್ನು ನೀಡುತ್ತವೆ.[೮೦] ಇದರಲ್ಲಿ ಮಾತ್ಸರ್ಯ ರೌದ್ರ ಮತ್ತು ರೌದ್ರ ಎಂದು ಎರಡು ಭೇದಗಳನ್ನು ತಿಳಿಸುತ್ತಾನೆ. ಉಗ್ರ, ವೇಗ, ಉನ್ಮಾದ, ವಿಬೋಧ, ಅಮರ್ಷ, ಚಾಪಲ್ಯಗಳು ಇದರ ವ್ಯಭಿಚಾರಿಭಾವಗಳು. "ಭ್ರುಕುಟಿನಯನರಾಗ ದಂತೌಷ್ಠಪೀಡನ ಗಂಡಸ್ಫುರನ ಹಸ್ತಾಗ್ರ ನಿಷ್ಪೇಷಣ ತಾಡನ ಪಾತನ ಪೀಡನ ಪ್ರಹರಣ ಅಪಹರಣ ಶಸ್ತ್ರ ಸಂಪಾತಾಕರ್ಷಣಚ್ಛೇದನಾದಿ"[೮೧]ಗಳು ಅನುಭಾವಗಳು ಎಂದು ಸಾಳ್ವಕವಿಯು ಹೇಳುತ್ತಾನೆ.

ವಿಸ್ಮಯವೆಂಬ ಸ್ಥಾಯಿಭಾವದಿಂದ ಅದ್ಭುತರಸವು ಹುಟ್ಟುವುದು.[೮೨] ರೋಮಾಂಚನ, ಕಣ್ಣಲ್ಲಿ ನೀರು ಬರುವುದು, ಸಾತ್ವಿಕಭಾವ, ಹರ್ಷ, ವೇಗ, ಜಡತ್ವಗಳು ಇದರ ಸಂಚಾರಿಭಾವಗಳು.

ಭಯದಿಂದಲೇ ಭಯಾನಕರಸ ಹುಟ್ಟುವುದು.[೮೩] ವೈರಿ, ಸರ್ಪ, ಪಿಶಾಚ, ಭೂತ, ಕತ್ತಲಗುಹೆ, ಉಗ್ರಮೃಗಗಳನ್ನು ಕಂಡಾಗ ಉಂಟಾಗುವುದೇ ಭಯಾನಕರಸ. ಶಂಕೆ, ಅಪಸ್ಮಾರ, ಮರಣ, ತ್ರಾಸ, ಚಾಪಲ್ಯ, ವೇಗ, ದೈನ್ಯ, ಮೋಹಗಳು ಇದರ ವ್ಯಭಿಚಾರಿಭಾವಗಳು. 'ಭಯವೇ ಇದರ ಸ್ಥಾಯಿಭಾವ'.[೮೪]

---

೭೭. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ. ೫೭೬
ವೃತ್ತಿ: **"ಸ್ವರಭೇದಾಶ್ರು ಸಂಭವಿವರ್ಣ ಕಂಪ ಪ್ರಳಯಾದಿ ಸಾತ್ವಿಕಭಾವಂ ದುಃಖಾಮಯ ನಿರ್ವೇದ ಗ್ಲಾನಿ ಶಂಕೌತ್ಸುಕ್ಯ ಮೋಹ ಶ್ರಮ ತ್ರಾಸ ವಿಷಾದ ದೈನ್ಯಾಮಯ ಜಡತೋನ್ಮಾದಾಪಸ್ಮಾರಾಲಸ್ಯ ಮರಣ ಪ್ರಭೃತಿ ವ್ಯಭಿಚಾರಿ ಭಾವಂ ಇವಱಿಂ ಶೋಕಸ್ಥಾಯಿ ಚರ್ವ್ಯಮಾಣಮಾಗೆ ಕರುಣರಸಂ"**

೭೮. ಎ. ವೆಂಕಟರಾವ್, ಪಂಡಿತ ಎಚ್. ಶೇಷ ಅಯ್ಯಂಗಾರ (ಸಂ) : **ಕವಿಸಾಳ್ವ ಕೃತಮಪ್ಪ ರಸರತ್ನಾಕರಂ** ; ಪುಟ. ೩೮

೭೯. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ. ೫೭೭ (ಸೂತ್ರ–೫೪ ಹಾಗೂ ವೃತ್ತಿ)

೮೦. ಅದೇ : ಪುಟ. ೫೭೮ : **"ಪೊರೆಗುಂ ಕ್ರೋಧವೆ ರೌದ್ರಂ"**

೮೧. ಎ. ವೆಂಕಟರಾವ್, ಪಂಡಿತ ಎಚ್. ಶೇಷ ಅಯ್ಯಂಗಾರ (ಸಂ) : **ಕವಿಸಾಳ್ವ ಕೃತಮಪ್ಪ ರಸರತ್ನಾಕರಂ** ; ಪುಟ. ೪೦

೮೨. ಅದೇ : ಪುಟ. ೪೦ : **"ಕೃತವಿಸ್ಮಯಜಾತಮದದ್ಭುತಮ್"**

೮೩. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ.೫೮೦ – **"ಭಯದೆ ಭಯಾನಕರಸಮ್"**

೮೪. ಅದೇ ; ಪುಟ. ೫೮೧ – **"ಭಯಸ್ಥಾಯಿಯೆ ಭಯಾನಕರಸಂ"**

ಜುಗುಪ್ಸೆಯಿಂದಲೇ ಭೀಭತ್ಸರಸವು ಹುಟ್ಟುವುದು.[೮೫] ಮೋಹ, ಅಪಸ್ಮಾರ, ವಿರಕ್ತಿ, ನಿರ್ವೇದ, ಮತಿ, ಧೃತಿ ರೋಗಗಳು ಇದರ ವ್ಯಭಿಚಾರಿಭಾವಗಳು. ಇದರಲ್ಲಿ ಜುಗುಪ್ಸಿತ ಭೀಭತ್ಸ, ಹುಗುಪಿತೇಕ್ಷಣ ಭೀಭತ್ಸ, ವಿರಕ್ತಿಭೀಭತ್ಸಗಳೆಂದು ಮೂರು ಭೇದಗಳನ್ನು ಸಾಳ್ವಕವಿಯು ಗುರುತಿಸುತ್ತಾನೆ.

ಸೂತ್ರ–೬೩: **"ಶಮಭಾವಪ್ರಭವಂ ಶಾಂ**
ತಮಕ್ಕುಮಂತಾ ಶಮತ್ವಮುಂ ವರ್ತಿಸುಗುಂ
ಸಮನಿಸಿ ಸಮ್ಯಗ್ಜ್ಞಾನಂ
ತಮಮಂ ರಾಗಮುಮನಲೆದು ತೊಲಗಿಸೆ ಮನದೊಳ್ ॥"

'ಶಮ' ಎಂಬ ಸ್ಥಾಯಿಭಾವದಿಂದಾಗಿ ಶಾಂತರಸವು ಹುಟ್ಟುವುದು. ಸಮ್ಯಕ್‌ಜ್ಞಾನದಿಂದ ಮನದ ಅಜ್ಞಾನ, ರಾಗಗಳು ದೂರವಾಗಿ ಶಮತ್ವವುಂಟಾಗುವುದು ಎಂದು ಹೇಳಿ, ಸಾಳ್ವಕವಿಯು ಶಾಂತರಸಕ್ಕೆ ಅತಿಯಾದ ಪ್ರಾಧಾನ್ಯತೆಯನ್ನು ನೀಡುತ್ತಾನೆ. "ಮೋಕ್ಷಪದವೇ ಇದಕ್ಕೆ ಆಲಂಬನವಿಭಾವ. ಸದ್ಗುರು ನಿರೂಪಣಶ್ರವಣ, ವೈರಾಗ್ಯ, ಸಂಸಾರಭೀರುತ್ವ, ತತ್ತ್ವಜ್ಞಾನ, ವೀತರಾಗ, ಪರಿಶೀಲನ, ಪರಮೇಶ್ವರಾನುಗ್ರಹಗಳು ಉದ್ದೀಪನ ವಿಭಾವಗಳು ಸಮರಸೀಭಾವ, ಯಮ, ನಿಯಮ, ಆಧ್ಯಾತ್ಮ, ಶಾಸ್ತ್ರಚಿಂತನಗಳೇ ಅನುಭಾವಗಳು. ಸ್ತಂಭನ, ಆನಂದಾಶ್ರು, ಪುಳಕಗಳು ಸಾತ್ವಿಕಭಾವಗಳು. ಧೃತಿ, ಸ್ಮೃತಿ, ಮತಿ ನಿರ್ವೇದಗಳು ವ್ಯಭಿಚಾರಿಭಾವಗಳು ಎಂದು ನಿರೂಪಿಸುತ್ತಾನೆ.

ಹೀಗೆ ಸಾಳ್ವಕವಿಯು ತನ್ನ 'ರಸರತ್ನಾಕರ' ಗ್ರಂಥದ 'ನವರಸ ಪ್ರಪಂಚ' ಎಂಬ ಎರಡನೆಯ ಅಧಿಕಾರದಲ್ಲಿ ಎಂಟು ರಸಗಳ ಕುರಿತಾಗಿ ವಿವರಿಸಿದ್ದಾನೆ. ಅಲ್ಲದೇ ಪೂರ್ವದ ಅಲಂಕಾರಿಕರಾದ ನಾಗವರ್ಮ, ಉದಯಾದಿತ್ಯರು ಹೇಳಿದ ರಸಪ್ರಸ್ತಾನಗಳನ್ನೂ ವಿವೇಚಿಸುತ್ತಾನೆ.

೩) ತೃತೀಯ ಪ್ರಕರಣಂ : ನಾಯಕ ನಾಯಿಕಾ ವಿವರಣಂ

ಸೂತ್ರ–೭೩: **"ಇಂಬಾಗಿ ನವರಸಕ್ಕಾ**
ಲಂಬಮಕ್ಕುಂ ಪೊದಟ್ದಿ ನಾಯಕರುಂ ನು
ಣ್ಪಿಂಬಿಡಿದ ನಾಯಿಕಾ ನಿಕು
ರುಂಬಮುಮಂತವರ ತೆಱನನುಱಿಕೆ ಬಿಚ್ಚಳಿಪೆಂ ॥"[೮೬]

ಸಾಳ್ವಕವಿಯು ಪ್ರಸ್ತುತ ಪ್ರಕರಣದಲ್ಲಿ ಕಾವ್ಯವೊಂದರಲ್ಲಿ ಇರಬೇಕಾದ ನಾಯಕ, ನಾಯಕಿ, ವಿದೂಷಕ ಹಾಗೂ ವಿಟರ ಗುಣಾವಲೋಕನವನ್ನು ಮಾಡುತ್ತಾನೆ.

ನಾಯಕ ಸಾಧಾರಣ ಲಕ್ಷಣಂ: ಕುಲೀನತೆ, ಶೌಚತೆ, ಮಾನತೆ, ಯೌವನ, ಧೃಡತೆ, ಮಾಧುರ್ಯತೆ, ಧೀರತೆ, ಜನದನುರಾಗ, ಉತ್ಸಾಹ, ಸಮತ್ವ ಇವುಗಳು ನಾಯಕನಲ್ಲಿರಬೇಕಾದ ಗುಣಗಳು.

---

೮೫. ಎ. ವೆಂಕಟರಾವ್, ಪಂಡಿತ ಎಚ್. ಶೇಷ ಅಯ್ಯಂಗಾರ (ಸಂ) : **ಕವಿಸಾಳ್ವ ಕೃತಮಪ್ಪ ರಸರತ್ನಾಕರಂ** ; ಪುಟ. ೪೦ : **"ಒದರ್ವಿದೊಂದು ಜುಗುಪ್ಸೆಯಿಂದೆ ಸಲೆ ಭೀಭತ್ಸಂ"**

೮೬. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ.೫೯೦

ಧೈರ್ಯ, ಶಾಸ್ತ್ರಜ್ಞಾನ, ತ್ಯಾಗ, ವಿನಯ, ಧರ್ಮಾನುರಾಗ, ಸದ್ಬುದ್ಧಿ, ಕಲಾನೈಪುಣ್ಯತೆ, ಪ್ರಾಜ್ಞತೆ, ವಾಕ್‌ಚಾತುರ್ಯಗಳು ನಾಯಕನಲ್ಲಿ ಇರಬೇಕಾದ ಲಕ್ಷಣಗಳು. ಈ ಲಕ್ಷಣಗಳನ್ನನುಸರಿಸಿ ಧೀರೋದಾತ್ತ, ಧೀರಲಲಿತ, ಧೀರಶಾಂತ, ಅನುಕೂಲ ನಾಯಕ, ದಕ್ಷಿಣ ನಾಯಕ, ಕುಟಿಲ ನಾಯಕ, ಧೃಷ್ಟ ನಾಯಕ ಹಾಗೂ ಉತ್ತಮ ಧೀರೋದಾತ್ತ ನಾಯಕರೆಂದು ಎಂಟು ಬಗೆಯ ನಾಯಕತ್ವಗಳನ್ನು ಸಾಳ್ವಕವಿ ಗುರುತಿಸುತ್ತಾನೆ.

ಇನ್ನು ನಾಯಕ ನಾಯಕಿಯರ ಮಧ್ಯೆ ಬರುವವರೇ ವಿಟ, ಚೇಟ–ಚೇಟಿ, ವಿದೂಷಕ, ಪೀಠಮರ್ದಕರು. ಇವರನ್ನು ಇವರು ಮಾಡುವ ಕೆಲಸವನ್ನವಲಂಬಿಸಿ ಈ ಹೆಸರುಗಳಿಂದ ಕರೆಯಲಾಗುತ್ತದೆ. ರಾಜನ ಪಕ್ಕದಲ್ಲಿದ್ದುಕೊಂಡು ಅವನು ಹೇಳುವ ಕಾರ್ಯಗಳಿಗೆ ಸದಾಸಿದ್ಧರಾಗಿರುವವರು ಪೀಠಮರ್ಧಕರು. ಕಾಮವಿದ್ಯೆಯನ್ನು ಹೇಳುವವರು ವಿಟರು. ನಾಯಕ ನಾಯಕಿಯರ ಮಧ್ಯ ಮನಸ್ತಾಪವಾದಾಗ ಅವರಲ್ಲಿ ಸಂಧಾನ ಮಾಡುವವನು ಚೇಟ. ರಾಜ–ರಾಣಿಯರು ಸದಾ ಸಂತೋಷದಿಂದ ಇರುವಂತೆ ನೋಡಿಕೊಳ್ಳುವವನು ವಿದೂಷಕ.

ಮುಂದುವರೆದು, ನಾಗರಿಕರ ಲಕ್ಷಣಗಳನ್ನೂ ಸಾಳ್ವಕವಿಯು ತಿಳಿಯಪಡಿಸುತ್ತಾನೆ. ವಾಕ್‌ಪ್ರೌಢಿಮೆಯುಳ್ಳವರು; ಕನ್ನಡದಲ್ಲಿ ಮಾತನಾಡುವವರು; ನಗರವಾರ್ತೆಯನ್ನು ಅರಿತುಕೊಂಡು ಅರಸನಿಗೆ ಸವಿವರವಾಗಿ ಒಪ್ಪಿಸುವವನು ನಾಗರಿಕನೆನಿಸಿಕೊಳ್ಳುತ್ತಾನೆ.[೮೭] ಉದ್ದ ಕೂದಲನ್ನು ಬಿಟ್ಟು, ಹಣೆಯ ಮೇಲೆ ಕಸ್ತೂರಿ ಬೊಟ್ಟನಿಟ್ಟು, ಮುಖಕ್ಕೊಪ್ಪುವಂತೆ ಕಿವಿಯಲ್ಲಿ ಓಲೆ ಧರಿಸಿ, ಕುಪ್ಪಸವನ್ನು ಧರಿಸಿರುತ್ತಾರೆ ಎಂದು ಇವರ ಲಕ್ಷಣಗಳನ್ನು ತಿಳಿಸುತ್ತಾನೆ.

ಸಾಳ್ವಕವಿಯು ನಾಯಕಿಯರ ಲಕ್ಷಣಗಳನ್ನು ಅವರ ವಿವಿಧ ವರ್ತನೆಗಳಿಗನುಗುಣವಾಗಿ ಗುರುತಿಸುತ್ತಾನೆ.

ಸೂತ್ರ–೮೬: **"ಕ್ರಮದಿಂ ದ್ವಾದಶವರ್ಷ**
ಪ್ರಮಾಣದೊಳ್ ಮುಗ್ಧೆ ಮಧ್ಯೆ ತದ್ದ್ವಿಗುಣದೊಳಾ
ಸಮಕಟ್ಟಿಂ ತದ್ದ್ವಿಗುಣ
ಪ್ರಮಿತಾಬ್ದದೊಳಾ ಪ್ರಗಲ್ಭೇಯೆನೆ ಪೆಸರ್ವಡೆಗುಂ ॥"[೮೮]

ನಾಯಕಿಯರಲ್ಲಿ ಪ್ರಮುಖವಾಗಿ ಮುಗ್ಧೆ, ಮಧ್ಯೆ, ಪ್ರಗಲ್ಭೆ ಎಂದು ಮೂರು ಭೇದಗಳನ್ನು ಮಾಡಿ, ಮಧ್ಯಾಖ್ಯೆ, ಧೀರೆ, ಮಧ್ಯಾಖ್ಯೆಧೀರಾಧೀರೆ, ಮಧ್ಯಾಖ್ಯಾಧೀರೆ, ಪ್ರಗಲ್ಭೆವೆಸರ ಧೀರೆ, ಧೀರಾಧೀರೆ, ಪ್ರಗಲ್ಭಾಧೀರೆ, ಕನ್ನಿಕೆ, ಊಡಾನಾಯಿಕೆ, ಪಣ್ಯ, ಸ್ವಾಧೀನಪತಿಕೆ, ಅಭಿಸಂದಿತೆ, ವಿರಹೋತ್ಕಂಠಿತೆ, ವಾಸಕಸಜ್ಜಿಕೆ, ವಿಪ್ರಲಬ್ಧೆ, ಖಂಡಿತೆ ಎಂದು ಉಪಭೇದಗಳನ್ನು ತಿಳಿಸುತ್ತಾನೆ. ಮುಂದುವರೆದು ಈ ನಾಯಿಕಾ ಭೇದಗಳಿಗನುಗುಣವಾಗಿ ಲಕ್ಷ್ಯಪದ್ಯಗಳನ್ನು ಹೇಳುತ್ತಾನೆ. ಹೀಗೆ ಸಾಳ್ವಕವಿಯು ನಾಯಕ

೮೭. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ. ೫೯೫

೮೮. ಎ. ವೆಂಕಟರಾವ್, ಪಂಡಿತ ಎಚ್. ಶೇಷ ಅಯ್ಯಂಗಾರ (ಸಂ) : **ಕವಿಸಾಳ್ವ ಕೃತಮಪ್ಪ ರಸರತ್ನಾಕರಂ** ; ಪುಟ. ೫೯

ನಾಯಿಕಾ ಪ್ರಕರಣದಲ್ಲಿ ನಾಯಕ ನಾಯಿಕೆಯರ ಲಕ್ಷಣ ಹಾಗೂ ಗುಣಗಳನ್ನು ಕುರಿತಾಗಿ ವಿವರಿಸುತ್ತಾನೆ.

೪) ಚತುರ್ಥ ಪ್ರಕರಣಂ : ವ್ಯಭಿಚಾರಿಭಾವ ವಿವರಣಂ

'ರಸರತ್ನಾಕರ' ಕೃತಿಯ ನಾಲ್ಕನೆಯ ಹಾಗೂ ಕೊನೆಯ ಪ್ರಕರಣದಲ್ಲಿ ಸಾಳ್ವಕವಿಯು ವ್ಯಭಿಚಾರಿಭಾವಗಳು, ಸಾತ್ವಿಕ ಭಾವಗಳ ಕುರಿತಾಗಿ ಚರ್ಚಿಸಿದ್ದಾನೆ. ಪೂರ್ವದ ವಿದ್ಯಾನಾಥನನ್ನು ಅನುಸರಿಸಿ ಲಜ್ಜಾ ಭಾವೋದಯ, ಭಾವಶಾಂತಿ, ರೋಷಹರ್ಷ, ವಿಷಾದ, ವಿತರ್ಕ ಭಾವಸಂಧಿ ಮತ್ತು ಭಾವಶಬಲತ್ವಗಳೆಂದು ಭಾವದ ಸ್ಥಿತಿಗಳನ್ನು ಗುರುತಿಸಿ ಹೇಳುತ್ತಾನೆ. ಅಂತೆಯೇ ಎರಡನೆಯ ನಾಗವರ್ಮನನ್ನು ಅನುಸರಿಸಿ ಅವನು ಹೇಳಿದ ಹಾಗೆಯೇ ಮೂವತ್ತಮೂರು ವ್ಯಭಿಚಾರಿಭಾವಗಳನ್ನು ಹೆಸರಿಸಿ ವಿಶ್ಲೇಷಿಸುತ್ತಾನೆ.

ಸೂತ್ರ–೧೧೦: **"ಮತಿ ಲಜ್ಜಾವೇಗ ಶಂಕಾ ಮರಣ ಚಪಲತಾ ಹರ್ಷ ನಿರ್ವೇದ ದೈನ್ಯ**
ಸ್ಮೃತಿ ಮೋಹಾಲಸ್ಯಗರ್ವ ಶ್ರಮ ಮದ ಜಡತಾ ಗ್ಲಾನಿ ಸಂಸುಪ್ತಿ ನಿದ್ರಾ
ಧೃತಿ ತರ್ಕೋನ್ಮಾದ ಬೋಧಾಮಯ ಭಯ ಸವಿಷಾದೋತ್ಸುಕಾಮರ್ಷ ಚಿಂತಾ
ಸತತಾಸೂಯಾವಹಿತ್ಥೋಗ್ರ ಕವಿಲಸದಪಸ್ಮಾರಕಾಖ್ಯಾನದಿಂದಂ ॥"[೮೯]

ಮತಿ, ಲಜ್ಜೆ, ವೇಗ, ಶಂಕೆ, ಮರಣ, ಚಪಲತೆ, ಹರ್ಷ, ನಿರ್ವೇದ, ದೈನ್ಯ, ಸ್ಮೃತಿ, ಮೋಹ, ಆಲಸ್ಯ, ಗರ್ವ, ಶ್ರಮ, ಮದ, ಜಡತಾ ಗ್ಲಾನಿ, ಸಂಸುಪ್ತಿ, ನಿದ್ರಾ, ಧೃತಿ, ತರ್ಕ, ಉನ್ಮಾದ, ಬೋಧೆ, ಮಯ, ಭಯ, ವಿಷಾದ, ಔತ್ಸುಕ್ಯ, ಆಮರ್ಷ, ಚಿಂತೆ, ಅಸೂಯೆ, ಅವಹಿತ್ಯ, ಉಗ್ರತೆ, ಅಪಸ್ಮಾರಗಳೆಂದು ಮೂವತ್ತಮೂರು ಬಗೆಯ ವ್ಯಭಿಚಾರಿಭಾಗಳನ್ನು ಸಾಳ್ವಕವಿಯು ತಿಳಿಸಿ, ಅವುಗಳ ಲಕ್ಷಣಗಳನ್ನು ಹೇಳುತ್ತಾನೆ. ಮುಂದುವರೆದು ರಸಾಭಾಸಭಾವಾಸಗಳನ್ನು ಹೇಳುವೆನೆಂದು[೯೦] ತಿಳಿಸಿ, ನಿರಿಂದ್ರಿಯ ಸಂಭೋಗ, ನಿರಿಂದ್ರಿಯ ವಿಪ್ರಲಂಭ, ಆಲಸ್ಯಭಾವಾಭಾಸ, ಗರ್ವಭಾವಾಭಾಸ, ಉಗ್ರಭಾವಾಭಾಸ, ನಿರಿಂದ್ರಿಯರೌದ್ರರಸಮೌಗ್ರ್ಯ ವ್ಯಭಿಚಾರಿ, ತಿರ್ಯಕ್‌ಸಂಭೋಗ ಶೃಂಗಾರಾಭಾಸ, ತಿರ್ಯಗ್ವಿಪ್ರಲಂಭ ಶೃಂಗಾರಾಭಾಸ, ಔತ್ಸುಕ್ಯ, ವಿತರ್ಕಚಿಂತಾ, ತಿರ್ಯಗ್ಭಾವಗಳು ಎಂದು ಗುರುತಿಸುತ್ತಾನೆ. ಅಲ್ಲದೇ ಆಶ್ರು, ಸ್ವೇದ, ಸ್ತಂಭ, ಲಯ, ಸ್ವರಭೇದ, ಕಂಪನ, ವೈವರ್ಣ್ಯಗಳೆಂಬ ಸಾತ್ವಿಕ ಭಾವಗಳನ್ನು ತಿಳಿಸಿ, ಇವುಗಳನ್ನು ಭರತನಿಂದಲೂ, ಹೇಮಚಂದ್ರನಿಂದಲೂ ಪಡೆದುದಾಗಿ ತಿಳಿಸುತ್ತಾನೆ.[೯೧]

ಹೀಗೆ ಕವಿಸಾಳ್ವನು 'ರಸರತ್ನಾಕರ'ವನ್ನು ವಿಶದಪೂರ್ಣವಾಗಿ ಪ್ರಸ್ತುಪಡಿಸುವನು.

---

೮೯. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ರಸರತ್ನಾಕರ** ; ಪುಟ.೬೧೦

೯೦. ಅದೇ : ಪುಟ. ೬೩೦ – "ವ : **ಇಂ ರಸಾಭಾಸಭಾವಾಭಾಸಂಗಳಂ ಪೇೞ್ವೆಂ**

ಸೂತ್ರ–೧೪೭: **ನೆಗೞ್ದ ನಿರಿಂದ್ರಿಯದೊಳ್ ತಿ**
ರ್ಯಗಾದಿಯೊಳ್ ಪುದಿದ ವಿವಿಧರಸಭಾವಂಗಳ್
ಬಗೆವೊಡವಾಭಾಸಂಗಳ್ ಪೆಂ
ಪೊಗೆದ ವಿಭಾವಾನುಭಾವದಾರೋಪಿತದಿಂ ॥

೯೧. ಎ. ವೆಂಕಟರಾವ್, ಪಂಡಿತ ಎಚ್. ಶೇಷ ಅಯ್ಯಂಗಾರ (ಸಂ) : **ಕವಿಸಾಳ್ವ ಕೃತಮಪ್ಪ ರಸರತ್ನಾಕರಂ** ; ಪುಟ. ೧೦೪
ವ : **"ಇಂತು ಚಿತ್ತತ್ವದಿನೆಲ್ಲಾರಸಂಗಳ್ಗಪ್ಪುವಿಂ ವ್ಯಭಿಚಾರಿಗಳನನುಭಾವಂಗಳೊಡನೆಯೆ ಹೇಮಚಂದ್ರಾಚಾರ್ಯರ್ ಭರತಮತದಿಂದ ಪೇೞ್ದರ್ ಅಂತೆಗೆಯ್ದಂ"**

ಈ ಕೃತಿ ಕವಿಕೃತ ನುತ ಕವಿ
ತಾ ಕಾಂತೆಗೆ ತಾನೆ ನವರಸಂ ಸಲೆ ರಸರ
ತ್ನಾಕರಮಿಳೆ ಶಶಿ ರವಿ ರ
ತ್ನಾಕರಮಿರ್ಪನ್ನೆಗಂ ಜಯಿಕ್ಕುರ್ವರೆಯೊಳ್ ॥

ಇದು ಶತೇಂದ್ರ ಮುನೀಂದ್ರವಂದಿತಾರ್ಹತ್ಪರಮೇಶ್ವರ ಪಾದಾರವಿಂದ ಮಂದ ಮಕರಂದಾನಂದಿತ ಭೃಂಗಾಯಮಾನ ಕವಿಸಾಳ್ವ ವಿರಚಿತಮಪ್ಪ ರಸರತ್ನಾಕರಂ ॥

೪.೧.೩.೨. ಶಾರದಾವಿಲಾಸಂ:

ಶಾರದಾವಿಲಾಸವು ಸಾಳ್ವಕವಿಯ ಇನ್ನೊಂದು ಅಲಂಕಾರಿಕ ಗ್ರಂಥವಾಗಿದೆ. ಈ ಗ್ರಂಥದ 'ಧ್ವನಿವ್ಯಂಗ್ಯ ಪ್ರಕರಣಂ' ಎಂಬ ದ್ವಿತೀಯ ಪರಿಚ್ಛೇದವು ಮಾತ್ರ ಉಪಲಬ್ಧವಾಗಿದೆ. ಆನಂದವರ್ಧನನು ಹೇಳುವ 'ಕಾವ್ಯಸ್ಯಾತ್ಮ ಧ್ವನಿಃ' ಎಂಬ ಮಾತನ್ನು ಪುಷ್ಠೀಕರಿಸಿ ಪೂರ್ವಾಚಾರ್ಯರು ಹೇಳಿದ ಧ್ವನಿತತ್ತ್ವವನ್ನು ವಿಶ್ಲೇಷಿಸುತ್ತೇನೆ ಎಂದು ಮುಂದುವರೆಯುತ್ತಾನೆ. ಈ ಕೃತಿಯ ಮೊದಲ ಮತ್ತು ಕೊನೆಯ ಅಧ್ಯಾಯಗಳು ದೊರೆಯದೇ ಇದ್ದುದರಿಂದ ಇದು ಸಾಳ್ವಕೃತವೆಂದು ಹೇಳುವುದು ಕಷ್ಟವಾದರೂ, ಉಪಲಬ್ಧ ಭಾಗದಲ್ಲಿ ಕವಿಯು ತನ್ನ ಆಶ್ರಯದಾತ 'ಸಾಳ್ವಮಲ್ಲ'ನ ಹೆಸರನ್ನು ಉಲ್ಲೇಖಿಸಿರುವುದರಿಂದ ಇದರ ಕರ್ತೃ ಸಾಳ್ವನೇ ಎಂದು ವಿದ್ವಾಂಸರ ಬಹುಮತವಾಗಿದೆ. ಮುಂದುವರೆದು, ಕಾವ್ಯವಿಶೇಷಭೇದಗಳನ್ನು ಹೇಳುವೆನು ಎಂದು ಈ ಎರಡನೆಯ ಪರಿಚ್ಛೇದವನ್ನು ಸಾಳ್ವಕವಿಯು ಹೇಳಿ :

ಸೂತ್ರ : "ಆವೆಡೆಯೊಳಂ ವಾಚ್ಯದತ್ತಣಿಂದಧಿಕಮಪ್ಪ ವ್ಯಙ್ಗ್ಯಮನುಳ್ಳುದುತ್ತಮಕಾವ್ಯಂ ಆ ಕಾವ್ಯಮುಂ ಧ್ವನಿಯೆಂಬ ಪೂರ್ವಾಚಾರ್ಯರಿಂ ಪೇಟಲ್ಪಟ್ಟಿತು"[೯೨]

ವಾಚ್ಯದಿಂದ ಅಧಿಕವಾಗಿರುವುದು, ವ್ಯಂಗ್ಯವನ್ನುಳ್ಳದ್ದು ಉತ್ತಮ ಕಾವ್ಯ. ಅದು ಪೂರ್ವಕವಿಗಳಿಂದ 'ಧ್ವನಿ'ಯೆಂದು ಕರೆಯಲ್ಪಟ್ಟಿತು ಎಂದು ಹೇಳುತ್ತಾನೆ. ವಾಚಕ, ಲಕ್ಷಣ ಹಾಗೂ ವ್ಯಂಗ್ಯಗಳು ಕಾವ್ಯ ಧ್ವನಿಯ ಮುಖ್ಯ ಅಂಶಗಳು. ಮುಂದುವರೆದು "ವಾಚ್ಯಕಂ ಎಂದರೆ ಯಾವ ಶಬ್ದ ಸುಲಭವಾಗಿ ಅರ್ಥವನ್ನು ಬಿಟ್ಟುಕೊಟ್ಟರೆ ಅದನ್ನು ವಾಚ್ಯ ಎಂದು ಕರೆಯಬೇಕೆಂದು ಮಾಮೂಲು ಹೇಳಿಕೆಯನ್ನು ಹೇಳುತ್ತಾನೆ. ಇದರಲ್ಲಿನ ವಿವಿಧ ಕ್ರಿಯೆಗಳನ್ನು ಸೂಚಿಸುವಾಗ ಜಾತಿ, ಗುಣ, ಕ್ರಿಯಾ, ದ್ರವ್ಯ, ಯದೃಚ್ಛಾ ಎಂಬ ಶಬ್ದಗಳನ್ನು ಹೆಸರಿಸುತ್ತಾನೆ. ಆದರೆ ಇವುಗಳ ಬಗೆಗೆ ವಿವರಣೆಗಳಿಲ್ಲ."[೯೩] ಕೇವಲ ಶಬ್ದಾರ್ಥಗಳ ಜ್ಞಾನದಿಂದ ಅಂದರೆ ವ್ಯಾಕರಣ, ನಿಘಂಟು ಮೊದಲಾದವುಗಳ ಸಹಾಯದಿಂದ ಮಾತ್ರವೇ ಕಾವ್ಯಾರ್ಥವನ್ನು ತಿಳಿಯುವುದು ಸಾಧ್ಯವಿಲ್ಲ. ಎಲ್ಲಿ ಅರ್ಥವಾಗಲೀ, ಶಬ್ದವಾಗಲೀ ತನ್ನನ್ನು ಅಥವಾ ತನ್ನ ಅರ್ಥವನ್ನು ಅಪ್ರಧಾನವಾಗಿಸಿಕೊಂಡು ವ್ಯಂಗ್ಯಾರ್ಥವನ್ನು ಸೂಚಿಸುವವೋ ಆ ಕಾವ್ಯ ವಿಶೇಷವನ್ನು ಪಂಡಿತರು ಧ್ವನಿ ಎಂದು ಕರೆದಿದ್ದಾರೆ ಎಂದು ಸಾಳ್ವಕವಿಯು ಉಲ್ಲೇಖಿಸುತ್ತಾನೆ. ಧ್ವನಿಯಲ್ಲಿ ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳೆಂದು

೯೨. ಪ್ರೊ. ಎಂ. ಎ. ಜಯಚಂದ್ರ (ಸಂ) (ಸಂ) : **ಸಾಳ್ವ ಸಂಪುಟ–ಶಾರದಾವಿಲಾಸಂ** ; ಪುಟ.೬೪೧

೯೩. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ : **ಸಾಳ್ವಕವಿ ಭಾರತ ಒಂದು ಚಾರಿತ್ರಿಕ ಅಧ್ಯಯನ** ; ಪುಟ.೩೬

ಮೂರು ಭೇದಗಳಿವೆ. ವ್ಯಂಗ್ಯವನ್ನುಳ್ಳದ್ದು ಉತ್ತಮ ಕಾವ್ಯ, ವ್ಯಂಗ್ಯ ಮತ್ತು ಲಕ್ಷ್ಯಗಳನ್ನುಳ್ಳದ್ದು ಮಧ್ಯಮ ಕಾವ್ಯ ಹಾಗೂ ವಂಗ್ಯರಹಿತವಾಗಿರುವುದು ಅಧಮ ಕಾವ್ಯವೆಂದು ವಿವರಣೆ ಕೊಡುತ್ತಾನೆ.

ವ: **"ವಾಚಕ ಲಕ್ಷಣ ವ್ಯಂಜಕಮೆಂದು ಶಬ್ದಂ ಮೂದೆಱಂ ಅವರ್ಕೆ ವಿಷಯಮಾದರ್ಥಂ ವಾಚ್ಯ ಲಕ್ಷ್ಯ ವ್ಯಙ್ಗಮೆಂದು ತ್ರಿವಿಧಂ ಮಱೆಯಿಲ್ಲದೆ ಸಂಕೇತದಿಂದರ್ಥಮನಱೆಪುವುದು ವಾಚಕಂ ಮುಖ್ಯಾರ್ಥ ಬಾಧೆಯಾಗೆ ತದ್ಯೋಗಮುಂಟಾಗೆ ರೂಢಿಪ್ರಯೋಜನ ದತ್ತಣಿಂದರ್ಥಾಂತರಮುಂ ತೋರ್ಪುದು ಲಕ್ಷಕಮೆನಿಕ್ಕುಂ ಶಬ್ದಮಂ ಸಹಕಾರಿಯಂ ಮಾಡಿಕೊಂಡು ಅರ್ಥದಿಂದೆ ಅರ್ಥಾಂತರಂ ಪುಟ್ಟುವುದು ಅರ್ಥಮೂಲವ್ಯಂಜನೆಯೆನಿಕ್ಕುಂ ಆಯರ್ಥಂ ವಾಚ್ಯಮೂಲ ಲಕ್ಷ್ಯಮೂಲಂ ವ್ಯಙಗಮೂಲಮೆಂದು ಮೂದೆಱಂ ವಾಚ್ಯದತ್ತಣಿಂರ್ಥಾಂತರಂ ಪುಟ್ಟುವುದು ವಾಚ್ಯಮೂಲಮೆನಿಕ್ಕುಂ"**[೯೪]

ಒಂದು ಶಬ್ದವನ್ನು ಕೇಳಿದ ಕೂಡಲೇ ಥಟ್ಟನೆ ಮನಸ್ಸಿಗೆ ಹೊಳೆಯುವ ರೂಢಿಯಲ್ಲಿರುವ ಪ್ರಸಿದ್ಧವಾದ ಸಾಂಕೇತಿಕವಾದ ಅರ್ಥವನ್ನು ವಾಚ್ಯಾರ್ಥ ಎನ್ನುವರು. ಈ ವಾಚ್ಯಾರ್ಥವನ್ನು ನೀಡುವ ಶಕ್ತಿಗೆ 'ಅಭಿಧಾವೃತ್ತಿ' ಎನ್ನುವರು. ಆ ಶಬ್ದವನ್ನು 'ವಾಚಕ' ಎಂದು ಕರೆಯಲಾಗುತ್ತದೆ. ಮುಖ್ಯಾರ್ಥಕ್ಕೆ ಕುಂದುಂಟಾಗಿ ಅರ್ಥ ಹೊಂದಿಕೆ ಉಂಟಾಗದಿದ್ದಾಗ ರೂಢಿ ಪ್ರಯೋಜನಗಳ ಹಿನ್ನೆಲೆಯಲ್ಲಿ ಆ ಶಬ್ದಗಳಿಗಿರುವ ವಾಚಾರ್ಥಕ್ಕೆ ಮತ್ತೊಂದು ಅರ್ಥವನ್ನು ಹೊಂದಿಸಿಕೊಳ್ಳುವುದೇ ಲಕ್ಷ್ಯಾರ್ಥ. ಲಕ್ಷ್ಯಾರ್ಥವನ್ನು ಕೊಡುವ ಶಕ್ತಿ 'ಲಕ್ಷಣಾವೃತ್ತಿ'. ಆ ಶಬ್ದಕ್ಕೆ 'ಲಕ್ಷಕ' ಎಂದು ಕರೆಯುತ್ತಾರೆ. ಕೇಳುವವರ ವಯಸ್ಸು ಅನುಭವ ಬುದ್ಧಿಗಳ ಆಧಾರದ ಮೇಲೆ ಮತ್ತೊಂದು ಅರ್ಥವು ಗೋಚರಿಸುತ್ತದೆ. ಆ ಅರ್ಥವು ವಾಚ್ಯವಾಗಿ ತೋರುವುದಿಲ್ಲ. ಸೂಚ್ಯವಾಗಿ ವ್ಯಂಗ್ಯಾರ್ಥವನ್ನು ನೀಡುವ ಶಕ್ತಿ 'ವ್ಯಂಜನಾವೃತ್ತಿ'. ಆ ಶಬ್ದವನ್ನು ವ್ಯಂಜಕ ಎಂದು ಕರೆಯುತ್ತಾರೆ. ಮುಂದುವರೆದು ಶಬ್ದಮೂಲವ್ಯಂಜಕ, ಸಂಯೋಗಾದಿಕ, ಅರ್ಥಶಕ್ತಿಮೂಲ ವ್ಯಂಜನ, ನಿಷೇಧವಿಧಿ, ವಿಧಿನಿಷೇಧ ಮುಂತಾದ ವಿಶೇಷ ಧ್ವನಿಗಳ ಕುರಿತಾಗಿ ಪ್ರಸ್ತುತ 'ಶಾರದಾವಿಲಾಸ' ಕೃತಿಯ ಎರಡನೆಯ ಆಶ್ವಾಸದಲ್ಲಿ ಸಾಳ್ವಕವಿಯು ಪ್ರತಿಪಾದಿಸುತ್ತಾನೆ.

೪.೨. ಛಂದಶ್ಶಾಸ್ತ್ರ:

ಪ್ರಕೃತಿಯ ಪ್ರತಿಯೊಂದು ವಸ್ತುವಿನ ಅಲುಗಾಟ, ಕುಲುಕಾಟ, ಚಲನೆ, ಸ್ಥಿತೀಕರಣ ಇವೆಲ್ಲದಕ್ಕೂ ತನ್ನದೆಯಾದ ಒಂದು ನಾದ, ಲಯವಿರುತ್ತದೆ. ಅಂತೆಯೇ ಸೃಷ್ಟಿಯ ಅನುಕರಣವಾದ ಕಲೆಯೇ ಲಯ. ಇನ್ನು ಕಾವ್ಯವೂ ಕೂಡ ಒಂದು ನಾದ, ಲಯಕ್ಕೆ ಒಳಪಟ್ಟಿರುವುದು. ಕಾವ್ಯವು ಮುಖ್ಯವಾಗಿ ಶ್ರವ್ಯಕಲೆ. ಆದ್ದರಿಂದ "ಕಾವ್ಯವನ್ನು ಓದಿದಾಗ ಅಥವಾ ಹಾಡಿದಾಗ ಅದರ ಪದಗಳ ಧಾಟಿಯಲ್ಲಿ, ನಡೆಯಲ್ಲಿ ಹಿತಕರವಾಗಿ ಕೇಳಿ ಬರುವ ಕ್ರಮವಾದ ಸ್ವರಗಳ ಏರಿಳಿತವೇ ನಾದಲಯ. ಇದನ್ನು ಸ್ವರಾಂದೋಲನವೆಂದೂ ಕರೆಯಬಹುದು."[೯೫] ಸ್ವರೋಚ್ಚಾರಣೆಯ ಕಾಲ ಪ್ರಮಾಣವನ್ನು ಮಾತ್ರೆ ಎನ್ನುವರು. ಈ ಅಕ್ಷರಗಳ ಒಂದು ಗೊತ್ತಾದ

---

೯೪. ಪ್ರೊ. ಎಂ. ಎ. ಜಯಚಂದ್ರ (ಸಂ) : **ಸಾಳ್ವ ಸಂಪುಟ–ಶಾರದಾವಿಲಾಸಂ** ; ಪುಟ.೬೪೨, ೬೪೩, ೬೪೬

೯೫. ಪ್ರೊ. ಎಂ. ವಿ. ಸೀತಾರಾಮಯ್ಯ ; **ಶಾಸ್ತ್ರ ಸಾಹಿತ್ಯ** ; ಪುಟ. ೧೧೨

ಸಂಖ್ಯೆಯ ಪಾದಗಳ ಪದ್ಯಜಾತಿಗೂ, ಈ ಜಾತಿಗಳನ್ನು ವಿವರಿಸುವ ಶಾಸ್ತ್ರಕ್ಕೂ 'ಛಂದಸ್ಸು' ಎಂದು ಹೆಸರು. ಲಯ, ಶಬ್ದ ಪ್ರಪಂಚ ಸರ್ವಸ್ವಕ್ಕೂ ಅನ್ವಯಿಸುವ ಸೂತ್ರ. ಛಂದಸ್ಸು ಪದ್ಯಗಳಿಗೆ ಮಾತ್ರ ಸಂಬಂಧಿಸಿದ್ದು. ಭರತಮುನಿ ಹೇಳುವಂತೆ, "ಛಂದಸ್ಸಿಲ್ಲದ ಶಬ್ದವಿಲ್ಲ; ಶಬ್ದವನ್ನು ಬಿಟ್ಟು ಛಂದಸ್ಸಿಲ್ಲ."[೯೬] ಆದರೆ ಗದ್ಯದ ಲಯವನ್ನು ಛಂದಸ್ಸು ಎನ್ನಲಾಗದು. ಪದ್ಯದ ಲಯವು ಮಾತ್ರ ಛಂದಸ್ಸಾಗಿದೆ. ಸಾಮಾನ್ಯವಾಗಿ ಕಾವ್ಯಗಳೆಲ್ಲವೂ ಪದ್ಯರೂಪದಲ್ಲಿರುವುದರಿಂದ ಕಾವ್ಯಕ್ಕೂ ಛಂದಸ್ಸಿಗೂ ಅವಿನಾಭಾವ ಸಂಬಂಧವೇರ್ಪಟ್ಟಿದೆ. ಆದುದರಿಂದಲೇ ಕಾವ್ಯಕಲೆಯಲ್ಲಿ ಛಂದಸ್ಸನ್ನು ಅರಿತವನು ಮಾತ್ರ ಉತ್ತಮವಾದ ಕಾವ್ಯವನ್ನು ರಚಿಸಲು ಸಾಧ್ಯವೆಂದು ಕವಿರಾಜಮಾರ್ಗಕಾರ ಶ್ರೀವಿಜಯನ ಅಭಿಮತವಾಗಿದೆ.

"ಕುಱಿತಂತು ಪೆಱರ ಬಗೆಯಂ
ತೆಱೆದಿರೆ ಪೆಱರ್ಗಱಿಪಲಾರ್ಪಮಂ ಮಾತಱಿವಂ ।
ಕಿಱಿದರೊಳೆ ಪಿಱಿದುಮರ್ಥಮ
ನಱಿಪಲ್ ನೆಱೆವಾತನಾತನಿಂದಂ ಜಾಣಂ ॥೧.೧೪॥
ನುಡಿಯಂ ಛಂದದೊಳೊಂದಿರೆ
ತೊಡರ್ಚಲರಿವಾತನಾತನಿಂದಂ ಜಾಣಂ ॥೧.೧೫॥"[೯೭]

ಇತರರ ಮನಸ್ಸಿಗೆ ಮುಟ್ಟುವಂತೆ ಒಂದು ವಿಷಯವನ್ನು ನಿರೂಪಿಸಬಲ್ಲವನು ಮಾತುಬಲ್ಲವನು; ಕಡಿಮೆ ಮಾತಿನಲ್ಲಿ ಹಿರಿದಾದ ವಿಷಯವನ್ನು ತಿಳಿಸಬಲ್ಲವನು ಅವನಿಗಿಂತಲೂ ಜಾಣನು; ಮಾತುಗಳನ್ನು ಛಂದಸ್ಸಿನಲ್ಲಿ ಅಳವಡಿಸಲು ಬಲ್ಲವನು ಆತನಿಗಂತಲೂ ಜಾಣನು ಎಂದು ಹೇಳುತ್ತಾನೆ ಶ್ರೀವಿಜಯ. ಇಂದರಿಂದ ಕಾವ್ಯಕ್ಕೆ ಛಂದಸ್ಸಿನ ಪಾತ್ರವೆಷ್ಟು ಮಹತ್ವದ್ದು ಎಂಬ ವಿಚಾರ ತಿಳಿಯುತ್ತದೆ. ಜಯಕೀರ್ತಿಯು ತನ್ನ ಛಂದೋನುಶಾಸನದಲ್ಲಿ –

"ಛಂದಶಾಸ್ತ್ರಂ ವಹಿತ್ರಂ ತದ್‌ವಿದಕ್ಷೋಃ ಕಾವ್ಯ ಸಾಗರಂ
ಛಂದೋಭಾಗ್ ವಾಙ್ಮಯ ಸರ್ವಂ ನ ಕಿಂಚಿತ್ ಛಂದಸಾ ವಿನಃ ॥"[೯೮]

ಅಂದರೆ 'ಛಂದಶ್ಶಾಸ್ತ್ರವು ದೋಣಿಯಿದ್ದಂತೆ; ಕಾವ್ಯವೆಂಬ ವಿಶಾಲಸಾಗರದಲ್ಲಿ ಅದರ ಸಂಚಾರ; ಮಾತಿನ ಪ್ರಪಂಚವೆಲ್ಲವೂ ಆ ಛಂದಸ್ಸಿಗೆ ಒಳಪಟ್ಟಿದೆ. ಛಂದಸ್ಸಿಲ್ಲದೇ ಕಿಂಚಿತ್ತೂ ಇಲ್ಲ' ಎಂದಿದ್ದಾನೆ. ಪ್ರತಿಯೊಂದು ಭಾಷೆಯೂ ತನ್ನದೇಯಾದ ಛಂದಸ್ಸನ್ನು ಹೊಂದಿದೆ. ಅದು ಆಯಾ ಭಾಷೆಯ ಉಚ್ಚಾರಣೆಯನ್ನನುಸರಿಸುತ್ತದೆ. ಅದನ್ನನುಸರಿಸಿ ಭಾರತೀಯ ಭಾಷೆಗಳ ಛಂದೋಪ್ರಕಾರಗಳನ್ನು ೧. ಪ್ರಾಕೃತ ಛಂದಸ್ಸು ೨. ಸಂಸ್ಕೃತ ಛಂದಸ್ಸು ೩. ದ್ರಾವಿಡ ಛಂದಸ್ಸು ಎಂದು ಮೂರು ಭೇದಗಳನ್ನು ಗುರುತಿಸಲಾಗುತ್ತದೆ. "ಸಂಸ್ಕೃತ ಛಂದಸ್ಸು ಅಕ್ಷರಗಣಗಳಿಗೆ ಒಳಪಟ್ಟಿದೆ; ಪ್ರಾಕೃತ

---

೯೬. ಪ್ರೊ. ಎಂ. ವಿ. ಸೀತಾರಾಮಯ್ಯ ; **ಶಾಸ್ತ್ರ ಸಾಹಿತ್ಯ** ; ಪುಟ. ೧೫೩
"ಛಂದೋ ಹೀನೋ ನ ಶಬ್ದೋಸ್ತಿ ನಚ್ಛಂದಶ್ಶಬ್ದವರ್ಜಿತಃ"

೯೭. ಎಂ. ವಿ. ಸೀತಾರಾಮಯ್ಯ (ಸಂ) : **ಶ್ರೀವಿಜಯಕೃತ ಕವಿರಾಜಮಾರ್ಗಂ** ; ಪುಟ.೧೦೭

೯೮. ಪ್ರೊ. ಎಂ. ವಿ. ಸೀತಾರಾಮಯ್ಯ ; **ಶಾಸ್ತ್ರ ಸಾಹಿತ್ಯ** ; ಪುಟ. ೧೫೩
"ಛಂದೋ ಹೀನೋ ನ ಶಬ್ದೋಸ್ತಿ ನಚ್ಛಂದಶ್ಶಬ್ದವರ್ಜಿತಃ"

ಛಂದಸ್ಸು ಮಾತ್ರಾಗಣಗಳಿಗೆ ಒಳಪಟ್ಟಿದೆ; ಇನ್ನೂ ದ್ರಾವಿಡ ಛಂದಸ್ಸು ದೇವಗಣಗಳಿಗೆ ಅಂದರೆ ಅಂಶಛಂದಸ್ಸಿಗೆ ಒಳಪಟ್ಟಿದೆ."[೯೯] ಆದರೆ ಕನ್ನಡ ಛಂದಸ್ಸು ಮಾತ್ರ ಇವೆಲ್ಲವನ್ನೂ ಒಳಗೊಂಡಿದ್ದು, ಆದ್ದರಿಂದ ಕನ್ನಡ ಛಂದಸ್ಸಿಗೆ ವಿಶೇಷ ಸ್ಥಾನಮಾನವು ಉಪಲಬ್ಧವಾಗಿದೆ. ಅಂದರೆ ಕನ್ನಡ ಛಂದಸ್ಸಿನ ಮೇಲೆ ಸಂಸ್ಕೃತ, ಪ್ರಾಕೃತ ಹಾಗೂ ದ್ರಾವಿಡ ಈ ಮೂರೂ ಛಂದೋಪ್ರಕಾರಗಳ ಪ್ರಭಾವವನ್ನು ಕಾಣಬಹುದು. ಆ ಕಾರಣವಾಗಿಯೇ ಕನ್ನಡ ಛಂದಸ್ಸು ವೈವಿಧ್ಯಮಯವಾಗಿದೆ.

"ಸಂಸ್ಕೃತದ ವೇದಗಳ ಛಂದಸ್ವರೂಪವನ್ನು ತಿಳಿಸುವ ಛಂದಶ್ಶಾಸ್ತ್ರ ವೇದಾಂಗವಾಯಿತು. ವೇದಾಂಗವಾದ ಛಂದಶ್ಶಾಸ್ತ್ರವು ವೇದದಂತೆಯೇ ಕರ್ತೃರಹಿತವಾಗಿದ್ದರೂ ಅನಾದಿಯಾಗಿದ್ದ ಇದನ್ನು ತಪಃಶಕ್ತಿಯಿಂದ ತಿಳಿದುಕೊಂಡು ಋಷಿಗಳು ಪ್ರಪಂಚದೆಲ್ಲೆಡೆ ಹರಡಿದರು. ವೇದಾಂಗ ಛಂದಶ್ಶಾಸ್ತ್ರ ಪ್ರವರ್ತಕರಲ್ಲಿ ಮಹೇಶ್ವರನು ಮೊಟ್ಟಮೊದಲನೆಯವನು. ಬಳಿಕ ಬ್ರಹ್ಮ-ವಿಷ್ಣು-ಗುರು ಯಾಸ್ಕಮಹರ್ಷಿಯು ಈ ಮೊದಲಾದ ಕ್ರಮಗಳನ್ನು ಈ ಮುಂದಿನ ಶ್ಲೋಕವು ತಿಳಿಸುತ್ತದೆ-

ಛಂದೋಜ್ಞಾನಮಿದಂ ಭವಾದ್ಭಗವತೋ ಲೇಭೇ ಸುರಾಣಾಂ ಪತಿಃ ।
ತಸ್ಮಾದ್ದುಶ್ಚ್ಯವನಃ ತತಸ್ಸುತಗುರುರ್ಮಾಂಡವ್ಯನಾಮಾ ತತಃ ॥

ಮಾಂಡವ್ಯಾದಪಿ ಸೈತವಃ ತತಃ ಋಷಿರ್ಯ್ಯಾಸ್ಕಃ ತತಃ ಪಿಂಗಲಃ ।
ತಸ್ಯೇದಂ ಯಶಸಾ ಗುರೋರ್ಭುವಿ ಧೃತಂ ಪ್ರಾಪ್ಯಾಸ್ಮದಾದ್ಯೈಃ ಕೃತಃ ॥

ಇದರಂತೆ ಮಾಂಡವ್ಯ, ಸೈತವ, ಯಾಸ್ಕರು ಛಂದೋಗ್ರಂಥಕರ್ತರು ಎಂಬ ವಿಚಾರವು ತಿಳಿಯುತ್ತದೆಯಾದರೂ; ಉಪಲಬ್ಧ ಗ್ರಂಥಗಳನ್ನವಲೋಕಿಸಿದಾಗ ಪಿಂಗಳನೇ ಮೊದಲ ಛಂದಶ್ಶಾಸ್ತ್ರಕಾರ ಎಂಬುದು ವಿದಿತವಾಗುತ್ತದೆ. ಆತನ ತರುವಾಯದಲ್ಲಿ ಹಲವಾರು ಛಂದೋಗ್ರಂಥಗಳು ಉಪಲಬ್ಧವಾಗಿವೆ. ಪಿಂಗಳನು ಪ್ರಾಕೃತ ಛಂದೋಗ್ರಂಥವೊಂದನ್ನು ಬರೆದಿರುವುದಾಗಿಯೂ ತಿಳಿದುಬರುತ್ತದೆ."[೧೦೦] ಸಂಸ್ಕೃತದಲ್ಲಿ ಗಾಯತ್ರೀ, ಅನುಷ್ಟುಪ್, ತ್ರಿಷ್ಟುಪ್ ಮತ್ತು ಜಗತೀ ಎಂಬ ಛಂದೋಪ್ರಕಾರಗಳು ಅತ್ಯಂತ ಪ್ರಸಿದ್ಧಿಯನ್ನು ಪಡೆದುಕೊಂಡಿವೆ. ಇವು ಲೌಕಿಕ ಛಂದಸ್ಸುಗಳು ಎನಿಸಿಕೊಂಡಿವೆ. ಪಿಂಗಳನ ನಂತರದಲ್ಲಿ ಲೌಕಿಕ ಛಂದೋಗ್ರಂಥವಾದ 'ವೃತ್ತರತ್ನಾಕರ'ವನ್ನು ಕೇದಾರಭಟ್ಟ (೧೧೦೦) ಎಂಬ ಕವಿಯು ಸಂಸ್ಕೃತದಲ್ಲಿ ರಚಿಸಿದುದಾಗಿ ತಿಳಿದುಬರುತ್ತದೆ.

ಛಂದಸ್ಸಿನ ಕುರಿತಾಗಿ ಎನ್. ಅನಂತರಂಗಾಚಾರ್ ಅವರು "ಭಾಷೆಯು ಛಂದಸ್ಸಿನಲ್ಲಿ ಅಡಕವಾಗಿ ಪ್ರಕಟವಾಗುವವು. ಛಂದಸ್ಸು ದೇವತೆಗಳನ್ನು ಸ್ತೋತ್ರ ಮಾಡಲು ಗಾನರೂಪವಾಗಿ ಹಾಡಲು ಬಹು ಉಪಯುಕ್ತವಾಗಿರುತ್ತದೆ. ಕಂಠಪಾಠ ಮಾಡಲು ಸುಲಭ. ಪಿಂಗಳರಿಂದ ರಚಿತವಾದ ಛಂದಸ್ಸೇ ಪ್ರಾಚೀನ ಛಂದಶ್ಶಾಸ್ತ್ರ. ಆದರೆ ಅದುವೇ ಪ್ರಾಚೀನವೆಂದು ಹೇಳಲಾಗದು.

---

೯೯. ಪ್ರೊ. ಎಂ. ವಿ. ಸೀತಾರಾಮಯ್ಯ ; **ಶಾಸ್ತ್ರ ಸಾಹಿತ್ಯ** ; ಪುಟ. ೧೧೫

೧೦೦. ವಿದ್ವಾನ್ ಎಚ್. ಎಸ್. ರಾಮಸ್ವಾಮಿ ಅಯ್ಯಂಗಾರ್ : **ಛಂದೋಂಬುಧಿ (ಪ್ರಥಮ ನಾಗವರ್ಮ ವಿರಚಿತಂ)**; ಪುಟ. x (ಮುನ್ನುಡಿ)

ಬ್ರಾಹ್ಮಣಕ ಮತ್ತು ಅರಣ್ಯಕಗಳಲ್ಲಿ ಛಂದಶ್ಶಾಸ್ತ್ರದ ಮೂಲರೂಪವನ್ನು ಕಾಣಬಹುದು. ಕಾಲಾಂತರದಲ್ಲಿ ವೈದಿಕ ಛಂದಸ್ಸು ಮತ್ತು ಲೌಕಿಕ ಛಂದಸ್ಸುಗಳೆಂದು ಭೇದಗಳಾದವು. ವೈದಿಕ ಛಂದಸ್ಸು ಲೌಕಿಕ ಛಂದಸ್ಸಿನಷ್ಟು ಕ್ರಮಬದ್ಧವಾಗಿಲ್ಲ. ಸಾಮಾನ್ಯವಾಗಿ ಅಕ್ಷರ ಸಂಖ್ಯೆಯಲ್ಲಿ ಒಂದು ಛಂದಸ್ಸಿನಿಂದ ಇನ್ನೊಂದು ಛಂದಸ್ಸನ್ನು ಭಿನ್ನವಾಗಿಸುತ್ತದೆ. ಗಾಯತ್ರಿ, ಉಷ್ಣಿಕ್, ಪುರ ಉಷ್ಣಿಕ್, ಕುಕುಭ್, ಅನುಷ್ಟುಪ್ ಮುಂತಾದವುಗಳು ವೈದಿಕ ಛಂದಸ್ಸಿನಲ್ಲಿ ಸರ್ವೇಸಾಮಾನ್ಯವಾಗಿ ಬಳಕೆಯಾದವುಗಳು"[೧೦೧] ಎಂದು ಹೇಳುತ್ತಾರೆ.

ಕನ್ನಡ ಛಂದಸ್ಸಿನ ಇತಿಹಾಸವನ್ನು ಗಮನಿಸಿದರೆ, ಅದು ಸಂಸ್ಕೃತ ಛಂದಸ್ಸಿನ ಅನುಗತವಾಗಿದೆ ಎಂದು ತಿಳಿಯುತ್ತದೆ. ಕನ್ನಡದಲ್ಲಿ ಬಳಸಿದ ವೃತ್ತಗಳು, ಕಂದಗಳು ಅದರ ಅನುಕರಣೆಯಾಗಿವೆ. ಜಯಕೀರ್ತಿಯು ಸಂಸ್ಕೃತ ಲಾಕ್ಷಣಿಕನಾದರೂ ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಆತನ 'ಛಂದೋನುಶಾಸನ' ಕೃತಿಯು ಮಹತ್ವದ ಸ್ಥಾನವನ್ನು ಪಡೆಯುತ್ತದೆ. ಏಕೆಂದರೆ ಆತನ ಈ ಕೃತಿಯಲ್ಲಿ ಎಂಟು ಅಧಿಕಾರಗಳಿವೆ. 'ಕರ್ಣಾಟಕ ಭಾಷಾ ವಿಷಯ ಜಾತ್ಯಧಿಕಾರ' ಏಳನೆಯ ಅಧಿಕಾರದಲ್ಲಿ ಕನ್ನಡದ ಅಕ್ಕರ, ತ್ರಿಪದಿ, ಚೌಪದಿ ಮುಂತಾದ ಅಚ್ಚಗನ್ನಡ ವೃತ್ತಗಳ ಬಗೆಗೆ ವಿಶ್ಲೇಷಣೆ ಕೊಡುತ್ತಾನೆ. ಇನ್ನು ಕನ್ನಡದ ಮೊದಲ ಉಪಲಬ್ಧ ಗ್ರಂಥವಾದ ಶ್ರೀವಿಜಯನ 'ಕವಿರಾಜಮಾರ್ಗ'ದಲ್ಲಿಯೇ ಹಲವಾರು ಛಂದೋವಿಚಾರಗಳು ಕಾಣಸಿಗುತ್ತವೆ. ಚತ್ತಾಣ, ಬೆದಂಡೆಗಳೆಂಬ ಕಾವ್ಯಸ್ವರೂಪಗಳನ್ನು, ಯತಿ ವಿಚಾರಗಳನ್ನು ತಿಳಿಸುತ್ತಾನಾದರೂ, ಅದು ಪ್ರಮುಖವಾಗಿ ಅಲಂಕಾರ ಗ್ರಂಥವಾಗಿರುವುದರಿಂದ ಛಂದಸ್ಸು ಪ್ರಧಾನವಾಗಿ ವೇದ್ಯವಾಗುವುದಿಲ್ಲ. ಮೊದಲನೆಯ ನಾಗವರ್ಮನ 'ಛಂದೋಂಬುಧಿ'ಯು ಕನ್ನಡದ ಮೊದಲ ಛಂದೋಗ್ರಂಥವೆಂದು ವಿದ್ವಾಂಸರೆಲ್ಲರ ಅಭಿಮತವಾಗಿದೆ. ಶಿವನು ತನ್ನ ಪತ್ನಿ ಶಿವೆಗೆ ಛಂದಸ್ಸನ್ನು ಹೇಳಿದಂತೆ ನಾಗವರ್ಮನು ಈ ಕೃತಿಯನ್ನು ನಿರೂಪಿಸಿದ್ದಾನೆ. ಅಂತೆಯೇ ಇಮ್ಮಡಿ ನಾಗವರ್ಮ 'ಛಂದೋವಿಚಿತಿ', ಗುಣಚಂದ್ರನ 'ಛಂದಸ್ಸಾರ' ಗ್ರಂಥಗಳು ಜೈನಕವಿಗಳಿಂದ ರಚಿತವಾದ ಕೃತಿಗಳು.

೪.೨.೧. ಗುಣಗಾಂಕಿಯಂ:

ಪ್ರಸ್ತುತ 'ಗುಣಗಾಂಕಿಯಂ' ಎಂಬುದು ಕೃತಿಯ ಹೆಸರಾಗಿದೆ. ಈ ಕೃತಿಯ ಕರ್ತೃ ಯಾರು ಎಂಬುದು ತಿಳಿಯಲಾರದ ಕಾರಣ ಇಲ್ಲಿ ಕೃತಿಯ ಹೆಸರನ್ನೇ ಉಲ್ಲೇಖಿಸಲಾಗಿದೆ. "ಜೈನ ಲಾಕ್ಷಣಿಕನಾದ ಅಮೃತಸಾಗರ ಎಂಬುವವನಿಂದ ರಚಿತವಾದ 'ಯಾಪ್ಪರುಂಗಲಕ್ಕಾರಿಪ್ಪೈ' ಎಂಬ ಛಂದೋಗ್ರಂಥವೊಂದು ತಮಿಳು ಭಾಷೆಯಲ್ಲಿದೆ. ಇದರ ಕಾಲವನ್ನು ೧೦-೧೧ನೆಯ ಶತಮಾನ ಎಂದು ಅಂದಾಜಿಸಲಾಗಿದೆ. ಈ ಗ್ರಂಥಕ್ಕೆ ಗುಣಸಾಗರನೆಂಬ ಜೈನ ವ್ಯಾಖ್ಯಾನಕಾರನೊಬ್ಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಈತನ ಕಾಲವನ್ನು ಸುಮಾರು ೧೨ನೆಯ ಶತಮಾನವೆಂದು

೧೦೧. ಎನ್. ಅನಂತರಂಗಾಚಾರ್ : **ಸಾಹಿತ್ಯ ಭಾರತೀ** : ಪುಟ. ೨೧

ಅಂದಾಜಿಸಲಾಗಿದೆ. ಈ ವ್ಯಾಖ್ಯಾನಕಾರನು ಪೂರ್ವೋಕ್ತವಾದ ತಮಿಳು ಛಂದೋಗ್ರಂಥದ ಆದಿಭಾಗದಲ್ಲಿ ಬೇರೆ ಬೇರೆ ಗ್ರಂಥಗಳನ್ನು ಹೆಸರಿಸುವಾಗ 'ಗುಣಗಾಂಕಿಯಂ' ಎಂಬ ಗ್ರಂಥವೊಂದು ಕನ್ನಡದಲ್ಲಿ ಇರುವುದಾಗಿ ಉಲ್ಲೇಖಿಸುತ್ತಾನೆ. ಆ ಗ್ರಂಥವು ಸ್ತ್ರೀಯೋರ್ವಳನ್ನು ಉಲ್ಲೇಖಿಸಿ ಬರೆದಿರುವುದಾಗಿಯೂ, ಗ್ರಂಥಕರ್ತೃವು ಅದರಲ್ಲಿ ತನ್ನ ವಿನಯವನ್ನು ವ್ಯಕ್ತಪಡಿಸಿದುದಾಗಿಯೂ 'ಗುಣಗಾಂಕಿಯಮೆನ್ನುಂ ಕರುನಾಡಗಚ್ಚಂದಮೇಪೋಲ್ ಮಹಡೂಮುನ್ನಿಲೈಯುಡೈತ್ತಾಯ್ ಅವೈಯಡಕ್ಕಮುಡೈತ್ತಾಯ್' ಎಂದು ದಾಖಲಿಸುತ್ತಾನೆ. ಆದರೆ ಈ ಕನ್ನಡ ಗ್ರಂಥದ ಕರ್ತೃ ಯಾರೆಂಬುದಾಗಲೀ, ಅದರ ವಿಶೇಷಗಳು ಏನೆಂಬುದಾಗಲೀ ಉಲ್ಲೇಖಿತವಾಗಿಲ್ಲ. ಈವರೆಗೆ ಕನ್ನಡ ಭಾಷೆಯಲ್ಲಿ ಈ ಗ್ರಂಥವು ಲಭ್ಯವಾಗಿಲ್ಲ."[೧೦೨] ಎಂದು ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು ತಿಳಿಸುತ್ತಾರೆ.

೪.೨.೨. ಇಮ್ಮಡಿ ನಾಗವರ್ಮ (೧೧೪೫):

ಇದೇ ಅಧ್ಯಾಯದಲ್ಲಿ ಇಮ್ಮಡಿ ನಾಗವರ್ಮನ ಪರಿಚಯವನ್ನು ಮಾಡಿಕೊಳ್ಳಲಾಗಿದೆ. ಇವನು 'ಛಂದೋವಿಚಿತಿ' ಎಂಬ ಛಂದೋಗ್ರಂಥವನ್ನು ಒಳಗೊಂಡು ಇತರ ಕೃತಿಗಳನ್ನು ರಚಿಸಿದ್ದಾನೆ.[೧೦೩]

೪.೨.೨.೧. ಛಂದೋವಿಚಿತಿ:

ಎರಡನೆಯ ನಾಗವರ್ಮನು ಛಂದಶ್ಶಾಸ್ತ್ರಕ್ಕೆ ಸಂಬಂಧಿಸಿದ 'ಛಂದೋವಿಚಿತಿ' ಎಂಬ ಗ್ರಂಥವನ್ನು ರಚಿಸಿದ್ದಾನೆಂದು ಆತನ 'ಕಾವ್ಯಾವಲೋಕನ'ದ ಈ ಪದ್ಯದಿಂದ ತಿಳಿದುಬರುತ್ತದೆ.:

"ಛಂದೋವಿಚಿತಿಯಲಂಕೃತಿ
ಸಂದಭಿದಾನವಸ್ತುಕೋಶಮೆಂಬಿವು ವಾಕ್ಶ್ರೀ
ಸುಂದರಿಗೆ ರತ್ನಮಂಡನ
ದಂದದೊಳಿರ್ದಪುವು ನಾಗವರ್ಮನ ಕೃತಿಗಳ್ ॥೯೬೫॥"[೧೦೪]

ಛಂದೋವಿಚಿತಿ, ಅಭಿಧಾನವಸ್ತುಕೋಶ ಎಂಬ ಕೃತಿಗಳನ್ನು ರಚಿಸಿದುದಾಗಿ ತಿಳಿದುಬರುತ್ತದೆ. ಆದರೆ 'ಛಂದೋವಿಚಿತಿ'ಯು ಅನುಪಲಬ್ಧವಾಗಿದೆಯೆಂಬುದೇ ವಿಷಾದನೀಯ. ಆದರೆ "೨ನೆಯ ನಾಗವರ್ಮನ 'ಛಂದೋವಿಚಿತಿ'ಯೂ ಕೃತಿಕರ್ತನ ನಾಮಸಾಮ್ಯದಿಂದ ೧ನೆಯ ನಾಗವರ್ಮನ 'ಛಂದೋಂಬುಧಿ'ಯಲ್ಲಿಯೇ ಐಕ್ಯವಾಗಿರಬಹುದೆಂದು ಹೇಳುವುದಕ್ಕೆ ಕಾರಣಗಳುಂಟು"[೧೦೫] ಎಂದು ಡಾ. ಟಿ. ವಿ. ವೆಂಕಟಾಚಶಾಸ್ತ್ರೀಯವರು ಅಭಿಪ್ರಾಯಪಡುತ್ತಾರೆ. "೧೫ನೆಯ ಶತಮಾನದ ಈಶ್ವರಕವಿಯ 'ಕವಿಜಿಹ್ವಾಬಂಧನ'ದ ಕೆಲವು ಭಾಗಗಳೂ ಇತರ ಲಕ್ಷ್ಯಲಕ್ಷಣ ಪದ್ಯಗಳೂ ಈಗ

೧೦೨. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : **ಕನ್ನಡ ಛಂದಸ್ಸು** ; ಪುಟ.೦೨
೧೦೩. ನೋಡಿ, ಅಧ್ಯಾಯ–೪.೧.೨: **ಇಮ್ಮಡಿ ನಾಗವರ್ಮ** (೧೧೪೫) ; ಪುಟ. ೨೨೦
೧೦೪. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೧೭೯
೧೦೫. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : **ಕನ್ನಡ ಛಂದಸ್ಸು** ; ಪುಟ.೦೫

ಮುದ್ರಿತವಾಗಿರುವ ಛಂದೋಂಬುಧಿ ಕೃತಿಯಲ್ಲಿರುವುದನ್ನು ಗಮನಿಸಬಹುದು. ಆದುದರಿಂದ 'ಛಂದೋವಿಚಿತಿ'ಯು ಛಂದೋಂಬುಧಿಯಲ್ಲಿ ಲೀನವಾಗಿರಬಹುದು"[೧೦೬] ಎಂದು ಮರಿಯಪ್ಪ ಭಟ್ಟ ಅಭಿಪ್ರಾಯಪಡುತ್ತಾರೆ. ಆದರೆ ಇದು ಎಲ್ಲ ವಿದ್ವಾಂಸರ ಒಮ್ಮತವಲ್ಲ.

೪.೨.೩. ಗುಣಚಂದ್ರ (೧೬೫೦):

ಗುಣಚಂದ್ರನು ೧೭ನೆಯ ಶತಮಾನದಲ್ಲಿ ಬದುಕಿದ್ದವನು. ಪ್ರಸ್ತುತ ಸಂಶೋಧನ ವಿಷಯವು '೧೦ನೆಯ ಶತಮಾನದಿಂದ ೧೬ನೆಯ ಶತಮಾನದವರೆಗಿನ ಅವಧಿ'ಯಾಗಿದ್ದರೂ ಗುಣಚಂದ್ರನೆಂಬ ಛಂದಶ್ಶಾಸ್ತ್ರಕಾರನ ಪರಿಚಯಿಸಿ ಕೊಡುವುದೆಂಬ ಅಭೀಪ್ಸೆಯಿಂದ ಅಧ್ಯಯನವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಾಗಿದೆ. "ಗ್ರಂಥಾರಂಭದಲ್ಲಿ ಜಿನಸ್ತುತಿಯಿರುವುದರಿಂದ ಈತನು ಜೈನನೆಂದು ತಿಳಿದುಬರುತ್ತದೆ"[೧೦೭] ಎಂದು ಎಂ. ವಿ. ಸೀತಾರಾಮಯ್ಯ ಅವರ ಅಭಿಪ್ರಾಯವಾಗಿದೆ. "ಗುಣಚಂದ್ರನು 'ಛಂದಸ್ಸಾರ' ಎಂಬ ಗ್ರಂಥವನ್ನು ಬರೆದಿದ್ದಾನೆ. ಇವನು ಕೇದಾರಭಟ್ಟನ ಸಂಸ್ಕೃತದ 'ವೃತ್ತರತ್ನಾಕರ'ವನ್ನು ಅನುಸರಿಸಿ ತನ್ನ ಕೃತಿಯನ್ನು ರಚಿಸಿದ್ದಿರಬಹುದು. ಈತನ ಕಾಲವು ೧೬೫೦"[೧೦೮] ಎಂದು ಕವಿಚರಿತೆಕಾರರ ಅಭಿಮತವಾಗಿದೆ. ಆದರೆ ಗುಣಚಂದ್ರನ ವೈಯಕ್ತಿಕ ವಿಷಯದ ಕುರಿತಾಗಿ ಬೇರೆ ಯಾವುದೇ ವಿಚಾರಗಳು ದೊರೆಯುವುದಿಲ್ಲ.

೪.೨.೩.೧. ಛಂದಸ್ಸಾರ:

ಪ್ರಸ್ತುತ 'ಛಂದಸ್ಸಾರ' ಗ್ರಂಥದಲ್ಲಿ ಒಟ್ಟು ಐದು ಅಧ್ಯಾಯಗಳಿವೆ.

೧) **ಸಂಜ್ಞಾಪ್ರಕರಣ:** ಇದರಲ್ಲಿ ಗುರು-ಲಘು, ಅಕ್ಷರಗಣ, ಯತಿ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ತಿಳಿಸಿ, ಗಣಗಳ ಶುಭಾಶುಭ ಫಲಗಳನ್ನೂ ಸೂಚಿಸಿದ್ದಾನೆ.

೨) **ಮಾತ್ರಾವೃತ್ತ ಪ್ರಕರಣ:** ಈ ಪ್ರಕರಣದಲ್ಲಿ ಆರ್ಯಾ, ಗೀತಿಕೆ, ಕಂದ, ಶರ, ಕುಸುಮ, ಭೋಗ, ಭಾಮಿನಿ, ವಾರ್ಧಕ ಮತ್ತು ಪರಿವರ್ಧಿನಿ ಷಟ್ಪದಿಗಳ ಲಕ್ಷ್ಯ-ಲಕ್ಷಣ ಪದ್ಯಗಳನ್ನು ನೀಡುತ್ತಾನೆ.

೩) **ಸಮವೃತ್ತ ಪ್ರಕರಣ:** ಈ ಪ್ರಕರಣದಲ್ಲಿ ಉಕ್ತೆಯಿಂದ ಉತ್ಕೃತಿಯವರೆಗಿನ ಒಟ್ಟು ೨೬ ಛಂದಸ್ಸುಗಳ ಉಗಮ ಮತ್ತು ಅವುಗಳಿಗೆ ಲಕ್ಷ್ಯ-ಲಕ್ಷಣ ಪದ್ಯಗಳನ್ನು ಅಲ್ಲದೇ ಅಕ್ಷರಗಣಗಳ ಲಕ್ಷ್ಯ-ಲಕ್ಷಣ ಪದ್ಯಗಳನ್ನು ಉಲ್ಲೇಖಿಸುತ್ತಾನೆ. ಅವುಗಳಲ್ಲಿ 'ಖ್ಯಾತ ಕರ್ಣಾಟಕ ವೃತ್ತ'ಗಳೂ ಸೇರಿವೆ.

> **"ಸೂರ್ಯಾಶ್ವಂ ಮಸಜಂತತಂ ಗುರುಯುತಂ ಶಾರ್ದೂಲ ವಿಕ್ರೀಡಿತಂ**
> **ಸಭರಂನಂಯಲಂಗಮುಂ ತ್ರಿಗದಶಂ ಮತ್ತೇಭ ವಿಕ್ರೀಡಿತಂ**
> **ಉತ್ಪಲಮಾಲೆಯುಂ ಭರನಭಂಭರಲಂ ಗುರುರುದ್ರಭಂಗುರುಂ**
> **ಮಂರಂಭಂನಂಯಯಂಯಂ ತ್ರಿಮುನಿಯತಿಯುತಂ ಸ್ರಗ್ಧರಾನಾಮವೃತ್ತಂ**

೧೦೬. ಎಂ. ಮರಿಯಪ್ಪ ಭಟ್ಟ : **ಸಂಕ್ಷಿಪ್ತ ಕನ್ನಡಸಾಹಿತ್ಯ ಚರಿತ್ರೆ** ; ಪುಟ. ೧೪೫

೧೦೭. ಪ್ರೊ. ಎಂ. ವಿ. ಸೀತಾರಾಮಯ್ಯ ; **ಶಾಸ್ತ್ರ ಸಾಹಿತ್ಯ** ; ಪುಟ. ೧೪೨

೧೦೮. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ದ್ವಿತೀಯ ಸಂಪುಟ** ; ಪುಟ. ೩೭೨

ವಿಧುಪುರಭೇದ ಚಚಂಪಕದ ಮಾಲೆಯಿದುಂ ನಜಭಂಜಜಂಜರಂ
ಸತತಂನಂಸಂರರರಂಗಂ ತ್ರಿಶರಯತಿ ಮಹಾಸ್ರಗ್ಧರಾನಾಮವೃತ್ತಂ"[೧೦೯]

ಹೀಗೆ 'ಖ್ಯಾತ ಕರ್ಣಾಟ ವೃತ್ತ'ಗಳಿಗೆ ಲಕ್ಷ್ಯ-ಲಕ್ಷಣಗಳನ್ನು ನೀಡುತ್ತಾನೆ.

೪) **ಸಂಕೀರ್ಣ ಪ್ರಕರಣ:** ಪ್ರಸ್ತುತ ಅಧ್ಯಾಯದಲ್ಲಿ ದಂಡಕ, ಪ್ರಚಿತಕ, ಆಯಾಪ್ರಭೇದಗಳು, ಉದ್ಗೀತ, ಆರ್ಯಾಗೀತ, ವೈತಾಳೀಯ ಪ್ರಭೇದಗಳು, ಮಾತ್ರಾಸಮಕ, ಅರ್ಧಸಮವೃತ್ತಗಳು, ವಿಷಮವೃತ್ತಗಳು, ಗಾಥೆಗಳು ಹೀಗೆ ವಿವಿಧ ಛಂದೋಪ್ರಕಾರಗಳ ಲಕ್ಷ್ಯ-ಲಕ್ಷಣಗಳನ್ನು ತಿಳಿಸುತ್ತಾನೆ.

೫) **ತಾಳ ವೃತ್ತಾಧಿ ಪ್ರಕರಣ:** ಪ್ರಸ್ತುತ ಅಧ್ಯಾಯದಲ್ಲಿ 'ಛಂದಸ್ಸಾರ' ಗ್ರಂಥದ ವೈಶಿಷ್ಟ್ಯ, ಧ್ರುವ, ಮಟ್ಟುಗಳು, ತ್ರಿಪದಿ, ರೂಪಕ, ಅಷ್ಟ, ಝಂಪೆ, ಏಕ ಎಂಬ ಸಪ್ತತಾಳಗಳಿಗೆ ಒಳಪಟ್ಟು ಪದ್ಯಗಳನ್ನು ರಚಿಸುವ ಕ್ರಮವನ್ನು ವಿವರಿಸಲಾಗಿದೆ.

ಹೀಗೆ 'ಛಂದಸ್ಸಾರ'ದ ಐದು ಪ್ರಕರಣಗಳಲ್ಲಿ ಗುಣಚಂದ್ರ ಛಂದಸ್ಸಿನ ವಿವಿಧ ಪ್ರಕಾರಗಳನ್ನು ತಿಳಿಯಪಡಿಸಿದ್ದಾನೆ.[೧೧೦] ಯತಿ, ಪಲ್ಲವಿ, ಅನುಪಲ್ಲವಿ, ದ್ವಿಪದಿ, ಲಾವಣಿ, ಷಟ್ಪದಿ, ರಗಳೆ, ಮಾತ್ರಾ ಛಂದಸ್ಸುಗಳನ್ನೂ ಐದನೆಯ ಅಧ್ಯಾಯದಲ್ಲಿ ವಿವರಿಸಿದ್ದಾನೆ.

೪.೩. ವ್ಯಾಕರಣಶಾಸ್ತ್ರ:

"ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ
ಲೋಕಂ ತತ್ತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ॥"[೧೧೧]

ಈ ಮೇಲಿನ ಕೇಶಿರಾಜನ ಪದ್ಯವನ್ನು ಅವಲೋಕಿಸಿದರೆ, ಈ ಮುಂದಿನ ವಿಷಯವು ವೇದ್ಯವಾಗುತ್ತದೆ. "ಲೋಕದಲ್ಲಿ ನಡೆಯುವ ಎಲ್ಲಾ ವ್ಯವಹಾರಗಳೂ ಪರಸ್ಪರ ಮಾತನಾಡುವುದರಿಂದ, ಬರೆಯುವುದರಿಂದ ನಡೆಯುತ್ತವೆ. ತಮ್ಮ ತಮ್ಮ ಮನಸ್ಸಿನ ವಿಚಾರಗಳನ್ನು ಎಲ್ಲರೂ ಮಾತಿನ ಮೂಲಕವೇ ಇನ್ನೊಬ್ಬರಿಗೆ ತಿಳಿಯಪಡಿಸುತ್ತಾರೆ. ಆಡಿದ ಮಾತುಗಳನ್ನು, ಆಡಬೇಕಾದ ಮಾತುಗಳನ್ನು ಗೊತ್ತಾದ ಲಿಪಿಯ ಮೂಲಕ ಬರೆಯುವುದೇ ಬರವಣಿಗೆಯೆನಿಸುವುದು. ಬರೆಯುವುದೂ, ಮಾತನಾಡುವುದೂ ಮುಖ್ಯವಾಗಿ ಶಬ್ದಗಳ ಮೂಲಕವೇ ಆಗಿದೆ. ಒಂದೊಂದು ಶಬ್ದಕ್ಕೂ ಒಂದು ಅರ್ಥವಿದೆ. ಹೀಗಾಗಿ ಶಬ್ದಗಳ ಬರವಣಿಗೆಯಾಗಲೀ, ಉಚ್ಚಾರವಾಗಲೀ ಸ್ಪಷ್ಟವಾಗಿರಬೇಕು. ವಿದ್ಯಾವಂತನೆನಿಸಿಕೊಂಡವನು ತಾನು ಬರೆಯುವ ಬರವಣಿಗೆಯನ್ನು ಪೂರ್ಣ ವಿಚಾರಿಸಿ, ಶುದ್ಧವಾಗಿ ಬರೆಯಬೇಕಾಗುವುದು; ಅಲ್ಲದೇ

---

೧೦೯. ಪ್ರೊ. ಎಂ. ವಿ. ಸೀತಾರಾಮಯ್ಯ ; **ಶಾಸ್ತ್ರ ಸಾಹಿತ್ಯ** ; ಪುಟ. ೧೪೩

೧೧೦. ಮೇಲಿನ '೪.೩.೧. ಛಂದಸ್ಸಾರ' ಭಾಗವು ಪೂರ್ತಿಯಾಗಿ ಪ್ರೊ. ಎಂ. ವಿ. ಸೀತಾರಾಮಯ್ಯನವರ **'ಶಾಸ್ತ್ರ ಸಾಹಿತ್ಯ'** ಗ್ರಂಥದ ಛಂದಸ್ಸಾರ ಎಂಬ ಭಾಗಕ್ಕೆ ಉಪಕೃತವಾಗಿದೆ.

೧೧೧. ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ : **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ** ; ಪುಟ. ೦೪

ಅವನು ಮಾತನಾಡುವುದೂ ಅರ್ಥಪೂರ್ಣವಾಗಿರಬೇಕು. ಶಬ್ದ ಮತ್ತು ಶಬ್ದಗಳ ಸಂಬಂಧ ಹೀಗೆ ಹೀಗೆಯೇ ಇರಬೇಕೆಂಬುದನ್ನು ವ್ಯಾಕರಣಶಾಸ್ತ್ರವು ಗೊತ್ತುಪಡಿಸುವುದು." [೧೧೨] ಆದುದರಿಂದ ಶುದ್ಧವಾಗಿ, ಅರ್ಥಪೂರ್ಣವಾಗಿ ಮಾತನಾಡುವ ಮತ್ತು ಬರೆಯುವ ಶಕ್ತಿಯನ್ನು ಪಡೆಯಬೇಕಾದರೆ ವ್ಯಾಕರಣಜ್ಞಾನವನ್ನು ಪಡೆಯಬೇಕಾಗುತ್ತದೆ. ಜಗತ್ತಿನ ಎಲ್ಲ ಭಾಷೆಗಳೂ ತಮ್ಮದೆಯಾದ ಸ್ವರೂಪಾತ್ಮಕವಾದ ವ್ಯಾಕರಣವನ್ನು ಹೊಂದಿರುತ್ತವೆ. ಆ ವ್ಯಾಕರಣವು ಭಾಷೆಯ ಸ್ವರೂಪವನ್ನು ತಿಳಿಸುತ್ತದೆ. "ಶಬ್ದಗಳ ಸಾಧುತ್ವವನ್ನು ಮತ್ತು ಪ್ರಯೋಗಾರ್ಹತೆಯನ್ನು ತಿಳಿಸುವುದೇ ವ್ಯಾಕರಣ. ಭಾಷೆ ಬಲ್ಲವರಿಂದ ಪ್ರಯೋಗವಾಗಿರುವ ಶಬ್ದಗಳ ಆಧಾರದ ಮೇಲೆ ವ್ಯಾಕರಣ ರಚಿತವಾಗುತ್ತದೆ. 'ಪ್ರಯೋಗಂ ಶರಣಂ ವ್ಯಾಕರಣಂ' ಎಂಬ ಹೇಳಿಕೆ ಇರುವುದರಿಂದ ವ್ಯಾಕರಣದ ರಚನೆಗೆ ಪ್ರಯೋಗದ ಆಧಾರ ಇರಬೇಕೆಂಬುದು ಸ್ಪಷ್ಟವಾಗುತ್ತದೆ. ಇದನ್ನೇ ಶಬ್ದಶಾಸ್ತ್ರ ಎನ್ನಲಾಗುತ್ತದೆ."[೧೧೩]

ಭಾರತೀಯ ವ್ಯಾಕರಣದ ಇತಿಹಾಸವು ಯಾಸ್ಕನಿಂದ ಆರಂಭವಾಗುತ್ತದೆ. ಯಾಸ್ಕನು ವ್ಯಾಕರಣವನ್ನು ಬರೆಯದಿದ್ದರೂ, ಅವನು ಭಾಷಾಶಾಸ್ತ್ರಜ್ಞನಾಗಿದ್ದನೆಂದು ತಿಳಿದುಬರುತ್ತದೆ. ಆದ್ದರಿಂದ ಸಂಸ್ಕೃತದ ವೈಯಾಕರಣಿ ಪಾಣಿನಿಯು ಬರೆದ 'ಅಷ್ಟಾಧ್ಯಾಯಿ' ಕೃತಿಯೇ ಭಾರತೀಯ ವ್ಯಾಕರಣ ಗ್ರಂಥಗಳಲ್ಲಿ ಪ್ರಪ್ರಥಮವಾದುದು.

ಕನ್ನಡ ವ್ಯಾಕರಣದ ಮೇಲೆ ಛಂದಸ್ಸಿನಂತೆಯೇ ಪ್ರಾಕೃತ, ಸಂಸ್ಕೃತ ವ್ಯಾಕರಣಗಳ ಪ್ರಭಾವ ಗಾಢವಾಗಿದೆ. ಅವೆಲ್ಲವನ್ನೂ ಅರಗಿಸಿಕೊಂಡು ಕನ್ನಡ ವ್ಯಾಕರಣಕಾರರು ತಮ್ಮ ಗ್ರಂಥಗಳನ್ನು ರಚಿಸಿದ್ದಾರೆ. "ಸಂಸ್ಕೃತದ ಪಾಣಿನಿಯ ಪದ್ಧತಿ, ಚಾಂದ್ರ ಪದ್ಧತಿ, ಜೈನೇಂದ್ರ ವ್ಯಾಕರಣ, ಶಾಕಟಾಯನ ವ್ಯಾಕರಣ, ಕಾತಂತ್ರ ವ್ಯಾಕರಣ ಮುಂತಾದವು ಕನ್ನಡ ವ್ಯಾಕರಣ ಸಂಪ್ರದಾಯದ ಮೇಲೆ ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತದೆ. ಅದರಲ್ಲೂ ಮುಖ್ಯವಾಗಿ ಪಾಣಿನಿಯ ಪದ್ಧತಿ, ಕಾತಂತ್ರ ಪದ್ಧತಿ ಹಾಗೂ ಪ್ರಾಕೃತ ಸಂಪ್ರದಾಯಗಳು ಕನ್ನಡ ವ್ಯಾಕರಣ ರಚನೆಗೆ ಸ್ಫೂರ್ತಿದಾಯಕವಾಗಿವೆ."[೧೧೪]

ಅಂತೆಯೇ ಕನ್ನಡದ ಮೊದಲ ಉಪಲಬ್ಧವಾದ 'ಕವಿರಾಜಮಾರ್ಗ'ದ 'ದೋಷದೋಷಾನು ವರ್ಣನ ನಿರ್ಣಯಂ' ಎಂಬ ಮೊದಲನೆಯ ಪರಿಚ್ಛೇದದಲ್ಲಿ ಸಮಸಂಸ್ಕೃತ (೧.೫೧, ೬೧), ಅವ್ಯಯ (೧.೫೨,೫೬), ಶ್ರುತಿದುಷ್ಟ (೧.೬೫), ಶ್ರುತಿಕಷ್ಟ (೧.೧೦೧, ೧೦೨, ೧೦೩), ನೇಯಾರ್ಥ (೧.೧೦೩), ಕಾರಕಾದಿ ದೋಷಗಳು (೧.೧೦೪) ಷಷ್ಠೀ ದೀರ್ಘ(೨.೨೦)ದಂತಹ ವ್ಯಾಕರಣ ಅಂಶಗಳು ಗೋಚರವಾಗುತ್ತವೆ. ಆದರೂ ಇದು ಲಕ್ಷಣಗ್ರಂಥವಾಗಿರುವುದರಿಂದ

---

೧೧೨. ಕನ್ನಡ ಸಾಹಿತ್ಯ ಪರಿಷತ್ತು : **ಕನ್ನಡ ವ್ಯಾಕರಣ ದರ್ಪಣ** ; (ಪೀಠಿಕೆ) ಪುಟ. xxii

೧೧೩. ಡಾ. ಆರ್ವೀಯಸ್ ಸುಂದರಂ : **ಶಾಸ್ತ್ರ ಸಾಹಿತ್ಯ** ; ಪುಟ. ೩೩

೧೧೪. ಅದೇ ; ಪುಟ. ೩೪

ಸಂಪೂರ್ಣವಾಗಿ ವ್ಯಾಕರಣ ಗ್ರಂಥವೆಂದು ಹೇಳಲಾಗದು. ಎರಡನೆಯ ನಾಗವರ್ಮನು (೧೧೪೫) ತನ್ನ ಅಲಂಕಾರ ಗ್ರಂಥ 'ಕಾವ್ಯಾವಲೋಕನ'ದ 'ಶಬ್ದಸ್ಮೃತಿ' ಎಂಬ ಮೊದಲನೆಯ ಅಧಿಕಾರವನ್ನು ಕನ್ನಡ ವ್ಯಾಕರಣಕ್ಕಾಗಿಯೇ ಮೀಸಲಿಟ್ಟಿದ್ದಾನೆ. ಅಲ್ಲದೇ 'ಕರ್ಣಾಟಕ ಭಾಷಾಭೂಷಣ' ಎಂಬ ಕೃತಿಯಲ್ಲಿ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ರಚಿಸಿ, ಕನ್ನಡ ಭಾಷೆಯ ಮೇಲೆ ಸಂಸ್ಕೃತ ವಿದ್ವಾಂಸರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾನೆ. ಆದರೆ ಕೇಶಿರಾಜನು (೧೨೬೦) ಬರೆದ 'ಶಬ್ದಮಣಿದರ್ಪಣ'ವೇ ಕನ್ನಡ ವ್ಯಾಕರಣದ ಮೊದಲ ವ್ಯಾಕರಣ ಗ್ರಂಥವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮುಂದೆ ಭಟ್ಟಾಕಳಂಕ ಎಂಬ ಕವಿಯು 'ಶಬ್ದಾನುಶಾಸನ' ಎಂಬ ಕೃತಿಯನ್ನು ಬರೆಯುತ್ತಾನೆ. ಅದರಲ್ಲಿಯೂ ಕೂಡ ಇಮ್ಮಡಿ ನಾಗವರ್ಮನಂತೆ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಪ್ರಚುರಪಡಿಸಿದ್ದಾನೆ. ಪೂರ್ವೋಕ್ತ ಈ ಮೂವರೂ ವ್ಯಾಕರಣಕಾರರು ಜೈನರೆಂಬುದು ಉಲ್ಲೇಖನೀಯವಾದುದು.

೪.೩.೧. ಇಮ್ಮಡಿ ನಾಗವರ್ಮ (೧೧೪೫):

ಇದೇ ಅಧ್ಯಾಯದಲ್ಲಿ ಇಮ್ಮಡಿ ನಾಗವರ್ಮನ ಪರಿಚಯವನ್ನು ಮಾಡಿಕೊಳ್ಳಲಾಗಿದೆ.[೧೧೫] ಇವನ 'ಕಾವ್ಯಾವಲೋಕನ' ಗ್ರಂಥದ 'ಶಬ್ದಸ್ಮೃತಿ' ಎಂಬ ಪ್ರಥಮ ಅಧಿಕಾರದಲ್ಲಿ ವ್ಯಾಕರಣ ಶಾಸ್ತ್ರವನ್ನು ವಿಶ್ಲೇಷಿಸಿದ್ದಾನೆ. ಅಲ್ಲದೇ 'ಕರ್ಣಾಟಕ ಭಾಷಾಭೂಷಣಂ' ಎಂಬ ವ್ಯಾಕರಣ ಗ್ರಂಥದಲ್ಲಿ ಕನ್ನಡ ವ್ಯಾಕರಣವನ್ನು ಸಂಸ್ಕೃತ ಭಾಷೆಯಲ್ಲಿ ವಿವರಿಸಿದ್ದಾನೆ.

೪.೩.೧.೧. ಶಬ್ದಸ್ಮೃತಿ:

ಇಮ್ಮಡಿ ನಾಗವರ್ಮನು ಕಾವ್ಯಾವಲೋಕನ ಕೃತಿಯ ಒಂದು ಭಾಗವೇ ಶಬ್ದಸ್ಮೃತಿ. ಇದನ್ನು 'ಕರ್ಣಾಟ ಭಾಷಾಭೂಷಣ'ಕ್ಕಿಂತಲೂ ಮುಂಚೆಯೇ ರಚಿಸಿದ್ದನೆಂಬುದು ಕವಿಚರಿತೆಕಾರರ ಅಭಿಮತವಾಗಿದೆ.[೧೧೬] ಕಾವ್ಯಾವಲೋಕನವು ಅಲಂಕಾರ ಗ್ರಂಥವಾದರೂ ವ್ಯಾಕರಣಶಾಸ್ತ್ರಕ್ಕಾಗಿಯೇ ಸುದೀರ್ಘವಾಗಿ 'ಶಬ್ದಸ್ಮೃತಿ' ಎಂಬ ಒಂದು ಅಧಿಕರಣವನ್ನು ಮೀಸಲಿಟ್ಟಿದ್ದಾನೆ. ಈ ಭಾಗದಲ್ಲಿ ಒಟ್ಟು ೯೭ ಸೂತ್ರಗಳಿವೆ. ಇದರಲ್ಲಿ ಸಂಜ್ಞಾಪ್ರಕರಣ, ಸಂಧಿ ಪ್ರಕರಣ, ಸಮಾಸ ಪ್ರಕರಣ, ನಾಮ ಪ್ರಕರಣ, ತದ್ಧಿತ ಪ್ರಕರಣ ಹಾಗೂ ಆಖ್ಯಾತ ಪ್ರಕರಣವೆಂದು ಒಟ್ಟು ಆರು ವಿಭಾಗಗಳನ್ನು ಮಾಡಿಕೊಂಡಿದ್ದಾನೆ ಗ್ರಂಥಕಾರ. ಆರಂಭದ ಪೀಠಿಕಾ ಸಂಧಿಯಲ್ಲಿ ಎಂದಿನಂತೆಯೇ ಶ್ರೀ ವರ್ಧಮಾನ ತೀರ್ಥಂಕರನ್ನು ಸ್ಮರಿಸಿಕೊಂಡು, ವಾಗ್ದೇವಿಗೆ ವಂದಿಸುತ್ತಾನೆ. ಶಬ್ದಸ್ಮೃತಿಯೆಂಬ ಈ ಅಧಿಕರಣವನ್ನು ಕಾವ್ಯಾವಲೋಕನದಿಂದ ಬೇರ್ಪಡಿಸಿದರೆ ಅದುವೇ ಕನ್ನಡದ ಪ್ರಾಚೀನತಮ ವ್ಯಾಕರಣ ಗ್ರಂಥವಾಗುತ್ತದೆ. "ಕನ್ನಡ ವ್ಯಾಕರಣದ ಮೂಲತತ್ತ್ವಗಳನ್ನು ಬಹು ಸಂಕ್ಷೇಪವಾಗಿ ಇಲ್ಲಿ ನಿರೂಪಿಸಲಾಗಿದೆ. ವ್ಯಾಕರಣ ಎಂಬ ಅರ್ಥದಲ್ಲಿ ವಾಮನನು ತನ್ನ 'ಕಾವ್ಯಾಲಂಕಾರ ಸೂತ್ರ'ದಲ್ಲಿ

---

೧೧೫. ನೋಡಿ, ಅಧ್ಯಾಯ–೪.೧.೨: **ಇಮ್ಮಡಿ ನಾಗವರ್ಮ** (೧೧೪೫) ; ಪುಟ. ೨೨೦

೧೧೬. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** ; ಪುಟ. ೧೬೭

‘ಶಬ್ದಸ್ಮೃತೇಃ ಶಬ್ದಶುದ್ಧಿಃ’ ಎಂದು ಹೇಳಿರುವುದನ್ನು ಲಕ್ಷಿಸಿ ನಾಗವರ್ಮನು ಈ ಅಧಿಕರಣವನ್ನು ಶಬ್ದಸ್ಮೃತಿಯೆಂದು ಕರೆದಿರುವುದಾಗಿಯೂ ಹೇಳಿಕೊಂಡಿದ್ದಾನೆ.”[೧೧೭] ಪ್ರಸ್ತುತ ‘ಶಬ್ದಸ್ಮೃತಿ’ಯನ್ನು ಅನುಸರಿಸಿ ಕೇಶಿರಾಜನು ‘ಶಬ್ದಮಣಿ ದರ್ಪಣಂ’ ಎಂಬ ವ್ಯಾಕರಣ ಗ್ರಂಥವನ್ನು ಬರೆದಿದ್ದಾನೆ. ಆದುದರಿಂದ ‘ಶಬ್ದಸ್ಮೃತಿ’ ಹಾಗೂ ‘ಶಬ್ದಮಣಿ ದರ್ಪಣಂ’ ಗ್ರಂಥಗಳ ವ್ಯಾಕರಣ ವಿಚಾರಗಳು ಸಂಪೂರ್ಣವಾಗಿ ಸಾಮ್ಯತೆಯನ್ನು ಹೊಂದಿವೆ. ಆ ಕಾರಣಕ್ಕಾಗಿ ಉಲ್ಲೇಖಿತ ಈ ಎರಡೂ ಕೃತಿಗಳನ್ನು ಏಕಕಾಲಕ್ಕೇ ಸಮ್ಮಿಳಿತಗೊಳಿಸಿ ವಿಷಯಾಂಶವನ್ನು ವಿವರಿಸಲಾಗಿದೆ.[೧೧೮]

೪.೩.೧.೨. ಕರ್ಣಾಟಕ ಭಾಷಾಭೂಷಣಂ:

ಎರಡನೆಯ ನಾಗವರ್ಮನ ‘ಕರ್ಣಾಟಕ ಭಾಷಾಭೂಷಣಂ’ ಇದು ಕನ್ನಡದ ಮೊಟ್ಟ ಮೊದಲನೆಯ ಸಮಗ್ರ ವ್ಯಾಕರಣ ಗ್ರಂಥವಾಗಿದೆ. ಕನ್ನಡ ವ್ಯಾಕರಣವನ್ನು ಸಂಸ್ಕೃತ ಪಂಡಿತರಿಗೆ ತಿಳಿಯುವಂತೆ ನಿರೂಪಿಸಿದ್ದಾನೆ. ಕನ್ನಡ ಭಾಷೆಯ ಸ್ವರೂಪವನ್ನು ಭಾರತೀಯ ವಿದ್ವತ್ಪ್ರಪಂಚಕ್ಕೆ ಪರಿಚಯ ಮಾಡುವ ಉದ್ದೇಶದಿಂದ ಭಾಷಾಭೂಷಣವನ್ನು ಬರೆದ ನಾಗವರ್ಮನನ್ನು ನಿಜವಾಗಿಯೂ ಮೆಚ್ಚತಕ್ಕ ವಿಷಯ. ಪ್ರಸ್ತುತ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆಯು ಎಲ್ಲೆಡೆಯೂ ಹೇಗೆ ಪ್ರೌಢಿಮೆಯನ್ನು ಪಡೆದುಕೊಂಡಿದೆಯೋ ಹಾಗೆಯೇ ಸಂಸ್ಕೃತ ಭಾಷೆಯು ತನ್ನದೇಯಾದ ಪಾರಮ್ಯವನ್ನು ಸಾಧಿಸಿದ ಕಾಲವದು. ಕನ್ನಡದ ಕಡೆಗೆ ಸಂಸ್ಕೃತ ಪಂಡಿತರ ಗಮನ ಸೆಳೆಯಬೇಕಾಗಿತ್ತು. ಆದುದರಿಂದ ಸಂಸ್ಕೃತದಲ್ಲಿ ಕನ್ನಡ ವ್ಯಾಕರಣವನ್ನು ಬರೆದು ಕನ್ನಡ ಭಾಷೆ ವಿದ್ವಾಂಸರ ಕಣ್ಣಿಗೆ ಬೀಳುವಂತೆ ಮಾಡಿ, ಕನ್ನಡದ ಪ್ರತಿಷ್ಠೆಯನ್ನು ಹೆಚ್ಚಿಸಿದ ಕೀರ್ತಿಗೆ ನಾಗವರ್ಮನು ಭಾಜನನಾಗುತ್ತಾನೆ. ಈ ಮೂಲಕ “ಕನ್ನಡ ವ್ಯಾಕರಣಗಳನ್ನು ಸಂಸ್ಕೃತದಲ್ಲಿ ರಚಿಸುವುದರ ಮೂಲಕ ನಾಗವರ್ಮ ಒಂದು ಹೊಸ ಸಂಪ್ರದಾಯವನ್ನು ಹುಟ್ಟು ಹಾಕಿದಂತಾಯಿತು. ಲೋಕ ವ್ಯುತ್ಪತ್ತಿ ಹೇತುವಾಗಿ ಸ್ಫುಟಾರ್ಥದಿಂದ ಭಾಷಾಭೂಷಣವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಇದರಲ್ಲಿ ಎಲ್ಲ ಸೂತ್ರಗಳಿಗೂ ಪ್ರತಿಪದಾರ್ಥ ಮತ್ತು ಕೆಲವೆಡೆ ವಿವರಣೆ ಕಂಡುಬರುತ್ತದೆ. ಭಾರತೀಯ ವ್ಯಾಕರಣಶಾಸ್ತ್ರಕ್ಕೆ ಈ ಕನ್ನಡ ವ್ಯಾಕರಣ ಒಂದು ವಿಶಿಷ್ಟವಾದ ಕೊಡುಗೆ ಎಂದು ಹೇಳಬಹುದು.”[೧೧೯]

ಸಂಸ್ಕೃತದಲ್ಲಿ ರಚಿತವಾಗಿರುವ ಈ ವ್ಯಾಕರಣ ಗ್ರಂಥವು, ಸಂಸ್ಕೃತ ವ್ಯಾಕರಣದ ಸೂತ್ರವೃತ್ತಿಗಳಂತೆಯೇ ೨೭೯ ಸೂತ್ರಗಳನ್ನು ಒಳಗೊಂಡಿದೆ. ಸಂಜ್ಞಾ ವಿಧಾನಂ, ಸಂಧಿವಿಧಾನಂ, ವಿಭಕ್ತಿ ವಿಧಾನಂ, ಕಾರಕ ವಿಧಾನಂ, ಶಬ್ದರೀತಿ ವಿಧಾನಂ, ಸಮಾಸ ವಿಧಾನಂ, ಆಖ್ಯಾತ ವಿಧಾನಂ, ಅವ್ಯಯ ವಿಧಾನಂ, ನಿಪಾತ ವಿಧಾನಂ ಎಂದು ಒಟ್ಟು ಹತ್ತು ಪರಿಚ್ಛೇದಗಳಿವೆ.

---

೧೧೭. ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ (ಸಂ) : **ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ಮೂರನೆಯ ಸಂಪುಟ)** ; ಪುಟ. ೭೨೮

೧೧೮. ನೋಡಿ, ಅಧ್ಯಾಯ–೪.೩.೨.೧. **ಶಬ್ದಮಣಿದರ್ಪಣಂ** ; ಪುಟ.೨೫೪

೧೧೯. ಡಾ. ಆರ್ವೀಯಸ್ ಸುಂದರಂ : **ಶಾಸ್ತ್ರ ಸಾಹಿತ್ಯ** ; ಪುಟ. ೩೭

ಸೂತ್ರಂ ॥ "ಅಥ ಕರ್ಣಾಟಕ ಶಬ್ದಸಿದ್ಧಿರಃ ॥೧॥

ವೃತ್ತಿಃ ॥ ಅಥ ಶಬ್ದೋಯಮಾದೌ ಮಂಗಳಾರ್ಥಃ
ಮಂಗಳಾದೀನಿ ಶಾಸ್ತ್ರಾಣಿ ಪ್ರಥಂತೇ
ಅಧಿಕಾರಾರ್ಥೋ ವಾ
ಇಹ ಕರ್ಣಾಟಕ ವಿಷಯೇ ಶಬ್ದಸಿದ್ಧಿರಧಿಕ್ರಿಯತ ಇತಿ ॥"[೧೨೦]

ಇಷ್ಟದೇವತಾ ಅನುಗ್ರಹದಿಂದ ಕರ್ಣಾಟಕ ಭಾಷೆಯ ಶಾಸ್ತ್ರವನ್ನು ಹೇಳುತ್ತೇನೆಂದು ನಾಗವರ್ಮನು ತನ್ನ ಕೃತಿಯನ್ನು ಆರಂಭಿಸುತ್ತಾನೆ. ಶಬ್ದಸ್ಮೃತಿಯಲ್ಲಿ ಹೇಳಿದಂತೆಯೇ ಇಲ್ಲಿಯೂ ವರ್ಣಾದಿಗಳ ಪರಿಚಯದೊಂದಿಗೆಯೇ ಕೃತಿಯನ್ನು ಮುಂದುವರೆಸುತ್ತಾನೆ. ಪ್ರಸ್ತುತ ಗ್ರಂಥದ ವಿಷಯ ಸಾಮ್ಯತೆಯು ಕೇಶಿರಾಜನ ಶಬ್ದಮಣಿದರ್ಪಣವು ಒಳಗೊಂಡಿರುವುದರಿಂದಲೂ, ಈ ಗ್ರಂಥದ ಹಲವಾರು ಸೂತ್ರಗಳನ್ನು ಕೇಶಿರಾಜನು ನೇರವಾಗಿ ಉಲ್ಲೇಖಿಸಿರುವುದರಿಂದಲೂ ಪೂರ್ವೋಕ್ತ ವ್ಯಾಕರಣ ವಿಚಾರಗಳೆಲ್ಲವನ್ನೂ 'ಶಬ್ದಮಣಿ ದರ್ಪಣಂ'ದಲ್ಲಿ ವಿಶ್ಲೇಷಿಸಲಾಗಿದೆ.[೧೨೧]

ಶ್ಲೋಕ ॥ "ಕರ್ಣಾಟಕ ಶಬ್ದಸೂತ್ರಾಣಿ ಲೋಕವ್ಯುತ್ಪತ್ತಿ ಹೇತವೇ ।
ರಚಿತಾನಿ ಸ್ಫುಟಾರ್ಥಾನಿ ಕೃತಿನಾ ನಾಗವರ್ಮಣಾ ॥

ತದ್ಭವಸ್ತತ್ಸಮೋ ದೇಶೀತ್ಯನೇಕಕ್ರಮತಃ ಸ್ಥಿತಾಃ ।
ಶಬ್ದಾಃ ಕರ್ಣಾಟ ಭಾಷಾಯಾಂ ದಿಙ್ಮಾತ್ರಂ ಸೂಚಿತಂ ಕಿಯತ್ ॥

ಜೀಯಾದಸೌ ಮಹಾಪ್ರೋಕ್ತಾ ನಾಗವರ್ಮ ಬುಧೋತ್ತಮಃ ।
ಯತ್ಪ್ರಜ್ಞಯಾ ಜಗತ್ಯುಚ್ಚೈರ್ಯಾತಿ ಕರ್ಣಾಟ ಲಕ್ಷಣಂ ॥"[೧೨೨]

ಹೀಗೆ ಎರಡನೆಯ ನಾಗವರ್ಮನು ತನ್ನ 'ಕರ್ಣಾಟಕ ಭಾಷಾಭೂಷಣಂ' ಗ್ರಂಥವು ಸಂಸ್ಕೃತ ಭಾಷೆಯ ಪದ್ಧತಿ ಪರಿಭಾಷೆಗಳನ್ನು ಬಳಸಿ ಸೂತ್ರ ವೃತ್ತಿಗಳಲ್ಲಿ ಭಾಷೆಯ ವ್ಯಾಕರಣ ಪ್ರಕ್ರಿಯೆಗಳು ಚೊಕ್ಕವಾಗಿ ನಿರೂಪಿತವಾಗಿವೆ. ರಚನೆಯಲ್ಲಿ ಶರ್ವವರ್ಮನ ಕಾತಂತ್ರ ವ್ಯಾಕರಣದ ಪ್ರಭಾವವಿದೆಯೆಂದು ಕೆಲ ವಿದ್ವಾಂಸರು ಭಾವಿಸುತ್ತಾರೆ. ಕನ್ನಡ ಭಾಷೆಯ ಸ್ವರೂಪವನ್ನು ಸಂಸ್ಕೃತ ಭಾಷೆಯಲ್ಲಿ ನಿರೂಪಿಸುವ ಮೂಲಕ ಅದಕ್ಕೆ ಭಾರತೀಯ ಸಾಹಿತ್ಯದಲ್ಲಿ ಗಣ್ಯವಾದ ಸ್ಥಾನವನ್ನೂ, ವ್ಯಾಪ್ತಿಯನ್ನೂ ಒದಗಿಸಿಕೊಟ್ಟಿದ್ದಾನೆ.

೪.೩.೨. ಕೇಶಿರಾಜ (೧೨೬೦):


"ಕೇಶಿರಾಜನು ಜೈನಕವಿ. 'ಸೂಕ್ತಿಸುಧಾರ್ಣವ'ವನ್ನು ಬರೆದ ಮಲ್ಲಿಕಾರ್ಜುನನ ಮಗನು. ಹೊಯ್ಸಳ ನಾರಸಿಂಹನಲ್ಲಿ (೧೧೪೧–೧೧೭೩) ಕಟಕೋಪಾಧ್ಯಾಯನಾಗಿದ್ದ ಕವಿ ಸುಮನೋಬಾಣನ ದೌಹಿತ್ರನು. ಕವಿ ಜನ್ನನ ಸೋದರಳಿಯನೂ, ಶಿಷ್ಯನೂ ಆಗಿದ್ದನು. ಇವನ ತಂದೆ ಮಲ್ಲಿಕಾರ್ಜುನನು ೧೨೩೩ರಿಂದ ೧೨೫೪ರವರೆಗೆ ಆಳಿದ ಹೊಯ್ಸಳ ಸೋಮೇಶ್ವರನ

೧೨೦. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಕರ್ಣಾಟಕ ಭಾಷಾಭೂಷಣಂ** ; ಪುಟ.೧೯
೧೨೧. ನೋಡಿ, ಅಧ್ಯಾಯ–**೪.೩.೨.೧. ಶಬ್ದಮಣಿದರ್ಪಣಂ** ; ಪುಟ.೨೫೪
೧೨೨. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಕರ್ಣಾಟಕ ಭಾಷಾಭೂಷಣಂ** ; ಪುಟ.೨೬೭

ಕಾಲದಲ್ಲಿ ಇದ್ದುದರಿಂದ ಕೇಶಿರಾಜನು ಸುಮಾರು ೧೨೬೦ರಲ್ಲಿ ಇದ್ದಿರಬಹುದು"[೧೨೩] ಎಂದು ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ಕೇಶಿರಾಜನ ಪರಿಚಯ ಮಾಡಿಕೊಡುತ್ತಾರೆ.

"ಕವಿ ಸುಮನೋಬಾಣನ ಯಾ
ದವ ಕಟಕಾಚಾರ್ಯನೆಸೆವ ದೌಹಿತ್ರನೆನಾಂ
ಕವಿ ಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುಸುತನೆಂ ॥೦೨॥"[೧೨೪]

ಈ ಮೇಲಿನ ಪದ್ಯವು ಕವಿಚರಿತೆಕಾರರ ಊಹೆಗೆ ಪುಷ್ಠಿ ನೀಡುತ್ತದೆ. ಈ ಒಂದು ಪದ್ಯದ ಹೊರತಾಗಿ ಕೇಶಿರಾಜನು ತನ್ನ ವೈಯಕ್ತಿಕ ವಿಚಾರಗಳ ಬಗೆಗಾಗಲೀ, ಆಶ್ರಯದಾತರ ವಿಚಾರವಾಗಿಯಾಗಲೀ ಎಲ್ಲಿಯೂ ಹೇಳಿಕೊಂಡಿಲ್ಲ. ಪ್ರೊ. ಬಿ. ಟಿ. ಸಾಸನೂರು ಹಾಗೂ ಡಾ. ಎಂ. ಎಂ. ಕಲ್ಬುರ್ಗಿಯವರು ಜನ್ನನ 'ಅನಂತನಾಥ ಪುರಾಣ', 'ಯಶೋಧರ ಚರಿತೆ', ಕೇಶಿರಾಜನ 'ಶಬ್ದಮಣಿ ದರ್ಪಣ', ಹಾಗೂ ಮಲ್ಲಿಕಾರ್ಜುನ ಕವಿಯ 'ಸೂಕ್ತಿಸುಧಾರ್ಣವ' ಕೃತಿಗಳನ್ನು ಆಧರಿಸಿ ಕೇಶಿರಾಜನ ವಂಶಚಿತ್ರವನ್ನು ಹೀಗೆ ರಚಿಸಿದ್ದಾರೆ.:



[೧೨೫]

ಸುಮನೋಬಾಣನ ಪುತ್ರ–ಶಿಷ್ಯ ಜನ್ನ. ಮಗಳ ಹೆಸರು ತಿಳಿಯದು. ಪರಮಪ್ರಕಾಶಯೋಗಿಯ ಪುತ್ರ ಮಲ್ಲಿಕಾರ್ಜುನ. ಸುಮನೋಬಾಣನ ಮಗಳು ಮತ್ತು ಮಲ್ಲಿಕಾರ್ಜುನರ ಮಗನೇ ಕೇಶಿರಾಜ. ಕೇಶಿರಾಜನು ತನ್ನ ಗುರು ಯಾರೆಂಬುದನ್ನು ತಿಳಿಸಿಲ್ಲ. ಆತನು "ಕಾವ್ಯ ಹಾಗೂ ಶಾಸ್ತ್ರ ಸಂಪ್ರದಾಯಗಳ ಹಿನ್ನೆಲೆಯಿದ್ದ ಸುಪ್ರಸಿದ್ಧ ಮನೆತನದಲ್ಲಿ ಹುಟ್ಟಿದವನು. ಆತನ ಬಾಲ್ಯವು ವಿದ್ಯಾಭ್ಯಾಸ, ವಿದ್ವತ್ತಿನ ವಾತಾವರಣದಲ್ಲಿ ಸಮರ್ಪಕವಾಗಿ ನಡೆದಿರಬೇಕೆಂದು ತೋರುತ್ತದೆ. ಆತನು ವೈದಿಕ ಮತ್ತು ಜೈನ ಪರಂಪರೆಯ ಸಂಸ್ಕೃತ ವ್ಯಾಕರಣಗಳನ್ನೂ ತನ್ನ ಕಾಲಕ್ಕೆ ಮೊದಲು ರಚಿತವಾಗಿದ್ದ ವ್ಯಾಕರಣ ಗ್ರಂಥಗಳನ್ನು ಚೆನ್ನಾಗಿ ಓದಿಕೊಂಡಿದ್ದ."[೧೨೬]

"ದೊರೆವಡೆದ ಚೋಟಿಪಾಲಕ
ಚರಿತಂ ಶ್ರೀಚಿತ್ರಮಾಲೆಯಂತೆ ಸುಭದ್ರಾ

೧೨೩. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ** ; ಪುಟ. ೪೫೦

೧೨೪. ರೆ. ಎಫ್. ಕಿಟೆಲ್ (ಸಂ), ಪಿ. ಮಂಗೇಶ ರಾವ್ (ಮರು ಸಂಪಾ.) : **ಕೇಶಿರಾಜ ಕವಿಯ ಶಬ್ದಮಣಿ ದರ್ಪಣಂ** (ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ) ; ಪುಟ. ೦೨

೧೨೫. ಪ್ರೊ. ಬಿ. ಓ. ಸಾಸನೂರ, ಡಾ. ಎಂ. ಎಂ. ಕಲಬುರ್ಗಿ (ಸಂ) ; **ಶಬ್ದಮಣಿದರ್ಪಣ ಸಂಗ್ರಹ** ; (ಪ್ರಸ್ತಾವನೆ)

೧೨೬. ಡಾ. ಹಾ. ಮಾ. ನಾಯಕ (ಪ್ರ.ಸಂ), ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ (ಸಂ) : **ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ನಾಲ್ಕನೆಯ ಸಂಪುಟ)** ; ಪುಟ. ೧೬೯

ಹರಣಂ ಪ್ರಬೋಧಚಂದ್ರಂ
ಕಿರಾತಮಿವು ಕೇಶಿರಾಜಕವಿ ರಚಿತಂಗಳ್ ॥೩೯॥"[೧೨೭]

ಕೇಶಿರಾಜನೇ ಹೇಳುವ ಈ ಮೇಲಿನ ಪದ್ಯವನ್ನು ಲಕ್ಷಿಸಿದಾಗ ಆತನು 'ಶಬ್ದಮಣಿ ದರ್ಪಣಂ' ಅಲ್ಲದೇ 'ಚೋಟಿಪಾಲಕ ಚರಿತ', 'ಶ್ರೀ ಚಿತ್ರಮಾಲೆ', 'ಸುಭದ್ರಾಹರಣಂ', 'ಪ್ರಬೋಧಚಂದ್ರಂ' ಎಂಬ ಕೃತಿಗಳನ್ನು ರಚಿಸಿದುದಾಗಿ ತಿಳಿದುಬರುತ್ತದೆ. ಆದರೆ 'ಶಬ್ದಮಣಿ ದರ್ಪಣಂ' ಕೃತಿಯ ಹೊರತಾಗಿ ಬೇರಾವ ಕೃತಿಗಳೂ ಉಪಲಬ್ಧವಾಗಿಲ್ಲ ಎಂಬುದು ಖೇದಕರ. 'ಸುಭದ್ರಾಹರಣಂ', ಮತ್ತು 'ಪ್ರಬೋಧಚಂದ್ರಂ' ಈ ಎರಡು ಕೃತಿಗಳು ನಾಟಕಗಳಾಗಿರಬಹುದು ಎಂದು ಶ್ರೀ ಗೋವಿಂದ ಪೈಯವರು ಅಭಿಪ್ರಾಯಪಡುತ್ತಾರೆ.[೧೨೮] ಕೇಶಿರಾಜನ ಅಪೂರ್ವವಾದ ವ್ಯಾಕರಣ ಕೃತಿಯೇ 'ಶಬ್ದಮಣಿ ದರ್ಪಣಂ'.

೪.೩.೨.೧. ಶಬ್ದಮಣಿದರ್ಪಣಂ:

"ಶಬ್ದಮಣಿದರ್ಪಣವು ಕನ್ನಡ ವ್ಯಾಕರಣ ಸಾಹಿತ್ಯದ ಆಚಾರ್ಯ ಕೃತಿ. ಒಂದರ್ಥದಲ್ಲಿ ಇದು ಕೇಶಿರಾಜನ ಮಹಾಕಾವ್ಯವಾಗಿದೆ. ಕಳೆದ ಏಳುನೂರು ವರ್ಷಗಳಿಂದ ಕನ್ನಡಿಗರು ಈ ಶಾಸ್ತ್ರಕೃತಿಯನ್ನು ಕಾವ್ಯಕೃತಿಯ ಮಟ್ಟದಲ್ಲಿ ನಿಲ್ಲಿಸಿ, ಆಸಕ್ತಿಯಿಂದ ಓದುತ್ತ ಬಂದಿದ್ದಾರೆ. ಪ್ರಾಚೀನ ಕಾಲದಲ್ಲಿ ವಿದ್ವಜ್ಜನರ ಮನ್ನಣೆ ಪಡೆದಿದ್ದ ಈ ಕೃತಿಯು ಆಧುನಿಕ ಕಾಲದಲ್ಲಿಯೂ ಆ ಮನ್ನಣೆಯನ್ನು ಗಾಢವಾಗಿ ಉಳಿಸಿಕೊಂಡಿದೆ."[೧೨೯] ಎಂಬುದು ಎಂ. ಎಂ. ಕಲಬುರ್ಗಿಯವರ ಮಾತಾಗಿದೆ. ಆದುದರಿಂದ "ಶಬ್ದಮಣಿದರ್ಪಣವು ಹಳಗನ್ನಡಕ್ಕೆ ವೇದಪ್ರಮಾಣ ವ್ಯಾಕರಣ ಕೃತಿಯಾಗಿದೆ"[೧೩೦] ಎನ್ನುತ್ತಾರೆ ಸಪ್ನ ಬುಕ್ ಹೌಸ್‌ನ ಪ್ರಕಾಶಕರು.

'ಶಬ್ದಮಣಿದರ್ಪಣ' ಗ್ರಂಥವನ್ನು ಪ್ರಥಮ ಬಾರಿಗೆ ಜಾನ್ ಗೆರೆಟ್ ಅವರು ೧೮೬೮ರಲ್ಲಿ ಸಂಪಾದನೆ ಮಾಡಿದ್ದಾರೆ. ತದನಂತರ ರೆವೆರಂಡ ಎಫ್. ಕಿಟೆಲ್ ಅವರು ೧೮೭೩ ಹಾಗೂ ೧೮೯೯ರಲ್ಲಿ ಎರಡು ಬಾರಿ ಗ್ರಂಥವನ್ನು ಪರಿಷ್ಕರಿಸಿ ಸಂಪಾದಿಸಿದರು. ಅದಾದ ಮೇಲೆ ಪಂಜೆ ಮಂಗೇಶರಾಯರಾದಿಯಾಗಿ ಪರಿಷ್ಕೃತವಾಗಿ ಪ್ರಕಟಣೆಯಾಗಿ ಕೃತಿಯು ಕನ್ನಡಿಗರೆಲ್ಲರ ಮನ್ನಣೆಯನ್ನು ಪಡೆದಿದೆ. ಪ್ರಸ್ತುತ ಕೃತಿಯಲ್ಲಿ ಸಂಧಿ (ಸಂಜ್ಞಾ) ಪ್ರಕರಣಂ, ನಾಮ ಪ್ರಕರಣಂ, ಸಮಾಸ ಪ್ರಕರಣಂ, ತದ್ಧಿತ ಪ್ರಕರಣಂ, ಆಖ್ಯಾತ ಪ್ರಕರಣಂ, ಧಾತು ಪ್ರಕರಣಂ, ಅಪಭ್ರಂಶ ಪ್ರಕರಣಂ, ಅವ್ಯಯ ಪ್ರಕರಣಂ ಎಂದು ಒಟ್ಟು ಎಂಟು ಅಧ್ಯಾಯಗಳಿವೆ.

ಪ್ರಸ್ತುತ 'ಶಬ್ದಮಣಿದರ್ಪಣಂ' ಕೃತಿಯ ವಿಷಯಾಂಶವನ್ನು ಪೂರ್ವೋಕ್ತ ಎರಡನೆಯ ನಾಗವರ್ಮನ 'ಶಬ್ದಸ್ಮೃತಿ' ಹಾಗೂ 'ಕರ್ಣಾಟಕ ಭಾಷಾಭೂಷಣಂ'ನ ವಿಷಯಗಳನ್ನು ಸಮೀಕರಿಸಿ ವಿಶ್ಲೇಷಿಸಲಾಗಿದೆ.

---

೧೨೭. ರೆ. ಎಫ್. ಕಿಟೆಲ್ (ಸಂ), ಪಿ. ಮಂಗೇಶ ರಾವ್ (ಮರು ಸಂಪಾ.) : **ಕೇಶಿರಾಜ ಕವಿಯ ಶಬ್ದಮಣಿ ದರ್ಪಣಂ** (ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ) ; ಪುಟ. ೪೬೪

೧೨೮. **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೩೧ನೆಯ ಸಂಚಿಕೆ – ಕನ್ನಡ ನಾಟಕದ ಹಳಮೆ** (ಲೇಖನ) ; ಪುಟ. ೫೬

೧೨೯. ಪ್ರೊ. ಬಿ. ಓ. ಸಾಸನೂರ, ಡಾ. ಎಂ. ಎಂ. ಕಲಬುರ್ಗಿ (ಸಂ) ; **ಶಬ್ದಮಣಿದರ್ಪಣ ಸಂಗ್ರಹ** ; (ನಮ್ಮ ನುಡಿ)

೧೩೦. **ಅದೇ** ; (ಪ್ರಕಾಶಕರ ನುಡಿ)

೧) ಸಂಜ್ಞಾ (ಸಂಧಿ) ಪ್ರಕರಣಂ:

ಅಕ್ಷರಮಾಲೆ ಅಥವಾ ವರ್ಣಮಾಲೆಗಳು ಒಂದು ಭಾಷೆಯನ್ನು ಗುರುತಿಸುವ ಹೆಜ್ಜೆ ಗುರುತುಗಳು. ಅಂತೆಯೇ ವ್ಯಾಕರಣವೆಂಬ ಪಯಣದಲ್ಲಿ ಮೊದಲ ಹೆಜ್ಜೆಯಿಡುವಲ್ಲಿ ನಾಗವರ್ಮನು ಶಬ್ದಸ್ಮೃತಿಯ 'ಸಂಜ್ಞಾ ಪ್ರಕರಣ'ವೆಂಬ ಮೊದಲ ಭಾಗದಲ್ಲಿ ಕನ್ನಡ ವರ್ಣಮಾಲೆಗಳ ಕುರಿತಾಗಿ ತಿಳಿಸುತ್ತಾನೆ.

ಸೂತ್ರ–೧೪: **"ವರ್ಣಂಗಳ ಪಾಠಕ್ರಮ**
ಮರ್ಣವವೃತ ಧಾತ್ರಿಯೊಳ್ ಪ್ರಸಿದ್ಧಂ ನಿಜದಿಂ
ವರ್ಣಂಗಳಕಾರಾದ್ಯಾ
ಪೂರ್ಣತೆಯಂ ಪಡೆವುವಾ ಳಕಾರಂಬರೆಗಂ ॥"[೧೩೧] **(ಶ.ಮ.ದ.)**

ಸೂತ್ರ–೦೧: **"ಸ್ವರಮೆಂದುಂ ವ್ಯಂಜನ ಮೆಂ**
ದೆರಡಕ್ಕುಂ ವರ್ಣಭೇದಮಾದ್ಯಕ್ಷರದಿಂ
ಬರೆ ಪದಿನಾಲ್ಕುಂ ಸ್ವರಮಿಂ
ಪರಿಶೇಷಂ ವ್ಯಂಜನಂಗಳರೆ ಮಾತ್ರಿಕೆಗಳ್ ॥೦೭॥"[೧೩೨] **(ಶ.ಸ್ಮೃ)**

ಸೂತ್ರ–೦೨: **"ಅಕಾರಾದಯಃ ಪ್ರಸಿದ್ಧಾ ವರ್ಣಾಃ ॥**

ವೃತ್ತಿ : **ಅಕಾರಾದಯೋ ವರ್ಣಾಃ ಹಕಾರಪರ್ಯವಸಾನಾಃ ಪ್ರಸಿದ್ಧಾ ಏವ ವೇದಿತವ್ಯಾಃ ।**
ತೇಪ್ಯನಾದಿಕಾಲ ಪ್ರಸಿದ್ಧತ್ವಾದನ್ಯಥಾ ನೋಪದೇಷ್ಟವ್ಯಾ ಇತ್ಯರ್ಥ ॥"[೧೩೩] **(ಕ.ಭಾ.ಭೂ)**

ಈ ಮೇಲಿನ ಮೂರೂ ಸೂತ್ರಗಳು ಕನ್ನಡದ ವರ್ಣಮಾಲೆಗಳನ್ನು ಪರಿಚಯಿಸಿಕೊಡುತ್ತವೆ. ವರ್ಣಗಳಲ್ಲಿ ಸ್ವರ ಮತ್ತು ವ್ಯಂಜನವೆಂದು ಎರಡು ಭೇದಗಳು. ೧೪ ಸ್ವರಗಳಿವೆ. ಮಿಕ್ಕುಳಿದವುಗಳು ವ್ಯಂಜನಗಳು. ಸ್ವರಗಳನ್ನು ಹದಿನಾಲ್ಕು ಜನ ಮನುಗಳಿಗೆ, ಮೂವತ್ತಮೂರು ವ್ಯಂಜನಗಳನ್ನು. ದೇವತೆಗಳಿಗೆ ಹೋಲಿಕೆ ಮಾಡುತ್ತಾನೆ ಇಮ್ಮಡಿ ನಾಗವರ್ಮ. ಏಕಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವವು ಹ್ರಸ್ವಸ್ವರಗಳು; ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವವು ದೀರ್ಘಸ್ವರಗಳು; ಅದಕ್ಕಿಂತಲೂ ಅಂದರೆ ಎರಡಕ್ಕಿಂತಲೂ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವವು ಪ್ಲುತಸ್ವರಗಳು. ಇವುಗಳಲ್ಲಿ ಎರಡು ಸಂಧ್ಯಕ್ಷರಗಳೂ ಸೇರಿವೆ.

ಒಟ್ಟು ವ್ಯಂಜನಗಳು ೩೪ ಅವುಗಳಲ್ಲಿ 'ಕ'ಕಾರದಿಂದ 'ಮ'ಕಾರದವರೆಗಿನ ಅಕ್ಷರಗಳು ವರ್ಗೀಯ ವ್ಯಂಜನಗಳು. ಇವುಗಳಲ್ಲಿ ೧೦ ಅಲ್ಪಪ್ರಾಣಗಳು, ೧೦ ಮಹಾಪ್ರಾಣಗಳು, ೫ ಅನುನಾಸಿಕಗಳು. ಇನ್ನುಳಿದ ೯ ಅಕ್ಷರಗಳು ಅವರ್ಗೀಯ ವ್ಯಂಜನಗಳು. 'ಲ'ಕಾರ, 'ರ'ಕಾರ, 'ಡ'ಕಾರಗಳ ಸಂಯೋಗದಿಂದ 'ಳ'ಕಾರ, 'ಱ'ಕಾರ, 'ೞ'ಕಾರಗಳು ಜನಿಸುವವು. ಎರಡು

೧೩೧. ರೆ. ಎಫ್. ಕಿಟೆಲ್ (ಸಂ), ಪಿ. ಮಂಗೇಶ ರಾವ್ (ಮರು ಸಂಪಾ.) : **ಕೇಶಿರಾಜ ಕವಿಯ ಶಬ್ದಮಣಿ ದರ್ಪಣಂ** (ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ) ; ಪುಟ. ೪೬೪

೧೩೨. ಮನೋಹರ ಘಾನೇಕರ (ಪ್ರಕಾ.) : **ನಾಗವರ್ಮನ ಶಬ್ದಸ್ಮೃತಿ** ; ಪುಟ. ೦೩

೧೩೩. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಕರ್ಣಾಟಕ ಭಾಷಾಭೂಷಣಂ** ; ಪುಟ.೧೯

ಯೋಗವಾಹಗಳಿರುವವು. ವ್ಯಂಜನಗಳು ಸ್ವರರಹಿತವಾಗಿರುವವು. ವ್ಯಂಜನಗಳ ಉಚ್ಚಾರಕ್ಕೆ ಸ್ವರಗಳ ಸಹಾಯಬೇಕು.

ಸ್ವರಗಳು:	ಅ	ಆ	ಇ	ಈ	ಉ	ಊ	ಋ	
	ೠ	ಌ	ೡ	ಏ	ಐ	ಓ	ಔ	=೧೪
ವರ್ಗೀಯ ವ್ಯಂಜನಗಳು:		ಕ್	ಖ್	ಗ್	ಘ್	ಙ್		
		ಚ್	ಛ್	ಜ್	ಝ್	ಞ್		
		ಟ್	ಠ್	ಡ್	ಢ್	ಣ್		
		ತ್	ಥ್	ದ್	ಧ್	ನ್		
		ಪ್	ಫ್	ಬ್	ಭ್	ಮ್		=೨೫
ಅವರ್ಗೀಯ ವ್ಯಂಜನಗಳು:		ಯ್	ರ್	ಲ್	ವ್	ಶ್		
		ಷ್	ಸ್	ಹ್	ಳ್			=೦೯
ಯೋಗವಾಹಗಳು:	ಬಿಂದು : ಂ							
	ವಿಸರ್ಗ : ಃ							
	ಜಿಹ್ವಾಮೂಲೀಯ: ೱ							
	ಉಪಧ್ಮಾನೀಯ : ೲ							=೦೪
ದೇಶೀಯ ಅಕ್ಷರಗಳು:	ಱ	ೞ	ಳ(ಕುಳ)	ಎ	ಒ			=೦೫
ಒಟ್ಟು ವರ್ಣಮಾಲೆಗಳು:								**=೫೭**
ಕಳೆಯಬೇಕಾದ ವರ್ಣಗಳು:	ಋ, ೠ, ಌ, ೡ, ಶ, ಷ, ಃ, ೱ, ೲ –							೧೦
ಒಟ್ಟು ಕನ್ನಡದ ಶುದ್ಧಾಕ್ಷರಗಳು:								**=೪೭**

ಹೀಗೆ ಕನ್ನಡ ವರ್ಣಮಾಲೆಗಳ ಕುರಿತಾಗಿ ಹೇಳುವ ಕೇಶಿರಾಜನು **'ನಾಲ್ವತ್ತೇೞಾಯ್ತಳೆ ಶುದ್ಧಿಗೆಯಚ್ಚಗನ್ನಡಕ್ಕೀ ಕ್ರಮದಿಂ"**[೧೩೪] ಎಂದು ಹೇಳುತ್ತಾನೆ. ಮುಂದುವರೆದು ಕುಳ, ಕ್ಷಳ ನಿರ್ಣಯ, ಸಮಾನಾಕ್ಷರಗಳು, ನಿತ್ಯ 'ಲ' ಅಂತಗಳು, ವಿಕಲ್ಪ 'ಲ' ಅಂತಗಳು, ವರ್ಣಗಳು ಹುಟ್ಟುವ ಸ್ಥಾನ, ಪ್ರಕೃತಿ, ಲಿಂಗ, ಧಾತು, ವಿಭಕ್ತಿ, ನಿತ್ಯ ಬಿಂದುಗಳು, ವಿಕಲ್ಪ ಬಿಂದುಗಳು, ದ್ವಿತ್ವಗಳು, ಶಿಥಿಲ ದ್ವಿತ್ವಗಳು, ರೇಫೆಗಳು, ಶಿಥಿಲ ಸರೇಫಗಳು, ಆಖ್ಯಾತ ಪ್ರತ್ಯಯಗಳು ಮುಂತಾದ ವಿಚಾರಗಳ ಕುರಿತಾದ ಚರ್ಚೆಯನ್ನು ಮೊದಲನೆಯ ಪ್ರಕರಣದಲ್ಲಿ ಮಾಡಲಾಗಿದೆ.

ಸಂಧಿ ವಿಚಾರ:

ಸೂತ್ರ–೫೯: **"ಎರಡುಂ ಪಲವುಂ ವರ್ಣಂ**
ಪರಸ್ಪರಂ ಕೂಡುವಂದಮದೆ ಸಂಧಿ ವಲಂ

---

೧೩೪. ಪ್ರೊ. ಬಿ. ಓ. ಸಾಸನೂರ, ಡಾ. ಎಂ. ಎಂ. ಕಲಬುರ್ಗಿ (ಸಂ) ; **ಶಬ್ದಮಣಿದರ್ಪಣ ಸಂಗ್ರಹ** ; ಪುಟ. ೧೬ (ಸೂತ್ರ–೪೩)

ಸ್ವರರಹಿತ ವ್ಯಂಜನಮವು
ಪರವರ್ಣಮನೆಯ್ದು ತಿರ್ಪುವಾ ಸಂಹಿತೆಯೊಳ್"[೧೩೫] (ಶ.ಮ.ದ.)

ಎರಡು ಇಲ್ಲವೇ ಹಲವು ಅಕ್ಷರಗಳು ಪರಸ್ಪರ ಸೇರುವ ರೀತಿಯೇ ಸಂಧಿ. ಸಂಧಿಕಾರ್ಯದಲ್ಲಿ ಸ್ವರರಹಿತ ವ್ಯಂಜನಗಳು ಮುಂದಿನ ಅಕ್ಷರದೊಂದಿಗೆ ಸೇರಿಕೊಳ್ಳುತ್ತವೆ. ಸ್ವರಲೋಪ, ಆಗಮ, ಆದೇಶ ಎಂದು ಪ್ರಮುಖವಾಗಿ ಕನ್ನಡದ ಮೂರು ಸಂಧಿಗಳನ್ನು ಗುರುತಿಸಲಾಗುತ್ತದೆ.

ಸೂತ್ರ–೦೮: **"ಸ್ವರಮಿರೆ ಪರದೊಳ್ ಪೂರ್ವ**
ಸ್ವರಲೋಪಂ ಕೃತ ವಿಭಕ್ತಿಗಕ್ಕುಂ ಪ್ರಕೃತಿ
ಸ್ವರದೊಳುದೇದಂತಕ್ಕಾ
ಚರಿಸುವರವಿನಷ್ಟನಾಮಭಾಗಸ್ಥಿತಿಯೊಳ್"[೧೩೬] (ಶ.ಸ್ಮೃ)

ಸಂಧಿಕಾರ್ಯ ನಡೆಯುವಾಗ ಪೂರ್ವಪದದ ಸ್ವರವು ಲೋಪವಾಗುವುದೇ ಸ್ವರಲೋಪ ಸಂಧಿ. ಕೃತ್ ಪ್ರತ್ಯಯಗಳು, ವಿಭಕ್ತಿ ಪ್ರತ್ಯಯಗಳು, ಪ್ರಕೃತಿಗಳು ಲೋಪಸಂಧಿಯಲ್ಲಿ ಉಚ್ಚರಿಸುವವು.

ಕೇಶಿರಾಜನ ಪ್ರಕಾರ ಸಂಧಿಯು ನಾಲ್ಕು ರೀತಿಯಲ್ಲಿ ನಡೆಯುತ್ತದೆ.

೧. ಸ್ವರದ ಮುಂದೆ ಸ್ವರ ಬಂದಾಗ ಸಂಧಿಯಾಗುವುದು.

ಉದಾ: ಕಾಡು + ಇನ = ಕಾಡಿನ

೨. ಸ್ವರದ ಮುಂದೆ ವ್ಯಂಜನ ಬಂದಾಗ ಸಂಧಿ ಕಾರ್ಯ ನಡೆಯುವುದು.

ಉದಾ: ಸುಡು + ಕಾಡು = ಸುಡುಗಾಡು

೩. ವ್ಯಂಜನದ ಮುಂದೆ ಸ್ವರ ಬಂದಾಗ.

ಉದಾ: ಕೈ + ಅಲ್ಲಿ = ಕೈಯಲ್ಲಿ

೪. ವ್ಯಂಜನದ ಮುಂದೆ ವ್ಯಂಜನ ಬಂದಾಗ.

ಉದಾ: ಮುನ್ + ಕಾಲು = ಮುಂಗಾಲು

ಅಲ್ಲದೇ ಸ್ವರಯುಕ್ತ ವ್ಯಂಜನ ಸಂಧಿ, ಸ್ವರರಹಿತ ವ್ಯಂಜನ ಸಂಧಿಗಳನ್ನು ಹೇಳಿ, ಅವುಗಳಲ್ಲಿ ಪದಮಧ್ಯ ಸಂಧಿ ಹಾಗೂ ಪದಾಂತ್ಯ ಸಂದಿಗಳೆಂಬ ಭೇದಗಳನ್ನು ತಿಳಿಸುತ್ತಾನೆ.

೧. ಪದಮಧ್ಯ ಸಂಧಿ: ಪ್ರಕೃತಿ ಪ್ರತ್ಯಯಗಳು ಸೇರಿ ಆಗುವ ಸಂಧಿ.

ಉದಾ: ಮಾತು + ಇಂ = ಮಾತಿನಿಂ

೨. ಪದಾಂತ್ಯ ಸಂಧಿ: ಪೂರ್ವಪದದ ಕಡೆಯ ಅಕ್ಷರ ಮತ್ತು ಪರಪದದ ಮೊದಲ ಅಕ್ಷರ ಸೇರಿ ಆಗುವ ಸಂಧಿ.

ಉದಾ: ಕಾಮನ + ಅಂಡಲೆ = ಕಾಮನಂಡಲೆ

ಇಲ್ಲಿ ಪೂರ್ವೋತ್ತರ ಪದಗಳು ಸ್ವತಂತ್ರವಾಗಿವೆ. ಅವು ಒಂದಕ್ಕೊಂದು ಸೇರಿ ಸಂಧಿಯಾಗುವಲ್ಲಿ ಪೂರ್ವಪದದ ಅಂತ್ಯಸ್ವರವು ಲೋಪವಾಗಿ, ಪರಪದದ ಆದಿಯ ಸ್ವರದೊಡನೆ

---

೧೩೫. ಪ್ರೊ. ಜಿ. ಅಬ್ದುಲ್ ಬಷೀರ್ : **ಶಬ್ದಮಣಿದರ್ಪಣ ದೀಪಿಕೆ** ; ಪುಟ. ೮೫
೧೩೬. ಮನೋಹರ ಘಾಣೇಕರ (ಪ್ರಕಾ.) **ಶಬ್ದಸ್ಮೃತಿ**; ಪುಟ. ೧೦

ಸೇರಿ 'ಕಾಮನಂಡಲೆ' ಎಂದಾಗಿದೆ. ಪೂರ್ವಪದದ ಕೊನೆಯ ಹಾಗೂ ಪರಪದದ ಆದಿಯ ಅಕ್ಷರಗಳ ಮಧ್ಯೆ ಸಂಧಿ ಘಟಿಸುವುದರಿಂದ ಇದು ಪದಾಂತ್ಯ ಸಂಧಿಯಾಗಿದೆ. ಇವುಗಳಲ್ಲಿ ಈ ಮುಂದಿನಂತೆ ಭೇದಗಳನ್ನು ಹೇಳುತ್ತಾನೆ –

೧. ಸ್ವರಸಂಧಿ:

i. ಲೋಪಸಂಧಿ: ಕನ್ನಡದಲ್ಲಿ ಶಬ್ದದ ಮಧ್ಯೆ ಎರಡು ಸ್ವರಗಳು ಕೂಡಿ ಬರುವುದು ಅಪರೂಪ. ಹೀಗಾಗಿ ಶಬ್ದದ ಮಧ್ಯದಲ್ಲಿ ಎರಡು ಸ್ವರಗಳು ಬಂದರೆ ಸಂಧಿಯಾಗುವಾಗ ಅವುಗಳಲ್ಲಿ ಹಿಂದಿನ ಸ್ವರವು ಲೋಪವಾಗುವುದು.

ಉದಾ: ರಾಗ + ಇಸು = ರಾಗಿಸು

ii. ಆಗಮಸಂಧಿ: ಇದರಲ್ಲಿ ವಕಾರಾಗಮ ಹಾಗೂ ಯಕಾರಾಗಮ ಸಂಧಿಗಳೆಂದು ಭೇದಗಳು.

ಉದಾ: ನದಿ + ಎಲ್ಲ = ನದಿಯೆಲ್ಲ

ವಿಧು + ಇಲ್ಲ = ವಿಧುವಿಲ್ಲ

೨. ವ್ಯಂಜನಸಂಧಿ: ಉತ್ತರ ಪದದ ಆದಿಯಲ್ಲಿ ಕ, ತ, ಪ ಗಳಿದ್ದರೆ ಸಂಧಿಯಾಗುವಾಗ ಅವುಗಳಿಗೆ ಕ್ರಮವಾಗಿ ಗ, ದ, ಬ ಗಳು ಆದೇಶವಾಗುತ್ತವೆ. ಈ ನಿಯಮವು ಚ, ಟ ಗಳಿಗೆ ಅನ್ವಯಿಸುವುದಿಲ್ಲ.

ಉದಾ: ಪಟಿ + ಕನ್ನಡ = ಪಟಿಗನ್ನಡ

ಕಣ್ + ತೆರೆ = ಕಣ್ದೆರೆ

ಕಣ್ + ಪನಿ = ಕಂಬನಿ

ಹೀಗೆ ಸಂಧಿ ವಿಷಯಗಳನ್ನು ಹೇಳಿದ ವ್ಯಾಕರಣಕಾರರು, ದ್ವಿತ್ವ ಸಂಧಿ, ಶ್ರುತಿಸಹ್ಯ ಸಂಧಿ, ಶ್ರುತಿಕಷ್ಟ ಸಂಧಿ, ಸಂಧಿ ದೋಷ, ಸಂಧಿ ವಿಕಲ್ಪ, ಪದ್ಯಾರ್ಧ ಸಂಧಿಗಳನ್ನು ತಿಳಿಸುತ್ತಾರೆ.

೨) ನಾಮಪ್ರಕರಣಂ

ಕನ್ನಡದ ಈ ವ್ಯಾಕರಣ ಕೃತಿಗಳಲ್ಲಿ ಲಿಂಗವಿವಕ್ಷೆಯ ಕುರಿತಾದ ಚರ್ಚೆಯು ಅತ್ಯಂತ ಪರಿಷ್ಕೃತವಾಗಿದೆ. ಇಲ್ಲಿ ಅರ್ಥಾನುಸಾರವಾಗಿ ಲಿಂಗಗಳನ್ನು ಗುರುತಿಸುವ ಪರಿಯು ಉಲ್ಲೇಖಾರ್ಹವಾಗಿದೆ. ನಾಮ, ಸರ್ವನಾಮ, ಕ್ರಿಯಾಪದ, ಏಕವಚನ, ಬಹುವಚನಗಳಲ್ಲಿಯೂ ಲಿಂಗವಿವೇಚನೆಯು ಸುಸ್ಪಷ್ಟವಾಗಿದೆ. ಕೇಶಿರಾಜನು ನಾಮಪ್ರಕರಣದ ಪ್ರಾರಂಭದಲ್ಲಿಯೇ ಕ್ರಿಯೆಯ ಅರ್ಥವನ್ನು ಹೇಳದೆ ಇರುವುದು, ವಿಭಕ್ತಿಯನಿಲ್ಲದುದು ಅರ್ಥಮುಳ್ಳದು ಲಿಂಗ ಎನಿಸುತ್ತದೆ. ಶಬ್ದಸ್ಮೃತಿಯಲ್ಲಿ –

ಸೂತ್ರ–೦೮: **"ಧಾತುವಿವರ್ಜಿಮರ್ಥೋ**
ಪೇತಂ ಲಿಂಗಂ ॥೮೪॥"[೧೩೭] **(ಶ.ಸ್ಮೃ)**

---

೧೩೭. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಕಾವ್ಯಾವಲೋಕನಂ** ; ಪುಟ.೧೫

ಎಂದು ಹೇಳಿದ್ದರೆ; ಶಬ್ದಮಣಿದರ್ಪಣದಲ್ಲಿ ಕೇಶಿರಾಜನು ಕೃತ್, ತದ್ಧಿತ, ಸಮಾಸ ಮತ್ತು ನಾಮ ಎಂದು ಹೇಳಿ, ಲಿಂಗವಿವಕ್ಷೆಯನ್ನು ಹೀಗೆ ಹೇಳುತ್ತಾನೆ:

ಸೂತ್ರ–೮೮: **"ನೀನಱಿ ಕರ್ಣಾಟಕದೊಳ್**
ಪೀನಂ ಸ್ತ್ರೀ ಪುಂ ನಪುಂಸಕೋಭಯ ಪುಂಸ್ತ್ರೀ
ಸ್ತ್ರೀನಪ್ಸಮಸ್ತ ವಾಚ್ಯಾ
ನ್ಯೂನಾವ್ಯಯಮೆಂದು ಲಿಂಗಮೊಂಬತ್ತು ತೆಱಂ ॥"[೧೩೮] **(ಶ.ಮ.ದ.)**

ಕನ್ನಡದಲ್ಲಿ ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗ, ಪುಂನಪುಂಸಕಲಿಂಗ, ಪುಂಸ್ತ್ರೀಲಿಂಗ, ಸ್ತ್ರೀನಪುಂಸಕಲಿಂಗ, ತ್ರಿಲಿಂಗವೆಂದು ಒಂಬತ್ತು ತರಹದ ಲಿಂಗಭೇದಗಳನ್ನು ಗುರುತಿಸುತ್ತಾನೆ. ಆದರೆ ಕನ್ನಡದಲ್ಲಿ ವಿದಿತವಾಗಿ ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕಲಿಂಗಗಳು ಮಾತ್ರ ಬಳಕೆಯಲ್ಲಿವೆ. ಕನ್ನಡ ಶಬ್ದದ ಲಿಂಗ ಯಾವುದು ಎಂಬುದನ್ನು ಅರ್ಥದಿಂದಲೇ ನಿರ್ಣಯಿಸಬೇಕು. ಗಂಡು, ಹೆಣ್ಣು, ಪ್ರಾಣಿಗಳು ಮತ್ತು ಮಕ್ಕಳು ಎಂದು ನಿರ್ಣಯಿಸುವುದೇ ಲಿಂಗವಿವಕ್ಷೆಯಾಗಿದೆ.

ಕೇಶಿರಾಜನು ಒಳ್ಳಿತು, ಮೆಲ್ಲಿತು, ಕಡಿದು, ನಿಡಿದು ಮುಂತಾದ ಪದಗಳನ್ನು ಗುಣವಚನಗಳೆಂದು ಕರೆದು ಲಿಂಗಜಾತಿಯ ಕೆಳಗೆ ನೀಡುತ್ತಾನೆ. ಇದಕ್ಕೆ ಕಾರಣವು ಅಸ್ಪಷ್ಟವಾಗಿದೆ. ವಿಭಕ್ತಿ ಪ್ರತ್ಯಯಾದಿಗಳು ಇದಕ್ಕೆ ಸೇರಲು ಸಾಧ್ಯವಿದೆಯಾದ್ದರಿಂದ ಇವುಗಳನ್ನು ಲಿಂಗವರ್ಗದಲ್ಲಿ ಸೇರಿಸುವುದು ಉಚಿತವೆಂದು ಕೇಶಿರಾಜನು ಬಗೆದಿರಬಹುದು. ಆದರೆ ಇದರ ನಿಷ್ಪನ್ನ ರೂಪಗಳನ್ನು ಗುಣವಚನಗಳೆಂದು ಹೇಳುವಂತಿಲ್ಲ. ಕನ್ನಡದಲ್ಲಿ ವಿಶೇಷಣಗಳಿಗೆ ವಿಶೇಷ್ಯಗಳ ಲಿಂಗ–ವಚನ, ಪ್ರತ್ಯಯಗಳು ಸೇರಬೇಕೆಂಬ ನಿಯಮವಿಲ್ಲ.

"ನಾಮಪದಗಳ ಬದಲಾಗಿ ಅವುಗಳ ಜಾಗದಲ್ಲಿ ಬಳಸುವ ಪದಗಳಿಗೆ ಸರ್ವನಾಮಗಳು ಎನ್ನುವರು. ಪರಿಮಿತ ಸಂಖ್ಯೆಯ ರೂಪಗಳಿಗೆ ಸರ್ವ ಎಂಬುದರ ಪ್ರಚಲಿತವಾಗಿರುವ ಅರ್ಥ ಹೊಂದುವುದಿಲ್ಲ. ನಾನು, ನೀನು, ತಾನು ಇವುಗಳು ಉತ್ತಮ, ಮಧ್ಯಮ ಮತ್ತು ಪ್ರಥಮ ಪುರುಷವೆಂಬ ಹೆಸರಿನಿಂದ ನಿರ್ದೇಶಿತವಾಗಿವೆ. ಆದರೆ ಇವುಗಳನ್ನು ಸರ್ವನಾಮಗಳಲ್ಲಿ ಸೇರಿಸಿಲ್ಲ. ಅದು, ಅವರು, ಅವನು, ಆಕೆ ಎಂಬವುಗಳನ್ನು ಸರ್ವನಾಮಗಳೆಂದು ಕರೆದು ರೂಪನಿಷ್ಪತ್ತಿ ಮಾಡಲಾಗಿದೆ. ಇವುಗಳನ್ನು ವೈಯಾಕರಣರು 'ನಾಮಲಿಂಗಗಳು' ಎನ್ನುತ್ತಾರೆ. ಪುರುಷ–ಲಿಂಗ ಹಾಗೂ ವಚನಾನುಸಾರವಾಗಿ ಸರ್ವನಾಮಗಳನ್ನು ವಿಭಜಿಸಲಾಗುತ್ತದೆ. ಇವುಗಳಲ್ಲಿ ಲಿಂಗರಹಿತ, ಲಿಂಗಸಹಿತ ಸರ್ವನಾಮಗಳನ್ನು ಗುರುತಿಸಲಾಗುತ್ತದೆ."[೧೩೯]

"ಮಮಿಂಕೆಯದದೊಳ್ ಎಂದಿ

೧೩೮. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ** ; ಪುಟ. ೭೭
೧೩೯. ಡಾ. ಕೆ. ಕುಶಾಲಪ್ಪ ಗೌಡ : **ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ** ; ಪುಟ. ೧೧೮

ತೀ ತೆಱದಿಮದೇೞಕ್ಕುಂ
ಖ್ಯಾತವಿಭಕ್ತಿಗಳದರ್ಕೆ ಕಾರಕವಶದಿಂ ॥೮೪॥"[೧೪೦] (ಶ.ಸ್ಮ)

ಇಮ್ಮಡಿ ನಾಗವರ್ಮನು ತನ್ನ 'ಶಬ್ದಸ್ಮೃತಿ'ಯಲ್ಲಿ ವಿಭಕ್ತಿ ಪ್ರತ್ಯಯಗಳ ಬಗೆಗೆ ಹೀಗೆ ಹೇಳುತ್ತಾನೆ. ಹಾಗೆಯೇ ಕೇಶಿರಾಜನು –

ಸೂತ್ರ–೧೦೩: "ಸಂದಿಸಿ ಮಮಿಂಕೆಯದದೊ
ಳ್ಳೆಂದಿರ್ಪುವು ಸಪ್ತವಿಧ ವಿಭಕ್ತಿಗಳವು ಮಾ
ರ್ಗಂದಪ್ಪದರ್ಥವಶದಿಂ
ಪಿಂದೆಣಿಸಿದ ವಿವಿಧವಿಧದ ಲಿಂಗಕ್ಕೆಲ್ಲಂ ॥"[೧೪೧] (ಶ.ಮ.ದ.)

ಎಂದು ಹೇಳಿದ್ದಾನೆ. ಮೇಲೆ ಚರ್ಚಿಸಿದ ಲಿಂಗಗಳಿಗೆ ಕಾರಕವಶದಿಂದ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿಕೊಳ್ಳುವುದು ಎಂದು ಹೇಳುತ್ತಾರೆ ಈರ್ವರೂ ವೈಯಾಕರಣಿಗಳು.

ಕೋಷ್ಟಕ ೪.೨

ವಿಭಕ್ತಿ	ಕಾರಕ	ಪ್ರಕೃತಿ		ವಿಭಕ್ತಿ ಪ್ರತ್ಯಯ	ನಾಮವಿಭಕ್ತಿ
ಪ್ರಥಮಾ	ಕರ್ತೃ	ಮರ	+	ಮ್	ಮರಂ
ದ್ವಿತೀಯಾ	ಕರ್ಮ	ಮರ	+	ಅಮ್	ಮರನಂ
ತೃತೀಯಾ	ಕರಣ	ಮರ	+	ಇಂ	ಮರದಿಂ
ಚತುರ್ಥಿ	ಸಂಪ್ರದಾನ	ಮರ	+	ಕೆ, ಗೆ	ಮರಕ್ಕೆ
ಪಂಚಮಿ	ಅಪಾದಾನ	ಮರ	+	ಅತ್	ಮರನತ್ತಣಿಂ
ಷಷ್ಠಿ	ಸಂಬಂಧ	ಮರ	+	ಅದ್, ಅ	ಮರದ
ಸಪ್ತಮಿ	ಅಧಿಕರಣ	ಮರ	+	ಒಳ್	ಮರದೊಳ್

ಕೆಲವು ಸಂದರ್ಭಗಳಲ್ಲಿ ಈ ವಿಭಕ್ತಿಗಳು ಪಲ್ಲಟವಾಗುವುದುಂಟು. ಇದೂ ಕನ್ನಡದ ವೈಶಿಷ್ಟ್ಯಗಳಲ್ಲಿ ಒಂದು. ಪ್ರಥಮಾ ಮತ್ತು ದ್ವಿತೀಯಾ ವಿಭಕ್ತಿಯ ಅರ್ಥ ಕಾಣಿಸಿದಾಗಲೂ ಷಷ್ಠಿ ವಿಭಕ್ತಿ ಬರವುದು. ಕೆಲವೊಮ್ಮೆ ಪಂಚಮಿಯ ಅರ್ಥದಲ್ಲಿ ದ್ವಿತೀಯಾ, ತೃತೀಯಾ ಬರಬಹುದು. ಪಂಚಮೀ ವಿಭಕ್ತಿಯ ಪ್ರಯೋಗದಲ್ಲಿ ತೃತೀಯಾ ವಿಭಕ್ತಿ ಪ್ರಯೋಗವನ್ನೂ ಕಾಣಬಹುದು. ಹಾಗೆ ನೋಡಿದರೆ ಪಂಚಮಿ ವಿಭಕ್ತಿಗೆ ಕನ್ನಡದಲ್ಲಿ ಪ್ರತ್ಯಯವೇ ಇಲ್ಲವೆಂದು ಹೇಳಿದರೂ ತಪ್ಪಾಗಲಾರದು.

ಸಂಸ್ಕೃತದಲ್ಲಿ ಮೂರು ವಚನಗಳು ಅವುಗಳಿಗೆ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳು ಹತ್ತುತ್ತವೆ. ವಸ್ತು ಒಂದಾಗಿದ್ದರೆ ಏಕವಚನ, ಎರಡಾಗಿದ್ದರೆ ದ್ವಿವಚನ, ಎರಡಕ್ಕಿಂತ ಹೆಚ್ಚಾಗಿದ್ದರೆ ಬಹುವಚನ. ಆದರೆ ದ್ರಾವಿಡ ಭಾಷೆಗಳಲ್ಲಿ ಏಕವಚನ, ಬಹುವಚನಗಳು ಎರಡೇ ಇರುವುದು. ಅಂತೆಯೇ ಕನ್ನಡದಲ್ಲಿಯೂ ಕೂಡ. ಕೇಶಿರಾಜನು ಹೇಳಿದ **"ಸ್ತ್ರೀಕಾರಂ ಕನ್ನಡದೊಳಗೇಕತ್ವಂ**

---

೧೪೦. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ – ಕಾವ್ಯಾವಲೋಕನಂ** ; ಪುಟ. ೧೫
೧೪೧. ಪ್ರೊ. ಬಿ. ಓ. ಸಾಸನೂರ, ಡಾ. ಎಂ. ಎಂ. ಕಲಬುರ್ಗಿ (ಸಂ) ; **ಶಬ್ದಮಣಿದರ್ಪಣ ಸಂಗ್ರಹ** ; ಪುಟ. ೪೬

ಬಹುತ್ವಂ ದ್ವಿವಚನಮುಚಿತದೆ ಬರ್ಕುಂ"[೧೪೨] ಮಾತು ಸ್ವೀಕಾರಾರ್ಹ. ಗಳ್, ವಿರ್, ಅಂದಿರ್, ಅವು ಎಂಬಿವುಗಳು ಬಹುವಚನದ ಪ್ರತ್ಯಯಗಳಾಗಿವೆ.

ಸೂತ್ರ–೧೫೫: **"ಸಂದ ಪಕಾರಕ್ಕೆ ಹಕಾ**
ರಂ ದೊರಕೊಳ್ಗುಂ ವಿಕಲ್ಪದಿಂ ಸಂಯೋಗಂ
ಸಂದಿಸಿದೊಡೆ ದುಷ್ಕರಮದು
ಸುಂದರಮಾ ದೇಶಿಯಿಂದಮೆಂಬರ್ ವಿಬುಧರ್ ॥"[೧೪೩] **(ಶ.ಮ.ದ.)**

"ಭಾಷೆಯು ನಿಂತ ನೀರಲ್ಲ. ಅದು ನಿರಂತರ ಪ್ರವಹಿಸುವುದು. ಕಾಲಕಾಲಕ್ಕೆ ಉಂಟಾಗುವ ವ್ಯತ್ಯಾಸಗಳನ್ನು ಮೈಗೂಡಿಸಿಕೊಂಡು ಬೆಳೆಯುವುದು ಅದರ ಗುಣಧರ್ಮ. ಅವುಗಳಲ್ಲಿ ಧ್ವನಿಪರಿವರ್ತನೆಯೂ ಒಂದು. ಒಬ್ಬ ವ್ಯಕ್ತಿಯ ಉಚ್ಚಾರಣೆಯಲ್ಲಾಗುವ ವ್ಯತ್ಯಾಸವೇ ಇದಕ್ಕೆ ಕಾರಣ. ಹೀಗೆ ಉಂಟಾದ ಧ್ವನಿ ವ್ಯತ್ಯಾಸವು ಎಲ್ಲರ ಒಪ್ಪಿಗೆಗೆ ಪಾತ್ರವಾದರೆ ಅದು ಇಡೀ ಭಾಷೆಗೆ ಪ್ರವಹಿಸುತ್ತದೆ. ಅಂತಹ ವ್ಯತ್ಯಾಸಗಳಲ್ಲಿ ಪ>ಹ ವ್ಯತ್ಯಾಸವು ಇದಕ್ಕೊಂದು ಸ್ಪಷ್ಟ ನಿದರ್ಶನವಾಗಿದೆ." [೧೪೪] ಪೂರ್ವದ ಹಳಗನ್ನಡದ 'ಪ' ಧ್ವನಿಯು ನಡುಗನ್ನಡ ಹಾಗೂ ಹೊಸಗನ್ನಡದ ಸಂದರ್ಭದಲ್ಲಿ 'ಹ' ಧ್ವನಿಯಾಗಿ ಬದಲಾಗಿದೆ.

ಪದಾದಿ ಧ್ವನಿ ವ್ಯತ್ಯಾಸ:

ಉದಾ: ಪಳಗನ್ನಡ > ಹಳಗನ್ನಡ
ಪಾಲು > ಹಾಲು
ಪಾವು > ಹಾವು
ಪುಲಿ > ಹುಲಿ

ಪದಾಂತ್ಯ ಧ್ವನಿ ವ್ಯತ್ಯಾಸ:

ಉದಾ: ಅಂತಪ್ಪ > ಅಂತಹ
ಇಂತಪ್ಪ > ಇಂತಹ
ಉಂತಪ್ಪ > ಉಂತಹ
ಎಂತಪ್ಪ > ಎಂತಹ

ಹೀಗೆ ಧ್ವನಿ ವ್ಯತ್ಯಾಸವನ್ನು ಗುರುತಿಸಬಹುದು.

೩) ಸಮಾಸ ಪ್ರಕರಣಂ:

ಭಾರತೀಯ ವ್ಯಾಕರಣ ಪರಂಪರೆಯಲ್ಲಿ ಸಮಾಸಗಳಿಗೆ ಪ್ರಮುಖ ಸ್ಥಾನವಿದೆಯೆಂಬುದು ಸರ್ವವಿಧಿತ. ಎರಡು ಇಲ್ಲವೇ ಎರಡಕ್ಕಿಂತ ಹೆಚ್ಚು ಪದಗಳು ಪರಸ್ಪರ ಅನ್ಯೋನ್ಯವಾಗಿ ಸೇರಿ ಒಂದು ಸ್ಪಷ್ಟವಾದ ಅರ್ಥಕೊಡುವಂತಿದ್ದರೆ ಅದಕ್ಕೆ ಸಮಾಸವೆಂದು ಹೆಸರು. "ಬೇರೆ ಬೇರೆಯಾದ

---

೧೪೨. ಪ್ರೊ. (ಶ್ರೀಮತಿ) ಎಚ್. ಎಂ. ಬೀಳಗಿ : **ಪ್ರತಿಫಲನ** ; ಪುಟ. ೬೭ (ಸೂತ್ರ–೧೦೪)
೧೪೩. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ** ; ಪುಟ. ೧೪೦
೧೪೪. ಪ್ರೊ. (ಶ್ರೀಮತಿ) ಎಚ್. ಎಂ. ಬೀಳಗಿ : **ಪ್ರತಿಫಲನ** ; ಪುಟ. ೧೦೩

ಅರ್ಥಗಳಲ್ಲಿ ವ್ಯವಹಾರವಾಗುವ ಎರಡು ನಾಮಪ್ರಕೃತಿಗಳು, ಅವು ಸೇರುವ ಅರ್ಥಗಳಿಂದ ಬೇರೆಯಾದ ಒಂದು ಅರ್ಥವನ್ನು ಕೊಡುವುದಕ್ಕಾಗಿ ನಡುವಣ ವಿಭಕ್ತಿ ಪ್ರತ್ಯಯಗಳನ್ನು ಕಳೆದುಕೊಂಡು ಒಗ್ಗೂಡುವ ಪ್ರಕೃತಿಗಳ ನಡುವೆ ಲೋಪಾಗಮಾದೇಶಗಳಲ್ಲಿ ಯಾವುದಾದರೂ ಒಂದು ವ್ಯತ್ಯಾಸ ಘಟಿಸಬಹುದು."[೧೪೫]

ಉದಾ: ಮಾತಿನಿಂ + ಬಲ್ಲಹಂ = ಮಾತುವಲ್ಲಹಂ (ವಕಾರಾದೇಶ)

ನೂಱು + ಪತ್ತು = ನೂಱಪತ್ತು (ಉ ಲೋಪ)

ಸಮಾಸಗಳ ಆಶಯವು ಸ್ಪಷ್ಟವಾಗಬೇಕಾದರೆ, ವಿಗ್ರಹವಾಕ್ಯವನ್ನು ಅದಕ್ಕೆ ತಕ್ಕಂತೆ ಮಾಡಿ ಪೂರ್ವಪದವನ್ನಿಡಬೇಕು. ಈ ಪ್ರಯತ್ನದಲ್ಲಿ ಹಳಗನ್ನಡ ಭಾಷೆಯ ವ್ಯಾಕರಣವಿಧಿಗಳನ್ನು ಅನುಸರಿಸುವುದು ಅತ್ಯವಶ್ಯಕ.

ಸೂತ್ರ–೧೭೩: **"ಕಱು ತಾಯ ಬೞಿಯನುೞಿಯದ**
ತೆಱದಿಂದಂ ನಾಮಪದಮದರ್ಥಾನುಗಮಾ
ಗೆಱಗೆ ಸಮಾಸಂ ನೆಗೞ್ಗುಂ
ನೆಱೆ ಪೋಕುಂ ಮಧ್ಯಗತವಿಭಕ್ತಿಗಳವಱಿಕೊಳ್ ॥"[೧೪೬] **(ಶ.ಮ.ದ)**

ಸೂತ್ರ–೪೫: **"ಸಂಗತಿಯಿಂದಂ ನಾಮಪ**
ದಂಗಳವೇ ಕಾರ್ಥಗತಿಯೊಳಾಗೆ ಸಮಾಸಂ
ಸಂಗಳಿಸುಗುಂ ವಿಭಕ್ತಿಗ
ಣಂಗಳ್ಗಂತರದೊಳಲ್ಲಿ ಲೋಪಮದಕ್ಕುಂ ॥"[೧೪೭] **(ಶ.ಸ್ಮ)**

ಸೂತ್ರ–೧೨೪: **"ನಾಮ್ನಾ ಸಮಾಸಃ ಸಂಗತಾರ್ಥಃ ॥**
ನಾಮ್ನಾಂ ನಾಮಪದಾನಾಂ ಸಂಗತಾರ್ಥಃ
ಸಂಬಂಧಾರ್ಥಃ ಸಮಾಸೋ ವೇದಿತವ್ಯ ॥"[೧೪೮] **(ಕ.ಭಾ.ಭೂ)**

ಹಸುವಿನ ಕರುವು ಹಾಗೆ ತನ್ನ ತಾಯಿಯನ್ನನುಸರಿಸಿ ಸಾಗುವುದೋ ಹಾಗೆಯೇ ಒಂದು ನಾಮಪದವು ಅರ್ಥಾನುಸಾರಿಯಾಗಿ ಇನ್ನೊಂದು ಪದದೊಡನೆ ಸಮ್ಮಿಳಿತವಾದಾಗ ಸಮಾಸವಾಗುವುದು. ಹೀಗಾದಾಗ ಪೂರ್ವಪದದ ಅಂತ್ಯದ ವಿಭಕ್ತಿಗಳು ಲೋಪವಾಗುತ್ತವೆ. ಸಮಾಸವಾಗುವಾಗ ಪೂರ್ವೋತ್ತರ ಪದಗಳು ನಾಮಪದಗಳೇ ಆಗಿರಬೇಕು ಎನ್ನುವ ನಿಯಮವಿಲ್ಲ. ಬೇರೆ ಬೇರೆ ಪದಗಳು ಸಮಾಸವಾಗಬಹುದು.

ನಾಮಪದ + ನಾಮಪದ

ಗುಣವಾಚಕ + ನಾಮಪದ

ನಾಮಪದ + ಧಾತು

---

೧೪೫. ಟಿ. ವಿ. ವೆಂಕಟಾಚಲ ಶಾಸ್ತ್ರೀ : **ಹಳಗನ್ನಡ ವ್ಯಾಕರಣ ಪ್ರವೇಶಿಕೆ** ; ಪುಟ. ೭೩

೧೪೬. ಪ್ರೊ. ಬಿ. ಟಿ. ಸಾಸನೂರ, ಡಾ. ಎಂ. ಎಂ. ಕಲಬುರ್ಗಿ (ಸಂ) ; **ಶಬ್ದಮಣಿದರ್ಪಣ ಸಂಗ್ರಹ** ; ಪುಟ. ೮೧

೧೪೭. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೪೫

೧೪೮. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಕರ್ಣಾಟಕ ಭಾಷಾಭೂಷಣಂ** ; ಪುಟ. ೨೨೦

ಧಾತು + ನಾಮಪದ

ಸಂಖ್ಯಾವಾಚಕ + ನಾಮಪದ

ಆವ್ಯಯ + ನಾಮಪದ

ಸಂಖ್ಯಾವಾಚಕ + ಸಂಖ್ಯಾವಾಚಕ

ಹೀಗೆ ವಿವಿಧ ರೀತಿಯಲ್ಲಿ ಸಮಾಸವಾಗಬಹುದು. ಕಣ್ಣುಗಳೆರಡಾದರೂ ನೋಟವೊಂದೇ ಎಂಬಂತೆ, ಸಮಾಸದಲ್ಲಿ ಎಷ್ಟೇ ಪದಗಳಿದ್ದರೂ ಅವೆಲ್ಲವೂ ಸೇರಿ ಒಂದೇ ಅರ್ಥವಾಗಬೇಕು. ಸಂಧಿಗಳಲ್ಲಿ ಹಲವು ವ್ಯತ್ಯಾಸಗಳಾಗುವಂತೆ ಸಮಾಸವಾಗುವಾಗಲೂ ವ್ಯತ್ಯಾಸಗಳಾಗುವವು. ಸಂಸ್ಕೃತದಿಂದ ಕನ್ನಡಕ್ಕೆ ಬಂದಿರುವ ಆರು ಸಮಾಸಗಳನ್ನು ಇಮ್ಮಡಿ ನಾಗವರ್ಮ ಹಾಗೂ ಕೇಶಿರಾಜ ಇಬ್ಬರೂ ವಿಶದಪಡಿಸಿದ್ದಾರೆ.

ಸೂತ್ರ–೧೬೪: **"ಪರಪದದೊಳರ್ಥವರ್ತನ**
ಮಿರೆ ತತ್ಪುರುಷಂ ಸಮಂತದೇಕಾಶ್ರಯಮಾ
ಗಿರೆ ಕರ್ಮಧಾರಯಂ ನೆ
ಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ ॥"[೧೪೯] (ಶ.ಮ.ದ.)

೧. **ತತ್ಪುರುಷ ಸಮಾಸ** : ಪೂರ್ವಪದ ಮತ್ತು ಉತ್ತರ ಪದಗಳಲ್ಲಿ ಅರ್ಥವು ಪ್ರಧಾನವಾಗಿದ್ದರೆ ಅದು ತತ್ಪುರುಷ ಸಮಾಸ. ನಿಯಮದ ಪ್ರಕಾರ ಪೂರ್ವ ಹಾಗೂ ಉತ್ತರ ಪದಗಳೆರಡೂ ನಾಮಪದಗಳಾಗಿರುವವು.

ಉದಾ: ಅರಸನ + ಮನೆ = ಅರಮನೆ.

೨. **ಕರ್ಮಧಾರಯ ಸಮಾಸ: "ತದೇಕಾಶ್ರಮಾಗುತ್ತಿರೆ ಕರ್ಮಧಾರಯಂ."**[೧೫೦] ಕರ್ಮಧಾರಯ ಸಮಾಸದಲ್ಲಿ ಪೂರ್ವಪದ ಮತ್ತು ಉತ್ತರ ಪದಗಳೆರಡೂ ಏಕಾಶ್ರಯವನ್ನು ಹೊಂದಿರುತ್ತವೆ. ಅಂದರೆ ಇಲ್ಲಿ ಪೂರ್ವೋತ್ತರ ಪದಗಳೆರಡೂ ಪ್ರಥಮಾ ವಿಭಕ್ತಿಯಿಂದಲೇ ಕೂಡಿರುತ್ತವೆ.

ಉದಾ: ಕಿಱಿದು + ಕೂಸು = ಕಿಱುಗೂಸು

ಪಿಱಿದು + ಪುಲಿಯು + ಪೆರ್ಬುಲಿ

೩. **ದ್ವಿಗು ಸಮಾಸ:** ಪೂರ್ವಪದವು ಸಂಖ್ಯಾವಾಚಿಯಾಗಿದ್ದರೆ ಅದು ದ್ವಿಗುಸಮಾಸವಾಗುವುದು.

ಉದಾ: ಎರಡು + ಬಾಳ್ = ಇರ್ಬಾಳ

ನಾಲ್ಕು + ದೆಸೆ = ನಾಲ್ದೆಸೆ

ಸೂತ್ರ–೪೭: **"ದ್ವಿಪದಂ ಮೇಣ್ ಬಹುಪದಮ**
ನ್ಯ ಪದಾರ್ಥದೊಳೊಂದಿ ನಿಲೆ ಬಹುವ್ರೀಹಿ ಸಮ

---

೧೪೯. ರೆ. ಎಫ್. ಕಿಟೆಲ್ (ಸಂ), ಪಿ. ಮಂಗೇಶ ರಾವ್ (ಮರು ಸಂಪಾ.) : **ಕೇಶಿರಾಜ ಕವಿಯ ಶಬ್ದಮಣಿ ದರ್ಪಣಂ** (ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ) ; ಪುಟ. ೨೩೧, ೨೩೨

೧೫೦. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೪೬

ಸ್ತ ಪದಾರ್ಥಂ ದ್ವಂದ್ವಂ ಪೂ
ರ್ವಪದಪ್ರಾಧಾನ್ಯವ್ಯಯೀಭಾವಾಖ್ಯಂ ॥"[೧೫೧] **(ಶ.ಸ್ಮೃ)**

೪. **ಬಹುವ್ರೀಹಿ ಸಮಾಸ:** ಎರಡು ಅಥವಾ ಅನೇಕ ಪದಗಳು ಸೇರಿ ಬೇರೊಂದು ಅರ್ಥವನ್ನು ಬಯಸುತ್ತಿದ್ದರೆ ಅದು ಬಹುವ್ರೀಹಿ ಸಮಾಸವೆನಿಸುತ್ತದೆ.

ಉದಾ: ಕಡಿದು ಚಾಗಮನುಳ್ಳವನು ಆವನೋ ಅವನು ಕಡುಚಾಗಿ.

ಕಡಿದು ಚಾಗಂ ಉಳ್ಳವಂ > ಕಡು + ಚಾಗಿ = ಕಡುಚಾಗಿ

೫. **ದ್ವಂದ್ವ ಸಮಾಸ:** ಎಲ್ಲ ಪದಗಳ ಅರ್ಥವು ಮುಖ್ಯವಾಗಿದ್ದರೆ ಅದು ದ್ವಂದ್ವ ಸಮಾಸವೆನಿಸುವುದು.

ಉದಾ: ಆಟಂ + ಪಾಠಂ + ಕೂಟಂ = ಆಟಪಾಠಕೂಟಂಗಳ್

ಕರ್ಣನುಂ + ಅರ್ಜುನನುಂ = ಕರ್ಣಾರ್ಜುನರ್

೬. **ಅವ್ಯಯೀಭಾವ (ಅಂಶೀ) ಸಮಾಸ:** ಪೂರ್ವಪದದ ಅರ್ಥವು ಪ್ರಧಾನವಾಗಿದ್ದರೆ ಅದು ಅವ್ಯಯೀಭಾವ ಅಥವಾ ಅಂಶೀ ಸಮಾಸ ಎನಿಸುವುದು.

ಉದಾ: ಕೈ + ಅಡಿ = ಅಂಗೈ

ಕಾಲ್ + ಪಿಂದೆ = ಪಿಂಗಾಲ್

ಹೀಗೆ ಸಂಸ್ಕೃತದ ಪ್ರಭಾವದಿಂದ ಕನ್ನಡಕ್ಕೆ ಬಂದಿರುವ ಆರು ಸಮಾಸಗಳನ್ನು ತಿಳಿಸಿ, ಕನ್ನಡದ್ದೇಯಾದ ಗಮಕಸಮಾಸ ಮತ್ತು ಕ್ರಿಯಾಸಮಾಸಗಳನ್ನು ಈ ಮುಂದಿನಂತೆ ಹೇಳುತ್ತಾರೆ.

೧. **ಕ್ರಿಯಾಸಮಾಸ:** ಕನ್ನಡದಲ್ಲಿ ಮೊಟ್ಟಮೊದಲಿಗೆ ಕ್ರಿಯಾಸಮಾಸವನ್ನು ಗುರುತಿಸಿದವನು ಇಮ್ಮಡಿ ನಾಗವರ್ಮ. "ಪತ್ತಿರೆ ಕಾರಕದೊಳ್ ಮುಂದೊತ್ತಿ ಸಮರ್ಥ ಕ್ರಿಯಾಪದಂ ಪದವಿಧಿ ತಾನೊತ್ತರಿಸುಗುಂ" [೧೫೨] ಎಂದು ಹೇಳಿ ಕನ್ನಡಕ್ಕೆ ವಿಶಿಷ್ಟವಾದ ಕ್ರಿಯಾಪದವನ್ನು ಗುರುತಿಸುತ್ತಾನೆ. ಇದಕ್ಕೆ ಕೇಶಿರಾಜನು "ವಿದಿತಂ ಕ್ರಿಯಾಸಮಾಸಂ ಮೊದಲೊಳ್ ಕಾರಕಮುಮಗ್ರದೊಳ್ ಕ್ರಿಯೆಯುಂ ಸನ್ನಿದಮಾಗೆ" [೧೫೩] ಎಂದಿದ್ದಾನೆ. ಅಂದರೆ ಪೂರ್ವಪದವು ಕಾರಕವಾಗಿದ್ದು, ಪರಪದವು ಕ್ರಿಯೆಯ ಅರ್ಥವನ್ನುಳ್ಳದ್ದಾಗಿದ್ದು, ಅವೆರಡೂ ಸೇರಿ ಸಮಾಸಮಾದಾಗ ಕ್ರಿಯಾಸಮಾಸವೆನಿಸುವುದು.

ಉದಾ: ಬಳೆಯಂ + ತೊಟ್ಟಂ = ಬಳೆದೊಟ್ಟಂ

ರಂಗಮಂ + ಪೊಕ್ಕಂ = ರಂಗಂಬೊಕ್ಕಂ

೨. **ಗಮಕ ಸಮಾಸ:** ಕೇಶಿರಾಜನು ಹೇಳುವ ಗಮಕಸಮಾಸವು ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಒಂದಾಗಿದೆ. ಕನ್ನಡದ ಒಂಬತ್ತು ಅಸಾಧಾರಣ ಲಕ್ಷಣಗಳಲ್ಲಿ ಗಮಕಸಮಾಸವೂ

---

೧೫೧. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಕಾವ್ಯಾವಲೋಕನಂ** ; ಪುಟ. ೩೫

೧೫೨. ಎಚ್. ದೇವೀರಪ್ಪ : **ನಾಗವರ್ಮ ವಿರಚಿತಂ ಕಾವ್ಯಾವಲೋಕನಂ** ; ಪುಟ. ೪೮

೧೫೩. ರೆ. ಎಫ್. ಕಿಟೆಲ್ (ಸಂ), ಪಿ. ಮಂಗೇಶ ರಾವ್ (ಮರು ಸಂಪಾ.) : **ಕೇಶಿರಾಜ ಕವಿಯ ಶಬ್ದಮಣಿ ದರ್ಪಣಂ** (ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ) ; ಪುಟ. ೨೩೫ (ಸೂತ್ರ–೧೬೭)

ಒಂದು ಎಂದು ತಿಳಿಸುತ್ತಾನೆ. ಗಮಕಸಮಾಸವನ್ನು ನಾಗವರ್ಮನು ಗುರುತಿಸಿಲ್ಲ ಎಂಬುದು ಇಲ್ಲಿ ಉಲ್ಲೇಖಾರ್ಹ. ಇದು ಕೇಶಿರಾಜನ ಸ್ವತಂತ್ರ ಸಂಶೋಧನ ಶಕ್ತಿಯ ಪ್ರತೀಕವಾಗಿದೆ. ಇಲ್ಲಿ ಗಮಕವೆಂದರೆ 'ಸ್ಪಷ್ಟಪಡಿಸು', 'ವ್ಯಕ್ತಪಡಿಸು', 'ಸೂಚಕ' ಎಂದರ್ಥವಾಗುತ್ತದೆ.

ಸೂತ್ರ-೧೭೯:

"ಜನಿಯಿಸುಗುಂ ಸಂಖ್ಯಾಸ
ರ್ವನಾಮಗುಣವಚನಕೃತ್ಪ್ರಪೂರ್ವಂ ಗಮಕಂ
ತನಗತ್ವಂ ಪೆಱಗಿತ್ವಂ
ತನಗರಿಪದನಿಲ್ಲ ಕರ್ಮಧಾರಯಮದುವುಂ ॥"[೧೫೪]

ಎಂದು ಗಮಕ ಸಮಾಸದ ಲಕ್ಷಣಗಳನ್ನು ತಿಳಿಸುತ್ತಾನೆ. ಅಂದರೆ ಪೂರ್ವಪದದಲ್ಲಿ ಸಂಖ್ಯಾವಾಚಕ, ಸರ್ವನಾಮ, ಗುಣವಚನ, ಕೃದಂತ ಇವುಗಳಲ್ಲಿ ಯಾವುದಾದರೊಂದು ಇದ್ದು, ಉತ್ತರ ಪದವು ಕಾರಕವಾಗಿದ್ದರೆ ಅದು ಗಮಕಸಮಾಸವೆನಿಸುವುದು. ಪೂರ್ವಪದವು ಗುಣವಚನವಾಗಿದ್ದು, ಸಮಾಸವಾದಾಗ ಗುಣವಚನದ ಅಂತ್ಯಕ್ಷರ ಲೋಪವಾಗಿ ಉಳಿಯುವ 'ಇ' ಕಾರದ ಮುಂದೆ 'ಅ' ಕಾರವು ಬರುತ್ತದೆ. ಗಮಕ ಸಮಾಸವು ಕರ್ಮಧಾರಯ ಸಮಾಸದ ಒಂದು ಭೇದವಾಗಿದೆ.

ಉದಾ: ಮೂವತ್ತು + ಆಱು = ಮೂವತ್ತಾಱು (ಸಂಖ್ಯಾವಾಚಕ)

ಆವಂ + ನಾಯಕಂ = ಆವನಾಯಕಂ (ಸರ್ವನಾಮ)

ಅಸಿಯ + ನಡು = ಅಸಿನಡು (ಗುಣವಚನ)

ಪಾಡುವುದು + ತುಂಬಿ = ಪಾಡುವದುಂಬಿ (ಕೃದಂತ)

ಅರಿಸಮಾಸ:

ಕನ್ನಡ ಮತ್ತು ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡುಬಹುದು. ಹಾಗೆಯೇ ಬೇರೆ ಬೇರೆ ಭಾಷೆಯ ಪದಗಳನ್ನು ಸೇರಿಸಿ ಸಮಾಸ ಮಾಡುವುದನ್ನು ಅರಿಸಮಾಸ ಎನ್ನುವರು. ಕೇಶಿರಾಜನು ಈ ಸಮಾಸವನ್ನು ವಿರುದ್ಧಸಮಾಸವೆಂದೂ ಕರೆದಿದ್ದಾನೆ. ಪೂರ್ವಕವಿಗಳು ಮಾಡಿದ ಪ್ರಯೋಗಗಳನ್ನು ಮನ್ನಿಸಬೇಕು. ಹೊಸದಾಗಿ ಪ್ರಯೋಗ ಮಾಡಬಾರದೆಂದು ಹೇಳುತ್ತಾನೆ.

ಸೂತ್ರ-೧೮೫:

"ಪದವಿಧಿ ಕನ್ನಡಕಂ ಸ
ಕ್ಕದಕ್ಕಮಿಲ್ಲಾದ್ಯರಿಂದೆ ಸಂದುವನಱಿದಿ
ರ್ಪುದು ಬಿರುವಳಿಯೊಳ್ ಪೇ
ೞ್ದುದು ಪೆಱವಱಿಕೊಲಾಗದಿರು ವಿರುದ್ಧ ಸಮಾಸಂ ॥"[೧೫೫]

- ಕನ್ನಡ ಮತ್ತು ಸಂಸ್ಕೃತ ಪದಗಳು ಸೇರಿ ಸಮಾಸವಾಗುವುದು.
- ಪೂರ್ವಕವಿಗಳು ಆ ರೀತಿಯಲ್ಲಿ ಸಂಸ್ಕೃತ-ಕನ್ನಡ ಪದಗಳನ್ನು ಸೇರಿಸಿ ಸಮಾಸ ಮಾಡಿದ್ದರೆ ಒಪ್ಪಬಹುದು.

---

೧೫೪. ಪ್ರೊ. ಬಿ. ಟಿ. ಸಾಸನೂರ, ಡಾ. ಎಂ. ಎಂ. ಕಲಬುರ್ಗಿ (ಸಂ) ; **ಶಬ್ದಮಣಿದರ್ಪಣ ಸಂಗ್ರಹ** ; ಪುಟ. ೮೪
೧೫೫. **ಅದೇ** ; ಪುಟ. ೮೭

* ಬಿರುದಾವಳಿಗಳಲ್ಲಿ ಅರಿಸಮಾಸ ದೋಷ ಇರುವುದಿಲ್ಲ. ಉಳಿದ ಕಡೆಗಳಲ್ಲಿ ಅರಿಸಮಾಸವನ್ನು ಮಾಡಬಾರದು.

ಎಂದು ಅರಿಸಮಾಸದ ನಿಯಮಗಳನ್ನು ಹೇಳುತ್ತಾನೆ.

ಉದಾ: ಅರಸು + ಕುಮಾರಂ = ಅರಸುಕುಮಾರಂ

ಕೆಳದಿ + ಸಮೇತಂ = ಕೆಳದಿಸಮೇತಂ

ಇರ್ಬ್ + ಬಲಂ = ಇರ್ಬಲಂ

ಕಡು + ರಾಗಂ = ಕಡುರಾಗಂ

ಮಂಗಳ + ಆರತಿ = ಮಂಗಳಾರತಿ

ವೀಪ್ಸಿ ಸಮಾಸ: ಕನ್ನಡದಲ್ಲಿ ಹಲವಾರು ಪ್ರಯೋಗಗಳನ್ನು ಗಮನಿಸಿ ಕೇಶಿರಾಜನು ಸಂಸ್ಕೃತದಲ್ಲಿರುವ ವೀಪ್ಸಾ ಇಲ್ಲವೇ ವೀಪ್ಸಿ ಸಮಾಸವನ್ನು ಹೇಳಿತ್ತಾನೆ. ಕನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ಆಗುವ ಪುನರುಕ್ತಿಗಳನ್ನು ಉದಾಹರಿಸಿ ವೀಪ್ಸಾ ಸಮಾಸವೆಂದು ಹೆಸರಿಸಿದ್ದಾನೆ. ಅವ್ಯಯ, ಅನುಕರಣ ಪದಗಳು ಸೇರಿ ಸಮಾಸವಾಗುವಾಗ ಪೂರ್ವಪದಗಳ ಅಂತ್ಯಾಕ್ಷರಕ್ಕೆ ಲೋಪವುಂಟಾಗುತ್ತದೆ. ಉಳಿದೆಡೆಗಳಲ್ಲಿ 'ಅ'ಕಾರವು ಆಗಮವಾಗುತ್ತದೆ.

ಸೂತ್ರ-೨೦೪: **"ಅತಿಶಯತರಾರ್ಥ ವೀಪ್ಸಾ**
ನ್ವಿತ ನಾಂತಾವ್ಯಯ ಪದಕ್ಕಮನುಕೃತಿಪದಕಂ
ಕೃತಮಂತ್ಯಲೋಮಿತರಾ
ಗತಮತ್ವಂ ನಡುವಿನಂತೆ ಕಡೆಗಂ ಟತ್ವಂ ॥"[೧೫೬]

ಉದಾ: ಸಪ್ಪನೆ + ಸಪ್ಪನೆ = ಸಪ್ಪಸಪ್ಪನೆ ('ನ'ಕಾರಾಂತ ಅವ್ಯಯ ಪದಾಂತ್ಯ ಲೋಪ)

ಚಳನೆ + ಚಳನೆ = ಚಳಚಳನೆ (ಅನುಕರಣ ಪದಾಂತ್ಯ ಲೋಪ)

ನಡುವೆ + ನಡುವೆ = ನಟ್ಟನಡುವೆ ('ಅ'ತ್ವಯುಕ್ತ 'ಟ' ಕಾರಾಗಮ)

ಕಡೆ + ಕಡೆ = ಕಟ್ಟಕಡೆ ('ಡ'ತ್ವಕ್ಕೆ 'ಟ'ತ್ವಾದೇಶ)

ಮೊದಲು + ಮೊದಲು = ಮೊಟ್ಟಮೊದಲು

ತುದಿ + ತುದಿ = ತುತ್ತತುದಿ

೪) ತದ್ಧಿತ ಪ್ರಕರಣ:

"ಪದಗಳಲ್ಲಿ ಎರಡು ವಿಧಗಳಿವೆ. ಒಂದು ಮೂಲಪದ. ಇನ್ನೊಂದು ಸಾಧಿತ ಅಥವಾ ನಿಷ್ಪನ್ನಪದ. ಮೂಲಪದಕ್ಕೆ ಪ್ರತ್ಯಯ ಪ್ರತ್ಯಯ ಸೇರಿಸಿದಾಗ ಸಾಧಿತ ಪದವುಂಟಾಗುವುದು."[೧೫೭] ಸಾಧಿತ ಪದಗಳಲ್ಲಿ ಎರಡು ವಿಧಗಳು.

---

೧೫೬. ಪ್ರೊ. (ಶ್ರೀಮತಿ) ಎಚ್. ಎಂ. ಬೀಳಗಿ : **ಪ್ರತಿಫಲನ** ; ಪುಟ. ೧೨೪
೧೫೭. **ಅದೇ** ; ಪುಟ. ೧೨೭

೧. ಕೃದಂತಗಳು: ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಉಂಟಾಗುವ ಪದಗಳು.

೨. ತದ್ಧಿತಾಂತಗಳು: ನಾಮಗಳಿಗೆ ತದ್ಧಿತ ಪ್ರಯತ್ಯಯಗಳು ಸೇರಿ ಉಂಟಾಗುವ ಪದಗಳು.

- ಮಾಡುವ, ಮಾರುವ, ನಿಯೋಗ, ಅನೃತ, ತಿಳಿದ, ಋಣದ, ಶಿಲ್ಪದ ಈ ಮುಂತಾದ ಕಾರ್ಯಗಳಲ್ಲಿ ನಿರತರಾದವನ್ನು ಗುರುತಿಸುವಲ್ಲಿ ಸಂಬಂಧಿಸಿದ 'ನಾಮ'ದ ನೇಕೆ 'ಇಗ' ಪ್ರತ್ಯಯ ಸೇರುವುದು. (ಸೂತ್ರ–೨೦೮)

  ಉದಾ: ಮಾಡುವವ → ಕಬ್ಬ + ಇಗ = ಕಬ್ಬಿಗ

  ಮಾರುವವ → ಗಾಣ + ಇಗ = ಗಾಣಿಗ

- ಕೆಲಸವನ್ನು ಮಾಡುವವನು ಎಂದು ಹೇಳುವಲ್ಲಿ 'ವಡಿಗ' ಪ್ರತ್ಯಯವು ಸೇರುವುದು.

  ಉದಾ: ಪುಲ್ಲ + ವಡಿಗಂ = ಪುಲ್ಲವಡಿಗಂ

  ಪೂವು + ವಡಿಗಂ = ಪೂವಾಡಿಗಂ

- ವ್ಯವಹರಿಸುವವನು ಎಂಬಲ್ಲಿ 'ಕಾಱ' ಪ್ರತ್ಯಯದ ಬಳಕೆಯಾಗುವುದು.

  ಉದಾ: ಮಾಲೆ + ಕಾಱ = ಮಾಲೆಗಾಱ

  ಕುಂಬ + ಗಾಱಂ > ಕುಂಬ + ಆಱಂ = ಕುಂಬಾರ

  ಓದು + ಗಾಱ > ಓದು + ಂ + ಗಾಱ = ಓದುಂಗಾಱ

- ಅದರೊಳಗೆ ಅವನು ಹುಟ್ಟಿದನೆಂದು ಹೇಳುವಲ್ಲಿ 'ಇಚ' ಪ್ರತ್ಯಯ ಸೇರುವುದು.

  ಉದಾ: ಪೊಟಲ್ + ಇಚ = ಪೊಟಲಿಚ (ಪಟ್ಟಣದಲ್ಲಿ ಹುಟ್ಟಿದವನು)

  ಕಾಲೂರ್ + ಇಚ = ಕಾಲುರಿಚ (ಹಳ್ಳಿಯಲ್ಲಿ ಹುಟ್ಟಿದವನು)

- ಒಬ್ಬನು ಒಂದು ವಿಷಯದಲ್ಲಿ ಹೆಚ್ಚಾಗಿ ವರ್ತಿಸುವನು ಎಂಬುದನ್ನು ಹೇಳುವಲ್ಲಿ 'ಗ' ಪ್ರತ್ಯಯಗಳು ಸೇರುತ್ತವೆ.

  ಉದಾ: ಕಲ್ + ಕುಟಿಗ = ಕಲ್ಕುಟಿಗ

  ಮಣ್ಣು + ಉಳಿಗ = ಮಣ್ಣುಳಿಗ

ಅಂತೆಯೇ 'ಗುಳಿ', 'ಉಣಿ', 'ಉಕ', 'ಕುಳಿ', 'ಆಳಿ', 'ಇಕ', 'ಉಕ', 'ಅಡಿಗ', 'ಉಕ', 'ಕ', 'ಇಲ', 'ಒಡೆಯ', 'ಅನೆಯ', 'ಮೆ', 'ಇತಿ', 'ಗಾರ್ತಿ' ಎಂಬ ಪ್ರತ್ಯಯಗಳ ಬಳಕೆಯನ್ನು ಕಾಣಬಹುದು.

ತದ್ಧಿತ ಭಾವನಾಮ:

ಭಾವ ಪ್ರಕಟಣೆಯಲ್ಲಿ 'ಇ'ಕಾರ, 'ಉ'ಕಾರ, 'ಎ'ಕಾರದಿಂದ ಕೂಡಿದ 'ವ'ತ್ವವನ್ನು ಸೇರಿಕೊಳ್ಳುತ್ತವೆ. ಆಗ ಪೂರ್ವಪದಾಂತ್ಯದಲ್ಲಿ 'ಅ'ಕಾರ ಉಂಟಾಗುತ್ತದೆ. ಕೆಲವೆಡೆ 'ಅ'ಕಾರ, 'ಎ'ಕಾರಯುಕ್ತ 'ತ'ಕಾರ ಸೇರುವುದು.[೧೫೮]

೧೫೮. ಪ್ರೊ. (ಶ್ರೀಮತಿ) ಎಚ್. ಎಂ. ಬೀಳಗಿ : **ಪ್ರತಿಫಲನ** ; ಪುಟ. ೧೩೦

ಸೂತ್ರ-೨೦೪: **“ಇತ್ವದೊಳುತ್ವದೊಳಾ ಪ್ರ**
ಸ್ವೃತದೊಳೊಂದಿದ ವಕಾರಮಕ್ಕುಂ ಭಾವ
ಕ್ಕತ್ವಂ ಪಿರಿದುಂ ಪೆಱಗುಂ
ಟತ್ವಂ ಹ್ರಸ್ವೃತ್ವತತ್ವಮದು ಕೆಲವೆಡೆಯೊಳ್ ॥”[೧೫೯]

ಉದಾ: ಅಳೆ + ವಿ > ಅಳ + ವಿ = ಅಳವಿ

ತೆರೆ + ವು > ತೆರ + ವು = ತೆರವು

ಉಡು + ಗೆ = ಉಡುಗೆ

ಕಾಣ್ + ಕೆ = ಕಾಣ್ಕೆ

ತಣ್ + ಪು = ತಂಪು

೫) ಆಖ್ಯಾತ ಪ್ರಕರಣ:

ಸೂತ್ರ-೨೨೭: **“ಕ್ರಿಯೆಯರ್ಥದ ಮೂಲಂ ಪ್ರ**
ತ್ಯಯರಹಿತಂ ಧಾತುವದನಭಾವಕ್ರಿಯೆಯೊಳ್
ನಿಯತಂ ನಿಶ್ಚಯಿಪುದು ಬುಧ
ಚಯಮಾ ಧಾತುಗೆ ವಿಭಕ್ತಿಯಾಱಾಗಿರ್ಕುಂ ॥”[೧೬೦]

ಧಾತುಗಳ ಮುಂದೆ ಸೇರಿ ಕ್ರಿಯಾಪದಗಳನ್ನು ರೂಪಿಸುವ ಪ್ರತ್ಯಯಗಳಿಗೆ ‘ಆಖ್ಯಾತ ಪ್ರತ್ಯಯ’ಗಳೆಂದು ಹೆಸರು. ಧಾತುವಿಗೆ ಆರು ವಿಭಕ್ತಿಪ್ರತ್ಯಯಗಳನ್ನು ಹೇಳುತ್ತಾನೆ ಕೇಶಿರಾಜ. ಅವುಗಳನ್ನು ಕೃತ್ ಪ್ರತ್ಯಯಗಳು ಎನ್ನುತ್ತಾರೆ. ಕ್ರಿಯಾಪದದ ಮೂಲಾರ್ಥವನ್ನು ಒಳಗೊಂಡಿರುವುದು, ಪ್ರತ್ಯಯ ರಹಿತವಾದುದು ಧಾತು ಎನಿಸಿಕೊಳ್ಳುತ್ತದೆ. ಅದನ್ನು ನಿಷೇಧ ಕ್ರಿಯಾಪದದ ಮೂಲಕ ಅಂದರೆ ನಿಷೇಧ ಕ್ರಿಯಾಪದಕ್ಕೆ ಸೇರಿದ ಪ್ರತ್ಯಯವನ್ನು ಕಳೆಯುವ ಮೂಲಕ ಅರಿಯಬಹುದು.

ಉದಾ: ಮಾಡು + ದ + ಅಂ = ಮಾಡಿದಂ

ಅಮ್, ಅರ್, ಅಯ್, ಇರ್, ಎನ್, ಎವು ಎಂಬಿವುಗಳು ಆರು ಆಖ್ಯಾತ ಪ್ರತ್ಯಯಗಳು. ಪುರುಷತ್ರಯಗಳು, ವಚನಗಳಲ್ಲಿ ಪ್ರತ್ಯಯಗಳ ಬಳಕೆಯನ್ನು ಕಾಣಬಹುದು.

ಉದಾ: ಒಗೆ + ದ + ಅಂ = ಒಗೆದಂ

ಕಟ್ಟು + ದ + ಅರ್ = ಕಟ್ಟಿದರ್

ತೆಗೆ + ದ + ಅಯ್ = ತೆಗೆದಯ್

ಏಳಿಸು + ಇರ್ = ಏಳಿಪಿರ್

ಒಡರ್ಚು + ದ + ಎನ್ = ಒಡರ್ಚಿದೆನ್

ಆನ್ + ವ (> ಪ) + ಎವು = ಅಂಪೆವು

---

೧೫೯. ಪ್ರೊ. ಬಿ. ಟಿ. ಸಾಸನೂರ, ಡಾ. ಎಂ. ಎಂ. ಕಲಬುರ್ಗಿ (ಸಂ) ; **ಶಬ್ದಮಣಿದರ್ಪಣ ಸಂಗ್ರಹ** ; ಪುಟ. ೧೦೪
೧೬೦. **ಅದೇ** ; ಪುಟ. ೧೦೮

ಬೆಳೆ, ಬಳೆ, ಬಳವಿ, ಗುಣವಾಚಿ, ಸರ್ವನಾಮ, ಸಂಖ್ಯೆ, ಗುಣೋಕ್ತಿ, ತಾಂ, ನೀಂ, ಆಂ, ಉದು, ಉವು, ಇತು, ಇತ್ತು, ಅತ್ತು, ಅಳ್, ಗುಂ, ಕುಂ, ಇಸು, ವಿಧಿರೂಪ, ಲೋಕೋಚಿತಾಕ್ಷರ, ಆಗಮೋಚಿತಾಕ್ಷರ, ಅಲ್, ವರ್ತಮಾನ, ಭೂತನ್ಯೂನ್ಯಗಳು, ಉಳ್, ಉಂಟು ಈ ಎಲ್ಲ ಪ್ರತ್ಯಯಗಳ ಪ್ರಯೋಗವನ್ನು ಕೇಶಿರಾಜನ 'ಶಬ್ದಮಣಿದರ್ಪಣಂ'ನಲ್ಲಿ ಕಾಣುಬಹುದು.

'ಶಬ್ದಮಣಿದರ್ಪಣಂ'ನ ಇನ್ನುಳಿದ 'ಧಾತು ಪ್ರಕರಣ', 'ಅಪಭ್ರಂಶ ಪ್ರಕರಣ' ಹಾಗೂ ಅವ್ಯಯ ಪ್ರಕರಣಗಳಲ್ಲಿ ಕೇಶಿರಾಜನು ಶಬ್ದಾರ್ಥ, ಪದಕೋಶಗಳ ರೂಪದಲ್ಲಿ ಪದಗಳಿಗೆ ಅರ್ಥಗಳನ್ನು ಹೇಳುತ್ತ ಹೋಗುತ್ತಾನೆ. ಪ್ರಸ್ತುತ ಈ ಮೂರು ಪ್ರಕರಣಗಳ ಕುರಿತಾದ ವಿಷಯಾಂಶಗಳನ್ನು ಇದೇ ಅಧ್ಯಾಯದ 'ನಿಘಂಟುಶಾಸ್ತ್ರ' ಭಾಗದಲ್ಲಿ ಚರ್ಚಿಸಲಾಗಿದೆ.[೧೬೧]

೬) ಕೇಶಿರಾಜನು ಹೇಳುವ ಕನ್ನಡದ ಅಸಾಧಾರಣ ಲಕ್ಷಣಗಳು:

ಸೂತ್ರ-೩೪೨: **"ಗಮಕ ಸಮಾಸದಿಂ ಱಟ ಕುಳ ಕ್ಷಳದಿಂ ಶ್ರುತಿಸಹ್ಯಸಂಧಿಯಿಂ**
ಸಮುಚಿತಮಾಗಿ ಬರ್ಪಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ
ವ ಮ ಹ ಪ ಭೇದದಿಂ ವಿರಹಿತಾವ್ಯಯ ಸಂಸ್ಕೃತ ಲಿಂಗದಿಂ ಪದೋ
ತ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ ॥"[೧೬೨]

ಕೇಶಿರಾಜನು ತನ್ನ 'ಶಬ್ದಮಣಿದರ್ಪಣ'ದ ಸಮಾಪ್ತಿ ಪದ್ಯಗಳಲ್ಲಿ ೯ ಕನ್ನಡದ ಅಸಾಧಾರಣ ಲಕ್ಷಣಗಳನ್ನು ತಿಳಿಸುತ್ತಾನೆ.

೧. **ಗಮಕಸಮಾಸ:** ಪೂರ್ವಪದದಲ್ಲಿ ಸಂಖ್ಯೆ, ಸರ್ವನಾಮ, ಗುಣವಚನ, ಕೃದಂತಗಳಲ್ಲಿ ಯಾವುದಾದರೂ ಒಂದು ಇದ್ದು ಪರಪದದಲ್ಲಿ ಕಾರಕವಿದ್ದರೆ ಅದು ಗಮಕಸಮಾಸ ಎನಿಸುವುದು.[೧೬೩]

೨. **ಱಟ-ಕುಳ-ಕ್ಷಳ:** ಕೇಶಿರಾಜನ ಕಾಲದಲ್ಲಿ ಕನ್ನಡದಲ್ಲಿ ಮೂರು 'ಳ'ಕಾರಗಳ ಬಳಕೆಯಿತ್ತು.

ಱಟ (ೞ): ಇದು ಅಚ್ಚಗನ್ನಡದ ವರ್ಣ. ಇಂದು ಇದರ ಬಳಕೆ ಸಂಪೂರ್ಣವಾಗಿ ನಿಂತುಹೋಗಿದೆ. ಇದರ ಬದಲಾಗಿ 'ಳ'ಕಾರವೇ ಬಳಕೆಯಲ್ಲಿದೆ.

ಬಾೞ್ = ಬದುಕು; ಬಾೞೆ = ಮೀನು, ಬಾಳೆಹಣ್ಣು.

ಕುಳ (ಳ): ಇದೂ ಕೂಡ ಅಚ್ಚಗನ್ನಡದ ವರ್ಣವಾಗಿದೆ. ಹಳಗನ್ನಡದಲ್ಲಿ 'ೞ' ಹಾಗೂ 'ಳ'ದಿಂದ ಕೂಡಿದ ಪದಗಳಿಗೆ ಅರ್ಥ ವ್ಯತ್ಯಾಸವಿರುತ್ತದೆ. ಸಂಸ್ಕೃತದಲ್ಲಿ 'ಟ'ಕಾರದಿಂದ ಕೂಡಿದ ಹಲವು ಪದಗಳು ಅಪಭ್ರಂಶವಾಗಿ ಕನ್ನಡಕ್ಕೆ ಬರುವಾಗ 'ಳ'ಕಾರವಾಗಿ ಬಂದಿವೆ.

ವೀಟಿಕೆ > ವೀಳಿಗೆ; ಘುಟಿಕೆ > ಗುಳಿಗೆ; ರಘಟೆ > ರಗಳೆ

ಕ್ಷಳ (ಳ): ಈ 'ಳ'ಕಾರವು ಅಚ್ಚಗನ್ನಡದಲ್ಲಿಲ್ಲ. ಇದು ಸಂಸ್ಕೃತದ 'ಲ'ಕಾರದ ಬದಲಿಗೆ ಕನ್ನಡದಲ್ಲಿ 'ಕ್ಷಳ' ಬಳಕೆಯಲ್ಲಿದೆ.

---

೧೬೧. ನೋಡಿ, ಅಧ್ಯಾಯ-೪.೪.೩. **ನಿಘಂಟುಶಾಸ್ತ್ರ : ಕೇಶಿರಾಜ** ; ಪುಟ. ೨೯೨

೧೬೨. ಪ್ರೊ. ಬಿ. ಟಿ. ಸಾಸನೂರ, ಡಾ. ಎಂ. ಎಂ. ಕಲಬುರ್ಗಿ (ಸಂ) ; **ಶಬ್ದಮಣಿದರ್ಪಣ ಸಂಗ್ರಹ** ; ಪುಟ. ೧೫೯

೧೬೩. ನೋಡಿ, ಅಧ್ಯಾಯ-೪.೩.೨. : ೩) **ಸಮಾಸ ಪ್ರಕರಣ – ಗಮಕಸಮಾಸ** ; ಪುಟ. ೨೬೧

ಜಲ > ಜಳ; ಕಮಲ > ಕಮಳ; ತಿಲಂ > ತಿಳಂ.

೩. **ಶ್ರುತಿಸಹ್ಯ ಸಂಧಿ:** "ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಇದೂ ಒಂದು. ಸಂಸ್ಕೃತದಲ್ಲಾಗಲೀ ಅಥವಾ ಇತರ ದ್ರಾವಿಡ ಭಾಷೆಗಳಲ್ಲಾಗಲೀ 'ಶ್ರುತಿಸಹ್ಯ ಸಂಧಿ'ಯ ಲಕ್ಷಣಗಳಿಲ್ಲ. ಕಿವಿಗೆ ಕೇಳಲು ಕಷ್ಟವಾಗದಂತೆ ಶಬ್ದಗಳನ್ನು ಸೇರಿಸಿ ಸಂಧಿ ಮಾಡುವುದೇ ಶ್ರುತಿಸಹ್ಯ ಸಂಧಿ."[೧೬೪] ಪೂರ್ವಪದದ ಅಂತ್ಯಾಕ್ಷರ ಲಘುವೂ ಉತ್ತರಪದದ ಆದಿ ಅಕ್ಷರ ದ್ವಿತ್ವದಿಂದ ಕೂಡಿದ್ದರೆ ಎರಡೂ ಪದಗಳನ್ನು ಸೇರಿಸಿ ಉಚ್ಚರಿಸಿದರೆ ಸಂಧಿದೋಷವಾಗುತ್ತದೆ. ಎರಡು ಶಬ್ದಗಳ ನಡುವೆ ಅಶ್ಲೀಲಾರ್ಥ ಬರುವಂತಿದ್ದರೆ ಸಂಧಿ ಮಾಡಬಾರದು.

ಉದಾ: ಮೆಚ್ಚಿತು + ಉಣ್ಣಿ

ಆ + ಸೆಗಣಿತಾ

೪. **ಸತಿಸಪ್ತಮಿ:** "ಭಿನ್ನ ಕರ್ತೃಗಳೊಡನೆ ಸೇರಿದ ಎರಡು ಕ್ರಿಯೆಗಳಲ್ಲಿ ಒಂದು ಕ್ರಿಯೆಯು ಮುಂದಿನದ್ದನ್ನು ಇನ್ನೊಂದು ಪ್ರಸ್ತುತತೆಯನ್ನು ಸೂಚಿಸುವಂತಿದ್ದರೆ, ಆ ತಿಳಿದ ಆದಿಯ ಕ್ರಿಯಾರೂಪದ ಮೇಲೆ ಸಪ್ತಮೀ ವಿಭಕ್ತಿಯ ಅರ್ಥವನ್ನು ಸೂಚಿಸುವ 'ಎ' ಪ್ರತ್ಯಯವೋ ಇಲ್ಲವೇ 'ಇನೆಗಂ', 'ಉದುಂ', 'ಅನ್ನಂ', 'ಅನ್ನೆಗಂ', 'ಇನಂ', 'ಅಲೊಡಂ' ಎಂಬ ಪ್ರತ್ಯಯಗಳು ಆದೇಶವಾಗಿ ಬರುತ್ತವೆ."[೧೬೫]

ಉದಾ: ಗಾಯಕಂ ಪಾಡೆ ಮೆಚ್ಚಿದಂ.

ನೆನೆವನ್ನೆಗಂ ಬಂದಂ.

೫. **ಸಮಸಂಸ್ಕೃತ:** ಸಂಸ್ಕೃತದ ಹಲವಾರು ನಾಮ ಪ್ರಕೃತಿಗಳನ್ನು ಕನ್ನಡ ಭಾಷೆಯ ಜಾಯಮಾನಕ್ಕೆ ಒಗ್ಗುವಂತೆ ಅಲ್ಪಸ್ವಲ್ಪ ವ್ಯತ್ಯಾಸ ಮಾಡಿಕೊಂಡು ಬಳಸುವುದು.

ಉದಾ: ಕರ್ತೃ > ಕರ್ತಾರ; ದಾತೃ > ದಾತಾರ; ವಧ > ವಧೆ.

೬. **ವ–ಮ, ಹ–ಪ ಭೇದ:** 'ಮ'ಕಾರವು 'ವ'ಕಾರವಾಗಿ, 'ಪ'ಕಾರವು 'ಹ'ಕಾರವಾಗಿ ಬದಲಾಗುವ ಪ್ರಕ್ರಿಯೆಯು ಇತರ ದ್ರಾವಿಡ ಭಾಷೆಗಳಲ್ಲಿ ಇಲ್ಲದೇ ಕನ್ನಡದಲ್ಲಿ ಮಾತ್ರವಿರುವುದರಿಂದ ಭೇದವೆಂದು ಕರೆಯಲಾಗಿದೆ.

ಉದಾ: ಪುಲಿ > ಹುಲಿ

ಪಾಲು > ಹಾಲು

ಸಾಮಂತ > ಸಾವಂತ

ತಾಮರೆ > ತಾವರೆ

---

೧೬೪. ಪ್ರೊ. ಜಿ. ಅಬ್ದುಲ್ ಬಷೀರ್ : **ಶಬ್ದಮಣಿದರ್ಪಣ ದೀಪಿಕೆ** ; ಪುಟ. ೨೭೫

೧೬೫. **ಅದೇ** ; ಪುಟ. ೨೭೬

೭. **ವಿರಹಿತಾವ್ಯಯ ಸಂಸ್ಕೃತ ಲಿಂಗ :** ಸಂಸ್ಕೃತದ ಕೆಲವು ಸುಪ್ರಸಿದ್ಧ ಅವ್ಯಯಗಳು ನೇರವಾಗಿ ಕನ್ನಡಕ್ಕೆ ಬರಲು ಸಾಧ್ಯವಾಗದು. ಆದ್ದರಿಂದ ಅವು ಕನ್ನಡದಲ್ಲಿ ನಾಮಪ್ರಕೃತಿಗಳು ಎನಿಸುವುದಿಲ್ಲ. ಕೇಶಿರಾಜನು ಅವುಗಳಿಗೆ 'ಲಿಂಗ' ಎಂಬ ಪದವನ್ನು ಬಳಸಿದ್ದಾನೆ.

ಉದಾ: ಮುಹುರ್, ಪುನರ್, ಉಚ್ಚೈಸ್, ಅಹಸ್, ಬಹಿರ್, ಅಂತರ್, ಪೃಥಕ್, ಈಷತ್, ಯುಗಪತ್, ಪ್ರಾತಃ.

೮. **ಪದೋತ್ತಮ ಶಿಥಿಲದ್ವಿತ್ವ:** ದ್ವಿತ್ವಗಳನ್ನು ಒತ್ತಿ ಉಚ್ಚರಿಸದೇ ತೇಲಿಸಿ ಉಚ್ಚರಿಸಿದರೆ ಅವುಗಳು ಶಿಥಿಲದ್ವಿತ್ವಗಳೆನಿಸಿಕೊಳ್ಳುತ್ತವೆ.

ಉದಾ: ಬಾಸುಟ್ + ಗಳ್ = ಬಾಸುಟ್ಗಳ್

ಕನರ್ + ಗಳ್ = ಕನರ್ಗಳ್

೯. **ಯತಿವಿಲಂಘನ:** ಛಂದಸ್ಸಿಗೆ ಸಂಬಂಧಿಸಿದ ವಿಷಯವನ್ನು ಕೇಶಿರಾಜನು ಇಲ್ಲಿ ಚರ್ಚಿಸಿದ್ದಾನೆ. 'ಕತ್ತೆಗೆ ಮತಿಯಿಲ್ಲ; ಕನ್ನಡಕೆ ಯತಿಯಿಲ್ಲ' ಎಂಬಂತೆ ಕನ್ನಡ ಛಂದಸ್ಸಿನಲ್ಲಿ ಯತಿಗೆ ಪ್ರಾಶಸ್ತ್ಯವಿಲ್ಲ ಎಂದು ಹೇಳಿದ್ದಾನೆ ಕೇಶಿರಾಜ.

ಹೀಗೆ ಕೇಶಿರಾಜನ 'ಶಬ್ದಮಣಿದರ್ಪಣ'ವು ಕನ್ನಡದ ವ್ಯಾಕರಣಾಂಶಗಳನ್ನು ಪ್ರಚುರಪಡಿಸಿ ಇಂದಿಗೂ ವಿದ್ವಾಂಸರ ಮನ್ನಣೆಗೆ ಪಾತ್ರವಾಗಿದೆ.

೪.೩.೩. ಭಟ್ಟಾಕಳಂಕದೇವ (೧೬೦೪):

ಭಟ್ಟಾಕಳಂಕದೇವನು "ಕರ್ಣಾಟಕ ಶಬ್ದಾನುಶಾಸನ ಎಂಬ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಇವನು ಜೈನ ಕವಿ. ಇವನ ಗುರು 'ಮೂಲಸಂಘ ದೇಶಿಯ ಗಣ ಪುಸ್ತಕಗಚ್ಛ ಕುಂಡಕುಂದಾನ್ವಯವಿರಾಜಮಾನ ಶ್ರೀಮದ್ರಾಯರಾಜಗುರು ಮಂಡಲಾಚಾರ್ಯ ಮಹಾವಾದವಾದೀಶ್ವರ ರಾಯವಾದಿ ಪಿತಾಮಹ ಸಕಲದ್ವಜ್ಜನಚಕ್ರವರ್ತಿ ಬಲ್ಲಾಳರಾಯ ಜೀವರಕ್ಷಾ ಪಾಲಕೇತ್ಯಾದ್ಯನೇಕಾನ್ವರ್ಥ ಬಿರುದಾವಲೀ ವಿರಾಜಮಾನ ಶ್ರೀಮಚ್ಚಾರುಕೀರ್ತಿ ಪಂಡಿತದೇವಾಚಾರ್ಯ ಶಿಷ್ಯಪರಂಪರಾಯಾತ ಶ್ರೀ ಸಂಗೀತಪುರಸಿಂಹಾಸನಪಟ್ಟಾಚಾರ್ಯ ಶ್ರೀಮದಕಲಂಕದೇವನು.' ಭಟ್ಟಾಕಳಂಕನು 'ಕರ್ಣಾಟಕ ಶಬ್ದಾನುಶಾಸನ'ವನ್ನು ೧೫೨೬ರ ಶೋಭಕೃತ್ಸಂವತ್ಸರದಲ್ಲಿ ಅಂದರೆ ೧೬೦೪ರಲ್ಲಿ ಬರೆದು ಮುಗಿಸಿದುದಾಗಿ ಹೇಳುತ್ತಾನೆ."[೧೬೬] ಭಟ್ಟಾಕಳಂಕನು ವಿಜಯನಗರದ ಶ್ರೀರಂಗರಾಜನ ಪ್ರೇರಣೆಯಿಂದ ವಿದಾಯಮುನಿಗಳ ಉಪದೇಶದಿಂದ "ಸಾರತ್ರಿತಯ, ಅಲಂಕಾರತ್ರಿತಯ, ಆಗಮ, ತರ್ಕ, ನಾಟಕ, ಮಹಾಲಂಕಾರ, ಜ್ಯೋತಿಷ್ಯ, ಮಂತ್ರವಿಧಿ, ಶಿಲ್ಪ, ನ್ಯಾಯ, ವೇದ, ಸ್ಮೃತಿ, ವೈದ್ಯ, ಧ್ಯಾನಾದಿ ಶಾಸ್ತ್ರಗಳನ್ನು ಕಲಿತನೆಂದು ತಿಳಿದುಬರುತ್ತದೆ."[೧೬೭]

---

೧೬೬. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ–ದ್ವಿತೀಯ ಸಂಪುಟ** ; ಪುಟ. ೩೦೫

೧೬೭. ಡಾ. ಆರ್ವಿಯಸ್ ಸುಂದರಂ : **ಶಾಸ್ತ್ರ ಸಾಹಿತ್ಯ** ; ಪುಟ. ೮೪

೪.೩.೩.೧. ಕರ್ಣಾಟಕ ಶಬ್ದಾನುಶಾಸನ:

ಪ್ರಸ್ತುತ ಗ್ರಂಥವು ಕನ್ನಡ ವ್ಯಾಕರಣ ಕೃತಿಯಾಗಿದೆ. ಇದರಲ್ಲಿ ನಾಲ್ಕು ಪಾದಗಳಿದ್ದು, ಒಟ್ಟು ೫೯೨ ಸೂತ್ರಗಳಿವೆ. ಮೊದಲನೆಯ ಪಾದದಲ್ಲಿ ವರ್ಣಮಾಲೆ, ಅವ್ಯಯ, ಸಂಧಿ ಸಂಖ್ಯಾ, ಲಿಂಗ, ಸುಪ್, ಸಂಜ್ಞೆ, ಪರಭಾಷಾ ಪ್ರಕರಣಗಳಿವೆ. ಎರಡನೆಯ ಪಾದದಲ್ಲಿ ಸಮಸಂಸ್ಕೃತ, ತದ್ಭವ, ದೇಶ್ಯಲಿಂಗ, ಸ್ತ್ರೀಪ್ರತ್ಯಯ, ಸುಪ್ ವಿಭಕ್ತಿ ಪ್ರಕರಣಗಳಿವೆ. ಮೂರನೆಯ ಪಾದದಲ್ಲಿ ಸಮಾಸ, ದ್ವಿರುಕ್ತಿ, ತದ್ಧಿತ ಪ್ರಕರಣಗಳಿವೆ. ನಾಲ್ಕನೆಯ ಪಾದದಲ್ಲಿ ಧಾತು, ಕೃದಂತ ಪ್ರಕರಣಗಳಿವೆ. ಸೂತ್ರಗಳ ಜೊತೆಗೆ ಭಟ್ಟಾಕಳಂಕನು ಬರೆದ ಮಂಜರೀಮಕರಂದದ ವ್ಯಾಖ್ಯೆಯೂ ಇದೆ. “ವ್ಯಾಕರಣ ತತ್ತ್ವಗಳ ವಿಚಾರದಲ್ಲಿ ಭಟ್ಟಾಕಳಂಕನ ನಿರೂಪಣೆ ವಿಸ್ತಾರವಾದುದು. ಸಂಸ್ಕೃತ ವೈಯಾಕರಣಿಗಳು ಷಡ್‌ವಿಧ ಸೂತ್ರಗಳನ್ನು ಹೇಳಿದರೆ; ಇವನು ಸಂಜ್ಞೆ, ನಿಯಮ, ನಿಷೇಧ, ಅಧಿಕಾರ, ನಿತ್ಯ, ಅಪವಾದ, ವಿಧಿ, ಪರಿಭಾಷೆ, ಅತಿದೇಶ ಮತ್ತು ವಿಕಲ್ಪ ಎಂದು ದಶವಿಧ ಸೂತ್ರಗಳನ್ನು ಹೇಳುತ್ತಾನೆ. ಶಬ್ದಾನುಶಾಸನವು ಕನ್ನಡ ವ್ಯಾಕರಣಗಳ ಬೆಳವಣಿಗೆಯ ವಿಧಾನವನ್ನು ನಿರೂಪಿಸಿದಂತಿದೆ. ಕನ್ನಡ ವ್ಯಾಕರಣಗಳು ಕಾಲಕಾಲಕ್ಕೆ ಬೆಳೆದುಬಂದ ರೀತಿಯನ್ನು ಸಂಸ್ಕೃತ ವ್ಯಾಕರಣಗಳನ್ನು ಸಮನ್ವಯ ಮಾಡಿಕೊಂಡು ಕನ್ನಡ ವೈಯಾಕರಣರು ವ್ಯಾಕರಣ ನಿರ್ಮಾಣವನ್ನು ಕೈಗೊಂಡ ರೀತಿಯನ್ನು ಭಟ್ಟಾಕಳಂಕನು ತಿಳಿಸಿಕೊಡುತ್ತಾನೆ.”[೧೬೮]

ಭಟ್ಟಾಕಳಂಕನು ತನ್ನ ‘ಕರ್ಣಾಟಕ ಶಬ್ದಾನುಶಾಸನ’ ಗ್ರಂಥದ ರಚನೆಗೆ ಹಲವಾರು ನಿಟ್ಟಿನಲ್ಲಿ ಇಮ್ಮಡಿ ಕೇಶಿರಾಜನ ‘ಶಬ್ದಸ್ಮೃತಿ’ಯನ್ನೂ, ಕೇಶಿರಾಜಕೃತ ‘ಶಬ್ದಮಣಿದರ್ಪಣ’ವನ್ನೂ ಅವಲಂಬಿಸಿದ್ದಾನೆ. ಈಗಾಗಲೇ ಶಬ್ದಮಣಿದರ್ಪಣದ ವಿಚಾರಾಂಶಗಳನ್ನು ವಿಸ್ತೃತವಾಗಿ ಚರ್ಚಿಸಿದುದರಿಂದಲೂ, ಪ್ರಸ್ತುತ ಗ್ರಂಥವು ಸಂಸ್ಕೃತದಲ್ಲಿರುವುದರಿಂದಲೂ ಕೃತಿ ಪರಿಚಯವನ್ನು ಮಾತ್ರ ಮಾಡಿಕೊಡಲಾಗಿದೆ.[೧೬೯]

೪.೪. ನಿಘಂಟುಶಾಸ್ತ್ರ:

ಮಾನವನು ತನ್ನ ಮನದಾಸೆಗಳನ್ನು ಹಂಚಿಕೊಳ್ಳಲು ಸಾಧ್ಯವಾಗುವುದೇ ಭಾಷೆಯ ಮುಖೇನ. ಭಾಷೆಯು ಮನುಷ್ಯನ ಬಹುದೊಡ್ಡ ಸಾಂಸ್ಕೃತಿಕ ಪರಿಶೋಧ. ಹಲವು ಅಕ್ಷರ, ಶಬ್ದಗಳು ಮಿಳಿತವಾಗಿ ಭಾಷೆಯಾಗುತ್ತದೆ. ಕಾಲಾಂತರದಲ್ಲಿ ಭಾಷೆಯು ಪ್ರಾದೇಶಿಕ ಭಿನ್ನತೆಯನ್ನೂ ಪಡೆಯಿತು. ಅದರ ಫಲವಾಗಿ ಭಿನ್ನ ಭಿನ್ನ ಭಾಷೆಗಳು ಉದಯವಾದವು. ಹೀಗಾಗಿ ಬೇರೆ ಬೇರೆ ಭಾಷೆಯ ವಸ್ತುಗಳು, ಭಾವಗಳು ಒಂದೇ ಆದರೂ ಅವುಗಳನ್ನು ವ್ಯಕ್ತಪಡಿಸುವ ಧ್ವನಿ, ಪದಗಳು ಭಿನ್ನವಾದವು. ಅಲ್ಲದೇ ಒಂದೇ ಭಾಷೆಯನ್ನು ಮಾತನಾಡುವ ಪ್ರದೇಶಗಳಲ್ಲಿಯೂ ಅನೇಕ

---

೧೬೮. ಡಾ. ಆರ್ವೀಯಸ್ ಸುಂದರಂ : **ಶಾಸ್ತ್ರ ಸಾಹಿತ್ಯ** ; ಪುಟ. ೮೫

೧೬೯. ನೋಡಿ, ೪.೩.೨.೧. **ಶಬ್ದಮಣಿದರ್ಪಣಂ** : ಪುಟ.

ರೀತಿಯಲ್ಲಿ ಧ್ವನಿಭೇದಗಳು, ಶಬ್ದಭೇದಗಳು ಉಂಟಾದವು. ಅವುಗಳ ಅರ್ಥವನ್ನು ತಿಳಿಯುವ ಸಲುವಾಗಿಯೇ ಕಂಡುಕೊಂಡ ಪರಿಹಾರ ಶಬ್ದಕೋಶಗಳು. ಯಾವುದೋ ಒಂದು ಅಪರಿಚಿತ ಪದದ ಅರ್ಥವನ್ನು ತಿಳಿಯಬೇಕಾದರೆ ಶಬ್ದಕೋಶ, ಅರ್ಥಕೋಶ ಅಥವಾ ಆಥಿಣಉಂಟಚಿಡಿಥಿ ಗಳಿಗೆ ಮೊರೆಹೋಗುವುದನ್ನು ಕಾಣಬಹುದು.

"ಇಂಗ್ಲಿಷ್‌ನಲ್ಲಿಯ Dictionary ಎಂಬುದು ಮಧ್ಯಯುಗೀನ ಲ್ಯಾಟಿನ್ ಭಾಷೆಯ Dictionarium ಅಥವಾ Dictionarious ಎನುವುದರ ಸ್ವೀಕೃತ ಪದವಾಗಿದೆ. ಈ ಪದಗಳ ಅರ್ಥ 'ನುಡಿಗಟ್ಟುಗಳು' ಅಥವಾ 'ಶಬ್ದಗಳ ಭಂಡಾರ' ಎಂದಾಗುತ್ತದೆ. ೧೨೨೫ರಲ್ಲಿ ಮೊದಲ ಬಾರಿಗೆ ಜೊನ್ನೆಸ ಡಿ ಗಾರ್ಲಂಡಿಯ ಎಂಬ ವಿದ್ವಾಂಸನು 'ಡಿಕ್ಷ್ನೇರಿಯಸ್' ಎಂಬ ಪದವನ್ನು ಬಳಕೆಮಾಡಿದನು. ಡಿಕ್ಷನರಿಗಳ ಕುರಿತಾದ ಅಧ್ಯಯನವನ್ನು 'Lexicology' ಎಂದು ಕರೆಯಲಾಗುತ್ತದೆ. ಅದುವೇ ನಿಘಂಟುಶಾಸ್ತ್ರ. ನಿಘಂಟುವಿನ ಕುರಿತಾಗಿ ರಾಬರ್ಟ್ ಎಂ. ಗೊರೆಲ್ ಮತ್ತು ಚಾರ್ಲಟನ್ ಲೈರ್ಡ್‌ರವರು 'ಜ್ಞಾನಸಂಪತ್ತನ್ನು ಸುಧಾರಿಸಿಕೊಳ್ಳು ಅತ್ಯುಪಯುಕ್ತ ಸಾಧನವೆಂದರೆ ಒಳ್ಳೆಯ ನಿಘಂಟು' ಎಂದು ಅಭಿಪ್ರಾಯಪಡುತ್ತಾರೆ."[೧೭೦]

ನಿಘಂಟು ಎಂದರೆ ಕಠಿಣ ಶಬ್ದಗಳಿಗೆ ಅರ್ಥವನ್ನು ತಿಳಿಸುವ ಶಬ್ದಾರ್ಥಕೋಶ. ಕಾವ್ಯಗಳಲ್ಲಿ ಬಳಸುವ ಕ್ಲಿಷ್ಟವಾದ ಪದಗಳಿಗೆ ಅರ್ಥವನ್ನು ಒದಗಿಸುವ ನಿಘಂಟು ಕಾವ್ಯದ ರಸಾಸ್ವಾದನೆಗೆ ನೆರವಾಗುತ್ತದೆ. "ಭಾಷೆಯ ಬಂಧದಲ್ಲಿ, ಶಬ್ದದ ಜಾಲದಲಿ ಹುದುಗಿರುವ ವಿಚಾರಗಳನ್ನು, ಭಾವನೆಗಳನ್ನು ಅರಿಯಲು ಶಬ್ದಾರ್ಥ ಜ್ಞಾನ ಬಹುಮುಖ್ಯ. ಯಾವಾಗ ಮನುಷ್ಯನು ಮಾತನಾಡಲು ಕಲಿತನೋ ಆಗ ಶಬ್ದವು ಭಾಷೆಯಾಗಿ ಅವನ ಉಸಿರಲ್ಲಿ ಬೆರೆತು ಹೋಯಿತು. ಶುದ್ಧವಾದ ಭಾಷೆ ಬೆಳೆಯಲು ವ್ಯಾಕರಣಶಾಸ್ತ್ರವು ಶ್ರಮಿಸುವಂತೆ ಶಬ್ದಗಳ ಉತ್ಪತ್ತಿ, ಅರ್ಥಸ್ಪಷ್ಟತೆಗೆ ನಿಘಂಟು ಸಹಕಾರಿಯಾಗುತ್ತದೆ."[೧೭೧]

ಜಾಗತಿಕ ಇತಿಹಾಸದಲ್ಲಿ "ನಿಘಂಟುಗಳು ವೇದಕಾಲದಿಂದ ಪ್ರಸಿದ್ಧವಾಗಿವೆ. ವೇದಕಾಲದಲ್ಲಿಯೇ ಕಾಲಕ್ರಮದಲ್ಲಿ ವೇದಗಳ ಕೆಲವು ಶಬ್ದಗಳು ಮುಂದಿನ ಪೀಳಿಗೆಯವರಿಗೆ ಅರ್ಥವಾಗದಷ್ಟು ಕ್ಲಿಷ್ಟವಾಗುತ್ತ ಹೋಗುತ್ತವೆ. ಅವುಗಳನ್ನೆಲ್ಲ ಪೃಥಕ್ಕರಿಸಿ ಪ್ರತ್ಯೇಕವಾದ ಪದಸಂಗ್ರಹವನ್ನು ಕೂಡಿಸಿದರು. ಇದಕ್ಕೆ ನಿಘಂಟು ಎಂದು ಹೆಸರು. ಹೀಗೆ ಸಂಗ್ರಹ ಮಾಡಿದುದೇ ವೇದಮಂತ್ರಗಳ ಅರ್ಥಪರಿಜ್ಞಾನಕ್ಕಾಗಿ. ಇದಕ್ಕೆ ಭಾಷ್ಯವೇ ನಿರುಕ್ತ. ನಿಘಂಟು ಮತ್ತು ನಿರುಕ್ತ ಒಟ್ಟಿಗೆ ಸೇರಿ ವೇದಾಂಗವೆಂದು ಪರಿಗಣಿಸಲಾಗಿದೆ. ನಿರುಕ್ತಗಳಲ್ಲಿ ಯಾಸ್ಕರು ಬರೆದ ಗ್ರಂಥವೇ

---

೧೭೦. ಡಾ. ಜೆ. ಎಂ. ನಾಗಯ್ಯಾ : **ಸಂದರ್ಭ ಸಾಹಿತ್ಯ** ; ಪುಟ. ೦೭

೧೭೧. ಕಡೆಂಗೋಡ್ಲು ಸುಬ್ರಹ್ಮಣ್ಯ ಭಟ್ಟ : **ಶಬ್ದಬೋಧೆ ನಾನಾರ್ಥ ನಿಘಂಟು ತತ್ತ್ವ ನಿರ್ಣಯ ಮತ್ತು ಆರೋಗ್ಯ ನಿರ್ಣಯ** ; ಪುಟ. xvii (ಪ್ರಸ್ತಾವನೆ)

ಇಲ್ಲಿಯವರೆಗೂ ಉಪಲಬ್ಧವಾಗಿರುವ ಪ್ರಾಚೀನವಾದ ಗ್ರಂಥ. ಯಾಸ್ಕರು ತಾವು ರಚಿಸಿದ ನಿಘಂಟುವಿನಲ್ಲಿ ಪದಸಮನ್ವಯಗಳ ಆಧಾರದಲ್ಲಿ ನೈಘಂಟಕಕಾಂಡ, ನೈಗಮಕಾಂಡ ಹಾಗೂ ದೈವತಕಾಂಡವೆಂದು ಮೂರು ಭಾಗ ಮಾಡಿದ್ದಾರೆ. ಮೊದಲ ಭಾಗದಲ್ಲಿ ಏಕಾರ್ಥವಾಚಿಯಾದ ಅನೇಕ ಪದಗಳ ಗಣಗಳನ್ನೂ, ಎರಡನೆಯ ಭಾಗದಲ್ಲಿ ಬಹು ಅರ್ಥ ನೀಡುವ ಶಬ್ದದ ಗಣಗಳನ್ನೂ, ಮೂರನೆಯ ಭಾಗದಲ್ಲಿ ಅನೇಕಾನೇಕ ದೇವತೆಗಳ ನಾಮಸಂಗ್ರಹವನ್ನೂ ಮಾಡಿದ್ದಾನೆ."[೧೭೨] ಇದರಿಂದಲೇ 'ನಿಘಂಟುಶಾಸ್ತ್ರ' ಎಂಬ ಹೆಸರು ಬಂದಿದೆ. ಇತ್ತೀಚೆಗೆ ನಿಘಂಟು ಮತ್ತು ಕೋಶಗಳನ್ನು ಒಂದೇ ಅರ್ಥದಲ್ಲಿ ಬಳಸಲಾಗುತ್ತಿದೆ. ಹಿಂದೆ ಅವುಗಳಿಗೆ ಪರ್ಯಾಯವಾಗಿ ನಾಮಮಾಲಾ, ಶಬ್ದಾರ್ಣವ, ಶಬ್ದಮಾಲಾ, ಶಬ್ದಾವಳಿ, ಅಭಿಧಾನ, ಅಭಿಧಾನಕೋಶ, ಅಭಿಧಾನಮಾಲೆ, ಕಲ್ಪತರು ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು.

"ವೇದಾಂಗಗಳಲ್ಲಿ ನಿರುಕ್ತವು ನಾಲ್ಕನೆಯದು. ಇದು ಶಬ್ದ ವ್ಯುತ್ಪತ್ತಿಯನ್ನು ತಿಳಿಸುವ ಶಾಸ್ತ್ರ. ಯಾಸ್ಕರ ನಿರುಕ್ತವೇ ಪ್ರಚಾರದಲ್ಲಿರುವ ಈ ಶಾಖೆಯ ಪ್ರಮುಖ ಗ್ರಂಥ. ಆದರೆ ಅವರಿಗೂ ಪೂರ್ವದಲ್ಲಿ ನಿರುಕ್ತಗಳಿರಬಹುದೆಂದು ಊಹಿಸಬಹುದು. ನಿರುಕ್ತವು ೧೪ ರೀತಿಯ ಭೇದಗಳಿಂದ ಕೂಡಿತ್ತೆಂದು ದುರ್ಗಾಭಾಷ್ಯದಿಂದ ತಿಳಿಯುತ್ತದೆ. ಯಾಸ್ಕರು ತಮ್ಮ ನಿರುಕ್ತದಲ್ಲಿ ಆಗ್ರಯಣ, ಔದುಂಬರಾಯಣ, ಔಪಮನ್ಯವ, ಔರ್ಣವಾಭ, ಕಾಥಕ್ಯ, ಕೌತ್ಸ, ಗಾರ್ಗ್ಯ, ಗಾಲವ, ಧರ್ಮಶಿರನ್, ವಾರ್ಷ್ಯಾಯಣಿ, ಶತವಲಾಕ್ಷ, ಮೌದ್ಗಲ್ಯ, ಶಾಕಟಾಯಣ, ಶಾಕಪೂಣಿ, ಸ್ಥೌಲಷ್ಠೀವಿ ಮುಂತಾದ ಪ್ರಾಚೀನ ನೈರುಕ್ತ್ಯರನ್ನೂ ಉಲ್ಲೇಖಿಸಿದ್ದಾರೆ. ಇದರಲ್ಲಿ ನಿಘಂಟು, ನಿರುಕ್ತ ಎಂಬ ಎರಡು ಭಾಗಗಳಿವೆ. ನಿಘಂಟುವಿನಲ್ಲಿ ಶಬ್ದಾನುಕ್ರಮಣಿಕೆ ಮಾತ್ರವಿದೆ. ನಿರುಕ್ತದಲ್ಲಿ ಶಬ್ದಗಳ ವಿಷಯದ ವಿವರಣೆಯಿದೆ. ನಿಘಂಟುವಿಗೆ ಸಮಾಮ್ನಾಯವೆಂಬ ಹೆಸರೂ ಇದೆ. ಶಬ್ದಕೋಶದ ಅಥವಾ ನಿಘಂಟುವಿನ ವ್ಯಾಖ್ಯಾನವೇ ನಿರುಕ್ತ"[೧೭೩] ಎಂದು ಎನ್. ಅನಂತರಂಗಾಚಾರ್ ಅವರು ಹೇಳುತ್ತಾರೆ.

ಒಟ್ಟಾರೆಯಾಗಿ ನಿಘಂಟು ಎಂದರೆ ಭಾಷೆಯ ಎಲ್ಲ ಶಬ್ದಗಳನ್ನು ವ್ಯವಸ್ಥಿತವಾಗಿ ಪಟ್ಟಿಮಾಡಿ, ಆ ಶಬ್ದಗಳ ಅರ್ಥವನ್ನು ಒಂದು ಕ್ರಮದಲ್ಲಿ ಜೋಡಿಸಿ ಅವುಗಳಿಗೆ ಸರಿಹೊಂದುವ ಪ್ರಾಚೀನ ಹಾಗೂ ನವೀನ ಪ್ರಯೋಗಗಳನ್ನು ಉಲ್ಲೇಖಿಸಿ ಆ ಶಬ್ದದ ವ್ಯಾಕರಣ ವಿವರಗಳನ್ನು ಸೇರಿಸಿ, ಪದಗಳನ್ನು ಅಕಾರಾದಿಯಾಗಿ ಜೋಡಿಸಿರುವ ಪುಸ್ತಕ. ಅದರಲ್ಲಿಯ ಮುಖ್ಯೋಲ್ಲೇಖ ಮಾನವ ಜೀವನದ ಯಾವ ಕ್ಷೇತ್ರಕ್ಕೆ ಸಂಬಂಧಿಸಿದೆ ಎಂಬುದನ್ನೂ ಇತರ ಉಲ್ಲೇಖಗಳನ್ನೂ ಅದರಲ್ಲಿ ನೀಡಲಾಗಿರುತ್ತದೆ. ಇದರ ಜೊತೆಗೆ ಆ ಶಬ್ದಗಳ ಕಾಗುಣಿತ, ಉಚ್ಚಾರಣೆ, ಅವುಗಳ

---

೧೭೨. ಎನ್. ಅನಂತರಂಗಾಚಾರ್ : **ಸಾಹಿತ್ಯಭಾರತೀ** ; ಪುಟ. ೧೩೧

೧೭೩. **ಅದೇ** ; ಪುಟ. ೨೨

ಸಮಾನಾರ್ಥ, ವಿರುದ್ಧಾರ್ಥ, ವ್ಯುತ್ಪತ್ತಿ, ಜ್ಞಾತಿ ಶಬ್ದಗಳು ಮತ್ತು ಅವುಗಳ ಚರಿತ್ರೆ ಇತ್ಯಾದಿಗಳನ್ನು ಸೇರಿಸಿರುವ ಅರ್ಥವತ್ತಾದ ಸ್ವತಂತ್ರ ಭಾಷಾ ಘಟಕಗಳು ನಿಘಂಟುವಿನಲ್ಲಿರುತ್ತವೆ.

"ನಿಘಂಟುಶಾಸ್ತ್ರವು ಆನ್ವಯಿಕ ಭಾಷಾವಿಜ್ಞಾನದ ಶಾಖೆಯಾಗಿದೆ. ಅವೆರಡೂ ಪರಸ್ಪರ ಪೂರಕವಾಗಿವೆ. ನಿಘಂಟುಶಾಸ್ತ್ರವು ಪದಗಳ ವಿವೇಚನೆ ಹಾಗೂ ಅವುಗಳ ವೈಜ್ಞಾನಿಕ ಅಧ್ಯಯನಕ್ಕೆ ಒತ್ತು ಕೊಡುತ್ತದೆ. ಭಾಷಾ ಶಾಸ್ತ್ರವು ಒಂದು ಭಾಷೆಯ ರಚನೆ ಹಾಗೂ ಬೇರೆ ಬೇರೆ ಸಾಮಾಜಿಕ ಸಂದರ್ಭಗಳಲ್ಲಿ ಭಾಷಾ ಬಳಕೆಯ ರೀತಿ ಮುಂತಾದ ಅಂಶಗಳಿಗೆ ಒತ್ತು ಕೊಡುತ್ತದೆ."[೧೭೪] ನಿಘಂಟುವಿಗೆ ಸಂಬಂಧಿಸಿದಂತೆ ಎರಡು ಮುಖ್ಯವಾದ ಶಾಖೆಗಳನ್ನು ಗುರುತಿಸಲಾಗುತ್ತದೆ. ನಿಘಂಟುಗಳಿಗೆ ಸಂಬಂಧಿಸಿದ ಮೂಲತತ್ತ್ವಗಳನ್ನು ವೈಜ್ಞಾನಿಕವಾಗಿ ನಿರೂಪಿಸುವುದು ಮೊದಲನೆಯದ್ದು. ನಿಘಂಟು ರಚನೆಯ ಕ್ರಮವನ್ನು ವಿವರಿಸವುದು ಎರಡನೆಯದ್ದು. ನಿಘಂಟುಶಾಸ್ತ್ರ ಎಲ್ಲ ಭಾಷೆಗಳಿಗೆ ಸಂಬಂಧಪಟ್ಟರೆ, ನಿಘಂಟು ರಚನೆ ನಿರ್ದಿಷ್ಟ ಭಾಷೆಗೆ ಸೀಮಿತವಾಗುತ್ತದೆ. ಒಂದು ಭಾಷೆಯು ಪ್ರಾದೇಶಿಕವಾಗಿ ಭಿನ್ನತೆಯನ್ನು ತಳೆದು ಬೆಳೆಯುತ್ತದೆ. "ವಿಜ್ಞಾನದ ಪ್ರಗತಿ, ಕೈಗಾರಿಕೆಗಳ ಪ್ರಭಾವ ಯಂತ್ರ ತಂತ್ರಗಳ ವ್ಯಾಪಕವಾದ ಉಪಯೋಗಳಿಂದ ಶಬ್ದಜಾಲವು ದಿನೇ ದಿನೇ ಬೆಳೆಯುತ್ತಲೇ ಇದೆ. ಅವೆಲ್ಲವೂ ನಿಘಂಟುಶಾಸ್ತ್ರದ ಪರಿಧಿಯಲ್ಲಿಯೇ ಬರುತ್ತವೆ. ಒಂದು ಭಾಷೆಯಲ್ಲಿರುವ ಶಬ್ದಗಳ ಸಮೂಹವೆಲ್ಲವೂ ಆ ಭಾಷೆಯ ಶಬ್ದವ್ಯವಸ್ಥೆಗೆ ಒಳಪಟ್ಟಿರುತ್ತದೆ. ಪ್ರತಿಯೊಂದು ಶಬ್ದಕ್ಕೂ ಒಂದು ಅರ್ಥವಿದೆ. ಉಚ್ಚಾರಣೆಯಿದೆ. ಇತಿಹಾಸವಿದೆ. ನಿಘಂಟು ಶಾಸ್ತ್ರವು ಒಂದು ಶಬ್ದವನ್ನು ಹಲವಾರು ಆಯಾಮಗಳಲ್ಲಿ ಅಧ್ಯಯನ ಮಾಡುತ್ತದೆ."[೧೭೫]

ನಿಘಂಟು ಶಾಸ್ತ್ರದ ಕುರಿತಾಗಿ ಹಲವಾರು ಪ್ರಾಚೀನ ಸೂರಿಗಳು ತಮ್ಮದೇಯಾದ ವಿಚಾರಗಳನ್ನು ಮಂಡಿಸಿದ್ದಾರೆ.

"ವ್ಯಾಡಿ: **ಯಸ್ಮಾದರ್ಥಾನ್ನಿಘಂಟಯತಿ ತಸ್ಮಾದ್ನಿಘಂಟುಃ ॥**

ಯಾಸ್ಕ: **ಸಮಾಮ್ನಾಯಃ ಸಮಾಮ್ನಾತಃ ಸವ್ಯಾಖ್ಯಾತವ್ಯಯಃ**
ತಮಿಮಂ ಸಮಾಮ್ನಾಯಂ ನಿಘಂಟು ಇಚ್ಚಾಭಕ್ತತೇ॥

ವಾಚಸ್ಪತಿ: **ಪ್ರಾಯೇಣೋಪದಿಶ್ಯತೇತತ್ರ ನಿಘಂಟು ಶಬ್ದಃ ಪ್ರಸಿದ್ಧಃ ॥**

ನಿಘಂಟುವಿನ ಕುರಿತಾಗಿ ಭರತನ ಭರತನ ನಾಟ್ಯಶಾಸ್ತ್ರದಲ್ಲಿ ಒಂದು ಶ್ಲೋಕವಿದೆ:

"ನಾನಾ ನಾಮಾಶ್ರಯೋತ್ಪನ್ನಂ ನಿಘಂಟುಂ ನಿಗಮಾನ್ವಿತಂ
ಧಾತ್ವರ್ಥ ಹೇತುಸಂಯುಕ್ತಂ ನಾನಾ ಸಿದ್ಧಾಂತ ಸಾಧಿತಂ ॥"[೧೭೬]

---

೧೭೪. R.A. Singh : **An Introduction to lexicography** ; p.p-1
Lexicology is the science of study of words whereas lexicography is the writing of the word in some concrete from i.e.in the from of dictionary as we shall see later lexicology and lexicography are very closely related rather the latter is directly dependent on the former and may be called applied lexcology.

೧೭೫. **ಕಣಜ** ಅಂತರಜಾಲ ಜ್ಞಾನಕೋಶ : ಕನ್ನಡ ನಿಘಂಟು ರಚನೆ (ಲೇಖನ)

೧೭೬. ಪ್ರೊ. ಜಿ. ವೆಂಕಟಸುಬ್ಬಯ್ಯ : **ಕನ್ನಡ ನಿಘಂಟು ಪರಿವಾರ** ; ಪುಟ. ೦೪

ನಿರುಕ್ತದ ಭಾಗವಾಗಿರುವ ನಿಘಂಟೇ ಈಗ ಉಪಲಬ್ಧವಿರುವುದರಲ್ಲಿ ಮೊದಲನೆಯದ್ದು. ಕಾತ್ಯಾಯನನ 'ನಾಮಮಾಲಾ', 'ವಾಚಸ್ಪತಿ' ಮತ್ತು ವಿಕ್ರಮಾದಿತ್ಯರ 'ಶಬ್ದಾರ್ಣವ' ಹಾಗೂ 'ಸಂಸಾರಾವರ್ತ', ವ್ಯಾಡಿ 'ಉತ್ಪಲಿನಿ' ಇವುಗಳು ಆದಿಕಾಲದ ನಿಘಂಟುಗಳೆಂದು ಸೂಚಿತವಾಗಿವೆ. ಆದರೆ ಇವುಗಳಾವುವೂ ಉಪಲಬ್ಧವಿಲ್ಲ. "ಅಮರಸಿಂಹನ 'ನಾಮಲಿಂಗಾನುಶಾಸನ' ಅಥವಾ 'ಅಮರಕೋಶ'ವು ಬಹು ಜನಪ್ರಿಯವಾದುದು. ಇದಕ್ಕೆ ಅಸಂಖ್ಯಾತ ವ್ಯಾಖ್ಯಾನಗಳಿವೆ. ಅವುಗಳಲ್ಲಿ ಕ್ಷೀರಸ್ವಾಮಿಯ 'ಉದ್ಘಾಟನ' ಪ್ರಾಚೀನವಾದುದು. ಕ್ಷೀರಸ್ವಾಮಿಯು ಅಮರಸಿಂಹನಿಗಿಂತಲೂ ಹಿಂದೆ ವ್ಯಾಡಿ, ಧನ್ವಂತರಿ, ವರರುಚಿ, ಕಾತ್ಯಾ, ವಾಚಸ್ಪತಿ ಮೊದಲಾದ ನಿಘಂಟುಕಾರರಿದ್ದರೆಂದು ಹೇಳುತ್ತಾನೆ. ಅಲ್ಲದೇ ತ್ರಿಕಾಂಡ, ಉತ್ಪಲಿಂಗ, ಮಾಲಾ ಎಂಬ ನಿಘಂಟುಗಳಿದ್ದವೆಂದು ತಿಳಿಸುತ್ತಾನೆ."[೧೭೭] ಇತ್ತೀಚೆಗೆ ಲೌಕಿಕ ಸಾಹಿತ್ಯದಲ್ಲಿ ಕೋಶಗಳೆಂಬ ಶಬ್ದಸಂಗ್ರಹ ಗ್ರಂಥಗಳು ಉದ್ಭವವಾಗಿವೆ. ಕಾಲಕ್ರಮದಲ್ಲಿ ಈ ಕೋಶಗಳೇ ನಿಘಂಟುಗಳೆಂದು ರೂಢಿಗತವಾಗಿದೆ.

"ನಿಘಂಟುಗಳ ಸ್ವರೂಪ, ಉದ್ದೇಶ ಫಲಗಳಲ್ಲಿ ವ್ಯತ್ಯಾಸವಿದೆ. ನಿಘಂಟುಗಳು ವೇದಗಳ ಕಠಿಣ ಶಬ್ದಗಳ ವಿವರಣೆಗಾಗಿ ಮಾತ್ರ ಸಂಗ್ರಹಿತವಾದವು. ಕೋಶಗಳು ಮುಂದಿನ ಕವಿಗಳ ಕೃತಿರಚನೆಗೆ ಸಹಾಯವಾಗುವುದಕ್ಕಾಗಿ ರಚಿತವಾದವು. ನಿಘಂಟುವಿನಲ್ಲಿ ನಾಮಪದಗಳೇ ಅಲ್ಲದೇ ಧಾತುಗಳ ವಿವರಣೆಗಳೂ ದೊರೆಯುತ್ತವೆ. ಕೋಶಗಳಲ್ಲಿ ನಾಮಪದ ಮತ್ತು ಅವ್ಯಯಗಳು ಮಾತ್ರ ಸೇರಿಸಲ್ಪಡುತ್ತವೆ. ನಿಘಂಟು ಒಂದು ಪ್ರತ್ಯೇಕ ಗ್ರಂಥರಾಶಿಗೆ ಸಂಬಂಧಪಟ್ಟುದು. ಕೋಶಗಳು ಹತ್ತಾರು ಗ್ರಂಥಗಳ ಆಧಾರದ ಮೇಲೆ ರಚಿತವಾದವುಗಳು. ಕೋಶಗಳು ಶ್ಲೋಕಗಳ ರೂಪದಲ್ಲಿದ್ದರೆ; ನಿಘಂಟುಗಳು ಸಮಾನಾರ್ಥ, ನಾನಾರ್ಥಗಳನ್ನು ನೀಡುತ್ತವೆ. ನಿಘಂಟು ಇಲ್ಲವೇ ಕೋಶಗಳನ್ನು ಆದ್ಯಕ್ಷರ, ಅಂತ್ಯಾಕ್ಷರ, ವರ್ಣಸಂಖ್ಯಾ, ಅಕಾರಾದಿ, ಪ್ರತ್ಯಯಾಂತ ಹಾಗು ಲಿಂಗಾನುಸಾರವಾಗಿ ರಚಿಸಲಾಗುತ್ತದೆ."[೧೭೮]

ನಿಘಂಟು ಪ್ರಕಾರಗಳು:

೧. ಸಾಮಾನ್ಯ ನಿಘಂಟುಗಳು (General Dictionaries)

೨. ವಿಷಯ ನಿಘಂಟುಗಳು (Subject Dictionaries)

೩. ವಿಶಿಷ್ಟೋದ್ದೇಶದ ನಿಘಂಟುಗಳು (Special Purpose Dictionaries)

೪. ಏಕಭಾಷಾ ನಿಘಂಟುಗಳು (Monolingual Dictionaries)

೫. ದ್ವಿಭಾಷಾ ನಿಘಂಟುಗಳು (Bilingual Dictionaries)

೬. ತ್ರಿಭಾಷಾ ನಿಘಂಟುಗಳು (Trilingual Dictionaries)

೭. ಅನೇಕಭಾಷಾ ನಿಘಂಟುಗಳು (Polyglot Dictionaries)

---

೧೭೭. ಎನ್. ಅನಂತರಂಗಾಚಾರ್ : **ಸಾಹಿತ್ಯಭಾರತೀ** ; ಪುಟ. ೧೩೧

೧೭೮. **ಅದೇ** ; ಪುಟ. ೧೩೧

೮. ಸಂಕ್ಷಿಪ್ತ ನಿಘಂಟುಗಳು (Abridged Dictionaries)

೯. ಸಮಗ್ರ ನಿಘಂಟುಗಳು (Unbridged Dictionaries)

೧೦. ಕಿಸೆ ನಿಘಂಟುಗಳು (Pocket Dictionaries)

ಎಂದು ನಿಘಂಟುವಿನ ಪ್ರಮುಖ ವಿಧಗಳನ್ನು ಡಾ. ಜೆ. ಎಂ. ನಾಗಯ್ಯಾ ಅವರು ತಮ್ಮ 'ಸಂಧರ್ಭ ಸಾಹಿತ್ಯ' ಎಂಬ ಕೃತಿಯಲ್ಲಿ ಗುರುತಿಸುತ್ತಾರೆ. [೧೭೯] ಈ ಮೇಲಿನ ಪ್ರಕಾರಗಳನ್ನೊಳಗೊಂಡ ನಿಘಂಟುಗಳು, ಕೋಶಗಳು ಕನ್ನಡದಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ರಚಿತವಾಗಿವೆ. [೧೮೦] ಅಂತೆಯೇ ಜೈನಕವಿಗಳಿಂದಲೂ ನಿಘಂಟುಗಳು ರಚಿತವಾಗಿರುವುದು ಉಲ್ಲೇಖಾರ್ಹ. ರನ್ನ ಕವಿಯ 'ರನ್ನಕಂದ', ಎರಡನೆಯ ನಾಗವರ್ಮನ 'ಅಭಿದಾನ ವಸ್ತುಕೋಶ', ಕೇಶಿರಾಜನ 'ಶಬ್ದಮಣಿದರ್ಪಣ', ಅಮೃತನಂದಿಯ (ಸು. ೧೩೦೦) 'ಅಕಾರಾದಿ ವೈದ್ಯ ನಿಘಂಟು' ಇವು ಕನ್ನಡದ ನಿಘಂಟುಗಳು. ಇವುಗಳಲ್ಲಿ ರನ್ನಕಂದವನ್ನು ಹೊರತುಪಡಿಸಿ ಇನ್ನುಳಿದವುಗಳು ಉಪಲಬ್ಧವಾಗಿವೆ. ಕೇಶಿರಾಜನ 'ಶಬ್ದಮಣಿದರ್ಪಣ'ದ ಕೊನೆಯಲ್ಲಿ ಪದಾರ್ಥಗಳನ್ನು ನೀಡಲಾಗಿದೆ. ಇನ್ನು ಉಪಲಬ್ಧವಾಗಿರುವ 'ಅಕಾರಾದಿ ವೈದ್ಯ ನಿಘಂಟು' ಅಮರನಂದಿಯದ್ದೋ ಅಲ್ಲವೋ ಎಂಬ ಜಿಜ್ಞಾಸೆಯೂ ಇದೆ. ಆದರೆ ಎರಡನೆಯ ನಾಗವರ್ಮನ 'ಅಭಿಧಾನ ವಸ್ತುಕೋಶ'ವು ಮಾತ್ರ ಯಾವುದೇ ಜಿಜ್ಞಾಸೆಗಳಿಗೆ ಒಳಪಡದೇ, ಆತನದ್ದೇ ಕೃತಿಯೆಂದು ವಿದ್ವಾಂಸರೆಲ್ಲರೂ ಪ್ರಮಾಣೀಕರಿಸಿದ್ದಾರೆ.

೪.೪.೧. ರನ್ನ (೯೯೩):

"ಈತನು ಜೈನಕವಿ; ಬೆಳುಗೆರೆ ನಾಡಿನಲ್ಲಿರುವ ಬೆಳುಗಲಿ ಐನೂರಿನಲ್ಲಿಯ ಜಂಬುಖಂಡಿ ಎಪ್ಪತ್ತರಲ್ಲಿ ಶ್ರೇಷ್ಠವಾದ ಮುದುವೊಳಲಲ್ಲಿ ಸೌಮ್ಯಸಂವತ್ಸರದಲ್ಲಿ (೯೪೯)ರಲ್ಲಿ ಹುಟ್ಟಿದನು. ಬಳೆಗಾರಕುಲಕ್ಕೆ ಸೇರಿದವನು. ಈತನ ತಾಯಿ ಅಬ್ಬಲಬ್ಬೆ' ತಂದೆ ಜಿನವಲ್ಲಭೇಂದ್ರ. ಸಹೋದರರು ದೃಢಬಾಹು, ರೇಚಣ, ಮಾರಯ್ಯ. ಪತ್ನಿಯರು ಶಾಂತಿ ಮತ್ತು ಜಕ್ಕಿ. ಮಗ ರಾಯ; ಮಗಳು ಅತ್ತಿಮಬ್ಬೆ. ಈತನ ಗುರು ಅಜಿತಸೇನಾಚಾರ್ಯ. ಚಾವುಂಡರಾಯ ಹಾಗೂ ಸತ್ಯಾಶ್ರಯ ಇರಿವಬೆಡಂಗರು ಇವನ ಆಶ್ರಯದಾತರು. ಈತನಿಗೆ ತೈಲಪನು 'ಕವಿಚಕ್ರವರ್ತಿ' ಎಂದು ಬಿರುದನ್ನು ಕೊಟ್ಟನು." [೧೮೧] ಕವಿರನ್ನನು ಅಜಿತಪುರಾಣ, ಸಾಹಸಭೀಮವಿಜಯ ಹಾಗೂ ರನ್ನಕಂದಗಳನ್ನು ಬರೆದಿದ್ದಾನೆ. ಇವನ ಕಾವ್ಯಪ್ರೌಢಿಮೆಯನ್ನು ಕಂಡು ವಿದ್ವಾಂಸರು ರನ್ನನನ್ನು 'ಶಕ್ತಿಕವಿ'ಯೆಂದು ಕರೆದಿದ್ದಾರೆ. ಪರಶುರಾಮ ಚರಿತೆ ಹಾಗೂ ಚಕ್ರೇಶ್ವರಿಚರಿತೆಗಳನ್ನೂ ಬರೆದಿರುವುದಾಗಿ ತಿಳಿಯುತ್ತದೆ. ಆದರೆ 'ರನ್ನಕಂದ', 'ಪರಶುರಾಮ ಚರಿತೆ' ಹಾಗೂ 'ಚಕ್ರೇಶ್ವರಿ ಚರಿತೆ'ಗಳು ಉಪಲಬ್ಧವಾಗಿಲ್ಲ. ಈತನ 'ರನ್ನಕಂದ'ವು ಕನ್ನಡದ ಮೊದಲ ನಿಘಂಟುವಾಗಿದೆ.

---

೧೭೯. ಡಾ. ಜೆ. ಎಂ. ನಾಗಯ್ಯಾ : **ಸಂದರ್ಭ ಸಾಹಿತ್ಯ** ; ಪುಟ. ೧೨

೧೮೦. ನೋಡಿ, ಅಧ್ಯಾಯ **೨.೩.೫. ನಿಘಂಟುಗಳು**; ಪುಟ. ೨೯

೧೮೧. ಆರ್. ನರಸಿಂಹಾಚಾರ್ಯ : **ಕರ್ನಾಟಕ ಕವಿಚರಿತೆ–ಪ್ರಥಮ ಸಂಪುಟ** ; ಪುಟ. ೬೯

೪.೪.೧.೧. ರನ್ನಕಂದ:

ರನ್ನನು ತನ್ನ ಇತರ ಯಾವುದೇ ಗ್ರಂಥದಲ್ಲಿಯೂ ತಾನು 'ರನ್ನಕಂದ'ವನ್ನು ಬರೆದಿರುವುದಾಗಿ ಪ್ರಸ್ತಾಪಿಸಿಲ್ಲ. ಆದರೆ ಇತರ ಕವಿಗಳ ಉಲ್ಲೇಖ ಹಾಗೂ ಉಪಲಬ್ಧವಾಗಿರುವ ಕೆಲವು ಪದ್ಯಗಳ ಕೊನೆಯಲ್ಲಿ 'ಕವಿರತ್ನಾ' ಎಂಬ ಅಂಕಿತದಿಂದ ಕೊನೆಗೊಳ್ಳುವುದನ್ನು ಪರಿಗಣಿಸಿ ವಿದ್ವಾಂಸರು ಇದು ರನ್ನನೇ ಬರೆದಿರುವ ಕೃತಿಯೆಂದು ಸಮ್ಮತಿಸಿದ್ದಾರೆ. ರನ್ನನು ತನ್ನನ್ನು ವೈಯಾಕರಣನೆಂದು ತನ್ನ 'ಅಜಿತಪುರಾಣ'ದಲ್ಲಿ ಹೇಳಿಕೊಂಡಿದ್ದಾನೆ. ಆದುದರಿಂದ ಆತನು ಶಾಸ್ತ್ರಕಾರನಾಗಿದ್ದು ಒಂದು ನಿಘಂಟನ್ನು ರಚಿಸಿರುವ ಸಾಧ್ಯತೆಗಳು ಇದ್ದೇ ಇವೆ. ಇದುವರೆಗೂ ಆ ಕೃತಿಯ ಕೆಲವೇ ಕೆಲವು ಪದ್ಯಗಳು ಮಾತ್ರ ಉಪಲಬ್ಧವಾಗಿವೆ. ಸಂಪೂರ್ಣ ಗ್ರಂಥವು ಲಭ್ಯವಾದಲ್ಲಿ ಅದರ ಕರ್ತೃವಿನ ಬಗೆಗಿರುವ ಜಿಜ್ಞಾಸೆ ಪರಿಹರವಾಗುತ್ತದೆ. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಕನ್ನಡದ ಎಲ್ಲ ವಿದ್ವಾಂಸರ ಅಭಿಮತವನ್ನು ಪರಿಗಣಿಸಿ ಇದು ರನ್ನನ ಕೃತಿಯೆಂದೇ ಕನ್ನಡದ ಮೊದಲ ನಿಘಂಟುವಾದ 'ರನ್ನಕಂದ'ವನ್ನು ಪರಿಚಯಿಸಲಾಗಿದೆ.

"ಕುಂಚಮೆನಲ್ಕುಂಚಿಗೆಯತಿ ।
ಬಂಚನೆಯನೆ ಮರಟಕ್ಕು ಬೆಳಕೆನೆ ದೀಪಂ ॥
ಪೊಂಚೆನೆ ಪೊರ್ದಿದ ಬಗೆ ತಾ
ನೆಂಚಲೆನಲ್ಕೆಂಜಲಕ್ಕುಮೆಲೆ ಕವಿರತ್ನಾ ॥

ಕೋಸಿತೆನಲ್ಲ ಪೋಣಿಸಿದುದು।
ಸೂಸಿದುದೆನೆ ತುಳ್ಕಿತೆಂಬುದುಂ ಪರಿಮಳಮುಂ ॥
ವಾಸಿತಮೆನೆ ಕಂಪುಂ ಮಿಗೆ ।
ಸೌಸವಮೆನೆ ಸಮ್ಮದಾರ್ಥಮೆಲೆ ಕವಿರತ್ನಾ ॥"[೧೮೨]

"ಬರೆಯನಲತ್ಯರ್ಥಂ ಮು ।
ಮ್ಮುರಿಯೆನೆ ಕಾಸಿದ ಮಟಲ್ಕಿಟಿಂಗೆನೆ ಗೆಟಿಸುಂ ॥
ಮುರಿಪೆನೆ ಮರಳಿದ ಭಾವಂ ।
ಸಿರಿವಂತಿಗೆಯೆಂದನಲ್ಕೆ ಹುರಿಯೋಡಕ್ಕುಂ ॥

ಸಣ್ಣದೆನಲ್ ಕಿಱಿದಕ್ಕುಂ ।
ಪಣ್ಣೆನೆ ಮಾಡೆಂಬವಾಚಿ ಬಱಿಯೆನೆ ವಂಶಂ ॥
ಎಣ್ಣೆನೆ ಲೆಕ್ಕಿಪುದುಂ ಬಿಸು ।
ಗಣ್ಣನೆನಲ್ ಗೊರವನಪ್ಪುದೆಲೆ ಕವಿರತ್ನಾ ॥"[೧೮೩]

ಕಂದಪದ್ಯಗಳಿಂದ ಕೂಡಿದ ಗ್ರಂಥವಿದಾಗಿದ್ದು, ಅಲ್ಲಲ್ಲಿ ವೃತ್ತಗಳ ಬಳಕೆಯೂ ಇದೆಯೆನ್ನಲಾಗಿದೆ. ಮೊದಲು ಒಂದು ಪದವನ್ನು ಹೇಳಿ ಆ ಪದಕ್ಕೆ ಅರ್ಥವನ್ನು ಹೇಳುತ್ತ ಹೋಗುತ್ತಾನೆ ಕವಿ. ಉದಾ: ಸಣ್ಣದು ಎಂದರೆ ಕಿರಿತು; ಹಣ್ಣು ಎಂದರೆ ಮಾಗಿರುವುದು; ಬಱಿ ಎಂದರೆ ವಂಶ (ಬಹುಶಃ ಈ

೧೮೨. ಡಾ. ಹಾ. ಮಾ. ನಾಯಕ (ಪ್ರ. ಸಂ), ಡಾ. ಟಿ. ವಿ. ವೆಂಕಟಾಚಳ ಶಾಸ್ತ್ರೀ (ಸಂ) : **ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ – ಮೂರನೆಯ ಸಂಪುಟ** ; ಪುಟ. ೬೫೨

೧೮೩. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ–ಪ್ರಥಮ ಸಂಪುಟ** ; ಪುಟ. ೭೯

ಪದದಿಂದಲೇ 'ಕರುಳ ಬಳ್ಳಿ' ಎಂಬ ಪದವು ನಿಷ್ಪನ್ನವಾಗಿರಬಹುದು); ಎಣ್ಣೆ ಅಂದರೆ ಲೆಕ್ಕಮಾಡುವುದು; ಬಿಸುಗಣ್ಣನೆಂದರೆ ಪರಮೇಶ್ವರನು ಎಂದು ಹೇಳಿ ಕೊನೆ ಕವಿರತ್ನಾ ಎಂಬ ಅಂಕಿತದೊಂದಿಗೆ ಪದ್ಯಗಳು ಕೊನೆಗೊಳ್ಳುತ್ತವೆ.

೪.೪.೨. ಇಮ್ಮಡಿ ನಾಗವರ್ಮ (೧೧೪೫):

ಇದೇ ಅಧ್ಯಾಯದಲ್ಲಿ ಇಮ್ಮಡಿ ನಾಗವರ್ಮನ ಪರಿಚಯವನ್ನು ಮಾಡಿಕೊಳ್ಳಲಾಗಿದೆ.[೧೮೪] ಇವನು ತನ್ನ ಇತರ ಶಾಸ್ತ್ರ ಕೃತಿಗಳೊಂದಿಗೆ 'ಅಭಿಧಾನ ವಸ್ತುಕೋಶ'ವೆಂಬ ಕನ್ನಡ ನಿಘಂಟುವನ್ನು ರಚಿಸಿದ್ದಾನೆ.

೪.೪.೨.೧. ಅಭಿಧಾನ ವಸ್ತುಕೋಶ:

ಇಮ್ಮಡಿ ನಾಗವರ್ಮಕೃತ 'ಅಭಿಧಾನ ವಸ್ತುಕೋಶ'ವು ಕನ್ನಡದಲ್ಲಿ ಕಂದವೃತ್ತಗಳನ್ನು ಬಳಸಿ ಬರೆದಿರುವ ಸಂಸ್ಕೃತ ಪದಗಳ ನಿಘಂಟು. ಅಲ್ಲಲ್ಲಿ ಉತ್ಪಲಮಾಲೆ, ಶಾರ್ದೂಲ, ಸ್ರಗ್ಧರೆ, ಮಹಾಸ್ರಗ್ಧರೆ, ಮತ್ತೇಭ, ಚಂಪಕಮಾಲೆ, ಮಾಲಿನಿ, ಮಂದಾಕ್ರಾಂತ, ವಸಂತ ತಿಲಕ, ಶಾಲಿನಿ, ಶಿಖರಿಣಿ, ಹರಿಣಿ, ಪ್ರಹರ್ಷಿಣಿ, ವಂಶಸ್ಥ, ಉಪೇಂದ್ರವಜ್ರ ಮುಂತಾದ ವೃತ್ತಜಾತಿಗಳ ಬಳಕೆಯನ್ನೂ ಮಾಡಲಾಗಿದೆ. ಸಂಸ್ಕೃತ ಪದಗಳ ಅರ್ಥವನ್ನು ಕನ್ನಡ ಭಾಷೆಯಲ್ಲಿ ವಿವರಿಸುವುದು ಇದರ ಉದ್ದೇಶವಾಗಿದೆ. "ಅಭಿಧಾನ ವಸ್ತುಕೋಶ ರಚನೆಗೆ ವರರುಚಿ, ಹಲಾಯುಧ, ಭಾಗುರಿ, ಶಾಶ್ವತ, ಅಮರಸಿಂಹ ಮುಂತಾದವರ ನೆರವು ಪಡೆದಿರುವುದಾಗಿ ಹೇಳಿಕೊಂಡಿದ್ದಾನೆ ನಾಗವರ್ಮ. ಈ ಪೈಕಿ 'ಹಲಾಯುಧನ ಕೋಶ' ನಾಗವರ್ಮನಿಗೆ ಎಲ್ಲ ರೀತಿಯಲ್ಲಿ ಹೆಚ್ಚಾಗಿ ಪ್ರಯೋಜನವಾದಂತೆ ಭಾಸವಾಗುತ್ತದೆ."[೧೮೫]

"ವರರುಚಿ ಹಲಾಯುಧಂ ಭಾ
ಗುರಿ ಶಾಶ್ವತಮಮರಕೋಶಮೆಂಬಿವು ಮೊದಲಾ
ಗಿರೆ ಪೂರ್ವಾಶಾಸ್ತ್ರಮಂ ಸಂ
ಹರಿಸಿ ಮನಂಗೊಳೆ ನಿಘಂಟುವಂ ವಿರಚಿಸುವೆಂ ॥೦೨॥"[೧೮೬]

ಎಂದು ತಾನು ಹಿಂದಣ ಕೃತಿಗಳನ್ನು ಮೀರಿ ನಿಲ್ಲುವಂತೆ ನಿಘಂಟುವನ್ನು ರಚಿಸುವುದಾಗಿ ಹೇಳಿ ತನ್ನ ಕೃತಿಯಲ್ಲಿ ಮುಂದುವರೆಯುತ್ತಾನೆ.

ಪ್ರಸ್ತುತ ಕೋಶದಲ್ಲಿ ನಾಗವರ್ಮನು ಅವಿಭಿನ್ನಾರ್ಥ ಕಾಂಡ, ಸಾಮಾನ್ಯ ಕಾಂಡ ಹಾಗೂ ನಾನಾರ್ಥ ಕಾಂಡವೆಂದು ಮೂರು ಪ್ರಮುಖ ವಿಭಾಗಗಳನ್ನು ಮಾಡಿಕೊಂಡಿದ್ದಾನೆ. ಅವುಗಳಲ್ಲಿ ಮತ್ತು ಉಪವರ್ಗಗಳನ್ನು ಮಾಡಿದ್ದಾನೆ. ಸಾಕ್ಷಾತ್ ಶ್ರುತದೇವಿಯೇ ಕೃತಿಯನ್ನು ತಿದ್ದಿ ತೀಡಿರುವಳು ಎಂದು ಹೇಳುತ್ತಾನೆ. ಪ್ರಸ್ತುತ ಅಧ್ಯಯನದಲ್ಲಿ ಆಯಾ ಕಾಂಡದಲ್ಲಿನ ಕೆಲವು ವರ್ಗಗಳನ್ನು ಇಲ್ಲಿ ಉದಹೃತಗೊಳಿಸಿ ವಿವರಿಸಲಾಗಿದೆ.

---

೧೮೪. ನೋಡಿ ೪.೧.೨: **ಇಮ್ಮಡಿ ನಾಗವರ್ಮ** (೧೧೪೫) ; ಪುಟ. ೨೨೦
೧೮೫. ಡಾ. ಎಂ. ಮಹ್ಮದ್ ಭಾಷ ಗೂಳ್ಯಂ : **ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ; ಪುಟ. ೨೧೭
೧೮೬. ಎ. ವೆಂಕಟರಾವ್, ಪಂಡಿತ ಎಚ್. ಶೇಷಯ್ಯಂಗಾರ್ (ಸಂ) : **ನಾಗವರ್ಮ ಕೃತಮಪ್ಪ ಅಭಿಧಾನ ವಸ್ತುಕೋಶಂ** ; ಪುಟ.೦೧

೧) ಅವಿಭಿನ್ನಾರ್ಥ ಕಾಂಡ:

ಈ ಕಾಂಡದಲ್ಲಿ ಒಂದು ಪದಕ್ಕಿರುವ ಹಲವಾರು ಸಮಾನ ಪದಗಳನ್ನು ತಿಳಿಸುತ್ತಾನೆ.

೧. **ಸ್ವರ್ಗವರ್ಗಂ:** ಈ ಭಾಗದಲ್ಲಿ ಪದ್ಯದ ಆರಂಭದಲ್ಲಿ ದೇವತೆಗಳ ವಿಭಿನ್ನ ಹೆಸರುಗಳನ್ನು ಹೇಳುತ್ತಾನೆ.

"ಶ್ರುತದೇವಿ ವಾಣಿ ವಾಗ್ಭಾ
ರತಿ ವಚನಂ ಭಾಷೆ ವಾಚಿ ಗೀರ್ ಬ್ರಾಹ್ಮಿ ಸರ
ಸ್ವತಿ ವರದೆಯಾಗಿ ಪದಪ
ದ್ಧತಿಯನೊಡಂಬಡೆ ನಿಮಿರ್ಚಿ ತಿರ್ದುಗೆ ದಯೆಯಿಂ ॥"[೧೮೭]

ಶ್ರುತದೇವಿ = ವಾಣಿ, ವಾಗ್ಭಾರತಿ, ವಚನ, ಭಾಷೆ, ಮಾತು, ಲಿಪಿ, ಬ್ರಾಹ್ಮಿ, ಸರಸ್ವತಿ, ವರದೆ ಎಂದು ಸಮಾನ ಪದಗಳನ್ನು ತಿಳಿಸುತ್ತಾನೆ.

ಪರಮೇಷ್ಠಿ = ಪರಂಜ್ಯೋತಿಸ್ವರೂಪ, ತ್ರಿಲೋಕಗುರು, ಸರ್ವಜ್ಞ, ದುರಿತಹರ, ಅಕ್ಷಯ, ವೀತರಾಗ, ಅರ್ಹಂತ, ಜಿನೇಶ್ವರ, ತೀರ್ಥಂಕರ (೧.೧.೦೮)

ಸರಸಿರುಹಭವ = ಬ್ರಹ್ಮ, ಹಿರಣ್ಯಗರ್ಭ, ವಿಧಾತೃ, ಜೀವನಜ, ಪಂಕರುಹಾಸನ, ಪ್ರಜಾಪತಿ, ವಿರಿಂಚನಂ ವಿಧಿ, ಪಿತಾಮಹ, ಚತುರಾಸ್ಯ (ಚತುರ್ಮುಖ) (೧.೧.೧೧)

ಭವನೀಶ = ಶಂಭು, ರುದ್ರ, ಪಶುಪತಿ ಗಿರೀಶ, ಶೂಲಿ, ಭರ್ಗ, ಭವಾನೀ, ಧವನುಗ್ರ, ವ್ಯೋಮಕೇಶ, ಹರನತನುಹರ, ಶಂಕರ, ನೀಲಕಂಠ, ಶಿವನೀಶಾನಂ, ತ್ರಿಣೇತ್ರ, ತ್ರಿಪುರವಿಜಯಿ, ಕ್ರತುಧ್ವಂಸಕ, ಸ್ಥಾಣು, ವಿರೂಪಾಕ್ಷ, ಮೃಡ, ಧೂರ್ಜ, ಫಣಿಕಟಕ, ವಾಮದೇವ, ವೃಷಾಂಕ, ಗಂಗಾಧರ, ಕಪಾಳಧರ, ಗಜವರರುಚಿಚರ್ಮವಸನಧರ, ಖಟ್ವಾಂಗಧರ, ಗಿರಿತನಯಾರ್ಧಾಂಗಧರ, ಪೃಥುಜಟಾಧರ, ಚಂದ್ರಧರ (೧.೧.೧೩,೧೪).

ಉಮೆ = ಪಾರ್ವತಿ, ಕಾತ್ಯಾಯನಿ, ಹಿಮವತ್ಸುತೆ, ಚಂಡಿ, ದುರ್ಗೆ, ಮೇನಾತ್ಮಜೆ, ಗೌರಿ, ಮೃಡಾಣಿ, ಗಿರಿಜೆ, ರುದ್ರಾಣಿ, ಮಹೇಶ್ವರಿ, ಕಾಳಿ, ಅಂಬಿಕೆ (೧.೧.೧೬)

ಹೀಗೆ ದೇವತೆಗಳಿಗಿರುವ ಬೇರೆ ಬೇರೆ ಹೆಸರುಗಳನ್ನು ಹೇಳುತ್ತಾ ಹೋಗುತ್ತಾನೆ. ಸಿದ್ಧಾಂತ, ಬುದ್ಧ, ವೇದ, ವಿಷ್ಣು, ಲಕ್ಷ್ಮೀ, ಗಣಪತಿ, ಚಾಮುಂಡಿ, ಕೃಷ್ಣ, ಗದೆ, ರಾಮ, ಸೀತೆ, ಕಾಮದೇವ, ಇಂದ್ರ, ಐರಾವಣ, ವಸುದೇವ, ಅಗ್ನಿದೇವ, ಯಮರಾಯ, ವರುಣದೇವ, ವಾಯುದೇವ, ಕುಬೇರ, ಅಪ್ಸರೆಯರು, ಅಶ್ವಿನಿ ದೇವತೆಗಳು, ಗಾಂಧರ್ವರು, ಅಮೃತ, ಗಂಗೆ, ಜೀಮೂತ, ಸೂರ್ಯ, ಶನಿ, ಚಂದ್ರ, ತಾರೆ, ಗ್ರಹಣ, ಮಂಗಳ, ಬುಧ, ಗುರು, ರಾಹು, ಕೇತು ಹೀಗೆ ಸ್ವರ್ಗಲೋಕ ಹಾಗೂ ದೇವತೆಗಳಿಗೆ ಸಂಬಂಧಿಸಿದ ವಿಚಾರಗಳಿಗೆ ಸಮಾನಾರ್ಥಗಳನ್ನು ನೀಡುತ್ತಾನೆ ನಾಗವರ್ಮ.

---

೧೮೭. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಅಭಿಧಾನ ವಸ್ತುಕೋಶ** ; ಪುಟ. ೨೭೨

೨. **ಕಾಲವರ್ಗಂ:** ಸಮಯಕ್ಕೆ ಸಂಬಂಧಿಸಿದಂತೆ ಹಲವಾರು ಸಮಾನಾರ್ಥಗಳನ್ನು ಈ ಭಾಗದಲ್ಲಿ ನೀಡಲಾಗಿದೆ.

> **"ಸಮಯಮನೇಹಂ ಕಾಲಂ**
> **ನಿಮೇಷಕಾಷ್ಠಾದಿ ತದ್ವಿಶೇಷಮದೆನಿಕುಂ**
> **ಸಮರಾತ್ರಿಂ ದಿವಮಾಗಿರೆ**
> **ಸಮನಿಸುಗುಂ ವಿಷುವದಾಖ್ಯಾಗಳೆರಡುಂ ॥೧.೨.೧॥"**[೧೮೮]

ಘಳಿಗೆ = ಆರು ಕ್ಷಣಗಳು

ಕಾಷ್ಠೆ = ಹದಿನೆಂಟು ನಿಮಿಷ

ಮುಹೂರ್ತ = ನಾಲ್ವತ್ತೆಂಟು ನಿಮಿಷ

ಒಂದು ದಿನ = ಮೂವತ್ತು ಮುಹೂರ್ತಗಳು (ಇದು ಆಧುನಿಕ ಲೆಕ್ಕಾಚಾರದ ಇಪ್ಪತ್ತನಾಲ್ಕು ಘಂಟೆಗಳಿಗೆ ಸರಿಸಮವಾಗುತ್ತದೆ. ೪೮ * ೩೦ = ೧೪೪೦ ನಿ.)

ದಿವಸ = ದಿನ, ದಿವಾಹ, ದ್ಯು, ವಾಸರ, ಹಗಲು. (೧.೨.೪)

ರಾತ್ರಿ = ತಮಿ, ವಾಸನೇಯಿ, ಶರ್ವರಿ, ತಮಿಸ್ರೆ, ನಿಶೆ, ರಜನಿ, ದೋಷೆ, ಪ್ರದೋಷ, ನಿಶೀಥ, ಇರುಳು (೧.೨.೫, ೬)

ಹದಿನೈದು ತಿಥಿಗಳಿಗೆ ಒಂದು ಪಕ್ಷ; ಎರಡು ಪಕ್ಷವಾದರೆ ಒಂದು ಮಾಸ. ಮಾಸಕ್ಕೆ ಒಂದು ಪೌರ್ಣಮೆ, ಒಂದು ಅಮವಾಸ್ಯ. ಮೂವತ್ತು ಹಗಲು, ಮೂವತ್ತು ರಾತ್ರಿ ಒಂದು ಮಾಸ; ಎರಡು ಮಾಸಗಳು ಸೇರಿ ಒಂದು ಋತು. ಆರು ಋತುಗಳು ಕಳೆಯೇ ಒಂದು ವತ್ಸರ.[೧೮೯] ನರರ ಒಂದು ತಿಂಗಳೆಂದರೆ ಪಿತರ ಒಂದು ದಿನ. ಒಂದು ವರ್ಷವೆಂದರೆ ದೇವಿಯರ ಒಂದು ದಿನ. ಒಂದು ಯುಗವಾಗಬೇಕಾದರೆ ಹಲವಾರು ಸಂವತ್ಸರಗಳಾಗಬೇಕು. ಯುಗಕ್ಕೆ ಹದಿನಾಲ್ಕು ಮನ್ವಂತರಗಳು. ಹಲವಾರು ಮನ್ವಂತರಗಳು ಸೇರಿ ಕಲ್ಪವಾಗುವುದು. ಹೀಗೆ ಕಾಲದ ವಿಷಯವಾಗಿ ನಾಗವರ್ಮನು ತಿಳಿಸುತ್ತಾನೆ.

೩. **ಸಂಸರಣ ವರ್ಗಂ:** ಲೌಕಿಕ ಪ್ರಪಂಚಕ್ಕೆ ಸಂಬಂಧಿಸಿದ ಪದಗಳ ಸಮಾನಾರ್ಥಗಳನ್ನು ತಿಳಿಸಲಾಗಿದೆ.

ಸ್ಥಾವರ = ಪೃಥ್ವಿ, ಶಿಲೆ, ತ್ರಸಜೀವಗಳು.

ಜಂಗಮ = ಚೇತನಯುಕ್ತವಾದ ಜೀವನಿಕಾಯಗಳು (೧.೩.೨)

ಜನನ = ಜನ್ಮ, ಪ್ರಸವ, ಜನಿ, ಜನರುತ್ಪತ್ತಿ, ಸೂತಿ (೧.೩.೩).

ಪಾತಾಳ = ದನುಜೇಂದ್ರನಿಕೇತ, ಅಧೋಭುವನ, ಉರಗಲೋಕ, ರಸೆ, ವಿಖ್ಯಾತೆ, ಜ್ವಾಲಾಮುಖಿ, ಸಪ್ತತಳಗಳು (ಅತಳ, ವಿತಳ, ಸುತಳ, ಪಾತಾಳ, ರಸಾತಳ, ತಳಾತಳ, ಮಹಾತಳ).

---

೧೮೮. ಎ. ವೆಂಕಟರಾವ್, ಪಂಡಿತ ಎಚ್. ಶೇಷಯ್ಯಂಗಾರ್ (ಸಂ) : **ನಾಗವರ್ಮ ಕೃತಮಪ್ಪ ಅಭಿಧಾನ ವಸ್ತುಕೋಶಂ** ; ಪುಟ.೧೬

೧೮೯. ಆರು ಋತುಗಳು ಅಂದರೆ ಹನ್ನೆರಡು ತಿಂಗಳ ಅವಧಿಯನ್ನು ಸಂವತ್ಸವೆಂತಲೂ ಕರೆಯಲಾಗುತ್ತದೆ.

ಅವಟ = ಛಿದ್ರ, ಕುಹರ, ವಿವರ, ಶ್ವಭ್ರ, ಬಿಲ, ದರ, ರಂಧ್ರ, ಗರ್ತ (೧.೩.೫).

ಉರಗ = ಭೋಗಿ, ಸರೀಸೃಪ, ಫಣಿ, ಭುಜಂಗ, ಚಕ್ರಿ, ದರ್ವೀಕರ, ಹರಿ, ಕುಮಡಲಿ, ಕಾದ್ರವೇಯು, ನಾಗ, ವ್ಯಾಳನಾಶೀವಿಷ, ಪುರುಪೃಷ್ಠ, ಫಣಭೃತ್, ಪದಾಕು, ಭುಜಗ, ಕುಂಭೀನಸ, ಪನ್ನಗ, ಮರುದಾಶ, ಶನಿ, ಗೂಢಪಾದ, ವಿಷಧರ, ಸರ್ಪ, ದ್ವಿಜಿಹ್ವಾಹ್ವಯ (೧.೩.೭)

ದುರಿತ = ಪಾಪ, ಅಧರ್ಮಸ್ವರೂಪ, ವೃಜಿನ, ದುಶ್ಚರಿತ, ಕಿಲ್ಬಿಷ, ಅಯಶ (೧.೩.೧೨)

ಭವಿತವ್ಯತೆ = ಭಾಗ್ಯ, ಪುಣ್ಯ, ವಯ, ಶ್ರೇಯ, ವೃಷ, ಸುಕರ್ಮ, ಧರ್ಮ (೧.೩.೧೩)

ಹೀಗೆ ಉಪಚಾರ, ಪ್ರತಿರೂಪ, ದೈವಪ್ರಕೃತಿ, ಊಹ, ಜ್ಞಾನ, ಅಪವರ್ಗ, ಧ್ರುವ ಈ ಪದಗಳ ಸಮಾನಾರ್ಥಗಳನ್ನೂ ತಿಳಿಸಲಾಗಿದೆ.

೪. **ಸಲಿಲವರ್ಗಂ:** ಈ ಭಾಗದಲ್ಲಿ ಜಲಚರಗಳ ಸಮಾನಾರ್ಥಗಳನ್ನು ತಿಳಿಸಲಾಗಿದೆ.

> **"ಸಲಿಲಂ ಜೀವನಮಂಬು ತೋಮುದಕಂ ಪಾಥಂ ಕುಶಂ ವಾರಿ ಕೋ**
> **ಮಳಮರ್ಣಂ ಭುವನಂದಕಂ ಘನರಸಂ ನೀರಂ ಶರಂ ಪುಷ್ಕರಂ**
> **ಜಲ ವಾಪಂ ವಿಷಮಂ ಭಸಂಕಮಮೃತಂ ಪಾನೀಯಮೆಂದಿಂತನಾ**
> **ಕುಳದಿಂದಂ ತಱಿಸಲ್ಕೆ ನೀರ್ಗೆ ಪೆಸರಂ ಪರ್ಯಾಯದಿಂ ವಾಗ್ವಿದರ್ ॥೧.೪.೧॥"**[೯೦]

ಸಲಿಲ = ಜೀವನ, ಅಂಬು, ತೋಮು, ಉದಕ, ಪಾಥ, ಕುಶ, ವಾರಿ, ಕೋಮಲವರ್ಣ, ಭುವನಂದಕ, ಘನರಸ, ನೀರು, ಶರ, ಪುಷ್ಕರ, ಜಲ, ವಾಪಿ, ವಿಷಮ, ಭಸಂಕ, ಅಮೃತ, ಪಾನೀಯ (ಇವು ಶುದ್ಧ ನೀರಿಗೆ ಇರುವ ಪರ್ಯಾಯ ನಾಮಗಳು).

ಸಮುದ್ರ = ಶರದಿ, ದಧಿನಾಥ, ರತ್ನಾಕರ, ಅಬ್ಧಿ, ಸಮುದ್ರಮರ್ಣವ, ಜಲನಿಧಿ, ಸಾಗರ, ಅಂಬುರಾಶಿ, ಪನ್ನಗಶರಣ, ಕೂಪಾರ, ಉದಧಿ, ಪಾರಾವಾರ. (೧.೪.೨)

ಅಲೆಗಳು = ಭಂಗ, ಲಹರಿಕೆ, ವೀಚಿ, ತರಂಗ, ಲಳಿ, ತುಂಗತರಂಗ, ಕಲ್ಲೋಲ, ಉತ್ಕಲಿಕೆ (೧.೪.೩)

ಮೀನು = ಶರಫ, ತಿಮಿ, ಪಾಠೀನ, ಜಷ, ಅನಿಮಿಷ, ವಿಶಾರ, ಮತ್ಸ್ಯ (೧.೪.೪)

ಚಳುಕಿ = ಶಿಂಶುಮಾರ, ಮಕರ, ಮೊಸಳೆ, ಅವಹಾರ, ಗ್ರಾಹ, ನಕ್ರವಾಚಿ, ಕುಂಭೀರ, ಉಗ್ರತಿಮಿ (೧.೪.೫)

ಪೂರ = ಪ್ರವೃದ್ಧಸಲಿಲ, ತೀರ, ರೋಧ, ತಟ, ಪ್ರಪಾತ, ಕೂಲ, ಪಾರ, ಪರತಟ, ಅವಾಕ್ತೀರ

ಮುಂದುವರೆದು, ಇಮ್ಮಡಿ ನಾಗವರ್ಮನು ತನ್ನ 'ಅಭಿಧಾನ ವಸ್ತುಕೋಶ'ದಲ್ಲಿ ಕರ್ಕಟ, ಕೂರ್ಮ, ಮಂಡೂಕ, ಶಂಖ, ವಹಿತ್ರ, ನಾವಿಕ, ಜಲಾಶಯ, ಪ್ರವಾಹ, ಕಮಲ, ಕೂಪ, ಸೇತು, ಅರವಿಂದ, ರತ್ನಗಳು ಹೀಗೆ ಹಲವಾರು ಜಲೋತ್ಪನ್ನ ವಸ್ತುಗಳ ಪರ್ಯಾಯಾರ್ಥಗಳನ್ನು ಹೇಳುತ್ತಾನೆ.

೫. **ಭೂ ವರ್ಗಂ:**

ಈ ಭಾಗದಲ್ಲ ಇಮ್ಮಡಿ ನಾಗವರ್ಮನು ಭೂಮಿಗೆ ಸಂಬಂಧಿಸಿದ ವಿಷಯಗಳು ಹಾಗೂ ವಸ್ತುಗಳಿಗೆ ಪರ್ಯಾಯ ಪದಗಳನ್ನು ತಿಳಿಸುತ್ತಾನೆ.

---

೯೦. ಎ. ವೆಂಕಟರಾವ್, ಪಂಡಿತ ಎಚ್. ಶೇಷಯ್ಯಂಗಾರ್ (ಸಂ) : **ನಾಗವರ್ಮ ಕೃತಮಪ್ಪ ಅಭಿಧಾನ ವಸ್ತುಕೋಶಂ** ; ಪುಟ.೨೩

"ಸ್ಥಿರೆ ಧರಣಿ ಧಾತ್ರಿ ಮೇದಿನಿ
ಧರಿತ್ರಿ ಧರೆ ಯವನಿ ಪೃಥ್ವಿ, ರಸೆ, ವಸುಧೆ, ವಸುಂ
ಧರೆ ಕು ಮಹಿ ಜಗತಿ ವಿಶ್ವಂ
ಭರೆ ಗೋ ಕ್ಷ್ಮಾ ಕ್ಷೋಣಿ ಭೂಮಿ ಭೂ ಗೋತ್ರೆ ನೆಲಂ ॥೧.೫.೧॥"[೧೯೧]

ಹೀಗೆ ಭೂಮಿಗೆ ಇರುವ ಬೇರೆ ಬೇರೆ ಹೆಸರುಗಳನ್ನು ತಿಳಿಸುತ್ತಾನೆ. ಅಲ್ಲದೇ ಮಣ್ಣು, ಮಣ್ಣಿನ ಬಣ್ಣವನ್ನಾಧರಿಸಿ ಆ ಪ್ರದೇಶಕ್ಕಿರುವ ಹೆಸರು, ಬೆಳೆಗಳು ಮುಂತಾದ ಅಂಶಗಳ ಪರ್ಯಾಯ ನಾಮಗಳನ್ನು ಹೇಳುತ್ತಾನೆ.

ಮಣ್ಣು = ಮೃತ್ತಿಕೆ, ಮರುಧನ್ವ, ಅಹ್ವಯ, ಊಷರ, ಇರಿಣ, ಮೃತ್ಸ್ನೆ, ಆಖ್ಯೆ, ಸಕ್ಷಾರರಸ (೧.೫.೨)

ಕಪ್ಪುಭೂಮಿ = ಕೃಷ್ಣಭೂಮಿ, ಎರೆಮಣ್ಣಿರುವ ಭೂಮಿ.

ಬಿಳಿಮಣ್ಣಿರುವ ಭೂಮಿ **ಮಹೀಪ್ರದೇಶ.**

ಕಲ್ಲುನೆಲವು ಮರಡಿ.

೬. ಕಾಲಾಯಸಾದಿ ಧಾತು ವರ್ಗಂ:

ಲೋಹಾದಿ ಧಾತುಗಳ ಕುರಿತಾದ ವಸ್ತುಗಳ ಪರ್ಯಾಯಾರ್ಥಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಗಿರಿಗೋತ್ರ = ಶಿಖರಿ, ಧರ, ಸ್ಥಿರ, ನಗ, ಪರ್ವತ, ಶಿಲೋನ್ನತಿ, ಉರ್ವೀಧರ, ಅದ್ರಿ, ಶೈಲ, ಅಚಲ, ದರಿಮಂತ, ಶೃಂಗಿ, ಸಾನುಮಂತ, ಮಹಾರ್ಯ (೧.೬.೧)

"ಆ ನಗ ಕಟಕಂ ಪ್ರಸ್ಥಂ
ಸಾನು ತಟಂ ಭೃಗು ನಿತಂಬಮಂತದು ತಟ್ವಿಲ್
ತಾನೆನಿಸುಗುಮುಪಕಂಠದ
ಕಾನನರಾಜಿಯುಮಪತ್ಯಕಾಹ್ವಯಮಕ್ಕುಂ ॥೧.೬.೨॥"[೧೯೨]

ಪರ್ವತ, ಪ್ರಸ್ಥಭೂಮಿ, ಬಯಲುಪ್ರದೇಶ, ಸಮುದ್ರತಟ, ನದೀತಟ, ಪರ್ವತತುದಿ, ಪರ್ವತ, ನದೀತಿರುವುಗಳಲ್ಲಿ, ಕಾಡುಗಳಲ್ಲಿ, ಮರುಭೂಮಿ ಪ್ರದೇಶಗಳಲ್ಲಿ, ತಪ್ಪಲು ಪ್ರದೇಶಗಳಲ್ಲಿ ಬೆಟ್ಟದ ಇಳಿಜಾರು ಪ್ರದೇಶಗಳಲ್ಲಿ, ಆಳಪ್ರದೇಶ, ಕಂದರ, ಕಣಿವೆ ಪ್ರದೇಶಗಳಲ್ಲಿ, ಗುಹೆಗಳಲ್ಲಿ, ಬೆಟ್ಟದ ಆಳಪ್ರದೇಶಗಳಲ್ಲಿ, ನೀರಿನಾಳದಲ್ಲಿ, ಪರ್ವತಗಳ ಸುತ್ತಲ ಪ್ರದೇಶಗಳಲ್ಲಿ, ಸಮುದ್ರದಾಳಗಲ್ಲಿ ಧಾತುಗಳ ಲಬ್ಧವಾಗುವವು (೧.೬.೨, ೩).

ಧಾತು = ಶಿಲೆ, ಪಾಷಾಣ, ಖನಿಜ, ಗ್ರಾವ, ಉಪಲ, ಆಶ್ಮ, ದೃಷದ, ಆಖ್ಯ, ಅಗಶಿ, ಮಿರ, ಅಗ್ರ, ಸ್ಖಳಿತನಿತಾಂತ, ಸ್ಥೂಲ, ಉಪಲಂಗ, ಗಂಡಶೈಲಗಳೆಂಬ ಹೆಸರಿನಲ್ಲಿ ಧಾತು ಮೂಲವಿರುವುದು. ಪಾದರಸ, ಸ್ವರ್ಣ, ರಜತ, ಕಬ್ಬಿಣ, ತಾಮ್ರ ಮುಂತಾದ ಲೋಹಗಳು ಉಪಲಬ್ಧವಾಗುವವು. (೧.೬.೪, ೫)

---

೧೯೧. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಅಭಿಧಾನ ವಸ್ತುಕೋಶ** ; ಪುಟ. ೨೯೩

೧೯೨. ಎ. ವೆಂಕಟರಾವ್, ಪಂಡಿತ ಎಚ್. ಶೇಷಯ್ಯಂಗಾರ್ (ಸಂ) : **ನಾಗವರ್ಮ ಕೃತಮಪ್ಪ ಅಭಿಧಾನ ವಸ್ತುಕೋಶಂ** ; ಪುಟ.೨೮

ಚಿನ್ನ = ಗಿರಿಜೋತ್ತಮ, ಕಾಂಚನ, ಜಾತರೂಪ, ತಪನೀಯ, ಭರ್ಮ, ಹಾಟಕ, ಚಾಮೀಕರ, ಶಾತಕುಂಭ, ಕರ್ತಸ್ವರ, ಕನಕ, ಸುವರ್ಣ, ರುಕ್ಮನಾಮ, ಹೇಮ (ಇವು ಚಿನ್ನಕ್ಕೆ ಇರುವ ಪರ್ಯಾಯ ನಾಮಗಳು (೧.೬.೬).

ರತ್ನ = ಗೈರಿಕ, ನಿಷ್ಠ, ಹಿರಣ್ಯ, ಮಹಾರಜತ, ಸ್ವರ್ಣ, ಕರ್ಬುರ, ಅಷ್ಟಾಪದ (೧.೬.೭).

ಬೆಳ್ಳಿ = ಶ್ವೇತ, ರಜತ (೧.೬.೮).

ದ್ರವ್ಯ = ದ್ರವಿಣ, ವಸಿ, ಅರ್ಥ, ಧನ, ವಿತ್ತ, ನವನಿಧಿಗಳು (ಇವೆಲ್ಲವೂ ಆವಶ್ಯಕ ದ್ರವ್ಯಗಳು.).

೭. ವನವರ್ಗಂ:

> **"ತರು ಶಾಖಿ ಪಾದಪಂ ವಿ**
> **ಷ್ಟರ ಮದ್ರಿ ಕುಜಂ ದ್ರುಮಂ ದ್ರು ಶಾಳ ಮಗಂ ಭೂ**
> **ಮಿರುಹಂ ವಿಟಪಿ ವನಸ್ಪತಿ**
> **ಮರಂ ನಗಂ ಕುಟ ಮನೋಕಹಂ ಶಿಖಿ ವೃಕ್ಷಂ ॥೧.೭.೧॥**[೧೯೩]

ತರು = ಶಾಖಿ (ಕೊಂಬೆಯುಳ್ಳದ್ದು), ಪಾದಪ (ಬೇರುಳ್ಳುದು), ವಿಷ್ಟರ, ಮದ್ರಿ, ಕುಜ, ದ್ರುಮ, ದ್ರು, ಶಾಳ (ನೆಲ್ಲಿ), ಮಗ, ಭೂಮಿರುಹ, ವಿಟಪಿ, ವನಸ್ಪತಿ, ಮರ, ನಗ, ಕುಟ, ಮನೋಕಹ, ಶಿಖಿ ವೃಕ್ಷ ಎಂಬಿವು ಪರ್ಯಾಯ ನಾಮಗಳು. ಮುಂದುವರೆದು ಗುಲ್ಮ, ಜಾಳಕ, ಬಳ್ಳಿ, ಪೊದೆ, ಮುಳ್ಳುಕಾಡುಗಳ ಪರ್ಯಾಯ ವಿವರಗಳನ್ನು ಕೊಡುತ್ತಾನೆ.

೮. ವೃಕ್ಷಾದಿ ವರ್ಗಂ:

ಈ ಭಾಗದಲ್ಲಿ ವಿವಿಧ ವೃಕ್ಷ, ಸಸ್ಯಗಳಿಗಿರುವ ಪರ್ಯಾಯಪದಗಳನ್ನು 'ಅಭಿಧಾನ ವಸ್ತುಕೋಶ'ದಲ್ಲಿ ಇಮ್ಮಡಿ ನಾಗವರ್ಮನು ತಿಳಿಸಿದ್ದಾನೆ.

ಅಸುಗೆ, ಕಂಕೆಲ್ಲಿ, ಪಾದರಿ, ಪಾಟಳ, ಕೊಸಗು, ಸಂಪಿಗೆ, ಸೀವನ್ನಿ, ಕಾಶ್ಮರಿ, ಎಲವ, ಸ್ಥಿರಾಯು, ಶಾಲ್ಮಲಿ, ಬಸರಿ, ಚೂತ, ಮಾಕಂದ, ಜಾತ, ಆಮ್ರ, ಚಲದಳ, ಅಶ್ವತ್ಥ, ಪಿಪ್ಪಲ, ಪ್ರಿಯಂಗು, ಬಕುಲ, ಕೇಸರ, ಕಕುಭ, ಕಪಿತ್ಥ, ಐರಾವತ, ನಾರಂಗ, ಪೂಗ, ನಾಗಲತೆ, ಪುನ್ನಾಗ, ಶೇಲು, ಗಿರಿಪ್ರಭವ, ಲವಂಗ, ಗಜಕೇಸರಿ, ಗಿರಿಪ್ರಭವ, ನಿಂಬ, ಬೇವು, ತುಂಬುರ, ಸಲ್ಲಕಿ, ಬಿಲ್ವ, ಚೇತಕಿ, ಹೈಮವತ, ಹರೀತಕಿ, ತಿಷ್ಯಫಲ, ಶುಕತರು, ಶಿಗ್ರು, ಮರುಗ, ಖದಿರು, ಸಿತ, ಶೃಂಗೀ, ತೇಗು, ಭೂರ್ಜ, ಕುಂದುರ, ಇಂಗುದಿ, ತಾಳೆ, ಸೀತಾಳೆ, ವೇಣು, ಖರ್ಜೂರ, ಗಿರಿಮಲ್ಲಿಗೆ, ತಗಡಿ, ಮರ್ಕಟಿ, ಚಿತ್ರಕ, ಗೋಸ್ತನಿ, ದ್ರಾಕ್ಷಿ, ಗುಡೂಚಿ, ಲಶುನಿ, ಶ್ರೀಗಂಧ, ಪೃಶ್ನಿಪರ್ಣಿ, ಫಣಿರ್ಜಕ, ಪೀತಾಭಿಕ್ಯ, ಹರಿದ್ರ, ಮುಶೀರ, ಮುಸ್ತೆ, ಕೃಷ್ಣಲಾಭಿ, ಪಂಚವಟಿ, ಸೂರಣ, ಶತಪುಷ್ಪಿಕೆ, ಕಾಕಮಾಚಿ, ಅಂಗಾರವಲ್ಲಿ, ಕೊಡಸಿಗೆ, ಲಾಂಗುಳಿ, ಕರವಂದ, ಸೋಮವಲ್ಲಿ, ಶತಮೂಳಿ, ಇಂದ್ರಾಣಿ ಮುಂತಾದ ಸಸ್ಯಗಳಿಗೆ ಪರ್ಯಾಯ ನಾಮಗಳನ್ನು ಹೇಳಲಾಗಿದೆ.

---

೧೯೩. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಅಭಿಧಾನ ವಸ್ತುಕೋಶ** ; ಪುಟ. ೨೯೭

೯. ಮೃಗಪಕ್ಷಿ ವರ್ಗಂ:

ಈ ಭಾಗದಲ್ಲಿ ಮೃಗ–ಪಕ್ಷಿಗಳಿಗಿರುವ ಹಲವಾರು ಪರ್ಯಾಯ ನಾಮಗಳನ್ನು ತಿಳಿಸಲಾಗಿದೆ.

> **"ಶರಭ ಮದಷ್ಟಾಪದ ಮಿಭ**
> **ವಿರೋಧಿ ಕಂಠೀರವ ಮೃಗಾಧೀಶ ಕೇ**
> **ಸರಿ ಹರಿ ಸಿಂಹಂ ವ್ಯಾಘ್ರಂ**
> **ತರಕ್ಷು ಮೃಗರಿಪು ಚಮೂರವೆನೆ ಶಾರ್ದೂಲಂ ॥೧.೯.೧॥"**[೧೯೪]

ಈ ಮೇಲಿನ ಪದ್ಯದಲ್ಲಿ ಸಿಂಹ ಮತ್ತು ಹುಲಿಗಳಿಗಿರುವ ಇತರ ಹೆಸರುಗಳನ್ನು ಹೇಳಲಾಗಿದೆ. ಮುಂದುವರೆದು, ಹರಿಣ, ನರಿ, ಕರಡಿ, ಮನೆಕರಡಿ, ಸಾರಂಗ, ಮಹಿಷ, ಮುಂಗುಸಿ, ಬೆಕ್ಕು, ಕಪಿ, ಚಮರೀಮೃಗ, ಮೂಷಿಕ, ಶಕುಂತ ಪಕ್ಷಿ, ವೃಶ್ಚಿಕ, ದುಂಬಿ, ನವಿಲು, ಗಿಳಿ, ಉರಗ, ಕಪೋತ, ಪಿಂಗಲಿ, ಗೂಬೆ, ಕೋಗಿಲೆ, ಕೌಂಚಪಕ್ಷಿ, ಮಲ್ಲಿಕಾಕ್ಷ, ರಾಜಹಂಸ, ಚಕೋರಪಕ್ಷಿ ಮುಂತಾದ ಪಶು–ಪಕ್ಷಿಗಳ ಹಲವಾರು ಹೆಸರುಗಳನ್ನು ತಿಳಿಸಿದ್ದಾನೆ.

೧೦. ಪುರಗೃಹೋಪಕರಣಾದಿ ವರ್ಗಂ:

ಈ ಭಾಗದಲ್ಲಿ ಗ್ರಾಮ, ಹಳ್ಳಿ, ಊರು, ಅರಮನೆ, ಮನೆಗಳಲ್ಲಿ ಬಳಕೆಯಾಗುವ ನಿತ್ಯೋಪಕರಣಗಳು, ಶಯನೋಪಕರಣಗಳು, ಪೀಠೋಪಕರಣಗಳು, ಅಡುಗೆಮನೆಯ ಪರಿಕರಗಳು ಪರ್ಯಾಯ ಪದಗಳನ್ನು ತಿಳಿಸಿದ್ದಾನೆ ಕವಿ ನಾಗವರ್ಮ.

ಮುನಿಜನ ನಿವಾಸ = ಆಶ್ರಮ; ಜನ = ಪ್ರಜೆ, ಲೋಕ; ಗ್ರಾಮೀಣ = ಗ್ರಾಮಗಳಲ್ಲಿ ವಾಸಿಸುವವರು; ಉಪಶಲ್ಯ = ಗ್ರಾಮಗಳ ಗಡಿ (೧.೧೦.೧, ೨, ೩)

> **"ಗ್ರಾಮಂ ವೃತ್ಯಾವೃತಾಂತಂ ಪುರಮುಚಿತ ಚತುರ್ಗೋಪುರಾಟ್ಟಾಳಸಾಳಂ**
> **ಗ್ರಾಮಂಗಳ್ತಾಮವೈನೂಱರ ತಲೆಯೆನೆ ಸಂದಿರ್ದುದಕ್ಕುಂ ಮಡಂಬಂ**
> **ಭೂಮೀಂದ್ರ ಸುತ್ತುಗೊಂಡೆತ್ತಲುಮಿರೆ ಪುದುವಿಂ ಕರ್ಬಡಂ ಸಿಂಧುಶೈಲೋ**
> **ದ್ದಾಮಾಖ್ಯಂ ಖೇಡಮಾದಂದಱಿಗೆ ವಿಬುಧರಿರ್ದನ್ತದಂ ಬಾಡಮೆಂಬರ್ ॥೧.೧೦.೫॥"**[೧೯೫]

ಗ್ರಾಮವು ಬೇಲಿಗಳಿಂದ ಆವೃತವಾದುದು; ಪುರದ ಸುತ್ತಲೂ ಗೋಡೆಯಿದ್ದು ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಗೋಪುರಗಳಿರುತ್ತವೆ; ಐನೂರು ಗ್ರಾಮಗಳಿಗೆ ಕೇಂದ್ರವಾಗಿರುವುದು 'ಮಡಂಬ'; ಸುತ್ತಲೂ ಸಾಕಷ್ಟು ಪ್ರಮಾಣದ ಭೂಪ್ರದೇಶವನ್ನು ಹೊಂದಿರುವುದು 'ಕರ್ಬಡ'; ನದೀ ಹಾಗೂ ಬೆಟ್ಟಗಳಿಂದ ಸುತ್ತುವರಿದ ಪ್ರದೇಶ 'ಖೇಡ'; ವಿದ್ವಾಂಸರು ವಾಸಿಸುವ ಪ್ರದೇಶ 'ಬಾಡ'. ಹೀಗೆ ವಿವಿಧ ಪ್ರಕಾರದಲ್ಲಿ ಪ್ರದೇಶಗಳಿಗಿರುವ ಹೆಸರುಗಳನ್ನು ತಿಳಿಸುತ್ತಾನೆ.

ವಾಸಸ್ಥಳ = ಭವನ, ಸದನ, ಸದ್ಮ, ನಿವಾಸ, ಅವಸಥ, ಆಸ್ಪದ, ನಿಲಯ, ವೇಶ್ಮ, ಅಗಾರ, ಶರಣ, ಗೇಹ, ಆಲಯ, ಕುಟಿ (ಗುಡಿಸಲು), ನಿಕೇತನ, ಗೃಹ, ಉಟಜ (ಎಲೆಗಳನ್ನು ಹೊದಿಸಿದ ಮನೆ) (೧.೧೦.೮).

---

೧೯೪. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಅಭಿಧಾನ ವಸ್ತುಕೋಶ** ; ಪುಟ. ೩೦೬
೧೯೫. **ಅದೇ** ; ಪುಟ. ೩೧೧

ಆಸಂದಿ = ವಿಷ್ಟರ, ವೇತ್ರಾಸನ, ಪೀಠ, ಆಸನ (೧.೧೦.೨೪).

ಪಾತ್ರ = ಭಾಂಡ, ಸ್ಥಾಲಿ, ಯಮತ್ರ, ಭಾಜನ (೧.೧೦.೨೬).

ಬಲೆ = ಮೃಗಬಂಧಿನಿ, ವಾಗುರೆ, ಬಗೆಗನಾಯ, ಕುವೇಣಿ, ಬಡಿಶ, ಜಾಲ, ಖಗಬಂಧ (೧.೧೦.೩೫)

ಮಂಥಣಿ = ಗರ್ಗರಿ, ಕಡೆಗೋಲು, ಮಂಥಾನ (೧.೧೦.೩೧).

೧೧. ಮನುಷ್ಯ ವರ್ಗಂ:

"ನೃ ನರ ಮನುಜನ್ಮ ಮಾನವ
ಮನುಷ್ಯ ಪಂಚಜನ ಮರ್ತ್ಯ ಸಂಜ್ಞಂ ಪುರುಷಂ
ವನಿತೆ ವಧು ನಾರಿ ಸೀಮ
ನ್ತಿನಿ ಯೋಷಿದ್ವಾಮೆ ಕೇವಳಂ ಸ್ತ್ರೀನಾಮಂ ॥೧.೧೧.೧॥"[೧೯೬]

ಈ ಭಾಗದಲ್ಲಿ ಮನುಷ್ಯವರ್ಗದಲ್ಲಿರುವ ವಿವಿಧ ಭೇದಗಳ ಕುರಿತಾದ ವಿಷಯಗಳಿಗೆ ಪರ್ಯಾಯ ಹೆಸರುಗಳನ್ನು ತಿಳಿಸಲಾಗಿದೆ.

ಪತ್ನಿ = ಪ್ರಮದೆ, ನಿತಂಬಿನಿ, ಭಾಮಿನಿ, ರಮಣಿ, ವರಾರೋಹೆ, ರಾಮೆ, ವಾಮಾಕ್ಷಿ, ಮನೋರಮೆ, ಲಲನೆ, ಕಾಂತೆ, ಅಬಲಾ, ಸಹಚರಿ, ಭಾರ್ಯೆ, ಕುಟುಂಬಿನಿ, ಸಹಧರ್ಮಿಣಿ, ಪತ್ನಿ, ಜಾಯೆ, ಮಹಿಳೆ, ಪುರಂಧ್ರಿ, ಕಳತ್ರ, ಗೃಹಿಣಿ, ಕುಲವಧು, ಸಾಧ್ವಿ, ಪತಿವ್ರತೆ, ಕುಲಪಾಲಿಕೆ, ಸತಿ, ಚರಿತ್ರವತಿ, ಪುತ್ರಾಂಗನೆ. (೧.೧೧.೨, ೩)

ಪ್ರಿಯತಮೆ = ಸುಭಗೆ, ವಿಳಾಸಿನಿದಯಿತೆ, ರುಚಿರೆ, ವಲ್ಲಭೆ.

ವೇಶ್ಯೆ = ಪುಂಶ್ಚಲಿ, ಕುಲಟೆ, ಯಸತಿ, ಕುಲಪಾಂಸುಳೆ, ಬಂಧಕಿ, ಜಾಱೆ, ದಾರಿಕೆ, ಲಂಜಿಕೆ, ವಣವಧು, ವಾರಾಂಗನೆ, ಗಣಿಕೆ, ವೇಶ್ಯೆ, ಬೆಲೆವೆಣ್, ಸಂಚಾರಿಕೆ, ಅಭಿಸಾರಿಕೆ. (೧.೧೧.೭)

ಕನ್ಯೆ = ಕುಮಾರಿ, ಕನ್ನಿಕೆ, ತಾನ್ನಗ್ನಿಕೆ, ಗೌರಿ, ಋತುಮತಿಯಾಗುವ ಮುನ್ನವೇ ಮದುವೆ ಮಾಡಿಕೊಟ್ಟವಳು. (೧.೧೧.೧೦)

ಜನನಿ = ಜನನಿ, ಸವಿತ್ರಿ, ಸುಷು, ತಾಯಿ. (೧.೧೧.೧೭)

ತಂದೆ = ಜನಕ, ಪಿತೃ.

ಪುತ್ರ = ನಂದನ, ತನುಜನ್ಮ, ತೋಕ, ಸುತ, ಪುತ್ರ, ತನೂಭವ, ಸೂನು, ನಾಮಕ, ತನಯ.

ಮುಂದುವರೆದು, ಪುತ್ರಿ, ಸಹೋದರ, ಸಹೋದರಿ, ಅಣ್ಣ–ತಮ್ಮ, ಅಕ್ಕ–ತಂಗಿ, ಸವತಿ, ಮಾತುಲ್ಯ, ಪಿತಾಮಹ, ಮಾತಾಮಹ, ಮೊಮ್ಮಗ, ಮೊಮ್ಮಗಳು, ಭ್ರಾತೃಸುತ, ಉಪಮಾತೆ, ನಾದಿನಿ, ನಪುಂಸಕ, ನವಯುವಕ, ಯುವತಿ, ಕುಲ, ಸಂತತಿ, ಚತುರ್ವರ್ಣಗಳು, ಗೃಹಸ್ಥ, ಗೃಹಿಣಿ, ಭಿಕ್ಷು, ಸನ್ಯಾಸಿ, ವೈದ್ಯ, ಬ್ರಾಹ್ಮಣ, ಪೂಜೆ, ದಾನ, ಪ್ರೇತ, ಆತ್ಮ, ಪರಲೋಕ, ಅರಸ, ರಾಣಿ, ರಸಿಕ, ಇಂದ್ರ, ಭಕ್ತ, ಸೇನಾನಿ, ದಾಸ, ದಾಸಿ, ವ್ಯಾಪಾರಿ, ವೃದ್ಧ, ವೃದ್ಧೆ, ಕೃಷಿಕ, ಸಾರಥಿ,

---

೧೯೬. ಎ. ವೆಂಕಟರಾವ್, ಪಂಡಿತ ಎಚ್. ಶೇಷಯ್ಯಂಗಾರ್ (ಸಂ) : **ನಾಗವರ್ಮ ಕೃತಮಪ್ಪ ಅಭಿಧಾನ ವಸ್ತುಕೋಶಂ** ; ಪುಟ.೫೨

ಶಿಲ್ಪಿ, ಇಂದ್ರಜಾಲಿಕ, ಕಳ್ಳ, ಮೀಂಗುಲಿಗ, ಕಟುಕ, ಶೌಂಡಿಕ, ಚಂಡಾಳ, ತಳವಾರ ಹೀಗೆ ಮುಂತಾದ ಪದಗಳಿಗೆ ಇರುವ ಹಲವಾರು ಪದಗಳನ್ನು ತಿಳಿಸುತ್ತಾನೆ ಇಮ್ಮಡಿ ನಾಗವರ್ಮ.

೧೨. ದೇಹಾವಯವಾದಿ ವರ್ಗಂ:

'ಅಭಿಧಾನ ವಸ್ತುಕೋಶ'ದ ಈ ಭಾಗದಲ್ಲಿ ಇಮ್ಮಡಿ ನಾಗವರ್ಮನು ದೇಹದ ವಿವಿಧ ಅಂಗಗಳ ಹೆಸರುಗಳನ್ನು, ಅವುಗಳಿಗೆ ಸಮಾನಾರ್ಥಗಳನ್ನು ತಿಳಿಸಿದ್ದಾನೆ.

ತನು = ಗಾತ್ರ, ವಿಗ್ರಹ, ಅಪಘನ, ಶರೀರ, ಕಳೇಬರ, ಕಾಯ, ಸಂಹನನ, ದೇಹ, ವಪು (೧.೧೨.೧)

ಚರಣ = ಕ್ರಮ, ಅಂಘ್ರಿ, ಪದ, ಬೆರಲಂಗುಳಿ, ಪಾದ, ಪಾದತಳ, ಅಡಿ (೧.೧೩.೨)

"ಆರೋಹಂ ಶ್ರೋಣಿ ಕಾಂಚೀಪದ ಜಘನ ಕಟೀ ಸಂಜ್ಞೆಯಕ್ಕುಂ ನಿತಂಬ
ಕ್ಕೂರುಶ್ರೋಣಿದ್ವಯಾ ಸಂಧಿಗಲೆರಡುಮವುಂ ವಂಕ್ಷಣಂ ಪಾಯು ಗೂಢ
ದ್ವಾರಾಪಾನಂ ಗುದಂ ಮೇಹನ ಮಱೆಗದೆ ದಲ್ ಶೇಫ ಶಿಶ್ನಾಹ್ವಯಂ ಸಂ
ಸಾರಾಧ್ವಂ ತಾಂ ವರಾಂಗಂ ಸ್ಮರಸದನಮುಪಸ್ಥಂ ಭಗಂ ಯೋನಿ ನಾಮಂ ॥೧.೧೨.೪॥"[೧೯೭]

ಈ ಮೇಲಿನ ಪದ್ಯದಲ್ಲಿ ದೇಹದ ವಿವಿಧ ಅವಯವಗಳು, ಅವುಗಳ ಕಾರ್ಯವನ್ನು ಕುರಿತಾಗಿ ಹೇಳಿದ್ದಾನೆ.

ನಯನ = ವಿಲೋಚನ, ಚಕ್ಷು, ನೇತ್ರ, ಅಕ್ಷಿ, ದೃಜ್ಞ, ವೀಕ್ಷಣ, ದೃಷ್ಟಿ, ಕಟಾಕ್ಷ, ಕೇಕರ, ಕಣ್ಣು (೧.೧೨.೧೬)

ಶ್ರವಣ = ಕರ್ಣ, ಶ್ರೋತ್ರ, ಕಿವಿ (೧.೧೨.೧೭)

ಪೃಷ್ಠ, ಕರ, ಕಟಿ, ಹೃದಯ, ಉದರ, ಬೆರಳು, ಅಂಗುಷ್ಠ, ಹಣೆ, ಬಾಹು, ಮುಖ, ಬೆನ್ನು, ನಾಲಗೆ, ಕಪಾಳ, ಮೂಗು, ಧರ್ಮ, ಅಧರ, ಶೀರ್ಷ, ರೋಮ, ಕುಚ, ಪಂಚೇಂದ್ರಿಯ, ಮನಸ್ಸು, ಪಿತ್ತ, ವಾಯು, ಕಫ, ರುಧಿರ, ತ್ವಚೆ, ಮೂಳೆ, ಮಾಂಸ ಮುಂತಾದ ದೇಹದ ಅಂಗಗಳ ವಿವಿಧ ಹೆಸರುಗಳನ್ನು ಹೇಳಿ, ಜ್ವರ, ವಾಂತಿ, ಬೇಧಿ, ಕುಷ್ಠ, ಪಾಂಡುರೋಗ, ವಾತ, ನೆಗಡಿ, ವಿಕಲಾಂಗ ಮುಂತಾದ ದೇಹದೋಷಗಳ ಹೆಸರುಗಳನ್ನು ತಿಳಿಸುತ್ತಾನೆ.

೧೩. ಭೂಷನಾದಿ ವರ್ಗಂ:

ಪ್ರಸ್ತುತ ಭಾಗದಲ್ಲಿ ನಾಗವರ್ಮನು ಮನುಷ್ಯನು ಧರಿಸುವ ವಸನಾಭರಣಗಳು ಹಾಗೂ ಅವುಗಳಿಗಿರುವ ಬೇರೆ ಬೇರೆ ಹೆಸರುಗಳನ್ನು ತಿಳಿಸುತ್ತಾನೆ.

"ಪ್ರತಿಕರ್ಮಂ ನೇಪಥ್ಯಂ
ಪ್ರತಿಸಂಸ್ಕಾರಂ ಪ್ರಸಾಧನಂ ವೇಷಮಲಂ
ಕೃತಿ ಮಂಡನಂ ವಿಭೂಷಾ
ಪ್ರತಾನವಾಭರಣಮೆಂಬಿವವು ತೊಡವಕ್ಕುಂ ॥೧.೧೩.೧॥"[೧೯೮]

೧೯೭. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಅಭಿಧಾನ ವಸ್ತುಕೋಶ** ; ಪುಟ. ೩೨೯

ಮಕುಟ = ಕೋಟೀರ, ಮೌಳಿ, ಕಿರೀಟ.

ಉಷ್ಣೀಷ = ಕರ್ಣಿಕೆ, ಕರ್ಣವೇಷ್ಟನ, ಕರ್ಣಕುಂಡಲ. (೧.೧೩.೨)

ಕಂಕಣ = ಆವಾಪ, ವಲಯ, ಕಟಕ, ಪಾರಿಹಾರ್ಯ ನಾಮ, ಹಸ್ತಾಲಂಕೃತಿ.

ಮೇಖಲೆ = ಕಟಿಸೂತ್ರ, ಕಾಂಚೀಕಲಾಪ, ರಶನಾಖ್ಯ (೧.೧೩.೬)

ಶಿಂಜಿನಿ = ನೂಪುರ, ಅಂದುಗೆ, ಮಂಜೀರ, ಹಂಸಕ, ತುಳಾಕೋಟಿ, ಮನೋರಂಜನಮಂಜುಳ, ಮೃದುಕಳಸಿಂಜಾನ, ಕ್ಷುದ್ರಘಂಟೆ, ಕಿಂಕಿಣಿ. (೧.೧೩.೭)

ಮುಂದುವರೆದು, ನಕ್ಷತ್ರಮಾಲೆ, ತಿಲಕ, ಕುಂಕುಮ, ಬಳೆ, ನವವಸ್ತ್ರ, ಕ್ರಿಮಿ ಕಾರ್ಪಾಸ, ದುಕೂಲ, ಕಂಚುಕ, ಕೂರ್ಪಾಸ ಮನ ಮೊದಲಾದ ಉಡುಗೆಗಳ ವಿವಿಧಾರ್ಥಗಳನ್ನು ಹೇಳಿ, ಗೀತ ಗಾನಗಳಿಂದ ಮನೋರಂಜನೆ ನೀಡಲು ಉಪಯುಕ್ತವಾದ ತಾಳವಾದ್ಯ, ತಂತಿವಾದ್ಯ, ಧರ್ಮವಾದ್ಯಗಳನ್ನು ತಿಳಿಸುತ್ತಾನೆ.

೧೪. ಸಮರಾದೀಸಂಪ್ರಕೀರ್ಣ ವರ್ಗಂ:

ಈ ಭಾಗದಲ್ಲಿ ಯುದ್ಧ ಹಾಗೂ ಯುದ್ಧಕ್ಕೆ ಸಂಬಂಧಿಸಿದ ಪರಿಕರಗಳ ವಿವಿಧಾರ್ಥಗಳನ್ನು ಹೇಳಲಾಗಿದೆ.

ಸಮರ = ಸಂಗ್ರಾಮ, ಯುದ್ಧ, ಆಜಿ, ಆಯೋಧನ, ಸಮೀಕ, ಕದನ, ಸಮಿತಿ, ರಣ, ಪ್ರಥನ, ಜನ್ಯ, ಆಹವ, ಸಂಯುಗ, ಪ್ರಘಾತ, ಕಲಹ (೧.೧೪.೧)

"ಸಮರಾಝುಗಣದಿಂ ತೊಲಗದ
ಸಮಯರ್ ಸಂಸಪ್ತಕರ್ ಬಲಂಗಳ್ ತಾಮ
ಕ್ರಮದಿಂ ತಳ್ತಿಱಿವುದು ತಾಂ
ತುಮುಳ ರಣಂ ಬಾಹುಯುದ್ಧಮಾರಣಯುದ್ಧಂ ॥೧.೧೪.೩॥"[೯೯]

ವಧೆ = ವಿಶಸನ, ಮಾರಣ, ವಿಶರಣ, ನಿಶುಂಭನ, ಕ್ಷಣನ, ಸೂದನ, ಪ್ರತಿಘಾತ, ಪ್ರಶಮನ, ವರ್ಜನ, ಬರ್ಹಣ, ಹಿಂಸಾರ್ಥಕ. (೧.೧೪.೪)

ಶಸ್ತ್ರ = ಪ್ರಹರಣ, ಆಯುಧ, ಅಸ್ತ್ರ, ಹೇತಿಗೆ, ಸಮಾಖ್ಯೆ, ಕೇವಳ, ಶಸ್ತ್ರಿಕೆ, ಯಷ್ಟಿ (೧.೧೪.೧೩)

ಹೀಗೆ ಯುದ್ಧಕ್ಕೆ ಸಂಬಂಧಿಸಿದ ವಿಜಯಪತಾಕೆ, ಪದಾತಿ, ಸೇನಾಪತಿ, ರಥದಳ, ಅಶ್ವಸೇನೆ, ಕವಚ, ಪರಶು, ಅಸಿ, ಧನಸ್ಸು, ಭರ್ಜಿ, ರೂಣೀರ, ಬಾಣ, ವಿವಿಧ ಜಾತಿಯ ಕುದುರೆಗಳು, ಗಜಪಡೆ, ಅಂಕುಶ ಮುಂತಾದ ಪದಗಳ ಅರ್ಥಗಳನ್ನು ನಾಗವರ್ಮನು ತಿಳಿಸಿದ್ದಾನೆ.

೧೫. ಪಶುವರ್ಗಂ:

ಈ ಭಾಗದಲ್ಲಿ ಸಾಕುಪ್ರಾಣಿಗಳು ಮತ್ತು ಅವುಗಳನ್ನು ಕರೆಯುವ ಪರ್ಯಾಯ ಹೆಸರುಗಳನ್ನು ತಿಳಿಸಲಾಗಿದೆ.

---

೯೮. ಎ. ವೆಂಕಟರಾವ್, ಪಂಡಿತ ಎಚ್. ಶೇಷಯ್ಯಂಗಾರ್ (ಸಂ) : **ನಾಗವರ್ಮ ಕೃತಮಪ್ಪ ಅಭಿಧಾನ ವಸ್ತುಕೋಶಂ** ; ಪುಟ.೭೫
೯೯. **ಅದೇ** ; ಪುಟ.೮೨

ವೃಷಭ = ಸೌರಭೇಯ, ಗೋಪತಿ, ವೃಷ, ಬಲೀವರ್ದ, ಶಾಕ್ವರೋಕ್ಷ, ಕಕುದ, ಮದ್ರು, ವೃಷಭಾಖ್ಯ, ಮನಡ್ವಾಹ, ವಷಾಮ, ಅಂತದಱ, ಶೃಂಗ, ಹಿಣಿಲ, ಕಕುದ (೧.೧೫.೧), ಸೀರಾದಿವಾಹಕ, ಸೈರಿಕ, ಶಾಕಟ, ಶಕಟಾಖ್ಯ, ಪೃಷ್ಠವಾಹ್ಯ, ಸೌಧಿರಿಕ (೧.೧೫.೨).

ಅವಿ = ಮೇಷ, ವುರಂಭ್ರ, ಮೇಂಡ, ವದೇಳಕ, ವೃಷ್ಣುರಣ, ಛಾಗವಜ, ಬಸ್ತ, ಛಗ (೧.೧೫.೧೧)

ಹಸು, ಎಮ್ಮೆ, ಕುದುರೆ, ಶ್ವಾನ, ಹೋರಿ ಮುಂತಾದ ಸಾಕುಪ್ರಾಣಿವರ್ಗದ ಅರ್ಥವಿವರಣೆಗಳನ್ನು ಕೊಡುತ್ತಾನೆ ನಾಗವರ್ಮ.

೧೬. ಧಾನ್ಯವರ್ಗಂ:

ಈ ಭಾಗಕ್ಕೆ ನಾಗವರ್ಮನು ಧಾನ್ಯವರ್ಗ ಎಂದು ಹೆಸರಿಸಿದರೂ, ಇದರಲ್ಲಿ ಪ್ರಾಣಿಜನ್ಯ ಆಹಾರ, ಪಾನೀಯ, ತೃಣಧಾನ್ಯಗಳು, ಬೇಳೆಕಾಳು, ಷಡ್ಧಾನ್ನ ಮುಂತಾದವುಗಳ ಪರ್ಯಾಯಾರ್ಥಗಳನ್ನು ತಿಳಿಸಿದ್ದಾನೆ.

ಕ್ಷೀರ = ಹಾಲು, ದುಗ್ಧ, ದಧಿಸಾರ.

ಹಯ್ಯಂಗ = ನವನೀತ, ಗೋರಸ, ದಂಡಾಹತ, ಮಥಿತಾರಿ (೧.೧೬.೧)

ವ್ಯಂಜನ = ನಿಷ್ಠಾನ, ಗಂಜಿ, ಯಾವಾಗೂಪ್ಲಿಕಾ, ವಿಲೇಪಿ (೧.೧೬.೪).

ಮೈರೇಯ = ಮಾಸವ, ಮಧು, ಹಾರಹುರ, ಪ್ರಸನ್ನೆ, ವಾನ, ಕಲ್ಯ, ವಾರುಣಿ, ಕಾದಂಬರಿ, ಯುದುಸೀರಿಪ್ರಿಯ, ಸೀಧು, ಮದಿರೆ, ಸುರೆ, ಕಳ್ಳು (೧.೧೬.೫).

ಜೋಳ, ಎಳ್ಳು, ಅಲಸಂದೆ, ಪ್ರಿಯಂಗು, ಕಂಗು, ಸಾಸುವೆ, ಬಿಳಿಸಾಸುವೆ, ಸದಕ, ಅಕ್ಕಿ ಮುಂತಾದ ಧಾನ್ಯಗಳ ಪರ್ಯಾಯಾರ್ಥಗಳನ್ನು ಈ ಭಾಗದಲ್ಲಿ ಹೇಳುತ್ತಾನೆ.

ಹೀಗೆ 'ಅಭಿಧಾನ ವಸ್ತುಕೋಶ'ದ ಮೊದಲನೆಯ 'ಅವಿಭಿನ್ನಾರ್ಥ ಕಾಂಡ'ದಲ್ಲಿ ಇಮ್ಮಡಿ ನಾಗವರ್ಮನು ಹಲವಾರು ವಸ್ತುವಿಷಯಗಳನ್ನು ತಿಳಿಸಿ ಅವುಗಳಿಗಿರುವ ಪರ್ಯಾಯ ಪದಗಳ ವಿವರಗಳನ್ನು ಕೊಡುತ್ತಾನೆ. ಈ ಮೊದಲ ಕಾಂಡದ ಕೊನೆಯಲ್ಲಿ ಪ್ರಶಸ್ತಿವಾಕ್ಯವನ್ನು ಹೇಳುತ್ತಾನೆ.

೨) ಸಾಮಾನ್ಯ ಕಾಂಡಂ:

ಇಮ್ಮಡಿ ನಾಗವರ್ಮನು ತನ್ನ 'ಅಭಿಧಾನ ವಸ್ತುಕೋಶ'ದ ಎರಡನೆಯ ಕಾಂಡದಲ್ಲಿ ವಿಶೇಷಣ ವರ್ಗ ಮತ್ತು ವಿಶೇಷ್ಯ ವರ್ಗ ಎಂದು ಎರಡು ಭಾಗಗಳನ್ನು ಮಾಡಿ ಪದಗಳಿಗೆ ಅರ್ಥಗಳನ್ನು ಹೇಳುತ್ತಾ ಹೋಗುತ್ತಾನೆ.

"ಪ್ರಕೃತಿ ವಿಶೇಷ್ಯಾಧೀನಂ
ಪ್ರಕೀರ್ಣವರ್ಗಂ ಕ್ರಿಯಾಗುಣ ದ್ರವ್ಯಪರಂ
ಪ್ರಕಟಾರ್ಥಮಿದೆನೆ ಸಾಮಾ
ನ್ಯಕಾಂಡಮಂ ಸಪ್ರಪಂಚಮಂ ವರ್ಣಿಸುವೆಂ ॥೨.೧.೧॥"[೨೦೦]

---

೨೦೦. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಅಭಿಧಾನ ವಸ್ತುಕೋಶ** ; ಪುಟ. ೩೫೬

೧. ವಿಶೇಷಣ ವರ್ಗಂ:

ಪರ = ಪ್ರಧಾನ, ಪ್ರವರ, ಪ್ರವೇಕ, ವರ, ವರೇಣ್ಯ, ಪ್ರಮುಖ, ಪ್ರಬರ್ಹ, ಪುರೋಗಮ, ಪ್ರಾಗ್ರಹರ, ವರೀಯ, ವರಿಷ್ಠ, ಅಗ್ರೇಸ, ಅಗ್ರಗಣ್ಯ (೨.೧.೨).

ಪ್ರತಿಭೆ = ಸಂವಿತಪ್ರಜ್ಞೆ, ಮತಿ, ಮೇಧಾ, ಬುದ್ಧಿ, ಶೇಮುಷೀ, ಚಿತ್‌ಪ್ರೇಕ್ಷೆ, ಪ್ರತಿಪತ್ತಿ, ಧೀ (೨.೧.೩).

ಸೂರಿ = ಬುಧ, ಕವಿ, ವಾಗ್ಮಿ, ವಿಶಾರದ, ಅಭಿರೂಪ, ಅನ್ವಿತ, ದೋಷಜ್ಞ, ಧೀರ, ಕೃತಿಕೃಷ್ಟಿ, ಸಭಾಸ್ತಾರ, ಸಭ್ಯ, ಸಭಾಸದ, ವಿದ್ವಾಂಸ (೨.೧.೪).

ಕೃತಹಸ್ತ = ಕುಶಲ, ಶಿಕ್ಷಿತ, ಪ್ರವೀಣ, ವಿಚಕ್ಷಣ, ನಿಷ್ಣಾತ, ಕೃತಮತಿ, ನಿಪುಣ, ವಿಜ್ಞ, ಕೃತಕರ್ಮ, ಕೋವಿದ, ವಿದ, ಜಾಣ (೨.೧.೫)

ಹೀಗೆ ಮುಂದುವರೆದು, ಮೋಸಗಾರ, ಮೂರ್ಖ, ದುರ್ಜನ, ಸಜ್ಜನ, ಅರಸ, ಶತ್ರು, ಕುಲಜ, ಶೂರ, ವಾಚಾಳಿ, ಭೋಗಿ, ದುಃಖಿ, ವಿಘ್ನ, ಪಂಚಜ, ಜಂತು, ಗ್ರಾಮ, ಗಣಿತ, ಯುಗಳ, ಪ್ರತಿಬಂಧ, ಕ್ಷೀಣ, ಮೃದು, ಕಠಿಣ, ಪೂರ್ಣ, ಭಿನ್ನ, ಮೃಗತ್ವ, ಮಧುರ, ಭೈರವ, ಉದ್ಭಟ, ಅಖಿಲ, ಚಾರು, ರಮ್ಯ, ಚಪಲ, ಮಲಿನ, ಕೃಷ್ಣ ಮುಂತಾಗಿ ಮನುಷ್ಯರ ಗುಣಾವಗುಣಗಳು, ಲೋಕದಲ್ಲಿರುವ ಕಪ್ಪು, ನೀಲಿ, ಹಸಿರು, ಕೆಂಪು, ಅರಿಸಿಣ, ಕಪ್ಪುಹಸಿರು, ಕಡುಗೆಂಪು, ವರ್ಣಗಳು ಹೀಗೆ ಹತ್ತು ಹಲವಾರು ಸಾಮಾನ್ಯ ವಿಷಯಗಳ ಕುರಿತಾಗಿ ಹೇಳಿ ವಿವಿಧಾರ್ಥಗಳನ್ನು ಹೇಳಲಾಗಿದೆ.

೨. ವಿಶೇಷ್ಯ ವರ್ಗಂ:

> **"ಅನುಭವಮುಪಭಗಂ ಭುಕ್ತಿ ನಿರ್ವೇಶನಾಮಂ**
> **ವಿನಮದು ವಶಿತ್ವಂ ಪ್ರಶ್ರಯಂ ಭಕ್ತಿಭಾವಂ**
> **ಅನುಶಯಮನುತಾಪಂ ವಿಪ್ರತೀಸಾರಮಕ್ಕುಂ**
> **ಮನದೊಳೊಗೆದ ಚಿಂತಾಪೀಡೆ ತಾನಾಧಿ ಶೋಕಂ ॥೨.೨.೧॥"**[೨೦೧]

ಪರಿಭೂತಿ = ನಿಕಾರ, ಅನಾದರ, ತಿರಸ್ಕಾರ, ಅಭಿಭವ, ಭಂಗ.

ಸತ್ಕಾರ = ಸಂಭಾವನೆ, ಆದರ, ಪುರಸ್ಕಾರ, ಮನ್ನಣೆ. (೨.೨.೨)

ದೋಹಲ = ಇಚ್ಛೆ, ಮನೋರಥ, ಈಹೆ, ಸ್ಪೃಹೆ, ಅಕಾಂಕ್ಷೆ, ವಾಂಛೆ, ಅಭಿಲಾಷೆ.

ಕೌತುಹಲ = ಕುತೂಹಲ, ಕೌತುಕ, ಕುತುಕ (೨.೨.೩)

ಸ್ನೇಹ = ಅಜರ್ಯ, ಸಖ್ಯ, ಸೌಹಾರ್ದ, ಪ್ರೀತಿ, ಮೈತ್ರಿ, ಸೌಹೃದ.

ವಿದ್ವೇಷ = ದ್ರೋಹ, ವೈರ, ವಿರೋಧ, ಹಗೆ (೨.೨.೪)

ಈ ಭಾಗದಲ್ಲಿ ನಾಗವರ್ಮನು ಮನುಷ್ಯನ ಅಂತರ್ಗತದಲ್ಲಿ ಅಂದರೆ ಮನಸ್ಸಿನ ಆಳದಲ್ಲಿ ನಡೆಯುವ ಹಲವಾರು ರೀತಿಯ ಚಂಚಲತೆಗಳು, ಶಂಕೆ, ಚಿಂತೆ, ಕಪಟ, ಸಾಹಸ, ಕ್ಷಮೆ,

---

೨೦೧. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ : **ನಾಗವರ್ಮ ಸಂಪುಟ–ಅಭಿಧಾನ ವಸ್ತುಕೋಶ** ; ಪುಟ. ೩೬೭

ಶೌರ್ಯ, ವಿತರ್ಕ, ಸಂದೇಹ, ವಿಯೋಗ, ಉಪವಾಸ, ವ್ರೀಡೆ, ವೇದನೆ, ಚೈತನ್ಯ, ಮರೆವು, ಪೀಡೆ, ಸುಖ, ಶಾಂತಿ, ಸಂತೋಷ, ದುಃಖ, ದುರಿತ, ಲಜ್ಜೆ, ಆವೇಶ, ರತಿಭಾವ, ಪರಗಮನ, ಪಾರಾಯಣ ಮುಂತಾದ ಅಂಶಗಳಿಗೆ ಸಮಾನಾರ್ಥಗಳನ್ನು ಹೇಳುತ್ತಾನೆ.

೩) ನಾನಾರ್ಥ ಕಾಂಡಂ:

ಇಮ್ಮಡಿ ನಾಗವರ್ಮನು ತನ್ನ 'ಅಭಿಧಾನ ವಸ್ತುಕೋಶ'ದ ಮೂರನೆಯ ಕಾಂಡದಲ್ಲಿ ಒಂದೇ ಪದಕ್ಕಿರುವ ವಿಭಿನ್ನಾರ್ಥಗಳನ್ನು ತಿಳಿಸಿದ್ದಾನೆ.

"ಪಲವುಂ ಶಬ್ದಂಗಳ್ ಕೇ
ವಲ ಮಪ್ಪಂತೇಕಶಬ್ದದೊಳ್ ವಿರಚಿಸಿದಂ
ಪಲವರ್ಥಂಗಳು ಮಿನ್ನಿ
ರ್ಮಲಮಪ್ಪಂತೇಕಶಬ್ದದೊಳ್ ವಿರಚಿಸುವೆಂ ॥೩.೧.೧॥"[೨೦೨]

ನಾಗವರ್ಮನು ಇದುವರೆಗೂ ಹಲವು ಪದಗಳಿಂದ ಒಂದೇ ಶಬ್ದದ ಅರ್ಥಗಳನ್ನು ನೋಡಿಯಾಯಿತು, ಇನ್ನು ಮುಂದೆ ಒಂದೇ ಪದಕ್ಕಿರುವ ಹಲವಾರು ಅರ್ಥಗಳನ್ನು ತಿಳಿಸುತ್ತೇನೆಂದು ಹೇಳಿ, ಮುಂದುವರೆಯುತ್ತಾನೆ.

ಜಿನ = ಅರಿಹಂತ, ಕಮಲನಾಭ; ಶಿವೆ = ಗೌರಿ, ಹರೀತಕಿ (ಸಸ್ಯ); ಘೂಕ = ವಾಸವ, ಕೌಶಿಕ; ಜವ = ವಾಯುವೇಗ, ಯಮ; ಪ್ರಭು = ರಾಜ, ಗಂಡ; ಅವಿ = ರವಿ, ಕುಜೆ; ಭಾನು = ವಿಲೋಕ, ಅಂಶುಮಾಳಿ (ಸಸ್ಯ), ಶಿಖಿ = ಅಗ್ನಿ, ಶಿಖಿಯೆಂಬ ಸಸ್ಯ; ಸ್ಥಾಣು = ರುದ್ರ, ಕೀಲಕ; ಶಲಭ = ಪತಂಗ, ವಿನನು; ಜೈವಾತೃಕ = ಚಂದ್ರ, ಚಿರಾಯು; ಜೀವನ = ನೀರು, ಜೀವಿತ; ಧನ = ವಿಕ್ರಮ, ಸಂಪತ್ತು; ಲೋಕ = ಜನ, ಜಗತ್ತು; ಸ್ಥೂಲ = ಜಡ, ಪಿರಿದು; ಜಾಲ = ಮೂರ್ಖನಾಗಿಸುವವನು, ಡಾಂಭಿಕ; ಕಾಲ = ಅವಧಿ, ವೇಳೆ; ರಾಗ = ಮುದ, ಕೆಂಪು; ಯೋಗ = ಧ್ಯಾನ, ಸಂಗತಿ; ತರಳ = ಚಂಚಲರೂಪ, ಹಾರೋಪನ. ಹೀಗೆ ೧೩೬ ಪದ್ಯಗಳಲ್ಲಿ ಸುಮಾರು ೪೦೦ಕ್ಕೂ ಹೆಚ್ಚು ಪದಗಳಿಗೆ ಇರುವ ವಿಭಿನ್ನಾರ್ಥಗಳನ್ನು ಈ ಕಾಂಡದಲ್ಲಿ ನಾಗವರ್ಮನು ತಿಳಿಸಿದ್ದಾನೆ.

ಹೀಗೆ ಇಮ್ಮಡಿ ನಾಗವರ್ಮನು 'ಅಭಿಧಾನ ವಸ್ತುಕೋಶ'ದಲ್ಲಿ ತನ್ನ ಕಾಲಾವಧಿಯಲ್ಲಿ ಅಂದರೆ ೧೧ನೆಯ ಶತಮಾನದ ಪೂರ್ವಾರ್ಧದಲ್ಲಿ ಭೌಗೋಳಿಕ ಪ್ರದೇಶ, ಪರಿಸರ, ಗ್ರಾಮೀಣ ಪ್ರದೇಶ, ನಗರಗಳಲ್ಲಿ ಬಳಕೆಯಲ್ಲಿದ್ದ ಪದಾರ್ಥಗಳು, ಪ್ರಾದೇಶಿಕವಾಗಿ ಬಳಕೆಯಾಗುವ ಪದಗಳು, ವಿದ್ಯಾವಂತ ಗುಂಪಿನಲ್ಲಿ ಚರ್ಚಿತವಾಗುವ ವಿಷಯಗಳು, ಗ್ರಾಮ್ಯ ಪದಗಳು ಮುಂತಾಗಿ ಚರ್ಚಿಸಿದ್ದಾನೆ.

---

೨೦೨. ಎ. ವೆಂಕಟರಾವ್, ಪಂಡಿತ ಎಚ್. ಶೇಷಯ್ಯಂಗಾರ್ (ಸಂ) : **ನಾಗವರ್ಮ ಕೃತಮಪ್ಪ ಅಭಿಧಾನ ವಸ್ತುಕೋಶಂ** ; ಪುಟ.೧೧೭

೪.೪.೩. ಕೇಶಿರಾಜ (೧೨೬೦):

ಕೇಶಿರಾಜನು ತನ್ನ 'ಶಬ್ದಮಣಿದರ್ಪಣ' ಕೃತಿಯ 'ಧಾತುಪ್ರಕರಣಂ', 'ಅಪಭ್ರಂಶ ಪ್ರಕರಣಂ', ಹಾಗೂ 'ಅವ್ಯಯ ಪ್ರಕರಣಂ' ಎಂಬ ಕೊನೆಯ ಮೂರು ಪ್ರಕರಣಗಳಲ್ಲಿ ಶಬ್ದಕೋಶವನ್ನು ಕೊಡುತ್ತಾನೆ. ಕೇಶಿರಾಜನ ಪರಿಚಯವನ್ನು ಇದೇ ಅಧ್ಯಾಯದ ವ್ಯಾಕರಣಶಾಸ್ತ್ರ ಭಾಗದಲ್ಲಿ ನೀಡಲಾಗಿದೆ.[೨೦೩]

೪.೪.೩.೧. ಶಬ್ದಮಣಿದರ್ಪಣಂ:

"ವೇದಸಮನಾಗಿ ಭೀಮನಿ
ನಾದುದು ಸಂಸ್ಕೃತದ ಧಾತುವಾ ತೆಱದಿಂದಂ
ಯಾದವ ಕಟಕಾಚಾರ್ಯನಿ
ನಾದುದು ಕರ್ಣಾಟಧಾತು ಕವಿಕೇಶವನಿಂ ॥೬.೧॥"[೨೦೪]

ಭೀಮಕವಿಯಿಂದ ವೇದಸಮನಾಗಿ ರಚಿತವಾದ ಸಂಸ್ಕೃತ ಧಾತುವಿನಂತೆಯೇ ಯಾದವ ಕಟಕಾಚಾರ್ಯನಾದ ಕವಿಕೇಶವನು ಕರ್ಣಾಟಧಾತುವನ್ನು ರಚಿಸುವನು ಎಂದು ಹೇಳಿಕೊಂಡಿದ್ದಾನೆ ಕೇಶಿರಾಜ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಪದಗಳನ್ನು ಇಲ್ಲಿ ಉದಾಹರಿಸಲಾಗಿದೆ.

೧) ಧಾತು ಪ್ರಕರಣಂ : ಆರನೆಯ ಸಂಧಿ

ಈ ಪ್ರಕರಣದಲ್ಲಿ ಕನ್ನಡದ ವರ್ಣಮಾಲೆಗಳನ್ನಾಧರಿಸಿ, 'ಕ'ಕಾರಾದಿ ವ್ಯಂಜನಾಂತವಾಗಿ 'ಅ'ಕಾರಾದಿ ಪದಗಳಿಗೆ ಸಮಾನ ಪದಗಳನ್ನು ತಿಳಿಸಿದ್ದಾನೆ.

೧. ಸ್ವರಧಾತು

ಈ = ಪ್ರದಾನೇ	ಓ = ಸ್ನೇಹೇ

೨. ಕಾಂತಕ್ಕೆ

ಅಡುಕು = ಸ್ಥಾನಾಂತರ ಪ್ರಣೀತೆ	ಅಟ್ಟು = ಜೀರ್ಣ	ಅಳ್ಕು = ಭಯ
ಇಕ್ಕು = ಹೊಡೆ	ಇಱುಕು = ನಿಗ್ರಹ	ಉಲುಕು = ಶರೀರಸ್ಫುಣ
ಎಕ್ಕು = ವಿಭಜನ	ಒಕ್ಕು = ಶಕುನ	ಕೀ = ಕೀವು
ಕುಟುಕು = ಒತ್ತಾಗಿ ತುಂಬು	ಕೂಂಕು = ಹೋಗು	ನಕ್ಕು = ಲೇಪನ
ಮುಱುರುಕು = ಮುಖವಿಕಾರ	ಸೊರ್ಕು = ಉನ್ಮಾದ	ಹಲುಕು = ಮರಹತ್ತುವುದು

೩. ಗಾಂತಕ್ಕೆ

ಅಗಿ = ಭಯ, ಹರ್ಷ	ಉಗು = ವಿಸರ್ಜನೆ	ಎಱಗು = ನಮಸ್ಕರಿಸು
ಕಡಂಗು = ಆಸೆಪಡು	ತೂಗು = ತುಲನೆಮಾಡು	ನಡುಗು = ಕಂಪನ
ಬಗಿ = ಭಾಗಿಸು	ಮಡಗು = ಮುಚ್ಚಿಡು	ಸುಗಿ = ಭಯ

---

೨೦೩. ನೋಡಿ, ಅಧ್ಯಾಯ–೪.೩.೨. **ಕೇಶಿರಾಜ** ; ಪುಟ. ೨೫೨

೨೦೪. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ** ; ಪುಟ. ೨೨೬

೪. ಚಾಂತಕ್ಕೆ

ಅಗುಟ್ಚು = ಜಲಾಶಯಮಗ್ನ ಉದಿರ್ಚು = ಅಧಃಪತನ ಕಡೆಗಣ್ಚು = ತಿರಸ್ಕರಿಸು

ಚುರ್ಚು = ದಾಹ ನಚ್ಚು = ವಿಶ್ವಾಸ ಪಳಂಚು = ಸಂಘಟಿಸು

ಪೆರ್ಚು = ವಿಸ್ತಾರ ಬಾರ್ಚು = ರಾಶಿಹಾಕು ಸುರುಳ್ಚು = ಸಂಕೋಚನ

೫. ಜಾಂತಕ್ಕೆ

ಅಂಜು = ಭಯ ನಂಜು = ರುಚಿನೋಡು ಮಾಂಜು = ಮರೆಮಾಡು

೬. ಟಾಂತಕ್ಕೆ

ಅಟ್ಟು = ಓಡಿಸು ಈಂಟು = ಕುಡಿಯುವುದು ಕಟ್ಟು = ಬಂಧನ

ದಾಂಟು = ಲಂಘನ ಬೆಟ್ಟು = ಪರ್ವತ ಸುರುಂಟು = ಸಂಕೋಚನ

೭. ಡಾಂತಕ್ಕೆ

ಅಡು = ಪಚನ ಊಳಿಡು = ನರಿ ಕೂಗು ಔಡು = ಹಲ್ಲುಕಚ್ಚು

ಕಡಿ = ಖಂಡಿಸು ತಡೆ = ಕಾಲಕ್ಷೇಪ ಪಾಡು = ಗಾನ

ಮೊಗಂಬಡು = ಸಮಾಧಾನಿಸು ಸೆಡು = ಪೋಣಿಸು ಹೂಡು = ಯೋಜಿಸು

೮. ಣಾಂತಕ್ಕೆ

ಅಣೆ = ಸ್ಪರ್ಶ ಕಾಣ್ = ನೋಡು ತಣಿ = ತೃಪ್ತಿ

ನೊಣೆ = ನುಂಗು ಪೆಣೆ = ಸಂಯೋಗ ಸೆಣೆ = ಕ್ರೋಧ

೯. ತಾಂತಕ್ಕೆ

ಒತ್ತು = ಆಕ್ರಮಿಸು ಕುತ್ತು = ಕೇಡು ಬಿತ್ತು = ಬೀಜಸ್ಥಾಪನೆ

೧೦. ದಾಂತಕ್ಕೆ

ಅಟ್ದು = ಮುಳುಗು ಕಾದು = ಯುದ್ಧ ನಂದು = ನಾಶವಾಗು

ಮಿದಿ = ಕುಟ್ಟು ಸುಂದು = ಮೈಥುನ ಹೊಂದು = ಮರಣ

೧೧. ನಾಂತಕ್ಕೆ

ಆನ್ = ಧಾರಣೆ ಕುನಿ = ಬಾಗು ತಿನ್ = ಖಾದನ

ನೋ = ವ್ಯಥೆ ಮುನಿ = ಕ್ರೋಧ, ತಪಸ್ವಿ ಹನಿ = ಬಿಂದುಪತನ

೧೨. ಪಾಂತಕ್ಕೆ

ಅಪ್ಪು = ಆಲಿಂಗನ ಉರಿಪು = ಅಗ್ನಿಬಾಧೆ ಕಳಿಪು = ಅನುಗಮನ

ಕೆಡಪು = ಬೀಳಿಸು ತಣಿಪು = ತೃಪ್ತಿ ತಪ್ಪು = ಸ್ಖಲನ

ನೆರಪು = ಸಂಗ್ರಹ ಮುಡಿಪು = ಸಾಯಿಸು ಸೊಪ್ಪು = ನಿವಾರಣೆ

೧೩. ಬಾಂತಕ್ಕೆ

ಅಂಬು = ಬಾಣ, ಒಣಗು	ಕಱುಂಬು = ಅಸೂಯೆ	ಗೆರ್ಬು = ಮೈಥುನ
ನಾಂಬು = ಆಲಸ್ಯ	ಪರ್ಬು = ವಿಸ್ತಾರ	ಬೇ = ದಾಹ

೧೪. ಮಾಂತಕ್ಕೆ

ಅಣ್ಮು = ಪೌರುಷ	ಕುಮ್ಮು = ಕುಟ್ಟು	ನಮೆ = ಬಡವಾಗು
ಮೀ = ಸ್ನಪನ, ಜಳಕ	ಸಮೆ = ನಿರ್ವಹಣೆ	ಹಮ್ಮು = ರಜ್ಜುಕ್ರಿಯೆ

೧೫. ಯಾಂತಕ್ಕೆ

ಅಪ್ಪುಕೆಯ್ = ಅಂಗೀಕಾರ	ಆರಯ್ = ಅನ್ವೇಷಣೆ	ಕಾಯ್ = ಕೋಪ
ಪೊಯ್ = ತಾಡನ	ಬಯ್ = ನಿಕ್ಷೇಪ, ಬಚ್ಚಿಡು	ಸುಯ್ = ಉಸಿರಾಟ

೧೬. ರಾಂತಕ್ಕೆ

ಅಡರ್ = ಆರೋಹಣ	ಉದಿರ್ = ಪತನ	ಕರಿ = ಅತಿದಾಹ
ತೊಡರ್ = ಬಂಧನ	ಪೊರೆ = ಪೋಷಣೆ	ಬಿರಿ = ಸ್ಫುಟನ
ಸುರಿ = ಗಲನ	ಹರಿ = ಧಾವಿಸು	ಹೀರ್ = ರಸಾಸ್ವಾದನೆ

೧೭. ಲಾಂತಕ್ಕೆ

ಅಂಡಲೆ = ತೊಂದರೆಪಡಿಸು	ಎೞಲ್ = ಆಲಂಬನ	ಕಲ್ = ಅಭ್ಯಾಸ
ತೊೞಲ್ = ಭ್ರಮಣೆ	ಪುಯಿಲ್ = ಆರ್ತಧ್ವನಿ	ಸೋಲ್ = ಪರಾಜಯ

೧೮. ವಾಂತಕ್ಕೆ

ಅವಿ = ಮರೆಯಾಗು	ಎೞವು = ತೊಡೆಗಳು	ಗರವು = ಸರ್ವಾಕರ್ಷಣೆ
ತಡವು = ಸ್ಥಿಮಿತಭಾವ	ತೀವು = ಪೂರಣ	ಸೀವು = ಅಲಂಕರಿಸು

೧೯. ಸಾಂತಕ್ಕೆ

ಅಡಸು = ತುರುಕು	ಉಬ್ಬರಿಸು = ಪೂರಣ	ಕಿನಿಸು = ಕೋಪಗೊಳ್ಳು
ಜಾನಿಸು = ಧ್ಯಾನ	ನಸಿ = ಸವೆ	ಬಿಕ್ಕಳಿಸು = ಉದ್ಗಾರ
ಮುದ್ರಿಸು = ಅಂಗೀಕಾರ	ಸೋಲಿಸು = ಅಪಜಯ	ಹೇಸೆ = ಜುಗುಪ್ಸೆ

೨೦. ಱಾಂತಕ್ಕೆ

ಅಱಿ = ಜ್ಞಾನ	ಒದಱು = ಆಸ್ಫೋಟನ	ಗಜಱು = ಘರ್ಜನೆ
ನೆಱೆ = ಸಮಗ್ರತ್ವ	ಮಾಱು = ವಿಕ್ರಯ	ಸುಱಿ = ಲೇಪನ

೨೧. ೞಾಂತಕ್ಕೆ

ಅಗುೞ್ = ಮುಳುಗು	ಕೊೞೆ = ಜೀರ್ಣ	ಪೊಗೞ್ = ಸಂಸ್ತವನ

ಬೀೞ್ = ಪತನ	ಸುೞಿ = ಭ್ರಮಣ	ಹಿೞಿ = ಹಿಂಡುವುದು

೨೨. ಳಾಂತಕ್ಕೆ

ಅಸುಂಗೊಳ್ = ಸಾಯಿಸು	ಕಣ್ಗೊಳ್ = ದರ್ಶನೀಯ	ಕೇಳ್ = ಆಕರ್ಣನೇ
ನಳಿ = ನಮನ	ಬೆಂಕೊಳ್ = ಅನುಧಾವನ	ಸೆಳೆ = ಆಕರ್ಷಣೆ

ಹೀಗೆ 'ಶಬ್ದಮಣಿದರ್ಪಣ'ದ ಧಾತುಪ್ರಕರಣದಲ್ಲಿ ಕವಿ ಕೇಶಿರಾಜನು ಸುಮಾರು ೧೦೦೦ ಪದಗಳಿಗೆ ಸಮಾನಾರ್ಥಗಳನ್ನು ತಿಳಿಸಿದ್ದಾನೆ.[೨೦೫]

೨) ಅಪಭ್ರಂಶ ಪ್ರಕರಣಂ : ಏಳನೆಯ ಸಂಧಿ

"ಈಕ್ಷಿಸಿ ಶಿಕ್ಷಾಸೂತ್ರದ
ಲಕ್ಷಣಮಂ ಲೋಕರೂಢಿ ಕಿಡದವೊಲಱಿವರ್
ಲಕ್ಷಿಪುದು ನುಡಿಗಳೊಳ್ ಬಹು
ಳಾಕ್ಷೇಪಣಮಿಲ್ಲದಿರೆಯುಮಱಿಯದ ಕೆಲವಂ ॥೭.೧॥"[೨೦೬]

ಈ ಪ್ರಕರಣದಲ್ಲಿ ಶಿಕ್ಷಾಸೂತ್ರದ ಲಕ್ಷಣವನ್ನು ಪೂರ್ವಸೂರಿಗಳು ಹೇಳಿದಂತೆ ಲೋಕರೂಢಿಯಲ್ಲಿ ತದ್ಭವಗಳಾಗಿವೆ ಎಂದು ಹೇಳುತ್ತಾನೆ ಕೇಶಿರಾಜ. ಸಂಸ್ಕೃತದ ಪದಗಳು ಕನ್ನಡಕ್ಕೆ ಬರುವಾಗ ಅಲ್ಪ ಬದಲಾವಣೆಯಾಗಿ ಬರುವುದನ್ನೇ ಅಪಭ್ರಂಶ ಎನ್ನಲಾಗುವುದು. ಕೇಶಿರಾಜನು ಹೇಳಿದ ಬದಲಾವಣೆಗಳನ್ನು ಉದಾಹರಿಸಲಾಗಿದೆ.

೧. ಸಂಸ್ಕೃತದ ಶ, ಷ ಕಾರಗಳಿಗೆ ಸ ಕಾರವಾಗಿ ಬದಲಾಗುವುದು (ಸೂತ್ರ–೨೫೩)

ಅಶನಿ – ಅಸನಿ	ರಾಶಿ – ರಾಸಿ	ಶಾಲಣ – ಸಾಲನ
ಆಮಿಷ – ಆಮಿಸ	ಜ್ಯೋತಿಷ – ಜೋಯಿಸ	ಮೇಷ – ಮೇಸ

೨. ಪದವಿರಳವಾಗುವಿಕೆ (ಸೂತ್ರ–೨೫೪)

ಇಂದ್ರ – ಇಂದರ	ಕ್ರಕಚ – ಕರಗಸ	ವರ್ಷ – ಬರಿಸ
ಅಲ್ಪ – ಅಲುಪ	ಲಗ್ನ – ಲಗುನ	ರತ್ನ – ರತುನ

೩. ಕ, ಚ, ಟ, ತ ಗಳು ತಮ್ಮ ವರ್ಗದ ಮೂರನೆಯ ಅಕ್ಷರ ಅಂದರೆ ಗ, ಜ, ಡ, ದ ಗಳಾಗುವವು (ಸೂತ್ರ– ೨೫೫).

ಆಕರ – ಆಗರ	ದೀಪಿಕಾ – ದೀವಿಗೆ	ಪೂರಿಕಾ – ಪೂರಿಗೆ
ಕಾಚ – ಗಾಜು	ವಚಾ – ಬಜೆ	ಸೂಚಿ – ಸೂಜಿ
ಅಟವಿ – ಅಡವಿ	ಕೋಟಿ – ಕೋಡಿ	ಪಟಲಕ – ಹಡಲಗೆ

---

೨೦೫. ರೆ. ಎಫ್. ಕಿಟೆಲ್ (ಸಂ), ಪಿ. ಮಂಗೇಶ ರಾವ್ (ಮರು ಸಂಪಾ.) : **ಕೇಶಿರಾಜ ಕವಿಯ ಶಬ್ದಮಣಿ ದರ್ಪಣಂ** (ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ) ; ಪುಟ. ೩೬೨ ರಿಂದ ೩೯೩
ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ** ; ಪುಟ. ೨೨೮ ರಿಂದ ೨೪೩
೨೦೬. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ** ; ಪುಟ. ೨೪೪

ಕೈತವ – ಕೈದವ	ಚತುರ – ಚದುರ	ಪ್ರಾಕೃತ – ಪಾಗದ

೪. ಮಹಾಪ್ರಾಣಾಕ್ಷರವು ಅದೇ ವರ್ಗದ ಅಲ್ಪಪ್ರಾಣಾಕ್ಷರವಾಗಿ ಬದಲಾಗುವುದು (ಸೂತ್ರ–೨೫೫)

ಖಜಾಕ – ಕಜಾಕ	ಖಂಕರಿ – ಕಂಕರಿ	ನಖ – ನಕ
ಛವಿ – ಚವಿ	ಛಂದ – ಚಂದ	ಛಿನ್ನ – ಚಿನ್ನ
ಕಠೋರ – ಕಟೋರ	ಕಂಠ – ಕಂಟ	ಮಠ – ಮಟ
ಕಥಾ – ಕತೆ	ಗ್ರಂಥ – ಗ್ರಂತ	ಮಿಥಿಳಾ – ಮಿತಿಳೆ
ಕಫ – ಕಪ	ಫಣಿ – ಪಣಿ	ಫಲ್ಗುಣ – ಪಲುಗುಣ

೫. 'ಖ'ಕಾರವು 'ಗ'ಕಾರವಾಗುವುದು (ಸೂತ್ರ–೨೫೬).

ಮುಖ – ಮೊಗ	ವೈಶಾಖ – ಬೇಸಗೆ

೬. 'ಛ' ಕಾರವು 'ಸ'ಕಾರ ಇಲ್ಲವೇ ಅಲ್ಪಪ್ರಾಣವಾಗುವುದು (ಸೂತ್ರ–೨೫೬).

ಇಚ್ಛಾ – ಇಚ್ಚೆ	ಮಚ್ಛರ – ಮಚ್ಚರ	ಛುರಿಕಾ–ಸುರಿಗೆ	ಛತ್ರಿಕಾ – ಸತ್ತಿಗೆ

೭. 'ಠ'ಕಾರವು 'ಡ'ಕಾರ, 'ಟ'ಕಾರವಾಗುವುದು (ಸೂತ್ರ–೨೫೭).

ಕುಠಾರ – ಕೊಡಲಿ	ಮಠ – ಮಡ	ಪೀಠಿಕಾ – ಪೀಳಿಗೆ	ಮಠಿಕಾ – ಮಳಿಗೆ

೮. 'ಪ' ಕಾರವು 'ವ', 'ಹ'ಕಾರವಾಗಿ ಬದಲಾಗುವುದು (ಸೂತ್ರ–೨೫೮).

ಕಪಿಲಾ – ಕವಿಲೆ	ತ್ರಿಪದಿ – ತಿವದಿ	ವಾಪಿ – ಬಾವಿ	ಪಾಶ – ಹಾಸ
ಪಂಥ – ಹಂತ	ಪಾದುಕೆ – ಹಾವುಗೆ	ಪಿಪ್ಪಲಿ – ಹಿಪ್ಪಲಿ	ಪಿಶುನ – ಹಿಸುನ

೯. 'ಬ'ಕಾರಕ್ಕೆ 'ವ'ಕಾರವೂ 'ವ'ಕಾರಕ್ಕೆ 'ಬ'ಕಾರವೂ ಬರುವುದು (ಸೂತ್ರ–೨೫೮).

ಕಬಳ – ಕವಳ	ವಿಬಂಧ – ವಿವಂದ	ವಸತಿ – ಬಸದಿ	ವಸಂತ – ಬಸಂತ

೧೦. 'ಯ' ಕಾರಕ್ಕೆ 'ಗ'ಕಾರ, 'ನ'ಕಾರ ಇಲ್ಲವೇ 'ಜ'ಕಾರವು ಆದೇಶವಾಗುವುದು (ಸೂತ್ರ–೨೫೯).

೧೧. 'ದ'ಕಾರವು 'ಜ'ಕಾರವಾಗುವುದು (ಸೂತ್ರ–೨೬೦)

೧೨. ರೇಫೆಯುಕ್ತ ದ್ವಿತ್ವಾಕ್ಷರವು ರೇಫೆ ಲೋಪವಾಗುವುದು ಇಲ್ಲವೇ ಕೇವಲ ದ್ವಿತ್ವವಾಗಿ ಬದಲಾಗುವುದು (ಸೂತ್ರ–೨೬೧).

೧೩. 'ಕ್ಷ'ಕಾರಕ್ಕೆ 'ಕ' ದ್ವಿತ್ವವಾಗುವುದು (ಸೂತ್ರ–೨೬೨).

೧೪. 'ಮ'ಕಾರವು 'ವ'ಕಾರವಾಗುವುದು (ಸೂತ್ರ–೨೬೩).

೧೫. 'ಚ'ಕಾರವು 'ಸ'ಕಾರವಾಗುವುದು.

೧೬. 'ಸ'ಕಾರವು 'ಚ'ಕಾರವಾಗುವುದು.

ಹೀಗೆ ನಾನಾ ರೀತಿಯಲ್ಲಿ ಸಂಸ್ಕೃತದಿಂದ ಕನ್ನಡಕ್ಕೆ ಬರುವ ಪದಗಳು ಅಲ್ಪ ಬದಲಾವಣೆಯಾಗುವುದನ್ನು ಸುಮಾರು ೪೭ ಸೂತ್ರಗಳೊಂದಿಗೆ ೧೦೦೦ಕ್ಕೂ ಹೆಚ್ಚು ಪದಗಳನ್ನು ಕೇಶಿರಾಜನು ಈ ಪ್ರಕರಣದಲ್ಲಿ ತಿಳಿಸಿದ್ದಾನೆ.

೩) ಅವ್ಯಯ ಪ್ರಕರಣಂ : ಎಂಟನೆಯ ಸಂಧಿ

“ಅನುಕೃತಿಪದಮೊದವೆಯುಮದು
ವನೆಮೆಂಬೆರಡುಂ ಪದಾಂತ್ಯದೊಳ್ ಬರೆಯುಂ ನೆ
ಟ್ಟನೆ ತಾವವ್ಯಯಮಪ್ಪುವು
ವನೆಯ ನಕಾರಂ ವಿಕಲ್ಪದಿಂದೆ ಗಕಾರಂ ॥೩೦೦॥”[೨೦೭]

ಈ ಪ್ರಕರಣದಲ್ಲಿ ಕೇಶಿರಾಜನು ಹಲವಾರು ಬಗೆಯಲ್ಲಿ ಆಗುವ ಬದಲಾವಣೆ ಮತ್ತು ಅವುಗಳಿಗಿರುವ ಪರ್ಯಾಯಾರ್ಥಗಳನ್ನು ತಿಳಿಸುತ್ತಾನೆ. ಮುಂದುವರೆದು ಅನುಕರಣಾವ್ಯಯ, ಗುಣವಾಚನಗಳನ್ನು ತಿಳಿಸುತ್ತಾನೆ.

ಅದುಗೆ = ನೂಂಕದು; ಅನೆಗೆ = ಕಮ್ಮನೆ, ಇಮ್ಮನೆ; ಭೋಂಕನೆ = ಚೆಕ್ಕನೆ, ಭೋರನೆ, ಭೋಂಕಲ್.

ಕೇವಲ ವ್ಯಾಕರಣ ಗ್ರಂಥವೆಂದೇ ಪ್ರಸಿದ್ಧಿಯನ್ನು ಪಡೆದಿರುವ ಶಬ್ದಮಣಿದರ್ಪಣವು ಕನ್ನಡದ ನಿಘಂಟುಶಾಸ್ತ್ರಕ್ಕೂ ಅತ್ಯುತ್ತಮ ಕೊಡುಗೆಯನ್ನು ನೀಡಿದೆಯೆಂಬುದರಲ್ಲಿ ಸಂದೇಹವಿಲ್ಲ. ಸಾಂಪ್ರದಾಯಿಕವಾಗಿ ಅವ್ಯಯಗಳನ್ನು ವಿಭಜಿಸಿಲ್ಲ. ಅವು ಕ್ರಿಯಾಶೂನ್ಯಾರ್ಥ, ಅಧಿಕಾರ್ಥ, ಶೀಘ್ರಾರ್ಥ, ಭ್ರಮಾರ್ಥ ಎಂದು ವಿಭಜಿಸಿ ಸರ್ವಸಂಗ್ರಾಹಕವಾಗಿ ನೀಡುತ್ತಾನೆ ಕೇಶಿರಾಜ.

೪.೪.೪. ಅಮೃತನಂದಿ (೧೩೦೦):

“ಇವನು ‘ಅಕಾರಾದಿ’, ‘ವೈದ್ಯನಿಘಂಟು’ಗಳನ್ನು ಬರೆದಿದ್ದಾನೆ. ಈತನು ಜೈನಕವಿ; ಸುಮಾರು ೧೩೦೦ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಇವನ ನಿಘಂಟುವಿನಲ್ಲಿ ಸಂಸ್ಕೃತ ಪದಗಳಿಗೆ ಕನ್ನಡದ ಪರ್ಯಾಯ ಶಬ್ದಗಳನ್ನು ಹೇಳಲ್ಪಟ್ಟಿದೆ.”[೨೦೮] ಸಾಮಾನ್ಯವಾಗಿ ಎಲ್ಲ ಪ್ರಾಚೀನ ಗ್ರಂಥಗಳು ಮಂಗಳ ಪದ್ಯಗಳೊಂದಿಗೆ ಆರಂಭವಾಗುತ್ತವೆ. ಆದರೆ ಕೃತಿಯ ಆದಿಯಲ್ಲಾಗಲೀ ಇಲ್ಲವೇ ಕೊನೆಯಲ್ಲಾಗಲೀ ಕವಿಯ ಕುರಿತಾದ ಯಾವುದೇ ವೈಯಕ್ತಿಕ ವಿಚಾರಗಳು ತಿಳಿಯದು.

೪.೪.೪.೧.ಅಕಾರಾದಿ ನಿಘಂಟು:

“ಅಕಾರಾದಿ ನಿಘಂಟನ್ನು ಕೇವಲ ಶಬ್ದಾರ್ಥದ ದೃಷ್ಟಿಯಿಂದ ಮಾತ್ರವಲ್ಲದೇ ಆ ಕಾಲದ ಕೃಷಿ, ವೈದ್ಯ, ನಾಮವಿಜ್ಞಾನ, ಸ್ಥಳನಾಮದ ಹಿನ್ನೆಲೆಯಲ್ಲಿಯೂ ಅಧ್ಯಯನ ನಡೆಸಬಹುದಾಗಿದ್ದು ಹಲವಾರು ಅಪೂರ್ವ ಸಂಗತಿಗಳ ಮೇಲೆ ಕ್ಷ ಕಿರಣ ಬೀರಬಲ್ಲುದು. ಹತ್ತಾರು ಸಸ್ಯಗಳ ಬೇರೆ ಬೇರೆ ತಳಿಗಳ ಬಗ್ಗೆ ಪ್ರಸ್ತುತ ನಿಘಂಟಿನಿಂದ ಮಾಹಿತಿ ಪಡೆಯಬಹುದು. ನಿದರ್ಶನಕ್ಕಾಗಿ ಬೇವಿನಲ್ಲಿ ಕಹಿಬೇವು, ಬೆಲ್ಲಬೇವು, ಕರಿಬೇವುಗಳ ಭೇದಗಳನ್ನೂ ಅಲ್ಲದೇ ಹೆಬ್ಬೇವು, ತುರುಕಬೇವುಗಳ ತಳಿಗಳನ್ನೂ ತಿಳಿಸಲಾಗಿದೆ.”[೨೦೯]

---

೨೦೭. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ** ; ಪುಟ. ೨೭೭
೨೦೮. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ** ; ಪುಟ. ೪೭೫
೨೦೯. ಡಾ. ವೈ. ಸಿ. ಭಾನುಮತಿ (ಸಂ) : **ಅಕಾರಾದಿ ನಿಘಂಟು ಮತ್ತು ವೈದ್ಯ ನಿಘಂಟು** ; ಪುಟ. ೦೮

ಹೆಸರೇ ಸೂಚಿಸುವಂತೆ ನಿಘಂಟುವಿನಲ್ಲಿ 'ಅ'ಕಾರಾದಿಯಾಗಿಯೇ ಪದಕೋಶವನ್ನು ರಚಿಸಿದ್ದಾನೆ ಅಮೃತನಂದಿ. ಇಡೀ ಕೃತಿಯನ್ನು ಅವಲೋಕಿಸಿದಾಗ ಇದರಲ್ಲಿ ಅಧಿಕವಾಗಿ ಸಸ್ಯಗಳ ಹೆಸರುಗಳನ್ನು ತಿಳಿಸಲಾಗಿದೆ. ಸಂಸ್ಕೃತದ ಪದಗಳಿಗೆ ಕನ್ನಡದಲ್ಲಿ ಸಮಾನಾರ್ಥಗಳನ್ನು ಹೇಳಲಾಗಿದೆ. ಅಲ್ಲದೇ ಕೀಟಗಳು, ಜಲಚರಗಳು, ಪಕ್ಷಿಗಳು, ಮೂಲಿಕೆಗಳು, ಪ್ರಾಣಿಗಳು, ಲೋಹಾದಿಗಳು, ವಿಷಜಂತುಗಳನ್ನೂ ತಿಳಿಸಲಾಗಿದೆ. 'ಅ'ಕಾರದಿಂದ 'ಕ್ಷ'ಕಾರದವರೆಗೆ ಈ ನಿಘಂಟುವಿನಲ್ಲಿ ಸುಮಾರು ೧೧೫೦೦ ಪದಗಳಿಗೆ ಕನ್ನಡ ಅರ್ಥವನ್ನು ತಿಳಿಸಿದ್ದಾನೆ ಅಮೃತನಂದಿ.

ತಿಲವೃಕ್ಷ, ಹರುವೆ, ಸೊಂಡೆ, ಸೋರೆ, ಗರುಗ, ಯಷ್ಟಿಮಧು, ಹುಣಿಸೆ, ಬಿಳಿ ಎಕ್ಕೆ, ಅರಳಿ, ಗೋಳಿ, ಕಕ್ಕೆ, ಇಂಗುಳ, ಅಗಸೆ, ನೀಲಿ, ಲೊಕ್ಕಿ, ಹೊನ್ನೆ, ಹೊನ್ನಾವರೆ, ಕೊಗ್ಗಿ, ಗುಳ್ಳ, ಕಣಗಿಲು, ಕಂಗು, ಈಚಲು, ರಕ್ತಚಂದನ, ಅತಿಬಜೆ, ಬಿಳಿಸಾಸುವೆ, ಈರುಳ್ಳಿ, ಗೊರಟೆ, ಗೇರು, ತಾವರೆ, ಕಳ್ಳಿ, ಶುಂಠಿ, ದ್ರಾಕ್ಷಿ, ಕಳ್ಳಂಗಡಲೆ, ಕಿರುನೆಲ್ಲಿ, ಕರಿಬೇವು, ಗಿರಿಕರ್ಣಿಕೆ, ಅಣಿಲೆ, ಕೋಳಿಕುಟುಮ, ಬೆಳ್ಳುಳ್ಳಿ, ಹಿಪ್ಪಲಿ, ಉಪ್ಪುಹುಲ್ಲು, ನೆಲ್ಲಿ, ಈಶ್ವರಿ, ನಾಗವಳ್ಳಿ, ಸಬ್ಬಸಿಗೆ, ಕಾಡಹೆಸರು, ದರ್ಭೆ, ಕುಂಕುಮ, ನೆಲಗುಳ್ಳ, ಅಂಬೆಹಳದಿ, ಅತ್ತಿ, ಕಕ್ಕೆ, ಅಜಶೃಂಗೀ, ಪಾದರಿ, ತಾರಿಕಾಯಿ, ಬ್ರಹ್ಮದಂಡಿ, ನೀಲಪುಷ್ಪ, ನೆಲಗುಂಬಳ, ಹಾಗಲ, ಲೋಳೆಸರ, ಸೌತೆ, ಅಶೋಕ, ಸಂಪಿಗೆ ಮುಂತಾಗಿ ಸಸ್ಯಗಳ ಹೆಸರುಗಳನ್ನು ತಿಳಿಸಿದ್ದಾನೆ. ಅಲ್ಲದೇ ಹಲವಾರು ಸ್ಥಳನಾಮಗಳನ್ನೂ ಈ ನಿಘಂಟುವಿನಲ್ಲಿ ತಿಳಿಸಿದ್ದಾನೆ. ಹಲವಾರು ಆಯುರ್ವೇದ ಸಸ್ಯಗಳ ಹೆಸರುಗಳನ್ನೂ ನಿತ್ಯ ಬಳಕೆಯ ವಸ್ತುಗಳ ಹೆಸರುಗಳನ್ನೂ ತಿಳಿಸಲಾಗಿದೆ.

೪.೪.೪.೨. ವೈದ್ಯನಿಘಂಟು:

ಈ ಕೃತಿಯಲ್ಲಿಯೂ ಸಹ ಎಲ್ಲಿಯೂ ಕೃತಿಕಾರನ ಹೆಸರಾಗಲೀ ಪೂರ್ವಾಪರ ವಿಚಾರಗಳಾಗಲೀ ಉಲ್ಲೇಖಿತವಾಗಿಲ್ಲ. "ವೈದ್ಯ ನಿಘಂಟಿನಲ್ಲಿ 'ಅಂಗಾರವಲ್ಲೀ' ಶಬ್ದದಿಂದ 'ಕ್ಷುದ್ರ ಸಹ್ಮ' ಶಬ್ದದವರೆಗೆ ಸುಮಾರು ೪೨೯೦ ಸಂಸ್ಕೃತ ಶಬ್ದಗಳಿಗೆ ಕನ್ನಡ ಪ್ರತಿಪದಗಳಿವೆ. ನಮ್ಮ ಪರಿಸರದಲ್ಲಿಯೇ ಇರುವ ದೊಡ್ಡಿಪತ್ರೆ, ನುಗ್ಗೆ, ನೇರಿಲು ಮುಂತಾದ ಶಬ್ದಗಳಿಗಿರುವ ವಿವಿಧ ಸಂಸ್ಕೃತ ರೂಪಗಳು ನಿಘಂಟಿನಲ್ಲಿ ಸಂಗ್ರಹಗೊಂಡಿದ್ದು ಈ ಸಸ್ಯಗಳು ವೈದ್ಯಕೀಯವಾಗಿ ಎಷ್ಟು ಮಹತ್ವಪೂರ್ಣವಾಗಿವೆ ಎಂಬುದರ ಸೂಚನೆಯಾಗಿದೆ. ಈ ಎರಡು ನಿಘಂಟುಗಳಲ್ಲಿ ಸಂಗ್ರಹಗೊಂಡಿರುವ ಸಸ್ಯಗಳು ಪರಿಸರದ ಶ್ರೀಮಂತ ಸಸ್ಯ ಸಂಪತ್ತಿನ ಪ್ರತೀಕ. ಇವುಗಳ ವೈದ್ಯಕೀಯ ಮಹತ್ವವನ್ನು ಅರಿಯುವುದು ಇಂದಿನ ಅಗತ್ಯವಾಗಿದೆ."[೨೧೦] ಸಾಂಸ್ಕೃತಿಕವಾಗಿ ಇಂತಹ ನಿಘಂಟುಗಳ ಅಧ್ಯಯನದ ಅಗತ್ಯತೆಯಿದೆ. ಅಕಾರಾದಿ ನಿಘಂಟಿನಲ್ಲಿರುವ ಹಲವಾರು ಪದಗಳು ವೈದ್ಯನಿಘಂಟುವಿನಲ್ಲಿ ಪುನರುಕ್ತಿಯಾಗಿವೆ. ಇವು ಆಯುರ್ವೇದ ಔಷಧ ಸಸ್ಯಗಳ ಉಲ್ಲೇಖಗಳು ಹಾಗೂ ಔಷಧೋಪಚಾರದ ಅಂಶಗಳನ್ನು ತಿಳಿಸಲಾಗಿದೆ. ಇದರಲ್ಲಿರುವ ನಾಲ್ಕು ಸಾವಿರಕ್ಕಿಂತಲೂ

---

೨೧೦. ಡಾ. ವೈ. ಸಿ. ಭಾನುಮತಿ (ಸಂ) : **ಅಕಾರಾದಿ ನಿಘಂಟು ಮತ್ತು ವೈದ್ಯ ನಿಘಂಟು** ; ಪುಟ. ೦೮

ಹೆಚ್ಚಿನ ಪದಗಳಲ್ಲಿ ಸುಮಾರು ೨೦೦೦ ಪದಗಳು ಸಸ್ಯಗಳಿಗಿರುವ ಕನ್ನಡ ಅರ್ಥಗಳನ್ನು ಹೇಳಿದ್ದಾನೆ.

೪.೪.೫. ದೇವೋತ್ತಮ (೧೬೦೦)

"ಈತನು 'ನಾನಾರ್ಥರತ್ನಾಕರ'ವೆಂಬ ನಿಘಂಟುವನ್ನು ಬರೆದಿದ್ದಾನೆ. ಇವನು ಜೈನಕವಿ. 'ದ್ವಿಜವಂಶಾರ್ಣವ ಪೂರ್ಣಚಂದ್ರನಿಪೀ ದೇವೋತ್ತಮಂ' ಎಂದು ಹೇಳಿಕೊಂಡಿದ್ದಾನೆ. ತನಗಿಂತಲೂ ಪೂರ್ವದ ನಿಘಂಟುಕಾರರನ್ನು ಸ್ಮರಿಸಿಕೊಂಡಿದ್ದಾನೆ–

ನಿಜಗೋಪಾಲಧನಂಜಯಾಭಿನವಮಾಚಂ ಭಾಗುರೀನಾಗನ
ರ್ಮಜಯಂತಾಮರಶಬ್ದಮಂಜರಿಬಲಾದ್ಯುಕ್ತಾಭಿಧಾನಾರ್ಥಮಂ ॥"[೨೧೧]

ಇಷ್ಟು ಹೊರತುಪಡಿಸಿದರೆ ದೇವೋತ್ತಮ್ಮನ ಕುರಿತಾದ ವೈಯಕ್ತಿಕ ವಿಚಾರಗಳು ತಿಳಿಯಲಾರವು.

೪.೪.೫.೧. ನಾನಾರ್ಥರತ್ನಾಕರ:

ದೇವೋತ್ತಮನ ಈ 'ನಾನಾರ್ಥರತ್ನಾಕರ'ದಲ್ಲಿ ಒಟ್ಟು ೧೯೯ ವೃತ್ತಗಳಿವೆ. ಇದರಲ್ಲಿ ಸಂಸ್ಕೃತದ ಪದಗಳಿಗೆ ಕನ್ನಡದಲ್ಲಿ ಅನೇಕಾರ್ಥಗಳನ್ನು ಹೇಳಲಾಗಿದೆ. ಗ್ರಂಥಾವತಾರದಲ್ಲಿ ಜಿನಸ್ತುತಿಯನ್ನು ಮಾಡಲಾಗಿದೆ.

"ಜಗದೊಳ್ ಜಾಣರ ಮೆಚ್ಚು ಸತ್ಕವಿಸಮೂಹಕ್ಕೈದೆ ತಾಯ್ನೀಡು ವಾ
ಗ್ಮಿಗಳಾನಂದರಾಧಿವಾಸ ಗಮಕಿಸ್ತೋಮಕ್ಕೆ ಸುಪ್ರೀತಿ ವಾ ॥
ದಿಗಳಾವಾಸನಿಧಾನ ದುರ್ಜನಮನೋಂಭೋಜಾತಶುಭ್ರಾಂಶುವೆಂ
ಬ ಗುಣವ್ರತದೆ ಪೆಂಪುವೆತ್ತು ಮೆಱೆಗುಂ ನಾನಾರ್ಥರತ್ನಾಕರಂ ॥"[೨೧೨]

ಜಗದಜಾಣರೆಲ್ಲ ಮೆಚ್ಚುವಂತೆ, ಮುತ್ತೈದೆ ತಾಯ್ನೆಲದ ಕವಿಗಳಿಗೆ, ಚತುರ್ವಾಗ್ಮಿಗಳಿಗೆ, ಗಮಕಿಗಳಿಗೆ ಸುಪ್ರೀತಿಯುಂಟುಮಾಡಿ, ದುರ್ಜನ ಮನೋದುರಿತವನ್ನು ಕಳೆಯುವ ಉತ್ತಮ ಗುಣವ್ರತವನ್ನು ಪಾಲಿಸೇ 'ನಾನಾರ್ಥರತ್ನಾಕರ'ವು ಮೆರೆವುದು ಎಂದು ಪ್ರಸ್ತುತ ನಿಘಂಟುಕಾರ ಹೇಳಿಕೊಂಡಿದ್ದಾನೆ.

೪.೪.೬. ಶೃಂಗಾರಕವಿ (೧೬೦೦):

"ಈತನು 'ಕರ್ಣಾಟಕ ಸಂಜೀವನ'ವೆಂಬ ನಿಘಂಟುವನ್ನು ಬರೆದಿದ್ದಾನೆ. ಇವನು ಜೈನಕವಿ; ರಷಿವಾಳಿಗೆ ಪ್ರಭುವಾದ ಬೊಮ್ಮರಸನಾಯಕನ ಮಗನು. 'ಕಳೆಯಾಣ್ಮ ಶೃಂಗಾರಕವಿಗೆ ಪಱಿರುಕ್ತಿಯಂ ಕಳಲೊಲ್ಲದುಸಿರ್ವಚಲಂ' ಎಂದು ಹೇಳಿಕೊಂಡಿದ್ದಾನೆ. ಇವನ ಹೆಸರನ್ನು ನೋಡಿದರೆ ಈ ನಿಘಂಟುವನ್ನಲ್ಲದೇ ಕಾವ್ಯಗಳನ್ನೂ ಬರೆದಿರಬೇಕೆಂದು ತೋರುತ್ತದೆ. 'ರತ್ನಾಕರಾಧೀಶ್ವರನ ಶತಕ'ವನ್ನು ಬರೆದಿರುವ 'ಹಂಸರಾಜ'ನಿಗೆ ಶೃಂಗಾರಕವಿಯೆಂದು ಬಿರುದುಂಟು. ಅವನೂ ಜೈನಕವಿ. ಅವನೇ ನಿಘಂಟನ್ನು ರಚಿಸಿರಬೇಕೆಂದು ಸಂದೇಹ ಹುಟ್ಟುವುದು

---

೨೧೧. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ದ್ವಿತೀಯ ಸಂಪುಟ** ; ಪುಟ. ೨೮೧

೨೧೨. **ಅದೇ** ; ಪುಟ. ೨೮೨

ಸಹಜ. ಆದರೆ ಪ್ರಸ್ತುತ ಕೃತಿಯಲ್ಲಿ ಹಂಸರಾಜ ಎಂದು ಎಲ್ಲಿಯೂ ಉಲ್ಲೇಖವಿಲ್ಲ. ಆದುದರಿಂದ ಹಂಸರಾಜನೇ ಬೇರೆ; ಶೃಂಗಾರಕವಿಯೇ ಬೇರೆ. ಈತನ ಕಾಲವನ್ನು ಸುಮಾರು ೧೬೦೦"[೨೧೩] ಎಂದು ಆರ್. ನರಸಿಂಹಾಚಾರ್ಯರು ಊಹಿಸುತ್ತಾರೆ.

೪.೪.೬.೧. ಕರ್ಣಾಟಕ ಸಂಜೀವನ:

ಶೃಂಗಾರಕವಿಕೃತ 'ಕರ್ಣಾಟಕ ಸಂಜೀವನ' ನಿಘಂಟು ಷಟ್ಪದಿರೂಪದಲ್ಲಿ ರಚಿತವಾಗಿದೆ. ಇದರಲ್ಲಿ ಒಟ್ಟು ೩೫ ಷಟ್ಪದಿಗಳಿದ್ದಂತೆ ತೋರುತ್ತದೆ. ಶೃಂಗಾರಕವಿಯು ಪ್ರಸ್ತುತ ಕೃತಿಯಲ್ಲಿ ಱಳ, ಕುಳ, ಕ್ಷಳ ಗಳನ್ನಾಧರಿಸಿ, ಅವುಗಳನ್ನೊಳಗೊಂಡ ಪದಗಳಿಗಿರುವ ವಿಭಿನ್ನಾರ್ಥಗಳನ್ನು ಹೇಳಿದ್ದಾನೆ.

> **"ಬಾೞ್ಕೆನಲ್ ಬಾೞ್ವಲ್ಲಿ ಱಳನಾಯುಧಂಗಳಂ**
> **ಪೇೞ್ಕೆ ಕುಳಮಗುೞಿಯೊಳ ಸೂರಣದಂದಟನೊಳ್**
> **ತಾೞಮರದಲ್ಲಿ ತಾೞ್ಕೆನೆ ಱಳಂ ತಾೞ್ವಲ್ಲಿ ಕುಳನಗುೞ್ದೆಂಬರ್ಥದೊಳ್ ।**
> **ಆೞೆಂದು ಬರೆ ಱಳಂ ಭಟರ ಪೆಸರೊಳ್ ಕುಳಂ**
> **ಕೇೞು ಪಂಙ್ತೆಗೆ ಱಳಂ ಕ್ರೀಡೆಯೊಳ್ ಕ್ಷಳ ಱಳಕೆ**
> **ನಾೞ ನುಡಿ ತುಂಬುಕಳ್ಳನೊಳುಂಟು ನಾೞವಾಸಗೆ ಕುಳಂ ಲತೆಯೊಳ್ ಕ್ಷಳಂ ॥"[೨೧೪]**

ಇಲ್ಲಿ, ಬಾೞ ಅಂದರೆ ಜೀವನ, ಜೀವಿಸು ಎಂದೂ; ಬಾಳ್ ಎಂಬುದು ಆಯುಧವೆಂದಾಗುವುದು. ತಾೞ್ ಎಂಬುದು ತಾಳ್ಮೆ, ಸೈರಣೆ ಎಂದೂ; ತಾಳ್ ಎಂದರೆ 'ಅಗುಳಿ' ಎಂದಾಗುವುದು. ಆೞ್ ಎಂದರೆ ಬರೆ ಎಂದೂ; ಆರ್ (ಆರಕ್ಷಕ) ಎಂದರೆ ಯೋಧ ಎಂದಾಗುವುದು. ಕೇೞ್ ಎಂದರೆ ಸಾಲು ಎಂದೂ; ಕೇಳ್ ಎಂದರೆ ಕ್ರೀಡೆಯೆಂದಾಗುವುದು (ವನಕೇಳಿ). ನಾೞ ನುಡಿ > ನಾಣ್ನುಡಿ; ನಾಳ್ ಎಂಬುದು ವಾಸನೆಯೆಂದಾಗುವುದು. ಹೀಗೆ ಶೃಂಗಾರಕವಿಯು ತನ್ನ 'ಕರ್ಣಾಟಕ ಸಂಜೀವನ' ನಿಘಂಟುವಿನಲ್ಲಿ ಱಳ ಕುಳ ಕ್ಷಳ ಭೇದಗಳಿಂದುಂಟಾಗುವ ವಿಭಿನ್ನಾರ್ಥಗಳನ್ನು ತಿಳಿಸಿದ್ದಾನೆ.

ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಜೈನಕವಿಗಳಿಂದ ರಚಿತವಾಗಿರುವ ಸಾಹಿತ್ಯ ಸಂಬಂಧಿತ ಶಾಸ್ತ್ರಕೃತಿಗಳನ್ನು ಪರಿಚಯಿಸುವುದರ ಜೊತೆಗೆ ಆ ಗ್ರಂಥಗಳಲ್ಲಿ ಚರ್ಚಿತವಾಗಿರುವ ಹಲವಾರು ಅತ್ಯುಪಯುಕ್ತವೆನಿಪ ವಿಷಯಾಂಶಗಳನ್ನೂ ವಿಶ್ಲೇಷಿಸಲಾಗಿದೆ. ಇಲ್ಲಿ ಚರ್ಚಿತವಾಗಿರುವ ಗ್ರಂಥ ವಿಷಯಗಳು ಇಂದಿನ ಆಧುನಿಕ ಸಾಹಿತ್ಯದ ಹಲವಾರು ಆಯಾಮಗಳಿಗೆ ಪ್ರಸ್ತುತವೆನಿಸುತ್ತವೆ. ಅಲ್ಲದೇ ನಿಘಂಟುಶಾಸ್ತ್ರಕ್ಕೆ ಸಂಬಂಧಿಸಿದ ಪೂರ್ವೋಕ್ತ ಆರು ಗ್ರಂಥಗಳು ಇಂದಿನ ಆಧುನಿಕತೆಯ ಭರಾಟೆಯಲ್ಲಿ ಮರೆತುಹೋಗಿರುವ ಮತ್ತು ಮರೆತುಹೋಗುತ್ತಿರುವ ಹಲವಾರು ವಿಷಯಗಳಿಗೆ ಉತ್ತಮ ಆಕರಗಳನ್ನು ಒದಗಿಸಿ ಕೊಡಬಲ್ಲವು. ಇಂದಿನ ಆಧುನಿಕ ಕಾಲದ ಹೆಚ್ಚುತ್ತಿರುವ ಜನಸಂಖ್ಯೆಗೆ ತಕ್ಕಷ್ಟು ಆಹಾರೋತ್ಪನ್ನ ಮಾಡುವುದು ಅನಿವಾರ್ಯವಾಗಿ,

---

೨೧೩. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ದ್ವಿತೀಯ ಸಂಪುಟ** ; ಪುಟ. ೨೮೯
೨೧೪. ಅದೇ ; ಪುಟ. ೨೯೦

ಹಲವಾರು ಉನ್ನತೀಕರಿಸಿದ ತಳಿ ಬೆಳವಣಿಗೆಯ ವಿಚಾರಗಳನ್ನು ಕಾಣಬಹುದು. ಆದರೆ ಈ ಸಮಸ್ಯೆಗೆ ಪ್ರಾಚೀನರು ಆ ಕಾಲದಲ್ಲಿಯೇ ಪರಿಹಾರ ಕಂಡುಕೊಂಡಿದ್ದಂತೆ ಕಾಣುತ್ತದೆ. ಅಕಾರಾದಿ ನಿಘಂಟುವಿನಲ್ಲಿ ಉಲ್ಲೇಖಿತವಾಗಿರುವ 'ಸೂರ್ಯಭಕ್ತ' ಎಂಬ ಭತ್ತದ ತಳಿಯೊಂದು ಕೇವಲ ಎರಡು ತಿಂಗಳಿನಲ್ಲಿಯೇ ಬೆಳೆದು ಬರುತ್ತಿತ್ತು ಎಂದು ಹೇಳಲಾಗಿದೆ. ಆದರೆ ಇಂದು ಆ ತಳಿಯು ಉಪಲಬ್ಧವಿದೆಯೋ ಇಲ್ಲವೋ ಎಂದು ತಿಳಿಯದು. ಇಂತಹ ಹಲವಾರು ವಿಷಯಾಂಶಗಳು ಪ್ರತಿಯೊಂದು ಪ್ರಾಚೀನ ಗ್ರಂಥಗಳಲ್ಲಿ ಚರ್ಚಿತವಾಗಿವೆ. ಅಂತಹ ಗ್ರಂಥಗಳು ಇಂದಿನ ಯುಗಕ್ಕೆ ಅಪೂರ್ವ ಜ್ಞಾನ ಭಂಡಾರವಾಗಿವೆ.

ಅಧ್ಯಾಯ : ೫

ಕನ್ನಡ ಲೌಕಿಕ ಶಾಸ್ತ್ರ ಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ

ಅಧ್ಯಾಯ ೫

ಕನ್ನಡ ಲೌಕಿಕ ಶಾಸ್ತ್ರ ಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ

ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಜೈನ ಧಾರ್ಮಿಕ ಸಾಹಿತ್ಯದ ದಾಖಲೆಗಳು ದೊರಕುತ್ತವೆ. ಜೊತೆಗೆ ಲೋಕೋಪಯೋಗಿ ಎನಿಸಿದ ಲೌಕಿಕ ಶಾಸ್ತ್ರಕೃತಿಗಳ ರಚನೆಯನ್ನೂ ಅಷ್ಟೇ ಪ್ರಮಾಣದಲ್ಲಿ ಕಾಣಬಹುದಾಗಿದೆ. “ಆರಯೆ ತಚ್ಛಾಸ್ತ್ರ ವ್ಯವಹಾರ ಜ್ಞಾನಾರ್ಥಮಾಗಿ ಪೇಟಲ್ಪಡೆಗುಂ”[೧] ಎಂಬ ಕೇಶಿರಾಜನ ಮಾತಿನಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ. ಅದರಂತೆ ಲೌಕಿಕ ಜ್ಞಾನ, ವ್ಯವಹಾರಾರ್ಥವಾಗಿ ಶಾಸ್ತ್ರಗ್ರಂಥಗಳು ರಚನೆಯಾದವು. ವೈದ್ಯಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ವಾಸ್ತುಶಾಸ್ತ್ರ, ಗಣಿತಶಾಸ್ತ್ರ, ಪಾಕಶಾಸ್ತ್ರ, ಕಾಮಶಾಸ್ತ್ರ, ನೀತಿಶಾಸ್ತ್ರ, ತರ್ಕಶಾಸ್ತ್ರ, ಸಂಗೀತಶಾಸ್ತ್ರ ಮುಂತಾಗಿ, ಮಾನವನ ನಿತ್ಯ ಜೀವನಕ್ಕೆ ಮಾರ್ಗದರ್ಶಿಯಾಗಿ ನಿಲ್ಲುವ ಶಾಸ್ತ್ರಗ್ರಂಥಗಳೇ ಲೌಕಿಕ ಶಾಸ್ತ್ರಗ್ರಂಥಗಳು ಎನಿಸಿವೆ. “ಪ್ರಾಚೀನ ಕಾಲದ ಹಲವಾರು ವಿದ್ಯೆಗಳು ಇಂದಿನ ಆಧುನಿಕ ಕಾಲದಲ್ಲಿ ವಿವಿಧ ವಿಜ್ಞಾನ, ತಂತ್ರಜ್ಞಾನದ ಲೇಪನಗಳನ್ನು ಪಡೆದುಕೊಂಡು ಹೊಸ ರೂಪವನ್ನು ತಳೆಯುತ್ತಿವೆ. ಕಣ್ಣಿಗೆ ಗೋಚರ, ಅಗೋಚರ ರೀತಿಯ ಅನೇಕ ಸತ್ಯಗಳು ಹೊಸ ವ್ಯಾಖ್ಯಾನಗಳೊಂದಿಗೆ ವಿಮರ್ಶೆಯ ಒರೆಗಲ್ಲಿನ ಮೇಲೆ ನೈಜತೆಯನ್ನೂ, ವಿಶ್ವಾಸಾರ್ಹತೆಯನ್ನೂ ಸಾಬೀತುಪಡಿಸಲು ನಿರಂತರ ಪ್ರಯತ್ನಶೀಲವಾಗಿವೆ.”[೨]

ಈ ಲೌಕಿಕ ಸಾಹಿತ್ಯದ ಪರಿಧಿಯಲ್ಲಿಯೇ ಶೋಧನೆ ಮಾಡಿದರೆ, ಜೈನ ಕವಿಕೃತ ಶಾಸ್ತ್ರಕೃತಿಗಳು ತಮ್ಮದೇ ಆದ ಪ್ರಭಾಮಂಡಲವನ್ನು ಹೊಂದಿರುವುದು ಗೋಚರವಾಗುತ್ತದೆ. ಒಂದೊಂದು ಗ್ರಂಥಗಳೂ ವಿಜ್ಞಾನದ ದಿವ್ಯದರ್ಶನವನ್ನು ಮಾಡಿಸುತ್ತವೆ. ಜೈನಧರ್ಮವು ಆದಿಯಿಂದಲೂ ವೈಜ್ಞಾನಿಕ ಸಿದ್ಧಾಂತಗಳ ತಳಹದಿಯ ಮೇಲೆ ನೆಲೆನಿಂತಿದೆ. ಅಹಿಂಸೆಯೇ ಅದರ ಮೂಲಾಧಾರ. ಈ ಅಹಿಂಸಾ ತತ್ತ್ವದ ನೆಲೆಯಲ್ಲಿಯೇ ತಮ್ಮ ಕೃತಿರತ್ನಗಳನ್ನು ಓದುಗರಿಗೆ ಅರ್ಪಿಸುತ್ತಾರೆ ಜೈನ ಶಾಸ್ತ್ರಕವಿಗಳು. ಅಂತೆಯೇ ಪ್ರಸ್ತುತ ಅಧ್ಯಾಯದಲ್ಲಿ ಜೈನ ಕವಿಗಳಿಂದ ರಚಿತವಾಗಿರುವ ಲೌಕಿಕಶಾಸ್ತ್ರ ಗ್ರಂಥಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಲಾಗಿದೆ. ಈ ಮೂಲಕ ಕನ್ನಡ ಸಾಹಿತ್ಯ ಲೋಕದ ಆಳದಲ್ಲಿ ಹುದುಗಿ ಕುಳಿತಿರುವ ಸಸ್ಯಲೋಕದ ವಿಸ್ಮಯಗಳನ್ನೂ, ಗಣಿತದ ಲೆಕ್ಕಾಚಾರಗಳನ್ನೂ, ಬದುಕಿನ ಸೌಂದರ್ಯವನ್ನೂ, ಅನ್ನಾಹಾರದ ರಸಾಸ್ವಾದವನ್ನೂ, ಆರೋಗ್ಯದ ಗುಟ್ಟನ್ನೂ, ಖಗೋಳದ ವಿದ್ಯಮಾನಗಳನ್ನೂ, ಜ್ಯೋತಿಷ್ಯದ ಜಿಜ್ಞಾಸೆಗಳನ್ನೂ, ಬದುಕಿನ ಸಾರವನ್ನೂ ಸಸ್ಯಗಳ ಉಸಿರನ್ನೂ, ಪ್ರಾಣಿಗಳ ಪಾಡನ್ನೂ ಅರಿಯುವುದಾಗಿದೆ.

---

೧. ಡಾ. ಧನ್ಯಕುಮಾರ ಇಜಾರಿ ; **ಜೈನ ಲೌಕಿಕ ಸಾಹಿತ್ಯ ಸಂಪದ** ; ಪು.೦೧

೨. **ಅದೇ** ; ಪುಟ. ೦೧

೫.೧. ವೈದ್ಯಶಾಸ್ತ್ರ :

ಜೀವರಾಶಿಗಳ ವಿಕಾಸ ಮತ್ತು ಅಭಿವೃದ್ಧಿಗಾಗಿ ವಿಶ್ವವು ಸೃಷ್ಟಿಯಾಯಿತು ಎಂಬುದು ಭಾರತೀಯರ ಧಾರ್ಮಿಕ ನಂಬಿಕೆಯಾಗಿದೆ. ಇದಕ್ಕೆ ಯಾವುದೇ ರೀತಿಯ ಲೌಕಿಕತೆಯ ಸ್ಪರ್ಶವನ್ನು ನೀಡದೇ, ಮಾನವತೆಯಿಂದ ದೈವತ್ವಕ್ಕೆ ಏರಿಸುವ ವಿಚಾರಗಳನ್ನು ಆಗಮಗಳು ಬೋಧಿಸುತ್ತವೆ. ಆದರೆ ಹುಟ್ಟಿದ ಜೀವಿಯು ಒಂದಲ್ಲ ಒಂದು ರೀತಿಯಲ್ಲಿ ತೊಂದರೆಗೊಳಗಾಗುವುದು ಸರ್ವೇಸಾಮಾನ್ಯವಾಗಿದೆ. ಅಂತಹ ತೊಂದರೆಗೊಳಗಾದಾಗ ಅದರಿಂದ ಹೊರಬರುವ ಉಪಾಯಗಳನ್ನು ರೂಪಿಸಿಕೊಳ್ಳುವುದು, ಪರಿಹರಿಸಿಕೊಳ್ಳುವದನ್ನು ಕೂಡ ಆ ಜೀವಿಯು ಕಂಡುಕೊಳ್ಳುತ್ತದೆ. ಅಂತೆಯೇ ಮಾನವನು ಕೂಡ ತನಗೆ ಎದುರಾಗುವ ಅನೇಕ ರೀತಿಯ ತೊಂದರೆಗಳನ್ನು, ಕಾಯಿಲೆಗಳನ್ನು ಪರಿಹರಿಸಿಕೊಳ್ಳಲು ಮುಂದಾಗಿ ಅನೇಕ ಶಾಸ್ತ್ರ ರೂಪದ ಗ್ರಂಥಗಳನ್ನು ರಚಿಸಿಕೊಂಡನು. ಅದುವೇ 'ವೈದ್ಯಶಾಸ್ತ್ರ' ಇಲ್ಲವೇ 'ಆಯುರ್ವೇದ' ಎನಿಸಿಕೊಂಡಿತು. "ಭೂಲೋಕದಲ್ಲಿ ರೋಗರುಜಿನಗಳು ಪೀಡಿಸುತ್ತಿದ್ದುದರಿಂದ ತಮ್ಮ ಪುರುಷಾರ್ಥ ಸಾಧನೆಗಳಿಗೆ ವಿಘ್ನವಾಗತೊಡಗಿತು. ಇದನ್ನು ನಿವಾರಿಸಲು ಹಿಂದೆ ಭಾರದ್ವಾಜನೇ ಮೊದಲಾಗಿ ಅನೇಕ ಮಹರ್ಷಿಗಳು ಹಿಮಾಲಯದ ತಪ್ಪಲಿನಲ್ಲಿ ಸಭೆ ಸೇರಿದರು. ಅಲ್ಲಿ ಎಲ್ಲ ಮಹರ್ಷಿಗಳ ತೀರ್ಮಾನದಂತೆ ಭಾರದ್ವಾಜನು ಇಂದ್ರನಲ್ಲಿಗೆ ಹೋಗಿ ಆಯುರ್ವೇದವನ್ನು ತಿಳಿದುಬಂದು ಪ್ರಸಾರ ಮಾಡಿದನು. ಈ ಋಷಿಸಭೆಯನ್ನು ಭಾರತದ ಮೊಟ್ಟಮೊದಲ ಆಯುರ್ವೇದ ಸಮ್ಮೇಳನವೆನ್ನಬಹುದು. ಇದನ್ನು ಅನುಸರಿಸಿ ಅಗ್ನಿವೇಶನು ಗ್ರಂಥವನ್ನು ರಚಿಸಿದನು. ಆ ಗ್ರಂಥವು ಈಗ ಅಲಭ್ಯವಾಗಿದೆ. ಆದರೆ ಇದರ ಸಾರವನ್ನು ಚರಕನು ಸಂಸ್ಕರಿಸಿ ಸಂಗ್ರಹಿಸಿದನು. ಅದುವೇ 'ಚರಕಸಂಹಿತ'. ಆನಂತರದಲ್ಲಿ 'ಶುಶ್ರುತಸಂಹಿತ'ವು ರಚನೆಯಾಯಿತು."[೩] ಭಾರತೀಯ ವೈದ್ಯ ಪರಂಪರೆಯಲ್ಲಿ ಶುಶ್ರುತ, ಚರಕರು ತಮ್ಮ ಚಿಕಿತ್ಸಾಕ್ರಮದಿಂದ ಪ್ರಸಿದ್ಧಿಯನ್ನು ಪಡೆದುಕೊಂಡರು.

ಆದರೆ "ಈ ಜಗತ್ತಿನಲ್ಲಿ ವೈದ್ಯಕೀಯ ಶಾಸ್ತ್ರವು ಎಂದಿನಿಂದ ಹುಟ್ಟಿಕೊಂಡಿತು ಎಂದು ನಿಶ್ಚಿತವಾಗಿ ಹೇಳುವುದು ಕಷ್ಟ. ಈ ಪೃಥ್ವಿಯ ಮೇಲೆ ಮಾನವ ಹಾಗೂ ಇತರ ಜೀವಿಗಳು ಹುಟ್ಟಿಕೊಂಡ ಮೇಲೆ ಆಹಾರ, ವಿಹಾರ, ಪರಿಸರಗಳಲ್ಲಾದ ಏರು-ಪೇರುಗಳಿಂದ ಆಗುವ ರೋಗ ರುಜಿನಾದಿಗಳ ಪರಿಹಾರಕ್ಕಾಗಿ ಏನಾದರೊಂದು ಪ್ರಯತ್ನ ಮಾಡುತ್ತಲೇ ಬಂದಿದ್ದಾನೆ. ಈಗಲೂ ಪಶುಪಕ್ಷಿಗಳು ತಮಗೆ ರೋಗವುಂಟಾದಾಗ ಉಪವಾಸವಿದ್ದೋ ಇಲ್ಲವೇ ಯಾವುದಾದರೊಂದು ಮೂಲಿಕೆಯನ್ನು ತಿಂದು ವಾಂತಿ ಮಾಡಿಯೋ ತಮ್ಮ ರೋಗಗಳನ್ನು ಪರಿಹಾರ ಮಾಡಿಕೊಳ್ಳವುದನ್ನು ಕಾಣಬಹುದು. ಆರ್ಷ್ಯಪದ್ಧತಿಯಲ್ಲ ಜೀವನ ಶಾಸ್ತ್ರವಾದ ಆಯುರ್ವೇದವು ವೇದಗಳ ಕಾಲದಲ್ಲಿಯೇ ಹುಟ್ಟಿದೆಯೆಂದೂ ಬ್ರಹ್ಮನೇ ಇದನ್ನು ಪ್ರಪ್ರಥಮವಾಗಿ ಬೋಧಿಸಿದನೆಂದೂ ತದನಂತರ ಅದು ದಕ್ಷಪ್ರಜಾಪತಿ, ಅಶ್ವಿನೀ ದೇವತೆಗಳು, ಇಂದ್ರ, ಭಾರದ್ವಾಜ, ಕಶ್ಯಪ, ಧನ್ವಂತರಿ,

೩. ಆಯುರ್ವೇದ ; Wikipedia: https://kn.wikipedia.rog/wiki/ಆಯುರ್ವೇದ

ಅಗ್ನಿವೇಶ, ಭೇಲ, ಜೀತೂಕರ್ಣ, ಪರಾಶರ, ಹಾರೀತ, ಕ್ಷಾರಪಾಣಿ ಹೀಗೆ ಸಂಪ್ರದಾಯ ಬೆಳೆಯುತ್ತ ಬಂದಿತು. ಇತಿಹಾಸವಿದ್ದರೆ ಜೈನಾಯುರ್ವೇದ ಗ್ರಂಥಗಳಲ್ಲಿ ಋಷಭನಾಥನೇ ಈ ಶಾಸ್ತ್ರವನ್ನು ಬೋಧಿಸಿದನು ಹಾಗೂ ಸಾಗರೋಪಾದಿಯಲ್ಲಿದ್ದ ಶಾಸ್ತ್ರದ ಬಿಂದು ಬಿಂದುಗಳನ್ನು ತೆಗೆದುಕೊಂಡು ಇತರ ಆಚಾರ್ಯರು ವೈದ್ಯಕೀಯ ಗ್ರಂಥಗಳನ್ನು ರಚಿಸಿದ್ದಾರೆ ಎಂದು ತಿಳಿದು ಬರುತ್ತದೆ."[೪]

"ಇಹ ಖಲು ಆಯುರ್ವೇದಮಷ್ಟಾಂಗ ಉಪಾಂಗಮಥರ್ವವೇದಸ್ಯ ಅನುತ್ಪಾದ್ಯೈವ ಪ್ರಜಾಃ ಶ್ಲೋಕಶತಸಹಸ್ರಮಧ್ಯಾಯಸಹಸ್ರಂ ಚ ಕೃತವಾನ್ ಸ್ವಯಂಭೂ। ತತೋ ಅಲ್ಪಾಯುಷ್ಟ್ವಮಲ್ಪಮೇಧಸ್ತ್ವಂ ಚಾಲೋಕ್ಯ ನರಾಣಾಂ ಭೂಯೋಷ್ಟಥಾ ಪ್ರಣೀತವಾನ್"[೫] ಆಯುರ್ವೇದವು ಎಂಟು ಅಂಗಗಳಿಂದ ಕೂಡಿದೆ. ಇದು ಅಥರ್ವವೇದದ ಉಪಾಂಗವಾಗಿದೆ. ಮಾನವನ ಆಯುಷ್ಯವನ್ನು ಹೆಚ್ಚಿಸಲು ಕಾರಣವಾದ ಈ ಶಾಸ್ತ್ರವನ್ನು ಬ್ರಹ್ಮನು ಒಂದು ಲಕ್ಷ ಶ್ಲೋಕಗಳಿಂದ ಒಂದು ಸಾವಿರ ಅಧ್ಯಾಯಗಳಲ್ಲಿ ಸಂಗ್ರಹಿಸಿದನು. ಕಾಲಾಂತರದಲ್ಲಿ ಮಾನವನ ಅಲ್ಪಜ್ಞಾನ ಮತ್ತು ಅಲ್ಪಾಯುಷ್ಯಗಳನ್ನು ಗಮನದಲ್ಲಿಟ್ಟುಕೊಂಡು **"ತದ್ಯಥಾ-ಶಲ್ಯಂ ಶಾಲಾಕ್ಯಂ ಕಾಯಚಿಕಿತ್ಸಾ ಭೂತವಿದ್ಯಾ ಕೌಮಾರಭೃತ್ಯಂ ಅಗದತಂತ್ರಂ ರಸಾಯನತಂತ್ರಂ ವಾಜೀಕರಣಮಿತಿ"**[೬] ಎಂದು ಎಂಟು ಭಾಗಗಳಾಗಿ ವಿಂಗಡಿಸಿದನು.

ದೇಹದೊಳಗೆ ಚುಚ್ಚಲ್ಪಟ್ಟ ಮುಳ್ಳು ಮುಂತಾದ ಪದಾರ್ಥಗಳನ್ನು ತೆಗೆಯುವುದು ಮತ್ತು ಅದರಿಂದಾದ ನೋವನ್ನು ನಿವಾರಣೆ ಮಾಡುವುದನ್ನು ಬೋಧಿಸುವುದು **ಶಲ್ಯತಂತ್ರ.** ಗಾಯಗಳಿಗೆ ಪಕ್ಷಿಗಳ ಗರಿಗಳಿಂದ ಮದ್ದನ್ನು ಲೇಪಿಸುವುದು **ಶಲಾಕಾತಂತ್ರ.** ದೇಹದಲ್ಲಿ ಉಷ್ಣ-ಶೀತಗಳು ಏರಿಳಿತವಾಗದಂತೆ ವಮನ-ವಿರೇಚನಾದಿ ದೇಹಶುದ್ಧಿ ಕರ್ಮಗಳನ್ನು ಬೋಧಿಸುವುದು **ಕಾಯಚಿಕಿತ್ಸೆ.** ಅತೀತ ಶಕ್ತಿಗಳಿಂದಾಗುವ ಪರಿಣಾಮಗಳನ್ನು ನಿವಾರಿಸುವುದು **ಭೂತವಿದ್ಯೆ.** ಮಕ್ಕಳಿಗಾಗುವ ತೊಂದರೆಗಳನ್ನು ನಿವಾರಿಸುವುದು **ಕೌಮಾರತಂತ್ರ.** ವಿವಿಧ ರೀತಿಯ ವಿಷಗಳನ್ನು ನಿವಾರಿಸುವುದು **ಅಗದತಂತ್ರ.** ರಸರಕ್ತಾದಿ ದೇಹಧಾತುಗಳು ವೃದ್ಧಿಯಾಗುವಂತೆ ಮಾಡುವ ಉಪಾಯಗಳನ್ನು ಬೋಧಿಸುವುದು **ರಸಾಯನತಂತ್ರ.** ಸ್ತ್ರೀಯರೊಡನೆ ಸಂಯೋಗಮಾಡಲು ಶಕ್ತಿವೃದ್ಧಿಯಾಗಿ, ಶುಕ್ಲವೃದ್ಧಿಯಾಗಿ, ಸ್ಥಿರಸಂತಾನವುಂಟಾಗುವಂತೆ ಮಾಡುವುದು **ವಾಜೀಕರಣತಂತ್ರ.** ಹೀಗೆ ಎಂಟು ವಿಧಗಳಲ್ಲಿ ಆಯುರ್ವೇದವನ್ನು ಗುರುತಿಸಲಾಗುತ್ತದೆ. ಅವುಗಳನ್ನೇ ಅನುಸರಿಸಿ ಭಾರತೀಯ ಸಾಹಿತ್ಯದಲ್ಲಿ ಸಾಕಷ್ಟು ವೈದ್ಯಗ್ರಂಥಗಳು ರಚನೆಯಾದವು. ಶುಶ್ರುತ, ಚರಕ, ವಾಗ್ಭಟ, ಮಾಧವ, ಪರಾಶರ, ಯೋಗರತ್ನಾಕರರು ಭಾರತೀಯ ವೈದ್ಯಪರಂಪರೆಯನ್ನು ವಿಶ್ವಮಟ್ಟದಲ್ಲಿ ಬೆಳಕಿಗೆ ತಂದ ಮಹನೀಯರು. ಭಾರತೀಯ ವೈದ್ಯ ಪರಂಪರೆಯು ಬೆಳೆದು ಬಂದಿರುವುದು ಆಯುರ್ವೇದ ಶಾಸ್ತ್ರದ ನೆಲೆಯಲ್ಲಿ.

---

೪. ಡಾ. ಧನ್ಯಕುಮಾರ ಇಜಾರಿ ; **ಜೈನ ವೈದ್ಯಕೀಯ ಪರಂಪರೆ** ; ಪುಟ.೧೮

೫. ಡಿ. ಪಿ. ಮಧುಸೂದನ (ಸಂ); **ವೈದ್ಯಶಾಸ್ತ್ರದೀಪಿಕಾ** : ಪುಟ. i (ಮುನ್ನುಡಿ)

೬. ಅದೇ ; ಪುಟ. ii (ಮುನ್ನುಡಿ)

ಆ ನೆಲೆಯಲ್ಲಿ ಕನ್ನಡ ಸಾಹಿತ್ಯಿಕ ಇತಿಹಾಸವನ್ನು ಅವಲೋಕಿಸಿದಾಗ ಅನೇಕ ವೈದ್ಯಗ್ರಂಥಗಳು ಲಭ್ಯವಾಗುತ್ತವೆ. ಈ ನಿಟ್ಟಿನಲ್ಲಿ ಅತ್ಯಪರೂಪದ ಗ್ರಂಥಗಳೆಂದರೆ ಜಗದ್ದಳ ಸೋಮನಾಥನ 'ಕರ್ಣಾಟಕ ಕಲ್ಯಾಣಕಾರಕ' ಹಾಗೂ ಒಂದನೇ ಮಂಗರಾಜನು ರಚಿಸಿದ 'ಖಗೇಂದ್ರಮಣಿ ದರ್ಪಣಂ'ಗಳು ಪ್ರಮುಖವಾಗಿ ಎದ್ದು ಕಾಣುತ್ತವೆ. ಆದುದರಿಂದ ಪ್ರಸ್ತುತ ಅಧ್ಯಾಯದಲ್ಲಿ ಈ ಇಬ್ಬರು ಶಾಸ್ತ್ರಕಾರರ ಪ್ರಾತಿನಿಧಿಕ ವೈದ್ಯಗ್ರಂಥಗಳನ್ನು ಅಧ್ಯಯನ ಮಾಡಿ, ಪ್ರಮುಖ ವಿಚಾರಗಳನ್ನು ಪ್ರಚುರಪಡಿಸಲಾಗಿದೆ.

ಅ) ಸಾಮಾನ್ಯ ವೈದ್ಯಶಾಸ್ತ್ರ:

೫.೧.೧. ಜಗದ್ದಳ ಸೋಮನಾಥ (೧೧೭೫)

'ಕರ್ಣಾಟಕ ಕಲ್ಯಾಣಕಾರಕ' ಎಂಬ ವೈದ್ಯಗ್ರಂಥವನ್ನು ಬರೆದ ಜೈನಕವಿ. ಈತನ ಕಾಲವನ್ನು ೧೧೭೫ ಎಂದು ಕವಿಚರಿತೆಕಾರರು ತರ್ಕಿಸಿದ್ದಾರೆ. "ಈತನಿಗೆ ವಿಚಿತ್ರಕವಿಯೆಂಬ ಬಿರುದು ಇದ್ದಂತೆ ತಿಳಿಯುತ್ತದೆ. ತನ್ನ ಗ್ರಂಥವನ್ನು ಸುಮನೋಬಾಣಕವಿಯೂ ಅಭಯಚಂದ್ರ ಸಿದ್ಧಾಂತಿಯೂ ತಿದ್ದಿದಂತೆ ಹೇಳಿರುವುದರಿಂದ ಈತ ಸುಮನೋಬಾಣನ ಕಾಲದವನೆಂದು ತಿಳಿಯುತ್ತದೆ; ಕನ್ನಡದಲ್ಲಿ ಕೀರ್ತಿವರ್ಮನ (ಸು. ೧೧೦೦) ಗೋವೈದ್ಯವನ್ನು ಬಿಟ್ಟರೆ ಇದುವೇ ವೈದ್ಯಗ್ರಂಥಗಳಲ್ಲಿ ಪುರಾತನವಾದುದು."[೭] ಜಗದ್ದಳ ಸೋಮನಾಥನು 'ಕರ್ಣಾಟಕ ಕಲ್ಯಾಣಕಾರಕ' ಕೃತಿಯನ್ನು ಆಚಾರ್ಯ ಪೂಜ್ಯಪಾದ (೭ನೆಯ ಶತಮಾನ) ವಿರಚಿತ ಸಂಸ್ಕೃತ 'ಕಲ್ಯಾಣಕಾರಕ'ವನ್ನು ಅನುಸರಿಸಿ ರಚಿಸಿದ್ದು ಎಂದು ಗ್ರಂಥಾರಂಭದಲ್ಲಿಯೇ ತಿಳಿದುಬರುತ್ತದೆ. 'ಕಲ್ಯಾಣಕಾರಕ'ವು ಶಾಲಾಕ್ಯತಂತ್ರವನ್ನು ತಿಳಿಸುತ್ತದೆ. ಅಂದರೆ ಕಣ್ಣು, ಕಿವಿ, ಮೂಗು ಹಾಗೂ ಬಾಯಿಗಳ ಚಿಕಿತ್ಸೆಯನ್ನು ಕುರಿತಾದುದು. ಆಧುನಿಕ ಯುಗದ ENT-Ear Nose Throat ವೈದ್ಯ ಪದ್ಧತಿಯ ವಿಶ್ಲೇಷಣೆಯು ಈ ಗ್ರಂಥದಲ್ಲಿ ದೊರೆಯುತ್ತದೆ.

ಪೂಜ್ಯಪಾದರ ಇದೇ ಗ್ರಂಥವನ್ನು ಆಧಾರವಾಗಿಟ್ಟುಕೊಂಡು ಉಗ್ರಾದಿತ್ಯಾಚಾರ್ಯರು ಸಂಸ್ಕೃತದಲ್ಲಿ 'ಕಲ್ಯಾಣಕಾರಕ' ಎಂಬ ಹೆಸರಿನಲ್ಲಿಯೇ ಗ್ರಂಥರಚನೆ ಮಾಡಿದರು. "ಉಗ್ರಾದಿತ್ಯಾಚಾರ್ಯರು (ಕ್ರಿ.ಶ. ೮೧೫–೮೭೭) ರಾಷ್ಟ್ರಕೂಟರ ಅರಸ ನೃಪತುಂಗನ ಆಸ್ಥಾನ ವೈದ್ಯರಾಗಿ ಪ್ರಸಿದ್ಧಿ ಪಡೆದಿದ್ದರು. ಇವರು ರಚಿಸಿದ 'ಕಲ್ಯಾಣಕಾರಕ'ವು ಮೂಲ ಸಂಸ್ಕೃತ ಭಾಷೆಯಲ್ಲಿದ್ದು, ಆಯುರ್ವೇದದ ಅಷ್ಟಾಂಗಗಳ ವಿವರವನ್ನು ಹೊಂದಿದೆ. ಜೈನ ಸಂಪ್ರದಾಯವನ್ನೇ ಎತ್ತಿ ಹಿಡಿಯುವ ಉದ್ದೇಶದಿಂದ ಮದ್ಯ, ಮಾಂಸ ಮತ್ತು ಜೇನುಗಳನ್ನು ಆಹಾರ ಇಲ್ಲವೇ ಔಷಧ ರೂಪವಾಗಿ ಎಲ್ಲೂ ಬಳಸಿಲ್ಲ. ಜಗದ್ದಳ ಸೋಮನಾಥನ 'ಕರ್ಣಾಟಕ ಕಲ್ಯಾಣಕಾರಕ' ಕೃತಿಯನ್ನು ಸಂಪಾದಿಸಿದ ಡಾ. ಕೆ. ಆರ್. ಶ್ರೀಕಂಠಮೂರ್ತಿಗಳಿಗೆ ದೊರೆತ ಎರಡು

೭. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೩೦೫

ಹಸ್ತಪ್ರತಿಗಳೂ ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ. ಅನೇಕ ಪದ್ಯಗಳು ತ್ರುಟಿತ, ದುಷ್ಟ ಹಾಗೂ ಅಪೂರ್ಣವಾಗಿದ್ದು ಅಲ್ಲಲ್ಲಿ ಗ್ರಂಥಪಾತವಾಗಿದ್ದುದರಿಂದ ಸಾಧ್ಯವಾದಷ್ಟು ಅನ್ನು ಪರಿಷ್ಕರಿಸಿ ಕಟ್ಟಿಕೊಟ್ಟಿದ್ದರೂ, ಅನೇಕ ಕಡೆಗಳಲ್ಲಿ ಏನ್ನು ಹೇಳಲು ಸಾಧ್ಯವಾಗಿಲ್ಲ."[೮] ಅಲ್ಲದೇ ಹೀಗಿರುವ ಕನ್ನಡದ ಈ ಅಪರೂಪದ ವೈದ್ಯಗ್ರಂಥವು ಇಂದು ಉಪಲಬ್ಧ ರೂಪದಲ್ಲಿರದೇ ಇರುವುದು ವಿಷಾದನೀಯ ಸಂಗತಿಯಾಗಿದೆ. ಪ್ರಸ್ತುತವಾಗಿ ಅಲ್ಲಲ್ಲಿ ದೊರೆತ ಮಾಹಿತಿಗಳನ್ನು ಕ್ರೋಢೀಕರಿಸಿ ಗ್ರಂಥದ ಕೆಲವು ವಿಷಯಗಳನ್ನಾದರೂ ಮೂರ್ತರೂಪದಲ್ಲಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

೫.೧.೧.೧. ಕರ್ಣಾಟಕ ಕಲ್ಯಾಣಕಾರಕ :

ಸೋಮನಾಥ ಕವಿಯು ತನ್ನ ಗ್ರಂಥಾರಂಭದಲ್ಲಿ ಚಂದ್ರನಾಥನನ್ನು ಸ್ತುತಿಸಿ, ಸಿದ್ಧರು, ಸರಸ್ವತಿ, ಮಾಧವೇಂದು, ಸೈದ್ಧಾಂತಿಕಚಕ್ರವರ್ತಿ ಅಭಯಚಂದ್ರ, ಕನಕಚಂದ್ರ, ಪಂಡಿತದೇವ ಮೊದಲಾದವರನ್ನು ಸ್ಮರಿಸಿದ್ದಾನೆ. ಗ್ರಂಥವು ಕಂದ ಮತ್ತು ವೃತ್ತಗಳಲ್ಲಿ ರಚಿತವಾಗಿದೆ.

ಸುಕರಂ ತಾನೆನೆ ಪೂಜ್ಯಪಾದಮುನಿಗಳ್ ಮುಂ ಪೇೞ್ದ ಕಲ್ಯಾಣಕಾ
ಕಾರಕಮಂ ಬಾಹಟಸಿದ್ಧಸಾರಚರಕಾದ್ಯತ್ಯಕೃಷ್ಟಮಂ ಸದ್ಗುಣಾ
ಧಿಕಮಂ ವರ್ಜಿತಮದ್ಯಮಾಂಸಮಧುವಂ ಕರ್ಣಾಟಕದಿಂ ಲೋಕರ
ಕ್ಷಕಮಂ ಚಿತ್ರಮದಾಗೆ ಚಿತ್ರಕವಿ ಸೋಮಂ ಪೇೞ್ದನಿಂತಟ್ಕೆಯಿಂ ॥"[೯]

ಸಂಸ್ಕೃತದಲ್ಲಿ ಆಚಾರ್ಯ ಪೂಜ್ಯಪಾದ ಮುನಿಗಳು ಬರೆದಿರುವ ಕಲ್ಯಾಣಕಾರಕವನ್ನು ಆಧರಿಸಿ ತನ್ನ ಗ್ರಂಥವನ್ನು ಬರೆದಂತೆ ಕವಿ ಹೇಳಿಕೊಂಡಿದ್ದಾನೆ; ಬಾಹಟ, ಸಿದ್ಧಸಾರ, ಜೊತೆಗೆ ಚರಕ, ವಾಗ್ಭಟ, ಸಿದ್ಧಸಾರ ಮುಂತಾದವರ ಗ್ರಂಥಗಳಿಂದಲೂ ವಿಷಯಗಳನ್ನು ಆರಿಸಿ ಮಧು, ಮದ್ಯ, ಮಾಂಸವರ್ಜಿತವಾಗಿರುವ ಕೃತಿಯನ್ನು ಲೋಕರಕ್ಷಕವಾಗಿ ಚಿತ್ರಕವಿ ಸೋಮನಾಥನು ತನ್ನ ಕಲ್ಯಾಣಕಾರಕವನ್ನು ಬರೆದಿರುವುದಾಗಿ ತಿಳಿಸಿದ್ದಾನೆ.

"ಆವಾವ ಕಲಾವಿದ್ಯೆಗ
ಗಳೇವುವೊ ಲೋಕೋಪಕಾರಿ ವೈದ್ಯಮೆ ಸಾಲ್ಗುಂ
ಭಾವಿಸೆ ಷಡ್ದ್ರವ್ಯದೊಳಂ
ಜೀವದ್ರವ್ಯಮೆ ಜಗಕ್ಕೆ ದೈವಮೆಂಬರ್॥"[೧೦]

ಜಗತ್ತಿನಲ್ಲಿರುವ ಷಡ್ದ್ರವ್ಯಗಳಲ್ಲಿ ಜೀವದ್ರವ್ಯವೇ ಶ್ರೇಷ್ಠವೆನಿಸುವಂತೆ ಲೋಕದಲ್ಲಿ ಎಷ್ಟೊಂದು ಕಲೆ, ವಿದ್ಯೆಗಳಿದ್ದರೂ ವೈದ್ಯವಿದ್ಯೆಯೇ ಲೋಕೋಪಕಾರಿಯಾದುದು ಎಂದು ಹೇಳಿದ್ದಾನೆ.

"ಕ್ರೂರಾಳಾಪಂಗೆ ದುರಾ
ಚಾರಿಗೆ ಮಾತ್ಸರ್ಯಸಂಯುತಂಗಮಹಂ ।
ಕಾರಿಗೆ ಮಿಥ್ಯಾದೃಷ್ಟಿಗೆ
ಪಾರಕೆಯ್ತುವಂಗೆ ಮಾಡಲಾಗದು ಮರ್ದಂ॥"[೧೧]

---

೮. ಡಾ. ಧನ್ಯಕುಮಾರ ಇಜಾರಿ ; **ಜೈನ ಲೌಕಿಕ ಸಾಹಿತ್ಯ ಸಂಪದ** ; ಪುಟ.೪೩

೯. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೩೦೫

೧೦. **ಕನ್ನಡ ವಿಶ್ವಕೋಶ : (ಸಂಪುಟ ಏಳು)** ; ಪುಟ. ೬೨೫

೧೧. **ಅದೇ** ; ಪುಟ. ೬೨೫

ಕ್ರೂರತ್ವವನ್ನು ಮೆರೆಯುವವನಿಗೆ, ದುರಾಚಾರಿಗೆ, ಇನ್ನೊಬ್ಬರ ಬಗೆಗೆ ಮತ್ಸರ ಪಡುವವನಿಗೆ, ಮಿಥ್ಯಾದೃಷ್ಟಿಯುಳ್ಳಾತನಿಗೆ, ವ್ಯಭಿಚಾರಿಗೆ ವೈದ್ಯವನ್ನು ಕಲಿಸಿಕೊಡಬಾರದೆಂದು ಹೇಳುತ್ತಾನೆ. ಹೃದಯವಂತನೂ, ಕರುಣೆಯುಳ್ಳಾತನೂ, ಸ್ಥಿರಬುದ್ಧಿಯುಳ್ಳಾತನೂ, ಶುದ್ಧನೂ, ಆಸೆ–ಆಮಿಷಗಳಿಲ್ಲದವನೂ ಮಾತ್ರ ವೈದ್ಯನಾಗಲು ಯೋಗ್ಯನಾಗಿರುತ್ತಾನೆ. ಪರಮಾಗಮಕ್ಕೆ ಆದರ್ಶವಾಗಿರುವ ರೀತಿಯಲ್ಲಿ ಈ ಕೃತಿಯು ರಚನೆಯಾಗಿದೆ ಎಂದು ಶಾಸ್ತ್ರಕಾರನು ಹೇಳುತ್ತಾನೆ. ರೋಗಿಯ ಲಕ್ಷಣ, ಪ್ರದೇಶದ ಲಕ್ಷಣ, ಔಷಧಿದ್ರವ್ಯಗಳನ್ನು ಸಂಗ್ರಹಿಸಬೇಕಾದ ಸಂದರ್ಭ, ಮಾನವನ ವಯಸ್ಸಿನ ವಿವಿಧ ಹಂತಗಳು, ಧಾತುಗಳು, ದೂತ ಲಕ್ಷಣ, ಸ್ವಪ್ನ ಲಕ್ಷಣ, ಶರೀರ ಪ್ರಕೃತಿ, ಜ್ಯೋತಿಷ್ಯ, ಶಕುನ, ಹಸಿವು, ನೀರಡಿಕೆ ಇವೆಲ್ಲವುಗಳೂ ರೋಗ ಲಕ್ಷಣಗಳಲ್ಲ. ಜ್ವರ, ದಮ್ಮು, ಕೆಮ್ಮು, ಅತಿಸಾರ, ತಲೆಶೂಲೆ, ಹೊಟ್ಟೆನೋವು, ಮೈನಡುಕ, ಮೂರ್ಛೆ ಹೋಗುವುದು ಇವು ಶಾರೀರಿಕ ರೋಗದ ಲಕ್ಷಣಗಳು. ಮಾನಸಿಕ ವೇದನೆ, ಆಂತರಿಕ ತುಮುಲಗಳು, ಮನಸ್ಸಿನ ಚಡಪಡಿಕೆ, ಮಾನಸಿಕ ಆಘಾತ, ಒತ್ತಡಗಳು ಮನೋರೋಗಗಳು. ಇವು ಪೂರ್ವಜನ್ಮದ ಪಾಪಕರ್ಮಗಳ ಫಲವಾಗಿ ಬರುತ್ತವೆ. ತತ್ತ್ವಜ್ಞಾನ, ಉತ್ತಮ ನಡತೆ, ದಯೆ, ದಾನ, ಶಾಂತಿ, ಧರ್ಮಪಾಲನೆ ಪರೋಪಕಾರಗಳು ಇಂತಹ ಪಾಪಕರ್ಮಗಳಿಗೆ ಚಿಕಿತ್ಸೆಯಾಗಿದೆ.

ಕಂ॥ **"ಮಲಸಂಗ್ರಹದಿಂದುದರಾ**
ನಲನಟಿವಿಂದಾಮಚಲನೆಯಿಂ ಜ್ವರಮೊಗೆಗುಂ
ಕೆಲರಾತ್ರಿಪುರರ ಧ್ವಂಸಿಯ
ಲಲಾಟಲೋಚನದಿಮೊಗೆದುದೆಂಬರ್ ಜ್ವರಮಂ॥"[೧೨]

ಮಲಬದ್ಧತೆ ಹೊಟ್ಟೆಯುಬ್ಬರ, ಜಡತ್ವ ಗುಣಗಳಿಂದ ಜ್ವರ ಉಂಟಾಗುತ್ತದೆ. ಕೆಲವರ ಅಭಿಮತದಂತೆ ತ್ರಿಪುರದಹನ ಮಾಡಿದ ಶಿವನು ಸಿಟ್ಟಿನಿಂದ ಜ್ವರವು ಕಾಣಿಸಿಕೊಳ್ಳುವಂತೆ ಮಾಡಿದನು ಎಂದು ಹೇಳುತ್ತಾನೆ ಜಗದ್ದಳ ಸೋಮನಾಥ.

ಜ್ವರ ರೋಗದ ಬಗೆಗೆ ಹೇಳುತ್ತ ಭೂತಜ್ವರ, ಕಾಮಜ್ವರಗಳನ್ನು ವಿವರಿಸಿದ್ದಾನೆ. ಜ್ವರದಲ್ಲಿ ಅತಿಯಾದ ರೋಮಾಂಚನ, ಮೈನೋವು, ಬಾಯಿಯಲ್ಲಿ ನೀರೂರುವದು ಈ ಲಕ್ಷಣಗಳಿದ್ದರೆ ಅದು ಅಭಿಚಾರ (ಕೃತ್ರಿಮ) ಜ್ವರವೆಂದು ತಿಳಿಯಬೇಕೆಂದಿದ್ದಾನೆ.

ಕಂ॥ **"ಜ್ವರದಾದಿಯೊಳುಪವಾಸಂ**
ಜ್ವರಮಧ್ಯಮದಲ್ಲಿ ಗಂಜಿ ಪೇಟ್ಟ್ವೆ ಕಷಾಯಂ
ಜ್ವರಪಾಕದೊಳಸ್ತಮಿತ
ಜ್ವರದೊಳ್ ಮಲಹರಣಮಿನಿತಿವಾರೋಗ್ಯಕರಂ ॥"[೧೩]

ಜ್ವರ ನಿವಾರಣೆಗೆ ಆರಂಭದಲ್ಲಿ ಉಪವಾಸ, ಜ್ವರದ ಮಧ್ಯಕಾಲದಲ್ಲಿ ಗಂಜಿ ಸೇವಿಸುವುದು, ಜ್ವರಹರ ಕಷಾಯಗಳನ್ನು ಸೇವಿಸಬೇಕು. ಜ್ವರದ ಕೊನೆಯ ಸ್ಥಿತಿ ಹಾಗೂ ಜ್ವರ ಬಿಟ್ಟ ನಂತರ

೧೨. ಡಾ. ಎ. ರಂಗಸ್ವಾಮಿ (ಲೇ) : **ಪ್ರಾಚೀನ ಲೌಕಿದ ಶಾಸ್ತ್ರಗ್ರಂಥಗಳು** ; ಪುಟ. ೩೦
೧೩. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೩೦೬

ಶೋಧನ ಕರ್ಮಗಳನ್ನು ಮಾಡಿದರೆ ಜ್ವರವು ಮತ್ತೆ ಬರುವುದಿಲ್ಲ ಎಂದಿದ್ದಾನೆ. ಸಕ್ಕರೆ, ಬೇವಿನಕಡ್ಡಿ, ಭದ್ರಮುಸ್ತೆ, ದ್ರಾಕ್ಷಿಗಳನ್ನು ಸೇರಿಸಿ ಅರೆದು ಕುಡಿಯುವುದರಿಂದ ಪಿತ್ತಜ್ವರವು ಶಮನವಾಗುವುದು. ಚಿಕ್ಕಣಿಕೆಯ ಹುಲ್ಲು, ಬೆಳ್ಳುಳ್ಳಿಯ ರಸಗಳನ್ನು ಸೇರಿಸಿ ನಸ್ಯ ಮಾಡುವುದರಿಂದ ಎಂತಹ ಜ್ವರವಿದ್ದರೂ ಉಪಶಮನವಾಗುವುದು.

ಕಂ॥ **"ಬೆರಸುವುದುಜೆ ಘೃತಮಂ ಶ**
ರ್ಕರೆಯಂ ನೆಲ್ಲಿಯುಮನಮರ್ದುವಳ್ಳಿಯ ಪುಡಿಯಂ
ಪಿರಿದೆನಿಪ ರಕ್ತಪಿತ್ತದ
ಭರಮಂ ಪರಿಹರಿಕುಮಱಿಗಿದಮೃತಾಮಳಕಂ ॥"[೧೪]

ತುಪ್ಪ, ಸಕ್ಕರೆ, ನೆಲ್ಲಿ, ಅಮೃತಬಳ್ಳಿಯ ಪುಡಿಗಳನ್ನು ಸೇರಿಸಿ ಸೇವಿಸುವದರಿಂದ ರಕ್ತಪಿತ್ತವು ಉಪಶಮನವಾಗುವುದು. ಚಕ್ರಾಣಿಯ ಬೇರು, ಆಲದ ಬಿಳಿಲಿನ ಚಿಗುರು, ಹೂಲಿಸೊಪ್ಪುಗಳನ್ನು ಅರೆದು ಮೊಸರಿನಲ್ಲಿ ಹಾಕಿ ಅದಕ್ಕೆಯ ಸೈಂಧವಲವಣವನ್ನು ಸೇರಿಸಿ ತಿನ್ನುವುದರಿಂದ ಅತಿಸಾರವು ಕಡಿಮೆಯಾಗುವುದು. ಶುಂಠಿ, ಮೆಣಸು, ಹಿಪ್ಪಲಿ ಅಥವಾ ಮಾವಿನ ಗೊರಟೆಯ ಬೀಜದ ತಿರುಳು, ಅಜವಾನಗಳನ್ನು ತಿನ್ನುವುದರಿಂದ ಅತಿಸಾರ ಉಪಶಮವಾಗುವುದು. ಹೂಲಿಯ ಬೇರಿನ ತೊಗಟೆ ಹಾಗೂ ಎಮ್ಮೆಯ ಮೊಸರಿನಲ್ಲಿ ಸೈಂಧವವನ್ನು ಬೆರೆಸಿ ತಿನ್ನುವುದರಿಂದ ಅತಿಸಾರವು ಶಮನವಾಗುವುದು.

"ದಾಳಿಂಬೆಯ ಹೂವು, ಮಾವಿನ ಬೀಜ, ಎಳೆಯ ಗರಿಕೆಗಳನ್ನು ಅಕ್ಕಿಯನ್ನು ತೊಳೆದ ನೀರಿನಲ್ಲಿ ಅರೆದು, ಸಕ್ಕರೆಯನ್ನು ಸೇರಿಸಿ ಮೂಗಿನಲ್ಲಿ ಹನಿಹನಿಯಾಗಿ ಹಾಕುವುದರಿಂದ ಮೂಗಿನಿಂದ ರಕ್ತಸ್ರಾವವಾಗುವುದು ನಿಲ್ಲುತ್ತದೆ. ಹಿಪ್ಪಲಿ, ಉತ್ತರಣೆಯ ಬೀಜಗಳನ್ನು ಅಕ್ಕಿತೊಳೆದ ನೀರಿನಲ್ಲಿ ಸೇರಿಸಿ ಕುಡಿಯುವುದರಿಂದ ಸ್ತ್ರೀಯರಲ್ಲಿ ಅತಿಯಾದ ಮುಟ್ಟುಸ್ರಾವವು ನಿಲ್ಲುವುದು."[೧೫] ಮುಂದುವರೆದು, ಸೋಮನಾಥ ಕವಿಯು ಮಧುಮೇಹದ ಉಲ್ಲೇಖವನ್ನೂ ಮಾಡುತ್ತಾನೆ. ನೈದಿಲೆಗಡ್ಡೆ, ಅಮೃತಬಳ್ಳಿ, ಕಹಿಪಡವಲ, ತ್ರಿಫಲೆ ಹಾಗೂ ಬೇವಿನ ಕಷಾಯವನ್ನು ನಿತ್ಯವೂ ಸೇವಿಸುವುದರಿಂದ ಮಧುಮೇಹವು ಹರಿಹಾರವಾಗುವುದು. ಹೊಂಗೆಯ ಬೀಜ, ಕಹಿಪಡವಲ, ತ್ರಿಫಲ, ಬೇವಿನ ಎಲೆ ಹಾಗೂ ಅಮೃತಬಳ್ಳಿಗಳನ್ನು ಅರೆದು ತುಪ್ಪದಲ್ಲಿ ಸೇರಿಸಿ ಪಾನ, ಲೇಪನಗಳನ್ನು ಮಾಡುವುದರಿಂದ ಕುಷ್ಠರೋಗವು ಪರಿಹಾರವಾಗುವುದು. ಈ ಪಾಕದಲ್ಲಿ ನಿತ್ಯ ಬೆಳಿಗ್ಗೆ ಬೆಲ್ಲವನ್ನು ಸೇರಿಸಿ ಕುಡಿಯುವದರಿಂದ ಕುಷ್ಠರೋಗಕ್ಕೆ ಸಂಬಂಧಿಸಿದ ಎಲ್ಲ ಚರ್ಮವಿಕಾರಗಳು ನಿವಾರಣೆಯಾಗುವವು.

ಗುದದ್ವಾರದಲ್ಲಿ ಗಂಟು ಹುಟ್ಟಿಕೊಂಡು ಅದರಿಂದ ರಕ್ತಸ್ರಾವವಾಗುತ್ತಿದ್ದರೆ ಅದು ಅಂತರ್ವಲಯ ಮೂಲವ್ಯಾಧಿ ಎನಿಸಿಕೊಳ್ಳುತ್ತದೆ. ಮಲವು ಒಣಗಿ ಗಟ್ಟಿಯಾಗಿದ್ದರೆ ಅದು ಮಲಬದ್ಧತೆಯಾಗಿದೆ. ಇದನ್ನು ಬಹಿರ್ವಲಯ ಮೂಲವ್ಯಾಧಿ ಎನ್ನಲಾಗುತ್ತದೆ. ಅರಿಸಿನ

೧೪. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೨೦೭
೧೫. ಧನ್ಯಕುಮಾರ ಇಜಾರಿ ; **ಜೈನ ವೈದ್ಯಕೀಯ ಪರಂಪರೆ** : ಪುಟ. ೬೯

ಪುಡಿಯನ್ನು ಕಳ್ಳಿಹಾಲಿನಲ್ಲಿ ಸೇರಿಸಿ, ಇಲ್ಲವೇ ಕಳ್ಳಿಹಾಲಿನಲ್ಲಿ ಎಣ್ಣೆಯನ್ನು ಸೇರಿಸಿ ಗುದಕ್ಕೆ ಲೇಪಿಸುವದರಿಂದ ಎರಡೂ ರೀತಿಯ ಮೂಲವ್ಯಾಧಿಗಳು ನಿರ್ಮೂಲವಾಗುತ್ತವೆ ಎಂದಿದ್ದಾನೆ 'ಕರ್ನಾಟಕ ಕಲ್ಯಾಣಕಾರಕ'ದ ಕರ್ತೃ ಜಗದ್ದಳ ಸೋಮನಾಥ.

"ಭಗಂದರ ರೋಗದ ಬಗ್ಗೆ ವಿವರಿಸುತ್ತ ಇದರಲ್ಲಿ ರಕ್ತ ಸೋರುವ, ಮೊಳಕೆಗಳು ಬಂದು ನೋವುಂಟಾಗುವ, ಜಿಗಳೆ ಸಂಚರಿಸಿದಂತೆ ಅತಿ ದುಃಖವನ್ನುಂಟು ಮಾಡುವ ರೋಗ ಎಂದಿದ್ದಾನೆ. ಇದರಲ್ಲಿ ಕೀವು ರಕ್ತದೊಡನೆ ಮಲ–ಮೂತ್ರಗಳೂ ಸೋರುವುದಲ್ಲದೇ ಗುದದಲ್ಲಿ ಹುಣ್ಣುಗಳು ಉಂಟಾಗಿ ರಕ್ತ ಕೀವುಗಳು ಬರುವವು. ಇದಕ್ಕೆ ಔಷಧದೊಡನೆ ಕ್ಷಾರಕರ್ಮ, ಶಸ್ತ್ರಚಿಕಿತ್ಸೆಗಳು ಬೇಕಾಗುತ್ತವೆ. ಆಲದ ಮರದ ಚಿಗುರು, ಅಮೃತಬಳ್ಳಿ, ಶುಂಠಿ, ಜೇಷ್ಠಮಧುಗಳನ್ನು ಅರೆದುಕೊಂಡು ಮಜ್ಜಿಗೆಯೊಂದಿಗೆ ಸೇರಿಸಿ ನಿತ್ಯವೂ ಸೇವಿಸುತ್ತ ಹೋದರೆ ಈ ರೋಗವು ಉಪಶಮನವಾಗುವುದು."[೧೬]

ಈ ಮುಂದು ಉದರಬೇನೆಗೆ ಪರಿಹಾರೋಪಾಯಗಳನ್ನು ತಿಳಿಸುತ್ತ –

"ಪಶು ಕುಱಿಯೆಮ್ಮೆಯೊಂಟೆಯಜಮೆಂಬಿವರಯ್ದಱಮೂತ್ರದಿಂದ ಬೇ
ಯಿಸುಗೆ ಹರೀತಕೀಫಲ ಸಹಸ್ರಮನಾರಿಸಿ ಚೂರ್ಣಮಾಗಿ ಮಾ
ಡಿಸುವುದು ಸೈಂಧವಂ ತ್ರಿಕಟುಕಂ ಸ್ನುಹಿದುಗ್ಧಮಿವೊಂದುಗೂಡಿ ಮ
ರ್ದಿಸುವುದು ಪಂಚಮೂತ್ರದ ಹರೀತಕಿ ಸರ್ವರುಜಾಪಹಾರಕಂ ॥"[೧೭]

ಹಸು, ಕುರಿ, ಎಮ್ಮೆ, ಒಂಟೆ, ಆಡುಗಳ ಮೂತ್ರಕ್ಕೆ ಅಳಲೆಕಾಯಿಯನ್ನು ಸೇರಿಸಿ, ಸಹಸ್ರನಾಮ ಹಾಕಿ ಬೇಯಿಸಿ ಚೂರ್ಣ ತಯಾರಿಸುವುದು. ನಂತರ ಸೈಂಧವ, ಶುಂಠಿ, ಮೆಣಸು, ಹಿಪ್ಪಲಿ ಹಾಗೂ ಕಳ್ಳಿಹಾಲನ್ನು ಸೇರಿಸಿ ಕುಡಿಯುವುದರಿಂದ ಸರ್ವರೋಗಗಳೂ ನಿವಾರಣೆಯಾಗುವವು.

"ಸಿರಿಕಂಡಂ ಬಾಳಂ ಶ
ರ್ಕರೆ ಬೇವಿನ ಕಡ್ಡಿ ಭದ್ರಮುಸ್ತೆ ದ್ರಾಕ್ಷಂ
ಬೆರಸರೆದು ಕುಡಿಯಲೆಱಿದೊಡೆ
ಪರಿಹರಿಸುವುಮೆಯ್ದೆ ಪಿತ್ತಜನಿತ ಜ್ವರಮಂ ॥

ಪರಿಮತಿಸಾರಂ ಪಿರಿದಾ
ಗಿರೆ ಹೂಲಿಯಬೇರ ತಿಗುಡನೆರ್ಮ್ಮೆಯ ಮೊಸರೊಳ್
ಬೆರಸಿಟ್ಟು ಸೈಂಧವಂ ಕೂ
ಡಿರೆ ಮೆಲ್ವದು ದಿವ್ಯಯೋಗಮಿದು ಪರಿಹರಿಕುಂ ॥"[೧೮]

ಶ್ರೀಗಂಧ, ಲಾಮಂಚ, ಸಕ್ಕರೆ, ಬೇವಿನಕಡ್ಡಿ, ಭದ್ರಮುಸ್ತೆ, ದ್ರಾಕ್ಷಿಗಳನ್ನು ಸೇರಿಸಿ ಅರೆದು ಕುಡಿಯುವುದರಿಂದ ಪತ್ರಜ್ವರವು ಶಮನವಾಗುವುದು. ಅಂತೆಯೇ ಹೂಲಿಯಬೇರಿನೊಂದಿಗೆ ತಿಗುಡಿನ ಗೆಡ್ಡೆಯನ್ನು ಅರೆದು ಎಮ್ಮೆಯ ಮೊಸರಿನಲ್ಲಿ ಸರಿಯಾಗಿ ಬೆರೆಸಿ, ಸೈಂಧವ ಲವಣವನ್ನು ಸೇರಿಸಿ ಕುಡಿಯುವುದರಿಂದ ಅತಿಸಾರವು ಉಪಶಮವಾಗುವುದು.

---

೧೬. ಡಾ. ಧನ್ಯಕುಮಾರ ಇಜಾರಿ ; **ಜೈನ ಲೌಕಿಕ ಸಾಹಿತ್ಯ ಸಂಪದ** ; ಪುಟ.೪೭

೧೭. ಡಾ. ಎ. ರಂಗಸ್ವಾಮಿ (ಲೇ) : **ಪ್ರಾಚೀನ ಲೌಕಿದ ಶಾಸ್ತ್ರಗ್ರಂಥಗಳು** ; ಪುಟ. ೩೨

೧೮. **ಅದೇ** ; ಪುಟ. ೩೨, ೩೩

ಕಾಮಾಲೆಯು ಮನುಷ್ಯನಲ್ಲಿ ವಿಕಾರವನ್ನುಂಟು ಮಾಡುವ ಇನ್ನೊಂದು ರೋಗವಾಗಿದ್ದು, ಮೈ ಉರಿ, ವಾಂತಿ, ಕಣ್ಣುಗಳು ಹಸಿರು ಇಲ್ಲವೇ ಹಳದಿಯಾಗುವುದು, ಮೂತ್ರವು ಅತೀ ಹಳದಿ ಇಲ್ಲವೇ ಕೆಂಪಾಗಿ ಹೋಗುವುದು, ನಾಲಿಗೆ ರುಚಿಯನ್ನು ಕಳೆದುಕೊಳ್ಳುವುದು, ದೇಹವು ಬಲಹೀನಗೊಳ್ಳುವುದು ಇದರ ಲಕ್ಷಣಗಳಾಗಿವೆ. ಸಕ್ಕರೆ, ತುಪ್ಪ, ಶುಂಠಿಗಳನ್ನು ಕಾಯಿಸಿದ ಹಾಲಿನಲ್ಲಿ ಸೇವಿಸುವುದು. ಇಲ್ಲವೇ ನೀಲಿಯ ರಸದಲ್ಲಿ ಸಕ್ಕರೆ, ತ್ರಿಫಲೆಗಳನ್ನು ಸೇರಿಸಿ ಕಾಯಿಸಿದ ಹಾಲಿನಲ್ಲಿ ಸೇವಿಸುವುದರಿಂದ ಕಾಮಾಲೆಯು ನಿಯಂತ್ರನವಾಗುತ್ತದೆ ಎನ್ನುತ್ತಾನೆ. ಅನಿಯಂತ್ರಿತ ಬಿಕ್ಕು ಹತ್ತಿದ್ದರೆ ದ್ರಾಕ್ಷಿ, ತುಪ್ಪ, ಅಣಿಲೆ, ಹಿಪ್ಪಲಿ, ಸಕ್ಕರೆಗಳನ್ನು ಸೇರಿಸಿ ಸೇವಿಸುವುದರಿಂದ ಬಿಕ್ಕಳಿಕೆಯು ನಿಲ್ಲುತ್ತದೆ. ಮೂತ್ರ ವಿಸರ್ಜನೆಯ ತೊಂದರೆಯುಂಟಾಗಿದ್ದರೆ ತ್ರಿಫಲೆಯ ಕಷಾಯ, ನೆಗ್ಗಿಲ ಮುಳ್ಳು, ಗರಿಕೆ, ಜೇಷ್ಠಮಧುಗಳೊಂದಿಗೆ ಶಿಲಾಜಿತುವನ್ನು ಸೇರಿಸಿ ಕುಡಿಯುವುದು. ಇದರಿಂದ ಮೂತ್ರದ ಹರಳುಗಳೂ ನಿವಾರಣೆಯಾಗುತ್ತವೆ. ಅಲ್ಲದೇ ಮಲ್ಲಿಗೆ ಅಥವಾ ಸೂರ್ಯಶಿಖರಿಯ ಬೇರನ್ನು ಅರೆದು ತಣ್ಣನೆಯ ಹಾಲಿನಲ್ಲಿ ಸೇರಿಸುವುದರಿಂದಲೂ ಈ ತೊಂದರೆಯನ್ನು ತಪ್ಪಿಸಬಹುದು ಎಂದು ಹೇಳಲಾಗಿದೆ.

"ನೆಲ್ಲಗುಳ್ಳ, ಅಡಸಾಲ, ಹಿಪ್ಪಲಿಗಳನ್ನು ಅರೆದು ತುಪ್ಪದೊಂದಿಗೆ ಸೇವಿಸಿದರೆ ದೀರ್ಘಕಾಲದ ಕೆಮ್ಮು ನಿವಾರಣೆಯಾಗುವುದು. ಸೈಂಧವ, ಚಂಗಲ ಕೋಷ್ಠ, ಬಜೆ, ಯವಕ್ಷಾರ, ಹಿಂಗುಗಳನ್ನು ಚೂರ್ಣಮಾಡಿ ಬಿಸಿನೀರಿನೊಡನೆ ಕುಡಿಯುವುದರಿಂದಲೂ, ಇಲ್ಲವೇ ಹಿಂಗು, ಶುಂಠಿ, ಸೌವರ್ಚಲವಣ, ಅಜವಾನಗಳ್ನು ಅರೆದು ಬಿಸಿನೀರಿನಲ್ಲಿ ಕುಡಿಯುವುದರಿಂದಲೂ ಕೆಮ್ಮು ನಿವಾರಣೆಯಾಗುವುದು ಎಂದು ಹೇಳಿದ್ದಾನೆ."[೧೯] ವಾತರೋಗಗಳಿಗೆ ಅಶ್ವಗಂಧ ಮತ್ತು ಶುಂಠಿಗಳನ್ನು ಹಾಲಿನಲ್ಲಿ ಸೇರಿಸಿ ಕುಡಿಯುವುದು. ಅಥವಾ ಅರಿಸಿನವನ್ನು ಎಣ್ಣೆಯಲ್ಲಿ ಕುದಿಸಿ ಮೈಗೆ ಲೇಪಿಸುವುದು. ಇಲ್ಲವೇ ಅರಿಸಿನ, ಕುಂಕುಮಗಳನ್ನು ಕೊಬ್ಬರಿ ಎಣ್ಣೆಯಲ್ಲಿ ಕಾಯಿಸಿ ಮೈಗೆ ಲೇಪಿಸಿಕೊಳ್ಳುವುದು. ಹೀಗೆ ಮಾಡುವುದರಿಂದ ಎಂಬತ್ತು ಪ್ರಕಾರದ ವಾತರೋಗಗಳು ನಿರ್ಮೂಲವಾಗುವವು.

ದೇಹದ ಮೇಲಿನ ವಿಸರ್ಪ (ತುರಿಕೆ, ಮೈಯಲ್ಲಿ ಹುಳು ಓಡಾದಿದಂತಾಗುವುದು), ನರವುಲಿ (ನರೋಲಿ, ನರಲಿ)ಗಳಿಗೆ ಬೇವಿನ ಎಲೆಯನ್ನು ಮಜ್ಜಿಗೆಯಲ್ಲಿ ಅರೆದು ಲೇಪಿಸುವುದು. ಅಥವಾ ಎಕ್ಕದ ಬೇರು, ಲಾಮಂಚ, ಶ್ರೀಗಂಧಗಳನ್ನು ಅಕ್ಕಿಯನ್ನು ತೊಳೆದ ನೀರಿನಲ್ಲಿ ಅರೆದು ಕುಡಿಯುವುದು. ಎಳನೀರಿನಲ್ಲಿ ಸಕ್ಕರೆ, ಲಾಮಂಚ, ದ್ರಾಕ್ಷಿ, ಜಾಜಿ ಹೂವು, ಬೇವಿನ ಚಿಗುರುಗಳನ್ನು ಅರೆದು ಕುಡಿಯುವುದು. ಕೆಸರು ನೀರಿನಲ್ಲಿ ತೊಗರಿಕಾಳುಗಳನ್ನು ಅರೆದು ನರೋಲಿ ಇರುವ ಜಾಗಕ್ಕೆ ಲೇಪಿಸಿದರೆ ಅದು ಉದುರಿ ಬೀಳುತ್ತದೆ.

ಹಸಿಶುಂಠಿ, ತ್ರಿಫಲೆ, ಆಡುಸೋಗೆ, ಬೇವಿನೆಲೆ, ರಕ್ತಚಂದನ, ಗುಳ್ಳದ ಬೇರುಗಳನ್ನು ಅರೆದು ಕಷಾಯ ಮಾಡಿ ಕುಡಿಯುವುದರಿಂದ ಮೈಬಾವು ಇಳಿಯುವುದು. ಅರಿಸಿನ, ಚಿತ್ರಮೂಲದ ಗಡ್ಡೆ,

---

೧೯. ಡಾ. ಧನ್ಯಕುಮಾರ ಇಜಾರಿ ; **ಜೈನ ಲೌಕಿಕ ಸಾಹಿತ್ಯ ಸಂಪದ** ; ಪುಟ. ೪೮

ಉತ್ತರಣೆ, ಸೈಂಧವಲವಣಗಳನ್ನು ಅರೆದು ಬೆಣ್ಣೆಯಲ್ಲಿ ಸೇರಸಿ ಲೇಪಿಸುವುದರಿಂದ ಗಂಡಮಾಲೆಗಳು ಶಮನವಾಗುವವು. ಮಾದಲಹಣ್ಣಿನ ಹುಳಿ, ಓಂ ಕಾಳು (ಅಜವಾನ), ಹಿಂಗು, ಸೈಂಧವಲವಣ, ಚಂಗಲಕೋಷ್ಠಗಳೊಂದಿಗೆ ಸಕ್ಕರೆಯನ್ನು ಸೇರಿ ಸೇವಿಸುದರಿಂದ ಅಜೀರ್ಣದ ತೊಂದರೆಗಳು ಶಮನವಾಗುವವು.

ಕುಂಕುಮಕೇಸರಿ, ಮೆಣಸುಗಳನ್ನು ಎಳ್ಳೆಣ್ಣೆಯಲ್ಲಿ ಸೇರಿಸಿ ಹಚ್ಚುವುದು. ಇಲ್ಲವೇ ನೆಲ್ಲಿಕಾಯಿ, ಮಾವಿನ ಗೊರಟೆಯ ತಿರುಳುಗಳನ್ನು ಅರೆದು ತಲೆಗೆ ಹಚ್ಚುವುದರಿಂದ ಕೂದಲು ಉದ್ದ ಬೆಳೆಯುವುದು. ವೀಳ್ಯದೆಲೆಯಲ್ಲಿ ಪಾದರಸವನ್ನು ಸೇರಿಸಿ ಅರೆದು ತಲೆಗೆ ಹಚ್ಚುವುದರಿಂದ ತಲೆಯಲ್ಲಿನ ಹೇನು ಮತ್ತು ಸೀರುಗಳು ಸಾಯುವವು. ಅಮೃತ ತೈಲವನ್ನು ಲೇಪನ ಮಾಡುವುದರಿಂದ ಬಿಳಿ ಕೂದಲು, ಕೂದಲು ಉದುರುವಿಕೆ ಹಾಗೂ ಬೊಕ್ಕುತಲೆಯ ಸಮಸ್ಯೆಯು ನಿವಾರಣೆಯಾಗುವುದು. ಶಂಖಪುಷ್ಪವನ್ನು ಸುಟ್ಟು ಅದರ ಬೂದಿಗೆ ಸೀಸದಪುಡಿ, ಎಣ್ಣೆಯನ್ನು ಸೇರಿಸಿ ತಲೆಗೆ ಹಚ್ಚುವುದರಿಂದ ಕೂದಲು ಕಪ್ಪಾಗುವವು. ಔಡಲ ಎಣ್ಣೆಯನ್ನು ಕಾಯಿಸಿ ತಲೆಗೆ ಹಚ್ಚುವುದು. ಇಲ್ಲವೇ ಅಕ್ಕಿಯ ತೌಡನ್ನು ಅಂಬಲಿಯಲ್ಲಿ ಸೇರಿಸಿ ಹಚ್ಚುವುದರಿಂದ ತಲೆಯ ಹೊಟ್ಟು ನಿವಾರಣೆಯಾಗುವುದು.

"ಕಕ್ಕೆ, ಬೇವು, ವೀಳ್ಯದೆಲೆ, ಕೇಸರಿ, ಅಳಲೆಕಾಯಿಗಳನ್ನು ಅಕ್ಕಿಗಂಜಿಯಲ್ಲಿ ಸೇರಿಸಿ ಮೂರು ದಿನ ಮೈಗೆ ಹಚ್ಚುವುದರಿಂದ ತುರಿಕೆ, ಕಜ್ಜಿ, ಚಿಬ್ಬುಗಳು ನಿವಾರಣೆಯಾಗುವವು. ಗುಲಗಂಜಿ, ಎಕ್ಕ ಅಥವಾ ಕಳ್ಳಿಯ ಬೇರು ಇವುಗಳಲ್ಲಿ ಯಾವುದಾದರೊಂದನ್ನು ಸುಟ್ಟು ಅದರ ಬೂದಿಯನ್ನು ಹಲ್ಲಿನಲ್ಲಿ ಹಾಕುವುದರಿಂದ ಕ್ರಿಮಿಗಳು ನಾಶವಾಗಿ ಹುಳುಕು ಹಲ್ಲಿನ ಸಮಸ್ಯೆ ನಿವಾರಣೆಯಾಗುವುದು. ಬಾಗೆಯ ಬೀಜಗಳನ್ನು ಗೋಮೂತ್ರದಲ್ಲಿ ಸೇರಿಸಿ ಅರೆದು ಮುಖಕ್ಕೆ ಲೇಪಿಸುವುದು. ಇಲ್ಲವೇ ಶ್ರೀಗಂಧ ಮತ್ತು ಮೆಕ್ಕೆಕಾಯಿಗಳನ್ನು ಅರೆದು ಮುಖಕ್ಕೆ ಲೇಪಿಸುವುದರಿಂದ ಮುಖದಲ್ಲಿನ ಮೊಡವೆಗಳು ಮಾಯವಾಗುತ್ತವೆ." [೨೦]

ಹೀಗೆ ಜಗದ್ದಳ ಸೋಮನಾಥನು ತನ್ನ 'ಕರ್ಣಾಟಕ ಕಲ್ಯಾಣಕಾರಕ' ಗ್ರಂಥದಲ್ಲಿ ಹಲವಾರು ರೋಗಗಳು ಮತ್ತು ಅವುಗಳಿಗೆ ಔಷಧೀಕ್ರಮಗಳನ್ನು ಬೋಧಿಸಿದ್ದಾನೆ. ಮನುಷ್ಯನು ಅನ್ನ, ಆಹಾರ, ನೀರು ಸೇವನೆಯಲ್ಲಿ ಎಚ್ಚರಿಕೆ ವಹಿಸುವುದರಿಂದ ಹಲವು ಬಗೆಯ ರೋಗಗಳನ್ನು ತಡೆಗಟ್ಟಲು ಸಾಧ್ಯವಿದೆ ಎಂಬ ಸತ್ಯವನ್ನು ಮನಗಾಣಿಸಿದ್ದಾನೆ. ಕವಿಯು ಉಲ್ಲೇಖಿಸಿದ ಹಲವಾರು ಆಯುರ್ವೇದ ಸಸ್ಯಗಳು ಸುಲಭವಾಗಿ ಕೈಗೆಟುಕುವಂತಿರುವವುಗಳು. ಅವುಗಳನ್ನು ಚಿಕಿತ್ಸೆಗಾಗಿ ಬಳಸಿಕೊಳ್ಳಲು ಸುಲಭ ಉಪಾಯಗಳನ್ನು ಗ್ರಂಥದಲ್ಲಿ ಪ್ರಸ್ತುಪಡಿಸಿದ್ದಾನೆ.

೫.೧.೨. ದೇವೇಂದ್ರಮುನಿ (೧೨೦೦):

"ಈತನು 'ಬಾಲಗ್ರಹಚಿಕಿತ್ಸೆ'ಯನ್ನು ಬರೆದಿದ್ದಾನೆ. ಇವನು ಜೈನಕವಿ; ಸುಮಾರು ೧೨೦೦ರಲ್ಲಿ ಇದ್ದಿರಬಹುದೆಂದು ಊಹಿಸಲಾಗಿದೆ. ಇವನ ಗ್ರಂಥವು ಬಹುಮಟ್ಟಿಗೆ

---

೨೦. ಧನ್ಯಕುಮಾರ ಇಜಾರಿ ; **ಜೈನ ವೈದ್ಯಕೀಯ ಪರಂಪರೆ** : ಪುಟ. ೭೩.

ವಾಕ್ಯರೂಪದಲ್ಲಿದೆ."[೨೧] ಈತನು ಬರೆದಿರುವ ಗ್ರಂಥವು ಅಸಮಗ್ರವಾಗಿದ್ದು, ಪ್ರಕಟವಾಗಿಲ್ಲ. ಗ್ರಂಥದ ಬಹುತೇಕ ಭಾಗವು ತೃಟಿತವಾಗಿರುವುದರಿಂದ ಕವಿಯ ವೈಯಕ್ತಿಕ ವಿಷಯಗಳ ಕುರಿತಾದ ಯಾವುದೇ ಮಾಹಿತಿಗಳು ಲಭಿಸುವುದಿಲ್ಲ.

೫.೧.೨.೧. ಬಾಲಗ್ರಹಚಿಕಿತ್ಸೆ:

ಬಾಲಗ್ರಹಚಿಕಿತ್ಸೆಯು ವೈದ್ಯಗ್ರಂಥವಾಗಿದ್ದು, ಇದರಲ್ಲಿ ಬಾಲಗ್ರಹದ ಲಕ್ಷಣ ಹಾಗೂ ಚಿಕಿತ್ಸೆಗಳನ್ನು ತಿಳಿಸಲಾಗಿದೆ. ಅಂದರೆ ನವಜಾತ ಶಿಶುವಿನಿಂದ ಹಿಡಿದು ೧೪ನೆಯ ವಯಸ್ಸಿನವರೆಗಿನ ಮಕ್ಕಳಿಗೆ ಒದಗುವ ಕಾಯಿಲೆಗಳಿಗೆ ಬೇರೆ ಬೇರೆ ಗ್ರಹಗಳ ಕಾಟವೇ ಕಾರಣವೆಂದು ಹೇಳಿ, ಅವುಗಳಿಗಳಿಗೆ ಶಾಸ್ತ್ರೋಕ್ತವಾದ ಪೂಜೆ, ಪುನಸ್ಕಾರಗಳನ್ನು ನೆರವೇರಿಸುವುದರಿಂದ ಅವುಗಳ ಶಾಂತವಾಗಿ ಉತ್ತಮ ಫಲಗಳನ್ನು ನೀಡುತ್ತವೆ ಎಂದು ವರ್ಣಿಸಲಾಗಿದೆ.

ಜ್ವರ ಬರುವುದು, ಅಜೀರ್ಣ, ಹೊಟ್ಟೆನೋವು, ವಾಂತಿಯಾಗುವುದು, ಆಹಾರ ಸೇರದಿರುವುದು, ಕಣ್ಣಲ್ಲಿ ನೀರು ಬರುವುದು, ಮಕ್ಕಳು ಅಳುವುದು, ತುಟಿ ಒಣಗುವುದು, ಹೊಟ್ಟೆ ಗಟ್ಟಿಯಾಗುವುದು ಇವುಗಳಿಗೆಲ್ಲ ಉದ್ದಿನ ಹಿಟ್ಟಿನಲ್ಲಿ ಸ್ತ್ರೀಯ ಬೊಂಬೆಯನ್ನು ಮಾಡಿ, ನೀವಳಿಕೆ ತೆಗೆದು, ಬೊಂಬೆಗೆ ಬಟ್ಟೆಯನ್ನುಡಿಸಿ, ಕೆಂಪು ಗಂಧಾಕ್ಷತೆಗಳನ್ನೂ, ಐದು ಬಗೆಯ ಕೆಂಪು ಹೂಗಳನ್ನು ಏರಿಸಿ, ಧೂಪ-ದೀಪಗಳನ್ನು ಹಚ್ಚಿ, ನಾಲ್ಕು ಪಟ, ನಾಲ್ಕು ತಾಂಬೂಲಗಳನ್ನು ಇಟ್ಟು, ಬಾಳೆಹಣ್ಣು, ಮೊಸರು, ಅನ್ನ, ಕಜ್ಜಾಯ, ಹತ್ತು ಲಾಡುಗಳನ್ನು ಮುಂದಿರಿಸಿ, ನೀರಿನಿಂದ ಪ್ರೋಕ್ಷಿಸಿ, ಪೂಜೆಮಾಡಿ, ನೈವೇದ್ಯವನ್ನು ಅರ್ಪಿಸಿ ಕರ್ಪೂರದಾರತಿಯನ್ನು ಎತ್ತುವುದು. ಆಮೇಲೆ ಅದೆಲ್ಲವನ್ನೂ ಊರಿನ ಪಶ್ಚಿಮ ದಿಕ್ಕಿಗೆ ಹೋಗಿ ಮೂರು ಕಡೆ ಬಲಿಯನ್ನು ಹಾಕುವುದು. ಹೀಗೆ ಮಾಡುವುದರಿಂದ ಗ್ರಹಗಳು ಶಾಂತವಾಗಿ ಮಗುವು ಆರಾಮವಾಗುತ್ತದೆ. ಅಲ್ಲದೇ ಬ್ರಾಹ್ಮಣಾದಿಗಳಿಗೆ ದಾನಗಳನ್ನು ನೀಡುವುದರಿಂದಲೂ ಗ್ರಹಶಾಂತಿಯಾಗುವುದು ಎಂದು ಹೇಳಲಾಗಿದೆ.

೫.೧.೩. ಶ್ರೀಧರದೇವ (೧೫೦೦):

ಈತನು **'ವೈದ್ಯಾಮೃತ'** ಎಂಬ ಕೃತಿಯನ್ನು ಬರೆದಿದ್ದಾನೆ. "ಇವನು ಜೈನಕವಿ; ಜಗದೇಕ ಮಹಾಮಂತ್ರವಾದಿ ಎಂದು ತನ್ನನ್ನು ವಿಶೇಷಿಸಿಕೊಂಡಿದ್ದಾನೆ. ಮುನಿ ಚಂದ್ರದೇವನ ಇಷ್ಟಾನುಸಾರವಾಗಿ ಈ ಗ್ರಂಥವನ್ನು ರಚಿಸಿದಂತೆ ತಿಳಿಯುತ್ತದೆ. ಕವಿಯ ವಿಷಯವಾಗಿ ಈ ಗ್ರಂಥದಿಂದ ಇನ್ನೇನೂ ತಿಳಿಯುವುದಿಲ್ಲ. ಇವನು ಸುಮಾರು ೧೫೦೦ರಲ್ಲಿ ಇದ್ದಿರಬಹುದೆಂದು ತೋರುತ್ತದೆ."[೨೨] ಎಂದು ಕರ್ನಾಟಕ ಕವಿಚರಿತೆಕಾರರು ಊಹಿಸುತ್ತಾರೆ.

---

೨೧. ಆರ್. ನರಸಿಂಹಾಚಾರ್ಯ ; **ಕರ್ನಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೩೭೫

೨೨. **ಅದೇ** : ಪುಟ. ೧೦೭

೫.೧.೩.೧. ವೈದ್ಯಾಮೃತ:

ಶ್ರೀಧರದೇವನು ರಚಿಸಿದ 'ವೈದ್ಯಾಮೃತ'ವು ಚಂಪೂರೂಪದಲ್ಲಿದೆ. ಗ್ರಂಥದಲ್ಲಿ ೨೪ ಅಧಿಕಾರಗಳಿವೆ. ಕೃತಿಯಲ್ಲಿ ಹಲವಾರು ರುಜಿನಗಳಿಗೆ ಚಿಕಿತ್ಸಾ ವಿಧಾನಗಳನ್ನು ತಿಳಿಸಲಾಗಿದೆ.

> **"ಶ್ರೀಧರದೇವಂ ಕರುಣದಿ**
> **ನೀ ಧರೆಯೊಳ್ ಮಾನಿಸರ್ಗೆ ಸುಖಮಪ್ಪಿನೆಗಂ**
> **ವ್ಯಾಧಿಹರಮಪ್ಪ ತೆಱನಂ**
> **ಸಾಧಿಸಿ ಪೇೞ್ದಪನಿದೊಂದು ವೈದ್ಯಾಮೃತಂ ॥"**[೨೩]

ಶ್ರೀಧರದೇವನು ಈ ಧರೆಯೊಳಿರುವ ಮನುಷ್ಯರಿಗೆ ಉಂಟಾಗುವ ವ್ಯಾಧಿಗಳಿಗೆ ಪರಿಹಾರಗಳನ್ನು ತಿಳಿಸಲು ಕರುಣೆಯಿಂದಲಿ ವೈದ್ಯಾಮೃತ ಗ್ರಂಥವನ್ನು ರಚಿಸಿದುದಾಗಿ ಹೇಳಿಕೊಂಡಿದ್ದಾನೆ.

"ವಿಷಮವಾದ ಕಠಿನಾಸನದಿಂದಂ ಮಲನಿರೋಧದಿಂದಂ ಮಂದಗ್ನಿಯ ಮೇಲೆ ಭೋಜನವ ಮಾಡುವುದಱಿಂದಂ ಮೂಲವ್ಯಾಧಿ ಪುಟ್ಟುಗುಂ ಅದು ಆಱು ಪ್ರಕಾರಮಕ್ಕು ಇದ್ದೆಸೆಯ ರಕ್ತಂ ಅಪಾನಕ್ಕೀಱುದು ಬದ್ದವಾಗಿ ಸ... ಅಂತರ್ವಳಯಂಬೆರಡು ಪ್ರಕಾರಮಕ್ಕು ರಕ್ತವೊಡೆಯದೆ ದೇಹದೊಳಗೆ ಗಂಟಾಗಿ ಅಂತರ್ವಳಯಮಕ್ಕು ಅದಕ್ಕೆ ಆರೋಚಕಮಕ್ಕು ವಿಷಮಾಗ್ನಿಯಂ ಬೆನ್ನುಬೇನೆಗೆಯ್ವಂದು ಕರುಳಱಿಚುವುದುಂ ಹುಳಿದೇಗುಮಡಿಗಡಿಗೆ ಬರ್ಕುಂ ಛರ್ದಿಯೆತ್ತುವುದುಂ ನಿಶ್ಶಕ್ತಿಯುಂ ಮಲಂ ಹಿಕ್ಕೆಯಂ ...ದುಂ ಗುದದಲ್ಲಿ ಮೊಳೆಯಪ್ಪುದುಂ ದೇಹದಲ್ಲಿ ಶೂಲೆ ಪಿರಿದಪ್ಪುದುಂ ಇದು ವಾತಲಕ್ಷಣಂ ಉರಿವುದುಂ ಕೆಚ್ಚನಪ್ಪುದುಂ ನೀರ ತೃಡೆಯುಂ ಉರಿಮೂತ್ರಮುಮಡಿಗಡಿಗೆ ಬರ್ಕುಂ ಇದು ಪಿತ್ತಲಕ್ಷಣಂ ಮೊ... ಗಪ್ಪುದುಂ ಗುದಂ ತಿಂಬುದುಂ ಆಮವೆರಸಿ ಮಲಂ ಪೋಪುದಂ ಅತಿಜಡನಪ್ಪುದುಂ ಇದು ಶ್ಲೇಷ್ಮಲಕ್ಷಣಂ ಒಂದೆರಡುಮೂಱು ಮೊಳೆಯಕ್ಕುಂ ಗುದವಳಯ ಹೊಱಗೊಳಗೆ ತಿಮಿರವಕ್ಕುಂ ತೀವ್ರಬೇನೆಯಕ್ಕುಂ ಅರಸಿನಮಂ ಚೂರ್ಣಂ ಮಾಡಿ ಕಳ್ಳಿಯ ಹಾಲಲು ಕಲಸಿ ಎಣ್ಣೆಯಂ ಪೂಸಿ ಪೂಸುಗೆ ಮೊಳೆ ಕರಗುವವು ತ್ರಿಕಟುಕ ಸೈಂಧವ ಕಾಳು ಹೀರೆಯ ಎಲೆ ಇವನರೆದು ಗುದದಲೇಱಿಸುಗೆ ಅಂತರ್ವಳಯಂ ಕೆಡುಗು"[೨೪]

ವಿಷಮವಾಗಿರುವ ಆಸನಗಳಿಂದ ಮಲನಿರೋಧ ಮಾಡುವುದರಿಂದ ದೇಹದಲ್ಲಿ ತಾಪವು ಹೆಚ್ಚಾಗಿ ಮೂಲವ್ಯಾಧಿಯು ಹುಟ್ಟುವುದು. ಅದರಲ್ಲಿ ಎರಡು ಪ್ರಕಾರಗಳಿವೆ. ಮೊದಲನೆಯದ್ದು ಗುದದ್ವಾರದ ಎರಡು ಕಡೆಗಳಿಂದ ರಕ್ತ ಒಸರುವುದು ಬಹಿರ್ವಲಯ. ಎರಡನೆಯದ್ದು ಅಂತರ್ವಲಯ. ಇದು ರಕ್ತವೊಸರದೆ ದೇಹದೊಳಗೆ ಗಂಟಾಗಿ ಮಲವಿಸರ್ಜಿಸುವಾಗ ತೀವ್ರ ನೋವುಂಟು ಮಾಡುವುದು. ದೇಹದಲ್ಲಿ ವಿಷಮಾಗ್ನಿ (ಪಿತ್ತ)ಯು ಹೆಚ್ಚಾಗಿ, ಬೆನ್ನುನೋವು ಬರುವುದು; ಕರುಳಲ್ಲಿ ಉರಿತವುಂಟಾಗುವುದು; ಹುಳಿತೇಗು ಬರುವುದು; ವಾಂತಿ ಬರುವುದು; ನಿಶ್ಶಕ್ತಿಯಾಗುವುದು; ಮಲವು ಹಿಕ್ಕೆಗಟ್ಟುವುದು; ಗುದದಲ್ಲಿ ಮೊಳಕೆಯಾಗುವುದು; ದೇಹದಲ್ಲಿ ನೋವು ಉಂಟಾಗುವಿಕೆಗಳೆಲ್ಲವೂ ವಾತಲಕ್ಷಣಗಳು. ಇದರಿಂದಲೂ ಮೂಲವ್ಯಾಧಿ ಉಂಟಾಗುವುದು. ಉರಿತವುಂಟಾಗುವುದು; ಕೆಂಪಾಗುವುದು; ಮೇಲಿಂದ ಮೇಲೆ ಬಾಯಾರುವುದು; ಪದೇ ಪದೇ ಉರಿ ಮೂತ್ರವುಂಟಾಗುವುದು ಇವುಗಳು ಪಿತ್ತಲಕ್ಷಣಗಳು. ಮಲಬದ್ಧತೆ ಉಂಟಾಗುವುದು, ಮಲವಿಸರ್ಜನೆಯು ನೋವುದಾಯಕವಾಗಿರುವುದು ಶ್ಲೇಷ್ಮಲಕ್ಷಣವಾಗಿದೆ.

---

೨೩. ಆರ್. ನರಸಿಂಹಾಚಾರ್ ; **ಕರ್ಣಾಟಕ ಕವಿಚರಿತೆ – ದ್ವಿತೀಯ ಸಂಪುಟ** : ಪುಟ. ೧೦೮

೨೪. **ಅದೇ** : ಪುಟ. ೧೦೮

ಗುದದಲ್ಲಿ ಒಂದೆರಡು, ಮೂರು ಮೊಳಕೆಯಾಗುವುದು; ಗುದದ ಒಳಗೂ ಹೊರಗೂ ಕೆರೆತವುಂಟಾಗುವುದು. ಈ ತೊಂದರೆಗೆ ಅರಿಸಿನವನ್ನು ಚೂರ್ಣಮಾಡಿ, ಕಳ್ಳಿಯ ಹಾಲಿನಲ್ಲಿ ಕಲಸಿ ಎಣ್ಣೆಯನ್ನು ಸೇರಿಸಿ ಗುದಕ್ಕೆ ಲೇಪಿಸುವುದರಿಂದ ಮೊಳಕೆಗಳು ಕರಗುವವು. ತ್ರಿಕಟುಕ ಸೈಂಧವ ಕಾಡುಹೀರೆಯ ಎಲೆಗಳನ್ನರೆದು ಗುದದಲ್ಲಿ ಸೇರಿಸುವುದರಿಂದ ಅಂತರ್ವಲಯ ವ್ಯಾಧಿಯು ಶಮನವಾಗುವುದು. ಹೀಗೆ ಶ್ರೀಧರದೇವನು ತನ್ನ ಗ್ರಂಥದಲ್ಲಿ ವಿವಿಧ ರೋಗಗಳಿಗೆ ಪರಿಹಾರೋಪಾಯಗಳನ್ನು ತಿಳಿಸುತ್ತಾನೆ.

೫.೧.೪. ಸಾಳ್ವಕವಿ (೧೫೫೦):

ಸಾಳ್ವಕವಿಯು 'ರಸರತ್ನಾಕರ' ಹಾಗೂ 'ಶಾರದಾವಿಲಾಸ'ಗಳೆಂಬ ಅಲಂಕಾರ ಗ್ರಂಥಗಳ ಜೊತೆಗೆ 'ವೈದ್ಯಸಾಂಗತ್ಯ' ಎಂಬ ವೈದ್ಯಶಾಸ್ತ್ರ ಗ್ರಂಥವನ್ನೂ ಬರೆದಿದ್ದಾನೆ.[೨೫]

೫.೧.೪.೧. ವೈದ್ಯಸಾಂಗತ್ಯ:

ಕೃತಿಯ ಹೆಸರೇ ಸೂಚಿಸುವಂತೆ ಗ್ರಂಥವು ಸಾಂಗತ್ಯರೂಪದಲ್ಲಿದೆ. ಸಾಂಗತ್ಯದಲ್ಲಿ ಶಾಸ್ತ್ರವನ್ನು ಹೇಳಿದವರಲ್ಲಿ ಸಾಳ್ವಕವಿ ಮೊದಲಿಗನೆಂದರೆ ತಪ್ಪಾಗದು. ಗ್ರಂಥದಲ್ಲಿನ ಪದ್ಯಗಳು ಅಲ್ಲಲ್ಲಿ 'ವರಕವಿ ಸಾಳ್ವನ ಮತದಿ' ಎಂದು ಕೊನೆಗೊಳ್ಳುತ್ತವೆ. ಗ್ರಂಥವು ಶ್ರವಣಬೆಳಗೊಳದ ಗೊಮ್ಮಟನ ಸ್ತುತಿಯೊಂದಿಗೆ ಆರಂಭವಾಗುತ್ತದೆ. ಕೃತಿಯಲ್ಲಿ ಒಟ್ಟು ೨೬೩ ಪದ್ಯಗಳಿವೆ. ಸರಳವಾದ ನಡುಗನ್ನಡದಲ್ಲಿ ಕೃತಿ ರಚನೆ ಮಾಡಿದ್ದಾನೆ. ವೈದ್ಯಪದ್ಧತಿಗನುಗುಣವಾಗಿ ರೋಗದ ಹೆಸರು, ಲಕ್ಷಣ ಹಾಗೂ ಚಿಕಿತ್ಸೆಗಳನ್ನು ತಿಳಿಸಿದ್ದಾನೆ.

"ವರಜಾಯಿಕಾಯಿ ಸೈಂಧವಮಿಂಗಿಲಿಕ ಶುಂಠಿ
ಮರಿಚ ಲವಂಗವು ನಾಭಿ
ಉಱುವ ಕನಕಬೀಜ ಹಿಪ್ಪಲಿ ಸಮಭಾಗ
ಕರಿಯ ದುತ್ತೂರದ ರಸದಿ ॥

ಅರೆವುದು ಮೂರು ದಿವಷ ಗುಂಜಿಗಾತ್ರಕ್ಕೆ
ನೆಱಿ ಗುಳಿಗೆಯನು ಕಟ್ಟುವುದು
ಪರಿವಿಡಿಯಿಂದೆಯಾನಂಭೈರವಿಯೆಂಬ
ಉಱುವ ಪೆಸರ ಪಡೆದಿಹುದು ॥"[೨೬]

ಜಾಯಿಕಾಯಿ, ಸೈಂಧವಲವಣ, ಇಂಗು, ಶುಂಠಿ, ಮರೀಚ, ಲವಂಗ, ವತ್ಸನಾಭ, ಉರುವೆ, ಕನಕಬೀಜಗಳು, ಹಿಪ್ಪಲಿ ಇವುಗಳನ್ನು ಸಮಪ್ರಮಾಣದಲ್ಲಿ ಸೇರಿಸಿ, ದತ್ತೂರದ ರಸವನ್ನು ಸೇರಿಸಿಟ್ಟು, ಮೂರುದಿನಗಳ ತರುವಾಯ ಗುಂಜಿ ಗಾತ್ರದ ಗುಳಿಗೆಗಳನ್ನು ತಯಾರಿಸುವುದು. ಇದಕ್ಕೆ ಆನಂದಭೈರವಿ ರಸವೆಂದು ಹೆಸರು. ಮುಂದುವರೆದು ಆನಂದಭೈರವಿ ರಸದ ಉಪಯೋಗವನ್ನು ಹೇಳುತ್ತಾನೆ ಸಾಳ್ವಕವಿ.

---

೨೫. ನೋಡಿ, ಅಧ್ಯಾಯ–೪.೧.೩. ಸಾಳ್ವಕವಿ (೧೫೫೦) ; ಪುಟ. ೨೩೩

೨೬. ಆರ್. ನರಸಿಂಹಾಚಾರ್ ; **ಕರ್ಣಾಟಕ ಕವಿಚರಿತೆ – ದ್ವಿತೀಯ ಸಂಪುಟ** : ಪುಟ. ೨೦೧

"ಇಂತು ಕಂಗೊಳಿಸುವಾನಂದ ಭೈರವಿಯನು
ಸಂತಸದಿಂ ತ್ರಿಕಟುಕದಿ
ಚಿಂತೆಯ ಬಿಟ್ಟುಕೊಳ್ಳಲು ವಾತವೆಂಬತ್ತು
ಭ್ರಾಂತುವೆತ್ತಿರದೋಡುವುವು ॥

ಸಲೆ ಮೂಲಸಹಿತ ಹೂಲಿಯರಸದಿಂ ಕೊಳ್ಳೆ
ತೊಲಗುಗುಂ ಶ್ಲೇಷ್ಮದೋಷಗಳು
ನೆಲೆಗೊಂಡ ಶೂಲೆಗೆ ಗದುಗಿನ ತಿರುಳಿಂದ
ಸಲೆ ಕೊಳ್ಳೆ ಕೆಟ್ಟುಹೋಗುವುದು ॥

ಎಲವದ ಹಗಿನದೊಳಜಮೋದದಿಂ ಕೊಳ್ಳೆ
ನೆಲೆಗೆಡುವುವು ಗ್ರಹಣಿಗಳು
ಸಲೆಜಾಯಿಕಾಯಿಜೀರಗೆದಧಿಯಿಂ ಕೊಳ್ಳೆ
ಯಳವುಗೆಡುವುದತಿಸಾರ ॥"[೨೭]

ಇಂತಹ ಈ ಭೈರವಿಯನ್ನು ತ್ರಿಕಟುಗಳೊಂದಿಗೆ ಸೇವಿಸುವುದರಿಂದ ಚಿಂತೆ, ವಾತ, ಭ್ರಾಂತಿಗಳು ಶಮನವಾಗುವವು. ಹೂಲಿಯ ಬೇರಿನ ರಸ ಹಾಗೂ ತೊಗಟೆಗಳನ್ನು ಭೈರವಿರಸದೊಂದಿಗೆ ಸೇವಿಸುವುದರಿಂದ ಶ್ಲೇಷ್ಮದೋಷಗಳು ಪರಿಹಾರವಾಗುವವು. ಗದುಗಿನ ತಿರುಳಿಂದ ತಲೆಶೂಲೆಯು ಶಮನವಾಗುವುದು. ಎಲವದ ತೊಗಟೆಯ ತಿರುಳು, ಆಡಿನ ಮೂತ್ರ, ಜಾಯೀಕಾಯಿ, ಜೀರಗೆ, ಮೊಸರುಗಳನ್ನು ಸೇರಿಸಿ ಸೇವಿಸುವುದರಿಂದ ಅತಿಸಾರವು ಕಡಿಮೆಯಾಗುವುದು.

"ಜಠರದಿಂ ಹುಟ್ಟಿದ ಶೂಲೆಯ ರುಜೆಯನು
ಸಟೆಯಾದತ್ತಿ ಸಾರಗಳನು
ಸಟೆಯಲ್ಲದೀ ಮಾತು ಮಂದಕುಂಗಳ
ಪುಟೆಯ ಕಾಯ ಸಣ್ಣ ಚಿಲ್ಲರೆ ಮಾಡಿ ॥

ವರಶ್ರೀ ಕಟುಕ ಇಂಗು ಮೊದಲಾದವನೆಲ್ಲ
ಇರದೆ ಚೂರ್ಣವ ಮಾಡಿ ಬೆಲೆ
ಇರುವ ಕಾಯಾಂದಕ್ಕೆ ತೂಕವೊಂದರ ಲೆಕ್ಕ
ಇರವನರಿದು ಕೊಡುವುದು ॥"[೨೮]

ಜಠರದಲ್ಲಾಗುವ ಹೊಟ್ಟೆ ನೋವಿಗೆ ಅತಿಸಾರ, ಪುಟೆಕಾಯಿಯನ್ನು ಸಣ್ಣಗೆಮಾಡಿ ಸೇವಿಸುವುದರಿಂದ ನೋವು ನಿವಾರಣೆಯಾಗುವುದು. ಕಟುಕ, ಇಂಗುಗಳನ್ನೆಲ್ಲ ಸೇರಿಸಿ, ಚೂರ್ಣಮಾಡಿ, ಸೇವಿಸುವುದರಿಂದ ಹೊಟ್ಟೆನೋವು ನಿವಾರಣೆಯಾಗುವುದು.

ಹೀಗೆ ಸಾಳ್ವಕವಿಯು ಹತ್ತು ಹಲವಾರು ಬಗೆಯಲ್ಲಿ, ಹಲವಾರು ರೋಗಗಳಿಗೆ ಪರಿಹಾರ ಚಿಕಿತ್ಸೆಗಳನ್ನು ತಿಳಿಸಿದ್ದಾನೆ.

---

೨೭. ಆರ್. ನರಸಿಂಹಾಚಾರ್ ; **ಕರ್ಣಾಟಕ ಕವಿಚರಿತೆ – ದ್ವಿತೀಯ ಸಂಪುಟ** : ಪುಟ. ೨೦೧, ೨೦೨
೨೮. ರಾಜೀವ ಆರ್. ಹೆಗಡೆ : **ಸಾಳ್ವಕವಿ ಒಂದು ಅಧ್ಯಯನ (ರಸರತ್ನಾಕರವನ್ನನುಲಕ್ಷಿಸಿ)** ; ಪುಟ. ೪೭

ಬ) ವಿಷವೈದ್ಯಶಾಸ್ತ್ರ:

೫.೧.೫. ಒಂದನೇ ಮಂಗರಾಜ (೧೩೬೦):

ಈತನ ಕಾಲವನ್ನು ಕವಿಚರಿತೆಕಾರರು ಸು. ೧೩೬೦[೨೯] ಎಂದು ನಿರ್ಣಯಿಸಿದ್ದಾರೆ. "ಇವನು ಜೈನಕವಿಯಾಗಿದ್ದು, ಹೊಯ್ಸಳ ರಾಜ್ಯದಲ್ಲಿಯ ದೇವಳಿಗೆಯೆಂಬ ನಾಡಿನ ಮುಖ್ಯಪಟ್ಟಣವಾದ ಮುಗುಳಿಪುರದ ವಿಭು. ಇವನ ಗುರು ಪೂಜ್ಯಪಾದಮುನಿ. ಹೆಂಡತಿ ಕಾಮಲತೆ. ಈತನಿಗೆ 'ಸುಲಲಿತಕವಿ ಪಿಕವಸಂತ', 'ವಿಭುವಂಶಲಲಾಮ', ಕವಿಜನೈಕಮಿತ್ರ', 'ಅಗಣಿತಗುಣನಿಳಯ', 'ಅಖಿಳವಿದ್ಯಾಜಲನಿಧಿ', ಪಂಚಗುರುಪದಾಂಬುಜಭೃಂಗ' ಎಂಬ ಬಿರುದುಗಳಿದ್ದವು."[೩೦] ಸಂಸ್ಕೃತದಲ್ಲಿ 'ಕಾಶ್ಯಪ ಸಂಹಿತೆ' ಇರುವಂತೆ ಕನ್ನಡದಲ್ಲಿ ಒಂದು ವಿಷಚಿಕಿತ್ಸಾ ಗ್ರಂಥವು ಬೇಕೆಂದು ಮಂಗರಾಜನು ಆಶಿಸಿ, 'ಖಗೇಂದ್ರಮಣಿ ದರ್ಪಣಂ' ಗ್ರಂಥವನ್ನು ಬರೆದಿದ್ದಾನೆ. ಕಾಶ್ಯಪ ಸಂಹಿತೆಗೆ 'ಗರುಡ ಪಂಚಾಕ್ಷರೀ ಕಲ್ಪಂ' ಎಂಬ ಇನ್ನೊಂದು ಹೆಸರಿದ್ದು, ಅದು ವಿಷಚಿಕಿತ್ಸೆಯನ್ನು ವಿಶದೀಕರಿಸುತ್ತದೆ. ಅಂತೆಯೇ 'ಖಗೇಂದ್ರಮಣಿ ದರ್ಪಣಂ' ಕೃತಿಯಲ್ಲಿ ವಿಷವೈದ್ಯಶಾಸ್ತ್ರದ ನಿರೂಪಣೆಯಿದೆ.

೧೯೪೨ ರಲ್ಲಿ 'ಖಗೇಂದ್ರಮಣಿ ದರ್ಪಣಂ' ಕೃತಿಯನ್ನು ಸಂಪಾದಿಸಿದ ಮದ್ರಾಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಾಗಿದ್ದ, ಎ. ವೆಂಕಟರಾವ್ ಹಾಗೂ ಪಂಡಿತ್ ಎಚ್. ಶೇಷಯ್ಯಂಗಾರ್ ಅವರು ಗ್ರಂಥದ ಪೀಠಿಕಾ ಪ್ರಕರಣ ಮತ್ತು ಆಶ್ವಾಸಗಳ ಅಂತ್ಯದಲ್ಲಿರುವ ಗದ್ಯವನ್ನು ಅನುಸರಿಸಿ "'ಮಂಗವಿಭು', 'ಮಂಗರಾಜ', 'ಮಂಗ', 'ಮಂಖಣ', 'ಮಂಗಣ' ಎಂಬ ಹೆಸರುಗಳೂ ಇದ್ದವೆಂದು ಈ ಗ್ರಂಥದಿಂದಲೇ ತಿಳಿದುಬರುತ್ತದೆ. ಹೊಯ್ಸಳದೇಶದ ಮುಗಳಿಪುರದರಸು ಮಂಗವಿಭು; ಆತನ ಧರ್ಮಪತ್ನಿ 'ಪೆರ್ಮಲೆ'. ಇವರಿಬ್ಬರ ಪುತ್ರನಾದ ಮಂಗರಾಜನೇ 'ಖಗೇಂದ್ರಮಣಿ ದರ್ಪಣಂ'ನ ಕರ್ತೃ"[೩೧] ಎಂದು ಅಭಿಪ್ರಾಯಪಡುತ್ತಾರೆ. ನಂತರ ೨೦೦೪ರಲ್ಲಿ 'ಖಗೇಂದ್ರಮಣಿ ದರ್ಪಣಂ' ಗ್ರಂಥವನ್ನು ಸಂಪಾದಿಸಿದ ಬಿ. ಎಸ್. ಸಣ್ಣಯ್ಯ ಅವರು ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾರೆ.

೫.೧.೫.೧. ಖಗೇಂದ್ರಮಣಿ ದರ್ಪಣಂ:

ಖಗೇಂದ್ರ ಎಂದರೆ 'ಗರುಡ'. ಅವನು ಪಕ್ಷಿರಾಜ ಮತ್ತು ಸರ್ಪಶತ್ರು. ವಿಷಕ್ಕೆ ಗರುಡನು ವಿಶಿಷ್ಟವಾದ ಮದ್ದು. ಕವಿಯು ಕೃತಿಯಲ್ಲಿ ಪದ್ಯಗಳ ಮೂಲಕ ವಿವಿಧ ರೀತಿಯ ವಿಷಗಳು ಹಾಗೂ ಅವುಗಳಿಗೆ ವಿಷನಿದಾನ ಪದ್ಧತಿಯನ್ನು ತಿಳಿಸಿಕೊಡುತ್ತಾನೆ. ವಿಷನಿದಾನ ಚಿಕಿತ್ಸಾ ವಿವರಗಳನ್ನೊಳಗೊಂಡ 'ಖಗೇಂದ್ರಮಣಿ ದರ್ಪಣ'ವು ಆಯುರ್ವೇದ ಸಾಹಿತ್ಯದಲ್ಲಿಯೇ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಇಂತಹ ಅಪರೂಪದ ಗ್ರಂಥದಲ್ಲಿ ಅನೇಕ ರೀತಿಯಿಂದ

೨೯. ಆರ್. ನರಸಿಂಹಾಚಾರ್ ; **ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ** : ಪುಟ. ೪೮೫

೩೦. **ಅದೇ** ; ಪುಟ. ೪೮೫

೩೧. A. Venkat Rao and Pandit H. Shesha Ayyangar (Editors) : **Khagendramani Darpanam of Mangaraja** ; Page. iv

ಮನುಷ್ಯನಿಗೆ ಆಗುವ ವಿಷಸ್ಪರ್ಶ ಹಾಗೂ ಅವುಗಳ ಪರಿಹಾರಗಳ ಕುರಿತು ಚರ್ಚೆಯಿದೆ. ಪ್ರಸ್ತುತ ಗ್ರಂಥದಲ್ಲಿ ೧೬ ಅಧಿಕಾರಗಳಿವೆ. ಛಂದಸ್ಸಿನ ದೃಷ್ಟಿಯಿಂದ ನೋಡಿದರೆ ಕೃತಿಯುದ್ದಕ್ಕೂ ಖ್ಯಾತ ಕರ್ಣಾಟಕ ವೃತ್ತಗಳು, ಮಾಲಿನಿ ವೃತ್ತ, ಶಶಿಕಾಂತ ವೃತ್ತ, ಮಲ್ಲಿಕಾಮಾಲೆ, ಕಂದಪದ್ಯಗಳು, ವಚನ, ಹಾಗೂ ಗದ್ಯವವನ್ನು ಬಳಸಿಕೊಂಡಿದ್ದಾನೆ. ಗ್ರಂಥಾರಂಭದಲ್ಲಿ ವಾಡಿಕೆಯಂತೆ ೨೩ನೆಯ ತೀರ್ಥಂಕರನಾದ ಶ್ರೀ ಪಾರ್ಶ್ವನಾಥ, ಯಕ್ಷಿ ಪದ್ಮಾವತಿ, ಪಂಚಪರಮೇಷ್ಠಿಗಳು ಹಾಗೂ ಪೂರ್ವಸೂರಿಗಳನ್ನು ವಂದಿಸಿದ್ದಾನೆ.

"ಮನಮೆಂಬೊಂದು ಮಹಾಮದದ್ವಿರದಮಂ ಸುಜ್ಞಾನಮೆಂಬಂಕುಶಂ
ವಿನುತಂ ಕೈವಶಮಾಗಿರಲ್ಕದಜೆನಾತ್ಮಾಧೀನಮಂ ಮಾಡಿ ಭಾ
ಪ್ಪೆನೆ ಪಂಚಾಚರಣಂಗಳಿಂ ಸಕಲ ಶಾಸ್ತ್ರಜ್ಞತ್ವದಿಂ ರೂಢಿವೆ
ತ್ತನವದ್ಯರ್ ದಯೆಗೆಯ್ಗೆ ಸೂರಿಗಳಶೇಷರ್ ನಮ್ಮೊಳಾಚಾರಮಂ॥೧.೦೩॥"[೩೨]

ಸುಜ್ಞಾನವೆಂಬ ಅಂಕುಶದಿಂದ ಮನಸ್ಸೆಂಬ ಮದ್ದಾನೆಯನ್ನು ಆತ್ಮಾಧೀನ ಮಾಡಿಕೊಂಡು, ಒಪ್ಪಿಕೊಳ್ಳುವಂತೆ ಸಕಳ ಶಾಸ್ತ್ರ ಪಾರಂಗತ್ವದಿಂದ ಕೂಡಿದ ನಿಷ್ಕಳಂಕಿತ ಸಮಸ್ತ ಸೂರಿಗಳು ಉತ್ತಮ ನಡತೆಯನ್ನು ದಯಪಾಲಿಸಲಿ ಎಂದು ಬೇಡಿಕೊಳ್ಳುತ್ತಾನೆ. ಪೂಜ್ಯಪಾದ, ಭಾನುಕೀರ್ತಿ, ಮಲಧಾರಿ ಮುನಿಗಳನ್ನು ಸ್ಮರಿಸಿಕೊಳ್ಳುತ್ತ, ಅವರ ಅಪಾರ ಮಹಿಮೆಯನ್ನು ಅರುಹುತ್ತಾನೆ. ಹೀಗಿರುವ ಖಗೇಂದ್ರಮಣಿದರ್ಪಣವನ್ನು ಜನೋಪಕಾರಕ್ಕಾಗಿ ರಚಿಸಿದುದಾಗಿ ಕವಿಯು ಹೇಳಿಕೊಳ್ಳುತ್ತಾನೆ.

"ನರರ್ಗರುಜತೆ ಭೇಷಜಂ
ದರುಜತೆಯಿಂ ದೇಹ ದೇಹದಿಂದಂ ಜ್ಞಾನಂ
ಪರಮಜ್ಞಾನದೆ ಮೋಕ್ಷಂ
ದೊರೆಕೊಳ್ಗುಮದೆಂದು ಪೇಟ್ದಪೆಂ ಬೇಷಜಮಂ ॥೧೬೫॥"[೩೩]

ವೈದ್ಯೋಪಚಾರದಿಂದ ನರರಿಗೆ ಯಾವುದೇ ತೊಂದರೆಯಿರುವುದಿಲ್ಲ. ಇಂತಹ ಶರೀರದಿಂದ ಪರಮಜ್ಞಾನಾರ್ಜನೆಯಾಗುತ್ತದೆ. ಆ ಪರಮಜ್ಞಾನದಿಂದಲೇ ಮೋಕ್ಷಪ್ರಾಪ್ತಿಯಾಗುತ್ತದೆ. ಎಂದು ಹೇಳುತ್ತಾನೆ. ಮನುಷ್ಯನಿಗೆ ಘಾತಕವಾಗಬಹುದಾದ ವಿಷಗಳನ್ನು ಮೂರು ವಿಧವಾಗಿ ವಿಂಗಡನೆ ಮಾಡಿದ್ದಾನೆ. ೧) ಸ್ಥಾವರ ವಿಷ: ತರಕಾರಿ, ಧಾನ್ಯ, ಬೀಜ ಮುಂತಾದ ಪದಾರ್ಥಗಳಿಂದ ಉಂಟಾಗಬಹುದಾದ ವಿಷ. ೨) ಜಂಗಮ ವಿಷ: ಹಾವು, ಚೇಳುಗಳಿಂದ ಹಾಗೂ ಮನುಷ್ಯ ಮುಂತಾದ ಜೀವಿಗಳಿಂದ ಉಂಟಾಗಬಹುದಾದ ನಂಜು. ೩) ಕೃತ್ರಿಮ ವಿಷ: ಮನುಷ್ಯ ಅತಿಯಾಗಿ ಔಷಧಗಳನ್ನು ಸೇವಿಸುವುದರಿಂದ ಆಗಬಹುದಾದ ವಿಷ. ಹಾಗೂ ಇವುಗಳಿಂದಾದ ವಿಷಕ್ಕೆ ವಿಷನಿದಾನ ಪದ್ಧತಿಗಳನ್ನು ಚರ್ಚಿಸಿದ್ದಾನೆ. ಹಾವು, ಜಿಂಕೆ, ಚೇಳು, ಕೀಟಗಳು, ಮದ್ಯ, ಕೆಟ್ಟಿರುವ ಧಾನ್ಯ, ತಾಂಬೂಲ, ಕಣಕ, ಇಲಿ, ನಾಯಿ, ಹುಲಿ, ಹಲ್ಲಿ, ಓತಿ, ಮೊಸಳೆ, ಮೀನು ಮುಂತಾದ ಜಲಚರಗಳು, ನೊರಜು, ಗುಂಗುರು, ದುಂಬಿ, ಪಕ್ಷಿಸಮೂಹ,

---

೩೨. ಬಿ. ಎಸ್. ಸಣ್ಣಯ್ಯ (ಸಂ): **ಮಂಗರಸ ವಿರಚಿತ ಖಗೇಂದ್ರಮಣಿದರ್ಪಣಂ** : ಪುಟ.೦೧
೩೩. **ಅದೇ** ; ಪುಟ.೧೩

ಇರುವೆ ಮೊದಲಾದವುಗಳಿಂದ ವಿಷ ತಗುಲುವ ಸಾಧ್ಯತೆಗಳಿರುತ್ತವೆ. ಹೀಗೆ ತಗುಲಿದ ವಿಷವನ್ನು ಉಪಚರಿಸಲು ಬೇಕಾದ ಮೂಲಿಕೆಗಳನ್ನು ಸಂಗ್ರಹಿಸುವಾಗ ಬಹು ಎಚ್ಚರಿಕೆಯಿಂದ ಇರಬೇಕೆಂದು ತಿಳಿಸುತ್ತ, ದೇವಾಲಯಗಳಲ್ಲಿ, ಬೂದಿಯಲ್ಲಿ, ಮೂಳೆ ಚರ್ಮಗಳೆಡೆಯಲ್ಲಿ, ದೊಡ್ಡರಸ್ತೆಗಳಲ್ಲಿ, ರುದ್ರಭೂಮಿಯಲ್ಲಿ, ಹೇಸಿಗೆಯಲ್ಲಿ, ಊರಿನಲ್ಲಿನ ಮಲಮೂತ್ರ ವಿಸರ್ಜನೆಯ ಪ್ರದೇಶಗಳಲ್ಲಿ ರುದ್ರಭೂಮಿಯಲ್ಲಿ, ಹುಳುಗಳು ತಿಂದ ಕಡೆಗಳಲ್ಲಿ ಬೆಳೆದ ಮರ, ಬಳ್ಳಿ, ಪೊದರು, ಬೇರುಗಳನ್ನು ಸಂಗ್ರಹಿಸಬಾರದು ಎಂದು ಹೇಳುತ್ತಾನೆ.

ಇನ್ನು ವಿಷದಿಂದ ಬಾಧಿತನಾದವನನ್ನು ಕಾಟಾಚಾರಕ್ಕಲ್ಲದೇ ಅತಿ ಪ್ರೀತಿಯಿಂದ ಉಪಚರಿಸುವುದು ಎಂದು ತಿಳಿಸುತ್ತಾನೆ. ವಸಂತಕಾಲದಲ್ಲಿ ಹೂವನ್ನೂ, ಗ್ರೀಷ್ಮ ಋತುವಿನಲ್ಲಿ ಕಾಯಿಯನ್ನೂ, ವರ್ಷ ಋತುವಿನಲ್ಲಿ ತೊಗಟೆಯನ್ನೂ, ಶರತ್ಕಾಲದಲ್ಲಿ ಬೇರನ್ನೂ, ಹೇಮಂತ ಋತುವಿನಲ್ಲಿ ಹಣ್ಣುಗಳನ್ನೂ, ಶಿಶಿರ ಋತುವಿನಲ್ಲಿ ಎಲೆಗಳನ್ನೂ ಸಂಗ್ರಹಿಸಬೇಕು ಎಂದು ಉಪದೇಶಿಸುತ್ತಾನೆ. ಇದಕ್ಕೆ ಕಾರಣ ಆಯಾಯಾ ಕಾಲದಲ್ಲಿ ಮೂಲಿಕೆಗಳು ಯಥೇಚ್ಛವಾಗಿ ದೊರೆಯುತ್ತವೆ. ಅಲ್ಲದೇ ಆಯಾ ಋತುಗಳಿಗೆ ಅನುಗುಣವಾಗಿ ಸಸ್ಯಗಳ ಬೆಳವಣಿಗೆ ಇರುವುದರಿಂದ ಅವುಗಳಿಗೆ ಯಾವುದೇ ತೊಂದರೆಯಾಗದಂತೆ ಸಂಗ್ರಹಿಸುವುದು ಎಂದು ಸಲಹೆ ನೀಡುತ್ತಾನೆ ಕವಿ ಮಂಗರಾಜ. ಮುಂದುವರೆದು ಉತ್ತಮ ಪುರುಷರಿಗೆ ಮಾತ್ರ ಈ ಶಾಸ್ತ್ರವನ್ನು ಬೋಧಿಸುವುದು. ದುರ್ಜನರಿಗೆ ಇದರ ಗಂಧವೂ ಸೋಕಬಾರದೆಂದು ಹೇಳುತ್ತಾನೆ.

೧) ಸ್ಥಾವರವಿಷ ಪ್ರಕರಣ:

ಜಿತೇಂದ್ರಿಯರಾದ ದೇವಾದಿದೇವತೆಗಳಿಗೆ ನಮಸ್ಕರಿಸಿ, ಸ್ಥಾವರ ವಿಷಗಳನ್ನು ಕುರಿತು ವಿಶ್ಲೇಷಿಸುತ್ತಾನೆ ಕವಿ. ಇದರಲ್ಲಿ ಮುಸ್ತೆ, ವತ್ಸನಾಭ, ಬಲಾಹ, ಪುಷ್ಕರಶರ, ಹರಿದ್ರಾ, ಶೃಂಗೀಕುಲ, ಮೇಷಶೃಂಗೀ, ಹಾಳಾಹಳ, ಕಾಸ್ತುಕ, ರಕ್ತಶೃಂಗಿ, ಮಧುಪಾಕ, ಇಂದ್ರವಜ್ರ, ಕರ್ಕಾಟಕ, ಶೃಂಗೀ, ಮಧುರ, ಕ್ರೌಂಚ, ಹರಿತ, ಅರ್ಕ, ಕಾಳಕೂಟ, ಪುಂಡರೀಕ, ಸಂಕೋಚ, ಗಾಳವ, ಅಂಜನ, ರೋಹಿಣ, ಏಕವೀರ ಎಂಬ ಇಪ್ಪತ್ತೈದು ಬಗೆಯ ವಿಷಭೇದಗಳಿವೆ. ಇದರಲ್ಲಿ ಮುಸ್ತೆ, ವತ್ಸನಾಭ, ಶೃಂಗೀ, ಕಾಳಕೂಟ ಹಾಗೂ ಸಂಕೋಚ ಎಂಬ ಐದು ವಿಷಗಳು ಅತೀ ಕ್ರೂರವಾದವುಗಳು. ಇನ್ನುಳಿದ ಇಪ್ಪತ್ತು ವಿಷಗಳು ಮಧ್ಯಮ ಮತ್ತು ಅಧಮವಾಗಿವೆ. ಈ ವಿಷಗಳು ತಗುಲಿದಾಗ ಅತಿಸಾರ, ಮೂರ್ಛೆ, ದಾಹ, ಬುದ್ಧಿಭ್ರಮಣೆ, ಭ್ರಾಂತಿ, ಹೃದಯಶೂಲೆ, ತಾಪ, ಬಲಹೀನತೆ, ಕಣ್ಣುಮಂಜು, ಅಸಹಜ ಶರೀರ ಪ್ರಕೃತಿ, ಗದ್ಗದ ಧ್ವನಿ, ನಿಶ್ಚಲತೆ, ಕೆಮ್ಮು, ರಕ್ತವಮನ, ಬೆವರುವುದು ಮುಂತಾದ ಲಕ್ಷಣಗಳು ಉಂಟಾಗುತ್ತವೆ. ಹೀಗೆ ತಗುಲಿದ ವಿಷಗಳ ಮೂಲ ಗುಣಗಳನ್ನರಿತು ಔಷಧ ಮತ್ತು ಮಂತ್ರಗಳಿಂದ ಉಪಚರಿಸಬೇಕೆಂದು ಕವಿ ತಿಳಿಸುತ್ತಾನೆ. ಬಹುತರವಾಗಿ ಮಂತ್ರಪಠಣ ಮಾಡುವುದರಿಂದ ತಪ್ಪದೇ ವಿಷವು ಮಾಯವಾಗುತ್ತದೆ.

ಮಂತ್ರಂಗಳ್:

೧) ಸಕಲ ವಿಷಹರ ಮಂತ್ರ :

“ಓಂ ನಮೋ ಭಗವತೇ ಪಾರ್ಶ್ವನಾಥಾಯ ಸ್ಥಾವರ ಜಂಗಮ ಕೃತ್ರಿಮವಿಷಸಂಹರಾಯ ಹಂ ಝುಂ ಝುಂ ಕ್ಷಿಂ ಹಂಸ ಪಾರ್ಶ್ವನಾದೇವತಾಜ್ಞಾ ವಿಷಹರ ಮಲ್ಲಿನಾಥದೇವತಾಜ್ಞಾ ತ್ರಿಭುವನ ಗರುಡಾಜ್ಞಾ ಶ್ರೀಧರದೇವತಾಜ ಶೀಘ್ರಂ ನಿರ್ವಿಷಂ ಕುರುಹುಂ ಫಟ್ ಸ್ವಾಹಾ॥

೨) ಸ್ವಚ್ಛಂದ ಭೈರವೀ ಮಂತ್ರ :

ಓಂ ನಮೋ ಭಗವತೇ ಸ್ವಚ್ಛಂದ ಭೈರವೇ ಮಹಾಭೈರವೇ ಕಾಳಕೂಟವಿಷಂ ಸ್ಫೋಟಯ ಖಂಡಯ ಅವತಾರಯ ನಾಭೀವಿಷಂ ಹಾಲಾಹಲವಿಷಂ ಕೃತ್ರಿಮವಿಷಂ ಶಂಕಾವಿಷಂ ಉಪಘಾತವಿಷಂ ಸ್ಥಾವರವಿಷಂ ಜಂಗಮವಿಷಂ ಕಾಚಂಚುಚಾಪರಯೂತಾಜ ಸುಮಂತು ಜಹಾದ್ವಯುಃ ಚೆನ್ನನಳಖ ಚಂದ್ರಜಯ ಓಂ ಕಾಳಾಯ ಕಾಳಗರ್ಭವಿಹಾ ಅಮೃತಗಭ್ಯ ದೇವಿ ಓಂ ಕ್ಷಾಂ ಕ್ಷೀಂ ಕ್ಷೂಂ ಕ್ಷಾಂ ಕ್ಷೂಂ ಓಂ ಫಟ್ ಸ್ವಾಹಾ ನಾಸ್ತಿ ವಿಷ ಸ್ವಾಹಾ॥

೩) ಅಮೃತಧಾರಾ ಮಂತ್ರ:

ಓಂ ಅಮೃತೇ ಅಮೃತೋದ್ಭವೇ ಅಮೃತವರ್ಷಿಣೀ ಇದಮೃತಂ ಸ್ರಾವಯಸಂ ಕ್ಲಿಂ ಬ್ಲೂಂ ದ್ರಾಂ ದ್ರಿಂ ಹಂ ಝುಂ ಝುಂ ಹಂಸ ಸ್ವಾಹಾ॥

೪) ಒಡ್ಡಾಮರೇಶ್ವರೀ ಮಂತ್ರ:

ಓಂ ನಮೋ ಭಗವತೇ ಒಡ್ಡಾಮರೇಶ್ವರಾಯ ಕುಂಚಿತವೃತ್ತ ಅಮೃತ ಜಟಾ ಯತ ಓಂ ಅಭಮಹಾಯುತೋ ದ್ರಾಂ ಹ್ರೂಂ ಹ್ರಾಂ ಹರಹರ ವಿಷಂ ಸ್ವಾಹಾ॥”[೩೪]

ಈ ಮೇಲಿನ ಮಂತ್ರಗಳನ್ನು ಪಠಣ ಮಾಡುವುದರಿಂದ ವಿಷಗ್ರಸ್ಥನಾದವನು ಬದುಕುಳಿಯುತ್ತಾನೆ ಎಂದು ಕವಿ ಮಂಗರಾಜನು ಹೇಳುತ್ತಾನೆ. ಉಮ್ಮತ್ತದ ಕಾಯಿ, ಲೋಧ್ರ ಅಥವಾ ಬಜೆ ಮತ್ತು ಉಪ್ಪುಗಳನ್ನು ನೀರಿನಲ್ಲಿ ಸೇರಿಸಿ ಕೊಟ್ಟರೆ ಎಲ್ಲ ರೀತಿಯ ವಿಷಗಳೂ ಪರಿಹಾರವಾಗುತ್ತವೆ. ಕಾಡುಹೀರೆಯ ಬೇರನ್ನು ನೀರಿನಲ್ಲಿ ಬೇಯಿಸಿ ಜೇನುತುಪ್ಪ ಇಲ್ಲವೇ ತುಪ್ಪದೊಡನೆ ಕೊಟ್ಟರೆ ಶಾಂತಿಯಾಗಿ ಉಗ್ರವಾದ ವಿಷವು ನಿವಾರಣೆಯಾಗುತ್ತದೆ. ಅಲ್ಲದೇ ಅನೇಕ ಸ್ಥಾವರ ವಿಷಗಳಿಗೆ ಈ ಮುಂದಿನಂತೆ ‘ಖಗೇಂದ್ರಮಣಿ ದರ್ಪಣಂ’ನಲ್ಲಿ ಪರಿಹಾರ ಪದಾರ್ಥಗಳನ್ನು ವಿವರಿಸುತ್ತಾನೆ.

ಕೋಷ್ಟಕ ೫.೧

ಸ್ಥಾವರ ವಿಷಗಳಿಗೆ ಪರಿಹಾರ

ಕ್ರ. ಸಂ	ವಿಷಗಳ ಪ್ರಕಾರಗಳು	ವಿಷಪರಿಹಾರಕ್ಕೆ ಬಳಸಬೇಕಾದ ಪದಾರ್ಥಗಳು/ವಿಧಾನಗಳು
೧	ಭತ್ತದ ಬೇರಿನ ವಿಷ	೧) ಅಂಬಿಲ, ಲವಣ, ಹರೀತಕಿ, ನೇರಳೆಹಣ್ಣು, ಯಷ್ಟಿ, ಮಧುಕ ಇವುಗಳನ್ನು ಪ್ರತ್ಯೇಕವಾಗಿ ಕೊಡುವುದು. ೨) ಕಿರುನೆಲ್ಲಿ, ಅಕ್ಕಿಕಚ್ಚು, ಹುಳಿ ಇಲ್ಲವೇ ಕಾಂಜಿಕವನ್ನು ಕೊಡುವುದು. ೩) ಧಾನ್ಯದ ಗಂಜಿಯನ್ನು ನೀರಿನೊಡನೆ ಇಲ್ಲವೇ ಪುನರ್ನವಿಯನ್ನು ಮೊಸರಿನೊಡನೆ ಕೊಡುವುದು.

೩೪. A. Venkat Rao and Pandit H. Shesha Ayyangar (Editors): **Khagendramani Darpanam of Mangaraja** ; Page. 18, 19.

೨	ಹಾಲಾಹಲ ವಿಷ	೧) ನೀಲಿ, ಅಶ್ವಗಂಧ ಇಲ್ಲವೇ ರೆಂಚಿಕೆ ಯಾವುದಾದರೊಂದು ಕೊಡುವುದು. ೨) ಬಜೆ, ತುತ್ಥ, ಟಂಕಣ, ರಜನಿ, ಭುಜಂಗಾಕ್ಷಿ ಇಲ್ಲವೇ ಶೈಲವರ್ಣಿಕೆ ಯಾವುದಾದರೊಂದನ್ನು ನರಮೂತ್ರದಲ್ಲಿ ಮಿಶ್ರಣಮಾಡಿ ಕೊಡುವುದರಿಂದ ಎಲ್ಲ ರೀತಿಯ ವಿಷಗಳೂ ಪರಿಹಾರವಾಗುತ್ತವೆ. ೩) ಮುಸಲೀಕಂದ ತ್ರಿಕಟುಗಳು ಇಲ್ಲವೆ ಅಜದಂಡೆಯನ್ನು ಜೇನು ತುಪ್ಪದೊಡನೆ ಕೊಡುವುದು. ೪) ತಿಗುಡೆ, ಕೊತ್ತಂಬರಿಗಳನ್ನು ನೀರಿನಲ್ಲಿ ಬೆರೆಸಿ ಕೊಡುವುದು.
೩	ಕಾಳಕೂಟ ವಿಷ	೧) ನರಮೂತ್ರ, ಗೋಮೂತ್ರ, ಹಳೆಯ ತುಪ್ಪ ಇವುಗಳಲ್ಲಿ ಯಾವುದಾದರೊಂದನ್ನು ಅರಿಸಿನವನ್ನು ಸೇರಿಸಿ ಕೊಡುವುದು. ೨) ಅರಿಸಿನ, ಹಸುವಿನ ಹಾಲು ಸೇರಿಸಿ ಕೊಡುವುದು. ೩) ಅರಿಸಿನ ಜೇನುತುಪ್ಪ ಇಲ್ಲವೇ ತುಪ್ಪವನ್ನು ಸೇರಿಸಿ ಕೊಡುವುದು. ೪) ಬಿಳಿಗುಂಜಿಯ ಬೇರು, ಬಜೆಗಳನ್ನು ನೀರಿನೊಡನೆ ಕುಡಿಸುವುದು. ೫) ಬೆಲ್ಲ ಮತ್ತು ಕಾರ್ಪಾಸದ ರಸ.
೪	ರಕ್ತಶೃಂಗೀ	ಗೋವಿನ ಶಗಣಿಯ ರಸ.
೫	ಶೃಂಗೀ	ಅಂಗುರ.
೬	ವತ್ಸನಾಭ	೧) ಸಾಸಿವೆ, ಮೆಣಸು, ಉತ್ತರಣೆ, ತುಪ್ಪ ಇವುಗಳಲ್ಲಿ ಯಾವುದಾದರೊಂದನ್ನು ಸಕ್ಕರೆಯೊಂದಿಗೆ ಅರೆದು ಕೊಡುವುದು. ೨) ಜೀರಿಗೆ, ಅತಿಬಜೆ, ತಗಚೆ, ಅಗಸೆ, ಅರಿಸಿನ, ಕರ್ಪೂರ, ಅಭ್ರಕ, ಕೊಡನಾರಿಗಡ್ಡೆ ಇವುಗಳಲ್ಲಿ ಯಾವುದಾದರೊಂದನ್ನು ಆಡಿನಮೂತ್ರದಲ್ಲಿ ಸೇರಿಸಿ ಕುಡಿಸುವುದು. ೩) ಲಾಮಂಚ, ತಾರೆಕಾಯಿ, ನೆಲ್ಲಿಕಾಯಿಗಳನ್ನು ಒಟ್ಟಿಗೆ ಸೇರಿಸಿ ಕುದಿಸಿ, ಕುಡಿಸುವುದು.
೭	ಕಣಗಿಲ (ಅಶ್ವಮಾರಿ)	೧) ಅರಿಸಿನವನ್ನು ಮೊಸರು ಇಲ್ಲವೇ ತುಪ್ಪಗಳೊಡನೆ ಅರೆದು ಕೊಡುವುದು. ೨) ಅಣಿಲೆ, ಅರಿಸಿನವನ್ನು ಸಕ್ಕರೆಯೊಡನೆ ಬೆರೆಸಿ ಕೊಡುವುದು. ೩) ಅರಿಸಿನ, ಲಾಮಂಚ, ಮೆಣಸು, ಮಧುಕ ಇವುಗಳನ್ನು ಹಾಲಿನಲ್ಲಿ ಬೆರೆಸಿ ಕೊಡುವುದು. ೪) ಮುಳ್ಳುಂಪುಣಿಸೆಯನ್ನು ಗೋಳಿಯೊಡನೆ ಅಥವಾ ಮಲ್ಲಿಗೆ ಮತ್ತು ನೀಲಿಗಳೊಡನೆ ಸೇರಿಸಿ ಕುಡಿಸುವುದು. ೫) ಅರಿಸಿನ ಸಕ್ಕರೆ ಅಥವಾ ಮಧುಕ ಇಲ್ಲವೇ ಅಣಿಲೆಯನ್ನು ಅರೆದು ಕೊಡುವುದು. ೬) ಖದಿರದ ಹೂವು, ಅದರ ರಸ, ಅಂಬಿಲ, ಮಾವು, ಹಸುವಿನ ಹಾಲು, ಬೆಣ್ಣೆ, ದ್ರಾಕ್ಷಿಗಳು ಪ್ರತ್ಯೇಕವಾಗಿ ಕಣಗಿಲ ವಿಷವನ್ನು ಪರಿಹರಿಸಬಲ್ಲವು. ೭) ತರಣಿ (ಸೂಳೆಬೊಟ್ಟುಗಿಡ)ಯ ಬೇರನ್ನು ನೀರಿನಲ್ಲಿ ಸೇರಿಸಿ ಕೊಡುವುದು. ೮) ಮೆಣಸನ್ನು ಮಜ್ಜಿಗೆಯಲ್ಲಿ ಸೇರಿಸಿ ಕೊಡುವುದು. ೯) ಅರಿಸಿನವನ್ನು ಬಿಸಿನೀರಿನಲ್ಲಿ ಸೇರಿಸಿ ಕುಡಿಸುವುದು.

೮	ನಾಂಗುಲೀಕ (ಕೋಳಿಕುಟುಮನ ಗಿಡ)	೧) ಹಾಲು, ತುಪ್ಪ. ೨) ಕೋಷ್ಠ, ಸೈಂಧವಗಳನ್ನು ಬಿಸಿನೀರಿನೊಂದಿಗೆ ಕೊಡುವುದು. ೩) ಬಿಳಿಯ ಸುಂಡೆಕಾಯಿ, ಹಿಪ್ಪಲಿ, ಒಣಶುಂಠಿ, ನೀಲಿ ಇವುಗಳಲ್ಲಿ ಯಾವುದಾದರೊಂದನ್ನು ಅರೆದು ಕೊಡುವುದು. ೪) ಮಧುಕವನ್ನು ಮಜ್ಜಿಗೆಯಲ್ಲಿ ಸೇರಿಸಿ ಕುಡಿಸುವುದು. ೫) ಎಕ್ಕೆಗಿಡದ ಹಾಲನ್ನು ಬಿಸಿನೀರಿನೊಂದಿಗೆ ಸೇರಿಸಿ ಕುಡಿಸುವುದು.
೯	ಕಹಿಸೋರೆ	೧) ಅಂಗುರ (ಹಿರಿಮದ್ದು)ದ ಬೇರನ್ನು ನೀರಿನೊಡನೆ ಬೆರೆಸಿ ಕೊಡುವುದು. ೨) ನೇರಳೆ ಹಣ್ಣಿನ ರಸ. ೩) ಕೊಡನಾರಿ ಗಡ್ಡೆ.
೧೦	ಕಹಿಹೀರೆ	ಕಿರುಕುಸಾಲೆ ಇಲ್ಲವೇ ಹಿಪ್ಪಲಿಯನ್ನು ನೀರಿನಲ್ಲಿ ಬೆರೆಸಿ ಕೊಡುವುದು.
೧೧	ಕಾಂಜೀರ	೧) ನೇರಿಲ ತೊಕ್ಕೆಯನ್ನು ಹಾಲಿನಲ್ಲಿ ಬೆರೆಸಿ ಕೊಡುವುದು. ೨) ಅರಿಸಿನ, ಲಾಮಂಚ ಬಿಸಿನೀರಿನಲ್ಲಿ ಸೇರಿಸಿ ಕೊಡುವುದು.
೧೨	ಇಟ್ಟಿಬೀಜದ ವಿಷ	೧) ಬಾಳೆಹಣ್ಣು, ನೇರಿಲತೊಕ್ಕೆ ಕುದಿಸಿದ ನೀರಿನೊಡನೆ ಕುಡಿಸುವುದು. ೨) ಸಕ್ಕರೆ, ಲಾಮಂಚಗಳನ್ನು ನೀರಿನೊಡನೆ ಕುಡಿಸುವುದು.
೧೩	ಜೇಪಾಳದ ವಿಷ	೧) ನಿಂಬೆರಸ, ಪುತ್ರಂಜೀವಗಳನ್ನು ಸೇರಿಸಿ ಕುಡಿಸುವುದು. ೨) ಹೆಸರಿನ ಕಟ್ಟು ಕುಡಿಸುವುದು.
೧೪	ಉಮ್ಮತ್ತದ ವಿಷ	ತಾವರೆ, ಆಸಡಿ, ಎಕ್ಕದ ಬೇರು, ಹತ್ತಿಯ ಬೀಜ, ಕೇದಗೆಯ ಬೇರು ಇವುಗಳಲ್ಲಿ ಯಾವುದಾದರೊಂದನ್ನು ಸಕ್ಕರೆ ಸೇರಿಸಿ ನೀರಿನೊಡನೆ ಕೊಡುವುದು.
೧೫	ಸಣಬಿನ ವಿಷ	ಕಿರುಗೋಣಿ, ಚೊಕ್ಕಣಿಕೆ, ಅಮೃತಬಳ್ಳಿ ಯಾವುದಾದರೊಂದನ್ನು ಕೊಡುವುದು.
೧೬	ಇಲಿವಾಲ	ದಂತಿ (ಜಾಪಾಳ, ಉಮ್ಮತ್ತ) ಮತ್ತು ಅಣಿಲೆಯನ್ನು ಕೊಡುವುದು.
೧೭	ಎಕ್ಕದ ಹಾಲಿನ ವಿಷ	೧) ಎಳ್ಳೆಣ್ಣೆ, ಸಕ್ಕರೆ, ಮಜ್ಜಿಗೆಯೊಡನೆ ಕೊಡುವುದು. ೨) ಗೋಣಿ, ಎಣ್ಣೆ, ಟಂಕಣಗಳನ್ನು ನೀರಿನೊಡೆನೆ ಕುಡಿಸುವುದು. ೩) ಅಣಿಲೆಯನ್ನು ಹಾಲಿನೊಡನೆ ಕುಡಿಸುವುದು. ೪) ಹಾಲು, ಎಳನೀರುಗಳಿಂದ ಸ್ನಾನ ಪಾನಗಳನ್ನು ಮಾಡಿಸುವುದು. ೫) ಎಕ್ಕದ ಹಾಲು ಕಣ್ಣಿನಲ್ಲಿ ಸೇರಿದ್ದರೆ ಎಳ್ಳೆಣ್ಣೆಯನ್ನು ಕಣ್ಣಿನಲ್ಲಿ ಹಾಕುವುದು.
೧೮	ಕಳ್ಳಿಯ ಹಾಲಿನ ವಿಷ	ಆವರಿಕೆ, ನೆಲ್ಲಿ, ಯಷ್ಟಿ ಮಧುಕ, ಎಳ್ಳು, ಶತಾವರಿ, ಕೊಗ್ಗಿ, ಹಸುವಿನ ಹಾಲು, ತಾವರೆ, ನೇರಳೆ, ಅಂಕೋಲೆ, ಸಕ್ಕರೆ, ಪಾಲ್ಮರದ ಚಿಗುರು, ಸೂರ್ಯಭಕ್ತ, ಕಟುಕತ್ರಯ ಇವುಗಳಲ್ಲಿ ಯಾವುದಾದರೊಂದನ್ನು ಪ್ರತ್ಯೇಕವಾಗಿ ಲೇಪನ ಮಾಡುವುದು.
೧೯	ಹುಲಿಗಿಲ ವಿಷ	ನೇರಳೆ ಎಲೆ, ಓವುಗಳನ್ನು ಮಜ್ಜಿಗೆಯೊಡನೆ ಕೊಡುವುದು.
೨೦	ಕಾಗಿದೊಂಡೆ ವಿಷ	ಗಿರಿಕರ್ಣಿಕೆಯನ್ನು ನೀರಿನೊಡನೆ ಕೊಡುವುದು.
೨೧	ಅಂಗುರದ ವಿಷ	ಕೊಗ್ಗಿಯ ಕಷಾಯ.
೨೨	ನುಗ್ಗೆಯ ವಿಷ	ಹಾಲು.
೨೩	ಅಶ್ವಗಂಧಿ ವಿಷ	ತ್ರಿಫಲೆಯ ಕಷಾಯ.
೨೪	ವಿಷಾಗ್ನಿ	ತ್ರಿಫಲೆಯ ಕಷಾಯ.

೨೫	ದೇವದಾಳಿಯ ವಿಷ	ಅರಿಮೇಧ (ಹುಚ್ಚುಕಗ್ಗಲೀಗಿಡ)ದ ತಿರುಳು ಮತ್ತು ಸಿರಿಸದ ಹೂಗಳನ್ನು ಅರೆದು ಕೊಡುವುದು.
೨೬	ಮಗ್ಗಾರೆ ವಿಷ	ಜಾದು ಮಜ್ಜಿಗೆ, ಲೋಧ್ರ, ನೈದಿಲೆ.
೨೭	ಚಿಲ್ಲದ ವಿಷ	ಕಿರುಕುಸಾಲೆ, ಅಂಬಲಿ.
೨೮	ಪಾದರಸದ ವಿಷ	ಕಿರುನೆಲ್ಲಿ, ಅಗಸೆ, ಶ್ರೀಗಂಧ, ಕುಂಕುಮಕೇಸರಿ, ತ್ರಿಶೂಲಿ, ವೀಷೆಯದೆಲೆ, ಸಹದೇವೀ ಇವುಗಳಲ್ಲಿ ಯಾವುದಾದರೊಂದನ್ನು ಪ್ರತ್ಯೇಕವಾಗಿ ಕೊಡುವುದು.
೨೯	ಗಂಧಕದ ವಿಷ	ಶ್ರೀಗಂಧ, ಸಬ್ಬಸಿಗೆಗಳನ್ನು ಪ್ರತ್ಯೇಕವಾಗಿ ಕೊಡುವುದು.
೩೦	ಬಿಳುಗಾರದ ವಿಷ	ಸೈಂದವ, ಬೆಲ್ಲ, ಇಂಗು ಪ್ರತ್ಯೇಕವಾಗಿ ಕೊಡುವುದು.
೩೧	ಶಿಲಾಧಾತುವಿನ ವಿಷ	ನೀಲಿ.
೩೨	ಕಂಕುಷ್ಠದ ವಿಷ	ಬೇಲದ ಬೇರು.
೩೩	ಕರ್ಪೂರದ ವಿಷ	೧) ಗೋವಿನ ಸಗಣಿಯ ರಸ, ಕುಂಕುಮಕೇಸರಿ, ಶ್ರೀಗಂಧಗಳನ್ನು ನೀರಿನಲ್ಲಿ ಬೆರೆಸಿ ಕೊಡುವುದು. ೨) ಭೃಂಗರಸ, ಅಣಿಲೆಯನ್ನು ಬಿಸಿನೀರಿನೊಡನೆ ಕೊಡುವುದು. ೩) ಶ್ರೀಗಂಧವನ್ನು ತಣ್ಣೀರಿನೊಡನೆ ಕೊಡುವುದು. ೪) ಕಿರುಕುಸಾಲೆ, ಕರಿ ಜೀರಿಗೆಗಳನ್ನು ಅರೆದು ನೀರಿನಲ್ಲಿ ಕೊಡುವುದು. ೫) ಇದ್ದಿಲನ್ನು ನೀರಿನಲ್ಲಿ ಬೆರೆಸೆ ಕೊಡುವುದು. ೬) ಬೆಲ್ಲದೊಡನೆ ಸೇರಿದ ಕರ್ಪೂರದ ವಿಷವನ್ನು ಬಜೆ, ಉಪ್ಪುನೀರುಗಳಿಂದ ಪರಿಹರಿಸಬಹುದು. ೭) ಕರ್ಪೂರದ ಜೊತೆ ಹುಳಿ ಸೇರಿಕೊಂಡ ವಿಷವನ್ನು ಪಾಲ್ಮರದ ರಸ ಮತ್ತು ಭೃಂಗರಸದಿಂದ ಪರಿಹರಿಸಬಹುದು.
೩೪	ಅಭ್ರಕದ ವಿಷ	೧) ಆಸಡಿಯ ಬೇರಿನ ರಸವನ್ನು ಕುಡಿಸುವುದು. ೨) ಕುಸುಬೆಯ ರಸವನ್ನು ಕುಡಿಸುವುದು.
೩೫	ಸೂಜಿಗಲ್ಲಿನ ವಿಷ	ಬಿಸಿನೀರಿನಲ್ಲಿ ಕಡೆದ ಮಜ್ಜಿಗೆಯೊಂದಿಗೆ ನೆಲ್ಲಿಕಾಯಿಯನ್ನು ಸೇರಿಸಿ ಕುಡಿಸುವುದು.
೩೬	ಬಜೆಯ ವಿಷ	೧) ಲಾಮಂಚ ಇಲ್ಲವೇ ಏಲಕ್ಕಿಯನ್ನು ಅರೆದು ಅಕ್ಕಿಕಚ್ಚಿನಲ್ಲಿ ಕೊಡುವುದು. ೨) ಬಜೆ.
೩೭	ಮೆಣಸಿನ ವಿಷ	ನೆಲ್ಲಿಕಾಯಿ ತಿನ್ನುವುದು.
೩೮	ಇಂಗಿನ ವಿಷ	ಶಾಲ್ಮಲಿಯ ನೀರು.
೩೯	ತ್ರಿಕಟುಕದ ವಿಷ	ಸುಗಂಧಿ.
೪೦	ಸಾಬೂನಿನ ವಿಷ	೧) ತ್ರಿಕ್ಷಾರ (ನೆಲ್ಲಿ, ಮಳ್ಳುಂಪುಣಿಸೆ, ಹುಣಿಸೆ), ತ್ರಿಕಟುಗಳನ್ನು ಪ್ರತ್ಯೇಕವಾಗಿ ಕೊಡುವುದು. ೨) ವಿಭೂತಿ, ಆಲಿಕಲ್ಲುಗಳನ್ನು ಹಾಲಿನೊಡನೆ ಕೊಡುವುದು. ೩) ತೆಂಗಿನ ಹೊಂಬಾಳೆಯನ್ನು ಸಕ್ಕರೆಯೊಡನೆ ಕೊಡುವುದು.

೪೧	ಸಾಸಿವೆಯ ವಿಷ	೧) ಎಳ್ಳು, ಉದ್ದು, ಬೆಳುಗಾರ, ಅಗಸೆಕಾಯಿ, ಅಕ್ಕಿಕಚ್ಚುಗಳನ್ನು ಪ್ರತ್ಯೇಕವಾಗಿ ಕೊಡುವುದು. ೨) ಪುನರ್ನವಿ (ಕೊಮ್ಮೆಗಿಡ)ಯನ್ನು ನೀರಿನೊಡನೆ ಕೊಡುವುದು.
೪೨	ಈರುಳ್ಳಿ	ನೀರಿನಲ್ಲಿ ಬೆರೆಸಿದ ಅವರೆ.
೪೩	ಬೆಳ್ಳುಳ್ಳಿಯ ವಿಷ	ನೀರಿನಲ್ಲಿ ಬೆರೆಸಿದ ಅವರೆ.
೪೪	ಜೀರಿಗೆಯ ವಿಷ	ಬೇವಿನ ಎಲೆ, ಬಿಳಿಯ ಗಣಜಿಲಗಳನ್ನು ಹಸುವಿನ ಹಾಲಿನೊಡನೆ ಸಕ್ಕರೆಯನ್ನು ಬೆರೆಸಿ ಕುಡಿಸುವುದು.
೪೫	ಮೆಂಥೆಯ ವಿಷ	
೪೬	ಓವಿನ ವಿಷಗಳು	
೪೭	ಸಬ್ಬಸಿಗೆ ವಿಷ	ಹಾಲು, ತುಪ್ಪ, ಬೆಲ್ಲ, ಇಂಗು, ಶ್ರೀಗಂಧ, ನಾಗಕೇಸರ
೪೮	ಏಲಕ್ಕಿಯ ವಿಷ	ಸಕ್ಕರೆ
೪೯	ಕೊತ್ತಂಬರಿ ವಿಷ	ತ್ರಿಫಲ, ಉಪ್ಪು.
೫೦	ಉಳ್ಳಿಯ ವಿಷ	ರುಜೆ, ಅಳಲೆ.
೫೧	ಹಿಪ್ಪಲಿ	ಜೇನುತುಪ್ಪ, ಸಕ್ಕರೆ.
೫೨	ಉಪ್ಪಿನ ವಿಷ	ತುಳಸಿ, ನೆಲ್ಲಿಕಾಯಿ, ಕೇತಕಿ, ಮೊಲ್ಲೆರಸಗಳನ್ನು ಪ್ರತ್ಯೇಕವಾಗಿ ಕೊಡುವುದು.
೫೩	ಖರ್ಜೂರದ ವಿಷ	ಪದ್ಮಕೇಸರ.
೫೪	ಮಾವಿನ ಹಣ್ಣಿನ ವಿಷ	ಹಾಲು, ನೀರು, ಯವಕ್ಷಾರ, ನಾಳಿಕೇರ ರಸ ಇವುಗಳಲ್ಲಿ ಯಾವುದಾದರೊಂದನ್ನು ಕೊಡುವುದು.
೫೫	ಹಾಲಿನ ವಿಷ	೧) ನೆಲ್ಲಿಕಾಯಿ, ಹೆಸರುಕಟ್ಟು ಇವುಗಳಲ್ಲಿ ಯಾವುದಾದರೊಂದನ್ನು ಕೊಡುವುದು. ೨) ಮಧುಕದ ಕಷಾಯ. ೩) ಜೇನುತುಪ್ಪ.
೫೬	ನೇರಿಲ ಹಣ್ಣಿನ ವಿಷ	೧) ಬಿಳುಗಾರ, ಸೈಂಧವ, ಮಜ್ಜಿಗೆಗಳನ್ನು ಸೇರಿಸಿ ಕೊಡುವುದು. ೨) ಅಣಿಲೆ ಮತ್ತು ಮೆಣಸುಗಳನ್ನು ಸೇರಿಸಿ ಕೊಡುವುದು.
೫೭	ಹಲಸಿನ ಹಣ್ಣಿನ ವಿಷ	ಎಳ್ಳೆಣ್ಣೆ, ಉಪ್ಪಿನರಸ, ಮಾವಿನ ಕಾಯಿ, ಶುಂಠಿ, ಜಾಯಿಕಾಯಿ, ಹಿಂಗುಗಳನ್ನು ಮಜ್ಜಿಗೆಯೊಡನೆ ಸೇರಿಸಿ ಕುಡಿಸುವುದು.
೫೮	ಬಾಳೆಹಣ್ಣಿನ ವಿಷ	ಕಡಸಿಗೆ ಕಷಾಯ, ಮೆಣಸು, ಶುಂಠಿ, ಅಳಲೆಕಾಯಿ ಇವುಗಳಲ್ಲಿ ಯಾವುದಾದರೊಂದನ್ನು ಮಜ್ಜಿಗೆಯಲ್ಲಿ ಸೇರಿಸಿ ಕುಡಿಸುವುದು.
೫೯	ತೆಂಗಿನಕಾಯಿ ವಿಷ	ನೆಲ್ಲಕ್ಕಿ, ಪುಳ್ಳುಂಪುಣಿಸೆ ಬೀಜ, ಕಳವಲ ಬೀಜಗಳನ್ನು ತಿನ್ನುವುದು.
೬೦	ಎಳನೀರಿನ ವಿಷ	ಕಡಲೆಯ ಹುಳಿ, ಮದರಂಗಿಯ ಬೀಜ, ಸಕ್ಕರೆ. ಅಕ್ಕಿಕಚ್ಚು, ಗಣಜಿಲೆ, ವಜ್ರಿ(ಎಲೆಗಳ್ಳಿ) ಹಾಲು, ಸಕ್ಕರೆ.
೬೧	ಕಬ್ಬಿನ ರಸದ ವಿಷ	ಕಡಸಿಗೆ ಬೇರು, ಮುಡಿವಾಳ.
೬೨	ನಾರಂಗ ವಿಷ	ಬೆಳುಗಾರ.
೬೩	ಹೇರಳೆ	ಅಣಿಲೆ, ಸದ್ಯಕ್ಷಾರ.
೬೪	ತವಕ್ಷೀರ	ಕಿತ್ತಳೆ.

೬೫	ದಾಳಿಂಬದ ವಿಷ	ಶುಂಠಿ, ಮೊಸರು.
೬೬	ನಿಂಬೆಹಣ್ಣಿನ ವಿಷ	ಮತ್ತಿಯ ತಿಗುಡು, ಜೇನುತುಪ್ಪ.
೬೭	ಮಾದಲ ವಿಷ	ಹುಣಿಸೆಯ ತೊಗಟೆ, ಮಗ್ಗಾರೆ, ಸೈಂಧವ.
೬೮	ಬೇವಿನ ವಿಷ	ತಾವರೆಯ ಎಲೆ, ಸಕ್ಕರೆ, ಆವರಿಕೆಯ ಸೊಪ್ಪು, ಹಾಲು.
೬೯	ಸುಣ್ಣದ ವಿಷ	ಕೆಮ್ಮಣ್ಣು.
೭೦	ನೆಲ್ಲಿಯ ವಿಷ	ತಾರೆಕಾಯಿ.
೭೧	ಚಿತ್ರಮೂಲ ವಿಷ	ಏಲಕ್ಕಿ, ಮಜ್ಜಿಗೆ, ಹಿಪ್ಪಲಿ, ಗಂಜಿ, ಮೊಸರು, ಹಿಂಗು, ಶುಂಠಿ.
೭೨	ಬೆಳುವಾಲದ ವಿಷ	ಅಣಲೆ.
೭೩	ಹೊನ್ನೆಯ ವಿಷ	ಅಭ್ರನಾದಿ.
೭೪	ನೀಲಿಯ ವಿಷ	ಭಸಿತ.
೭೫	ಕಡಸಿಗೆಯ ವಿಷ	ಶುಂಠಿ, ಅಗಳುಶುಂಠಿ, ಬಿಸಿನೀರು.
೭೬	ಬೆಳಲಿಗೆಯ ವಿಷ	ತುಳಸಿ, ಗುಗ್ಗುಳ, ಮೆರಿಚ.
೭೭	ನಸುಗುನ್ನಿಯ ವಿಷ	ಹಸುವಿನ ತುಪ್ಪ, ಭಸಿತ, ನೀಲಿ, ಹಂಸಪಾದಿ, ಸುಗಂಧಿ, ಕೆಸರು, ತುರುಚೆ, ನರುವಂಜಿ, ನೆಲಾವರೆ.
೭೮	ತುರುಚೆಯ ವಿಷ	ತುಳಸಿಯ ಕರಿ, ಸಬುಕಾರ (ಸಾಬೂನು), ಅಂಬಲಿ, ಕರ್ದಮ.
೭೯	ಗೇರು ಹಣ್ಣಿನ ವಿಷ	ಪರ್ಪಟಕದ ಕಷಾಯ, ಮುತ್ತದ ಕಷಾಯ, ತ್ರಿಫಲೆಯ ಕಷಾಯ, ಪಾಲ್ಮರದ ಪಾಕ, ಸೊಗದೆ, ಸಕ್ಕರೆ, ತುಂಬುರದ ಬೇರಿನ ಕಷಾಯ, ನೀಲಿ, ಕರ್ಕೋಟಕಿ, ತಾವರೆಯ ಕೇಸರ, ಬೆಟ್ಟಮಲ್ಲಿಗೆ, ಘನನಾದಿ.
೮೦	ಗೇರಿನಿಂದಾದ ಹುಣ್ಣುಗಳಿಗೆ	ನರಮೂತ್ರ, ಬಿಸಿಗಂಜಿ, ಎಳ್ಳೆಣ್ಣೆ, ತುಪ್ಪ, ಕಿರುಕುಸಾಲೆ, ತುಂಬುರದ ಸೊಪ್ಪು, ವೀಳ್ಯದ ಎಲೆ, ದೂರ್ವೆ, ನೆಲ್ಲಕ್ಕಿ, ಅತಿಮಧುರ, ವಳಿಗೆ, ಗರಿಕೆಯ ರಸ, ಕರಿಯ ಎಳ್ಳು, ಎಮ್ಮೆಯ ತುಪ್ಪ, ಹತ್ತಿಯ ಎಲೆ, ಅರಿಸಿನ, ತುಂಬುರದ ಬೀಜ ಯಾವುದಾದರೊಂದು ಕೊಡುವುದು.
೮೧	ಲೊಕ್ಕಿಯ ವಿಷ	ಮಜ್ಜಿಗೆ, ಶುಂಠಿ.
೮೨	ಕಕ್ಕೆಯ ವಿಷ	ಹೆಸರು ಕಟ್ಟು, ಗಣಜಿಲೆ, ಮಧುಕ, ಮಜ್ಜಿಗೆ.
೮೩	ಜಾಪಾಳ (ದಂತಿ)ಯ ವಿಷ	ಬಳ್ಳಿಸೊಂಡೆ, ಬೆಲ್ಲ.
೮೪	ಕುರುಟಿಗೆ ವಿಷ	ಕೊಗ್ಗಿ, ನೆಲ್ಲಿ.
೮೫	ಗುರುಂಜಿಯ ವಿಷ	ಅಭ್ರನಾದಿ.
೮೬	ಅಂಕೋಲೆಯ ವಿಷ	ಕುಸುಬೆಯ ರಸ, ಆಡಿನ ಹಾಲು, ಅಣಿಲೆಕಾಯಿ, ನುಗ್ಗೆಯ ರಸ, ಗೋರಂಟೆಯ ಎಲೆ.
೮೭	ಅರುಟಾಳ ವಿಷ	ಪದ್ಮಾಕ್ಷಿ.
೮೮	ಹಾವುಮೆಕ್ಕೆಯ ವಿಷ	ಗಿಣಿಮೂಗನಗಡ್ಡೆ.
೮೯	ಮುಂಗುರಿಯ ವಿಷ	ನೇರಳೆ ಹಣ್ಣಿನ ರಸ, ಶತಾವರಿ, ಸಕ್ಕರೆ.
೯೦	ಅಣಬೆಯ ವಿಷ	ಮೊಸರು.
೯೧	ತಗಚೆಯ ವಿಷ	ಹಿಂಗು.

೯೨	ಸೂರಣಗಡ್ಡೆ ವಿಷ	ನೆಲ್ಲಿ, ಚಕ್ಕವತ್ತದ ರಸ, ಎಳನೀರು.
೯೩	ಎಳ್ಳೆಣ್ಣೆಯ ವಿಷ	ಗಣಜಿಲ, ಮಜ್ಜಿಗೆ.
೯೪	ಹಸ್ತಿಕರ್ಣಿ	ಪುಳ್ಳುಂಬಣಿಸೆ, ಎಣ್ಣೆ.
೯೫	ನೆಲಗುಳ್ಳದ ವಿಷ	ನೆಲ್ಲಿ.
೯೬	ಹಾಗಲ ವಿಷ	ನೆಲ್ಲಿ.
೯೭	ದೀಪದ್ರಾಕ್ಷಿ ವಿಷ	ನಿರ್ಗುಂಡಿ, ಮೆಣಸು, ಹಸುವಿನ ಹಾಲು.
೯೮	ತುಂಬೆಯ ವಿಷ	ಪುತ್ರಂಜೀವ, ಕಂಬು, ಕರಿಯ ಜೀರಿಗೆ, ತುರುವೆ ಸೊಪ್ಪು
೯೯	ತುಂಬುರದ ವಿಷ	ಮೆಣಸು, ಮಜ್ಜಿಗೆ.
೧೦೦	ಉಂಡ ಆಹಾರದ ವಿಷ	ಹೆಸರು ಕಟ್ಟು.
೧೦೧	ಮುಳ್ಳುಹಂದಿಯ ಮುಳ್ಳಿನ ವಿಷ	ಉಳ್ಳಿ, ಸಕ್ಕರೆ, ಶುಂಠಿ, ಹಿಪ್ಪಲಿ, ಮೆಣಸು, ಹಾಲು, ಬಂಜೆ ಮಡುವಾಗಲು, ಎಳ್ಳೆಣ್ಣೆ, ಹೂರ, ತ್ರಿಕುಟಕ, ಕಾಡುಹೀರೆ, ತಕ್ಕೋಲಗಂಧ, ಕಲ್ಲುಸಕ್ಕರೆ, ಜಲಧರ ಯಾವುದಾದರೊಂದು.
೧೦೨	ಹಿಟ್ಟಿನ ವಿಷ	ಬಿಸಿನೀರು.
೧೦೩	ಉಪ್ಪು ಮಿಶ್ರಿತ ಮಜ್ಜಿಗೆಯ ವಿಷ	ಬಿಸಿನೀರು.
೧೦೪	ಅನ್ನದ ವಿಷ	ಮೆಣಸು, ಚಿತ್ರಮೂಲಿಕೆ, ಶುಂಠಿ, ಬೇವಿನ ರಸ, ಗಣಜಿಲದ ಬೇರು, ಸೈಂಧವ, ಉಪ್ಪು ಮಿಶ್ರಿತ ಮಜ್ಜಿಗೆ, ಅಂಬಿಲ, ಮೊಸರು, ಲಾಮಂಚ ಇವುಗಳಲ್ಲಿ ಯಾವುದಾದರೊಂದನ್ನು ಕೊಡುವುದು.
೧೦೫	ಹಾಲಿನ ವಿಷ	ಕರಿಯೆಲೆಯ ರಸ, ಅಣಿಲೆ, ಬಿಸಿನೀರು, ಕಡಸಿಗೆಯ ರಸ, ಮೇಘನಾದಿ, ಹಾಲು, ಲಕ್ಕಿಸೊಪ್ಪು, ಹಿಪ್ಪಲಿ, ಶುಂಠಿ ಪ್ರತ್ಯೇಕವಾಗಿ ಕೊಡುವುದು.
೧೦೬	ಮೊಸರಿನ ವಿಷ	ಹೆಸರಿನ ಕಟ್ಟು, ವಸುಧಾಫಲ, ಶುಂಠಿ, ಮೆಣಸು, ಲಾಮಂಚ.
೧೦೭	ಮಜ್ಜಿಗೆಯ ವಿಷ	ಕಡಸಿಗೆ, ಶುಂಠಿ.
೧೦೮	ತುಪ್ಪದ ವಿಷ	ಮೆಣಸು, ಜೇನುತುಪ್ಪ, ಕುಂಬಳ, ವೀಳೆಯದೆಲೆ, ಬಿಸಿನೀರು.
೧೦೯	ಜೇನುತುಪ್ಪದ ವಿಷ	ಕುಂಬಳದ ರಸ, ಲೊಕ್ಕಿಯ ಕಷಾಯ, ಬಿಸಿನೀರು, ಅಂಗುರ.
೧೧೦	ಕಂಗುಂಗೆ ಎಣ್ಣೆಯ ವಿಷ	ಕಬ್ಬಿನ ಹಾಲು.
೧೧೧	ಎಳ್ಳಿನ ವಿಷ	ಎಕ್ಕೆಯ ಬೇರು, ಕೊಳವಳಿಕೆ ಬೀಜ, ಹುಣಿಸೆ ಹುಳಿ, ಬೆಲ್ಲ.
೧೧೨	ಎಳ್ಳೆಣ್ಣೆಯ ವಿಷ	ಸಕ್ಕರೆ ಸೇರಿಸಿದ ಹಾಲು, ತುಪ್ಪ, ಸಕ್ಕರೆ, ಜೇನುತುಪ್ಪ.
೧೧೩	ಬೇವಿನ ಎಣ್ಣೆ ವಿಷ	ರೇಣುಕ, ಕೊಡಸಿಗೆ.
೧೧೪	ಕಳಲೆಯ ಹಾಲಿನ ವಿಷ	ಎಳನೀರು, ಸಕ್ಕರೆ, ಸೋರೆ ಎಲೆ.
೧೧೫	ಔಡಲದ ಎಣ್ಣೆಯ ವಿಷ	ತುಳಸಿ, ಸಕ್ಕರೆ.
೧೧೬	ಬಿದಿರ ಕಳಲೆ ವಿಷ	ತಗಚೆ.

೧೧೭	ಜೋಳದ ವಿಷ	ಮೆಣಸು, ಶುಂಠಿ, ಮಜ್ಜಿಗೆ, ಮೇಘನಾದಿ, ಸೈಂಧವ, ಹಿಪ್ಪಲಿ.
೧೧೮	ಸಾವೆಯ ವಿಷ	ಅಗಸೆಯ ಕಷಾಯ, ತ್ರಿಕಟುಕ, ಲೊಕ್ಕಿ.
೧೧೯	ರಾಗಿಯ ವಿಷ	ಬೆಳ್ಳುಳ್ಳಿ, ಒಣಶುಂಠಿ, ಹಿಂಗು, ಅರಿಷ್ಟ, ಹಾಲು, ಅತಿಬಜೆ, ಕೋಷ್ಠ, ಅರಿಸಿನ.
೧೨೦	ನವಣೆಯ ವಿಷ	ಅಟ್ಟಿಹತ್ತು, ಒಣಶುಂಠಿ, ಹೆದ್ದುಂಬೆ, ಮಜ್ಜಿಗೆ.
೧೨೧	ಬರಗಿನ ವಿಷ	ಕುಂಬಳದ ರಸ.
೧೨೨	ಹಾರಕದ ವಿಷ	ಬೆಲ್ಲಗೂಡಿದ ಕುಂಬಳದ ರಸ, ಕುಂಬಳದ ಎಲೆ, ಮೆಣಸು.
೧೨೩	ಕಂಬುವಿನ ವಿಷ	ಕಟುಕತ್ರಯ, ಜಂಬಿರರಸ, ಇಂಗು, ಸಕ್ಕರೆ, ನಿಂಬೆಯ ರಸ.
೧೨೪	ಗೋದಿಯ ವಿಷ	ಮುಳ್ಳುಸೌತೆ, ನುಗ್ಗೆಯ ಬೀಜ, ಸೈಂಧವ, ಕೊತ್ತಂಬರಿ, ಜೀರಿಗೆ ಸೇರಿಸಿದ ಮಜ್ಜಿಗೆ.
೧೨೫	ಕಡಲೆಯ ವಿಷ	ಒಣಶುಂಠಿ ಮತ್ತು ಹಿಂಗುಗಳನ್ನು ಅರೆದು ಕಾಸಿದ ಕಷಾಯ, ಕಟುಕತ್ರಯ.
೧೨೬	ಹೆಸರಿನ ವಿಷ	ನೆಲ್ಲಿ.
೧೨೭	ಉದ್ದಿನ ವಿಷ	ಮುಳ್ಳುಸೌತೆ.
೧೨೮	ಅವರೆಯ ವಿಷ	ಮಜ್ಜಿಗೆ, ಶುಂಠಿ, ಸೈಂಧವ, ಮೆಣಸು, ಬಿಳಿಯಕೊಮ್ಮೆ, ಇಂಗು, ನಿಂಬೆಯ ಹುಳಿ.
೧೨೯	ಸೋಡವರೆಯ ವಿಷ	ಆಡುಸೋಗೆ, ಮಧುಕ, ಚಿತ್ರಮೂಲಗಳನ್ನು ಆಡಿನ ಹಾಲಿನೊಡನೆ ಸೇವಿಸುವುದು.
೧೩೦	ಅಲಸಂದೆಯ ವಿಷ	ಎಳ್ಳೆಣ್ಣೆ, ಸೈಂಧವ, ಹಿಪ್ಪಲಿ, ಮೆಣಸು, ಒಣಶುಂಠಿ.
೧೩೧	ತೊಗರಿಯ ವಿಷ	ಎಳ್ಳೆಣ್ಣೆ, ಸೈಂಧವ, ಮಜ್ಜಿಗೆ, ಮೆಣಸು, ನೆಲ್ಲಿಯ ರಸ, ಒಣಶುಂಠಿ
೧೩೨	ಹುರುಳಿಯ ವಿಷ	ಹರೀತಕಿ, ಕಿರುಕುಸಾಲೆ, ಹಿಂಗು, ವಿಳಂಗ, ಹಾಲು
೧೩೩	ಬೆಲ್ಲದ ವಿಷ	ಕುರುವಿಂದ, ತ್ರಿಕಟುಕ, ಕಡಸಿಗೆ, ನಿಂಬೆಯ ರಸ.
೧೩೪	ವಿಷೂಚಿಕೆ (ಕಣ್ಣಿಗೆ)	ಗಿರಿಕರ್ಣಿಕೆ, ತ್ರಿಕಟುಕ, ಅರಿಸಿನ, ಉತ್ತರಣೆಯ ಅಕ್ಕಿ, ಜೇನುತುಪ್ಪಗಳನ್ನು ಸೇರಿಸಿ ಲೇಪಣ ಮಾಡುವುದು.
೧೩೫	ತಾಂಬೂಲದ ವಿಷ	ಅರಿಸಿನ, ಅಂಬಿಲ, ಶ್ರೀಗಂಧ, ಶುದ್ಧವಾದ ನೀರು.
೧೩೬	ಅಡಕೆಯ ವಿಷ	ಬೆಳುಗಾರ, ಮಜ್ಜಿಗೆ, ಬಿಳಿಯೆಲೆ
೧೩೭	ವೀಳ್ಯದೆಲೆ ವಿಷ	ಬೆಳುಗಾರ, ಬೆಣ್ಣೆ, ಏಲಕ್ಕಿ
೧೩೮	ತಾಂಬೂಲದಲ್ಲಿ ಸುಣ್ಣ ಅಧಿಕವಾದರೆ	ಎಣ್ಣೆ
೧೩೯	ಭಂಗಿ, ಮಾಂಸ, ಮದ್ಯ	ಹಸುವಿನ ಹಾಲು, ನೆಲ್ಲಿಯ ರಸ, ರುದ್ರಾಕ್ಷಿ, ಸಕ್ಕರೆ, ಅರಿಸಿನ, ಮೆಣಸು
೧೪೦	ಮದ್ಯದ ವಿಷ	ಬಿಸಿನೀರಿನಿಂದ ಕಡೆದ ಮಜ್ಜಿಗೆ, ಅಣಿಲೆ, ಹಸುವಿನ ತುಪ್ಪ, ಸಕ್ಕರೆ
೧೪೧	ನಾಯಿಯ ಹಾಲಿನ ವಿಷ	ಅರಿಸಿನ
೧೪೨	ಉರಿಯ ಸೆಕೆಯಿಂದ ಬಳಲುವವರಿಗೆ	ಅರಗು, ಸಕ್ಕರೆ, ಶ್ರೀಗಂಧ, ರುದ್ರಾಕ್ಷಿ, ಲಾಮಂಚದ ಬೇರು

೧೪೩	ಬೆಂಕಿಯ ತಾಪದಿಂದಾದ ಉರಿ	ಸೇವಂತಿಗೆ, ಜೀರಿಗೆ, ಕರ್ಪೂರ, ಹಾಲು, ಆಲಿಕಲ್ಲು, ಭಸಿತ ಕರ್ಪೂರ, ಶಿಲಾಧಾತು,
೧೪೪	ಹೊಗೆಯಿಂದಾದ ಬಳಲಿಕೆ	ತಕ್ಕೋಲ, ಪುಟ್ಟ ಏಲಕ್ಕಿ, ತಗರ, ಶ್ರೀಗಂಧ.
೧೪೫	ಹೊಗೆಯಿಂದಾದ ಅಸ್ವಸ್ಥತೆ	ಶ್ರೀಗಂಧ, ನಿಂಬಳದ, ಕಿರುಕುಸಾಲೆ, ಸಮುದ್ರಫಲ, ತಣ್ಣೀರು.
೧೪೬	ಹೊಗೆಯಿಂದಾದ ಕಣ್ಣಿನ ಉರಿ	ಮೊಸರಿನ ನೀರು, ಕಿರುಕುಸಾಲೆ, ಸೈಂಧವ ಯಾವುದಾದರೂ ಒಂದು.
೧೪೭	ತುಪ್ಪವನ್ನು ತಿಂದು, ಮೂಗಿನೊಳಗೆ ಮತ್ತು ಕಣ್ಣುಗಳಿಗೆ ಹಚ್ಚಿಕೊಂಡು ಹೊಗೆಯಡುಗೆ ಮಾಡುವುದರಿಂದ ತೊಂದರೆಯಾಗದು	
೧೪೮	ಬಿಸಿಲಿನಿಂದ ಬಳಲಿಕೆಯಾದರೆ	ಹೆಸರುಕಟ್ಟು, ಎಳನೀರು, ಹಾಲು, ನೆಲ್ಲಿಯ ರಸ ಕುಡಿಯುವುದು.
೧೪೯	ನೀರಿನಲ್ಲಿ ಮುಳುಗಿ ಹೊಟ್ಟೆಯಲ್ಲಿ ನೀರು ಸೇರಿಕೊಂಡರೆ	ಕುಂಬಾರನ ಚಕ್ರದಲ್ಲಿಟ್ಟು ತಿರುಗಿಸಿ ನೀರನ್ನು ಹೊರಗೆ ತೆಗೆದು, ಶಾಖ ಕೊಡುವುದು. ನಂತರ ಶುಂಠಿ, ಶಿವೆ, ಉಪ್ಪು ಸೇರಿಸಿ, ಲಾಮಂಚದ ಬೇರು ಅರೆದು ಕೊಡುವುದು.
೧೫೦	ಕಂಠಪೂರ್ತಿ ನೀರು ಕುಡಿದ ತೊಂದರೆ	ಅಮೃತ ಬಳ್ಳಿಯ ಬೇರು, ಅಂಬಲಿ ಸೇವಿಸುವುದು.
೧೫೧	ನೀರನ್ನು ಕುಡಿದು ಹೊಟ್ಟೆಯುಬ್ಬರಿಸಿದರೆ	ಶರೀರಕ್ಕೆ ವಿಭೂತಿ ಹಚ್ಚಿ, ಬೆವರುವವರೆಗೆ ಶಾಖ ಕೊಡುವುದು.
೧೫೨	ಚರಾಚರಗಳ ವಿಷ	ಹಾಲು ಅನ್ನ, ಹೆಸರು ಕಟ್ಟು, ಎಳನೀರು, ಹತ್ತಿಯ ಕಷಾಯ, ಹುಣಸೆಯ ಹಣ್ಣು, ಸಕ್ಕರೆ, ನೀಲಿ, ಲೋಧ್ರ.
೧೫೩	ಸ್ಥಾವರ ವಿಷ	ಸಗಣಿಯ ರಸ, ಹುಣಿಸೆಯ ಹುಳಿ, ಕಹಿಸೋರೆ, ಇಂಗು, ಕೊಡಸಿಗೆ
೧೫೪	ಕಲ್ಲುಗಳು ಒತ್ತಿ ಪಾದಗಳು ನೋವಾಗಿದ್ದರೆ	ಎಕ್ಕೆಯ ಹಾಲನ್ನು ಹಾಕಿ, ಹಿತವಾಗಿ ಕಾಯಿಸುವುದು
೧೫೫	ದೇಹಭಾಗದಲ್ಲಿ ಮುಳ್ಳು ಸೇರಿದ್ದರೆ	೧) ಕುರುಟಗೆ ಬೇರು. ೨) ಪೂರ್ವ ದಿಕ್ಕಿಗೆ ಮುಖಮಾಡಿ ನಿಂತು ಕೋಣದ ಕಿವಿಯಲ್ಲಿರುವ ಗುಗ್ಗೆಯನ್ನು ಹಚ್ಚುವುದು. ೩) ಇಂದನಕಂದವನ್ನು ತುಪ್ಪದಲ್ಲಿ ಹುರಿದು, ಇಂದ್ರವಾರುಣಿಯನ್ನು ಹಚ್ಚುವುದು. ೪) ಮೆಣಸು, ಸುಣ್ಣಳನ್ನು ಅರೆದು ಎಕ್ಕದ ಹಾಲಿನಲ್ಲಿ ನೆನೆಸಿ ಹಚ್ಚುವುದು. ೫) ಲೊಕ್ಕಿಯ ಬಂದಣಿಗೆ, ಎಕ್ಕೆಯ ಹಾಲು. ೬) ನೆಗ್ಗಿಲ ಚಿಗುರೊಡನೆ ನವಣೆಯ ಹಿಟ್ಟನ್ನು ಬೇಯಿಸಿ ಸೇವಿಸುವುದು. ೭) ಕೊಗ್ಗಿಯ ಬೇರನ್ನು ಎಣ್ಣೆಯೊಡನೆ ಸೇರಿಸಿ ಕುಡಿಸುವುದು. ೮) ನೀಲಿ, ಹತ್ತಿಯ ಚಿಗುರು, ತೊಗರಿಯ ಚಿಗುರುಗಳನ್ನು ಹಚ್ಚುವುದು.

೧೫೬	ವಿಷಪೂರಿತ ಮುಳ್ಳು	೧) ಸಿರೀಸ, ಅಂಕೋಲೆ, ನಿಂಬೆ, ಈಶ್ವರಿ, ಹುಲಗಿಲ, ಇಂದ್ರವಾರುಣಿಯ ಸೊಪ್ಪನ್ನು ಬೇಯಿಸಿ ಕಟ್ಟುವುದು. ೨) ನೆಲಗೋಣಿ ಹುಣಿಸೆ, ಪಾಪಟೆ, ಹುಲಗಿಲ, ದೊಗ್ಗಳೆ (ದಂಟು), ಹರುವೆಗಳ ಎಲೆಯನ್ನು ಅಂಬಲಿಯಲ್ಲಿ ಕಾಯಿಸಿ ಕಟ್ಟುವುದು. ೩) ನೆಲಬೇವನ್ನು ಜಜ್ಜಿ ಹುಳಿಯಾದ ಅಂಬಿಲವನ್ನು ಸೇರಿಸಿ ಕೊಡುವುದು. ೪) ಸುರದಾಳಿ, ನೀಲಿ, ಸುರವಾರುಣಿ, ಸುಗಂಧಿ, ವಿಷಮುಂಗುರಿ, ಅಂಗುರ, ನಾಂಗುರಿಕ, ಬಜೆಗಳನ್ನು ಅರೆದು ಹಚ್ಚುವುದು. ೫) ಯಾವ ಗಿಡದ ಮುಳ್ಳು ನಾಟುವುದೋ ಆಯಾ ಗಿಡದ ಎಲೆಯನ್ನು ಅಕ್ಕಿಕಚ್ಚಿನೊಡನೆ ಬೆರೆಸಿ ಕೊಡುವುದು.
೧೫೭	ವಿವಿಧ ಆಯುಧಗಳಿಂದ ಆದ ಗಾಯ	ಗೋಧಿಯ ಹಿಟ್ಟನ್ನು ತುಪ್ಪದಲ್ಲಿ ಬೇಯಿಸಿ, ವಿಷ್ಣುವಲ್ಲಭೆ ನರಿ, ನೆಲ್ಲಿ (ಲಜ್ಜರಿ), ಕೊಗ್ಗಿ ಇವುಗಳಲ್ಲಿ ಯಾವುದಾದರೊಂದನ್ನು ಹಚ್ಚಿ, ತುಪ್ಪವನ್ನು ಕುಡಿಸುವುದು.
೧೫೮	ಮೂರ್ಛೆ ಹೋದವರಿಗೆ	ಸೂಕರವಿಷ್ಠೆಯನ್ನು ತಿನ್ನಿಸುವುದು ಮತ್ತು ಕಲ್ಕವನ್ನು ನಸ್ಯ ಮಾಡಿಸುವುದು.

(ಮೇಲಿನ ಕೋಷ್ಟಕವನ್ನು ಮಂಗರಾಜನ 'ಖಗೇಂದ್ರಮಣಿ ದರ್ಪಣಂ'ನ ಎರಡನೆಯ ಅಧಿಕಾರದಲ್ಲಿನ ೧೯ರಿಂದ ೨೧೫ರವರೆಗಿನ ಪದ್ಯಗಳನ್ನು ಅನುಸರಿಸಿ ತಯಾರಿಸಲಾಗಿದೆ.)[೩೫]

ಕೋಷ್ಟಕ ೫.೨
ಸರ್ಪದಷ್ಟನಿಗೆ ಮಾಡಬೇಕಾದ ಉಪಚಾರ ಕ್ರಮಗಳು

ಕ್ರ.ಸಂ	ಅಂಗಗಳು	ಉಪಚರಿಸಬೇಕಾದ ವಿಧಾನ
೧.	ಸಂಗ್ರಹ	ಹಾವು ಕಚ್ಚಿದವನ ದೇಹದಲ್ಲಿ ಪ್ರಾಣ ಇದೆಯೋ ಇಲ್ಲವೋ ಎಂದು ಪರೀಕ್ಷಿಸುವುದು.
೨.	ಅಂಗನ್ಯಾಸ	ಸರ್ಪ ಕಚ್ಚಿದವನ ಶರೀರವನ್ನು ಅತ್ತಿತ್ತ ಸರಿಸದೆ ಅಮೃತ ಬೀಜ ಮಂತ್ರಾಕ್ಷರದಿಂದ ಉಪಚರಿಸುವುದು.
೩.	ರಕ್ಷೆ	ಹಾವು ಕಚ್ಚಿದ ವ್ಯಕ್ತಿಗೆ ರಕ್ಷೆಯನ್ನು ಮಾಡುವುದು.
೪.	ಸ್ತೋಭ	ಹಾವು ಕಚ್ಚಿದ ವ್ಯಕ್ತಿಗೆ ಆವೇಶ ಬರುವಂತೆ ಮಾಡಿ ಸ್ಪಷ್ಟವಾಗಿ ಮಾತನಾಡುವಂತೆ ಮಾಡುವುದು.
೫.	ಸ್ತಂಭ	ವಿಷವನ್ನು ದೇಹದಿಂದ ಕಡಿಮೆ ಮಾಡುವುದು.
೬.	ನಿರ್ವಿಷ	ದೇಹದಿಂದ ಪೂರ್ತಿ ವಿಷವನ್ನು ತೆಗೆಯುವುದು.
೭.	ಚೋದ್ಯ	ವಿಷನಿವಾರಣೆ ಮಾಡಿ ಆಶ್ಚರ್ಯವನ್ನುಂಟು ಮಾಡುವುದು.
೮.	ಖಟಿಕಾ ಫಣೀಂದ್ರ	ಶತೃ (ಸರ್ಪ)ವಿಗೆ ಫಣೀಂದ್ರ (ಗರುಡ)ನ ಚಿತ್ರವನ್ನು ಬರೆದು ತೋರಿಸುವುದು.

(ಮೇಲಿನ ಕೋಷ್ಟಕವನ್ನು ಮಂಗರಾಜನ 'ಖಗೇಂದ್ರಮಣಿ ದರ್ಪಣಂ'ನ ಮೂರನೆಯ ಅಧಿಕಾರದಲ್ಲಿನ ೪ರಿಂದ ೮ನೆಯ ಪದ್ಯಗಳನ್ನು ಅನುಸರಿಸಿ ತಯಾರಿಸಲಾಗಿದೆ.)[೩೬]

ಹೀಗೆ ಒಂದನೆಯ ಮಂಗರಾಜನು ಸ್ಥಾವರ ವಿಷಗಳು ಮತ್ತು ಅವುಗಳಿಗೆ ಪರಿಹಾರಗಳನ್ನು ಬೋಧಿಸುತ್ತಾನೆ.

---

೩೫. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೨೩ರಿಂದ ೪೭
೩೬. **ಅದೇ** ; ಪುಟ. ೪೯

"ಪುರುಜಿನ ವಚನಾಂಭೋರಾಶಿಯೊಳವ ತಮ್ಮ ಧೀಮಂ
ದರಸುಮಥನಜಾತಂ ವೈದ್ಯಶಾಸ್ತ್ರಾಮೃತಂ ತ
ದ್ವಮುನಿಪತಿಯಪ್ಪೀ ಪೂಜ್ಯಪಾದೋಕ್ತಿಯೊಳ್ ಸ್ಥಾ
ವರವಿಷಹರಮಂ ಸಂಕ್ಷೇಪದಿಂದೊಪ್ಪೆ ಪೇಟ್ವೆ ॥೨.೧೨೬॥"[೩೭]

ಪುರುದೇವ ಆದಿನಾಥನು ಬೋಧಿಸಿದ ವೈದ್ಯಶಾಸ್ತ್ರವನ್ನು ಮುನಿಶ್ರೇಷ್ಠರಾದ ಪೂಜ್ಯಪಾದರು ಹೇಳಿದ ಬಗೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದೇನೆ ಎಂದು ಹೇಳಿಕೊಂಡಿದ್ದಾನೆ.

ಪಾರ್ಶ್ವಜಿನನು ಭವ್ಯರಿಗೆ ಒಳಿತನ್ನು ಮಾಡಲಿ ಎಂದು ಆಶಿಸುತ್ತ, ಮೂರನೆಯ ಅಧಿಕಾರದಲ್ಲಿ ಜಂಗಮ ವಿಷಗಳನ್ನು ತಿಳಿಸುವುದಾಗಿ ಹೇಳುತ್ತಾನೆ. ಜಂಗಮವೆಂದರೆ ಚರಜೀವಿಗಳಿಂದ ಉಂಟಾಗಬಹುದಾದ ವಿಷವಾಗಿದೆ. ಇದರಲ್ಲಿ ಮೊದಲಿಗೆ ಹಾವು ಕಚ್ಚಿದವನಿಗೆ ಉಪಚರಿಸಬಹುದಾದ ಕ್ರಮಗಳು, ಸರ್ಪಗಳ ಕುಲ, ಪ್ರದೇಶ, ಅವುಗಳು ಕಚ್ಚಬಹುದಾದ ದೇಹದ ಭಾಗ, ಯಾವ ಭಾಗದಲ್ಲಿ ಕಚ್ಚಿದರೆ ಅಪಾಯ, ಯಾವ ಭಾಗದಲ್ಲಿ ಕಚ್ಚಿದರೆ ಶುಭ, ಹಾವುಗಳು ಕಚ್ಚಿದಾಗ ಅವುಗಳ ಹಲ್ಲಿನ ಮುದ್ರೆಯನ್ನು ನೋಡಿ, ಹಾವನ್ನು ಗುರುತಿಸುವಿಕೆ, ಹಾವುಗಳ ಮೈಮೇಲಿರುವ ನಿರಿಗೆಗಳು, ಅವುಗಳ ಮೈಮೇಲಿನ ಚಿಹ್ನೆಗಳು ಮುಂತಾದ ವಿವರಗಳನ್ನು ಕೊಡುತ್ತಾನೆ.

"ಅಂತು ಗರುಡಮತದೊಳೆಂಟಂಗವಾವುವೆಂದೊಡೆ
ಈ ಭೂಲೋಕದದೊಳೊಪ್ಪೆ ಸಂಗ್ರಹಮುಮಂಗನ್ಯಾಸ ರಕ್ಷಾವಿಧಿ
ಸ್ತೋಭಂ ಸ್ತಂಭವಿಷಪ್ರಹಾರಮಧಿಕಂ ಚೋದ್ಯಾಖ್ಯಮುಂ ಮತ್ತೆ ಸ
ರ್ಪಾಭಂ ತಾಂ ಖಟಿಕಾಫಣಿಪ್ರಥಿತದಂತೋದ್ದಂಶಮೆಂಬಿಂತಿವಂ
ತಾ ಭವ್ಯೋತ್ತಮನಪ್ಪ ಮಂಗವಿಭುವಿಂದುಕ್ಕಂಗಳೆಂಟಂಗಮುಂ ॥೩.೦೪॥"[೩೮]

ಗರುಡಮತದಲ್ಲಿ ಎಂಟು ಅಂಗಗಳಲ್ಲಿ ಸರ್ಪದಷ್ಟನನ್ನು ಉಪಚರಿಸುವ ಕ್ರಮಗಳನ್ನು ತಿಳಿಸುತ್ತಾನೆ ಮಂರಗಾಜ.

ಹೀಗೆ ಎಂಟು ಬಗೆಯ ಚಿಕಿತ್ಸೆಗಳನ್ನು ಸರಿಯಾದ ಸಮಯವನ್ನರಿತು ಹಾವು ಕಚ್ಚಿದವನಿಗೆ ಈ ಮೇಲೆ ಹೇಳಿದ ಉಪಚಾರ ಕ್ರಮಗಳನ್ನು ಕೈಕೊಳ್ಳುವುದರಿಂದ ಬದುಕುಳಿಯುತ್ತಾನೆ ಎಂದು ಮಂಗರಾಜನು ಹೇಳುತ್ತಾನೆ. ಮುಂದುವರೆದು, ಎಂಟು ಪ್ರಕಾರದ ಸರ್ಪ ಕುಲಗಳನ್ನೂ, ಅವುಗಳ ಲಕ್ಷಣಗಳನ್ನೂ, ಸರ್ಪಕುಲಗಳ ವಿಷದ ವರ್ಣ, ಅವುಗಳು ಕಚ್ಚಬಹುದಾದ ದಿನ, ಅವುಗಳು ಯಾವ ದಿನದಂದು ಕಚ್ಚಿದರೆ ಉಪಚಾರ ಕ್ರಮಗಳು ಯಶಸ್ವಿಯಾಗುವುದು, ಯಾವ ದಿನ ಸರ್ಪ ಕಚ್ಚಿದರೆ ಅಪಾಯಕರ, ಯಾವ ಕುಲದ ಸರ್ಪಗಳು ವಾರದ ಯಾವ ದಿನದಂದು ದೇಹದ ಯಾವ ಭಾಗದಲ್ಲಿ ಕಚ್ಚುತ್ತವೆ, ಆ ವಿಷವು ದೇಹದ ಯಾವ ಭಾಗವನ್ನು ಸೇರಿಕೊಳ್ಳುತ್ತದೆ, ಯಾವ ಸರ್ಪದ ದೇಹದ ಮೇಲೆ ಎಷ್ಟು ನೀರಿಗೆಗಳು ಇರುತ್ತವೆ, ಯಾವ ಸರ್ಪಗಳು ಪಂಚಭೂತಗಳ ಯಾವ ಅಂಶಗಳನ್ನು ಒಳಗೊಂಡಿರುತ್ತವೆ ಎಂಬ ವಿಚಾರಗಳನ್ನೂ ತಿಳಿಸುತ್ತಾನೆ. ***(ನೋಡಿ, ಕೋಷ್ಟಕ ೫.೩)***

---

೩೭. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೪೭
೩೮. **ಅದೇ** ; ಪುಟ. ೪೮

ಕೋಷ್ಟಕ ೫.೩
ಸರ್ಪಕುಲ, ಲಕ್ಷಣಗಳ ವಿವರ.

ಕ್ರ. ಸಂ.	ಹೆಸರು	ಲಕ್ಷಣಗಳು (ದೇಹದ ಮೇಲಿರುವ ಚಿಹ್ನೆಗಳು)	ಭೂತ ಚತುಷ್ಟಯ	ಕುಲ	ವಿಷದ ಬಣ್ಣ	ಸರ್ಪ ಕಚ್ಚಿದವನ ಮೇಲಾಗುವ ಪರಿಣಾಮ	ಕಚ್ಚಬಹುದಾದ ದಿನ	ಕಚ್ಚುವ ಜಾಗ	ವಿಷ ಸೇರುವ ಜಾಗ	ನಿರಿಗೆಗಳ ಸಂಖ್ಯೆ
೧	ಅನಂತ	ಬಿಳಿಯ ಕಮಲ	ಅಗ್ನಿ ಅಂಶ	ದ್ವಿಜ ಕುಲ	ಬಿಳಿ ಬಣ್ಣ	ಇವು ಕಚ್ಚಿದವನ ಬುದ್ಧಿ ಭ್ರಮಣೆಯಾಗವುದು. ದೃಷ್ಟಿ ಕ್ಷೀಣಿಸುವುದು.	ರವಿವಾರ	ಪಾದ	ಪಾದಾಗ್ರ	ಅರವತ್ತು
೨	ಕುಳಿಕ (ಶೇಷ)	ಶಿರೋಭಾಗದಲ್ಲಿ ಅಕ್ಷರದಂತಹ ಶಂಖ					ರವಿವಾರ			
೩	ವಾಸುಕಿ	ಉತ್ಪಲ	ಭೂಮಿ ಅಂಶ	ಕ್ಷತ್ರಿಯ ಕುಲ	ಕೆಂಪು ಬಣ್ಣ	ವಿಷವು ಕೆಂಪಾಗಿ, ಕಚ್ಚಿದವನ ಶರೀರ ಭಾರವೂ ಜಡತ್ವವೂ ಆಗಿ ಶೀತವೂ ಆಗುತ್ತದೆ.	ಸೋಮವಾರ	ತಲೆ	ಮೊಣಕಾಲು	ತೊಂಬತ್ತು
೪	ಶಂಖಪಾಳ	ಅರ್ಧಚಂದ್ರಾಕೃತಿಯ ತ್ರಿಶೂಲವಿರುವುದು.					ಶನಿವಾರ	ಕುತ್ತಿಗೆ	ಕಣ್ಣು	ಐವತ್ತು
೫	ತಕ್ಷಕ	ಸ್ವಸ್ತಿಕ	ವಾಯು ಅಂಶ	ವೈಶ್ಯ ಕುಲ	ಹೊಂಬಣ್ಣ	ವಿಷವು ಹೊಂಬಣ್ಣದಿಂದ ಕೂಡಿದ್ದು, ಕಚ್ಚಿದವನ ದೇಹ ಮತ್ತು ಮುಖದ ಕಾಂತಿ ಕೆಡುತ್ತದೆ.	ಮಂಗಳವಾರ	ಬಲ ಮುಂಗೈ	ಕಟಿ	ನಾಲ್ವತ್ತು
೬	ಮಹಾಪದ್ಮ	ಬೆನ್ನಿನ ಮೇಲೆ ರಾಜಾವರ್ತದ ಬಿಂದು (ತಿಳಿ ನೀಲಿ ಬಣ್ಣದ) ಇರುವುದು.					ಶುಕ್ರವಾರ	ಬೆನ್ನು	ತಲೆಯಲ್ಲಿ	ಎಂಬತ್ತು
೭	ಪದ್ಮ	ಬೆನ್ನಿನ ಮೇಲೆ ಐದು ಭಾಗಗಳಲ್ಲಿ ಕೆಂಪಾಗಿರುವುದು.	ಜಲ ಅಂಶ	ಶೂದ್ರ ಕುಲ	ಕಪ್ಪು ಬಣ್ಣ	ವಿಷವು ಕಪ್ಪು ಬಣ್ಣದ್ದಾಗಿರುತ್ತದೆ. ಕಚ್ಚಿದರೆ ಜೊಲ್ಲು ಸುರಿದು ಗಂಟಲು ಕಟ್ಟಿಕೊಳ್ಳುತ್ತದೆ.	ಗುರುವಾರ	ಬಲ ಜಂಘೆ	ಶಿರ	ಎಪ್ಪತ್ತು
೮	ಕರ್ಕೋಟಕ	ಮೂರು ಕಣ್ಣು					ಬುಧವಾರ	ಕಿರುದೊಡೆ	ನಾಭಿ	ಮೂವತ್ತು

ಕೋಷ್ಟಕ ೫.೪

ಮಾನವನಿಗೆ ಹಿಂಸಿಸುವ ಸರ್ಪಗಳು			
ಕ್ರ.ಸಂ.	**ಸರ್ಪಜಾತಿ**	**ಗಾಯದ ಲಕ್ಷಣಗಳು (ಚಿಹ್ನೆಗಳು)**	**ವಿಷದ ಹಲ್ಲಿರುವ ಜಾಗ**
೧	ಯಮದೂತಿ	ಕಾಕಪದ	
೨	ರಾಕ್ಷಸಿ	ಅಂಕುಶ	ನಾಲಿಗೆಯ ಮಧ್ಯ.
೩	ಕಾಳಿ	ವೃತ್ತ	
೪	ಕರಾಳಿ	ಚಾಪ (ಬಿಲ್ಲು)	

ಕೋಷ್ಟಕ ೫.೫

ಅಮರ ಕುಲದ ಸರ್ಪಗಳು		
೧	ಜಯ	ಸ್ವರ್ಗವಾಸಿಗಳಾಗಿದ್ದು, ಭೂಮಿಯ ಮೇಲೆ ಸಂಚರಿಸುವುದಿಲ್ಲ. ಇವುಗಳಿಂದ ಮಾನವರಿಗೆ ತೊಂದರೆಯಿಲ್ಲ.
೨	ವಿಜಯ	

(ಮೇಲಿನ ಕೋಷ್ಟಕ ೫.೩, ೫.೪ ಹಾಗೂ ೫.೫ಗಳನ್ನು ಒಂದನೆಯ ಮಂಗರಾಜನ 'ಖಗೇಂದ್ರಮಣಿ ದರ್ಪಣಂ'ನ ಮೂರನೆಯ ಅಧಿಕಾರದಲ್ಲಿನ ೯ರಿಂದ ೩೮ರವರೆಗಿನ ಪದ್ಯಗಳನ್ನು ಅನುಸರಿಸಿ ತಯಾರಿಸಲಾಗಿದೆ.) [೩೯]

ಹಾವು ಕಚ್ಚಬಹುದಾದ ಸಂದರ್ಭಗಳು: ಸುರತದಿಂದ ವಂಚಿತವಾದಾಗ, ಅತಿವಿಷದಿಂದ ಉನ್ಮತ್ತವಾದಾಗ, ಆಹಾರಾರ್ಥವಾಗಿ ಅಲೆಯುವಾಗ, ತನ್ನ ನೆಲೆಯನ್ನು ಕಳೆದುಕೊಂಡಾಗ, ಹಸಿದಾಗ, ಹೆಚ್ಚು ಭಯಗೊಂಡಾಗ, ಮನುಷ್ಯ ಅವುಗಳನ್ನು ದಾಟಿದಾಗ.

ಕೋಷ್ಟಕ ೫.೬

ಸರ್ಪ ಕಚ್ಚಿದವನನ್ನು ಉಪಚರಿಸುವಾಗ ಪಠಿಸಬೇಕಾದ ಮಂತ್ರಗಳು[೪೦]

ಕ್ರ. ಸಂ.	**ಉಚ್ಚರಿಸಬೇಕಾದ ಮಂತ್ರ**	**ಶುಭಲಕ್ಷಣ**
೧	ಓಂ ಹ್ರೀಂ ವಃ ।	ಮಂತ್ರಿಸಿದಾಗ ಸರ್ಪ ಕಚ್ಚಿದವನು ಕಣ್ಣು ತೆರೆದರೆ ಶುಭ.
೨	ಹ್ರಾಂ ವಂ ಕ್ಷಂ ।	ಮಂತ್ರಿಸಿ ಮುಖಕ್ಕೆ ನೀರನ್ನು ಚುಮುಕಿಸಿದರೆ ಆತನ ದೇಹ ಸಂಚಲನವಾದರೆ ಶುಭ.
೩	ಕ್ಷಿಪ ಓಂ ಸ್ವಾಹಾ ।	ಹೃದಯಾದಿ ಅಂಗಗಳಲ್ಲಿ ಸಂಚಲನವಾಬೇಕು.
೪	ಓಂ ಆಂ ಹ್ರೀಂ ಸಿಮಪ ಲ್ಷಕ್ಷ್ಮೀ ಸ್ವಾಹಾ ।	ಎಂಟು ಸಲ ಸರ್ಪದಷ್ಟನ ಕಿವಿಯಲ್ಲಿ ಪಠಿಸಿದಾಗ ದೇಹದಲ್ಲಿ ಸಂಚಲನವಾದರೆ ಶುಭ

ಸರ್ಪವು ಕಚ್ಚಿದಾಗ ವಿಷನಿವಾರಣೆ ಅಸಾಧ್ಯವೆನಿಸುವ ಸಂದರ್ಭಗಳು

ಶಾ|| **"ಒಡಗೆಱೆ ಜೀರ್ಣಕೂಪದೆಡೆ ಬಿಬ್ಬ ಸುರಾಲಯ ನೀರಸದ್ರುಮಂ**
ಸುಡುವೆಡೆಗಾಡು ಪುತ್ತಿನೊಳಕ್ಷಕುಜಂ ನಿಧಿದಾಣ ಕೋಟರಂ

೩೯. A. Venkat Rao and Pandit H. Shesha Ayyangar (Editors): **Khagendramani Darpanam of Mangaraja** ; Page. 60 to 65

೪೦. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೬೨, ೬೩ (ಮಂತ್ರಗಳು ಮತ್ತು ಲಕ್ಷಣಗಳು)

ಕಡೆಸಿಡಿದೊಂದೆ ಭೂಜವಟಕಾನನಮೊಪ್ಪುವ ವೇಣುಕುಂಜವೆಂ
ಬೆಡೆಗಳೊಳಿರ್ದ ಪಾವು ಕೊಳಲಪ್ಪುದಸಾಧ್ಯಮಿಳಾತಳಾಗ್ರದೊಳ್ ॥೩.೪೧॥"[೪೧]

೧) **ಪ್ರದೇಶ/ಸ್ಥಳ:** ಕೆರೆಯಲ್ಲಿ, ಹಾಳುಬಾವಿ, ಹಾಳು ದೇವಾಲಯ, ಒಣಮರ, ಸ್ಮಶಾನ, ಹುತ್ತ, ನೆಲ್ಲಿ ಮರ, ತಾರೆ ಮರ, ನಿಧಿಸ್ಥಾನ, ಮರದ ಪೊಟರೆ, ಆಲದ ಮರದ ಗುಂಪು, ಬಿದಿರು ಮೆಳೆಗಳಲ್ಲಿರುವ ಹಾವು ಕಚ್ಚಿದರೆ ಭೂಮಿಯಲ್ಲಿ ಅದರ ನಿವಾರಣೆ ಅಸಾಧ್ಯ.

೨) **ದೇಹದ ಭಾಗ:** ಹೆಡತಲೆ, ಕಣ್ಣು, ನೊಸಲು, ಎರಡು ಅಂಗೈ, ಕೆನ್ನೆ, ಕಾಲಿನ ಅಡಿ, ತುದಿಮೂಗು, ಹೊಕ್ಕಳು, ಹೃದಯ, ಗದ್ದ, ತಲೆಕೂದಲ ಬುಡ, ನಾಣೆಡೆ, ಕುಚಮಧ್ಯೆ, ಮಣಿಕಟ್ಟು, ಹುಬ್ಬುಗಳಲ್ಲಿ ಸರ್ಪ ಕಚ್ಚಿದರೆ ವಿಷ ನಿವಾರಣೆ ಅಸಾಧ್ಯ.

೩) **ಅಶುಭಕಾಲ:** ಪ್ರಥಮ, ಷಷ್ಠಿ, ಏಕಾದಶಿ, ಪಂಚಮಿ, ಅಷ್ಟಮಿ, ನವಮಿ, ಚತುರ್ದಶಿ, ಅಮವಾಸ್ಯೆ, ಹುಣ್ಣಿಮೆ, ಸಂಕ್ರಾಂತಿ, ಗ್ರಹಣಕಾಲಗಳಲ್ಲಿ ಹಾವು ಕಚ್ಚಿದರೆ ಚಿಕಿತ್ಸೆ ಫಲಿಸುವುದು ದುರ್ಲಭ.

೪) **ಅಶುಭ ನಕ್ಷತ್ರಗಳು:** ಭರಣಿ, ಆಶ್ಲೇಷ, ಜೇಷ್ಠಾ, ಶ್ರವಣ, ವಿಶಾಖ, ಚಿತ್ತ, ಮಖ, ಕೃತ್ತಿಕೆ, ರೇವತಿ, ಮೂಲ, ಪುಷ್ಯ, ಪುಬ್ಬ, ಅಶ್ವಿನಿ ನಕ್ಷತ್ರಗಳಂದು ಹಾವು ಕಚ್ಚಿದರೆ ಚಿಕಿತ್ಸೆ ಫಲಕಾರಿಯಾಗದು.

೫) **ಅಶುಭ ಘಳಿಗೆ:** ಮಧ್ಯಾಹ್ನ, ಮುಸ್ಸಂಜೆ, ಮಧ್ಯರಾತ್ರಿ, ರಾತ್ರಿ, ವ್ಯತೀಪಾತಯೋಗ, ವೈಧೃತಿಯೋಗ, ಯಮಗಂಡಕಾಲದಲ್ಲಿ ಸರ್ಪ ಕಚ್ಚಿದರೆ ಚಿಕಿತ್ಸೆ ಫಲಿಸಲಾರದು.

೬) **ಭಾನುವಾರದಂದು** ಹಸ್ತ, ಇಲ್ಲವೇ ಶ್ರವಣ ನಕ್ಷತ್ರ ಮತ್ತು ಪಂಚಮಿ ತಿಥಿಗಳು ಒಟ್ಟಿಗೆ ಬಂದಾಗ, **ಶನಿವಾರ**ದಂದು ಷಷ್ಠಿ, ಕುಜ, ಅಶ್ವಿನಿ, ಸಪ್ತಮಿ, ಪುಷ್ಯ, ನವಮಿ, ರೋಹಿಣಿ, ಏಕಾದಶಿ, ಅನುರಾಧ ತಿಥಿ, ನಕ್ಷತ್ರಗಳು ಬಂದಾಗ, **ಬುಧವಾರ**ದಂದು ಸಪ್ತಮಿ, ನವಮಿ, ದಶಮಿ, ಭರಣಿ ನಕ್ಷತ್ರಗಳು ಬಂದಾಗ, **ಗುರುವಾರ**ದಂದು ನವಮಿ ಬಂದಾಗ ದಕ್ಷಿಣ, ಆಗ್ನೇಯ, ವಾಯವ್ಯ, ಈಶಾನ್ಯ ದಿಕ್ಕುಗಳಲ್ಲಿ ಹಾವು ಕಚ್ಚಿದರೆ ಚಿಕಿತ್ಸೆ ಪಲಕಾರಿಯಾಗಲಾರದು.

೭) ಮಾರ್ಗಶಿರ ಮಾಸದಲ್ಲಿ ಅಶ್ವಿನಿ ನಕ್ಷತ್ರದಂದು ಹಾವು ಕಚ್ಚಿದರೆ ಚಿಕಿತ್ಸೆ ಫಲಕಾರಿಯಾಗದು.

೮) ಹಾವು ಕಚ್ಚಿದವನ ವಾಮಭಾಗವು ಅದುರಿದರೆ, ಹಾವು ಕಚ್ಚಿದವನ ಕಿರುನಾಲಿಗೆ ಒಣಗಿ ಮುರುಟಿಕೊಂಡರೆ, ತಲೆಗೂದಲು ಉದುರತೊಡಗಿದರೆ, ತಣ್ಣನೆಯ ಉಸಿರು ಹೊರಬರುತ್ತಿದ್ದರೆ, ಹಲ್ಲುಗಳು ಹತ್ತಿಕೊಂಡಿದ್ದರೆ, ಉಗುರುಗಳ ಬಣ್ಣ ಬದಲಾದರೆ, ನಾಲಿಗೆ ಕಪ್ಪಾಗಿದ್ದರೆ, ಧ್ವನಿ ನಡುಗುತ್ತಿದ್ದರೆ, ಹೊಟ್ಟೆ ಒಳಸೇರಿಕೊಂಡು ಗಟ್ಟಿಯಾಗಿದ್ದರೆ, ದಷ್ಟನ ಹೆಡೆತಲೆ ಅದುರುತ್ತಿದ್ದರೆ, ಕತ್ತು ಮಡಚಿಕೊಂಡು ಮಾತು ಹೊರಡದಿದ್ದರೆ, ಕಣ್ಣೆವೆಗಳು ಅಲುಗದೆ ಹಾಗೆಯೇ ಬಿಟ್ಟಂತಿದ್ದರೆ, ಶರೀರ ತಣ್ಣಗಾದರೆ ಚಿಕಿತ್ಸೆಯು ಫಲಕಾರಿಯಾಗಲಾರದು ಎಂದು ಮಂಗರಾಜನು ಉಲ್ಲೇಖಿಸುತ್ತಾನೆ.

---

೪೧. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೫೪

ಹೀಗೆ ಮಂಗರಾಜನು ತನ್ನ 'ಖಗೇಂದ್ರಮಣಿ ದರ್ಪಣಂ'ನ ಮೂರನೆಯ ಅಧಿಕಾರದಲ್ಲಿ ಸರ್ಪಗಳ ಕುಲ, ಬಣ್ಣ ವಿಷದ ಪರಿಣಾಮಗಳು ಯಾವ ಸಂದರ್ಭಗಳಲ್ಲಿ ಚಿಕಿತ್ಸೆಯು ಫಲಕಾರಿಯಾಗದು ಎಂಬ ಅಂಶಗಳನ್ನು ಚರ್ಚಿಸಿದ್ದಾನೆ. ಮುಂದುವರೆದು ನಾಲ್ಕನೆಯ ಅಧ್ಯಾಯದಲ್ಲಿ 'ಸಂಗ್ರಹಾದಿ ಗಾರುಡಮಂತ್ರ'ಗಳನ್ನು ಹೇಳುತ್ತಾ ಸರ್ಪದಷ್ಟನಿಗೆ ಮಂತ್ರಗಳ ಮೂಲಕ ಉಪಚಾರ ಮಾಡುವ ಬಗೆಯನ್ನು ವಿವರಿಸುತ್ತಾನೆ. ಲಕ್ಷ್ಮೀಸಮೇತನಾದ ವಿಷ್ಣುವಿಗೆ, ನಾಗದೇವ ಸಮೇತನಾದ ಪಾರ್ಶ್ವ ತೀರ್ಥಂಕರರಿಗೆ ಭಕ್ತಿಯಿಂದ ವಂದಿಸಿ ದೇವತಾ ಸ್ವರೂಪವಾದ ವಿಷಾಪಹಾರ ಮಂತ್ರಗಳನ್ನು ಹೇಳುವುದಾಗಿ ಮುಂದುವರೆಯುತ್ತಾನೆ.

ಕಂ॥

"ಮಣಿಯುಂ ಮಂತ್ರಂ ಮರ್ದು
ಫಣಿದಷ್ಟ ವಿಷಾಪಹಾರಮೆಂಬರದೆಲ್ಲಂ
ಕ್ಷಣಿಕಂ ನನ್ನಿ ಜಿನೇಂದ್ರನ
ಗುಣನಾಮಾಕ್ಷರ ವಿತರ್ಕ ಸಂಬಂಧತೆಯಿಂ ॥೪.೦೨॥"[೪೨]

ಕೋಷ್ಟಕ ೫.೭

೧	ಹ್ರಾಂ ಹ್ರೀಂ ಹ್ರೂಂ ಹ್ರೌಂ ಹ್ರಃ ।	ಎಡಗೈ ಹೆಬ್ಬೆರಳಿನಿಂದ ಈ ಮಂತ್ರವನ್ನು ಬರೆಯುವುದು.
೨	ಓಂ ನಮೋ ಅರಹತ್ತಾಣಂ ಹ್ರಾಂ ಶೀರ್ಷಂ ರಕ್ಷ ರಕ್ಷ ಸ್ವಾಹಾ ಇತ್ಯಂಗನ್ಯಾಸಃ	ಈ ಮಂತ್ರವನ್ನು ಹೃದಯ, ನಾಭಿ, ಕಾಲು, ಪಾದಗಳಲ್ಲಿ ಪಠಿಸಬೇಕು
೩	ಆಂ ಈಂ ಊಂ ಏಂ ಔಂ ಅಂ ಅಃ ಕ್ಷಾಂ ಕ್ಷೀಂ ಕ್ಷೂಂ ಕ್ಷೈಂ ಕ್ಷೋಂ ಕ್ಷೌಂ ಕ್ಷಃ	ದಿಗ್ಬಂಧನ ಮಂತ್ರ
೪	ಹ ಹಾ ಹಿ ಹೀ ಹು ಹೂ ಹೃ ಹೄ ಹೆ ಹೇ ಹೈ ಹೋ ಹೌ ಹಂ ಹಃ	ಸುವರ್ಣ ಪ್ರಾಕಾರಗಳು ತನ್ನ ಸುತ್ತಲೂ ಇವೆಯೆಂದು ಭಾವಸಲು ಈ ಮಂತ್ರ ಪಠಿಸಬೇಕು.

('ಖಗೇಂದ್ರಮಣಿ ದರ್ಪರ್ಣಂ'ನ ನಾಲ್ಕನೆಯ ಅಧ್ಯಾಯದಲ್ಲಿನ ಮಂತ್ರಗಳು)[೪೩]

ಪ್ರಸ್ತುತ ಅಧ್ಯಾಯದಲ್ಲಿ ಅಂಗುಳನ್ಯಾಸ, ಅಂಗನ್ಯಾಸ, ದಿಗ್ಬಂಧನ, ಸುವರ್ಣಪ್ರಕಾರ, ಅಮೃತಮಂತ್ರ, ಅಂಗನ್ಯಾಸಮುದ್ರೆ-ಪ್ರಾಣಪ್ರತಿಷ್ಠವಂತ ಮಂತ್ರ, ಗರುಡಮೂತಿಧ್ಯಾನ, ಅಂಗನ್ಯಾಸ ವಿಧಾನ, ರಕ್ಷಾವಿಧಾನ, ಸ್ತೋಭನಕರಣ, ವಿಷಸ್ತಂಭನಕ್ರಮ, ನಿರ್ವಿಷೀಕರಣ, ಭೇರುಂಡ ಮಂತ್ರೋದ್ಧಾರಣ, ಸುವರ್ಣರೇಖಾಮಂತ್ರೋದ್ಧಾರಣ, ಕ್ರೋಶಪಟಹತಾಡನಂ ದೂತಪಾತನ ವಿಧಾನ, ನಿರ್ವಿಷೀಕರಣ ಮಂತ್ರೋದ್ಧಾರಣ, ಅನಿರ್ಮಾರ್ಜನ, ಸರ್ವನಿರ್ವಿಷೀಕರಣ ಮಂತ್ರ, ಪಕ್ಷಿರಾಜಮಂತ್ರ, ಭ್ರಾಮರೀ ಮಂತ್ರ, ಈಶ್ವರೀ ಮಂತ್ರ, ನೀಲಕಂಠಮಂತ್ರ, ಮಂಗಳಾಖ್ಯವಿದ್ಯೆ, ಮೇಘಮಾಲಾ ಮಂತ್ರ, ಬಡಬಾನಳ ಭೈರವ ಮಂತ್ರೋದ್ಧಾರಣ, ವಿಸರ್ಜನ ಮಂತ್ರವೆಂದು ಒಟ್ಟು ೬೫ ಮಂತ್ರಗಳನ್ನು ಈ ಅಧ್ಯಾಯದಲ್ಲಿ ವಿಷಪರಿಹಾರಕ್ಕಾಗಿ ಪಠಣಮಾಡಬೇಕೆಂದು ಹೇಳಲಾಗಿದೆ.

---

೪೨. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೬೬
೪೩. ಅದೇ ; ಪುಟ. ೬೬ ಹಾಗೂ ೬೭. (ಮಂತ್ರಗಳು)

ಮಂತ್ರವಾದಿಗಳಲ್ಲಿ ಅಪಾರ ಗುಣಜ್ಞಾನಯುತರಾದ ಸಂತರು ಹೇಳಿದ ಉತ್ತಮವಾದ ಗುಣಗಳನ್ನುಳ್ಳ ಈ ಮಂತ್ರಗಳನ್ನು ಉಚಿತವಾದ ಪ್ರಸಂಗದಲ್ಲಿ ಏಕಾಂತ ಸ್ಥಳದಲ್ಲಿ ಜಪಿಸಿ, ಸರ್ಪ ಕಚ್ಚಿದವನಿಗೆ ಆ ಮಂತ್ರಪೂತ ನಿರ್ಮಲವಾದ ಜಲದಿಂದ ಸ್ನಾನಪಾನಾದಿಗಳನ್ನು ಮಾಡಿಸುವುದರಿಂದ ನಿರ್ವಿಷವಾಗುವುದು.

ಮೇಘಮಾಲಾಮಂತ್ರ:

> **"ಓಂ ಮೇಘಮಾಲೆ ವಿಮಳೆ ಹರ ವಿಷವೇಗಂ ಹಾಂ ಹಂ ಶಂಬರಿ**
> **ಅಚಿ ಲೆ ಸರ್ವವಿಷನಾಶಿನಿ ಮಹಾಮಾಯೆ ಹಂಸಃ ಠ ಸ್ವಾಹಾ॥**
>
> **ಓಂ ನಮೋ ಅನಂತಾಯ ಮಹಾನಾಗ**
> **ಹೃದಯಾಯ ಸರ್ವ ನಾಗವಂಶಕರಾಯ ಸ್ವಾಹಾ ॥"[೪೪]**

ಬಡಬಾನಳ ಭೈರವ ಮಂತ್ರೋದ್ಧಾರ:

> **"ಓಂ ನಮೋ ಭಗವತೇ ನಮೋ ರುದ್ರಾಯ ಮಹಾಪ್ರಳಯಕಾಲ ತಾಂಡವ ಭೈರವಾಡಂರಾಯ ತ್ರಿಶೂಲ ಡಮರುಗ ಖಟ್ವಾಂಗ ಕಪಾಲಮಾಲಾಧರಾಯ ಸೋಮಸೂರ್ಯಾಗ್ನಿ ನೇತ್ರತ್ರಯಾಯ ಶಶಾಂಕಾಲಾಂಕೃತ ಶೇಖರಾಯ ಕೃಷ್ಣಸರ್ಪಜ್ಞೋಪವೀತಾಯ ಅನೇಕ ಕಾಲ ನಿರ್ನಾಶನಾಯ ಯುಗ ಯುಗಾಂತರಾಳಪ್ರಳಯಾ ಪ್ರಚಂಡ ಹ್ರೀಂ ಹ್ರೂಂ ಮಾರ್ತಂಡ ಮಹಾಭೈರವ ಲಳ ಚಳ ವಳ ಹುಳು ಗರ್ಜ ಹಂಸ ಜರ ಜ್ವಲ ಮಲ ಮೋಟಯ ತ್ರೋಟಯ ಸರ್ಮ ದುಷ್ಟಗ್ರಹಾನ್ನಿವಾರಣಾಯ ಶರೋ ಲಲಾಟ ಕರ್ಣ ನಾಸಿಕಾ ಚಕ್ಷುರ್ಮುಖೋಷ್ಠ ತಾಲು ಹನುಗ್ರೀವ ಭಾಳ ಬಾಹು ಕರವಕ್ಷಸ್ಥಳೋರೂದರ ಪೃಷ್ಠ ನಾಭಿ ಗುದ ಗುಹ್ಯ ಜಾನು ಜಂಘಾಪಾದ ಪಾದಾಂಗುಷ್ಠನ್ ಛಿಂದಿ ಭಿಂದಿ ಮುಹುಃ ಮೂಷಯ ತ್ರೋಟಯ ಓಂ ಹ್ರಾಂ ಕ್ಷೂ ೃ ೢ ೖ ು ಂ ಹಂಸ ಕ್ಷೂ ೃ ವ ೢ ೖ ು ಂ ಐಂ ಯೂಂ ಖ್ಲೂ ೃ ವ ೢ ೖ ು ಂ ವಂಯೂಂ ಗ್ಲೂ ೃ ವ ೢ ೖ ು ಂ ದ್ರ್ರಿಯೂಂ ಐಂ ಯಿಂ ಹಂಸ ಕ್ಷ್ಮೂೃೢೖುಂ ಐಂ ಯೂಂ ಠಠ ಕ್ಷ್ಮೂೃವ ೢೖ ು ಂ ಐಂ ಯೂಂ ಕ್ಷೂ ೃವ ೢೖ ು ಂ ಐಂ ಯಿಂ ಹಂಸ ಯೂಂ ಹೂಂ ಫಟ್ ಫೇ ದಷ್ಟ ಆವೇಶಯ ಅವತರ ಆಗಟ್ಟ ಕಹ ಕಂಪ ಗದ ಮುದ್ಗರ ತೋಮರ ಪರಶುಹಸ್ತಾಯ ಫಲಪುಷ್ಪ ತಾಂಬೂಲ ಸುವರ್ಣ ಕೃಷ್ಣಾಯ ಓಂ ಐಂ ಕ್ಲೀಂ ಹ್ರೀಂ ಸ್ತ್ರೀಂ ಆಂ ಕ್ರೋಂ ತ್ರೋಂ ದ್ರಾಂ ದ್ರಿಂ ಕ್ಷೀಂ ಮ್ಲಾಂ ಕ್ಷೂಂ ಕ್ಷಂ ಕ್ಷಃ ಹಂಸಃ ಪರ ಮಂತ್ರ ಯಂತ್ರ ತಂತ್ರ ಶತಸಹಸ್ರ ಲಕ್ಷಕೋಟಾನ್ ಛೇದಯ ಆತ್ಮ ಮಂತ್ರ ತಂತ್ರ ಯಂತ್ರ ಕೋಟಾನ್ ಪೂಜಯ ದಿಶಾಬಂಧಂ ತತ್ರ ಸರ್ವದಿಶಾಬಂಧ ಓಂ ನಮೋ ಭೈರವ ಬಡಬಾನಳಾಯ ಆಂ ಕ್ರೋಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ಹ್ರಂ ಹ್ರಃ ಕ್ಷಂ ಕ್ಷಾಂ ಕ್ಷಿಂ ಕ್ಷೀಂ ಕ್ಷುಂ ಕ್ಷೂಂ ಕ್ಷೆಂ ಕ್ಷೇಂ ಕ್ಷೈಂ ಕ್ಷೊಂ ಕ್ಷೋಂ ಕ್ಷೌಂ ಕ್ಷಃ"[೪೫]**

ಈ ಮಂತ್ರವನ್ನು ಬರೆದು ಅಷ್ಟವಿಧಾರ್ಚನೆಯನ್ನು ಮಾಡುವುದು. ಕ್ಷೇತ್ರಾಧಿಪತಿಯ ಮುಂದೆ ಪವಿತ್ರವಾದ ಸಹಸ್ರ ಕೆಂಪು ಹೂಗಳನ್ನು ಇಟ್ಟು ಸ್ತೋತ್ರ ಮಾಡುತ್ತ ಪೂಜಿಸಿದರೆ ಸರ್ಪವಿಷವು ಪರಿಹಾರವಾಗುವುದು.

ಕ್ಷೇತ್ರಾಧಿಪತಿ ಯಂತ್ರ: **"ಕ್ಷೇತ್ರಾಧಿಪತಿಯ ಮುಂದೆ ಪ**
ವಿತ್ರಾರುಣ ಕುಸುಮಮಂ ಸಹಸ್ರ ಸಮೇತಂ

---


೪೪. A. Venkat Rao and Pandit H. Shesha Ayyangar (Editors): **Khagendramani Darpanam of Mangaraja** ; Page. 102

೪೫. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೮೯

ಸ್ತೋತ್ರಯುತಮಷ್ಟಸಂಖ್ಯಾ
ಮಾತ್ರಮನರ್ಚಿಸಲದಾತನೊಳ್ ಸಿದ್ಧಿಸುಗುಂ ॥೪.೭೩॥

ವಿನುತಂ ಗ್ರಹತತಿಗುಚ್ಚಾ
ಟನಮಕ್ಕುಂ ಸಕಳ ವಿಷಹರಣ ತಾನೆನಿಕುಂ
ಜನತಾವಂದ್ಯಮಿದಾವೇ
ಶನಮುಖ್ಯಂಗಳ್ಗೆ ಹೋಜಿಪುದು ಮಂತ್ರಜ್ಞಂ ॥೪.೭೪॥"[೪೬]

[೪೭]



ದುಷ್ಟಗ್ರಹಗಳ ಉಚ್ಚಾಟನೆಗಾಗಿ ಈ ಯಂತ್ರವನ್ನು ರಚಿಸಿ ಮಂತ್ರೋಚ್ಚಾರಣೆ ಮಾಡುವುದರಿಂದ ವಿಷನಿಗ್ರಹವಾಗುವುದು. ಸಿದ್ಧಮಂತ್ರ ಪ್ರಯೋಗದಿಂದ ಸರ್ಪವಿಷ ಪರಿಹಾರವಾದರೆ ಶುದ್ಧೋಪಯೋಗದಿಂದ ಸ್ಮರವಿಷ ನಾಶವಾಗುವುದು. ಎಂದು ಸರ್ವಶ್ರೇಷ್ಠರಾದ ಜಿನೇಂದ್ರರಿಂದ ಉಪದೇಶಿತವಾದ ಸಿದ್ಧಾಂತ ಸಮುದ್ರ ದಾಟಿದ ಪೂಜ್ಯಪಾದರ ಚರಣಗಳಿಗೆ ವಂದಿಸಿ ನಾಲ್ಕನೆಯ ಅಧಿಕಾರವನ್ನು ಪೂರ್ಣಗೊಳಿಸುತ್ತಾನೆ ಕವಿ ಮಂಗರಾಜ.

ಐದನೆಯ ಅಧಿಕಾರದಲ್ಲಿ ಸಪ್ತಧಾತುಗಳ ವಿಷಲಕ್ಷಣ ಚಿಕಿತ್ಸಾ ವಿವರಣವನ್ನು ನೀಡುತ್ತಾನೆ. ಸರ್ಪದಷ್ಟನ ಅವಸ್ಥೆಯನ್ನು ಕಂಡು ಅವನ ದೇಹದ ಯಾವ ಭಾಗದಲ್ಲಿ ಹಾವು ಕಚ್ಚಿರುವುದೋ ಅದನ್ನು ಸರಿಯಾಗಿ ಅರಿತುಕೊಂಡು ಎಚ್ಚರಿಕೆಯಿಂದ ವಿಧಿಪೂರ್ವಕವಾಗಿ ಬಟ್ಟೆಯಿಂದ ಕಟ್ಟಬೇಕು. ಗಾಯದಿಂದ ವಿಷರಕ್ತವನ್ನು ತೆಗೆದು, ನೀರಿನಿಂದ ತೊಳೆದು, ನೀರನ್ನು ಕುಡಿಸಬೇಕು. ನಂತರ ಉತ್ಕೃಷ್ಟವಾದ ವೈದ್ಯೋಪಚಾರವನ್ನು ಮಾಡುವುದು. ಅದಕ್ಕೂ ಮುಂಚೆ ಗಾರುಡಮಂತ್ರವನ್ನು ಪಠಣ ಮಾಡುವುದು.

ಗಾರುಡಮಂತ್ರ:

"ಓಂ ನಮೋ ಭಗವತೇ ಪಾರ್ಶ್ವತೀರ್ಥಕರಾಯ ಧರಣೇಂದ್ರ ಪದ್ಮಾವತೀ ಸಹಿತಾಯ ಪಾಂ ಖ್ರ್ವೋಂ ಪಾಂ ಬಾಂ ಹಾಂ ಖ್ರ್ವೋಂ ಬಾಂ ಭಾಂ ಖ್ರ್ವೋಂ ಬಾಂ ಭ್ರಾಂ ಭಾಂ ಖ್ರ್ವೋಂ"[೪೮]

---

೪೬. A. Venkat Rao and Pandit H. Shesha Ayyangar (Editors)**: Khagendramani Darpanam of Mangaraja** ; Page. 104
೪೭. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೯೦

ಕೋಷ್ಟಕ ೫.೮

ಕ್ರ. ಸಂ.	ಸರ್ಪದಷ್ಟನ ಲಕ್ಷಣಗಳು	ಚಿಕಿತ್ಸಾ ಕ್ರಮ
೧	ವಿಷವು ಚರ್ಮದಲ್ಲಿ ಸೇರಕೊಂಡಿದ್ದರೆ ಸರ್ಪದಷ್ಟನಿಗೆ ಬೆವರು ಬರುವುದು. ಉಸಿರಾಟವು ಏರುಪೇರಾಗುವುದು.	ಉತ್ತರಣೆ, ಎಕ್ಕದಬೇರು, ಪ್ರಿಯಂಗು, ರಕ್ತಚಂದನಗಳನ್ನು ಅರೆದು ಕುಡಿಸಿ, ಗಾಯವಾದ ಜಾಗದಲ್ಲಿ ಲೇಪಿಸುವುದು.
೨	ವಿಷವು ರಕ್ತದಲ್ಲಿ ಸೇರಿಕೊಂಡಿದ್ದರೆ ಕಣ್ಣು, ಕಿವಿಗಳು ನೋವಾಗಿ, ಹಲ್ಲುಗಳು ಕಪ್ಪಾಗುವವು.	ಲಾಮಂಚ, ರಕ್ತಚಂದನ, ಪ್ರಿಯಂಗು, ಕುಂಕುಮಕೇಸರಿಗಳನ್ನು ಸೇರಿಸಿ ಕುಡಿಸಿ, ಗಾಯಕ್ಕೆ ಲೇಪಿಸುವುದು.
೩	ಭೂಮಿ ಹಾಗೂ ವಸ್ತ್ರಾದಿಗಳು ಹಳದಿಯಾಗಿ ಕಂಡು, ಬುದ್ಧಿಭ್ರಮಣೆ, ವಾಂತಿಯಾಗುವುದು, ದೇಹದ ಉಷ್ಣತೆ ಹೆಚ್ಚಾದರೆ ಇಲ್ಲವೇ ಜೊಲ್ಲುಸುರಿದು ಹಲ್ಲುಗಳು ಕಪ್ಪಾಗಿದ್ದರೆ ವಿಷವು ಮಾಂಸ ಖಂಡಗಳಲ್ಲಿ ಸೇರಿಕೊಂಡಿರುತ್ತದೆ.	ಇದಕ್ಕೆ ಮಂತ್ರ, ತಂತ್ರಾದಿ ಚಿಕಿತ್ಸೆಗಳನ್ನು ಮಾಡುವುದು. ಜೊತೆಗೆ, ಹಿಂಗು, ಜೇನುತುಪ್ಪ, ಮಧುಕ, ಕುಂಕುಮ ಕೇಸರಿಗಳನ್ನು ನೀರಿನಲ್ಲಿ ಮಿಶ್ರಮಾಡಿ ಕುಡಿಸುವುದು ಮತ್ತು ಲೇಪನ ಮಾಡುವುದು.
೪	ಮುಖದಲ್ಲಿ ದುರ್ವಾಸನೆ, ಕೆಮ್ಮು, ಉಸಿರಾಟದಲ್ಲಿ ತೊಂದರೆ, ಜೊಲ್ಲು ಸುರಿಯುವುದು, ನಿದ್ರೆ ಬರುವ ಲಕ್ಷಣಗಳು ಕಂಡರೆ ವಿಷವು ಅಸ್ಥಿಗತವಾಗಿರುತ್ತದೆ.	ಚಿತ್ರಮೂಲ, ಶುಂಠಿ, ಇಂದ್ರವಾರುಣಿ, ತ್ರಿಫಲೆ, ಕಟುಕ, ಶ್ರೀಗಂಧ, ಕೋಶಾತಕಿ (ಪತಿವಲಕಾಯಿ)ಯ ಎಲೆಗಳನ್ನು ಅರೆದು ಕುಡಿಸುವುದು.
೫	ಉಸಿರಾಟದ ತೊಂದರೆ, ಬಹು ಆಯಾಸ ಮತ್ತು ವಾಂತಿಯಾಗುತ್ತಿದ್ದರೆ ವಿಷವು ಕ್ರಮವಾಗಿ ಮೇದಸ್ಸು, ಮಜ್ಜೆ ಮತ್ತು ಶುಕ್ಲಗಳಲ್ಲಿ ಸೇರಿಕೊಂಡಿರುತ್ತದೆ.	ಅಮೃತವಳ್ಳಿ, ಕರ್ಕೋಟಕಗಳನ್ನು ತುಪ್ಪದೊಡನೆ ಸೇರಿಸಿ ನೀರಿನೊಡನೆ ಕುಡಿಸುವುದು. ಹಾಲು ಮತ್ತು ಪುತ್ರಂಜೀವಗಳನ್ನು ಸೇರಿಸಿ ಕುಡಿಸಿ, ಲೇಪನ ಮಾಡುವುದು.
೬	ವಿಷವು ಪಿತ್ತಗತವಾಗಿದ್ದರೆ ಕಣ್ಣು, ಅಂಗಾಲುಗಳು ಹಳದಿಯಾಗುತ್ತವೆ.	ಚಂದನ, ಕೊಳಂಜ, ತ್ರಿಫಲೆಗಳನ್ನು ತುಪ್ಪ ಮತ್ತು ಶುಂಠಿಗಳೊಡನೆ ಅರೆದು ಲೇಪನ ಮಾಡಿ, ಕುಡಿಸುವುದು.
೭	ವಿಷವು ಕಫಗತವಾದರೆ ಮೂಗ ಮತ್ತು ಕುರುಡರಂತೆ ವರ್ತಿಸುತ್ತಾರೆ. ದೇಹದ ಬಣ್ಣವು ವಿಕಾರವಾಗುವುದು.	ಅಗುರು, ಅರಗು, ಕುಂಕುಮಕೇಸರಿ, ಬೋಳ, ತಗರ, ಸಜ್ಜೆ, ಕುಸುಬೆ, ಅಂಕಲೆ, ಮಧುಕ, ಚಾತುರ್ಜಾತಕಗಳನ್ನು ಸೇರಿಸಿ ಕುಡಿಸುವುದು.
೮	ವಿಷವು ವಾತಗತವಾದರೆ ಉಸಿರಾಟದ ತೊಂದರೆ, ಅತಿಮೂರ್ಛೆ, ಬಣ್ಣಬದಲಿಕೆ, ಶರೀರ ನಿಸ್ತೇಜವಾಗುವುದು.	ಪಾರೋಪದಾಕ್ಷಿ, ತಾಳಕ, ಮನಶ್ಶಿಲೆಗಳನ್ನು ಅರೆದು, ನೀರಿನಲ್ಲಿ ಸೇರಿಸಿ ಕುಡಿಸಿ, ಲೇಪನ ಮಾಡುವುದು.

(ಮೇಲಿನ ಕೋಷ್ಟಕವನ್ನು ಮಂಗರಾಜನ 'ಖಗೇಂದ್ರಮಣಿ ದರ್ಪಣಂ'ನ ಐದನೆಯ ಅಧಿಕಾರದಲ್ಲಿನ ೬ರಿಂದ ೨೨ನೆಯ ಪದ್ಯಗಳನ್ನು ಅನುಸರಿಸಿ ತಯಾರಿಸಲಾಗಿದೆ.)[೪೯]

ಸರ್ಪದಷ್ಟನಾದವನಿಗೆ ಈ ಕ್ರಮಗಳಲ್ಲಿ ಉಪಚರಿಸುವುದರಿಂದ ವಿಷಪರಿಹಾರವಾಗುವುದು. ಅಲ್ಲದೇ ಮುಂದುವರೆದು, ಮತ್ತೆ ಹಲವಾರು ಔಷಧ ಕ್ರಮಗಳನ್ನು ಹೇಳುತ್ತಾನೆ.

೧. ಪಾದರಸ, ಗಂಧಕ, ಅರಿಸಿನ, ಬೆಳುಗಾರ, ತುತ್ಥಗಳನ್ನು ಸುರದಾಳಿರಸದಲ್ಲಿ ಸೇರಿಸಿ ಮೂತ್ರದೊಡನೆ ಕುಡಿಸುವುದು. ಇದನ್ನು ಕೃತಾಂತಕುಧರಾಶನಿ ಎಂದು ಕರೆಯುವರು.

---

೪೮. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೬೨.
೪೯. ಅದೇ ; ಪುಟ. ೬೨, ೬೩, ೬೪, ೬೫.

೨. ಬಾವುಜಿ (ಚವಳಿ)ಯ ಬೀಜವನ್ನು ಗೋಮೂತ್ರದಲ್ಲಿ ಸೇರಿಸಿ ಕುಡಿಸುವುದು. ಇದು ಮೃತಸಂಜೀವಿನಿಯಾಗಿ ಚರಾಚರಗಳ ವಿಷಗಳನ್ನು ಪರಿಹರಿಸುವುದು.

೩. ತಾವರೆ ಬೇರು, ಬೆಳುಗಾರಗಳನ್ನು ತಿನ್ನಿಸುವುದು.

೪. ಬೆಳುಗಾರ, ಮುಸಲೀಕಂದಗಳನ್ನು ನೀರಿನೊಡನೆ ಕುಡಿಸುವುದು.

೫. ಮುಸಲೀಕಂದ, ಕಟುಕರೋಹಿಣಿಗಳನ್ನು ತಿನ್ನಿಸುವುದು.

೬. ಕಹಿಸೋರೆಯ ಬೇರನ್ನು ಅದರ ಎಲೆಯ ರಸ ಹಾಗೂ ಗೋಮೂತ್ರದಲ್ಲಿ ಸೇರಿಸಿ ಕುಡಿಸುವುದು ಮತ್ತು ಗಾಯಕ್ಕೆ ಲೇಪಿಸುವುದು.

೭. ಸುರದಾರು ಎಕ್ಕೆ, ಲಾಂಗಲಿ, ಕರವೀರ, ಚಿತ್ರಮೂಲಗಳನ್ನು ಅರೆದು ರಸವನ್ನು ಕುಡಿಸುವುದು.

೮. ಹಿಪ್ಪಲಿ, ಶುಂಠಿ, ಮೆಣಸು, ಮೊಸರು, ಅರಿಸಿನ ಬೇರು, ಬೆಣ್ಣೆ, ಜೇನುತುಪ್ಪ, ಸೈಂಧವಗಳನ್ನು ಮಜ್ಜಿಗೆಯಲ್ಲಿ ಸೇರಿಸಿ ಕುಡಿಸುವುದರಿಂದ ಕಾಳಸರ್ಪದ ವಿಷವು ಪರಿಹಾರವಾಗುವುದು.

೯. ಗಿರಿಕರ್ಣಿಕೆಯನ್ನು ಅಂಬಿಲದೊಡನೆ ಕುಡಿಸುವುದು.

೧೦. ಗುಡೂಚಿಯನ್ನು ಅಂಬಿಲದೊಡನೆ ಕುಡಿಸುವುದು.

೧೧. ತೊರೆಮಲ್ಲಿಗೆಯನ್ನು ನೀರಿನಲ್ಲಿ ಸೇರಿಸಿ ಕುಡಿಸುವುದು.

೧೨. ಸಿರಿಸ, ಗುಡೂಚಿ, ರಂಜಿಗೆ, ಈಶ್ವರಿ, ಕತ್ತರಿ, ದೇವದಾರು, ಕಾಸರಿಕೆ, ಅಶ್ವಗಂಧಿ, ಕಟುಕಪರ್ಣಿ, ಕಾಡುಮಲ್ಲಿಗೆಗಳನ್ನು ಕಾಡುಸೋರೆಯ ಎಳೆಗಾಯಿಯ ರಸದಲ್ಲಿ ಸೇರಿಸಿ ಕುಡಿಸುವುದು.

೧೩. ಕರಂಜದ ಸಾರ, ಕಾಡುಹೀರೆ, ನೆಲ್ಲಿಬೀಜ ಮತ್ತು ಅರಿದಾಳಗಳನ್ನು ಹಾಲಿನಲ್ಲಿ ಅರೆದು ಕುಡಿಸುವುದು.

೧೪. ಕಾರಸೆ, ರೆಂಜಿಗೆ, ಬೇವು, ಈಶ್ವರಿ, ಹಸ್ತಿಕರ್ಣಿ, ಹತ್ತರಿಕೆಗಳ ನಸ್ಯ ಮಾಡಿಸಿ, ರಸವನ್ನು ಕುಡಿಸುವುದು ಮತ್ತು ಗಾಯಕ್ಕೆ ಲೇಪಿಸುವುದು.

೧೫. ಸಾಲವೃಕ್ಷದಲ್ಲಿ ಚಿಗುರು ಬಿಟ್ಟಿರುವ ಕಕ್ಕೆಗಿಡವನ್ನು ಶನಿವಾರ ದಿನ ಭಕ್ತಿಯಿಂದ ಪೂಜಿಸಿ, ಮೂರು ಸುತ್ತು ನೂಲನ್ನು ಸುತ್ತಿಬಂದು ಮರುದಿನ ಅಂದರೆ ರವಿವಾರದಂದು ಮೌನವಾಗಿ ಅಲ್ಲಿಗೆ ಹೋಗಿ ಅದರ ಬೇರುಗಳನ್ನು ತಂದು ಮಾತ್ರೆಗಳನ್ನು ಮಾಡಿ ಸಂಗ್ರಹಿಸುವುದು. ಸರ್ಪದಷ್ಟನ ಗಾಯಗಳಿಗೆ ಅದನ್ನು ಲೇಪಿಸುವುದು.

೧೬. ಶರಪುಂಖ, ಇಂದ್ರವಾರುಣಿ, ಸಿರಿಸದಹಣ್ಣು, ಬ್ರಹ್ಮಿ, ಶುಂಠಿ ಸೇರಿಸಿ ಕುಡಿಸುವುದು.

೧೭. ಹತ್ತರಿಕೆ, ಹಾಲೆ ಎಲೆಗಳು, ಈಶ್ವರಿ, ಕೀರತುಂಡಿಗಳಬೇರುಗಳನ್ನು ಅಂಬಿಲದಲ್ಲಿ ಸೇರಿಸಿ ಗಾಯಕ್ಕೆ ಲೇಪಿಸುವುದು.

೧೮. ಮೊಸರು, ಬೆಣ್ಣೆ, ಮೆಣಸು, ಜೇನುತುಪ್ಪ, ಹಿಪ್ಪಲಿ, ಪಂಚಲವಣಗಳನ್ನು ಸೇವಿಸುವುದು.

೧೯. ಅರಿಸಿನ ಬೇರು, ತಗರ, ಅಂಜನ, ಬಜೆಯೊಂದಿಗೆ ಅರೆದು ರಸವನ್ನು ಕುಡಿಸುವುದು.

೨೦. ಕರಕರ್ಣಿ ಮತ್ತು ಬೇಲದ ಬೇರುಗಳನ್ನು ಕಟುಕತ್ರಯಗಳೊಂದಿಗೆ ಕುಡಿಸುವುದು.

೨೧. ಅಂಕೋಲೆ, ವಿಳಂಗ, ಕುಂಕುಮಕೇಸರ, ರಸಾಂಜನ, ಹಿಪ್ಪಲಿ, ಬೆಳುಗಾರ, ಮಣಿಶಿಲೆಗಳ ರಸಗಳನ್ನು ಕುಡಿಸುವುದು.

೨೨. ಸುರದಾಳಿ, ನೀಲಿ, ರಂಜಿಗೆ, ಕರಕರ್ಣಿಕೆಗಳ ಬೇರುಗಳನ್ನು ಅಂಬಿಲದಲ್ಲಿ ಸೇರಿಸಿ ಕುಡಿಸುವುದು.

೨೩. ಕರಕರ್ಣಿ, ಸುರಸಿಗಳ ಬೇರುಗಳನ್ನೂ, ಕಹಿಸೋರೆ, ಕಾಡುಹೀರೆಯ ಬೀಜಗಳನ್ನೂ ಹೋತದ ಮೂತ್ರದಲ್ಲಿ ಸೇರಿಸಿ ಕುಡಿಸುವುದು.

೨೪. ನೇರಳೆಮರದ ಬೇರನ್ನು ತಣ್ಣೀರಿನಲ್ಲಿ ಅರೆದು ಕುಡಿಸುವುದು.

೨೫. ಸುರವಾರುಣಿ, ಕರಕರ್ಣಿ, ಈಶ್ವರಿ, ಶುಕತುಂಡಿ, ಕಹಿಸೋರೆಯ ತಿರುಳನ್ನು ಸೇರಿಸಿ ಅರೆದು ಕುಡಿಸುವುದು.

೨೬. ಹುಳಿಗುಡಿ, ಹೆಮ್ಮಿಟಿಲು, ಬಿಳಿಯ ಗುಂಜಿಯ ಬೇರನ್ನು ಅಂಬಿಲದಲ್ಲಿ ಸೇರಿಸಿ ಕುಡಿಸುವುದು.

೨೭. ಕಕ್ಕೆ, ಮಾದಲ, ಹೆಗ್ಗುರಿಟಿಗೆ, ಮೊಲ್ಲೆ, ಈಶ್ವರಿ, ಚಂಪಕ, ಮೆಕ್ಕೆ, ನಾಂಗುಲಿ, ಕಟ್ಟವತ್ತಿಗೆ, ಎಸಗ, ಎಕ್ಕೆ, ನುಗ್ಗೆ ಇವೆಲ್ಲವನ್ನೂ ಅಂಬಿಲದಲ್ಲಿ ಸೇರಿಸಿ ಪಾನ ಮಾಡುವುದು.

೨೮. ಕುರುಟಿಗೆ, ಈಶ್ವರಿ, ಮಗ್ಗಾರೆ, ಎಕ್ಕೆ, ಶುಂಠಿಗಳನ್ನು ಅಂಬಿಲದೊಡನೆ ಸೇರಿಸಿ ಕುಡಿಸುವುದು.

೨೯. ಕಿರುಕುಸಾಲೆ, ಕೊತ್ತಂಬರಿಗಳನ್ನು ಅಕ್ಕಿಕಚ್ಚಿನಲ್ಲಿ ಅರೆದು ತುಪ್ಪದೊಡನೆ ಸೇವಿಸುವುದು.

೩೦. ಈಚಲ ಹಣ್ಣು, ಕಾಸರಿಕನ ಬೀಜ, ಅಮೃತಬಳ್ಳಿ, ಮೂಲಂಗಿಯ ಬೇರು, ಅರಿಸಿನ, ಹಾಗಲುಕಾಯಿಗಳನ್ನು ಪ್ರತ್ಯೇಕವಾಗಿ ಅಂಬಿಲದೊಡನೆ ಸೇವಿಸುವುದು.

೩೧. ಕಸ್ತೂರಿ ಜಾಲಿಯ ಬೇರು, ಬೇವಿನ ಬೇರು, ನಸುಗುನ್ನಿ, ಭೃಂಗ, ಕರ್ಕೋಟಕಗಳನ್ನು ಹಾಲಿನಲ್ಲಿ ಸೇರಿಸಿ ಕುಡಿಸುವುದು.

೩೨. ನಿಂಬೆ ಬೀಜ ಮತ್ತು ಕೊಡಸಿಗೆ ಬೇರುಗಳನ್ನು ನೇರಿಲ ಚಕ್ಕೆಯೊಂದಿಗೆ ಸೇವಿಸುವುದು.

೩೩. ಕಣಗಿಲೆ ಬೇರು, ಕರ್ಪೂರಗಳನ್ನು ಎಳ್ಳೆಣ್ಣೆಯೊಡನೆ ಸೇವಿಸುವುದು.

೩೪. ಮೆಣಸು, ಅಮೃತಬಳ್ಳಿ, ಕಿರುಕುಸಾಲೆ, ಅರಿಸಿನ, ಸಮುದ್ರಲವಣ ಇವುಗಳಲ್ಲಿ ಯಾವುದಾದರೊಂದನ್ನು ತುಪ್ಪದೊಡನೆ ಸೇವಿಸುವುದು.

೩೫. ಅರಿಸಿನ, ಸೈಂಧವಗಳನ್ನು ಅರೆದು ಹಾಗಲೆಲೆಯ ರಸ ಮತ್ತು ಮೂತ್ರದೊಡನೆ ಬೆರೆಸಿ ಕುಡಿಸುವುದು.

ಹೀಗೆ 'ಖಗೇಂದ್ರಮಣಿ ದರ್ಪಣಂ' ಗಂಥದ ಐದನೆಯ ಅಧಿಕಾರದಲ್ಲಿ ಹಲವಾರು ರೀತಿಯಲ್ಲಿ ಚಿಕಿತ್ಸಾ ಕ್ರಮಗಳನ್ನು ಕೈಕೊಂಡು ಹಾವು ಕಚ್ಚಿದ ವ್ಯಕ್ತಿಯನ್ನು ಉಪಚರಿಸಿ ಬದುಕುಳಿಯುವಂತೆ ಮಾಡಬಹದು ಎಂದು ಮಂಗರಾಜನ ಅಭಿಮತವಾಗಿದೆ.

ಮುಂದುವರೆದು ಆರನೆಯ ಅಧಿಕಾರದಲ್ಲಿ ಅಂಜನ ಚಿಕಿತ್ಸೆಯ ಕುರಿತು ಹೇಳುತ್ತಾನೆ. ಪಾರ್ಶ್ವನಾಥ ತೀರ್ಥಂಕರರನ್ನೂ, ಯಕ್ಷಿ ಪದ್ಮಾವತಿಯನ್ನೂ ಆರಂಭದಲ್ಲಿ ಸ್ಮರಿಸಿಕೊಳ್ಳುತ್ತಾನೆ.

ಸರ್ಪದಷ್ಟನಿಗೆ ಅಂಜನ ಚಿಕಿತ್ಸೆಯು ಬಲು ವಿಶಿಷ್ಟವಾದುದು. ಈ ಚಿಕಿತ್ಸೆಯಿಂದ ವಿಷಪೂರಿತನಾದವನು ಬದುಕುಳಿಯುವ ಸಾಧ್ಯತೆಗಳು ಹೆಚ್ಚು ಎಂದು ಕವಿ ಅಭಿಪ್ರಾಯಪಡುತ್ತಾನೆ.

ಮ॥ **"ತನುವಿಂದಾನನಮಲ್ಲಿಯುಂ ಶುಭಕರಂ ಮತ್ತಲ್ಲಿ ತೋರ್ಪೀ ವಿಲೋ**
ಚನಮೆಂಬಂತಿರೆ ಲೇಸು ಲೇಪನಮದರ್ಕಂ ಪನಮಾ ಪಾನದಿಂ
ವಿನುತಂ ತನ್ನಯನಾಂಜನಂ ಬಲುಹೆನಿಪ್ಪಾ ತಾರತಮ್ಯಂಗಳಿಂ
ಜನತಾಸ್ತುತ್ಯ ದೃಂಗಂಜನಂ ಜನಹಿತಂ ಪಕ್ತವ್ಯಮಿನ್ನಂತಜೆಂ ॥೬.೦೪॥"[೫೦]

ದೇಹದಲ್ಲಿ ಮುಖವು ಶುಭದಾಯಕವಾದುದು. ಅದರಲ್ಲಿನ ಕಣ್ಣುಗಳು ಇನ್ನಷ್ಟು ಶೋಭಾಯಮಾನ ಎನಿಸುತ್ತವೆ. ಹೀಗಿರುವಾಗ ಔಷಧ ಲೇಪನ, ಪಾನಗಳಿಗಿಂತ ಅಂಜನವು[೫೧] ಹೆಚ್ಚು ಪರಿಣಾಮಕಾರಿ. ಆದುದರಿಂದ ನೇತ್ರಾಂಜನವು ಶ್ರೇಷ್ಠವೆಂದು ಜನಮನ್ನಣೆ ಪಡೆದುಕೊಂಡಿದೆ. ಎಂದು ಹೇಳುತ್ತಾ ಅಂಜನಗಳನ್ನು ತಯಾರಿಸಿ ಲೇಪನ ಮಾಡುವ ವಿಧಾನಗಳನ್ನು ತಿಳಿಸುತ್ತಾನೆ.

೧. ಹಿಪ್ಪಲಿ, ಚಿತ್ರಕ, ಅಗುಳುಶುಂಠಿ, ಪಾದರಸ, ಮೆಣಸು, ಹೆಗ್ಗುರುಟಿಗೆಗಳನ್ನು ಸೈಂಧವದೊಡನೆ ತುಪ್ಪವನ್ನು ಸೇರಿಸಿ ಹಚ್ಚುವುದರಿಂದ ವಿಷವು ಕೆಲವೇ ನಿಮಿಷಗಳಲ್ಲಿ ಪರಿಹಾರವಾಗುವುದು.
೨. ಪಾದರಸ, ಗಂಧಕ, ಜೇನುಮೇಣ, ಬಾವಂಜಿಬೀಜ, ನೀಲಿಗಳನ್ನು ಅರೆದು ನಿರ್ಗುಂಡಿ ಮತ್ತು ಕಕ್ಕೆಯ ರಸದೊಂದಿಗೆ ಹಚ್ಚುವುದು.
೩. ಪುತ್ರಂಜೀವಿಯನ್ನು ಹಸುವಿನ ಹಾಲಿನೊಡನೆ ಸೇವಿಸಿ, ಅಂಜನ ಲೇಪನ ಮಾಡುವುದು.
೪. ಪಾತಾಳಗರುಡ, ಎಲವ, ಪಾದರಸ, ಪುತ್ರಂಜೀವ, ಮಣಿಶಿಲೆ, ವಿಳಂಗಗಳನ್ನು ಹುಳಿಯೊಡನೆ ಅಂಜನ ಮಾಡುವುದು.
೫. ಹಿಪ್ಪಲಿ, ತುತ್ಥ, ಸೈಂಧವ, ಮೈಲುತುತ್ಥ, ವಿಶ್ವ, ಈಶ್ವರಿಗಳನ್ನು ಹುಳಿ ಮತ್ತು ನರಮೂತ್ರದೊಂದಿಗೆ ಕಣ್ಣಿಗೆ ಹಚ್ಚುವುದು.
೬. ಪಾದರಸ, ಅರುಟಾಳದ ಹಣ್ಣಿನ ರಸ, ಸಮುದ್ರಫಲ, ಇಟ್ಟಿ, ಅಂಕೋಲೆಬೀಜಗಳನ್ನು ನರಮೂತ್ರದಲ್ಲಿ ಸೇರಿಸಿ ನಸ್ಯ, ಅಂಜನ ಮಾಡುವುದು.
೭. ಇಲಿಪಾಷಾಣ, ಮಯೂರತುತ್ಥ, ಅಮೃತಪಾಷಾಣ, ಭೃತ್ತು, ಕಲ್ಲುಹೂವು, ಗಂಧಕ, ಪುತ್ರಂಜೀವ, ಅಗಿಲು, ಕರ್ಪೂರತೈಲ, ಇಂಗುಲಿಕ, ನಾಗರ ಇಪ್ಪೆ, ಕಪ್ಪರಿಗಳನ್ನು ಸಪದಷ್ಟನ ಮೂತ್ರದಲ್ಲಿ ಕಲಸಿ, ಜೇನುತುಪ್ಪದೊಡನೆ ಹಚ್ಚುವುದು.
೮. ಮೂರು ವರ್ಷದವರೆಗೆ ಬೆಳೆದು ಹಬ್ಬಿ, ಬೇರುಬಿಟ್ಟ ಹುಳಿಹೀರೆಯನ್ನು ಆಡು, ಹಸು ಇಲ್ಲವೇ ಎಮ್ಮೆಯ ಹಾಲಿನಲ್ಲಿ ಅಟ್ಟು ಅಂಜನ, ನಸ್ಯ ಮಾಡುವುದು.

---

೫೦. A. Venkat Rao and Pandit H. Shesha Ayyangar (Editors): **Khagendramani Darpanam of Mangaraja ;** Page. 128
೫೧. ಜಿ. ಎನ್. ಚಕ್ರವರ್ತಿ ; **ಸಂಸ್ಕೃತ – ಕನ್ನಡ ನಿಘಂಟು** ; ಪುಟ. ೩೦
ಅಂಜನ = ಕಣ್ಣಿಗೆ ಕಪ್ಪು, ಕಾಡಿಗೆ, ಕಣ್ಣಿಗೆ ಲೇಪನ ಮಾಡುವುದು.

೯. ಹುಲಿಗಿಲಬೀಜ, ಸೈಂಧವ, ತ್ರಿಕಟುಕ, ಬಿಲ್ವಫಲ, ಅರಿಸಿನ ಬೇರು, ಎಕ್ಕ, ಕತಕ, ಏಲಕ್ಕಿಗಳನ್ನು ನಿಂಬೆಹುಳಿಯೊಡನೆ ಸೇರಿಸಿ ಅಂಜನ, ನಸ್ಯ ಮಾಡಿಸಿ ಕುಡಿಸುವುದು.

೧೦. ಇಂದ್ರವಾರುಣಿ, ಬೆಳಿಗಾರಗಳನ್ನು ಅರೆದು ಹೊಗೆಯಲ್ಲಿಟ್ಟು, ನರಮೂತ್ರದಲ್ಲಿ ಸೇರಿಸಿ ಲೇಪಿಸುವುದು.

೧೧. ಸಮುದ್ರಫಲ, ಬಜೆ, ಕಾಡುಹೀರೆಯ ಬೀಜಗಳನ್ನು ಸಮಾನವಾಗಿ ನಿಂಬೆಯ ರಸದೊಂದಿಗೆ ಸೇರಿಸಿ ಹಚ್ಚಿ, ನಸ್ಯ ಮಾಡುವುದು.

೧೨. ಬರುವದನೆ, ತುರುಚೆ, ಅಸಡಿ, ನಗಸಂಪಿಗೆ, ನೆಲ್ಲಿಬೀಜಗಳನ್ನು ಅರೆದು ಲೇಪಿಸುವುದು.

೧೩. ದಾಂಗುಡಿ ಬಳ್ಳಿ, ಪುತ್ರಂಜೀವ, ನೆಗ್ಗಿಲು, ತಾಳೀಸಪತ್ರ, ಆಡಿನ ಹಾಲುಗಳನ್ನು ನರಮೂತ್ರದೊಡನೆ ಸೇರಿಸಿ ಅಂಜನ ಮಾಡುವುದು.

೧೪. ನೆಲ್ಲಿಯಬೀಜ, ಗುಂಜಿ, ಶುಂಠಿ, ಕರ್ಕೋಟ, ವಜ್ರಲತೆ, ಖರ್ಜೂರಗಳನ್ನು ಹುಳಿಯಲ್ಲಿ ಕಲಸಿ ಹಚ್ಚುವುದು.

೧೫. ಇಂಗುಳದಲ್ಲಿ ಬೆಲ್ಲ, ಪುನರ್ನವಿ, ಸೈಂಧವ ಹಾಗೂ ಮೆಣಸುಗಳನ್ನು ಸೇರಿಸಿ ನಿಂಬೆಯ ರಸದೊಂದಿಗೆ ಲೇಪನ ಮಾಡುವುದು.

೧೬. ಮೆಣಸು, ಜೇಪಾಳಗಳನ್ನು ಆಡಿನ ಮೂತ್ರದಲ್ಲಿ ಸೇರಿಸಿ ನಿಂಬೆಯ ಹುಳಿಯೊಂದಿಗೆ ಬೇಯಿಸಿ ಹೊಗೆಯಲ್ಲಿಟ್ಟು, ಬಳಿಕ ನರಮೂತ್ರವನ್ನು ಸೇರಿಸಿ ಹಚ್ಚುವುದು.

೧೭. ಬಜೆ, ಹಾಗಲು, ಇಟ್ಟಿ, ಪುನರ್ನವಿ, ಖರ್ಜೂರ, ಸಮುದ್ರಫಲ, ದಾಂಗುಡಿ, ಏಲಕ್ಕಿ, ಲವಂಗ, ಚಕ್ಕೆ, ಹಾಲು, ಹಾವಿನ ಪೊರೆಗಳನ್ನು ಜೇನುತುಪ್ಪದೊಂದಿಗೆ ಸೇರಿಸಿ ಅಂಜನ ಮಾಡುವುದು.

೧೮. ಬಂಜೆ ಮಲುವಾಗಲುಗಳನ್ನು ಕಂಜರಸದೊಂದಿಗೆ ಲೇಪನ ಮಾಡುವುದು.

೧೯. ಪದ್ಮಕೇಸರ, ನಾಗರ ಇಂಗುಳದ ಹಣ್ಣು, ಪುನರ್ನವಿಗಳನ್ನು ಮುಸ್ತೆಯೊಮದಿಗೆ ಸೇರಿಸಿ ನಿಂಬೆಯ ರಸದಿಂದ ಲೇಪನ ಮಾಡುವುದು.

೨೦. ತ್ರಿಕಟುಕ, ಸಪ್ತಾಕ್ಷಿ, ನಿರ್ಗುಂಡಿ, ಅರಿಸಿನ, ಗಿರಿಕರ್ಣಿಕೆ, ಲವಂಗಗಳನ್ನು ಪಾದರಸದೊಂದಿಗೆ ಸೇರಿಸಿ ಲೇಪನ ಮಾಡುವುದು.

೨೧. ನೀಲಿ, ಮಾದಲ, ಲಕ್ಕಿ, ಮುಂಡಿ, ಟಂಕಣ, ಸಿಂದುಕ, ಬಾಳ ತ್ರಿಕಟುಕ, ತಗರ, ಪುನರ್ನವಿ, ಇಪ್ಪೆಯ ಬೇರು, ಖಚೋರ, ಕರಂಜ, ರಂಜಿಗೆಗಳನ್ನು ಜೇನುತುಪ್ಪದೊಡನೆ ಸೇರಿಸಿ ಅಂಜನ ಲೇಪನ ಮಾಡುವುದು.

೨೨. ಪಾತಾಳಗರುಡ, ಹಿಪ್ಪಲಿ, ಪಾದರಸ, ಪುತ್ರಂಜೀವಗಳನ್ನು ಶುಂಠಿಯ ರಸದೊಂದಿಗೆ ಸೇರಿಸಿ ಲೇಪಿಸುವುದು.

೨೩. ಮಾಗಧ, ಮಯೂರಶಿಖಿ, ದಾಗುಡಿ, ಸರ್ಪಾಕ್ಷಿ, ತುತ್ಥ, ಪರ್ಪಾಷ್ಟಕ, ಬಜೆಗಳನ್ನು ಅರೆದು ಲೇಪಿಸುವುದು.

೨೪. ಇಂಗುಳ, ಗಿರಿಕರ್ಣಿಕೆ, ಚಿತ್ರಮೂಲ, ಕೇಸರಿಬೀಜ, ಲವಂಗ, ಭದ್ರಾಕ್ಷಿ, ಕೃಷ್ಣಗುಂಜಿ, ಅಶ್ವಗಂಧಿಗಳನ್ನು ಕತ್ತೆಯ ಮೂತ್ರ ಇಲ್ಲವೇ ನರಮೂತ್ರದಲ್ಲಿ ಸೇರಿಸಿ ಲೇಪಿಸುವುದು.

೨೫. ಚಂ॥ "ಕೊಡಸಿಗೆ ನಾಗದಾಳಿ ವರಚಂಪಕ ನಾಂಗುಲಿ ಪೆರ್ಗುರಂಟಿಗಂ
ಸೊಡರಿಪ ನಾಗಸರ್ಪಮೆಸೆವೀಶ್ವರಿ ಕನ್ನೆಕುಮಾರಿ ಪುಟ್ಟಿಪಣ್
ಪೊಡವಿಗೆ ಗಂಧಯುಕ್ತ ಮರುಗಂ ದವನೋದ್ಭವ ಬೀಜಮೆಂಬಿವಂ
ಬಿಡದಿರೆ ಗವ್ಯಮೂತ್ರದೊಳೆ ತದ್ವಟಕಂಗಳುಮಂ ಪ್ರಯತ್ನದಿಂ ॥೬.೩೪॥

ಕಂ॥ ಇರಿಸಿ ಮೊಲೆವಾಲೊಳೆಚ್ಚುಗೆ
ನರರ್ಗಂ ಪಲತೆಱದ ಸರ್ಪವಿಷಮ ವಿಷಂಗಳ್
ಪರಿಹರಿಕುಂ ತನುರಕ್ಷಣ
ಕರಯೋಗವಿದೊಂದೆ ಮಂಗರಾಜನ ಮತದಿಂ ॥೬.೩೫॥"[೫೨]

ಕೊಡಸಿಗೆ, ನಾಗದಾಳಿ, ಸಂಪಿಗೆ, ನಾಂಗುಲಿ, ಹೆಗುರುಟಿಗೆ, ಈಶ್ವರಿ, ಕನ್ನೆಕುಮಾರಿ, ಪುಟ್ಟಿಹಣ್ಣು, ಮರುಗ, ದವನದ ಬೀಜಗಳನ್ನು ಗೋಮೂತ್ರದಲ್ಲಿ ಅರೆದು, ಗುಳಿಗೆ ಮಾಡಿ ಮೊಲೆ ಹಾಲಿನಲ್ಲಿ ತೇದು ಹಚ್ಚುವುದು. ಇದರಿಂದ ಸವಸರ್ಪಗಳ ವಿಷವು ಪರಿಹಾರವಾಗುವುದು ಎಂಬುದು ಮಂಗರಾಜನ ಅಭಿಮತವಾಗಿದೆ.

೨೬. ಕತ್ತೆ, ಗೋವು, ಎಮ್ಮೆ, ಆಡು, ನರಮೂತ್ರಗಳನ್ನು ನಿಂಬೆ ಇಲ್ಲವೇ ನೆಲ್ಲಿಯ ರಸದೊಡನೆ ಸೇರಿಸಿ ಹದವಾಗಿ ಬೇಯಿಸಿ, ಬಿಸಿಯಾರುವ ಮುನ್ನವೇ ಲೇಪಿಸುವುದು.

೨೭. ಅರಿಸಿನ, ಸಿರೀಸದ ಹೂವು, ರಸಾಂಜನ, ತ್ರಿಕಟುಕ, ಕರಂಜದ ಬೀಜಗಳನ್ನು ನರಮೂತ್ರದಲ್ಲಿ ಅರೆದು ಲೇಪನ ಮಾಡುವುದು.

೨೮. ಮೆಣಸು, ನಾಗರ, ಬಜೆ, ಅರುಟಾಳ ಫಲಗಳನ್ನು ಹುಳಿಯಲ್ಲಿ ಸೇರಿಸಿ ಲೇಪಿಸುವುದು.

ಈ ರೀತಿಯಾಗಿ ಅಂಜನಗಳನ್ನು ತಯಾರಿಸಿ ಸರ್ಪ ಕಚ್ಚಿದವನ ಕಣ್ಣುಗಳಿಗೆ ಲೇಪನ ಮಾಡಿ, ಉಪಚರಿಸುವುದರಿಂದ ಆತನ ದೇಹದಲ್ಲಿ ಸೇರಿರುವ ವಿಷವು ಪರಿಹಾರವಾಗುವುದು ಎಂದು 'ಖಗೇಂದ್ರಮಣಿ ದರ್ಪಣಂ' ಗ್ರಂಥವು ಪ್ರತಿಪಾದಿಸುತ್ತದೆ.

ಏಳನೆಯ ಅಧಿಕಾರವು 'ನಸ್ಯ ಪ್ರಕರಣಂ'. ಅಧ್ಯಾಯದ ಆರಂಭದಲ್ಲಿ ವಿಷ್ಣುವನ್ನೂ, ತೀರ್ಥಂಕರರನ್ನೂ ನೆನೆದು ಲೋಕಪ್ರಸಿದ್ಧವಾದ ನಸ್ಯಕರ್ಮವನ್ನು ವಿರಚಿಸುವುದಾಗಿ ಹೇಳುತ್ತಾನೆ ಮಂಗರಾಜ.

ಕಂ॥ "ನಸ್ಯಗಳಿಂದೆ ತನುಸಾ
ರಸ್ಯಂ ಪಿರಿದಕ್ಕುಮಖಿಲವಿಷಮಟಿಗುಂ ತ
ನ್ನಸ್ಯಮಿದೆ ಮುಖ್ಯಮಿಂ ಸ
ರ್ವಸ್ಯೈವ ಶಿರಃ ಪ್ರಧಾನಮೆಂಬುದಱಿಂದಂ ॥೭.೦೨॥"[೫೩]

ನಸ್ಯಗಳಿಂದ ಶರೀರ ಸೌಖ್ಯವು ಹೆಚ್ಚುವುದು. ಅಲ್ಲದೇ ಎಲ್ಲ ರೀತಿಯ ವಿಷಗಳೂ ಶಮನವಾಗುವವು. ದೇಹದ ಎಲ್ಲ ಭಾಗಗಳಿಗಿಂತ ಶಿರವೇ ಪ್ರಧಾನವಾದುದು. ಆದುದರಿಂದ

೫೨. ಬಿ. ಎಸ್. ಸಣ್ಣಯ್ಯ (ಸಂ); ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ ; ಪುಟ. ೧೧೫

೫೩. A. Venkat Rao and Pandit H. Shesha Ayyangar (Editors) : Khagendramani **Darpanam of Mangaraja ;** Page. 128

ನಸ್ಯಕರ್ಮದಿಂದ ವಿಷವನ್ನು ಹೊರಹಾಕುವುದು ಮುಖ್ಯವಾಗಿದೆ. ಎಂದು ಹೇಳಿ ನಸ್ಯವನ್ನು[೫೪] ತಯಾರಿಸುವ ಕ್ರಮಗಳನ್ನು ಹೇಳುತ್ತಾನೆ.

೧. ಅರಿದಳ, ಗಂಧಕ, ಇಂಗು, ಅರಿಸನಬೇರುಗಳನ್ನು ಪಾದರಸದೊಡನೆ ಸೇರಿಸಿ ಮೂತ್ರ ಹಾಗೂ ದೇವದಾಳಿಯ ರಸದೊಡನೆ ಮೂಗಿಗೆ ನಸ್ಯ ಮಾಡುವುದು.

೨. ಪಾದರಸ, ಸಮುದ್ರಫಲ, ಜೇಪಾಳ, ಅಂಕೋಲೆಬೀಜಗಳಿಗೆ ಅರುಟಾಲಕಾಯಿ ಇಲ್ಲವೆ ಇಟ್ಟಿಬೀಜಗಳನ್ನು ನರಮೂತ್ರದಲ್ಲಿ ಸೇರಿಸಿ ಅರೆದು ನಸ್ಯಮಾಡುವುದು.

೩. ನಾಗರ, ತುಪ್ಪಕೀರೆ, ಅರಿಸಿನ ಪಾದರಸ, ಇಂಗುಗಳನ್ನು ನೀರಿನಲ್ಲಿ ಸೇರಿಸಿ ನಸ್ಯಮಾಡಿಸಿದರೆ ಮೃತನಾದನೆಂದು ತಿಳಿದವನೂ ಬದುಕುಳಿಯುತ್ತಾನೆ.

೪. ಅರುಟಾಳ ಪಾದರಸ, ಬೆಳುಗಾರ, ಇಮಗು, ಕಲ್ಲುಪ್ಪುಗಳನ್ನು ಕಾಡುಹೀರೆ ರಸದೊಡನೆ ನಸ್ಯಮಾಡುವುದು.

೫. ಸಿರೀಸದ ಹೂವು, ಹುಲಗಿಲವನ್ನು ಹಸುವಿನ ಹಾಲಿನೊಡನೆ ಸೇರಿಸಿ ನಸ್ಯ ಮಾಡುವುದು.

೬. ಅರಿಸಿನ ಮತ್ತು ಲೊಕ್ಕಿಯ ಎಲೆಗಳನ್ನು ಸಮಾನವಾಗಿ ನರಮೂತ್ರದಲ್ಲಿ ಸೇರಿಸಿ ನಸ್ಯಮಾಡುವುದು.

೭. ಬಜೆ, ಮಡುವಾಗಲಗಳನ್ನು ಆಡಿನ ಮೂತ್ರದಲ್ಲಿ ಸೇರಿಸಿ ನಸ್ಯ ಮಾಡುವುದು.

೮. ಮೆಣಸು ಗುರುಗುಂಜಿಗಳನ್ನು ಗುಳ್ಳದ ಹಣ್ಣಿನ ರಸದಲ್ಲಿ ಅರೆದು ಪಾನ, ನಸ್ಯ ಮಾಡುವುದು.

೯. ಅರಿಸಿನ ನೀಲಿಗಳನ್ನು ಶುಂಠಿಯ ರಸದಲ್ಲಿ ಅರೆದು ನಸ್ಯ ಮಾಡುವುದು.

೧೦. ನಿಂಬೆಯ ಹುಳಿ, ಬೇಳೆಯ ಎಲೆ, ಅರಿಸಿನಕೊಂಬು, ಮೆಣಸುಗಳನ್ನು ಸೇರಿಸಿ ಅರೆದು ನಸ್ಯ ಮಾಡುವುದು.

೧೧. ಮೆಣಸು, ಮಾಗಧಿ, ಇಂದ್ರವಾರುಣಿ, ಶುಂಠಿಯ ಜೊತೆಗೆ ಕಾಡುಹೀರೆಯ ಬೀಜವನ್ನು ಸೇರಿಸಿ ನಸ್ಯ ಮಾಡುವುದು.

೧೨. ದಾಗುಡಿಯ ಬೇರನ್ನು ಅಡಕೆಯ ರಸದೊಂದಿಗೆ ನಸ್ಯ ಮಾಡುವುದು.

೧೩. ಬಜೆ, ಮಂಜಿಷ್ಠೆ, ಲೋಧ್ರ, ಕೋಷ್ಠ, ಅಂಕೋಲೆ, ಕಲ್ಲುಪ್ಪು, ರಜನಿ, ಶ್ರೀಗಂಧ, ಗುಳ್ಳದಕಾಯಿ, ತಗರಗಳನ್ನು ಸೇರಿಸಿ ನಸ್ಯ ಮಾಡುವುದು.

೧೪. ಸುರದುಂಬೆ, ಎಕ್ಕೆಯೆಲೆ, ನಾಗರಬಜೆ, ಉಳ್ಳಿ, ಹಾಲಿವಾಲದ ಚಿಗುರು, ಮೆಣಸುಗಳನ್ನು ನರಮೂತ್ರದಲ್ಲಿ ಸೇರಸಿ ನಸ್ಯ ಮಾಡುವುದು.

೧೫. ಕಗ್ಗೊರಲೆ, ಬುಗುಡಿ, ಮಿಟಲೆ ಮತ್ತು ನುಗ್ಗೆಯ ಎಲೆಗಳೊಡನೆ ಮೆಣಸಿನ ಪುಡಿಯನ್ನು ಸೇರಸಿ ಪ್ರತ್ಯೇಕವಾಗಿ ನಸ್ಯಮಾಡುವುದು.

---

೫೪. ಜಿ. ಎನ್. ಚಕ್ರವರ್ತಿ ; **ಸಂಸ್ಕೃತ – ಕನ್ನಡ ನಿಘಂಟು** ; ಪುಟ. ೫೫೭
ನಸ್ಯ = ಮೂಗಿಗೆ ಹಿತಕರವಾದ ಔಷಧ ಶೇಚನ.

೧೬. ಮೆಣಸಿನ ಪುಡಿಯನ್ನು ಅವರೆಯ ರಸದೊಂದಿಗೆ ನಸ್ಯಮಾಡುವುದು.

೧೭. ಹಾಗಲ, ಲೊಕ್ಕಿ, ಚಿಕ್ಕಣಿಕೆ, ಅವರೆ, ನಾಗಲತೆ, ಕಾಕೆಗಿಡಗಳ ಎಲೆಗಳನ್ನು ಸೇರಿಸಿ ಮೆಣಸಿನ ರಸದೊಂದಿಗೆ ನಸ್ಯ ಮಾಡುವುದು.

೧೮. ಗಜ್ಜುಗ, ನೆಲಾವರೆ, ತುಂಬೆಯ ಎಲೆ ಇವುಗಳಲ್ಲಿ ಯಾವುದಾದರೊಂದನ್ನು ಮೆಣಸಿನೊಡನೆ ಸೇರಿಸಿ ನಸ್ಯ ಮಾಡುವುದು.

೧೯. ದಾಂಗುಡಿಯನ್ನು ನೀರಿನಲ್ಲಿ ಅರೆದು ಮೂಗಿನೊಳಗೆ ಬಿಡುವುದು.

೨೦. ಇಪ್ಪೆಮರದ ತೊಗಟೆಯನ್ನು ಏಳುರಾತ್ರಿ ಆಡಿನ ಮೂತ್ರದಲ್ಲಿ ನೆನೆಸಿ, ತ್ರಿಕಟುಕ, ಸೈಂಧವ, ಬಜೆಗಳನ್ನು ಸೇರಿಸಿ ಮೂಗಿನಲ್ಲಿ ಬಿಡುವುದು.

೨೧. ಕರ್ಕೋಟಕಿ ಗಡ್ಡೆಯೊಂದಿಗೆ ಆಡಿನ ಮೂತ್ರವನ್ನು ಸೇರಿಸಿ ನಸ್ಯ ಮಾಡುವುದು.

ಹೀಗೆ ಅನೇಕ ಪ್ರಕಾರಗಳಲ್ಲಿ ನಸ್ಯವನ್ನು ತಯಾರಿಸಿ ಸರ್ಪದಷ್ಟನ ಮೂಗಿಗೆ ಹಿಡಿದು ಉಪಚಾರ ಮಾಡುವುದರಿಂದ ಆತನ ವಿಷವು ಪರಿಹಾರವಾಗಿ ಬದುಕುಳಿಯುತ್ತಾನೆ ಎಂದು ಮಂಗರಾಜನು ಅಭಿಪ್ರಾಯಪಡುತ್ತಾನೆ.

'ಖಗೇಂದ್ರಮಣಿ ದರ್ಪಣಂ'ನ ಅಷ್ಟಮಾಧಿಕಾರವನ್ನು 'ಲೇಪನ ಪ್ರಕರಣ' ಎಂದು ಹೆಸರಿಸಿ, ಸರ್ಪವು ಕಚ್ಚಿದಾಗ ಉಂಟಾದ ಗಾಯದ ಮೇಲೆ ಲೇಪನ ಮಾಡಬೇಕಾದ ಔಷಧಗಳನ್ನು ತಯಾರಿಸಬೇಕಾದ ಕ್ರಮಗಳನ್ನು ಹೇಳುತ್ತಾನೆ.

ಕಂ॥

"ಕೋಪಾಟೋಪದೆ ಫಣಿ ಪಿಡಿ
ದಾ ಪಲ್ಗಳ್ ನಟ್ಟ ತಾಣದೊಳ ಮರ್ದುಗಳಂ
ಲೇಪಿಸೆ ಸಮಂತ್ರಕಂಗಳ್
ಲೋಪಮನೆಯ್ದಿಸುಗುಮುಗ್ರವಿಷವಿಕ್ರಮಮಂ ॥೮೦೨॥"[೫೫]

ಕೋಪಾಟೋಪದಿಂದ ಕೂಡಿದ ಸರ್ಪವು ಕಚ್ಚಿದಾಗ ಹಲ್ಲುಗಳು ನಟ್ಟ ಜಾಗದಲ್ಲಿ ಮಂತ್ರದೊಂದಿಗೆ ಮದ್ದುಗಳನ್ನು ಲೇಪಿಸುವುದರಿಂದ ಉಗ್ರವಾದ ವಿಷವು ಶಮನವಾಗುವುದು. ಎಂದು ಹೇಳುತ್ತಾನೆ.

೧. ಸಿರೀಸದ ಹೂವು, ಮಂಜಿಟಿಗೆ, ಹಿಂಗು, ಕರಂಜದ ಬೀಜ, ದೇವದಾರು, ಅರಿಸಿನ, ತ್ರಿಕಟುಕ, ತ್ರಿಫಲೆ, ಬಿಳಿಮಣಿಶಿಲೆ, ಕರ್ಣಿಕೆ, ಅಂಬರ, ಗರುಡ, ಉಗ್ರಗಂಧಿ, ಬಿಳಿಸಾಸುವೆ, ಕೊರೆಯಕ್ಕಿ, ದಾರ್ವಿಗಳನ್ನು ಆಡಿನ ಮೂತ್ರದಲ್ಲಿ ಸೇರಿಸಿ ಲೇಪಿಸುವುದು.

೨. ಅರಿಸಿನ, ಕುಂಕುಮ, ಅರಿದಳ, ತಗರ, ಉತ್ಪಲಗಳನ್ನು ಬೆರೆಸಿ ಪದ್ಮಕೇಸರದೊಂದಿಗೆ ಲೇಪಿಸುವುದು.

೩. ಕರ್ಪೂರ, ಪಾತಾಳಗರುಡ, ಹಾಗಲಗಳನ್ನು ಅಂಬಿಲದಲ್ಲಿ ಸೇರಿಸಿ ಗಾಯಕ್ಕೆ ಲೇಪಿಸುವುದು.

---

೫೫. A. Venkat Rao and Pandit H. Shesha Ayyangar (Editors); **Khagendramani Darpanam of Mangaraja** ; Page. 152

೪. ಬೆಲ್ಲದೊಡನೆ ಸುಣ್ಣ, ಇಲ್ಲಣ, ಮೆಣಸು, ಅರಿಸಿನ, ಕರಿಯೆಲೆಗಳನ್ನು ನೀರಿನಲ್ಲಿ ಮರ್ದಿಸಿ ಲೇಪನ ಮಾಡುವುದು.

೫. ಕುಂಕುಮ, ಶ್ರೀಗಂಧ, ಗೋವಿನ ಸಗಣಿ, ಸೈಂಧವ, ರಸಾಂಜನ, ಹಿಪ್ಪಲಿಗಳನ್ನು ಮಿಶ್ರಮಾಡಿ ಲೇಪನ ಮಾಡವುದು.

೬. ಮರಗರುಕೆ, ಮೂಕೊರತಿ, ಭಾಸ್ಕರಚಿತ್ರಕ, ನುಗ್ಗೆ, ತವಸೆ, ಆರಗ್ವಧ, ಕಸ್ತೂರಿ, ಬ್ರಹ್ಮದಂಡೆ, ಬಿಲ್ವ, ಗುರುಗಂಜಿಗಳನ್ನು ಅಂಬಿಲದಲ್ಲಿ ಸೇರಿಸಿ ಲೇಪಿಸುವುದು.

೭. ಬಜೆ, ಅತಿಬಜೆ, ಅಂಕೋಲ, ರುಜೆ, ತಗರ, ಕಾಡೆ, ಅರಿಸಿನಗಳನ್ನು ಅಣಲೆಕಾಯೊಡನೆ ಸೇರಿಸಿ ಲೇಪಿಸುವುದು.

೮. ಕರ್ಕಟಕ, ತಾಳಕ, ಎಕ್ಕೆಯ ಸಿಪ್ಪೆ, ಕುನಟಿ, ಅರಿಸಿನ, ಕುಂಕುಮಕೇಸರಿ, ಕಣಜದ ಹಿಕ್ಕೆ, ಗೋಸುಂಬೆಯ ಹಿಕ್ಕೆಗಳನ್ನು ಸೇರಿಸಿ ಲೇಪಿಸುವುದು.

೯. ಎಕ್ಕೆ, ಕಣಗಿಲೆಗಳನ್ನು ಲೇಪಿಸುವುದು.

೧೦. ಇಂದ್ರವಾರುಣಿ, ಗಿರಿಕರ್ಣಿಕೆ, ಈಶ್ವರಿ, ತಗರ, ಅಹಸ್ಕರ, ನೀಲಿ, ದೇವದಾಳಿ, ಕಹಿಸೋರೆ, ಕಾಡುಹೀರೆಗಳನ್ನು ಅರೆದು ಹಚ್ಚುವುದು.

೧೧. ಅರಿಸಿನ ಬೇರು, ಈಶ್ವರಿ, ಹತ್ತರಿಕೆ, ಅಪಾಮಾರ್ಗ (ಉತ್ತರಣೆ), ಸೊಗದೆ, ನೀಲಿಗಳನ್ನು ಸಕ್ಕರೆಯೊಡನೆ ಸೇರಿಸಿ ಲೇಪನ ಮಾಡಿದರೆ ಹಾವಿನ ವಿಷವೂ, ಚೇಳಿನ ವಿಷಹಾರವಾಗುವುದು.

೧೨. ಅರಿಸಿನ, ಕುಂಕುಮಕೇಸರಿ, ಅಣಿಲೆ, ವಸಂತಪುಷ್ಪ, ರುಜೆಗಳನ್ನು ಸೇರಿಸಿ ಲೇಪಿಸುವುದು.

೧೩. ಸೈಂಧವ, ಶಿಲಾಧಾತು (ಮಣಿಶಿಲೆ), ಗೋವಿನ ಸಗಣಿ, ಅಲತಗೆಯ ರಸವನ್ನು ಹಚ್ಚುವುದು.

೧೪. ಕುಂಕುಮಕೇಸರಿ, ಶಿಲಾಜಿತು, ಅರಿದಾಳ, ಕುಸುಬೆಗಳನ್ನು ನೀರಿನಲ್ಲಿ ಕಡೆದು ಹಚ್ಚುವುದು.

೧೫. ಸೇಗುಡಿತೆಯ ಮುಳ್ಳು, ಕೊಗ್ಗಿ, ದಾಗುಡಿ, ಚಿತ್ತರಟಿ, ಪಾಪಡಿಗಳೊಂದಿಗೆ ಪ್ರಾಗುಕ್ತ ಬೇರನ್ನು ಕತ್ತೆಯ ಮೂತ್ರದಲ್ಲಿ ಸೇರಿಸಿ ಲೇಪನ ಮಾಡುವುದು.

೧೬. ಮೆಣಸಿನ ಪುಡಿ, ನಾಂಗುಲಿಯ ಗಡ್ಡೆ, ಪಾಟಲಿಯ ಬೇರುಗಳನ್ನು ಅಂಬಿಲದಲ್ಲಿ ಅರೆದು ಲೇಪಿಸುವುದು.

೧೭. ಎಕ್ಕೆಯ ಹಾಲು, ಮುತ್ತುಗದ ಬೀಜದ ತಿರುಳುಗಳನ್ನು ಏಳು ಬಾರಿ ನೀರಿನೊಡನೆ ಸೇರಿಸಿ, ಶೋಧಿಸಿ ಹಚ್ಚುವುದು.

೧೮. ಎಕ್ಕದ ಹಣ್ಣೆಲೆಯ ರಸ, ಅರುಟಾಳದ ಬೀಜ, ಮುಸ್ತೆ, ಲವಣಗಳನ್ನು ಸೇರಿಸಿ ಅರೆದು ಲೇಪಿಸುವುದು.

೧೯. ಅವರೆಯ ಎಲೆಯನ್ನು ಅಂಬಿಲದಲ್ಲಿ ಮಿಶ್ರಮಾಡಿ ಹಚ್ಚುವುದು.

೨೦. ಬಿಳಿ ತುರುವೆಯನ್ನು ನೀರಿನಲ್ಲಿ ಅರೆದು ಹಾವು ಕಚ್ಚಿದ ಜಾಗದಲ್ಲಿ ಹಚ್ಚುವುದು.

೨೧. ರವಿವಾರದಂದು ಗಜ್ಜುಗದ ಬೇರನ್ನು ಮಜ್ಜಿಗೆಯೊಡನೆ ಮರ್ದಿಸಿ ಹಚ್ಚುವುದು.

೨೨. ಮೆಣಸು, ಜೇಪಾಳದ ತಿರುಳುಗಳನ್ನು ಏಳು ನಿಂಬೆಯ ಹಣ್ಣಿನರಸದಲ್ಲಿ ಬೆರೆಸಿ ಲೇಪಿಸುವುದು.

೨೩. ಕಹಿಸೋರೆಯ ಕಾಯಿಯಲ್ಲಿ ಲವಣವನ್ನು ಬೆರೆಸಿ, ಎಕ್ಕೆಯ ಹಾಲಿನಲ್ಲಿ ಸೇರಿಸಿ ಹಚ್ಚುವುದು.

೨೪. ಪಾದರಸವನ್ನು ದೊಡ್ಡ ಹುಲಗಿಲ ರಸದೊಡನೆ ಮರ್ದಿಸಿ ಸಗಣಿಯ ರಸದೊಡನೆ ಲೇಪಿಸುವುದು.

೨೫. ಬೆಳ್ಳುಳ್ಳಿ, ಮೆಣಸು, ಉಪ್ಪು, ಶುಂಠಿ, ಗಜ್ಜುಗ, ಇಲ್ಲಣ, ಹುಲಿಗಿಲಗಳನ್ನು ಅಂಬಿಲದಲ್ಲಿ ಅರೆದು ಲೇಪಿಸುವುದು.

೨೬. ಸಾಸಿವೆ, ಮೆಣಸು, ಉಳ್ಳಿಗಳನ್ನು ಅರೆದು ಸಗಣಿ ಹಾಗೂ ಮೂತ್ರಗಳಲ್ಲಿ ಸೇರಿಸಿ, ಅದರಲ್ಲಿ ಕಾಯ್ದ ಕಬ್ಬಿಣವನ್ನು ಅದ್ದುವುದು. ಇದನ್ನು ಲೇಪಿಸದರೆ ರಾಮಬಾಣದಂತೆ ಎಂತಹ ವಿಷವನ್ನೂ ದೂರಮಾಡುವುದು.

“ಇದಮೋಘಂ ವೈದ್ಯಶಾಸ್ತ್ರಾರ್ಣವದೊಳೆಸೆವ ತತ್ಸಾರಮಂ ಸ್ವಲ್ಪಮಂ ಪೇ
ಟ್ದಿ ದಯಾಂಭೋರಾಶಿ ಮಂಗಂ ತಿಳಿಪಿದನಿಳೆಗಂ ನೋಟಿಕ್ಕೊಡಾರ್ಯೆದು ನಿಚ್ಚಂ
ಮುದದಿಂದಂ ಮಾಟ್ಪುದಿಂತೀ ಕ್ರಿಯೆಗಳನೆಸೆವೀ ಲೇಪನಾಖ್ಯಂಗಳಂ ಪೆಂ
ಪೊದವಲ್ ಧರ್ಮಾರ್ಥ ಕಾಮಂಗಳನಱಸುವವಂ ಸರ್ವಲೋಕೈಕ ಮಾನ್ಯಂ ||೮.೬೪||”[೫೬]

ಹೀಗಿರುವ ವೈದ್ಯಶಾಸ್ತ್ರವೆಂಬ ಸಮುದ್ರದಲ್ಲಿ ಸಾರರೂಪವಾದ ಸ್ವಲ್ಪಭಾಗವನ್ನು ಮಾತ್ರ ಮಂಗರಾಜನು ತಿಳಿಸಿರುವನು. ವಿಚಾರಿಸಿ ನೋಡಿದರೆ ನಿತ್ಯವೂ ಅದನ್ನು ಅರಿತು ಮಾಡುವ ಈ ಲೇಪನಾದಿ ಚಿಕಿತ್ಸಾ ಕ್ರಮಗಳನ್ನು ಮಾಡುವವನು ಸರ್ವಲೋಕೈಕ ಮಾನ್ಯನಾಗುತ್ತಾನೆ. ಎಂದು ಎಂಟನೆಯ ಅಧಿಕಾರದ ಕೊನೆಯಲ್ಲಿ ಅಧಿಕಾರದ ಕೊನೆಯಲ್ಲಿ ಮಂಗರಾಜನು ಉಪದೇಶಿಸುತ್ತಾನೆ.

ಮುಂದುವರೆದು, ಒಂಭತ್ತನೆಯ ಅಧಿಕಾರದಲ್ಲಿ 'ಅಂಜನ, ಪಾನ, ನಸ್ಯ, ಲೇಪನ'ಗಳನ್ನು ತಿಳಿಸುತ್ತಾನೆ. ಅಧ್ಯಾಯದ ಆರಂಭದಲ್ಲಿ ಮೋಕ್ಷಲಕ್ಷ್ಮೀಯ ಒಡೆಯನೆನಿಸಿದ ಶಾಂತಿನಾಥ ತೀರ್ಥಂಕರನಿಗೆ ವಂದಿಸಿ, ಎಲ್ಲರನ್ನೂ ರಕ್ಷಿಸಲಿ ಎಂದು ಬೇಡಿಕೊಳ್ಳುತ್ತಾನೆ.

“ಮುಂ ಪೇಟ್ದಿಂ ಪಾನಾದಿಗ
ಳಂ ಪಿರಿದುಂ ಸ್ಪಷ್ಟಮಪ್ಪಿನಂ ಪ್ರತ್ಯೇಕಂ
ಸೊಂಪೆಸೆಯಲ್ಕೆಲ್ಲಾ ಕ್ರಿಯೆ
ಗಂ ಪುದುವೆನಿಸಿರ್ಪ ಯೋಗಮಂ ಪ್ರಟಿಸುವೆಂ ||೯.೦೨||

ಅನುಯೋಗಚತುಷ್ಟಯ ಭಾ
ವನೆಯಿಂ ಭವವಿಷಮದೆಂತು ಪರೆಗುಮದಂತಂ
ಜನ ನಸ್ಯ ಪಾನಂ ಲೇಪನದಿಂ
ಖಳಫಣಿಕುಳೋಗ್ರ ವಿಷಮುಂ ಕಿಡುಗುಂ ||೯.೦೩||”[೫೭]

೫೬. A. Venkat Rao and Pandit H. Shesha Ayyangar (Editors) : **Khagendramani Darpanam of Mangaraja ;** Page. 162

ಈ ಮುಂಚೆ ಪಾನ, ಲೇಪನ, ನಸ್ಯ ಮತ್ತು ಅಂಜನಗಳ ವಿಚಾರಗಳನ್ನು ಪ್ರತ್ಯೇಕವಾಗಿ ಚರ್ಚಿಸಿರುವ ಮಂಗರಾಜನು ಈ ನಾಲ್ಕು ಪ್ರಕ್ರಿಯೆಗಳಿಗೆ ಒಂದೇ ಮದ್ದಿನಲ್ಲಿ ಚಿಕಿತ್ಸೆಯನ್ನು ನೀಡುವ ಕ್ರಮವನ್ನು ಹೇಳುವುದಾಗಿ ತಿಳಿಸುತ್ತಾನೆ. ಆತ್ಮಧ್ಯಾನ ಮತ್ತು ಪಾನ, ಲೇಪನ, ನಸ್ಯ, ಅಂಜನ ಕರ್ಮಗಳಿಂದ ಭವದಲ್ಲಿನ ವಿಷವು ಪರಿಹಾರವಾಗುವುದು. ಚತುರ್ಬಲಗಳಿಂದ ಶತ್ರುಸೈನ್ಯದ ಹುಟ್ಟಡಗಿಸುವಂತೆ ಈ ನಾಲ್ಕು ಕರ್ಮಗಳು ವಿಷದ ಹುಟ್ಟನ್ನು ಅಡಗಿಸುತ್ತವೆ ಎಂದು ಹೇಳುತ್ತಾನೆ.

೧. ದೇವದಾರು, ಮಧುಕ, ತ್ರಿಯುಗ್ಮದ ತೊಗಟೆ, ಸಿಂದುರುಹ, ತ್ರಿಕಟುಕ, ವಿಳಂಗ, ಹಿಂಗು, ಕಿರುದೆಂಗುಗಳನ್ನು ಸರಿಸಮನಾಗಿ ಸೇರಿಸಿ ತುಪ್ಪದೊಡನೆ ಚತುಃಕರ್ಮಗಳನ್ನು ಮಾಡಲು ಸರ್ವ ವಿಷಗಳೂ ಪರಿಹಾರವಾಗುತ್ತವೆ.

೨. ಎಕ್ಕೆ, ದೇವದಾರು, ಕುಟಜ, ಬಜೆ, ಶ್ರೀಗಂಧ, ಅಂಬೋಧರ, ಕೋಷ್ಠ, ತ್ರಿಕಟುಕ, ಎರಡು ನುಗ್ಗೆ, ಕಟುಕರೋಹಿಣಿ, ತಾಳೀಸಪತ್ರೆ, ಮಾಚಿಪತ್ರೆ, ಗುಗ್ಗುಳು, ಕುರುಟಿಗೆಗಳನ್ನು ಪಂಚಗವ್ಯಗಳೊಂದಿಗೆ ಸೇರಿಸಿ ನಸ್ಯಕರ್ಮಾದಿಗಳನ್ನು ಮಾಡುವುದು.

೩. ತುಳಸಿ, ಅಗರುಶುಂಠಿ, ಪುನರ್ನವಿ, ಉತ್ತರಣೆ, ಅಂಕೋಲ, ವಿಳಂಗ, ಬಿಡುಲವಣ, ಹುಲಿಗಿಲ, ಸೈಂಧವ, ನೀಲಿ, ಕಿರುದೇಗು, ಸೂರ್ಯಕಾಂತಿ, ಇಂದ್ರಕ, ಬಜೆ, ಕೋಷ್ಠ, ತಾಳೀಸಪತ್ರೆ, ಮೃಣಾಲ, ಗೇರು, ನಾಗಕೇಸರ, ಏಲಕ್ಕಿ ಇವೆಲ್ಲವನ್ನೂ ಪುಡಿಮಾಡಿ, ನೀರನ್ನು ಸೇರಿಸಿ ಆಡಿನ ಹಾಲು, ತುಪ್ಪಗಳೊಡನೆ ಕೂಡಿಸಿ, ಮಂದಾಗ್ನಿಯಲ್ಲಿ ಕಾಯಿಸುವುದು. ಅದರಿಂದ ಚತುಃಕರ್ಮಗಳನ್ನು ಮಾಡುವುದು.

೪. ಅರಿಸಿನ, ನುಗ್ಗೆ, ಅಗರು, ರೇಣುಕೆ, ಹಿಂಗು, ಮಣಿಶಿಲೆ, ಮಂಜಿಷ್ಠೆಗಳನ್ನು ಮೂತ್ರದ ಜೊತೆಗೆ ಅರೆದು ಶೃಂಗದಲ್ಲಿಸಿ ಅದನ್ನು ಚತುಃಕರ್ಮಗಳನ್ನು ಮಾಡಲು ಬಳಸುವುದು.

೫. ಲವಣ, ಸಂವರ್ಚಲವಣ, ಬಿಡುಲವಣ, ತ್ರಿಕಟುಕ, ಗೇರು, ಹಿಂಗು, ಸೈಂಧವಗಳನ್ನು ಸೇರಿಸಿ ಚತುಃಕರ್ಮಗಳನ್ನು ಮಾಡುವುದು.

೬. ಕೋಶಾತಕಿ, ಕಹಿಸೋರೆ, ಬಳ್ಳಿಹರುಹೆ, ಹುಲಿಗಿಲ ಬೀಜಗಳನ್ನು ಗೋಮೂತ್ರದೊಡನೆ ಸೇರಿಸಿ ಪಾನಾದಿ ಚತುಃಕರ್ಮಗಳನ್ನು ಮಾಡುವುದು.

೭. ಅರಿಸಿನ ದೇವದಾರು, ತ್ರಿಕಟುಕ ಭಾರಂಗಿ, ವಿಳಂಗ, ಇಂಗು, ಸಿಂಧುರುಹ, ವಜ್ರಿ, ಮಂಜಿಟಿಗೆ ಮಧುಕತ್ರಿತೆಗಳನ್ನು ತುಪ್ಪದಲ್ಲಿ ಸೇರಿಸಿ ಬಿಸಿಮಾಡಿ ಚತುಃಕರ್ಮಗಳನ್ನು ಮಾಡುವುದು.

೮. ಸಿರಿಸದಹೂವಿನ ರಸದೊಂದಿಗೆ ಮೆಣಸು ಹಾಗೂ ಸಕ್ಕರೆಯನ್ನು ಬೆರೆಸಿ ಹಾವುಕಚ್ಚಿದವನಿಗೆ ಚತುಃಕರ್ಮಗಳನ್ನು ಮಾಡುವುದು.

೯. ಸೇಗುಡಿತೆಯ ಮುಳ್ಳು, ಕೊಗ್ಗಿ, ದಾಗುಡಿ, ಚಿತ್ತರಟಿ, ಪಾಪಡಿ, ಪ್ರಾಗುಕ್ತ ಬೇರನ್ನು ಕತ್ತೆಯ ಮೂತ್ರದೊಡನೆ ಸೇರಿಸಿ ಲೇಪಿಸುವುದು.

---

೫೭. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೧೪೦

೧೦. ನಾಗರ, ಮಾಗಧ, ಮೆಣಸು, ಬಜೆ, ಬಾಗೆಯ ಬೀಜ, ಅಶ್ವಗಂಧಿಗಳನ್ನು ಸೇರಿಸಿ ಬಾಳೆಯ ರಸದಲ್ಲಿ ಸೇರಿಸಿ ನೆರಳಿನಲ್ಲಿ ಒಣಗಿಸಿ ತೆಗೆದಿಟ್ಟು ಹಾವು ಕಚ್ಚಿದವನಿಗೆ ಚತುಃಕರ್ಮಗಳನ್ನು ಮಾಡುವುದು.

೧೧. ಸಿರೀಸದ ಬೀಜವನ್ನು ಅದರ ರಸದೊಂದಿಗೆ ಇಪ್ಪತ್ತೊಂದು ದಿನಗಳವೆರೆಗೆ ನೆನೆಸಿ, ಮೆಣಸು, ಸದಗುಪ್ಪೆ, ಸಕ್ಕರೆಗಳನ್ನು ಸೇರಿಸಿ, ಅರೆದು ಉಂಡೆಗಳನ್ನು ಮಾಡಿ ಇಟ್ಟುಕೊಳ್ಳುವುದು. ಹಾವು ಕಚ್ಚಿದವನಿಗೆ ಚತುಃಕರ್ಮಗಳನ್ನು ಮಾಡುವುದು.

೧೨. ಮಡುವಾಗಲು, ನೀಲಿ, ಪಾತಾಳಗರುಡ, ಅಂಕೋಲೆ, ಚಾಂಪೇಯ ಧಾತ್ರೀಮೂಲ, ಕಾಸರಿಕೆಯ ಫಲ, ಕೌಡೆ, ಚಿನ್ನಧಾರ, ಉಗುಣಿಯ ಎಲೆ ಇವುಗಳನ್ನು ನಿಂಬೆಯ ರಸದೊಡನೆ ಸೇರಿಸಿ ಲೇಪಿಸುವುದು.

ಸಕಲ ಮುನಿಗಳು ಅಂತರ್ದೃಷ್ಟಿಯಿಂದ ಅರಿತುಕೊಂಡು ಹೇಳಿದ ಈ ಸಕಲ ವಿದ್ಯೆಯನ್ನು ಈ ಪ್ರಕರಣದಲ್ಲಿ ವಿಷನಿವಾರಣೆಯ ಕ್ರಮಗಳ ರೂಪದಲ್ಲಿ ನಿವೇದಿಸಿದ್ದೇನೆ ಎಂದು ಕವಿ ಮಂಗರಾಜನು ನವಮಾಧಿಕಾರದ ಕೊನೆಯಲ್ಲಿ ಹೇಳಿಕೊಳ್ಳುತ್ತಾನೆ.

'ಮಂಡಲಸರ್ಪ ಪ್ರಕರಣಂ' ಎಂಬ ಹತ್ತನೆಯ ಅಧಿಕಾರದಲ್ಲಿ ಪುರುದೇವರು ಹೇಳಲ್ಪಟ್ಟ ಈ ಲೋಕದಲ್ಲಿನ ಗೋನಸ ಜಾತಿಯ ಹಸರುಗಳನ್ನು ಹೊಂದಿರುವ ಮಂಡಲಸರ್ಪಗಳ ಕ್ರೀಡಾರೂಪ, ಸೌವರ್ಣಕ, ಕರ್ದಮ, ಅಗ್ನಿಮಾಲಿಕೆ, ವಜ್ರಮಾಲಿ, ವಕ್ರಮಾಲಿ, ವೇಣೀಕಂಠ, ಗೋಧಾಸ್ಯ, ಘೋಟಕಾಸ್ಯ, ಶಕಟಾಸ್ಯ, ಮಾರ್ಜರಾಸ್ಯ ಮುಂತಾದ ಹದಿನೆಂಟು ಜಾತಿಯ ಸರ್ಪಗಳ ವರ್ಣಭೇದವನ್ನೂ, ಕಚ್ಚಿದ ಮೇಲೆ ಉಂಟಾಗುವ ಪರಿಣಾಮ, ಲಕ್ಷಣಗಳನ್ನು, ಹಾಗೂ ಅದಕ್ಕೆ ಚಿಕಿತ್ಸಾ ಕ್ರಮಗಳನ್ನು ನಿರೂಪಿಸುತ್ತಾನೆ (ನೋಡಿ ಕೋಷ್ಟಕ ೫.೯) ಕವಿ ಮಂಗರಾಜನು.

ಕಂ॥ **"ವರಮೆನಿಪ ದೇವದಾಳಿಯ**
ನಿರುಪಮಮೆನಿಸಿರ್ದ ಸೋಮರಾಜಿಯ ಬೀಜೋ
ತ್ಕರಮಂ ತುಪ್ಪದೊಳಂ
ಮಧು ಬೆರಸಿರಲೀವುದು ಸಮಸ್ತ ವಿಷಹರಮಕ್ಕುಂ ॥೧೦.೪೦॥"[೫೮]

ಮುಂದುವರೆದು, ದೇವದಾಳಿ ಮತ್ತು ಸೋಮರಾಜಿಯ ಬೀಜಗಳನ್ನು ತುಪ್ಪ ಅಥವಾ ಜೇನುತುಪ್ಪಗಳೊಡನೆ ಕೊಟ್ಟರೆ ಸಮಸ್ತ ಮಂಡಲ ಸರ್ಪಗಳ ವಿಷವು ಒಂದೇ ಔಷಧದಿಂದ ನಿರ್ಮೂಲವಾಗುವುದು ಎಂದು ಹೇಳುತ್ತಾನೆ. ಅಲ್ಲದೇ ಅಂಜನ, ಪಾನ, ಲೇಪನಗಳ ಔಷಧ ಕ್ರಮಗಳನ್ನೂ ತಿಳಿಸುತ್ತಾನೆ. ಆಡಿನ ಮೂತ್ರವನ್ನು ಬಿಸಿ ಮಾಡಿ, ಅದರಿಂದ ಗಾಯಗಳನ್ನು ಶುದ್ಧಮಾಡಿ, ಜೌಗು ಪ್ರದೇಶದಲ್ಲಿ ದೊರೆಯುವ ನೀರ್ಗಡವಗಳನ್ನು ಸುಟ್ಟು ಹಚ್ಚುವುದರಿಂದ ವಿಷ ನಿವಾರಣೆಯಾಗುವುದು. ಇಂದ್ರವಾರುಣಿಯ ಬೇರನ್ನು ತುಪ್ಪದಲ್ಲಿ ಕರೆದು, ಅನಂತ ನಾಯಿಬೇಲದ ಕರಿಯ ಜೊತೆಗೆ ಸೇರಿಸಿ ಲೇಪಿಸುವುದು. ಹೀಗೆ ಮಂಡಲಸರ್ಪಗಳ ವಿಷಕ್ಕೆ ಅನೇಕ ಪ್ರಕಾರದ ಔಷಧ ಕ್ರಮಗಳನ್ನು ಮಂಗರಸನು ಪ್ರಸ್ತಾಪಿಸುತ್ತಾನೆ.

---

೫೮. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೧೫೨

ಕೋಷ್ಟಕ ೫.೬

ಅ. ಸಂ.	ಸರ್ಪದ ಹೆಸರು	ಸರ್ಪದ ಲಕ್ಷಣ	ಸರ್ಪದಷ್ಟನ ಲಕ್ಷಣಗಳು	ವಿಷಕ್ಕೆ ಪರಿಹಾರ ತಂತ್ರಗಳು	ಪಠಿಸಬೇಕಾದ ಮಂತ್ರ
೧	**ಕ್ರೀಡಾರೂಪ**	ದೊಡ್ಡಮಂಡಲಗಳನ್ನು ಹೊಂದಿದ ಹಳದಿ ಬಣ್ಣದ ದೊಡ್ಡ ಶರೀರವನ್ನು ಹೊಂದಿರುತ್ತದೆ.	ಜ್ವರವುಂಟಾಗುವುದು. ಗಾಯದಿಂದ ಅತೀ ರಕ್ತಸ್ರಾವ ಉಂಟಾಗುವುದು.	ಗಜಹಿಪ್ಪಲಿ, ಉಮ್ಮತ್ತದ ಕಾಯಿ, ದೇವದಾಳಿಯ ಬೀಜಗಳನ್ನು ಜೇನುತುಪ್ಪದೊಡನೆ ಪಾನ, ಲೇಪನ ಮಾಡುವುದು.	ಓಂ ನಮೋ ಭಗವತೇ ತತ್ವಗರುಡಾಯ ಹರ ವಜ್ರಮುಷ್ಟಿ ಜಯಂ ವಾಮಾನಸೀ ಸ್ವಾಹಾ॥ [೫೯]
೨	**ಸೌವರ್ಣಕ**	ಕೆಂಪುವರ್ಣದ ಮಂಡಲಗಳನ್ನು, ಹಳದಿ ಬಣ್ಣದ ದೇಹವನ್ನು ಹೊಂದಿರುತ್ತವೆ.	ರೋಮ ಮೂಲಗಳಿಂದ ರಕ್ತವು ಒಸರುತ್ತದೆ.	ಹಿಪ್ಪಲಿ, ಜೀರಿಗೆ, ಕರಿಜೀರಿಗೆ, ನೆಲಬೇವು, ಕಟುಕರೋಹಿಣಿ, ಜೇನುತುಪ್ಪ, ತಗರ, ಹಣಗಿಲೆ, ಶ್ರೀಗಂಧ, ಉಶೀರ, ಬಿಲ್ವ, ತುಪ್ಪಗಳನ್ನು ಸೇರಿಸಿ ಪಾನ ಮಾಡಿಸುವುದು.	ಓಂ ನಮೋ ಭಗವತೇ ಆದಿತ್ಯಾಯ ಸಾಂ ಸುಂ ಸ್ವಾಹಾ॥ ಓಂ ನಮೋ ಭಗವತೇ ನಾಗೇಂದ್ರವೇತಾಳಿ ಹತಂ ವಜ್ರಯೋಗೇನ ಬಲಂ ಸ್ವಾಹಾ
೩	**ಕರ್ದಮಂ**	ಬಿಳಿ ಮಂಡಲಗಳನ್ನು ಹೊಂದಿದ್ದು, ಅದರ ಸುತ್ತಲೂ ಕಪ್ಪು ಮಂಡಲಗಳನ್ನು ಹೊಂದಿರುತ್ತವೆ. ಹೊಳೆಯುವ ಉದ್ದವಾದ ದೇಹವನ್ನು ಹೊಂದಿರುತ್ತದೆ. ಅತೀ ವೇಗವಾಗಿ ಓಡುತ್ತದೆ.	ದೊಡ್ಡಗಾಯವಾಗಿ ವಿಪರೀತ ಜ್ವರವು ಬರುವುದು. ದೇಹವು ಊದಿಕೊಳ್ಳುವುದು. ವಾಂತಿಯಾಗುವುದು. ಬಾಯಾರಿಕೆ ಉಂಟಾಗುವುದು.	ರೋಹಿಣಿ, ಮಲ್ಲಿಗೆ, ಅರ್ಜುನ, ಅರಿಸಿನ, ನಾಗಕೇಸರ, ಮಧು, ರುಜೆ, ಮದನ, ಮಾಗಧ, ಮಧುಕಾಜ್ಯ, ದೇವದಾರುಗಳನ್ನು ಸೇರಿಸಿ ಪಾನ ಮಾಡುವುದು.	ಓಂ ನಮೋ ಭಗವತೇ ರುದ್ರಾಯ ಹನ ಹರ ಫಟ್ ಭೂಮ್ಯಾಂಗಚ್ಛ ಮಹಾವಿಷ ಸ್ವಾಹಾ ॥
೪	**ಅಗ್ನಿಮಾಲಿಕ**	ಅತಸೀ ಹೂವಿನಂತೆ ಮಂಡಲಗಳನ್ನು ಹೊಂದಿರುತ್ತದೆ.	ಅತಿಯಾದ ಜ್ವರವು ಕಾಣಿಸಿಕೊಳ್ಳುವುದು. ಬಾಯಾರಿಕೆಯೂ, ವಂತಿಯೂ, ತಲೆಶೂಲೆ ಉಂಟಾಗಿ ದೇಹದ ಕಾಂತಿಯು ಕ್ಷೀಣಿಸುವುದು.	ತರಗ, ದಂತಿ, ಪುನರ್ನವಿ, ಶ್ರೀಗಂಧ, ಅಂಕೋಲೆ, ಕಟುಕ, ಸೋಮರಾಜಿನ ಪುಡಿ, ಮಧ್ವಾಜ್ಯ ಕೇಸರ ಗಳನ್ನು ಕುಡಿಸಿ, ಗಾಯಕ್ಕೆ ಲೇಪಿಸುವುದು.	ಓಂ ನಮೋ ಭಗವತೇ ಆದಿತ್ಯಾಯ ಕರವೀರೋದರ ಸೋಮಾಯ ಹರ ವಿಷಂ ಮುಂಚ ಸರಶ್ಮಿ ಜ್ಞಾಪಯತಿ ಸ್ವಾಹಾ॥

೫೯. A. Venkat Rao and Pandit H. Shesha Ayyangar (Editors) : **Khagendramani Darpanam of Mangaraja** ; Page. 169
ವಚನ॥ "ಈ ಮಂತ್ರದಿಂ ಕ್ರೀಡಾ ಸ್ವರ್ಣಾಭ ವೇಣೀಕಂಠ ಘೋಟಕ ಶಕಟಾಜಾಮುಪ್ರಮುಖವೆಂಬ ಗೋನಸ ವಿಶೇಷ ವಿಷಾಪಹಮಕ್ಕುಂ"
ಕ್ರೀಡಾ, ಸ್ವರ್ಣಾಭ, ವೇಣೀಕಂಠ, ಘೋಟಕ, ಶಕಟ, ಅಜಮುಖವೆಂಬ ಗೋನಸ ಹಾವುಗಳ ವಿಷವು ಈ ಮಂತ್ರದಿಂದ ಪರಿಹಾರವಾಗುವುದು.

೫	**ವಜ್ರಮಾರಿ**	ವಜ್ರದ ಹೊಳಪಿನಚಿತೆ ಈ ಸರ್ಪದ ದೇಹವು ಹೊಳೆಯುತ್ತದೆ.	ರಕ್ತಸ್ರಾವ, ಅತಿಯಾದ ನೋವು, ವಾಂತಿ, ಮೂರ್ಛೆ ಈ ರೀತಿಯ ಲಕ್ಷಣಗಳು ಕಾಣುವವು.	ಮಂತ್ರವಾದಿಯು ಮಂತ್ರಪೂರಿತ ತುಪ್ಪದಿಂದ ಗಾಯವನ್ನು ತೊಳೆದು ಉಪಚರಿಸುವುದು.	ಓಂ ನಮೋ ಭಗವತೇ ಗರುಡಾಯ ಹನ ವಜ್ರಮುಷ್ಟಿ ಪ್ರಹರಣಾಯ ನಮಃ ಸಕ್ರಃ ಮಿತಯ ಸ್ವಾಹಾ ॥
೬	**ವಕ್ರಮಾಲಿ**	ಅರ್ಧಚಂದ್ರಾಕೃತಿಯ ಹಲ್ಲುಗಳು, ಅತೀದೀರ್ಘವಾದ ದೇಹವನ್ನು ಹೊಂದಿದ್ದು, ತಲೆಯನ್ನು ಮೇಲೆತ್ತಿ ಓಡುವುದು.	ದೇಹವು ಊದಿಕೊಳ್ಳುವುದು. ಮಾರನೆಯ ದಿನವೂ ಬಾವು ಹಾಗೆಯೇ ಇದ್ದರೆ ರೋಗಿಯು ಸಾವಿಗೀಡಾಗುವನು.	ಮಂತ್ರೌಷಧಗಳು ಕಾಪಾಡಲಾರವು.	
೭	**ವೇಣೀಕಂಠ**	ನಸುಗೆಂಪು, ಶ್ಯಾಮಲ, ಬಿಳಿ ಬಣ್ಣದ್ದಾಗಿರುತ್ತದೆ. ದೊಡ್ಡ ದೇಹವನ್ನು ಹೊಂದಿರುತ್ತದೆ.	ರಕ್ತಸ್ರಾವವುಂಟಾಗುವುದು. ಶರೀರವು ಬಾತುಕೊಂಡು ಶೀತದಿಂದ ಕೂಡಿರುವುದು. ರೋಗಿಯು ಏಳು ದಿನಗಳಲ್ಲಿ ಶೋಚನೀಯ ಸ್ಥಿತಿಯನ್ನು ತಲುಪುವನು.	ಕೂಡಲೆ ಗರುಡನ ಗರಿಯಿಂದ ಗಾಯವನ್ನು ಶುದ್ಧಗೊಳಿಸಿ, ಮಂತ್ರವನ್ನು ಪಠಿಸಬೇಕು.	ಓಂ ನಮೋ ಭಗವತೇ ರುದ್ರಾಯ ಕಪಾಲಹಸ್ತಾಯ ನಿರ್ವಿಷಂ ಕುರು ಸ್ವಾಹಾ ॥
೮	**ಗೋಧಾಸ್ಯ**	ದಪ್ಪವಾದ ದೀರ್ಘದೇಹವನ್ನು ಹೊಂದಿದ್ದು ನೋಡಿದರೆ ಭಯಬೀಳುವಂತಹ ತಲೆಯನ್ನು ಹೊಂದಿರುವುದು. ಕೆಲವು ಬಾರಿ ರಾಕ್ಷಸಾಕೃತಿಯನ್ನು ತಾಳುವುದು. ಆದುದರಿಂದ ಇದಕ್ಕೆ ಈ ಹೆಸರು ಬಂದಿರುವುದು.	ವಿಷವು ಅತಿಯಾದ ಉರಿಯಿಂದ ಕೂಡಿರುತ್ತದೆ. ದಷ್ಟನು ಅಗ್ನಿಯಲ್ಲಿ ಬಿದ್ದವನಂತೆ ಒದ್ದಾಡುತ್ತಾನೆ.	ಪಡುವಲಕಾಯಿ, ಕಪ್ಪಿಕಚ್ಚು, ಬ್ರಹ್ಮದಂಡೆ, ಗುಗ್ಗಳ, ತುಪ್ಪ, ಮಧುಕ, ನಿಂಬೆಬೀಜ ಮತ್ತು ಕದಂಬಗಳನ್ನು ಸೇರಿಸಿ ಪಾನ, ಲೇಪನ ಮಾಡಿಸುವುದು.	ಓಂ ನಮೋ ಭಗವತೇ ನೀಲಕಂಠಾಯ ಚಿರಿ ಪಕ್ಷಿಣಿ ಮುಂಚ ಸ್ವಾಹಾ ॥
೯	**ಘೋಟಕ**				
೧೦	**ಶಕಟ**	ದೇಹದ ಮೇಲೆ ನೀಲಿ ಲೋಹದಂತಹ ಮಂಡಲಗಳನ್ನು ಹೊಂದಿರುತ್ತದೆ.			

೧೧	**ಅಜಾಮುಖ**	ಮಂಡಲವು ಗುಲಾಬಿ ಬಣ್ಣದ್ದಾಗಿರುತ್ತದೆ. ಇದರ ಕಿವಿಗಳು ಶೃಂಗಗಳಂತೆ ಎದ್ದು ತೋರುವುದರಿಂದ 'ಅಜಾಸ್ಯ' ಎಂಬ ಹೆಸರು ಬಂದಿದೆ.	ಬುದ್ಧಿಭ್ರಮೆಯಾಗುವುದು. ರಕ್ತವಾಂತಿಯ ಲಕ್ಷಣಗಳು ಕಾಣಿಸಿಕೊಳ್ಳುವವವು.	ಉತ್ಪಲ, ರುಜೆ, ತಗರ, ಬ್ರಹ್ಮದಂಡೆ, ಮಂದುದಂತಿ ಕಣ, ನಿಂಬಗಳನ್ನು ಪಾನ, ಲೇಪನ ಮಾಡುವುದು.	ಓಂ ನಮೋ ಭಗವತೇ ರುದ್ರಾಯ ಏಹಿ ಭಗವತಿ ಕಪಾಲಮಾಧರಿ ಕಹಾ ಕಪಾಲೆ ಹಬ ಸ್ವಾಹಾ ॥
೧೨	**ಮಾರ್ಜಾರಾಸ್ಯ**	ಚಲನವಲನಗಳಿಲ್ಲದೆ ಸೋಮಾರಿಯಂರತೆ ಬಿದ್ದುಕೊಂಡಿರುವುದರಿಂದ 'ಮಾರ್ಜಾರ' ಎಂಬ ಹೆಸರು ಬಂದಿದೆ.	ಅತಿಯಾಗಿ ಜೊಲ್ಲು ಸೋರುವುದು. ವಾಂತಿಯಾಗುವುದು. ತಲೆಯು ಸ್ಥಿರತೆಯನ್ನು ಕಳೆದುಕೊಳ್ಳುವುದು.	ತ್ರಿಕಟುಕ, ಬಜೆ, ಚಿತ್ರಮೂಲ, ನಿಶಿ, ಮಂಜಿಷ್ಠೆ, ತುಪ್ಪ, ಕ್ಷೌದ್ರಗಳನ್ನು ಸೇರಿಸಿ ಪಾನ, ಲೇಪನ ಮಾಡುವುದು.	ಓಂ ನಮೋ ಭಗವತೇ ಶಬರರಾಜಾಯ ಛೇದಯ ವಿಷಂ ಜೀವಯ ಮಹಾ ಶಬರ ಹೂಂ ಸ್ವಾಹಾ ॥
೧೩	**ವತ್ಸಾಸ್ಯ**[೬೦]	ಇದು ಓತಿಕ್ಯಾತದ ಹೊಟ್ಟೆಯಲ್ಲಿ ಹುಟ್ಟುವುದರಿಂದ ವತ್ಸಾಸ್ಯ ಎಂಬ ಹೆಸರು ಬಂದಿದೆ. ಇದರ ಮಂಡಲಗಳು ಚಿತ್ರದಂತಿರುತ್ತವೆ. ಇದರ ವಿಷವು ಅತೀ ಭಯಂಕರವಾಗಿರುತ್ತದೆ.	ಸಾವು ನಿಶ್ಚಿತ	ಇದಕ್ಕೆ ಯಾವ ಮದ್ದು ಮಂತ್ರಗಳ ಚಿಕಿತ್ಸೆಯೂ ಫಲಕಾರಿಯಾಗಲಾರದು.	
೧೪	**ಕುಕ್ಕುಟಾಸ್ಯ**	ಕೋಳಿಯಂತೆ ಶರೀರವು ಉಬ್ಬರಿಸಿರುತ್ತದೆ.	ಸಾವು ನಿಶ್ಚಿತ	ಇದಕ್ಕೆ ಯಾವ ಮದ್ದು ಮಂತ್ರಗಳ ಚಿಕಿತ್ಸೆಯೂ ಫಲಕಾರಿಯಾಗಲಾರದು.	
೧೫	**ಸಂದಷ್ಟ**	ಕೋರೆದಾಡೆಗಳನ್ನು ಹೊಂದಿರುತ್ತದೆ.			
೧೬	**ಶಂಖಾಸ್ಯ**	ಹೆಸರಿಗೆ ತಕ್ಕ ಹಾಗೆಯೇ ಅಕಾರವನ್ನು ಹೊಂದಿರುತ್ತವೆ	ಪದೇ ಪದೇ ಮೂರ್ಛೆ ಹೋಗುತ್ತಾನೆ.	ಮೂರು ದಾರಿ ಕೂಡಿರುವಲ್ಲಿನ ಮಣ್ಣನ್ನು ಹಚ್ಚಿ ಏಳು ರಾತ್ರಿಯವರೆಗೂ ಮಂತ್ರ ಪಠಣ ಮಾಡುವುದರಿಂದ ವಿಷ ನಿವಾರಣೆಯಾಗುವುದು.	ಓಂ ಹ್ರೀಂ ಫಟ್ ಸ್ವಾಹಾ ॥
೧೭	**ದಂತುರ**				
೧೮	**ಮಿಶ್ರಿತ**	ಎಲ್ಲಾ ಸರ್ಪಗಳ ಲಕ್ಷಣಗಳನ್ನೂ ಹೊಂದಿರುತ್ತದೆ.			

(ಮೇಲಿನ ಕೋಷ್ಟಕವನ್ನು 'ಖಗೇಂದ್ರಮಣಿ ದರ್ಪಣಂ'ನ ದಶಮಾಧಿಕಾರದ ೬ರಿಂದ ೩೮ರವರೆಗಿನ ಪದ್ಯ ಹಾಗೂ ಮಂತ್ರಗಳನ್ನು ಅನುಸರಿಸಿ ರಚಿಸಲಾಗಿದೆ.)[೬೧]

೬೦. ಬಿ. ಎಸ್. ಸಣ್ಣಯ್ಯ ; **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೧೫೧ **"ಭವಮಾ ಸರಟೀ ಗರ್ಭೋ। ದ್ಭವಮೇ ವತ್ಸಾಸ್ಯಮೆಂಬುದಕ್ಕಕ್ಕುಂ ಸಂ। ಭವ ಚಿತ್ರಮಂಡಲ ಪ್ರ। ಸ್ವ ವಿರೂಪಾತ್ಯಂತ ತೀವ್ರ ವಿಷಮೆನಿಸಿರ್ಕುಂ॥"**

೬೧. A. Venkat Rao and Pandit H. Shesha Ayyangar (Editors) **: Khagendramani Darpanam of Mangaraja** ; Page. 169 to 175.

ಹೀಗೆ ಹತ್ತನೆಯ ಅಧಿಕಾರದಲ್ಲಿ ೧೮ ಪ್ರಕಾರದ ಉಗ್ರಸರ್ಪಗಳ ವಿಷಕ್ಕೆ ವಿಷನದಾನ ಕ್ರಮಗಳನ್ನು ವಿಶದಪೂರ್ಣವಾಗಿ ಮಂಗರಾಜನು ತಿಳಿಸುತ್ತಾನೆ.

ಮುಂದುವರೆದು, 'ಖಗೇಂದ್ರಮಣಿ ದರ್ಪಣಂ' ಗ್ರಂಥದ 'ವೃಶ್ಚಿಕ ಪ್ರಕರಣ' ಎಂಬ ಏಕಾದಶಾಧಿಕಾರದಲ್ಲಿ ತೀರ್ಥಂಕರರು, ಸಿದ್ಧರು ಹಾಗೂ ಮುನಿಗಳನ್ನು ನೆನೆದುಕೊಂಡು ಚೇಳು ಕಚ್ಚಿದಾಗ ಮಾಡಬಹುದಾದ ವಿಷನಿದಾನ ಕ್ರಮಗಳನ್ನು ಹಾಗೂ ಅವುಗಳಿಗೆ ಮಂತ್ರಗಳನ್ನು ಬೋಧಿಸುತ್ತಾನೆ.

ಮ॥ಸ್ರ॥ **"ಆರುಣಂ ಹೇಮಾಭ ಪೀತಂ ಮಣಿಧವಳ ಹರಿದ್ರಾಭ ಕೃಷ್ಣಂ ಕುಳಿಂದಂ**
ಸಿರರೇಖಾರಾಜಿಯಾ ರೋಮಶ ಕಬಲನುಮಾ ತಾಳುಕಾಹ್ವಂಗಳಾಭಂ
ಪರಘಾತಾಖ್ಯೋಗ್ರ ಕರ್ಮಂಗಳೆ ಮಧುನಿಭಯುಕ್ತಂಗಳಾಗಿಂತು ಪತ್ತುಂ
ಬೆರಸಿರ್ದಾ ಮೂಱಱೊಳ್ ವೃಶ್ಚಿಕಕುಲಮಿಳೆಯೊಳವ ಪುಟ್ಟುಗುಂ ಕಷ್ಟಜನ್ಮಂ ॥೧೧.೦೩॥"[೬೨]

ಅರುಣ, ಹೇಮ, ಪೀತ, ಮಣಿಧವಳ, ಹರಿದ್ರ, ಕೃಷ್ಣ, ಕುಳಿಂದ, ಶಿರರೇಖರಾಜಿ, ರೋಮಶಕಬಲ, ತಾಳುಕ ಎಂಬ ಹತ್ತು ವಿಧದ ವೃಶ್ಚಿಕಗಳಿದ್ದು, ಅದರಲ್ಲಿ ಕಷ್ಟಜನ್ಮವೆನಿಸಿದ ಮೂರು ವೃಶ್ಚಿಕ ಜಾತಿಗಳು ಭೂಮಿಯಲ್ಲಿ ಜನ್ಮತಳೆಯುತ್ತವೆ. ಈ ಚೇಳುಗಳು ಕಚ್ಚಿದರೆ ಮೂರ್ಛೆ, ನಡುಕ, ಜೊಲ್ಲು ಸೋರುವುದು, ಮಲಮೂತ್ರ ವಿಸರ್ಜನೆ, ಸಂಕಟ, ಬೆವರು ಸುರಿಯುವುದು, ಅಪಾನವಾಯು, ಮನಃಕ್ಷೋಭೆ, ಲಿಂಗಸ್ಫುರಣಗಳಂತಹ ಲಕ್ಷಣಗಳು ಕಾಣಿಸಿಕೊಳ್ಳುವವು. ಇವುಗಳಲ್ಲಿ ಕೆಂಪು ವರ್ಣದ ಹಾಗೂ ನವಿಲಿನಂತೆ ತಲೆಯುಳ್ಳ ಚೇಳುಗಳು ಕುಟುಕಿದರೆ ಅವುಗಳು ನಿರ್ವಿಷವೆಂದು ತಿಳಿಯಬೇಕೆಂದು, ನಾನಾ ವಿಧದ ವೃಶ್ಚಿಕಗಳು ಕಚ್ಚಿದಾಗ ವಿಷವಿಳಿಯುವಂತೆ ಪಠಿಸಬೇಕಾದ ಮಂತ್ರಗಳನ್ನು ಹೇಳಲಾಗಿದೆ.

ಮಂತ್ರ: "ಓಂ ನಮೋ ಭಗವತೇ ಪಾರ್ಶ್ವನಾಥಾಯ ಸಕಲ ಕ್ಷುದ್ರೋಪದ್ರವ ನಿರ್ನಾಶನಾಯ ಶ್ರಾಂ ಭ್ರ್ವೋಂ
ಶ್ರಾಂ ಪ್ರಾಂ ಭ್ರ್ವೋಂ ಪ್ರಾಂ ಭ್ರ್ವೋಂ ಸ್ರಾಂ ಹ್ರಾಂ ಭ್ರ್ವೂಂ ಹ್ರಾಂ ಹ್ರೀಂ ಹ್ರೋಂ ಹ್ರೌಂ ಹ್ರಃ ಸ್ವಾಹಾ॥

ಓಂ ನಮೋ ಭಗವತೇ ಪಾರ್ಶ್ವತೀರ್ಥಂಕರಾಯ ಅಷ್ಟಾದಶ
ವೃಶ್ಚಿಕಾನಾಂ ಇಳಿ ಮಿಳಿ ಚಿಳಿ ವಜ್ರಮುಷ್ಟಿ ಮಹಾಮುಷ್ಟಿ ಸ್ವಾಹಾ ॥

ಓಂ ಸವರಿ ಪೂನೆ ಸವರ ಸವರಿ ಸನಿವದ ಸುಲರಂನಮೊಡಂತೆ
ಪಾಯಂ ಚೇಳುಪಿಯುಂ ಫಣಿಯುಕ್ತ ದೇವಿಯ ಗುರುಂ ಚ ಸಿದ್ಧಿ ॥

ಓಂ ಕೃಷ್ಣಮಾತಂಗಿ ಓಂ ಫಟ್ ಹ್ರೂಂ ಫಟ್ ಸ್ವಾಹಾ ॥"[೬೩]

ಈ ಮಂತ್ರಗಳನ್ನು ಪಠಿಸುತ್ತ ಔಷಧ ಕ್ರಿಯೆಗಳನ್ನು ಮಾಡಬೇಕು.

ಔಷಧ ಕ್ರಿಯೆಗಳು:

೧. ಮಂತ್ರೋಚ್ಚಾರ ಮಾಡುತ್ತ ಕಣಗಿಲ ರೆಂಬೆಯನ್ನು ಬೀಸುವುದು.

---

೬೨. A. Venkat Rao and Pandit H. Shesha Ayyangar (Editors) : **Khagendramani Darpanam of Mangaraja** ; Page. 183

೬೩. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೧೫೯

೨. ಮಂತ್ರವನ್ನು ಪಠಿಸುತ್ತ ಅರಳಿಯ ಚಿಗುರನ್ನು ಹಲ್ಲಿನಿಂದ ಅಗಿಯುತ್ತ ಥೂ ಥೂ ಎಂದು ಭಸ್ಮವನ್ನು ಇಳಿಸುವುದು.

೩. ಇಪ್ಪತ್ತೊಂದು ಬಾರಿ ಮಂತ್ರಿಸುತ್ತ ಜೋಳದ ದಂಟಿನಿಂದ ಇಳಿದೆಗೆಯುವುದು.

೪. ತಲೆಯಿಂದ ಕಾಲಿನವರೆಗೆ ಶ್ರೀಗಂಧದ ಶ್ರೀಕಾರವನ್ನು ಬರೆಯುವುದು.

೫. ಧೂಪದ ಹೊಗೆಹಾಕಿ, ಹೊಗೆಯು ಹೊರ ಹೋಗದಂತೆ ಮುಸುಕು ಹಾಕಿ ಹೊಗೆಯನ್ನು ಕುಡಿಯುವುದು.

೬. ನವಿಲು, ಹುಂಜ, ಪಾರಿವಾಳಗಳ ಹಿಕ್ಕೆ ಮತ್ತು ಎಕ್ಕೆಯ ಬೇರುಗಳ ಧೂಪವನ್ನು ಹಾಕಿ ಹೊಗೆಯನ್ನು ಕುಡಿಯುವುದರಿಂದ ಹಾವು ಮತ್ತು ಚೇಳುಗಳ ವಿಷವು ಪರಿಹಾರವಾಗುವುದು.

೭. ಅರಿಸಿನ ಪುಡಿಯೊಂದಿಗೆ ಹಸಿಶುಂಠಿ ಇಲ್ಲವೆ ಇಟ್ಟಿಯಬೀಜವನ್ನು ಅರೆದು ಧೂಪ ಹಾಕುವುದರಿಂದ ಹದಿಮೂರು ಬಗೆಯ ಚೇಳಿನ ವಿಷಗಳು ಪರಿಹಾರವಾಗುವವು.

೮. ಒಣಶುಂಠಿಯನ್ನು ನೀರಿನಲ್ಲಿ ಅರೆದು ರಸವನ್ನು ಮೂಗಿನಲ್ಲಿ ಬಿಡುವುದು.

೯. ನಿಂಗೆಹಣ್ಣು, ವಿಳಂಗ, ತ್ರಿಕಟುಕಗಳನ್ನು ಸಮನಾಗಿ ಗೋಮೂತ್ರದಲ್ಲಿ ಸೇರಿಸಿ ಲೇಪನ, ನಸ್ಯ ಮಾಡುವುದು.

೧೦. ನಿಂಬೆಯ ಎಲೆ ಮತ್ತು ಬಜೆಗಳನ್ನು ಅಗಿದು ಚೇಳು ಕಡಿದವನ ಕಿವಿಯಲ್ಲಿ ಊದುವುದು.

೧೧. ಹತ್ತಿಯ ಬೇರನ್ನು ಅಗಿದು ಕಿವಿಯಲ್ಲಿ ಊದುವುದು.

೧೨. ತೇಳ್ಕಟುಗ, ನೆಲಗುಂಬಳಗಳನ್ನು ಸಮವಾಗಿ ನೀರಿನಿಂದ ಅರೆದು ಕುಡಿಸುವುದು.

೧೩. ಎಕ್ಕೆ ಮತ್ತು ಕನಕದ ಬೇರುಗಳನ್ನು ನೀರಿನಲ್ಲಿ ಅರೆದು ಸೇವಿಸುವುದು.

೧೪. ಸೈಂಧವವನ್ನು ಬಿಸಿನೀರಿನಲ್ಲಿ ಬೆರೆಸಿ ಕುಡಿಯುವುದು.

೧೫. ಹುಲಿಗಿಲ, ಪುಂತ್ರಂಜೀವ ಮತ್ತು ಮುತ್ತುಗದ ಬೀಜಗಳನ್ನು ಸಮವಾಗಿ ನೀರಿನಲ್ಲಿ ಹಾಕಿ ಅರೆದು ಲೇಪಿಸುವುದು.

೧೬. ಎಕ್ಕೆಯಹಾಲು, ತುಪ್ಪವನ್ನು ಸೇರಿಸಿ ಚೇಳು ಕುಟಿಕಿದ ಜಾಗದಲ್ಲಿ ಲೇಪಿಸುವುದು.

೧೭. ಮೆಣಸು, ಹಿಪ್ಪಲಿಗಳನ್ನು ಸಮನಾಗಿ ಅರೆದು ಎಕ್ಕೆಯ ಹಾಲಿನೊಡನೆ ಲೇಪಿಸುವುದು.

೧೮. ತೆಂಗಿನಬೇರು, ತುಪ್ಪ, ನಿಂಬೆ ಎಲೆ, ಸೈಂಧವಗಳನ್ನು ಅಂಬಿಲದೊಂದಿಗೆ ಹಚ್ಚುವುದು.

೧೯. ಮುತ್ತುಗದ ಬೀಜವನ್ನು ಎಕ್ಕೆಯ ಹಾಲಿನೊಡನೆ ಏಳುಸಲ ಲೇಪಿಸುವುದು.

೨೦. ಎಕ್ಕೆಯ ಎಲೆಗಳಿಗೆ ತುಪ್ಪವನ್ನು ಸವರಿ ಕಾಯಿಸಿ, ಲೇಪಿಸುವುದು.

೨೧. ಹುತ್ತದಲ್ಲಿ ಬೆಳೆದ ತುರುಚೆಯ ಗಿಡವನ್ನು ತಂದು ಚೇಳು ಕಚ್ಚಿದಲ್ಲಿ ಲೇಪಿಸುವುದು.

ಹೀಗೆ ನಾನಾ ವಿಧದಲ್ಲಿ ಚೇಳಿನ ವಿಷಕ್ಕೆ ಪ್ರತಿ ಔಷದಿಗಳನ್ನು ಮಂಗರಾಜನು ತಿಳಿಸುತ್ತಾನೆ. ಹಾಗೆಯೇ 'ಮೂಷಿಕವಿಷ ಪ್ರಕರಣ'ವೆಂಬ ದ್ವಾದಶಾಧಿಕಾರದಲ್ಲಿ ಮಹಾವೀರ ತೀರ್ಥಂಕರನ್ನು

ಹಾಗೂ ಮುನಿಗಳನ್ನೂ ಸ್ಮರಿಸಿಕೊಂಡು, ಇಲಿಗಳು ಕಚ್ಚುವುದರಿಂದ ಮಾನವಿಗೆ ಆಗಬಹುದಾದ ವಿಷದ ಪರಿಣಾಮ ಹಾಗೂ ಅದಕ್ಕೆ ಚಿಕಿತ್ಸಾ ಕ್ರಮಗಳನ್ನು ತಿಳಿಸುತ್ತಾನೆ.

ಶಾ॥ **"ಶ್ವೇತಂ ಕೃಷ್ಣನಲಕ್ತಕಂ ಕಪಿಲನಂ ನೀಲಾಭ ಧೂಮ್ರಾಭಮಾ**
ಪೀತಂ ಪಿಂಗಲ ಲೂತಿದಂಷ್ಟ್ರ ಕಪಿಲ ಕ್ರೋಡಾಸ್ಯ, ದೀರ್ಘಾಸ್ಯ ಸಂ
ಭೂತಂ ಕಾವಳ ದೀರ್ಘಕರ್ಣ ಕಳಕಂಠಂ ರೇಣುಕಾಂಗಂ ಲಸತ್
ಖ್ಯಾತಂ ಪುಚ್ಛವಿಹೀನನೆಂದು ಪದಿನೆಣ್ ಭೇದಂಗಳಕ್ಕಾಖುಗಳ್ ॥೧೨.೦೨॥"[೬೪]

ಶ್ವೇತ, ಕೃಷ್ಣ, ಅಲಕ್ತಕ, ಕಪಿಲ, ನೀಲಾಭ, ಧೂಮ್ರಾಭ, ಪೀತ, ಪಿಂಗಲ, ಲೂತಿದಂಷ್ಟ್ರ, ಮಹಾಕಪಿಲ, ಕ್ರೋಡಾಸ್ಯ, ದೀರ್ಘಾಸ್ಯ, ಸಂಭೂತ, ಕಾವಳ, ದೀರ್ಘಕರ್ಣ, ಕಳಕಂಠ, ರೇಣುಕಾಂಗ, ಪುಚ್ಛವಿಹೀನ ಎಂದು ಹದಿನೆಂಟು ಪ್ರಕಾರದ ಇಲಿಗಳಿದ್ದು, ಇವುಗಳು ಮನುಷ್ಯನನ್ನು ಕಚ್ಚಿದರೆ ನೋವು, ಉರಿ, ದಾಹ, ಜ್ವರ, ತಲೆನೋವು, ವಾಂತಿ, ಭ್ರಾಂತಿ, ಜೊಲ್ಲು ಸುರಿಯುವುದು, ಆಯಾಸ, ಬಳಲಿಕೆ, ಚಳಿ, ಸಾವು ಇಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಇದರ ನಿವಾರಣೆಗಾಗಿ ಮಂತ್ರ, ತಂತ್ರಗಳನ್ನು ತಿಳಿಸುವುದಾಗಿ ಹೇಳುತ್ತಾನೆ ಮಂಗರಾಜ.

ಮಂತ್ರ: **"ಓಂ ನಮೋ ಭಗವತೇ ಪಾರ್ಶ್ವನಾಥಾಯ ಧರಣೇಂದ್ರ ಪದ್ಮಾವತೀ ಸಹಿತಾಯ ಪಾಂ**
ಝ್ವೋಂ ಪಾಂ ಘ್ರಾಂ ಝ್ವ್ರೋಂ ಪ್ರಾಂ ಬಾಂ ಭಾಂ ಝ್ವೋಂ ಪಾಂ ಭ್ರಾಂ ಝ್ಯೋಂ ಭ್ರಾಂ ॥"[೬೫]

ಈ ಮಂತ್ರವನ್ನು ಪಠಿಸುತ್ತ, ಗಾಯವನ್ನು ತೊಳೆದು ಔಷಧಕ್ರಿಯೆಗಳನ್ನು ಕೈಕೊಳ್ಳಬೇಕು.

ಔಷಧ ಕ್ರಿಯೆಗಳು:

೧. ಕಹಿಸೋರೆಯ ಬುರುಡೆಯಲ್ಲಿ ನೀರನ್ನು ತುಂಬಿಸಿ, ಮೂರು ದಿನಗಳವರೆಗೆ ಅದಕ್ಕೆ ಮಂತ್ರಿಸುತ್ತ ಆ ನೀರನ್ನು ಕುಡಿಸುವುದು. ಹಾಗೂ ಸಾವೆ ಅನ್ನ ಮತ್ತು ಮಜ್ಜಿಗೆಗಳನ್ನು ಆಹಾರವಾಗಿ ಕೊಡಬೇಕು.

೨. ನೀಲಿ, ಹೆಗ್ಗುಳ್ಳ, ಎಕ್ಕದಬೇರು, ಹಿಪ್ಪಲಿ, ಬಿಳಿಯ ಪುನರ್ನವಿಗಳನ್ನು ಅರೆದು ನೀರಿನಲ್ಲಿ ಸೇರಿಸಿ ಕುಡಿಸುವುದು.

೩. ವತ್ಸನಾಭ, ಅರಸಿನ, ಗಣಜಿಲೆ, ತುಳಸಿಬೇರುಗಳನ್ನು ಅರೆದು ನೀರಿಗೆ ಸೇರಿಸಿ ಕುಡಿಸುವುದು.

೪. ಸಿರಿಸದ ಹೂವಿನಲ್ಲಿ ವತ್ಸನಾಭವನ್ನು ಸೇರಿಸಿ ಕುಡಿಸುವುದು.

೫. ಬಿಳಿ ಎಕ್ಕೆ, ಕೋರಕ, ಕೋಶಾತಕಿ, ಅಂಕೋಲೆಗಳ ಬೇರನ್ನು ಅರೆದು ತಣ್ಣೀರಿನೊಡನೆ ಸೇರಿಸಿ ಕುಡಿಸುವುದು.

೬. ಶರಪುಂಖಿಯ ಬೇರನ್ನು ಆಡಿನ ಮೂತ್ರದೊಡನೆ ಕುಡಿಸುವುದು.

೭. ಉತ್ತರಣೆಯ ಬೇರನ್ನು ಅರೆದು ಮಜ್ಜಿಗೆಯೊಡನೆ ಕುಡಿಸಸುವುದು.

೮. ನಾಗರ, ಮುಸ್ತೆಗಳ ಬೇರನ್ನು ಅರೆದು ಅಂಬಿಲದಲ್ಲಿ ಸೇರಿಸಿ ಕುಡಿಸುವುದು.

---

೬೪. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೧೬೭

೬೫. ಅದೇ ; ಪುಟ. ೧೬೭

೯. ಕನಕದ ಚಿಗುರನ್ನು ಎಣ್ಣೆ, ತುಪ್ಪಗಳಲ್ಲಿ ಕರೆದು ತಿನ್ನುವುದು.

೧೦. ಕಳ್ಳಿಯ ಹಾಲಿನಲ್ಲಿ ಕುಸುಬೆಯ ಹೂವು, ಪ್ರಶಸ್ತಮರದ ಬೇರು ಮತ್ತು ತೊಗಟೆಯನ್ನು ಅರೆದು ಗುಳಿಗೆಗಳನ್ನು ಮಾಡಿ ಸೇವಿಸುವುದು.

೧೧. ನುಗ್ಗೆ, ಕಾಗೆದೊಂಡೆ, ಕಣ, ರಸಾಂಜನಗಳನ್ನು ಸೇರಿಸಿ ಅರೆದು ಗಾಯಕ್ಕೆ ಲೇಪಿಸುವುದು.

೧೨. ಅರಿಸಿನ, ಸೋವೆಯ ತಿಗುಡು, ಈಶ್ವರಿ, ವಾಕುಚಿ, ದೇವದಾಳಿ, ಅಶ್ವಗಂಧ, ಸೊಗದೆಗಳನ್ನು ನೀರಿನಲ್ಲಿ ಅರೆದು ಲೇಪಿಸುವುದು.

೧೩. ಪಾರಿವಾಳದ ಹಿಕ್ಕೆ, ಕುಸುಬೆಯ ಬೇರು, ತುಪ್ಪ, ತಿಗಡೆ, ದಂತಿ, ಸೈಂಧವಗಳನ್ನು ಸೇರಿಸಿ ಹಚ್ಚುವುದು.

೧೪. ಕಡವದ ತೊಗಟೆ, ಕುಸುಬೆಯ ಹೂವುಗಳನ್ನು ಸೇರಿಸಿ ಅರೆದು ಲೇಪಿಸುವುದು.

ಅಂಜನಕ್ರಿಯೆ:

೧. ಮೊಲೆಹಾಲಿನಲ್ಲಿ ಬೆಕ್ಕಿನ ಹಲ್ಲನ್ನು ತೇದು ಇಲ್ಲವೇ ಅದ್ದಿ ಅಂಜನ ಲೇಪನಮಾಡುವುದು.

೨. ಕಕ್ಕೆ, ಖದಿರವಾಯು, ವಿಳಂಗ, ಕೊನರುಗಳನ್ನು ಮೊಸರಿನಲ್ಲಿ ಸೇವಿಸಿ, ಲೇಪಿಸುವುದು.

೩. ಕುಂಬಳಕಾಯಿಯ ರಸವನ್ನು ಹಚ್ಚುವುದು.

೪. ಅಂಕೋಲೆ, ಕೋಷ್ಠ, ಮಧುಕ, ಕುಸುಬೆಯ ಹೂವು, ಮೇಘನಾದಗಳನ್ನು ಸೇರಿಸಿ ಹಚ್ಚುವುದು.

ಹೀಗೆ ನಾನಾ ವಿಧದಲ್ಲಿ ಇಲಿಯ ವಿಷಗಳಿಂದಾಗುವ ತೊಂದರೆಗಳನ್ನು ಪರಿಹರಿಸಿಕೊಳ್ಳಲು ಉಪಾಯಗಳನ್ನು 'ಖಗೇಂದ್ರಮಣಿ ದರ್ಪಣಂ' ಕೃತಿಯಲ್ಲಿ ಮಂಗರಾಜನು ತಿಳಿಯ ಹೇಳುತ್ತಾನೆ. ಮುಂದುವರೆದು, ತ್ರಯೋದಶಾಧಿಕಾರದಲ್ಲಿ ಪಾರ್ಶ್ವಜೀನೇಶನನ್ನು ಸ್ಮರಿಸಿಕೊಂಡು 'ಸರ್ವಜಂಗಮ ವಿಷ ಚಿಕಿತ್ಸಾ' ಕ್ರಮದ ಕುರಿತಾಗಿ ವಿವರಣೆಗಳನ್ನು ತಿಳಿಸುತ್ತಾನೆ.

ಮ॥ **"ವೃಕ ಶಾರ್ದೂಲ ಮದೇಭ ಸೂಕರ ಚಲದ್ಗೋಮಾಯು ಮುಖ್ಯಂ ಮೃಗ**
ಪ್ರಕರಂ ಕಚ್ಛಪ ಶಿಂಶುಮಾರ ಮಕರಾದ್ಯಂಭಶ್ಚರಾನೀಕ ಲಾ
ವಕ ಪಾರಾವತಮಾದಿಯಾದ ಖಗಸಂತಾನಂ ರಟನ್ಮಕ್ಷಿಕಾ
ದಿಕಮುಂ ಕ್ಷುದ್ರಪಿಪೀಲಿಕಾ ತ್ರಸಕುಲಂ ಸರ್ವ ವಿಷಪ್ರಾಣಿಗಳ್ ॥೧೩.೨॥"[೬೬]

ತೋಳ, ಹುಲಿ, ಆನೆ, ಹಂದಿ, ನರಿ, ಮಕರಾದಿ ಜಲಚರಗಳು, ಲಾವಗೆ, ಪಾರಿವಾಳ ಮುಂತಾದ ಪಕ್ಷಿಗಳು, ಇರುವೆಗಳು ಈ ಮುಂತಾದವೆಲ್ಲವೂ ವಿಷಪ್ರಾಣಿಗಳಾಗಿದ್ದು, ಇವುಗಳ ವಿಷಕ್ಕೆ ಪರಿಹಾರವನ್ನು ಹೇಳುತ್ತಾನೆ. ***(ನೋಡಿ, ಕೋಷ್ಟಕ ೫.೧೧)***

ಸರ್ವ ಜಂಗಮವಿಷಗಳಿಗೆ ಉಪಚಾರ ಮಾಡುವಾಗ ಪಠಿಸಬೇಕಾದ ಮಂತ್ರ.

---

೬೬. A. Venkat Rao and Pandit H. Shesha Ayyangar (Editors): **Khagendramani Darpanam of Mangaraja ;** Page. 202

ಮಂತ್ರ: "ಓಂ ನಮೋ ಭಗವತೇ ಪಾರ್ಶ್ವತೀರ್ಥಂಕರಾಯ ಧರಣೇಂದ್ರ ಪದ್ಮಾವತೀ ಸಹಿತಾಯ ಓಂ ಗ್ರಾಂ ಗ್ರ ಗ್ರಂಥಿನಿ ನಮೋ ವ್ಯಾಘ್ರಚೋರಾರಿ ಮಾರಿಸ್ಫೋಟಕ ಬಾಧಾ ಪ್ರಶನಕರಿ ಪದ್ಮಾವತಿ ಹ್ರೀಂ ಸ್ವಾಹಾ॥"[೬೭]

ಕೋಷ್ಟಕ ೫.೧೧

ಸರ್ವಜಂಗಮ ವಿಷ ಚಿಕಿತ್ಸಾ ಕ್ರಿಯೆ

ಅ.ಸಂ	ಪ್ರಾಣಿಯ ಹೆಸರು	ವಿಷಕ್ಕೆ ಚಿಕಿತ್ಸಾ ಕ್ರಮ
೧	ಹುಲಿ	೧) ಮಂತ್ರವನ್ನು ಪಠಿಸಿ, ಲೊಕ್ಕಿಯ ದಳದಿಂದ ಇಪ್ಪತ್ತೊಂದು ಬಾರಿ ಮಂತ್ರಿಸಿ ಮದ್ದನ್ನು ಮಾಡುವುದು. ೨) ಹಾಲೆಯ ಎಲೆ, ಮೆಣಸುಗಳನ್ನು ಬೆರೆಸಿ ಮೂರು ದಿನವಿಟ್ಟು ಅನಂತರ ಅರೆದು ಹಚ್ಚುವುದು. ೩) ಕುರುಟಿಗೆ, ತುತ್ಥ, ಮರದರಿಸಿನ, ಸರ್ಪಾಕ್ಷಿಯ ಬೇರು, ಮಧುಕ, ರೋಹಿಣಿಯ ಪಟೋಲಗಳನ್ನು ಹಳೆಯ ತುಪ್ಪದಲ್ಲಿ ಕರೆದು ಹಚ್ಚುವುದು. ೪) ಮೆಣಸು, ದೊಗ್ಗಳೆ, ಮಾಲತೀದಳ, ಬದನೆ ಎಲೆ, ಚಿಂಚಿಮರದ ತೊಗಟೆ, ಕಾಚು, ಬಳ್ಳಿ ತುರಚೆ, ಬೆಳುಗಾರಗಳನ್ನು ಸೇರಿಸಿ ತುಪ್ಪದಲ್ಲಿ ಕರೆದು ಗಾಯಕ್ಕೆ ಹಚ್ಚುವುದು. ೫) ಅರಿಸಿನ ಬೇರನ್ನು ಅರೆದು ಹುಲಿಯ ಹಲ್ಲು ಮತ್ತು ಉಗುರುಗಳಿಂದಾದ ಗಾಯಗಳಿಗೆ ಹಚ್ಚಿದರೆ ವಿಷವು ನಿವಾರಣೆಯಾಗುವುದು. ೬) ಹತ್ತರಿಕೆಯ ರಸವನ್ನು ಜೇನುತುಪ್ಪದೊಡನೆ ಹಚ್ಚುವುದು. ೭) ನಿಂಬೆಯ ಎಲೆ, ಸೊಗದೆ, ಅಂಗುರ, ಹಾಲೆಸೊಪ್ಪು, ಬಜೆ, ಮಡುವಾಗಲು, ಭದ್ರಮುಸ್ತೆ, ಬಿಳಿ ಗಣಜಿಲಗಳೊಂದಿಗೆ ನಿಂಬೆಯ ರಸವನ್ನು ಸೇರಿಸಿ ಹಚ್ಚುವುದು.
೨	ಕರಡಿ	೧) ಕೊಗ್ಗಿ, ಲಕ್ಕಿ, ಅರಿಸಿನ, ನೆಲದಾವರೆ, ಪುನರ್ನವಿಗಳನ್ನು ಬೆರೆಸಿ ಅರದು ಲೇಪಿಸುವುದು. ೨) ಬರಿವದಣೆ, ಹರುಹೆಯ ಬೇರುಗಳ ಕರಿಯ ಜೊತೆಗೆ ಸುಣ್ಣವನ್ನು ಸೇರಿಸಿ ಗಾಯಕ್ಕೆ ಹಚ್ಚುವುದು.
೩	ಹಂದಿ	ಮುಸಲಿ ಗಡ್ಡೆಯ ರಸವನ್ನು ಪಾನ, ನಸ್ಯ, ಲೇಪನ ಮಾಡುವುದು.
೪	ತೋಳ	ಪಾದರಿಯೆಲೆ, ಹೆಗ್ಗುರುಟಿಗೆಯ ಬೇರು, ಖರ್ಜೂರಗಳನ್ನು ಸೇರಿಸಿ ತಿನ್ನುವುದು.
೫	ಸೀಳುನಾಯಿ	ಮನುಷ್ಯರ ಹಲ್ಲನ್ನು ಮೊಲೆಹಾಲಿನೊಂದಿಗೆ ತೇದು ಹಚ್ಚುವುದು.
೬	ಪೆಂಕುಳಿ (ಹುಚ್ಚು) ನಾಯಿ	೧) ಕನಕದ ಬೇರು, ಸಕ್ಕರೆ, ತುಪ್ಪಗಳನ್ನು ಹಾಲಿನಲ್ಲಿ ಸೇರಿಸಿ ಕುಡಿಸುವುದು. ೨) ನಿತಮಾಹಿಷವನ್ನು ತುಪ್ಪ, ಸಕ್ಕರೆ ಮತ್ತು ಬೆಲ್ಲದೊಡನೆ ತಿನ್ನವುದು. ೩) ಕನಕದ ರಸ, ಬೆಲ್ಲವನ್ನು ಹಾಲಿನಲ್ಲಿ ಸೇವಿಸುವುದು. ೪) ಎಕ್ಕೆಯ ಮೊಗ್ಗನ್ನು ಹಾಲಿನಲ್ಲಿ ಅರೆದು ಕುಡಿಸುವುದು. ೫) ಅತ್ತಿಹಣ್ಣು, ತುಪ್ಪ, ಉತ್ತರಣೆ, ಜೇನುತುಪ್ಪ, ಮತ್ತಿಯಬೇರುಗಳನ್ನು ನೀರಿನಲ್ಲಿ ತೇದು ಕುಡಿಸುವುದು. ೬) ಬೆಲ್ಲದಲ್ಲಿ ಎಕ್ಕೆಯ ಹಾಲು ಮತ್ತು ಎಣ್ಣೆಯನ್ನು ಸೇರಿಸಿ ಸೇವಿಸುವುದು. ೭) ಮಾದಲಹಣ್ಣಿನಲ್ಲಿ ಖದಿರದ ಬೀಜವನ್ನು ಸೇರಿಸಿ ತಿನ್ನಿಸುವುದು. ೮) ನೀಲಿ, ಅರಿಸಿ, ಅಶ್ವಗಂಧಗಳನ್ನು ಸೇರಿಸಿ ಲೇಪಿಸುವುದು.
೭	ನರಿ	೧) ಕುರುಟಿಗೆ, ಬುಗುಡಿಯ ದಳಗಳನ್ನು ನಿಂಬೆಯ ರಸದಲ್ಲಿ ಅರೆದು ಸೇವಿಸುವುದು. ೨) ಮೆಣಸು, ದಾಗುಡಿಗಳನ್ನು ನಿಂಬೆಯ ರಸದೊಂದಿಗೆ ಸೇವಿಸುವುದು.
೯	ಹೆಬ್ಬೆಕ್ಕು (ಕಾಡುಬೆಕ್ಕು)	೧) ಚಿಕ್ಕಣಿಕೆ, ಕುಬೇರಾಕ್ಷಿ, ಲವಂಗ, ಮಡುವಾಗಲುಗಳನ್ನು ಅರೆದು, ಹಿಂಗು, ಕಣಗಲೊಡನೆ ಒಗ್ಗರಣೆ ಹಾಕಿ ತಿನ್ನುವುದು.
೧೦	ಮುಂಗುಸಿ	೧) ಅರಿಸಿನ, ಮನಶ್ಶಿಲೆಗಳನ್ನೆ ತೇದು ಹಚ್ಚುವುದು. ೨) ನಾಗರ, ಪುತ್ರಂಜೀವ, ಲೋಧ್ರಗಳನ್ನು ಎದೆಹಾಲಿನಲ್ಲಿ ಸೇರಿಸಿ ಕಣ್ಣಿಗೆ ಹಚ್ಚುವುದು.

೬೭. A. Venkat Rao and Pandit H. Shesha Ayyangar (Editors) : **Khagendramani Darpanam of Mangaraja ;** Page. 202

೮	ಬೆಕ್ಕು	೧) ತಾವರೆಯ ಬೀಜ, ಬೆಟ್ಟದ ಮಲ್ಲಿಗೆಯ ಬೀಜಗಳನ್ನು ನೀರಿನಲ್ಲಿ ಅರೆದು ಲೇಪಿಸುವುದು. ೨) ನೀಲಿಯೊಂದಿಗೆ ಸಿತಪರ್ಣಿ ಮತ್ತು ಈಶ್ವರಿಯನ್ನು ಅರೆದು ನೀರಿನಲ್ಲಿ ಬೆರೆಸಿ ಲೇಪಿಸುವುದು. ೩) ತ್ರಿಫಲೆಯ ಕಷಾಯದಲ್ಲಿ ಬಿಳಿ ಎಕ್ಕೆಯ ಬೇರು, ಕೋಕಿಲಾಕ್ಷಿ (ದತ್ತೂರಿ)ಯ ಬೀಜ, ನಿಂಬೆಗಿಡದ ಅಂಟು, ಲಾಂಗಲಿಯನ್ನು ಸೇರಿಸಿ ಗುಳಿಗೆ ಮಾಡಿ ಗೋವಿನ ಸಗಣಿಯೊಂದಿಗೆ ಲೇಪಿಸುವುದು.
೧೧	ವಾನರ	ಕುರುಟಿಗೆಯೆಲೆ, ಮೆಣಸುಗಳನ್ನು ನೀರಿನಲ್ಲಿ ಮರ್ದಿಸಿ ಲೇಪಿಸುವುದು.
೧೨	ಮುಸು (ಮಂಗ)	ಪಾರಿಜಾತ, ಲಕ್ಕಿಗಿಡ ಬೇರು, ಕಂದಾವರೆ, ದ್ರಾಕ್ಷಿ, ಆಚ, ದಾಗುಡಿಯ ಬೇರುಗಳನ್ನು ನೀರಿನಲ್ಲಿ ಮರ್ದಿಸಿ ಲೇಪಿಸುವುದು.
೧೩	ಆನೆ	೧) ಲವಂಗವನ್ನು ಅರೆದು ನೀರಿನಲ್ಲಿ ಸೇರಿಸಿ ಕುಡಿಸುವುದು. ೨) ಬಳ್ಳಿಸೊಂಡೆ, ಸಿಂಹಕೇಸರಿಯ ಬೀಜಗಳನ್ನು ಸೇರಿಸಿ ತಿನ್ನಿಸುವುದು.
೧೪	ಸಿಂಗಳೀಕ	ಟಂಕಣ, ಕುರುಟಿಗೆ, ಕಣ, ಲೋಳೆರಸಗಳನ್ನು ನೀರಿನೊಡನೆ ಸೇರಿಸಿ ಕುಡಿಸುವುದು.
೧೫	ಕಾಡುಹಸು	ಮರದರಿಸಿನ ಯವರೋಧ, ಸಕ್ಕರೆ, ಪುತ್ರಂಜೀವ, ತಾವರೆಯ ಬೇರುಗಳನ್ನು ನೀರಿನಲ್ಲಿ ಸೇರಿಸಿ ಕುಡಿಸುವುದು.
೧೬	ಕುದುರೆ	೧ ಪುತ್ರಂಜೀವಿ, ರಾಯಪುರಿ ಸಕ್ಕರೆಗಳನ್ನು ಅರೆದು ಹಾಲಿನೊಡನೆ ಸೇವಿಸುವುದು. ೨) ಕರವೀರ ಮಡುವಾಗಲುಗಳನ್ನು ನರಮೂತ್ರದಲ್ಲಿ ಸೇರಸಿ ನಸ್ಯಮಾಡುವುದು.
೧೭	ಒಂಟೆ	ಬಜೆ, ಅಜಮೋದ, ಕಣ, ಹಸ್ತಿಕರ್ಣಿ, ನರುವಲ, ಚಿತ್ರಮೂಲಗಳನ್ನು ನೀರಿನಲ್ಲಿ ಬೆರೆಸಿ ಕುಡಿಸುವುದು.
೧೮	ಕತ್ತೆ	೧) ಕತ್ತಗಿರಿಯ ಬೇರು, ರುದ್ರಾಕ್ಷಿ, ಸೊಡರಿ, ಶ್ರೀಗಂಧಗಳನ್ನು ಮಜ್ಜಿಗೆಯೊಡನೆ ಕುಡಿಸುವುದು. ೨) ತುಳಸಿರಸ, ಹಾಲಿನಲ್ಲಿ ರುದ್ರಾಕ್ಷಿ ಮತ್ತು ಪುತ್ರಂಜೀವದ ಬೀಜಗಳನ್ನು ಅರೆದು ಕುಡಿಸುವುದು.
೧೯	ದೊಡ್ಡಿನ ಮೃಗ	ಅಂಗಾರವಲ್ಲಿ ಮತ್ತು ಸೈಂಧವಗಳನ್ನು ನರಮೂತ್ರದಲ್ಲಿ ಸೇರಿಸಿ ನಸ್ಯ, ಲೇಪನ, ಅಂಜನ ಮಾಡುವುದು.
೨೦	ಕಡವೆ	೧) ಮೆಣಸು, ತವಕ್ಷೀರಗಳನ್ನು ಅರೆದು ಜೇನುತುಪ್ಪದೊಡನೆ ಅಂಜನ ಮಾಡುವುದು. ೨) ಮುಟ್ಟಿದರೆ ಮುನಿಯ ಕಾಯಿ, ಮಡುವಾಗಲುಗಳನ್ನು ಜೇನುತುಪ್ಪದೊಡನೆ ಸೇರಿಸಿ ಅಂಜನ ಮಾಡುವುದು.
೨೧	ಮರೆ (ಬಾತುಕೋಳಿ)	ಅರಿಸಿನ, ಇಂದ್ರಾಕ್ಷ, ಮಗಧರುಹ, ಬಜೆ, ಗುಂಜಿಗಳನ್ನು ಹಾಲಿನಲ್ಲಿ ಸೇರಿಸಿ ಕುಡಿಸುವುದು.
೨೨	ಜಿಂಕೆ	ಹುಲಿಯ ಹಲ್ಲನ್ನು ಮೊಲೆಹಾಲಿನಲ್ಲಿ ತೇದು ಹಚ್ಚುವುದು.
೨೩	ಕಾಡೆಮ್ಮೆ, ಕಾಡುಕೋಣ	ಅಶ್ವಗಂಧ, ಆಡಿನ ಮೂತ್ರ, ಕುರುಟಿಗೆ, ಕೋಕಿಲಾಕ್ಷಿಯ ಬೇರು, ಮಡುವಾಗಲುಗಳನ್ನು ಸುಣ್ಣದ ಪುಡಿಯೊಂದಿಗೆ ಸೇರಿಸಿ ಕುಡಿಸುವುದು.
೨೪	ಹಸು	ಕಾಡುನುಗ್ಗೆಯ ರಸವನ್ನು ಹಸುವಿನ ಹಾಲಿನಲ್ಲಿ ಸೇರಿಸಿ ಕುಡಿಸುವುದು.
೨೫	ಟಗರು	ಇಂಗುಳದ ಹಣ್ಣು, ಅರಿಸಿನ, ಹಿಂಗು, ತ್ರಿಕಟುಕಗಳನ್ನು ಲೊಕ್ಕಿಯೆಲೆಯೊಂದಿಗೆ ಅರೆದು ನಸ್ಯ ಮಾಡುವುದು.
೨೬	ಆಡು, ಹೋತ, ಕುರಿ	ಕಡಸಿಗೆ, ನೈದಿಲೆ, ದಾಗುಡಿಗಳಲ್ಲಿ ಯಾವುದಾದರೊಂದನ್ನು ಅರೆದು ಆಡಿನ ಹಾಲಿನಲ್ಲಿ ಸೇರಿಸಿ ಕುಡಿಸುವುದು.
೨೭	ಮೊಲ	ಮೊಲಗಿವಿನ ಗಡ್ಡೆಯನ್ನು ನೀರಿನಲ್ಲಿ ಅರೆದು ಪಾನ, ಲೇಪನ, ಅಂಜನಗಳನ್ನು ಮಾಡುವುದು.

೨೮	ಮುಳ್ಳುಹಂದಿ	೧) ಗೇರು ಎಣ್ಣೆಯನ್ನು ಸುಟ್ಟು ಅಂಜನ, ಪಾನ, ಲೇಪನಗಳನ್ನು ಮಾಡುವುದು. ೨) ನೆಲದಾಳು, ಕಟುಕ, ರೋಹಿಣಿ, ಲವಂಗ, ಆಡುಸೋಗೆ, ದೇವದಾಳಿಗಳನ್ನು ಅಂಬಿಲದಲ್ಲಿ ಸೇವಿಸುವುದು.
೨೯	ಕೆಂಬಣಿಲ (ಅಳಿಲು)	ಅಸಡಿ, ಅರಿಸಿನ, ನೆಲದಾವರೆ, ವಿಷ್ಣುಕ್ರಾಂತಿಗಳನ್ನು ಅಂಬಿಲದೊಡನೆ ಕುಡಿಯವುದು.
೩೦	ಸಣ್ಣಣಿಲ	ಮೊಲಗಿವಿನ ಗಡ್ಡೆಯನ್ನು ಹಾಲಿನಲ್ಲಿ ಸೇವಿಸುವುದು.
೩೧	ಉಡು	೧) ಗೇರುಮರದ ಬೇರು, ಅಮೃತಬಳ್ಳಿ, ಭದ್ರಮುಸ್ತೆಗಳನ್ನು ನೀರಿನಲ್ಲಿ ಸೇರಿಸಿ ಕುಡಿಯುವುದು. ೨) ಕನಕದ ರಸ, ಗಜ್ಜುಗ, ಐದೆಲೆ ನಾಗಗಳನ್ನು ಅರೆದು ಗಾಯಕ್ಕೆ ಲೇಪಿಸುವುದು. ೩) ಅತಿಬಜೆ, ಕರ್ಪೂರ, ಗುಂಜಗಳನ್ನು ಅರೆದು ಹಾಲಿನಲ್ಲಿ ಹಾಕಿ ಅಂಜನ ಮಾಡುವುದು.
೩೨	ಓತಿ	ಸಮುದ್ರಲವಣದೊಡನೆ ಪದ್ಮಕೇಸರವನ್ನು ಹಾಕಿ ಕುಡಿಯುವುದು.
೩೩	ಗೋಸುಂಬೆ	ಆಸಡಿ, ನೆಲದಾಳೆ, ಗುಳ್ಳ, ಸಾಸಿವೆ, ಹಿಪ್ಪಲಿಗಳನ್ನು ಹಾಲಿನಲ್ಲಿ ಸೇವಿಸುವುದು.
೩೪	ಪಾವರಣೆ (ಹಾವುರಾಣಿ)	೧) ಹಿಂಗನ್ನು ಲೇಪಿಸುವುದ. ೨) ಮೆಣಸಿನೊಂದಿಗೆ ಹಿಪ್ಪಲಿ, ಕಟುಕರೋಹಿಣಿಗಳನ್ನು ಎಕ್ಕೆಯ ಹಾಲಿನಲ್ಲಿ ಮಿಶ್ರಮಾಡಿ ಲೇಪಿಸುವುದು.
೩೫	ಹಲ್ಲಿ	೧) ನೀರಿನಲ್ಲಿ ಇಲ್ಲಣವನ್ನು ಸೇರಿಸಿ ಕುಡಿಯುವುದು. ೨) ಕಂಚಿನ ಕಿಲುಬು, ಕಲ್ಲಂಗಡಲೆಯನ್ನು ಲೇಪಿಸುವುದು. ೩) ಕಹಿಸೋರೆಯನ್ನು ಅಂಬಿಲದಲ್ಲಿ ಸೇರಿಸಿ ಲೇಪಿಸುವುದು. ೪) ನುಗ್ಗೆ, ಅರಿಸಿನಗಳನ್ನು ತ್ರಿಕಟುಕಗಳೊಡನೆ ಸೇರಿಸಿ ಲೇಪಿಸುವುದು.
೩೬	ಮೊಸಳೆ	ದೇವದಾರು, ಬಜೆ, ಲೊಕ್ಕಿ, ತ್ರಿಕಟುಕಗಳನ್ನು ಸಣ್ಣಗೆ ಅರೆದು ನೀರಿನಲ್ಲಿ ಸೇರಿಸಿ ಕುಡಿಯುವುದು.
೩೭	ಮೀನು	೧) ಕಟುಕರೋಹಿಣಿ, ಹಿಪ್ಪಲಿ, ಮುಂಡಿಗೆ, ಇಂದ್ರವಾರುಣಿಯ ಜೊತೆಗೆ ಇಲಿಮುಚ್ಚೆಯ ರಸವನ್ನು ಸೇವಿಸುವುದು. ೨) ಹಿಡಿಹಿಡಿಕೆ ಅಥವಾ ಹೆಡೆಗಳ್ಳಿಯ ಎಲೆಯನ್ನು ಹಳೆಯ ತುಪ್ಪವನ್ನು ಸೇರಿಸಿ ಕಟ್ಟುವುದು.
೩೮	ತಿಮಿಂಗಲ	೧) ತಲೆಗೂದಲು ಮತ್ತು ಜವೆಯೆಳ್ಳುಗಳನ್ನು ಸೇರಿಸಿ ಧೂಪ ಹಾಕಿದರೆ ತಿಮಿಂಗಲದ ವಿಷವೂ ಪರಿಹಾರವಾಗುವುದು. ೨) ಅಂಕೋಲೆಯ ಬೇರಿನ ಹೊಗೆಯು ತಿಮಿಂಗಲ ವಿಷವನ್ನು ದೂರ ಮಾಡುವುದು.
೩೯	ಏಡಿ	೧) ಏಡಿಯ ಗೂಡಿನ ಮಣ್ಣನ್ನು ಹಚ್ಚುವುದು. ೨) ಗುಡೂಚಿ, ಅಮೃತಬಳ್ಳಿ, ನೆಲ್ಲಿ, ಹಾಲೆಯಬೇರುಗಳನ್ನು ಹಾಲು ಇಲ್ಲವೇ ನೀರಿನಲ್ಲಿ ಬೆರೆಸಿ ಹಚ್ಚುವುದು.
೪೦	ಕಪ್ಪೆ	೧) ತುಳಸಿ, ಮರಮಿಟಲ ಹತ್ತಿಯ ಎಲೆಗಳನ್ನು ಹಾಲಿನೊಡನೆ ಅರೆದು ಲೇಪಿಸುವುದು. ೨) ಖರ್ಜೂರದ ಬೀಜ, ಸಾಸಿವೆಗಳನ್ನು ಸೇರಿಸಿ ಲೇಪಿಸುವುದು. ೩) ತ್ರಿಫಲ, ಹಿಂಗು, ಮಧುಕ, ಮುಸ್ತೆ, ರುಜೆಗಳನ್ನು ಸೇರಿಸಿ ಕಷಾಯ ಮಾಡಿ ಕುಡಿಸುವುದು.
೪೧	ಆಮೆ	ತ್ರಿಫಲ, ಹಿಂಗು, ಮಧುಕ, ಮುಸ್ತೆ, ರುಜೆಗಳನ್ನು ಸೇರಿಸಿ ಕಷಾಯ ಮಾಡಿ ಕುಡಿಸುವುದು.
೪೨	ಜಿಗುಳೆ	ಕೆನೆಮೊಸರು ಇಲ್ಲವೇ ಸುಟ್ಟ ಎಳ್ಳಿನ ಕರಿಯನ್ನು ಹಚ್ಚುವುದು.
೪೩	ಸರ್ವ ಪಕ್ಷಿಗಳ ಮಲಮೂತ್ರಗಳ ವಿಷ	ಕುರುಟಿಗೆ, ಅತಿಬಜೆ, ನುಗ್ಗೆ. ಸರ್ಪಾಕ್ಷಿಗಳನ್ನು ಅರೆದು ಹಾಲಿನಲ್ಲಿ ಸೇರಿಸಿ ಕುಡಿಯುವುದು.
೪೪	ದುಂಬಿ	೧) ಸಂಪಿಗೆಯ ಹೂಗಳನ್ನು ಕಟ್ಟುವುದು. ೨) ಬೆಣ್ಣೆ ಹಚ್ಚುವುದು.
೪೫	ಕಡಂದುಋ (ಕಣಜ)	ಗಾಯಕ್ಕೆ ಕಣಜದ ಗೂಡಿನ ಮಣ್ಣನ್ನು ನೀರನ್ನು ಸೇರಿಸಿ ಲೇಪಿಸುವುದು.

೪೬	ಷಡ್ಬಿಂದು ಹುಳು	ಹಾಲು, ತುಪ್ಪಗಳನ್ನು ಕುಡಿಸುವುದು.
೪೭	ಜೇನುನೊಣ	ಬಂಜೆ, ಮಡುವಾಗಲ, ಕತ್ತರಿ, ಗುಬ್ಬಿಗುಳ್ಳಗಳನ್ನು ನಿಂಬೆಯ ರಸದೊಂದಿಗೆ ಸೇರಿಸಿ ಲೇಪಿಸುವುದು.
೪೮	ನೊಣ	೧) ಮೆಣಸು, ಹೊಮ್ಮುಗುಳುಗಳನ್ನು ಅರೆದು ಲೇಪಿಸುವುದು. ೨) ನಂದಿಬಟ್ಟಲ ಹೂವನ್ನು ಮೆಣಸು, ನಾಗರಗಳೊಡನೆ ಸೇರಿಸಿ ಲೇಪಿಸುವುದು.
೪೯	ಸೆಲಂಬೆ (ಜೇಡರಹುಳು)	೧) ಅರಿಸಿನ, ಸುಗಂಧಿ, ಶಾಲ್ಮಲಿ, ಸಾಸಿವೆ, ಅಶ್ವಗಂಧಗಳನನು ಅಂಬಿಲದಲ್ಲಿ ಸೇರಿಸಿ ಲೇಪಿಸುವುದು. ೨) ಎಣ್ಣೆಯಲ್ಲಿ ಅರಿಸಿನವನ್ನು ಸೇರಿಸಿ ಲೇಪಿಸುವುದು.
೫೦	ಕಂಬಳಿಹುಳು	ನಸುಗುನ್ನಿಯ ಕರಿಯನ್ನು ಗೋಮೂತ್ರದಲ್ಲಿ ಸೇರಿಸಿ ಹಚ್ಚುವುದು.
೫೧	ಕೋಡಹುಳು	ಅಂಗುರದ ಬೇರು, ಅಮೃತಬಳ್ಳಿಯನ್ನು ಸೇರಿಸಿ ಲೇಪಿಸುವುದು.
೫೨	ತಿಗಣೆ	ಉಗುಣೆಗಿಡದ ಹಾಲನ್ನು ಹಚ್ಚುವುದು.
೫೩	ಇರುವೆ	ಉತ್ತರಣೆ ಮತ್ತು ನಿಂಬೆಯರಸವನ್ನು ಸೇರಿಸಿ ಹಚ್ಚುವುದು.
೫೪	ಕೆಂಜಿಗ	ಸಮುದ್ರಫಲ, ಕಂಗೊಂಗನಬೇರುಗಳನ್ನು ಮಜ್ಜಿಗೆಯಲ್ಲಿ ಸೇರಿಸಿ ಪಾನ, ಲೇಪನ ಮಾಡುವುದು.
೫೫	ಬಚ್ಚಲ ಹುಳು	ದಾಗುಡಿ, ಬಜೆ, ನೀರ್ಗಡವುಗಳನ್ನು ಲೇಪಿಸುವುದು.
೫೬	ನೊರಜು	೧) ಕಣ್ಣಿನಲ್ಲಿ ನೊರಜು ಬಿದ್ದರೆ ನುಗ್ಗೆಯ ಬೇರನ್ನು ಬೆಣ್ಣೆಯಲ್ಲಿ ತೇದು ಹಚ್ಚುವುದು. ೨) ಬಂಜೆ, ಕರ್ಕೋಟಕಗಳನ್ನು ನೀರಿನಲ್ಲಿ ಅರೆದು ಹಚ್ಚುವುದು.
೫೭	ಮನುಷ್ಯರ ಹಲ್ಲು	೧) ನಿಂಬೆಬೀಜ, ಸಿವನ್ನಿಗಳನ್ನು ಅರೆದು ಬೆಣ್ಣೆಯನ್ನು ಸೇರಿಸಿ ಹಚ್ಚುವುದು. ೨) ಬೇವು, ಬನ್ನಿಯ ಬೀಜಗಳನ್ನು ಅರೆದು ಹಚ್ಚವುದು. ೩) ಉಗುಣಿಯ ಹಾಲು, ಮಡುವಾಗಲು, ಸುಗಂಧಿ, ಪುತ್ರಂಜೀವಗಳನ್ನು ಲೇಪಿಸುವುದು.
೫೮	ಮನುಷ್ಯರ ಉಗುರು	ಮೆಣಸನ್ನು ಅರೆದು ಉಗುಣಿಯ ಹಾಲಿನಲ್ಲಿ ಸೇರಿಸಿ ಲೇಪಿಸುವುದು.

(ಮೇಲಿನ ಕೋಷ್ಟಕವನ್ನು 'ಖಗೇಂದ್ರಮಣಿ ದರ್ಪಣಂ'ನ ತ್ರಯೋದಶಾಧಿಕಾರದ ೫ರಿಂದ ೧೩೬ರವರೆಗಿನ ಪದ್ಯಗಳನ್ನು ಅನುಸರಿಸಿ ರಚಿಸಲಾಗಿದೆ.)[೬೮]

ಹೀಗೆ ಮಂಗರಾಜನು ಶ್ರೇಷ್ಠವಾದ ವೈದ್ಯಶಾಸ್ತ್ರದಲ್ಲಿ ಹಲವು ರೀತಿಯ ಜಂಗಮವಿಷಗಳಿಗೆ ಪರಿಹಾವನ್ನು ಹೇಳುತ್ತಾನೆ. ಮುಂದುವರೆದು, 'ಕೃತ್ರಿಮವಿಷ ಚಿಕಿತ್ಸಾ' ಪ್ರಕರಣವೆಂಬ ಹದಿನಾಲ್ಕನೆಯ ಅಧಿಕಾರದಲ್ಲಿ ಅಮೃತಾಧಿಪತಿಯನ್ನು ನೆನೆದುಕೊಂಡು ಮೋಸದಿಂದ, ದುರ್ಮೋಹದಿಂದ ಶತೃಗಳು, ಸ್ತ್ರೀಯರು ಅನ್ನದಲ್ಲಿ, ಚುಂಬನದಲ್ಲಿ, ಹಣ್ಣು, ಹಾಲು, ಸಿಹಿತಿಂಡಿ, ಸಕ್ಕರೆ, ತುಪ್ಪ ಮೊದಲಾದ ಪದಾರ್ಥಗಳಲ್ಲಿ ವಿಷವನ್ನಿಕ್ಕಿದಾಗ ಆ ವಿಷವನ್ನು ಪರಿಹರಿಸಿಕೊಳ್ಳುವ ಬಗೆಯನ್ನು ಹೇಳುತ್ತಾನೆ.

"ಬಿಂಬಾದರೆಯರ್ ಕೆಲಬರ್
ನಂಬಿಸಿ ಪುರುಷರ್ಕಳಸುವನಾಗಳೆ ತೆಗೆವರ್

೬೮. A. Venkat Rao and Pandit H. Shesha Ayyangar (Editors) : **Khagendramani Darpanam of Mangaraja ;** Page. 204 to 227


ಚುಂಬನದೆಡೆಯೊಳ್ ವಿಷಮಂ
ಕಿಂ ಬಹುನಾ ತೊಡೆದು ಗಡ ಮಹಾಪಾತಕೀಯರ್ ॥೧೪.೦೩॥

ಸ್ಮರತಾಪದೊಳಂ ಮಱುಗು
ತ್ತಿರವೇಟಕ್ಕುಮಗಲ್ದೊಡೆಂದು ಭೋಜ್ಯದೊಳೆ ತಳೋ
ದರಿಯರ್ ಕಿಂ ಗಹನಂ ಸ್ತ್ರೀ
ಚರಿತಮೆನಲ್ ಪಲವು ಮರ್ದನಿಕ್ಕುಗುಮದಱಿಂ ॥೧೪.೦೪॥"[೧೯]

ನಾನಾ ವಿಧ ಜೀವಿಗಳ ವಿಷದಿಂದ ಹಲವು ಬಗೆಯಲ್ಲಿ ಧಾತುಪ್ರಯೋಗಗಳಿಂದ ಕೆಲವು ಸ್ತ್ರೀಯರು ಪುರುಷರನ್ನು ನಂಬಿಸಿ ಚುಂಬಿಸಿ, ಕೃತ್ರಿಮ ವಿಷಪ್ರಯೋಗ ಮಾಡಿ, ಪ್ರಾಣವನ್ನೇ ತೆಗೆಯುವರು. ತಮ್ಮನ್ನು ಬಿಟ್ಟುಹೋದರೆ ಕಾಮತಾಪದಿಂದ ಬಳಲಬೇಕಾಗುವುದೆಂದು ಬಗೆದು ವಿಷಪ್ರಾಷಾಣವನ್ನು ಮಾಡುತ್ತಾರೆ ಎಂದು ಹೇಳಿ, ಕೃತ್ರಿಮ ವಿಷದಿಂದ ಉಂಟಾಗಬಹುದಾದ ಲಕ್ಷಣಗಳನ್ನು ತಿಳಿಸುತ್ತಾನೆ ಕವಿ.

ಕೃತ್ರಿಮ ವಿಷವ್ಯಾಪ್ತ ಲಕ್ಷಣಂ: ಕೋಪ, ಉಬ್ಬಸ, ಕೆಮ್ಮು, ತಾಪ, ದಾಹ, ಬಳಲಿಕೆ, ಮನಸ್ಸಿನಲ್ಲಿ ಚಿಂತೆ, ಅಜೀರ್ಣತೆ, ನೋವು, ದುಃಖ ಇಂತಹ ಲಕ್ಷಣಗಳು ಉಂಟಾಗುತ್ತವೆ. ಕಣ್ಣು, ಹಲ್ಲು, ಉಗುರು, ಅಂಗಾಲು, ಅಂಗೈಗಳು ಮೊದಲಿನಂತಿರದೇ ಬಣ್ಣಗುಂದುತ್ತವೆ. ವಾಂತಿ, ತಲೆನೋವು, ಭ್ರಾಂತಿ, ರಕ್ತವಾಂತಿ, ಮೂತ್ರಸ್ರಾವ, ಜ್ವರ, ದೇಹ ಊದಿಕೊಳ್ಳುವುದು, ದೇಹದ ಮೇಲೆ ನೀರುಗುಳ್ಳೆಗಳು ಏಳುವವು. ಇದರಿಂದ ತಪ್ಪಿಸಿಕೊಳ್ಳಲು ಉನ್ನತವಾದ ದೇವ, ದೇವಿಯರನ್ನು ಅಷ್ಟವಿಧಾರ್ಚನೆ ಮಾಡುವುದು. ಹೀಗಿರುವ ಮೋಸದ ಪ್ರಯೋಗವನ್ನು ಯಂತ್ರ, ಮಂತ್ರೋಚ್ಚಾರಗಳಿಂದ ತಡೆಯಬಹುದು.

ಮಂತ್ರ: "ಓಂ ರಕ್ತಜಟಾ ಓಂ ರಕ್ತಭಾಗೇ ಓಂ ರಕ್ತಡಂಬರಿ ಕಾರ್ಯಾಕಹ್ನೈ ಜಯದೇವ ವಿಘ್ನೇನಕರಿ ಉಲೂಪಿ ರಲಾಟಿ ವೇದಘಾಟೆ ಮಾರವಿಘ್ನಾವೇ ಸಿದ್ಧಿ ಶ್ರೀಗುರುಪಯಾಪಾಣಿ ॥[೨೧]



ಯಂತ್ರ [೨೦]

ಔಷಧ ಕ್ರಮ:

೧) ಅಣಿಲೆಕಾಯಿ, ಬಿಳಿಗಣಜಿಲೆ, ಚಿಕ್ಕಣಿಯಡಿಕೆಯನ್ನು ಸೇರಿಸಿ ತಿನ್ನುವುದು.

೨) ಎಳ್ಳೆಣ್ಣೆಯಲ್ಲಿ ಯಂತ್ರವನ್ನು ಬರೆದು, ಮೂರು ಸಲ ಮಂತ್ರಿಸಿ, ಎಳೆನೀರಿನೊಡನೆ ಕುಡಿಯುವುದು.

೩) ಮಡುವಾಗಲು, ಗಣಜಿಲೆ, ಕಡಸಿಗೆ, ಘನನಾದಿ, ಉಲಿಗನೆಲೆ, ಮೂಕೊರತಿ ಗಿಡದ ಎಲೆ, ನಿಂಬೆಹುಳಿಗಳನ್ನು ಸೇರಿಸಿ ಕುಡಿಯುವುದು.

---

೧೯. A. Venkat Rao and Pandit H. Shesha Ayyangar (Editors) : **Khagendramani Darpanam of Mangaraja ;** Page. ೨೩೨

೨೦. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೨೦೦ (ಯಂತ್ರ)

೨೧. **ಅದೇ** ; ಪುಟ; ೨೦೦

೪) ಸಾವೆ ಅನ್ನ, ಹಸುವಿನ ಮಜ್ಜಿಗೆಗಳನ್ನು ಪಥ್ಯವಾಗಿ ಉಣ್ಣುವುದು.

೫) ಪಾದರಸ, ಜೇನುತುಪ್ಪ, ದತ್ತೂರಗಳನ್ನು ಕನ್ನಿಕಾರಸದಲ್ಲಿ ಮರ್ದಿಸಿ, ಸಕ್ಕರೆಯನ್ನು ಸೇರಿಸಿ ಕುಡಿಯುವುದು.

೬) ಕೆಂಪು ಚಿತ್ರಮೂಲಬೇರಿನ ರಸದಲ್ಲಿ ಹಾಲು, ಸಕ್ಕರೆಗಳನ್ನು ಸೇರಿಸಿ ಕುಡಿಯುವುದು.

೭) ಗರುಗದ ರಸ, ಅಮೃತಬಳ್ಳಿಯ ರಸ, ಸಮಾನ ತುಪ್ಪದೊಡನೆ ಸಕ್ಕರೆಯನ್ನು ಸೇರಿಸಿ ಕುಡಿಯುವುದು.

೮) ಉತ್ತರಣೆಯ ಬೀಜಗಳನ್ನು ಅಂಬಿಲದಲ್ಲಿ ಸೇರಿಸಿ ಕುಡಿಯುವುದು.

೯) ಮಯೂರಶಿಖಿ, ಕತಕದ ಬೀಜಗಳನ್ನು ಆಡಿನ ಹಾಲಿನಲ್ಲಿ ಸೇರಿಸಿ ಕುಡಿಯುವುದು.

ಕ್ರೋಂ	ಕ್ರೋಂ	ಕ್ರೋಂ
ಕ್ರೋಂ	ದೇ	ಕ್ರೋಂ
ಗ್ರೋಂ	ಗ್ರೋಂ	ಗ್ರೋಂ
ಕ್ರೋಂ	ಕ್ರೋಂ	ಕ್ರೋಂ

ಹೀಗೆ ಅನೇಕ ವಿಧದ ಔಷಧ ಕ್ರಮಗಳನ್ನು ಹೇಳಿ, ಮಂಗರಾಜನು ರಕ್ಷಾಯಂತ್ರವನ್ನು ತಿಳಿಸುವನು.

[೭] ಈ ಯಂತ್ರವನ್ನು ರಚಿಸಿ, ಯಂತ್ರಾಧಿಪತಿಗೆ “ಓಂ ಆಂ ಕ್ರೋಂ” ಎಂದು ಮಂತ್ರವನ್ನು ಹೇಳುತ್ತ ಪುಷ್ಪಾರ್ಚನೆ ಮಾಡುವುದು. ಹೀಗೆ ಯಂತ್ರ, ಮಂತ್ರ, ತಂತ್ರ (ಔಷಧ)ಗಳಿಂದ ಕೃತ್ರಿಮ ವಿಷಗಳು ಪರಿಹಾರವಾಗುತ್ತವೆ ಎಂಬುದು ಮಂಗರಾಜನ ಅಭಿಮತ.

ಕವಿ ಮಂಗರಾಜನು ‘ಖಗೇಂದ್ರಮಣಿ ದರ್ಪಣಂ’ ಗ್ರಂಥದ ‘ಬಾಷ್ಪಚಿಕಿತ್ಸಾ ಪ್ರಕರಣ’ ಎಂಬ ಪಂಚದಶಾಧಿಕಾರಿದಲ್ಲಿ ವೀತರಾಗ ಜಿನನಿಗೆ ವಂದಿಸಿ, ಅನೇಕ ರೀತಿಯ ದೇಹದ ಮೇಲಾಗಿರುವ ಗಾಯಗಳಿಗೆ ಬಾಷ್ಪ ಚಿಕಿತ್ಸೆ ಮಾಡುವ ಕ್ರಮಗಳನ್ನು ಹೇಳಿಕೊಡುತ್ತಾನೆ.

ಮ॥ **“ಕ್ಷಿತಿಯೊಳ್ ಬಾಷ್ಪಮೆ ಕೋಟಿಭೆದಮದು ತಾನೆಂಬತ್ತುನಾಲ್ಕೆಂಬ ಸೂ**
ಚಿತಮುಂಟಲ್ಲಿ ಸಮಸ್ತರಂ ತಿಳಿಪಲೆಂದಾನೆಲ್ಲಮಂ ಪೇಟಿಳ್ದೊಡಂ
ವಿತತಂ ಶಾಸ್ತ್ರಮದಕ್ಕುಮಂತಜೆವ ವರ್ಗಾಲಸ್ಯಮೆಂದಿಂತಿದ
ಪ್ರತಿಮಂ ತಾನೆನೆ ಪೇಟಿಳ್ವೆನಾ ಕಿಜಿದಜಿಂ ತತ್ಸಾರಮಂ ಸಾಂಗದಿಂ ॥೧೫.೦೩॥”[೭೩]

ಈ ಲೋಕದಲ್ಲಿ ಬಾಷ್ಪವೆಂಬುದು ಕೋಟಿ ಪ್ರಕಾರದಲ್ಲಿದ್ದು, ಅವುಗಳಲ್ಲಿ ಹೆಸರಿಸಬಹುದಾದಗಳು ಎಂಬತ್ತನಾಲ್ಕು ಪ್ರಕಾರದಲ್ಲಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೇಳಿಕೊಡುತ್ತಾನೆ. ***(ನೋಡಿ ಕೋಷ್ಟಕ ೫.೧೨).***

---

೭೨. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ; ೨೦೯

೭೩. A. Venkat Rao and Pandit H. Shesha Ayyangar (Editors): Khagendramani Darpanam of Mangaraja ; Page. 249

ಕೋಷ್ಟಕ ೫.೧೨

ಬಾಷ್ಪ ಚಿಕಿತ್ಸೆ

ಅ.ಸಂ.	ಬಾಷ್ಪ ಭೇದ	ಲಕ್ಷಣಗಳು	ಚಿಕಿತ್ಸಾ ಕ್ರಮ
೧	ಪಿತ್ತ	ಮೈಮೇಲೆ ಗುಳ್ಳೆಗಳು ಏಳುತ್ತವೆ. ಬುದ್ಧಿಭ್ರಮಣೆಯಾಗುವುದು. ದೇಹವು ಹಳದಿ ಬಣ್ಣಕ್ಕೆ ತಿರುಗುವುದು.	ಹಣ್ಣಾದ ಹುಣಿಸೆಯೆಲೆ ರಸದಿಂದ ಹುಣ್ಣುಗಳನ್ನು ತೊಳೆದು, ಸಮುದ್ರಫಲವನ್ನು ಅಂಬಲಿಯಲ್ಲಿ ಸೇರಿಸಿ ನಸ್ಯಾಂಜನ ಮಾಡುವುದು.
೨	ಶ್ಲೇಷ್ಮ	ಗಾಯಗಳಿಂದ ರಸಿಗೆಯಾಡುವುದು. ಲೋಳೆ ಸುರಿಯುವುದು. ಮುಖವು ಬಾವು ಬರುವುದು.	ಚಗಚೆ ಮತ್ತು ನೆಲಾವರೆಯ ರಸದಿಂದ ಗಾಯವನ್ನು ತೊಳೆದು ಹಾಲೆಯ ರಸವನ್ನು ನಸ್ಯಾಂಜನ ಮಾಡುವುದು.
೩	ವಾತ	ಶರೀರಲ್ಲಿ ನೋವುಂಟಾಗುವುದು.	ಕತ್ತೆಯ ಮೂತ್ರದಲ್ಲಿ ಮೇಘನಾದಿಗಳನ್ನು ಸೇರಿಸಿ ಗಾಯವನ್ನು ತೊಳೆಯುವುದು. ಮೇಘನಾದಿಯ ಬೇರನ್ನು ಮರ್ದಿಸಿ, ಪಾನ, ನಸ್ಯಾಂಜನ ಮಾಡುವುದು.
೪	ಸನ್ನಿ	ನಾಡಿಬಡಿತ ಕಡಿಮೆಯಾಗುವುದು.	ಕುಲಿಂಗನ ರಸದೊಡನೆ ಆಡಿನ ಮೂತ್ರವನ್ನು ಸೇರಿಸಿ ಗಾಯವನ್ನು ತೊಳೆಯುವುದು.
೫	ಉರಿ	ಕಣ್ಣಲ್ಲಿ ನೀರು ಸುರಿಯುವುದು. ಹಲ್ಲು ನೋವುಂಟಾಗುವುದು. ಬಾಯಿ ಒಣಗುವುದು. ಮೈಯಲ್ಲಿ ಉರಿಯುಂಟಾಗುವುದು.	ಹಾಲಿವಾಣ ಮತ್ತು ಗರುಗದ ರಸ, ಅಮರಿಯನ್ನು ಸೇರಿಸಿ, ಕುಂಬಳ ಕಾಯಿಯ ರಸದೊಡನೆ ಕುಡಿಯುವುದು.
೬	ಕಾಸ	ದೃಷ್ಟಿಮಾಂದ್ಯ, ಕೆಮ್ಮು, ಉಬ್ಬಸ ಉಂಟಾಗುವುದು.	ಗೋಮೂತ್ರದಲ್ಲಿ ಗಣಜಿಲದ ಚಿಗುರನ್ನು ಅರೆದು ಹುಣ್ಣನ್ನು ತೊಳೆಯುವುದು.
೭	ಛರ್ದಿ	ಬಾಯಿಯಿಂದ ಕ್ರಿಮಿಗಳು ಸುರಿಯುವವು. ಪದೇ ಪದೇ ವಾಂತಿಯಾಗುವುದು.	ಆನೆಯ ಮೂತ್ರದಲ್ಲಿ ಕುರುಟಿಗೆಯ ರಸವನ್ನು ಸೇರಿಸಿ ಗಾಯಗಳಿಗೆ ಲೇಪಿಸುವುದು.
೮	ಮೂರ್ಛೆ	ಮೂರ್ಛೆಹೋಗುವುದು. ಹಲ್ಲು ಹಸಿರಾಗುವುದು.	ಒಂಟೆಯ ಮೂತ್ರದಿಂದ ಗಾಯಗಳನ್ನು ತೊಳೆದು ತ್ರಿಕಟುವನ್ನು ಅಂಜನ ಮಾಡುವುದು.
೯	ರಕ್ತ	ಬಾಯಿ, ಮೂಗು, ಲಿಂಗಗಳಿಂದ ರಕ್ತ ಸುರಿಯುವುದು. ಕಣ್ಣು ಹಸಿರಾಗಿ, ಉಗುರುಗಳು ಬಿಳಿಯಾಗುವವು.	ಒಂಟೆಯ ಮೂತ್ರದೊಡನೆ ನರಮೂತ್ರ, ಕನಕರಸಗಳನ್ನು ಸೇರಿಸಿ ಗಾಯಗಳನ್ನು ತೊಳೆಯುವುದು.
೧೦	ಜಡ	ನಾಲಗೆ ಜಡವಾಗಿ, ಶರೀರದಲ್ಲಿ ಗುಳ್ಳೆಗಳು ಉಂಟಾಗುವವು. ಮೂಗಿನಲ್ಲಿ ತುರಿಯುಂಟಾಗುವುದು.	ನಿಂಬೆಹುಳಿಯೊಡನೆ ಸೌತೆಕಾಯಿಯ ರಸವನ್ನು ಸೇರಿಸಿ, ಗಾಯ ತೊಳೆದು, ಅರಿಸಿನವನ್ನು ನಸ್ಯ ಮಾಡುವುದು.

(ಮೇಲಿನ ಕೋಷ್ಟಕವನ್ನು 'ಖಗೇಂದ್ರಮಣಿ ದರ್ಪಣಂ'ನ ಪಂಚದಶಾಧಿಕಾರದ ೫ರಿಂದ ೨೫ರವರೆಗಿನ ಪದ್ಯಗಳನ್ನು ಅನುಸರಿಸಿ ರಚಿಸಲಾಗಿದೆ.)[೭೪]

೭೪. A. Venkat Rao and Pandit H. Shesha Ayyangar (Editors): **Khagendramani Darpanam of Mangaraja** ; Page. 245 to 253

ಭ್ರಮೆ, ಭ್ರಮಣೆ, ಶಲ್ಯ, ಅಸ್ಥಿ, ಶ್ವೇತ, ಅಸಿತ, ಖಂಡಿತ, ಹಿಕ್ಕೆ, ಸೊರ್ಕು, ಕ್ರಿಮಿ, ಶೋಭೆ ಎಂಬ ಬಾಷ್ಪಭೇದ, ಮತ್ತು ಸಾರರೂಪವಾದ ಚಿಕಿತ್ಸಾಭೇದಗಳನ್ನು ಇಷ್ಟಾರ್ಥಸಿದ್ಧನೆನಿಸಿದ ದೇವತರುವೂ, ದಯಾಪೂರಿತನೂ ಲಕ್ಷ್ಮೀಸಂಗತನೂ ಆದ ಮುಗುಳೀಪುರದ ಮಂಗರಾಜನು ತನ್ನ ಕೃತಿಯಲ್ಲಿ ಹೇಳಿಕೊಂಡಿದ್ದಾನೆ.

'ಖಗೇಂದ್ರಮಣಿ ದರ್ಪಣಂ' ಗ್ರಂಥದ ಕೊನೆಯ ಷೋಡಷಾಧಿಕಾರದಲ್ಲಿ 'ಸಮಸ್ತ ನಿರ್ವಿಸಚಿಕಿತ್ಸಾ' ಎಂಬ ಸಂಕೀರ್ಣಾಧಿಕರದಲ್ಲಿ ಹಲವಾರು ಚಿಕಿತ್ಸಾ ಕ್ರಮವನ್ನು ಮತ್ತು ಮಂತ್ರ ಪರಿಹಾರಗಳನ್ನು ಮಂಗರಾಜನು ಹೇಳುತ್ತಾನೆ.

ಕಂ॥

"ಶ್ರೀರತ್ನತ್ರಯ ವಿನುತಾ
ಧಾರಂ ಸುರರಾಜವಂದಯನೆಮಗೀಗೆ ಮದೀ
ಯಾರೋಗ್ಯಮನೆ ಮನೋಹರ
ದೂರಂ ಶುದ್ಧೋಪಯೋಗಮಂ ವೀರಜಿನಂ ॥೧೬.೦೧॥

ಶಾ॥

"ನಾಗಾಕೃಷ್ಟಿಯುಮಂ ಸಹಾಗಮನಮಂ ಸುಪ್ರೇಷನಾಸ್ಯೋದ್ಯದು
ದ್ಯೋಗಾಲೋಕನ ಬಂಧನಂಗಳನಮೋಘಂ ಕುಂಡಲೀಕೃತ್ಯ ನಿ
ರ್ವೇಗತ್ವಂ ಘಟಸುಪ್ರವೇಶ ನವರೇಖಾಮಂತ್ರಮಂ ತದ್ವಿಷೋ
ದ್ಯೋಗೋದ್ಯೋಗ ಸುರಾವಧೂತ ವಿವಿಷತ್ವಾದ್ಯಂಗಳಂ ಮತ್ತಮಂ ॥೧೬.೦೨॥"

ಕಂ॥

ನಾಗೋಚ್ಚಾಟನಮುಂ ನಯ
ಯೋಗದೆ ಸಂಕೀರ್ಣದೊಳ್ ಪರಿಕಿಸಿಯೆ ಪೇೞ್ದಂ
ರಾಗದೊಳಂ ಮಂಗಬುಧಂ
ಯೋಗಾಮೃತಜಲಧಿ ಪೂಜ್ಯಪಾದರ ಮತದಿಂ ॥ ೧೬.೦೩॥"[೭೫]

ಶ್ರೀರತ್ನತ್ರಯಕ್ಕೆ ಆಧಾರನಾದ ಸುರವಂದ್ಯ, ಮನೋಹರದೂರನೂ ಆದ ಮಹಾವೀರ ತೀರ್ಥಂಕರನು ಎಲ್ಲರಿಗೂ ಆರೋಗ್ಯವನ್ನು ದಯಪಾಲಿಸಲಿ ಎಂದು ಕೇಳಿಕೊಂಡು, ಮನೆಯಲ್ಲಿ ಹಾವುಗಳು ಆಗಮನ, ಅವುಗಳ ನಿವಾರಣೆ, ಕುಂಡಲೀಕೃತ್ಯ, ನಿರ್ವೇಗತ್ವ, ನವರೇಖಾಮಂತ್ರ, ನಾಗಗಳ ಉಚ್ಚಾಟನೆಗಳನ್ನು ಯೋಗಾಮೃತ ಬಲದಿಂದ ಪೂಜ್ಯಪಾದರು ಉಪದೇಶಿಸಿದಂತೆ ಹೇಳುವುದಾಗಿ ಮಂಗರಾಜನು ಉಚ್ಚರಿಸುತ್ತಾನೆ.

ನಾಗಪ್ರೇಷಣ ಮಂತ್ರ:

"ಓಂ ನಮೋ ನಾಗಪಿಶಾಚಿ ರಕ್ತಾಕ್ಷಿ ಭ್ರುಕುಟಿಮುಖಿ ಉಚ್ಚಿಷ್ಟದಿಷ್ಟ
ತೇಜಸ ವಹಿ ಭಗವತೀ ಹೂಂ ಫಟ್ ಸ್ವಾಹಾ ॥"[೭೬]

ಹುತ್ತದ ಸಮೀಪದ ಮಣ್ಣನ್ನು ಹೂಗಳಿಂದ ಅರ್ಚಿಸಿ, ಸಕ್ಕರೆ, ಹಾಲು, ತುಪ್ಪಗಳೊಂದಿಗೆ ಹವನ ಮಾಡಿ, ಮೇಲಿನ ಮಂತ್ರವನ್ನು ಪಠಣ ಮಾಡುವುದರಿಂದ ಮನೆಗೆ ಬಂದ ನಾಗವು ಸಮಾಧಾನವಾಗಿ ಮರಳಿ ಹೋಗುತ್ತದೆ.

---

೭೫. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೨೨೦
೭೬. ಅದೇ ; ಪುಟ. ೨೨೨

ಸರ್ಪಮುಖಸ್ತಭಂನ ಮಂತ್ರ:

> **"ಓಂ ಹ್ರೀಂ ಶ್ರೀಂ ಹೂಂ ಕ್ಷೂಂ ಠಃ ಠಃ ಫಣಿಮುಖಂ ಸ್ತಂಭಯ ॥**
> **ಹ್ರೂ ಹೂಂ ಕ್ರೂ ಕ್ಷೂಂ ಠಃ ಠಃ ಸ್ತಂಭಯ ॥**
> **ಹ್ರಾಂ ಹಾಂ ಕ್ರೂಂ ಕ್ಷೂಂ ಠಃ ಠಃ ॥**
> **ಹಾ ಹಾಂ ಠ ಠಃ ॥"[೭೭]**

ಈ ಮಂತ್ರಗಳನ್ನು ಪಠಣ ಮಾಡುವುದರಿಂದ ಸರ್ಪಮುಖಸ್ತಂಭನ, ದೃಷ್ಟಿಸ್ತಂಭನಗಳಾಗಿ ಸರ್ಪದಿಂದಾಗುವ ಅನಾಹುತಗಳು ತಪ್ಪುತ್ತವೆ.

ನಾಗಕುಂಡಲೀಕರಣ ಮಂತ್ರ:


> **"ಓಂ ಸುವರ್ಣರೇಖಾಯ ಗರುಡಾಜ್ಞಾಪಯತಿ ಕುಂಡಲೀಕರಣಂ ಕುರು ಸ್ವಾಹಾ ॥**

ಫಣಿಘಟಪ್ರವೇಶ ಮಂತ್ರ:

> **ಓಂ ಲಲಲಲ ಲಲಾ ಸ್ವಾಹಾ ॥**
> **ಓಂ ಹ್ರಾಂ ಹ್ರೀಂ ಗರುಡಾಜ್ಞಾ ಠ ಠ ಠ ಠ ॥"[೭೮]**

ಈ ಮಂತ್ರಗಳನ್ನು ಉಚ್ಚರಿಸುತ್ತ, ಗರುಡಮುದ್ರೆಯಿಂದ ಭೂರೇಖೆಯನ್ನು ಬರೆಯುವುದರಿಂದ ಸರ್ಪವು ಆ ಗೆರೆಯನ್ನು ದಾಟಿ ಬರಲಾರದು. ಕೈಯಲ್ಲಿ 'ಹೂಂ'ಕಾರವನ್ನು ಬರೆದು, ಅದರ ಮಧ್ಯ ಮಂತ್ರ ಬರೆದು ಸೂರ್ಯನನ್ನು ನೋಡುವುದರಿಂದ ನಿರ್ವಿಷವಾಗುವುದು.

ವೀಳ್ಯದೆಲೆಯಲ್ಲಿ ಟಂಕಣವನ್ನು ಬೆರೆಸಿ ತಿಂದರೆ, ಕೆಂಪುಕಣಗಿಲೆಯ ಬೇರನ್ನು ತಾಂಬೂಲದೊಂದಿಗೆ ತಿಂದರೆ ಕುಳಿಕವೆಂಬ ಸರ್ಪದ ವಿಷವು ಪರಿಹಾವಾಗುವುದು. ತನ್ನನ್ನು ಕಚ್ಚಿದ ಸರ್ಪವನ್ನು ತಾನು ತಿರುಗಿ ಕಚ್ಚಿದರೆ, ಸರ್ಪವು ಕಚ್ಚಿ ಜಾಗವನ್ನು ಕತ್ತರಿಸಿ ತೆಗೆಯುವುದರಿಂದಲೂ ವಿಷ ನಿವಾರಣೆಯಾಗುವುದು. ಬಿಳಿಯ ಗುರುಗುಂಜಿಯ ಬೇರನ್ನು ಅಂಬಲಿಯಲ್ಲಿ ಸೇರಿಸಿ ಲೇಪಿಸಿದರೆ ಕೊಳಕುಮಂಡದ ವಿಷವು ಪರಿಹಾರವಾಗುವುದು.



[೭೯] ಈ ಯಂತ್ರವನ್ನು ಬರೆದು, ನವಿಲು, ಮುಂಗುಸಿ, ಹದ್ದುಗಳ ಉಗುರನ್ನು ತೇದು, ಹೆದ್ದುಂಬೆಯ ಬೇರು, ಪಾತಾಳ ಗರುಡದೊಂದಿಗೆ ಲೇಪಿಸುವುದರಿಂದ ಎಂತಹ ಭಯಂಕವಾದ ವಿಷವೂ ಪರಹಾರವಾಗುವುದು.

ಸರ್ಪೋಚ್ಚಾಟನ ಮಂತ್ರ:

> **"ಓಂ ಹ್ರೀಂ ಭ್ರೂಂ ಕ್ಷೂಂ ಹಂಸ ಮಹಾಹಂಸ ಪದ್ಮಹಂಸ ಶಿವಹಂಸ ಪರಮಹಂಸ**
> **ಜರಿಹಂಸ ಪಕ್ಷಿವಿಷಂ ಪಕ್ಷಯೇಣಾ ಮೇಣಾಂ ಜಾಂಗಳಿಂಮಂತೊಲಗಿಸು ಜಿಕೊಂತೊ**

---

೭೭. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೨೨೩

೭೮. **ಅದೇ** ; ಪುಟ. ೨೨೪

೭೯. A. Venkat Rao and Pandit H. Shesha Ayyangar (Editors): Khagendramani Darpanam of Mangaraja ; Page. 267

ಜಯಪಕ್ಷಿಂ ಜಯ ಅಂಗಂ ತೊರೆ ಡಾಮರರಯಿತೋ ನಿರ್ವಿಷೀಕರಣಂ ॥”[೮೦]

ಈ ಮಂತ್ರದೊಂದಿ ಮರಳನ್ನು ಮಂತ್ರಿಸಿ, ಮನೆಯಲ್ಲಿ ಹಾಕುವುದರಿಂದ ಸರ್ಪವು ತಡವಿಲ್ಲದೇ ಮನೆಯಿಂದ ಹೊರಹೋಗುವುದು. ಅಲ್ಲದೇ ಮೂಷಿಕ ಉಚ್ಚಾಟನೆಯ ಬಗೆಯನ್ನು ಕೂಡ ಮಂಗರಾಜನು ಹೇಳುತ್ತಾನೆ.

ಮೂಷಕೋಚ್ಚಾಟನ ಮಂತ್ರ:

“ಓಂ ಚಿರಿ ಮುರಿ ತಿಷ್ಠ ಮೂಷಕಭಿನ್ನ ಗಜೇಂದ್ರವ ಷಟ್ ರರರ ಸ್ವಾಹಾ ॥”[೮೧]

ರವಿವಾರದಂದು ಬೆಳಗಿನ ಜಾವ ಆವಿಗೆಯ ಬೂದಿಗೆ ನೂರ ಎಂಟು ಸಲ ಮಂತ್ರಿಸಿ, ಬೂದಿಯನ್ನು ಹೊಲದಲ್ಲಿ ತಳೆಯುವುದರಿಂದ ಇಲಿಗಳೆಲ್ಲ ಓಡಿಹೋಗುವವು. ಅಲ್ಲದೇ ನಗರೆಯ ಸಿಪ್ಪೆಯನ್ನು ಅರೆದು ಇಲಿಯ ಹಿಕ್ಕೆಯ ಸಹಿತ ಎಣ್ಣೆಯಲ್ಲಿ ಹಾಕಿ ಧೂಪ ಹಾಕುವುದರಿಂದ ಇಲಿಗಳು ಮನೆಯಿಂದ ಓಡಿಹೋಗುತ್ತವೆ.

ಹೀಗೆ ಒಂದನೆಯ ಮಂಗರಾಜನು ತನ್ನ ‘ಖಗೇಂದ್ರಮಣಿ ದರ್ಪಣ’ವೆಂಬ ವಿಷವೈದ್ಯ ಗ್ರಂಥದಲ್ಲಿ ಮನುಷ್ಯನಿಗೊದಗುವ ಹಲವಾರು ರೀತಿಯ ವಿಷಗಳು, ಅವುಗಳಿಗೆ ಪರಿಹಾರ ಚಿಕಿತ್ಸೆಗಳನ್ನು ಕೃತಿಯುದ್ದಕ್ಕೂ ಮಾರ್ಮಿಕವಾಗಿ ಉಪದೇಶಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ವಿಚಾರವೆಂದರೆ ಜೈನಧರ್ಮದ ಸಂಪ್ರದಾಯ, ಆಚರಣೆಗಳಲ್ಲಿ ಹಾಗೂ ಜೈನಾಗಮಗಳಲ್ಲಿ ಜೇನುತುಪ್ಪವು ವರ್ಜ್ಯವಾಗಿದೆ. ಅಲ್ಲದೇ ಇನ್ನೊಂದು ವೈದ್ಯಶಾಸ್ತ್ರ ಗ್ರಂಥವಾದ ಜಗದ್ದಳ ಸೋಮನಾಥನ ‘ಕರ್ಣಾಟಕ ಕಲ್ಯಾಣಕಾರಕ’ದಲ್ಲಿ ಔಷಧೋಪಚಾರಕ್ಕೆ ಮದ್ಯ, ಮಧು, ಮಾಂಸಗಳು ಯೋಗ್ಯವಲ್ಲ ಎಂದು ಹೇಳಲಾಗಿದೆ. ಆದರೆ ಪ್ರಸ್ತುತ ಕೃತಿಯಲ್ಲಿ ಮಂಗರಾಜನು ಹಲವಾರು ಬಗೆಯ ಔಷಧೋಪಚಾರಗಳನ್ನು ಹೇಳುವ ಸಂದರ್ಭದಲ್ಲಿ ಜೇನುತುಪ್ಪವನ್ನು ಬಳಸುವಂತೆ ಹೇಳುತ್ತಾನೆ. ಈ ಅಂಶವು ಜೈನ ಸಂಪ್ರದಾಯಕ್ಕೆ ಸ್ವಲ್ಪ ವ್ಯತಿರಿಕ್ತವಾಗಿದೆ ಎಂದರೆ ತಪ್ಪಾಗಲಾರದು. ಇನ್ನುಳಿದಂತೆ ಸಸ್ಯಮೂಲದ ಔಷಧಗಳನ್ನೇ ಅತೀ ಹೆಚ್ಚಿನ ಪ್ರಮಾಣದಲ್ಲಿ ಉಲ್ಲೇಖಿಸುತ್ತಾನೆ. ಇನ್ನು ಹುಲಿಯ ಹಲ್ಲು, ಮುಂಗುಸಿಯ ಹಲ್ಲು, ಮನುಷ್ಯರ ಹಲ್ಲು, ಬೆಕ್ಕಿನ ಹಲ್ಲು, ಗರುಡನ ಉಗುರು, ನವಿಲಿನ ಉಗುರು, ನರಮೂತ್ರ, ಮೊಲೆಹಾಲುಗಳನ್ನು ಔಷಧಕ್ಕೆ ಬಳಸಬೇಕೆಂದು ಹೇಳಿರುವುದು ಸ್ವಲ್ಪ ಭಿನ್ನವಾಗಿದೆ. ಉಳಿದಂತೆ ಮಂಗರಾಜನು ಹೇಳಿರುವ ಹಲವಾರು ವೈದ್ಯೋಪಚಾರದ ಅಂಶಗಳು ಅತ್ಯಂತ ಉಪಯುಕ್ತವಾದವುಗಳು ಎನ್ನುವುದರಲ್ಲಿ ಸಂದೇಹವಿಲ್ಲ. ಪ್ರತಿನಿತ್ಯ ಕಾಣುವ, ಅತ್ಯಂತ ಸುಲಭವಾಗಿ ಲಭಿಸುವ ಸಸ್ಯಗಳನ್ನೇ ಔಷಧಕ್ಕಾಗಿ ಹೇಳುತ್ತಾನೆ. ಆದರೆ ಗ್ರಾಂಥಕವಾಗಿರುವ ಅವುಗಳ ಹೆಸರುಗಳು ಸ್ವಲ್ಪ ಸುಲಭಗ್ರಾಹ್ಯ ಎನಿಸಲಾರವು. ಆದುದರಿಂದ ಆ ಸಸ್ಯಗಳ ಗ್ರಾಂಥಿಕ ಹೆಸರಿನೊಂದಿಗೆ ಛಾಯಾಚಿತ್ರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ***(ನೋಡಿ – ಅನುಬಂಧ)***

---

೮೦. ಬಿ. ಎಸ್. ಸಣ್ಣಯ್ಯ (ಸಂ); **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ** ; ಪುಟ. ೨೯

೮೧. ಅದೇ ; ಪುಟ. ೨

ಕ) ಪಶು ವೈದ್ಯಶಾಸ್ತ್ರ:

೫.೧.೬. ಕೀರ್ತಿವರ್ಮ (೧೧೦೦):

ಕೀರ್ತಿವರ್ಮನು 'ಗೋವೈದ್ಯ' ಎಂಬ ಪಶುವೈದ್ಯ ಗ್ರಂಥವನ್ನು ಬರೆದಿದ್ದಾನೆ. ಇವನ ಕಾಲವನ್ನು ೧೧೦೦ ಎಂದು ಕವಿಚರಿತೆಕಾರರು ಊಹಿಸಿದ್ದಾರೆ.[೮೨]

> **"ಜಿನನಾಪ್ತಂ ಗುರು ದೇವಚಂದ್ರಮುನಿಪಂ ತ್ರೈಲೋಕ್ಯಮಲ್ಲಾಧಿಪಂ**
> **ಆನಕಂ ಪಾಲಭವಂದ್ಯ... ವಾಕ್ಶ್ರೀವರಂ ವಿಕ್ರಮಾಂ**
> **ಕನರೇಂದ್ರಂ ತನಗಗ್ರಜಾತನೆನಲಂತಾರ್ ನೋಂತರೀಕೀರ್ತಿವ**
> **ರ್ಮನರೇಂದ್ರಂಬರಮೆಂದು ಧಾತ್ರಿ ಪೊಗಟ್ಟುಂ ನಿಚ್ಚ ಮಹೋತ್ಸಾಹದಿಂ ॥"**[೮೩]

ಈ ಪದ್ಯದಿಂದ ಕೀರ್ತಿವರ್ಮನ ತಂದೆ ತ್ರೈಲೋಕ್ಯಮಲ್ಲಾಧಿಪನು. ಅಣ್ಣ ವಿಕ್ರಮಾಂಕ ನರೇಂದ್ರ. ಗುರು ದೇವಚಂದ್ರಮುನಿ. ಈತನು ಜಿನನನ್ನು ಆರಾಧಿಸಿ ಕೃತಿರಚನೆಯಲ್ಲಿ ತೊಡಗುತ್ತಾನೆ. ಇದರಿಂದ ಕೀತಿವರ್ಮನು ಚಾಳುಕ್ಯ ಅರಸು ಮನೆತನದಲ್ಲಿ ಹುಟ್ಟಿದವನೆಂದು ವೇದ್ಯವಾಗುತ್ತದೆ. "ತ್ರೈಲೋಕ್ಯಮಲ್ಲನು ೧೦೪೨ರಿಂದ ೧೦೬೮ರವರೆಗೆ ಆಳಿದಂತೆ ತಿಳಿಯುತ್ತದೆ. ಇನ್ನು ವಿಕ್ರಮಾದಿತ್ಯನು ೧೦೭೬ ರಿಂದ ೧೧೨೬ರವರೆಗೆ ಆಳ್ವಿಕೆ ಮಾಡಿದ ಉಲ್ಲೇಖಗಳಿವೆ. ಈತನು ಕವಿಯ ಅಣ್ಣ. ಆದುದರಿಂದ ಕವಿಯು ಸುಮಾರು ೧೧೦೦ರಲ್ಲಿ ಇದ್ದಿರಬಹುದು. ತ್ರೈಲೋಕ್ಯಮಲ್ಲನಿಗೆ ಕೇತಲದೇವಿಯೆಂಬ ಜೈನಧರ್ಮಾನುಸಾರಿಣಿಯಾದ ಪತ್ನಿಯೊಬ್ಬಳಿದ್ದಂತೆಯೂ ಆಕೆ ಕೆಲವು ಜಿನಾಲಯಗಳನ್ನು ಕಟ್ಟಿಸಿದಂತೆಯೂ ತಿಳಿದುಬರುತ್ತದೆ."[೮೪] ಅಂತೆಯೇ "ಕವಿಯು 'ಜಿನನಾಪ್ತಂ' ಎಂದು ಹೇಳಿಕೊಂಡಿರುವುದರಿಂದ ಕೇತಲದೇವಿಯ ಮಗನಾಗಿರಬಹುದು. ಕೀರ್ತಿಚಂದ್ರ, ವೈರಕರಿಹರಿ, ಕಂದರ್ಪಮೂರ್ತಿ, ಸಮ್ಯಕ್ತ್ವರತ್ನಾಕರ, ಬುಧಭವ್ಯಬಾಂಧವ, ವೈದ್ಯರತ್ನ, ಪಾಲಭವಂದ್ಯ, ಕವಿತಾಬ್ಧಿ, ಚಂದ್ರಮ ಕೀರ್ತಿವಿಳಾಸ ಎಂದು ತನ್ನನ್ನು ವಿಶೇಷಿಸಿಕೊಂಡಿದ್ದಾನೆ."[೮೫]

೫.೧.೬.೧. ಗೋವೈದ್ಯ:

ಪೂರ್ವಕಾಲದಿಂದಲೂ ಪಶುಸಂಗೋಪನೆಯು ಭಾರತೀಯ ಪರಂಪರೆಯಲ್ಲಿ ಎಲ್ಲೆಡೆಯೂ ಕಾಣಸಿಗುತ್ತದೆ. ಮಾನವನು ತನ್ನೊಂದಿಗೆ ಹಲವಾರು ಪ್ರಾಣಿಗಳನ್ನು ಸಾಕಿ ತನ್ನ ಸಹಾಯಕ್ಕಾಗಿ ಬಳಸಿಕೊಳ್ಳುತ್ತಿದ್ದನು. ಅಂತೆಯೇ ಪಶುಗಳು ಅಂದಿನ ಕಾಲದ ಸಂಪತ್ತಾಗಿಯೇ ಗುರುತಿಸಿಕೊಳ್ಳುತ್ತಿದ್ದವು. ಯಾರ ಹತ್ತಿರ ಹೆಚ್ಚು ಗೋವುಗಳಿವೆಯೋ ಅವನೇ ಶ್ರೀಮಂತನೆಂದು ಹೇಳುತ್ತಿದ್ದರು. ಇಂದಿಗೂ ಈ ಮಾತು ಹಳ್ಳಿಗಳಲ್ಲಿ ರೂಢಿಗತವಾಗಿದೆ. 'ಮನ್ಯಾಗ ದನ ಎಷ್ಟಿರ್ತಾವೋ

---

೮೨. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ** ; ಪುಟ. ೧೩೬

೮೩. ಆರ್ವೀಯಸ್ ಸುಂದರಂ : **ಶಾಸ್ತ್ರ ಸಾಹಿತ್ಯ** ; ಪುಟ. ೪೪

೮೪. **Indian Antiquery** Vol. XIX ; Page. 268

೮೫. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ** ; ಪುಟ. ೧೩೭

ಅಷ್ಟು ಹೊಲ ಬೆಳಿತೈತಿ' ಎಂಬುದು ರೈತಾಪಿ ವರ್ಗದ ಮಾತಾಗಿದೆ. ಅವರಿಗೆ ಪಶುಗಳೇ ಸಂಪತ್ತು. ಅಲ್ಲದೇ ಹಿಂದಣ ಕಾಲದಲ್ಲಿ ಸೈನ್ಯಕ್ಕಾಗಿಯೇ ಆನೆ ಮತ್ತು ಕುದುರೆಗಳನ್ನು ಬೇರೆ ಬೇರೆ ದೇಶಗಳಿಂದ ತರಿಸಿಕೊಂಡು, ಅವುಗಳಿಗೆ ತರಬೇತಿ ನೀಡಿ ಬಲಿಷ್ಠವಾದ ಸೈನ್ಯವನ್ನು ನಿರ್ಮಿಸಿಕೊಳ್ಳುತ್ತಿದ್ದರು. ಯುದ್ಧಗಳ ಸಂದರ್ಭದಲ್ಲಿ ಆನೆ, ಕುದುರೆಗಳೂ ಗಾಯಗೊಳ್ಳುತ್ತಿದ್ದವು. ಹೀಗಿರುವಾಗ ಮನುಷ್ಯನಿಗೆ ಬರುವಂತೆ ಅವುಗಳಿಗೂ ಹಲವಾರು ರೋಗಗಳು ಬಂದೊದಗುವುದೂ ಅಷ್ಟೇ ಸಾಮಾನ್ಯ. ಹಾಗಾಗಿ ಪಶುಗಳು ರೋಗಗಳಿಗೆ ತುತ್ತಾದಾಗ ಅವುಗಳಿಗೆ ತನ್ನಂತೆಯೇ ಉಪಚರಿಸಲು ವನಸ್ಪತಿ ಔಷಧಿ ಕ್ರಮಗಳನ್ನು ಕಂಡುಕೊಂಡನು. ಹಾಗಾಗಿ 'ಗಜಶಾಸ್ತ್ರ', 'ಅಶ್ವಶಾಸ್ತ್ರ', ಮುಂತಾದ ಪಶ್ವೋಪಚಾರ ಶಾಸ್ತ್ರಗಳು ಜನಿತವಾದವು.[೮೬] ಹಾಗೆಯೇ ಅಮೂಲ್ಯ ಸಂಪತ್ತೆನಿಕೊಂಡ ಗೋವುಗಳಿಗೂ ರೋಗ–ರುಜಿನಗಳಾದಾಗ ಅವುಗಳ ಉಪಚಾರ ಕ್ರಮವನ್ನು ತಿಳಿಸಲು ಹಲವಾರು ಗ್ರಂಥಗಳು ಹುಟ್ಟಿಕೊಂಡವು. ಅಂತಹವುಗಳಲ್ಲಿ ಕೀರ್ತಿವರ್ಮನ ಗೋವೈದ್ಯವೂ ಒಂದು.

ಗೋವೈದ್ಯದಲ್ಲಿ ತಿಳಿಸಲಾಗಿರುವ ಹಲವು ಚಿಕಿತ್ಸಾವಿಧಾನಗಳನ್ನು ಡಾ. ಧನ್ಯಕುಮಾರ ಇಜಾರಿಯವರ ಜೈನ ವೈದ್ಯಕೀಯ ಪರಂಪರೆ ಎಂಬ ಕೃತಿಯಿಂದ ಈ ಮುಂದಿನಂತೆ ನೀಡಲಾಗಿದೆ.

೧. **ಬಂಜೆ ಹಸುವಿಗೆ:** ಗೊಡ್ಡುಬಿದ್ದ ಹಸುವಿನ ಯೋನಿಗೆ ಆಡಿನ ತುಪ್ಪವನ್ನಾಗಲೀ, ಕುರಿಯ ತುಪ್ಪವನ್ನಾಗಲೀ ಹಾಕಬೇಕು. ಲೊಕ್ಕಿಯ ಬೇರನ್ನು ಜಜ್ಜಿ ತೆಗೆದ ರಸವನ್ನು ಯೋನಿಗೆ ಬಿಡಬೇಕು. ಇದರಿಂದ ಆ ಹಸು ತೆನೆಯಾಗುವುದು (ಬೆದೆಗೆ ಬರುವುದು.). ಆಗ ಅದು ಹೋರಿಯೊಡನೆ ಸೇರಿ ಗರ್ಭಧರಿಸುವುದು.

೨. **ದನವು ಮಾಸನ್ನು ತಿಂದಾಗ:** ಕೆಲ ಸಂದರ್ಭಗಳಲ್ಲಿ ಪಶುಗಳು ಮಾಸನ್ನು ತಿಂದಿದ್ದ ಪಕ್ಷದಲ್ಲಿ ಎಳ್ಳನ್ನು ಪುಡಿಮಾಡಿ, ಬೆಲ್ಲ ಸೇರಿಸಿ ತಿನ್ನಿಸಬೇಕು. ಇಲ್ಲವೇ ಅಗಸೆ ಬೀಜದ ಪುಡಿಯನ್ನು ಹಾಲಿನೊಡನೆ ಸೇರಿಸಿ ಕುಡಿಸಬೇಕು.

೩. **ದಿನ ತುಂಬದೆ ಗರ್ಭದಿಂದ ಕರು ಹೊರ ಬಂದಾಗ:** ಕರುವನ್ನು ಅಕ್ಕಿ ಕಲಗಚ್ಚಿನಲ್ಲಿ ತೊಳೆದು, ನಂತರ ಅದಕ್ಕೆ ಕರಿ ಕಾಕೆಯ ರಸ ಇಲ್ಲವೇ ಉತ್ತರಣೆ ಬೇರಿನ ರಸವನ್ನು ಹಚ್ಚಿ ಮುಷ್ಟಿಯಿಂದ ಒಳಕ್ಕೆ ಒತ್ತಿದರೆ ಕರುವು ತನ್ನ ನೆಲೆಗೆ ಸೇರಿಕೊಳ್ಳುವುದು.

೪. **ಹಸುವು ಕರುವಿಗೆ ಮೊಲೆಯುಣಿಸದಿದ್ದಾಗ:** ಸುಗಂಧಿ, ಕಲ್ಲುಪ್ಪು, ಜೀರಿಗೆಗಳನ್ನು ಮಜ್ಜಿಗೆಯಲ್ಲಿ ಅರೆದುಕೊಂಡು ಕರುವಿನ ಮೈಗೆಲ್ಲ ಲೇಪಿಸಿ ಅದನ್ನು ಹಸುವಿನ ಮುಂದೆ ಬಿಟ್ಟರೆ ಅದು ಕರುವನ್ನು ಪ್ರೀತಿಯಿಂದ ನೆಕ್ಕುತ್ತ ಹಾಲು ಕುಡಿಸುವುದು.

---

೮೬. ನೋಡಿ, ಅಧ್ಯಾಯ–೨.೩.೭. **ಗಜಶಾಸ್ತ್ರ ಮತ್ತು ಅಶ್ವಶಾಸ್ತ್ರ** ; ಪುಟ. ೩೨

೫. **ಹಸುವು ಒರಟಾಗಿದ್ದರೆ:** ರುದಂತಿ ಅಥವಾ ಬಿಳಿ ಸಾಸುವೆ, ಬಜೆ, ಸೇಗುಡಿತೆಯ ಬೀಜಗಳನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡು ಆಡಿನ ಮೂತ್ರದಲ್ಲಿ ಸೇರಿಸಿ ಹಸುವಿನ ಕಣ್ಣುಗಳಿಗೆ ಹಚ್ಚುವುದರಿಂದ ಅದು ಸಾಧುವಾಗುವುದು.

೬. **ಗರ್ಭದಲ್ಲಿ ಕರು ಸತ್ತಿದ್ದರೆ:** ಎಮ್ಮೆ ಅಥವಾ ಹಸುವಿನ ಗರ್ಭದಲ್ಲಿ ಕರು ಸತ್ತಿದ್ದರೆ ಅದು ಹೊರಬರಲು ಎಳ್ಳು, ವಾಕುಚಿಯ ಬೀಜ, ಅವರೆ ಬೀಜ, ಅಗಸೆ ಬೀಜಗಳನ್ನು ಸೇರಿಸಿ ಪುಡಿಮಾಡಿ ಒಂದೊಂದಾಗಿ ತಿನ್ನಿಸಿದರೆ ಫಲಕಾರಿಯಾಗುವುದು. ಮಾಸು ಬೀಳದಿದ್ದರೆ ಅಗಸೆ, ಹೆಸರು, ಅವರೆಬೀಜ, ವಾಕುಚಿಬೀಜ, ಗುಳ್ಳನಕಾಯಿ, ಎಳ್ಳಿನ ಹಿಂಡಿ, ಬಳ್ಳಿ ಸೋರೆಯ ಸಮೂಲಗಳನ್ನು ಪುಡಿಮಾಡಿ, ಹಾಲು ಇಲ್ಲವೇ ಮದ್ಯದಲ್ಲಿ ಸೇರಿಸಿ ಕುಡಿಸುವುದರಿಂದ ಮಾಸು ಬೀಳುವುದು. ಒಂದು ವೇಳೆ ಮಾಸು ಬೀಳಲು ತಡವಾದರೂ ಇದೇ ಪ್ರಯತ್ನವನ್ನು ಮುಂದುವರೆಸುವುದು. ಮಾಸು ಹೊರಬಂದಾಗ ಕೈಯಿಂದ ಅದನ್ನು ಮೃದುವಾಗಿ ಬಿಡಿಸಿ ತೆಗೆಯುವುದು.

೭. **ಬಾಯಿರೋಗ:** ದನಗಳು ಉಸಿರನ್ನು ಕಟ್ಟಿಸಿ ಬಿಡುವುದು, ಬಾಯಿ ಕೆಂಪಾಗಿ ಲೋಳೆಯಂತಹ ಜೊಲ್ಲು ಸುರಿಯುತ್ತಿದ್ದರೆ ಅದು ಬಾಯಿರೋಗದ ಲಕ್ಷಣ. ಇದಕ್ಕೆ ಚಿಕಿತ್ಸೆ ಎಂದರೆ ಪಶುಗಳ ಬಾಯಿಯನ್ನು ಕಾಗೆಯ ಗರಿಯಿಂದ ಒರೆಸೆ ಬಿಸಿ ನೀರಿನಿಂದ ಸ್ವಚ್ಛಗೊಳಿಸುವುದು. ಶುಂಠಿ, ಮೆಣಸು, ಹಿಪ್ಪಲಿಗಳನ್ನು ಅರೆದು ನೀರಿನಲ್ಲಿ ಸೇರಿಸಿ ಬಾಯಿಗೆ ಹಚ್ಚುವುದು. ಇಲ್ಲವೇ ಸಾಸುವೆ ಎಣ್ಣೆಯಲ್ಲಿ ಎಕ್ಕೆಯ ಎಲೆಯನ್ನು ಸೇರಿಸಿ ಅರೆದು ಎಳ್ಳೆಣ್ಣೆಯಲ್ಲಿ ಸೇರಿಸಿ ಹಚ್ಚಬೇಕು. ದನಗಳಿಗೆ ಬಾಯಿರೋಗದೊಂದಿಗೆ ಕಾಲುಬೇನೆಯು ಕೂಡ ಬರುತ್ತದೆ. ಅದಕ್ಕೂ ಈಗ ಹೇಳಿದ ಚಿಕಿತ್ಸೆಯನ್ನು ಮಾಡಬಹುದು.

೮. **ದನಗಳ ಕೆಮ್ಮು:** ಅಗಸೆ ಸೊಪ್ಪನ್ನು ಕ್ರಮವಾಗಿ ಗಂಜಿ, ಆಕಳ ಮಜ್ಜಿಗೆ ಇಲ್ಲವೇ ಅಕ್ಕಿಯ ಗಂಜಿಯಲ್ಲಿ ಅರೆದು ನಸ್ಯ ಮಾಡಿಸುವುದು.

೯. **ಹೊಟ್ಟೆಶೂಲೆ:** ದನಗಳು ಮೇವು ತಿನ್ನದಿರುವುದೂ, ಮೆಲುಕು ಹಾಕದಿರುವುದು, ಕಾಲುಗಳನ್ನು ಸದಾ ಬಡಿದುಕೊಳ್ಳುವುದು ಈ ಲಕ್ಷಣಗಳು ದನಗಳ ಹೊಟ್ಟೆ ನೋವನ್ನು ಸೂಚಿಸುತ್ತವೆ. ಅದಕ್ಕೆ ಶುಂಠಿ, ಬೆಳ್ಳುಳ್ಳಿ, ಉಪ್ಪು, ಗಜಹಿಪ್ಪಲಿ, ಚವ್ಯ, ಇಂಗು, ಅಂಗುರ, ಬೆಲ್ಲ, ಅಜವಾನ, ಅರಿಸಿನ, ಬಜೆಗಳನ್ನು ಅರೆದು ನೀರಿನಲ್ಲಿ ಸೇರಿಸಿ ಕುಡಿಸುವುದು.

೧೦. **ನರಡಿರೋಗ:** ಇದು ಪಶುಗಳಿಗೆ ಆಗುವ ತೀವ್ರ ಸ್ವರೂಪದ ಸಾಂಕ್ರಾಮಿಕ ರೋಗವಾಗಿದೆ. ಇದನ್ನು ಆಧುನಿಕ ತಜ್ಞರು ಅಂಥ್ರಾಕ್ಸ್ ಎನ್ನುತ್ತಾರೆ. ಇದರಿಂದ ದನಗಳು ಬದುಕಿ ಉಳಿಯುವುದು ತೀರಾ ಕಡಿಮೆ. ರೋಗವು ತಗುಲಿದ ೧೨ರಿಂದ ೨೪ ಗಂಟೆಗಳಲ್ಲಿ ದನವು ಒದ್ದಾಡಿ ಸಾಯುತ್ತದೆ.

೧೧. **ಜ್ವರ:** ಪಶುಗಳ ಕಣ್ಣುಗಳಲ್ಲಿ ನೀರು ಒಸರುವುದು, ಕೆಮ್ಮುವುದು, ಶರೀರದಲ್ಲಿ ನಡುಕ ಕಂಡುಬರುವುದು, ದೇಹದಲ್ಲಿ ಉಷ್ಣತೆ ಹೆಚ್ಚಾಗಿರುವುದು ಇವುಗಳು ದನಗಳಲ್ಲಿನ ಜ್ವರದ ಲಕ್ಷಣಗಳು. ಲೊಕ್ಕಿಯ ಕಾಯಿ, ಅರಿಷ್ಟಫಲ, ಹಂದಿಗಡ್ಡೆ, ಹುರುಳಿಗಳನ್ನು ಕುದಿಸಿ, ಅದರ ಕಟ್ಟನ್ನು ತೆಗೆದು ಕುಡಿಸಬೇಕು. ಇಲ್ಲವೇ ತುಳಸಿ, ಅಮೃತಬಳ್ಳಿ, ಮಜ್ಜಿಗೆ ಹುಲ್ಲುಗಳನ್ನು ಕುದಿಸಿ ನೀರು ಕುಡಿಸುವುದು. ಇದರಿಂದ ದನಗಳ ಜ್ವರವು ಪರಿಹರವಾಗುವುದು.

೧೨. **ಹೊಟ್ಟೆಯುಬ್ಬರಿಸಿದಾಗ:** ಕಿರುಕುಸಾಲೆ, ಸೈಂಧವಲವಣ, ಬೆಲ್ಲವತ್ತದ ಫಲ ಲೊಕ್ಕಿ, ಆಲ, ಬಸರೆ ವೃಕ್ಷದ ಚಿಗುರು, ಉಮ್ಮತ್ತದ ಬೇರು, ತಾವರೆಯ ಗೆಂಡೆ, ಬಸಳೆಸೊಪ್ಪುಗಳನ್ನು ಅರೆದು ನೀರಿನಲ್ಲಿ ಸೇರಿಸಿ ಕುಡಿಸಬೇಕು.

೫.೧.೭. ಬಾಚರಸ (೧೫೦೦):

> **"ವಿಶ್ರುತಮೂವತ್ತೈದೆನಿಪ ವೃತ್ತದೊಳಂ ನೆಱಿ ಪೇೞ್ವೆನಾಗಮೈ**
> **ಕಾಶ್ರಯಚೌಂಡರಾಜಸುತ ಬಾಚರಸಂ ಸುಜನೈಕಬಾಂಧವಂ ॥**

ಬಾಚರಸನು 'ಅಶ್ವವೈದ್ಯ'ವನ್ನು ಬರೆದಿದ್ದಾನೆ. ಇವನು ಜೈನಕವಿಯೆಂದು ತೋರುತ್ತದೆ. ಇವನ ತಂದೆ ಚೌಂಡರಾಜ. ಇವನಿಗೆ '**ಸುಜನೈಕಬಾಂಧವ**' ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು ೧೫೦೦"[೮೭] ಎಂದು ಕವಿಚರಿತೆಕಾರರು ಊಹಿಸುತ್ತಾರೆ. ಇದರ ಹೊರತಾಗಿ ಬಾಚರಸನ ಕುರಿತಾಗಿ ಹೆಚ್ಚೇನೂ ಮಾಹಿತಿ ಲಭಿಸುವುದಿಲ್ಲ.

೫.೧.೭.೧. ಅಶ್ವವೈದ್ಯ:

ಬಾಚರಸ ಕವಿಯ 'ಅಶ್ವವೈದ್ಯ'ದಲ್ಲಿ ೩೫ ವೃತ್ತಗಳಿವೆ. ಅಲ್ಲಲ್ಲಿ ಗದ್ಯಭಾಗವೂ ಇದೆ.

> **"ಸುಶ್ರುತಶಾಲಿಹೋತ್ರನಳವಾಕ್ಯದೊಳಂ ಹಯಚೇಷ್ಟೆ ರೂಪು ದಂ**
> **ಂತ ಶ್ರವಣಾಕ್ಷಿ ವರ್ಣ ಸುೞಿ ನಾಲಗೆ ಗಂಧ ಶುಭಾಶುಭಂಗಳಂ ॥**
> **ಪೇರುರಮಾಗಿ ಮಾಂಸಲತೆವೆತ್ತು ಮಯೂರನ ಕಂಠದಂದದಿಂ**
> **ದೇರಣಮಾಗಿಯುಂ ನಿಡುಗೊರಲ್ ಕಡುಸಣ್ಣಮೆ ಗಂಡಮಂಡಲಂ ॥**
> **ಚಾರುಕಪೋಲಮುಂ ತೆಳುಪುವೆತ್ತೆನೆಯಲ್ ಕಿವಿ ಸಣ್ಣ ಮಾತಿಯುಂ**
> **ನೇರಿದಮಾಗಿ ನುಣ್ಪುನನಯಮಂ ಪಡೆಯಲ್ಕಿದು ರಾಜವಾಹನಂ ॥"**[೮೮]

ಕುದುರೆಗಳ ವರ್ಣ, ಸೆಲೆ, ಹಲ್ಲು, ಕಿವಿ, ಕಣ್ಣು, ಸುಳಿ, ನಾಲಿಗೆ, ಗಂಧಗಳು ಮುಂತಾದವುಗಳನ್ನು ಆಧರಿಸಿ ಶುಭಾಶುಭ ವಿಷಯಗಳನ್ನು ತಿಳಿಸಲಾಗಿದೆ. ನವಿಲಿನ ಕೊರಳಿನಂತೆ ಎತ್ತರವಾದ ಕೊರಳನ್ನು ಹೊಂದಿದ್ದು, ಕೊರಳಭಾಗವು ಬಿಳಿದಾಗಿದ್ದರೆ ಶುಭಕರವೂ. ಸುಂದರವಾದ ಕಪೋಲವು ಕಿವಿಯು ಸಣ್ಣದಾಗಿಯೂ ನುಣುಪಾದ ಮೈಯನ್ನು ಹೊಂದಿದ್ದರೆ ಅದು ರಾಜವಾಹವೆನಿಸುವುದು.

---

೮೭. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ದ್ವಿತೀಯ ಸಂಪುಟ** ; ಪುಟ. ೧೧೨
೮೮. **ಅದೇ** ; ಪುಟ. ೧೧೩

ಹೀಗಿರುವ ವೈದ್ಯಶಾಸ್ತ್ರವು ಪ್ರಸ್ತುತ ಆಧುನಿಕ ಸಂದರ್ಭದಲ್ಲಿಯೂ ಅನುಗತವಾಗಿವೆ. ಇಂದಿನ ಆಧುನಿಕ ಯುಗದ ಭರಾಟೆಯಲ್ಲಿ ಮುಳುಗಿಹೋಗಿರುವ ಮಾನವನು ಹೋಮಿಯೋಪಥಿ, ಅಲೋಪಥಿಗಳಂತಹ ಚಿಕಿತ್ಸೆಗಳಿಗೆ ಮಾರುಹೋಗಿ ಬೇಸತ್ತು, ಕೊನೆಗೆ ಪ್ರಾಚೀನರ ಆಯುರ್ವೇದ ಚಿಕಿತ್ಸೆಗಳನ್ನು ಒಪ್ಪಿಕೊಂಡು ಅವುಗಳ ಕಡೆಗೆ ವಾಲುತ್ತಿರುವುದು ಪ್ರಸ್ತುತ ಸಂದರ್ಭಕ್ಕೆ ಉಚಿತವಾಗಿದೆ ಎಂದು ಹೇಳಿದರೆ ತಪ್ಪಾಗದು. ಚಿಕಿತ್ಸಾ ಕ್ರಮಕ್ಕೆ ಹಲವಾರು ಆಯಾಮಗಳನ್ನು ಹಾಕಿಕೊಟ್ಟ ಪೂರ್ವಿಕರು ಶಸ್ತ್ರಕ್ರಿಯೆಗಳನ್ನು ಕ್ರಿಸ್ತ ಪೂರ್ವದಲ್ಲಿಯೇ ಕಂಡುಕೊಂಡಿದ್ದರೆಂಬುದು ಉಲ್ಲೇಖಾರ್ಹ ಅವರು ತೋರಿಸಿಕೊಟ್ಟ ಆ ರಹದಾರಿಯು ಇಂದಿನವರಿಗೆ ಅತ್ಯುಪಯುಕ್ತವಾಗಿದೆ.

೫.೨. ಜ್ಯೋತಿಷ್ಯ ಶಾಸ್ತ್ರ:

ಮನುಷ್ಯನಿಗೆ ಭೂತ, ವರ್ತಮಾನಗಳಿಗಿಂತಲೂ ಭವಿಷ್ಯದ ಮೇಲೆ ಅತ್ಯಂತ ಕುತೂಹಲ. ಹೀಗಾಗಿ ನಾಳೆ ಏನಾಗಬಹುದು ಎಂಬುದನ್ನು ಅರಿಕೊಳ್ಳಲು ಅವನಲ್ಲಿ ಅಷ್ಟೇ ಉತ್ಸಾಹ. ಒಂದು ಶಿಶುವು ಜನಿಸಿದ ಕೂಡಲೇ ಜನ್ಮ ನಕ್ಷತ್ರ ಯಾವುದು? ರಾಶಿ ಯಾವುದು? ಆ ಮಗುವಿಗೆ ಶುಭಾಶುಭಗಳೇನು? ಮಗುವಿನ ಭವಿಷ್ಯವೇನು? ಇವೆಲ್ಲವುಗಳನ್ನೂ ತಿಳಿದುಕೊಳ್ಳುವುದಕ್ಕೂ ಅಷ್ಟೇ ಆಸ್ಥೆಯನ್ನು ತೋರುತ್ತಾನೆ. ಇವೆಲ್ಲದಕ್ಕೂ ಮನುಷ್ಯ ಕಂಡುಕೊಂಡ ಮಾರ್ಗವೇ ಜ್ಯೋತಿಷ್ಯ. ಜಗತ್ತಿನಾದ್ಯಂತ ಜ್ಯೋತಿಷ್ಯ ಶಾಸ್ತ್ರವು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಜ್ಯೋತಿಷವು ಭಾರತೀಯ ಜೀವನದಲ್ಲಿ ಹಾಸುಹೊಕ್ಕಾಗಿದೆ. ಪ್ರಾಚೀನ ಭಾರತೀಯ ನಾಗರಿಕತೆಯ ಸಾಂಸ್ಕೃತಿಕ, ಧಾರ್ಮಿಕ, ವ್ಯಾವಹಾರಿಕ ಪರಂಪರೆಗೆ ಸಂದ ವೇದ, ಉಪನಿಷತ್ತುಗಳೇ ಮುಂತಾದುವುಗಳೊಡನೆ ಸಾಂಗೋಪಾಂಗವಾಗಿ ಬೆಳೆದು ಅಖಂಡತೆಯನ್ನು ಪಡೆದಿದೆ. ಜ್ಯೋತಿಷಕ್ಕೆ ಜನ್ಮಾಂತರ ಕರ್ಮಸಿದ್ಧಾಂತಗಳು ಆಧಾರಭೂತ. ವ್ಯಕ್ತಿವ್ಯಕ್ತಿಗೂ ಇರುವ ಭಿನ್ನತೆಯನ್ನು ಇದೇ ಹಿನ್ನೆಲೆಯಲ್ಲಿ ಗುರುತಿಸುತ್ತದೆ. ಅದು ಜನ್ಮಾಂತರಗಳಿಂದ ಕೂಡಿಹಾಕಿಕೊಂಡು ಬಂದಿರುವ ಕರ್ಮ. ಈ ಜನ್ಮದಲ್ಲಿ ಫಲಿಸುವ ಕರ್ಮಭಾಗ ಪ್ರಾರಬ್ಧ. ಇದನ್ನು ಗ್ರಹನಕ್ಷತ್ರ ಸಂಕೇತಗಳ ಮೂಲಕ ಜಾತಕ ನಿರ್ದೇಶಿಸುತ್ತದೆ.

ಜ್ಯೋತಿಷ್ಯ ಶಾಸ್ತ್ರವು ವೇದಾಂಗಗಳಲ್ಲಿ ಒಂದು. ವೇದಕಾಲದಲ್ಲಿ ಆರ್ಯರು ಶಾಸ್ತ್ರವನ್ನು ಬಹು ಆವಶ್ಯಕವಾಗಿ ಅಭ್ಯಾಸ ಮಾಡಬೇಕಾಗಿದ್ದಿತು. ಅವರು ಆಚರಿಸುತ್ತಿದ್ದ ಯಜ್ಞ ಯಾಗಾದಿ ಆಚರಣೆಗಳಿಗೆ ಬಹುನಿಷ್ಕೃಷ್ಟವಾದ ಕಾಲಗಣನೆ ಅಗತ್ಯವಾಗಿದ್ದಿತು. ಅಲ್ಲದೇ ಯಜ್ಞಕ್ಕೆ ಸಂಬಂಧಪಟ್ಟ ವೇದಿಕೆ ಮತ್ತು ಕುಮಡಗಳ ನಿರ್ಮಾಣ ಕಾರ್ಯದಲ್ಲಿ ಅಳತೆಗಳು ಅನಿವಾರ್ಯವಾಗಿದ್ದವು. ಅದಕ್ಕಾಗಿ ಅವರು ಇದಕ್ಕೆ ಸಂಬಂಧಿಸಿದಂತೆ ಜ್ಯೋತಿಶ್ಶಾಸ್ತ್ರದ ಪೂರ್ಣಪರಿಚಯವನ್ನು ಪಡೆಯುತ್ತಿದ್ದರು. “ಖಗೋಳ, ಜ್ಯೋತಿಷ್ಯ, ಗಣಿತ ಇದಕ್ಕೆ ಮೂರು ಮುಖಗಳು. ಗ್ರಹಗಳ

ಚಲನವಲನವನ್ನು ತಿಳಿಸುವುದು ಖಗೋಳ. ಮಾನವಕೋಟಿಯ ಮೇಲೆ ಅವುಗಳ ಪರಿಣಾಮವನ್ನು ತಿಳಿಸುವುದು ಜ್ಯೋತಿಷ್ಯ. ಇವುಗಳನ್ನು ಗುರುತಿಸಿ ಲೆಕ್ಕಾಚಾರಮಾಡಿ, ಫಲನಿರ್ಣಯ ಮಾಡುವುದು ಗಣಿತ. ಇವುಗಳಿಗೆ ತ್ರಿಸ್ಕಂಧಗಳು ಎಂದು ಹೆಸರು."[೮೯]

"'ಜ್ಯೋತಿ' ಎಂದರೆ ಬೆಳಕು. ಬೆಳಕಿನ ಸಹಾಯದಿಂದ ಶಾಸ್ತ್ರೀಯವಾಗಿ ಗ್ರಹಗಳ ಚಲನೆಗಳ ಪರಿಣಾಮ ಮಾನವನ ಜೀವನದ ಮೇಲೆ ಆಗುವ ಪರಿಣಾಮಗಳನ್ನು ಗಣಿತಶಾಸ್ತ್ರದ ಆಧಾರದ ಮೇಲೆ ನಿಷ್ಕರ್ಷಿಸುವುದೇ ಜ್ಯೋತಿಷ್ಯಾಸ್ತ್ರ. ಜ್ಯೋತಿಷ ಶಾಸ್ತ್ರವು ಒಂದು ವಿಜ್ಞಾನವಾಗಿದೆ. ಏಕೆಂದರೆ ಗ್ರಹಗಳ ಚಲನೆಯನ್ನು ಕರಾರುವಾಕ್ಕಾಗಿ ಲೆಕ್ಕಿಸಿ ಅದರ ಪರಿಣಾಮ ಮಾನವನ ನಿತ್ಯಜೀವನದ ಮೇಲಾಗುವ ಪ್ರಭಾವವನ್ನು ಬೀರುತ್ತದೆಂಬುದು ನಿಖರವಾಗಿ ಹೇಳುವುದು ವಿಜ್ಞಾನದಿಂದ ಮಾತ್ರವೇ ಸಾಧ್ಯ."[೯೦] ಇಂದು ಈ ವಿಜ್ಞಾನವನ್ನು ಸರಿಯಾಗಿ ಅಧ್ಯಯನ ಮಾಡದೇ ಹಲವರು ಈ ಶಾಸ್ತ್ರ ತಪ್ಪಾಗಿ ಬಳಸಿಕೊಳ್ಳುತ್ತಿದ್ದಾರೆ. ಅದು ಜ್ಯೋತಿಷಿಗಳ ತಪ್ಪೇ ಹೊರತು ಶಾಸ್ತ್ರದ್ದಲ್ಲ ಎಂದು ವ್ಯಾಖ್ಯಾನಿಸಬಹುದು.

"ಜ್ಯೋತಿಷ್ಯ ಶಾಸ್ತ್ರ ಎಂದರೆ ನಮ್ಮ ಭವಿಷತ್ ಹೇಗಿರುತ್ತದೆ ಎಂದು ತಿಳಿಸುವ ಮಾಯಾ ಕನ್ನಡಿ. ಈ ಜ್ಯೋತಿಷ್ಯ ಶಾಸ್ತ್ರ ಅರಿವು ಮಾನವ ಕುಲಕ್ಕೆ ದೊರೆತಿರುವ ಒಂದು ಮಹತ್ತರವಾದ ವರ. ಈ ಜ್ಯೋತಿಷ್ಯ ಶಾಸ್ತ್ರದ ಮುಖಾಂತರ ನಮ್ಮ ಭವಿಷ್ಯತ್ತನ್ನು ನಾವು ಅರಿಕೊಳ್ಳುವುದು ಎಂದರೆ ಜ್ಞಾನನೇತ್ರವನ್ನು ಪಡೆದುಕೊಂಡಂತೆಯೇ. ಹೀಗಾಗಿ ಜ್ಯೋತಿಷ್ಯ ಶಾಸ್ತ್ರದ ಅರಿವು ಮನುಜನ ಬಾಳಿಗೆ ಒಂದು ಮಹತ್ತರವಾದ ಬೆಳಕಿದ್ದಂತೆ."[೯೧]

ಶರೀರಕ್ಕೆ ಕಣ್ಣು ಹೇಗೆ ಪ್ರಧಾನವಾಗಿರುವುದೋ ಹಾಗೆಯೇ ಜ್ಯೋತಿಷ್ಯಾಸ್ತ್ರವು ವೇದಗಳಿಗೆ ಕಣ್ಣಿನಂತಿದೆ. ಸಿದ್ಧಾಂತ, ಸಂಹಿತಾ, ಹೋರಾ ಎಂಬುವು ಪ್ರಮುಖ ಮೂರು ಭೇದಗಳು ಜ್ಯೋತಿಷ್ಯ ಶಾಸ್ತ್ರದಲ್ಲಿವೆ. "ವೇದಕ್ಕೆ ಕಣ್ಣಿನಂತಿರುವ ಈ ಜ್ಯೋತಿಷ್ಯಾಸ್ತ್ರವನ್ನು ಕಾಲವಿದಾಯಕ ಶಾಸ್ತ್ರವೆಂದೂ ಕರೆಯುತ್ತಾರೆ."[೯೨] ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರಶ್ನಶಾಸ್ತ್ರ, ಹಸ್ತ ಸಾಮುದ್ರಿಕ, ಶಕುನ, ನಾಡೀ ಶಾಸ್ತ್ರ, ಸ್ವಪ್ನಫಲ ಮುಂತಾದ ವಿಷಯಗಳು ಸಮಾವೇಶಗೊಂಡಿವೆ.

"ಸೂರ್ಯಃ ಪಿತಾಮಹೋ ವ್ಯಾಸಃ ವಸಿಷ್ಠೋತ್ರಿ ಪರಾಶರಃ ।
ಕಶ್ಯಪೋ ನಾರದಃ ಗರ್ಗೋ ಮರೀಚಿರ್ಮನುರಂಗಿರಾಃ ॥
ಲೋಮಶಃ ಪೌಲಶಶ್ಚೈವ ಚ್ಯವನೋ ಯವನೋ ಭೃಗುಃ ।
ಶೌನಕೋಷ್ಟಾದಶಾಶ್ಚೈತೇ ಜ್ಯೋತಿಶ್ಯಾಸ್ತ್ರ ಪ್ರವರ್ತಕಾಃ ॥"[೯೩]

---

೮೯. ಎನ್. ಅನಂತರಂಗಾಚಾರ್ : **ಸಾಹಿತ್ಯ ಭಾರತೀ** ; ಪುಟ. ೧೩೩
೯೦. ಗಣೇಶ ಹೆಗಡೆ : **ಜ್ಯೋತಿಷ್ಯ ಪ್ರವೇಶಿಕಾ** ; ಪುಟ. ೦೩
೯೧. ವಿಶ್ವಕರ್ಮ ಜಿ. ವೈ : **ಜ್ಯೋತಿಷ್ಯ ರತ್ನಾಕರ** ; ಪುಟ. ೦೭
೯೨. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. xii (ಉಪೋದ್ಘಾತ)
೯೩. ಎನ್. ಅನಂತರಂಗಾಚಾರ್ : **ಸಾಹಿತ್ಯ ಭಾರತೀ** ; ಪುಟ. ೧೩೪

ಈ ಶ್ಲೋಕವು ಸೂರ್ಯ, ಪಿತಾಮಹ (ಬ್ರಹ್ಮ), ವ್ಯಾಸ, ವಸಿಷ್ಠ, ಅತ್ರಿ, ಪರಾಶರ, ಕಶ್ಯಪ, ನಾರದ, ಗರ್ಗ, ಮರೀಚಿ, ಮನು, ಅಂಗೀರಸ, ಲೋಮಶ, ಪೌಲಸ್ತ್ಯ, ಚ್ಯವನ, ಯವನ, ಭೃಗು ಹಾಗೂ ಶೌನಕ ಹೀಗೆ ಒಟ್ಟು ಹದಿನೆಂಟು ಜನ ಭಾರತೀಯ ಜ್ಯೋತಿಷ್ಯ ಪ್ರವರ್ತಕರ ಉಲ್ಲೇಖವನ್ನು ನೀಡುತ್ತದೆ. ಆದರೆ ಈ ಜ್ಯೋತಿಷ್ಕರ ಯಾವುದೇ ಗ್ರಂಥಗಳ ಉಪಲಬ್ಧವಾಗಿಲ್ಲ. ಇವರನ್ನನುಸರಿಸಿ ಹಲವಾರು ಜ್ಯೋತಿಷ್ಯ ಗ್ರಂಥಗಳು ಜನ್ಮತಳೆದವು. ಇಂದಿಗೂ ಅವುಗಳೇ ಪ್ರಸ್ತುತವೆನಿಸಿವೆ.

ಕೋಷ್ಟಕ ೫.೧೦

ಕ್ರ. ಸಂ.	ಜ್ಯೋತಿಷ್ಯ ಗ್ರಂಥ	ಕರ್ತೃ	ಕಾಲ
೧)	ವೇದಾಂಗ ಜ್ಯೋತಿಷ್ಯ	ಲಗಧಮುನಿ	ಕ್ರಿ.ಪೂ.೧೪೦೦
೨)	ಕಶ್ಯಪ ಸಂಹಿತೆ	ಕಶ್ಯಪಮುನಿ	೧ನೇ ಶತಕ
೩)	ಆರ್ಯಭಟೀಯ	ಆರ್ಯಭಟ	೫ನೇ ಶತಕ
೪)	ಲಂಘುಸಂಹಿತ	ವರಾಹಮಿಹಿರ	೬ನೇ ಶತಕ
೫)	ಬೃಹಜ್ಜಾತಕಾಖ್ಯ	ಹೋರಾ	–
೬)	ಬ್ರಹ್ಮಸ್ಫುಟ ಸಿದ್ಧಾಂತ	ಬ್ರಹ್ಮಗುಪ್ತ	೬ನೇ ಶತಕ
೭)	ಸಾರಾವಳಿ	ಕಲ್ಯಾಣವರ್ಮ	೬ನೇ ಶತಕ
೮)	ಸಿದ್ಧಾಂತ ಶಿರೋಮಣಿ	ಭಾಸ್ಕರಾಚಾರ್ಯ	೧೨ನೇ ಶತಕ
೯)	ಪಂಚಸಿದ್ಧಾಂತ	ವರಾಹಮಿಹಿರ	–
೧೦)	ಫಲದೀಪಿಕಾ	ಮತ್ರೇಶ್ವರ	–

ಲಗಧಮುನಿಯ ವೇದಾಂಗ ಜ್ಯೋತಿಷ್ಯವೆಂಬುದು ಹಲವಾರು ಗ್ರಂಥಗಳ ಸಂಗ್ರಹ. ಅವುಗಳಲ್ಲಿ ಆರ್ಚಜ್ಯೋತಿಷ್ಯ, ಯಾಜುಷ ಜ್ಯೋತಿಷ್ಯ ಹಾಗೂ ಅಥರ್ವಜ್ಯೋತಿಷ್ಯ ಎಂಬ ಮೂರು ಗ್ರಂಥಗಳು ಮಾತ್ರ ಲಭಿಸಿವೆ. "ದೃಗ್ಗಣಿತರೀತ್ಯಾ ಗ್ರಹಗಳ ಪ್ರತ್ಯಕ್ಷ ಪರಿಶೀಲನೆಯಿಂದ ತಿಥಿ, ವಾರ, ನಕ್ಷತ್ರಗಳನ್ನೂ, ವಿಷು, ಅಯನಾದಿಗಳನ್ನೂ, ಗ್ರಹವಿಚಾರಗಳನ್ನೂ, ವೃದ್ಧಿ, ಕ್ಷಯ, ಅಧಿಕಮಾಸ ಮುಂತಾದವುಗಳ ಮಾಡಿಕೊಂಡು ಹಿಂದಿನ ವೇದಾಂಗ ಜ್ಯೋತಿಷ್ಯಗಳು ಹುಟ್ಟಿರಬೇಕು. ಆದುದರಿಂದಲೇ ಮುಂದೆ ಬಂದ ಸಿದ್ಧಾಂತಗಳಿಗೆ ಅವು ನಿಷ್ಕೃಷ್ಟವಾದ ಗಣಿತ ತತ್ತ್ವಗಳಿಗೆ ಒಳಪಡಲಿಲ್ಲ. ಅಲ್ಲದೇ ಮುಂದೆ ಹಿಂದೂ ಜ್ಯೋತಿಷ್ಯಕಾರರು ಈ ವೇದಾಂಗ ಜ್ಯೋತಿಷ್ಯವನ್ನು ಕೈಬಿಟ್ಟು 'ಸೂರ್ಯಸಿದ್ಧಾಂತ'ವನ್ನು ಅನುಸರಿಸಿದರು. ಆದರೆ ಹಿಂದೂಗಳು ಕೈಬಿಟ್ಟಿದ್ದ ವೇದಾಂಗ ಜ್ಯೋತಿಷ್ಯ ಪದ್ಧತಿಯನ್ನು ಜೈನರು ತಮ್ಮ 'ಸೂರ್ಯಪ್ರಜ್ಞಪ್ತಿ' ಹಾಗೂ 'ಜ್ಯೋತಿಷ್ಕರಂಡಕ' ಮೊದಲಾದ ಗ್ರಂಥಗಳಲ್ಲಿ ಬೆಳೆಸಿಕೊಂಡು ಬಂದರು."[೯೪]

೯೪. ಎನ್. ಅನಂತರಂಗಾಚಾರ್ : **ಸಾಹಿತ್ಯ ಭಾರತೀ** ; ಪುಟ. ೧೩೫

೧. **ಸೂರ್ಯಪ್ರಜ್ಞಪ್ತಿ:** 'ಸುರಿಪ ಪಣ್ಣತ್ತಿ'ಯು ತ್ರಿಲೋಕ ಸಿದ್ಧಾಂತವನ್ನು ತಿಳಿಸುವ 'ತಿಲೋಪ ಪಣ್ಣತ್ತಿ'ಯ ಭಾಗವಾಗಿದೆ. ಇದರಲ್ಲಿ ನಕ್ಷತ್ರ, ಸೂರ್ಯ, ಗ್ರಹಾದಿಗಳ ವಿವರಳನ್ನು ನೀಡಲಾಗಿದೆ. ವಿಶ್ವರಚನೆಯ ಸಿದ್ಧಾಂತದ ಜೊತೆಗೆ ಶ್ರೇಷ್ಠವಾದ ಗಣಿತ ಹಾಗೂ ಜ್ಯೋತಿಷ್ಯ ವಿಜ್ಞಾನವಿದೆ.

೨. **ಜ್ಯೋತಿಷ್ಕರಂಡಕ:** ಉಪಲಬ್ಧ 'ಜ್ಯೋತಿಷ್ಕರಂಡಕ ಪ್ರಕೀರ್ಣಕ'ದಲ್ಲಿ ೩೭೬ ಗಾಹೆಗಳಿವೆ. ಇದರ ಭಾಷೆ ಮಹಾರಾಷ್ಟ್ರೀ ಪ್ರಾಕೃತ. ಸೂರ್ಯ ಪ್ರಜ್ಞಪ್ತಿಯಲ್ಲಿ ಹೇಳಿರುವ ವಿಷಯವನ್ನು ಇದರಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಕಾಲಪ್ರಮಾಣ, ಮಾಸ, ಅಧಿಕಮಾಸ ನಿಷ್ಪತ್ತಿ, ತಿಥಿ-ನಿಷ್ಪತ್ತಿ, ಹೀನರಾಶಿ, ನಕ್ಷತ್ರ ಪರಿಮಾಣ, ಚಂದ್ರ-ಸೂರ್ಯ-ಪರಿಮಾಣ, ನಕ್ಷತ್ರ-ಚಂದ್ರ-ಸೂರ್ಯ ಗತಿ, ನಕ್ಷತ್ರಯೋಗ, ಮಂಡಲ ವಿಭಾಗ, ಅಯನ, ಆವೃತ್ತಿ, ಮುಹೂರ್ತ ಗತಿ, ಋತು, ವಿಷುವತ್, ವ್ಯತಿಪಾತ, ತಾಪ ದಿವಸವೃದ್ಧಿ, ಅಮಾವಾಸೆ-ಪೌರ್ಣಮಿ, ಪ್ರನಷ್ಟ ಪರ್ವ, ಪೌರೂಷಿ ಹೀಗೆ ಇದರಲ್ಲಿ ೨೧ ಅಧ್ಯಾಯಗಳಿವೆ.[೯೫]

ಕಾಲಾಂತರದಲ್ಲಿ ಗ್ರಂಥಗಳನ್ನಾಧರಿಸಿ ಹಲವಾರು ಭಾರತೀಯ ಭಾಷೆಗಳಲ್ಲಿ ಜ್ಯೋತಿಷ್ಯ ಗ್ರಂಥಗಳು ಜನಿತವಾದವು. ಅಂತೆಯೇ ಕನ್ನಡದಲ್ಲಿಯೂ.[೯೬] ಶ್ರೀಧರಾಚಾರ್ಯ ಕೃತ 'ಜಾತಕ ತಿಲಕ'ವು ಕನ್ನಡದ ಮೊದಲ ಜ್ಯೋತಿಷ್ಯಾಸ್ತ್ರ ಗ್ರಂಥ. ತರುವಾಯದಲ್ಲಿ ಹತ್ತು ಹಲವಾರು ಕೃತಿಗಳು ಕನ್ನಡದಲ್ಲಿ ರಚಿತವಾಗಿವೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಜ್ಯೋತಿಷ್ಯ ಶಾಸ್ತ್ರಕ್ಕೆ ಜೈನ ಶಾಸ್ತ್ರಕಾರರು ನೀಡಿದ ಕೊಡುಗೆಯನ್ನು ಅವಲೋಕಿಸುವುದಾಗಿದೆ.

೫.೨.೧. ಶ್ರೀಧರಾಚಾರ್ಯ (೧೦೪೯):

ಕನ್ನಡ ಸಾಹಿತ್ಯದ ಮೊಟ್ಟ ಮೊದಲ ಜ್ಯೋತಿಷ್ಯಶಾಸ್ತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ 'ಜಾತಕತಿಲಕ' ಕೃತಿಯನ್ನು ರಚಿಸಿದನು ಶ್ರೀಧರಾಚಾರ್ಯ. ಶ್ರೀಧರಾಚಾರ್ಯನ ವೈಯಕ್ತಿಕ ವಿಚಾರಗಳಾದ ಜನ್ಮದಿನ, ಸ್ಥಳ, ಜೀವಿತಾವಧಿಯ ಕುರಿತು ಹೆಚ್ಚಿನ ಮಾಹಿತಿ ಲಭಿಸುವುದಿಲ್ಲವಾದರೂ ಈ ಕೃತಿಯಲ್ಲಿ ಹೇಳಿರುವಂತೆ-

> **"ಧರಣಿ ಗಿರಿ ನಿಧಿಶಕಾಬ್ಧಂ**
> **ವಿರೋಧಿವತ್ಸರದ ಮಾರ್ಗಶೀರ್ಷದ ಶುಕ್ಲೇ**
> **ತರದ ಚತುರ್ಥೀದಿವಸದ**
> **ಗುರುಪುಷ್ಯದೊಳೆಸೆದುದಿಳೆಗೆ ಜಾತಕತಿಲಕಂ॥೨೪.೪೪॥"**[೯೭]

ಶಕವರ್ಷ ೯೭೧ (ಕ್ರಿ.ಶ.೧೦೪೯)ನೆಯ ವಿರೋಧಿನಾಮ ಸಂವತ್ಸರದ ಮಾರ್ಗಶಿರ ಮಾಸ, ಕೃಷ್ಣ ಪಕ್ಷದ ಚತುರ್ಥಿ ಗುರುವಾರ ಪುಷ್ಯ ನಕ್ಷತ್ರದಲ್ಲಿ 'ಜಾತಕತಿಲಕ' ಕೃತಿಯನ್ನು ಬರದು

---

೯೫. ಮಿರ್ಜಿ ಅಣ್ಣಾರಾಯ (ಅನು) : **ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ** ; ಪುಟ. ೧೨೧
೯೬. ನೋಡಿ, ಅಧ್ಯಾಯ-**೨.೩.೮. ಜ್ಯೋತಿಷ್ಯ ಶಾಸ್ತ್ರ**; ಪುಟ. ೩೨
೯೭. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೩೦೪

ಮುಗಿಸಿದುದಾಗಿ ಹೇಳಿಕೊಂಡಿದ್ದಾನೆ. ಅಂದರೆ ಶ್ರೀಧರಾಚಾರ್ಯನು ೧೧ನೇ ಶತಮಾನದ ಮಧ್ಯಭಾಗದಲ್ಲಿ ಬಾಳಿ ಬದುಕಿರಬಹುದೆಂದು ತಿಳಿದುಬರುತ್ತದೆ.

"ಉದಧಿವೃತೋರ್ವಿಗೆಮುಖಮೆನಿ
ಸಿದ ಬೆಳುವಲನಾಡಿಗೆ ತಿಲಕದಂದದ ನರುಗುಂ
ದದ ವಿಪ್ರಕುಲೋತ್ತಮನ
ಭ್ಯುದಿತಯಶಂ ಶ್ರೀಧರಂ ವಚೋವಿಭವಧರಂ॥೧.೦೪॥"[೯೮]

ಬೆಳುವಲ ನಾಡಿಗೆ ತಿಲಕಪ್ರಾಯವಾಗಿರುವ ನರಗುಂದದವನಾಗಿದ್ದು, ವಿಪ್ರಕುಲೋತ್ತಮನೆಂದು ಹೇಳಿಕೊಳ್ಳುತ್ತಾನೆ. ಆದರೆ ಈತನು ತನ್ನ ಕೃತಿಯಲ್ಲಿ ಜಿನಸ್ತುತಿ ಮಾಡಿರುವುದರಿಂದ ಜೈನಬ್ರಾಹ್ಮಣನಾಗಿರಬೇಕೆಂದು ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸರು ಊಹಿಸುತ್ತಾರೆ.[೯೯] ಆದರೆ ಕವಿಚರಿತೆಕಾರರು "ಇವನು ಜೈನಕವಿ"[೧೦೦] ಎಂದು ಖಚಿತವಾಗಿ ಹೇಳುತ್ತಾರೆ. ಕವಿಯು ಕೃತಿಯಲ್ಲಿ ಪಂಪ, ರನ್ನ, ಗಜಾಂಕುಶರಾದ ಜೈನ ಮಹಾಕವಿಗಳನ್ನು ಸ್ಮರಿಸಿದ್ದಾನೆ 'ಸಮ್ಯಕ್ತ ರತ್ನಾಕರ' ಎಂಬ ಬಿರುದನ್ನು ಗಳಿಸಿದ್ದು, ಜೈನ ಧರ್ಮದ ಬೋಧಕವಾದ 'ಚಂದ್ರಪ್ರಭ ಚರಿತ' ಎಂಬ ಇನ್ನೊಂದು ಗ್ರಂಥವನ್ನು ರಚಿಸಿದ್ದಾನೆ. ಆದರೆ ಈತನ ಚಂದ್ರಪ್ರಭ ಚರಿತವು ಅನುಪಲಬ್ಧವಾಗಿದೆ. ಗ್ರಂಥದ ಕೊನೆಯಲ್ಲಿ "ಇದು ಭಗವದರ್ಹತ್ಪರಮೇಶ್ವರ ಚರಣಸರಸಿರುಹ ಪಟ್ಪದಾಯೆಮಾನ ಸರಸಪ್ರಸನ್ನ ವಚೋಲಕ್ಷ್ಮೀಧರ ಗದ್ಯಪದ್ಯವಿದ್ಯಾಧರ ಶ್ರೀಧರಾಚಾರ್ಯ ಪ್ರಣೀತಮಪ್ಪ ಜಾತಕತಿಲಕದೊಳ್"[೧೦೧] ಎಂದು ಹೇಳಿಕೊಂಡಿರುವುದರಿಂದ ಇವನು ಜೈನಧರ್ಮಕ್ಕೆ ಸೇರಿದವನೆಂದು ಸ್ಪಷ್ಟವಾಗಿ ಹೇಳಬಹುದುದಾಗಿದೆ.

ಶ್ರೀಧರಾಚಾರ್ಯನು ತನ್ನ ಜಾತಕತಿಲಕದ ಕೊನೆಯಲ್ಲಿ "ಧಾತ್ರಿಯನಾಹವಮಲ್ಲ ಭೂಮಿ ಪಾಲಕನೊಸೆದಾಳ್ಗೆ"[೧೦೨] ಎಂದು ಹೇಳಿಕೊಂಡಿರುವನು. ಅದರಿಂದಾಗಿ ಈತನು ಚಾಲುಕ್ಯ ಜಯಸಿಂಹ ಜಗದೇಕಮಲ್ಲನ ಮಗನಾದ ಆಹವಮಲ್ಲ (ಸೋಮೇಶ್ವರ)ನ ಆಸ್ಥಾನದಲ್ಲಿ ಪಂಡಿತನಾಗಿರಬಹುದೆಂದು ತಿಳಿದು ಬರುತ್ತದೆ. ಈತನಿಗೆ ಪ್ರಜ್ಞಾಧರ, ವಾಕ್ಶ್ರೀಧರ, ಶಾಸ್ತ್ರಕವಿತಾಚತುರ, ಕರಣರತ್ನ, ಬುಧತಿಲಕ, ಬುಧಮಿತ್ರ, ಸಮ್ಯಕ್ತ ರತ್ನಾಕರ ಮುಂತಾದ ಬಿರುದುಗಳಿದ್ದವು. ಇವುಗಳು ಆತನ ಪ್ರೌಢ ಪಾಂಡಿತ್ಯವನ್ನು ಪ್ರತಿಬಿಂಬಿಸುತ್ತವೆ. ಈತನು ಕಾವ್ಯ ಕವಿತ್ವಕ್ಕೆ ಸಂಬಂಧಿಸಿದಂತೆ 'ಚಂದ್ರಪ್ರಭ ಚರಿತೆ'ಯನ್ನೂ, ಶಾಸ್ತ್ರಕವಿತ್ವಕ್ಕೆ 'ಜಾತಕತಿಲಕ' ಎಂಬ ಎರಡು ಕೃತಿಗಳನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ.

---

೯೮. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೦೨

೯೯. **ಅದೇ** ; ಪುಟ. xvi (ಕವಿಯ ವಿಚಾರ)

೧೦೦. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ** ; ಪುಟ. ೯೮

೧೦೧. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೩೦೪

೧೦೨. **ಅದೇ** ; ಪುಟ. ೩೦೪

"ಸುಭಗವಚಂ ಕಾವ್ಯ ಕವಿ
ತ್ವಭೂಷಣಂ ಶ್ರೀಧರಾಚಾರ್ಯ ರಚಿತಂ ಚಂದ್ರ
ಪ್ರಭಚರಿತಂ ಶಾಸ್ತ್ರ ಕವಿ
ತ್ವಭೂಷಣಂ ಧರೆಗೆ ನೆಗಳ್ದ ಜಾತಕತಿಲಕಂ ॥೨೪.೩೯॥"[೧೦೩]

'ಶ್ರೀಧರಾಚಾರ್ಯನಿಂದ ರಚಿತವಾದ ಚಂದ್ರಪ್ರಭ ಚರಿತೆ ಮನೋಹರ ವಾಕ್ಯಗಳಿಂದ ಕೂಡಿ ಕಾವ್ಯಕವಿತ್ವಕ್ಕೆ ಆಭರಣದಂತಿದೆ. ಭೂಲೋಕದಲ್ಲಿ ಪ್ರಸಿದ್ಧವಾಗಿರುವ ಈ ಜಾತಕತಿಲಕ ಗ್ರಂಥವು ಶಾಸ್ತ್ರಕವಿತ್ವಕ್ಕೆ ಆಭರಣದಂತಿದೆ. ಮುಂದುವರೆದು –

"ಅದಿದೆನ್ನದೆ ಜಾತಕತಿ
ಕದೊಳರಿವುದು ಗಣಿತ ಧರ್ಮಮಂ ಸಕಲಜಗ
ದ್ವಿದಿತಂ ಚಂದ್ರಪ್ರಭಚರಿ
ತದೊಳರಿವುದು ಕಾವ್ಯಧರ್ಮಮಂ ಬುಧನಿವಹಂ ॥೨೪.೪೦॥"[೧೦೪]

ಅದು ಇದು ಎಂದು ಸಂಶಯಪಡದೇ ವಿದ್ವಾಂಸರು ಈ ಜಾತಕತಿಲಕ ಗ್ರಂಥದಲ್ಲಿ ಗಣಿತ (ಜ್ಯೋತಿಷ್ಯಶಾಸ್ತ್ರ) ಧರ್ಮವನ್ನು ತಿಳಿದುಕೊಳ್ಳುವುದು. ಲೋಕ ಪ್ರಸಿದ್ಧವಾದ ಚಂದ್ರಪ್ರಭ ಚರಿತದಲ್ಲಿ ಕಾವ್ಯಧರ್ಮವನ್ನು ತಿಳಿದುಕೊಳ್ಳುವುದು ಎಂದು ಹೇಳಿದ್ದಾನೆ. ಜಾತಕತಿಲಕದಲ್ಲಿ ದೊರೆಯತಕ್ಕದ್ದು ಜ್ಯೋತಿಷ್ಯದ ಜ್ಞಾನ, ಚಂದ್ರಪ್ರಭ ಚರಿತದಲ್ಲಿ ಕಾವ್ಯದ ರಸ. ಎರಡೂ ವಿಷಯದಲ್ಲಿ ದೊರೆಯುವ ಫಲದಲ್ಲಿ ಅಜಗಜಾಂತರದಷ್ಟು ವ್ಯತ್ಯಾಸವಿದ್ದರೂ ಎರಡೂ ಕವಿತ್ವವನ್ನು ಹೊಂದಿವೆ ಎನ್ನಬಹುದು. ಶಾಸ್ತ್ರಗ್ರಂಥ ಕಾವ್ಯವಲ್ಲದಿದ್ದರೂ ವಿಶಾಲವಾದ ಅರ್ಥವನ್ನು ಹೊಂದಿರುವ 'ಸಾಹಿತ್ಯ' ಎಂದು ಕರೆಯಿಸಿಕೊಳ್ಳುತ್ತದೆ.

೫.೨.೧.೧. ಜಾತಕತಿಲಕಂ:

ಶ್ರೀಧರಾಚಾರ್ಯ ಕೃತ 'ಜಾತಕತಿಲಕ'ದಲ್ಲಿ ಒಟ್ಟು ೨೪ ಪ್ರಕರಣಗಳಿವೆ. ಕೃತಿಯುದ್ದಕ್ಕೂ ಕಂದಪದ್ಯಗಳನ್ನೂ, ಖ್ಯಾತ ಕರ್ಣಾಟಕ ವೃತ್ತಗಳನ್ನೂ, ಅಕ್ಕರ ಮತ್ತು ಪೃಥ್ವಿ ಛಂದಸ್ಸುಗಳನ್ನೂ ಬಳಸಿಕೊಳ್ಳಲಾಗಿದೆ. ಆರಂಭದಲ್ಲಿ ತ್ರೈಲೋಕಸ್ವಾಮಿ ಜಿನೇಶ್ವರನನ್ನೂ, ಶ್ರುತದೇವಿ ಸರಸ್ವತಿಯನ್ನೂ ಸ್ತುತಿಸಲಾಗಿದೆ. ಪೂರ್ವಕವಿಗಳಾದ ಪಂಪಾದಿ ರನ್ನರನ್ನು ಸ್ಮರಿಸಿ, ಜ್ಯೋತಿಷ್ಯಾಚಾರ್ಯರಲ್ಲಿ ಮುಖ್ಯನಾದ ಆರ್ಯಭಟರನ್ನು ಮಾತ್ರ ಸ್ಮರಿಸಿಕೊಂಡಿದ್ದಾನೆ. ಶಾಸ್ತ್ರ ಗ್ರಂಥಗಳ ರಚನೆಯು ಕೇವಲ ಸುಕವಿಗಳಿಂದ ಮಾತ್ರ ಸಾಧ್ಯವಾಗುವುದು. ಅದು ಕುಕವಿಗಳಿಗೆ ಒಲಿಯಲಾರದ ವಿಷಯ. ಹೇಗೆ ನವಮಾಸಗಳವರೆಗೆ ಮಗುವನ್ನು ಹೊತ್ತು ಹೆತ್ತ ಸ್ತ್ರೀಯು ಅದರ ಸುಖವನ್ನು ಅನುಭವಿಸುತ್ತಾಳೆಯೋ ಹಾಗೆ ಬಂಜೆ ಅನುಭವಿಸಲು ಸಾಧ್ಯವಿಲ್ಲವೋ ಅಂತೆಯೇ ಸುಕವಿಯ ಪರಿಶ್ರಮವನ್ನು ಕುಕವಿಯು ಅರಿಯಲಾರನು ಎಂದು ಹೇಳುತ್ತಾನೆ. ಈ ಮುಂಚೆ ಕನ್ನಡದಲ್ಲಿ

---

೧೦೩. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೩೦೨
೧೦೪. **ಅದೇ** ; ಪುಟ. ೩೦೨

ಬೇರಾರೂ ಜಾತಕವನ್ನು ಹೇಳಿಲ್ಲ, ಮುಂದೆಯೂ ಹೇಳುವವರಿಲ್ಲ. ಅದಕ್ಕಾಗಿ ಶ್ರೀಧರನೇ ಆದರದಿಂದ ಜ್ಯೋತಿಷ್ಯವನ್ನು ತಿಳಿಸುವುದಾಗಿ ಹೇಳಿಕೊಂಡಿದ್ದಾನೆ.[೧೦೫] ವಿದ್ವಾಂಸರೆಲ್ಲರೂ ಕೊಂಡಾಡುವಂತೆ ಜಾತಕತಿಲಕವನ್ನು ಕನ್ನಡಿಸಿದುದಾಗಿಯೂ, ಹಲವು ಶಾಸ್ತ್ರಗಳನ್ನನುಸರಿಸಿ, ಅವುಗಳಲ್ಲಿನ ಜೊಳ್ಳನ್ನು ಬಿಟ್ಟು ಹುರುಳನ್ನು ಮಾತ್ರ ನೀಡುವುದಾಗಿಯೂ ತಿಳಿಸುತ್ತಾನೆ.

೧) ಸಂಜ್ಞಾ ಪ್ರಕರಣಂ:

> **“ಭವಬದ್ಧ ಶುಭಾಶುಭ ಕ**
> **ರ್ಮವಿಪಾಕದ ಫಲಮನಟಿಪುಗುಂ ಜ್ಯೋತಿರ್ಜ್ಞಾ**
> **ನವಿದೆಂತೆನೆ ಕಟ್ತಲೆಮನೆ**
> **ಯ ವಸ್ತುವಂ ತೋರ್ಪ ಸೊಡರ ಬೆಳಗಿನ ತೆಱದಿ ॥೧.೧೯॥”**[೧೦೬]

ದೀಪವೊಂದು ಕತ್ತಲೆ ಮನೆಯಲ್ಲಿರುವ ವಸ್ತುವನ್ನು ತೋರಿಸುವುದೋ ಹಾಗೆಯೇ ಜ್ಯೋತಿರ್ಜ್ಞಾನವು ಪೂರ್ವಜನ್ಮದಲ್ಲಿ ಮಾಡಿರುವ ಪುಣ್ಯ-ಪಾಪಕರ್ಮಗಳಿಂದಾಗಿ ಈ ಜನ್ಮದಲ್ಲಿ ಉಂಟಾಗುವ ಫಲವನ್ನು ತಿಳಿಸುವುದು. ಜ್ಯೋತಿರ್ವಿಜ್ಞಾನದ ಅನುಗುಣವಾಗಿ ಕಾಲಪುರುಷನೊಂದಿಗೆ ಹೋಲಿಸಿ ಹನ್ನೆರಡು ರಾಶಿಗಳಿಗೆ ಈ ಮುಂದಿನಂತೆ ವಿವರಗಳನ್ನು ನೀಡುತ್ತಾನೆ. ಅಲ್ಲದೇ ರಾಶಿಗಳ ವರ್ಣ, ಸ್ವಭಾವ, ದಿಕ್ಕು, ಗ್ರಹಾಧಿಪತಿ ನವಾಂಶಗಳ ಕುರಿತಾಗಿಯೂ ಹೇಳುತ್ತಾನೆ ಶ್ರೀಧರಾಚಾರ್ಯ –

ಕೋಷ್ಟಕ ೫.೧೧

ಕಾಲಪುರುಷನ ಅಂಗ	ರಾಶಿ	ವರ್ಣ	ಸ್ವಭಾವ	ದಿಕ್ಕು	ಅಧಿಪತ್ಯ ಗ್ರಹ	ನವಾಂಶ ಚಕ್ರ
ತಲೆ	ಮೇಷ	ಕೆಂಪು	ಪುರುಷ ಕ್ರೂರ ಸ್ವಭಾವ	ಪೂರ್ವ	ಮಂಗಳ	ಧನಸ್ಸು
ಮುಖ	ವೃಷಭ	ಬಿಳಿ		ದಕ್ಷಿಣ	ಶುಕ್ರ	ಕನ್ಯಾ
ತೋಳು	ಮಿಥುನ	ಗಿಳಿ ಹಸಿರು		ಪಶ್ಚಿಮ	ಬುಧ	ಮಿಥುನ
ಎದೆ	ಕರ್ಕಾಟಕ	ಕೆಂಪು ಬಿಳಿ		ಉತ್ತರ	ಚಂದ್ರ	ಮೀನ
ಹೊಟ್ಟೆ	ಸಿಂಹ	ಹೊಗೆ ಬಣ್ಣ		ಪೂರ್ವ	ಸೂರ್ಯ	ಧನಸ್ಸು
ಸೊಂಟ	ಕನ್ಯಾ	ಮಿಶ್ರ ವರ್ಣ		ದಕ್ಷಿಣ	ಬುಧ	ಕನ್ಯಾ

---

೧೦೫. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೦೨

> **ಮುನ್ನಾರುಂ ಜಾತಕಮಂ**
> **ಕನ್ನಡದಿಂ ವ್ಯಕ್ತಮಾಗಿ ಪೇೞ್ದನ್ವಿತರಿ**
> **ಲ್ಲಿನ್ನುಂ ಪೇೞ್ವವರಿಲ್ಲು**
> **ತ್ಪನ್ನಂ ಶ್ರೀಧರನೆ ಪೇೞ್ಗುಮೆಂದಾದರದಿಂ ॥೧.೧೬॥**


೧೦೬. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೦೩

ಕಿಬ್ಬೊಟ್ಟೆ	ತುಲಾ	ಕಪ್ಪು		ಪಶ್ಚಿಮ	ಶುಕ್ರ	ಮಿಥುನ
ಗುಹ್ಯ	ವೃಶ್ಚಿಕ	ಸ್ವರ್ಣ ವರ್ಣ		ಉತ್ತರ	ಮಂಗಳ	ಮೀನ
ತೊಡೆ	ಧನಸ್ಸು	ಕಂದು ಕಪ್ಪು		ಪೂರ್ವ	ಗುರು	ಧನಸ್ಸು
ಮೊಳಕಾಲು	ಮಕರ	ಕಂದು ಮಿಶ್ರಿತ ಬಿಳಿ	ಸ್ತ್ರೀ ಸೌಮ್ಯ ಸ್ವಭಾವ	ದಕ್ಷಿಣ	ಶನಿ	ಕನ್ಯಾ
ಕಣಕಾಲು	ಕುಂಭ	ಮಾಸಲು ಬಿಳುಪು		ಪಶ್ಚಿಮ	ಶನಿ	ಮಿಥುನ
ಪಾದ	ಮೀನ	ಮೀನ ವರ್ಣ		ಉತ್ತರ	ಗುರು	ಮೀನ

(ಮೇಲಿನ ಕೋಷ್ಟಕವನ್ನು ಶ್ರೀಧರಾಚಾರ್ಯನ ಜಾತಕತಿಲಕದ ಸಂಜ್ಞಾ ಪ್ರಕರಣದ ೨೦ರಿಂದ ೨೬ರವರೆಗಿನ ಪದ್ಯಗಳನ್ನು ಅನುಸರಿಸಿ ತಯಾರಿಸಲಾಗಿದೆ.)

ಚಿತ್ರ ೫.೧

ಕಾಲಪುರುಷ ಚಕ್ರ



ರಾಶಿಗಳ ಒಂಭತ್ತನೆಯ ಒಂದು ಭಾಗವನ್ನು ನವಾಂಶವೆನ್ನಲಾಗುತ್ತದೆ. ಸ್ವ-ರಾಶಿಯಿಂದ ಒಂಭತ್ತನೆಯ ರಾಶಿಯು ನವಾಂಶವಾಗಿರುತ್ತದೆ. ಅದನ್ನಾಧರಿಸಿ ಆಯಾ ನವಾಂಶ ರಾಶಿಯ ಅಧಿಪತಿಯೇ ಮೂಲ ರಾಶಿಯ ಅಧಿಪತಿಯಾಗಿರುತ್ತಾನೆ. ಮೇಷ, ಸಿಂಹ, ಧನಸ್ಸುಗಳ ನವಾಂಶದಲ್ಲಿ ಮಕರ, ಕುಂಭ, ಮೀನಗಳು ಇರುವುದಿಲ್ಲ. ವೃಷಭ, ಕನ್ಯಾ, ಮಕರ ರಾಶಿಗಳ ನವಾಂಶದಲ್ಲಿ ತುಲಾ, ವೃಶ್ಚಿಕ, ಧನಸ್ಸುಗಳಿರುವುದಿಲ್ಲ. ಮಿಥುನ, ತುಲಾ, ಕುಂಭ ರಾಶಿಗಳ ನವಾಂಶದಲ್ಲಿ ಕರ್ಕಾಟಕ, ಸಿಂಹ, ಕನ್ಯಾಗಳಿರುವುದಿಲ್ಲ. ಕರ್ಕಾಟಕ, ವೃಶ್ಚಿಕ, ಮೀನ ರಾಶಿಗಳ ನವಾಂಶದಲ್ಲಿ ಮೇಷ, ವೃಷಭ, ಮಿಥುನಗಳಿರುವುದಿಲ್ಲ.

ದ್ವಾದಶಾಂಶ, ದ್ರೇಕ್ಕಾಣಗಳ ಕುರಿತಾಗಿ ಚರ್ಚಿಸಿರುವ ಶ್ರೀಧರಾಚಾರ್ಯನು ಸ್ವ-ರಾಶಿಯಿಂದ ಮುಂದೆ ಎಣಿಕೆ ಮಾಡಿದಾಗ ಬರುವುದೇ ದ್ವಾದಶಾಂಶ ರಾಶಿ ಎಂದು ತಿಳಿಸುತ್ತಾನೆ. ಒಟ್ಟು ರಾಶಿಯ ಮೂರನೆಯ ಒಂದು ಭಾಗವೇ ದ್ರೇಕ್ಕಾಣ. ಮೊದನೆಯ ದ್ರೇಕ್ಕಾಣಕ್ಕೆ ಮೇಷ; ಎರಡನೆಯ ದ್ರೇಕ್ಕಾಣಕ್ಕೆ ಆಯಾ ರಾಶಿಯ ಐದನೆಯ ರಾಶಿ; ಹಾಗೂ ಮೂರನೆಯ ದ್ರೇಕ್ಕಾಣಕ್ಕೆ ಆಯಾ ರಾಶಿಯ ಒಂಭತ್ತನೆಯ ರಾಶಿಯು ಅಧಿಪತಿಯಾಗಿರುತ್ತವೆ. "ಮೊದಲನೆಯ ದ್ರೇಕ್ಕಾಣ ಮೇಷ; ಅಧಿಪತಿ ಅಂಗಾರಕ. ಎರಡನೆಯ ದ್ರೇಕ್ಕಾಣ ಸಿಂಹ; ಅಧಿಪತಿ ಸೂರ್ಯ. ಮೂರನೆಯ ದ್ರೇಕ್ಕಾಣ ಧನುಸ್ಸು; ಅಧಿಪತಿ ಗುರು."[೧೦೭]

ಒಂದು ರಾಶಿಗೆ ಎರಡು ಹೋರೆ. ವೃಷಭ, ಕರ್ಕ, ಕನ್ಯಾ, ವೃಶ್ಚಿಕ, ಮಕರ, ಮೀನ ಇವು ಸಮರಾಶಿಗಳು. ಇವುಗಳಿಗೆ ಚಂದ್ರ ಅಧಿಪತಿ. ಇನ್ನುಳಿದವು ಬೆಸರಾಶಿಗಳು ಅವುಗಳಿಗೆ ಸೂರ್ಯ ಅಧಿಪತಿಯಾಗಿರುತ್ತಾನೆ (೧.೨೯). ರಾಶಿಗಳ ಮೂವತ್ತನೆಯ ಒಂದು ಭಾಗವನ್ನು ತ್ರಿಂಶಾಂಶ ಎನ್ನುವರು. ಬೆಸರಾಶಿಯಲ್ಲಿ ಕುಜ ೫, ಶನಿ ೫, ಗುರು, ೮, ಬುಧ ೭, ಶುಕ್ರ ೫ ಭಾಗಗಳನ್ನೂ, ಸಮರಾಶಿಯಲ್ಲಿ ಶುಕ್ರ ೫, ಬುಧ ೭, ಗುರು ೮, ಶನಿ ೫, ಕುಜ ೫ ಭಾಗಗಳನ್ನು ಹೊಂದಿರುತ್ತಾರೆ (೧.೨೮). ಹೋರಾ ವಿಭಾಗದಲ್ಲಿ ಸೂರ್ಯ ಚಂದ್ರರು ಮಾತ್ರ ಅಧಿಪತಿಗಳಾಗಿದ್ದರೆ; ತ್ರಿಂಶಾಂಶ ವಿಭಾಗದಲ್ಲಿ ಕುಜಾದಿ ಐದು ಗ್ರಹಗಳು ಅಧಿಪತಿಗಳಾಗಿರುತ್ತಾರೆ.

ಸಿಂಹ, ವೃಷಭ, ಮೇಷ, ಧನುಸ್ಸು, ಮಕರಗಳು ಚತುಷ್ಪದ ರಾಶಿಗಳು. ಕನ್ಯಾ, ತುಲಾ, ಮಿಥುನ, ಧನುಸ್ಸು, ಕುಂಭಗಳು ನರರಾಶಿಗಳು. ಮೀನ, ಕರ್ಕಾಟಕ, ಮಕರಗಳು ಜಲಚರರಾಶಿಗಳು. ಕರ್ಕವು ಕೀಟರಾಶಿ. ವೃಶ್ಚಿಕವು ಸರೀಸೃಪರಾಶಿಯೆಂದು ತಿಳಿಸುತ್ತಾನೆ.

ಮನುಷ್ಯರಾಶಿಗಳು ಪೂರ್ವದಿಕ್ಕು, ಚತುಷ್ಪದ ರಾಶಿಗಳು ದಕ್ಷಿಣದಿಕ್ಕು, ಕೀಟರಾಶಿ ಪಶ್ಚಿಮದಿಕ್ಕು, ಜಲರಾಶಿಗಳು ಉತ್ತರದಿಕ್ಕು, ವೃಶ್ಚಿಕರಾಶಿಯು ಸಂಧ್ಯಾಕಾಲದಲ್ಲಿ, ಚತುಷ್ಪದರಾಶಿಗಳು ರಾತ್ರಿ, ಮನುಷ್ಯ ರಾಶಿಗಳು ಹಗಲಿನಲ್ಲಿಯೂ ಬಲಿಷ್ಠವಾಗಿರುತ್ತವೆ. ಎಂದು ಹೇಳಿ, ಮಿತ್ರರಾಶಿಗಳು,

---

೧೦೭. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೦೭

ವೈರಿರಾಶಿಗಳನ್ನೂ, ಬಲಿಷ್ಠರಾಶಿಗಳು, ಕನಿಷ್ಠರಾಶಿಗಳು, ಉಚ್ಚರಾಶಿಗಳು, ನೀಚರಾಶಿಗಳನ್ನೂ ಈ ಪ್ರಕರಣದಲ್ಲಿ ಕವಿ ಶ್ರೀಧರಾಚಾರ್ಯನು ತಿಳಿಸಿದ್ದಾನೆ.

೨) ಬಲಾಬಲ ಪ್ರಕರಣಂ:

ಶ್ರೀಧರಾಚಾರ್ಯ ಕೃತ 'ಜಾತಕತಿಲಕ' ಕೃತಿಯ ಎರಡನೆಯ ಪ್ರಕರಣದಲ್ಲಿ ಗ್ರಹಗಳ ಬಲಾಬಲಗಳನ್ನು ತಿಳಿಸಲಾಗಿದೆ.

"ಸುರಪತಿ ಶಿಖಿ ಯಮ ನೈರುತಿ
ವರುಣ ವರುದ್ಧನದ ಪುರಹರಾಶಾಪತಿಗಳ್
ತರದಿಂ ಭಾಸ್ಕರಭೃಗು ಭೌ
ಮ ರಾಹು ಮಂದೇಂದು ಚಂದ್ರನಂದನ ಗುರುಗಳ್ ॥೨.೦೧॥"[೧೦೮]

ಈ ಪದ್ಯದಲ್ಲಿ ಯಾವ ಯಾವ ಗ್ರಹಗಳು ಯಾವ ಯಾವ ದಿಕ್ಕಿನಲ್ಲಿವೆ ಎಂದು ತಿಳಿಸಿದ್ದಾನೆ (ನೋಡಿ ಚಿತ್ರ ೫.೨). ಸೂರ್ಯ, ಗುರು, ಕುಜ ಗ್ರಹಗಳು ಪುರುಷರಿಗೆ; ಚಂದ್ರ, ಶುಕ್ರರು ಸ್ತ್ರೀಯರಿಗೆ; ಬುಧ ಹಾಗೂ ಶನಿಗಳು ನಪುಂಸಕರಿಗೆ ಅಧಿಪತಿಗಳು. ಋಗ್ವೇದಕ್ಕೆ ಗುರು, ಯಜುರ್ವೇದಕ್ಕೆ ಶುಕ್ರ, ಸಾಮವೇದಕ್ಕೆ ಕುಜ, ಅಥರ್ವವೇದಕ್ಕೆ ಬುಧ ಅಧಿಪತಿಗಳು. ಇನ್ನೂ ಚತುರ್ವರ್ಣಗಳನ್ನಾಧರಿ ಶುಕ್ರ, ಗುರು–ಬ್ರಾಹ್ಮಣ; ಕುಜ, ಸೂರ್ಯ–ಕ್ಷತ್ರಿಯ; ಚಂದ್ರ–ವೈಶ್ಯ; ಬುಧ–ಶೂದ್ರ; ಶನಿ–ಸಂಕರ ವರ್ಣಗಳಿಗೆ ಅಧಿಪತಿಗಳು.[೧೦೯]

ರಾಶಿಯನ್ನು ಅರಿಯುವಾಗ ಅಧಿಪತಿಗಳನ್ನು ಅರಿತುಕೊಳ್ಳುವುದು ಬಹುಮುಖ್ಯವಾದುದು. "ಸ್ವಕ್ಷೇತ್ರದಲ್ಲಿ ಗ್ರಹಬಲವು ಅಧಿಕವಾಗಿರುತ್ತದೆ. ಗ್ರಹಗಳು ಉಚ್ಚರಾಶಿಯಲ್ಲಿ ಇರುವಾಗ ಸ್ವಕ್ಷೇತ್ರಗಳಿಗಿಂತಲೂ ಹೆಚ್ಚು ಬಲಶಾಲಿಗಳಾಗುತ್ತಾರೆ. ಎರಡು ಗ್ರಹಗಳ ಅಂತರ ಶೂನ್ಯವಾಗಿದ್ದರೆ ಅದನ್ನು ಯುತಿ ಎನ್ನುವರು. ಶುಭಗ್ರಹದ ಯುತಿಯು ಹೆಚ್ಚು ಶುಭವನ್ನೂ, ಅಶುಭ ಗ್ರಹದ ಯುತಿಯು ಹೆಚ್ಚಿನ ದುಷ್ಟ ಫಲಗಳನ್ನೂ ಕೊಡುತ್ತದೆ."[೧೧೦] ರಾಹು ಕೇತುಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಗ್ರಹಗಳು ಪ್ರದಕ್ಷಿಣಾಕಾರದಲ್ಲಿ ಸುತ್ತುತ್ತಿರುತ್ತವೆ. ರಾಹು ಕೇತುಗಳಿಗೆ ಸ್ವಂತ ಅಸ್ತಿತ್ವವಿಲ್ಲ. ಇವು ಅಪ್ರದಕ್ಷಿಣಾಕಾರದಲ್ಲಿ ಸುತ್ತುವ ಛಾಯಾಗ್ರಹಗಳಾಗಿವೆ. ಹೋರಾ, ನವಾಂಶ, ದ್ವಾದಶಾಂಶ, ತ್ರಿಂಶಾಂಶ ಹಾಗೂ ಹೋರಾಗಳನ್ನು ಅಕ್ಷಾಂಶ ಮತ್ತು ರೇಖಾಂಶಗಳನ್ನು ಆಧರಿಸಿಯೇ ಲೆಕ್ಕಾಚಾರ ಮಾಡಲಾಗುತ್ತದೆ.


---

೧೦೮. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೧೬

೧೦೯. **ಅದೇ** ; ಪುಟ. ೧೬ **ಸಿತವಾಕ್ಪತಿಗಳಿಳಾಮರ**
ಮರಪತಿಗಳ ಕ್ಷತ್ರಾಧಿಪರ್ ಕುಜಾರ್ಕರ್ ದೋಷಾ
ಪತಿ ವೈಶ್ಯಸ್ವಾಮಿ ನಿಶಾ
ಪತಿಜಂ ಶೂದ್ರಪತಿ ಸಂಕರಾಧಿಪನಸಿತಂ ॥೨.೦೫॥

೧೧೦. ಗಣೇಶ ಹೆಗಡೆ : **ಜ್ಯೋತಿಷ್ಯ ಪ್ರವೇಶಿಕಾ** ; ಪುಟ. ೧೪

ಚಿತ್ರ ೫.೨



ಚಿತ್ರ ೫.೩

ರಾಶಿ ಚಿಹ್ನೆ, ನಕ್ಷತ್ರ ಪುಂಜ




ಕೋಷ್ಟಕ ೫.೧೨

ಗ್ರಹಗಳ ಮಿತ್ರ, ಶತ್ರು, ಸಮ, ಉಚ್ಚ, ನೀಚ ಸ್ವಕ್ಷೇತ್ರಾದಿ ವಿವರ

ಗ್ರಹದ ಹೆಸರು	ಮಿತ್ರ ಗ್ರಹ	ಸಮಗ್ರಹ	ಶತ್ರು ಗ್ರಹ	ಸ್ವಕ್ಷೇತ್ರ	ಉಚ್ಛರಾಶಿ ಪರಮೋಚ್ಚಾಂಶ	ನೀಚರಾಶಿ ನೀಚಾಂಶ
ರವಿ	ಚಂದ್ರ ಗುರು	ಬುಧ	ಶನಿ, ಶುಕ್ರ	ಶುಕ್ರ ಸಿಂಹ	ಮೇಷ ೧೦	ತುಲಾ ೧೦
ಚಂದ್ರ	ರವಿ ಬುಧ	ಕುಜ, ಗುರು, ಶುಕ್ರ	–	ಕರ್ಕ	ವೃಷಭ ೩	ವೃಶ್ಚಿಕ ೩
ಮಂಗಳ	ರವಿ ಗುರು	ಶನಿ ಶುಕ್ರ	ಬುಧ	ರಾಹು, ಮೇಷ, ವೃಶ್ಚಿಕ	ಮಕರ ೨೮	ಕರ್ಕ ೨೮
ಬುಧ	ರವಿ ಶುಕ್ರ	ಶುಕ್ರ ರವಿ	ರಾಹು ಚಂದ್ರ	ಮಿಥುನ, ಕನ್ಯಾ	ಕನ್ಯಾ ೧೫	ಮೀನ ೧೫
ಗುರು	ರವಿ ಚಂದ್ರ	ರಾಹು ಶನಿ	ಶುಕ್ರ ಬುಧ	ಶುಕ್ರ, ಧನು, ಮೀನ	ಕರ್ಕ ೫	ಮಕರ ೫
ಶುಕ್ರ	ಬುಧ ಶನಿ	ಕುಜ ಗುರು	ರವಿ ಚಂದ್ರ	ಚಂದ್ರ, ತುಲಾ, ವೃಷಭ	ಮೀನ ೨೭	ಕನ್ಯಾ ೨೭
ಶನಿ	ಬುಧ ಶುಕ್ರ	ಗುರು	ರವಿ ಚಂದ್ರ	ಮಂಗಳ, ಮಕರ, ಕುಂಭ	ತುಲಾ ೨೦	ಮೇಷ ೨೦
ರಾಹು	ಬುಧ ಶನಿ	ಶುಕ್ರ ಗುರು	ರವಿ ಚಂದ್ರ	ಮಂಗಳ, ಕನ್ಯಾ	ಮಿಥುನ ೧೫	ಧನು ೧೫
ಕೇತು	ಬುಧ	ಶುಕ್ರ, ಶನಿ ಗುರು	ರವಿ ಚಂದ್ರ	ಮಂಗಳ, ಮೀನ	ಧನು ೧೫	ಮಿಥುನ ೧೫

ಚಿತ್ರ ೫.೪

ರಾಶಿ ಹಾಗೂ ಗ್ರಹಾಧಿಪತಿಗಳ ಸ್ಥಾನ



ಮುಂದುವರೆದು, ಗ್ರಹಗಳ ಲಕ್ಷಣಗಳನ್ನು ತಿಳಿಸುತ್ತಾನೆ ಶ್ರೀಧರಾಚಾರ್ಯ.

೧. **ಸೂರ್ಯ:** ವಿರಳವಾದ ಕೂದಲು; ಕೆಂಪು, ಹಳದಿ ಮಿಶ್ರಿತ ಕಣ್ಣುಗಳು; ಬಲವಾದ ಮೂಳೆ; ಪಿತ್ತಶರೀರ; ಚೌಕಾಕಾರ; ಧೈರ್ಯಶಾಲಿ; ಮಧ್ಯಮಗಾತ್ರದ ಕೆಂಪು, ಕಪ್ಪು ಶರೀರ; ಮಿಶ್ರ ಬಣ್ಣದ ಸ್ಥೂಲದೇಹ (೨.೧೯).

೨. **ಚಂದ್ರ:** ಮೃದುಭಾಷಿ; ಸುಂದರ ದೇಹ; ಮೇಧಾವಿ; ಸ್ನೇಹಪರ; ದಯಾಪರನಾದವನು; ಕಫ, ವಾತಗಳಿಂದ ಕೂಡಿದ ದುಂಡು ಶರೀರ; ಬಿಳಿವರ್ಣ; ಚಪಲಸ್ವಭಾವ (೨.೨೦).

೩. **ಅಂಗಾರಕ:** ಕುಳ್ಳದೇಹ; ಚಪಲಸ್ವಭಾವ; ಕೆಂಪು, ಬಿಳಿ ಮಿಶ್ರವರ್ಣ; ಪಿತ್ತ ಪ್ರಕೃತಿ; ಯೌವ್ವನದ ದೇಹ; ಹಿಂಸ್ರ ಸ್ವಭಾವ; ಮಜ್ಜಾಧಾತು ಅಧಿಕಾವಾಗುಳ್ಳವನು (೨.೨೧).

೪. **ಬುಧ:** ಮೈ ನರಗಳು ಎದ್ದು ಕಾಣುವ ಕೃಷವಾದ ದೇಹ; ಸಂತುಷ್ಟ; ಕಾರ್ಯನಿಪುಣ; ಕಪ್ಪು ಗರಿಕೆ ವರ್ಣವುಳ್ಳ ದೇಹವುಳ್ಳವನು (೨.೨೨).

೫. **ಗುರು:** ಬುದ್ಧಿಶಾಲಿ; ಬಿಳಿ ಬಣ್ಣದ ಸ್ಥೂಲದೇಹ; ಕೋಮಲ ದೃಷ್ಟಿ, ಕೆಂಪಾದ ಕೂದಲುಳ್ಳವನು (೨.೨೩).

೬. **ಶುಕ್ರ:** ಮಧುರಭಾಷಿ; ವಾತ, ಕಫ ಪ್ರಕೃತಿಯುಳ್ಳವನು. ಸ್ವಲ್ಪ ಕಪ್ಪು ಶರೀರ; ಕಪ್ಪು ಗುಂಗುರು ಕೂದಲು; ಅಧಿಕ ಸೌಖ್ಯ ಮತ್ತು ವೀರ್ಯವುಳ್ಳವನು (೨.೨೪).

೭. **ಶನಿ:** ಸೋಮಾರಿ; ಚಾಡಿಕೋರ; ಕೃಶವಾದ ವಾತಾಧಿಕ ಶರೀರ; ಕಂದು ಹಳದಿ ಬಣ್ಣದ ಕಣ್ಣು; ದಪ್ಪ ಉಗುರ, ಹಲ್ಲು ಮತ್ತು ರೋಮಗಳನ್ನುಳವನು (೨.೨೫).

"ಜನನ ಕಾಲದಲ್ಲಿ ಬಲಿಷ್ಠವಾದ ಗ್ರಹಗಳಿಂದ ಜಾತಕನ ಸ್ವರೂಪವನ್ನು ತಿಳಿಯಲು ಈ ಗ್ರಹಸ್ವರೂಪಗಳು ಉಪಯೋಗವಾಗುತ್ತವೆ.**"**[೧೧೧]

೩) ಗರ್ಭಾಧಾನ ಪ್ರಕರಣಂ:

ಪ್ರಸ್ತುತ ಶ್ರೀಧರಾಚಾರ್ಯನು **'ಜಾತಕತಿಲಕ'** ಕೃತಿಯಲ್ಲಿ ಮೂರನೆಯ ಪ್ರಕರಣದಲ್ಲಿ ಸ್ತ್ರೀ ಗರ್ಭಧಾರಣೆ, ಗರ್ಭದ ಶುಭ, ಅಶುಭ ಲಕ್ಷಣಗಳನ್ನು ಗ್ರಹ, ರಾಶಿಗಳ ಆಧಾರದ ಮೇಲೆ ತಿಳಿಸಿದ್ದಾನೆ.

> **"ರಮಣೀಸಂಗಮಮಾಗೆ ಸಂಭವಿಪ ಗಭಾಧಾನ ಲಗ್ನಕ್ಕೆ ಸ**
> **ಪ್ತಮಮಪ್ಪಾಲಯದೊಂದು ಶೀಲದವೊಲಕ್ಕುಂ ತತ್ಪ್ರಸಂಗಂ ವಿಲ**
> **ಗ್ನಮನಾಲೋಕಿಸೆ ಸದ್ಗ್ರಹಂ ನೆಲಸೆ ಮೇಣ್ ಕೂಟಂ ಸರಾಗಂ ವಿರಾ**
> **ಗಮದಂ ವೀಕ್ಷಿಸೆ ಕೂಡೆ ಮೇಣ್ ತದಿತರರ್ ಸಮ್ಮಿಶ್ರದಿಂ ಮಿಶ್ರಕಂ ॥೩.೦೧॥"**[೧೧೨]

ಗರ್ಭಾಧಾನ ಲಗ್ನಕ್ಕೆ ಏಳನೆಯ ರಾಶಿಯ ಸ್ವಭಾವದಂತೆ ಆಧಾನ ಪ್ರಸಂಗವು ಉಂಟಾಗುತ್ತದೆ. ಶುಭಗ್ರಹ ಲಗ್ನವನ್ನು ನೋಡಿದರೆ ಅಥವಾ ಲಗ್ವನದಲ್ಲಿದ್ದರೆ ಪ್ರೀತಿಯಿಂದಲೂ, ಅಶುಭಗ್ರಹ

---

೧೧೧. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೨೩
೧೧೨. **ಅದೇ** ; ಪುಟ. ೨೪

ಲಗ್ನವನ್ನು ನೋಡಿದರೆ ಇಚ್ಛೆಯಿಲ್ಲದೆಯೂ ಶುಭವೂ, ಅಶುಭ ಗ್ರಹಗಳು ಲಗ್ನವನ್ನು ನೋಡಿದರೆ ಅಶುಭವೂ ಉಂಟಾಗುವುದು. ಆಧಾನ ಲಗ್ನಕ್ಕೆ ಯಾವ ಪ್ರಾಣಿಯು ಆಗಿರವುದೋ ಆ ಪ್ರಾಣಿಯ ಕ್ರಮದಂತೆಯೇ ಆಧಾನವಾಗುವುದು.

ಸ್ತ್ರೀಯು ಗರ್ಭಿಣಿಯಾದ ಮೊದಲ ತಿಂಗಳಲ್ಲಿ ಶುಕ್ರ–ಶೋಣಿತ ಮಿಶ್ರ ರೂಪವು ಶುಕ್ರನಿಂದ ಆಕೆಯ ಗರ್ಭದಲ್ಲಿ ಸೇರುತ್ತದೆ. ಆ ಗರ್ಭವು ಎರಡನೇ ತಿಂಗಳಿನಿಂದ ಘನೀಭಾವವಾಗಿ ಅಂಗಾರಕನಿಂದ, ಮೂರನೇ ತಿಂಗಳಲ್ಲಿ ಗುರುವಿನಿಂದ ಅವಯವವನ್ನೂ, ನಾಲ್ಕನೇ ತಿಂಗಳಲ್ಲಿ ಸೂರ್ಯನಿಂದ ಮೂಳೆಗಳನ್ನೂ, ಐದನೆಯ ತಿಂಗಳಲ್ಲಿ ಚಂದ್ರನಿಂದ ಧರ್ಮವನ್ನೂ, ಆರನೆಯ ತಿಂಗಳಲ್ಲಿ ಶನಿಯಿಂದ ರೋಮಗಳನ್ನೂ, ಏಳನೆಯ ತಿಂಗಳಲ್ಲಿ ಬುಧನಿಂದ ಚೇತನವನ್ನೂ ಪಡೆದುಕೊಳ್ಳುತ್ತದೆ. ಎಂಟನೆಯ ತಿಂಗಳಲ್ಲಿ ಗರ್ಭವು ತಾಯಿಯ ಆಹಾರವನ್ನು ತಿನ್ನುತ್ತದೆ. ಆಧಾನ ಲಗ್ನಾಧಿಪತಿ ಆ ತಿಂಗಳಿನ ಅಧಿಪತಿಯಾಗಿರುತ್ತಾನೆ. ಒಭಂತ್ತನೆಯ ತಿಂಗಳಲ್ಲಿ ಚಂದ್ರನು ಅಧಿಪತಿಯಾಗಿದ್ದು, ಪ್ರಸವದ ಉದ್ವೇಗವುಂಟಾಗುವುದು. ಹತ್ತನೆಯ ತಿಂಗಳಿನ ಅಧಿಪತಿ ಸೂರ್ಯ, ಈ ತಿಂಗಳಲ್ಲಿ ಶಿಶುವು ಜನಿಸುವುದು.

"ಹಗಲಿನಲ್ಲಿ ತಂದೆಗೆ ಸೂರ್ಯ ತಾಯಿಗೆ ಶುಕ್ರ, ರಾತ್ರಿಯಲ್ಲಿ ತಂದೆಗೆ ಶನಿ ತಾಯಿಗೆ ಚಂದ್ರ, ಹಗಲಿನಲ್ಲಿ ಚಿಕ್ಕಪ್ಪನಿಗೆ ಶನಿ ಚಿಕ್ಕಮ್ಮನಿಗೆ ಚಂದ್ರ; ರಾತ್ರಿಯಲ್ಲಿ ಚಿಕ್ಕಪ್ಪನಿಗೆ ಸೂರ್ಯ, ಶುಕ್ರ ಚಿಕ್ಕಮ್ಮನಿಗೆ ಕಾರಕ ಗ್ರಹಗಳು ಎಂದು ತಿಳಿದುಕೊಳ್ಳುವುದು. ಈ ಕಾರಕ ಗ್ರಹಗಳಿಂದ ಅವರವರ ಶುಭಾಶುಭ ಫಲಗಳನ್ನು ತಿಳಿಯಬಹುದು."[೧೧೩] ಹೀಗೆ ಲಗ್ನಾದಿಗಳನ್ನಾಧರಿಸಿ ಮಗುವಿನ ಜನನದಿಂದ ಮನೆಯಲ್ಲಿರುವ ಸದಸ್ಯರ ಮೇಲಾಗುವ ಶುಭಾಶುಭ ಪರಿಣಾಗಳನ್ನು ತಿಳಿಸಿ, ಆಧಾನಾನುಕ್ರಮದಿಂದ ಗಂಡು, ಹೆಣ್ಣು ಎಂದೂ ನಿರ್ಧರಿಸಬಹುದು. ಅಲ್ಲದೇ ಅದರ ಆಧಾರದ ಮೇಲೆ ಮಗುವು ಯಾವ ಸ್ಥಳದಲ್ಲಿ, ಯಾವ ಸಮಯಕ್ಕೆ, ಯಾವ ಮಹಡಿಯಲ್ಲಿ ಜನಿಸಬಹುದು ಎಂಬ ಲೆಕ್ಕಾಚಾರವನ್ನೂ ಶ್ರೀಧರಾಚಾರ್ಯನು ತನ್ನ ಜಾತಕತಿಲಕದಲ್ಲಿ ತಿಳಿಸಿದ್ದಾನೆ. ಅಲ್ಲದೇ ಒಂದು ವೇಳೆ ಈ ಹತ್ತು ತಿಂಗಳಲ್ಲಿ ಅಧಿಪತಿಗಳು ಕಾಂತಿಹೀನವಾದರೆ ಗರ್ಭಕ್ಕೆ ತೊಂದರೆ ಹೆಚ್ಚು ಇಲ್ಲವೇ ಗರ್ಭನಾಶವಾಗಬಹುದು; ಬಂಜೆಯರ ನಿಷ್ಫಲಗಳು, ಪುರುಷ, ಸ್ತ್ರೀ ಮಗುವಿನ ಜನನ, ಪ್ರಸವದ ದಿನ, ಕಾಲ, ನಕ್ಷತ್ರಗಳ ವಿಷಯವನ್ನು ಇಲ್ಲಿ ತಿಳಿಸಲಾಗಿದೆ.

೪) ಜನ್ಮ ಪ್ರಕರಣಂ:

ಜಾತಕತಿಲಕದ ಜನ್ಮ ಪ್ರಕರಣದಲ್ಲಿ ಶ್ರೀಧರಾಚಾರ್ಯನು ಗ್ರಹಗಳ ಸಾತ್ವಿಕ, ರಾಜಸ, ತಾಮಸ ಗುಣಗಳನ್ನು, ಜನಿಸಿದ ಮಗುವಿನ ಆಕಾರ, ಬಣ್ಣ, ಗಾತ್ರ ಹಾಗೂ ಸ್ವಭಾವ, ಜನನದ

---

೧೧೩. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೨೭

ಸ್ಥಳಗಳು, ಮಗುವು ಜನಿಸುವ ಕಾಲಕ್ಕನುಗುಣವಾಗಿ ಹೆರಿಗೆ ಮನೆಯಲ್ಲಿರುವ ದ್ರವ್ಯಗಳನ್ನು, ರಾಶಿಗನುಗುಣವಾಗಿ ಮಗು ಪೃಷ್ಠೋದಯ, ಶೀರ್ಷೋದಯ ಹಾಗೂ ಉಭಯೋದಯ ರಾಶಿಗಳನ್ನು, ಮಗು ಜನಿಸುವಾಗ ತಂದೆಯ ಸಾನಿಧ್ಯ, ತಂದೆಯ ಬಂಧನ, ಜಾರಜಾತಯೋಗ, ಮನೆಯ ಇತರ ಸದಸ್ಯರಿಗೆ ಆಗಬಹುದಾದ ಶುಭಾಶುಭಗಳು, ಹೆರಿಗೆಯ ಮನೆ, ಹೆರಿಗೆಯ ಮಂಚ, ಸ್ಥಳ, ಕಾಲ, ಸನ್ನಿವೇಶ, ತಾಯಿ ಮಗುವಿನ ಸಾವು, ಮಗುವಿನ ಅಂಗಗಳ ಹೀನತೆ, ಹುಟ್ಟುವಾಗಲೇ ಹಲ್ಲಿರುವುದು, ಕುಬ್ಜ, ಕಿವುಡ, ಮುಂತಾದ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೫.೧೩

ಗುಣಗಳಾಧಾರಿತ ಗ್ರಹಗಳು

ಸಾತ್ವಿಕ ಗ್ರಹಗಳು	ಗುರು, ಚಂದ್ರ, ಸೂರ್ಯ.
ರಾಜಸ ಗ್ರಹಗಳು	ಬುಧ, ಶುಕ್ರ.
ತಾಮಸ ಗ್ರಹಗಳು	ಶನಿ, ಕುಜ

ಯಾವ ಗ್ರಹದ ತ್ರಿಶಾಂಶದಲ್ಲಿ ನಿಷೇಕ ಇಲ್ಲವೇ ಪ್ರಸವವಾಗುವುದೋ ಆ ಗ್ರಹದ ಸ್ವಭಾವವು ಮುಗುವಿನಲ್ಲಿ ಬರುವುದು. ಲಗ್ನ ಅಥವಾ ನವಾಂಶಾಧಿಪತಿಯ ಆಕಾರ ಅಥವಾ ಆ ಕಾಲದಲ್ಲಿ ಬಲಿಷ್ಠವಾಗಿರುವ ಗ್ರಹದ ಸ್ವರೂಪವು ಜಾತಿ, ಕುಲ, ದೇಶ, ಭೇದಗಳಿಗೆ ತಕ್ಕಂತೆ ಆ ಮಗುವಿಗೆ ಉಂಟಾಗುವುದು.

“ಅದೃಢಂ ಮಾರ್ತಂಡನಿಂ ನಿಪ್ಪೊಸತು ಹಿಮಗುವಿಂ ಬೆಂದುದಂಗಾರನಿಂ ಚಿ
ತ್ರದ ಮಾಟಂ ಸೌಮ್ಯನಿಂ ಬಲ್ಲಿತು ಸುರಗುರುವಿಂ ಸುಂದರಂ ಶುಕ್ರನಿಂ ತ
ಟ್ಗಿದದಕ್ಕುಂ ಮಂದನಿಂ ಮಂದಿರಮತಿಬಳರಾದಂದವರ್ ತದ್ಗೃಹಾಭ್ಯ
ರ್ಣದ ಗೇಹಕ್ಕಾಕ್ರಮಂ ತದ್ಗೃಹಮಕುಳಮೆ ತನ್ಮಂದಿರ ಸ್ವಾಮಿಗಕ್ಕುಂ ॥೪.೧೨॥”[೧೧೪]

ಅಂದರೆ, ಹೆರಿಗೆಮನೆ ಸೂರ್ಯನಿಂದ ಅಸ್ಥಿರವೂ; ಚಂದ್ರನಿಂದ ಹೊಸದೂ; ಅಂಗಾರಕನಿಂದ ಸುಟ್ಟಂತೆಯೂ; ಬುಧನಿಂದ ಚಿತ್ರಿತವೂ; ಗುರುವಿನಿಂದ ದೃಢವೂ; ಶುಕ್ರನಿಂದ ಸುಂದರವೂ; ಶನಿಯಿಂದ ತಗ್ಗಾಗಿಯೂ ಹೀಗೆ ವಿವಿಧ ವಿಚಾರಗಳು ಜನನ ಕಾಲದಲ್ಲಿರುವ ಗ್ರಹಗಳ ಸ್ಥಾನವನ್ನವಲಂಬಿಸಿ ತಿಳಿಯುತ್ತದೆ. ಗ್ರಹಗಳ ಸ್ಥಾನವನ್ನನುಸರಿಸಿ, ಉಚ್ಚ ಗ್ರಹಸ್ಥಾನ, ನೀಚ ಗ್ರಹಸ್ಥಾನ, ಆಯಾ ರಾಶಿಗಳ ಫಲಾಫಲಗಳನ್ನು ತಿಳಿಸುವ ಕುಂಡಲಿಯನ್ನು ತಯಾರಿಸಲಾಗುತ್ತದೆ. ಜನ್ಮ ಕುಂಡಲಿಯಲ್ಲಿ ೧೨ ಮನೆಗಳಿರುತ್ತವೆ.

“ಜಾತಕದಲ್ಲಿ ಉಚ್ಚ ಯಾವುದೇ ಒಂದು ಗ್ರಹವು ಉಚ್ಚ ಸ್ಥಾನದಲ್ಲಿದ್ದರೆ ಒಳ್ಳೆಯದು, ನೀಚ ಸ್ಥಾನದಲ್ಲಿದ್ದರೆ ಕೆಟ್ಟದ್ದು ಎಂದು ಭಾವಿಸಬಾರದು. ಉಚ್ಚ ಸ್ಥಾನದಲ್ಲಿ ಇರುವ

---

೧೧೪. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೩೮

ಗ್ರಹ ಅಪಾರವಾದ ಶಕ್ತಿಯನ್ನು ಹೊಂದಿದೆ ಎಂದರ್ಥ; ನೀಚ ಸ್ಥಾನದಲ್ಲಿ ಇರುವ ಗ್ರಹ ತನ್ನ ಶಕ್ತಿಯನ್ನು ಕಳೆದುಕೊಂಡಿದೆ ಎಂದು ಅರ್ಥ. ಅದರ ಹೊರತು ಉಚ್ಚ, ನೀಚ ಎಂದರೆ ಒಳ್ಳೆಯದೇ ಹೊರತು, ಒಳ್ಳೆಯದು ಕೆಟ್ಟದ್ದು ಎಂದರ್ಥವಲ್ಲ."[೧೧೫]

ಗ್ರಹಗಳ ಸ್ವಕ್ಷೇತ್ರ, ಉಚ್ಚ, ನೀಚ ಸ್ಥಾನದ ಆಧಾರದ ಮೇಲೆ
ಶುಭಾಶುಭಗಳನ್ನು ತಿಳಿಸಲಾಗುತ್ತದೆ.[೧೧೬]

ಮೀನ ಗುರು	**ಮೇಷ** ಕುಜ	**ವೃಷಭ** ಶುಕ್ರ	**ಮಿಥುನ** ಬುಧ
ಕುಂಭ ಶನಿ	**ಸ್ವಕ್ಷೇತ್ರ ಗ್ರಹಗಳ ಸ್ಥಾನ**		**ಕರ್ಕ** ಚಂದ್ರ
ಮಕರ ಶನಿ			**ಸಿಂಹ** ರವಿ
ಧನಸ್ಸು ಗುರು	**ವೃಶ್ಚಿಕ** ಕುಜ	**ತುಲಾ** ಶುಕ್ರ	**ಕನ್ಯಾ** ಬುಧ

ಮೀನ ಶುಕ್ರ	**ಮೇಷ** ರವಿ	**ವೃಷಭ** ಚಂದ್ರ	**ಮಿಥುನ**
ಕುಂಭ	**ಗ್ರಹಗಳ ಉಚ್ಚ ಸ್ಥಾನ**		**ಕಟಕ** ಗುರು
ಮಕರ ಕುಜ			**ಸಿಂಹ**
ಧನಸ್ಸು	**ವೃಶ್ಚಿಕ**	**ತುಲಾ** ಶನಿ	**ಕನ್ಯಾ** ಬುಧ

ಮೀನ ಬುಧ	**ಮೇಷ** ಶನಿ	**ವೃಷಭ**	**ಮಿಥುನ**
ಕುಂಭ ಶನಿ	**ಗ್ರಹಗಳ ನೀಚ ಸ್ಥಾನ**		**ಕರ್ಕ** ಕುಜ
ಮಕರ ಶನಿ			**ಸಿಂಹ**
ಧನಸ್ಸು	**ವೃಶ್ಚಿಕ** ಚಂದ್ರ	**ತುಲಾ** ರವಿ	**ಕನ್ಯಾ** ಶುಕ್ರ

೫) ವಿಯೋನಿಜನ್ಮ ಪ್ರಕರಣಂ:

ಶ್ರೀಧರಾಚಾರ್ಯನು **'ಜಾತಕತಿಲಕ'**ದ ವಿಯೋನಿಜನ್ಮ ಪ್ರಕರಣದಲ್ಲಿ ವಿಯೋನಿ ಜನ್ಮ ಅಂದರೆ ಮನುಷ್ಯರನ್ನು ಹೊರತುಪಡಿಸಿ ವಿವಿಧ ಯೋನಿಗಳಲ್ಲಿ ಹುಟ್ಟುವುದು. ಪಕ್ಷಿ, ಮೃಗ, ಕುದುರೆ, ಎಮ್ಮೆ, ಎತ್ತು, ನಾಯಿ ಮುಂತಾದ ಮನುಷ್ಯೇತರ ಪ್ರಾಣಿಗಳ ಜನ್ಮ ಎಂದರ್ಥ. ವಿಯೋನಿ ಜನ್ಮಜ್ಞಾನ, ರಾಶಿಗಳಿಗೆ ವಿಯೋನಿಯ ಶರೀರಕ್ಕೆ ತಕ್ಕಂತೆ ಅಂಗ ವಿಭಾಗ, ಪಶು ವರ್ಣ, ಪಕ್ಷಿ ಮತ್ತು ವೃಕ್ಷಗಳ ಜನ್ಮ, ಅವುಗಳ ಸ್ವರೂಪ, ಅವುಗಳ ಸಂಖ್ಯೆ, ಆಯುಸ್ಸು ಮುಂತಾದ ಅಂಶಗಳು ಇದರಲ್ಲಿವೆ. ವಿಯೋನಿ ಜನ್ಮವು ಎರಡು ಯೋಗಗಳಲ್ಲಿ ಉಂಟಾಗುತ್ತದೆ. ಮೊದಲನೆಯದ್ದು, ಶನಿ ಇಲ್ಲವೇ ಬುಧರು ಪ್ರಶ್ನ ಲಗ್ನದಿಂದ ೧, ೪, ೭, ೧೦ನೆಯ ಸ್ಥಾನಗಳಲ್ಲಿದ್ದು, ಶುಭಗ್ರಹಗಳು ದುರ್ಬಲವಾಗಿದ್ದಲ್ಲಿ, ಅಶುಭ ಗ್ರಹಗಳು ಬಲಿಷ್ಠರಾಗಿ ಚಂದ್ರ, ಮೇಷ, ವೃಷಭ, ಕರ್ಕ, ಸಿಂಹ,

---

೧೧೫. ವಿಶ್ವಕರ್ಮ ಜಿ. ವೈ. : **ಜ್ಯೋತಿಷ್ಯ ರತ್ನಾಕರ** ; ಪುಟ. ೨೫

೧೧೬. **ಅದೇ** ; ಪುಟ. ೨೪, ೨೬

ವೃಶ್ಚಿಕ, ಧನಸ್ಸು, ಮಕರ, ಮೀನಗಳು ದ್ವಾದಶಾಂಶ ರಾಶಿಗೆ ಸಮವಾದ ಪ್ರಾಣಿ ಹುಟ್ಟುತ್ತದೆ. ಎರಡನೆಯದ್ದು, ಯೋಗದಲ್ಲಿ ಸಪ್ತಮ ದೃಷ್ಟಿಯನ್ನು ತೆಗೆದುಕೊಂಡರೆ ಸಪ್ತಮ ದೃಷ್ಟಿಯನ್ನು ಬಿಟ್ಟು ಉಳಿದ ದೃಷ್ಟಿಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಯುತ್ತದೆ.

ಪ್ರಾಣಿಗಳ ವಿವರ

ಮೇಷ ರಾಶಿ	–	ಕುರಿ ಮೇಕೆ ಮೊದಲಾದವುಗಳು
ವೃಷಭ ರಾಶಿ	–	ಎತ್ತು, ಎಮ್ಮೆ ಮೊದಲಾದವುಗಳು
ಕರ್ಕಾಟಕ ರಾಶಿ	–	ಏಡಿ, ಆಮೆ ಮೊದಲಾದವುಗಳು
ಸಿಂಹ ರಾಶಿ	–	ಹುಲಿ, ಸಿಂಹ, ನಾಯಿ, ನರಿ, ಬೆಕ್ಕು
ವೃಶ್ಚಿಕ ರಾಶಿ	–	ಹಾವು, ಚೇಳು ಮೊದಲಾದವುಗಳು
ಧನಸ್ಸು ರಾಶಿ	–	ಕುದುರೆ, ಕತ್ತೆ ಮೊದಲಾದವುಗಳು
ಮಕರ (ಮೊದಲರ್ಧ)	–	ಜಿಂಕೆ
ಮಕರ (ಉತ್ತಾರಾರ್ಧ)	–	ಕಪ್ಪೆ, ಮೊಸಳೆ
ಮೀನ	–	ಮೀನು

ಹೀಗೆ ವಿವಿಧ ಯೋನಿಗಳಲ್ಲಿ ಜೀವವು ಜನ್ಮತಳೆಯುತ್ತವೆಂದು ಶ್ರೀಧರಾಚಾರ್ಯನು ತಿಳಿಸುತ್ತಾನೆ.

೬) ಅರಿಷ್ಟಯೋಗ ಪ್ರಕರಣಂ:

ಶ್ರೀಧರಾಚಾರ್ಯನು ಜಾತಕತಿಲಕದ ಆರನೆಯ ಅಧಿಕಾರವಾದ ಅರಿಷ್ಟಯೋಗ ಪ್ರಕರಣದಲ್ಲಿ ಜನನ ಕಾಲದಲ್ಲಿ ಪಾಪಗ್ರಹಗಳು ಮಗುವನ್ನು ನೋಡಿದರೆ ಹುಟ್ಟಿದ ಕೂಡಲೇ ಮಗುವಿನ ಸಾವು, ಶುಭಗ್ರಹಗಳು ನೋಡಿದರೆ ಎಂಟು ವರ್ಷಗಳ ಮೇಲೆ ಸಾವು, ಶಭಾಶುಭ ಗ್ರಹಗಳ ದೃಷ್ಟಿಯಿಂದ ನಾಲ್ಕು ವರ್ಷದ ಮೇಲೆ ಸಾವು, ಸೂರ್ಯ ಉದಯಿಸಿದ ನಾಲ್ಕು ಗಂಟೆಯೊಳಗೆ ಜನನವಾದ ಮೇಲೆ ಉಲ್ಕಾಪಾತ, ಕೇತೋದಯ ಮೊದಲಾದ ಅನಿಷ್ಟಜಾತಕ ಅಂಶಗಳು ಕಂಡು ಬಂದರೆ ಹುಟ್ಟಿದ ಕೂಡಲೇ ಮಗು ಸಾಯುತ್ತದೆ ಎಂಬ ನಂಬಿಕೆಗಳು ಇಂದಿಗೂ ಜಾರಿಯಲ್ಲಿರುವುದನ್ನು ನಾವು ಕಾಣಬಹುದು. ಇಂದಿಗೂ ಸೂರ್ಯಗ್ರಹಣ, ಚಂದ್ರಗ್ರಹಣವಿದ್ದಾಗ ಗರ್ಭಿಣಿಯರು ಯಾವುದೇ ಕೆಲಸಗಳನ್ನು ಮಾಡಬಾರದು. ಒಂದು ವೇಳೆ ಮಾಡಿದರೇ ಅವುಗಳ ಪರಿಣಾಮ ಮಕ್ಕಳ ಮೇಲಾಗುತ್ತವೆ ಎಂಬ ನಂಬಿಕೆ ಇದೆ. ಹಾಗೆಯೇ ತಾಯಿಯೊಡನೆ ಮಗುವಿನ ಸಾವು, ಗಂಡಾಂತರದಲ್ಲಿ ಜನಿಸುವುದು ಅದರಿಂದ ಸಾವು ಎಂಬ ಮುಂತಾದ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ. ಕ್ಷೀಣಚಂದ್ರ ಪಾಪಗ್ರಹದೊಡನೆ ಲಗ್ನ ಏಳು, ಎಂಟು, ಹನ್ನೆರಡನೆಯ ಸ್ಥಾನದಲ್ಲಿ ಶುಭಗ್ರಹಗಳು ಮಗುವಿನ ಜನ್ಮಸ್ಥಾನದಲ್ಲಿ ಮತ್ತು ಕೇಂದ್ರ ಸ್ಥಾನದಲ್ಲಿದ್ದರೆ ಮಗುವು ಸಾವನ್ನಪ್ಪುತ್ತದೆ.

ಗಂಡಾಂತರದಲ್ಲಿ ಹುಟ್ಟಿದವನು ತನ್ನ ತಾಯಿ, ತಂದೆ ಮತ್ತು ಅವರ ವಂಶಗಳೊಡನೆ ತಾನೂ ಸಾವನ್ನಪ್ಪುತ್ತಾನೆ. ಆಯುಷ್ಮಂತನಾಗಿ ಬದುಕಿದ್ದೇ ಆದರೆ ಕುದುರೆ, ಆನೆಗಳನ್ನು ಹೊಂದಿರುವ ಭೂಪತಿಯಾಗುತ್ತಾನೆ.

"ಬರೆರಿಷ್ಟಂ ಕೃತ್ಯಯೋಗಗ್ರಹವತಿಬಳನಾಗಿರ್ದ ತಾಣಕ್ಕೆ ಜನ್ಮಂ
ದೊರೆಕೊಳ್ವಂದಿಂದು ಮುನ್ನಿರ್ದೆಡೆಗೆ ಜನನಲಗ್ನಕ್ಕೆ ಮೇಣ್ ವೀರ್ಯಯುಕ್ತಂ
ಹರಿಣಾಂಕಂ ಬಂದೊಡಾ ಮೂಱನೆಯೆಡೆಯಡುಪಂ ನೋಟಿಕ್ಪೊಡುಗ್ರರ್ ಬಲಾಢ್ಯರ್
ಮರಣಂ ಸಂವತ್ಸರಾಭ್ಯಂತರದೊಳೆ ಶಿಶುವಿಂಗಾದಿನಕ್ಕೊಂದಿ ಬಕ್ಕುಂ ॥೬.೫೨॥"[೧೧೭]

ಅರಿಷ್ಟಯೋಗಕಾರಕ ಗ್ರಹಗಳಲ್ಲಿ ಬಲಿಷ್ಠನಾದವನು ಜನ್ಮಕಾಲದಲ್ಲಿದ್ದ ಸ್ಥಾನಕ್ಕೆ ಚಂದ್ರನು ಬಂದಾಗ ಜನನಕಾಲದಲ್ಲಿದ್ದ ಸ್ಥಾನಕ್ಕೆ ಅಥವಾ ಜನನ ಲಗ್ನಕ್ಕೆ ಬಲಿಷ್ಠನಾದ ಚಂದ್ರನು ಬಂದಾಗ ಈ ಮೂರು ಸ್ಥಾನಗಳೊಂದರಲ್ಲಿರುವ ಚಂದ್ರನನ್ನು ಬಲಿಷ್ಠರಾದ ಪಾಪಗ್ರಹಗಳು ನೋಡಿದರೆ ಒಂದು ವರ್ಷದೊಳಗೆ ಆ ಮಗುವಿಗೆ ಮರಣವುಂಟಾಗುವುದು.

೭) ಅರಿಷ್ಟಭಂಗ ಪ್ರಕರಣಂ:

ಜಾತಕತಿಲಕದ ಅರಿಷ್ಟಭಂಗ ಪ್ರಕರಣದಲ್ಲಿ ಅರಿಷ್ಟಯೋಗದಿಂದಾದ ಪಾಪಗಳನ್ನು ಪರಿಹರಿಸಲು ಈ ಪ್ರಕರಣ ಸಹಾಯ ಮಾಡುತ್ತದೆ. ಜನ್ಮರಾಶಿಗಳ ಅಧಿಪತಿಯಿಂದಾಗುವ ಅರಿಷ್ಟ, ಸರ್ವ ಅರಿಷ್ಟಗಳಿಗೆ ಭಂಗ ತರುವ ವಿಚಾರವನ್ನು ಇಲ್ಲಿ ಪ್ರಸ್ತಾಪಿಲಾಗಿದೆ. ಆಕಾಶದಲ್ಲಿ ನಕ್ಷತ್ರ, ಗ್ರಹಗಳು ಸೂರ್ಯನ ಸಮೀಪ ಸಂಚರಿಸುವಾಗ ಅವುಗಳು ದೃಷ್ಟಿಗೋಚರವಾಗುವುದಿಲ್ಲ. ಆದುದರಿಂದ ಅವುಗಳನ್ನು ಗಣಿತೀಯವಾಗಿ ಲೆಕ್ಕಾಚಾರ ಮಾಡಿ, ಉದಯಾಸ್ತಗಳನ್ನು ತಿಳಿಯಬೇಕು. ಹಾಗೆ ಮಾಡಬೇಕಾದರೆ ಅದು ಕ್ರಾಂತಿವೃತ್ತ ಸಮರೇಖೆಯಲ್ಲಿ ಕ್ರಾಂತಿವೃತ್ತದಿಂದ ದಕ್ಷೀಣೋತ್ತರವಾಗಿ ಹಾಗೂ ಭೂಮಧ್ಯರೇಖೆಗೆ ಎಷ್ಟನೆಯ ಅಂಶದಲ್ಲಿ ಇರುತ್ತದೆ ಎನ್ನುವುದನ್ನು ತಿಳಿಸುವುದೇ ಧ್ರುವಕ. ಕ್ರಾಂತಿವೃತ್ತ ಸಮರೇಖೇಯಲ್ಲಿ ದಕ್ಷಿಣೋತ್ತರ ಅಂತರವೇ ಶರ. ಇವುಗಳು ಭೂಗೋಳಶಾಸ್ತ್ರದಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳು ಎನಿಸಿವೆ. ಜನನ ಕಾಲದಲ್ಲಿ ಶುಭಯೋಗಗಳಿದ್ದರೂ ಶುಭಗ್ರಹವು ಲಗ್ನದಲ್ಲಿದ್ದು ಶುಭಗ್ರಹಗಳು ಲಗ್ನವನ್ನು ನೋಡಿದರೂ ಅರಿಷ್ಟಗಳೆಲ್ಲಾ ಜನನ ಕಾಲದಲ್ಲಿ ಶಾಂತವಾಗುತ್ತವೆ. ಮೃದುವೂ, ನಯವೂ ಆದ ಧೂಳಿನಿಂದ ಕಾಡಿದ ಗಾಳಿ ಬೀಸಿದಾಗ ಮೋಡ ಹೆಚ್ಚಾಗಿ ಗುಂಪುಗೂಡಿದಾಗ ಶುಭ ಮುಹೂರ್ತದಲ್ಲಿ ಹುಟ್ಟಿದರೆ ಅರಿಷ್ಟಗಳು ನಿವಾರಣೆಯಾಗುವವು. ಅದೇರೀತಿಯಾಗಿ ಜನನ ಕಾಲದಲ್ಲಿ ಗ್ರಹವು ಪರಿವೇಷದಿಂದ ಸುತ್ತಲ್ಪಟ್ಟಿದ್ದು ಆ ಗ್ರಹವನ್ನು ಕ್ರೂರ ಗ್ರಹವು ನೋಡಿದರೆ ಅರಿಷ್ಟ ನಿವಾರಣೆಯೂ ತುಷ್ಟೀಕರವೂ ಅಭೀಷ್ಟಕ್ಕೆ ಕಾರಣವೂ ಆಗುವುದು.

---

೧೧೭. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೮೦

೮) ಆಯುರ್ದಾಯ ಪ್ರಕರಣಂ:

ಶ್ರೀಧರಾಚಾರ್ಯನು ತನ್ನ ಜಾತಕತಿಲಕದ ಆಯುರ್ದಾಯ ಪ್ರಕರಣದಲ್ಲಿ ಮನುಷ್ಯ, ಪ್ರಾಣಿಗಳಿಗಿರುವ ಆಯುಸ್ಸಿನ ಮಿತಿಗಳು, ಗ್ರಹಗಳ ಆಯುಸ್ಸು, ಯಾರು ಪುಣ್ಯಕಾರ್ಯಗಳನ್ನು ಮಾಡುತ್ತಾರೋ, ಯಾರು ಜಿತೇಂದ್ರಿಯರೂ, ಆಹಾರ ನಿಯಮವುಳ್ಳವರೂ, ದೈವಾರಾಧಕರೂ ಆಗಿರುವರೋ ಅವರಿಗೆ ಈ ಆಯುರ್ದಾಯವು ಲಭಿಸುತ್ತದೆ. ಇಲ್ಲದಿದ್ದಲ್ಲಿ ಅವರ ಹೀನಕಾರ್ಯಗಳಿಂದಾಗಿ ಆಯುಸ್ಸು ಹಾನಿಯಾಗುತ್ತದೆ ಎಂಬುದನ್ನು ತಿಳಿಸಿದ್ದಾನೆ.

“ಜನನ ಕಾಲದ ಗ್ರಹಸ್ಫುಟವನ್ನು ನೂರಾ ಎಂಟರಿಂದ ಗುಣಿಸಿದಾಗ ಬರುವ ಭಾಗಣಾದಿ ಸ್ಫುಟದಲ್ಲಿ ಭಗಣವನ್ನು ಹನ್ನೆರಡರಿಂದ ಭಾಗಿಸಿದಾಗ ಉಳಿದ ಶೇಷವನ್ನು ಬರೆದುಕೊಳ್ಳುವುದು. ಆ ಶೇಷವು ಆ ಗ್ರಹವು ಕೊಡುವ ಆಯುಸ್ಸಿನ ವರ್ಷ ಪ್ರಮಾಣ; ರಾಶಿ ಶೇಷವೇ ತಿಂಗಳು; ಅಂಶ ಶೇಷವೇ ದಿನ; ಕಲಾಶೇಷವೇ ಘಳಿಗೆ. ಇದರಂತೆಯೇ ಪ್ರತಿಗ್ರಹದಿಂದಲೂ ಬರುವ ಆಯುಸ್ಸಿನ ಪ್ರಮಾಣವನ್ನು ಕುಡಿದರೆ ಆ ಜಾತಕನ ಒಟ್ಟು ಪ್ರಮಾಣವು ಹನ್ನೆರಡು ವರ್ಷಗಳಿಗಿಂತ ಅಧಿಕವಾಗುವುದಿಲ್ಲ.”[೧೧೮]

ಕೋಷ್ಟಕ ೫.೧೪

ಗ್ರಹಗಳು ಉಚ್ಚ, ನೀಚಾದಿಗಳಲ್ಲಿರುವಾಗ ಆಯುರ್ವರ್ಷಾದಿಗಳ ಕೋಷ್ಟಕ[೧೧೯]

ಗ್ರಹಗಳು	ಉಚ್ಚ ರಾಶ್ಯಾದಿ		ಉಚ್ಚ ವರ್ಷಾದಿ		ನೀಚ ರಾಶ್ಯಾದಿ		ನೀಚ ವರ್ಷಾದಿ	
	ರಾಶಿ	ಭಾಗ	ವರ್ಷ	ಮಾಸ	ರಾಶಿ	ಭಾಗ	ವರ್ಷ	ಮಾಸ
ರವಿ	೦೦	೧೦	೧೯	೦೦	೦೬	೧೦	೦೯	೦೬
ಚಂದ್ರ	೦೧	೦೩	೨೫	೦೦	೦೭	೦೩	೧೨	೦೬
ಕುಜ	೦೯	೨೮	೧೫	೦೦	೦೩	೨೮	೦೭	೦೬
ಬುಧ	೦೫	೧೫	೧೨	೦೦	೧೧	೧೫	೦೬	೦೦
ಗುರು	೦೩	೦೫	೧೫	೦೦	೦೯	೦೫	೦೭	೦೬
ಶುಕ್ರ	೧೧	೨೭	೨೧	೦೦	೦೫	೨೭	೧೦	೦೬
ಶನಿ	೦೬	೨೦	೨೦	೦೦	೦೦	೨೦	೧೦	೦೦

ಈ ಕೋಷ್ಟಕದಲ್ಲಿ ಸೂಚಿತವಾಗಿರುವಂತೆ ಗ್ರಹಾದಿಗಳಿಂದ ಲಬ್ಧವಾಗುವ ಆಯುರ್ವರ್ಷಗಳನ್ನು ಲೆಕ್ಕಾಚಾರ ಮಾಡಿ ಹೇಳಲಾಗುತ್ತದೆ. “ಜನನ ಕಾಲದಲ್ಲಿ ಸೂರ್ಯ ಚಂದ್ರರು ಗ್ರಹಣಪೀಡಿತರಾಗದೆ ಬಲಿಷ್ಠರಾಗಿ ಸ್ವಕ್ಷೇತ್ರ ಅಥವಾ ಉಚ್ಚ ಕ್ಷೇತ್ರದಲ್ಲಿದ್ದರೆ ಅವರು ತಮಗೆ ಹೇಳಿರುವಷ್ಟು ಪರಮಾಯುಷ್ಯವನ್ನು ಕೊಡುತ್ತಾರೆ. ಲಗ್ನರಾಶಿಯೂ ಗ್ರಹಣಪೀಡಿತವಾಗದೆ ಪಾಪಗ್ರಹಗಳು ಲಗ್ನದಲ್ಲಿಲ್ಲದೆ ಬಲಿಷ್ಠವಾಗಿರುವಾಗ ಲಗ್ನಕ್ಕೆ ಉಕ್ತವಾಗಿರುವ ಪರಮಾಯುಸ್ಸು

೧೧೮. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೮೯
೧೧೯. ಕದ್ರಿ ಶ್ರೀನಿವಾಸ ಶರ್ಮಾ : **ಬೃಹಜ್ಜಾತಕ ಕರ್ನಾಟಕ ಭಾಷಾ ಟೀಕಾ ಸಹಿತ** ; ೬೯

ಬರುತ್ತದೆ. ಕುಜಾದಿ ಐದು ಗ್ರಹಗಳೂ ಅಸ್ತರಾಗದೇ ಸ್ವಕ್ಷೇತ್ರ ಅಥವಾ ಉಚ್ಚ ಕ್ಷೇತ್ರದಲ್ಲಿದ್ದು ಬಲಿಷ್ಠರಾಗಿದ್ದರೆ ತಮಗೆ ಉಕ್ತವಾಗಿರುವಷ್ಟು ಪರಮಾಯುಸ್ಸನ್ನು ಕೊಡುತ್ತಾರೆ."[೧೨೦]

೯) ದಶಾಂಶದರ್ಶಾ ಪ್ರಕರಣಂ:

ಶ್ರೀಧರಾಚಾರ್ಯನ ಜಾತಕತಿಲಕದ ದಶಾಂತರ್ದಶಾ ಪ್ರಕರಣವು ಆಯುರ್ದಾಯ ಪ್ರಕರಣದ ಮುಂದುವರೆದ ಭಾಗವಾಗಿದ್ದು, ತಾನು ಪಡೆದ ಪುಣ್ಯಕಾರ್ಯಗಳಿಂದಾಗಿ ಹೆಚ್ಚಿನ ಆಯುಸ್ಸನ್ನು ಪಡೆದುಕೊಳ್ಳುವ ಮಾರ್ಗವಾಗಿದೆ. ದಶಾಕಾಲ, ಶುಭಾಶುಭ ದಶೆಗಳು, ಅವರೋಹಿ, ಆರೋಹಿ ದಶೆಗಳು, ಚಂದ್ರನಿರುವ ರಾಶಿಯಿಂದ ದೊರೆಯಬಹುದಾದ ಫಲ, ಸೂರ್ಯಾದಿ ಗ್ರಹಗಳ ದಶಾಫಲಗಳನ್ನು ಇಲ್ಲಿ ವಿವರಿಸಿದೆ. ಸೂರ್ಯ ಚಂದ್ರರಲ್ಲ ಯಾವುದಕ್ಕೆ ಹೆಚ್ಚು ಒಲವಿರುತ್ತದೆಯೋ ಅದರ ದಶೆಯು ಜಾತಕನಿಗೆ ಮೊದಲ ದಶೆಯಾಗುತ್ತದೆ. ಬಳಿಕ ದಶಾಧಿಪತಿಗೆ ಕೇಂದ್ರ ಸ್ಥಾನದಲ್ಲಿರುವ ಗ್ರಹಗಳ ಆಧಾರದಲ್ಲಿ ದಶೆಗಳು ನಡೆಯುತ್ತವೆ. ಮೊದಲ ದಶಾಧಿಪತಿಗೆ ಕೇಂದ್ರ ಮತ್ತು ಫಣಪರಗಳಲ್ಲಿ ಗ್ರಹಗಳಿಲ್ಲದಿದ್ದರೆ ಆಪೋಕ್ಲೀಮಗಳಲ್ಲಿರುವ ಗ್ರಹಗಳ ದಶೆಯೇ ಮೊದಲನೆಯ ದಶೆಯ ನಂತರ ಕ್ರಮವಾಗಿ ಬರುತ್ತದೆ. ಹೆಚ್ಚು ಗ್ರಹಗಳು ಕೇಂದ್ರಸ್ಥಾನದಲ್ಲಿದ್ದರೆ ಬಲಯುತ ಗ್ರಹದ ದಶೆಯು ಮೊದಲೂ, ಬಳಿಕ ನ್ಯೂನ್ಯ ಬಲಕ್ರಮದಲ್ಲಿ ಉಳಿದ ಗ್ರಹಗಳ ದಶೆಗಳೂ ನಡೆಯುತ್ತವೆ.

"ದಿನನಾಥಾದಿಗಳುಚ್ಚದಿಂದಿಟೆಯೆ ನೀಚಂತಾಪಿನಂ ಕಷ್ಟಮ
ಕ್ಕನಿಂತು ತಾನವರೋಹಿ ತದ್ದಶೆ ತದಾವಾಸಮಗಳೊಳ್ ತುಂಗಮಿ
ತ್ರನಿಜಾಂಶಸ್ಥಿತರಾಗೆ ಮಧ್ಯಫಲದಂ ತನ್ನೀಚದಿಂದುಚ್ಚಮ
ಪ್ಪಿನಮಾರೋಹಿ ವಿಶಿಷ್ಟಮಲ್ಲಿ ರಿಪು ನೀಚಾಂಶಸ್ಥಿತಂ ನಿಂದಿತಂ ॥೯.೦೬॥"[೧೨೧]

ಜನನ ಕಾಲದಲ್ಲಿ ಸೂರ್ಯಾದಿ ಗ್ರಹಗಳು ತಮ್ಮ ತಮ್ಮ ಉಚ್ಚಕ್ಷೇತ್ರದಿಂದ ನೀಚಸ್ಥಾನಕ್ಕೆ ಇಳಿಯುತ್ತಿದ್ದರೆ ದಶಾಕಾಲದಲ್ಲಿ ಅವು ಕಷ್ಟವನ್ನು ಕೊಡುತ್ತವೆ. ಅದಕ್ಕೆ ಅವರೋಹಿದಶೆ ಎಂದು ಹೆಸರು. ಅವರೋಹ ರಾಶಿಗಳಲ್ಲಿ ಉಚ್ಚ, ಮಿತ್ರ, ಸ್ವನವಾಂಶಗಳಲ್ಲಿರುವ ಗ್ರಹಗಳು ಮಧ್ಯಮ ಫಲಗಳನ್ನು ಕೊಡುತ್ತವೆ. ನೀಚ ಕ್ಷೇತ್ರದಿಂದ ಉಚ್ಚಕ್ಷೇತ್ರೋನ್ಮುಖವಾದ ಗ್ರಹಕ್ಕೆ ಆರೋಹಿ ಎಂದು ಹೆಸರು. ಈ ದಶೆಯಲ್ಲಿ ಶುಭಫಲಗಳು ಉಂಟಾಗುತ್ತವೆ. ಆರೋಹಿ ಗ್ರಹವು ಶತ್ರು ಇಲ್ಲವೇ ನೀಚಾಂಶದಲ್ಲಿದ್ದರೆ ಅಶುಭ ಫಲಗಳುಂಟಾಗುತ್ತವೆ. ಪ್ರತಿಗ್ರಹದ ದಶೆಯಲ್ಲಿಯೂ ಎಲ್ಲ ಗ್ರಹಗಳ ಅಂತರ್ದಶೆಗಳಿರುವುದಿಲ್ಲ. ಒಂದೇ ಸ್ಥಾನದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಗ್ರಹಗಳಿದ್ದರೆ ಅವುಗಳಲ್ಲಿ ಅತಿ ಬಲಿಷ್ಠವಾದ ಗ್ರಹದ ಅಂತರ್ದಶೆ ಮಾತ್ರವಿರುತ್ತದೆ.

೧೦) ಅಷ್ಟಕವರ್ಗ ಪ್ರಕರಣಂ:

ಶ್ರೀಧರಾಚಾರ್ಯನ ಜಾತಕತಿಲಕದ ಹತ್ತನೆಯ ಅಧಿಕಾರವಾದ 'ಅಷ್ಟಕವರ್ಗ ಪ್ರಕರಣ'ದಲ್ಲಿ ಅಷ್ಟಕವರ್ಗ ವಿನ್ಯಾಸಕ್ರಮ, ಸೂರ್ಯಾದಿ ಗ್ರಹಗಳಿಂದ ಬಿಂದು ಪ್ರಸ್ಥಾನಗಳು, ಅಷ್ಟಕವರ್ಗ

೧೨೦. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೯೫
೧೨೧. **ಅದೇ** ; ಪುಟ. ೧೦೫

ಫಲಾಫಲಗಳನ್ನು ತಿಳಿಸಲಾಗಿದೆ. ಜನನ ಕಾಲದಲ್ಲಿ ಸೂರ್ಯಾದಿಯಾಗಿ ಏಳು ಗ್ರಹಗಳು ಮತ್ತು ಲಗ್ನವು ಎಂಟೂ ಅಂಶಗಳು ಯಾವ ಯಾವ ರಾಶಿಯಲ್ಲಿರುವವೋ ಆ ರಾಶಿಯಿಂದ ಶುಭಾಶುಭ ಸ್ಥಾನಗಳನ್ನು ತಿಳಿಸುವುದೇ ಅಷ್ಟಕವರ್ಗ. ಕುಂಡಲೀ ಚಕ್ರವನ್ನು ಬರೆದು ಅದರಲ್ಲಿ ಜನನಕಾಲದ ಗ್ರಹಗಳನ್ನೂ ಲಗ್ನವನ್ನೂ ಬರೆದು ಅಭೀಷ್ಟಗ್ರಹದ ಅಷ್ಟಕವರ್ಗದಲ್ಲಿ ಹೇಳಿರುವ ಕಡೆ ಬಿಂದುಗಳನ್ನೂ ಹೇಳದೆ ಬಿಟ್ಟಿರುವ ಕಡೆಗಳಲ್ಲಿ ರೇಖೆಗಳನ್ನೂ ಗುರುತಿಸಬೇಕು. ಪ್ರತಿಗ್ರಹಕ್ಕೂ ಹೇಳಿರುವ ಅಷ್ಟಕವರ್ಗಕ್ಕೆ ಭಿನ್ನಾಷ್ಟಕ ವರ್ಗವೆಂದು ಹೆಸರು. ಅಷ್ಟಕವರ್ಗದಲ್ಲಿ ಒಟ್ಟು ೩೩೭ ಬಿಂದಗಳಿರುತ್ತವೆ. ಅಷ್ಟಕವರ್ಗವನ್ನು ರಾಶಿಕುಂಡಲಿಯ ಗ್ರಹಸ್ಥಿತಿಯಿಂದಲೇ ಗುರುತಿಸಬೇಕು. ರಾಹು, ಕೇತುಗಳಿಗೆ ಅಷ್ಟಕವರ್ಗವಿರುವುದಿಲ್ಲ.

ಮೀನ	**ಮೇಷ**	**ವೃಷಭ**	**ಮಿಥುನ** ಗುರು
ಕುಂಭ ಲಗ್ನ	**ರಾಶಿ**		**ಕರ್ಕ**
ಮಕರ	**ಕುಂಡಲಿ**		**ಸಿಂಹ** ರ, ಚಂ, ಬು, ಶು, ಶ
ಧನಸ್ಸು	**ವೃಶ್ಚಿಕ**	**ತುಲಾ** ಕುಜ	**ಕನ್ಯಾ**

"ಈ ಕುಂಡಲಿಯಲ್ಲಿ ಮೇಷ, ವೃಷಭ ಮುಂತಾಗಿ ಹನ್ನೆರಡು ಹೆಸರುಗಳಿರುವ ಮನೆಗಳು ಆಯಾ ರಾಶಿಗಳನ್ನು ಸೂಚಿಸುತ್ತವೆ. ಇದರಲ್ಲಿ ಒಬ್ಬ ಜಾತಕನ ಜನನಕಾಲದ ಗ್ರಹಸ್ಥಿತಿಗಳನ್ನು ಗುರುತಿಸಲಾಗಿದೆ. ಈ ಗ್ರಹಸ್ಥಿತಿಗಳಿಂದ ಮೇಷಾದಿ ರಾಶಿಗಳಲ್ಲಿ; ಸೂರ್ಯಾದಿ ಅಷ್ಟಕವರ್ಗದಲ್ಲಿ ಬರುವ ಬಿಂದುಸಂಖ್ಯೆಯನ್ನೂ ಬಿಂದುಪ್ರದ ಗ್ರಹದ ಹೆಸರನ್ನೂ ತೋರಿಸಲಾಗಿದೆ. ಕುಂಡಲಿಯಲ್ಲಿ ಸೂರ್ಯನು ಸಿಂಹರಾಶಿಯಲ್ಲಿರುವನು. ಸೂರ್ಯನಿಂದ ೧, ೨, ೪, ೭, ೮, ೯, ೧೦, ೧೧ನೆಯ ಸ್ಥಾನಗಳಲ್ಲಿ ಬಿಂದು ಬರುವುದು. ಅಂದರೆ ಸಿಂಹ, ಕನ್ಯಾ, ವೃಶ್ಚಿಕ, ಕುಂಭ, ಮೀನ, ಮೇಷ, ವೃಷಭ, ಮಿಥುನ ರಾಶಿಗಳಲ್ಲಿ ಸೂರ್ಯನು ಬಿಂದುಪ್ರದನಾಗುತ್ತಾನೆ. ಚಂದ್ರನು ೩, ೬, ೧೦, ೧೧ನೆಯ ಸ್ಥಾನದಲ್ಲಿ ಬಿಂದುಪ್ರದನಾಗಿರುವನು. ಇದೇ ರೀತಿ ಮೇಷಾದಿ ರಾಶಿಗಳಲ್ಲಿ ಸಂಚರಿಸುವಾಗ ಕೊಡುವ ಶುಭಾಶುಭ ಫಲಗಳನ್ನು ಅಷ್ಟಕವರ್ಗದಿಂದ ತಿಳಿದುಕೊಳ್ಳಬಹುದು."[೧೨೨]

೧೧) ಕರ್ಮಜೀವನ ಪ್ರಕರಣಂ:

ಶ್ರೀಧರಾಚಾರ್ಯನ ಜಾತಕತಿಲಕದ ಕರ್ಮಜೀವನ ಪ್ರಕರಣದಲ್ಲಿ ಯಾರಿಂದ ಧನ ಪ್ರಾಪ್ತಿಯಾಗುತ್ತದೆ ಮತ್ತು ಯಾವ ವೃತ್ತಿಯಿಂದ ಮನುಷ್ಯ ತನ್ನ ಜೀವನವನ್ನು ನಡೆಸುತ್ತಾನೆ

---

೧೨೨. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೧೨೫

ಎಂಬುದನ್ನು ತಿಳಿಸಲಾಗಿದೆ. ಜಾತಕನಿಗೆ ಧನವು ಹಲವು ಮಾರ್ಗಗಳಿಂದ ಬರುವುದನ್ನು ಇಲ್ಲಿ ಹೇಳಲಾಗಿದೆ.

“ಜಲರುಹಬಂಧು ಚಂದ್ರಮನಿನಕ್ಕೆ ವಿಲಗ್ನದಿನಕ್ಕೆ ಪತ್ತಱೊಳ್
ನಿಲೆ ಪಿತೃವಿಂ ಧನಂ ಸಮನಿಕುಂ ನಿಲೆ ಶೀತಗು ಮಾತೃವಿಂ ಕುಜಂ
ನಿಲೆ ರಿಪುವರ್ಗದಿಂ ಶಶಿಸುತಂ ನಿಲೆ ಮಿತ್ರರಿನಂಗಿರಾಸುತಂ
ನಿಲೆ ಸಹಜಾತರಿಂ ನಿಲೆ ಸಿತಂ ವಧುವಿಂ ನಿಲೆ ಸೌರಿ ಭೃತ್ಯರಿಂ ॥೧೧.೦೧॥”[೧೨೩]

ಜನನ ಕಾಲದಲ್ಲಿ ಸೂರ್ಯನು ಚಂದ್ರನಿಂದಾಗಲೀ ಲಗ್ನದಿಂದಾಗಲೀ ಹತ್ತನೆಯ ಸ್ಥಾನದಲ್ಲಿದ್ದರೆ ತಂದೆಯಿಂದ; ಚಂದ್ರನಿದ್ದರೆ ತಾಯಿಯಿಂದ; ಮಂಗಳನಿದ್ದರೆ ಶತ್ರುಗಳಿಂದ; ಬುಧನಿದ್ದರೆ ಸ್ನೇಹಿತರಿಂದ; ಗುರುವಿದ್ದರೆ ಸಹೋದರರಿಂದ; ಶುಕ್ರನಿದ್ದರೆ ಹೆಂಗಸಿನಿಂದ; ಶನಿಯಿದ್ದರೆ ಸೇವಕರಿಂದ ಹಣ ದೊರೆಯುವುದು.

“ಮಿತ್ರಾರಿ ಸ್ವಗೃಹ ಗತೈರ್ಗ್ರಹೈಸ್ತತೋರ್ಥಾಂ
ತುಂಗಸ್ಥೇ ಬಲಿನಿ ಚ ಭಾಸ್ಕರೇ ಸ್ವವೀರ್ಯಾತ್ ॥
ಆಯಸ್ಥೈರುದಯ ಧನಾಶ್ರಿತೈಶ್ಚ ಸೌಮ್ಯೈಃ
ಸಂಚಿಂತ್ಯಂ ಬಲಸಹಿತೈರನೇಕಧಾ ಸ್ವಮ್ ॥

ನವಾಂಶಾಧಿಪತಿಯಾದ ಗ್ರಹರು ಮಿತ್ರ, ಶತ್ರು, ಸ್ವಕ್ಷೇತ್ರದಲ್ಲಿದ್ದರೆ ಮಿತ್ರರಿಂದ ಶತ್ರುವಿನಿಂದ ಸ್ವಕೀಯ ಜನರಿಂದ ಧನಪ್ರಾಪ್ತಿಯಾಗುವುದು. ಧನಪ್ರದರಾದ ಗ್ರಹಗಳ ಬಲಕ್ಕೆ ಸಮಾನವಾಗಿ ಅಂದರೆ ಏಕಾದಶ ಲಗ್ನ ದ್ವತೀಯದಲ್ಲಿದ್ದು ಉಚ್ಚಾದಿ ಬಲಯುಕ್ತವಾಗಿದ್ದರೆ ಸೌಮ್ಯಗ್ರಹಗಳಿಂದ ಅನೇಕ ಪ್ರಕಾರವಾಗಿ ಧನಾಗಮವನ್ನು ಚಿಂತಿಸಿ ಹೇಳತಕ್ಕದ್ದು. ಇಲ್ಲಿ ವಿಶೇಷವೇನೆಂದರೆ ಲಗ್ನ, ಚಂದ್ರ, ಸೂರ್ಯರ ದಶಮಾಧಿಪತಿ, ದಶಮದಲ್ಲಿರುವ ಗ್ರಹ, ನವಾಂಶಾಧಿಪತಿ, ಇವರುಗಳಲ್ಲಿ ಬಲಶಾಲಿಗಳು ಯಾರೆಂಬುದನ್ನು ವಿಚಾರ ಮಾಡಿ ಈ ವಿಷಯಗಳನ್ನು ಹೇಳತಕ್ಕದ್ದು.”[೧೨೪]

೧೨) ರಾಜಯೋಗ ಪ್ರಕರಣಂ:

ಶ್ರೀಧರಾಚಾರ್ಯ ವಿರಚಿತ ಜಾತಕತಿಲಕದ ರಾಜಯೋಗ ಪ್ರಕರಣದಲ್ಲಿ ಮೂರು ಅಥವಾ ಅಧಿಕ ಗ್ರಹಗಳು ಉಚ್ಚಕ್ಷೇತ್ರದಲ್ಲಿದ್ದರೆ ರಾಜವಂಶದಲ್ಲಿ ಹುಟ್ಟಿದವನು ರಾಜನಾಗುತ್ತಾನೆ. ಐದು ಅಥವಾ ಅದಕ್ಕಿಂತ ಹೆಚ್ಚು ಗ್ರಹಗಳು ಉಚ್ಚಕ್ಷೇತ್ರದಲ್ಲಿದ್ದರೆ ರಾಜವಂಶದವನಲ್ಲದಿದ್ದರೂ ರಾಜನಾಗುತ್ತಾನೆ. ಒಂದು ಅಥವಾ ಎರಡು ಗ್ರಹಗಳು ಉಚ್ಚಕ್ಷೇತ್ರದಲ್ಲಿದ್ದರೆ ಧನಿಕನಾಗುತ್ತಾನೆ ಹಾಗೆಯೇ ಪಾಪಗ್ರಹಗಳು ಉಚ್ಚಕ್ಷೇತ್ರದಲ್ಲಿದ್ದರೆ ರಾಜಮನೆತನದಲ್ಲಿ ಹುಟ್ಟಿದರೂ ರಾಜನಾಗುವುದಿಲ್ಲ. ಯಾವ ಯಾವ ರಾಶಿಯವರಿಗೆ ರಾಜಯೋಗವಿದೆಯೆಂಬುದನ್ನು ಇಲ್ಲಿ ತಿಳಿಸಲಾಗಿದೆ. **“**ತ್ರಿಕೋನಾಧಿಪತಿಗಳು ಅಥವಾ ಕೇಂದ್ರಾಧಿಪತಿಗಳು ಲಗ್ನಾಧಿಪತಿಯ ಸಂಗಡ ಯುತಿಯಲ್ಲಿ ಇಲ್ಲವೇ ದೃಷ್ಟಿಯಲ್ಲಿ ಇದ್ದರೆ ಪಾಪದೃಷ್ಟಿ ಇರಕೂಡದು; ಇಲ್ಲವೇ ಲಗ್ನದಿಂದ ೧೧ನೆಯ ಸ್ಥಾನದಲ್ಲಿ

---

೧೨೩. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೧೭೯
೧೨೪. ಕದ್ರಿ ಶ್ರೀನಿವಾಸ ಶರ್ಮಾ : **ಬೃಹಜ್ಜಾತಕ ಕರ್ನಾಟಕ ಭಾಷಾ ಟೀಕಾ ಸಹಿತ** ; ೧೧೦

ಪೂರ್ಣಚಂದ್ರ ೪, ೭, ೧೦ನೆಯ ಸ್ಥಾನಗಳಲ್ಲಿ ಗುರು ಅಥವಾ ಮಂಗಳನಿದ್ದರೆ; ಲಗ್ನದಲ್ಲಿ ಶುಭಗ್ರಹಗಳಿದ್ದು, ಲಗ್ನಾಧಿಪತಿಯು ಉಚ್ಚನಾಗಿಯೂ ಕೇಂದ್ರದಲ್ಲಿ ಮಿತ್ರ ಕ್ಷೇತ್ರದಲ್ಲಿ; ತ್ರಿಕೋನದಲ್ಲಿ ಶುಭಗ್ರಹದ ಯುತಿಯಲ್ಲಿ ದೃಷ್ಟಿಯಲ್ಲಿ ಇದ್ದರೆ ರಾಜನಂತೆ ಸಕಲ ಅನುಕೂಲತೆ ಹೊಂದಿದವನಾಗುತ್ತಾನೆ. ಕೀತಿವಂತನೂ, ಧನಶಾಲಿಯೂ, ಘನವಂತನೂ ಆಗಿರುತ್ತಾನೆ."[೧೨೫]

ದ್ವಾದಶ ರಾಶಿಗಳ ರಾಜಯೋಗದ ಕುಂಡಲಿ ವಿವರಗಳನ್ನು ಈ ಅಧಿಕರಣದಲ್ಲಿ ಶ್ರೀಧರಾಚಾರ್ಯನು ನೀಡುತ್ತಾನೆ. ಅವುಗಳಲ್ಲಿ ಒಂದನ್ನು ಇಲ್ಲಿ ಉದಾಹರಿಸಲಾಗಿದೆ–

	ಕುಜ		**ಬುಧ**
	ಮಕರ ಲಗ್ನ ರಾಜಯೋಗ		**ಚಂದ್ರ**
ಲಗ್ನ ಶನಿ			**ರವಿ**
		ಶುಕ್ರ	

ಈ ಯೋಗದಲ್ಲಿ ಗುರುವನ್ನು ಬಿಟ್ಟು ಉಳಿದ ಆರು ಗ್ರಹಗಳೂ ಸ್ವಕ್ಷೇತ್ರದಲ್ಲಿರುತ್ತವೆ. ಈ ಯೋಗವು ಸಿಂಹಮಾಸ ಕೃಷ್ಣಪಕ್ಷದ ಕೊನೆಯ ಭಾಗದಲ್ಲಿ ಪುನರ್ವಸು ೪ನೆಯ ಪಾದ ಪುಷ್ಯ, ಆಶ್ಲೇಷಾ ನಕ್ಷತ್ರಗಳಲ್ಲಿ ಹುಟ್ಟಿದವರಿಗೆ ಸಂಬವಿಸುತ್ತದೆ. ಶನಿ, ಕುಜರು ಮಕರದಲ್ಲಿ; ಶುಕ್ರ ಹತ್ತನೆಯ ಸ್ಥಾನದಲ್ಲಿ ತನ್ನ ಉಚ್ಚ ರಾಶಿಯಲ್ಲಿರುವ ಬುಧ ಲಗ್ನದಲ್ಲಿ ಚಂದ್ರ ಗುರುಗಳು ಏಳನೆಯ ಸ್ಥಾನದಲ್ಲಿ ಇರುವಾಗ ಹುಟ್ಟಿದವನು ರಾಜನಾಗುತ್ತಾನೆ.[೧೨೬]

೧೩) ನಾಭಸಯೋಗ ಪ್ರಕರಣಂ:

ನಾಭಸಯೋಗ ಪ್ರಕರಣದಲ್ಲಿ ೨೦ ಆಕೃತಿಯೋಗ, ೭ ಸಂಖ್ಯಾಯೋಗ, ೩ ಆಶ್ರಯಯೋಗ, ೨ ದಲಯೋಗಗಳನ್ನು ಸೇರಿಸಿ ಒಟ್ಟು ೩೨ ಯೋಗಗಳ ಗುಂಪಿಗೆ ನಾಭಸಯೋಗ ಎನ್ನಲಾಗುತ್ತದೆ. (ಮೇಷ, ಕರ್ಕ, ತುಲಾ, ಮಕರ) ಚರರಾಶಿಗಳಲ್ಲಿ ಏಳುಗ್ರಹಗಳಿದ್ದರೆ ರಜ್ಜುಯೋಗ; (ವೃಷಭ, ಸಿಂಹ, ವೃಶ್ಚಿಕ, ಕುಂಭ) ಸ್ಥಿರರಾಶಿಗಳಲ್ಲಿ ಏಳುಗ್ರಹಗಳೂ ಇದ್ದಲ್ಲಿ ಮುಸಲಯೋಗ; (ಮಿಥುನ, ಕನ್ಯಾ, ಧನಸ್ಸು, ಮೀನ) ದ್ವಿಸ್ವಭಾವದ ರಾಶಿಗಳಲ್ಲಿ ಏಳು ಗ್ರಹಗಳಿದ್ದರೆ ಅದನ್ನು ನಳಯೋಗ ಎನ್ನಲಾಗುತ್ತದೆ. ನಾಭಸಯೋಗದ ಫಲಗಳು ಇತರ ಯೋಗಗಳಂತೆ ಫಲಪ್ರದ ಗ್ರಹಗಳ ದಶಾಕಾಲದಲ್ಲಿ ಮಾತ್ರ ಫಲಿಸದೇ ಸಾಮಾನ್ಯವಾಗಿ ಎಲ್ಲ ಕಾಲದಲ್ಲಿಯೂ ಫಲಿಸುವುದು ಎಂದು ತಿಳಿಸುವ ಶ್ರೀಧರಾಚಾರ್ಯನು ಮುಂದುವರೆದು ವಿವಿಧ ಯೋಗಗಳಿಂದಾಗುವ ಗುಣಾವಗುಣಗಳನ್ನು ತಿಳಿಸುತ್ತಾನೆ.

೧೨೫. ಗಣೇಶ ಹೆಗಡೆ : **ಜ್ಯೋತಿಷ್ಯ ಪ್ರವೇಶಿಕಾ** ; ಪುಟ. ೮೫
೧೨೬. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೧೩೫

ಕೋಷ್ಟಕ ೫.೧೫

ಯೋಗಗಳು	ಸಂದರ್ಭ	ಗುಣಾವಗುಣಗಳು
ರಜ್ಜುಯೋಗ	ಮೇಷ, ಕರ್ಕ, ತುಲಾ, ಮಕರ ರಾಶಿಗಳಲ್ಲಿ ಏಳು ಗ್ರಹಗಳಿದ್ದರೆ	ಇತರರ ಶ್ರೇಯಸ್ಸನ್ನು ಸಹಿಸುವುದಿಲ್ಲ. ವ್ಯಸನಿ, ದೇಶಾಂತರದಲ್ಲಿ ಆಸಕ್ತಿಯುಳ್ಳವನು.
ಮುಸಲಯೋಗ	ವೃಷಭ, ಸಿಂಹ, ವೃಶ್ಚಿಕ, ಕುಂಭ ರಾಶಿಗಳಲ್ಲಿ ಏಳು ಗ್ರಹಗಳಿದ್ದರೆ	ಧನಿಕ, ಮರ್ಯಾದಸ್ಥ, ಅನೇಕ ಕೆಲಸ ಮಾಡುವುದರಲ್ಲಿ ಶಕ್ತನು.
ನಳಯೋಗ	ಮಿಥುನ, ಕನ್ಯಾ, ಧನಸ್ಸು, ಮೀನ ರಾಶಿಗಳಲ್ಲಿ ಏಳು ಗ್ರಹಗಳಿದ್ದರೆ	ಶ್ರೀಮಂತ, ಜಾಣ ಸುಖಿಯಾಗಿರುವನು. ದೇಹದ ಅಂಗ ಊನವಿರುವ ಸಾಧ್ಯತೆ.
ಗದಾಯೋಗ	ಆಸನ್ನ ಕೇಂದ್ರದಲ್ಲಿ ಏಳು ಗ್ರಹಗಳಿದ್ದಾಗ	ಯಾಗಶೀಲ, ಧನವಂತ.
ಶಕಟಯೋಗ	ಸಪ್ತಮ ಕೇಂದ್ರದಲ್ಲಿ ಏಳು ಗ್ರಹಗಳಿದ್ದಾಗ	ವಾಹನದಿಂದ ಹಣ ಸಂಪಾದಿಸುವವನು.
ಶೃಂಗಾಟಕಯೋಗ	ಲಗ್ನ ಪಂಚಮದಲ್ಲಿ ಏಳು ಗ್ರಹಗಳಿದ್ದರೆ	ದುಷ್ಟ ಹೆಂಡತಿಯುಳ್ಳವನು. ರೋಗಿಷ್ಠ.
ವಿಹಗಯೋಗ	ಏಳು ಗ್ರಹಗಳು ಚತುರ್ಥ ಇಲ್ಲವೇ ದಶಮ ಸ್ಥಾನದಲ್ಲಿದ್ದಾಗ	ಸದಾ ಸುಖಿಯಾಗಿರುವನು.
ಹಲಯೋಗ	ಲಗ್ನವನ್ನು ಬಿಟ್ಟು ಉಳಿದ ಸ್ಥಾನಗಳಲ್ಲಿ ಏಳು ಗ್ರಹಗಳಿದ್ದಾಗ	ವ್ಯವಸಾಯ ಮಾಡುವವನು.
ಚಕ್ರಯೋಗ	ಲಗ್ನದಿಂದ ಆರಂಭವಾಗಿ ಏಕಾಂತರರಾಶಿಗಳಲ್ಲಿ ಏಳು ಗ್ರಹಗಳಿದ್ದಾಗ	ರಾಜ ಪೂಜಿತನು.
ಸಮುದ್ರಯೋಗ	ದ್ವಿತೀಯ ಸ್ಥಾನದಿಂದ ಆರಂಭವಾಗಿ ಏಳು ಗ್ರಹಗಳು ಏಕಾಂತರಾಶಿಗಳಿದ್ದರೆ	ರಾಜನಿಗೆ ಸಮನ ಭೋಗಿಯಾಗಿರುವನು.
ಗೋಳಯೋಗ	ಏಳು ಗ್ರಹಗಳು ಒಂದೇ ರಾಶಿಯಲ್ಲಿದ್ದರೆ	ನಿರ್ಧನನೂ, ಮೂರ್ಖನೂ ಆಗಿರುವನು.
ಯುಗಯೋಗ	ಏಳು ಗ್ರಹಗಳು ಎರಡು ರಾಶಿಯಲ್ಲಿದ್ದರೆ	ಹಣವಿಲ್ಲದವನು. ವೇದಬಾಹಿರನು.
ಶೂಲಯೋಗ	ಏಳು ಗ್ರಹಗಳು ಮೂರು ರಾಶಿಯಲ್ಲಿದ್ದರೆ	ದರಿದ್ರನಾಗಿದ್ದು, ಶೂರನೂ, ಗುಣಿಯೂ ಆಗಿರುವನು.
ಕೇದಾರಯೋಗ	ಏಳು ಗ್ರಹಗಳು ನಾಲ್ಕು ರಾಶಿಯಲ್ಲಿದ್ದರೆ	ಪರೋಪಕಾರಿಯೂ, ವ್ಯವಸಾಯದಲ್ಲಿ ಸಮರ್ಥನೂ ಆಗಿರುವನು.
ಪಾಶಯೋಗ	ಏಳು ಗ್ರಹಗಳು ಐದು ರಾಶಿಯಲ್ಲಿದ್ದರೆ	ಹಣವನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳಲು ಬಲ್ಲವನು. ಅಪಾರ ಸೇವಕರು ಹಾಗೂ ಸ್ನೇಹಿತರನ್ನುಳವನು.
ದಾಮಯೋಗ	ಏಳು ಗ್ರಹಗಳು ಆರು ರಾಶಿಯಲ್ಲಿದ್ದರೆ	ದಾನಿಯೂ, ಪರೋಪಕಾರಿಯೂ, ಪಶುಗಳಲ್ಲಿ ಪ್ರೇಮವುಳ್ಳವನೂ ಆಗಿರುವನು.
ವಲ್ಲಕೀಯೋಗ	ಏಳು ಗ್ರಹಗಳು ಏಳು ರಾಶಿಯಲ್ಲಿದ್ದರೆ	ಸಂಗೀತ, ನೃತ್ಯಗಳಲ್ಲಿ ಆಸಕ್ತಿಯುಳ್ಳವನು.
ವಜ್ರಯೋಗ	ಲಗ್ನ ಮತ್ತು ಸಪ್ತಮಸ್ಥಾನಗಳಲ್ಲಿ ಶುಭಗ್ರಹಗಳೂ, ಚತುರ್ಥ ಹಾಗೂ ದಶಮ ಸ್ಥಾನಗಳಲ್ಲಿ ಪಾಪಗ್ರಹಗಳಿದ್ದಾಗ	ಶೈಶವ ಮತ್ತು ವೃದ್ಧಾಪ್ಯದಲ್ಲಿ ಸುಖಿಯಾಗಿರುವನು.
ಯವಯೋಗ	ಲಗ್ನ ಮತ್ತು ಸಪ್ತಮ ಸ್ಥಾನಗಳಲ್ಲಿ ಶುಭಗ್ರಹಗಳಿದ್ದಾಗ	ಶೈಶವ ಮತ್ತು ವೃದ್ಧಾಪ್ಯದಲ್ಲಿ ದುಃಖಿಯಾಗಿರುವನು.
ಕಮಲಯೋಗ	ನಾಲ್ಕು ಕೇಂದ್ರಗಳಲ್ಲಿ ಏಳೂ ಗ್ರಹಗಳಿದ್ದಾಗ	ಧನಿಕನಾಗಿರುತ್ತಾನೆ.
ವಾಪೀಯೋಗ	ಕೇಂದ್ರಗಳಲ್ಲಿ ಗ್ರಹಗಳಿಲ್ಲದಾಗ	ಅಲ್ಪಸುಖಿಯಾಗಿರುತ್ತಾನೆ.

ಯೂಪಯೋಗ	ಜನನ ಕಾಲದಲ್ಲಿ ಎಲ್ಲ ಗ್ರಹಗಳೂ ಲಗ್ನದಿಂದ ನಾಲ್ಕು ಸ್ಥಾನಗಳೊಳಗಿದ್ದಾಗ	ಹೆಚ್ಚು ದಾನಗುಣವುಳ್ಳವನಾಗಿರುತ್ತಾನೆ.
ಇಷುಯೋಗ	ನಾಲ್ಕನೆಯ ಸ್ಥಾನದಿಂದ ಏಳನೆಯ ಸ್ಥಾನದವರೆಗೆ ಗ್ರಹಗಳಿದ್ದಾಗ	ಕೊಲೆಗಾರನಾಗುತ್ತಾನೆ.
ಶಕ್ತಿಯೋಗ	ಏಳರಿಂದ ಹತ್ತನೆಯ ಸ್ಥಾನದವರೆಗೆ ಗ್ರಹಗಳಿದ್ದಾಗ	ದರಿದ್ರನಾಗಿರುತ್ತಾನೆ.
ದಂಡಯೋಗ	ಹತ್ತನೆಯ ಸ್ಥಾನದಿಂದ ಲಗ್ನಭಾವದವರೆಗೆ ಗ್ರಹಗಳಿದ್ದಾಗ	ಬಂಧುಗಳಿಂದ ದುಃಖಿಯಾಗಿರುತ್ತಾನೆ.
ನೌಯೋಗ	ಲಗ್ನದಿಂದ ಏಳು ರಾಶಿಗಳಲ್ಲಿಯೂ ಗ್ರಹಗಳಿದ್ದಾಗ	ಕೀರ್ತಿವಂತನಾಗುತ್ತಾನೆ.
ಕುಟಯೋಗ	ನಾಲ್ಕನೆಯ ಸ್ಥಾನದಿಂದ ಹತ್ತವರೆಗೆ ಗ್ರಹಗಳಿದ್ದಾಗ	ಸುಳ್ಳುಗಾರನಾಗಿರುತ್ತಾನೆ.
ಛತ್ರಯೋಗ	ಏಳನೆಯ ಸ್ಥಾನದಿಂದ ಮುಂದೆ ಲಗ್ನಸ್ಥಾನದವರೆಗೆ ಏಳು ಗ್ರಹಗಳಿದ್ದಾಗ	ಬಂಧುಗಳಿಗೆ ಅನುಕೂಲ ಸಿಂಧುವಾಗಿರುತ್ತಾನೆ.
ಚಾಪಯೋಗ	ಹತ್ತನೆಯ ರಾಶಿಯಿಂದ ನಾಲ್ಕನೆಯ ರಾಶಿವರೆಗೆ ಏಳು ಗ್ರಹಗಳಿದ್ದಾಗ	ಪರಾಕ್ರಮಿಯಾಗಿರುತ್ತಾನೆ.
ಸರ್ಪಯೋಗ	ಮೂರು ಪಾಪಗ್ರಹಗಳು ಮೂರು ಕೇಂದ್ರಸ್ಥಾನದಲ್ಲಿದ್ದಾಗ	ದುಃಖಿಯಾಗಿರುತ್ತಾನೆ.
ಮಾಲಾಯೋಗ	ಮೂರು ಶುಭಗ್ರಹಗಳು ಮೂರು ಕೇಂದ್ರಸ್ಥಾನದಲ್ಲಿದ್ದಾಗ	ಸರ್ವಜನಪ್ರಿಯನಾಗಿರುತ್ತಾನೆ.
ಅರ್ಧಚಂದ್ರ ಯೋಗ	ಲಗ್ನಕ್ಕೆ ಎರಡನೆಯ ಸ್ಥಾನದಿಂದ ಏಳುಸ್ಥಾನಗಳಲ್ಲಾಗಲೀ ಮೂರನೆಯ ಸ್ಥಾನದಿಂದ ಏಳು ಸ್ಥಾನಗಳಲ್ಲಿ ಏಳು ಗ್ರಹಗಳಿರುವುದು.	ಸುಂದರನೂ, ಸರ್ವಜನಪ್ರಿಯನೂ ಆಗಿರುತ್ತಾನೆ.

(ಈ ಮೇಲಿನ ಕೋಷ್ಟಕವನ್ನು ಶ್ರೀಧರಾಚಾರ್ಯ ಕೃತ 'ಜಾತಕತಿಲಕ'ದ 'ನಾಭಸಯೋಗ' ಪ್ರಕರಣದ ೧ರಿಂದ ೧೯ನೆಯ ಪದ್ಯಗಳನ್ನು ಅನುಸರಿಸಿ ಸಿದ್ಧಪಡಿಸಲಾಗಿದೆ.)[೧೨೭]

೧೪) ಚಾಂದ್ರಯೋಗ ಪ್ರಕರಣಂ:

"ಇನವರ್ಜ್ಯಂ ಕ್ಷಿತಿಜಾದಿಗಳ್ ಹಿಮಮಯೂಖಿಂಗಂತ್ಯದೊಳ್ ಕೂಡಿದಂ
ದನಫಾಯೋಗಮದಕ್ಕುಮೊಂದಿ ನಿಲೆ ಮತ್ತಂ ತದ್ವಿತೀಯರ್ಕ್ಷದೊಳ್
ಸುನಫಾಯೋಗಮನಂತರಂ ದುರುಧುರಾಯೋಗಂ ದ್ವಿಪಾರ್ಶ್ವಸ್ಥಮ
ಸ್ಯನಿವಾಸಸ್ಥಿತಮಾದ ಯೋಗಮದು ದಲ್ ಕೇಮದ್ರುಮಂ ನಾಮದಿಂ ॥೧೪.೦೧॥"[೧೨೮]

ಶ್ರೀಧರಾಚಾರ್ಯ ವಿರಚಿತ ಜಾತಕತಿಲಕದ ಚಾಂದ್ರಯೋಗ ಪ್ರಕರಣದಲ್ಲಿ ಸೂರ್ಯನನ್ನು ಬಿಟ್ಟು ಚಂದ್ರನು ಹನ್ನೆರಡನೆಯ ಸ್ಥಾನದಲ್ಲಿದ್ದರೆ ಅನಫಾಯೋಗ, ಸುನಫಾಯೋಗ, ಎರಡೂ ಕಡೆಯಿದ್ದಾಗ ದುರುಧುರಾಯೋಗ, ಕೇಮದ್ರುಮಯೋಗಗಳ ಕುರಿತು ತಿಳಿಸಲಾಗಿದೆ. ಅನಫಾಯೋಗದಲ್ಲಿ ಹುಟ್ಟಿದವನು ವಿಷಯಸುಖಿಯೂ, ಕೀರ್ತಿವಂತನೂ, ಸದ್ಗುಣವಂತನೂ

---

೧೨೭. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೧೪೮ ರಿಂದ ೧೫೭
೧೨೮. **ಅದೇ** ; ಪುಟ. ೧೫೮

ಆಗಿರುವನು. ದುರಧುರಾಯೋಗದಲ್ಲಿ ಹುಟ್ಟಿದವನು ಸರ್ವದಾ ಖಿನ್ನಮನಸ್ಕನೂ, ಅನೇಕ ಸೇವಕರುಳ್ಳವನೂ ಬಹುಕುಟುಂಬಸ್ಥನೂ ಆಗಿರುತ್ತಾನೆ. ರಾಜವಂಶಜನಾಗಿದ್ದರೂ ಸದಾ ದುಃಖಿಯಾಗಿರುತ್ತಾನೆ.

೧೫) ದ್ವಿ ತ್ರಿ ಗ್ರಹಯೋಗ ಪ್ರಕರಣಂ:

ಶ್ರೀಧರಾಚಾರ್ಯ ವಿರಚಿತ ಜಾತಕತಿಲಕದ ದ್ವಿ, ತ್ರಿ ಗ್ರಹಯೋಗ ಪ್ರಕರಣದಲ್ಲಿ ಸೂರ್ಯನೊಡನಿರುವ ಚಂದ್ರ ಮೊದಲಾದ ಗ್ರಹಗಳ ಫಲಾಫಲಗಳೂ, ಚಂದ್ರನೊಡನಿರುವ ಕುಜ ಗ್ರಹದ ಫಲ, ಕುಜನೊಡನಿರುವ ಬುಧ, ಬುಧನೊಡನಿರುವ ಗುರು, ಗುರುವಿನೊಡನಿರುವ ಶುಕ್ರ ಶನಿ, ಶುಕ್ರನೊಡನಿರುವ ಶನಿಯ ಫಲಾಫಲಗಳ ವಿವರ ಇದರಲ್ಲಿದೆ. ದ್ವಿಗ್ರಹಯೋಗ ಫಲಚಕ್ರವನ್ನು ಇಲ್ಲಿ ಉದಾಹರಿಸಲಾಗಿದೆ.

ಕೋಷ್ಟಕ ೫.೧೬
ದ್ವಿಗ್ರಹಯೋಗ ಫಲಚಕ್ರ[೧೨೯]

ಗ್ರಹ	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ
ಚಂದ್ರ	ಯಂತ್ರಜ್ಞ	--	ಕೂಟವೇದಿ	ವಿನೀತ	ಬಂಧು ಶ್ರೇಷ್ಠ	ವಸ್ತ್ರವಿಕ್ರಯಿ
ಕುಜ	ಪರದಾರ ಶೀಲ	ಕೂಟವೇದಿ	--	ಮಲ್ಲ	ಯಜಮಾನ	ಪರದಾರ ಶೀಲ
ಬುಧ	ನಿಪುಣ	ವಿನೀತ	--	--	ಗೀತಿವಿದ	ವಾಗ್ಮಿ
ಗುರು	ಕ್ರೂರಾತ್ಮ	ಬಂಧು ಶ್ರೇಷ್ಠ	ಯಜಮಾನ	ಗೀತಿವಿದ	--	ಗುಣಾಢ್ಯ
ಶುಕ್ರ	ಆಯುಧ ಜೀವಿ	ವಸ್ತ್ರವಿಕ್ರಯಿ	ಪರದಾರ ಶೀಲ	ವಾಗ್ಮಿ	ಗುಣಾಢ್ಯ	--
ಶನಿ	ಧಾತುವಾದ ಪ್ರಿಯ	ಪುನರ್ಭೂ ಪುತ್ರ	ದುಃಖ	ಇಂದ್ರ ಜಾಲಜ್ಞ	ಕುಂಬಾರ	ಸ್ತ್ರೀ ಧನಾನ್ವಿತ

೧೬) ಪ್ರವ್ರಜ್ಯಾಯೋಗ ಪ್ರಕರಣಂ:

ಶ್ರೀಧರಾಚಾರ್ಯ ವಿರಚಿತ ಜಾತಕತಿಲಕದ ಪ್ರವ್ರಜ್ಯಾ (ದೀಕ್ಷೆ)ಯೋಗ ಪ್ರಕರಣದಲ್ಲಿ ಪ್ರತಿಯೊಂದು ಗ್ರಹಕ್ಕೂ ಒಂದೊಂದು ಸಂನ್ಯಾಸ ದೀಕ್ಷೆಯನ್ನು ಹೇಳಲಾಗಿದೆ. ಜೊತೆಗೆ ಗ್ರಹಸ್ಥಿತಿಗಳನ್ನು ಹಾಗೂ ಶನಿಯಿಂದುಂಟಾಗುವ ಯೋಗಗಳನ್ನು ತಿಳಿಸಲಾಗಿದೆ. ಹೆಚ್ಚು ಗ್ರಹಗಳು ಬಲಾಧಿಕರಾಗಿದ್ದರೆ ಬಲಿಷ್ಠ ಗ್ರಹಗಳ ಸಂಖ್ಯಾನುಗುಣವಾಗಿ ದೀಕ್ಷೆಗಳುಂಟಾಗುತ್ತವೆ. ಗ್ರಹಬಲಗಳ ತಾರತಮ್ಯ ಮತ್ತು ದಶಾಕ್ರಮವನ್ನು ಅನುಸರಿಸಿ ದೀಕ್ಷೆಗಳ ಪೌರ್ವಾಪರ್ಯಕ್ರಮವನ್ನು ನಿರ್ಧರಿಸಬೇಕು. ಒಂದೇ ಗ್ರಹ ಬಲಿಷ್ಠವಾಗಿದ್ದರೆ ಅದರ ದೀಕ್ಷೆಯು ಜಾತಕನಿಗೆ ಉಂಟಾಗುತ್ತದೆ. ಮೂರು ಗ್ರಹಗಳು ಒಂದು ರಾಶಿಯಲ್ಲಿ ಸೇರಿದ್ದರೆ ಅಥವಾ ಒಂದೇ ರಾಶಿಯಲ್ಲಿರುವ ನಾಲ್ಕು ಗ್ರಹಗಳೂ ಬಲಿಷ್ಠರಾಗದಿದ್ದರೆ ಜಾತಕನಿಗೆ ಸಂನ್ಯಾಸಯೋಗವಿರುವುದಿಲ್ಲ.

---

೧೨೯. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೧೬೮

೧೭) ರಾಶಿ ಪ್ರಕರಣಂ:

ಶ್ರೀಧರಾಚಾರ್ಯನು ತನ್ನ ಜಾತಕತಿಲಕದ ರಾಶಿ ಪ್ರಕರಣದಲ್ಲಿ ಹನ್ನೆರಡೂ ರಾಶಿಗಳ ಜಾತಕ ಫಲಾಫಲಗಳನ್ನು ತಿಳಿಸಿದ್ದಾನೆ.

ಮೇಷ ರಾಶಿ: ಮೇಷರಾಶಿಯಲ್ಲಿ ಹುಟ್ಟಿದವನು ಸ್ಥಾಯಿಯಲ್ಲದ ಧನ, ದುರ್ಬಲ ಮೊಳಕಾಲುಗಳು ಹಾಗೂ ಚಪಲಸ್ವಭಾವವುಳ್ಳ ಮನಸ್ಸುಳ್ಳವನು. ಕಾಮಿ, ಶೂರ, ಉರುಟಾದ ದೇಹವುಳ್ಳವ, ಕೆಂಪುಣ್ಣುಳ್ಳವ, ಬಿಸಿ ಆಹಾರವನ್ನು ಇಷ್ಟಪಡುವವ, ಸಸ್ಯಾಹಾರಿ, ಸೇವಾಚತುರ, ವಿಕಾರವಾದ ಉಗುರುಗಳುಳ್ಳವ, ಶಕ್ತಿರೇಖೆ, ತಲೆಯಲ್ಲಿ ಕಲೆಯುಳ್ಳವ, ಅಲೆದಾಡುವ ಸ್ವಭಾವದವನು, ಅಲ್ಪಸಂತುಷ್ಟ, ಮರ್ಯಾದಸ್ಥ. (೧೭.೦೧)

ವೃಷಭ ರಾಶಿ: ಸುಂದರನೂ, ಸಮರ್ಥನೂ, ಒಯ್ಯಾರದಿಂದ ನಡೆಯುವವನು. ಅದೃಷ್ಟಶಾಲಿ, ದೊಡ್ಡ ತೊಡೆ, ವಿಶಾಲವಾದ ಮುಖವುಳ್ಳವನು, ಕ್ಷಮಾವಂತ. ಮುಖ, ಬೆನ್ನಿನಲ್ಲಿ ಮಚ್ಚೆಯುಳ್ಳವನು. ಸ್ತ್ರೀಪ್ರಿಯ, ಮುಪ್ಪಿನಲ್ಲಿ ಸುಖಪಡುವನು. ಉದಾರಿ. ಹೆಣ್ಣು ಮಕ್ಕಳುಳ್ಳವ, ಸಹಿಷ್ಣು. (೧೭.೦೨)

ಮಿಥುನ: ಬುದ್ಧಿವಂತ, ಸಂಗೀತ ನೃತ್ಯಗಳನ್ನು ಬಲ್ಲವನು. ಉನ್ನತ ಮೂಗುಳ್ಳವ, ಕಾಮಶಾಸ್ತ್ರ ಕುಶಲ ಶಾಸ್ತ್ರಜ್ಞ, ಜೂಜಾಡುವವ, ಗುಂಗುರು ಕೂದಲುಳ್ಳವ, ಪ್ರಿಯಭಾಷಿಕ, ಕುಬ್ಜ ಶರೀರಿ, ರಾಜಸೇವಕ, ಸ್ತ್ರೀಲೋಲ. (೧೭.೦೩)

ಕರ್ಕಾಟಕ ರಾಶಿ: ಉದ್ಯಾನ ಮತ್ತು ಜಲಕ್ರೀಡೆಗಳಲ್ಲಿ ಆಸಕ್ತಿಯುಳ್ಳವನು. ಕೆಳನೋಟವುಳ್ಳ ಸ್ತ್ರೀಯರಿಗೆ ಅಂಜುತ್ತಾನೆ. ದೈವಜ್ಞ ಸ್ತ್ರೀಯರೊಡನೆ ಗೆಳೆತನ ಮಾಡುತ್ತಾನೆ. ಮಾಂಸಪುಷ್ಟವಾದ ದೇಹವುಳ್ಳವ. ಕುಬ್ಜ ಶರೀರಿ. (೧೭.೦೪)

ಸಿಂಹ ರಾಶಿ: ಕ್ರೂರಿ, ಉಬ್ಬಿದ ದವಡೆಗಳುಳ್ಳವ, ಪರಾಕ್ರಮಿ, ಮನೋವ್ಯಾಧಿ, ಉದರಬಾಧೆ, ಹಸಿವು, ಹಲ್ಲುನೋವುಗಳಿಂದ ತೊಂದರೆ ಪಡುತ್ತಾನೆ. ತಾಯಿಗೆ ವಿಧೇಯ, ಸ್ತ್ರೀದ್ವೇಷಿ, ಬುದ್ಧಿವಂತ, ಸುಖಿ, ಅಗಲವಾದ ಮುಖವುಳ್ಳವನು. ಅಲ್ಪಸಂತಾನಿ, ಶೀಘ್ರಕೋಪಿ. (೧೭.೦೫)

ಕನ್ಯಾ ರಾಶಿ: ಸುರತಪ್ರಿಯ, ಧನ ಸಂಪಾದನೆಗೆ ಪರದೇಶ ಪ್ರವಾಸ ಮಾಡುವನು. ಮೇಧಾವಿ, ಸುಖಿ, ಧಾರ್ಮಿಕ ಚಟುವಟಿಕೆಗಳಲ್ಲಿ ಆಸಕ್ತಿಯುಳ್ಳವ, ನೃತ್ಯ ಸಂಗೀತಗಳಲ್ಲಿ ಆಸಕ್ತಿಯುಳ್ಳವನು, ಸತ್ಯಭಾಷಿ, ಶಾಸ್ತ್ರಜ್ಞ, ಲಜ್ಜಾನ್ವಿತ, ಮಂದಗಾಮಿ. (೧೭.೦೬)

ತುಲಾ ರಾಶಿ: ಧನಿಕ, ಪರಿಶುದ್ಧ, ವ್ಯಾಪಾಗಳಲ್ಲಿ ಕುಶಲತೆಯುಳ್ಳವನು. ರೋಗಿಷ್ಠ ಸ್ತ್ರೀವಶವರ್ತಿಯಾಗುಗತ್ತಾನೆ. ಧಾರ್ಮಿಕ ಆಸಕ್ತಿಯುಳ್ಳವನು. ಕೃಶಶರೀರಿ, ಬಂಧುವರ್ಗಕ್ಕೆ ಉಪಕಾರಿ, ಸೇವಾಮನೋಭಾವವುಳ್ಳವನು. (೧೭.೦೭)

ವೃಶ್ಚಿಕ ರಾಶಿ: ತಂದೆ, ಗುರು, ವಿಪ್ರರನ್ನು ಬಿಟ್ಟಿರುತ್ತಾರೆ. ಶೈಶವಾವಸ್ಥೆಯಲ್ಲಿ ವ್ಯಾಧಿಪೀಡಿತನಾಗುತ್ತಾನೆ. ಪ್ರಚ್ಛನ್ನ ಪಾಪಿ. ಅಗಲವಾದ ಮುಖ, ವಿಸ್ತಾರವಾದ ಎದೆ, ದುಂಡಗಿನ ತೊಡೆಯುಳ್ಳವನು, ಕ್ರೂರಿ, ರಾಜಪೂಜಿತನು. (೧೭.೦೮)

ಧನಸ್ಸು ರಾಶಿ: ದಪ್ಪ ತುಟಿಯುಳ್ಳವನು, ವಾಚಾಳಿ, ಕವಿ, ಧರ್ಮಶೀಲ, ಧಾರಾಳ ಗುಣವುಳ್ಳವನು. ಶಿಲ್ಪಶಾಸ್ತ್ರಜ್ಞ, ಜಾಣ, ಉದ್ಯೋಗಶೀಲ, ಕುರುಚಾದ ಹೆಗಲುಳ್ಳವನು. (೧೭.೦೯)

ಮಕರ ರಾಶಿ: ತನ್ನ ಕುಟುಂಬದ ಬಗ್ಗೆ ಹೆಚ್ಚು ಆಸ್ಥೆಯುಳ್ಳವನು. ನಾಚಿಕೆಗೇಡಿ, ಸೋಮಾರಿ, ಶೀತಭೀರು, ಜಿಪುಣ. ಸತ್ಪುರುಷರಿಂದ ಮನ್ನಣೆ ಪಡೆಯುತ್ತಾನೆ. ಅದೃಷ್ಟವಂತ, ಮಹಾಕವಿಯಾಗುತ್ತಾನೆ. ಹೆಚ್ಚು ತಿರುಗಾಟ. ಶೀಘ್ರ ವಿಷಯಗ್ರಾಹಿ. (೧೭.೧೦)

ಕುಂಭ ರಾಶಿ: ತೊಡೆ, ಬೆನ್ನು, ಕಾಲು, ಸೊಂಟ ಮುಖಗಳು ದೊಡ್ಡವಾಗಿರುತ್ತವೆ. ಧನವು ಸ್ಥಿರವಾಗಿರುವುದಿಲ್ಲ. ಎತ್ತರವಾದ ದೇಹ, ಒರಟಾದ ಕೂದಲುಳ್ಳವನು. ಪರಸ್ತ್ರೀ, ಪರಧನ, ಪಾಪಕಾರ್ಯಗಳಲ್ಲಿ ಆಸಕ್ತಿಯುಳ್ಳವ. (೧೭.೧೧)

ಮೀನ ರಾಶಿ: ನೀರಿನಲ್ಲಿ ಉತ್ಪನ್ನವಾಗುವ ವಸ್ತುಗಳಿಂದ, ಅನ್ಯರ ಹಣದಿಂದ ಸುಖಪಡುತ್ತಾನೆ. ಶತ್ರುಗಳನ್ನು ಗೆಲ್ಲಲು ಸಮರ್ಥ. ವಿದ್ವಾಂಸ. ಸ್ತ್ರೀಯರನ್ನು ಪ್ರೀತಿಸುತ್ತಾನೆ. (೧೭.೧೨)

ಹೀಗೆ ಶ್ರೀಧರಾಚಾರ್ಯನು ತನ್ನ ಜಾತಕತಿಲಕದ ರಾಶಿ ಪ್ರಕರಣದಲ್ಲಿ ಆಯಾ ರಾಶಿಯಲ್ಲ ಜನಿಸಿದವರ ಗುಣ ಲಕ್ಷಣಗಳನ್ನು ತಿಳಿಸುತ್ತಾನೆ. ಅಷ್ಟೇ ಅಲ್ಲದೇ ಗ್ರಹಾದಿಗಳಿಂದ ಉಂಟಾಗಬಹುದಾದ ಫಲಾಪಲಗಳನ್ನು ಈ ಅಧಿಕಾರದಲ್ಲಿ ತಿಳಿಸಿದ್ದಾನೆ.

೧೮) ಲಗ್ನಾದಿಭಾವ ಪ್ರಕರಣಂ:

ಶ್ರೀಧರಾಚಾರ್ಯನು ಜಾತಕತಿಲಕದ ಲಗ್ನಾಧಿಭಾವ ಪ್ರಕರಣದಲ್ಲಿ ಸೂರ್ಯಾದಿ ಏಳು ಗ್ರಹಗಳು, ಲಗ್ನಾದಿ ಹನ್ನೆರಡು ಭಾವಗಳಲ್ಲಿ ಸಂಚರಿಸುವಾಗ ಸಂಭವಿಸುವ ಭಾವಫಲಗಳು, ಕ್ಷೇತ್ರ ವಿಶೇಷದಿಂದ ಭಾವಫಲದಲ್ಲಿ ವಿಶೇಷವೂ, ಭಾವಫಲ ತಾರತಮ್ಯವೂ ಹೇಗೆ ಉಂಟಾಗುವುದು ಎಂದು ವರ್ಣಿಸಿದ್ದಾನೆ.

"ಉದಯಸ್ಥಂ ದಿನನಾಥನಾಗೆ ವಿಕಲಾಕ್ಷಂ ನಿರ್ಭಯಂ ನಿರ್ದಯಂ
ಸದನಂ ಸಿಂಹವಿಲಗ್ನದೊಳ್ ನಿಲೆ ನಿಶಾಂಧಂ ಮೇಷಲಗ್ನಕ್ಕೆ ಪೊ
ರ್ದಿದೊಡಾಢ್ಯಂ ತಿಮಿರಾಕ್ಷನಿಂದ ಗೃಹಲಗ್ನಸ್ಥಾಯಿಯಾದಂದು ಬು
ದ್ಬುದನೇತ್ರಂ ವಣಿಜೋದೆಯಸ್ಥನೆನೆ ನಿರ್ದ್ರವ್ಯಂ ವಿನಷ್ಟೇಕ್ಷಣಂ ॥೧೮.೦೧॥"[೧೩೦]

ಜನನ ಕಾಲದಲ್ಲಿ ಸೂರ್ಯನು ಲಗ್ನರಾಶಿಯಲ್ಲಿದ್ದರೆ ನೇತ್ರರೋಗಿಯೂ, ಧೈರ್ಯಶಾಲಿಯೂ, ನಿಷಕರುಣಿಯೂ, ಆಗುವನು. ಸಿಂಹರಾಶಿಯಲ್ಲಿ ಸೂರ್ಯನಿದ್ದರೆ ಕಣ್ಣು ಕಾಣದವನೂ, ಮೇಷಲಗ್ನದಲ್ಲಿದ್ದರೆ ಧನಿಕನೂ, ಕಟಕ ಲಗ್ನದಲ್ಲಿದ್ದರೆ ಗುಳ್ಳೆಗಣ್ಣುಳ್ಳನೂ, ತುಲಾಲಗ್ನದಲ್ಲಿದ್ದರೆ ಬಡವನೂ, ಕುರುಡನೂ ಆಗಿರುವನು. ಮೊದಲು ಲಗ್ನಭಾವಸ್ಥ ರವಿಫಲವನ್ನು ಹೇಳಿ ಪುನಃ ಮೇಷ, ಕರ್ಕ, ಸಿಂಹ, ತುಲಾ ಮುಂತಾಗಿ ಹನ್ನೆರಡು ರಾಶಿಗಳ ವಿಶೇಷಫಲಗಳನ್ನು ಪ್ರತ್ಯೇಕವಾಗಿ ತಿಳಿಸಿದ್ದಾನೆ ಶ್ರೀಧರಾಚಾರ್ಯ.

೧೩೦. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೧೬೮

೧೯) ದ್ರೇಕ್ಕಾಣ ಪ್ರಕರಣಂ:

ಶ್ರೀಧರಾಚಾರ್ಯನು ಜಾತಕತಿಲಕದ ಹತ್ತೊಂಬತ್ತನೆಯ ಅಧಿಕಾರವಾದ ದ್ರೇಕ್ಕಾಣ ಪ್ರಕರಣದಲ್ಲಿ ಹನ್ನೆರಡು ರಾಶಿಗಳ ದ್ರೇಕ್ಕಾಣು ದೇವತೆಗಳ ಸ್ವರೂಪ, ಸ್ವಭಾವಗಳನ್ನು ತಿಳಿಸಿದ್ದಾನೆ. ಪ್ರತಿ ಹನ್ನೆರಡು ರಾಶಿಗಳಿಗೆ ಮೂರು ದ್ರೇಕ್ಕಾಣು ದೇವತೆಗಳಂತೆ ಒಟ್ಟು ಮೂವತ್ತಾರು ದ್ರೇಕ್ಕಾಣುಗಳಿವೆ.

ದೇಕ್ಕಾಣುದೇವತೆಗಳ ಚಿತ್ರಗಳು


1


2


3


1—i


2—i


3—i


1—ii


2—ii


3—ii


1—iii


2—iii



3—iii



10



11



12



10—i



11—i




12—i



10—ii



11—ii



12—ii



10—iii



11—iii



12—iii

ಆಯಾ ದ್ರೇಕ್ಕಾಣು ದೇವತೆಗಳ ಲಕ್ಷಣಗಳಿಗೆ ಅನುಗುಣವಾಗಿ ಚಿತ್ರಗಳನ್ನು ನೀಡಲಾಗಿದೆ.[೧೩೧]

೧೩೧. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೨೧೩, ೨೧೪

೨೦) ದೃಷ್ಟಿ ಪ್ರಕರಣಂ:

ಶ್ರೀಧರಾಚಾರ್ಯನು 'ಜಾತಕತಿಲಕ'ದ ದೃಷ್ಟಿ ಪ್ರಕರಣದಲ್ಲಿ ಹನ್ನೆರಡು ರಾಶಿಗಳಿಗೆ ಹೋರೆ, ದ್ರೇಕ್ಕಾಣ ನವಾಂಶ, ದ್ವಾದಶಾಂಶ ಇವುಗಳ ಸ್ಥಿತಿ ವಿಶೇಷಗಳಿಂದ ರಾಶಿಗಳ ಮೇಲಾಗುವ ಗ್ರಹದೃಷ್ಟಿ ಫಲ, ಸೂರ್ಯನಿಗೆ ಗ್ರಹದೃಷ್ಟಿ ಫಲ, ನವಾಂಶ ಇವುಗಳ ಗ್ರಹದೃಷ್ಟಿ ಫಲಗಳನ್ನು ಮತ್ತು ರಾಶಿಯ ಅಧಿಪತಿಯವರ ದೃಷ್ಟಿಫಲಗಳನ್ನು ತಿಳಿಸಿದ್ದಾನೆ. ಜನನ ಕಾಲದಲ್ಲಿ ಚಂದ್ರ ಮತ್ತು ಕುಜರ ಸ್ಥಾನಗಳನ್ನು ಪ್ರಮುಖವಾಗಿ ಪರಿಗಣಿಸಿ ದೃಷ್ಟಿ ಪ್ರಕರಣವನ್ನು ತಿಳಿಸುತ್ತಾನೆ ಶ್ರೀಧರಾಚಾರ್ಯ. ಹನ್ನೆರಡೂ ರಾಶಿಗಳ ಮೇಲೆ ವಿವಿಧ ಗ್ರಹಗಳ ನೋಟದಿಂದ ಆಗುವ ಫಲಾಫಲಗಳನ್ನು ತಿಳಿಸಿದ್ದಾನೆ. ಜನನ ಕಾಲದಲ್ಲಿ ವೃಷಭ ರಾಶಿಯಲ್ಲಿರುವ ಚಂದ್ರನನ್ನು ಕುಜನು ನೋಡಿದರೆ ಜಾತಕನು ದರಿದ್ರನಾಗುತ್ತಾನೆ. ಬುಧನು ನೋಡಿದರೆ ಕಳ್ಳನಾಗುತ್ತಾನೆ. ಗುರು ನೋಡಿದರೆ ರಾಜನಾಗುತ್ತಾನೆ. ಶುಕ್ರ ನೋಡಿದರೆ ರಾಜನಾಗುತ್ತಾನೆ. ಶನಿ ನೋಡಿದರೆ ಧನಿಕನಾಗುತ್ತಾನೆ. ಸೂರ್ಯ ನೋಡಿದರೆ ಸೇವಕನಾಗುತ್ತಾನೆ. ಇದರಂತೆಯೇ ಉಳಿದ ರಾಶಿಗಳಲ್ಲೂ ಕ್ರಮವಾಗಿ ಫಲಾಫಲಗಳನ್ನು ತಿಳಿಸಿದ್ದಾನೆ.

೨೧) ಅನಿಷ್ಟಯೋಗ ಪ್ರಕರಣಂ:

ಶ್ರೀಧರಾಚಾರ್ಯನು ಜಾತಕತಿಲಕದ ಅನಿಷ್ಟಯೋಗ ಪ್ರಕರಣದಲ್ಲಿ ಹೆಂಡತಿ ಮಕ್ಕಳ ಇರುವಿಕೆ ಹಾಗೂ ಇಲ್ಲದಿರುವಿಕೆಯ ವಿಚಾರ, ಹೆಂಡತಿಯ ಸಾವು, ದಂಪತಿಯೋಗ, ಅವಯವ ಹೀನಭಾರ್ಯೆ(ಹೆಂಡತಿ) ಮತ್ತು ವಂಧ್ಯಾಪತಿ ಯೋಗ, ಜಾರಯೋಗ, ವ್ಯಭಿಚಾರಶೀಲ ದಂಪತಿಯೋಗ, ಪತ್ನಿ ಪುತ್ರಹೀನ ಮತ್ತು ಕೃಶತನುಯೋಗ, ಸ್ವಕುಲನಾಶಯೋಗ, ಶಿಲ್ಪಿ ಮತ್ತು ದಾಸಿ ಪುತ್ರಯೋಗ, ಲಿಂಗವ್ಯಾಧಿ, ಸಿತ (ಬಿಳಿಯ)ಕುಷ್ಠ, ಶ್ವಾಸಕ್ಷಯ ವಿದ್ರಧಿ, ಗುಲ್ಮವ್ಯಾಧಿಯೋಗ, ಕೃಶಾಂಗ, ತೊನ್ನುರೋಗ, ಕುರುಡು, ಕಿವುಡ, ಪಿಶಾಚಗ್ರಸ್ತ, ಹುಟ್ಟುಕುರುಡು, ವಾತವ್ಯಾಧಿ, ದಂತರೋಗ, ಬೋಳುತಲೆ, ದಂತವಿಕಾರ, ದಾಸಯೋಗ, ಕಾಕನೇತ್ರ ವಿಕಟಾಂಗ ಬಹುರೋಗ, ಉತ್ತಮ ಮಧ್ಯಮಾಧಮ ಭೃತ್ಯಯೋಗ ಬಂಧನಯೋಗಗಳ ಬಗ್ಗೆ ಚರ್ಚಿಸಿದ್ದಾನೆ. "ಲಗ್ನದಿಂದ ಏಳನೆಯ ರಾಶಿಯು ಪತ್ನಿಸ್ಥಾನ, ಐದನೆಯದ್ದರು ಪುತ್ರಸ್ಥಾನಗಳು ಶುಭಗ್ರಹದ ರಾಶಿಯಾಗಿದ್ದು ಸ್ಥಾನಾಧಿಪತಿ ಸ್ವಸ್ಥಾನದಲ್ಲಿದ್ದರೆ ಅಥವಾ ಆ ಸ್ಥಾನವನ್ನು ನೊಡಿದರೆ ಕಳತ್ರ ಪುತ್ರ ಭಾವ ಫಲಗಳು ಅನುಕೂವಾಗಿರುತ್ತವೆ. ಪಾಪಗ್ರಹದ ರಾಶಿಯಾಗಿದ್ದ ಸ್ಥಾನಾಧಿಪತಿ ಸ್ಥಾನದಲ್ಲಿಲ್ಲದಿದ್ದರೆ ಅಥವಾ ಸ್ಥಾನವನ್ನು ನೋಡದಿದ್ದರೆ ಕಳತ್ರಪುತ್ರ ಸೌಖ್ಯಗಳಿರುವುದಿಲ್ಲ. ಲಗ್ನದಂತೆ ಚಂದ್ರನಿಮದಲೂ ಕಳತ್ರ ಪುತ್ರಭಾವಫಲಗಳನ್ನು ತಿಳಿಯಬೇಕು."[೧೩೨] ಅಲ್ಲದೇ ಜಾತಕನಿಗೆ ಒದಗಬಹುದಾದ ರೋಗಗಳು, ಪತ್ನಿ ಪುತ್ರರಿಂದ ಆಗಬಹುದಾದ ತೊಂದರೆಗಳನ್ನು ಬಹುವಿಧದಲ್ಲಿ ಚರ್ಚಿಸಲಾಗಿದೆ.

---

೧೩೨. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೨೨೭

೨೨) ಸ್ತ್ರೀ ಜಾತಕಫಲ ಪ್ರಕರಣಂ:

ಶ್ರೀಧರಾಚಾರ್ಯನು ಜಾತಕತಿಲಕದ ಸ್ತ್ರೀಜಾತಕ ಫಲ ಪ್ರಕರಣದಲ್ಲಿ ಸ್ತ್ರೀ ಜಾತಕಫಲ ಕಥನ ವ್ಯವಸ್ಥೆ, ಸ್ತ್ರೀಯ ಆಕಾರ, ಸ್ವಭಾವ, ತ್ರಿಂಶಾಂಶಗಳಲ್ಲಿ ಹುಟ್ಟಿದ ಜಾತಕಫಲ, ಸ್ತ್ರೀಯರು ನೆರೆಯುವುದು, ಪತಿಯ ವಿಚಾರ, ವೈಧವ್ಯ ಮೊದಲಾದ ದುರ್ಯೋಗಗಳು, ತಾಯಿಯೊಡನೆ ವ್ಯಭೀಚಾರಿಣೀ ಯೋಗ, ಕಷ್ಟಜೀವಿ ಪತಿಯೋಗ, ಪತಿಯ ಸ್ವಭಾವ ಮತ್ತು ಸ್ವರೂಪ, ಲಗ್ನದಲ್ಲಿರುವ ಗ್ರಹಫಲ, ವೈಧವ್ಯಯೋಗ, ಸೌಮಂಗಲ್ಯ ಮತ್ತು ಅಲ್ಪಪುತ್ರಯೋಗ, ಪುರುಷ ಸ್ವಭಾವ, ಬ್ರಹ್ಮವಾದನೀ ಯೋಗ, ಯೋಗಸಮನ್ವಯ ಕಾಲ, ಪತ್ನಿಯಿಂದ ಪತಿಗೆ ಉಂಟಾಗುವ ಫಲಾಫಲಗಳನ್ನು ಇಲ್ಲಿ ವಿವರಿಸಿದ್ದಾನೆ.

> **“ಪುರುಷಸ್ತ್ರಿ ಜಾತಕಫಲ**
> **ಮೆರಡುಂ ಸಮಮುದಯಮೃಗಧರರ್ ಬಲಯುತರಾ**
> **ಗಿರೆ ವಪುರಾಕೃತಿಗಳನ**
> **ಸ್ತರಾಶಿಬಲದಿಂದಮಱೆವುದಾಕೆಯ ಸೊಬಗಂ ॥೨೨.೦೧॥”**[೧೩೩]

ಪುರುಷ ಸ್ತ್ರೀ ಜಾತಕಗಳೆರಡಕ್ಕೂ ಸಮಾನ ಫಲಗಳುಂಟಾಗುವವು. ಲಗ್ನ ಚಂದ್ರರ ಬಲದಿಂದ ಜಾತಕಳ ಶರೀರ ಮತ್ತು ಆಕಾರವನ್ನು ಏಳನೆಯ ರಾಶಿಯ ಬಲದಿಂದ ಆಕೆಯ ಸೊಬಗನ್ನೂ ತಿಳಿಕೊಳ್ಳಬೇಕು. “ಹಿಂದಿನ ಶಾಸ್ತ್ರಕಾರರು ಪುರುಷ ಜಾತಕವನ್ನುದ್ದೇಶಿಸಿಯೇ ತಮ್ಮ ಗ್ರಂಥಗಳಲ್ಲಿ ಫಲಗಳನ್ನು ಹೇಳಿರುತ್ತಾರೆ. ಸ್ತ್ರೀ ಜಾತಕ ಫಲವನ್ನು ಹೇಳುವಾಗ ಈ ಫಲಗಳಲ್ಲಿ ಸ್ತ್ರೀಯರಿಗೆ ಸಂಭವಿಸಲು ಯೋಗ್ಯವಾದ ಫಲಗಳನ್ನು ಮಾತ್ರ ಗ್ರಹಿಸಬೇಕೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಮತ್ತೆ ಕೆಲವರು ಪುರುಷ ಜಾತಕಕೆ ಹೇಳಿರುವ ಎಲ್ಲ ಫಲಗಳೂ ಸ್ತ್ರೀ ಜಾತಕಕ್ಕೂ ಉಂಟು; ಅದರಲ್ಲಿ ಕೇವಲ ಪುರುಷ ವ್ಯಕ್ತಿಯಿಂದಲೇ ಅನುಭವಿಸತಕ್ಕ ಫಲಗಳಿದ್ದರೆ ಆ ಫಲಗಳು ಜಾತಕಳ ಪತಿಗೆ ಸಂಭವಿಸುತ್ತದೆಂದು ಆಭಿಪ್ರಾಯಪಡುತ್ತಾರೆ.”[೧೩೪]

೨೩) ನಿರ್ಯಾಣ ಪ್ರಕರಣಂ:

ಶ್ರೀಧರಾಚಾರ್ಯನು ಜಾತಕತಿಲಕದ ನಿರ್ಯಾಣ ಪ್ರಕರಣದಲ್ಲಿ ಸಾವಿಗೆ ಕಾರಣ, ಮೃತ್ಯುಪ್ರದೇಶ ಜ್ಞಾನ, ರಾಶಿಗ್ರಹಯೋಗದಿಂದ ಮೃತ್ಯು ಕಾರಣ, ಶೂಲಕ್ಕೇರಿಸುವುದರಿಂದ, ಬಂಧನ ಮತ್ತು ಹೆಂಗಸಿನಿಂದ, ಜಲೋದರ ಬಂಧುಜನ ಮತ್ತು ನೀರಿನಿಂದ, ಕಟ್ಟಿಗೆಯ ಹೊಡೆತದಿಂದ, ಹೊಗೆ ಬೆಂಕಿಯಿಂದ, ಆಯುಧ, ರಾಜಕೋಪದಿಂದ, ಆಯುಧದಿಂದ ಗಾಯವಾಗಿ ಹುಳುಬಿದ್ದು, ವಾಹನ ಮತ್ತು ಯಂತ್ರದ ಅಪಘಾತದಿಂದ, ಗುಹ್ಯಸ್ಥಾನದಲ್ಲಿ ಹುಳು ಬೀಳುವುದು ಮತ್ತು ಶಸ್ತ್ರಚಿಕಿತ್ಸೆಯಿಂದ ಮರಣ, ಹಕ್ಕಿಯಿಂದ ಸಾವು, ನಗಾಗ್ರ ಕುಡ್ಯಾಶನಿಪಾತದಿಂದ, ಶವದ ಪರಿಣಾಮ, ಮೃತ್ಯು ಕಾರಣ, ಮರಣಭೂಮಿ, ಮರಣಕಾಲದ ಮೂರ್ಛಾ ವಿಚಾರ, ಜೀವಗಳ ಗತಿ,

---

೧೩೩. ವಿದ್ವಾನ್ ಎಸ್. ಎನ್. ಕೃಷ್ಣಜೋಯಿಸ್ : **ಶ್ರೀಧರಾಚಾರ್ಯ ವಿರಚಿತಂ ಜಾತಕ ತಿಲಕಂ** ; ಪುಟ. ೨೪೬

೧೩೪. **ಅದೇ** ; ಪುಟ. ೨೪೬

ಪೂರ್ವಜನ್ಮಸ್ಥಿತಿ, ಮುಂದಿನ ಜನ್ಮಸ್ಥಿತಿ ವಿಚಾರ, ಮೋಕ್ಷಯೋಗದ ಕುರಿತು ಸವಿಸ್ತಾರವಾಗಿ ಜಾತಕನಿಗೆ ಗ್ರಹ, ರಾಶಿಗಳ ಸ್ಥಾನವನ್ನನುಕರಿಸಿ ಯಾವ ಯಾವ ಪ್ರಕಾರದಲ್ಲಿ ಸಾವು ಬಂದೊದಗಬಹುದೆಂದು ಚರ್ಚಿಸಿದ್ದಾನೆ.

೨೪) ನಷ್ಟಜಾತಕ ಪ್ರಕರಣಂ:

ಶ್ರೀಧರಾಚಾರ್ಯನು ಜಾತಕತಿಲಕದ ಕೊನೆಯ ಅಧಿಕರಣವಾದ ನಷ್ಟಜಾತಕ ಪ್ರಕರಣದಲ್ಲಿ ಅಯನಜ್ಞಾನ, ವರ್ಷಜ್ಞಾನ ಚಾಂದ್ರಮಾಸಜ್ಞಾನ, ನಕ್ಷತ್ರಾನಯನ, ಜನ್ಮಗ್ರಹಜ್ಞಾನ, ಜನ್ಮರಾಶಿಜ್ಞಾನ, ಜನ್ಮಲಗ್ನವನ್ನು ತಿಳಿಯುವ ಕ್ರಮ, ರಾಶಿ ಮತ್ತು ಗ್ರಹಗುಣಕಾರ, ಜನ್ಮ ನಕ್ಷತ್ರಾನಯನ, ಹೆಂಡತಿ, ಸೋದರ ಮಗ ಶತ್ರು ಇವರ ಜನ್ಮರಾಶಿ ಜ್ಞಾನ, ವರ್ಷಋತು ಮಾಸವನ್ನು ತಿಳಿಯುವ ಕ್ರಮ, ಪಕ್ಷ ಮತ್ತು ತಿಥಿಯನ್ನು ತಿಳಿಯುವ ಕ್ರಮ, ಜನ್ಮ ನಕ್ಷತ್ರವನ್ನು ತಿಳಿಯುವ ಕ್ರಮ, ಜನ್ಮಕುಲದ ಘಳಿಗೆ ಲಗ್ನ ಮತ್ತು ನವಾಂಶವನ್ನು ತಿಳಿಯುವ ಕ್ರಮ, ನಷ್ಟಜಾತಕ ನಿಶ್ಚಯಜ್ಞಾನ ಹೀಗೆ ಅನೇಕ ಸಂಗತಿಗಳನ್ನು ಇಲ್ಲಿ ವಿವರಿಸಲಾಗಿದೆ.

ಒಬ್ಬ ವ್ಯಕ್ತಿಯು ತಾನು ಮಾಡಲು ಹೊರಟಿರುವ ಕೆಲಸವು ಸಿದ್ಧಿಸುವುದೋ ಇಲ್ಲವೋ ಎಂಬುದನ್ನು ಇಪ್ಪತ್ತೇಳು ನಕ್ಷತ್ರ, ನಾಲ್ಕು ನಾಡಿ, ಸಮಯ, ಆರು ಋತುಗಳನ್ನು ಅನುಸರಿಸಿ ತಿಳಿಸುವುದು. ಇದನ್ನು ಪ್ರಶ್ನಜಾತಕವೆಂತಲೂ ಕರೆಯಲಾಗುತ್ತದೆ. "ಪ್ರಶ್ನೆಯ ಕಾಲಕ್ಕೆ ಸಲ್ಲುವ ಲಗ್ನಕುಂಡಲಿಯನ್ನು ಹಾಕಿ, ರಾಶಿ, ಲಗ್ನಧಿಪತಿಗಳ ಬಲಾಬಲವನ್ನು ನೋಡಿ ಯಾವ ಪ್ರಶ್ನೆಗೆ ಯಾವ ಯಾವ ಭಾವ ಮತ್ತು ಯಾವ ಗ್ರಹ ಕಾರಕವಾದದ್ದು ಎನ್ನುವುದನ್ನು ಪ್ರಶ್ನೆ ಕೇಳಿದ ತಕ್ಷಣದ ಲಗ್ನಕುಂಡಲಿಯಿಂದ ಅದಕ್ಕೆ ಸರಿಯಾದ ಉತ್ತರವನ್ನು, ಪರಿಹಾರವನ್ನು ಸೂಚಿಸುವುದೇ ಪ್ರಶ್ನಶಾಸ್ತ್ರವಾಗಿದೆ."[೧೩೫]

ಹೀಗೆ ಶ್ರೀಧರಾಚಾರ್ಯನು ತನ್ನ 'ಜಾತಕತಿಲಕ'ವೆಂಬ ಜ್ಯೋತಿಷ್ಯ ಶಾಸ್ತ್ರ ಗ್ರಂಥದ ೨೪ ಅಧಿಕಾರಗಳಲ್ಲಿ ವಿವಿಧ ರೀತಿಯಲ್ಲಿ ಜಾತಕನಿಗೆ ಒದಗಬಹುದಾದ ಫಲಾಫಲಗಳನ್ನು ಸೂಚ್ಯವಾಗಿ ವಿವರಿಸಿದ್ದಾನೆ. ಮುಂಚೆಯೇ ಹೇಳಿದಂತೆ ಪ್ರಸ್ತುತ ಗ್ರಂಥವನ್ನು ಶ್ರೀಧರಾಚಾರ್ಯನು ವರಾಹಮಿಹಿರನ 'ಬೃಹಜ್ಜಾತಕ'ವನ್ನು ಅನುಸರಿಸಿದ್ದಾನೆ. ಬೃಹಜ್ಜಾತಕದಲ್ಲಿ ಒಟ್ಟು ೨೫ ಅಧ್ಯಾಯಗಳಿವೆ. ಆ ಗ್ರಂಥದ 'ಗ್ರಹಯೋನಿಭೇದಾಧ್ಯಾಯ'ವನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ೨೪ ಅಧಿಕರಣಗಳನ್ನು ಶ್ರೀಧರಾಚಾರ್ಯನು ಕನ್ನಡಿಸಿದ್ದಾನೆ. ಅಲ್ಲಲ್ಲಿ ಕೆಲವು ಪ್ರಾದೇಶಿಕವಾದ ಭಿನ್ನತೆಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ವಿಚಾರಗಳು ಬೃಹಜ್ಜಾತಕದ ಅನುಸಾರವಾಗಿಯೇ ಇವೆ. ಆದರೆ ಶ್ರೀಧರಾಚಾರ್ಯನು ತಾನು ಎಲ್ಲಿಯೂ ವರಾಹಮಿಹಿರನನ್ನು ಅನುಸರಿಸಿದ ಕುರಿತಾಗಿ ತಿಳಿಸಿಲ್ಲದಿರುವುದು ಸೋಜಿಗದ ವಿಷಯವಾಗಿದೆ.

---

೧೩೫. ಗಣೇಶ ಹೆಗಡೆ : **ಜ್ಯೋತಿಷ್ಯ ಪ್ರವೇಶಿಕಾ** ; ಪುಟ. ೯೯

೫.೨.೨. ಶುಭಚಂದ್ರ (೧೫೦೦):

ಕವಿಚರಿತೆಕಾರರು "ಈತನು ನರಪಿಂಗಳಿಯನ್ನು ಬರೆದಿದ್ದಾನೆ. ಇವನು ಜೈನಕವಿ. ಇವನು ಸುಮಾರು ೧೫೦೦ರಲ್ಲಿ ಇದ್ದಿರಬಹುದೆಂದು ತೋರುತ್ತದೆ"[೧೩೬] ಎನ್ನುತ್ತಾರೆ. ಈತನ ವೈಯಕ್ತಿಕ ವಿಷಯವಾಗಿ ಹೆಚ್ಚಿನ ವಿಷಯಗಳೇನು ತಿಳಿಯಲಾರವು. ಆದರೆ ಗ್ರಂಥಾರಂಭದಲ್ಲಿನ ಪದ್ಯದಿಂದಾಗಿ ಈತನು ಜೈನನೆಂದು ತಿಳಿದುಬರುತ್ತದೆ.

೫.೨.೨.೧. ನರಪಿಂಗಲಿ:

ಶುಭಚಂದ್ರ ರಚಿತ 'ನರಪಿಂಗಲಿ' ಕೃತಿಯು ಶಕುನಶಾಸ್ತ್ರಕ್ಕೆ ಸಂಬಂಧಿಸಿದುದಾಗಿದೆ. ಇದರಲ್ಲಿ ಒಟ್ಟು ೧೬೭ ಪದ್ಯಗಳಿವೆ. ಯಂತ್ರ, ಮಂತ್ರ, ತಂತ್ರಗಳನ್ನು ತಿಳಿಸಲಾಗಿದೆ. ಕೃತಿಯ ಆರಂಭದಲ್ಲಿ ಜಿನಸ್ತುತಿಯನ್ನು ಮಾಡಿದ್ದಾನೆ.

"ಪರಮಜಿನೇಂದ್ರ ಪಾದಾಂ
ಬುಂರುಹಕ್ಕೆ ಅರ್ತಿಯಿಂದ ಮಾಧವ ಮುನಿಪಂ
ಎರಗಿ ಧರೆಗರಿಯ ಪೇಳ್ದಂ
ನರಪಿಂಗಲಿಯ ನವಪೊಚ್ಚ ಪೊಸಗನ್ನಡದಿಂ ॥"[೧೩೭]

ಪರಮ ಜಿನೇಶ್ವರನಿಗೆ ವಂದಿಸಿ, ಮಾಧವಮುನಿಯ ನರಪಿಂಗಲಿಯನ್ನು ಧರೆಯ ಜನರೆಲ್ಲ ಅರಿಯುವಂತೆ ಹೊಸಗನ್ನಡದಲ್ಲಿ ತಿಳಿಸುವೆನು ಎಂದಿದ್ದಾನೆ.

ಜ್ಯೋತಿಷ್ಯ ಶಾಸ್ತ್ರವು ಸಿದ್ಧಾಂತ, ಸಂಹಿತಾ ಹಾಗೂ ಹೋರಾಗಳೆಂಬ ಮೂರು ತಳಹದಿಗಳ ಮೇಲೆ ನೆಲೆ ನಿಂತಿದೆ. ಇದರಲ್ಲಿ ಗಣಿತ ಮತ್ತು ಖಗೋಳಶಾಸ್ತ್ರದ ಭಾಗವಾಗಿದ್ದು, ಗ್ರಹಗಣಿತ, ಅಕ್ಷಾಂಶ, ರೇಖಾಂಶಗಳು, ಸೂರ್ಯೋದಯ, ಸೂರ್ಯಾಸ್ತ, ಗ್ರಹಣ ಇತ್ಯಾದಿ ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳಿವೆ. ಇದೊಂದು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ವಿಜ್ಞಾನಿಯ ಪರಿಶೋಧನೆಗೆ ಕೇವಲ ಭೌತಿಕ ಪ್ರಪಂಚದ ಸಂಗತಿಗಳು ಮಾತ್ರ ದೊರೆಯುತ್ತವೆ. ಆದರೆ ಜ್ಯೋತಿಷ್ಯವು ಆಧ್ಯಾತ್ಮಿಕವಾದುದು. ಒಬ್ಬರ ಅನುಭವಕ್ಕೆ ಬಂದುದು ಇನ್ನೊಬ್ಬರ ಅನುಭವಕ್ಕೆ ಬಾರದೆಯೂ ಇರಬಹುದು. ಅಂದ ಮಾತ್ರಕ್ಕೆ ಅದು ಸುಳ್ಳು, ಬೊಗಳೆ, ಅವೈಜ್ಞಾನಿಕ ಎನ್ನುವುದು ಸರಿಯಲ್ಲ. ಸೈದ್ಧಾಂತಿಕವಾಗಿ ಮಾಡುವ ಅಧ್ಯಯನಗಳಿಂದ ಜ್ಯೋತಿಷ್ಯದಲ್ಲಿ ವೈಜ್ಞಾನಿಕ ಅಂಶಗಳು ಗೋಚರವಾಗುತ್ತವೆ. ಜ್ಯೋತಿಷ್ಯ ಶಾಸ್ತ್ರದ ಸಿದ್ಧಾಂತಗಳು ಅನುಭವದಿಂದ ಪಡೆದ ಜ್ಞಾನವಾಗಿರುವುದರಿಂದ ಮತ್ತು ಕರ್ಮ ಸಿದ್ಧಾಂತ ಭವಿಷ್ಯ ಕಥನದಲ್ಲಿ ಪರಿಣಾಮ ಮಾಡುವುದರಿಂದ ಕೆಲ ಸಂದರ್ಭಗಳಲ್ಲಿ ಅದು ಸುಳ್ಳಾಗಬಹುದು. ಆದರೆ ಅದನ್ನು ವೈಜ್ಞಾನಿಕವಾದ ಅಧ್ಯಯನಗಳಿಂದ ಸತ್ಯವೆಂದು ನಿರೂಪಿಸಲು ಸಾಧ್ಯ. ಕೆಲವು ಅವಶ್ಯವಾದ ಕರ್ಮವಿಪಾಕಗಳನ್ನು

---

೧೩೬. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ** ; ಪುಟ. ೧೧೩

೧೩೭. ಡಾ. ಆರ್ವಿಯಸ್ ಸುಂದರಂ : **ಶಾಸ್ತ್ರ ಸಾಹಿತ್ಯ** ; ಪುಟ. ೧೯

ಮನುಷ್ಯ ಅನುಭವಿಸಲೇಬೇಕು. ಸುಖವೂ ದುಃಖದಂತೆ ಪ್ರಾರಬ್ಧ. ಇದಕ್ಕೆ ಶಾಂತಿ ಮಂತ್ರ ತಂತ್ರ ಮಣಿಜಪಹೋಮಾದಿ ಪ್ರಶಮನೋಪಾಯಗಳ್ನು ಜ್ಯೋತಿಷ್ಯವು ಬೋಧಿಸುತ್ತದೆ. ಭೌಗೋಳಿಕ ಪರಿಮಿತಿಯಲ್ಲಿ ನಿರ್ಜೀವ ವರ್ಗಗಳ ಬಗ್ಗೆ ವಿಜ್ಞಾನ ಸಾಕಷ್ಟು ಖಚಿತವಾದ ನಿರ್ಣೀತವಾದ ತಿಳಿಸಬಲ್ಲದು. ಆದರೆ ಖಗೋಳ ಪ್ರಮಾಣದ ವಸ್ತುರಾಶಿಯ ಕುರಿತಾಗಿ ಹಾಗೂ ಪರಮಾಣು ಗರ್ಭಗಳ ಒಳಶಕ್ತಿಯ ಕುರಿತಾಗಿ ವೈಜ್ಞಾನಿಕ ವಿಧಾನ ಸಂಖ್ಯಾಶಾಸ್ತ್ರೀಯ ಸಂಭವವಾದವನ್ನು ಅವಲಂಬಿಸಿರುತ್ತದೆ. ಜ್ಯೋತಿಷ್ಯವು ಸಜೀವ ವರ್ಗಗಳ ಅದರಲ್ಲೂ ಸಂಕೀರ್ಣವಾದ ಮನುಷ್ಯ ವರ್ಗದ ಸ್ವೇಚ್ಛಾವರ್ತನೆಯನ್ನು ಕುರಿತು ಸಮ್ಯಗ್‌ದರ್ಶನವನ್ನು ಮಾಡಿಕೊಡುವ ಶಾಸ್ತ್ರವಾಗಿ ಬೆಳೆದು ಬಂದಿದೆ.

೫.೩. ಗಣಿತಶಾಸ್ತ್ರ:

ಮನುಷ್ಯನ ದಿನನಿತ್ಯದ ವ್ಯವಹಾರಗಳಿಗಾಗಿ ಕಂಡುಕೊಂಡ ಮಾಧ್ಯಮವೇ ಭಾಷೆ. ಭಾಷೆಯ ಜೊತೆಜೊತೆಗೆ ನಾಗರಿಕ ಪ್ರಜ್ಞೆಯೂ ಬೆಳೆಯತೊಡಗಿತು. ನಾಗರಿಕ ಪ್ರಜ್ಞೆ ಬೆಳೆದಂತೆ ಮಾನವನ ವ್ಯವಹಾರಿಕ ಚಟುವಟಿಕೆಗಳೂ ಬೆಳೆಯತೊಡಗಿದವು. ವ್ಯವಹಾರಗಳು ಹೆಚ್ಚಾದಾಗ ಗೊಂದಲಗಳಾಗದೇ ಅವುಗಳ ಸಮತೋಲನಕ್ಕಾಗಿ ಲೆಕ್ಕಾಚಾರವನ್ನು ಕಂಡುಕೊಳ್ಳಲಾಯಿತು. ಪ್ರಾಚೀನ ನಾಗರಿಕತೆಗಳ ಕಾಲದಲ್ಲಿ ಗಣಿತಶಾಸ್ತ್ರದ ಅಧ್ಯಯನ ವಸ್ತು ವಿಶಿಷ್ಟವಾಗಿ ಎಣಿಕೆಯ ಸಂಖ್ಯೆಗಳು, ಅಳತೆಯ ರಾಶಿಗಳು ಹಾಗೂ ದೃಗ್ಗೋಚರ ಆಕೃತಿಗಳು ಎಂಬ ಭಾವನೆ ರೂಪುಗೊಂಡಿತು. ಲೆಕ್ಕಾಚಾರವು ಮನುಷ್ಯನನ್ನು ವ್ಯವಹಾರ ಚತುರನನ್ನಾಗಿಸಿತು. ಆರಂಭದಲ್ಲಿ ಕೇವಲ ಬೆರಳೆಣಿಕೆಗಳ ಲೆಕ್ಕಾಚಾರಕ್ಕೆ ಸೀಮಿತವಾಗಿ, ಇಂದು ಇಂದು ಅಗಣಿತ 'ಗಣಿತಶಾಸ್ತ್ರ'ವಾಗಿ ಬೆಳೆದು ನಿಂತಿದೆ.

ಹೀಗೆ "ಗಣಿತಶಾಸ್ತ್ರವು ಅನಾದಿಕಾಲದಿಂದ ಆಧುನಿಕ ಕಾಲದಲ್ಲಿಯೂ ಸಹ ವಿಜ್ಞಾನದ ಒಂದು ಪ್ರಮುಖ ಪ್ರಾಕಾರವೆಂದು ಪ್ರಖ್ಯಾತಿ ಪಡೆದಿದೆ. ಇದು ವಿಜ್ಞಾನದ ಒಂದು ಅವಿಭಾಜ್ಯ ಅಂಗವಾಗಿದ್ದು **ವಿಜ್ಞಾನದ ಮಹಾರಾಣಿ** ಎಂಬ ತನ್ನದೇ ಆದ ವಿಶಿಷ್ಟವಾದ ಸ್ಥಾನವನ್ನು ಉಳಿಸಿಕೊಂಡಿದೆ. ಗಣಿತಶಾಸ್ತ್ರದ ಮುನ್ನಡೆಗೆ ಭಾರತೀಯ ತಣಿತಜ್ಞರು ನೀಡಿರುವ ಕೊಡುಗೆ ಅಪಾರವಾದದ್ದು. ಸೊನ್ನೆಯನ್ನು ಪ್ರಪ್ರಥಮವಾಗಿ ಜಗತ್ತಿಗೆ ಪರಿಚಯಿಸಿದವರು ಭಾರತೀಯರೇ. ಇದಲ್ಲದೇ **π** (ಪೈ)ನ ಸಮೀಪದ ಬೆಲೆಯು ೩.೧೪೧೬ನ್ನು ನಿರೂಪಿಸಿದವರೂ ಸಹ ಭಾರತೀಯರೇ ಎನ್ನುವುದು ಹೆಮ್ಮೆಯ ವಿಷಯ. ಪ್ರಾಚೀನ ಭಾರತೀಯ ಗಣಿತಜ್ಞರಾದ ಆರ್ಯಭಟ, ಭಾಸ್ಕರ, ಬ್ರಹ್ಮಗುಪ್ತ, ಮಹಾವೀರಾಚಾರ್ಯ, ಭಾಸ್ಕರಾಚಾರ್ಯ ಮತ್ತಿತರರ ಕೊಡುಗೆಗಳು ಇಂದಿಗೂ ವಿಶ್ವವಿಖ್ಯಾತವಾಗಿದೆ."[೧೩೮]

---

೧೩೮. ಡಾ ॥ (ಶ್ರೀಮತಿ) ಪದ್ಮಾವತಮ್ಮ (ಸಂಪಾ. ಮತ್ತು ಅನು.) : **ಶ್ರೀ ಮಹಾವೀರಾಚಾರ್ಯ ವಿರಚಿತ ಗಣಿತಸಾರಸಂಗ್ರಹ** ; ಪುಟ. xxxii (ಪ್ರಸ್ತಾವನೆ)

ಗಣಿತಶಾಸ್ತ್ರವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯಲು ಹಲವಾರು ಜೈನ ಗಣಿತಜ್ಞರು ನಿರಂತರವಾಗಿ ಸೇವೆ ಸಲ್ಲಿಸಿರುವರು. ಡಾ. ಧನ್ಯಕುಮಾರ ಇಜಾರಿಯವರು "ಜೈನಧರ್ಮವು ಅನಾದಿಯಾಗಿದ್ದು, ಅಂತೆಯೇ ಗಣಿತಶಾಸ್ತ್ರವು ಅನಂತವಾಗಿದೆ. ಜೈನರಿಗೂ ಗಣಿತಶಾಸ್ತ್ರಕ್ಕೂ ಅಂದಿನಿಂದ ಇಂದಿನವರೆಗೂ ಒಂದು ರೀತಿಯ ಬಿಡಿಸಲಾಗದ ಬಾಂಧವ್ಯವಿದೆ. ಇದರ ಪ್ರತೀಕವಾಗಿ ಅನೇಕ ಪ್ರಸಿದ್ಧ ಜೈನ ವಿದ್ವಾಂಸರು ಮುಖ್ಯ ಪಾತ್ರವಹಿಸಿ ಗಣಿತವಿಜ್ಞಾನಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿ ಅದನ್ನು ಸಮೃದ್ಧವಾಗಿ ಬೆಳೆಸಿ ಉಳಿಸಿದ್ದಾರೆ"[೧೩೯] ಎನ್ನುತ್ತಾರೆ. ಇಂತಹ ಕಷ್ಟಕರವಾದ ವಿಷಯನ್ನು ಆದಷ್ಟು ಸರಳವಾಗಿ, ಸುಲಭವಾಗಿ ಮತ್ತು ನಿಖರವಾಗಿ ವಿವರಿಸುವ ಒಂದು ಚಾತುರ್ಯವು ಜೈನ ಗಣಿತಜ್ಞರ ವಿಶೇಷವಾಗಿದೆ. 'ತತ್ತ್ವಾರ್ಥಾಧಿಗಮ ಸೂತ್ರ', 'ಸ್ಥಾನಾಂಗ ಸೂತ್ರ', 'ಜಂಬೂದ್ವೀಪ ಪ್ರಜ್ಞಪ್ತಿ', 'ತಿಲೋಯಪಣ್ಣತ್ತಿ', 'ಕ್ಷೇತ್ರಸಮಾಸ' ಮತ್ತು 'ಗಣಿತಸಾರಸಂಗ್ರಹ' ಇವುಗಳು ಭಾರತೀಯ ಭಾಷೆಗಳ ಪ್ರಮುಖವಾದ ಜೈನ ಪ್ರಾಚೀನ ಗಣಿತ ಗ್ರಂಥಗಳು. "ಜೈನ ಗಣಕರು ಸಂಖ್ಯಾವಿಚಾರ, ಘಾತಗಳು, ಸಮೀಕರಣಗಳು ಮುಂತಾದ ಗಣಿತ ಕ್ಷೇತ್ರಗಳಲ್ಲಿ ಕ್ರಿಸ್ತಪೂರ್ವ ಐದರಿಂದ ಎಂಟನೆಯ ಶತಮಾನದವರೆಗೆ ಗಣನೀಯವಾದ ಕಾರ್ಯವನ್ನು ಕೈಗೊಂಡರು. ಬೀಜಗಣಿತದ ಒಂದು ಶಾಖೆಯಾದ ವಿಕಲ್ಪಗಣಿತವನ್ನು ವಿಶೇಷವಾಗಿ ಬೆಳೆಸಿದರು."[೧೪೦] ಕ್ರಿ.ಶ. ೬ನೆಯ ಶತಮಾನದ ಆರ್ಯಭಟನ 'ಆರ್ಯಭಟೀಯ'ವು ಗಣಿತಶಾಸ್ತ್ರಕ್ಕೆ ಪ್ರೇರಣೆ ನೀಡಿದ ಆದ್ಯ ಕೃತಿ. ವರಾಹಮಿಹಿರನ 'ಪಂಚಸಿದ್ಧಾಂತಿಕಾ', 'ಬೃಹಜ್ಜಾತಕ', 'ಬೃಹದ್‌ಯಾತ್ರಾ', 'ಯೋಗಯಾತ್ರಾ', 'ಬೃಹತ್‌ಸಂಹಿತೆ'ಗಳು ಭಾರತೀಯ ಗಣಿತಶಾಸ್ತ್ರದ ಆಮೂಲಾಗ್ರ ಕೃತಿಗಳು. ವೀರಸೇನ, ವೀರಹಂಕ, ಲಲ್ಲ, ಮಹಾವೀರಾಚಾರ್ಯ, ನೇಮಚಂದ್ರ, ಪದ್ಮನಾಭ, ಸ್ಕಂದಸೇನ, ಪೃಥೂದಕಸ್ವಾಮಿ, ಶ್ರೀಪತಿ, ಶತಾನಂದ, ಭಾಸ್ಕರಾಚಾರ್ಯರೂ ಗಣಿತಶಾಸ್ತ್ರಕ್ಕೆ ಅಪೂರ್ವ ಕಾಣಿಕೆ ನೀಡಿದ್ದಾರೆ. ಇವೆಲ್ಲವೂ ಸಂಸ್ಕೃತ ಹಾಗೂ ಪ್ರಾಕೃತದ ಗಣಿತಶಾಸ್ತ್ರ ಗ್ರಂಥಗಳು. ಇನ್ನೂ ರಾಜಾದಿತ್ಯನೇ ಕನ್ನಡದಲ್ಲಿ ಗಣಿತಶಾಸ್ತ್ರಕ್ಕೆ ಕೊಡುಗೆ ನೀಡಿದವರಲ್ಲಿ ಮೊದಲಿಗ.[೧೪೧]

೫.೩.೧. ರಾಜ್ಯಾದಿತ್ಯ (೧೧೯೦):

'ವ್ಯವಹಾರ ಗಣಿತ'ವನ್ನು ಸಂಪಾದಿಸಿದ ಎಂ. ಮರಿಯಪ್ಪ ಭಟ್ಟ ಅವರು "ರಾಜಾದಿತ್ಯನು ಜೈನಕವಿ. ಕನ್ನಡದಲ್ಲಿ ಗಣಿತ ಗ್ರಂಥಗಳನ್ನು ಬರೆದವರಲ್ಲಿ ಈತನೇ ಮೊದಲಿಗನೆನ್ನಬಹುದು"[೧೪೨] ಎಂದು ಉಲ್ಲೇಖಿಸುತ್ತಾರೆ. "ಇವನಿಗೆ ರಾಜವರ್ಮ, ಭಾಸ್ಕರ, ಬಾಚ, ಬಾಚಯ, ಬಾಚಿರಾಜ ಎಂಬ ಹೆಸರುಗಳೂ ಗಣಿತವಿಳಾಸ, ಓಜೆವೆಡಂಗ, ಪದ್ಯವಿದ್ಯಾಧರ, ಗಣಿತವಿರಿಂಚ ಎಂಬ

---

೧೩೯. ಡಾ. ಧನ್ಯಕುಮಾರ ಇಜಾರಿ : **ಜೈನ ಲೌಕಿಕ ಸಾಹಿತ್ಯ ಸಂಪದ** ; ಪುಟ. ೧೬೯

೧೪೦. ಮುರಳೀಧರ ಉಪಾಧ್ಯ ಹಿರಿಯಡಕ : **ಭಾರತೀಯ ಗಣಿತಶಾಸ್ತ್ರದ ಇತಿಹಾಸ** ; ಪುಟ. ೦೯

೧೪೧. ನೋಡಿ, ಅಧ್ಯಾಯ–**೨.೩.೯. ಗಣಿತಶಾಸ್ತ್ರ** : ಪುಟ. ೩೩

೧೪೨. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೦೧ (ಮುನ್ನುಡಿ)

ಬಿರುದುಗಳೂ ಇದ್ದಂತೆ ಇವನ ಗ್ರಂಥಗಳಿಂದ ತಿಳಿದುಬರುತ್ತದೆ"[೧೪೩] ಈತನು ಹೊಯ್ಸಳ ಇಮ್ಮಡಿ ಬಲ್ಲಾಳ (೧೧೭೩-೧೨೨೦)ನ ಆಸ್ಥಾನದ ವಿದ್ವಾಂಸ ಕವಿಯಾಗಿರಬೇಕು. ಹೆಚ್ಚೂ ಕಡಿಮೆ ಅಂದರೆ ಕ್ರಿ.ಶ.೧೧೯೦ರಲ್ಲಿ 'ವ್ಯವಹಾರ ಗಣಿತ'ವನ್ನು ಬರೆದು ಮುಗಿಸಿರಬಹುದು ಎಂದು ಎಂ. ಮರಿಯಪ್ಪ ಭಟ್ಟ ಅವರು ಊಹಿಸುತ್ತಾರೆ.[೧೪೪] ಈತನು ಗಣಿತಜ್ಞ ಮಾತ್ರವಲ್ಲದೇ ಉತ್ತಮ ಕವಿಯೂ ಆಗಿದ್ದನು. ತನ್ನ ವೈಯಕ್ತಿಕ ವಿಚಾರವಾಗಿ ಹೀಗೆ ಹೇಳಿಕೊಂಡಿದ್ದಾನೆ :

> **"ಜಿನನಾಥಂ ನೇಮಿನಾಥಂ ನಿಜಗುರು ಶುಭಚಂದ್ರೋತ್ತಮಂ ತಂದೆ ಸರ್ವಾ**
> **ವನಿಸಂಸ್ತುತ್ಯಾಸ್ಪಂ ಶ್ರೀಪತಿ ಜನನಿ ವಸಂತಾಖ್ಯೆ ತನ್ನಗ್ರಜಂ ಶಾಂ**
> **ತನುಮಂತಾಯೋಗಮಂ ಬಾಹುಬಲಿ ಭರತರಾತ್ಮೀಯರುಂ ತಾಮೆನಲ್ ಬಾ**
> **ಪ್ಪೆನೆ ರಾಜಾದಿತ್ಯನೇಂ ಧನ್ಯನೊ ವಿಶದಯಶಂ ಸದ್ಗುಣಾಂಬೋಧಿಚಂದ್ರಂ ॥೧.೧೦॥"**[೧೪೫]

ತನ್ನ ಆರಾಧ್ಯದೈವ ೨೨ನೆಯ ತೀರ್ಥಂಕರನಾದ ನೇಮಿನಾಥನಾಗಿದ್ದು, ತಂದೆ ಶ್ರೀಪತಿ, ತಾಯಿ ವಸಂತಾಖ್ಯೆ, ಸಹೋದರ ಶಾಂತ.[೧೪೬] ತಾವಿಬ್ಬರೂ ಭರತ-ಬಾಹುಬಲಿಯರಂತೆ ಎಂದು ಹೇಳಿದ್ದಾನೆ. ಮುಂದುವರೆದು ತಾನು ಬಾಳಿಬದುಕಿದ ಪ್ರದೇಶದ ಕುರಿತಾಗಿ ಹೀಗೆ ಹೇಳುತ್ತಾನೆ –

> **"ವನತತಿಯಿಂ ನದೀ ನದಕುಭೃತ್ಕುಲದಿಂ ಧನಧಾನ್ಯವರ್ಗದಿಂ**
> **ಜನಪದರಾಜಿಯಿಂ ಬೆಳೆವ ಕೆಯ್ವೊಲದಿಂದೆಸೆವೂರ್ಗಳಿಂ ಜಗ**
> **ಜ್ಜನನುತಜೈನಧರ್ಮದ ನೆಗಟ್ತೆಯಿನೊಪ್ಪಿರೆ ಕೂಂಡಿಮಂಡಲ**
> **ಕ್ಕನುಪಮರತ್ನಮಂತನಮೆನಿಪ್ಪುದು ಪೂವಿನಬಾಗೆ ಸತತಂ ॥೧.೦೫॥**
>
> **ಆವೆಡೆಯೊಳ್ ಮನಂಬಯಸಿ ಪಾಂಥಜನಂ ನಿಲಲಲ್ಲಿಗಲ್ಲಿಗ**
> **ಬ್ಜಾವಳಿಯಲ್ಲಿಗಲ್ಲಿಗೆ ಸುಸೌರಭದಿಂದೆಸಿರ್ಪ ಪುಷ್ಪವಾ**
> **ಟಾವಳಿಯಲ್ಲಿಗಲ್ಲಿಗೆ ನವಭ್ರಮರಾವಳಿ ಹಂಸಭಂಗಕೀ**
> **ರಾವಳಿಯಿಂದಮೊಪ್ಪುವುದು ಬಾಗೆಯದೊಂದು ಮಹೀಪ್ರದೇಶದೊಳ್ ॥೧.೦೬॥**
>
> **ಪೊಸ ಪೊಂಗೇದಗೆ ಜಾಜಿ ಪಾಟಲಿ ಲಸತ್ಸೇವಂತಿ ನೀಲಾಬ್ಜಮು**
> **ದ್ಘಸರೋಜಂ ಸುರಹೊನ್ನೆ ಸಂಪಗೆ ನವೋದ್ಯನ್ಮಲ್ಲಿಕಾದಿಪ್ರಸೂ**
> **ನ ಸಮೂಹಂ ತನಿಗಂಪನೆಣ್ದೆಸೆಗೆ ನಿಚ್ಚಂ ಬೀಜಲನ್ವರ್ಥಮಾ**
> **ಗೆಸೆಗುಂ ಪೂವಿನಬಾಗೆಯೆಂಬ ಪೆಸರಿಂದಿಂಬಾಗಿ ಚೆಲ್ವಾಗಿರಲ್ ॥೧.೦೭॥"**[೧೪೭]

ಕಾಡಿನಿಂದ ಆವೃತವಾಗಿರುವ ಧನಧಾನ್ಯಗಳು ಸಂಪದ್ಭರಿತವಾಗಿ ಬೆಳೆಯುವ ಪ್ರದೇಶ. ಜಗಕ್ಕೆ ಪ್ರಿಯವೆನಿಸಿದ ಜೈನಧರ್ಮವೇ ಪ್ರಧಾನವಾಗಿರುವ ಕುಹುಂಡಿ ಮಂಡಲಕ್ಕೆ ಪೂವಿನಬಾಗೆಯು ಅನುಪಮರತ್ನವೆನಿಸಿದೆ. ವಿಶಾಲವಾದ ಪೂವಿನಬಾಗೆ ಪ್ರದೇಶದಲ್ಲಿ ದಾರಿಹೋಕರು ಯಾವೆಡೆಯಲ್ಲಿ

---

೧೪೩. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ – ಪ್ರಥಮ ಸಂಪುಟ** ; ಪುಟ. ೩೩೧

೧೪೪. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೧೨ (Introduction)
He was a great Scholar-poet in royal court of IInd Ballal of Hoysala Dynasity. It has been established beyond any doubt that the date of composition of Vyavahara Ganita shouod be in some time round about 1190.

೧೪೫. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೦೨ (ಪೀಠಿಕಾಪ್ರಕರಣಂ)

೧೪೬. ಬಹುಶಃ ಈತನ ಅಣ್ಣನ ಹೆಸರು ಶಾಂತಿನಾಥ ಎಂದಿದ್ದರಿಬಹುದು. ರಾಜಾದಿತ್ಯನು ತನ್ನ ವೈಯಕ್ತಿಕ ವಿಚಾರವನ್ನು ತಿಳಿಸಿರುವ ಈ ಪದ್ಯವು ಮಹಾಸ್ರಗ್ಧರಾ ಛಂದಸ್ಸಿನ ಚೌಕಟ್ಟಿಗೆ ಒಳಪಡುವುದರಿಂದ 'ಶಾಂತ'ನೆಂದು ಕಿರಿದಾಗಿ ಹೇಳಿರಬಹುದು.

೧೪೭. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೦೧, ೦೨ (ಪೀಠಿಕಾಪ್ರಕರಣಂ)

ಹೋದರೂ ಬೇಸತ್ತು ನಿಂತರೂ ಅಲ್ಲೆಲ್ಲವೂ ಆಚ್ಛಾದಿತ ಬಾಗೆಯ ಮರಗಳೇ, ಸುಗಂಧ ಸೂಸುವ ಪುಷ್ಪಾವಳಿ, ಈಡಾಡುವ ಭ್ರಮರಾವಳಿ, ಅಲ್ಲಲ್ಲಿಗಿರುವ ಕೊಳಗಳಲ್ಲಿ ಹಂಸನಾದ ತನು–ಮನಗಳಿಗೆ ಮುದನೀಡುತ್ತವೆ. ಕೇದಗೆ, ಜಾಜಿ, ಪಾಟಲಿ, ಸೇವಂತಿಗೆ, ನೀಲಕಮಲ, ಸುರಹೊನ್ನೆ, ಸಂಪಿಗೆ, ಮಲ್ಲಿಗೆ ಮುಂತಾದ ಹೂಗಳನ್ನು ಬೆಳೆವ ನಾಡಿಗೆ ಅನ್ವರ್ಥಕವಾಗಿ ಹೂವಿನಬಾಗೆ ಎಂದು ಹೆಸರು ಬಂದಿದೆ ಎಂದು ವರ್ಣಿಸುತ್ತಾನೆ ಕವಿ ರಾಜಾದಿತ್ಯ.

ಈ ಭಾಗದಲ್ಲಿ ಶಿರೀಷದ ಗಿಡಗಳು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದಿರಬಹುದು, ಶಿರೀಷದ ಗಿಡಗಳಿಗೆ 'ಬಾಗೆ' ಎಂಬ ಇನ್ನೊಂದು ಹೆಸರೂ ಇದೆ. ಅದಕ್ಕಾಗಿಯೇ ಈ ಪ್ರದೇಶಕ್ಕೆ 'ಬಾಗೆ' ಎಂದು ಕರೆಯುತ್ತಿರಬಹುದಾಗಿ ಊಹಿಸಬಹುದು. ಹೂವಿನಬಾಗೆಯು ಇಂದಿನ ಬೆಳಗಾವಿ ಜಿಲ್ಲೆಯ ರಾಯಬಾಗವಾಗಿತ್ತೆಂದು ವಿದ್ವಾಂಸರ ಅಭಿಮತವಾಗಿದೆ. ಇಂದಿಗೂ ರಾಯಬಾಗದ ಸುತ್ತಲಿನ ಊರುಗಳಲ್ಲಿ ಈ ಊರನ್ನು ಗುರುತಿಸಲು 'ಬಾಗಿಮೂಲಿ' ಎಂದು ಕರೆಯುವುದು ರೂಢಿಯಲ್ಲಿದೆ. ಈ ಪ್ರದೇಶವು ಸವದತ್ತಿಯ ರಟ್ಟರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಕ್ರಿ.ಶ. ೧೧೯೫ರ ಕೊಲ್ಹಾಪುರದ ಶಾಸನವೊಂದು "ದಂಡನಾಯಕ ದಾಸಿಮರಸನು ಹೂವಿನಬಾಗೆ ಅಗ್ರಹಾರದಲ್ಲಿದ್ದ ಮಾರಸಿಂಗ ಸೆಟ್ಟಿಯ ಬಸದಿಗೆ ಯಾಪನೀಯ ಸಂಘ ಪುಂನಾಗವೃಕ್ಷ ಮೂಲಗಣದ ಆಚಾರ್ಯರಾದ ಕುಮಾರಕೀರ್ತಿ ಪಂಡಿತದೇವನ ಕಾಲನ್ನು ತೊಳೆದು ಮೂವತ್ತು ಮತ್ತರು ಭೂಮಿ, ಒಂದು ತೋಟವನ್ನು ಕೊಟ್ಟನು"[೧೪೮] ಎಂದು ಉಲ್ಲೇಖಿಸಿದೆ.

೫.೩.೧.೧. ವ್ಯವಹಾರ ಗಣಿತಂ:

ರಾಜಾದಿತ್ಯನು ರಚಿಸಿರುವ ಈ ಗ್ರಂಥದ **ಪೀಠಿಕಾಪ್ರಕರಣಂ, ಪರಿಭಾಷಾಪ್ರಕರಣಂ, ತ್ರೈರಾಶಿಕ ಪ್ರಕರಣ, ಪಂಚರಾಶಿ ಪ್ರಕರಣ, ಸಪ್ತರಾಶಿ ಹಾಗೂ ನವರಾಶಿ ಪ್ರಕರಣ ಎಂಬ** ಐದು ಅಧ್ಯಾಯಗಳು ಉಪಲಬ್ಧವಾಗಿವೆ. ಗ್ರಂಥದ ಆರಂಭದಲ್ಲಿ ಕವಿಯು ನೇಮಿನಾಥ ತೀರ್ಥಂಕರರನ್ನು ಸ್ಮರಿಸಿಕೊಂಡಿದ್ದಾನೆ. ಅದೇ ರೀತಿ ಈ ಮೊದಲು ತಿಳಿಸಿದಂತೆ ತನ್ನ ಹುಟ್ಟೂರು, ತನ್ನ ವಾಸಸ್ಥಳದ ಪರಿಚಯ ಮಾಡಿಕೊಟ್ಟಿದ್ದಾನೆ.

"ಪಿರಿದಂ ಪೇಟಿಕ್ಕೊಡೆ ಸಾಲದೆ
ಪುರಾತನರ ಗಣಿತವೊಂದೆ ಪಲಕಾಲಂ ಬೆ ।
ಚ್ಚರಮೋದಿ ಕಿಟಿದಜೆಂ ವ್ಯವ
ಹರಿಸಲ್ ವ್ಯವಹಾರ ಗಣಿತಮಂ ವಿರಚಿಸಿದಂ ॥೧.೧೪॥

ಲೆಕ್ಕದ ಕವಿತೆಯ ಬಲ್ಮೆ ಜ
ಗಕ್ಕೆಸಿದಿರೆ ಸಕಲಗಣಿತಮೀ ಗ್ರಂಥದೊಳಂ ।

---

೧೪೮. ನಾಡೋಜ ಪ್ರೊ. ಹಂಪ ನಾಗರಾಜಯ್ಯ : **ಯಾಪನೀಯ ಸಂಘ** ; ಪುಟ. ೪೫

ತೆಕ್ಕನೆ ತೀವಿರಲಯ್ದು ದಿ
ನಕ್ಕಂ ನೆಱಿ ಪೇಟ್ದನಲ್ತೆ ರಾಜಾದಿತ್ಯಂ ॥೧.೧೬॥"[೧೪೯]

ಎಂದು ತನ್ನ 'ವ್ಯವಹಾರ ಗಣಿತ' ಕೃತಿ ರಚನೆಗೆ ಕಾರಣ ಹಾಗೂ ಆ ಕೃತಿಯ ಶ್ರೇಷ್ಠತೆಯನ್ನು ಕುರಿತು ಹೇಳಿದ್ದಾನೆ. ಮುಂದುವರೆದು ಲೋಕಹಿತಾರ್ಥವಾಗಿ ಮೃದುಪದ ಲಲಿತ ಪ್ರಸನ್ನ ಗಂಭೀರಾರ್ಥವೆನಿಸಿದ ಭಾಸ್ಕರದೇವನು ಹೇಳಿದ ವ್ಯವಹಾರಗಣಿತವನ್ನು ವಿರಚಿಸಿದೆನೆಂದು ಹೇಳಿಕೊಂಡಿದ್ದಾನೆ ರಾಜಾದಿತ್ಯ.

೧. ಹಣದ ಮಾಪನಗಳು:

೪ ಕಾಣಿ	–	೧ ವೀಸ
೫ ವೀಸ	–	೧ ಹಾಗ
೪ ಹಾಗ	–	೧ ಹಣ
೧೦ ಹಣ	–	೧ ಗದ್ಯಾಣ, ೧ ಹೊನ್ನು

೨. ಚಿನ್ನವನ್ನು ಅಳೆಸುವ ಸಾಧನಗಳು:

೪ ಸುವರ್ಣ	–	೧ ಕರ್ಷ
೪ ಕರ್ಷ	–	೧ ಪಲ
೨೦ ಪಲ	–	೧ ಬೀಸಿಗೆ
೫ ಬೀಸಿಗೆ	–	೧ ತೊಲೆ
೨೦ ತೊಲ	–	೧ ಭಾರ

೩. ಧಾನ್ಯವನ್ನು ಅಳೆಯುವ ಮಾಪನಗಳು:

೪ ಗಿದ್ದಣ	–	೧ ಸೊಲ್ಲಿಗೆ
೪ ಸೊಲ್ಲಿಗೆ	–	೧ ಮಾನ
೪ ಮಾನ	–	೧ ಬಳ್ಳ
೪ ಬಳ್ಳ	–	೧ ಕೊಳಗ
೫ ಕೊಳಗ	–	೧ ಪಂಚಕ
೪ ಪಂಚಕ	–	೧ ಖಂಡುಗ

೪. ಕಾಲದ ಮಾಪನಗಳು:

೮ ಗಳಿಗೆಗಳು	–	೧ ಜಾವ
೮ ಜಾವ	–	೧ ದಿವಸ
೬೦ ಗಳಿಗೆಗಳು	–	೧ ಅಹೋರಾತ್ರಿ
೩೦ ಅಹೋರಾತ್ರಿ	–	೧ ಮಾಸ
೧೨ ಮಾಸ	–	೧ ವರ್ಷ

---

೧೪೯. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೦೩ (ಪೀಠಿಕಾಪ್ರಕರಣಂ)

೫. ದೂರವನ್ನು ಅಳೆಯುವ ಮಾಪನಗಳು:

೨ ಬೆರಳು	–	೧ ಅಂಗುಲ
೬ ಅಂಗುಲ	–	೧ ಗೇಣು
೨ ಗೇಣು	–	೧ ಮೊಳ (ಹಸ್ತ)
೪ ಮೊಳ	–	೧ ದಂಡ
೨೦೦೦ ದಂಡ	–	೧ ಕ್ರೋಶ
೪೦೦೦ ಕ್ರೋಶ	–	೧ ಯೋಜನ

ಈ ರೀತಿಯಾಗಿ ರಾಜಾದಿತ್ಯನು ತನ್ನ ಗ್ರಂಥದ ಮುಂದಿನ ಅಧ್ಯಾಯಗಳಿಗೆ ಸಂಬಂಧಿಸಿದಂತೆ ಅಳತೆಯ ಮಾನಗಳನ್ನು ಪೀಠಿಕಾಪ್ರಕರಣದಲ್ಲಿ ತಿಳಿಸುತ್ತಾನೆ. ಇವುಗಳನ್ನು ಪರಿಭಾಷಾ ಸೂತ್ರಗಳು ಎಂದು ಕರೆಯುತ್ತಾನೆ. "ಚಂದ್ರದೇವ ಯೋಗೀಂದ್ರ ಪಾದಾರವಿಂದ ಮಧುಕರಾಯಮಾಣ ಮಾನಸಾನಂದಿತ ಸಕಲಗಣಿತತತ್ವವಿಲಾಸ ವಿನೇಯಜನ ವಿನುತ ಶ್ರೀರಾಜಾದಿತ್ಯ ವಿರಚಿತಮಪ್ಪ ವ್ಯವಹಾರಗಣಿತದೊಳ್" ಎಂದು ಹೇಳಿ ಮೊದಲ ಪ್ರಕರಣವನ್ನು ಸಮಾಪ್ತಗೊಳಿಸುತ್ತಾನೆ.

ಎರಡನೆಯ ಪ್ರಕರಣದಲ್ಲಿ ರಾಜಾದಿತ್ಯನು ಬಳಕೆ ಮಾಡಿರುವ ಪದಗಳಿಗೆ ಅಳತೆಗಳನ್ನು ತಿಳಿಸಿದ್ದಾನೆ.

ಸಂಖ್ಯಾಸ್ಥಾನ ಸಂಜ್ಞೆಯ ಸೂತ್ರ:

"ಏಕಂತು ಪ್ರಥಮಂ ಸ್ಥಾನಂ ದ್ವಿತೀಯಂ ದಶಸಂಜ್ಞಿಕಂ
ತೃತೀಯಂಶತಮಿತ್ಯಾಹುಃ ಚತುರ್ಥಂ ತು ಸಹಸ್ರಕಂ
ಪಂಚಮಂ ದಶಸಾಹಸ್ರಂ ಷಷ್ಟಮಂ ಲಕ್ಷಮೇವ ಚ
ಸಪ್ತಮಂ ದಶಲಕ್ಷಂ ತು ಅಷ್ಟಮಂ ಕೋಟಿರುಚ್ಯತೆ
ನವಮಂ ದಶಕೋಟಿಸ್ತು ದಶಮಂ ಶತಕೋಟಿಕಂ
ಅರ್ಬುದಂ ರುದ್ರಸಂಯುಕ್ತಂ ನ್ಯರ್ಬುದಂ ದಾದಶಂ ಭವೇತ್
ಖರ್ವಂ ತ್ರಯೋದಶಸ್ಥಾನಂ ಮಹಾಖರ್ವಂ ಚತುರ್ದಶಂ
ಪದ್ಮಂ ಪಂಚದಶಶ್ಚೈವ ಮಹಾಪದ್ಮಂ ತು ಷೋಡಶಂ
ಕ್ಷೋಣಿ ಸಪ್ತದಶಶ್ಚೈವ ಮಹಾಕ್ಷೋಣಿ ದಶಾಷ್ಟಕಂ
ಶಂಖಂ ನವದಶಸ್ಥಾನಂ ಮಹಾಕ್ಷಿತಿ ತು ವಿಂಶಕಂ
ಕ್ಷಿತಿರೇಕವಿಂಶಸ್ಥಾನಂ ಮಹಾಕ್ಷಿತ್ಯಾ ದ್ವಿವಿಂಶಕಂ
ಘ್ರುವಿಂಶಕಮಥ ಕ್ಷೋಭಂ ಮಹಾಕ್ಷೋಭಂ ಚತುರ್ನಯಂ
ಪಂಚವಿಂಶ ನದೀ ಚೈವ ಷಡ್ವಿಂಶತಿ ಮಹಾನದೀ
ಸಪ್ತವಿಂಶ ನಗಚ್ಚೈವ ಅಷ್ಟವಿಂಶ ಮಹಾನಗಃ
ನವವಿಂಶ ರಥಶ್ಚೈವ ತ್ರಿಂಶಸ್ಥಾನಂ ಮಹಾರಥಃ
ಏಕತ್ರಿಂಶತ್ ಹರಿಶ್ಚೈವ ದ್ವಾತ್ರಿಂಶಸ್ತು ಮಹಾಹರಿಃ
ತ್ರಯಸ್ತ್ರಿಂಶತ್ ಫಣಿಶ್ಚೈವ ಚತುಸ್ತ್ರಿಂಶತ್ ಮಹಾಫಣಿಃ
ಪಂಚತ್ರಿಂಶತ್ ಕ್ರತುಶ್ಚೈವ ಷಡುತ್ರಿಂಶತ್ ಮಹಾಕ್ರತುಃ
ಸಪ್ತತ್ರಿಂಶತ್ ಸಾಗರಂ ಚ ಅಷ್ಟತ್ರಿಂಶತ್ತು ಸಾಗರಂ ಮಹಾ
ನವತ್ರಿಂಶತ್ ಪರಿಮಿತಂ ಚತ್ವಾರಿಂಶ ಮಹಾಪರಿಮಿತಂ"[೧೫೦]

೧೫೦. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೦೮ (ಪರಿಭಾಷಾ ಪ್ರಕರಣಂ)

೧. ಎಕ್ಕಂ – ೦
೨. ದಶಂ – ೦೦
೩. ಶತಂ – ೦೦೦
೪. ಸಹಸ್ರ – ೦೦೦೦
೫. ದಶಸಹಸ್ರ – ೦೦೦೦೦
೬. ಲಕ್ಷ – ೦೦೦೦೦೦
೭. ದಶಲಕ್ಷ – ೦೦೦೦೦೦೦
೮. ಕೋಟಿ – ೦೦೦೦೦೦೦೦
೯. ದಶಕೋಟಿ – ೦೦೦೦೦೦೦೦೦
೧೦. ಶತಕೋಟಿ – ೦೦೦೦೦೦೦೦೦೦
೧೧. ಅರ್ಬುದ – ೦೦೦೦೦೦೦೦೦೦೦
೧೨. ನ್ಯರ್ಬುದ – ೦೦೦೦೦೦೦೦೦೦೦೦
೧೩. ಖರ್ವ – ೦೦೦೦೦೦೦೦೦೦೦೦೦
೧೪. ಮಹಾಖರ್ವ – ೦೦೦೦೦೦೦೦೦೦೦೦೦೦
೧೫. ಪದ್ಮ – ೦೦೦೦೦೦೦೦೦೦೦೦೦೦೦
೧೬. ಮಹಾಪದ್ಮ – ೦೦೦೦೦೦೦೦೦೦೦೦೦೦೦೦
೧೭. ಕ್ಷೋಣಿ – ೦೦೦೦೦೦೦೦೦೦೦೦೦೦೦೦೦
೧೮. ಮಹಾಕ್ಷೋಣಿ – ೦೦೦೦೦೦೦೦೦೦೦೦೦೦೦೦೦೦
೧೯. ಶಂಖ – ೦೦೦೦೦೦೦೦೦೦೦೦೦೦೦೦೦೦೦
೨೦. ಮಹಾಶಂಖ – ೦೦೦೦೦೦೦೦೦೦೦೦೦೦೦೦೦೦೦೦
೨೧. ಕ್ಷಿತಿ – ೦೦೦೦೦೦೦೦೦೦೦೦೦೦೦೦೦೦೦೦೦
೨೨. ಮಹಾಕ್ಷಿತಿ – ೦೦೦೦೦೦೦೦೦೦೦೦೦೦೦೦೦೦೦೦೦೦
೨೩. ಕ್ಷೋಭ – ೦೦೦೦೦೦೦೦೦೦೦೦೦೦೦೦೦೦೦೦೦೦೦
೨೪. ಮಹಾಕ್ಷೋಭ – ೦೦೦೦೦೦೦೦೦೦೦೦೦೦೦೦೦೦೦೦೦೦೦೦
೨೫. ನದಿ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೨೬. ಮಹಾನದಿ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೨೭. ನಗ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೨೮. ಮಹಾನಗ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೨೯. ರಥ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೦. ಮಹಾರಥ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೧. ಹರಿ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೨. ಮಹಾಹರಿ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೩. ಫಣಿ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೪. ಮಹಾಫಣಿ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೫. ಕ್ರತು – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೬. ಮಹಾಕ್ರತು – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೭. ಸಾಗರ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೮. ಮಹಾಸಾಗರ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೩೯. ಪರಿಮಿತ – ೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦೦
೪೦. ಮಹಾಪರಿಮಿತ – ೦೦

ಹೀಗೆ ೪೦ ಸಂಖ್ಯಾ ಸ್ಥಾನಗಳನ್ನು ಗುರುತಿಸುತ್ತಾನೆ. ಮುಂದುವರೆದು ಆಯಾ ಸಂಜ್ಞಾಸ್ಥಾನಗಳಿಗಿರುವ ಪರ್ಯಾಯ ಹೆಸರುಗಳನ್ನು ಹೇಳುತ್ತಾನೆ. ಈ ನಲವತ್ತು ಸಂಖ್ಯಾ ಸ್ಥಾನಗಳವರೆಗೆ ರಾಜಾದಿತ್ಯನು ಪ್ರಸ್ತಾಪ ಮಾಡಿರುವುದರಿಂದ ಇದರಲ್ಲಿ ಐದು ಮಾತ್ರವಲ್ಲ ಇನ್ನೂ ಹೆಚ್ಚು ಪ್ರಕರಣಗಳು ಇದ್ದಿರಬಹುದು. ಈ ಉಪಲಬ್ಧವಿರುವ ಗ್ರಂಥವು ಅಸಮಗ್ರವಾಗಿದೆ ಎಂದು ಊಹಿಸಬಹುದಾಗಿದೆ.

ಸಂಖ್ಯಾ ಸ್ಥಾನಕ್ಕೆ ಅಥವಾ ಆಯಾ ಸಂಖ್ಯೆಯನ್ನು ಗುರುತಿಸಲು ಬಳಕೆಯಾಗುವ ಪರ್ಯಾಯ ಪದಗಳು

ಒಂದು: ಶಶಿ, ಏಗ, ಇಂದು, ಹಿಮಕರ, ವಸುಧಾತಳ, ಸಿತಕರ, ರಸೆ, ಧರೆ, ಇಳೆ, ರೂಪ, ಏಕ.

ಎರಡು: ಯಮ, ನಯನ, ಕರ್ಣ, ಕರ, ಪದ, ಯಮಳ, ಅಂಘ್ರಿ, ದ್ವಿಯಕ್ಷಿ, ಪಕ್ಷ, ನೇತ್ರ, ಚರಣ, ಪದಯುಗ, ಸಮ, ಉಭಯ, ಬಾಹು, ಕಿವಿ, ಬೆನ್ನಿ, ದ್ವ, ದ್ವಯ, ದ್ವಂದ್ವ, ಚಕ್ಷು.

ಮೂರು: ಹರನಯನ, ವಹ್ನಿ, ಪುರ, ಶಿಖಿ, ವರರತ್ನಂ, ತ್ರಿಮೂರ್ತಿ, ಲೋಕ, ವಿಮಲತ್ರಿತಯ, ಪರಮಗುಣತ್ರಯ, ಸುರನದಿಮಾರ್ಗತ್ರಯ, ತ್ರೈ, ಅಗ್ನಿ, ಪಾವಕ ವಾಯುಸಖ.

ನಾಲ್ಕು: ಗತಿ, ವೇದ, ಅಂಬುಧಿ, ವಿಷನಿಧಿ, ಅತಿಶಯ, ಚತುಸಮುದ್ರ, ಸೌಮ್ಯ, ಕಷಾಯ, ಆಶ್ರಮ, ವರ್ಣ, ಜಲರಾಶಿ, ಚೌ, ಚತು, ಜಾತಿ.

ಐದು: ಅನುವ್ರತ, ಭೂತ, ಇಂದ್ರಿಯ, ಇಷು, ಪತ್ರ, ಶರ, ಬಾಣ, ವಿಷಯ, ಪಾಂಡವ, ಪುರವೈರಿಮುಖ, ಪನ್ನಗ, ಹರವಕ್ತ್ರ, ಪಾಂಚಜನ್ಯ, ಶುಕ್ಲ.

ಆರು: ಖರ, ರಸ, ಋತು, ಕರ್ಮ, ಅಂಗ, ಅರಿಷಡ್ವರ್ಗ, ಲೇಶ್ಯ, ಜೀವ, ದ್ರವ್ಯ, ಷಟ್ಪ್ರತ್ಯಯ, ದಯ, ಷಣ್ಮುಖ, ದರ್ಶನ, ವದನ.

ಏಳು: ಸಪ್ತ, ಶಂಖ, ಶೈಲ, ದ್ವೀಪ, ಗಿರಿ, ಮುನಿ, ಋಷಿ, ಪಂಚಾಂಗ, ತುರಗ, ಹಯ, ಧಾತು, ಸಪ್ತಭೂಮಿ, ಖರಕಿರಣ, ಭಯ, ಸ್ವರ, ಸಾಗರ, ಪರ್ವತ, ಅದ್ರಿ.

ಎಂಟು: ಅಷ್ಟ, ದಂತಿ, ಕಾಷ್ಠಾ, ಇಭ, ದಿಗ್ಗಜ, ಮದಹಸ್ತಿ, ದುರಿತಾಷ್ಟಕ, ಅಷ್ಟಕರ್ಮ, ವಸು, ಕರಿ, ದಿಕ್ಕು, ನಾಗ, ಅನುಷ್ಟುಪ್, ಹರನತನು, ಸಿದ್ಧಿ, ವಾರಣ.

ಒಂಭತ್ತು: ವಸುಧಾಭಾವ, ಕೇಶವ, ದಿಶವಂಕ, ಭಾವ, ರಂಧ್ರ, ನಾಟ್ಯಾಂಗ, ನಂದ, ಪದಾರ್ಥ, ರಸ, ಗ್ರಹ, ಪೊಸತು, ನಿಧಿ, ರತ್ನ, ನವ.

ಸೊನ್ನೆ: ಶ್ಯೂನ್ಯ, ಗಗನ, ಅಂಬರ, ದಿವಿ, ಕೈಕ, ಮೇಘಮಾರ್ಗ, ಆಕಾಶ, ಬಂಧಯೋಗ, ಬಿಂದು, ವ್ಯೋಮ, ನಾಮ, ನಾಸ್ತಿ, ಜಲಧರಪಥ.

ಗುಣಾಕಾರಕ್ಕೆ ಇರುವ ಪರ್ಯಾಯ (ಪರಿಭಾಷಾ) ನಾಮಗಳು:

> **"ವರ್ತಿಸು ವರ್ಗಿಸು ಈಡಿಜೆ**
> **ಯೊತ್ತರದಿಂ ಸೆಳದುಸೆಂದು ಪೋಜೆಯ ಗುಣಿಸೈ ।**

ಮತ್ತಂ ಕಾದಿಸು ಪೂಜಿಸು
ಉತ್ತಮದಿಂ ಪೇಟಿ ಮೊದಲ ಗುಣಾಕಾರಂಗಳ್ ॥೨.೧೧॥"[೧೫೧]

ವರ್ತನೆ, ವರ್ಗ, ನೂಂಕು, ಅರಂಕು, ಕುಂಕು, ಸೆಳೆ, ಓಜೆ, ಗುಣಿಸು, ಕಾದಿಸು, ಪೂಜಿಸು, ಈಡು, ಇರಿ, ತಾಂಟಿಸು, ಹತ್ತಿಸು, ಬೆಳೆಸು ಇವುಗಳು ಗುಣಾಕಾರಕ್ಕೆ ಇರುವ ಹೆಸರುಗಳು.

ಸಂಕಲನಕ್ಕೆ ಇರುವ ಪರ್ಯಾಯ (ಪರಿಭಾಷಾ) ನಾಮಗಳು:

ಯುತ, ಯುಕ್ತ, ಮಿಶ್ರ, ಸಮ್ಮಿಶ್ರ, ಸಂಯೋಗ, ದತ್ತಾಶಿಕ್ಷ, ಅನುಬಂಧ, ಯೋಗ, ಬೆರಸು, ಮದಿಸು, ಸಹಿತ, ಕೂಡು, ಬತ.

ವ್ಯವಕಲನಕ್ಕೆ ಇರುವ ಪರ್ಯಾಯ (ಪರಿಭಾಷಾ) ನಾಮಗಳು:

ರಜತ, ರಜಿತ, ಉವಿತ, ತ್ಯಜ, ನುನ್ನ, ವಿವರಣ, ವಶೋಧ್ಯ, ಶೋಧ್ಯ, ತ್ಯಜಿಸು, ಕಳೆ.

ಭಾಗಾಕಾರಕ್ಕೆ ಇರುವ ಪರ್ಯಾಯ (ಪರಿಭಾಷಾ) ನಾಮಗಳು:

ತವಿಸು, ಭಾಗಿಸು, ಉಗಿ, ಎತ್ತು, ಕೊಡು, ಕೊಳು, ಹೃತ, ಹೃತ್ವಾಂಶ, ತಮೋದನ್ನ, ಪಸು, ಎಸಲು, ಭಾಗಂಗೊಳು, ಸೆಳೆ, ಉಚ್ಛೇದು, ಛೇದ.

ಸೂತ್ರಂ: **"ಲೇಶ್ಯ ಗುಣೇಷು ಬಾಣ ದ್ರವ್ಯಾಣಾಂ ಶರಗತಿ ತ್ರಿಸೂಯಾಣಾಂ ।**
ಗುಣರತ್ನಾಗ್ನಿ ಪುರಾಣಾಂ ವರ್ಗಂ ಭಗಣಗಣಕ ಯದಿ ನೇತಿ ॥೨.೭॥"[೧೫೨]

ಇಲ್ಲಿ ಉಹಾಹರಣೆಯ ರೂಪದಲ್ಲಿ ೬೫೫೩೬, ೧೨೩೪೫ ಹಾಗೂ ೩೩೩೩ ಸಂಖ್ಯೆಗಳನ್ನು ಅವೇ ಸಂಖ್ಯೆಯಿಂದ ಗುಣಿಸಿದಾಗ ಬರುವ ವರ್ಗಸಂಖ್ಯೆಯನ್ನು ತಿಳಿಸಿದ್ದಾನೆ.

೧. ೬೫೫೩೬^2 = ೬೫೫೩೬ * ೬೫೫೩೬
= ೪೨೯೪೯೬೭೨೯೬
೨. ೧೨೩೪೫^2 = ೧೨೩೪೫ * ೧೨೩೪೫
= ೧೫೨೩೯೯೦೨೫
೩. ೩೩೩೩^2 = ೩೩೩೩ * ೩೩೩೩
= ೧೧೧೦೮೮೮೯

ಹೀಗೆಯೇ ಸೊನ್ನೆಯಾದಿಯಾಗಿ ವರ್ಗ ಸಂಖ್ಯೆ ಮತ್ತು ವರ್ಗಮೂಲಗಳನ್ನು ಪರಿಭಾಷಾಪ್ರಕರಣದಲ್ಲಿ ರಾಜಾದಿತ್ಯನು ಸೂತ್ರ ರೂಪದಲ್ಲಿ ನೀಡುತ್ತಾನೆ.

ರಾಜಾದಿತ್ಯನು ತನ್ನ 'ವ್ಯವಹಾರ ಗಣಿತ' ಗ್ರಂಥದ 'ತ್ರೈರಾಶಿಕ ಪ್ರಕರಣ'ದಲ್ಲಿ ವ್ಯವಹಾರಿಕವಾಗಿ ಅಥವಾ ವ್ಯಾಪಾರದ ಸಂದರ್ಭದಲ್ಲಿ ಲೆಕ್ಕಾಚಾರ ಮಾಡುವ ಬಗೆಯನ್ನು ೬೪ ಉದಾಹರಣೆಗಳ ಮೂಲ ತಿಳಿಸಿದ್ದಾನೆ.

ಸೂತ್ರಂ ೫ ॥ **"ಮೂಱುಂಗದ್ಯಾಣಂ ಪಣ**
ಮೂಱಕ್ಕೆಂಭತ್ತು ಖಂಡುಗಂ ಕೊಳಗಂ ತಾಂ ।

---

೧೫೧. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೧೧ (ಪರಿಭಾಷಾ ಪ್ರಕರಣಂ)
೧೫೨. **ಅದೇ** ; ಪುಟ. ೧೩ (ಪರಿಭಾಷಾ ಪ್ರಕರಣಂ)

ಮೂಱಾಗಲ್ ಗದ್ಯಾಣಂ
ನೂಱುವಣಂ ಆಱುವಡ್ಡಮಾಗಲ್ಕೇನೋ ॥”[೧೫೩]

೩ ಗದ್ಯಾಣ ೩ ಹಣಕ್ಕೆ ೮೦ ಖಂಡುಗ ೩ ಕೊಳಗ ಧಾನ್ಯವಾದರೆ, ೧೦೦ ಗದ್ಯಾಣ ೬ ಹಣಕ್ಕೆ ಎಷ್ಟಾಗುವುದು?

= ೧ ಗದ್ಯಾಣ = ೧೦ ಹಣ

= ೧ ಖಂಡುಗ = ೨೦ ಕೊಳಗ

= ೩ ಗದ್ಯಾಣ ಹಾಗೂ ೩ ಹಣ ಎಂದರೆ ಇಲ್ಲಿ ೩೩ ಹಣ ಎಂದಾಗುತ್ತದೆ. ಅದೇರೀತಿ:

= ೮೦ ಖಂಡುಗ ೩ ಕೊಳಗ ಎಂದರೆ ಒಟ್ಟು ೧೬೦೩ ಕೊಳಗ ಆಗುತ್ತದೆ.

= ಅಂದರೆ ೩೩ ಹಣಕ್ಕೆ ೧೬೦೩ ಕೊಳಗ

= ೧ ಹಣಕ್ಕೆ ೪೮.೫೭ ಕೊಳಗ ಧ್ಯಾನ

= ೧೦೦ * ೧೦ = ೧೦೦೦ + ೬ = ೧೦೦೬ ಹಣಕ್ಕೆ

= ೪೮೮೭೧.೪೮ ಕೊಳಗವಾಗುತ್ತದೆ.

ಒಟ್ಟು = ೨೪೪೪ ಖಂಡುಗ

ಸೂತ್ರಂ ೫೦ ॥ **“ಅಱುಗಳಯೆಳ್ಳಿಗೆಣ್ಣೆಯ**
ನೆಱೆವರ್ ತಾನಯ್ದು ಬಳ್ಳದಿಮ್ಮನರೆಯಂ
ಅಱುವತ್ತು ಖಂಡುಗೆಳ್ಳಿಗೆ
ಯೆಱೆವೆಣ್ಣೆಯದೆನಿತು ಪೇೞ ಗಣಿತವಿಳಾಸಾ ॥”[೧೫೪]

೬ ಕೊಳಗ ಎಳ್ಳಿಗೆ ೫ ಬಳ್ಳ ಎರಡು ಮಾನ ಎಣ್ಣೆ ಬಂದರೆ ೬೦ ಖಂಡುಗ ಎಳ್ಳಿಗೆ ಎಷ್ಟು ಎಣ್ಣೆಯಾಗುವುದು ಗಣಿತದಲ್ಲಿ ಜಾಣರಾಗಿರುವವರು ಹೇಳಿರಿ? ಎಂದು ರಾಜಾದಿತ್ಯನು ಪ್ರಶ್ನಿಸುತ್ತಾನೆ. ಮುಂದೆ ಅದಕ್ಕೆ ಪರಿಹಾರವನ್ನೂ ಹೇಳುತ್ತಾನೆ:

= ೬ ಕೊಳಗ ಎಳ್ಳಿಗೆ, ೧ ಕೊಳಗ ೧ ಬಳ್ಳದ ಮೇಲೆ ೨ ಮಾನ ಎಣ್ಣೆ

= ೬೦ ಖಂಡುಗಕ್ಕೆ ಎಣ್ಣೆ ಎಷ್ಟು?

= ೧ ಖಂಡುಗಕ್ಕೆ ೨೦ ಕೊಳಗ

= ೧ ಕೊಳಗಕ್ಕೆ ೪ ಬಳ್ಳ

= ೧ ಬಳ್ಳಕ್ಕೆ ೪ ಮಾನ.

ಇವುಗಳ ಆಧಾರದ ಮೇಲೆ–

= ೬೦ * ೨೦ = ೧೨೦೦ ಕೊಳಗ

= ೨೦೦ ಕೊಳಗ + ೨೦೦ ಬಳ್ಳ + ೪೦೦ ಮಾನ

= ೨೦೦ ಕೊಳಗ + ೫೦ ಕೊಳಗ + ೧೦೦ ಬಳ್ಳ

---

೧೫೩. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೧೬ (ತ್ರೈರಾಶಿಕ ಪ್ರಕರಣಂ)
೧೫೪. **ಅದೇ** ; ಪುಟ. ೨೬ (ತ್ರೈರಾಶಿಕ ಪ್ರಕರಣಂ)

= ೨೫೦ ಕೊಳಗ + ೨೦ ಕೊಳಗ

= ೨೭೦ ಕೊಳಗ ಎಳ್ಳೆಣ್ಣೆ ಬರುವುದು

ಅಂದರೆ ಒಟ್ಟು ೬೦ ಖಂಡುಗ ಎಳ್ಳಿಗೆ ೨೭೦ ಕೊಳಗ ಎಣ್ಣೆ ಬರುವುದು.

ಆನೆಯ ಕೂಲಿಯನ್ನು ಲೆಕ್ಕ ಮಾಡುವುದು:

ಸೂತ್ರಂ ೮೨ ॥ **"ದಂತಿಯೊಳೊಂದನೊಂದಿಸಿ ದಿನಂಗಳನೊತ್ತುವುದಾದಿನಂಗಳಂ**
ಸಂತತ ವರ್ಗಿಸುತ್ತೆ ದಿವಸಂಗಳನೊಂದಿಸು ಅರ್ಧಿಸುತ್ತಮಂ
ತಂತದ ನೋದಿಸಲ್ಕುಟಿದ ಶೇಷಮುಮಂ ಗುಣಿಸಂತೆ ಕೂಲಿಯಂ
ದಂತಿಯೊಳಿಂಬಿನಿಂ ತೆಗೆಯೆ ಭಾಸ್ಕರನೋಜೆಯೆ ಬರ್ಕುಮಾಪಳಂ ॥

ಸೂತ್ರಂ ೮೩ ॥ **ಕರಿನೂಱೆಂಟುಮನೆಯ್ದೆ ಕಾವದಿವಸಕ್ಕೊಂದೊಂದು ಗದ್ಯಾಣಮಂ**
ಸ್ಥಿರಮೀವೆಂ ನಿನಗೆಂದದಗ್ಗದ ದಿವಸಕ್ಕೊಂದಾನೆಯಂ ಮಾಱಲಾ
ಕರಿಯಾರೋಹಕನಿಪ್ಪತ್ತಯ್ದು ದೆವಸಂ ಕಾಯ್ದೊಲ್ವೆನೆಂದಾಗಳೀ ಬ
ಬ್ಬರಸಂವಾಜದ ಲೆಕ್ಕಮಂ ತಿಳಿಪಿದಂ ನಿರ್ವ್ಯಾಜದಿಂ ಭಾಸ್ಕರಂ ॥"[೧೫೫]

ಶ್ರೀಮಂತನೊಬ್ಬ ೧೦೮ ಆನೆಗಳನ್ನು ಕಾಯಲು ಒಬ್ಬ ಮಾವುತನನ್ನು ದಿನಕ್ಕೆ ಒಂದು ಗದ್ಯಾಣದಂತೆ ಕೂಲಿಯ ದರದಲ್ಲಿ ನೇಮಿಸುತ್ತಾನೆ. ಆದರೆ ಆತನು ದಿನಕ್ಕೊಂದು ಆನೆಯನ್ನು ಮಾರಾಟ ಮಾಡುತ್ತಾ ಬರುತ್ತಾನೆ. ಹೀಗೆ ೨೫ ದಿನಗಳವರೆಗೆ ಒಂದೊಂದು ಆನೆಯನ್ನು ಮಾರಾಟ ಮಾಡುತ್ತ, ೨೫ ದಿನಗಳಾದ ಮೇಲೆ ಕೆಲಸವು ಬೇಡವೆಂದು ಬಿಟ್ಟನು. ಹಾಗಾದರೆರ ಆ ಮಾವುತನ ಕೆಲಸಕ್ಕೆ ಆ ಶ್ರೀಮಂತನು ಎಷ್ಟು ಕೊಡಬೇಕು? ಎಂಬುದು ಪ್ರಶ್ನೆ.

೧೦೮ ಆನೆಗಳನ್ನು ಕಾಯಲು ಒಂದು ೧ ಗದ್ಯಾಣ ಕೂಲಿ. ಆದರೆ ಮಾವುತನು ಮೊದಲ ದಿನ ಮಾತ್ರ ೧೦೮ ಆನೆಗಳನ್ನು ಕಾಯುತ್ತಾನೆ. ಮರುದಿನದಿಂದ ಒಂದೊಂದು ಆನೆಯು ಕಡಿಮೆಯಾಗುತ್ತ ಹೋಗುತ್ತಾನೆ. ೧೦೮, ೧೦೭, ೧೦೬, ೧೦೫, ೧೦೪ ಹೀಗೆಯೇ ೨೫ನೇ ದಿನ ಕೇವಲ ೮೪ ಆನೆಗಳು ಮಾತ್ರ ಉಳಿಯುತ್ತವೆ. ಮಾವುತನ ಕೂಲಿಯೂ ಇದೇ ರೀತಿಯಲ್ಲಿಯೇ ಆಗಬೇಕು. ಅದಕ್ಕೆ ರಾಜಾದಿತ್ಯನ ಸುಲಭ ಸೂತ್ರ ಹೀಗಿದೆ :

೧೦೮ ಆನೆಗಳಿಗೆ ೨೫ ದಿನಕ್ಕೆ ಕೊಡಬೇಕಾದ ಕೂಲಿಯ ಮೊತ್ತವನ್ನು ಕಂಡುಕೊಳ್ಳಲು ೧೦೮ ಕ್ಕೆ ೧ ನ್ನು ಸೇರಿಸಬೇಕು. ನಂತರ ೨೫ ರಿಂದ ಗುಣಿಸಬೇಕು.

= ೧೦೮ + ೧ = ೧೦೯

= ೧೦೯ * ೨೫ = ೨೭೨೫

ಅಂದರೆ ಮಾವುತನ ೨೫ ದಿನಗಳ ಕೂಲಿ ೨೭೨೫ ಗದ್ಯಾಣವಾಗುತ್ತದೆ. ಆದರೆ ದಿನಕ್ಕೆ ಒಂದೊಂದು ಆನೆ ಕಡಿಮೆಯಾಗುತ್ತ ಬರುವುದನ್ನು ಒಟ್ಟು ಮೊತ್ತದಲ್ಲಿ ೨೫ರ ವರ್ಗದ ಮೊತ್ತವನ್ನು ಕಳೆಯಬೇಕು ಎಂದು ಪರಿಹಾರವನ್ನು ನೀಡುತ್ತಾನೆ.

---

೧೫೫. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ ;** ಪುಟ. ೯೧ (ಪಂಚ, ಸಪ್ತ, ನವರಾಶಿ ಪ್ರಕರಣಂ)

$೨೫^{೨}$ = ೨೨೫

= ೨೭೨೫ – ೨೨೫

= ೨೫೦೦

ಅಂದರೆ ಮಾವುತನಿಗೆ ನೀಡಬೇಕಾದ ಒಟ್ಟು ಕೂಲಿಯ ಮೊತ್ತ ೨೫೦೦ ಗದ್ಯಾಣ ಆಗುತ್ತದೆ.

ಪಂಚಸಪ್ತ ನವರಾಶಿ ಪ್ರಕರಣದಲ್ಲಿ ರಾಜಾದಿತ್ಯನು ಬಡ್ಡಿ, ಚಕ್ರಬಡ್ಡಿಗಳನ್ನು ಚರ್ಚಿಸಿದ್ದಾನೆ.

“ಪಂಚಕ ಶತಲೆಕ್ಕದೊಳಂ
ಕಾಂಚನ ವಱುವತ್ತದರ್ಕ್ಕೆ ವೃದ್ಧಿಗಳೇನೋ
ವಂಚಿಸದೆ ಪೇಟಿ ವರುಷದ
ಕಾಂಚನವನಿತೆಂಬುದನು ಪೇಟಿ ಗಣಿತವಿಳಾಸಾ ॥೫.೨॥”[೧೫೬]

ಅಂದರೆ, ೧೦೦ ಗದ್ಯಾಣಕ್ಕೆ ಒಂದು ತಿಂಗಳಿಗೆ ೫ ಗದ್ಯಾಣ ಬಡ್ಡಿಯಾದರೆ, ೬೦ ಗದ್ಯಾಣಕ್ಕೆ ಒಂದು ವರ್ಷಕ್ಕೆ ಆಗುವ ಬಡ್ಡಿಯೆಷ್ಟು?

ಪರಿಹಾರ:

ಬಡ್ಡಿದರ = ೧೦೦ ಗ.ಕ್ಕೆ ೫ ಗ. ಕಾಲಾವಧಿ = ೧ ತಿಂಗಳು

ಅಸಲು = ೬೦ ಗ. ಕಾಲಾವಧಿ = ೧ ವರ್ಷ

ಮೊದಲು ೬೦ ಗ. ಕ್ಕೆ ಒಂದು ತಿಂಗಳ ಬಡ್ಡಿಯನ್ನು ಕಂಡುಹಿಡಿಯಬೇಕು.

$$= \frac{೬೦ * ೫}{೧೦೦} = ೩$$

ಅಂದರೆ ತಿಂಗಳಿಗೆ ೬೦ ಗದ್ಯಾಣಕ್ಕೆ ೩ ಗದ್ಯಾಣ ಬಡ್ಡಿಯಾಗುತ್ತದೆ.

= ೩ * ೧೨ = ೩೬

ಅಂದರೆ ಒಂದು ವರ್ಷಕ್ಕೆ ೬೦ ಗದ್ಯಾಣಕ್ಕೆ ೩೬ ಗದ್ಯಾಣ ಬಡ್ಡಿಯಾಗುತ್ತದೆ.

ಹೀಗೆಯೇ ಇಡೀ ‘ವ್ಯವಹಾರ ಗಣಿತ’ ಗ್ರಂಥದುದ್ದಕ್ಕೂ ಸುಮಾರು ೫೦೦ ಸಮಸ್ಯೆಗಳಿಗೆ ಉತ್ತರಗಳನ್ನು ನೀಡುತ್ತಾನೆ ರಾಜಾದಿತ್ಯ. ಹೀಗೆ ಧಾನ್ಯ, ಪ್ರಾಣಿಗಳು, ಪಕ್ಷಿಗಳು ತಿನ್ನುವ ಹಣ್ಣಿನ ಸಂಖ್ಯೆ, ಅಡಿಕೆ, ಜೋಳ, ತೊಗರಿ, ದೂರ, ಕಸ್ತೂರಿ, ಕರ್ಪೂರ, ಶ್ರೀಗಂಧ, ಕುಂಕುಮ, ಅರಿಸಿಣಗಳನ್ನು ತೊಲದ ತೂಕದಗಲ್ಲಿ ಅಳೆದು ಅದಕ್ಕೆ ಹಣದ ಮೌಲ್ಯವನ್ನು ಲೆಕ್ಕಾಚಾರ ಮಾಡುತ್ತಾನೆ. ಅಂದರೆ ಚಿನ್ನವನ್ನೂ ಸೇರಿದಂತೆ ಬೆಲೆಬಾಳುವ ವಸ್ತುಗಳನ್ನು ತೂಕದಲ್ಲಿ ಮಾಪನ ಮಾಡುತ್ತಿದ್ದರೆ, ಧಾನ್ಯಗಳನ್ನು ಬಳ್ಳ, ಕೊಳಗಗಳ ಅಳತೆಯಲ್ಲಿ ಮಾಪನ ಮಾಡುತ್ತಿದ್ದರು. ಇದೇ ರೀತಿಯಾಗಿ ವಿವಿಧ ರೀತಿಯ ೭೪ ಸೂತ್ರಗಳ ಮೂಲಕ ಲೆಕ್ಕಗಳನ್ನು ರಾಜಾದಿತ್ಯನು ತ್ರೈರಾಶಿಕ ಪ್ರಕರಣದಲ್ಲಿ ನೀಡಿದ್ದಾನೆ.

---

೧೫೬. ಡಾ. (ಶ್ರೀಮತಿ) ಪದ್ಮಾವತಮ್ಮ, ಶ್ರೀಮತಿ ಕೃಷ್ಣವೇಣಿ, ಶ್ರೀ ಕೆ. ಜಿ. ಪ್ರಕಾಶ್ : **ಶ್ರೀ ರಾಜಾದಿತ್ಯ ವಿರಚಿತ ವ್ಯವಹಾರ ಗಣಿತ ಮತ್ತು ಲೀಲಾವತಿ** ; ಪುಟ. ೧೯೩

ಪಂಚರಾಶಿ, ಸಪ್ತರಾಶಿ, ನವರಾಶಿ ಮುಂತಾದ ವಿವಿಧ ರೀತಿಯ ಅನುಪಾತಗಳಿಗೆ ಪ್ರಶ್ನೆಗಳನ್ನು ನೀಡಿದ್ದಾನೆ. ಅಂತೆಯೇ "ಬೆಸ್ತರಾಶಿ (Inverse Proportion) ಹಾಗೂ ನಿಷ್ಪತ್ತಿಗಳಿಗೆ ಅನುಸಾರವಾಗಿ ವಿಭಜನೆಗೆ (Proportinate Division) ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ನೀಡಲಾಗಿವೆ."[೧೫೭] ಮುಂದುವರೆದು, ಲಾಭನಷ್ಟ, ಬಡ್ಡಿ, ಚಕ್ರಬಡ್ಡಿ, ವೇಗ, ದೂರ ಮುಂತಾದ ವಿಷಯಗಳಿಗೂ ಲೆಕ್ಕಗಳನ್ನು ನೀಡಲಾಗಿದೆ. ಕೂಡುವುದು, ಕಳೆಯುವುದು, ಭಾಗಿಸುವುದು, ಗುಣಿಸುವ ಲೆಕ್ಕಗಳಲ್ಲದೇ ಅಂಕಗಣಿತದ ಸುಪ್ರಸಿದ್ಧ ಶ್ರೇಣಿ ಅಥವಾ ಶ್ರೇಢಿ ಸೂತ್ರಗಳನ್ನೂ ಒಳಗೊಂಡು ಉದಾಹರಣೆಗಳನ್ನು ನೀಡಲಾಗಿದೆ. ಅಲ್ಲದೇ ವ್ಯಸ್ತತ್ರಯರಾಶಿ, ಸಹಜನವರಾಶಿ, ಸಹತ್ರಯರಾಶಿ, ಸಹಜಪಂಚರಾಶಿ, ಸಹಜಸಪ್ತರಾಶಿ, ವ್ಯಸ್ತಂಚರಾಶಿ, ಬಣ್ಣಾಂತರದ ಸೂತ್ರ, ಹೊದೆಯಂಬಿನ ಸೂತ್ರ, ತೂಬಿನ ಸೂತ್ರ, ಕೂಲಿಯ ಲೆಕ್ಕಾಚಾರ, ಇತ್ಯಾದಿಗಳನ್ನೂ ರಾಜಾದಿತ್ಯನು ಈ ಗ್ರಂಥದಲ್ಲಿ ಚರ್ಚಿಸಿದ್ದಾನೆ.

೫.೩.೧.೨. ವ್ಯವಹಾರರತ್ನ :

ರಾಜಾದಿತ್ಯನು ರಚಿಸಿರುವ 'ವ್ಯವಹಾರತ್ನ' ಗ್ರಂಥವು ಅಸಮಗ್ರವಾಗಿ ಲಭ್ಯವಾಗಿದೆ. ಆರ್. ನರಸಿಂಹಾಚಾರ್ಯರು ರಾಜಾದಿತ್ಯನ ಪೂರ್ವಾಪರ ವಿಚಾರಗಳನ್ನು ತಿಳಿಸುವಲ್ಲಿ ಈ ಗ್ರಂಥದಲ್ಲಿನ ಪದ್ಯವೊಂದನ್ನು ತಮ್ಮ ಕವಿಚರಿತೆಯಲ್ಲಿ ಉಲ್ಲೇಖಿಸಿದ್ದಾರೆ.

> **"ನಗಮಪ್ಪಂ ನವಮರ್ಕದಿಙ್ಮನುದಿನಾಂಭೋರಾಶಿಷಟ್ಪಂಚಸಂ**
> **ಖ್ಯೆಗಳಂ ವರ್ತನೆಗೊಳ್ವ ವಂದಿಜನಮೀರಯ್ದರ್ಕಮೌದಾರ್ಯವೀ**
> **ರ್ಯೆಗುಣಂ ವಿಷ್ಣುನೃಪಾಲನಿತ್ತನೊಸೆದಿನ್ನೂಱುಕೋಟಿಪ್ಪೊನ್ನ ಮತ್ತೆವಲ್ಲವಂ**
> **ದಿಗಲೋರೋರ್ವರ ಭಾಗಕೇನಹುದು ಮತ್ತೇನಕ್ಕುಮೋ ಭಾಸ್ಕರಾ ॥"**[೧೫೮]

ಈ ಗ್ರಂಥದಲ್ಲಿ 'ವ್ಯವಹಾರ ಗಣಿತ'ದಲ್ಲಿರುವಂತೆಯೇ ಹಲವಾರು ವ್ಯವಹಾರಿಕ ಲೆಕ್ಕಾಚಾರದ ಸಮಸ್ಯೆಗಳ ಕುರಿತು ರಾಜಾದಿತ್ಯನು ಚರ್ಚಿಸಿರಬಹುದು ಎಂದು ಊಹಿಸಬಹುದಾಗಿದೆ.

೫.೩.೧.೩. ಕ್ಷೇತ್ರಗಣಿತ :

'ಕ್ಷೇತ್ರಗಣಿತ' ರಾಜಾದಿತ್ಯನು ಬರೆದಿರುವ ಇನ್ನೊಂದು ಗಣಿತ ಗ್ರಂಥವಿದು. ಈ ಕೃತಿಯಲ್ಲಿ ರೇಖಾಗಣಿತವನ್ನು ಆಧರಿಸಿ, ಭೂಮಿಯನ್ನು ಅಳತೆ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ತಿಳಿಸಲಾಗಿದೆ. ಈ ಗ್ರಂಥವನ್ನು ಮಹಾವೀರಾಚಾರ್ಯರ ಸಂಸ್ಕೃತದ 'ಗಣಿತಸಾರ ಸಂಗ್ರಹ' ಕೃತಿಯ ೭ನೇ ಅಧ್ಯಾಯವನ್ನು ಅನುಸರಿಸಿ ರಚಿಸಿದಂತೆ ತೋರುತ್ತದೆ. ಮಹಾವೀರಾಚಾರ್ಯರು ತಮ್ಮ ಗ್ರಂಥದ ೭ನೇ ಅಧ್ಯಾಯದಲ್ಲಿ 'ಕ್ಷೇತ್ರಗಣಿತ ವ್ಯವಹಾರ' ಕುರಿತಾಗಿ ಉದಾಹರಣೆಗಳ ಮೂಲಕ ಸುಧೀರ್ಘವಾದ ಲೆಕ್ಕಾಚಾರಗಳನ್ನು ಮಾಡಿದ್ದಾರೆ. ಇಷ್ಟನ್ನು ಹೊರತುಪಡಿಸಿದರೆ ರಾಜಾದಿತ್ಯನ 'ಕ್ಷೇತ್ರಗಣಿತ'ದ ಕುರಿತಾಗಿ ಹೆಚ್ಚಿನ ಮಾಹಿತಿಗಳು ಲಭಿಸುವುದಿಲ್ಲ.

---

೧೫೭. ಎಂ. ಮರಿಯಪ್ಪ ಭಟ್ಟ (ಸಂ) : **ವ್ಯವಹಾರಗಣಿತಂ** ; ಪುಟ. ೦೫ (ಮುನ್ನುಡಿ)
೧೫೮. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೩೩೨

ಅಲ್ಲದೇ ಗ್ರಂಥವು ಅಸಮಗ್ರವಾಗಿ ದೊರೆತಿರುವುದು ಖೇದಕರ. ಉಪಲಬ್ಧ ಹಸ್ತಪ್ರತಿಯನ್ನನುಸರಿಸಿ ಕವಿಚರಿತೆಕಾರರು ಈ ಕೆಳಗಿನ ಪದ್ಯಗಳನ್ನು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

"ವೃತ್ತಾಕಾರದ ಭೂಮಿಯ
ಸುತ್ತಳೆದರ್ಧಮನೆ ಬಿಡುವುದುಟೆದರ್ಧದೊಳಂ
ಮತ್ತೆರಡು ಭಾಗಮಾಡಿಯೆ
ಮತ್ತೊಂದಱಿಕೊಳೊಂದನೊತ್ತೆ ಕಂಭ ಬರ್ಕುಂ ॥

ಅತಿವೃತ್ತಮರ್ಧಚಂದ್ರಾ
ಕೃತಿಯಾಗಿರೆ ಕ್ಷೇತ್ರಮದಱಿಕೊಳೊಂದಂ ಕೊಂಡಾ
ಗತಿಭಾಗೆಯೊಳೊಂದಂ ಕೊಂ
ಡತಿಶಯದಿಂ ರವಿಯ ಗುಣಿಸೆ ಸಪಪದಮಕ್ಕುಂ ॥

ವೃತ್ತದ ವಳಯಮನಳೆದಾ
ಮೊತ್ತದ ಗುಣದಿಂದ ಮೆತ್ತಿಬಂದಾ ಲಬ್ಧಮ
ನೊತ್ತುತೆ ತನ್ನಿಂ ತನ್ನಂ
ಬಿತ್ತರದಿಂ ಗತಿಯೊಳೆತ್ತೆ ಬಂದುದು ಕಂಭಂ ॥"[೧೫೫]

ಒಂದು ಚತುರ್ಭುಜಾಕಾರದ ಕ್ಷೇತ್ರವನ್ನು ಅಳೆಯಬೇಕಾದ ಸಂದರ್ಭದಲ್ಲಿ ಸುಲಭವಾಗಿ ಲೆಕ್ಕಾಚಾರ ಮಾಡಬಹುದು. ಆದರೆ ವೃತ್ತಾಕಾರದ ಕ್ಷೇತ್ರವನ್ನು ಅಳತೆ ಮಾಡುವಾಗ ಕಷ್ಟವಾಗುವುದು. ಅದಕ್ಕೆ ರಾಜಾದಿತ್ಯನು ಹಲವಾರು ಸುಲಭೋಪಾಯಗಳನ್ನು ಈ ಅಧ್ಯಾಯದಲ್ಲಿ ತಿಳಿಸಿದ್ದಾನೆ.

ವೃತ್ತದ ಪರಿಧಿಯನ್ನು ಅಳೆದು, ಅಷ್ಟೇ ಮೊತ್ತದಿಂದ ಅದನ್ನು ಗುಣಿಸಬೇಕು. ಬಂದ ಮೊತ್ತಕ್ಕೆ ಅದೇ ಮೊತ್ತವನ್ನು ಸೇರಿಸಬೇಕು. ನಂತರ ಅದನ್ನು ನಾಲ್ಕರಿಂದ ಭಾಗಿಸಬೇಕು. ಹೀಗೆ ಮಾಡಿದಾಗ ಬರುವ ಲಬ್ಧವೇ ಆ ವೃತ್ತದ ಕ್ಷೇತ್ರಫಲ (ಕಂಭ).

ಕ್ಷೇತ್ರದ ಸುತ್ತಳತೆ ೪೨೫ ಎಂದು ಇಟ್ಟುಕೊಂಡರೆ –

$೪೨೫^೨$ = ೪೨೫ * ೪೨೫

= ೧೮೦೬೨೫

ನಿಯಮದಂತೆ = ೧೮೦೬೨೫ + ೧೮೦೬೨೫

= ೩೬೧೨೫೦ ಈ ಮೊತ್ತವನ್ನು ನಾಲ್ಕರಿಂದ ಭಾಗಿಸಬೇಕು.

ಕ್ಷೇತ್ರಫಲ = ೯೦೩೧೨.೫

ಇನ್ನುಳಿದಂತೆ, ಚತುರ್ಭುಜ, ತ್ರಿಭುಜ, ಅರ್ಧವೃತ್ತ, ದ್ವಿದ್ವಿಸಮಚತುರ್ಭುಜ, ವಿಷಮಚತುರ್ಭುಜ, ನಿಮ್ನವೃತ್ತ, ಉನ್ನತವೃತ್ತ, ಆಯತವೃತ್ತ, ಉಂಗುರದ ಒಳವಲಯ, ಉಂಗುರದ ಹೊರವಲಯ, ಶಂಖಾಕೃತಿ ಮುಂತಾದವುಗಳ ಕ್ಷೇತ್ರಫಲವನ್ನು ಕಂಡುಹಿಡಿಯುವ ಬಗೆಯನ್ನು ಮಹಾವೀರಾಚಾರ್ಯರು ತಮ್ಮ ಗಣಿತಸಾರ ಸಂಗ್ರಹದಲ್ಲಿ ತಿಳಿಸಿದ್ದಾರೆ. ಆದರೆ

೧೫೫. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೩೩೭

ರಾಜಾದಿತ್ಯನ 'ಕ್ಷೇತ್ರಗಣಿತ' ಸಮಗ್ರವಾಗಿ ದೊರೆಯದ ಕಾರಣ ಈ ಗ್ರಂಥದಲ್ಲಿ ವಿವಿಧಾಕೃತಿಗಳ ಕ್ಷೇತ್ರಫಲ ಕಂಡುಹಿಡಿಯುವ ಬಗೆಗಳ ಕುರಿತಾಗಿ ತಿಳಿದುಬರುವುದಿಲ್ಲ.

೫.೩.೧.೪. ಲೀಲಾವತಿ :

ರಾಜಾದಿತ್ಯನು ರಚಿಸಿರುವ ಇನ್ನೊಂದು ಗಣಿತಶಾಸ್ತ್ರ ಗ್ರಂಥ 'ಲೀಲಾವತಿ'. ಈ ಗ್ರಂಥವು ಪದ್ಯರೂಪದಲ್ಲಿದೆ. ಪ್ರಸಿದ್ಧ ಗಣಿತ ಶಾಸ್ತ್ರಜ್ಞ ಹಾಗೂ ಖಗೋಳಶಾಸ್ತ್ರಜ್ಞನಾದ ಭಾಸ್ಕರಾಚಾರ್ಯನು ತನ್ನ ಮಗಳ ವಿನೋದಕ್ಕಾಗಿ ರಚಿಸಿರುವ ಸಂಸ್ಕೃತ 'ಲೀಲಾವತಿ' ಗ್ರಂಥವನ್ನು ಅನುಸರಿಸಿ ರಾಜಾದಿತ್ಯನು ಈ ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ಮೋಜಿನ ಗಣಿತವನ್ನು ವಿಶ್ಲೇಷಿಸಲಾಗಿದೆ. ಒಂದು ಸಂಖ್ಯೆಗೂ ಮೋಜಿನ ಗಣಿತದ ಮೂಲದ ಸಂಖ್ಯಾವರ್ಗವನ್ನೂ, ಸಂಖ್ಯಾ ವಿಶಿಷ್ಟ ಗುಣಗಳನ್ನೂ ವಿಶ್ಲೇಷಿಸಲಾಗಿದೆ.

೮	೧	೬	೧೫
೩	೫	೭	೧೫
೪	೯	೨	೧೫
೧೫	೧೫	೧೫	

[೧೬೦]

೧೭	೨೪	೧	೮	೧೫	೬೫
೨೩	೫	೭	೧೪	೧೬	೬೫
೪	೬	೧೩	೨೦	೨೨	೬೫
೧೦	೧೨	೧೯	೨೧	೩	೬೫
೧೧	೧೮	೨೫	೨	೯	೬೫
೬೫	೬೫	೬೫	೬೫	೬೫	

[೧೬೧]

ಇವೆರಡೂ ಕೋಷ್ಟಕಗಳಲ್ಲಿ ಲಂಬವಾಗಿ ಹಾಗೂ ಅಡ್ಡವಾಗಿ ಲೆಕ್ಕ ಮಾಡಿದರೂ ಮೊತ್ತ ಒಂದೇ ಆಗಿರುತ್ತದೆ.

೫.೩.೧.೫. ಚಿತ್ರಹಸುಗೆ :

"ಈ ಗ್ರಂಥವು ಸೂತ್ರ ಟೀಕಾರೂಪದಲ್ಲಿದೆ."[೧೬೨] ಈ ಗ್ರಂಥವು ಅನುಪಲಬ್ದವಾಗಿರುವುದು. ಇದರಲ್ಲಿ ಚಿತ್ರಗಳ ಮೂಲಕ ಗಣಿತದ ವಿಚಾರಗಳನ್ನು ತಿಳಿಸಿರಬಹುದೆಂದು ಊಹೆ. ಆದುದರಿಂದಲೇ ರಾಜಾದಿತ್ಯನು ಈ ಗ್ರಂಥಕ್ಕೆ 'ಚಿತ್ರಹಸುಗೆ' ಎಂದು ಹೆಸರಿಸಿರಬಹುದು.

---

೧೬೦. ಡಾ. (ಶ್ರೀಮತಿ) ಪದ್ಮಾವತಮ್ಮ, ಶ್ರೀಮತಿ ಕೃಷ್ಣವೇಣಿ, ಶ್ರೀ ಕೆ. ಜಿ. ಪ್ರಕಾಶ್ : **ಶ್ರೀ ರಾಜಾದಿತ್ಯ ವಿರಚಿತ ವ್ಯವಹಾರ ಗಣಿತ ಮತ್ತು ಲೀಲಾವತಿ** ; ಪುಟ. ೧೩೫

೧೬೧. **ಅದೇ** ; ಪುಟ. ೪೩೭

೫.೩.೧.೬. ಜೈನಗಣಿತ ಸೂತ್ರೋದಾಹರಣ :

ರಾಜಾದಿತ್ಯನು ಬರೆದಿರುವ ಇನ್ನೊಂದು ಗಣಿತಶಾಸ್ತ್ರ ಗ್ರಂಥ 'ಜೈನಗಣಿತ ಸೂತ್ರೋದಾಹರಣ'. ಗ್ರಂಥವು ಸಂಪೂರ್ಣವಾಗಿ ಲಭ್ಯವಾಗಿಲ್ಲ. ಈ ಕೃತಿಯಲ್ಲಿನ ಪದ್ಯವೊಂದನ್ನು ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯಲ್ಲಿ ಉಲ್ಲೇಖಿಸಿದ್ದಾರೆ.

"ಶ್ರೀಮದವಿಚಳಿತಲಕ್ಷ್ಮೀ
ಪ್ರೇಮಂ ತ್ರೈಲೋಕ್ಯಧಾಮನಾನತಶಕ್ರಂ
ಸೋಮಂ ಸ್ವಾಧಿನಮುಖಂ
ನೇಮಿಜಿನಂ ಮಾಟಿಕ್ಕೆ ನಮಗೆ ಬೋಧೋದಯಮಂ ||"[೧೬೩]

ರಾಜಾದಿತ್ಯನು 'ವ್ಯವಹಾರ ಗಣಿತ'ದಲ್ಲಿ ನೆನೆದಿರುವಂತೆಯೇ ನೇಮಿನಾಥ ತೀರ್ಥಂಕರರನ್ನು ಮನಸಾರೆ ಸ್ಮರಿಸಿಕೊಂಡಿದ್ದಾನೆ.

ನಿತ್ಯ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಲೆಕ್ಕಾಚಾರ ಮಾಡಬೇಕಾದ ಸಂದರ್ಭ ಮನುಷ್ಯನಿಗೆ ಎದುರಾಗುತ್ತದೆ. ಅದಕ್ಕೆ ಅನುಕೂಲಕರವಾಗುವ ನಿಟ್ಟಿನಲ್ಲಿ ರಾಜಾದಿತ್ಯನು ತನ್ನ ಗಣಿತಶಾಸ್ತ್ರ ಗ್ರಂಥಗಳನ್ನು ರಚಿಸಿದ್ದಾನೆ. ಅದಕ್ಕಾಗಿಯೇ ನಿತ್ಯ ವ್ಯವಹಾರದ ಉದಾಹರಣೆಗಳನ್ನೇ ನಿಡುವ ಮೂಲಕ ತನ್ನ ಗ್ರಂಥಗಳನ್ನು ನಿರೂಪಿಸಿದ್ದಾನೆ.

೫.೪. ಪಾಕಶಾಸ್ತ್ರ :

ಮನುಷ್ಯ ಮೊದಮೊದಲು ಭೂಮಿಯ ಮೇಲೆ ಜನ್ಮತಳೆದ ಮೇಲೆ ಗೆಡ್ಡೆ ಗೆಣಸುಗಳನ್ನು, ಹಸಿಮಾಂಸವನ್ನೂ ತಿನ್ನುತ್ತಿದ್ದನು. ಕಾಲಾಂತರದಲ್ಲಿ ಕಾಡಿನಲ್ಲಿನ ಮರಗಳ ಘರ್ಷಣೆಯಿಂದ ಕಾಳ್ಗಿಚ್ಚು ಆವರಿಸಿ ಕಾಡಿನಲ್ಲಿದ್ದ ಮರಗಳಿಗೆ ಬೆಂಕಿ ಹೊತ್ತಿಕೊಂಡಿತು. ಆಗ ಆ ಬೆಂಕಿಯಲ್ಲಿ ಹಲವಾರು ಪ್ರಾಣಿಗಳು, ಸಸ್ಯಗಳು ಸುಟ್ಟು ಕರಕಲಾದವು. ಈ ಕಾಳ್ಗಿಚ್ಚಿನಿಂದ ಹೇಗೋ ತಪ್ಪಿಸಿಕೊಂಡ ಮನುಷ್ಯ ಆಹಾರ ಸಿಗದೇ ಅಲ್ಲಿ ಸುಟ್ಟು ಬಿದ್ದ ಪ್ರಾಣಿಗಳನ್ನೂ, ಸಸ್ಯಗಳನ್ನೂ ತಿಂದಾಗ ಅದು ಹಸಿಯಾಗಿ ತಿನ್ನುವ ಆಹಾರಕ್ಕಿಂತಲೂ ರುಚಿಯೆನಿಸಿತು. ನಂತರ ಆ ಕಾಳ್ಗಿಚ್ಚಿನಿಂದಲೇ ಬೆಂಕಿ ಹೊತ್ತಿಸುವ ಮತ್ತು ಆಹಾರ ಬೇಯಿಸುವ ಕ್ರಮಗಳನ್ನು ಅರಿತುಕೊಂಡ ಎಂಬ ವಿಚಾರಗಳು ಸರ್ವವಿದಿತವಾಗಿವೆ.

ಹೀಗೆ ಆಹಾರವನ್ನು ಬೇಯಿಸುವುದನ್ನು ಕಲಿತುಕೊಂಡ ಮನುಷ್ಯ, ತನ್ನ ನಾಲಿಗೆಯ ಸವಿಗೆ ಹಲವಾರು ಖಾದ್ಯಗಳನ್ನು ಕಂಡುಕೊಳ್ಳುತ್ತಾನೆ. ಇಂತಹ ಖಾದ್ಯಗಳನ್ನು ಮಾಡುವುದರಲ್ಲಿ ನಳ ಮತ್ತು ಭೀಮರು[೧೬೪] ನಿಶ್ಣಾತರಾಗಿದ್ದರು ಎಂಬುದು ಪುರಾಣೋಕ್ತ ಅಂಶವಾಗಿದೆ. ಅದಕ್ಕಾಗಿಯೇ

---

೧೬೨. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೩೩೭

೧೬೩. ಆರ್. ನರಸಿಂಹಾಚಾರ್ಯ : **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೩೩೭

೧೬೪. **ನಿಷಧ ರಾಜ್ಯದ ನಳ** ಮಹಾರಾಜನು ದಮಯಂತೀ ಸ್ವಯಂವರದ ಸಂದರ್ಭದಲ್ಲಿ ದಿಕ್ಪಾಲಕರಿಂದ ಪಡೆದ ವರದ ಬಲದಿಂದ ಬೆಂಕಿ ಮತ್ತು ನೀರು ಇಲ್ಲದೆಯೇ ಅಡುಗೆ ಮಾಡಿ ಜಯಶಾಲಿಯಾಗಿದ್ದನು.
ದ್ವಿತೀಯ ಪಾಂಡವ ಭೀಮಸೇನನು ಅಜ್ಞಾತವಾಸದ ಸಂದರ್ಭದಲ್ಲಿ ವಿರಾಟರಾಜನ ಅಡುಗೆ ಮನೆಯ ಜವಾಬ್ದಾರಿಯನ್ನು ಪಡೆದುಕೊಂಡಿದ್ದನು.

ಅವರು ಅಂದು ಮಾಡಿದ ಅಡುಗೆ ಇಂದಿಗೂ ನಳಪಾಕ ಮತ್ತು ಭೀಮಪಾಕ ಎಂದೇ ಖ್ಯಾತಿಯನ್ನು ಪಡೆದಿವೆ.

ಇಲ್ಲಿ **'ಪಾಕ'** ಎಂಬ ಪದಕ್ಕೆ ಅಡಿಗೆ, ಅನ್ನ ಮೊದಲಾದವುಗಳನ್ನು ಬೇಯಿಸುವುದು ಎಂದು ಅರ್ಥವಾಗುತ್ತದೆ.[೧೬೫] ಅಂದರೆ ಅಡುಗೆ ಮಾಡುವ ಕಲೆ. ಪ್ರಾಚೀನ ಕಾಲದ ೬೪ ಕಲೆಗಳಲ್ಲಿ ಪಾಕ ವಿದ್ಯೆಯೂ ಒಂದಾಗಿತ್ತು.[೧೬೬] ಇದಕ್ಕೆ 'ಸೂದಕರ್ಮ' ಎಂಬ ಹೆಸರೂ ಇದೆ. "ಹೇಮಚಂದ್ರನ ಕೋಶದಲ್ಲಿ ಅಡುಗೆಮನೆಯನ್ನು 'ಸೂದಶಾಲಾ' ಎನ್ನಲಾಗಿದೆ. ಪಾಕಶಾಸ್ತ್ರ ತಜ್ಞನನ್ನು ಮತ್ಸ್ಯಪುರಾಣದಲ್ಲಿ 'ಅನಾಹಾರ್ಯಃ ಶುಚಿರ್ದಕ್ಷಃ ಚಿಕಿತ್ಸಿತವಿದಾಂ ವರಃ। ಸೂದಶಾಸ್ತ್ರವಿಶೇಷಜ್ಞಃ ಪ್ರಶಸ್ಯತೇ ॥' ವರ್ಣಿಸಲಾಗಿದೆ."[೧೬೭] ಇನ್ನೂ ಪಾಕವಿದ್ಯೆಯನ್ನು ತಿಳಿಸುವ ಶಾಸ್ತ್ರವನ್ನು 'ಸೂಪಶಾಸ್ತ್ರ', 'ಪಾಕಶಾಶ್ತ್ರ' ಎನ್ನಲಾಗುತ್ತದೆ. "ಸೂಪ ಎಂದರೆ ಉಪ್ಪು, ಹುಳಿ, ಖಾರಗಳಿಂದ ಕೂಡಿ ಉಪಯೋಗಿಸಲು ಸಿದ್ಧಪಡಿಸಿರುವ ಪಕ್ವವಾದ ಬೇಳೆ. ಇದನ್ನೇ 'ತೊವ್ವೆ' ಎಂದು ಕರೆಯುವುದು. ಇದಕ್ಕೆ ಸಂಬಂಧಪಟ್ಟ ಶಾಸ್ತ್ರವೇ 'ಸೂಪಶಾಸ್ತ್ರ'ವಾಗಿದೆ. ಸೂಪ ಎಂದರೆ ಅಡಿಗೆ, ಪಾಕ ಎಂಬರ್ಥವನ್ನು ನೀಡುತ್ತದೆ. ಆದುದರಿಂದ ಅಡುಗೆಯ ಶಾಸ್ತ್ರವನ್ನು ಸೂಪಶಾಸ್ತ್ರ ಎನ್ನಲಾಗುತ್ತದೆ."[೧೬೮]

ಅಡುಗೆ ತಯಾರಿಸುವಲ್ಲಿ ಹೆಸರು ಪಡೆದು ಖ್ಯಾತರಾದ ನಳ ಮತ್ತು ಭೀಮಸೇರನ ಹೆಸರಿನಲ್ಲಿ ಸೂಪಶಾಸ್ತ್ರ ಗ್ರಂಥಗಳು ಸಂಸ್ಕೃತದಲ್ಲಿವೆ. ಆದರೆ ಅವುಗಳ ಕರ್ತೃ ವಿಚಾರದ ಕುರಿತು ಯಾವುದೇ ಮಾಹಿತಿ ಲಭಿಸುವುದಿಲ್ಲ. ಅದನ್ನು ಹೊರತುಪಡಿಸಿದರೆ ಚಾವುಂಡಾರಾಯ (೧೦೨೫) ವಿರಚಿತ ವಿಶ್ವಕೋಶವೆನಿಸಿರುವ 'ಲೋಕೋಪಕಾರ' ಗ್ರಂಥದಲ್ಲಿ 'ಸೂಪಶಾಸ್ತ್ರಾಧಿಕಾರ' ಎಂಬ ಅಧ್ಯಾಯವಿದೆ. ಈ ಅಧ್ಯಾಯದಲ್ಲಿ ೫೭ ಪದ್ಯಗಳ ಮೂಲಕ ಸೂಪಶಾಸ್ತ್ರವನ್ನು ನಿರೂಪಿಸಿದ್ದಾನೆ ಕವಿ. ಚಾವುಂಡರಾಯನ ತರುವಾಯ ಜೈನಕವಿಯಾದ ಮೂರನೆಯ ಮಂಗರಸ (೧೫೦೮)ನು ಕನ್ನಡದಲ್ಲಿ ರಚಿಸಿದ 'ಸೂಪಶಾಸ್ತ್ರ'ವೇ ಪಾಕಕಲೆಗೆ ಸಂಬಂಧಿಸಿದ ಅಧಿಕೃತ ಗ್ರಂಥವಾಗಿದೆ.

೫.೪.೧. ಮೂರನೆಯ ಮಂಗರಸ (೧೫೦೮):

"ಮಂಗರಸನು ಜೈನಕವಿ. ಇವನ ಪಿತಾಮಹನು ಮಾಧವ. ತಂದೆ ಯದುವಂಶದ ಉದ್ಭವಕುಲ ಶಾರ್ದೂಲಾಂಕನೆನಿಸಿದ, ಹೊಯ್ಸಳ ದೇಶದ ಮಧ್ಯದಲ್ಲಿರುವ ಹೊಸ ವೃತ್ತಿಯ ನಾಡಮಹಾಪ್ರಭು ಕಲ್ಲಹಳ್ಳಿಯ ವಿಜಯಭೂಪಾಲ. ತಾಯಿ ದೇವಿಲೆ. ಗುರುವು ಚಿಕ್ಕಪ್ರಭೇಂದು. ತನ್ನ 'ಸಮ್ಯಕ್ತ್ವಕೌಮುದಿ' ಗ್ರಂಥವನ್ನು ಶಕ ವರ್ಷ ೧೪೩೧ರಲ್ಲಿ ಅಂದರೆ ಕ್ರಿ.ಶ. ೧೫೦೮ರಲ್ಲಿ

---

೧೬೫. ಜಿ. ಎನ್. ಚಕ್ರವರ್ತಿ : **ಸಂಸ್ಕೃತ ಕನ್ನಡ ನಿಘಂಟು** ; ಪುಟ. ೬೩೧

೧೬೬. ನೋಡಿ, **ಅಧ್ಯಾಯ ೨ : ಪ್ರಾಚೀನ ಕಲೆಗಳು** ; ಪುಟ. ೧೯

೧೬೭. ಡಾ. ಜಿ. ರಾಮಕೃಷ್ಣ : **ಭಾರತೀಯ ವಿಜ್ಞಾನದ ಹಾದಿ** ; ಪುಟ. ೩೨೦

೧೬೮. ಎಸ್. ಎನ್. ಕೃಷ್ಣಜೋಯಿಸ್ (ಸಂ) : **ಮಂಗರಸ ವಿರಚಿತ ಸೂಪಶಾಸ್ತ್ರ** ; ಪುಟ. vii, viii (ಉಪೋದ್ಘಾತ)

ಬರೆದು ಮುಗಿಸಿದುದಾಗಿ ತಿಳಿಸಿದ್ದಾನೆ.”[೧೯] ಇದನ್ನೇ ಅನುಸರಿಸಿ ಕವಿಚರಿತೆಕಾರರು ಮಂಗರಸನ ಕಾಲವನ್ನು ೧೫೦೮ ಎಂದು ಉಲ್ಲೇಖಿಸುತ್ತಾರೆ. ಮೂರನೆಯ ಮಂಗರಸನು 'ಜಯನೃಪಕಾವ್ಯ', 'ಶ್ರೀಪಾಲಚರಿತೆ', 'ಪ್ರಭಂಜನ ಚರಿತೆ', 'ಸೂಪಶಾಸ್ತ್ರ', 'ನೇಮಿಜಿನೇಶ ಸಂಗತಿ' ಹಾಗೂ 'ಸಮ್ಯಕ್ತ್ವಕೌಮುದಿ' ಎಂಬ ಉತ್ಕೃಷ್ಟ ಗ್ರಂಥಗಳನ್ನು ರಚಿಸಿದ್ದಾನೆ. ಅದರಲ್ಲಿ 'ಸೂಪಶಾಸ್ತ್ರ'ವು ಪಾಕಕಲೆಯನ್ನು ತಿಳಿಸುವ ಗ್ರಂಥವಾಗಿದೆ. ಈಗಾಗಲೇ ಹೇಳಿದಂತೆ ಸೂಪಶಾಸ್ತ್ರವು ೬೪ ವಿದ್ಯೆಗಳಲ್ಲಿ ಒಂದಾಗಿದೆ.

೫.೪.೧.೧. ಸೂಪಶಾಸ್ತ್ರ:

ಮೂರನೆಯ ಮಂಗರಸನು ರಚಿಸಿರುವ ಸೂಪಶಾಸ್ತ್ರ ಗ್ರಂಥದಲ್ಲಿ ಒಟ್ಟು ೬ ಅಧ್ಯಾಯಗಳಿದ್ದು, ೩೫೮ ಪದ್ಯಗಳಿವೆ. ಕವಿಯು ಕೃತಿಯನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದ್ದಾನೆ. ಕೃತಿಯ ಆಕರದ ಕುರಿತಾಗಿ ಕೃತಿಯುದ್ದಕ್ಕೂ ಕವಿಯು ಎಲ್ಲಿಯೂ ಉಲ್ಲೇಖಿಸಿಲ್ಲ. ಈತನು ಜೈನಕವಿಯಾಗಿರುವುದರಿಂದ ಶಾಕಾಹಾರ ಅಡಿಗೆಗಳನ್ನು ತಯಾರಿಸುವ ವಿಧಾನಗಳನ್ನು ಈ ಗ್ರಂಥದಲ್ಲಿ ತಿಳಿಸಿದ್ದಾನೆ. ಎಸ್. ಎನ್. ಕೃಷ್ಣಜೋಯಿಸ್ ಅವರು ೧೯೬೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಮೊಟ್ಟಮೊದಲ ಬಾರಿಗೆ ಪ್ರಕಟಿಸಿದರು.

ಈ ಗ್ರಂಥದಲ್ಲಿ ಪಿಷ್ಟಪಾಕ, ಪಾನಕ, ಕಳಮಾನ್ನಾದಿ ಪಾಕ, ಹಾಗೂ ೩ ಅಧ್ಯಾಯಗಳಲ್ಲಿ ಶಾಕಪಾಕಗಳನ್ನು ತಿಳಿಸಿದ್ದಾನೆ ಮೂರನೆಯ ಮಂಗರಸ. ಗ್ರಂಥಾರಾಂಭದಲ್ಲಿ ಕವಿಯು ಜಿನಪಾದಾಂಬುಜಗಳಿಗೆ ನಮಿಸಿ, ಚೆಂಗಾಳ್ವ ದಂಡನಾಥನನ್ನು ಸ್ಮರಿಸಿಕೊಂಡಿದ್ದಾನೆ. ನಂತರ ತನ್ನ ತಂದೆ ಯನ್ನು ನೆನೆದುಕೊಂಡಿದ್ದಾನೆ. ನಂತರ ಪ್ರೀತಿಯಿಂದ ವಾರ್ಧಕ ಷಟ್ಪದಿಯನ್ನು ಬಳಸಿಕೊಂಡು ಕನ್ನಡದಲ್ಲಿ ಸೂಪಶಾಸ್ತ್ರವನ್ನು ಬರೆದಿರುವುದಾಗಿ ಹೇಳಿಕೊಂಡಿದ್ದಾನೆ.

> **“ವಸುಧಾವಲಯ ಜೀವಿಗಳ ತನೂರಕ್ಷಣೆಗೆ**
> **ರಸ ರೂಪ ಗಂಧ ಶಬ್ದ ಸ್ಪರ್ಶ ಭೋಗಂಗ**
> **ಳೆಸಕವೇ ಮುಖ್ಯಮಾಪಂಚವಿಧ ವಿಷಯಭೋಗೋಪಭೋಗಂಗಳೊಳಗೆ ।**
> **ರಸನೇಂದ್ರಿಯಂ ತೃಪ್ತಿ ವಡೆಯಲಿಯಪರಸೌಖ್ಯ**
> **ಮುಸುಕುವುದು ನಿಜಮದಟೆನಾಭೋಜ್ಯವಸ್ತುವಂ**
> **ಹಸನಾಗಿ ಪಾಕಮಂ ಮಾಳ್ಪ ವಿವರದ ಶಾಸ್ತ್ರಮಂ ಮನಂಗೊಂಡು ಪೇಳ್ವೆಂ ॥೧.೦೫॥”**[೧೨೦]

ಎಂದು ಪೀಠಿಕಾ ಪದ್ಯದಲ್ಲಿ ಭೂಮಿಯ ಮೇಲಿರುವ ಸಕಲ ಜೀವಿಗಳು ತಮ್ಮ ತಮ್ಮ ರಕ್ಷಣೆಗೆ ರಸ, ರೂಪ, ಗಂಧ, ಶಬ್ದ, ಸ್ಪರ್ಶ ಎಂದು ಐದು ರೀತಿಯ ಜ್ಞಾನೇಂದ್ರಿಯಗಳನ್ನು ಹೊಂದಿವೆ. ಈ ಪಂಚ ಭೋಗೋಪಭೋಗ ಇಂದ್ರಿಯಗಳಲ್ಲಿ ರಸನೇಂದ್ರಿಯವು ತೃಪ್ತಿ ಪಡೆದರೆ ಅಪಾರ ಸೌಖ್ಯವೆನಿಸುವುದು. ಹೀಗಾಗಿ ಈ ನಾಲಗೆಯನ್ನು ತೃಪ್ತಿಪಡಿಸುವಂತೆ ಮಾಡುವ ಪಾಕಶಾಸ್ತ್ರವನ್ನು

---

೧೧೯. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ದ್ವಿತೀಯ ಸಂಪುಟ)** : ಪುಟ. ೧೨೫

೧೨೦. ಡಾ. ಬಿ. ವಿ. ಶಿರೂರ (ಸಂ) : **ಮೂರನೆಯ ಮಂಗರಸ ಸಂಪುಟ : ಸೂಪಶಾಸ್ತ್ರ** ; ಪುಟ. ೮೯೬

ಹೇಳುವುದಾಗಿ ಕವಿ ಮಂಗರಸನು ತಿಳಿಸುತ್ತಾನೆ. ಮುಂದುವರೆದು, ಸಿಹಿ, ಹುಳಿ, ಹುಳಿ, ಖಾರ, ಒಗರು, ಲವಣ ಈ ಷಡ್ರಸಗಳನ್ನು ಒಳಗೊಂಡ ಆಹಾರವನ್ನು ತಯಾರಿಸುವ ಬಗೆಯನ್ನು ನಳ, ಭೀಮ ಹಾಗೂ ಗೌರೀಮತವೆಂಬ ಮೂರು ಪ್ರಕಾರದಲ್ಲಿ ತಿಳಿಸುವುದಾಗಿ ಹೇಳುತ್ತಾನೆ. ಹಾಲು, ತುಪ್ಪ, ಅಂಬಿಲ, ಬೆಂಕಿ ಹಾಗೂ ಬೆಲ್ಲಗಳನ್ನು ಬಳಸಿ ಅಡುಗೆ ಮಾಡುವುದನ್ನು ತಿಳಿಸುತ್ತಾನೆ. ಅಲ್ಲದೇ ಆಹಾರದೊಡನೆ ಆರೋಗ್ಯವನ್ನು ರಕ್ಷಿಸಿಕೊಳ್ಳುವ ಬಗೆಯನ್ನು ತಿಳಿಸುವುದಾಗಿ ಹೇಳುತ್ತಾನೆ.

> **"ರಸದಾಳಿಯಂತೆ ರಮಣಿಯರ ಚೆಂದುಟಿಯಂತೆ**
> **ಪೊಸಜೇನಕೊಡದಂತೆ ಪೊಣ್ಮುವೆಳಜವ್ವನೆಯ**
> **ರೊಸೆದೀವ ತಾಂಬೂಲದಂತೆ ಕಾದಿಳಿಪಿಯಾಜೆದ ಬಟ್ಟವಾಲಿನಂತೆ**
> **ಅಸಿಯಳೊಡನಾಟದಂತರಮಾವಿನಿನಿವಣ್ಣ**
> **ರಸದಂತೆಯಮೃತದಂತತಿರುಚಿಯ ಪಡೆದುದತಿ**
> **ರಸಿಕನತಿನಿಪುಣಸತ್ಪ್ರಭುರಾಜನೊರೆದ ಪಾಕದ ಕವಿತೆಯೆಸೆವ ಮಾತು ॥೧.೦೭॥"**[೧೭೧]

ಎಂದು ಹೇಳುವ ಕವಿಯು ಅಡುಗೆ ತಯಾರಿಸುವಲ್ಲಿ ಎಷ್ಟು ಆಸ್ಥೆಯನ್ನು ತೋರಿದ್ದಾನೋ ಅಷ್ಟೇ ಆಸ್ಥೆಯನ್ನು ಕೃತಿ ರಚನೆಯ ಅಲಂಕಾರದಲ್ಲಿಯೂ ತೋರಿದ್ದಾನೆ.

೧) ಪಿಷ್ಟಪಾಕಾಧ್ಯಾಯ:

ಮೂರನೆಯ ಮಂಗರಸನು ತನ್ನ **'ಸೂಪಶಾಸ್ತ್ರ'** ಗ್ರಂಥ ಮೊದಲ ಅಧ್ಯಾಯದಲ್ಲಿ ಹೆಸರೇ ಸೂಚಿಸುವಂತೆ ವಿವಿಧ ಧಾನ್ಯಗಳ ಹಿಟ್ಟುಗಳನ್ನು ಬಳಸಿಕೊಂಡು ಅಡುಗೆ ಮಾಡುವ ಕಲೆಯನ್ನು ತಿಳಿಸಿದ್ದಾನೆ.

> **"ಸದಮಲಂಬಡೆದ ಗೋದುವೆ ಕಳವೆಯಕ್ಕಿ ಬಹು**
> **ವಿದಳ ಸಕ್ಕರೆಯಿಂದ ಮಾಳ್ಪ ಕಜ್ಜಾಯಮಂ**
> **ವಿದಲಿತಾಂಬುರುಹಸಲ್ಲಲಿತವದನೆಯರಜೆವ ಮಾಳ್ಕೆಯೊಳೊಸೆದು ಪೇಟ್ವೆನು ॥"**[೧೭೨]

ಉತ್ತಮವಾದ ಗೋದಿ, ಅಕ್ಕಿ ಹಾಗೂ ಸಕ್ಕರೆಗಳಿಂದ ಕಜ್ಜಾಯ ಮಾಡುವ ಬಗೆಯನ್ನು ಸಲ್ಲಲಿತ ವದನೆಯರು ಅರಿಯುವಂತೆ ಹೇಳುವುದಾಗಿ ತಿಳಿಸುತ್ತಾನೆ.

ಕಜ್ಜಾಯ: ನಾಲ್ಕು ಬಳ್ಳ ಗೋದಿಯನ್ನು ನೀರಿನಿಂದ ತೋಯಿಸಿ, ಕುಟ್ಟಿ, ಹೊಟ್ಟುಹಾರುವಂತೆ ಕೇರಿ ಬಳಿಕ ಬಿಸಿಲಲ್ಲಿ ಒಣಗಿಸುವುದು. ನಂತರ ಅದನ್ನು ಚೆನ್ನಾಗಿ ಕುಟ್ಟಿ, ನಂತರ ಬೀಸಿ, ಅದನ್ನು ಸಾಣಿಸಿದಾಗ ಉಳಿಯುವ ರವೆಯು ವಜ್ರದಂತೆ ಹೊಳೆಯುತ್ತದೆ. ಆ ರವೆಯನ್ನು ತೆಗೆದುಕೊಂಡು ಸಜ್ಜಿಗೆ ಮಾಡಿ ಅದರಿಂದ ಕಜ್ಜಾಯ ಮಾಡುವುದು.

ಚುಚ್ಚುರೊಟ್ಟಿ: ಗೋದಿಯ ಕಣಕವನ್ನು ಹದವಾಗುವಂತೆ ಕುಟ್ಟಿ, ಹಿಟ್ಟಿಗೆ ಸಮನಾದಿ ಬೆಣ್ಣೆಯನ್ನು ತೆಗೆದುಕೊಂಡು ಅದರಲ್ಲಿ ಆರು ಭಾಗಮಾಡಿ ಒಂದುಭಾಗವನ್ನು ಕಣಕದಲ್ಲಿ ಸೇರಿಸುವುದು. ಮತ್ತೆ ಅದಕ್ಕೆ ಬಟ್ಟಲು ಹಾಲನ್ನು ಸೇರಿಸಿ ಮಿದ್ದುವುದು. ನಂತರ ಉಳ್ಳೆಗಳನ್ನು ಮಾಡಿ ತಟ್ಟಿ, ಹಂಚಿನ

---

೧೭೧. ಡಾ. ಬಿ. ವಿ. ಶಿರೂರ (ಸಂ) : **ಮೂರನೆಯ ಮಂಗರಸ ಸಂಪುಟ : ಸೂಪಶಾಸ್ತ್ರ** ; ಪುಟ. ೮೯೬

೧೭೨. **ಅದೇ** ; ಪುಟ. ೮೯೭

ಮೇಲಿಟ್ಟು ಬೇಯಿಸಿ ತೆಗೆಯುವುದು. ಅದಕ್ಕೆ ಕಡ್ಡಿಯಿಂದ ಚುಚ್ಚಿ, ತಿಳಿದುಪ್ಪ ಮತ್ತು ಸಕ್ಕರೆಯನ್ನು ಹೀರುವಂತೆ ಮಾಡಿದರೆ ಅದು ಚುಚ್ಚುರೊಟ್ಟಿ ಎನಿಸುವುದು. ಇದು ಸ್ವರ್ಗದೂಟಕ್ಕೆ ಸಮನಾಗುವುದು.

ಮುಚ್ಚುಳರೊಟ್ಟಿ: ಉತ್ತಮವಾದ ಸೊಜ್ಜಿಗೆಯನ್ನು ಬಟ್ಟಲು ಹಾಲಿನಲ್ಲಿ ನೆನೆಸಿ ಮೆತ್ತಗೆ ಮಾಡಿ, ಗೋದಿ ಹಿಟ್ಟಿನೊಂದಿಗೆ ಅದನ್ನು ಸೇರಿಸಿ ತಟ್ಟುವುದು. ನಂತರ ಅದನ್ನು ಬೆಂಕಿಯ ಮೇಲಿಟ್ಟು ಕರಕಾಗದಂತೆ ಗಾಳಿ ಹಾಕುವುದು. ಸಂಪೂರ್ಣ ಬೆಂದ ನಂತರ ಅದಕ್ಕೆ ತಿಳಿದುಪ್ಪ ಮತ್ತು ಸಕ್ಕರೆಯನ್ನು ಸೇರಿಸಿದರೆ ಅದುವೇ ಮುಚ್ಚುಳರೊಟ್ಟಿ ಎನಿಸುವುದು.

ನೀರ್ವತ್ತಿಗೆ: ಕಣಕವನ್ನು ಹದವಾಗಿ ಕುಟ್ಟಿ, ಹಪ್ಪಳದಂತೆ ಲಟ್ಟಿಸಿ, ಒಂದು ಬಟ್ಟಲು ಬಿಸಿ ಹಾಲಿನಲ್ಲಿ ಅದನ್ನು ನೆನೆಸುವುದು. ನಂತರ ಅದನ್ನು ತೆಗೆದು ಹಾಲು ಆರುವತನಕ ಬೇಯಿಸುವುದು. ನಂತರ ಹೋಳಿಗೆಯನ್ನು ಮಾಡಿ, ಬಿಸಿನೀರಿನ ಹಬೆಯಲ್ಲಿ ಸರಿಯಾಗಿ ಬೇಯಿಸಿದಾಗ ಅದಕ್ಕೆ ನೀರ್ವತ್ತಿಗೆ ಎಂಬ ಹೆಸರಾಗುವುದು.

ಪಿಂಡಘೃತಪೂರ: ತರಿಯಾದ ಸೊಜ್ಜಿಗೆಯ ಹಿಟ್ಟಿನಲ್ಲಿ ಬೆಣ್ಣೆ, ಸಕ್ಕರೆಯನ್ನು ಸೇರಿಸಿ ಬಟ್ಟಲು ಹಾಲಿನಲ್ಲಿ ಸೇರಿಸಿ ಅಂಬಲಿಯಂತೆ ಕಲಕುವುದು. ನಂತರ ಗಾಗಿಗೆಯಂತೆ ಹದವಾಗಿ ಬೇಯಿಸಿ, ತೆಗೆಯುವುದು. ನಂತರ ಬಿಸಿಯಾದ ತುಪ್ಪದಲ್ಲಿ ಇಳಿಬಿಟ್ಟು ತೆಗೆಯುವುದು. ಇದಕ್ಕೆ ಪಿಂಡಘೃತಪೂರವೆಂದು ಹೆಸರು.

ಹೂರಿಗೆ: ಅಕ್ಕಿಯ ಹಿಟ್ಟನ್ನು ಸಾಣಿಸಿಕೊಂಡು, ಹುರಿದುಕೊಂಡು, ಬೆಲ್ಲದ ಪಾಕದಲ್ಲಿ ಹಾಕಿ ಕಲಸುವುದು. ನಂತರ ಅದರ ಸಮಪ್ರಮಾಣದ ಹಸಿ ಅಕ್ಕಿ ಹಿಟ್ಟನ್ನು ತೆಗೆದುಕೊಂಡು ನಾಲ್ಕು ಭಾಗಮಾಡಿ ಒಂದು ಭಾಗವನ್ನು ಬೆಲ್ಲದ ಪಾಕದಲ್ಲಿ ಸೇರಿಸುವುದು. ಅದಕ್ಕೆ ಬಿಳಿ ಎಳ್ಳು, ತುರಿದ ಹಸಿಕೊಬ್ಬರಿಯ ಹಾಲನ್ನು ತೆಗೆದು ಬೆರೆಸಿ ರಾತ್ರಿಯಿಡೀ ನೆನೆಯಿಡುವುದು. ನಂತರ ಪ್ರತ್ಯೇಕ ಸಜ್ಜಿಗೆಯನ್ನು ಮಾಡಿ, ಯಾಲಕ್ಕಿಯನ್ನು ಸೇರಿಸುವುದು. ನೆನೆಸಿಟ್ಟ ಅಕ್ಕಿಹಿಟ್ಟು ಮತ್ತು ಸಜ್ಜಿಗೆಯನ್ನು ಗಾರಿಗೆ ಮಾಡಿ ಕಡುಗೆಂಪು ಬಣ್ಣ ಬರುವವರೆಗೆ ತಿಳಿದುಪ್ಪದಲ್ಲಿ ಬೇಯಿಸಿ ತೆಗೆಯುವುದು. ಇದಕ್ಕೆ ಹೂರಿಗೆಯೆಂದು ಹೆಸರು.

ಹೀಗೆ ಸಕ್ಕರೆರೊಟ್ಟಿ, ಸಿತಕರೊಟ್ಟಿ, ಉದುರುರೊಟ್ಟಿ, ಖಂಡಘೃತಪೂರ, ಹಾಲುಗಾರಿಗೆ, ಸಮುದ್ರಫೇನ, ಹೆಸರಹೂರಿಗೆ, ಮಂಡಗೆಹೂರಗೆ, ವಾಯುಪುಟಮಂಡಗೆ, ಪೇಜಣೆಯ ಹೂರಿಗೆ, ಎಣ್ಣೆಹೂರಿಗೆ, ಸುಧಾಪಿಂಡ, ಬಾಬರ, ಪುರಿವಿಳಂಗಾಯ, ಅಮೃತಫಲಸಾರ, ಸುಪ್ಪಾಣಿ, ಮಧುನಾಳ, ಮಂಡಗೆಯುರುಳಿ, ಯರಲಮಂಜರಿ, ಸಕ್ಕರೆಕಜ್ಜಾಯ, ಅಮೃತಪಾನ, ಸಕ್ಕರೆಬುರುಡೆ, ಗುಜ್ಜರಿವೇಣಿ, ಪೇಣಿ, ಬಿಚ್ಚುಪೇಣಿ, ಚೀರಪೇಣಿ, ಗಜಪೇಣಿ, ಕಡಲೆಯ ಲಡ್ಡುಗೆ, ಬತ್ತದ ಅರಳಿನ ಲಡ್ಡುಗೆ, ಪೊರೆಯಲಡ್ಡುಗೆ, ಹಾಲಹೂರಣಗಡುಬು, ಮಾಗಿಬೋನ, ತವರಾಜ, ಹಲ್ಲೆಗಡುಬು,

ಬೆಣ್ಣೆಗಡುಬು, ಕರಂಜೀಕಾಯಿ, ದಿಡ್ಡಣಿಗೆ, ಮುಸುಕಿನೊಡೆ, ಇಡ್ಡಲಿಗೆ, ವಡೆ, ಗೌರೊಡೆ, ಸಿತಪಾಕದೊಡೆ, ಉದ್ದಿನಿಡ್ಡಲಿ, ತಡಗುಣಿ, ಚಂದ್ರಮಂಡಲ ಹೀಗೆ ಹಿಟ್ಟಿನಿಂದ ಸುಮಾರು ಐವತ್ತು ಪ್ರಕಾರದ ಖಾದ್ಯಗಳನ್ನು ತಯಾರಿಸುವ ಬಗೆಗಳನ್ನು ೭೮ ಪದ್ಯಗಳ ಮೂಲಕ 'ಸೂಪಶಾಸ್ತ್ರ'ದ ಮೊದಲ ಅಧ್ಯಾಯದಲ್ಲಿ ಮೂರನೆಯ ಮಂಗರಸನು ತಿಳಿಸಿದ್ದಾನೆ.

> **"ಇದು ಹರುಷದಿಂದ ಲಾಲಿಸಿಕೇಳ್ವೆನೆಂದೆಂಬ**
> **ಸುದತಿಯರ ಕಿವಿಗೆ ಪೊಸಮಾಣಿಕದ ತಾಟಂಕ**
> **ಮಿದು ಕಲಿವೆನೆಂದೋದುವಬಲೆಯರ ಬಣ್ಣವಾಯ್ದೆರೆಗೆ ಪೀಯೂಷಪಿಂಡ ।**
> **ಇದು ಪಾಕವಂ ಮಾಳ್ಪೆನೆಂದುಜ್ಜುಗವ ಮಾಳ್ಪ**
> **ಚದುರೆಯರ ಕೈಗೆ ನವರನ್ನಮುದ್ರಿಕೆಯೆನಿಸಿ**
> **ತಿದಱಿಕೊಳಗೆ ರಾಜಹಿತಮಾದ ಬಹುಪಿಷ್ಟಪಾಕಾಧ್ಯಾಯಮಿದು ಸಮಾಪ್ತಂ ॥೧.೭೮॥"**[೧೭೩]

ಇದು ಹರುಷದಿಂದ ಲಾಲಿಸಿ ಅಡುಗೆ ಮಾಡಲು ಹವಣಿಸಿ ಕೇಳುವ ಹೆಂಗಳೆಯರಿಗೆ ಮಾಣಿಕ್ಯದ ಹಾರದಂತೆ, ಅಡುಗೆಯನ್ನು ಕಲಿವೆನೆಂದು ಹಂಬಲಿಸುವ ಅಬಲೆಯರಿಗೆ, ಹೊಸರುಚಿಯನ್ನು ಮಾಡಲು ಉತ್ಸುಕರಾಗಿರುವ ಚದುರೆಯರ ಕೈಗೆ ನವರತ್ನ ಮುದ್ರಿಕೆಯೆಂಬಂತೆ ರಾಜಹಿತವಾದ ಖಾದ್ಯಗಳನ್ನು ರಚಿಸುವ ಬಗೆಯನ್ನು ತಿಳಿಸಿರುವುದಾಗಿ ಹೇಳಿ ಮಂಗರಸನು ಪಿಷ್ಟಪಾಕಾಧ್ಯಾಯವನ್ನು ಸಂಪನ್ನಗೊಳಿಸುತ್ತಾನೆ.

೨) ಪಾನಕಾಧ್ಯಾಯ:

ಮೂರನೆಯ ಮಂಗರಸನು 'ಸೂಪಶಾಸ್ತ್ರ'ದ ಎರಡನೆಯ ಅಧ್ಯಾಯವಾದ 'ಪಾನಕಾಧ್ಯಾಯದಲ್ಲಿ ನೀರನ್ನು ಶುದ್ಧೀಕರಿಸುವ ಬಗೆ, ಹಾಲನ್ನು ಕಾಯಿಸುವುದು, ಮೊಸರು, ಮಜ್ಜಿಗೆ ತಯಾರಿಕೆ, ಮಜ್ಜಿಗೆಯಿಂದ ವಿವಿಧ ಪಾನಕಗಳನ್ನು ತಯಾರಿಸುವುದು, ಹಸಿ ಹಾಲಿನಿಂದ ಬೆಣ್ಣೆ ತೆಗೆಯುವ ವಿಧಾನ, ಒಡೆದ ಹಾಲಿನ ಉಪಯೋಗ ಮುಂತಾದ ಬಗೆಗಳನ್ನು ತಿಳಿಸಿದ್ದಾನೆ.

> **"ಕ್ಷೀರ ಪಂಚಕ ಪಾಕರಸ ರಸಾಯನ ಪಾಕ**
> **ದಾರುಣ ನಿದಾಘದುಬ್ಬೆಯನು ಭಂಜಿಸುವ ಕುಡಿ**
> **ನೀರು ಮೊದಲಾದ ನಾನಾ ಪಾನಭೇದಮಂ ಸತಿಯರಜೆವಂತುಸಿರ್ವೆನು ॥"**[೧೭೪]

ಎಂದು ಹೇಳಿ ಎರಡನೆಯ ಅಧ್ಯಾಯನ್ನು ಆರಂಭಿಸುತ್ತಾನೆ.

ಉತ್ತಮವಾದ ಎಮ್ಮೆಯ ಹಾಲನ್ನು ಸೋಸಿ ಒಲೆಯ ಮೇಲಿರಿಸಿ ಕಾಯಿಸಿ, ಸಣ್ಣಗಿನ ಬೆಂಕಿಯಲ್ಲಿ ಕಾಯಿಸುವುದು. ಉಕ್ಕು ಬಂದರೆ ಸೌಟಿನಿಂದ ಆಡಿಸುವುದು. ಹೀಗೆ ನಾಲ್ಕೈದು ಬಾರಿ ಕುದಿಗೊಳಿಸಿದ ಹಾಲನ್ನು ಸಣ್ಣಬೆಂಕಿಯ ಮೇಲಿಟ್ಟು ಅರ್ಧ ಮುಚ್ಚಳ ಮುಚ್ಚಿದರೆ ಬಹುತರವಾಗಿ ಕೆಣೆಗಟ್ಟುವುದು. ಆ ಹಾಲು ಮೊಸರು, ಮಜ್ಜಿಗೆ, ಬೆಣ್ಣೆಗೆ ಅತಿಪಾವನವಾದುದು ಎಂದು ಹೇಳುತ್ತಾನೆ.

---

೧೭೩. ಡಾ. ಬಿ. ವಿ. ಶಿರೂರ (ಸಂ) : **ಮೂರನೆಯ ಮಂಗರಸ ಸಂಪುಟ : ಸೂಪಶಾಸ್ತ್ರ** ; ಪುಟ. ೯೧೧

೧೭೪. **ಅದೇ** ; ಪುಟ. ೯೧೨

ಹಾಲು ಒಡೆಯುತ್ತಿದ್ದರೆ ಅದಕ್ಕೆ ಸುಣ್ಣದ ತಿಳಿನೀರನ್ನು ಹಾಕಿದರೆ ಹಾಲು ತಿಳಿಯಾಗುತ್ತದೆ. ನಂತರ ಒಡೆದ ಹಾಲಿನಲ್ಲಿಯ ನೀರಿನ ಅಂಶವನ್ನೆಲ್ಲ ತೆಗೆಯಬೇಕು. ಇನ್ನುಳಿದ ಹಾಲಿನ ಅಂಶವನ್ನು ಒಂದು ಬಟ್ಟೆಯಲ್ಲಿ ಹಾಕಿ ಅಗಲಬಾಯಿಯ ಮಡಕೆಯ ಮೇಲಿಟ್ಟು ಬಿಸಿನೀರು ಹಾಕಿ ಅದನ್ನು ಉಜ್ಜುತ್ತಾ ಹೋಗುವುದರಿಂದ ಒಡೆದ ಹಾಲು ಮತ್ತೆ ಹಾಲಾಗಿ ಮಡಕೆಯಲ್ಲಿ ಬೀಳುತ್ತದೆ. ಇದನ್ನು ಮತ್ತೆ ಹಾಲಿನಂತೆ ಬಳಸಬಹುದು ಎಂದು ಹೇಳಿದ್ದಾನೆ.

ತಿನ್ನಬಯಸುವವನ ನಾಲಗೆಯ ರುಚಿಗೆ ತಕ್ಕಂತೆ ಹಲವಾರು ವಿಧದಲ್ಲಿ ಮೊಸರು ಮಾಡುವ ಬಗೆಗಳನ್ನು ಮಂಗರಸನು ತಿಳಿಸಿದ್ದಾನೆ. ಮುಂಜಾನೆ ಕಾಸಿದ ಹಾಲನ್ನು ಸಂಜೆಯವರೆಗೆ ಕೆಂಡದ ಮೇಲಿಟ್ಟು ಸೂರ್ಯಾಸ್ತವಾದ ಒಂದು ಜಾವದ ಮೇಲೆ ಹದವರಿತು ಹೆಪ್ಪು ಹಾಕುವುದರಿಂದ ಕಡುಗೆಂಪಾದ ಮೊಸರಾಗುವುದು. ಮಾದಲದ ಹಣ್ಣನ್ನು ಸೀಳಿ ಅದರ ಕೇಸರವನ್ನು ತೆಗೆದು ನಸುಬಿಸಿಯ ಹಾಲಿನಲ್ಲಿ ಹಾಕಿ ಹನಿ ಮಜ್ಜಿಗೆಯಿಂದ ಹೆಪ್ಪನಿಕ್ಕಿದರೆ ಅದು 'ಮಾತುಳಂಗರಂಜಿತದಧಿ' ಎನಿಸಿಕೊಳ್ಳುವುದು. ಮಾವಿನ ಹಣ್ಣಿನ ರಸವನ್ನು ಮೂರುಸಲ ಸೋಸಿ ತೆಗೆಯುವುದು. ನಸುಬಿಸಿಯಾಗಿರುವ ಹಾಲನ್ನು ಮಡಕೆಯಲ್ಲಿ ಹಾಕಿ, ಅದಕ್ಕೆ ಆ ಮಾವಿನ ರಸವನ್ನು ಹಾಕಿ ಹೆಪ್ಪಿಡುವುದು. ಇದಕ್ಕೆ 'ಚೂತಸಾರಫಲದಧಿ' ಎಂದು ಹೆಸರು. ಈ ಹೇಳಿದ ಕ್ರಮವನ್ನೇ ಅನುಸರಿಸಿ ಕುಂಕುಮ ಹೂವನ್ನು ಹಾಕಿ ಹೆಪ್ಪಿಟ್ಟರೆ, ಅದು 'ಕುಂಕುಮಸಾರದಧಿ' ಎನಿಸುವುದು. ಇದೇ ರೀತಿಯಾಗಿ ರಸಾಲದಧಿ, ಘೃತಸಾರದಧಿ, ಬಿಲ್ವಫಲಸಾರದಧಿ, ಹೊಗೆಹಾಲ ಮೊಸರು ಕೆನೆಮೊಸರುಗಳನ್ನು ಮಾಡುವ ಬಗೆಗಳನ್ನು ತಿಳಿಸುತ್ತಾನೆ ಕವಿ ಮಂಗರಸ.

ಮುಂದುವರೆದು ಮಜ್ಜಿಗೆಯ ಮಾಡುವ ಬಗೆಗಳನ್ನು ತಿಳಿಸುತ್ತಾನೆ. ಕೆನೆಯನ್ನು ತೆಗೆಯದೆ ಮೊಸರನ್ನು ಕಡೆದರೆ ಅದು 'ಗೋಳಕ'. ಮೊಸರಿನಲ್ಲಿನ ಕೆನೆಯನ್ನು ತೆಗೆದು ನೀರನ್ನು ಹಾಕದೆ ಅದನ್ನು ಕಡೆದರೆ 'ಮಥಿತ'. ಮೊಸರಿನ ನಾಲ್ಕನೆಯ ಒಂದು ಭಾಗದಷ್ಟು ನೀರನ್ನು ಸೇರಿಸಿ ಕಡೆದರೆ ಅದು 'ಸಿಂದು'. ಅರ್ಧಭಾಗ ಮೊಸರು ಇನ್ನರ್ಧ ಭಾಗ ನೀರನ್ನು ಸೇರಿಸಿ ಕಡೆದರೆ ಅದು 'ತಕ್ರ'. ಆಮೇಲೆ ಅದಕ್ಕೆ ಹಸಿ ಶುಂಠಿ ಇಲ್ಲವೇ ನೀರುಳ್ಳಿಯನ್ನು ಬೆರೆಸಿ ಶುದ್ಧೀಕರಸುವುದು ಎಂದು ಹೇಳುತ್ತಾನೆ. ಹೀಗೆ ಕಡೆದ ಮಜ್ಜಿಗೆಗೆ ಬಿಳಿಯುಪ್ಪು, ಮಾವಿನ ಎಳೆ ಮಿಡಿ, ಮಾದಲ ಕಾಯಿಯ ತೊಕ್ಕು, ಕರಿಬೇವು, ಈರುಳ್ಳಿ, ಹಸಿಶುಂಠಿ ಸೇರಸಿ ಒಗ್ಗರಣೆ ಹಾಕಿ ಅದನ್ನು ಮಜ್ಜಿಗೆಯಲ್ಲಿ ಸೇರಿಸುವುದು. ಇದೇ ರೀತಿ ಏಲಕ್ಕಿ, ಸಾಸಿವೆ, ನಿಂಬೆಹುಳಿ, ಜೀರಿಗೆ, ಕೇದಗೆಯ ಹೂವು, ಲವಂಗ, ಕೊತ್ತಂಬರಿಗಳನ್ನು ಬಳಸಿ ಮಸಾಲೆ ಮಜ್ಜಿಗೆಗಳನ್ನು ಮಾಡುವ ಬಗೆಗಳನ್ನು 'ಸೂಪಶಾಸ್ತ್ರ' ಗ್ರಂಥದಲ್ಲಿ ತಿಳಿಸಲಾಗಿದೆ.

ಮುಂದುವರೆದು ಕವಿ ಮಂಗರಸನು, ತುಪ್ಪವನ್ನು ತಯಾರಿಸಿ ಅದನ್ನು ಶುದ್ಧೀಕರಿಸುವ ಬಗೆಗಳನ್ನು ತಿಳಿಸುತ್ತಾನೆ. ನಡುಗಂತಿಯಾದ ಹಸುವಿನ ಮೊಸರನ್ನು ಕಡೆದು ಬೆಣ್ಣೆ ತೆಗೆದು, ಅದನ್ನು

ಸಣ್ಣ ಬಿಸಿಯಲ್ಲಿ ಒಲೆಯ ಮೇಲಿರಿಸಿ ಕಾಯಿಸುವುದು. ಅದು ಉಕ್ಕೇರಿದರೆ ಸೌಟನ್ನು ಆಡಿಸುವುದು. ಹದವರಿತು ಕಿರುನೊರೆ ಬಂದಾಗ ಕೆಳಗಿಳಿಸುವುದು. ಹೆಪ್ಪಿಡುವಾಗ ಹತ್ತಿಯ ಅರಳನ್ನು ಹಾಕಿ, ಆ ಮೊಸರನ್ನು ಕಡೆದು ಬೆಣ್ಣೆ ತೆಗೆದು, ಸುಣ್ಣದ ನೀರು ಮತ್ತು ಎಳ್ಳೆಣ್ಣೆಯನ್ನು ಸೇರಿಸಿ ನೀರು ಸುಡುವವರೆಗೆ ಕುದಿಸುವುದು. ಇದರಿಂದ ಹಿರಿದಾದ ಸುವಾಸನೆಯುಕ್ತ ತುಪ್ಪವು ತಯಾರಾಗುವುದು. ಇದಕ್ಕೆ 'ಸದ್ಯೋಘೃತ' ಎಂದು ಹೆಸರು.

> **"ತಿಳಿದುಪ್ಪದೊಳಗೆ ಯಾಲಕ್ಕಿಯನರೆದು ಕುಡಿಕೆ**
> **ಯೊಳಗೆ ತೊಡೆದಿರಿಸಿವೊಪ್ಪಲಜೇನ ಹೊಸಮೇಣ**
> **ದೊಳಗದಱನಾಲ್ಮಡಿಯ ಬೆರಕೆಯಿಲ್ಲದ ಕುಸುಬೆಯೆಣ್ಣೆಯಂ ಕಾಸಿಕೊಂಡು**
> **ಇಳುಹಿಯಾ ಮಡಕೆಯಾಮೊಗದಿ ಪಾವಡೆಗಟ್ಟಿ**
> **ಬಳಿಕಿಳಿವನುಣ್ಣಿತ್ತು ಹೆಱಿದುಪ್ಪವಿರಿಸಲದು**
> **ಒಳಸೋಯಾತುಪ್ಪ ಮೆಚ್ಚಿ ಭೋಜನವ ಮಾಳ್ಪರಿಗೆ ಪಾವನವಾದುದು ॥"**[೧೭೫]

ಎಂದು ಹೇಳುತ್ತಾನೆ.

ನೀರಿನಲ್ಲಿ ಅರ್ಧದಷ್ಟು ಸಕ್ಕರೆಯನ್ನು ಕರಗಿಸಿ, ಹದವರಿತು ದಾಳಿಂಬೆ, ಮಾದಲದ ಹುಳಿ, ಏಲಕ್ಕಿ, ಹಸಿಶುಂಠಿಗಳನ್ನು ಸೇರಿಸಿ ಬೆಂಡೆಯ ಬೇರಿನಿಂದ ಅದನ್ನು ಕದಡುವುದು. ಮತ್ತೆ ಅದರಲ್ಲಿ ಸೇವಂತಿಗೆಯ ಹೂವನ್ನು ಮಡಕೆಯೊಳಗಿರಿಸುವುದು. ಅದು ಹದವಾದ ಮೇಲೆ ಪಾನಕಗಳನ್ನು ಮಾಡುವುದು. ಇದಕ್ಕೆ 'ಹಿಮಾಂಬುಪಾನಕ' ಎಂದು ಹೆಸರಿಡುವುದು. ತಿಳಿನೀರಿಗೆ ಅರ್ಧ ಸಕ್ಕರೆಯನ್ನು ಸೇರಿಸಿ, ಕರಗಿಸಿ ಅದರಲ್ಲಿ ಹಾಲು, ಮಜ್ಜಿಗೆ ಸೇರಿಸುವುದು. ಬಳಿಕ ಹುಣಸೆಯ ಹುಳಿಯನ್ನು ಹಾಕಿ ಬೆಂಡೆಯ ನಾರಿನಿಂದ ಕದಡುವುದು. ಪಾದರಿಯ ಹೂವನ್ನು ಅದರಲ್ಲಿ ಸೇರಿಸುವುದು. ಇದಕ್ಕೆ 'ಪಾಟಳಿರಸಾಯನ' ಎಂದು ಹೆಸರು. ಇದೇ ರೀತಿಯಾಗಿ ತಮ್ಮ ರುಚಿ ಹಾಗೂ ಇಷ್ಟಕ್ಕೆ ಅನುಗುಣವಾಗಿ ಬೇಕಾದ ಹೂವನ್ನು ಸೇರಿಸಿ ರಸಾಯನವನ್ನು ಮಾಡಿಕೊಳ್ಳಬಹುದು ಎಂದು ಹೇಳುತ್ತಾನೆ. ಅದರಂತೆಯೇ 'ಗುಡಪಾನಕ', 'ಇಕ್ಷುಸಾರರಸಾಯನ', 'ನಾಳಿಕೇರರಸಾಯನ', 'ನಿಂಬೆಯ ರಸಾಯನ', 'ಲೋಯಿಸರ ರಸಾಯನ', 'ನೇರಳೆಹಣ್ಣು ರಸಾಯನ', 'ತೆಂಗಿನಕಾಯಿ ರಸಾಯನ', 'ಮಾವಿನಕಾಯಿ ರಸಾಯನ'ಗಳನ್ನು ಮಾಡುವ ಬಗೆಯನ್ನು ತಿಳಿಸಿದ್ದಾನೆ.

ಮಂಗರಸನು ನೀರನ್ನು ಶುದ್ಧೀಕರಿಸುವ ಕ್ರಮಗಳನ್ನು ತಿಳಿಸಿದ್ದಾನೆ. ಸಣ್ಣರಂಧ್ರವಿರುವ ಮಡಕೆಯೊಂದರಲ್ಲಿ ನೀರನ್ನು ತುಂಬಿಸಿ ಇನ್ನೊಂದು ಗಟ್ಟಿ ಮಡಕೆಯನ್ನು ಅದರ ಕೆಳಗಿಟ್ಟು ಬೆಳಗ್ಗಿನ ಜಾವದಲ್ಲಿ ಮಹಡಿಯ ಮೇಲಿಡಬೇಕು. ಮರುದಿನ ಸೂರ್ಯೋದಯದ ಸಮಯಕ್ಕೆ ಅದನ್ನು ತೆಗೆದುಕೊಂಡು ಕರ್ಪೂರ, ಕಸ್ತೂರಿ ಮುಂತಾದ ಸುವಾಸನಾಯುಕ್ತ ದ್ರವ್ಯಗಳನ್ನು

---

೧೭೫. ಡಾ. ಬಿ. ವಿ. ಶಿರೂರ (ಸಂ) : **ಮೂರನೆಯ ಮಂಗರಸ ಸಂಪುಟ : ಸೂಪಶಾಸ್ತ್ರ** ; ಪುಟ. ೯೧೨

ಬೆರೆಸುವುದರಿಂದ ಅದು 'ಧಾರಾಂಬು' ಎನಿಸಿಕೊಳ್ಳುತ್ತದೆ. ಮುಂದುವರೆದು ಮಾವಿನಕಾಯಿಗಳನ್ನು ಕತ್ತರಿಸಿ ನೀರಿನಲ್ಲಿ ಹಾಕಿ ಅದಕ್ಕೆ ಮಾದಲ, ನೇರಳೆ, ಕರಿಬೇವು, ಶುಂಠಿ, ಈರುಳ್ಳಿ ಮುಂತಾದ ಪದಾರ್ಥಗಳಲ್ಲಿ ಅವರವರ ಇಚ್ಛೆಗೆ ತಕ್ಕಂತೆ ಯಾವುದಾದರೊಂದನ್ನು ಹಾಕಿ ಸೇವಿಸಬಹುದು. ಇಲ್ಲವೇ ನೀರನ್ನು ಬೆಂಕಿಯ ಮೇಲೆ ಕಾಯಿಸುವುದು, ಬಿಸಿಲಿನಲ್ಲಿ ಇಡುವುದು, ಬಿಸಿಯಾದ ಕಬ್ಬಿಣ, ಇಟ್ಟಿಗೆ, ಮರಳುಗಳ ನಡುವೆ ಪಾತ್ರೆಯಲ್ಲಿ ನೀರನ್ನಿಟ್ಟು ಕಾಯಿಸುವುದರಿಂದ ಅದರಲ್ಲಿರುವ ದೋಷಗಳು ದೂರಾಗುತ್ತವೆ ಎಂದು ಮಂಗರಸನು ತಿಳಿಸುತ್ತಾನೆ.

೩) ಕಳಮಾನ್ನಾದಿ ಪಾಕಾಧ್ಯಾಯ:

> **"ಓಗರದ ಪುಳ್ಗಿಯೋಗರದ ಪಲತೆಱದ ಪಾ**
> **ಲೋಗರದ ಕಟ್ಟೋಗರದ ಸೊಗಸುವಡೆದ ನೀ**
> **ರೋಗರದ ಮಿಸುಗುವಂಬಲಿಯ ವಿಧಮಂ ವಧೂಜನವಱಿವತೆಱದಿನೊರೆವೆಂ॥"**[೧೭೬]

ಮೂರನೆಯ ಮಂಗರಸನು 'ಸೂಪಶಾಸ್ತ್ರ'ದ ಮೂರನೆಯ ಅಧ್ಯಾಯದಲ್ಲಿ ಅನ್ನದ ದೋಷಗಳನ್ನು, ಹಲವಾರು ರೀತಿಯ ಅನ್ನವನ್ನು ಮಾಡುವುದು, ಓಗರ ಮಾಡುವುದು, ಅಂಬಲಿಗಳನ್ನು ಮಾಡುವ ಬಗೆಯನು ೪೨ ಪದ್ಯಗಳಲ್ಲಿ ವಿವರಿಸಿದ್ದಾನೆ.

ಎರಡು ಮಾನದಷ್ಟು ನೀರಿನಲ್ಲಿ ಒಂದು ಮಾನದಷ್ಟು ಬೇಳೆಯನ್ನು ಹಾಕಿ, ಕುದಿಸುವುದು. ಅದು ಅರೆಬೆಂದ ಸಮಯದಲ್ಲಿ ಅದಕ್ಕೆ ಸಮನಾದ ಅಕ್ಕಿಯನ್ನು ಹಾಕುವುದು. ಅದರಲ್ಲಿ ಉಪ್ಪು, ಹುಳಿ, ಮೆಂತ್ಯದ ಹಿಟ್ಟು, ತೆಂಗಿನಕಾಯಿಯ ತುರಿಯನ್ನು ಸೇರಿಸುವುದು. ನಂತರ ಅದನ್ನು ಮುಚ್ಚಳ ಮುಚ್ಚಿ ಕುದಿಸುವುದು. ಕುದ್ದಾದ ಮೇಲೆ ಮತ್ತಿಷ್ಟು ಕೊಬ್ಬರಿಯನ್ನು ಸೇರಿಸುವುದು. ಇದಕ್ಕೆ 'ಬೇಳೆಹುಗ್ಗಿ'ಯೆಂದು ಹೆಸರು ಕರೆಯುವುದು ಎಂದು ಹೇಳುತ್ತಾನೆ ಕವಿ. ಇದು ಬೇರೆನೂ ಅಲ್ಲ. ಇಂದಿನ ಬಿಸಿಬೇಳೆಭಾತ್. ತಿಳಿನೀರಿನಲ್ಲಿ ಅದರ ನಾಲ್ಕು ಪಟ್ಟು ಹಾಲನ್ನು ಸೇರಿಸಿ ಒಲೆಯ ಮೇಲಿಟ್ಟು ಕಾಯಿಸುವುದು. ಅದರ ಎಂಟರ ಒಂದು ಭಾಗದಷ್ಟು ಬೆಳತಿಗೆ ಅಕ್ಕಿಯನ್ನು ತೊಳೆದು ಅದರಲ್ಲಿ ಹಾಕುವುದು. ಹದವರಿತು ಉಪ್ಪು, ಏಲಕ್ಕಿಯನ್ನು ಸೇರಿಸಿ ಪಾಯಸ ಮಾಡಿ ದೇವತಾರ್ಚನೆ ಮಾಡುವುದು ಪಾವನತರವಾದುದು. ಇದೇ ರೀತಿಯಾಗಿ 'ಹೆಸರು ಪಾಯಸ', 'ಉಳ್ಳಿಪಾಯಸ', 'ಬೆಣ್ಣೆಯಪಾಯಸ', 'ತುಪ್ಪದಪಯಸ', ನಾಳಿಕೇರಕ್ಷೀರ', 'ಕದಳೀಪಕ್ವಫಲಸಾರ ಪಾಯಸ', 'ಮಾವಿನಕಾಯಿ ಕಲಸು'ಗಳನ್ನು ತಯಾರಿಸುವ ಬಗೆಯನ್ನು ಮಂಗರಸನು ತಿಳಿಸಿದ್ದಾನೆ.

ಬಿಸಿಯಾರಿದ ಅನ್ನಕ್ಕೆ ಮೊಸರು, ಮಾವಿನಕಯಿ, ಉಪ್ಪು, ಮೆಣಸು, ಈರುಳ್ಳಿ, ಏಲಕ್ಕಿ, ಹಸಿಶುಂಠಿಗಳನ್ನು ಹದವಾಗಿ ಸೇರಿಸಿ ಮಿದ್ದುವುದು ಇದಕ್ಕೆ 'ಮಾವಿನ ಕಟ್ಟೋಗರ' ಎಂದು ಹೆಸರು. ಜೋಳವನ್ನು ಸರಿಯಾಗಿ ನೆನೆಸಿ, ಕುಟ್ಟಿ ಓಗರವನ್ನು ತಯಾರಿಸುವುದು. ಅದರಲ್ಲಿ ಮಜ್ಜಿಗೆ, ಈರುಳ್ಳಿ, ಹಸಿಶುಂಠಿ, ಏಲಕ್ಕಿಗಳನ್ನು ಸೇರಿಸುವುದು. ಇದು 'ಮೊಸರ ಕಟ್ಟೋಗರ'. ಎಣ್ಣೆಯಲ್ಲಿ ಕರೆದ ಹುಣಸೆ

೧೭೬. ಡಾ. ಬಿ. ವಿ. ಶಿರೂರ (ಸಂ) : **ಮೂರನೆಯ ಮಂಗರಸ ಸಂಪುಟ : ಸೂಪಶಾಸ್ತ್ರ** ; ಪುಟ. ೯೨೩

ಹಣ್ಣಿನ ಗೊಜ್ಜನ್ನು ಅನ್ನಕ್ಕೆ ಸೇರಸಿ ಬೆಳ್ಳುಳ್ಳಿ, ಹುರಿದ ಉದ್ದು, ಇಂಗು, ಹಸಿಶುಂಠಿ, ಉಪ್ಪನ್ನು ಹಾಕಿ ಹದವಾಗಿ ಕಲಸುವುದು. ಇದು 'ಎಣ್ಣೆಯೋಗರ'. ಸಾಸುವೆಯನ್ನು ಸಣ್ಣಗೆ ಅರೆದು, ತಾಜಾ ನಿಂಬೆಯ ಹುಳಿಯನ್ನು ಹಿಂಡಿ, ಅರಿಸಿನ, ಜೀರಿಗೆ, ಮೆಂತ್ಯೆ, ಶುಂಠಿ, ಈರುಳ್ಳಿ ಸೇರಿಸಿ ಹದವಾಗಿ ಮಿದ್ದುವುದು ಇದರಿಂದ 'ಸಾಸುವೆ ಕಟ್ಟೋಗರ' ಸಿದ್ಧವಾಗುವುದು. ಇದೇ ರೀತಿಯಾಗಿ 'ಅಮೃತ ಕಟ್ಟೋಗರ', 'ಸೌಗಂಧಿಕಾ ರುಚಿಯೋಗರ', 'ಅನ್ನದ ಕಲಸೋಗರ'ಗಳನ್ನು ತಯಾರಿಸುವ ಬಗೆಗಳನ್ನು 'ಸೂಪಶಾಸ್ತ್ರ'ದಲ್ಲಿ ತಿಳಿಸಲಾಗಿದೆ.

ಒಂದು ಮಡಕೆಯ ನೀರಲ್ಲಿ ನಾಲ್ಕೈದು ರೀತಿಯ ಬೇರೆ ಬೇರೆ ಹೂಗಳನ್ನು ಹಾಕಿ ಉಪ್ಪು ಹಾಕಿ ನೆನೆಯಿಡುವುದು. ಕಸ್ತೂರಿ, ಏಲಕ್ಕಿ, ಲಾಮಂಚಗಳನ್ನು ಸೇರಸಿ ಅನ್ನ ಮಾಡಿದರೆ ಅದು 'ಪಾಣಿಭಾತು'. ಅಕ್ಕಿಯನ್ನು ನೆನೆಸಿ, ಕುಟ್ಟಿ ಅಂಬಿಲವನ್ನು ತಯಾರಿಸಿ, ಅದರಲ್ಲಿನ ಅರ್ಧವನ್ನು ತೆಗೆದುಕೊಂಡು ಜೀರಿಗೆಯನ್ನು ಸೇರಿಸಿ ಹದವಾಗಿ ಸೇರುವಂತೆ ಮಾಡುವುದು. ನಂತರ ಅದರಲ್ಲಿ ಹುಳಿಮಜ್ಜಿಗೆಯನ್ನು ಸೇರಿಸುವುದು. ಅಂಬಿಲದಲ್ಲಿ ಮೊಸರವನ್ನು ಸೇರಿಸಿ, ನಂತರ ಹಾಲು, ಉಪ್ಪು, ಕರಿಬೇವು, ಹಸಿಶುಂಠಿ, ಕೊತ್ತಂಬರಿ ಸೇರಿಸಿ ಮಾಡುವುದು 'ಸಿಹಿಯಂಬಲಿ'. ಇದನ್ನು ಇನ್ನೊಂದು ರೀತಿಯಲ್ಲಿ ಹೂವಿನ ಕಂಪು, ಮಜ್ಜಿಗೆ, ಶುಂಠಿಗಳನ್ನು ಸೇರಿಸಿ ತಯಾರಿಸಬಹುದು. ಇದಕ್ಕೆ ಹಾಲುಗೋದಿ, ಸೇವಂತಿ, ಮಲ್ಲಿಗೆ, ಲಾಮಂಚ, ಅರವಂತಿಗೆ, ಮುಡಿವಾಳ, ಹೊಂಬಾಳೆ, ಕಣಗಿಲೆ, ಬದನೆಯ ಎಳೆಗಾಯಿ, ಜೀರಿಗೆ, ಸಕ್ಕರೆ, ಕರ್ಪೂರ, ಪನ್ನೀರು, ಯಾಲಕ್ಕಿ, ಕರಿಬೇವು ಮುಂತಾದವುಗಳನ್ನು ಅಂಬಿಲಕ್ಕೆ ಬಳಸಬಹುದು ಎಂದು ಮಂಗರಸನು 'ಸೂಪಶಾಸ್ತ್ರ'ದ ಮೂರನೆಯ ಅಧ್ಯಾಯದಲ್ಲಿ ತಿಳಿಸಿದ್ದಾನೆ.

೪) ಶಾಕಪಾಕಾಧ್ಯಾಯ:

ಮೂರನೆಯ ಮಂಗರಸನು ತನ್ನ 'ಸೂಪಶಾಸ್ತ್ರ' ಗ್ರಂಥದ ನಾಲ್ಕನೆಯ ಅಧ್ಯಾಯದಲ್ಲಿ ಹಲವಾರು ಸಾಂಬಾರು ಪದಾರ್ಥಗಳನ್ನು ತಯಾರಿಸುವ ಬಗೆಯನ್ನು ೯೦ ಪದ್ಯಗಳಲ್ಲಿ ತಿಳಿಸಿದ್ದಾನೆ.

> **"ಭೂಕಾಂತರಂ ಮನಂಗೊಳಿಪ ಸವಿವಡೆದ ವ್ಯಂ**
> **ತಾಕಫಲಪಾಕ ಕದಳೀನಾಳ ಕುಸುಮಫಲ**
> **ಪಾಕಮಂ ಪಲ್ಲವಾಧರೆಯರಜಿವಂದಮಂ ಪೇಳ್ವೆನೆನ್ನಜಿವನಿತನು॥"**[೧೭೭]

ಮೊದಲು ಬದನೆಕಾಯಿ, ಬಾಳೆಯ ದಿಂಡು, ಬಾಳೆಯ ಹೂವು ಹಾಗೂ ಬಾಳೆಯ ಹಣ್ಣುಗಳನ್ನು ಬಳಸಿ ಖಾದ್ಯಗಳನ್ನು ಮಾಡುವ ಬಗೆಯನ್ನು ಹೇಳುವುದಾಗಿ ತಿಳಿಸುತ್ತಾನೆ.

ಹುರಿದ ಅಕ್ಕಿ, ಎಳ್ಳು, ಜೀರಿಗೆ, ಮೆಣಸು, ತೆಂಗಿನ ಕಾಯಿಗಳನ್ನು ತುಪ್ಪದಲ್ಲಿ ಹುರಿದುಕೊಳ್ಳುವುದು. ನಂತರ ಹಾಲಿನಲ್ಲಿ ಉದ್ದಿನ ಹಿಟ್ಟನ್ನು ನೆನೆಸಿ, ಹೆಸರುಬೇಳೆಗಳ ಸೊಜ್ಜಿಗೆಯನ್ನು ತಯಾರಿಸುವುದು. ನಂತರ ಕರಿಬೇವು, ಇಂಗು, ಕಡಲೆಯ ಹಿಟ್ಟು, ಅರಿಸಿನ ಪುಡಿ,

---

೧೭೭. ಡಾ. ಬಿ. ವಿ. ಶಿರೂರ (ಸಂ) : **ಮೂರನೆಯ ಮಂಗರಸ ಸಂಪುಟ : ಸೂಪಶಾಸ್ತ್ರ** ; ಪುಟ. ೯೩೩

ತೆಂಗಿನಕಾಯಿಯ ತುರಿ, ಹುರುಳಿ, ಸಾಸುವೆ, ಮೆಂತ್ಯದ ಹಿಟ್ಟುಗಳನ್ನು ಸೇರಿಸಿ ಹಪ್ಪಳ 'ಸಂಭಾರ' ಮಾಡುವುದು. ಎಳೆ ಬದನೆಕಾಯಿ ಕೊಯ್ದು, ಅರ್ಧ ನೀರು, ಅರ್ಧ ತುಪ್ಪವನ್ನು ಸೇರಿಸಿ ಈರುಳ್ಳಿ, ಹಸಿಶುಂಠಿಗಳನ್ನು ಹಾಕಿ ಬೇಯಿಸಿ ಶಾಕಪಾಕ ತಯಾರಿಸುವುದು.

ನೀರಿನಲ್ಲಿ ಹುಣಿಸೆಹುಳಿ ಹಾಕಿ, ಸರಿಯಾಗಿ ಕಿವುಚಿ ಹದವಾಗಿ ಸಕ್ಕರೆ, ಶುಂಠಿ, ಎಳ್ಳು, ಮೆಣಸು, ಜೀರಿಗೆಗಳನ್ನು ಸೇರಿಸಿ ಮರ್ದಿಸುವುದು. ನಂತರ ಶುಂಠಿ, ಏಲಕ್ಕಿ, ತೆಂಗಿನಕಾಯಿಯ ತುರಿಯನ್ನು ಸೇರಿಸಿ, ತುಪ್ಪದೊಳಗೆ ಕರಿಯುವುದು. ನಂತರ ಎಳೆಬದನೆಕಾಯಿಯ ಹೋಳುಗಳನ್ನು ತುಪ್ಪದಲ್ಲಿ ಕರೆದು ತೆಗೆಯುವುದು ಇದು 'ಸಕ್ಕರೆಬದನೆಕಾಯಿ'. ತುರಿದ ತೆಂಗಿನಕಾಯಿ, ಎಮ್ಮೆಹಾಲು ಸಮಪ್ರಮಾಣದಲ್ಲಿ ಬೆರೆಸಿ, ಬಿಳಿ ಮೆಣಸು, ಜೀರಿಗೆಗಳನ್ನು ಅರೆದು ಬೆಣ್ಣೆಯನ್ನು ಸೇರಸಿ ನೀರಿಂಗುವಂತೆ ಕಾಸಿದರೆ ಅದು ಹೊಸಗಿಣ್ಣದಂತೆ ಪರಿಮಳ ಬರುವುದು. ನಂತರ ಅದನ್ನು ತುಪ್ಪದಲ್ಲಿ ಕರೆದು ತೆಗೆದರೆ ಅದು 'ತುಳುವ ಬದನೆಕಾಯಿ' ಎನಿಸುವುದು. ತಿರುಳು ತೋಡಿದ ಬದನೆಕಾಯಿಯೊಳಗೆ ಉತ್ತಮವಾದ ಕಡಲೆ, ಹೆಸರು, ಉದ್ದು, ಕೊಬ್ಬರಿ, ಸೊಜ್ಜಿಗೆ, ಅನ್ನ, ಈರುಳ್ಳಿ, ಬಿಳಿ ಮೆಣಸು, ಸಕ್ಕರೆಯನ್ನು ಸೇರಿಸಿ ತುಪ್ಪದಲ್ಲಿ ಕರೆದು ಪರಿಮಳ ಬರುವಂತೆ ಕೊತ್ತಂಬರಿ ಸೊಪ್ಪನ್ನು ಹಾಕಿದರೆ ಅದು 'ಪೂರಣಪಕವೃಂತಾಕಫಲ' ಎನಿಸುವುದು. ಇದೇ ರೀತಿಯಾಗಿ 'ಬದನೆಹುರುಳಿಗಾಯಿ', 'ತುಂಬುಬದನೆಕಾಯಿ', 'ಎಣ್ಣೆಬದನೆಕಾಯಿ', 'ಮಧುರವೃಂತಾಪಾಕ', 'ಪುಳಿಚ್ಚುತಬದನೆಗಾಯಿ', 'ಶಾಕವಂಗಿ', 'ಭುಕ್ತವೃಂತಾಕ', 'ದುಗ್ಧವೃಂತಾಕ', 'ಹೂರಣವೃಂತಾಕ', 'ಹೂರಣಬದನೆಕಾಯಿ', 'ಗೌರಬದನೆಗಾಯಿ', 'ಬಟ್ಟತ್ರಿಕಬದನೆಗಾಯಿ', 'ಸಾಸುವೆಬದನೆಗಾಯಿ' ಹೀಗೆ ಬದನೆಕಾಯಿಯಿಂದ ಮಾಡಬಹುದಾದ ಹಲವಾರು ಖಾದ್ಯಗಳ ವಿವರಗಳನ್ನು ನೀಡಲಾಗಿದೆ.

ಮುಂದುವರೆದು, ಮೂರನೆಯ ಮಂಗರಸನು ಬಾಳೆಯ ಹೂಗಳನ್ನು ಬಳಸಿ ಅಡುಗೆ ಮಾಡುವ ಬಗೆಗಳನ್ನು ತಿಳಿಸಿದ್ದಾನೆ. ಗಟ್ಟಿಯಾದ ಮಜ್ಜಿಗೆಗೆ ವಿವಿಧ ಸಾಂಬಾರ ಪದಾರ್ಥಗಳನ್ನು ಹಾಕಿ ಒಲೆಯ ಮೇಲಿಟ್ಟು ಒಡೆಯದಂತೆ ಕಾಯಿಸುವುದು. ನಂತರ ಅದರಲ್ಲಿ ಬಾಳೆಯ ಹೂವು, ಶುಂಠಿ, ಬೆಳ್ಳುಳ್ಳಿಗಳನ್ನು ಹಾಕಿ ತುಪ್ಪದೊಂದಿಗೆ ಒಗ್ಗರಣೆ ಕೊಡುವುದು. ಅದು 'ತಕ್ರರಂಭಾಕುಸುಮಪಾಕ' ಎನಿಸುವುದು. ಇದೇ ರೀತಿಯಾಗಿ 'ಅಮೃತ ರಂಭಾಕುಸುಮ ಪಾಕ', 'ಕ್ಷತಕ್ಷೀರ ರಂಭಾಕುಸುಮ ಪಾಕ', 'ಮಿಶ್ರ ರಂಭಾಕುಸುಮ ಪಾಕ', 'ದಧಿಸಾರಿಕಾಮೋಚ ಕುಸುಮ ಪಾಕ', 'ವೃಂತಾಕ ರಂಭಾಕುಸುಮ ಪಾಕ', 'ಕದಂಬ ರಂಭಾಕುಸುಮ ಪಾಕ', 'ಗೋಧೂಮ ರಂಭಾಕುಸುಮ ಪಾಕ', 'ನವ್ಯಕದಳೀಕುಸುಮ ಪಾಕ', 'ಚಣಕ ರಂಭಾಕುಸುಮ ಪಾಕ', 'ಖಂಡ ರಂಭಾಕುಸುಮ ಪಾಕ', 'ಮುದ್ಗ ರಂಭಾಕುಸುಮ ಪಾಕ', 'ಕದಂಬರಂಭಾಶೂಲ್ಯ', 'ಮಂಡಕಮಿಶ್ರ ರಂಭಾಕುಸುಮ ಪಾಕ', 'ಚೂರ್ಣ ರಂಭಾಕುಸುಮ ಪಾಕ', 'ಕಹರೀ ರಂಭಾಕುಸುಮ ಪಾಕ', 'ಕದಳೀ ಕುಸುಮನವಪೂರ್ಣ', 'ದುಗ್ಧಪಾಕ ಕದಳೀಕುಸುಮ' ಎಂಬ ವಿವಿಧ ಬಗೆಯ ಅಡುಗೆಗಳನ್ನು ಮಾಡುವ ವಿಧಾನಗಳನ್ನು ತಿಳಿಸಿದ್ದಾನೆ.

ಬಾಳೆಯ ದಿಂಡಿನಿಂದ ತಯಾರಿಸಬಹುದಾದ ವಿವಿಧ ಅಡುಗೆಗಳ ವಿಧಾನಗಳನ್ನು 'ಸೂಪಶಾಸ್ತ್ರ' ಗ್ರಂಥದಲ್ಲಿ ತಿಳಿಸಲಾಗಿದೆ. ಬಾಳೆಯ ದಿಂಡನ್ನು ಉಕ್ಕರಿಸಿ ಬಸಿದು, ಹಾಲು, ಉಪ್ಪು, ಸಕ್ಕರೆ, ಹುಣಿಸೆ, ಮೆಣಸು, ನಿಂಬೆಯಹಣ್ಣುಗಳನ್ನು ಸೇರಿಸಿ ಕುದಿಸುವುದು. ನಂತರ ಅದಕ್ಕೆ ಸಕ್ಕರೆ, ತುಪ್ಪಗಳನ್ನು ಸೇರಿಸುವುದು. ಹೀಗೆ ಮಾಡಿದ ಪಾಕವನ್ನು ಕುಡಿಯುವುದು ಆರೋಗ್ಯಕ್ಕೆ ಉತ್ತಮವೆಂದು ಮಂಗರಸನ ಅಭಿಮತವಾಗಿದೆ. ಅದೇ ರೀತಿಯಾಗಿ ಬಾಳೆಕಾಯಿಯಿಂದ ತಯಾರಿಸಬಹುದಾದ ಅಡುಗೆಗಳನ್ನು ತಿಳಿಸಿದ್ದಾನೆ. 'ತುಂಬುವಾಳೆಗಾಯಿ', 'ಮೋಚಫಲ', 'ಕದಳೀಫಲಸ್ವಾದುತರ ಪಾಕ', 'ಕದಂಬಕದಳೀಫಲಸುಪಾಕ', 'ಭುಕ್ತಕದಳೀನವ್ಯಪಾಕ', 'ಕ್ಷೀರ ರಂಭಾ ಪಾಕ', 'ಸಿತಮೋಚಕಫಲ', 'ಯೋಗಕದಳೀಪಾಕ' ಹೀಗೆ ವಿವಿಧ ಬಗೆಯ ಖಾದ್ಯಗಳನ್ನು ಮಾಡುವ ಬಗೆಯನ್ನು ಮೂರನೆಯ ಅಧ್ಯಾಯದಲ್ಲಿ ತಿಳಿಸಲಾಗಿದೆ.

೫) ಶಾಕಪಾಕಾಧ್ಯಾ – ೨ :

> **"ಹೀರೆಕುಂಬಳ ಹಾಲುಗುಂಬಳ ಪನಸಫಲದ**
> **ಸಾರತರ ಶಾಕಭೇದಬ ನಾನು ಬಲ್ಲನಿತ**
> **ಚಾರು ಚಂದ್ರಾನನೆಯರಜೆವಮಾಳ್ಕೆಯೊಳಾನುರಾಗದಿಂದವೆಯುಸುರ್ವೆನು॥"**[೧೭೮]

'ಸೂಪಶಾಸ್ತ್ರ'ದ ಐದನೆಯ ಅಧ್ಯಾಯದಲ್ಲಿ 'ಶಾಕಪಾಕ'ಗಳ ವಿಧಾನಗಳನ್ನೇ ಮುಂದುವರೆಸಲಾಗಿದೆ. ಮಂಗರಸನು ಈ ಅಧ್ಯಾಯದಲ್ಲಿ ಕುಂಬಳ, ಹೀರೆಕಾಯಿ, ಹಲಸಿನ ಕಾಯಿಗಳಿಂದ ವಿವಿಧ ಖಾದ್ಯಗಳನ್ನು ಮಾಡುವ ಬಗೆಗಳನ್ನು ೭೫ ಪದ್ಯಗಳಲ್ಲಿ ತಿಳಿಸಿದ್ದಾನೆ.

ಹೀರೆಯ ಎಳೆಗಾಯಿಯನ್ನು ಕೊಯ್ದು ತಕ್ಷಣ ಅದರ ಧಾರೆಯನ್ನು ಕೆತ್ತುವುದು. ನೀರು, ಉಪ್ಪು, ಬೆಳ್ಳುಳ್ಳಿ, ಕರಿಬೇವು, ಕೊತ್ತಂಬರಿಗಳನ್ನು ಅದಕ್ಕೆ ಸೇರಿಸಿ ಒಲೆಯ ಮೇಲಿಟ್ಟು ಅದಕ್ಕೆ ತುಪ್ಪವನ್ನು ಹಾಕುವುದು. ತುಪ್ಪವು ಇಂಗುವವರೆಗೆ ಅದನ್ನು ಕಾಯಿಸುವುದು. ಉತ್ತಮವಾದ ಹೀರೆಯ ಖಾದ್ಯ ಸಿದ್ಧವಾಗುವುದು. ಅದರಂತೆಯೇ ಎಳೆ ಹೀರೆಯ ಧಾರೆಯನ್ನು ತೆಗೆದು ಅದರ ಒಳಗಿನ ತಿರುಳನ್ನು ತೋಡಿ ತೆಗೆಯುವುದು. ನಂತರ ಅದರ ನಾಲ್ಕನೆಯ ಒಂದು ಭಾಗದಷ್ಟು ಬೆಲ್ಲವನ್ನು ತೆಗೆದುಕೊಂಡು, ತುಪ್ಪ, ತೆಂಗಿನಕಾಯಿಯ ತುರಿಯನ್ನು ಸೇರಿಸಿ, ಹೀರೆ ಎಳೆಗಾಯಲ್ಲಿ ತುಂಬಿ ತುಪ್ಪದಲ್ಲಿ ಕರೆಯುವುದು. ಇದೇ ರೀತಿಯಾಗಿ ಹೀರೆಯ ಹಪ್ಪಳ, ಹೀರೆ ಪಲ್ಯ, ಹೀರೆಯ ಸಿಹಿಖಾದ್ಯಗಳನ್ನು ಮಾಡುವ ಬಗೆಗಳನ್ನು ತಿಳಿಸಲಾಗಿದೆ.

ಮುಂದುವರೆದು, 'ಮಂಡಿಸಿದ ಕೂಷ್ಮಾಂಡ', ಅಮೃತಕೂಷ್ಮಾಂಡ' ಎಂಬ ಕುಂಬಳಕಾಯಿಯ ಖಾದ್ಯಗಳನ್ನು ಮಾಡುವ ಬಗೆಯನ್ನು ತಿಳಿಸಿದ್ದಾನೆ. ಹಾಗೆಯೇ ಹಲಸಿನ ಎಳೆಗಾಯಿ ಹಾಗೂ ಬಲಿತ ಕಾಯಿಗಳಿಂದ ಮಾಡಬಹುದಾದ 'ಪನಸಫಲಪಾಕ', 'ಪನಸೋಗರ', 'ಪನಸರಸಪಾಕ', 'ಪೂರಣಪನಸಫಲಸುಪಾಕ', 'ಪನಸಭಂಜಿತಶಾಕ', 'ಕದಂಬ ಭರ್ಜಿತ

---

೧೭೮. ಡಾ. ಬಿ. ವಿ. ಶಿರೂರ (ಸಂ) : **ಮೂರನೆಯ ಮಂಗರಸ ಸಂಪುಟ : ಸೂಪಶಾಸ್ತ್ರ** ; ಪುಟ. ೯೫೦

ಪನಸಫಲಶಾಕ', 'ಹನಸ ಸೀಕರಣೆ', 'ಪನಸಫಲ ಕ್ಷೀರಪಾಕ', 'ವೃಂತಾಕ ಪನಸಶಲಾಕ', ಭಕ್ತಫಲ ನೀರಪನಸ', 'ತೆರದೀರಪಲಸಕಾಯಿಪಾಕ', 'ನೀರಪಲಸ ಚಿತ್ರಪಾಕ' ಎಂಬ ವಿವಿಧ ಖಾದ್ಯಗಳನ್ನು ಮಾಡುವ ಬಗೆಗಳನ್ನು ಮಂಗರಸನು ಈ ಅಧ್ಯಾಯದಲ್ಲಿ ನಿರೂಪಿಸಿದ್ದಾನೆ.

೬) ಶಾಕಪಾಕಾಧ್ಯಾ – ೩ :

> **"ಕಳಿಲೆ ಹಾಗಲ ನೆಲ್ಲಿ ಮೂಲಂಗಿ ಹಾಲು ಕಂ**
> **ಗೊಳಿಪ ಮೊಸರೊಡೆ ಪತ್ರದೊಡೆ ಕಣಿಕ ಪಲತೆಱದ**
> **ಬಿಳಿಯವದಳದ ಹೋಳಿಗೆಯ ಶಾಕಪಾಕಮಂ ಸತಿಯರಜೆವಂತೊಱೆವೆನು॥"**[೧೭೯]

ಸೂಪಶಾಸ್ತ್ರದ ಕೊನೆಯ ಅಧ್ಯಾಯದಲ್ಲಿ ಮೂರನೆಯ ಮಂಗರಸನು ಎಳೆಬಿದಿರು, ಹಾಗಲಕಾಯಿ, ನೆಲ್ಲಿ, ಮೂಲಂಗಿ, ಹಾಲು, ಮೊಸರು ಮುಂತಾದ ಪದಾರ್ಥಗಳನ್ನು ಬಳಸಿ ಅಡುಗೆ ಮಾಡುವ ವಿಧಾನಗಳನ್ನು ೨೨ ಪದ್ಯಗಳಲ್ಲಿ ಚರ್ಚಿಸಿದ್ದಾನೆ.

ಎಳೆ ಬಿದಿರಿನ ಮೊಳಕೆಯನ್ನು ಕತ್ತರಿಸಿ, ಸುಣ್ಣದ ತಿಳಿನೀರಲ್ಲಿ ತೊಳೆದು, ಕುದಿಸುವುದು. ನಂತರ ಆ ನೀರನ್ನು ತೆಗೆಯುವುದು. ಬೆಂದಿರುವ ಕಳಲೆಯನ್ನು ಚೆನ್ನಾಗಿ ಕಿವುಚಿ ಮತ್ತೊಮ್ಮೆ ಬಿಸಿನೀರಿನಿಂದ ತೊಳೆಯುವುದು. ನೀರೆಲ್ಲ ಬಸಿದು ಹೋಗುವಂತೆ ಹಿಂಡುವುದು. ನಂತರ ಅದನ್ನು ತುಪ್ಪದಲ್ಲಿ ಬೇಯಿಸಿಕೊಂಡು ತಿಂದರೆ ಅದಕ್ಕೆ ಸಮನಾದ ಸವಿ ಬೇರೊಂದಿಲ್ಲ ಎನ್ನುತ್ತಾನೆ. ಮಂಗರಸ. ಇದೇ ರೀತಿಯಾಗಿ ಬಿದಿರ ಕಳಲೆಯಿಂದ 'ಚುಚ್ಚುಗಳಿಲೆ', 'ಗಾರಿಗೆಗಳಿಲೆ', 'ಕಳಲೆಯ ಹೋಳಿಗೆ', 'ಕಳಲೆಯ ಸೊಜ್ಜಿಗೆ' ಎಂಬ ಖಾದ್ಯಗಳನ್ನು ಮಾಡುವ ಬಗೆಗಳನ್ನು ತಿಳಿಸಿದ್ದಾನೆ.

ಅಂತೆಯೇ ಪುಳಿಚಾರು, ಪೂರ್ಣವಟಿ, ಭುಕ್ತಭಂಜಿತಶಾಕ, ತುಳುವ, ಶಾಕವಂಗಿ, ಶೂಲ್ಯಕ, ದಧಿಸಾರಿಕೆಗಳನ್ನು ಸೇರಿಸಿ ಮಾಡಿದ ವಿಶೇಷ ಖಾದ್ಯಕ್ಕೆ 'ಕಹರಿಯಡಕೆತಾಳಿಲ' ಎಂದು ಹೆಸರಿಸಿದ್ದಾನೆ. ಇನ್ನೂ ನೆಲ್ಲಿಕಾಯಿಯಿಂದ 'ಆಮಲಕಚೂರ್ಣ', 'ಸಿತಾಮಲಕ' ಎಂಬ ವಿಶಿಷ್ಟ ಖಾದ್ಯಗಳನ್ನು ಮಾಡುವ ಬಗೆಗಳನ್ನು ಮಂಗರಸನು ತನ್ನ 'ಸೂಪಶಾಸ್ತ್ರ' ಗ್ರಂಥದ ಕೊನೆಯ ಅಧ್ಯಾಯದಲ್ಲಿ ನಿರೂಪಿಸಿದ್ದಾನೆ.

ಹೀಗೆ ತಿಳಿಸುವ ಆಹಾರ ಪದಾರ್ಥಗಳು ಇಂದಿನ ವೇಗಗತಿಯ ಆಧುನಿಕ ಜೀವನಕ್ಕೆ ಹೊಸದೆನಿಸಿದರೂ, ಈ ಖಾದ್ಯಗಳಲ್ಲಿ ಆಯುರ್ವೇದ ವಿಜ್ಞಾನವು ಹೇಳುವ ಪೌಷ್ಟಿಕ ಆಹಾರಗಳನ್ನು 'ಸೂಪಶಾಸ್ತ್ರ' ಗ್ರಂಥವು ತಿಳಿಸುತ್ತದೆ. ಬಾಳೆಯ ದಿಂಡು, ಬಾಳೆಯ ಹೂವು ಹಾಗೂ ಎಳೆ ಬಿದಿರಿನಿಂದ ಮಾಡಬಹುದಾದ ಖಾದ್ಯಗಳನ್ನು ತಿಳಿಸಿರುವುದು ವಿಶೇಷವೆನಿಸುತ್ತದೆ. ಇಂತಹ ಆಹಾರಗಳು "ದೇಹವನ್ನು ಸೇರವುದರಿಂದ ದೇಹದಲ್ಲಿ ಅಂತಃಸ್ರಾವಿ ಗ್ರಂಥಿಗಳು ಚೆನ್ನಾಗಿ ಕಾರ್ಯ ಮಾಡುತ್ತಿದ್ದವು. ಇದರಿಂದ ಹಿರಿಯ ತಲೆಮಾರಿನವರು ದೀರ್ಘಾಯುಗಳಾಗಿದ್ದರು. ಬಂಜೆತನ,

---

೧೭೯. ಡಾ. ಬಿ. ವಿ. ಶಿರೂರ (ಸಂ) : **ಮೂರನೆಯ ಮಂಗರಸ ಸಂಪುಟ : ಸೂಪಶಾಸ್ತ್ರ** ; ಪುಟ. ೯೬೬

ಗರ್ಭಕೋಶದ ದುಃಸ್ಥಿತಿ, ಶಸ್ತ್ರಚಿಕಿತ್ಸೆ ಮುಂತಾದ ತೊಂದರೆಗಳಿಲ್ಲದೇ ನಿರಾಳವಾಗಿ ಬದುಕಿದ್ದರು."[೧೮೦] ಎಂದು ಡಾ. ಧನ್ಯಕುಮಾರ ಇಜಾರಿಯವರು ಅಭಿಪ್ರಾಯಪಡುತ್ತಾರೆ.

೫.೫. ವೃಷ್ಟಿಶಾಸ್ತ್ರ:

'ವೃಷ್ಟಿ' ಎಂದರೆ ಮಳೆ. ಮಳೆಯ ಕುರಿತಾದ ವಿವರಗಳನ್ನು ತಿಳಿಸುವ ಶಾಸ್ತ್ರವೇ 'ವೃಷ್ಟಿಶಾಸ್ತ್ರ' ಅಥವಾ' ಜಲಶಾಸ್ತ್ರ'. ಭೂಮಿಯ ಮೇಲೆ ಮಳೆಯಾಗಿ ಸುರಿದ ನೀರು ಹಳ್ಳ-ಕೊಳ್ಳ, ಬಾವಿ, ಕೆರೆ, ಹೊಳೆಗಳಲ್ಲಿ ಸಂಗ್ರಹವಾಗುತ್ತದೆ. ಭೂಮಿಯ ಆಳಕ್ಕೆ ಸೇರಿ ಅಂತರ್ಜಲವಾಗುತ್ತದೆ. ಅದರಲ್ಲಿನ ಒಂದಿಷ್ಟು ಭಾಗ ಆವಿಯಾಗಿ ಆಕಾಶವನ್ನು ಸೇರುತ್ತದೆ. ನದ-ನದಿಗಳಿಂದ ಹರಿದು ಸಾಗುವ ಒಂದಿಷ್ಟು ನೀರು ಸಮುದ್ರ, ಸಾಗರಗಳನ್ನು ಸೇರುತ್ತದೆ. ಹೀಗೆ ಮಳೆಯ ಮೂಲಕ ಸುರಿಯುವ ನೀರು ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಗೂ ಜೀವನಾಧಾರ. ಅದಕ್ಕಾಗಿಯೇ ನೀರನ್ನು ಜೀವಜಲ ಎಂದು ಕರೆಯಲಾಗುತ್ತದೆ. ಭೂಮಿಯ ಶೇ. ೭೦ರಷ್ಟು ಭಾಗವನ್ನು ನೀರೇ ಆಕ್ರಮಿಸಿಕೊಂಡಿದೆ. ಆದರೆ ಇದೆಲ್ಲವೂ ಕುಡಿಯಲು ಯೋಗ್ಯವಲ್ಲ ಎಂಬುದು ಸರ್ವವಿದಿತ. ನೀರು ಜಲಜನಕ ಹಾಗೂ ಆಮ್ಲಜನಕಗಳ ಸಂಯುಕ್ತವಸ್ತುವಾಗಿದೆ. ನೀರಿನ ವೈಜ್ಞಾನಿಕ ಅಣುಸೂತ್ರ H_2O. ಜಲಜನಕದ ಎರಡು ಅಣುಗಳು ಮತ್ತು ಆಮ್ಲಜನಕದ ಒಂದು ಅಣುವೂ ಸೇರಿ ನೀರಿನ ಒಂದು ಅಣುವಾಗುವುದು. ಈ ನೀರಿನಲ್ಲಿಯೇ ಆದಿಜೀವಗಳು ಜನ್ಮತಳೆದವು. ನಂತರ ಉಭಯವಾಸಿಗಳು. ಉಭಯವಾಸಿಗಳಿಂದ ಭೂವಾಸಿ ಜೀವಗಳು ಹುಟ್ಟಿದವು ಎಂದು ವಿಜ್ಞಾನವು ನಿರೂಪಿಸುತ್ತದೆ. ಅಂತೆಯೇ ಜೀವನಾಡಿಯಾಗಿರುವ ನೀರು ಮಳೆಯ ಮೂಲಕ ಸುರಿದರೆ ಮಾತ್ರ ಸಸ್ಯವರ್ಗ, ಪ್ರಾಣಿವರ್ಗಗಳು ಸಂತುಷ್ಟವಾಗಿ ಭೂಮಿಯ ಮೇಲೆ ಬದುಕುತ್ತವೆ. ಇಲ್ಲವಾದಲ್ಲಿ ಇಲ್ಲ.

"ನೈಸರ್ಗಿಕ ವ್ಯಾಪಾರಗಳಲ್ಲಿ ನೀರು ವಹಿಸುವ ಪಾತ್ರ ಮಹತ್ತ್ವಪೂರ್ಣವಾದುದು. ಭೂಮಿಯ ಹೊರಚಿಪ್ಪಿನ ರಚನೆಯಲ್ಲಿ ಸತತವಾಗಿ ಆಗುತ್ತಿರುವ ಬದಲಾವಣೆಗಳಲ್ಲಿ ಅದು ಪ್ರಮುಖ ಪಾತ್ರ ವಹಿಸುತ್ತದೆ. ಹಿಂದೆಯೇ ಹೇಳಿದಂತೆ ಮಳೆ ಮತ್ತು ಹಿಮಪಾತಗಳ ರೂಪದಲ್ಲಿ ಭೂಮಿಯ ಮೇಲೆ ಬೀಳುವ ನೀರು ಅದರಲ್ಲಿ ವಿಲೀನವಾಗುವ ಲವಣಾದಿಗಳನ್ನೂ ಅದರ ಹರಿವಿನ ಹೊಡೆತದಿಂದ ಕೊಚ್ಚಿಹೋಗುವ ಮಣ್ಣನ್ನೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುತ್ತದೆ. ದೀರ್ಘಕಾಲದಲ್ಲಿ ಶಿಲೆಗಳು ಸಹ ಸವೆದುಹೋಗುತ್ತದೆ. ಭೂಮ್ಯಂತರ್ಗತ ಜಲವಾಹಿನಿಗಳೂ ಈ ಬಗೆಯ ಕ್ರಿಯೆಯನ್ನು ನಡೆಸುತ್ತವೆ. ಭೂಮಿಯ ಮೇಲ್ಮೈಯಲ್ಲಿ ಆಗುವ ಬದಲಾವಣೆಗಳಲ್ಲಿ ನೀರು ಈ ರೀತಿ ಪ್ರಮುಖ ಪಾತ್ರ ವಹಿಸುತ್ತದೆ. ವಾಯುಮಂಡಲದ ವ್ಯಾಪಾರಗಳಲ್ಲಿ ನೀರು ವಹಿಸುವ ಪಾತ್ರವಂತೂ ಸ್ಪಷ್ಟವಾಗಿ ಕಾಣುತ್ತದೆ. ಮೋಡಗಳು

---

೧೮೦. ಡಾ. ಧನ್ಯಕುಮಾರ ಇಜಾರಿ : **ಜೈನ ಲೌಕಿಕ ಸಾಹಿತ್ಯ ಸಂಪದ** ; ಪುಟ. ೧೪೪

ರೂಪುಗೊಳ್ಳುವುದು, ಗುಡುಗು, ಸಿಡಿಲು, ಮಿಂಚು ಇವೆಲ್ಲ ಅದರ ಪರಿಣಾಮಗಳು."[೧೮೧] ಈ ಜೀವಜಲದ 'ಮರುಸೃಷ್ಟಿ' ಅಂದರೆ 'ವೃಷ್ಟಿ'. ಆ ವೃಷ್ಟಿಯನ್ನು ಕುರಿತಾದ ಜ್ಞಾನವೇ 'ವೃಷ್ಟಿಶಾಸ್ತ್ರ'ವಾಗಿದೆ. ಈ ವೃಷ್ಟಿಶಾಸ್ತ್ರ ಕುರಿತಾಗಿ ಕನ್ನಡದಲ್ಲಿ ಉಪಲಬ್ಧವಾಗಿರುವ ಏಕೈಕ ಗ್ರಂಥವೆಂದರೆ 'ಅಟ್ಟಮತ'. ಈ ಗ್ರಂಥದ ಕರ್ತೃ 'ಅರ್ಹದ್ದಾಸ'. ಈತನಿಗೆ 'ರಟ್ಟಕವಿ', 'ಅಟ್ಟುಗ' ಎಂಬ ಹೆಸರುಗಳೂ ಇವೆ.

೫.೫.೧. ಅರ್ಹದ್ದಾಸ (೧೩೦೦):

"ಅರ್ಹದ್ದಾಸ ಜೈನಕವಿ; 'ವೃಷ್ಟಿಶಾಸ್ತ್ರ' ಕುರಿತಾದ 'ರಟ್ಟಮತ' ಎಂಬ ಗ್ರಂಥವನ್ನು ಬರೆದಿದ್ದಾನೆ. ಮಾರಸಿಂಹನ ಚಮೂಪತಿಯಾದ ಕಾಡಮರಸನ ವಂಶದಲ್ಲಿ ಹುಟ್ಟಿದವನು. 'ಜಿನನಗರಪತಿ', 'ಗಿರಿನಗರಾಧೀಶ್ವರ' ಎಂದು ತನ್ನನ್ನು ತಾನು ವಿಶೇಷಿಸಿಕೊಂಡಿದ್ದಾನೆ. ಈತನ ತಂದೆ ನಾಗಕುಮಾರ. ಈತನ ಕಾಲ ಸುಮಾರು ೧೩೦೦."[೧೮೨] "ರಟ್ಟಕವಿಯ ಮೂಲಪುರುಷ ಕಾಡಮರಸ. ಇವನು ತಲಕಾಡಿನ ಗಂಗರಾಜ ಮಾರಸಿಂಹ ಎಂಬುವವನಲ್ಲಿ ದಂಡನಾಯಕನಾಗಿದ್ದನು. ತನ್ನ ಪರಾಕ್ರಮದ ಫಲವಾಗಿ ಅರಸನಿಂದ ಇಪ್ಪತ್ತೈದು ಗ್ರಾಮಗಳನ್ನು ಮಾನ್ಯವಾಗಿ ಪಡೆದಿದ್ದನು. ಇವನಿಗೆ 'ಅಟ್ಟ', 'ಅಟ್ಟವೆಡಂಗ', 'ಅಟ್ಟಗ', 'ಅಟ್ಟಯ್ಯ', 'ಅಟ್ಟಣ್ಣ' ಎಂಬ ಹೆಸರುಗಳೂ ಉಂಟು. 'ಉದಾರಚಿಂತಾಮಣಿ', 'ಆಗಮಕೋವಿದಂ', 'ಅಭಿಮಾನಜಲಧಿ', 'ವಿನಯಾಂಬುರಾಶಿ', 'ಕೀರ್ತಿರಮಣೀಯರಮಣಂ', 'ಸುಜನೈಕಬಾಂಧವ', 'ಕವಿಗಳಾಭರಣಂ', 'ನಯಬಂಧು', 'ಬಂಧುಮಿತ್ರ', 'ಕವಿಪಂಕಜಭವಂ', 'ಅಟ್ಟಕವೀಂದ್ರ', 'ಒಳ್ಪಿನಕಣಿ', 'ವಿಶಿಷ್ಟಪ್ರಿಯಂ', 'ಬಿನ್ನಣ ಅಟ್ಟುಗಂ', 'ಸಮ್ಯಕ್ತ್ವ ರತ್ನಾಕರಂ', 'ಅರ್ಹದ್ದಾಸಂ', 'ಜಿನಪದದಾಸಂ', 'ಅಭಿನವಗಾರ್ಗ್ಯ', 'ಜಿನನಗರಪತಿ', 'ಪ್ರಣುತ ಜಿನಭಕ್ತ' ಎಂಬ ಬಿರುದುಗಳಿದ್ದವು."[೧೮೩] ಕವಿಯ ಹುಟ್ಟೂರಿನ ಬಗೆಗೆ ಯಾವುದೇ ಮಾಹಿತಿಗಳು ಲಭಿಸುವುದಿಲ್ಲವಾದರೂ ತಾನೇ ಹೇಳಿಕೊಂಡಿರುವ 'ಜಿನನಗರಪತಿ' ಎಂಬ ಬಿರುದನ್ನಾಧರಿಸಿ ಎಚ್. ಶೇಷ ಅಯ್ಯಂಗಾರ್ ಅವರು "ಈತನು ಜಿನನಗರ ಎಂಬ ಗ್ರಾಮದ ಒಡೆಯನಾಗಿದ್ದಿರಬೇಕು. ಅದೇ ಅವನ ಹುಟ್ಟೂರಾಗಿರಬಹುದು"[೧೮೪] ಎಂದು ಊಹಿಸಿದ್ದಾರೆ.

೫.೫.೧.೧. ಅಟ್ಟಮತ:

ಅಟ್ಟಕವಿ ವಿರಚಿಸಿರುವ 'ಅಟ್ಟಮತ' ಎಂಬ ಕೃತಿಯು ಮಳೆಶಾಸ್ತ್ರವನ್ನು ವಿವರಿಸುತ್ತದೆ. ಈ ಗ್ರಂಥಕ್ಕೆ 'ಅಟ್ಟಶಾಸ್ತ್ರ' ಎಂಬ ಇನ್ನೊಂದು ಹೆಸರೂ ಇದೆ. ಗ್ರಂಥಕಾರನು ಕೆಲವೆಡೆ 'ಅಟ್ಟಸೂತ್ರ' 'ಮೇಘಾಡಂಬರ', 'ಮೇಘಮಾಲೆ' ಎಂದೂ ಹೆಸರಿಸಿರುವನು. ೧೯೫೦ರಲ್ಲಿ ಮದ್ರಾಸ್

---

೧೮೧. **ಕನ್ನಡ ವಿಶ್ವಕೋಶ** – ಮೈಸೂರು ವಿಶ್ವವಿದ್ಯಾಲಯ : ಸಂಪುಟ–೧೧ ; ಪುಟ. ೧೧೨

೧೮೨. ಆರ್. ನರಸಿಂಹಾಚಾರ್ಯ ; **ಕರ್ಣಾಟಕ ಕವಿಚರಿತೆ (ಪ್ರಥಮ ಸಂಪುಟ)** : ಪುಟ. ೪೬೬

೧೮೩. ಎಚ್. ಶೇಷ ಅಯ್ಯಂಗಾರ್ (ಸಂ): **ರಟ್ಟಮತಂ** ; ಪುಟ. xi

೧೮೪. **ಅದೇ** ; ಪುಟ. xi

ವಿಶ್ವವಿದ್ಯಾಲಯದ ಅಧ್ಯಾಪಕರಾಗಿದ್ದ ಹೆಚ್. ಶೇಷ ಅಯ್ಯಂಗಾರ್ ಅವರು ಮದ್ರಾಸ್ ಸರ್ಕಾರದ ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳನ್ನು ಆಧರಿಸಿ ಈ ಗ್ರಂಥವನ್ನು ಮೊದಲ ಬಾರಿಗೆ ಸಂಪಾದಿಸಿದರು. ಈ ಗ್ರಂಥದಲ್ಲಿ ವಿಶ್ಲೇಷಿತವಾಗಿರುವ ಮಳೆ ಬರುವುದು ಮತ್ತು ಬರದಿರುವ ವಿಚಾರವನ್ನು ತಿಳಿಸಿರುವುದನ್ನು ಅನುಸರಿಸಿ ಇದನ್ನು 'ಮೞೆಯ ಕುಱುಹು' ಅಥವಾ 'ವೃಷ್ಟಿಶಾಸ್ತ್ರ'[೧೮೫] ಎಂದು ಕರೆಯುವುದು ಎಂದು ಸಂಪಾದಕರು ಉಲ್ಲೇಖಿಸುತ್ತಾರೆ. ಅಲ್ಲದೇ 'ಮೇಘಾಡಂಬರ', 'ಮೇಘಮಾಲೆ' ಎಂದು ಹೆಸರಿಸಿರುವುದರಿಂದ 'ರಟ್ಟಮತ'ದ ರಚನೆಗೆ ಸಂಸ್ಕೃತದ ಈ ಎರಡು ಗ್ರಂಥಗಳನ್ನು ಅನುಸರಿಸಿರಬಹುದು ಎಂದು ಸಂಪಾದಕರು ಊಹಿಸುತ್ತಾರೆ. ೧೨ ಅಧ್ಯಾಯಗಳಿರುವ 'ಱಟ್ಟಮತ' ಕೃತಿಯಲ್ಲಿ ವೃತ್ತ, ಕಂದಪದ್ಯ, ತ್ರಿಪದಿ ರಗಳೆಗಳಿಂದೊಡಗೂಡಿದ ಒಟ್ಟು ೯೦೦ ಪದ್ಯಗಳಿವೆ. ೧೪ ನೆಯ ಶತಮಾನದಲ್ಲಿದ್ದ ಭಾಸ್ಕರನೆಂಬ ಆಂಧ್ರಕವಿಯು 'ಱಟ್ಟಮತ'ವನ್ನು ತೆಲುಗಿಗೆ ಭಾಷಾಂತರ ಮಾಡಿದ್ದಾನೆ.

೧) ಪ್ರಥಮಾಧ್ಯಾಯಂ : ಪೀಠಿಕಾ ಪ್ರಕರಣಂ

ವಾಡಿಕೆಯಂತೆ ಅರ್ಹದ್ದಾಸನು ಕೃತಿಯ ಆರಂಭದಲ್ಲಿ ಜಿನಾರಾಧನೆಯನ್ನು ಮಾಡಿದ್ದಾನೆ. ಅದಾದ ಮೇಲೆ ಯಕ್ಷ-ಯಕ್ಷಿಯರ ಸ್ತುತಿಯನ್ನೂ, ಸರಸ್ವತೀ ಸ್ತುತಿಯನ್ನೂ ಮಾಡಿದ್ದಾನೆ. ನಂತರ ಸ್ವ-ವಿಚಾರವನ್ನು ತಿಳಿಸಿ ಕೃತಿಯನ್ನು ಆರಂಭಿಸುತ್ತಾನೆ.

"ಇಳೆಯೊಳ್ ಸ್ಥಾವರ ಜಂಗಮ
ಮೞೆಯಲ್ಲದೆ ಬೆರ್ಚುತಿರ್ಕುಮದುಕಾರಣದಿಂ
ಮೞೆಯನಱಿವಂತೆ ಪೇೞ್ದಂ
ಮೞೆಯಂದವ ಪೊಸತುಮಾಡಿ ಕನ್ನಡದಿಂದಂ ||೦೧.೨೮||

ಅದಱಿಂ ಧಾನ್ಯಚಯಂ ಬೆಳೆ
ವುದುದನಱಿವೊಡೆ ಮೞೆಯನಱಿದು ಪೇೞ್ವುದು ಮತ್ತಂ
ತೊದಳಿಲ್ಲದೆ ಕಲಿವುಲ್ವುದು ಪೇ
ೞ್ವುದು ನೆಟ್ಟನೆ ಱಟ್ಟನೆಂದ ಸೂತ್ರಕ್ರಮದಿಂ ||೦೧.೩೦||"[೧೮೬]

ಭೂಮಿಯ ಮೇಲೆ ಮಳೆಯಿಲ್ಲದೇ ಸ್ಥಾವರ, ಜಂಗಮಗಳು ಇರಲಾರವು. ಈ ಶಾಸ್ತ್ರದ ಮುಖೇನ ಮಳೆಯ ಲಕ್ಷಣಗಳನ್ನು ಅರಿಯುವಂತೆ ಕನ್ನಡದಲ್ಲಿ ತಿಳಿಸುವುದಾಗಿ ತಿಳಿಸುತ್ತಾನೆ ಕವಿ. ಮಳೆಯಿಂದಲೇ ಧಾನ್ಯಗಳು ಬೆಳೆಯುವವು. ಈ ಮಳೆ ಕುರಿತಾದ ವಿಷಯವನ್ನು ಸೂತ್ರಕ್ರಮದಲ್ಲಿ ಹೇಳುವುದಾಗಿ ತಿಳಿಸುತ್ತಾನೆ. ಅಂಡಜ, ಪಿಂಡಜ, ಉದ್ಭೀಜ ಮತ್ತು ಜರಾಯುಜಗಳೆಂಬ ನಾಲ್ಕು ತರಹದ ಜೀವೋತ್ಪತ್ತಿಗೆ ಭೂಮಿ, ನೀರು, ಸೂರ್ಯನ ಕಿರಣ ಹಾಗೂ ಗಾಳಿ ಮುಖ್ಯವಾಗಿ ಬೇಕು. ಸೂರ್ಯನ ಶಾಖದಿಂದ ಧರಣಿಯು ಬಾಯ್ಬಿಟ್ಟಾಗ ಅದನ್ನು ಮಳೆಯು ಸಮವಾಗಿಸುವುದು. ಈ

---

೧೮೫. ಎಚ್. ಶೇಷ ಅಯ್ಯಂಗಾರ್ (ಸಂ): **ರಟ್ಟಮತಂ** ; ಪುಟ. ii
೧೮೬. **ಅದೇ** ; ಪುಟ. ೦೪, ೦೫

ವಿಚಾರಗಳನ್ನು ಗಾರ್ಗ್ಯಾಚಾರ್ಯರ ಮತದಿಂದ ಮೇಘಮಾಲೆಯ ಅನುನಯದಿಂದ ಹೇಳುವುದಾಗಿ ತಿಳಿಸುತ್ತಾನೆ.

ಪರಿವೇಷ, ಮಳೆ, ಮಿಂಚು, ಗಾಳಿ, ಜಳದ, ಶೀತ, ಬಿಸಿಲು, ನೀರ್ಗದಿರು, ಶರದ, ಘರ್ಜನೆ ಎಂಬ ಹತ್ತು ನೈಮಿತ್ತಿಕ ಧಾತುಗಳಿಂದ ವರ್ಷೋತ್ಪತ್ತಿಯಾಗುವುದು. ಮುಂದುವರೆದು ಯಾವ ಸಂದರ್ಭದಲ್ಲಿ ಮಳೆ ಬರುವುದು ಮತ್ತು ಯಾವ ಸಂದರ್ಭದಲ್ಲಿ ಮಳೆ ಬರಲಾರದು ಎಂದು ದೂತಲಕ್ಷಣಗಳನ್ನು ಆಧರಿಸಿ ವಿವರಿಸಿದ್ದಾನೆ. ಕುಸುಮ, ಅಕ್ಷತೆ, ಫಲ, ಹಸ್ತ, ಪ್ರಸನ್ನಚಿತ್ತ ಮುಖ, ನಗುಮೊಗದ ವ್ಯಕ್ತಿಗಳು ಎದುರಾದರೆ ಮಳೆಯಾಗುವುದು. ನೀರು ತುಂಬಿದ ಕೊಡವು ಉರುಳಿದರೆ ಮಳೆಯಾಗುವುದು. ಹಸಿರೆಲೆ, ಹುಲ್ಲು, ಮಾಂಸ, ಹೂವು, ಬೆಲ್ಲ, ಸಕ್ಕರೆಯೊಂದಿಗೆ ಪ್ರಸನ್ನಮುಖದಿಂದ ಯಾರಾದರೂ ಬಂದರೆ ಮಳೆಯಾಗುವುದು. ಕಾಮನಬಿಲ್ಲು ಸೂರ್ಯ ಮತ್ತು ಚಂದ್ರ ಸುತ್ತಲೂ ಸುತ್ತಿಕೊಂಡಿದ್ದರೆ ಮಳೆಯಾಗುವುದು. ಶಸ್ತ್ರ, ಕಾವಲಿ, ನುಲಿ, ಶೂಲಗಳು ಎದುರಾದರೆ ಮಳೆಯಾಗದು ಎಂದು ಪೀಠಿಕಾಧ್ಯಾಯದಲ್ಲಿ ರಟ್ಟಕವಿಯು ತಿಳಿಸುತ್ತಾನೆ.

೨) ದ್ವಿತೀಯಾಧ್ಯಾಯಂ : ಆಕಸ್ಮಿಕಶಕುನ

ಮಸೆದ ಕೃಷಿ ಉಪಕರಣಗಳು ತುಕ್ಕು ಹಿಡಿಯುವುದು; ನಾಯಿಗಳು ಊಳಿಡುವುದು; ಉಪ್ಪು, ಬೆಲ್ಲದ ಪಾತ್ರೆಗಳು ಒಡೆಯುವುದು; ತಿಗಣೆ, ನೊಣಗಳು ಪಶುಗಳಿಗೆ ಮೆತ್ತಿಕೊಳ್ಳುವುದು; ಬಳ್ಳಿಗಳ ಚಿಗುರು ಮೇಲೆ ಮುಖಮಾಡುವುದು; ತಗ್ಗು ಪ್ರದೇಶದಲ್ಲಿ ನೀರೊಸರುವುದು; ಪಕ್ಷಿಗಳು ಮಣ್ಣಿನಲ್ಲಿ ಹೊರಳಾಡುವುದು; ಝುರಿಗಳಲ್ಲಿ ನೀರು ಹೆಚ್ಚಾಗುವುದು; ಉಲ್ಕಾಪತನ; ಪಶ್ಚಿಮದಲ್ಲಿ ಕಾಮನಬಿಲ್ಲು ಮೂಡುವುದು; ಸುಂಟರಗಾಳಿ ಉಂಟಾಗುವುದು; ಕೊಡತಿಹುಳುಗಳು ಆಡುವುದು; ಕಾಗೆಗಳು ಮೊಟ್ಟೆಯಿಡುವುದು; ದೊಡ್ಡ ಮೋಡಗಳು ಏಳುವುದು; ಮನುಷ್ಯರಿಗೆ ಅತಿಮೂತ್ರವಾಗುವುದು; ನವಿಲು ಕೂಗುವುದು; ಸಂಜೆಯ ಹೊತ್ತಿನಲ್ಲಿ ಮಂಜು ಬೀಳುವುದು; ಹಾವು ಮರವೇರುವುದು; ಮೀನುಗಳು ದಡದಕಡೆಗೆ ಬರುವುದು; ಪೂರ್ವಕ್ಕೆ ಕಾಮನಬಿಲ್ಲು ಮೂಡುವುದು; ನೀರಿನ ರುಚಿ ಕೆಡುವುದು; ಮೃಗಪಕ್ಷಿಗಳು ವಿಚಿತ್ರವಾಗಿ ಕೂಗುವುದು; ಬೆಕ್ಕು, ಮೊಲ, ಹುಲಿ, ನರಿ ಮುಂತಾದ ಪ್ರಾಣಿಗಳು ಹರುಷದಿಂದ ಓಡಾಡುವುದು; ಇರುವೆಗಳನ್ನು ಮೊಟ್ಟೆಗಳನ್ನು ಬೇರೆಡೆಗೆ ಸಾಗಿಸುವುದು, ನೀರಹಕ್ಕಿ, ಆನೆ, ಕಪ್ಪೆಗಳು ನೀರನ್ನು ಎರಚಾಡುವುದು ಇವೆಲ್ಲವೂ ಮಳೆಯಾಗುವ ಲಕ್ಷಣಗಳನ್ನು ಸೂಚಿಸುತ್ತವೆ.

೩) ತೃತೀಯಾಧ್ಯಾಯ : ಶಕುನತ್ರಯಂ

'ಅಟ್ಟಮತ'ದ ತೃತೀಯ ಅಧ್ಯಾಯದಲ್ಲಿ ಬಕಪಕ್ಷಿ, ಪೋದಗೆ ಹಕ್ಕಿ ಹಾಗೂ ನಾಯಿಗಳನ್ನು ಪೂಜಿಸುವುದು. ನಂತರ ಅವುಗಳಿಂದ ಸ್ವಲ್ಪ ದೂರದಲ್ಲಿ ಹೋಗಿ ಮರೆಯಲ್ಲಿ ನಿಂತು ಅವುಗಳ ಚಟುವಟಿಕೆಗಳನ್ನು ನಿರುಕಿಸಬೇಕು. ಅದನ್ನಾಧರಿಸಿ ಮಳೆ ಶಕುನಗಳನ್ನು ತಿಳಿಯಬಹುದು ಎಂದು ರಟ್ಟಕವಿಯು ತಿಳಿಸುತ್ತಾನೆ.

೧. ಪಿಂಗಲಿಯ ಶಕುನಂ: ಕೂಗತೊಡಗಿದರೆ; ಮೂತ್ರಮಾಡಿದರೆ; ಶಾಂತವಾಗಿ ನಿಂತರೆ; ದೇಹವನ್ನು ನಿಟ್ಟಿಸಿ ನಿಂತರೆ; ಭಯಗೊಂಡರೆ; ಹರ್ಷದಿಂದ ಕುಣಿದಾಡಿದರೆ; ನೀರಿನ ಮೂಲವನ್ನು ಹುಡುಕಿಕೊಂಡು ಹೋದರೆ ಮಳೆಯಾಗುವುದು.

೨. ಪೋದಗೆಯ ಶಕುನಂ: ಮರಿಗಳೊಂದಿಗೆ ಗೂಡಲ್ಲಿ ಸೇರಿದರೆ; ತನ್ನ ಮೊಟ್ಟೆಗಳನ್ನು ರಕ್ಷಣೆ ಮಾಡಲು ನೋಡಿದರೆ; ಮಲ, ಮೂತ್ರ ವಿಸರ್ಜಿಸಿದರೆ ಅತಿವೃಷ್ಟಿಯಾಗುವುದು. ಕಟ್ಟೆಗೆಯ ಮೇಲೆ ಮೂತ್ರ ಮಾಡಿದರೆ ಸಾಧಾರಣ ಮಳೆಯಾಗುವುದು. ಕಲ್ಲಿನ ಮೇಲೆ ಮೂತ್ರ ಮಾಡಿದರೆ ಆಲೆಕಲ್ಲುಮಳೆಯಾಗುವುದು. ಪದೇ ಪದೇ ರೆಕ್ಕೆಗಳನ್ನು ಬಡಿದರೆ; ನೀರಿನ ತಾಣಗಳನ್ನು ಹುಡುಕಿಕೊಂಡು ಹೋದರೆ; ಮಣ್ಣಲ್ಲಿ ಹೊರಳಾಡಿದರೆ ಮಳೆಯಾಗುವುದು.

೩. ಶುನಕ ಶಕುನಂ: ನಾಯಿಯು ಮರಗಿಡಗಳ ಮಧ್ಯದಲ್ಲಿ ಹೋಗಿ ಊಳಿಟ್ಟರೆ; ಮುಗಿಲಿಗೆ ಮುಖಮಾಡಿ ಬೊಗಳಿದರೆ; ಪಶುಗಳ ಹಿಂದೆ ಹೋಗಿ ಬೊಗಳಿದರೆ; ನದಿದಡಕ್ಕೆ ಹೋಗಿ ಊಳಿಟ್ಟರೆ; ಶಾಂತವಾಗಿ ನಿಂತರೆ; ಗಾಳಿಗೆ ಇದಿರಾಗಿ ಬೊಗಳಿದರೆ; ಕೃಷಿ ಸಾಮಗ್ರಿಗಳ ಮೇಲೆ ಮೂತ್ರ ಮಾಡಿದರೆ; ಮರಗಿಡಗಳನ್ನು ಪದೇ ಪದೇ ಮೂಸಿ ನೋಡಿ ಮೂತ್ರ ಮಾಡಿದರೆ ಉತ್ತಮವಾದ ಮಳೆಯಾಗುವುದು. ಅಳುತ್ತ, ಹೊರಳಾಡುತ್ತ ಮೈಮುರಿದುಕೊಂಡರೆ; ಚಿಂತೆಯಲ್ಲಿದ್ದರೆ; ಬೂದಿಯಲ್ಲಿ ಹೊರಳಾಡಿದರೆ; ಬಿಟ್ಟೂ ಬಿಡದೇ ನೀರನ್ನು ಕುಡಿದರೆ; ಮನೆಗಳಲ್ಲಿ ಹೊಕ್ಕರೆ; ಮಡುಗಳಲ್ಲಿ ಹೊಕ್ಕರೆ; ಬಿಡದೇ ಮೂತ್ರ ಮಾಡಿದರೆ; ಗೋಡೆಗಳಿಗೆ ಮೈ ಉಜ್ಜುಕೊಂಡರೆ ಮಳೆಯಾಗದು ಎಂದು ಹೇಳುತ್ತಾನೆ ರಟ್ಟಕವಿ. ಮುಂದುವರೆದು,

೪) ಚತುರ್ಥಾಧ್ಯಾಯಂ : ಸಸ್ಯೋತ್ಪತ್ತಿ ನಿಮಿತ್ತಾಧ್ಯಾಯಂ

'ಜಟ್ಟಮತ' ಗ್ರಂಥದ ನಾಲ್ಕನೆಯ ಅಧ್ಯಾಯದಲ್ಲಿ ಒಂದು ಪಲ ನೂಲು, ಒಂದು ಮೊಳ ಬಟ್ಟೆಗಳಿಂದ ಪತಾಕೆಯನ್ನು ಮಾಡಿ ನೆಡುವುದು. ಅದರ ಆಧಾರದ ಮೇಲೆ ಯಾವ ತಿಂಗಳಿನಲ್ಲಿ ಯಾವ ದಿಕ್ಕಿನಿಂದ ಗಾಳಿ ಬೀಸುವುದೋ ತಿಳಿದುಕೊಂಡು ಯಾವ ದಿಕ್ಕಿಗೆ ಮಳೆಯಾಗುವುದು; ಯಾವ ದಿಕ್ಕಿಗೆ ಮಳೆಯಾಗಲಾರದು ಎಂಬುದನ್ನು ತಿಳಿಯಬಹುದು ಎನ್ನುತ್ತಾನೆ ಮೂರನೆಯ ಮಂಗರಸ. ಪೂರ್ವ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಿಂದ ಗಾಳಿ ಬೀಸಿದರೆ ಶುಭಲಕ್ಷಣ. ಆಗ್ನೇಯ ದಿಕ್ಕಿನಿಂದ ಗಾಳಿ ಬೀಸಿದರೆ ಮಳೆಯಾಗದು. ಗಾಳಿಯೂ ಎಂಟೂ ದಿಕ್ಕುಗಳಿಂದ ಬೀಸುತ್ತಿದ್ದರೆ ಮಳೆಯಾಗದು.

ಆಷಾಢಮಾಸದ ಕೃಷ್ಣಪಕ್ಷದ ನವಮಿಯಂದು ಊರೊಳಗೆ ಬರುವ ಪಶುಗಳಿಗೆ ಊರಬಾಗಿಲಿನಲ್ಲಿ ಪೂಜಿಸುವುದು. ನಂತರ ಮೊತ್ತಮೊದಲು ಊರನ್ನು ಪ್ರವೇಶಿಸುವ ಪಶುವಿನ ಲಕ್ಷಣವನ್ನಾಧರಿಸಿ ಮಳೆ ಲಕ್ಷಣಗಳನ್ನು ತಿಳಿಯಬಹುದು ಎನ್ನುತ್ತಾನೆ ಕವಿ. ಹೋರಿಯು ಪ್ರವೇಶ ಮಾಡಿದರೆ ಉತ್ತಮ. ಇದರಿಂದ ಧರೆಯಲ್ಲಿ ಉತ್ತಮ ಮಳೆಯಾಗಿ ಧಾನ್ಯಗಳು ಹೆಚ್ಚುವವು.

ಕುರಿಯು ಪ್ರವೇಶಿಸಿದರೆ ಚಿತ್ರವೃಷ್ಟಿಯಾಗುವುದು. ಕುರುಡ ಪಶು ಪ್ರವೇಶಿಸಿದರೆ ಅಲ್ಲಲ್ಲಿ ಮಾತ್ರ ಮಳೆ. ಕುಂಟೆತ್ತು ಪ್ರವೇಶಿಸಿದರೆ ಬರಗಾಲ. ಬೂದು ಬಣ್ಣದ ಎತ್ತು ಪ್ರವೇಶಿಸಿದರೆ ರೋಗೋದ್ಭವ. ಕರಿ ಆಕಳು, ಕೆಂಪು ಹೋರಿ, ಬಂಜೆ ಆಕಳು ಪ್ರವೇಶಿಸಿದರೆ ಮಳೆಯ ಮಾತೇ ಇಲ್ಲ.

ಅಶೋಕ, ಭತ್ತ, ನವಣೆ, ಸಜ್ಜೆ, ಸಿರೀಸ, ಗೋದಿ, ನೇರಳೆ, ಎಳ್ಳು, ಭಲ್ಲಾತಕೆ, ತೋವರ, ಗರಿಕೆ, ಜೋಳ, ಅಲಸಂದಿ, ಅರಳೆ, ಅದಿರ್ಮುತ್ತೆ, ಅಗಸೆ, ಗಂಧಶಾಲಿ, ಹಾಲೆ, ಬಸರಿ, ಅಶ್ವತ್ಥ, ಹಸ್ತಿಕರ್ಣ, ಪಾದರಿ, ಕಮಲ, ನೈದಿಲೆ, ಅವರೆ, ಕುಸುಬೆ, ಮಾವು ಸಸಿಗಳು ತಾವಾಗಿಯೇ ಬೆಳೆದರೆ ಜಗಕ್ಕೆ ಉತ್ತಮ. ಕೊಡಸಿಗೆ, ಬನ್ನಿ, ಕೇರಗಳು ಫಲ ಬಿಟ್ಟರೆ; ನಾಗಕೇಸರ ಮರದಲ್ಲಿ ಜೇನುಗಳು ಮುತ್ತಿಕೊಂಡರೆ ಸುಭಿಕ್ಷವಾಗುವುದು.

೫) ಪಂಚಮಾಧ್ಯಾಯಂ : ತ್ರಿವಿಧೋತ್ಪಾಂಗಳ್

"ಭೂಮಿಯೊಳಪ್ಪುದು ಭೌಮಂ
ಜೀಮೂತದೊಳಪ್ಪುದಾಂತರಿಕ್ಷಂ ಗ್ರಹದಿಂ
ತಾಮಪ್ಪುದು ದಿವ್ಯಮೆನಲ್
ನಾಮತ್ರಯದಿಮದಮೆಸೆವುವುತ್ಪಾತಂಗಳ್॥೫.೦೧॥"[೧೮೭]

ಈ ಅಧ್ಯಾಯದಲ್ಲಿ ಭೌಮ, ಅಂತರಿಕ್ಷ ಹಾಗೂ ದಿವ್ಯ ಎಂಬ ತ್ರಿವಿಧ ಉತ್ಪಾದಗಳಾಗುವವು. ಭೂಮಿಯೊಳಾಗುವುದು ಭೌಮ; ಆಕಾಶದಲ್ಲಾಗುವುದು ಅಂತರಿಕ್ಷ; ಗ್ರಹಗಳಿಂದ ಉಂಟಾಗುವುದು ದಿವ್ಯ. ಈ ತ್ರಿವಿಧ ಉತ್ಪಾತಗಳನ್ನು ಆಧರಿಸಿ ಮಳೆಯ ಲಕ್ಷಣಗಳನ್ನು ತಿಳಿಸುತ್ತಾನೆ ಮೂರನೆಯ ಮಂಗರಸ.

೧. ಭೌಮೋತ್ಪಾತ: ಕಾಗೆ ಬಿಳಿಯಾದರೆ; ರಾತ್ರಿಯಲ್ಲಿ ಕಾಮನಬಿಲ್ಲು ಮೂಡಿದರೆ; ಕಪ್ಪೆಗಳು ಚರಂಡಿ ನೀರಲ್ಲಿ ಈಜಾಡಿದರೆ ಮಳೆಯಾಗದೆ ಬರಗಾಲ ಬೀಳುವುದು. ಸ್ಥಾವರ, ಜಂಗಮ ಜೀವಿಗಳಿಗೆ ಕೇಡುಂಟಾಗುವುದು.

೨. ಅಂತರಿಕ್ಷೋತ್ಪಾತ: ಇರುಳಲ್ಲಿ ಕಾಮನಬಿಲ್ಲು ಮೂಡಿದರೆ; ನಡುರಾತ್ರಿಯಲ್ಲಿ ಧೂಮಕೇತು ಕಂಡರೆ ಇದರಿಂದ ಧರೆಗೂ, ಧರೆಯನ್ನಾಳುವವರಿಗೂ ಅಪಾಯವಿದೆಯೆಂದು ಅರಿಯುವುದು. ಅಲ್ಲದೇ ಧರೆಯಲ್ಲಿ ಅಕಾಲವೃಷ್ಟಿಯಾಗುವುದು. ಅರಸನ ಸಾವಾಗುವುದು. ದೊಡ್ಡ ದೊಡ್ಡ ಆಲಿಕಲ್ಲುಗಳು ಬಿದ್ದು, ನಂತರ ಎಡಬಿಡದೆ ಸಿಡಿಗಳು ಧರೆಗೆರಗಿ, ಜೋರಾದ ಗಾಳಿ ಬೀಸತೊಡಗಿದರೆ, ಕೆಂಪು ವರ್ಣದ ಹನಿಗಳು ಬಿದ್ದರೆ ದುರ್ಭಿಕ್ಷವಾದ ಕಾಲ ಎದುರಾಗುವುದು.

೩. ದಿವ್ಯೋತ್ಪಾತ: ಸೂರ್ಯ, ಚಂದ್ರರು ಹಳದಿಯಾಗಿ ಕಂಡರೆ ಮಳೆಯಾಗದು. ಮಳೆಗಾಲದಲ್ಲಿ ಮೋಡಗಳು ಮೂಡಿ ಎರಡು, ಮೂರು ಮಳೆ ಲಕ್ಷಣಗಳು ಕಂಡರೆ ಮಳೆಯಾಗುವುದು. ಪದೇ ಪದೇ ಆಕಾಶದ ಬಣ್ಣವು ಬದಲಾಗುತ್ತ, ಆಗಾಗ ಕಾಮನಬಿಲ್ಲು

---

೧೮೭. ಎಚ್. ಶೇಷ ಅಯ್ಯಂಗಾರ್ (ಸಂ): **ರಟ್ಟಮತಂ** ; ಪುಟ. ೧೮

ಮೂಡಿದಂತಾಗುವುದರಿಂದ ತಿಂಗಳೊಪ್ಪತ್ತಿನಲ್ಲಿ ಮಳೆಯಾಗುವ ಲಕ್ಷಣವನ್ನು ತಿಳಿಸುತ್ತವೆ. ಶ್ವೇತ, ಅರುಣ, ಪೀತ, ಸಿತ ಎಂಬ ಚಾತುರ್ವರ್ಣ್ಯಗಳನ್ನು ಒಳಗೊಂಡ ಕಾಮನಬಿಲ್ಲು ಮೂಡಿದರೆ ಧರಣಿಯಲ್ಲಿರುವ ಚಾತುರ್ವರ್ಣಗಳಿಗೆ ಒಳಿತು ಮಾಡುವುದು.

೬) ಷಷ್ಟ್ಯಮಾಧ್ಯಾಯಂ : ವೃಷ್ಟ್ಯರ್ಘಾಧ್ಯಾಯಂ

ಅರ್ಹದ್ದಾಸನು 'ಜಟ್ಟಮತ'ದ ಆರನೆಯ ಅಧ್ಯಾಯದಲ್ಲಿ ಮೋಡಗಳು ಕಟ್ಟುವ ಬಗೆಯನ್ನೂ, ಯಾವ ಮುಹೂರ್ತದಲ್ಲಿ ಮೋಡ ಕಟ್ಟಿದೆ ಉತ್ತಮ ಮಳೆಯಾಗುವುದು, ಯಾವ ಮುಹೂರ್ತದಲ್ಲಿ ಮೋಡ ಕಟ್ಟಿದರೆ ಮಳೆಯಾಗದು ಎಂಬುದನ್ನು ನಿರೂಪಿಸುತ್ತಾನೆ.

೧. ಮೇಘಪ್ರಥಮಗರ್ಭ ಲಕ್ಷಣಂ: ಚಂದ್ರ, ರವಿ, ಮಂಗಳ ಗ್ರಹಗಳು ಒಟ್ಟಾಗಿರುವಾಗ ಮೊದಲ ಮೋಡ ಗರ್ಭ ಕಟ್ಟಿದರೆ ಧರೆಯಲ್ಲಿ ಭೀಕರ ಬರ ಬೀಳುವುದು. ಒಂಟೆ, ಕರಡಿ, ವಾನರವನ್ನು ಹೋಲುವ ಮೋಡಗಳಿಂದ ದೊಡ್ಡ ಮಳೆಯಾದರೆ ಆ ನಂತರದ ದಿನಗಳಲ್ಲಿ ಮಳೆಯು ದೂರಾಗುವುದು. ಮೊದಲ ಮಳೆ ಪ್ರವೇಶದಂದು ಚಂದ್ರನು ಮೂಡಿದರೆ ಶುಭಪ್ರದವಾಗುವುದು. ತ್ರಿವಿಧ ಉತ್ಪಾತಗಳುಂಟಾಗಿ, ಗಟ್ಟಿಯಾದ ಮೋಡಗಳು ಗರ್ಭಗಟ್ಟಿ ಅವು ಅಲ್ಲಿಯೇ ಕರಗಿ ಹೋದರೆ ಕೇಡಾಗುವುದು.

೨. ಮಳೆಯ ದ್ರೋಣಸಂಖ್ಯೆ ಲಕ್ಷಣಂ: ಹದಿನಾರು ಬೊಗಸೆಯು ಒಂದು ಕೊಳಗವಾದರೆ ಅದರ ನಾಲ್ಕನೆಯ ಒಂದು ಭಾಗವು ದ್ರೋಣವಾಗುವುದು. ಇದು ದ್ರೋಣ ಸಂಖ್ಯೆಯಾಗಿದೆ. ಅಂದರೆ ಗ್ರಹಬಲವಿದಲ್ಲದೆ ನಾಲ್ಕು ಗ್ರಹಗಳಿಂದ ಮಳೆಯಾಗಲಾರದು. ಜೇಷ್ಠಮಾಸದ ಶುಕ್ಲಪಕ್ಷದ ಪಾಡ್ಯದಂದು ಮೋಡಗಳಲ್ಲಿ ಮಂಡಲಗಳಾಗಿ ಶನಿಯು ನಾಲ್ಕನೆಯ ಸ್ಥಾನದಲ್ಲಿದ್ದರೆ ಮಳೆಯಾಗದು.

೩. ಮಿಂಚಿನ ಲಕ್ಷಣಂ: ಮಿಂಚಿನಿಂದ ಆಗಬಹುದಾದ ಮಳೆಯ ಲಕ್ಷಣಗಳನ್ನು ರಟ್ಟಕವಿಯು ಮುಂದಿನಂತೆ ತಿಳಿಸಿದ್ದಾನೆ. ಮಿಂಚಿನ ಬಣ್ಣವು ಕರಿದಾಗಿದ್ದರೆ ದೊಡ್ಡಮಳೆಯಾಗುವುದು. ಮಾಸಲು ಕೆಂಪಾಗಿದ್ದರೆ ಜೋರಾದ ಗಾಳಿ ಮಾತ್ರ ಬೀಸುವುದು. ಕಡುಗೆಂಪಾಗಿದ್ದರೆ ಬರಗಾಲ. ಬಂಗಾರದ ವರ್ಣವಾಗಿದ್ದರೆ ಉತ್ತಮ ಮಳೆಯಾಗುವುದು. ಸಿರಿಸದ ಹೂವಿನ ಮಿಂಚಾಗಿದ್ದರೆ ಮಳೆಯಾಗುವುದು. ರಕ್ತದ ವರ್ಣ, ಹೊಗೆಯ ವರ್ಣದ ಮಿಂಚಾದರೆ ಮಳೆಯಾಗದು. ಆಗ್ನೇಯ, ದಕ್ಷಿಣ, ನೈರುತ್ಯ, ವಾಯುವ್ಯ ದಿಕ್ಕುಗಳಲ್ಲಿ ಮಿಂಚು ಉಂಟಾದರೆ ಮಳೆಯಾಗುವುದಿಲ್ಲ.

೪. ಪ್ರತಿಸೂರ್ಯ ಲಕ್ಷಣಂ: ಉತ್ತರ ದಿಕ್ಕಿನಲ್ಲಿ ಪ್ರತಿಸೂರ್ಯ[೧೮೮] ಕಾಣಿಸಿಕೊಂಡರೆ; ದಕ್ಷಿಣ ದಿಕ್ಕಿನಲ್ಲಿ ವಿಪರೀತ ಗಾಳಿ ಬೀಸಿದರೆ; ಮೊದಲು ಮಳೆಯಾಗಿ ನಂತರ ಕ್ಷಾಮ

---

೧೮೮. ಜಿ. ಎನ್. ಚಕ್ರವರ್ತಿ : **ಸಂಸ್ಕೃತ ಕನ್ನಡ ನಿಘಂಟು** ; ಪುಟ. ೬೭೫
ಪ್ರತಿಸೂರ್ಯ = ಅಂತರಿಕ್ಷದಲ್ಲಿ ಎರಡನೆಯ ಸೂರ್ಯನಂತೆ ಕಾಣಿಸುವ ಒಂದು ಉತ್ಪಾತ.

ಉಂಟಾಗುವುದು. ಅಲ್ಲದೇ ನಾಡಪ್ರಭುವಿಗೆ ಮರಣವು, ಪ್ರಜೆಗಳಿಗೆ ಭಯವೂ ಉಂಟಾಗುವುದು.

೫. ಅಮಾವಾಸ್ಯೆಯೊಳಾದ ಪರಿವೇಷಾದಿಗಳ ಲಕ್ಷಣ ನಿಮಿತ್ತಂ: ಅಮವಾಸ್ಯೆಯ ದಿನ ಕಣ್ಣುಕೋರೈಸುವಂತಹ ದೊಡ್ಡ ಗಾತ್ರದ ಕಾಮನಬಿಲ್ಲು; ಭೀಕರಗಾಳಿ ಬೀಸಿ ಮಳೆಯಾದರೆ ಮುಂದಿನ ದಿನಗಳಲ್ಲಿ ಮಳೆಯಾಗದೇ ಬರಗಾಲ ಬೀಳುವುದು. ಇದೇ ಲಕ್ಷಣಗಳು ಚೈತ್ರಮಾಸದ ಅಮವಾಸ್ಯೆಯ ದಿನ ಕಾಣಿಸಿಕೊಂಡರೆ ಕ್ಷಾಮವು ಇಮ್ಮಡಿಯಾಗುವುದು. ಆಶಾಢ ಅಮವಾಸ್ಯೆಯಂದು ಈ ಲಕ್ಷಣಗಳು ಕಾಣಿಸಿಕೊಂಡರೆ ಎರಡು ತಿಂಗಳು ಮಳೆಯಾಗದು. ಶ್ರಾವಣ ಮಾಸದ ಅಮವಾಸ್ಯೆಯ ದಿನ ಈ ಲಕ್ಷಣಗಳಾದರೆ ಐದು ತಿಂಗಳು ಮಳೆಯಾಗದು.

೬. ಹುಣ್ಣಿಮೆಯೊಳಾದ ಪರಿವೇಷಾದಿಗಳ ಲಕ್ಷಣನಿಮಿತ್ತಂ: ಚೈತ್ರಮಾಸದ ಹುಣ್ಣಿಮೆಯಂದು ದೊಡ್ಡ ಮಿಂಚು, ಕಾಮನಬಿಲ್ಲು, ಬಿರುಗಾಳಿ, ಧೀರ್ಘವಾದ ಧೂಳು, ಆಲಿಕಲ್ಲು ಮಳೆಗಳಾದರೆ ಮೂರು ತಿಂಗಳುಗಳವರೆಗೆ ಉತ್ತಮವಾದ ಮಳೆಯಾಗುವುದು. ಈ ಲಕ್ಷಣಗಳು ವೈಶಾಖ ಪೂರ್ಣಿಮೆಯ ದಿನವಾದರೆ ಎಂಟು ತಿಂಗಳವರೆಗೆ ಸುಭಿಕ್ಷ. ಜೇಷ್ಠ ಪೂರ್ಣಿಮೆಯಂದಾದರೆ ರಾಜ್ಯಕ್ಕೆ ಸುಭಿಕ್ಷ ಉಂಟಾಗುವುದು. ಆಶಾಢ ಪೂರ್ಣಿಮೆಯಂದಾದರೆ ಮುಮ್ಮಡಿ ಲಾಭ. ಶ್ರಾವಣ ಪೂರ್ಣಿಮೆಯಂದಾದರೆ ಮೂರರಷ್ಟು ಲಾಭ. ಭಾದ್ರಪದ ಪೂರ್ಣಿಮೆಯೆಂದಾದರೆ ನಾಲ್ಕರಷ್ಟು ಲಾಭವಾಗುವುದು. ಅಶ್ವೀಜ ಪೂರ್ಣಿಮೆಯ ದಿನವಾದರೆ ಐದರಷ್ಟು ಲಾಭ. ಕಾರ್ತಿಕ ಪೂರ್ಣಿಮೆಯ ದಿನವಾದರೆ ಆರರಷ್ಟು ಲಾಭವಾಗುವುದು ಎಂದು ತಿಳಿಸುತ್ತಾನೆ ಅರ್ಹದ್ದಾಸ.

೭. ವರ್ಷಾಧಿಪತಿ ಫಲಂ: ರವಿಯು ಮಳೆಯಾಧಿಪತಿಯಾಗಿದ್ದರೆ ಕಳಂಕವುಂಟಾಗುವುದು. ಚಂದ್ರನು ಅಧಿಪತಿಯಾಗಿದ್ದರೆ ಕೇಡಾಗುವುದು. ಮಂಗಳ ಅಧಿಪತಿಯಾಗಿದ್ದರೆ ಮಳೆಯಾಗದು. ಬುಧನು ಅಧಿಪತಿಯಾಗಿದ್ದರೆ ಶುಭವಾಗುವುದು. ಗುರುವು ಅಧಿಪತಿಯಾಗಿದ್ದರೆ ಉತ್ತರೋತ್ತರವಾಗಿ ಸುಭಿಕ್ಷ ಉಂಟಾಗುವುದು. ರಾಹು–ಕೇತುಗಳು ಅಧಿಪತಿಯಾಗಿದ್ದರೆ ಕಳ್ಳರೂ ಧರ್ಮಕಾರ್ಯಗಳನ್ನು ಮಾಡುವರು. ಶನಿಯು ಅಧಿಪತಿಯಾಗಿದ್ದರೆ ಶುಭವು ಹೆಚ್ಚುವುದು.

೭) ಸಪ್ತಮಾಧ್ಯಾಯಂ : ಜ್ಯೌತಿಷಾಧ್ಯಾಯಂ

ಅರ್ಹದ್ದಾಸನು ‘ಅಟ್ಟಶಾಸ್ತ್ರ’ದ ಏಳನೆಯ ಅಧ್ಯಾಯದಲ್ಲಿ ಒಟ್ಟು ಹದಿನಾಲ್ಕು ಉಪವಿಭಾಗಳನ್ನು ಮಾಡಿದ್ದಾನೆ. ‘ಹನ್ನೆರಡು ಯುಗಂಗಳ ಫಲಂ’ ಎಂಬ ಮೊದಲ ಭಾಗದಲ್ಲಿ ೬೦ ಸಂವತ್ಸರಗಳನ್ನು ಐದೈದರಂತೆ ವಿಭಾಗಿಸಿಕೊಂಡು ಒಂದೊಂದು ಯುಗವೆಂದು ೧೨ ಯುಗಗಳ ಪ್ರತಿಸಂವತ್ಸರದ ಫಲವನ್ನು ಗ್ರಹಗಳು ಹಾಗೂ ಹನ್ನೆರಡು ರಾಶಿಗಳನ್ನು ಅನುಸರಿಸಿ ಮಳೆಯ

ಫಲಗಳನ್ನು ತಿಳಿಸಿದ್ದಾನೆ. 'ಗ್ರಹಂಗಳ ಪಗೆಕೆಳೆಗಳ್' ಎಂಬ ಎರಡನೆಯ ಭಾಗದಲ್ಲಿ ಚಂದ್ರ, ಕುಜ, ಬುಧ, ಗುರು, ಸೂರ್ಯ, ರಾಹು, ಕೇತು, ಶನಿ ಗ್ರಹಗಳನ್ನು ಆಧರಿಸಿ ಶತ್ರುಗ್ರಹ ಹಾಗೂ ಮಿತ್ರ ಗ್ರಹಗಳ ಪರಿಣಾಮವಾಗಿ ಮಳೆಲಕ್ಷಣಗಳನ್ನು ತಿಳಿಸಿದ್ದಾನೆ. 'ರಾಶಿ ವಿಫಳಿಗೆ' ಎಂಬ ಮೂರನೆಯ ಭಾಗದಲ್ಲಿ ನವಗ್ರಹಗಳು ಹನ್ನೆರಡು ರಾಶಿಗಳಲ್ಲಿ ಯಾವ ರಾಶಿಸ್ಥಾನದಲ್ಲಿವೆ ಎಂಬುದನ್ನು ಆಧರಿಸಿ ಮಳೆ ಲಕ್ಷಣಗಳನ್ನು ತಿಳಿಸಲಾಗಿದೆ. 'ಗ್ರಹಂಗಳಾಳ್ವ ಭೂಮಿ' ಎಂಬ ನಾಲ್ಕನೆಯ ಭಾಗದಲ್ಲಿ ಗ್ರಹಾಧಿಪತಿಗಳನ್ನು ಆಧರಿಸಿ ಮಳೆ ಲಕ್ಷಣಗಳನ್ನು ತಿಳಿಸಲಾಗಿದೆ.

"ಬುಧಗುರುವೊಡನಿರೆ ಮಟಿಯ
ಅತ್ಯಧಿಕಂ ಭಾಸ್ಕರನ ಕುಹನ ಮಂತ್ರಿಯ ವಿಳಸ
ದ್ಬುಧನನಳವಡಿಸೆ ಶುಕ್ರಂ
ಬುಧನಿಂದಂ ಮುಂದೆ ನಡೆಯಲೊಳ್ಮಟಿಯಕ್ಕುಂ ॥೭.೩೮॥

ಭೂಮಿಜನುಮರ್ಕಸುತನುಂ
ತಾಮೊಸೆದೊಂದೆಡೆಯೊಳಿರ್ದರಪ್ಪೊಡೆ ಜಗದೊಳ್
ಕ್ಷಾಮವಣಿ ಮಾಡುಗುಂ ಸಂ
ಗ್ರಾಮಮುಮೊಡರಿಸುಗುಮರಸುಮಕ್ಕಳ್ಗೆಲ್ಲಂ ॥೭.೩೯॥"[೧೮೯]

'ಗ್ರಹನೆಲೆ' ಎಂಬ ಐದನೆಯ ಭಾಗದಲ್ಲಿ ಯಾವ ಯಾವ ಗ್ರಹಗಳು ಜೋಡಿಯಾಗಿವೆಯೋ ಅವುಗಳನ್ನು ಆಧರಿಸಿ ಅವುಗಳ ಫಲಾಫಲಗಳನ್ನು ಅನುಸರಿಸಿ ಮಳೆ ಲಕ್ಷಣಗಳನ್ನು ತಿಳಿಸಲಾಗಿದೆ. 'ಅಬ್ದದೊಳ್ ಗ್ರಹಸಂಯೋಗ ಫಲಂ' ಎಂಬ ಆರನೆಯ ಭಾಗದಲ್ಲಿ ರಾಶಿ ಮತ್ತು ಗ್ರಹ ಸಂಯೋಗದಿಂದ ಉಂಟಾಗಬಹುದಾದ ಮಳೆ ಲಕ್ಷಣಗಳನ್ನು ತಿಳಿಸಲಾಗಿದೆ. 'ಗ್ರಹಯುದ್ಧ ಫಲಂ' ಎಂಬ ಏಳನೆಯ ಭಾಗದಲ್ಲಿ ಗ್ರಹಗಳ ನಡುವೆ ನಡೆಯುವ ಬೆಳಕು ನೆರಳಿನಾಟವನ್ನು ಅನುಸರಿಸಿ ಉಂಟಾಗಬಹುದಾದ ಮಳೆ ಲಕ್ಷಣಗಳನ್ನು ತಿಳಿಸಲಾಗಿದೆ. 'ಗ್ರಹೋದಯ ಫಲಂ' ಎಂಬ ಎಂಟನೆಯ ಅಧ್ಯಾಯದಲ್ಲಿ ಮಾಸಗಳನ್ನು ಅನುಸರಿಸಿ ಯಾವ ಮಾಸದಲ್ಲಿ ಯಾವ ಗ್ರಹವು ಉದಯಿಸುವುದು ಎಂಬುದನ್ನು ಆಧರಿಸಿ ಮಳೆ ಲಕ್ಷಣಗಳನ್ನು ತಿಳಿಸಲಾಗಿದೆ.

'ಗ್ರಹಂಗಳ ಸ್ವರೂಪಂ ಫಲಂ' ಎಂಬ ಒಂಭತ್ತನೆಯ ಭಾಗದಲ್ಲಿ ಗ್ರಹಗಳ ಉದಯ ಮತ್ತು ಅಸ್ತಗಳನ್ನು ಆಧರಿಸಿ ಮಳೆಯ ಲಕ್ಷಣಗಳನ್ನು ತಿಳಿಸಲಾಗಿದೆ. 'ಗ್ರಹವೇಧಾಚಾರ ಫಲಂ' ಎಂಬ ಹತ್ತನೆಯ ಭಾಗದಲ್ಲಿ ಗ್ರಹಗಳ ಪರಸ್ಪರ ಕಾಟಗಳ ಫಲವಾಗಿ ಭೂಮಿಯ ಮೇಲೆ ಆಗಬಹುದಾದ ಮಳೆಯ ಲಕ್ಷಣಗಳನ್ನು ತಿಳಿಸಲಾಗಿದೆ. 'ಗ್ರಹ ವಕ್ರ ಫಲಂ' ಎಂಬ ಹನ್ನೊಂದನೆಯ ಭಾಗದಲ್ಲಿ ಕುಟಿಲ ಗ್ರಹಗಳ ಫಲವನ್ನಾಧರಿಸಿ ಮಳೆ ಲಕ್ಷಣಗಳನ್ನು ತಿಳಿಸಲಾಗಿದೆ. 'ಗ್ರಹವೇಧ ಫಲಂ' ಎಂಬ ಹನ್ನೆರಡನೆಯ ಭಾಗದಲ್ಲಿ ಗ್ರಹಗಳ ಚಲನೆಯನ್ನು ಅನುಸರಿಸಿ ಮಳೆಯ ಲಕ್ಷಣಗಳನ್ನು ತಿಳಿಸಲಾಗಿದೆ. 'ಬುಧನುದಯ ಫಲಂ' ಎಂಬ ಹದಿಮೂರನೆಯ ಭಾಗದಲ್ಲಿ ಬುಧಗ್ರಹ ಉದಯ

---

೧೮೯. ಎಚ್. ಶೇಷ ಅಯ್ಯಂಗಾರ್ (ಸಂ): **ರಟ್ಟಮತಂ** ; ಪುಟ. ೩೭

ಕಾಲವನ್ನು ಅನುಸರಿಸಿ ಮಳೆಯ ಲಕ್ಷಣಗಳನ್ನು ತಿಳಿಸಲಾಗಿದೆ. 'ಶುಕ್ರನಾಡು ವೀಧಿ' ಎಂಬ ಹದಿನಾಲ್ಕನೆಯ ಭಾಗದಲ್ಲಿ ವಾರ್ಷಿಕ ಅವಧಿಯಲ್ಲಿ ಶುಕ್ರ ಗ್ರಹದ ಸಂಚಾರವನ್ನು ಅನುಸರಿಸಿ ಮಳೆಯ ಲಕ್ಷಣಗಳನ್ನು ತಿಳಿಸಲಾಗಿದೆ.

೮) ಅಷ್ಟಮಾಧ್ಯಾಯಂ : ಮುಗಿಲ್ಗಳ ನಾಮಾದ್ಯಧ್ಯಾಯಂ

'ಱಟ್ಟಮತ'ದ ಎಂಟನೆಯ ಅಧ್ಯಾಯದಲ್ಲಿ ರಟ್ಟಕವಿಯು ಮೋಡಗಳ ಲಕ್ಷಣ, ಬಣ್ಣ, ಆಕಾರಗಳನ್ನು ಆಧರಿಸಿ ಅವುಗಳಿಗೆ ಹೆಸರನ್ನಿರಿಸಿ ಮಳೆ ಮೋಡಗಳು ಮತ್ತು ಮಳೆಯಾಗದ ಮೋಡಗಳನ್ನು, ಮೋಡಗಳು ಯಾವ ಪ್ರದೇಶದಲ್ಲಿ ಉತ್ತಮ ಮಳೆಯನ್ನು ಸುರಿಸಬಲ್ಲವು ಎಂಬುದನ್ನು ವಿವರಿಸಿದ್ದಾನೆ.

"ಬೆಳಕಂಗಳಾಗಿ ನುಣ್ಪಿಂ
ತೊಳಗುತ್ತುಂ ನೆರೆದು ಮೊಟಗೆದೊಡ್ಡಿದ ಪನಿಯಂ
ಜಳಜಭವಾನ್ವಯ ಮೇಘಾ
ವಳಿ ಕಱಿಸುಗುಂ ತುಹಿನಶಿಖರಿಯ ಶಿಖರಿಯಿಂ ಗಂಗೆವರಂ ॥೮.೦೨॥

ಮಂದಗತಿ ಮಂದಚಂದ್ರಂ
ಸುಂದರಮ್ಮಗ ಮಂದಗತಿ ಮಹಾಸ್ವರಸ್ಪದಮೆನೆ ಚೆ
ಲ್ವೊಂದಿರೆ ಮೇಘ ಚತುಷ್ಕಂ
ಮಂದಾಕಿನಿಯಿಂದೆ ವಿಂಧ್ಯಗಿರಿವರಮಾಳ್ಗುಂ ॥೮.೦೩॥

ಸುರುಚಿರ ವಿದ್ಯುಜ್ಜಿಹ್ವಂ
ಬೆರೆಸಿ ಮಹಾನಿಚಯ ಮಂದವಿಕ್ರಮ ಶೀಘ್ರಂ
ಧರೆಗೆಸೆವ ವಿಧ್ಯಗಿರಿಯಿಂ
ನಿರುಪಮಗೋದಾವರೀತಟಂಬರಮಾಳ್ಗುಂ ॥೮.೦೪॥
ಅವೆಯ ಮಕರದ ಪೋಲ್ವೆಯಿ
ನಾವೈಶ್ಯಘನಾಳಿ ವಿಂಧ್ಯಗಿರಿಯಿಂದಂ ಗೋ
ದಾವರಿಯನೆಯ್ದಿ ಕಱಿಸುಗುಮಿ
ಳಾವನಿಯೊಳ್ ಸದಯ ವೃಷ್ಟಿಯಕ್ಕುಮೊಲ್ಪಿನ ಱಟ್ಟಾ ॥೮.೦೫॥"[೧೯೦]

ಮುಂದುವರೆದು ನಕ್ಷತ್ರಗಳ ಆಧಾರದ ಮೇಲೆ ಮೋಡಗಳು ಪ್ರವೇಶಿಸುವ ದಿನವನ್ನು ಅನುಸರಿಸಿ ಮಳೆಯಾಗುವ ವಿಚಾರವನ್ನು ರಟ್ಟಕವಿಯು ತಿಳಿಸಿದ್ದಾನೆ. ಅಲ್ಲದೇ ಚೈತ್ರ ಮಾಸಾದಿಯಾಗಿ ಫಾಲ್ಗುಣ ಮಾಸದವರೆಗೆ ಮಳೆಗರೆಯುವ ಮೋಡಗಳ ಲಕ್ಷಣಗಳನ್ನು ತಿಳಿಸಿದ್ದಾನೆ.

೯) ನವಮಾಧ್ಯಾಯಂ : ಬೀಜಾವಾಪ ಸಂಧಾನಂ

ಅರ್ಹದ್ದಾಸನು 'ರಟ್ಟಶಾಸ್ತ್ರ'ದ ಒಂಭತ್ತನೆಯ ಅಧ್ಯಾಯದಲ್ಲಿ ಬೀಜವನ್ನು ಬಿತ್ತನೆ ಮಾಡುವ ಬಗೆಯನ್ನು ಹೇಳಿದ್ದಾನೆ. ಸೂರ್ಯನನ್ನು ಶೂಲದ ಆಕಾರದಲ್ಲಿ ಕಲ್ಪಿಸಿ ಮಧ್ಯ ಮತ್ತು ತುದಿಯ


---

೧೯೦. ಎಚ್. ಶೇಷ ಅಯ್ಯಂಗಾರ್ (ಸಂ): **ರಟ್ಟಮತಂ** ; ಪುಟ. ೫೫

ಭಾಗದಲ್ಲಿ ಬಿತ್ತನೆ ಮಾಡುವ ನಕ್ಷತ್ರಗಳನ್ನು ಆಧರಿಸಿ ಫಲಾಫಲಗಳನ್ನು ಹೇಳಿದ್ದಾನೆ. ಹಾವಿನ ಆಕಾರದಲ್ಲಿ ನಕ್ಷತ್ರಗಳನ್ನು ಹೊಂದಿಸಿ ಮುಖ, ತಲೆ, ಹೊಟ್ಟೆ, ಕತ್ತು, ಬಾಲಗಳನ್ನು ಆಧರಿಸಿ ಗ್ರಹ, ನಕ್ಷತ್ರಗಳ ಬಲಾಬಲಗಳನ್ನು ಅನುಸರಿಸಿ ಬೀಜ ಬಿತ್ತುವ ಉತ್ತಮ ಮುಹೂರ್ತಗಳನ್ನು ತಿಳಿಸುತ್ತಾನೆ.

ಚಿತ್ರ ೫.೫

ರಾಹುಚಕ್ರಂ (ಫಣಿಚಕ್ರ)



ಇಲ್ಲಿ ತಲೆಯಿಂದ ಬಾಲದವರೆಗೆ ಆಯಾ ನಕ್ಷತ್ರಗಳನ್ನು ಗುರುತಿಸಿ ಯಾವ ನಕ್ಷತ್ರದಂದು ಬಿತ್ತನೆ ಮಾಡಿದರೆ ಅನುಕೂಲ ಎಂಬುದನ್ನು ಮಾದರಿ ರೂಪದಲ್ಲಿ ಗುರುತಿಲಾಗಿದೆ. ಇದರ ಮೇಲೆ ಬಿತ್ತನೆಯ ಫಲಾಫಲಗಳನ್ನು ತಿಳಿಯಬಹುದಾಗಿದೆ. ಮುಂಗಾರು ಬೆಳೆಗಳಿಗೆ ಬೇರೆ ಹಿಂಗಾರು ಬೆಳೆಗಳಿಗೆ ಬೇರೆಯಾಗಿ ಗುರುತಿಸಲಾಗುತ್ತದೆ. ಇದು ಪ್ರತಿವರ್ಷವೂ ಬದಲಾಗುತ್ತಿರುತ್ತದೆ. ಹೀಗಿರುವಾಗ ಯೋಗ್ಯದಿನವನ್ನು ಗುರುತಿಸಿಕೊಂಡು ಬೆಳಗು ಮುಂಜಾವಿನಲ್ಲಿ ಕೂರಿಗೆಯನ್ನು ಪೂಜಿಸಿ ಬಿತ್ತನೆಗೆ ಅಣಿಯಾಗಬೇಕು ಎಂದು ತಿಳಿಸುತ್ತಾನೆ.

"ಪೂಜಿಸಿ ಪೊಡವಟ್ಟೊಪ್ಪೆ
ರಾಜಿಸಿದೆಯನಜೆದು ಪರಿಷುಮಂದಾಂಟದೆ ನೀ
ನೋಜೆಯ ಬಲ್ಲೆಟ್ಟಿಗಳಂ
ಯೋಜಿಸಿ ಸಲೆ ಪಿಡಿದು ಮೇಳೆಯುಂ ತತ್ಕ್ರಮದಿಂ ॥೯.೨೯॥"[೧೯೧]

ಶುಭ ನಕ್ಷತ್ರಗಳು	ದುಷ್ಟ ನಕ್ಷತ್ರಗಳು	ಚೋರ ನಕ್ಷತ್ರಗಳು
ಸ್ವಾತಿ, ಮೂಲಾ, ಪೂ.ಷಾ.	ಪೂರ್ವಾ, ಉತ್ತರಾ, ಹಸ್ತಾ	ಪುನರ್ವಸು, ಪುಷ್ಯ, ಆಶ್ಲೇಷ
ಉ.ಷಾ. ಧನಿಷ್ಠ, ಶತತಾರಾ	ರೇವತಿ, ಅಶ್ವಿನಿ, ಭರಣಿ	ಮಘಾ, ಚಿತ್ತಾ, ಜ್ಯೇಷ್ಠ
ಪೂ.ಭಾ., ಅನುರಾಧಾ, ವಿಶಾಖಾ	ರೋಹಿಣಿ, ಮೃಗಶಿರ, ಆರ್ದ್ರಾ	ಶ್ರವಣ, ಉ.ಭಾ. ಕೃತ್ತಿಕಾ

ಪೂಜೆಯಾದ ಮೇಲೆ ಭೂಮಿತಾಯಿಗೆ ನಮಸ್ಕರಿಸಿ ಉತ್ತಮವಾಗಿ ಪಳಗಿದ ಎತ್ತುಗಳಿಗೆ ಕೂರಿಗೆಯನ್ನು ಹೂಡಿ ಬಿತ್ತನೆಯ ಮಾಡುವುದು ಎಂದು ತಿಳಿಸಿದ್ದಾನೆ.

---

೧೯೧. ಎಚ್. ಶೇಷ ಅಯ್ಯಂಗಾರ್ (ಸಂ): **ರಟ್ಟಮತಂ** ; ಪುಟ. ೯೧

೧೦) ದಶಮಾಧ್ಯಾಯಂ : ಗ್ರಹಣ ಫಲಂ

'ಅಟ್ಟಮತ'ದ ಹತ್ತನೆಯ ಅಧ್ಯಾಯದಲ್ಲಿ ರಟ್ಟಕವಿಯು ೨೭ ನಕ್ಷತ್ರಗಳನ್ನು ಏಳೇಳರಂತೆ ಗುಂಪು ಮಾಡಿ ನಾಲ್ಕು ಮಂಡಲಗಳಾಗಿ ವಿಭಾಗಿಸಿ ಅವುಗಳಿಗೆ ಕ್ರಮವಾಗಿ ವಾಯು, ಅಗ್ನಿ, ವರುಣ ಹಾಗೂ ಕುಳಿಕ ಎಂದು ಹೆಸರಿಸಿದ್ದಾನೆ. ಈ ಮಂಡಲಗಳಲ್ಲಿ ತೋರುವ ಗ್ರಹಗಳಿಂದ ಶುಭಾಶುಭ ಫಲಗಳನ್ನು ತಿಳಿಸುತ್ತಾನೆ.

೧೧) ಏಕಾದಶಾಧ್ಯಾಯಂ: ಉದಕಾರ್ಗಳಂ

'ಅಟ್ಟಮತ'ದ ಹನ್ನೊಂದನೆಯ ಅಧ್ಯಾಯದಲ್ಲಿ ರಟ್ಟಕವಿಯು ಮಳೆಯಾದ ನೀರನ್ನು ಸಂಗ್ರಹಿಸುವುದು; ಯಾವ ಪ್ರದೇಶದಲ್ಲಿ ಬಾವಿಯನ್ನು ತೋಡಿದರೆ ನೀರು ಬರುವುದು; ಹುತ್ತ, ಮರಗಳು, ಹುಲ್ಲುಗಳು ಬೆಳೆದಿರುವುದನ್ನು ಆಧರಿಸಿ ನೀರಿನ ಇರುವಿಕೆಯನ್ನು ಗುರುತಿಸುವುದು; ಬಾವಿ ತೋಡುವ ಸಲಕರಣೆಗಳನ್ನು ತಯಾರಿಸುವ ಕ್ರಮ; ಬಾವಿಯಲ್ಲಿನ ನೀರು ಕೆಡದಂತೆ ವಹಿಸಬೇಕಾದ ಗ್ರಮಗಳನ್ನು ತಿಳಿಸಿದ್ದಾನೆ.

ಕುದುರೆಯ ಲಾಳಾಕೃತಿಯಲ್ಲಿ ಹುತ್ತಿರುವ ಪ್ರದೇಶದ ಉತ್ತರಕ್ಕೆ ಮೂರಳತೆಯ ದೂರದಲ್ಲಿ; ಕಪ್ಪುಮಣ್ಣಿನಿಂದಾದ ಹುತ್ತದ ಪ್ರದೇಶದಲ್ಲಿ ಉತ್ತರ ದಿಕ್ಕಿಗೆ ನೀರಧಾರೆಯು ನಿಶ್ಚಿತವಾಗಿಯೂ ಇರುವುದು ಎಂದು ಹೇಳುತ್ತಾನೆ. ನೆಲವನ್ನು ಅಗೆಯುತ್ತರುವಾಗ ಆಳದಲ್ಲಿ ಕಪ್ಪೆಗಳಿದ್ದರೆ ನಾಲ್ಕು ಆಳಳತೆಯಲ್ಲಿ ನೀರಿರುವುದು. ಕಪ್ಪೆಯು ಕರಿಕಲ್ಲಿನ ಕೆಳಗಿದ್ದರೆ ಅಲ್ಲಿ ಅತಿ ಹೆಚ್ಚಿನ ನೀರು ಇರುವುದು. ತಾರೆಯ ಮರ, ತಿಲಕದ ಮರ, ಚೆಳ್ಳೆಯ ಮರ, ಎಕ್ಕದ ಗಿಡ, ತೆಂಗು, ತಾಳೆಗಳನ್ನು ಬಳಸಿ ಹುತ್ತವು ಬೆಳದಿದ್ದರೆ ಅಲ್ಲಿ ಉತ್ತಮವಾದ ಅಂತರ್ಜಲವಿರುವುದು. ಮುತ್ತುಗ, ಗದರಿ, ಕಕ್ಕೆಯ ಮರಗಳ ಉತ್ತರ ದಿಕ್ಕಿಗೆ ಹುತ್ತವಿದ್ದರೆ ನೀರು ಬರುವುದು. ಆಲ, ಗೋಣಿ, ಪಾದರಿ, ಹುಲಿಗಿಲ, ತಿಗುಡೆ, ಅಶೋಕ, ತೇಗ, ಲೊಕ್ಕೆ, ಸಿರೀಸ, ಬಿಳ್ವ, ಬೀಟೆಮರಗಳು ಇರುವೆಡೆಯಲ್ಲಿ ಅಂತರ್ಜಲವು ಹೇರಳವಾಗಿರುವುದು. ಮೆತ್ತನೆಯ ಎತ್ತರದ ಹುಲ್ಲು ಬೆಳೆದಿದ್ದರೆ ಅಲ್ಲಿ ನೀರಿರುವುದು. ಮುಳ್ಳಿನ ಗಿಡಗಳ ನಡುವೆ ಮುಳ್ಳಿಲ್ಲದಿರುವ ಮರವು ಬೆಳೆದಿದ್ದರೆ ಆ ಮರದ ಕೆಳಗೆ ನೀರಿರುವುದು. ಫಲ–ಪುಷ್ಪಗಳಿಂದ ಶೋಭಿಸುವ ಮರದ ಸಮೀಪದಲ್ಲಿ ನೀರಿನ ಧಾರೆ ನಿಶ್ಚಿತವಾಗಿಯೂ ಇರುವುದು.

೧೨) ದ್ವಾದಶಾಧ್ಯಾಯಂ : ನಕ್ಷತ್ರಗ್ರಹಸ್ವರೂಪಾದಿ ಫಲಂ

'ಅಟ್ಟಮತ' ಗ್ರಂಥದ ಕೊನೆಯ ಅಧ್ಯಾಯದಲ್ಲಿ ರಟ್ಟಕವಿಯು ನಕ್ಷತ್ರಾದಿ ದೇವತೆಗಳು, ಗ್ರಹಗಳ ರಾಶ್ಯಾಧಿತ್ಯ, ನಕ್ಷತ್ರಮಂಡಲಗಳು, ಉಚ್ಚರಾಶಿ, ನೀಚರಾಶಿ, ನಕ್ಷತ್ರ ಗುಣಾಕಾರ, ಗ್ರಹ ಗುಣಾಕಾರ, ರಾಶಿ ಗುಣಾಕಾರ, ಸಂಕ್ರಾಂತಿಯ ಫಲ, ನಕ್ಷತ್ರ ಚಕ್ರ, ಕೂರ್ಮ ಚಕ್ರ, ಹುಣ್ಣಿಮೆ, ಅಮವಾಸ್ಯೆ, ಗ್ರಹಗಳ ಏರುಪೇರು ಇವುಗಳ ಪರಿಮಾಣವಾಗಿ ಬೆಳೆ ಲಕ್ಷಣಫಲ, ತೇಜಿ, ಮಂದಿ ಫಲಗಳನ್ನು ತಿಳಿಸುತ್ತಾನೆ.

"ಶ್ರವಣಂ ಶತಭಿಷೆ ಪುಷ್ಯಂ
ಧ್ರುವಿಧೋತ್ತರೆ ಪದ್ಮಯೋನಿ ರುದ್ರ ಧನಿಷ್ಠಾ
ಪ್ರವರರ್ಕ್ಷ ಪೂರ್ವಮುಖಮೆಂ
ದವಧಾರಿಸು ಅಟ್ಟನೆಂದ ಸೂತ್ರಕ್ರಮಂ॥೧೨.೦೪॥


ಭರಣಿ ಮಘೆ ಮೂಱು ಪೂರ್ವೆಗಯು
ಉರಗ ವಿಶಾಖಾಗ್ನಿ ಮೂಲಮೆಂಬಿ ಭಗಣಂ
ನಿರುತಮಧೋಮುಖಮೆಂದುಂ
ಧರಾತಿಲಂ ಪೊಗಟಿ ನೆಗಟ್ದ ಸುಕವಿನಿಧಾನಂ ॥೧೨.೦೫॥

ಅನುರಾಧೆ ಚಿತ್ತೆ ರೇವತಿ
ಪುನರ್ವಸು ಸ್ವಾತಿ ಜ್ಯೇಷ್ಠೆ ಮೃಗಶಿರೆ ಹಸ್ತಂ
ವಿನುತಾಶ್ವಿನಿಯೆಂಬಿವು ತಾಂ
ಆನನುತ ತಿರ್ಯಕ್ ಮುಖಂಗಳೆಂದಂ ಅಟ್ಟಂ ॥೧೨.೦೬॥"[೯೯೨]

ಹೀಗೆ ನಕ್ಷತ್ರ ಚಕ್ರವನ್ನು ಹೇಳುತ್ತಾನೆ ಕವಿ.

ಚಿತ್ರ ೫.೬

ನಕ್ಷತ್ರ ಚಕ್ರಂ



: ಇಂತು ಅಟ್ಟಮತಂ ಸಮಾಪ್ತಂ :

ಹೀಗೆ ರಟ್ಟಕವಿಯು 'ಅಟ್ಟಶಾಸ್ತ್ರ' ಅಥವಾ 'ಅಟ್ಟಮತ'ದ ಹನ್ನೆರಡು ಅಧ್ಯಾಯಗಳಲ್ಲಿ ವಿವಿಧ ಬಗೆಯಲ್ಲಿ ಮಳೆ ಮೋಡಗಳು, ಪ್ರಾಣಿ ಪಕ್ಷಿಗಳ ಶಕುನ ಫಲದಿಂದ ಮಳೆಯ ಲಕ್ಷಣಗಳು, ಮಳೆಯಾಗಬಹುದಾದ ಸಂದರ್ಭಗಳು, ಪ್ರದೇಶ, ಬಿತ್ತನೆ ಮಾಡಬೇಕಾದ ಕಾಲ, ಗ್ರಹ–ನಕ್ಷತ್ರಾದಿ, ರಾಶಿಗಳ ಮೂಲಕ ಮಳೆಯ ಫಲಗಳು, ಪ್ರಕೃತಿಯಲ್ಲಾಗುವ ಬದಲಾವಣೆಗಳಿಂದ ಮಳೆಯಾಗುವುದೋ ಇಲ್ಲವೋ ಎಂಬ ವಿಚಾರಗಳನ್ನು ನಿರೂಪಿಸಿದ್ದಾನೆ. ಇಂದಿನ ಆಧುನಿಕ ಯುಗದಲ್ಲಿಯೂ ರಟ್ಟಶಾಸ್ತ್ರದಲ್ಲಿ ತಿಳಿಸಿರುವ ಹಲವಾರು ವಿಚಾರಗಳು ಅನ್ವಯಾತ್ಮಕವಾಗಿವೆ ಎಂಬುದು ಉಲ್ಲೇಖಾರ್ಹ. ಇಂದಿಗೂ ಬಿತ್ತನೆಗೆ ಮುಂಚೆ ಕೂರಿಗೆ ಪೂಜೆ ಮಾಡುವುದು ವಾಡಿಕೆಯಲ್ಲಿದೆ. ಹೊಸವರ್ಷ ಬಂದಾಗ ಮಳೆನಕ್ಷತ್ರಗಳ ಫಲ, ಸಂಕ್ರಾಂತಿಯ ಫಲಗಳನ್ನು ಪಂಚಾಗದ ಮೂಲಕ ನೋಡಲಾಗುತ್ತದೆ. ಪ್ರಾಣಿಗಳ ಚಟುವಟಿಕೆಯ ಆಧಾರದಲ್ಲಿ ಮಳೆಯ

೯೯೨. ಎಚ್. ಶೇಷ ಅಯ್ಯಂಗಾರ್ (ಸಂ): **ರಟ್ಟಮತಂ** ; ಪುಟ. ೯೧

ಲಕ್ಷಣಗಳನ್ನು ಹಳ್ಳಿಯ ರೈತರು ಇಂದಿಗೂ ಗುರುತಿಸುತ್ತಾರೆ. ರಟ್ಟಕವಿಯು ಹೇಳಿರುವ ಹಳದಿ ಮೋಡದಿಂದ ಮಳೆಯಾಗದು ಎಂದು ಹೇಳಿರುವುದನ್ನು ಸಾಮಾನ್ಯ ಜನರು ಇಂದಿಗೂ ಒಪ್ಪುತ್ತಾರೆ.

೫.೬. ನೀತಿಶಾಸ್ತ್ರ:

ವೈಯಕ್ತಿಕ ಹಾಗೂ ಸಮಾಜಕ್ಕೆ ಸಂಬಂಧಿಸಿದ ಹಾಗೆ ಮಾನವನ ನಡವಳಿಕೆಯಲ್ಲಿ ಯಾವುದು ಸರಿ, ಯಾವುದು ತಪ್ಪು, ಎಂಬುದನ್ನು ತಿಳಿಸುವುದೇ ನೀತಿಶಾಸ್ತ್ರ. ಇದನ್ನು ಇಂಗ್ಲಿಷ್‌ನಲ್ಲಿ ಎಥಿಕ್ಸ್ (Ethics) ಎಂದು ಕರೆಯಲಾಗುತ್ತದೆ. "ಎಥಿಕ್ಸ್ ಎಂಬ ಇಂಗ್ಲಿಷ್ ಪದಕ್ಕೆ ಮೂಲವಾದ ಎಥಾಸ್ ಎಂಬ ಲ್ಯಾಟಿನ್ ಪದಕ್ಕೆ ನಡವಳಿಕೆ, ಗುಣ ಎಂದು ಅರ್ಥ."[೯೬೩] ನೀತಿಶಾಸ್ತ್ರಕ್ಕೆ Morel Philosophy ಎಂಬ ಇನ್ನೊಂದು ಹೆಸರಿದೆ. ಮಾರಲ್ ಎಂಬ ಇಂಗ್ಲಿಷ್ ಪದಕ್ಕೆ ಮೂಲವಾದ ಮೋರೇಸ್ ಎಂಬ ಲ್ಯಾಟಿನ್ ಪದಕ್ಕೆ ಆಚರಣೆ, ರೂಢಿ, ಪದ್ಧತಿ ಎಂಬ ಅರ್ಥವಿದೆ.

"ಜೀವನಕ್ಕೆ ನೇರವಾಗಿ ಸಂಬಂಧಿಸಿದಂತಿರುವ ನೀತಿಶಾಸ್ತ್ರ ಕರ್ತವ್ಯಗಳೆಂದರೆ ಏನು, ಅವು ಯಾವುವು, ಅವು ಅನಿವಾರ್ಯವೆ, ಅವನ್ನು ಸಡಿಲಿಸಬಹುದೆ-ಮುಂತಾದ ಪ್ರಶ್ನೆಗಳನ್ನು ಸಮಗ್ರವಾಗಿ ಹಾಗೂ ಶಾಸ್ತ್ರೀಯವಾಗಿ ಚರ್ಚಿಸುತ್ತದೆ. ಇತರ ಶಾಸ್ತ್ರಗಳಂತೆ ಅದು ಇರುವ ವಿಷಯವನ್ನು ವಿವರಿಸುವ ಶಾಸ್ತ್ರವಲ್ಲ. ಅದು ಇಂಥ ನೈತಿಕ ವಿಷಯ ಹೀಗೆ ಇರಬೇಕು, ಹೀಗಿದ್ದರೆ ಸರಿಯಲ್ಲ ಎಂದು ಒತ್ತಿಹೇಳುತ್ತದೆ. ಅದು ಅನೇಕ ನೈತಿಕ ಮಾನಗಳನ್ನು ಮುಂದಿಟ್ಟು ಮಾನವನ ನಡವಳಿಕೆ ಅವಕ್ಕೆ ಅನುಸಾರವಾಗಿರಬೇಕೆಂದು ತಿಳಿಸುತ್ತದೆ. ಈ ದೃಷ್ಟಿಯಿಂದ ಅದು ಇತರ ಶಾಸ್ತ್ರಗಳಿಗಿಂತ ಭಿನ್ನ."[೯೬೪] ನೀತಿಶಾಸ್ತ್ರವು ತತ್ತ್ವಶಾಸ್ತ್ರದ ಒಂದು ಭಾಗವಾಗಿದೆ. ನೈತಿಕಶುದ್ಧಿ ಇಲ್ಲದವ ಧರ್ಮಾವಲಂಬಿಯಾಗಲು ಅರ್ಹನಲ್ಲವೆಂದೂ ನೀತಿ ತನ್ನ ಸಾರ್ಥಕ್ಯವನ್ನು ಪಡೆಯುವುದು ಅದು ಧರ್ಮದೊಡನೆ ಸೇರುವಾಗಲೇ ಹೊರತು, ತಂತಾನೇ ಅದು ಯಾವ ಲೋಕೋದ್ಧಾರವನ್ನೂ ಮಾಡುವುದು ಹೇಳಲಾಗುತ್ತದೆ. ಭಾರತದಲ್ಲಿ, ಧರ್ಮ ಮತ್ತು ನೀತಿಗಳು ಎರಡೂ ಒಂದೇ ಎಂದು ಹೇಳಲಾಗುತ್ತದೆ. ಇಲ್ಲಿ ನೈತಿಕತೆ ಮತ್ತು ನೀತಿಶಾಸ್ತ್ರಗಳು ಪ್ರಮುಖವಾಗಿ ರಾಜನಿಗೆ ಬೋಧಿಸಲ್ಪಡುತ್ತಿದ್ದವು.

ಜೈನಧರ್ಮ ಮೂಲತಃ ಸಾಧನೀಯ ಧರ್ಮ. ಇಲ್ಲಿ ಆಧ್ಯಾತ್ಮಕ್ಕಿಂತ ವ್ಯಕ್ತಿಯ ಚರಿತ್ರೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಜೈನಧರ್ಮದಲ್ಲಿ ಮಾನವನ ಗುರಿ ಮೋಕ್ಷವನ್ನು ಸಾಧಿಸುವುದಾಗಿದೆ. ಅದಕ್ಕಾಗಿಯೇ ಮೋಕ್ಷ ಸಾಧನೆಗೆ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ್ಯಗಳೆಂಬ ತ್ರಿರತ್ನಗಳ ಮಾರ್ಗವನ್ನು ಪ್ರತಿಪಾದಿಸಲಾಗಿದೆ. ಈ ನಿಟ್ಟಿನಲ್ಲಿ ಆಚಾರ್ಯ ಸೋಮದೇವ ಸೂರಿ

---

೯೬೩. ಪ್ರೊ. ಅರವಿಂದ್ ಮಾಲಗತ್ತಿ (ಪ್ರ. ಸಂ), ಪದ್ಮನಾಭಶರ್ಮ ಎಂ. ಸಿ. (ಲೇ.) : **ಕನ್ನಡ ವಿಶ್ವಕೋಶ ಸಂಪುಟ-೧೦** : ಪುಟ.೩೬೭.
೯೬೪. **ಅದೇ** : ಪುಟ.೩೬೮.

(೯೬೭) ನೀತಿ ಬೋಧಕವಾದ 'ನೀತಿ ವಾಕ್ಯಾಮೃತ' ಎಂಬ ಕೃತಿಯನ್ನು ರಚಿಸಿದ್ದಾರೆ. ಅದಕ್ಕೆ ನೇಮಿನಾಥ (೧೨೦೦) ಕವಿಯು ಕನ್ನಡದಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾನೆ.

೫.೬.೧. ನೇಮಿನಾಥ (೧೨೦೦):

ನೇಮಿನಾಥ ಕವಿಯು ಗ್ರಂಥದ ಕೊನೆಯಲ್ಲಿ ನೀಡಿರುವ ಗದ್ಯವನ್ನು ಆಧರಿಸಿ ಆತನ ವೈಯಕ್ತಿಕ ವಿಚಾರದ ಕುರಿತಾಗಿ ತಿಳಿಯಬಹುದಾಗಿದೆ. "ಇತಿ ಸಕಲತಾರ್ಕಿಕಚೂಡಾಮಣಿ ಮಂಡಿತ ಚರಣಸ್ಯ ಪಂಚಪಂಚಾಶತ್ ಮಹಾವಾದಿವಿಜಯೋಪಾರ್ಜಿತಕೀರ್ತಿ ಮಂದಾಕಿನೀಪವಿತ್ರಿತಭುವನಸ್ಯ ಪರಮತಪಶ್ಚರಣವತಃ ಶ್ರೀಮನ್ನೇಮಿದೇವಭಗತಃ ಪ್ರಿಯಶಿಷ್ಯೇಣ ವಾದೀಂದ್ರಕಾಲಾನಲ ಶ್ರೀನೇಮಿಚಂದ್ರಭಟ್ಟಾರಕಾನುಜಸ್ಯ ಸ್ಯಾದ್ವಾದಚಲಸಿಂಹ ತಾರ್ಕಿಕ ಚಕ್ರವರ್ತಿ ವಾದೀಭಪಂಚಾನ ವಾಕ್ಕಲ್ಲೋಲಪಯೋನಿಧಿ ಕವಿಕುಲರಾಜಕುಂಜರಪ್ರಭತಿ ಪ್ರಶಸ್ತಾಲಂಕಾರೇಣ ಷಣ್ಣವತಿಪ್ರಕರಣಯುಕ್ತಿ ಚಿಂತಾಮಣಿಸ್ತವಮಹೇಂದ್ರ ಮಾತವಿಸಂಜಲ್ಪ ಯಶೋಧರ ಮಹಾರಾಜ ಚರಿತ್ರ ಪ್ರಮುಖ ಮಹಾಶಾಸ್ತ್ರವೇಧಸಾ ಶ್ರೀಮತ್ ಸೋಮದೇವಸೂರಿಣಾ ವಿರಚಿತಂ ನೀತಿವಾಕ್ಯಾಮೃತಂ".[೧೯೫] ಯಶೋಧರ ಚರಿತ್ರೆಯನ್ನು ಬರೆದಿರುವ ಶ್ರೀಮತ್ ಸೋಮದೇವ ಸೂರಿ ವಿರಚಿತ ನೀತಿವಾಕ್ಯಾಮೃತವನ್ನು ತಾನು ಕನ್ನಡಿಸಿದುದಾಗಿ ಹೇಳಿಕೊಳ್ಳುತ್ತಾನೆ. "ಕೊಲ್ಲಾಪುರದ ಶಿಲಾಹಾರ ಗಂಡರಾದಿತ್ಯನು ಕ್ರಿ.ಶ.೧೧೨೬ರ ತಾಮ್ರ ಶಾಸನದಲ್ಲಿ ದಾನವಾಗಿ ಕೊಟ್ಟ ಕೊಂನಿಜವಾಡ ಎಂಬ ಗ್ರಾಮವು ಕೋಡವಳ್ಳಿ ಕಂಪಣ, ಮಿರಿಂಜೆ ದೇಶದಲ್ಲಿತ್ತೆಂದು ಹೇಳಲಾಗಿದೆ. ನೇಮಿನಾಥನ ಹುಟ್ಟೂರು ಈ ಕೋಡವಳ್ಳಿಯೇ ಆಗಿರಬಹುದು. ಇದರ ಈಗಿನ ಹೆಸರು ಕೊಡೋಲಿ."[೧೯೬] ಕೊಡೋಲಿ ಎಂಬ ಹಳ್ಳಿಯು ಕೊಲ್ಲಾಪುರದ ಪೂರ್ವಕ್ಕಿದೆ. ಹನ್ನೆರಡನೆಯ ಶತಮಾನದಲ್ಲಿ ಕೊಲ್ಲಾಪುರದ ಶಿಲಾಹಾರರು ಜೈನ ಮತಕ್ಕೂ ಉದಾರವಾಗಿ ಪ್ರೋತ್ಸಾಹವನ್ನು ನೀಡಿದರು. ಶಿಲಾಹಾರರ ಆಸ್ಥಾನದಲ್ಲಿ ನೇಮಿನಾಥನು ಸಂಧಿವಿಗ್ರಹಿಯಾಗಿದ್ದುದಾಗಿ ತಾನೇ ಹೇಳಿಕೊಂಡಿದ್ದಾನೆ. ಈತನು ರಾಜನೀತಿಶಾಸ್ತ್ರದಲ್ಲಿ ತೀವ್ರ ಆಸಕ್ತಿಯುಳ್ಳವನಾಗಿದ್ದ.

೫.೬.೧.೧. ನೀತಿವಾಕ್ಯಾಮೃತಂ :

'ನೀತಿವಾಕ್ಯಾಮೃತಂ' ಗ್ರಂಥದಲ್ಲಿ ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರೀಯ ವಿಚಾರಗಳನ್ನು ಒಳಗೊಂಡು ೩೨ ಅಧ್ಯಾಯಗಳಲ್ಲಿ ವಿವಿಧ ನೈತಿಕ ವಿಚಾರಗಳನ್ನು ಚರ್ಚಿಸಲಾಗಿದೆ.

ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಪುರಷಾರ್ಥಗಳಲ್ಲಿ ಧರ್ಮವು ಅತ್ಯಂತ ವಿಶಿಷ್ಟವಾದುದು.

"ಅಥಧರ್ಮಾರ್ಥಕಾಮಫಲಾಯ ರಾಜ್ಯಾಯ ನಮಃ ||೧.೦೧||"[೧೯೭]

---

೧೯೫. ಜಿ. ಎಸ್. ದೀಕ್ಷಿತ್, ಬಿ ರಾಮಸ್ವಾಮಿ, ಶ್ರೀನಿವಾಸ ರಿತ್ತಿ (ಸಂ) : **ಆಚಾರ್ಯ ಶ್ರೀ ಸೋಮದೇವ ವಿರಚಿತಂ ನೀತಿವಾಕ್ಯಾಮೃತಂ (ಶ್ರೀ ನೇಮಿನಾಥವಿರಚಿತಂ ಕರ್ಣಾಟಕ ವ್ಯಾಖ್ಯಾನ ಸಹಿತಂ)** ; ಪುಟ. ೪೫೭

೧೯೬. **ಅದೇ** ; ಪುಟ. ೧೮ (ಅರಿಕೆ)

೧೯೭. **ಅದ** ; ಪುಟ. ೦೨

ಕವಿಯು ಆರಂಭದಲ್ಲಿ ಧರ್ಮ, ಅರ್ಥ, ಕಾಮಗಳ ಫಲವಾಗಿ ದೊರೆತ ರಾಜ್ಯಕ್ಕೆ ನಮಸ್ಕಾರ ಎಂದು ತಿಳಿಸಿ, ಮುಂದುವರೆಯುತ್ತಾನೆ. ಈ ಅಧ್ಯಾಯದಲ್ಲಿ ಯಾವ ಯಾವ ರೀತಿಯಲ್ಲಿ ಧರ್ಮಕಾರ್ಯ ಮಾಡಬೇಕೆಂದು ತಿಳಿಸಲಾಗಿದೆ.

- ಇತರರಿಗೆ ತನ್ನಂತೆಯೇ ಒಳಿತನ್ನು ಬಯಸಬೇಕು. (೧.೪)
- ಸಕಲ ಪ್ರಾಣಿಗಳನ್ನೂ ಸಮಾನ ಎಂದು ತಿಳಿಯುವುದು. (೧.೫)
- ಇತರರನ್ನು ಹಿಂಸಿಸಬಾರದು. (೧.೭)
- ಇಹ ಮತ್ತು ಪರದಲ್ಲಿ ಲಭಿಸುವ ಫಲಕ್ಕಾಗಿ ತ್ಯಾಗ ಮಾಡಬೇಕು. (೧.೯)
- ಅಪಾತ್ರರಿಗೆ ದಾನ ಮಾಡಬಾರದು. (೧.೧೦)
- ದಾನ ಮತ್ತು ಹಿತವಾದ ಮಾತುಗಳಿಂದ ಇತರರಿಗೆ ಸಂತೋಷವನ್ನುಂಟು ಮಾಡುವುದೇ ಔಚಿತ್ಯ (೧.೧೮)
- ದಾನ ಮಾಡದಾತನ ಮಾತುಗಳು ತಾನು ಇನ್ನೊಂದೆಡೆ ಪಡೆಯುವಾಗ ಅಡ್ಡಿಯಾಗುತ್ತವೆ. (೧.೨೦)
- ಇಂದ್ರಿಯ ಮತ್ತು ಮನಸ್ಸಿನ ಮೇಲಿನ ನಿಯಂತ್ರಣವೇ ತಪಸ್ಸು. (೧.೨೫)
- **"ದುರ್ಭಗಾಭರಣಮಿವ ದೇಹಬಾಧಾವಹಮೇವ ಜ್ಞಾನಂ ಸ್ವಯಮನಾಚರಿತಃ ॥೧.೩೦॥"**[೯೮]
  ಆಚಾರವಿಲ್ಲದ ಜ್ಞಾನವು ವಿಧವೆಯ ಕೊರಳಲ್ಲಿರುವ ಆಭರಣಗಳಂತೆ ಶರೀರಕ್ಕೆ ಹೊರೆ.
- ಧರ್ಮದಲ್ಲಿ ತೊಡಗಿರುವವನಿಗೆ ಬಡತನ ಎಂಬುದಿಲ್ಲ. (೧.೫೩)
- ಯಾವುದರಿಂದ ಅವಶ್ಯಕತೆಗಳು ಪೂರೈಸುವವೋ ಅದುವೇ ಅರ್ಥ. (೨.೧)
- ಅರ್ಥವನ್ನು ಸರಿಯಾಗಿ ನಿರ್ವಹಿಸುವವನು ಅರ್ಥ ಗಳಿಕೆಗೆ ಅರ್ಹನು. (೨.೨.)
- ಬಂದಿದ್ದನ್ನು ನೀರಿನಂತೆ ಖರ್ಚು ಮಾಡಬಾರದು. (೨.೭)
- ಪಿತ್ರಾರ್ಜಿತ ಧನವನ್ನು ಅನ್ಯಾಯದಿಂದ ನಾಶ ಮಾಡಬಾರದು. (೨.೮)
- ಜಿಪುಣನು ಕೂಡಿಟ್ಟ ಅರ್ಥವು ಕೇವಲ ವ್ಯರ್ಥ. (೨.೧೧)
- ಅಭಿಮಾನದಿಂದ ಕೂಡಿದ ಸರ್ವೇಂದ್ರಿ ಪ್ರೀತಿಯನ್ನು ಯಾವುದು ನೀಡುವುದೋ ಅದುವೇ ಕಾಮ. (೩.೧)
- ಕಾಮಾಸಕ್ತನಿಗೆ ಯಾವ ಚಿಕಿತ್ಸೆಯೂ ಇಲ್ಲ. (೩.೧೦)
- ಸ್ತ್ರೀಯರಲ್ಲಿ ಅತಿಯಾದ ಆಸಕ್ತಿ ಹೊಂದಿರುವವನ ಧನ, ಶರೀರ, ಧರ್ಮ ಯಾವುದೂ ಉಳಿಯಲಾರದು. (೩.೧೧)
- ಎಷ್ಟೇ ಸಮೃದ್ಧ ವ್ಯಕ್ತಿಯಾಗಿದ್ದರೂ ಯೋಗ್ಯವಲ್ಲದ ಕಾಮದಲ್ಲಿ ಆಸಕ್ತಿ ಹೊಂದಿದ್ದರೆ ಆತನಿಗೆ ಉಳಿಗಾಲವಿಲ್ಲ. (೩.೧೨)
- ಕಾಮ, ಕ್ರೋಧ, ಲೋಭ, ಮಾನ, ಮದ, ಹರ್ಷಗಳು ಅರಸರ ಆರು ಶತ್ರುಗಳು. (೪.೧)

೯೮. ಜಿ. ಎಸ್. ದೀಕ್ಷಿತ್, ಬಿ ರಾಮಸ್ವಾಮಿ, ಶ್ರೀನಿವಾಸ ರಿತ್ತಿ (ಸಂ) : **ಆಚಾರ್ಯ ಶ್ರೀ ಸೋಮದೇವ ವಿರಚಿತಂ ನೀತಿವಾಕ್ಯಾಮೃತಂ (ಶ್ರೀ ನೇಮಿನಾಥವಿರಚಿತಂ ಕರ್ಣಾಟಕ ವ್ಯಾಖ್ಯಾನ ಸಹಿತಂ)** ; ಪುಟ. ೧೦

- **“ಪರಿಪರಿಗ್ರಹೀತಾನೂಢಾಸು ವಾ ಸ್ತ್ರೀಷು ದುರಭಿಸಂಧಿಃ ಕಾಮ ॥೪.೨॥”**[೧೯೯]
  ಪರಸ್ತ್ರೀಯರಲ್ಲಿ, ಅವಿವಾಹಿತರಲ್ಲಿ ಅನುರಕ್ತನಾಗುವುದು ಅಕ್ರಮ ಸಂಬಂಧ (ಕಾಮ). (೪.೨)
- ಇನ್ನೊಬ್ಬರಿಗೆ ಅಪಾಯವನ್ನುಂಟು ಮಾಡುವ ಕೋಪವೇ ಕ್ರೋಧ. (೪.೩)
- ಅರ್ಹರಿಗೆ ಧನವನ್ನು ಕೊಡದಿರುವುದು, ಪರಧನವನ್ನು ಅಪಹರಿಸುವುದು ಲೋಭ. (೪.೪)
- ದುರಾಚಾರವನ್ನು ಬಿಡದಿರುವುದು, ಉಚಿತ ಸಲಹೆಯನ್ನು ಗುರುತಿಸದಿರುವುದು ದುರಭಿಮಾನ. (೪.೫)
- ಕುಲ, ಬಲ, ಸಂಪತ್ತು, ರೂಪ, ವಿದ್ಯೆಗಳಿಂದ ಅಹಂಕಾರ ಪಡುವುದೇ ಮದ. (೪.೬)
- ನಿಷ್ಕಾರಣವಾಗಿ ಇನ್ನೊಬ್ಬರಿಗೆ ನೋವುಂಟು ಮಾಡಿ, ತಾನು ಸಂತೋಷ ಪಡುವುದೇ ಮತ್ಸರ. (೪.೭)
- ತನಗೆ ಅನುಕೂಲವಾದವರ ವಿಷಯದಲ್ಲಿ ಇಂದ್ರನಂತೆಯೂ, ವಿರೋಧಿಗಳಿಗೆ ಯಮನಂತೆ ಇರುವವನೇ ಅರಸ. (೫.೧)
- ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವು ಸಮಾಜದ ವರ್ಣಗಳು. (೫.೫)
- ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಇವು ಆಶ್ರಮಗಳು. (೫.೬)
- ವಿವಾಹಪೂರ್ವ ಪಾವಿತ್ರ್ಯತೆಯನ್ನು ಪಾಲಿಸುವವನು ಬ್ರಹ್ಮಚಾರಿ. (೫.೭)
- ಜೀವನ ಪೂರ್ತಿ ಮದುವೆಯಾಗದವನು ನೈಷ್ಠಿಕ ಬ್ರಾಹ್ಮಣ. (೫.೮)
- ಉತ್ತಮ ನಡವಳಿಕೆ ವಂಶದ ಗೌರವವನ್ನು ಹೆಚ್ಚಿಸುತ್ತದೆ. (೫.೨೦)
- ನಿಗರ್ವವೇ ಪರಾಕ್ರಮಕ್ಕೆ ಭೂಷಣ. (೫.೨೧)
- ವಿದ್ಯೆಯಿಂದ ಯಾರು ವಿನೀತನಾಗಿರುವನೋ ಅವರು ಬುದ್ಧಿವಂತ. (೫.೨೪)
- ಕೇವಲ ಪೌರುಷವನ್ನೇ ನಂಬಿರುವ ಅರಸನಿಗೆ ಚಿರಕಾಲವೂ ಕ್ಷೇಮವಿರದು. (೫.೨೨)
- ಆತ್ಮ, ಮನಸ್ಸು, ವಾಯು ತತ್ತ್ವಗಳಿಗೆ ಸೇರುವಿಕೆಯ ಸಮಾನ ಲಕ್ಷಣವುಳ್ಳದ್ದು ಆಧ್ಯಾತ್ಮ. (೬.೧)
- ಯಾವ ವಿಷಯದಲ್ಲಿ ಅಸ್ತಿತ್ವ ಎನ್ನುವ ಜ್ಞಾನ ಉಂಟಾಗುವುದೋ ಆ ಜ್ಞಾನವೇ ಆತ್ಮ. (೬.೪)
- ಆತ್ಮನು ವಿಷಯಗಳನ್ನು ಅನುಭವಿಸುವ ಮಾರ್ಗಗಳೇ ಇಂದ್ರಿಯಗಳು. (೬.೭)
- ಸ್ಪರ್ಶ, ರಸ, ಗಂಧ, ಶಬ್ದ, ರೂಪಗಳೇ ವಿಷಯಗಳು. (೬.೮)
- ಅಭ್ಯಾಸದಿಂದಲೇ ಪಕ್ವತೆ ಸಾಧ್ಯ. (೬.೧೩)
- ಹಸಿವು ಬಾಯಾರಿಕೆ, ಕಾಮ, ಭಯ ಇವುಗಳು ಸಹಜವಾದ ದುಃಖಗಳು. (೬.೨೦)
- ವಾತ, ಪಿತ್ತ, ಶ್ಲೇಷ್ಮಗಳೆಂಬ ತ್ರಿವಿಧ ದೋಷಗಳಿಂದ ಉಂಟಾಗುವುದು ದೋಷಜ ದುಃಖ. (೬.೨೧)
- ಏನಾದರೂ ಸಾಧಿಸಬೇಕೆಂಬ ಕ್ರಿಯೆಯೇ ಪ್ರಯತ್ನ. (೬.೨೯)
- ಪ್ರಾಪಂಚಿಕ ವ್ಯವಹಾರಗಳಲ್ಲಿ ತೊಡಗುವುದೇ ಲೋಕಾಯತ. (೬.೩೨)
- ಅಪರಾಧಿಗಳನ್ನು ಕ್ಷಮಿಸುವ ಗುಣ ಸನ್ಯಾಸಿಗಳಿಗೆ ಇರಬೇಕು ಹೊರತು ರಾಜನಿಗಲ್ಲ. (೬.೩೬)

---

೧೯೯. ಜಿ. ಎಸ್. ದೀಕ್ಷಿತ್, ಬಿ ರಾಮಸ್ವಾಮಿ, ಶ್ರೀನಿವಾಸ ರಿತ್ತಿ (ಸಂ) : ಆಚಾರ್ಯ ಶ್ರೀ ಸೋಮದೇವ ವಿರಚಿತಂ ನೀತಿವಾಕ್ಯಾಮೃತಂ (ಶ್ರೀ ನೇಮಿನಾಥವಿರಚಿತಂ ಕರ್ಣಾಟಕ ವ್ಯಾಖ್ಯಾನ ಸಹಿತಂ) ; ಪುಟ. ೨೪

- ರಾಜವಿದ್ಯೆಗಳಲ್ಲಿ ತ್ರಯೀ ಎಂಬುದು ಎರಡನೆಯ ವಿದ್ಯೆ.
- ಚತುರ್ವೇದಗಳು, ಶಿಕ್ಷಾ, ಕಲ್ಪ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯಗಳೆಂಬ ಆರು ಶಾಸ್ತ್ರಗಳು, ಇತಿಹಾಸ, ಪುರಾಣಗಳು, ಮೀಮಾಂಸಾ, ನ್ಯಾಯಶಾಸ್ತ್ರ ಎಂಬ ಹದಿನಾಲ್ಕು ವಿದ್ಯಾಸ್ಥಾನಗಳನ್ನು ಹೊಂದಿರುವುದೇ ತ್ರಯೀ. (೭.೧)
- ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಸ್ವಾಧ್ಯಾಯ ಮತ್ತು ದಾನಗಳು ಸಾಮಾನ್ಯ ಧರ್ಮಗಳು. (೭.೫)
- ಅಧ್ಯಾಪನ, ಯಾಜನ ಮತ್ತು ಪ್ರತಿಗ್ರಹಗಳು ಬ್ರಾಹ್ಮಣರ ಧರ್ಮ.
- ಜೀವಿಗಳ ಸಂರಕ್ಷಣೆ, ಪರೋಪಕಾರ, ಬಡವರ ಕಷ್ಟ ನಿವಾರಣೆ ಮಾಡುವುದು ಕ್ಷತ್ರಿಯ ಧರ್ಮ. (೭.೮)
- ಕೃಷಿ, ವಾಣಿಜ್ಯ ವ್ಯವಹಾರಗಳಿಂದ ಜೀವಿಸುವುದು, ಅತಿಥಿ ಅಭ್ಯಾಗತರನ್ನು ಪೂಜಿಸುವುದು, ಬಾವಿ, ಅರವಟ್ಟಿಗೆ, ಪುಣ್ಯಧಾಮಗಳನ್ನು ಸ್ಥಾಪಿಸುವುದು ವೈಶ್ಯರ ಧರ್ಮ. (೭.೯)
- ಮೂರು ವರ್ಣದವರ ಸೇವೆ, ಶಿಲ್ಪಗಾರಿಕೆ ಮುಂತಾದ ಕೆಲಸಗಳಲ್ಲಿ ತೊಡಗುವುದು ಶೂದ್ರರ ಧರ್ಮ. (೩.೧೦)
  ಇಲ್ಲಿ ಧರ್ಮ ಎಂದರೆ ಕರ್ತವ್ಯ ಎಂದು ತಿಳಿಯಬೇಕು.
- ಸೂರ್ಯನ ಬೆಳಕಿನಂತೆ ಧರ್ಮವು ಎಲ್ಲರಿಗೂ ಸಮಾನವಾದುದು. (೭.೧೪)
- **"ಸ್ವಧರ್ಮಮತಿಕ್ರಮತಾಂ ಸರ್ವೇಷಾಂ ಪಾರ್ಥಿವೋ ಗುರುಃ ॥೭.೨೨॥"**[೨೦೦]
  ಯಾರು ಧರ್ಮವನ್ನು ಮೀರುತ್ತಾರೋ ಅವರಿಗೆ ರಾಜನೇ ಗುರು. ಅಂದರೆ ಕರ್ತವ್ಯ ಮೀರುವವರನ್ನು ರಾಜನು ತಡೆಯಬೇಕು.
- ಮಣ್ಣಿನ ಮೇಲೆ ರಾಜಮುದ್ರೆಯು ಹೇಗೆ ನಿಲ್ಲುವುದಿಲ್ಲವೋ ಹಾಗೆ ಸನ್ಯಾಸಿಗಳಿಗೆ ರಾಜಶಾಸನವು ಅನ್ವಯವಾಗುವುದಿಲ್ಲ. (೭.೨೯)
- ಸೌಮ್ಯರು ಬ್ರಾಹ್ಮಣರ ಸ್ವಭಾವ. (೭.೩೨)
- ಬಲಪ್ರಯೋಗ ಕ್ಷತ್ರಿಯರ ಸ್ವಭಾವ. (೭.೩೩)
- ಕಪಟತನ ವೈಶ್ಯರ ಸ್ವಭಾವ. (೭.೩೪)
- ಪ್ರಾಮಾಣಿಕತೆ ಮತ್ತು ಕುಟಿಲತೆಗಳು ಶೂದ್ರರ ಸ್ವಭಾವಗಳು. (೭.೩೫)
- ರಾಜವಿದ್ಯೆಗಳಲ್ಲಿ ವಾರ್ತೆ ಎಂಬುದು ಮೂರನೆಯ ವಿದ್ಯೆ.
- ಕೃಷಿ, ಪಶುಪಾಲನೆ ಹಾಗೂ ವಾಣಿಜ್ಯ ಇವುಗಳು ವಾರ್ತೆಗಳು. (೮.೧)
- ಎಲ್ಲಿ ವಾರ್ತೆ ಸಮೃದ್ಧವಾಗಿರುವುದೂ ಆ ರಾಜ್ಯವೂ ಸಮೃದ್ಧವಾಗಿರುವುದು. (೮.೨)
- ನಿತ್ಯವೂ ಹಣವನ್ನು ವ್ಯಯಿಸಿದರೆ ಮೇರು ಪರ್ವತವೂ ಸಾಲದು. (೮.೫)
- ಸಮುದ್ರಕ್ಕೆ ನೀರಡಿಕೆಯಾದರೆ ದಾಹ ತೀರಿಸಲಾಗದು. (೮.೭)

---

೨೦೦. ಜಿ. ಎಸ್. ದೀಕ್ಷಿತ್, ಬಿ ರಾಮಸ್ವಾಮಿ, ಶ್ರೀನಿವಾಸ ರಿತ್ತಿ (ಸಂ) : **ಆಚಾರ್ಯ ಶ್ರೀ ಸೋಮದೇವ ವಿರಚಿತಂ ನೀತಿವಾಕ್ಯಾಮೃತಂ (ಶ್ರೀ ನೇಮಿನಾಥವಿರಚಿತಂ ಕರ್ನಾಟಕ ವ್ಯಾಖ್ಯಾನ ಸಹಿತಂ)** ; ಪುಟ. ೨೪

- ಅತಿಥಿಗಳನ್ನು ಹೇಗೆ ಉಪಚರಿಸಲಾಗುತ್ತದೆಯೋ ಹಾಗೆ ವೃದ್ಧ, ಎಳೆಯ, ರೋಗಗ್ರಸ್ಥ ಪ್ರಾಣಿಗಳನ್ನು ಪೋಷಿಸಬೇಕು. (೮.೯)
- ತೂಕ, ಅಳತೆಗಳ ಅವ್ಯವಸ್ಥೆಯು ವ್ಯವಹಾರವನ್ನು ಕೆಡಿಸುತ್ತದೆ. (೮.೧೩)
- ದಂಡನೀತಿಯು ರಾಜವಿದ್ಯೆಗಳಲ್ಲಿ ನಾಲ್ಕನೆಯ ವಿದ್ಯೆ.
- ವೈದ್ಯಶಾಸ್ತ್ರದಂತೆ ದಂಡವು ದೋಷಸಂಶುದ್ಧಿಗೆ ಕಾರಣ. (೯.೧)
- ಅಪರಾಧಕ್ಕೆ ತಕ್ಕಂತೆ ದಂಡವನ್ನು ವಿಧಿಸುವುದೇ ದಂಡನೀತಿ. (೯.೨)
- ಪ್ರಜಾರಕ್ಷಣೆಗಾಗಿ ದಂಡ ವಿಧಿಸಬೇಕೆ ಹೊರತು ಧನಾರ್ಜನೆಗಲ್ಲ. (೯.೩)
- ದಂಡ, ಜೂಜು, ಅಪುತ್ರಿಕರಾಗಿ ಸತ್ತವರು, ಕಳ್ಳರು, ವೇಶ್ಯೆಯರು ಹಾಗೂ ಪ್ರಜೆಗಳಿಂದ ಪಡೆದ ಹಣವನ್ನು ರಾಜನಾದವನು ತನಗಾಗಿ ಬಳಸಿಕೊಳ್ಳಬಾರದು. (೯.೫)
- ಕಾಮ, ಕ್ರೋಧ, ಅಜ್ಞಾನದಿಮದ ವಿಧಿಸಿದ ದಂಡ ಪ್ರಜೆಗಳ ಕೋಪಕ್ಕೆ ಗುರಿಯಾಗುವುದು. (೯.೬)
- ದಂಡವನ್ನು ವಿಧಿಸದಿದ್ದರೆ ರಾಜ್ಯಾಡಳಿತವು ನಿಲ್ಲುವುದಿಲ್ಲ. (೯.೭)
- ಮಂತ್ರಿ, ಪುರೋಹಿತ, ಸೇನಾಪತಿಗಳು ತಮ್ಮ ಮಾತಿನಂತೆ ಯುಕ್ತವಾಗಿ ನಡೆದುಕೊಂಡರೆ ಅವರು ಆಹಾರ್ಯರು. (೧೦.೧)
- ಸ್ವದೇಶದಲ್ಲಿ ಹುಟ್ಟಿದವನೂ, ಆಚಾರವಂತನೂ, ಪರಿವಾರ ವಿಶುದ್ಧನೂ, ವ್ಯಸನಿಯಲ್ಲದವನೂ, ಶಸ್ತ್ರ ಮತ್ತು ಶಾಸ್ತ್ರಗಳನ್ನು ಬಲ್ಲವನೂ ಆದ ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯ ಇವರಲ್ಲಿ ಉತ್ತಮವಾದ ಒಬ್ಬರವನ್ನು ಮಂತ್ರಿಯಾಗಿ ನೇಮಿಸಬೇಕು. (೧೦.೫)
- ಎಲ್ಲ ಪಕ್ಷಪಾತಗಳಲ್ಲಿ ಸ್ವದೇಶ ಪಕ್ಷಪಾತವು ಶೇಷ್ಠವಾದುದು. (೧೦.೬)
- ಕಾರ್ಯಸಿದ್ಧಿಯಾಗುವವರೆಗೆ ಆಲೋಚನೆಯನ್ನು ರಹಸ್ಯವಾಗಿ ಇಟ್ಟಿರಬೇಕು. (೧೦.೧೬)
- ಮನುಷ್ಯನಿಗೆ ಅವಿವೇಕಕ್ಕಿಂತ ದೊಡ್ಡ ಶತ್ರುವಿಲ್ಲ. (೧೦.೪೪)
- ರಾಜರ ಅನುಗ್ರಹ, ನಿಗ್ರಹಗಳೇ ಮಂತ್ರಿಗಳ ಅನುಗ್ರಹ ನಿಗ್ರಹಗಳು. (೧೦.೫೫)
- ಮಂತ್ರಿಯ ಸಲಹೆಯನ್ನು ಮೀರಿ ವರ್ತಿಸುವ ರಾಜನು ನಿಜವಾದ ರಾಜನಲ್ಲ. (೧೦.೫೭)
- ನೀರಿನಂತೆ ಮೃದುತ್ವ ಉಳ್ಳವನು ಎಂತಹ ಬೆಟ್ಟವನ್ನಾದರೂ ಭೇದಿಸಬಲ್ಲನು. (೧೦.೧೨೪)
- ಕುಲಪುರೋಹಿತನು ರಾಜನಿಗೆ ಮಾತಾ ಪಿತೃಗಳಿಂದ್ದಂತೆ. (೧೧.೨)
- ರಾಜಪುತ್ರನಿಗೆ ರಾಜಪುರೋಹಿತನು ಉತ್ತಮವಾದ ವಿದ್ಯೆಗಳನ್ನು ನೀಡಬೇಕು. (೧೧.೪)
- ಅಧರ್ಮ, ಅನುಚಿತಾಚಾರಗಳು ಸಂಭವಿಸುವಾಗ ಗುರುಗಳ ಆಜ್ಞೆಯನ್ನು ಮೀರಬಾರದು. (೧೧.೮)
- ಗುರುವನ್ನು ತಂದೆಯಂತೆ, ಗುರುಪತ್ನಿಯನ್ನು ತಾಯಿಯಂತೆ ಕಾಣಬೇಕು. (೧೧.೨೫)
- ಹಟಮಾರಿಗೆ ಹಿತೋಪದೇಶ ಮಾಡುವುದು ಕಿವುಡನ ಮುಂದೆ ಹಾಡು ಹೇಳಿದಂತೆ. (೧೧.೪೧)
- ಅವಿಚಾರಿಗೆ ಯುಕ್ತಿಯನ್ನು ಹೇಳುವುದು ತೌಡು ಕುಟ್ಟಿದಂತೆ. (೧೧.೪೩)

- ಉತ್ತಮ ಕುಲ, ಸದಾಚಾರ, ಪ್ರಜಾನುರಾಗ, ಸತ್ಯ, ಶೌಚ, ಶೌರ್ಯ, ಆಯುಧ ಉಪಯೋಗಿಸುವ ಕಲೆ, ಯುದ್ಧ ನೈಪುಣ್ಯತೆ, ವಿವಿಧ ಲಿಪಿ ಹಾಗೂ ಭಾಷೆಗಳ ಪರಿಚಯ, ಆಳುವವನ ಅಭ್ಯುದಯ ಬಯಸುವವನೂ, ಸಕಲರಿಗೂ ಒಪ್ಪಿಗೆಯಾಗುವಂತವನೂ, ತಾಳ್ಮೆ, ಉತ್ತಮ ಮಾತುಗಾರಿಕೆ, ಆಯಾಸವನ್ನು ಸಹಿಸುವವನು ಪ್ರಜೆಗಳ ರಕ್ಷಣೆಗೆ ಸದಾ ಸಿದ್ಧನಾಗಿರುವವನು ಉತ್ತಮ ಸೇನಾಪತಿಯಾಗಬಲ್ಲನು. (೧೪.೧)
- ಸ್ವಾಮಿಭಕ್ತಿ, ಉತ್ತಮ ಸಾಮರ್ಥ್ಯ, ಸತ್ಯಶೀಲತೆ, ಪರಿಶುದ್ಧತೆ, ಪ್ರೌಢಿಮೆ, ಪ್ರತಿಭೆ, ಕುಶಲ ಬುದ್ಧಿ, ಕ್ಷಿಪ್ರಗತಿ, ಸಮಯಪ್ರಜ್ಞೆ, ಸ್ಥೈರಣೆ ಇರುವವನು ಒಳ್ಳೆಯ ದೂತನಾಗಬಲ್ಲ. (೧೩.೧)
- ದೂತನು ಶತ್ರುರಾಜ್ಯಗಳಲ್ಲಿ ಗೂಢಚಾರ ಮಾಡಲು ಸಿದ್ಧನಿರಬೇಕು. (೧೩.೬)
- ತಾನು ಅಶಕ್ತನಾಗಿದ್ದಾಗ ಇತರರು ಅನಿಷ್ಟವಾಗಿ ವರ್ತಿಸಿದರೆ ಸಹಿಸಬೇಕು. (೧೩.೧೦)
- ಶತ್ರುಗಳಿಗೆ ಕಳುಹಿಸುವ ಪತ್ರಗಳಿಗೆ ನಾಲ್ಕು ಮಡಿಕೆ ಹಾಗೂ ಖಡ್ಗಮುದ್ರೆಗಳಿರಬೇಕು. (೧೩.೨೩)
- ತನ್ನ ಸುತ್ತಲೂ ಹಾಗೂ ಶತ್ರು ರಾಜ್ಯಗಳಲ್ಲೂ ನಡೆಯುತ್ತಿರುವುದನ್ನು ಅರಿಯಲು ರಾಜನಿಗೆ ಗೂಢಚಾರರ ಅಗತ್ಯತೆಯಿದೆ. (೧೪.೧)
- ಸಂದೇಹವಿರುವಲ್ಲಿ ಮೂವರ ಮಾತುಗಳು ಒಂದೇ ಆಗಿದ್ದರೆ ಅದರಲ್ಲಿ ನಂಬಿಯಿಡಬೇಕು. (೧೪.೫)
- ಗೂಢಚಾರರಿಲ್ಲದ ರಾಜನು ತನ್ನವರಿಂದಲೇ ಮೋಸಕ್ಕೊಳಗಾಗುವನು.
- ಕಾಪಟಿಕ, ಉದಾಸ್ಥಿ, ದೌವಾರಿಕ, ವೈದೇಹಿಕ, ತಾಪಸ, ಕಿತವ, ಕಿರಾತ, ಯಮಕಪಟಕ, ಅಹಿತುಂಡಕ, ನಟ, ಶೌಂಕಿಕ, ಶೌಭಿಕ, ಪಾಟಚ್ಚರ, ಗಣಕ, ಶಾಕುನಿಕ, ಭಿಷಜ, ಇಂದ್ರಜಾಲಿಕ, ಕ್ರೂರಿ, ತೀಕ್ಷ್ಣ, ರಸದ, ಮೂಕ, ಅಂಧ, ಬಧಿರ ಮುಂತಾದ ವೇಷಗಳಲ್ಲಿ ಗೂಢಚಾರರು ತಿರುಗಾಡಬೇಕು.
- ಪ್ರತ್ಯಕ್ಷ, ಅನುಮಾನ, ಆಗಮ ಎಂಬಿವುಗಳಿಂದ ಯಥಾರ್ಥ ಸ್ವರೂಪ ಅರಿಯುವುದು. (೧೫.೨)
- ಮಾಡಿದ ಕೆಲಸದಿಂದ ಮಾಡದ ಕೆಲಸವನ್ನು ಊಹಿಸುವುದು ಅನುಮಾನ. (೧೫.೯)
- ರೂಪ, ಶೌರ್ಯ, ಬುದ್ಧಿಶಕ್ತಿ, ಸಾಮರ್ಥ್ಯ, ವಿನಯಗಳು ರಾಜ್ಯಾಧಿಕಾರದ ಚಿಹ್ನೆಗಳು. (೧೫.೧೧)
- ಆತ್ಮಪುರುಷನ ಉಪದೇಶವೇ ಆಗಮ. (೧೫.೧೪)
- ವ್ಯಸನಗಳು ಮನುಷ್ಯನನ್ನು ಶ್ರೇಯೋಮಾರ್ಗದಿಂದ ಹಿಮ್ಮೆಟ್ಟಿಸುತ್ತವೆ. (೧೬.೧)
- **"ಸ್ತ್ರೀಯಮತಿಭಜಮಾನೋ ಭವತ್ಯವಶ್ಯಂ ತೃತೀಯ ಪ್ರಕೃತಿಃ ॥೧೬.೬॥"**[೨೦೧]
  ಸ್ತ್ರೀಯನ್ನು ಅತಿಯಾಗಿ ಅನುಭವಿಸುವವನು ನಿಶ್ಚಿತವಾಗಿಯೂ ಷಂಡನಾಗುತ್ತಾನೆ.
- ಶುಕ್ಲಧಾತು ಕ್ಷಯದಿಂದ ಸಕಲಧಾತು ಕ್ಷಯವಾಗುವುದು. (೧೬.೭)
- ಹುಸಿಯಾಡುವುದು ಅನರ್ಥವನ್ನುಂಟು ಮಾಡುತ್ತದೆ. (೧೬.೧೬)
- ಅರ್ಥದೂಷಕನು ಕುಬೇರನಾದರೂ ಭಿಕ್ಷಾಟನೆಗೆ ಗುರಿಯಾಗುತ್ತಾನೆ. (೧೬.೨೦)

---

೨೦೧. ಜಿ. ಎಸ್. ದೀಕ್ಷಿತ್, ಬಿ ರಾಮಸ್ವಾಮಿ, ಶ್ರೀನಿವಾಸ ರಿತ್ತಿ (ಸಂ) : **ಆಚಾರ್ಯ ಶ್ರೀ ಸೋಮದೇವ ವಿರಚಿತಂ ನೀತಿವಾಕ್ಯಾಮೃತಂ (ಶ್ರೀ ನೇಮಿನಾಥವಿರಚಿತಂ ಕರ್ಣಾಟಕ ವ್ಯಾಖ್ಯಾನ ಸಹಿತಂ)** ; ಪುಟ. ೧೬೪

- ಸ್ವಾಮಿಯ ಮೂಲಕವೇ ಪ್ರಜೆಗಳಿಗೆ ಪ್ರಯೋಜನಗಳು ಸಿದ್ಧಿಸುವವು. (೧೭.೩)
- ಅಸತ್ಯವಾದಿಗಳ ಎಲ್ಲ ಗುಣಗಳು ನಶಿಸಿ ಹೋಗುತ್ತವೆ. (೧೭.೬)
- ಕೃತಜ್ಞನಲ್ಲದವನಿಗೆ ಕಷ್ಟಕಾಲದಲ್ಲಿ ಯಾರೂ ಸಹಾಯ ಮಾಡಲಾರರು. (೧೭.೧೫)
- ಅನ್ಯಾಯವಿದ್ದಲ್ಲಿ ಸಂಪತ್ತು ಬಹುಕಾಲ ಉಳಿಯಲಾರದು. (೧೭.೨೦)
- ರಾಜನ ಶರೀರ, ಧರ್ಮ, ಹೆಂಡತಿ ಇವು ಸ್ವಾಮಿ ಶಬ್ದಕ್ಕೆ ಸಮಾನ. (೧೮.೧೧)
- ಕಡಿಮೆ ಆದಾಯ ಹೆಚ್ಚು ವ್ಯಯ ರಾಜನ ಐಶ್ವರ್ಯವನ್ನು ನುಂಗಿ ಹಾಕುತ್ತದೆ. (೧೮.೧೬)
- ಸ್ತ್ರೀಲೋಲುಪನು ಅಧಿಕಾರಕ್ಕೆ ಯೋಗ್ಯನಲ್ಲ. (೧೮.೧೯)
- ಪಶು, ಧಾನ್ಯ, ಸುವರ್ಣ, ಸಂಪತ್ತುಗಳಿಂದ ಶೋಭಿಸುವುದೇ ಸಮೃದ್ಧ ರಾಷ್ಟ್ರ. (೧೯.೧)
- ತನ್ನ ಸಮೃದ್ಧಿಯಿಂದ ಅರಸನ ಸಕಲ ಕ್ಲೇಶಗಳನ್ನು ದೂರ ಮಾಡುವುದೇ ನಿಗಮ (೧೯.೭)
- ಬ್ರಾಹ್ಮಣರು ಕೈಯಲ್ಲಿದ್ದರೂ ತಾವು ಕೊಡಬೇಕಾದುದನ್ನು ಸರಳವಾಗಿ ಕೊಡಲಾರರು. (೧೯.೧೨)
- ಪ್ರಜೆಗಳಿಗೆ ರಾಜನು ಹೆಚ್ಚು ತೊಂದರೆ ನೀಡಿದರೆ ಕೋಶವು ಕ್ಷೀಣಿಸುತ್ತದೆ. (೧೯.೧೭)
- ದುರ್ಗ (ಕೋಟೆ)ವಿಲ್ಲದ ರಾಜನಿಗೆ ಕಡಲ ನಡುವೆ ಹಡಗಿನಿಂದ ಹೊರಗೆ ಬಿದ್ದ ಪಕ್ಷಿಗೆ ಹೇಗೋ ಹಾಗೆ ಆಪತ್ತಿನಲ್ಲಿ ಆಶ್ರಯವಿರುವುದಿಲ್ಲ. (೨೦.೫)
- ಸಂಪತ್ತಿನಲ್ಲೂ, ವಿಪತ್ತಿನಲ್ಲೂ ಸೈನ್ಯಾಭಿವೃದ್ಧಿಗೆ ಕೋಶವು ನೆರವಾಗುತ್ತದೆ. (೨೧.೧)
- ರತ್ನ, ಸುವರ್ಣ, ಬೆಳ್ಳಿ, ತವರ, ಕಂಚು, ಹಿತ್ತಾಳೆ, ತಾಮ್ರ, ಕಬ್ಬಿಣ, ಸೀಸ ಮುಂತಾದ ಲೋಹಗಳನ್ನು ಕೋಶದಲ್ಲಿ ಸಂಗ್ರಹಿಸಬೇಕು. (೨೧.೨
- ಭಂಡಾರವನ್ನು ಹೆಚ್ಚಿಸುತ್ತ, ಉತ್ಪನ್ನವಾದ ಅರ್ಥವನ್ನು ಮಾತ್ರ ಉಪಭೋಗಿಸಬೇಕು. (೨೧.೩)
- ರಾಜನ ಸೈನ್ಯದಲ್ಲಿ ಆನೆಯಿರಬೇಕು. ಆನೆಯು ವಿಜಯಕ್ಕೆ ಕಾರಣವಾಗುತ್ತದೆ. (೨೨.೩)
- ಒಂದೇ ಆನೆಯಾದರೂ ಸಾವಿರ ಯೋಧರೊಂದಿಗೆ ಕಾದಾಡಬಲ್ಲದು. (೨೨.೪)
- ಆನೆಗಳಿಗೆ ಸರಿಯಾದ ತರಬೇತಿ ನೀಡಬೇಕು. ತರಬೇತಿ ಇಲ್ಲದ ಆನೆಗಳು ರಾಜನ ಪ್ರಾಣಕ್ಕೆ ಸಂಚಕಾರ ತರಬಲ್ಲವು. (೨೨.೬
- ಸಿರಿಯಿರುವಾಗ ಜೊತೆಗಿರುವಂತೆ ಕಷ್ಟದಲ್ಲಿ ಜೊತೆಗಿರುವವನೇ ನಿಜವಾದ ಮಿತ್ರ. (೨೩.೧)
- ಕಷ್ಟಕಾಲದಲ್ಲಿ ಸಮೀಪವರ್ತಿಯಾಗಿರುವುದು, ಪರಿಶುದ್ಧ ಭಾವನೆ, ವಿಶ್ವಾಸವುಳ್ಳವನು ಒಳ್ಳೆಯ ಮಿತ್ರನಾಗಬಲ್ಲನು. (೨೩.೪)
- ರಾಜನನ್ನು ರಕ್ಷಿಸಿದರೆ ಸರ್ವವನ್ನೂ ರಕ್ಷಿಸಿದಂತೆ. (೨೪.೧)
- ಪರದೇಶಿಯನ್ನಾಗಲಿ, ಅರ್ಥವನ್ನಾಗಲಿ, ಮನ್ನಣೆಯನ್ನಾಗಲಿ ಪಡೆಯದ ಸ್ವದೇಶಿಗನ್ನಾಗಲಿ, ಅಕೃತ್ಯ ಮಾಡಿದ ವ್ಯಕ್ತಿಯನ್ನಾಗಲಿ ರಾಜನು ಹತ್ತಿರ ಸೇರಿಸಿಕೊಳ್ಳಬಾರದು. (೨೪.೩)
- ಎಲ್ಲ ಸ್ತ್ರೀಯರೂ ಹಾಲ್ಗಡಲ ಅಲೆಯಂತೆ ಅಮೃಕ್ಕೂ, ವಿಷಕ್ಕೂ ಆಶ್ರಯತಾಣ. (೨೪.೧೦)
- ಮೊಸಳೆಯ ದವಡೆಯಂತೆ ಸ್ತ್ರೀಯರು ಸಹಜ ವಕ್ರತೆಯುಳ್ಳವರು. (೨೪.೧೧)

- ರಾಜನು ಸ್ತ್ರೀಗೃಹವನ್ನು ಪ್ರವೇಶಿಸುವುದು ಹಾವಿನ ಬಾಯಲ್ಲಿ ಕಪ್ಪೆ ಹೊಕ್ಕಂತೆ. (೨೪.೩೫)
- ರಾಜನು ತನ್ನ ಅಡುಗೆ ಮನೆಗೆ ಸ್ತ್ರೀಯರನ್ನು ನೇಮಿಸಬಾರದು. (೨೪.೩೭)
- ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಆ ದಿನ ಮಾಡಬೇಕಾದ ಕಾರ್ಯಗಳನ್ನು ಏಕಾಗ್ರತೆಯಿಂದ ಯೋಜಿಸಬೇಕು. (೨೫.೧)
- ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಿ ಒದಗಿದ ಧರ್ಮಕಾರ್ಯಗಳ ಅವಕಾಶಗಳನ್ನು ಕಳೆದುಕೊಳ್ಳಬಾರದು. (೨೫.೩)
- **"ಯೋ ಮಿತಂ ಭುಂಕ್ತೇ ಸ ಬಹು ಭುಂಕ್ತೇ ॥೨೫.೩೮॥"**[೨೦೨]
  ಮಿತವಾಗಿ ಊಟ ಮಾಡುವವನು ಹಿತವಾಗಿ ಊಟ ಮಾಡುವನು.
- ದುರಾಸೆ, ಮರೆವು, ಅತಿಯಾದ ನಂಬಿಕೆಗಳು ಮನುಷ್ಯನನ್ನು ವಂಚಿತಗೊಳಿಸುತ್ತವೆ. (೨೬.೧)
- ಅಂಜಿದವನಿಗೆ ಅಭಯದಾನ ಮಾಡುವುದಕ್ಕಿಂತ ದೊಡ್ಡ ದಾನವಿಲ್ಲ. (೨೬.೧೮)
- ವೈರದ ಪರಂಪರೆಯನ್ನು ತಡೆಯದಿದ್ದಲ್ಲಿ ವಂಶಾಭಿವೃದ್ಧಿಯಾಗುವುದಿಲ್ಲ. (೨೬.೧೭)
- ಪುರುಷರಿಗೆ ಶೀಲವೇ ಅಲಂಕಾರ. (೨೬.೬೩)
- ಪುರುಷರಿಗೆ ಹೆಂಡತಿಯು ಸಂಕೋಲೆಯಲ್ಲದಿದ್ದರೂ ಅದೊಂದು ಬಂಧನ. (೨೭.೧)
- ಹಣಕ್ಕಾಗಿ ಪ್ರೀತಿಸುವವಳು ಹೆಂಡತಿಯಾಗಲಾರಳು. (೨೭.೯)
- ಗರ್ವದಿಂದ ಕುರುಡಾದ ಮನಸ್ಸಿಗೆ ಜ್ಞಾನವು ಒಲಿಯಲಾರದು. (೨೭.೧೯)
- ಗುಣದೋಷಗಳನ್ನು ನಿರ್ಣಯಿಸುವಲ್ಲಿ ರಾಜನು ತಕ್ಕಡಿಗೆ ಸಮನಾಗಬೇಕು. (೨೮.೧)
- ಪ್ರಮಾಣರಹಿತವಾದ ವ್ಯವಹಾರಗಳಲ್ಲಿ ವಿವಾದಕ್ಕೆ ಆಸ್ಪದವಿರದು. (೨೮.೧೫)
- ಶಾಂತಿಯು ಕ್ಷೇಮಕ್ಕೂ ವ್ಯಾಯಾಮವು ಯೋಗಕ್ಕೂ ಕಾರಣವಾಗುತ್ತವೆ. (೨೯.೧)
- ದೈವವು ಅನುಕೂಲವಾಗಿದ್ದರೂ ಪುರುಷಪ್ರಯತ್ನಗಳಿಲ್ಲದೇ ಸಾಧನೆ ಮಾಡಲಾಗದು. (೨೯.೧೦)
- ಯೋಗಕ್ಷೇಮಗಳ ಸಿದ್ಧಿಗೆ ಕಾರಣವಾದದ್ದು ನೀತಿ. ವಿಪತ್ತಿಗೆ ಕಾರಣವಾಗುವುದು ಅನೀತಿ. (೨೯.೧೭)
- ಮಂತ್ರಶಕ್ತಿಯೆಂಬು ಬುದ್ಧಿಬಲ. (೨೯.೩೫)
- ಬುದ್ಧಿವಂತರ ಬುದ್ಧಿಯ ಗೆಲ್ಲುವಂತೆ ಬಾಣಗಳು ಗೆಲ್ಲಲಾರವು. (೩೦.೬)
- ಪ್ರತಿಗ್ರಹದ ಬೆಂಬಲವುಳ್ಳ ಸೈನ್ಯಕ್ಕೆ ಹೋರಾಡಲು ಉತ್ಸಾಹವಿರುತ್ತದೆ. (೩೦.೨೦)
- ಆಹಾರವಿಲ್ಲದಿದ್ದರೂ ನೀರು ಸಿಕ್ಕಿದರೆ ಸೈನ್ಯವು ಬದುಕುತ್ತದೆ. (೩೦೨೩)
- ಬಹುಬಲವುಳ್ಳ ಹಾವು ಸಹ ಇರುವೆಗಳಿಂದ ಕೊಲ್ಲಲ್ಪಡುತ್ತದೆ. (೩೦.೫೮)
- ಹನ್ನೆರಡು ವರ್ಷದ ವಯಸ್ಸಾದ ಹೆಣ್ಣು, ಹದಿನಾರು ವರ್ಷ ವಯಸ್ಸಾದ ಗಂಡು ವಿವಾಹಯೋಗ್ಯರು. (೩೧.೧)

---

೨೦೨. ಜಿ. ಎಸ್. ದೀಕ್ಷಿತ್, ಬಿ ರಾಮಸ್ವಾಮಿ, ಶ್ರೀನಿವಾಸ ರಿತ್ತಿ (ಸಂ) : **ಆಚಾರ್ಯ ಶ್ರೀ ಸೋಮದೇವ ವಿರಚಿತಂ ನೀತಿವಾಕ್ಯಾಮೃತಂ (ಶ್ರೀ ನೇಮಿನಾಥವಿರಚಿತಂ ಕರ್ಣಾಟಕ ವ್ಯಾಖ್ಯಾನ ಸಹಿತಂ)** ; ಪುಟ. ೨೭೬

- ಸಾಲಂಕೃತ ಕನ್ಯೆಯನ್ನು ವರನಿಗೆ ಕೊಡುವುದು ಬ್ರಾಹ್ಮ ವಿವಾಹ. (೩೧.೪)
- ವರ್ಣ, ಪದ, ವಾಕ್ಯಗಳ ಪ್ರಯೋಗಕ್ಕೆ ಸಂಬಂದಿಸಿದ (ವ್ಯಾಕರಣ)ಶಾಸ್ತ್ರ, ತರ್ಕಶಾಸ್ತ್ರ, ಉತ್ತಮವಾದ ಮಾತುಗಾರಿಕೆ, ಪ್ರತಿಭೆ, ಊಹಾಪೋಹ ಮುಂತಾದ ಗುಣವುಳ್ಳವನು ಉತ್ತಮವಾದ ಸಂಧಿವಿಗ್ರಹಿಯಾಗಬಲ್ಲ. (೩೨.೧)
- ರಾಜನು ಚಿತ್ರದಲ್ಲಿದ್ದರೂ ಅವನನ್ನು ಅವಮಾನಿಸಕೂಡದು. (೩೨.೭೦)
- ಅರಸನು ಕ್ಷಾತ್ರ ತೇಜಸ್ಸುಳ್ಳ ಮನುಷ್ಯರೂಪದ ದೇವತೆ. (೩೨.೭೧)

ಹೀಗೆ ನೀತಿ ಬೋಧಕವಾದ 'ನೀತಿವಾಕ್ಯಾಮೃತಂ' ಗ್ರಂಥದಲ್ಲಿ ಆಚಾರ್ಯ ಸೋಮದೇವ ಸೂರಿ ರಾಜನೀತಿ, ಅರ್ಥಶಾಸ್ತ್ರ, ಸಮಾಜಶಾಸ್ತ್ರೀಯ ವಿಚಾರಗಳನ್ನು ಒಳಗೊಂಡು ೩೨ ಅಧ್ಯಾಯಗಳಲ್ಲಿ ೧೫೭೩ ಸೂತ್ರಗಳ ಮೂಲಕ ಹಲವಾರು ವಿಚಾರಗಳನ್ನು ಬೋಧಿಸುತ್ತಾರೆ. ಇವರ ಈ ಕೃತಿಯ ಮೇಲೆ ಚಾಣಕ್ಯನ ಅರ್ಥಶಾಸ್ತ್ರ ಮತ್ತು ಹಿಂದೂ ಸ್ಮೃತಿಗಳು ಬಲವಾಗಿ ಪ್ರಭಾವ ಬೀರಿರುವುದನ್ನು ಕಾಣಬಹುದು. ಕೊನೆಯ ೩೨ನೆಯ 'ಪ್ರಕೀರ್ಣಕ ಸಮುದ್ದೇಶ' ಎಂಬ ಅಧ್ಯಾಯದಲ್ಲಿ ಕಾವ್ಯದ ಲಕ್ಷಣಗಳು, ಸಂಗೀತದಲ್ಲಿ ತಾಳ ಲಯಗಳ ಪಾತ್ರಗಳನ್ನು ಕುರಿತಾಗಿ ಸಂಕ್ಷಿಪ್ತವಾಗಿ ಹೇಳಿರುವುದು ವಿಶೇಷವಾಗಿದೆ.

ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನದ 'ಲೌಕಿಕ ಶಾಸ್ತ್ರ ಸಾಹಿತ್ಯಕ್ಕೆ ಜೈನ ಕವಿಗಳ' ಕೊಡುಗೆ ಎಂಬ ಈ ಅಧ್ಯಾಯದಲ್ಲಿ ಜೈನ ಕವಿಗಳು ರಚಿಸಿದ ವೈದ್ಯಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಗಣಿತಶಾಸ್ತ್ರ, ಸೂಪಶಾಸ್ತ್ರ, ವೃಷ್ಟಿಶಾಸ್ತ್ರ ಹಾಗೂ ನೀತಿಶಾಸ್ತ್ರಕ್ಕೆ ಜೈನ ಕವಿಗಳು ನೀಡಿರುವ ಶಾಸ್ತ್ರ ಸಾಹಿತ್ಯ ಗ್ರಂಥಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಜೈನ ಕವಿಗಳು ನೀಡಿದ ಕೊಡುಗೆ ಅಮೂಲ್ಯವಾದುದು. ಅಂತೆಯೇ ಕನ್ನಡ ಶಾಸ್ತ್ರ ಸಾಹಿತ್ಯಕ್ಕೂ ಜೈನ ಕವಿಗಳ ಕೊಡುಗೆ ಅಗ್ರಣೀಯವಾದುದು. ಆಚಾರ್ಯ ದಿವಾಕರಣಂದಿ ಮುನಿ ವಿರಚಿತ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ' ಹಾಗೂ ಆಚಾರ್ಯ ಬಾಲಚಂದ್ರದೇವ ವಿರಚಿತ 'ತತ್ತ್ವರತ್ನಪ್ರದೀಪಿಕೆ' ಈ ಎರಡು ಕೃತಿಗಳು ಗೃಧ್ರಪಿಂಛಾಚಾರ್ಯರು ಎನಿಸಿಕೊಂಡಿರುವ ಆಚಾರ್ಯ ಉಮಾಸ್ವಾತಿಯವರು ಸಂಸ್ಕೃತದಲ್ಲಿ ರಚಿಸಿದ 'ತತ್ತ್ವಾರ್ಥಸೂತ್ರ' ಗ್ರಂಥವನ್ನು ಅನುಸರಿಸಿ ವೃತ್ತಿ ಹಾಗೂ ವ್ಯಾಖ್ಯಾನಗಳನ್ನು ರಚಿಸುವ ಮೂಲಕ ಕನ್ನಡ ಧಾರ್ಮಿಕ ಶಾಸ್ತ್ರ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಯಾಗಿವೆ. ಈ ಕೃತಿಗಳ ವಿಶಿಷ್ಟ ಲಕ್ಷಣಗಳು ತತ್ತ್ವಶಾಸ್ತ್ರಕ್ಕೆ ಸೇರಿವೆ. ಅಂದರೆ ಜೀವನ ಮತ್ತು ಜಗತ್ತುಗಳ ಬಗ್ಗೆ ವಿಶ್ವದೃಷ್ಟಿಯನ್ನು ನೀಡುವುದು. ಜೊತೆಗೆ ಧಾರ್ಮಿಕ ಮತ್ತು ನೈತಿಕ ಜೀವನಗಳು ವಿಶ್ವನಿಯಮಗಳಿಗೆ ಸಂಬಂಧಿಸಿರಬೇಕೆ? ಅಥವಾ ಅಧೀನವಾಗಿರಬೇಕೆ? ಇಲ್ಲವೇ ಮನುಷ್ಯನ ಜೀವನದಾಚೆಗೂ ಹರಿಯುತ್ತದೆಯೇ? ಇಂತಹ ಹಲವಾರು ಪ್ರಶ್ನೆಗಳ ವಿವೇಚನೆಯನ್ನು ಮೂಡಿಸುತ್ತವೆ. ತ್ರಿರತ್ನಗಳಾದ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ ಹಾಗೂ ಸಮ್ಯಕ್‌ಚಾರಿತ್ರ್ಯಗಳ ಮುಖೇನ ಜನನ–ಮರಣಗಳ ಚಕ್ರದಿಂದ ಹೊರನಡೆದು ಮೋಕ್ಷವನ್ನು ಸಾಧಿಸಿ ಪರಮೋಚ್ಛ ಸುಖ ಹೊಂದುವ ಬಗೆಯನ್ನು ವಿಶದಪಡಿಸಲಾಗಿದೆ.

ಇಲ್ಲಿ ತಿಳಿಸಿರುವ ಉತ್ಸರ್ಪಿಣಿ, ಅವಸರ್ಪಿಣಿ ಕಾಲಘಟ್ಟಗಳ ಪರಿಣಾಮವಾಗಿ ಭೂಮಿಯ ಮೇಲಾಗಬಹುದಾದ ಬದಲಾವಣೆಗಳನ್ನು ಆಧುನಿಕ ವಿಜ್ಞಾನಿಗಳು ವಿಶ್ಲೇಷಿಸುವ ತಳಹದಿಯಲ್ಲಿಯೇ ಈ ಕೃತಿಗಳು ಪ್ರಾಚೀನ ಕಾಲದಲ್ಲಿಯೇ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿವೆ. ಅದರಲ್ಲೂ ಉತ್ಸರ್ಪಿಣಿ ಕಾಲದಲ್ಲಿ ಸತತವಾಗಿ ವಿಪರೀತ ಮಳೆ ಸುರಿದು, ಭೂಮಿಯ ತಗ್ಗು ಪ್ರದೇಶಗಳಲ್ಲಿ ನೀರು ಸೇರಿಕೊಂಡು ಆ ನೀರಿನಲ್ಲಿಯೇ ಜೀವೋತ್ಪತ್ತಿ ಆರಂಭವಾಗುತ್ತದೆ ಎಂದು ತಿಳಿಸಲಾಗಿದೆ. ಸೂಕ್ಷ್ಮ ಜೀವಿಗಳಿಂದಾದಿಯಾಗಿ ಬೃಹದ್ಗಾತ್ರದ ಪ್ರಾಣಿಗಳವರೆಗೂ ಈ ಜಲವೇ ಜೀವೋತ್ಪತ್ತಿಯ ಮೂಲವಾಗಿದೆ ಎಂದು ವಿಜ್ಞಾನಿಗಳು ನಿರೂಪಿಸಿದ್ದಾರೆ. ಅದನ್ನು ಈ ಎರಡೂ ಕೃತಿಗಳು ಬಹುಕಾಲದ ಹಿಂದೆಯೇ ಪ್ರತಿಪಾದಿಸಿರುವುದನ್ನು ಕಾಣಬಹುದಾಗಿದೆ. ಅಲ್ಲದೇ ಜಗತ್ತು, ಅಂದರೆ ಭೂಮಿಯ ಮೇಲೆ ಕಾಲಘಟ್ಟದ ಕೊನೆಯ ಅವಧಿಯಾದ ದುಷಮಾ–ದುಷಮಾದಲ್ಲಿ ವಿಪರೀತವಾದ ಕೋಲ್ಮಿಂಚುಗಳನ್ನು ಒಳಗೊಂಡು ಬೆಂಕಿಯ ಮಳೆ ಸುರಿಯುವುದು ಎಂದು ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಅಂತೆಯೇ ವಿಜ್ಞಾನಿಗಳು ಆಮ್ಲಮಳೆ (Acid Rain)ಯ ಪರಿಣಾಮವಾಗಿ ಜಗತ್ತಿನಾದ್ಯಂತ ಇರುವ ಜೀವಜಾಲವು ನಶಿಸಿಹೋಗಿ, ಹೊಸ ಕಾಲಘಟ್ಟಗಳಿಗೆ

ಸಿದ್ಧವಾಗುವುದು ಎಂದು ಪ್ರತಿಪಾದಿಸುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಈ ಗ್ರಂಥಗಳು ಸ್ಪಷ್ಟವಾಗಿ ವೈಜ್ಞಾನಿಕ ವಿವೇಚನೆಯನ್ನು ನೀಡಬಲ್ಲವು. ಇವುಗಳು ಧಾರ್ಮಿಕ ಗ್ರಂಥಗಳು ಎಂದು ಕಡೆಗಣಿಸದೇ ವೈಜ್ಞಾನಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಿದಾಗ ಆಧುನಿಕ ಜಗತ್ತಿನ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರವಾಗಬಲ್ಲವು. ಅನೇಕಾಂತವಾದವು ಜೈನಧರ್ಮ ಪ್ರತಿಪಾದಿಸುವ ಪ್ರಮುಖ ಸಿದ್ಧಾಂತವಾಗಿದೆ. ಒಬ್ಬರು ನೋಡುವ ಹಾಗೂ ವಿಚಾರ ಮಾಡುವ ವಿಷಯಗಳು ಒಂದೇ ರೀತಿಯಾಗಿರದೇ ವಿಭಿನ್ನವಾಗಿರುತ್ತವೆ. ಒಬ್ಬರು ದೃಷ್ಟಿಯಂತೆ ಇನ್ನೊಬ್ಬರ ದೃಷ್ಟಿ ಇರಲಾರದು. ತಾನು ವಿಚಾರ ಮಾಡುವಂತೆ ಇನ್ನೊಬ್ಬರು ವಿಚಾರ ಮಾಡಬೇಕೆಂಬುದು ತಿಳಿಯಕೂಡದೆಂದು ಅನೇಕಾಂತವಾದವು ಪ್ರತಿಪಾದಿಸುತ್ತದೆ.

ಇನ್ನೂ, ಸಮ್ಯಕ್‌ಚಾರಿತ್ರ್ಯವನ್ನು ಸಾಧಿಸಬೇಕಾದರೆ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ ಹಾಗೂ ಮೋಕ್ಷ ಎಂಬ ಸಪ್ತತತ್ತ್ವಗಳನ್ನು ಅರಿಯುವುದು ಅಗತ್ಯ ಎಂದು ಹೇಳಲಾಗಿದೆ. ಚೇತನಯುಕ್ತವಾಗಿರುವುದೇ ಜೀವ; ಅಚೇತನವಾಗಿರುವುದೇ ಅಜೀವ. ಇದನ್ನು ಸಜೀವ ಹಾಗೂ ನಿರ್ಜೀವಗಳೆಂದು ವಿಜ್ಞಾನ ನಿರೂಪಿಸುತ್ತದೆ. ಜೀವತತ್ತ್ವದ ಕುರಿತಾಗಿ ಪ್ರತಿಪಾದಿಸುವಾಗ ಮುಕ್ತರು ಹಾಗೂ ಸಂಸಾರಿಗಳೆಂದು ಎರಡು ಭೇದಗಳನ್ನು ತಿಳಿಸಲಾಗಿದೆ. ಇಲ್ಲಿ ಮುಕ್ತರು ಎಂದಾಗ ಮೋಕ್ಷವನ್ನು ಸಾಧಿಸಿದವರು. ಅಂದರೆ ಹುಟ್ಟು ಸಾವುಗಳ ಕಟ್ಟಳೆಗಳಿಂದ ಹೊರನಡೆದವರು. ಇವರಿಗೆ ಮೂರು ಲೋಕಗಳ ಮೇಲೆ ಸಿದ್ಧಶಿಲೆಯಲ್ಲಿ ಸ್ಥಾನವನ್ನು ನೀಡಲಾಗಿದೆ. ಸಂಸಾರಿಗಳೆಂದರೆ ಹುಟ್ಟು ಸಾವುಗಳ ಪ್ರಪಂಚದಲ್ಲಿ ತೊಳಲುವವರು ಎಂದು ಹೇಳಲಾಗಿದೆ. ಸಂಸಾರಿಗಳಲ್ಲಿ ಮಾನವ, ನಾರಕ, ದೇವ ಹಾಗೂ ತಿರ್ಯಂಚ ಎಂದು ನಾಲ್ಕು ಗತಿಗಳಿವೆ ಎಂದು ಹೇಳಲಾಗಿದೆ. ಈ ಜೀವಗಳು ಎಂಭತ್ತನಾಲ್ಕು ಲಕ್ಷ ಯೋನಿಗಳಲ್ಲಿ 'ಪುನರಪಿ ಜನನಂ ಪುನರಪಿ ಮರಣಂ' ಎಂದು ಸುತ್ತುತ್ತಲೇ ಇರುತ್ತವೆ. ಹೀಗೆ ಸುತ್ತುವಾಗ ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಹಾಗೂ ಪಂಚೇಂದ್ರಿಯ ಜೀವಿಗಳಾಗಿ ಹುಟ್ಟುತ್ತವೆ ಎಂದಿದ್ದು, ಇಲ್ಲಿ ಸಸ್ಯಗಳು ಏಕೇಂದ್ರಿಯ ಜೀವಿಗಳಾಗಿವೆ ಎಂದು ತಿಳಿಸಲಾಗಿದೆ. ಅಂದರೆ **ಪ್ರಾಚೀನ ಕಾಲದಲ್ಲಿಯೇ ಸಸ್ಯಗಳಿಗೆ ಜೀವವಿದೆ ಎಂದು ಪ್ರತಿಪಾದಿಸಿರುವುದನ್ನು ಗುರುತಿಸಲಾಗಿದೆ**. ಆಧುನಿಕ ಸಂದರ್ಭದಲ್ಲಿ ಇದನ್ನು ಭಾರತೀಯ ವಿಜ್ಞಾನಿ ಜಗದೀಶಚಂದ್ರ ಭೋಸ್ ಅವರು ಪ್ರಾಯೋಗಿಕವಾಗಿ ಪ್ರತಿಪಾದಿಸಿ, ಜಗತ್ತಿನ ಮುಂದೆ 'ಸಸ್ಯಗಳಿಗೆ ಜೀವವಿದೆ' ಎಂದು ನಿರೂಪಿಸಿದರು.

ಚತುರ್ಗತಿಗಳ ಕುರಿತು ತಿಳಿಸುವಲ್ಲಿ ಲೋಕಸ್ವರೂಪವನ್ನು ನಿರೂಪಿಸಲಾಗಿದೆ. ಅಧೋಲೋಕ, ಮಧ್ಯಲೋಕ ಹಾಗೂ ಊರ್ಧ್ವಲೋಕಗಳೆಂದು ಮೂರು ಲೋಕಗಳಿವೆ. ಈ ಮೂರೂ ಲೋಕಗಳನ್ನು ಘನವಾತ, ತನುವಾತ ಹಾಗೂ ಘನೋದಧಿ ಎಂಬ ವಾಯುಮಂಡಲಗಳು ಸುತ್ತುವರೆದಿವೆ. ಅಧೋಲೋಕದಲ್ಲಿ ಏಳು ನರಕಗಳಿದ್ದು ಅಲ್ಲಿ ನರಕ

ಬಿಲಗಳಿವೆ ಎಂದು ಹೇಳಲಾಗಿದೆ. ಈ ನರಕಬಿಲಗಳು ಆಧುನಿಕ ವಿಜ್ಞಾನಗಳು ಪ್ರತಿಪಾದಿಸುವ ಕೃಷ್ಣಕುಹರಗಳು ಅಥವಾ ಕಪ್ಪುರಂಧ್ರಗಳನ್ನು ಹೋಲುತ್ತವೆ. ಮಧ್ಯಲೋಕದಲ್ಲಿ ವಾಸವಾಗಿರುವವರು ಮಾನವರು. ಮಾನವಗತಿಯ ಕುರಿತು ತಿಳಿಸುವಲ್ಲಿ ಜಂಬೂದ್ವೀಪ, ಅದರ ಏಳು ಪ್ರದೇಶಗಳನ್ನು ಗುರುತಿಸಿರುವುದು ಇಂದಿನ ಭೌಗೋಳಿಕ ವಿಶ್ಲೇಷಣೆಗಳಿಗೆ ಸರಿಹೊಂದುತ್ತವೆ ಎಂಬುದು ವಿವೇಚನಾರ್ಹವಾಗಿದೆ. ಊರ್ಧ್ವಲೋಕವು ದೇವಗತಿ ಜೀವಿಗಳಿಗೆ ಆವಾಸಸ್ಥಾನ. ದೇವಗತಿಯ ಕುರಿತಾಗಿ ತಿಳಿಸುವಲ್ಲಿ ಭವನವಾಸಿ, ವ್ಯಂತರ, ಜ್ಯೋತಿಷ್ಕ ಹಾಗೂ ವೈಮಾನಿಕರು ಎಂದು ನಾಲ್ಕು ಭೇದಗಳನ್ನು ಹೇಳಲಾಗಿದೆ. ಇಲ್ಲಿ ಜ್ಯೋತಿಷ್ಕರ ಕುರಿತಾಗಿ ಗ್ರಹ, ನಕ್ಷತ್ರಾದಿಗಳ ವಿಚಾರಗಳನ್ನು ಹೇಳುವಲ್ಲಿ ಪ್ರಾಚೀನರ ಖಗೋಳಜ್ಞಾನದ ಪರಿಚಯವಾಗುತ್ತದೆ. ನಾರಕ, ಮಾನವ ಹಾಗೂ ದೇವಗತಿಗಳನ್ನು ಹೊರತುಪಡಿಸಿದ ಜೀವಗಳೆಲ್ಲವೂ ತಿರ್ಯಂಚಗಳಾಗಿವೆ. ತಿರ್ಯಂಚಗಳು ಮೂರೂ ಲೋಕಗಳಲ್ಲಿ ವಾಸಿಸುತ್ತವೆ.

ಅಜೀವತತ್ತ್ವಗಳ ಕುರಿತಾಗಿ ಪುದ್ಗಲ, ಕಾಲ, ಆಕಾಶ, ಧರ್ಮ ಹಾಗೂ ಅಧರ್ಮ ಎಂದು ಐದು ಭೇದಗಳನ್ನು ಹೇಳಲಾಗಿದೆ. ಪುದ್ಗಲಗಳು ಎಂದರೆ ಅಣುಗಳು ಎಂದರ್ಥ. ಪುದ್ಗಲಗಳನ್ನು ಭೇದಿಸಲು ಅಸಾಧ್ಯ. ಒಂದು ವೇಳೆ ಅವುಗಳನ್ನು ಭೇದಿಸಿದರೆ ಅಪಾರ ಪ್ರಮಾಣದ ಶಕ್ತಿ ಉತ್ಪನ್ನವಾಗುವುದು ಎಂದು ಈ ಕೃತಿಗಳು ಪ್ರತಿಪಾದಿಸುತ್ತವೆ. ಅಂತೆಯೇ ಆಧುನಿಕ ವಿಜ್ಞಾನವು ಇದಕ್ಕೆ ಪುಷ್ಟಿ ನೀಡುತ್ತದೆ. ಇಂದು ಪರಮಾಣುಗಳ ವಿದಳನದಿಂದ ಉತ್ಪನ್ನವಾಗುವ ಅಪಾರ ಶಕ್ತಿಯನ್ನು ಅಣುಸ್ಥಾವರಗಳ ಮೂಲಕ ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಿ ಬಳಸಲಾಗುತ್ತಿದೆ. ಎರಡು ವಿಭಿನ್ನ ರೀತಿಯ ಪುದ್ಗಲಗಳು ಪರಸ್ಪರ ಸಂಯೋಗ ಹೊಂದುವುದರಿಂದ ಇನ್ನೊಂದು ಪದಾರ್ಥದ ಸೃಷ್ಟಿಗೆ ಕಾರಣವಾಗಬಲ್ಲದು. ಅದು ಸ್ನಿಗ್ಧ ಹಾಗೂ ರೂಕ್ಷ ಎಂದು ಎರಡು ರೀತಿಯಲ್ಲಿ ನಡೆಯುತ್ತದೆ ಎಂದು ಹೇಳಲಾಗಿದೆ. ಅಂತೆಯೇ ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವೂ ಇಂತಹ ಪುದ್ಗಲಗಳ, ಅಂದರೆ ಪರಮಾಣುಗಳ ಸಂಯೋಗದಿಂದಲೇ ಹುಟ್ಟಿರುವವುಗಳಾಗಿವೆ. ಶಬ್ದ, ಸಂಲಗ್ನತ್ವ, ಸೂಕ್ಷ್ಮತ್ವ, ಸ್ಥೂಲತ್ವ, ಆಕಾರ, ವಿಭಾಜಕತೆ, ಅಂಧಕಾರ, ಪ್ರತಿರೂಪ, ಕಳೆ ಮತ್ತು ಶಾಖಗಳ ಆಧಾರದಲ್ಲಿ ಘನ, ದ್ರವ, ಅನಿಲಗಳ ಶಕ್ತಿಗಳ ಒಳಗೊಳ್ಳುವ ದ್ರವ್ಯಗಳನ್ನು ಸೂಚಿಸುತ್ತದೆ. ಇದನ್ನೇ ಐನ್‌ಸ್ಟೀನ್ $E=mc^2$ ಎಂಬ ಸಿದ್ಧಾಂತವನ್ನು ನಿರೂಪಿಸಿದ್ದಾನೆ. ಕಾಲದ ಚಲನೆಯಿಲ್ಲದೇ ಸಕಲ ಸೃಷ್ಟಿಯೂ ನಿಶ್ಚಲವಾಗುವುದು. ಆಕಾಶವು ಸುವಾಲವಾಗಿದ್ದು, ಅದು ಸಕಲ ಲೋಕಗಳಿಗೂ ಅವಕಾಶನ್ನು ನೀಡಿದೆ. ಅದನ್ನೇ ಇಂಗ್ಲಿಷ್‌ನಲ್ಲಿ Space ಎನ್ನಲಾಗುತ್ತದೆ.

ಜೀವ, ಅಜೀವ ತತ್ತ್ವಗಳ ನಡುವೆ ಏರ್ಪಡುವ ಸಂಬಂಧವೇ ಬಂಧವಾಗಿದೆ. ಇದು ಮುಖೇನ ಕರ್ಮವುಂಟಾಗುವುದು. ಆ ಕರ್ಮಗಳು ಆತ್ಮನನ್ನು ಪ್ರವೇಶಿಸುವುದನ್ನು ಆಸ್ರವ ಎನ್ನಲಾಗುತ್ತದೆ. ಶುಭಕರ್ಮದಾಸ್ರವ ಮತ್ತು ಅಶುಭ ಕರ್ಮದಾಸ್ರವಗಳೆಂದು ಎರಡು ವಿಧಗಳು.

ಕರ್ಮಗಳು ಆತ್ಮನನ್ನು ಲೋಕಾಲೋಕಗಳಲ್ಲಿ ಸುತ್ತುವಂತೆ ಮಾಡುತ್ತವೆ. ಈ ಕರ್ಮಗಳು ಆತ್ಮನನ್ನು ಪ್ರವೇಶಿಸದಂತೆ ತಡೆಯುವುದೇ ಸಂವರವಾಗಿದೆ. ಸಂವರದಿಂದಾಗಿ ತಡೆದ ಕರ್ಮಗಳನ್ನು ತಪಾಚರಣೆಗಳಿಂದ ನಾಶಪಡಿಸುವುದೇ ನಿರ್ಜವಾಗಿದೆ. ಕರ್ಮನಿರ್ಜರೆಯಾದ ಆತ್ಮನು ಮೋಕ್ಷವನ್ನು ಸಾಧಿಸುವನು ಎಂದು 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ' ಹಾಗೂ 'ತತ್ತ್ವರತ್ನಪ್ರದೀಪಿಕೆ'ಗಳು ಪ್ರತಿಪಾದಿಸುತ್ತವೆ.

ಅಂತೆಯೇ ಬಂಧುವರ್ಮ, 'ಜೀವಸಂಬೋಧನಂ', ವಿಜಯಣ್ಣನ 'ದ್ವಾದಶಾನುಪ್ರೇಕ್ಷೆ', ಬಾಲಚಂದ್ರ ಮುನಿ ಹಾಗೂ ಕಲ್ಯಾಣಕೀರ್ತಿಯ 'ಅನುಪ್ರೇಕ್ಷೆ' ಕೃತಿಗಳು ಆತ್ಮನಿಗೆ ಮೋಕ್ಷ ಸಾಧಿಸುವ ಮಾರ್ಗವನ್ನು ಬೋಧಿಸುತ್ತವೆ. ಇವುಗಳಲ್ಲಿ ಅನಿತ್ಯ, ಅಶರಣ, ಅನ್ಯತ್ವ, ಏಕತ್ವ, ಸಂಸಾರ, ಅಶೌಚ, ಲೋಕ, ಆಸ್ರವ, ಸಂವರ, ನಿರ್ಜರ, ಬೋಧಿದುರ್ಲಭ ಹಾಗೂ ಧರ್ಮ ಎಂದು ಹನ್ನೆರಡು ಅನುಪ್ರೇಕ್ಷೆಗಳನ್ನು ತಿಳಿಸಿ ಮೋಕ್ಷ ಸಾಧನೆಯ ಮಾರ್ಗವನ್ನು ಹೇಳಲಾಗಿದೆ. ಆಚಣ್ಣ ಕವಿಯ 'ಶ್ರೀಪದಾಶೀತಿ'ಯು ಪಂಚಪದ ಕುರಿತಾದ ಮಹಿಮೆಗಳನ್ನು ತಿಳಿಸಿದೆ. ಇದು ಅರಿಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಹಾಗೂ ಸರ್ವಸಾಧುಗಳೆನಿಸಿದ ಪಂಚಪರಮೇಷ್ಠಿಗಳ ಕುರಿತಾಗಿ ತಿಳಿಸುತ್ತದೆ. ಇನ್ನೂ, ಬಂಧುವರ್ಮ 'ಸತಿಧರ್ಮಸಾರ' ಹಾಗೂ ಆಯತವರ್ಮನ 'ರತ್ನಕರಂಡಕ' ಗ್ರಂಥಗಳು ಶ್ರಾವಕಿ ಹಾಗೂ ಶ್ರಾವಕರ ಆಚರಣೆಗಳ ಕುರಿತು ವಿಧಿಗಳನ್ನು ತಿಳಿಸುತ್ತವೆ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹಗಳು ಶ್ರಾವಕರ ಪ್ರಮುಖ ಆಚರಣೆಗಳಾಗಿವೆ. ಇವುಗಳನ್ನು ಪಂಚಾಣುವ್ರತಗಳು ಎಂದು ಕರೆಯಲಾಗುತ್ತದೆ.

ಮೇಲೆ ಹೇಳಿರುವ ವಿಶ್ವದೃಷ್ಟಿ ಯಾವುದಾದರೂ ಸತ್ಯವೆಂದು ಅಂಗೀಕರಿಸಿದ ಪ್ರಮಾಣದ ಮೇಲೆ ನಿಂತಿರಬಹುದು. ಆದರೆ, ಈ ದೃಷ್ಟಿಯಿಂದ ನೋಡಿದರೆ 'ಧಾರ್ಮಿಕಶಾಸ್ತ್ರ' ಗ್ರಂಥಗಳು ಸಾಮಾನ್ಯಜ್ಞಾನದ ಉಪಕಲ್ಪನೆಗಳು ಮತ್ತು ಅವುಗಳ ಸಾಧನೋಪಾಯಗಳನ್ನು ಕೂಲಂಕಷವಾಗಿ ಚಿಂತಿಸುವ ಶಾಸ್ತ್ರವೆನಿಸುತ್ತದೆ. ಈ ಕ್ರಿಯೆಗೆ ಒಳಪಡುವ ವಿಷಯಗಳು ಸತ್ಯ, ಅಹಿಂಸೆ, ಮನಸ್ಸು, ಭೌತವಸ್ತು, ಆತ್ಮವಸ್ತು, ಈಶ್ವರತತ್ತ್ವ, ಕಾಲ–ದೇಶ, ಕಾರ್ಯ ಕಾರಣಭಾವ ಇತ್ಯಾದಿಗಳೆಲ್ಲವೂ ವಿಚಾರಾರ್ಹ ವಿಷಯಗಳೇ ಆಗಿವೆ. ಈ ಮಾರ್ಗದಲ್ಲಿ ತೊಡಗಿರುವ ಅಧ್ಯಯನ ಮುಖ್ಯವಾಗಿ ಅನುಭವದಲ್ಲಿ ಒದಗುವ ಅನೇಕ ಸಂಗತಿಗಳ ಸ್ವರೂಪವನ್ನು ಸ್ಪಷ್ಟಗೊಳಿಸುವ ಕ್ರಿಯೆಯಾಗಿದೆ. ಈ ಕೃತಿಗಳಲ್ಲಿನ ತತ್ತ್ವಚಿಂತನೆಗಳನ್ನು ಪರಸ್ಪರ ಪೂರಕಗಳಾಗಿಯೂ ಉಪಯೋಗಿಸಿಕೊಂಡು ತತ್ತ್ವಶಾಸ್ತ್ರ ಹಾಗೂ ವಿಜ್ಞಾನ ಇವೆರಡಕ್ಕೂ ಸಹಾಯಕವಾಗುವಂತೆ ಮಾಡಬಹುದಾಗಿದೆ.

ಇನ್ನೂ ಸಾಹಿತ್ಯಿಕ ಶಾಸ್ತ್ರಕ್ಕೆ ಜೈನಕವಿಗಳ ಕೊಡುಗೆಗೆ ಸಂಬಂಧಿಸಿದಂತೆ ಅಲಂಕಾರಶಾಸ್ತ್ರಕ್ಕೆ 'ಕವಿರಾಜಮಾರ್ಗ'ವೇ ಕನ್ನಡದ ಆದ್ಯಗ್ರಂಥವಾಗಿದೆ. ಶ್ರೀವಿಜಯನು ಈ ಗ್ರಂಥದಲ್ಲಿ ಕಾವ್ಯದ ಲಕ್ಷಣಗಳು, ಪ್ರತಿಭೆ, ಕಾವ್ಯದೋಷಗಳಲ್ಲಿ ಛಂದೋದೋಷ, ವ್ಯಾಕರಣದೋಷ, ಅಲಂಕಾರ

ದೋಷಗಳನ್ನು ಒಳಗೊಂಡು ೧೬ ದೋಷಗಳನ್ನು ಚರ್ಚಿಸಿದ್ದಾನೆ. ಶ್ರೀವಿಜಯನು ಇಲ್ಲಿ ಶ್ರುತಿದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿಕಷ್ಟ ಎಂದು ನಾಲ್ಕು ರೀತಿಯ ಕೃತಿದೋಷಗಳನ್ನು ಗುರುತಿಸಿ, ಉದಾಹರಣೆಗಳನ್ನು ಕೊಡುತ್ತಾನೆ. ಅಲ್ಲದೇ ಶಬ್ದಾಲಂಕಾರಗಳು, ಕಾವ್ಯಶೈಲಿ ರಸವಿವೇಚನೆ ತಿಳಿಸಲಾಗಿದೆ. ಅಲ್ಲದೇ **೩೬ ಅರ್ಥಾಲಂಕಾರಗಳು, ಮಹಾಕಾವ್ಯದ ಲಕ್ಷಣಗಳನ್ನೂ ಶ್ರೀವಿಜಯನ ಕೃತಿಯಲ್ಲಿ ಗುರುತಿಸಲಾಗಿದೆ**. ಅಂತೆಯೇ ಇಮ್ಮಡಿ ನಾಗವರ್ಮನ 'ಕಾವ್ಯಾವಲೋಕನ', ಸಾಳ್ವಕವಿಯು 'ರಸರತ್ನಾಕರ' ಹಾಗೂ 'ಶಾರದಾವಿಲಾಸ' ಕೃತಿಗಳು ಅಲಂಕಾರಶಾಸ್ತ್ರವನ್ನು ಪ್ರತಿಪಾದಿಸುತ್ತವೆ. ಕಾವ್ಯಾವಲೋಕನದ ಮೊದಲ ಅಧಿಕರಣವು ವ್ಯಾಕರಣಕ್ಕೆ ಸಂಬಂಧಪಟ್ಟಿದೆ ಎಂಬುದು ಸರ್ವವಿದಿತ. ಅದರಲ್ಲಿನ ಇನ್ನುಳಿದ ನಾಲ್ಕು ಅಧಿಕರಣಗಳಲ್ಲಿ ಅಲಂಕಾರಶಾಸ್ತ್ರವನ್ನು ಪ್ರತಿಪಾದಿಸುತ್ತಾನೆ. ಕಾವ್ಯ ರಚನೆಯಲ್ಲಾಗುವ ನಾಲ್ಕು ರೀತಿಯ ಪದದೋಷ, ಎಂಟು ರೀತಿಯ ವಾಕ್ಯದೋಷಗಳನ್ನು ಗುರುತಿಸುತ್ತಾನೆ. ರಸಪ್ರಕರಣ, ಶೈಲಿ, ಶಬ್ದಾಲಂಕಾರ, ಅರ್ಥಾಲಂಕಾರ, ಕವಿಸಮಯಗಳನ್ನೂ ನಿರೂಪಿಸುವ ನಿರೂಪಿಸುವ ನಾಗರ್ಮನು ಆತನ ಉತ್ತಮವಾದ ಕಾವ್ಯಶೈಲಿಯಿಂದಲೇ ಶಾಸ್ತ್ರ ಕೃತಿಯೊಂದನ್ನು ಓದುಗರ ಮನಸೆಳೆಯುವಂತೆ ನಿರೂಪಿಸಿರುವುದು ಗಮನಾರ್ಹವಾಗಿದೆ. ಸಾಳ್ವಕವಿಯ 'ರಸರತ್ನಾಕರ'ವು ಸಂಪೂರ್ಣವಾಗಿ ರಸವಿವೇಚನೆಯನ್ನು ಪ್ರತಿಪಾದಿಸುವ ಕೃತಿಯಾಗಿದೆ. ಇದರಲ್ಲಿ ವ್ಯಭಿಚಾರಿ ಭಾವಗಳು, ಸ್ಥಾಯೀ ಭಾವಗಳು, ನಾಯಕ, ನಾಯಿಕೆಯರಲ್ಲಿರಬೇಕಾದ ರಸಪ್ರಧಾನತೆಗಳನ್ನು ತಿಳಿಸಲಾಗಿದೆ. 'ಶಾರದಾವಿಲಾಸ'ವು ಅಸಮಗ್ರವಾಗಿ ದೊರೆತಿದೆ. ಲಬ್ಧವಾಗಿರುವ ಭಾಗದಲ್ಲಿ **ಧ್ವನಿಪ್ರಸ್ಥಾನವನ್ನು ಗುರುತಿಸಲಾಗಿದೆ.**

ಛಂದಸ್ಸು ಎಂಬುದು ಪದ್ಯಪಂಕ್ತಿಯ ರಚನಾರೀತಿಯ ವಿವರಣೆಯೆಂದು ಸಾಮಾನ್ಯ ಅರ್ಥವಾಗಿದೆ. ಜೊತೆಗೆ ನುಡಿ ಅಥವಾ ಭಾಷೆಯ ಚಲನಾತ್ಮಕ ರೂಪಕ್ಕೆ ಅನ್ವಯಿಸಿ ಘಟಕಾಂಶಗಳ ಮತ್ತು ರಚನಾವಿನ್ಯಾಸಗಳ ಅಧ್ಯಯನ್ನಕ್ಕೂ ಛಂದಸ್ಸು ಎಂದೇ ಹೇಳುವ ವಾಡಿಕೆಯಿದೆ. ಹೀಗಾಗಿ ಇದರಲ್ಲಿ ಭಾಷಾ ಸಂಬಂಧಿ ಮತ್ತು ಸಾಹಿತ್ಯ ಸಂಬಂಧಿ ಎಂದು ಎರಡು ವಿಧಗಳಿವೆ. ಛಂದಸ್ಸುಶಾಸ್ತ್ರಕ್ಕೆ ಸಂಬಂಧಿಸಿದಂತೆ ಜೈನಕವಿಗಳಿಂದ ರಚಿತವಾಗಿರುವ 'ಗುಣಗಾಂಕಿಯಂ' ಅನುಪಲಬ್ಧವಾಗಿದೆ. ಇಮ್ಮಡಿ ನಾಗವರ್ಮನ 'ಛಂದೋವಿಚಿತಿ' ಹಾಗೂ ಗುಣವರ್ಮನ 'ಛಂದಸ್ಸಾರ' ಎಂಬ ಛಂದೋಗ್ರಂಥಗಳು ಅಸಮಗ್ರವಾಗಿ ದೊರೆತಿವುದು ವಿಷಾದನೀಯ.

ಶಬ್ದ ಮತ್ತು ಶಬ್ದಗಳ ಸಂಬಂಧ ನಿರ್ದಿಷ್ಟವಾಗಿಯೇ ಇರಬೇಕೆಂಬುದನ್ನು ತಿಳಿಸುವುದು ವ್ಯಾಕರಣಶಾಸ್ತ್ರ. ಕನ್ನಡ ವ್ಯಾಕರಣಕ್ಕೆ ಜೈನಕವಿಗಳೇ ಮುನ್ನುಡಿಯನ್ನು ಬರೆದವರು ಎಂದರೆ ತಪ್ಪಾಗಲಾರದು. ಎರಡನೆಯ ನಾಗವರ್ಮನ ಕಾವ್ಯಾವಲೋಕನದ ಮೊದಲನೆಯ ಅಧಿಕರಣವಾದ 'ಶಬ್ದಸ್ಮೃತಿ'ಯು ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ್ದು ಎಂಬುದು ಸರ್ವವೇದ್ಯವಾಗಿದೆ. ಇದನ್ನೇ ಅನುಸರಿಸಿ ಕೇಶಿರಾಜನು 'ಶಬ್ದಮಣಿದರ್ಪಣಂ' ಎಂಬ ಸಮಗ್ರ ವ್ಯಾಕರಣ ಗ್ರಂಥವನ್ನು

ರಚಿಸಿದ್ದಾನೆ. ನಾಗವರ್ಮ ವಿರಚಿತ 'ಕರ್ಣಾಟಕ ಭಾಷಾಭೂಷಣಂ' ಮತ್ತು ಭಟ್ಟಾಕಳಂಕನ 'ಕರ್ಣಾಟಕ ಶಬ್ದಾನುಶಾಸನ'ಗಳು ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ತಿಳಿಸಿಕೊಡುತ್ತವೆ ಎಂಬುದು ಗಮನಾರ್ಹ ವಿಷಯವಾಗಿದೆ. ಕೇಶಿರಾಜನ 'ಶಬ್ದಮಣಿದರ್ಪಣಂ' ಗ್ರಂಥದಲ್ಲಿ **ಗಮಕಸಮಾಸ, ಱಟಿ–ಕುಳ–ಕ್ಷಳ, ಶ್ರುತಿಸಹ್ಯ ಸಂಧಿ, ಸತಿಸಪ್ತಮಿ, ವಿರಹಿತಾವ್ಯಯ, ಯತಿವಿಲಂಘನಗಳನ್ನು ವಿಶೇಷವಾಗಿ ಗುರುತಿಸಲಾಗಿದೆ.**

ಲೆಕ್ಷಿಕೊಲಾಜಿ ಎನಿಸಿಕೊಳ್ಳುವ ನಿಘಂಟುಶಾಸ್ತ್ರವು ಶುದ್ಧವಾದ ಭಾಷೆ ಬೆಳೆಯಲು ವ್ಯಾಕರಣಶಾಸ್ತ್ರವು ಶ್ರಮಿಸುವಂತೆ ಶಬ್ದಗಳ ಉತ್ಪತ್ತಿ, ಅರ್ಥಸ್ಪಷ್ಟತೆಗೆ ಸಹಕಾರಿಯಾಗುತ್ತದೆ. ವೇದಾಂಗಗಳಲ್ಲಿ ನಿರುಕ್ತವು ನಿಘಂಟುವಿನ ಪಾತ್ರವಹಿಸುತ್ತದೆ. ಇಲ್ಲಿ ಹಲವು ಬಗೆಯ ನಿಘಂಟುಗಳನ್ನು ನೋಡಬಹುದಾಗಿದ್ದು, ರನ್ನಕಂದವು ಕನ್ನಡದ ಮೊದಲ ನಿಘಂಟುವಾಗಿದೆ. ಇದರಲ್ಲಿ ಕೆಲವು ಪದ್ಯಗಳು ಮಾತ್ರ ಉಪಲಬ್ದವಾಗಿವೆ. ಇಮ್ಮಡಿ ನಾಗವರ್ಮನ 'ಅಭಿಧಾನವಸ್ತುಕೋಶ'ವು ಸಮಗ್ರ ನಿಘಂಟುವಾಗಿದೆ. ಅವಿಭಿನ್ನಾರ್ಥ ಕಾಂಡ, ಸಾಮಾನ್ಯ ಕಾಂಡ ಹಾಗೂ ನಾನಾರ್ಥ ಕಾಂಡ ಎಂದು ಪ್ರಮುಖವಾಗಿ ಮೂರು ಭಾಗಗಳನ್ನು ಮಾಡಿಕೊಂಡು ಪದಗಳ ಅರ್ಥಗಳನ್ನು ಮಾಡಿಕೊಡಲಾಗಿದೆ. ನಾಗವರ್ಮನು ಅವಿಭಿನ್ನಾರ್ಥ ಕಾಂಡದಲ್ಲಿ ತಿಳಿಸಿರುವ ಹಲವಾರು ಪದಗಳ ಸಮಾನಾರ್ಥಗಳು ವಿಶೇಷವೆನಿಸಿವೆ. ಅಲ್ಲದೇ ಕೇಶಿರಾಜನ **'ಶಬ್ದಮಣಿದರ್ಪಣಂ' ಗ್ರಂಥದ 'ಧಾತುಪ್ರಕರಣಂ', 'ಅಪಭ್ರಂಶ ಪ್ರಕರಣಂ', ಹಾಗೂ 'ಅವ್ಯಯ ಪ್ರಕರಣಂ' ಎಂಬ ಕೊನೆಯ ಮೂರು ಪ್ರಕರಣಗಳಲ್ಲಿ ಶಬ್ದಾರ್ಥ ನಿಘಂಟುವನ್ನು ಗುರುತಿಸಲಾಗಿದೆ.** ಅಮೃತನಂದಿಯ 'ಅಕಾರಾದಿ ನಿಘಂಟು', 'ವೈದ್ಯನಿಘಂಟು', ದೇವೋತ್ತಮನ 'ನಾನಾರ್ಥ ರತ್ನಾಕರ', ಶೃಂಗಾರಕವಿಯ 'ಕರ್ಣಾಟಕ ಸಂಜೀವನ'ಗಳು ಜೈನಕವಿಗಳಿಂದ ರಚಿತವಾದ ಇತರ ನಿಘಂಟು ಗ್ರಂಥಗಳಾಗಿವೆ ಎಂದು ಗುರುತಿಸಲಾಗಿದೆ.

ಪರಿಸರ, ಆಹಾರಕ್ರಮ ಹಾಗೂ ಇನ್ನಿತರ ಹಲವಾರು ಕಾರಣಗಳಿಂದಾಗಿ ಪ್ರಪಂಚದಲ್ಲಿರುವ ಜೀವಿಗಳು ದೈಹಿಕ ತೊಂದರೆಗಳನ್ನು ಎದುರಿಸುವುದು ಸರ್ವೇಸಾಮಾನ್ಯ. ಅಂತಹ ದೈಹಿಕ ತೊಂದರೆಗಳಿಗೆ ಚಿಕಿತ್ಸಾಕ್ರಮಗಳನ್ನು ತಿಳಿಸುವುದೇ ವೈದ್ಯಶಾಸ್ತ್ರ. ಈ ನಿಟ್ಟಿನಲ್ಲಿ ಕನ್ನಡ ಶಾಸ್ತ್ರಸಾಹಿತ್ಯ ಪ್ರಪಂಚದಲ್ಲಿ ಹಲವಾರು ವೈದ್ಯಶಾಸ್ತ್ರ ಗ್ರಂಥಗಳು ರಚನೆಯಾಗಿವೆ. ಅವುಗಳ ಮೂಲಕ ಸಸ್ಯಮೂಲ ಔಷಧ ಕ್ರಮಗಳನ್ನು ಅರಿಯಬಹುದಾಗಿದೆ. ಸಾಮಾನ್ಯ ವೈದ್ಯ, ವಿಷವೈದ್ಯ ಹಾಗೂ ಪಶುವೈದ್ಯಗಳನ್ನು ವಿಶೇಷವಾಗಿ ಗುರುತಿಸಲಾಗಿದೆ. ಅದರಲ್ಲಿಯೂ ಜಗದ್ದಳ ಸೋಮನಾಥನ 'ಕರ್ಣಾಟಕ ಕಲ್ಯಾಣಕಾರಕ' ಹಾಗೂ ಮಂಗರಾಜನ 'ಖಗೇಂದ್ರಮಣಿದರ್ಪಣಂ' ಗ್ರಂಥಗಳು ವಿಶಿಷ್ಟ ಚಿಕಿತ್ಸಾ ರೂಪವನ್ನು ತಿಳಿಸಿಕೊಡುತ್ತವೆ. ಖಗೇಂದ್ರಮಣಿದರ್ಪಣದಲ್ಲಿ ವಿವಿಧ ವಿಷಗಳಿಗೆ ಚಿಕಿತ್ಸಾ ಕ್ರಮಗಳನ್ನು ತಿಳಿಸಲಾಗಿದೆ. ಅದರಲ್ಲಿ ಸಾಮಾನ್ಯ ಗೋಚರ ಸಸ್ಯವರ್ಗಗಳಿಂದಲೇ ಔಷಧಿಗಳನ್ನು

ತಯಾರಿಸಿ ಚಿಕಿತ್ಸೆ ನೀಡುವ ಬಗೆಗಳನ್ನು ತಿಳಿಸಲಾಗಿದೆ. ಇದರಿಂದ ಪ್ರಸ್ತುತ ಬದುಕಿಗೂ ಅನ್ವಯವಾಗುವ ಔಷಧ ಕ್ರಮಗಳನ್ನು ಗುರುತಿಸಬಹುದಾಗಿದೆ. ಇದು ಸಾರ್ವಕಾಲಿಕವಾಗಿ 'ಆಯುರ್ವೇದ ಚಿಕಿತ್ಸೆ' ಎಂತಲೇ ಪ್ರಸಿದ್ಧಿಯನ್ನು ಪಡೆದಿದೆ. ಇನ್ನೂ ಪಶುವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಕೀತಿವರ್ಮನ 'ಗೋವೈದ್ಯ' ಹಾಗೂ ಬಾಚರಸನ 'ಅಶ್ವವೈದ್ಯ' ಎಂಬ ಗ್ರಂಥಗಳು ಅಸಮಗ್ರವಾಗಿವೆ.

ಜ್ಯೋತಿಷಶಾಸ್ತ್ರವು ಭಾರತೀಯ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತಿದೆ. ಅದು ಪ್ರಾಚೀನ ಭಾರತೀಯ ನಾಗರಿಕತೆಯ ಸಾಂಸ್ಕೃತಿಕ, ಧಾರ್ಮಿಕ, ವ್ಯಾವಹಾರಿಕ ಪರಂಪರೆಗೆ ಸಂದ ವೇದ, ಉಪನಿಷತ್ತುಗಳೇ ಮುಂತಾದುವುಗಳೊಡನೆ ಸಾಂಗೋಪಾಂಗವಾಗಿ ಬೆಳೆದು ಅಖಂಡತೆಯನ್ನು ಸಾಧಿಸಿದೆ. ಜೊತೆಗೆ ಅನುಭವ ಪ್ರಮಾಣವಾದ ವ್ಯಾವಹಾರಿಕ ಪ್ರಯೋಜನವನ್ನು ಸಾಧಿಸಿಕೊಂಡಿದೆ. ಜ್ಯೋತಿಷಕ್ಕೆ ಜನ್ಮಾಂತರ ಕರ್ಮಸಿದ್ಧಾಂತಗಳು ಆಧಾರಭೂತ. ಜನ್ಮಾಂತರಗಳಿಂದ ಕೂಡಿಹಾಕಿಕೊಂಡು ಬಂದಿರುವ ಕರ್ಮಗಳು ಈ ಜನ್ಮದಲ್ಲಿ ಫಲಿಸುವ ಕರ್ಮಭಾಗ ಪ್ರಾರಬ್ಧವಾಗಿವೆ ಎಂದು ಜ್ಯೋತಿಷ್ಯ ಗ್ರಂಥಗಳು ಪ್ರತಿಪಾದಿಸುತ್ತವೆ. ಈ ನಿಟ್ಟಿನಲ್ಲಿ ಶ್ರೀಧರಾಚಾರ್ಯನ 'ಜಾತಕತಿಲಕ'ವು ಕನ್ನಡದ ಮೊಟ್ಟಮೊದಲ ಜ್ಯೋತಿಷ್ಯ ಗ್ರಂಥವೆನಿಸಿದೆ. ಕೃತಿಯ ಆರಂಭದಲ್ಲಿ ಶ್ರೀಧರಾಚಾರ್ಯನು ಕಾವ್ಯಕೃತಿಗೂ ಮತ್ತು ಶಾಸ್ತ್ರಕೃತಿಗೂ ಇರುವ ವ್ಯತ್ಯಾಸಗಳನ್ನು ಹೇಳಿರುವುದನ್ನು ಗುರುತಿಸಲಾಗಿದೆ. ೨೪ ಪ್ರಕರಣಗಳಲ್ಲಿ ವಿವಿಧ ರೀತಿಯ ಜಾತಕ ಫಲಗಳನ್ನು ಹೇಳಿರುವುದನ್ನು ಗುರುತಿಸಲಾಗಿದೆ. ಶುಭಚಂದ್ರನ 'ನರಪಿಂಗಲಿ'ಯು ಜೈನಕವಿಕೃತ ಇನ್ನೊಂದು ಕನ್ನಡ ಜ್ಯೋತಿಷ್ಯ ಗ್ರಂಥವಾಗಿದೆ.

ಮಾನವನಲ್ಲಿ ನಿರ್ದಿಷ್ಟ ಗಣಿತಪ್ರಜ್ಞೆ ಉಗಮಿಸಿದ್ದು ಮೂಲತಃ ಎಣಿಕೆಯ ದಾಖಲೆಗಳ ನಿರ್ಮಾಣದೊಂದಿಗೆ. ಅದು ಎಲ್ಲ ನಾಗರಿಕತೆಗಳಿಗಿಂತ ಸಹಸ್ರಾರು ವರ್ಷಗಳಷ್ಟು ಹಿಂದಿನಿಂದಲೂ ನಡೆದು ಬಂದಿದೆ. ತರುವಾಯ ಪ್ರಾಚೀನ ನಾಗರಿಕತೆಗಳ ಕಾಲದಲ್ಲಿ ಗಣಿತಶಾಸ್ತ್ರದ ಅಧ್ಯಯನ ವಸ್ತು ವಿಶಿಷ್ಟವಾಗಿ ಎಣಿಕೆಯ ಸಂಖ್ಯೆಗಳು, ಅಳತೆಯ ರಾಶಿಗಳು ಹಾಗೂ ದೃಗ್ಗೋಚರ ಆಕೃತಿಗಳು ಎಂಬ ಭಾವನೆಗಳ ಆಧಾರದ ಮೇಲೆ ರೂಪುಗೊಂಡಿತು. ಆ ನಿಟ್ಟಿನಲ್ಲಿ ರಾಜಾದಿತ್ಯನಿಂತ ರಚಿತವಾದ ಗಣಿತಶಾಸ್ತ್ರ ಕೃತಿಗಳೇ ಕನ್ನಡದಲ್ಲಿ ಮೊದಲಿನವುಗಳಾಗಿವೆ. 'ವ್ಯವಹಾರ ಗಣಿತ' ಮುಂತಾಗಿ ಆರು ಗಣಿತ ಶಾಸ್ತ್ರಗ್ರಂಥಗಳನ್ನು ರಚಿಸಿರುವ ಶ್ರೇಯ ರಾಜಾದಿತ್ಯನಿಗೆ ಸಲ್ಲುತ್ತದೆ. ಇವುಗಳ ಮೂಲಕ ಅಂದಿನ ಪ್ರಾಪಂಚಿಕ ವ್ಯವಹಾರದಲ್ಲಿ ಗಣಿತದ ಮಹತ್ವವನ್ನು ತಿಳಿಸಿಕೊಡುತ್ತವೆ.

ಮೂರನೆಯ ಮಂಗರಸ ಕೃತ 'ಸೂಪಶಾಸ್ತ್ರ' ಅಡುಗೆ ವಿಧಿ ವಿಧಾನಗಳನ್ನು ತಿಳಿಸುವ ಗ್ರಂಥವಾಗಿದೆ. ಕನ್ನಡ ದೇಸೀ ಛಂದಸ್ಸಿನಲ್ಲಿ ಪಾಕಶಾಸ್ತ್ರ ಕುರಿತು ರಚನೆಯಾದ ಮೊತ್ತಮೊದಲ ಕೃತಿ. ತನ್ನ ಗ್ರಂಥ ನಳ, ಭೀಮ ಮುಂತಾದ ಬಾಣಸ ವಿದ್ಯಾನಿಪುಣರ ಮತಾನುಸಾರವಾಗಿದೆಯೆಂದೂ

ಹೆಣ್ಣು ಮಕ್ಕಳಿಗೆ ಬಹಳ ಪ್ರಿಯವಾದ ಗ್ರಂಥವೆಂದೂ ಇದರಿಂದ ಓದುಗರಿಗೆ ಇಹಪರಗಳು ಲಭಿಸುವವೆಂದೂ ಕವಿ ಹೇಳಿಕೊಂಡಿದ್ದಾನೆ. ಇಲ್ಲಿ ಪಿಷ್ಟ, ಪಾಕ, ಕಳಮಾನ್ನಪಾಕ, ಶಾಕಪಾಕ ಇತ್ಯಾದಿ ಷಡ್ರಸಗಳ ವಿಷಯ ಪ್ರತಿಪಾದಿತವಾಗಿದ್ದು ಘರಿವಿಳಂಗಾಯಿ ಹಾಲಗಾರಿಗೆ ಪವಡುರೊಟ್ಟಿ, ಹಿಮಾಂಬುವಾನ ಮೊದಲಾದ ವಿಶಿಷ್ಟ ಖಾದ್ಯಗಳನ್ನು ತಯಾರಿಸುವ ವಿಧಾನಗಳು ಆಕರ್ಷಕವಾಗಿವೆ.

ಅರ್ಹದ್ದಾಸ ವಿರಚಿತ 'ಜಿಟ್ಟಮತ'ವು ಜಲಶಾಸ್ತ್ರ ಅಥವಾ ವೃಷ್ಟಿಶಾಸ್ತ್ರದ ಕುರಿತಾಗಿ ಬೆಳಕು ಚೆಲ್ಲುವ ಕನ್ನಡದ ಆದ್ಯ ಗ್ರಂಥವೆಂದು ಗುರುತಿಸಲಾಗಿದೆ. ಇದರಲ್ಲಿ ಮಳೆಯ ಕುರುಹು, ಆಕಸ್ಮಿಕ, ಲಕ್ಷಣ, ಶಕುನ, ವಾಯುಚಕ್ರ, ಗೋಪ್ರವೇಶ, ಭೂಕಂಪ, ಭೂಜಾತ ಫಲ, ಗರ್ಭಲಕ್ಷಣ, ದ್ರೋಣಸಂಖ್ಯೆ, ಮಿಂಚಿನ ಲಕ್ಷಣ, ಪ್ರತಿಸೂರ್ಯಲಕ್ಷಣ, ಸಂವತ್ಸರ ಫಲ, ಗ್ರಹಗಳ ಪಗೆ ಕಳೆ ಮೇಘಗಳ ನಾಮಕುಲ, ವರ್ಣಧ್ವಾನ, ವಿಚಾರ, ವೇಶ ವೃಷ್ಟ, ಮಾಸಫಲ, ರಾಹುಚಕ್ರ, ನಕ್ಷತ್ರ ಫಲ ಬಿತ್ತುವ ಶಕುನ, ಉದಕಾರ್ಗಳ, ಸಂಕ್ರಾಂತಿ ಫಲ ಇವುಗಳನ್ನು ಆಧರಿಸಿ ಮಳೆಯ ಲಕ್ಷಣಗಳನ್ನು ತಿಳಿಸಲಾಗಿದೆ. ವಿವಿಧ ರೀತಿಯ ಮಣ್ಣು ಮತ್ತು ಸಸ್ಯಗಳಿರುವ ಪ್ರದೇಶಗಳನ್ನು ಗುರುತಿಸಿ ಅಂತರ್ಜಲ ಕುರುಹನ್ನು ಅರಿಯುವುದು ವಿಶಿಷ್ಟವಾಗಿದೆ. ಇದರಲ್ಲಿ ಉಕ್ತವಾಗಿರುವ ಅಂತರ್ಜಲವನ್ನು ಗುರುತಿಸುವ ಬಗೆಗಳನ್ನು ಇಂದಿಗೂ ಹಳ್ಳಿಗಳಲ್ಲಿ ಅನುಸರಿವುದನ್ನು ಕಾಣಬಹುದಾಗಿದೆ.

ನೀತಿಬೋಧಕವಾದ 'ನೀತಿವಾಕ್ಯಾಮೃತಂ' ಎಂಬ ಕೃತಿಯು ಆಚಾರ್ಯ ಸೋಮದೇವ ಸೂರಿ ರಚಿಸಿದ ಸಂಸ್ಕೃತದ 'ನೀತಿವಾಕ್ಯಾಮೃತ'ವನ್ನು ಕನ್ನಡೀಕರಿಸಿದ ಗ್ರಂಥವಾಗಿದೆ. ಇದರಲ್ಲಿ ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರೀಯ ವಿಚಾರಗಳನ್ನು ಒಳಗೊಂಡು ೩೨ ಅಧ್ಯಾಯಗಳಲ್ಲಿ ವಿವಿಧ ನೈತಿಕ ವಿಚಾರಗಳನ್ನು ಚರ್ಚಿಸಲಾಗಿದೆ. ನೀತಿ ಬೋಧಕ ಶಾಸ್ತ್ರವಾಗಿ ಈ ಗ್ರಂಥವು ಕನ್ನಡದಲ್ಲಿ ವಿಶೇಷವಾದುದು ಎಂದು ಗುರುತಿಸಲಾಗಿದೆ.

ಹೀಗೆ 'ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಜೈನಕವಿಗಳ ಕೊಡುಗೆ'ಯನ್ನು ವಿಶೇಷವಾಗಿ ಗುರುತಿಸಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನವನ್ನು ಅನುಸರಿಸಿ ಮುಂದಿನ ಸಂಶೋಧನೆಗಳಿಗೆ ಹಲವಾರು ಮಾರ್ಗಗಳು ತೆರೆದುಕೊಳ್ಳುವುದನ್ನು ಇಲ್ಲಿ ಹೊಸ ಸಾಧ್ಯತೆಗಳ ಮೂಲಕ ಗುರುತಿಸಲಾಗಿದೆ.

ಸಂಶೋಧನೆಯ ಫಲಿತಗಳು:

- ದಿವಾಕರಣಂದಿ ವಿರಚಿತ 'ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ' ಹಾಗೂ ಬಾಲಚಂದ್ರದೇವನ 'ತತ್ತ್ವರತ್ನಪ್ರದೀಪಿಕೆ'ಗಳಲ್ಲಿ ಸಸ್ಯಗಳಿಗೂ ಜೀವವಿದೆ ಎಂಬ ಪ್ರತಿಪಾದನೆಯನ್ನು ಸಂಶೋಧಿಸಲಾಗಿದೆ.

- ಪುದ್ಗಲಗಳು ಅಂದರೆ ಅಣುಗಳನ್ನು ಭೇದಿಸಲು ಸಾಧ್ಯವಿಲ್ಲ ಎಂಬ ಅಂಶವನ್ನು ಶೋಧಿಸಲಾಗಿದೆ.
- ಪುದ್ಗಲಗಳು ಅಂದರೆ ಅಣುಗಳ ಸಂಯೋಗದಿಂದ ಇನ್ನೊಂದು ಪದಾರ್ಥವು ಉತ್ಪನ್ನವಾಗುವುದು ಎಂಬ ಪ್ರತಿಪಾದನೆಯನ್ನು ಗುರುತಿಸಲಾಗಿದೆ. ಅದು ಸಿಗ್ಧ ಅಂದರೆ ಪ್ಲಾಸ್ಮಾ ರೂಪದಲ್ಲಿ ಹಾಗೂ ರೂಕ್ಷ ಅಂದರೆ ಗಡುಸು ರೂಪದಲ್ಲಿ ಉಂಟಾಗುವುದು ಎಂಬುದನ್ನು ಗುರುತಿಸಲಾಗಿದೆ.
- ಜೈನ ಆಧ್ಯಾತ್ಮಶಾಸ್ತ್ರ (Metaphysics)ದ ನರಕಬಿಲಗಳ ವಿವರಣೆಯು ಹಾಗೂ ಭೌತಶಾಸ್ತ್ರ (Physics)ದಲ್ಲಿ ಕಪ್ಪುಕುಳಿಗಳನ್ನು ಹೋಲುವುದು ಎಂಬುದನ್ನು ಕಂಡುಕೊಳ್ಳಲಾಗಿದೆ.
- ಕರ್ಮವೆನ್ನುವುದು ಸೂಕ್ಷ್ಮ ದ್ರವ್ಯವಾಗಿದ್ದು, ಅದು ಆತ್ಮನೊಂದಿಗೆ ಸಂಯೋಗ ಹೊಂದುವ ಮೂಲಕ ಜೀವದ ಆಧ್ಯಾತ್ಮಿಕ ಭವಿತವ್ಯದ ಮೇಲೆ ಪರಿಣಾಮ ಬೀರುತ್ತದೆ. ಅದು ಸ್ವಯಂ ಪ್ರೇರಿತವಾಗಿ ಕಾರ್ಯನಿರ್ವಹಿಸುತ್ತದೆ. ಇಲ್ಲಿ ಕರ್ಮವು ಶಕ್ತಿ ಸಂಚಯನದಂತೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.
- ಬಾಲಚಂದ್ರದೇವ ವಿರಚಿತ 'ತತ್ತ್ವರತ್ನಪ್ರದೀಪಿಕೆ' ಗ್ರಂಥದಲ್ಲಿ ಕನ್ನಡ ಸಾಹಿತ್ಯದಲ್ಲಿಯೇ ಪ್ರಪ್ರಥಮ ಬಾರಿಗೆ 'ಶ್ವೇತಾಂಬರ' ಎಂಬ ಪದವು ಉಲ್ಲೇಖವಾಗಿರುವುದು. ಅಲ್ಲದೇ ಶ್ವೇತಾಂಬರ ಪದಕ್ಕೆ ಸಂವಾದಿಯಾಗಿ 'ಸಿತಪಟಮತ' ಎಂಬ ಪದದ ಬಳಕೆ ಮಾಡಿರುವುದನ್ನೂ ಇಲ್ಲಿ ಗುರುತಿಸಲಾಗಿದೆ.
- ಸಮ್ಯಕ್‌ಜ್ಞಾನವು ನಿಸರ್ಗದತ್ತವಾಗಿಯೂ ಹಾಗೂ ಉಪದೇಶ ಪಡೆಯುವುದರಿಂದಲೂ ಲಭಿಸುವುದು ಎಂಬುದನ್ನು ಶೋಧಿಸಲಾಗಿದೆ.
- ಜೈನಾಗಮಗಳು ಪುರುಷ, ಸ್ತ್ರೀ ಹಾಗೂ ನಪುಂಸಕ ಎಂದು ಮೂರು ಲಿಂಗಗಳನ್ನು ಗುರುತಿಸುತ್ತವೆ.
- ಆಧುನಿಕ ವಿಜ್ಞಾನವು ಗುರುತಿಸಿರುವಷ್ಟೇ ನಿಖರವಾಗಿ ಜೈನಾಗಮಗಳು ಸೃಷ್ಟಿವಾದದ ಕುರಿತಾಗಿ ಪ್ರತಿಪಾದಿಸುವುದನ್ನು ಗುರುತಿಸಲಾಗಿದೆ.
- ಜೈನಾಗಮಗಳ ದೃಷ್ಟಿಯಲ್ಲಿ ಸೃಷ್ಟಿಯು ದೇವರಿಂದ ನಿರ್ಮಿತವಾದುದಲ್ಲ. ನಿಸರ್ಗದತ್ತವಾಗಿಯೇ ಜಗತ್ತು ಜನ್ಮತಳೆಯಿತು ಎಂಬ ಪ್ರತಿಪಾದನೆಯನ್ನು ಗುರುತಿಸಲಾಯಿತು.
- ಶುಕ್ಲಪಕ್ಷ ಹಾಗೂ ಕೃಷ್ಣಪಕ್ಷದಲ್ಲಿ ಉಂಟಾಗುವ ಉಬ್ಬರವಿಳಿತಗಳ ದಾಖಲೆಗಳನ್ನು ಶೋಧಿಸಲಾಗಿದೆ.

- ನಾಗವರ್ಮನು 'ಅಭಿಧಾನವಸ್ತುಕೋಶ'ದಲ್ಲಿ ಗುರುತಿಸಿರುವ ಹಲವಾರು ವಿಶಿಷ್ಟ ಪದಗಳನ್ನು ಶೋಧಿಸಲಾಗಿದೆ.
- ಕೇಶಿರಾಜನ 'ಶಬ್ದಮಣಿ ದರ್ಪಣ'ದ ಕೊನೆಯ ಮೂರು ಪ್ರಕರಣಗಳನ್ನು ನಿಘಂಟು ಎಂದು ಪರಿಗಣಿಸಿ ಪ್ರತ್ಯೇಕವಾಗಿ ಗುರುತಿಸಲಾಗಿದೆ.
- ಜೈನಾಗಮಗಳು ಬೋಧಿಸುವ ಪಂಚಾಣುವ್ರತಗಳಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹಗಳು ಜೀವನ ಮೌಲ್ಯಗಳೂ ಹೌದು ಎಂಬುದನ್ನು ಗುರುತಿಸಲಾಗಿದೆ.
- ಪ್ರಾಚೀನ ಕಾಲದಲ್ಲಿ ಇದ್ದ ಜನಾಂಗೀಯ ಭಿನ್ನತೆಗಳನ್ನು ಗುರುತಿಸಲಾಗಿದೆ.
- ಮಲ–ಮೂತ್ರಾದಿ ದೇಹತ್ಯಾಜ್ಯಗಳನ್ನು ಔಷಧಗಳ ರೂಪದಲ್ಲಿ ಬಳಸುವುದನ್ನು ಸಂಶೋಧಿಸಲಾಗಿದೆ.
- ಹಲವಾರು ರೀತಿಯ ವಿಸ್ಮಯಕಾರಿ ವಿಷಜಂತುಗಳನ್ನು ಪರಿಚಯಿಸಲಾಗಿದೆ.
- ಹಲವಾರು ರೀತಿಯ ರೋಗಗಳಿಗೆ ಸಸ್ಯೌಷಧಿಗಳನ್ನು ಗುರುತಿಸಲಾಗಿದೆ.
- ನೂರಾರು ಬಗೆಯ ಔಷಧಿಯ ಸಸ್ಯಗಳನ್ನು ಪರಿಚಯಿಸಿಕೊಡಲಾಗಿದೆ.
- ನಿತ್ಯ ಗೋಚರವಾಗುವ ಹಲವಾರು ಸಸ್ಯಗಳು, ವಿವಿಧ ರೀತಿಯ ಪದಾರ್ಥಗಳಲ್ಲಿಯೂ ಔಷಧಿಯ ಗುಣಗಳಿವೆ ಎಂಬುದನ್ನು ಸಂಶೋಧಿಸಲಾಗಿದೆ.
- ಜ್ಯೋತಿಷ್ಯಶಾಸ್ತ್ರವು 'ಜಾತಕಫಲ'ವನ್ನು ಪುರಾಕೃತ ಕರ್ಮಗಳ ಫಲವೆಂದು ಹೇಳುವುದನ್ನು ಗುರುತಿಸಲಾಗಿದೆ.
- ತ್ಯಾಜ್ಯವೆಂದು ಎಸೆಯುವ ಬಾಳೆದಿಂಡು ಮುಂತಾದ ಪದಾರ್ಥಗಳಿಂದ ರುಚಿಯಾದ ಖಾದ್ಯಗಳನ್ನು ತಯಾರಿಸಬಹುದೆಂದು ಗುರುತಿಸಲಾಗಿದೆ.
- ಪಂಪನ 'ಆದಿಪುರಾಣ'ದಲ್ಲಿನ ಕೆಲವು ಶಾಸ್ತ್ರೀಯ ವಿಚಾರಗಳನ್ನು ಗುರುತಿಸಲಾಗಿದೆ.
- ಪ್ರಾಚೀನ ಕಾಲದ ವಿವಿಧ ರೀತಿಯ ಅಳತೆಯ ಮಾನಗಳನ್ನು ಗುರುತಿಸಲಾಗಿದೆ.
- ರಾಜ್ಯಾದಿತ್ಯದ 'ವ್ಯವಹಾರಗಣಿತ' ಗ್ರಂಥದಲ್ಲಿ ೪೦ ಸಂಖ್ಯಾಸ್ಥಾನಗಳ ಹೆಸರುಗಳನ್ನು ಶೋಧಿಸಲಾಗಿದೆ.
- ರಾಜ್ಯಾದಿತ್ಯದ 'ವ್ಯವಹಾರಗಣಿತ' ಗ್ರಂಥದಲ್ಲಿ ವಿವಿಧ ಸಂಖ್ಯಾಸ್ಥಾನಗಳಿಗೆ, ಸಂಕಲನ, ವ್ಯವಕಲನ, ಗುಣಾಕಾರ ಹಾಗೂ ಭಾಗಾಕಾರಗಳಿಗೆ ಇರುವ ಪರ್ಯಾಯ ಹೆಸರುಗಳನ್ನು ಗುರುತಿಸಲಾಗಿದೆ.

- 'ಅತಿಯಾದರೆ ಅಮೃತವೂ ವಿಷ' ಎಂಬಂತೆ ಅತಿಯಾಗಿ ತಿನ್ನುವ ಆಹಾರವೂ ವಿಷವಾಗುವುದು ಎಂಬುದನ್ನು ಗುರುತಿಸಲಾಗಿದೆ.
- ಋತುಗಳಿಗೆ ಅನುಸಾರವಾಗಿಯೇ ಆಹಾರ ಕ್ರಮವನ್ನು ಅನುಸರಿಸಬೇಕೆಂಬ ವಿಚಾರವನ್ನು ಪರಿಶೋಧಿಸಲಾಗಿದೆ.
- ಮಳೆಶಾಸ್ತ್ರದ ಕುರಿತಾಗಿ ಕನ್ನಡದಲ್ಲಿ 'ಜಟ್ಟಮತ' ಆದ್ಯಗ್ರಂಥವೆಂದು ಗುರುತಿಸಲಾಗಿದೆ.
- ಪ್ರಾಚೀನರ ಖಗೋಳಶಾಸ್ತ್ರೀಯ, ಭೌಗೋಳಿಕ ಜ್ಞಾನವನ್ನು ಅನಾವರಣ ಮಾಡಲಾಗಿದೆ.
- ರಾಜನೈತಿಕ, ಅರ್ಥಶಾಸ್ತ್ರೀಯ ಹಾಗೂ ಸಮಾಜಶಾಸ್ತ್ರೀಯ ಅಂಶಗಳನ್ನು ಗುರುತಿಸಲಾಗಿದೆ.

ಸಂಶೋಧನದ ಹೊಸ ಸಾಧ್ಯತೆಗಳು :

- ಕನ್ನಡದಲ್ಲಿ ರಚಿತವಾಗಿರುವ ತತ್ತ್ವಾರ್ಥಸೂತ್ರಗಳನ್ನು ಕುರಿತು ಸಮಗ್ರ ಅಧ್ಯಯನವನ್ನು ಮಾಡಬಹುದು.
- ಕನ್ನಡದಲ್ಲಿ ರಚಿತವಾಗಿರುವ ತತ್ತ್ವಾರ್ಥಸೂತ್ರಗಳ ವೈಜ್ಞಾನಿಕ ಅಧ್ಯಯನವನ್ನು ಕೈಗೊಳ್ಳಬಹುದು.
- ಕನ್ನಡ ಜೈನಶಾಸ್ತ್ರ ಸಾಹಿತ್ಯಗಳನ್ನು ಅನುಸರಿಸಿ ಲೋಕಸ್ವರೂಪವನ್ನು ಕುರಿತು ಅಧ್ಯಯನ ಕೈಗೊಳ್ಳಬಹುದು.
- ಕನ್ನಡದಲ್ಲಿ ದ್ವಾದಶಾನುಪ್ರೇಕ್ಷೆಗಳ ಕುರಿತಾಗಿ ರಚನೆಯಾಗಿರುವ ಕೃತಿಗಳನ್ನು ಅನುಸರಿಸಿ ಸಮಗ್ರ ಅಧ್ಯಯನ ಕೈಗೊಳ್ಳಬಹುದು.
- ಜೈನ ಧಾರ್ಮಿಕ ಶಾಸ್ತ್ರಗ್ರಂಥಗಳನ್ನು ಅನುಸರಿಸಿ ಸಮಾಜೋ-ಧಾರ್ಮಿಕ ಅಧ್ಯಯನಗಳನ್ನು ಕೈಕೊಳ್ಳಬಹುದು.
- ಕನ್ನಡ ನಿಘಂಟುಗಳನ್ನು ವಿವಿಧ ರೀತಿಯಲ್ಲಿ ವರ್ಗೀಕರಿಸಿಕೊಂಡು ಸಮಗ್ರ ಅಧ್ಯಯನ ಕೈಕೊಳ್ಳಬಹುದು.
- ಕನ್ನಡ ವೈದ್ಯಗ್ರಂಥಗಳಲ್ಲಿ ಉಲ್ಲೇಖಿತ ಸಸ್ಯಗಳ ಹೆಸರುಗಳ ಕುರಿತಾಗಿ ಅಧ್ಯಯನ ಕೈಕೊಳ್ಳಬಹುದು.
- ಕನ್ನಡ ಜ್ಯೋತಿಷ್ಯಶಾಸ್ತ್ರ ಗ್ರಂಥಗಳ ತೌಲನಿಕ ಅಧ್ಯಯನ ಕೈಕೊಳ್ಳಬಹುದು.
- ಕನ್ನಡ ಗಣಿತಶಾಸ್ತ್ರ ಗ್ರಂಥಗಳ ಜಾನಪದೀಯ ಅಧ್ಯಯನವನ್ನು ಕೈಕೊಳ್ಳಬಹುದು.
- ಅಲ್ಲದೇ ಪ್ರತ್ಯೇಕವಾಗಿ ಒಂದೊಂದು ಕೃತಿಗಳನ್ನು ಪರಿಗಣಿಸಿ ಸಾಂಸ್ಕೃತಿಕ, ವೈಜ್ಞಾನಿಕ, ಸಮಾಜಶಾಸ್ತ್ರೀಯ ಅಧ್ಯಯನಗಳನ್ನೂ ಕೈಕೊಳ್ಳಬಹುದು.

❖

ಅನುಬಂಧಗಳು

- ❖ ಛಾಯಾಚಿತ್ರಗಳು
- ❖ ಆಕರ ಗ್ರಂಥಗಳು
- ❖ ಪರಾಮರ್ಶನ ಗ್ರಂಥಗಳು
- ❖ ಸಂಶೋಧನ ಗ್ರಂಥಗಳು

-: ಛಾಯಾಚಿತ್ರಗಳು :-

ಔಷಧೀಯ ಸಸ್ಯಗಳು



ಪುರುಷರತ್ನ



ನೆಗ್ಗಿಲಮುಳ್ಳು




ಗುಪ್ಪಟೆ ಗಿಡ



ಕಾಕಮಾಚಿ



ಅಮೃತಬಳ್ಳಿ



ಉಮ್ಮತ್ತಿ ಗಿಡ



ಬಿಕ್ಕೆ ಗಿಡ



ಎಕ್ಕದ ಗಿಡ




ಆಡುಸೋಗೆ



ಅಮರ



ಅಂಬಿಲ



ಅನಿಲೆ



ಅಪರಾಜಿತ (ಗಿರಿಕರ್ಣಿಕೆ)



ಅರಿಮೇಧ



ಅಶ್ವಗಂಧ



ಅತ್ತಿ


ಕಿರುಕುಸಾಲೆ


ಭೃಂಗರಾಜ


ಗಜ್ಜುಗ


ಚಕ್ರಮುನಿ


ದೊಡ್ಡಪತ್ರೆ


ತುಂಬೆಗಿಡ


ಬೇದಿಸೊಪ್ಪಿನ ಗಿಡ


ಕೃಷ್ಣನೆಲ್ಲಿ


ನೆಲನೆಲ್ಲಿ


ಅಕ್ಕಿನೆನೆ ಗಿಡ


ಕಾಮಕಸ್ತೂರಿ


ಕಾಂಜೀರ



ರೋಹಿಣಿ



ಕುಟಜ



ಲಕ್ಕಿಗಿಡ



ಮಧುಕ



ಮರಕೆಸುವು



ವಿಷಮಧಾರಿ



ಶ್ರೀಮುದ್ರಿಕೆ ಕಾಡು



ಹುಚ್ಚೆಳ್ಳು



ಭೀಮನಕಡ್ಡಿ



ನಾಂಗುಲಿ(ರಿ)ಕ



ಪುನರ್ನವ



ಕರಿಹಂಬು



ನೀಲಿ



ನೇರಳೆ



ಪಾರಿಜಾತ



ಲೋಳೆರಸ



ಪಿಪ್ಪಲಿ



ಪುತ್ರಂಜೀವ



ಶಿವಲಿಂಗಿ ಬೀಜ


ಕೃಷ್ಣಕಮಲ


ಸಪ್ತಪರ್ಣಿ


ಸರ್ಪಗಂಧ


ಸರ್ಪಾಕ್ಷಿ


ಸೊಗದೆ


ಸೂರ್ಯಭಕ್ತ


ವಾಸಕ (ಆಡುಸೋಗೆ)


ಯಷ್ಠಿ



ಅಗರುಶುಂಠಿ



ಕಾಡುಹಾಗಲ



ಅಳಲೆಕಾಯಿ



ಉಗುಣೆ



ಕೆನ್ನೆಬಳ್ಳಿ



ಕರಂಬಲ



ಕೊರಟಿಗೆ



ಗರುಡಜಾಪಾಳ


ಜೇರ್ಕ


ಈಶ್ವರಿ ಬಳ್ಳಿ


ಪನ್ನೇರಳೆ


ಬ್ರಾಹ್ಮಿ (ಒಂದೆಲಗ)


ಬಿಂಬಲಕಾಯಿ


ಭೂರಮೆ


ಮಜ್ಜಿಗೆಹುಲ್ಲು


ಮಲೆ



ರಾಸ್ನ



ಲಾಮಂಚ



ಸಮುದ್ರಫಲ



ಸೂರ್ಯಶಿಖರ



ಶತಾವರಿ



ಹೊನಗೊನ್ನೆ ಸೊಪ್ಪು



ಹರಿವೆ ಸೊಪ್ಪು



ನಂದಿಬಟ್ಟಲು


ಅತಿಮಧುರ


ತುಳಸಿ


ಓಂ ಕಾಳು (ಅಜವಾನ)


ಮುಟ್ಟಿದರೆ ಮುನಿ


ದಾಸವಾಳ


ಆವರಿಕೆ


ಕಾಡುಕಣಗಿಲೆ


ನಿತ್ಯಪುಷ್ಪ

ವಿಷಯುಕ್ತ ಪ್ರಾಣಿಗಳು



ಕಾಳಿಂಗ ಸರ್ಪ



ಮಂಡಲ ಸರ್ಪಗಳು


ಮುಳ್ಳುಹಂದಿ


ಕರಡಿ


ತೋಳ


ಕಾಡುಬೆಕ್ಕು


ಮೊಸಳೆ


ಏಡಿ


ಸಿಂಗಳೀಕ


ಚೇಳು

ಮೂಲ ಆಕರಗಳು

೧. ಕಿಟ್ಟೆಲ್ ರೆ. ಎಫ್. (ಸಂ), ಮಂಗೇಶರಾವ ಪಿ. (ಸಂ) — **ಕೇಶಿರಾಜ ಕವಿಯ ಶಬ್ದಮಣಿದರ್ಪಣಂ** ಕೆನರೀಜ್ ಮಿಶನ್ ಬುಕ್ ಆಂಡ್ ಟ್ರ್ಯಾಕ್ಟ್ ಡಿಪಾಸಿಟರಿ, ಮಂಗಳೂರು. ಮುದ್ರಣ–೧೯೨೦

೨. ಕೃಷ್ಣಮೂರ್ತಿ ಕೆ. — **ನೃಪತುಂಗ ದೇವಾನುಮತಂ ಶ್ರೀವಿಜಯ ಪ್ರಭೂತಂ ಕವಿರಾಜಮಾರ್ಗಂ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪರಿಷತ್ತಿನ ಮುದ್ರಣ–೨೦೧೫

೩. ಕೊಟ್ಟಲಗಿ ರಾಮಚಂದ್ರ (ಸಂ) — **ಕವಿ ಸಾಳ್ವಕೃತಂ ರಸರತ್ನಾಕರಂ** ಸಮಾಜ ಪುಸ್ತಕಾಲಯ, ಧಾರವಾಡ. ಪ್ರಥಮ ಮುದ್ರಣ–೧೯೭೧

೪. ಗಂಗಾನಾಯಕ್ ಕೆ. ಎನ್. (ಪ್ರ.ಸಂ) ಭಾನುಮತಿ ವೈ. ಸಿ. (ಸಂ) — **ಅಕಾರಾದಿ ನಿಘಂಟು ಮತ್ತು ವೈದ್ಯ ನಿಘಂಟು** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಮೊದಲ ಮುದ್ರಣ–೨೦೧೧

೫. ಚಂದ್ರಶೇಖರನ್ ಟಿ. (ಸಂ) — **ಜೀವಸಂಬೋಧನಂ** ಓರಿಯಂಟಲ್ ಸಂಶೋಧನ ಸಂಸ್ಥೆ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್. ಮೊದಲ ಮುದ್ರಣ–೧೯೫೫

೬. ದೀಕ್ಷಿತ್ ಜಿ. ಎಸ್. (ಸಂ) ಬಿ. ರಾಮಸ್ವಾಮಿ ಶ್ರೀನಿವಾಸ ರಿತ್ತಿ — **ನೀತಿವಾಕ್ಯಾಮೃತಂ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಮೊದಲ ಮುದ್ರಣ–೨೦೦೦

೭. ದೇವೀರಪ್ಪ ಎಚ್. (ಸಂ) — **ನಾಗವರ್ಮ ವಿರಚಿತ ಕಾವ್ಯಾವಲೋಕನಂ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪ್ರಥಮ ಮುದ್ರಣ–೨೦೦೪

೮. ದೇವೀರಪ್ಪ ಎಚ್. (ಸಂ) — **ಬಾಲಚಂದ್ರದೇವ ವಿರಚಿತ ತತ್ತ್ವರತ್ನಪ್ರದೀಪಿಕೆ** ಸೀನಿಯರ್ ಅಸಿಸ್ಟಂಟ್ ಡೈರೆಕ್ಟರ್, ಗೌರ್ನಮೆಂಟ್ ಬ್ರನೋಹ್ ಪ್ರೆಸ್, ಮೈಸೂರು. ಮೊದಲ ಮುದ್ರಣ–೧೯೫೫

೯. ನರಸಿಂಹಾಚಾರ್ ಡಿ. ಎಲ್. (ಸಂ) — **ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ,** ಡಿ.ವಿ.ಕೆ. ಮೂರ್ತಿ, ಮೈಸೂರು. ಹದಿನಾಲ್ಕನೆಯ ಮುದ್ರಣ – ೨೦೦೯

೧೦. ನಾಗರಾಜಯ್ಯ ಹಂಪ (ಸಂ) — **ತತ್ತ್ವಾರ್ಥಸೂತ್ರಾನುಗತ ಕರ್ಣಾಟ ಲಘುವೃತ್ತಿ** ಶ್ರೀ ಸಿದ್ಧಾಂತಕೀರ್ತಿ ಗ್ರಂಥಮಾಲೆ, ಹೊಂಬುಜ. ಮುದ್ರಣ–೧೯೯೪

೧೧. ನಾಗವರ್ಮ — **ನಾಗವರ್ಮ ವಿರಚಿತ ಶಬ್ದಸ್ಮೃತಿ,** ಸಮಾಜ ಪುಸ್ತಕಾಲಯ, ಧಾರವಾಡ. ಪ್ರಥಮ ಮುದ್ರಣ–೧೯೬೯

೧೨. ಪಂಡಿತ ಶೇಷ ಅಯ್ಯಂಗಾರ್ ಎಚ್. (ಸಂ) — **ಕವಿ ಸಾಳ್ವಕೃತಂ ರಸರತ್ನಾಕರಂ** ಓರಿಯಂಟಲ್ ಸಂಶೋಧನ ಸಂಸ್ಥೆ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್. ಮೊದಲ ಮುದ್ರಣ–೧೯೩೨

೧೩. ಪದ್ಮಾವತಮ್ಮ (ಸಂ) ಶ್ರೀಮತಿ ಕೃಷ್ಣವೇಣಿ, ಕೆ. ಜಿ. ಪ್ರಕಾಶ್
ಶ್ರೀ ರಾಜಾದಿತ್ಯ ವಿರಚಿತ ವ್ಯವಹಾರ ಗಣಿತ ಮತ್ತು ಲೀಲಾವತಿ
ಪ್ರಕಾಶಕರು: ಡಾ ॥ (ಶ್ರೀಮತಿ) ಪದ್ಮಾವತಮ್ಮ, ಮೈಸೂರು-೫೭೦೦೦೨, ಮುದ್ರಣ-೨೦೧೩

೧೪. ಬಿರಾದಾರ ಎಂ. ಜಿ.
ರತ್ನಾಕರವರ್ಣಿ ಸಂಪುಟ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಥಮ ಮುದ್ರಣ-೨೦೧೭

೧೫. ಭಟ್ಟ ಮರಿಯಪ್ಪ ಎಂ.
ವ್ಯವಹಾರ ಗಣಿತ
ಓರಿಯಂಟಲ್ ಸಂಶೋಧನ ಸಂಸ್ಥೆ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್. ಮೊದಲ ಮುದ್ರಣ-೧೯೫೫

೧೬. ಭಾನುಮತಿ ವೈ. ಸಿ. (ಸಂ)
ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಮೊದಲ ಮುದ್ರಣ-೨೦೦೪

೧೭. ಮಂಜುನಾಥನ್ ಜಿ. ಜಿ. (ಸಂ)
ಆಚಣ್ಣ-ಅಗ್ಗಳ ಸಂಪುಟ (ವರ್ಧಮಾನ ಪುರಾಣಂ, ಶ್ರೀಪದಾಶೀತಿ, ಚಂದ್ರಪ್ರಭ ಪುರಾಣಂ)
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಥಮ ಮುದ್ರಣ-೨೦೧೭

೧೮. ರೈಸ್ ಲೆವಿಸ್
ನಾಗವರ್ಮಕೃತ ಕರ್ಣಾಟಕ ಭಾಷಾಭೂಷಣಂ
ಮೈಸೂರು ಗೌರ್‍ನಮೆಂಟ್ ಪ್ರೆಸ್, ಬೆಂಗಳೂರು. ಮೊದಲ ಮುದ್ರಣ-೧೮೮೪

೧೯. ವಿದ್ವಾನ್ ಕೃಷ್ಣಜೋಯಿಸ್ ಎಸ್. ಎನ್. (ಸಂ)
ಶ್ರೀಧರಾಚಾರ್ಯ ವಿರಚಿತ ಜಾತಕ ತಿಲಕಂ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ತೃತೀಯ ಮುದ್ರಣ-೨೦೦೩

೨೦. ವಿದ್ವಾನ್ ಕೃಷ್ಣಜೋಯಿಸ್ ಎಸ್. ಎನ್. (ಸಂ)
ಸೂಪಶಾಸ್ತ್ರ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ತೃತೀಯ ಮುದ್ರಣ-೧೯೬೯

೨೧. ವೆಂಕಟರಾವ್ ಎ. ಪಂಡಿತ ಶೇಷ ಅಯ್ಯಂಗಾರ್ ಎಚ್. (ಸಂ)
ನಾಗವರ್ಮ ಕೃತಮಪ್ಪ ಅಭಿದಾನ ವಸ್ತುಕೋಶ
ಓರಿಯಂಟಲ್ ಸಂಶೋಧನ ಸಂಸ್ಥೆ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್. ಮೊದಲ ಮುದ್ರಣ-೧೯೩೩

೨೨. ವೆಂಕಟಾಚಲಶಾಸ್ತ್ರೀ ಟಿ. ವಿ. (ಸಂ)
ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಮುದ್ರಣ-೨೦೧೧

೨೩. ಶಿರೂರ ಬಿ. ವಿ. (ಸಂ)
ಮೂರನೆಯ ಮಂಗರಸನ ಸಂಪುಟ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಥಮ ಮುದ್ರಣ-೨೦೧೭

೨೪. ಶೇಷ ಅಯ್ಯಂಗಾರ್ ಎಚ್. (ಸಂ)
ಙಟ್ಟಮತಂ
ಓರಿಯಂಟಲ್ ಸಂಶೋಧನ ಸಂಸ್ಥೆ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್. ಮೊದಲ ಮುದ್ರಣ-೧೯೫೦

೨೫. ಶೇಷಗಿರಿ ಕೆ. ಆರ್. (ಸಂ) **ವಿಜಯಣ್ಣ ವಿರಚಿತ ದ್ವಾದಶಾನುಪ್ರೇಕ್ಷೆ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಮೊದಲ ಮುದ್ರಣ–೧೯೭೫

೨೬. ಸಣ್ಣಯ್ಯ ಬಿ. ಎಸ್. (ಸಂ) **ಬಂಧುವರ್ಮ**
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಮೊದಲ ಮುದ್ರಣ–೧೯೮೩

೨೭. ಸಣ್ಣಯ್ಯ ಬಿ. ಎಸ್. (ಸಂ) **ಬಂಧುವರ್ಮ ಸಂಪುಟ (ಜೀವಸಂಬೋಧನಂ, ಹರಿವಂಶಾಭ್ಯುದಯಂ),**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಮೊದಲ ಮುದ್ರಣ–೨೦೦೬

೨೮. ಸಣ್ಣಯ್ಯ ಬಿ. ಎಸ್. (ಸಂ) **ಬಂದುವರ್ಮ ವಿರಚಿತ ಜೀವಸಂಬೋಧನಂ,**
ಶ್ರೀ ಸಿದ್ಧಾಂತಕೀರ್ತಿ ಗ್ರಂಥಮಾಲೆ,
ಶ್ರೀ ಹೊಂಬುಜ ಕ್ಷೇತ್ರ, ಹೊಂಬುಜ. ಮುದ್ರಣ–೧೯೯೬

೨೯. ಸಣ್ಣಯ್ಯ ಬಿ. ಎಸ್. (ಸಂ) **ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣಂ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಮೊದಲ ಮುದ್ರಣ–೨೦೦೪

೩೦. ಸಣ್ಣಯ್ಯ ಬಿ. ಎಸ್. (ಸಂ) **ಬಂಧುವರ್ಮ ವಿರಚಿತ ಸತಿಧರ್ಮಸಾರ,**
ರವಿ ಪ್ರಕಾಶನ ಮೈಸೂರು.
ಮುದ್ರಣ–೧೯೭೬

೩೧. ಸಣ್ಣಯ್ಯ ಬಿ. ಎಸ್. (ಸಂ) **ಸತಿಧರ್ಮಸಾರ,**
ಕನಕಗಿರಿ ಪ್ರಕಾಶನ, ಮಲೆಯೂರು–೫೭೧೧೨೮,
ದ್ವಿತೀಯ ಮುದ್ರಣ – ೧೯೯೮

೩೨. ಸೀತಾರಾಮಯ್ಯ ಎಂ. ವಿ. **ಶ್ರೀ ವಿಜಯಕೃತ ಕವಿರಾಜಮಾರ್ಗಂ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
ಮುದ್ರಣ–೨೦೧೧

೩೩. ಸಾಸನೂರು ಬಿ. ಟಿ., ಡಾ. ಕಲಬುರ್ಗಿ ಎಂ. ಎಂ **ಶಬ್ದಮಣಿದರ್ಪಣ ಸಂಗ್ರಹ**
ಸಪ್ನ ಬುಕ್ ಹೌಸ್, ಬೆಂಗಳೂರು.
೧೧ನೆಯ ಮುದ್ರಣ–೨೦೧೬

೩೪. ಹದ್ಲಿ ದೇವರಡ್ಡಿ **ಬಂಧುವರ್ಮ ಮತ್ತು ಅವನ ಕೃತಿಗಳು**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಪ್ರಥಮ ಮುದ್ರಣ–೨೦೧೮

೩೫ Venkatarao A. and Pandit Shesha Ayyangar H. (Editors) **KHAGENDRAMANIDARPANA OF MANGARAJA,**
University of Madras,
First Edistion-1942

ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್. ಎಸ್. (ಸಂ) **ಸರಳ ಕವಿರಾಜಮಾರ್ಗ,**
ಮಂಗಳಾ ಪ್ರಕಾಶನ, ಹೊಸಪೇಟೆ.
ಪ್ರಥಮ ಮುದ್ರಣ–೨೦೦೯

೨. ಅಣ್ಣಾರಾಯ ಮಿರ್ಜಿ **ಜೈನಧರ್ಮ,**
ಶಾಂತಿ ಸೇವಾ ಸದನ, ಶೇಡಬಾಳ.
ಮೂರನೆಯ ಮುದ್ರಣ–೧೯೯೭

೩. ಅನಂತರಂಗಾಚಾರ್ ಎನ್. — **ಪಂಪ ಮಹಾಕವಿ ವಿರಚಿತ ಪಂಪ ಭಾರತಂ(ಗದ್ಯಾನುವಾದ),**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮುದ್ರಣ – ೨೦೧೬

೪. ಅನಂತರಂಗಾಚಾರ್ ಎನ್. — **ಶ್ರೀ ಮಲ್ಲಿಕಾರ್ಜುನ ಕವೀಶ್ವರ ಸಂಯೋಜಿತ ಸೂಕ್ತಿಸುಧಾರ್ಣವಂ,**
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
ಮೊದಲ ಮುದ್ರಣ–೧೯೭೨

೫. ಅನಂತಾಚಾರ್ಯ ಆದ್ಯ — **ವಾಗ್ಭಟನ ಅಷ್ಟಾಂಗ ಹೃದಯ ಭಾಗ–೧,**
ಪ್ರಕಾಶಕರು: ವೈದ್ಯಗುರು ಅನಂತಾಚಾರ್ಯ ಆದ್ಯ,
ಆರ್ಯ ವೈದ್ಯಕ ಗ್ರಂಥಮಾಲೆ, ವಿಜಾಪೂರ.
ಮೊದಲ ಮುದ್ರಣ–೧೯೫೫

೬. ಆಗೋಲಿ ಸಂಗಯ್ಯ ಸ್ವಾಮಿ — **ವನಸ್ಪತಿ ಆಯುರ್ವೇದ ವೈದ್ಯಸಾರ,**
ಪಾರು ಪ್ರಕಾಶನ, ಗದಗ. ಮೊದಲ ಮುದ್ರಣ–೨೦೦೦

೭. ಆಚಾರ್ಯಕಲ್ಪ ಪಂಡಿತ ಟೋಡರ ಮಲ್ಲರು (ಮೂಲ) ಶ್ರೀ. ಎಂ. ಬಿ. ಪಾಟೀಲ (ಅನು) — **ಮೋಕ್ಷಮಾರ್ಗ ಪ್ರಕಾಶಕ,**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು.
ಮೂರನೆಯ ಆವೃತ್ತಿ–೨೦೧೩

೮. ಆಚಾರ್ ರಮೇಶ — **ನಯಸೇನನ ಧರ್ಮಾಮೃತ ಪರಿಕಲ್ಪನಾತ್ಮಕ ನಿರ್ವಚನ,**
ಜನಸ್ಪಂದನ ಟ್ರಸ್ಟ್(ರಿ), ಶಿಕಾರಿಪುರ.
ಮೊದಲ ಮುದ್ರಣ – ೨೦೧೭

೯. ಆದಿದೇವಾನಂದ ಸ್ವಾಮಿ — **ಮಾಂಡೀಕ್ಯೋಪನಿಷತ್ ಮತ್ತು ಗೌಡಪಾದಕಾರಿಕಾ,**
ಶ್ರೀರಾಮಕೃಷ್ಣಾಶ್ರಮ, ಮೈಸೂರು.
ಮೊದಲ ಮುದ್ರಣ–೧೯೫೮

೧೦. ಇಜಾರಿ ಧನ್ಯಕುಮಾರ — **ಜೈನ ಲೌಕಿಕ ಸಾಹಿತ್ಯ ಸಂಪದ,**
ಸಿದ್ಧಾಂತ ಕೀರ್ತಿ ಗ್ರಂಥಮಾಲೆ,
ಶ್ರೀ ಜೈನಮಠ, ಹೊಂಬುಜ, ಜಿ: ಶಿವಮೊಗ್ಗ.
ಮೊದಲ ಮುದ್ರಣ–೨೦೧೫

೧೧. ಉಡುಪ ಗೋಪಾಲಕೃಷ್ಣ ಎನ್. — **ಕನ್ನಡ ವ್ಯಾಕರಣ ಮತ್ತು ರಚನೆ,**
ಎಂ. ಸಿ. ಸಿ. ಪಬ್ಲಿಕೇಷನ್ಸ್, ಬೆಂಗಳೂರು.
ಎಂಟನೆಯ ಮುದ್ರಣ–೨೦೧೫

೧೨. ಉಪಾಧ್ಯಾಯ ಮುನಿಶ್ರೀ ಕಾಮಕುಮಾರನಂದೀ ಮಹಾರಾಜರು — **ಪಂಚಕಲ್ಯಾಣ ವೈಜ್ಞಾನಿಕ ವಿಶ್ಲೇಷಣೆ,**
ಶ್ರೀ ಭುಜಬಲಿ ಶೆಟ್ಟೆಪ್ಪ ಖನಗಾವಿ,
ಪ್ರಥಮ ಮುದ್ರಣ–೨೦೦೫

೧೩. ಐತಾಳ ವೆಂಕಟರಮಣ ಬಿ. ಆರ್. (ಸಂ) — **ಪಂಪನ ಆದಿಪುರಾಣ ಪ್ರವೇಶ,**
ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.
ದ್ವಿತೀಯ ಮುದ್ರಣ–೨೦೧೩

೧೪. ಕಲಬುರ್ಗಿ ಎಂ. ಎಂ. — **ಮಾರ್ಗ ಸಂಪುಟ–೧,**
ಸಪ್ನ ಬುಕ್ ಹೌಸ್, ಬೆಂಗಳೂರು
ಮೂರನೆಯ ಮುದ್ರಣ–೨೦೧೦

೧೫. ಕಲಬುರ್ಗಿ ಎಂ. ಎಂ. — **ಮಾರ್ಗ ಸಂಪುಟ–೨,**
ಸಪ್ನ ಬುಕ್ ಹೌಸ್, ಬೆಂಗಳೂರು
ಮೂರನೆಯ ಮುದ್ರಣ–೨೦೧೦

೧೬. ಕಲಬುರ್ಗಿ ಎಂ. ಎಂ. **ಮಾರ್ಗ ಸಂಪುಟ–೩,**
ಸಪ್ನ ಬುಕ್ ಹೌಸ್, ಬೆಂಗಳೂರು
ಮೂರನೆಯ ಮುದ್ರಣ–೨೦೧೦

೧೭. ಕಲಬುರ್ಗಿ ಎಂ. ಎಂ. **ಮಾರ್ಗ ಸಂಪುಟ–೪,**
ಸಪ್ನ ಬುಕ್ ಹೌಸ್, ಬೆಂಗಳೂರು
ಮೂರನೆಯ ಮುದ್ರಣ–೨೦೧೦

೧೮. ಕಲಬುರ್ಗಿ ಎಂ. ಎಂ. **ಮಾರ್ಗ ಸಂಪುಟ–೫,**
ಸಪ್ನ ಬುಕ್ ಹೌಸ್, ಬೆಂಗಳೂರು
ಮೂರನೆಯ ಮುದ್ರಣ–೨೦೧೦

೧೯. ಕಲಬುರ್ಗಿ ಎಂ. ಎಂ. **ಮಾರ್ಗ ಸಂಪುಟ–೬,**
ಸಪ್ನ ಬುಕ್ ಹೌಸ್, ಬೆಂಗಳೂರು
ಮೂರನೆಯ ಮುದ್ರಣ–೨೦೧೦

೨೦. ಕಲಬುರ್ಗಿ ಎಂ. ಎಂ. **ಮಾರ್ಗ ಸಂಪುಟ–೮,**
ಸಪ್ನ ಬುಕ್ ಹೌಸ್, ಬೆಂಗಳೂರು
ಪ್ರಥಮ ಮುದ್ರಣ–೨೦೧೬

೨೧. ಕಾವ್ಯಪ್ರೇಮಿ **ಸೂರ್ಯಕವಿ ವಿರಚಿತ ಕವಿಕಂಠಹಾರ,**
ಪ್ರತಿಭಾ ಗ್ರಂಥಮಾಲೆ, ಧಾರವಾಡ.
ಮೊದಲ ಮುದ್ರಣ–೧೯೭೪

೨೨. ಕಿಟ್ಟೆಲ್ ರೆ. ಎಫ್. **ನಾಗವರ್ಮನ ಕನ್ನಡ ಛಂದಸ್ಸು,**
ಬಾಶೆಲ್ ಮಿಶನ್ ಬುಕ್ & ಟ್ರ್ಯಾಕ್ಟ್ ಡೆಪಾಸಿಟರಿ,
ಮಂಗಳೂರು. ಮುದ್ರಣ–೧೮೭೫

೨೩. ಕುಂದಣಗಾರ ಕೆ. ಜಿ. (ಸಂ) **ಆದಿಪುರಾಣ,**
ಅಜಿತ ಅಣ್ಣಾರಾವ ಚೌಗುಲೆ, ಚಂದ್ರಪ್ರಭ ಪ್ರಿಂಟಿಂಗ್
ಪ್ರೆಸ್, ಬೆಳಗಾವಿ. ಪ್ರಥಮ ಮುದ್ರಣ–೧೯೫೩

೨೪. ಕುಕ್ಕಿಲ ಕೃಷ್ಣಭಟ್ಟ (ಕನ್ನಡಕ್ಕೆ) **ಸಿಲಪ್ಪದಿಗಾರಂ,**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಎರಡನೆ ಮುದ್ರಣ–೨೦೧೫

೨೫. ಕುಲಕರ್ಣಿ ಬಿ. ಎಸ್. (ಸಂ) **ಕಲ್ಯಾಣಕೀರ್ತಿಮುನಿ ವಿರಚಿತ ಜ್ಞಾನಚಂದ್ರನ ಕಾವ್ಯ,**
ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ಮುದ್ರಣ–೧೯೮೧

೨೬. ಕುಲಕರ್ಣಿ ಬಿ. ಎಸ್. (ಸಂ) **ಶಾಂತಿಕೀರ್ತಿ ಮುನಿ ವಿರಚಿತ ಷೋಡಶ ಭಾವನೆಗಳು**
ಮತ್ತು ಇತರ ಕೃತಿಗಳು,
ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ಮುದ್ರಣ–೧೯೮೪

೨೭. ಕುಲಕರ್ಣಿ ಬಿ. ಎಸ್. (ಸಂ) **ನೇಮಿಚಂದ್ರ,**
ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ಮುದ್ರಣ–೧೯೬೯

೨೮. ಕುಶಾಲಪ್ಪಗೌಡ ಕೆ. **ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ**
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಮೊದಲ ಮುದ್ರಣ–೧೯೮೬

೨೯. ಕುಸುಮಾ ಪ್ರಕಾಶ್ ಸಿ. ಪಿ. **ಆಚಾರ್ಯಶ್ರೀ ಸುನೀಲಸಾಗರಜೀ ವಿರಚಿತ ಭಾವಣಾಸಾರೋ**
ಬಾಹುಬಲಿ ಪ್ರಾಕೃತ ವಿದ್ಯಾಪೀಠ, ರಾಷ್ಟ್ರೀಯ ಪ್ರಾಕೃತ
ಅಧ್ಯಯನ ಮತ್ತು ಸಂಶೋಧನ ಸಂಸ್ಥೆ, ಶ್ರವಣಬೆಳಗೊಳ
ಮುದ್ರಣ–೨೦೦೯

೩೦.	ಕುರ್ತಕೋಟಿ ಕೀರ್ತಿನಾಥ	**ಯುಗಧರ್ಮ ಹಾಗೂ ಸಾಹಿತ್ಯ ದರ್ಶನ,** ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್, ಧಾರವಾಡ. ಒಂಬತ್ತನೇ ಮುದ್ರಣ ೨೦೧೨
೩೧.	ಕುರ್ತಕೋಟಿ ಕೀರ್ತಿನಾಥ	**ಯುಗಧರ್ಮ ಹಾಗೂ ಸಾಹಿತ್ಯ ದರ್ಶನ,** ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್, ಧಾರವಾಡ. ಒಂಬತ್ತನೇ ಮುದ್ರಣ ೨೦೧೨
೩೨.	ಕೃಷ್ಣ ಎಂ. ಎಚ್.	**ಕರ್ನಾಟಕದ ಪೂರ್ವ ಚರಿತ್ರೆ,** ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ. ಮುದ್ರಣ–೧೯೫೩
೩೩.	ಕೃಷ್ಣಶಾಸ್ತ್ರೀ ಎ. ಆರ್.	**ಆನಂದವರ್ಧನನ ಕಾವ್ಯಮಿಮಾಂಸೆ ಮತ್ತು ಕನ್ನಡ ಧ್ವನ್ಯಾಲೋಕ,** ತ. ಸು. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. ಮುದ್ರಣ–೧೯೫೧
೩೪.	ಗಂಗಾನಾಯಕ್ ಕೆ. ಎನ್. (ಪ್ರ. ಸಂ) ಎನ್. ಕುಮುದ ಮತ್ತು ಮಧುವನಹಳ್ಳಿ ಎಂ. ಮಹೇಶ (ಸಂ)	**ಸಂಸ್ಕೃತ ಸಾಹಿತ್ಯ,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪ್ರಥಮ ಮುದ್ರಣ–೨೦೧೧
	ಗಂಗಾನಾಯಕ್ ಕೆ. ಎನ್., ಶೆಟ್ಟಿ ಎಸ್. ಡಿ. (ಸಂ)	**ಪದ್ಮನಾಭಕವಿ ವಿರಚಿತ ವೇಣೂರು ಭುಜಬಲಿ ಚರಿತೆ,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪ್ರಥಮ ಮುದ್ರಣ–೨೦೧೧
೩೫.	ಗಣಪತಿ ಭಟ್ಟ ಕೆ.	**ಶ್ರೀ ಮಾನತುಂಗಾಚಾರ್ಯಕೃತಮ್ ಭಕ್ತಾಮರಸ್ತೋತ್ರಮ್,** ಧರ್ಮ ಸಂಸ್ಕೃತಿ ಪ್ರತಿಷ್ಠಾನಮ್, ಧಾರವಾಡ. ಮೊದಲ ಮುದ್ರಣ–೨೦೦೫
೩೬.	ಗಣೇಶ್ ಆರ್. (ಶತಾವಧಾನಿ)	**ಕಾವ್ಯಕಲ್ಪ,** ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ, ಮೊದಲ ಮುದ್ರಣ – ೨೦೧೧
೩೭.	ಗಾಳಿ ಶಿವಾನಂದ, ಹೆಗಡೆ ಶ್ರೀಧರ ಭದ್ರನ್ (ಸಂ)	**ಜಿನತಿಲಕ,** ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಮುದ್ರಣ–೨೦೦೫
೩೮.	ಗುಂಡಪ್ಪ ಎಲ್. (ಅನು)	**ತಿರುಕ್ಕುಱಳ್,** ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಮುದ್ರಣ–೨೦೦೭
೩೯.	ಗೂಳ್ಯಂ ಮಹ್ಮದ್ ಬಾಷ ಎಂ.	**ಇಮ್ಮಡಿ ನಾಗವರ್ಮನ ಶಾಸ್ತ್ರ ಸಾಹಿತ್ಯ** ಭಂಡಾರ ಪ್ರಕಾಶನ, ರಾಯಚೂರು. ಮೊದಲ ಮುದ್ರಣ–೨೦೧೩
೪೦.	ಗುರುದತ್ತ ಪ್ರಧಾನ, ಡಾ. ಎನ್. ಎಸ್. ತಾರಾನಾಥ, ಡಾ. ಪದ್ಮಾಶೇಖರ್(ಸಂ.)	**ಶ್ರೀಮುಖ** ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅಭಿನಂದನ ಸಮಿತಿ, ಮೈಸೂರು. ಮುದ್ರಣ – ೧೯೯೭
೪೧.	ಚಕ್ರವರ್ತಿ ಜಿ. ಎನ್.	**ಸಂಸ್ಕೃತ ಕನ್ನಡ ನಿಘಂಟು,** ಗೀತಾ ಬುಕ್ ಹೌಸ್, ಮೈಸೂರು ಮುದ್ರಣ–೨೦೧೩
೪೨.	ಚಿಕ್ಕಣ್ಣಯ್ಯ ಪಿ. ಎಸ್.	**ಸಸ್ಯಶಾಸ್ತ್ರ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಮೊದಲ ಮುದ್ರಣ–೧೯೫೭

೪೩.	ಚಿದಾನಂದಮೂರ್ತಿ ಎಂ.	**ಸಂಶೋಧನೆ : ತಾತ್ವಿಕ – ಆನ್ವಯಿಕ, ಚಿದಾನಂದ ಸಮಗ್ರ ಸಂಪುಟ ೧೧,** ಸಪ್ನ ಬುಕ್ ಹೌಸ್, ಬೆಂಗಳೂರು. ಮುದ್ರಣ – ೨೦೧೩
೪೪.	ಚಿದಾನಂದಮೂರ್ತಿ ಎಂ.	**ಭಾಷಿಕ ಬೃಹತ್ ಕರ್ನಾಟಕ** ಸಪ್ನ ಬುಕ್ ಹೌಸ್, ಬೆಂಗಳೂರು, ಮುದ್ರಣ – ೨೦೦೮
೪೫.	ಚೌಗಲೆ ಅಪ್ಪಣ್ಣಾ	**ಶ್ರೀ ವಸುನಂದ್ಯಾಚಾರ್ಯಕೃತ ಶ್ರಾವಕಾಚಾರ,** ಶ್ರೀ ಮಹಾವೀರ ಮುದ್ರಣಾಲಯ, ಬೆಳಗಾವಿ ಮೊದಲ ಮುದ್ರಣ–೧೯೧೧
೪೬.	ಚೌಡಪ್ಪರರೆಡ್ಡಿ ಕೆ. ಸಿ.	**ಗೊಮ್ಮಟ ವೈಭವ,** ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ ಮಹೋತ್ಸವ ಸಮಿತಿ, ಬೆಂಗಳೂರು. ಎರಡನೆಯ ಮುದ್ರಣ–೨೦೦೨
೪೭.	ಜಯಚಂದ್ರ ಎಂ. ಎ.	**ಭಗವಾನ್ ಮಹಾವೀರ** ಸಪ್ನ ಬುಕ್ ಹೌಸ್, ಬೆಂಗಳೂರು. ಮೂರನೆಯ ಮುದ್ರಣ–೨೦೦೨
೪೮.	ಜಯಚಂದ್ರ ಎಂ. ಎ.	**ಸಮಣಸುತ್ತಂ ಜೈನಧರ್ಮದ ಪ್ರಾತಿನಿಧಿಕ ಗ್ರಂಥ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಥಮ ಮುದ್ರಣ–೨೦೧೨
೪೯.	ಜವರೇಗೌಡ ದೇ.	**ಕನ್ನಡ ಸಂಸ್ಕೃತಿ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಎರಡನೆಯ ಮುದ್ರಣ–೨೦೧೨
	ಜವರೇಗೌಡ ದೇ.	**ಶಾರದೆಗೆ ಮುನ್ನುಡಿ ಹಾರ,** ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು ಮೊದಲ ಮುದ್ರಣ–೨೦೧೧
೫೦.	ಜವರೇಗೌಡ ದೇ. (ಸಂ)	**ನಾಗರಾಜ ಕವಿ ವಿರಚಿತ ಪುಣ್ಯಾಸ್ರವ** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಪ್ರಥಮ ಮುದ್ರಣ–೧೯೭೭
೫೧.	ಜಾಗೀರದಾರ ಸೀತಾರಾಮ	**ಕವಿರಾಜಮಾರ್ಗ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪ್ರಥಮ ಮುದ್ರಣ–೨೦೦೧
೫೨.	ಜಾಗೀರದಾರ ಸೀತಾರಾಮ (ಪ್ರ.ಸಂ)	**ಶ್ರುತಕೇವಲಿ ಭದ್ರಬಾಹು** ಚಂದ್ರಗಿರಿ ಚಿಕ್ಕಬೆಟ್ಟ ಮಹೋತ್ಸವ ಆಚರಣಾ ಶುಭ ಸಂದರ್ಭದ ಪ್ರಕಾಶನ, ಶ್ರವಣಬೆಳಗೊಳ ಮುದ್ರಣ–೨೦೦೧
೫೩.	ಜೇತಾಲಾಲ ಹಿಂಮತಲಾಲ ಶಾಹ (ಮೂಲ) ಪಾಟೀಲ ಎಂ. ಬಿ. (ಸಂ)	**ಪ್ರವಚನಸಾರ** ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್, ಬೆಂಗಳೂರು ಎರಡನೆಯ ಆವೃತ್ತಿ–೨೦೦೯
೫೪.	ಜೈನ ಶೇಖರಚಂದ್ರ (ಹಿಂದಿ) ರತನಚಂದ ಕೋಟಿ (ಅನು)	**ಜೈನ ಧರ್ಮ ತಿಳಿಯಿರಿ** ಶ್ರೀ ತಮ್ಮಣ್ಣ ಚಿನ್ನಪ್ಪ ಪಡಸಲಗಿ, ತೇರದಾಳ ಮೊದಲ ಮುದ್ರಣ–೨೦೧೧
೫೫.	ಶ್ರೀಮತಿ ಧವಲಶ್ರೀ ಅಣ್ಣಾಸಾಹೇಬ ಪಾಟೀಲ (ಅನು)	**ಆತ್ಮಪ್ರಸಿದ್ಧಿ** ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್, ಬೆಂಗಳೂರು ಮೊದಲನೆಯ ಆವೃತ್ತಿ–೨೦೧೨

೫೬. ಜೈನಕೇರಿ ಜಯದೇವಪ್ಪ, ಜಗದೀಶ (ಸಂ) — **ಕೆಳದಿ ಕಾಲದ ಕನ್ನಡ ಸಾಹಿತ್ಯ**
ಮರುಳ ಸಿದ್ಧೇಶ್ವರ ಅಧ್ಯಯನ ಕೇಂದ್ರ, ಕೆಳದಿ ಸಂಸ್ಥಾನ ಮಹಾಮಹತ್ತಿನ ಭುವನಗಿರಿ ಸಂಸ್ಥಾನಮಠ, ಕವಲೇದುರ್ಗ, ಶಿವಮೊಗ್ಗ ಮುದ್ರಣ–೨೦೧೫

೫೭. ಜೈನ ರಾಜಜಾರಾಮ್ (ಮೂಲ) ಜಯಚಂದ್ರ ಎಂ. ಎ. (ಅನು) — **ದೇವೇಂದ್ರಗಣಿಕೃತ ಅಗಡದತ್ತ ಚರಿಯಂ**
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ, ಶ್ರವಣಬೆಳಗೊಳ ಮುದ್ರಣ–೨೦೦೪

೫೮. ಜೈನ ಹರಿಲಾಲ (ಸಂ) — **ಮೃತ್ಯು ಮಹೋತ್ಸವ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್, ಬೆಂಗಳೂರು ಮುದ್ರಣ–೨೦೧೫

೫೯. ಜೋಶಿ ಶಂ. ಬಾ. — **ಕಂನುಡಿಯ ಹುಟ್ಟು**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಮುದ್ರಣ – ೨೦೦೯

೬೦. ಜೋಶಿ ಡಿ. ಟಿ. — **ಭಾರತದ ಇತಿಹಾಸ**
ವಿದ್ಯಾನಿಧಿ ಪ್ರಕಾಶನ, ಗದಗ. ಮುದ್ರಣ–೨೦೦೭

೬೧. ಜೋಶಿ ಗುರುನಾಥ, ಅಶ್ವತ್ಥನಾರಾಯಣ ಬಿ. — **ಕನ್ನಡ ಕನ್ನಡ ಶಬ್ದಕೋಶ**
ಸಂಕೇಶ್ವರ್ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಗದಗ ಪ್ರಥಮ ಮುದ್ರಣ–೧೯೫೭

೬೨. ತಪಕೀರೆ ನೇಮಿನಾಥ (ಸಂ) — **ಅಂತರ್ವಾಣಿ ಸಂಪುಟ–೧**
ಜೈನ ಸಂಸ್ಕೃತಿ ಸಂರಕ್ಷಣೆ ಮತ್ತು ಅಭಿವೃದ್ಧಿ ಸಂಸ್ಥೆ, ಧಾರವಾಡ. ಮುದ್ರಣ–೨೦೧೮

೬೩. ತಪಕೀರೆ ನೇಮಿನಾಥ (ಸಂ) — **ಅಂತರ್ವಾಣಿ ಸಂಪುಟ–೪**
ಇಂದನೀಲಮಣಿಂ ಪ್ರಕಾಶನ, ಚಿಕ್ಕೋಡಿ. ಮುದ್ರಣ–೨೦೧೮

೬೪. ತಪಕೀರೆ ನೇಮಿನಾಥ (ಸಂ) — **ಅಂತರ್ವಾಣಿ ಸಂಪುಟ–೮**
ಇಂದನೀಲಮಣಿಂ ಪ್ರಕಾಶನ, ಚಿಕ್ಕೋಡಿ–೨೦೧೮

೬೫. ತರೀಕೆರೆ ರಹಮತ್ (ಸಂ) — **ಕವಿರಾಜಮಾರ್ಗ ಸಾಂಸ್ಕೃತಿಕ ಮುಖಾಮುಖಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ತೃತೀಯ ಮುದ್ರಣ–೨೦೧೪

೬೬. ತಿಪ್ಪೇರುದ್ರಸ್ವಾಮಿ ಎಚ್. — **ತೌಲನಿಕ ಕಾವ್ಯಮೀಮಾಂಸೆ**
ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು. ಹನ್ನೊಂದನೆಯ ಮುದ್ರಣ–೨೦೧೨

೬೭. ತಿಪ್ಪೇರುದ್ರಸ್ವಾಮಿ ಎಚ್. — **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**
ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು. ಹತ್ತನೆಯ ಮುದ್ರಣ–೨೦೧೦

೬೮. ತಿಮ್ಮಣ್ಣಾಚಾರ ಜಿ. ಕೆ. — **ಅಮರಕೋಶ**
ಜಿ. ಕೆ. ತಿಮ್ಮಣ್ಣಾಚಾರ, ಬೆಂಗಳೂರು. ಮುದ್ರಣ–೧೯೫೩

೬೯. ತುಕೋಳ್ ಟಿ. ಕೆ. (ಮೂಲ), ಪದ್ಮಪ್ರಸಾದ್ ಎಸ್. ಪಿ. (ಅನು) — **ಜೈನಧರ್ಮಕ್ಕೊಂದು ಕೈಪಿಡಿ**
ಜಸ್ಟೀಸ್ ಟಿ. ಕೆ. ತುಕೋಳ್ ಎಜುಕೇಶನಲ್ ಆಂಡ್ ಚಾರಿಟೇಬಲ್ ಟ್ರಸ್ಟ್. ಮೊದಲ ಮುದ್ರಣ–೨೦೧೨

೭೦. ದಾಮೋದರಶೆಟ್ಟಿ ನಾ. — **ಮುದ್ರಣನ ಶಬ್ದಪ್ರತಿಭೆ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಮುದ್ರಣ–೨೦೦೪

೭೧. ದಿಬ್ಬದ ಶಾಂತಿನಾಥ — **ಮಹಾಕವಿ ಪಂಪ ಮತ್ತು ಅವನ ಕೃತಿಗಳು**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಮುದ್ರಣ–೨೦೧೭

೭೨. ದೇಜಗೌ — **ಪೂರ್ವ ಕವಿಗಳಿಗೆ ನಮನ**
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಮೊದಲ ಮುದ್ರಣ – ೨೦೦೬

೭೩. ದೇವಕುಮಾರ ಶಾಸ್ತ್ರಿ ಎಸ್. ಬಿ. — **ಆಚಾರ್ಯ ಸಿದ್ಧಸೇನ ವಿರಚಿತ ಸಮ್ಮಇ ಸುತ್ತಂ**
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ, ಧವಲತೀರ್ಥಂ, ಶ್ರವಣಬೆಳಗೊಳ
ಮೊದಲ ಮುದ್ರಣ–೨೦೦೬

೭೪. ದೇವರಕೊಂಡಾರೆಡ್ಡಿ — **ಶ್ರವಣಬೆಳಗೊಳದ ಬಸದಿಗಳ ವಾಸ್ತುಶಿಲ್ಪ**
ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ.
ಮೊದಲ ಮುದ್ರಣ–೧೯೯೩

೭೫. ದೇವೀರಪ್ಪ ಎಚ್. — **ಹಂಪೆಯ ಹರಿಹರ ವಿರಚಿತ ಬಸವರಾಜ ದೇವರ ರಗಳೆ**
ಬಸವ ಸಮಿತಿ, ಬೆಂಗಳೂರು
ಮೂರನೆಯ ಮುದ್ರಣ–೨೦೦೩

೭೬. ದೇವುಡು — **ಕರ್ನಾಟಕ ಸಂಸ್ಕೃತಿ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಪರಿಷತ್ತಿನ ಮುದ್ರಣ–೨೦೧೫

೭೭. ದೌಲತರಾಮರು ಪಂ. (ಮೂಲ) ಶ್ರೀಮತಿ ಧವಲಶ್ರೀ ಅ. ಪಾಟೀಲ, — **ಶ್ರೀ ರವಿಷೇಣಾಚಾರ್ಯದೇವ ವಿರಚಿತ ಪದ್ಮಪುರಾಣ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್, ಬೆಂಗಳೂರು. ಮೊದಲ ಆವೃತ್ತಿ–೨೦೧೬

೭೮. ನಂದಿಮಠ ಎಸ್. ಸಿ. — **ಕನ್ನಡ ನಾಡಿನ ಚರಿತ್ರೆ** ಭಾಗ– ಎರಡು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮುದ್ರಣ – ೨೦೧೫

೭೯. ನಂಜುಡ ಶಾಸ್ತ್ರಿ ಕಡಬದ — **ಕುಸುಮಾವಳೀ ಕಾವ್ಯಂ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಮುದ್ರಣ–೨೦೦೫

೮೦. ನಂಜಣ್ಣವರ ಎಸ್. ಎಸ್., ನರೇಗಲ್ಲ ಎಸ್. ಎಸ್. — **ಉಲ್ಕೆಗಳು ಮತ್ತು ಧೂಮಕೇತುಗಳು**
ಸಮಾಜ ಪುಸ್ತಕಾಲಯ, ಧಾರವಾಡ. ಮುದ್ರಣ–೧೯೯೪

೮೧. ನರಸಿಂಹಯ್ಯ ಎಚ್. — **ಮೂಢನಂಬಿಕೆಗಳು ಮತ್ತು ವೈಜ್ಞಾನಿಕ ಮನೋಭಾವ**
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.
ಹದಿನಾಲ್ಕನೆಯ ಮುದ್ರಣ–೨೦೧೬

೮೨. ನರಸಿಂಹಾಚಾರ್ಯ ಆರ್. — **ಕರ್ಣಾಟಕ ಕವಿಚರಿತೆ ಪ್ರಥಮ ಸಂಪುಟ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮುದ್ರಣ–೨೦೧೫

೮೩. ನರಸಿಂಹಾಚಾರ್ಯ ಆರ್. — **ಕರ್ಣಾಟಕ ಕವಿಚರಿತೆ ದ್ವಿತೀಯ ಸಂಪುಟ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮುದ್ರಣ–೨೦೧೬

೮೪. ನರಸಿಂಹಾಚಾರ್ಯ ಆರ್. — **ಕರ್ಣಾಟಕ ಕವಿಚರಿತೆ ತೃತೀಯ ಸಂಪುಟ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮುದ್ರಣ–೨೦೧೭

೮೫. ನರಸಿಂಹಾಚಾರ್ ಎಸ್. ಜಿ. (ಸಂ) **ಪಂಪಕವಿ ವಿರಚಿತಂ ಆದಿಪುರಾಣಂ**
Published Under the Authority of the Government of His Highness the Maharaja of Mysore. Edition-1900

೮೬. ನಾಗಯ್ಯ ಜೆ. ಎಂ. **ಆತ್ಮಬಲಿದಾನ, ವಿಜಯ ವಿಕ್ರಮ ಪ್ರಕಾಶನ**
ಹುಬ್ಬಳ್ಳಿ ಪ್ರಥಮ ಮುದ್ರಣ–೨೦೧೭

೮೭. ನಾಗಯ್ಯ ಜೆ. ಎಂ. **ಸಾಂಪಥ ಸಂಪುಟ–೦೨**
ರಾಜ ಪ್ರಕಾಶನ, ಮೈಸೂರು
ಮೊದಲನೆಯ ಮುದ್ರಣ–೨೦೧೩

೮೮. ನಾಗಯ್ಯ ಜೆ. ಎಂ. **ಪ್ರಾಚೀನ ಕರ್ನಾಟಕದ ಜೀವನ ಮೌಲ್ಯಗಳು**
ವಿಜಯ ವಿಕ್ರಮ ಪ್ರಕಾಶನ ಹುಬ್ಬಳ್ಳಿ,
ಮೊದಲ ಮುದ್ರಣ – ೨೦೧೪

೮೯. ನಾಗರಾಜಯ್ಯ ಹಂಪ **ಎರಡು ಶಾಂತಿಪುರಾಣ ಕಾವ್ಯಗಳ ಸಂಗ್ರಹ**
ಶ್ರೀ ರತ್ನತ್ರಯ ಜಿನಮಂದಿರ, ಶ್ರೀ ಶಾಂತಿ ತೀರ್ಥಂಕರ ಪಂಚಕಲ್ಯಾಣ ಸ್ವಾಗತ ಸಮಿತಿ ಶ್ರೀ ಜೈನಮಠ, ಶ್ರವಣಬೆಳಗೊಳ. ಪ್ರಥಮ ಮುದ್ರಣ–೨೦೧೧

೯೦. ನಾಗರಾಜಯ್ಯ ಹಂಪ **ಭೂಮಿಕಾ ಸಂಪುಟ–೦೧**
ಸಪ್ನ ಬುಕ್ ಹೌಸ್, ಬೆಂಗಳೂರು. ಮುದ್ರಣ–೨೦೧೨

೯೧. ನಾಗರಾಜಯ್ಯ ಹಂಪ **ಬಿತ್ತರ**
ಸಪ್ನ ಬುಕ್ ಹೌಸ್, ಬೆಂಗಳೂರು. ಮುದ್ರಣ–೨೦೧೦

೯೨. ನಾಗರಾಜಯ್ಯ ಹಂಪ **ಮೂಲ ಚೂಲ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
ಮುದ್ರಣ–೨೦೦೬

೯೩. ನಾಗರಾಜಯ್ಯ ಹಂಪ **ಕಮ್ಮಟದ ಕಿಡಿಗಳು**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಪರಿಷತ್ತಿನ ಮುದ್ರಣ–೨೦೧೪

೯೪. ನಾಗರಾಜಯ್ಯ ಹಂಪ, ಕೃಷ್ಣಮೂರ್ತಿರಾವ್ ಕೆ. ಎನ್. (ಸಂ) **ಭಾಸ್ಕರ ಕವಿಯ ಜೀವಂಧರ ಚರಿತೆ ಕಾವ್ಯಸಂಗ್ರಹ**
ಸಮಾಜ ಪುಸ್ತಕಾಲಯ, ಧಾರವಾಡ.
ಪ್ರಥಮ ಮುದ್ರಣ–೧೯೭೦

೯೫. ನಾಗರಾಜ್ ಡಿ. ಆರ್. **ಸಾಹಿತ್ಯ ಕಥನ**
ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ
ಮೂರನೆಯ ಮುದ್ರಣ – ೨೦೧೪

೯೬. ನಾಗರಾಜ್ ಡಿ. ಆರ್. **ಶಕ್ತಿ ಶಾರದೆಯ ಮೇಳ**
ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ),
ಆರನೆಯ ಮುದ್ರಣ – ೨೦೧೫

೯೭. ನಾಯಕ ರಾಜೇಂದ್ರ (ಸಂ) **ವಿದ್ಯಾರ್ಥಿ ಭಾರತಿ ಸಂಪುಟ–೨೨ ಸಂಚಿಕೆ–೧**
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ ಮುದ್ರಣ–೨೦೧೧

೯೮. ನಾಯಕ ಹಾ. ಮಾ. **ಶಾಸ್ತ್ರ ಸಾಹಿತ್ಯ ನಿರ್ಮಾಣ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು. ಮೊದಲ ಮುದ್ರಣ–೧೯೭೫

೯೯. ನಾರಾಯಣ ಪಿ. ವಿ. **ನಯಸೇನನ ಧರ್ಮಾಮೃತ (ಗದ್ಯಕಥನ)**
ಕಾಮಧೇನು ಪುಸ್ತಕ ಭವನ, ಬೆಂಗಳೂರು
ಮೊದಲ ಮುದ್ರಣ–೨೦೧೩

೧೦೦. ನಾರಾಯಣ ಪಿ. ವಿ. **ಹಳಗನ್ನಡ ಪದಸಂಪದ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮೂರನೇ ಮುದ್ರಣ – ೨೦೧೩

೧೦೧. ನಾರಾಯಣ ಕೆ. ವಿ. **ಶೈಲಿಶಾಸ್ತ್ರ**
ಅಭಿನವ ಪ್ರಕಾಶನ, ಬೆಂಗಳೂರು
ಮೂರನೆಯ ಮುದ್ರಣ – ೨೦೧೭

೧೦೨. ನುಗಡೋಣಿ ಅಮರೇಶ **ಕನ್ನಡ ಸಂಶೋಧನೆಯ ವೈಧಾನಿಕತೆಗಳು**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಎರಡನೆಯ ಮುದ್ರಣ–೨೦೧೧

೧೦೩. ನಿಂಗಣ್ಣ ಚಿ. ಸಿ. (ಸಂ) **ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ**
ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ.
ಎರಡನೆಯ ಮುದ್ರಣ–೨೦೧೦

೧೦೪. ಪಂ. ಮ. ಪ್ರ. ಪೂಜಾರ **ಕೆಲವು ಕನ್ನಡ ವ್ಯಾಕರಣ ವಿಚಾರಗಳು**
ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ ಮುದ್ರಣ–೧೯೭೨

೧೦೫. ಪಂಚಮುಖಿ ಆರ್. ಎಸ್. **ಈಶ್ವರಕವಿ ವಿರಚಿತ ಕವಿಜಿಹ್ವಾಬಂಧನಂ**
ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡ
ಮುದ್ರಣ–೧೯೫೦

೧೦೬. ಪಂಡಿತ ಪ್ರವರ ಶ್ರೀ ಜಯಚಂದ ಛಾಬಡಾ (ರಾಜ.) ಶ್ರೀ. ಎಂ. ಬಿ. ಪಾಟೀಲ (ಅನು) **ಅಷ್ಟಪಾಹುಡಾ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು. ಎರಡನೆಯ ಆವೃತ್ತಿ–೨೦೧೦

೧೦೭. ಪಂಡಿತ ಸದಾಸುಖದಾಸಜೀ ಕಾಸಲೀವಾಲ (ಮೂಲ) ಶ್ರೀ. ಎಂ. ಬಿ. ಪಾಟೀಲ (ಸಂ) **ಶ್ರೀ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡ ಶ್ರಾವಕಾಚಾರ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು ನಾಲ್ಕನೆಯ ಆವೃತ್ತಿ–೨೦೧೬

೧೦೮. ಪದ್ಮಪ್ರಸಾದ್ ಎಸ್. ಪಿ. **ಜೈನ ವಾಸ್ತು ಮತ್ತು ಶಿಲ್ಪ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಮೊದಲ ಮುದ್ರಣ–೨೦೧೭

೧೦೯. ಪದ್ಮಾವತಮ್ಮ (ಸಂ) **ಶ್ರೀ ಮಹಾವೀರಾಚಾರ್ಯ ವಿರಚಿತ ಗಣಿತಸಾರಸಂಗ್ರಹ**
ಶ್ರೀ ಸಿದ್ಧಾಂತಕೀರ್ತಿ ಗ್ರಂಥಮಾಲೆ, ಶ್ರೀ ಹೊಂಬುಜ ಜೈನ
ಮಠ, ಹೊಂಬುಜ. ಮುದ್ರಣ–೨೦೦೦

೧೧೦. ಪರಾಗ ಅ. **ಚಾಣಕ್ಯನೀತಿ ದರ್ಪಣ**
ಸಮಾಜ ಪುಸ್ತಕಾಲಯ, ಧಾರವಾಡ.
ದ್ವಿತೀಯ ಮುದ್ರಣ–೨೦೧೨

೧೧೧. ಪರಿಮಲ್ಲಜಿ ಸ್ವ. ಪಂ. (ಮೂಲ) ಶ್ರೀಮತಿ ಪಾಟೀಲ ಧವಲಶ್ರೀ ಅ. **ಶ್ರೀಕೋಟಿಭಟರಾಜ ಶ್ರೀಪಾಲ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು. ಎರಡನೆಯ ಆವೃತ್ತಿ–೨೦೧೬

೧೧೨. ಪಾಟೀಲ ಎಂ. ಬಿ. **ಇಷ್ಟೋಪದೇಶ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು. ಎರಡನೆಯ ಆವೃತ್ತಿ–೨೦೧೫

೧೧೩. ಪಾಟೀಲ ಎಂ. ಬಿ. **ಮೃಗಜಲ**
ದಿಗಂಬರ ಜೈನ ಟ್ರಸ್ಟ್ ಆಧ್ಯಾತ್ಮ ಪ್ರಕಾಶನ, ಬೆಂಗಳೂರು
ಎಡನೆಯ ಆವೃತ್ತಿ–೨೦೦೮

೧೧೪. ಪಾಟೀಲ ಎಂ. ಬಿ. — **ಧರ್ಮದೀಪಕ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು. ಪ್ರಥಮ ಮುದ್ರಣ–೨೦೦೧

೧೧೫. ಪಾಟೀಲ ಎಂ. ಬಿ. — **ಶ್ರೀಮದ್ ಭಗವತ್ಕುಂದಕುಂದಾಚಾರ್ಯ ವಿರಚಿತ ಪಂಚ ಪರಮಾಗಮ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು ಪ್ರಥಮ ಮುದ್ರಣ–೧೯೯೯

೧೧೬. ಪಾಟೀಲ ಎಂ. ಬಿ. — **ಸಮ್ಯಕ್ತ್ವ ಸೌರಭ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು. ಐದನೆಯ ಮುದ್ರಣ–೨೦೦೯

೧೧೭. ಪಾಟೀಲ ಎಂ. ಬಿ. — **ಅಕೃತನಿಂದ ಅಹಮಿಂದ್ರ**
ದಿಗಂಬರ ಜೈನ ಟ್ರಸ್ಟ್ ಆಧ್ಯಾತ್ಮ ಪ್ರಕಾಶನ, ಬೆಂಗಳೂರು
ಐದನೆಯ ಆವೃತ್ತಿ–೨೦೧೩

೧೧೮. ಪಾಟೀಲ ಎಂ. ಬಿ. (ಅನು) — **ದ್ವಿಪಂಚ ಪರಮಾಗಮಾಮೃತ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು ಮೊದಲನೆಯ ಆವೃತ್ತಿ–೨೦೧೬

೧೧೯. ಪಾಟೀಲ ಧವಲಶ್ರೀ ಅಣ್ಣಾಸಾಹೇಬ — **ಶ್ರೀ ಸಮಯಸಾರಾಂತರ್ಗತ ದೃಷ್ಟಾಂತ ವೈಭವ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು ಪ್ರಥಮ ಮುದ್ರಣ–೨೦೧೩

೧೨೦. ಪಾಟೀಲ ಧವಲಶ್ರೀ ಅಣ್ಣಾಸಾಹೇಬ — **ಮಹಾಕವಿ ರತ್ನಾಕರ ವಿರಚಿತ ಶತಕದ್ವಯ**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್,
ಬೆಂಗಳೂರು ಪ್ರಥಮ ಮುದ್ರಣ–೨೦೧೪

೧೨೧. ಪಾಟೀಲ ಸಿ. ಡಿ. — **ಒಂದೊಂದು ಸಸ್ಯದ ಒಂದೊಂದು ಬದುಕು**
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.
ನಾಲ್ಕನೆಯ ಮುದ್ರಣ–೨೦೧೩

೧೨೨. ಪುಟ್ಟನಗೌಡರು ಕೊಳಂಬೆ — **ಅಚ್ಚಗನ್ನಡ ನುಡಿಕೋಶ**
ಪುಸ್ತಕ ಪ್ರಕಾಶನ, ಮೈಸೂರು.
ನಾಲ್ಕನೆಯ ಮುದ್ರಣ–೨೦೧೧

೧೨೩. ಪುಲಜಗೌಡ ಜಲತ್ಕುಮಾರ (ಅನು) — **ಪ್ರಾಕೃತಭಾಷೆಯ ಸಂಕ್ಷಿಪ್ತ ಸ್ವರೂಪ**
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ
ಸಂಸ್ಥೆ, ಶ್ರವಣಬೆಳಗೊಳ. ಮುದ್ರಣ–೨೦೦೬

೧೨೪. ಪೂಜ್ಯ ಶ್ರೀ ಮುಇನಿ ಸಮದರ್ಶಿ ಪ್ರಭಾಕರ (ಮೂಲ) ಡಾ. ಎಂ. ಎ. ಜಯಚಂದ್ರ (ಅನು) — **ಅರ್ಧಮಾಗಧಿ ಆಗಮ ಸಾಹಿತ್ಯ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮೊದಲ ಮುದ್ರಣ–೨೦೧೬

೧೨೫. ಪೂಜಾರ ಮ. ಪ್ರ. — **ಜೈನಧರ್ಮ ಪರಿಭಾಷೆ**
ಕೆ. ಬಿ. ಅಂಕಲಗಿ, ಧಾರವಾಡ.
ಮುದ್ರಣ–೧೯೩೦

೧೨೬. ಪ್ರೇಮಕುಮಾರಿ ಎಸ್. ಡಿ. — **ಉದಯಚಂದ್ರ ವಿರಚಿತ ಸುಗಂಧ ದಶಮೀ ಕಥಾ**
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ
ಸಂಸ್ಥೆ, ಶ್ರೀ ಧವಲತೀರ್ಥಂ, ಶ್ರವಣಬೆಳಗೊಳ
ಪ್ರಥಮ ಆವೃತ್ತಿ–೨೦೦೪

೧೨೭. ಬಷೀರ್ ಅಬ್ದುಲ್ ಜಿ. — **ಶಬ್ದಮಣಿದರ್ಪಣ ದೀಪಿಕೆ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮.
೨ನೆಯ ಮುದ್ರಣ–೧೯೯೯

೧೨೮. ಬಸವಾರಾಧ್ಯ ಎನ್. — **ಪರ್ವತೇಶ್ವರ ವಿರಚಿತ ಚತುರಾಚಾರ್ಯ ಚಾರಿತ್ರ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು. ಪ್ರಥಮ ಮುದ್ರಣ–೧೯೮೬

೧೨೯. ಬಸವಾರಾಧ್ಯ ಎನ್. (ಸಂ) — **ಬಾಹುಬಲಿ ಪಂಡಿತ ವಿರಚಿತ ಧರ್ಮನಾಥ ಪುರಾಣಂ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು. ಪ್ರಥಮ ಮುದ್ರಣ–೧೯೭೫

೧೩೦. ಬಾಲಕೃಷ್ಣನ್ ವೆಂಗನೂರು — **ತಾಳೆಯೋಲೆ**
ಅಡ್ಡೋಣೆ ಪಬ್ಲಿಕೇಶಿಂಗ್ ಗ್ರೂಪ್,
ತಿರುನಂತಪುರಂ. ಮುದ್ರಣ–೨೦೧೬

೧೩೧. ಬಾಶಮ್ ಎ. ಎಲ್. (ಮೂಲ)
ಮಿರ್ಜಿ ಡಿ. ಆರ್. (ಅನು) — **ಪ್ರಾಚೀನ ಭಾರತವೆಂಬ ಅದ್ಭುತ**
ಐಬಿಎಚ್ ಪ್ರಕ್ಶಾಶನ, ಬೆಂಗಳೂರು.
ಎರಡನೆಯ ಮುದ್ರಣ–೨೦೧೪

೧೩೨. ಬೀಳಗಿ ಎಚ್. ಎಂ — **ಪ್ರತಿಫಲನ**
ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ,
ಧಾರವಾಡ. ಪಂಚಮ ಮುದ್ರಣ–೨೦೦೭

೧೩೩. ಬ್ರಹ್ಮಪ್ಪ ಜಿ. — **ರತ್ನಾಕರನ ಶತಕ ಸಾಹಿತ್ಯ**
ರತ್ನತ್ರಯ ಪ್ರಕಾಶನ, ಮೈಸೂರು.
ದ್ವಿತೀಯ ಮುದ್ರಣ–೨೦೦೬

೧೩೪. ಭಟ್ಟ ಮರಿಯಪ್ಪ ಎಂ.,
ಗೋವಿಂದರಾವ ಎಂ. (ಸಂ) — **ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣಂ**
ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್.
ಮೊದಲ ಮುದ್ರಣ–೧೯೫೪

೧೩೫. ಭಟ್ಟ ಲಕ್ಷ್ಮೀನಾರಾಯಣ ಎನ್. ಎಸ್. — **ಸಾಹಿತ್ಯರತ್ನ ಸಂಪುಟ**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಮೊದಲ ಮುದ್ರಣ–೨೦೦೪

೧೩೬. ಭಾನುಮತಿ ವೈ. ಸಿ. (ಸಂ) — **ಪಂಚಬಾಣ ವಿರಚಿತ ಭುಜಬಲಿ ಚರಿತೆ**
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ವಿಶ್ವವಿದ್ಯಾಲಯ, ಮೈಸೂರು.
ಮೊದಲ ಮುದ್ರಣ–೨೦೧೧

೧೩೭. ಭಾವಿ ಭರಮಪ್ಪಾ (ಸಂ) — **ಅಂತರ್ವಾಣಿ ಸಂಪುಟ–೨**
ಇಂದಣೀಲಮಣಿಂ ಪ್ರಕಾಶನ, ಚಿಕ್ಕೋಡಿ
ಮುದ್ರಣ–೨೦೧೮

೧೩೮. ಭಾವಿ ಭರಮಪ್ಪಾ (ಪ್ರ.ಸಂ) — **ಅಂತರ್ವಾಣಿ ಸಂಪುಟ–೫**
ಇಂದಣೀಲಮಣಿಂ ಪ್ರಕಾಶನ,
ಚಿಕ್ಕೋಡಿ ಮುದ್ರಣ–೨೦೧೯

೧೩೯. ಭಾವಿ ಭರಮಪ್ಪಾ ಎನ್. — **ಶ್ರೀಗಂಧ**
ಇಂದಣೀಲಮಣಿಂ ಪ್ರಕಾಶನ, ಚಿಕ್ಕೋಡಿ
ಮೊದಲ ಮುದ್ರಣ–೨೦೧೮

೧೪೦. ಭೂಮಿಗೌಡ ಸಬಿಹಾ (ಸಂ.) — **ಕನ್ನಡ ಸಾಹಿತ್ಯ ಮೀಮಾಂಸೆ**
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
ಮೊದಲ ಮುದ್ರಣ – ೨೦೦೭

೧೪೧. ಮಂಜಪ್ಪಶೆಟ್ಟಿ ಎಂ. ಪಿ. (ಸಂ) — **ಕಿತ್ತನಕೆರೆ ವೀರ ವಿರಚಿತ ಎಲ್ಲಾ ಪುರಾತನರ ಪುರಾಣ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು. ಮೊದಲ ಮುದ್ರಣ–೧೯೮೫

೧೪೨. ಮಂಜುನಾಥನ್ ಜಿ. ಜಿ. (ಸಂ) **ಜನವಶ್ಯ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪ್ರಥಮ ಮುದ್ರಣ–೧೯೭೪

೧೪೩. ಮಂಜುನಾಥನ್ ಜಿ. ಜಿ. (ಸಂ) **ನಾಗವ ವಿರಚಿತ ಮಾಣಿಕ ಸ್ವಾಮಿ ಚರಿತ್ರೆ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮೊದಲ ಮುದ್ರಣ–೧೯೮೨

೧೪೪. ಮಂಜುನಾಥನ್ ಜಿ. ಜಿ. (ಸಂ) **ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪ್ರಥಮ ಮುದ್ರಣ–೧೯೮೭

೧೪೫. ಮಧುಸೂದನ ಡಿ. ಪಿ. **ವೈದ್ಯಶಾಸ್ತ್ರದೀಪಿಕಾ**
ಓರಿಯಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು. ಮೊದಲ ಮುದ್ರಣ–೨೦೦೩

೧೪೬. ಮಲ್ಲಾಪುರ ಬಿ. ವ್ಹಿ. **ಅಲಂಕಾರ ಶಾಸ್ತ್ರಕಾರರು ಒಂದು ಸಮೀಕ್ಷೆ**
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪ್ರಥಮ ಮುದ್ರಣ–೨೦೦೦

೧೪೭. ಮಹೀಶವಾಡಿ ಬಿ. ಬಿ. (ಸಂ) **ಕವಿ ನೇಮಿವ್ರತಿ ವಿರಚಿತ ಸುವಿಚಾರ ಚರಿತೆ**
ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಮುದ್ರಣ–೧೯೮೨

೧೪೮. ಮಹೀಶವಾಡಿ ಭುಜೇಂದ್ರ ಬಿ. **ದಶಭಕ್ತಿ**
ಶಾಂತಿ ಸೇವಾಸದನ, ಸೇಡಬಾಳ ಮೊದಲ ಮುದ್ರಣ–೧೯೪೭

೧೪೯. ಮಹೀಶವಾಡಿ ಬಿ. ಬಿ. **ಕನ್ನಡ ಜೈನ ವಾಙ್ಮಯ ವಿಚಾರ**
ಅಜಿತ ಅಣ್ಣಾರಾಯ ಮಿರ್ಜಿ, ಚಂದ್ರಗಂಗಾ ಜ್ಞಾನಪೀಠ, ಶೇಷಬಾಳ. ಪ್ರಥಮ ಮುದ್ರಣ–೧೯೭೭

೧೫೦. ಮಹೀಶವಾಡಿ ಬಿ. ಬಿ. (ಸಂ) **ಕವಿ ಮಂಗರಸ ವಿರಚಿತ ನೇಮಿಜಿನೇಶ ಸಂಗತಿ**
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಮೊದಲ ಮುದ್ರಣ–೧೯೭೯

ಮಹೀಶವಾಡಿ ಬಿ. ಬಿ., ಪಾಟೀಲ ಎಸ್. ಪಿ. (ಸಂ) **ನಯಸೇನ ವಿರಚಿತ ಧರ್ಮಾಮೃತ**
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಮೊದಲ ಮುದ್ರಣ–೧೯೮೪

೧೫೧. ಮಾಲಗತ್ತಿ ಧರಣೀದೇವಿ **ಇಳಾಭಾರತಂ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪ್ರಥಮ ಮುದ್ರಣ–೨೦೧೩

೧೫೨. ಮುಗಳಿ ಜಗದೀಶ (ಸಂ) **ಅಂತರ್ವಾಣಿ ಸಂಪುಟ–೩**
ಇಂದನೀಲಮಣಿಂ ಪ್ರಕಾಶನ, ಚಿಕ್ಕೋಡಿ ಮುದ್ರಣ–೨೦೧೮

೧೫೩. ಮುಗಳಿ ರಂ. ಶ್ರೀ. **ಕನ್ನಡ ಸಾಹಿತ್ಯ ಚರಿತ್ರೆ**
ಗೀತಾ ಬುಕ್ ಹೌಸ್, ಮೈಸೂರು ಹದಿನೆಂಟನೆಯ ಮುದ್ರಣ – ೨೦೧೦

೧೫೪. ಮುಗಳಿ ರಂ. ಶ್ರೀ. **ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪರಿಷತ್ತಿನ ಮುದ್ರಣ–೨೦೧೫

೧೫೫. ಮುಳಗುಂದ ಚ. ವಿ., ಹೆಗಡೆ ಜಿ. ಎಂ. (ಸಂ) **ಸುವರ್ಣ ಕರ್ನಾಟಕ ಸಮಾಜ ಮತ್ತು ಸಂಸ್ಕೃತಿ**
ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ. ಮೊದಲ ಮುದ್ರಣ–೨೦೦೬

೧೫೬. ಮೋತಕಪಳ್ಳಿ ಶಿವಶರಣಪ್ಪ **ಕನ್ನಡ ಸಾಹಿತ್ಯ ಸಂಜೀವಿನಿ**
ಮೋತಕಪಳ್ಳಿ ಪ್ರಕಾಶನ, ಗುಲ್ಬರ್ಗಾ
ಮುದ್ರಣ–೨೦೧೬

೧೫೭. ಯಜುರ್ವೇದಿ ಕೃಷ್ಣ **ಜನಪದ ವೈದ್ಯ**
ಜನಪದ ಪ್ರಕಾಶನ, ಬೆಂಗಳೂರು. ಮುದ್ರಣ–೨೦೦೧

೧೫೮. ರಂಗಸ್ವಾಮಿ ಎ. **ಪ್ರಾಚೀನ ಲೌಕಿಕ ಶಾಸ್ತ್ರ ಗ್ರಂಥಗಳು**
ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ
ಗಂಗೋತ್ರಿ, ಮೈಸೂರು.
ಮೊದಲ ಮುದ್ರಣ–೨೦೧೦

೧೫೯. ರಮಾ ರಾಮನ್ **ಖಗೋಳ ಕಲ್ಪನೆಗಳು ಸಾಗಿ ಬಂದ ಹಾದಿ**
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.
ಮೊದಲ ಮುದ್ರಣ–೨೦೧೨

೧೬೦. ರವೀಂದ್ರನಾಥ ಕೆ. **ಜೈನ ಟೀಕಾಸಾಹಿತ್ಯ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮೊದಲ ಮುದ್ರಣ–೨೦೧೦

೧೬೧. ರಾಠೋಡ ಪಂಡಿತ ಕೆ. **ಪೊನ್ನ ಮತ್ತು ಅವನ ಕೃತಿಗಳು**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಮುದ್ರಣ–೨೦೧೭

೧೬೨. ರಾಮಕೃಷ್ಣ ಜಿ. **ಭಾರತೀಯ ವಿಜ್ಞಾನದ ಹಾದಿ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಮುದ್ರಣ–೨೦೦೬

೧೬೩. ರಾಮಕೃಷ್ಣಯ್ಯ ಪ. **ಆಯುರ್ವೇದಸಾರ ದ್ವಿತೀಯ ಭಾಗ**
ಪ. ರಾಮಕೃಷ್ಣಯ್ಯ, ಮಂಗಳೂರು.
ಮೊದಲ ಮುದ್ರಣ–೧೯೩೩

೧೬೪. ಲಕ್ಷ್ಮಣರಾವ್ ಜಿ. ಆರ್. **ಆಕಸ್ಮಿಕ ಆವಿಷ್ಕಾರ**
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.
ನಾಲ್ಕನೆಯ ಆವೃತ್ತಿ–೨೦೧೦

೧೬೫. ಲಗಾರೆ ಶಾಂತಿನಾಥ ತವನಪ್ಪ **ಸಂತನ ಆತ್ಮಸಂಗೀತ**
ಪದ್ಮಜಿತ ಪ್ರಕಾಶನ, ಬೋರಗಾಂವ, ಬೆಳಗಾವಿ ಜಿಲ್ಲೆ.
ಹನ್ನೊಂದನೆಯ ಮುದ್ರಣ–೨೦೧೦

೧೬೬. ಲೀಲಾ ಎನ್. ಎಸ್. **ಜೀವಜಗತ್ತಿನ ಕೌತುಕಗಳು**
ನವಕರ್ನಾಟಕ ಪ್ರಕಾಶನ, ಬೆಂಗಳೂರು
ಮೊದಲ ಮುದ್ರಣ–೨೦೦೫

೧೬೭. ವಂಶಾಕೃತಮಠ ವಿಶ್ವನಾಥ (ಪ್ರ.ಸಂ) ಲೋಕಾಪೂರ ಬಾಳಾಸಾಹೇಬ (ಸಂ) **ತ್ರೈಲೋಕ್ಯ**
ಚಾಲುಕ್ಯ ಉತ್ಸವ ಸಮಿತಿ, ಜಿಲ್ಲಾಡಳಿತ ಭವನ,
ನವನಗರ, ಬಾಗಲಕೋಟ. ಮುದ್ರಣ–೨೦೧೩

೧೬೮. ವಸಂತರಾಜ್ ಎಂ. ಡಿ. **ದಿಗಂಬರ ಜೈನ ಆಗಮ ಕೃತಿಗಳ ಭಾಷೆ**
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ
ಸಂಸ್ಥೆ, ಶ್ರವಣಬೆಳಗೊಳ ಮುದ್ರಣ–೧೯೯೬

೧೬೯. ವಸಂತರಾವ್ ಎಂ. ಡಿ. **ಜೈನಾಗಮ ಇತಿಹಾಸ ದೀಪಿಕೆ**
ವ. ರ. ಪ್ರಕಾಶನ, ನವಿಲು ಬೀದಿ,
ಕುವೆಂಪು ನಗರ, ಮೈಸೂರು,
ಮುದ್ರಣ–೧೯೯೭

೧೭೦. ವಾಮನ ಕಾಣೆ ಪಾಂಡುರಂಗ (ಮೂಲ) ರಾಮಚಂದ್ರರಾವ್ ಎಸ್. ಕೆ.
ಧರ್ಮಶಾಸ್ತ್ರದ ಇತಿಹಾಸ ಸಂಪುಟ–೧ ಭಾಗ–೧
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಎರಡನೆಯ ಮುದ್ರಣ–೨೦೧೨

೧೭೧. ವಾಮನ ಕಾಣೆ ಪಾಂಡುರಂಗ (ಮೂಲ) ರಾಮಚಂದ್ರರಾವ್ ಎಸ್. ಕೆ.
ಧರ್ಮಶಾಸ್ತ್ರದ ಇತಿಹಾಸ ಸಂಪುಟ–೧ ಭಾಗ–೨
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಎರಡನೆಯ ಮುದ್ರಣ–೨೦೧೨

೧೭೨. ವಾಮನ ಕಾಣೆ ಪಾಂಡುರಂಗ (ಮೂಲ) ರಾಮಚಂದ್ರರಾವ್ ಎಸ್. ಕೆ.
ಧರ್ಮಶಾಸ್ತ್ರದ ಇತಿಹಾಸ ಸಂಪುಟ–೧ ಭಾಗ–೩
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಮುದ್ರಣ–೨೦೧೨

೧೭೩. ವಾಸನ್ ಟಿ. ಎಸ್.
ಭಾರತೀಯ ಹಸ್ತಸಾಮುದ್ರಿಕ ಶಾಸ್ತ್ರ
ಜನಪದ ಪ್ರಕಾಶನ ಬೆಂಬಳೂರು
ಎರಡನೆಯ ಮುದ್ರಣ–೧೯೯೯

೧೭೪. ವಿಜಯಕುಮಾರ ಸರಸ್ವತಿ, ಪಾಟೀಲ ಎಸ್. ಪಿ. (ಸಂ)
ದಿಗಂಬರ ಶ್ವೇತಾಂಬರ ಪರಂಪರೆಯಲ್ಲಿ ಆದಿಪುರಾಣದ ಪ್ರಸಂಗಗಳು
ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಪ್ರಥಮ ಮುದ್ರಣ–೧೯೯೮

೧೭೫. ವಿಜಯಕುಮಾರ್ ಸರಸ್ವತಿ, ಶ್ರೀಧರ ಬಾ. ವೇ.
ಜೈನ ಪಾರಿಭಾಷಿಕ ಪದವಿವರ ಕೋಶ
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಮೊದಲ ಮುದ್ರಣ–೨೦೦೬

೧೭೬. ವಿದ್ಯಾರತ್ನ ಆರ್. ಎಸ್. ಪಂಚಮುಖಿ
ಕುಮಾರವ್ಯಾಸ ವಿರಚಿತ ಐರಾವತ
ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ.
ಮೊದಲ ಮುದ್ರಣ–೧೯೪೯

೧೭೭. ವೀರಣ್ಣ ಸಿ.
ಕನ್ನಡ ಸಾಹಿತ್ಯ : ಚಾರಿತ್ರಿಕ ಬೆಳವಣಿಗೆ – ೨
ನವಕರ್ನಾಟಕ ಪ್ರಕಾಶನ, ಬೆಂಗಳೂರು
ನಾಲ್ಕನೇ ಮುದ್ರಣ – ೨೦೧೭

೧೭೮. ವಿಶ್ವಕರ್ಮ ಜಿ. ವೈ
ಜ್ಯೋತಿಷ್ಯ ರತ್ನಾಕರ
ಪ್ರಗತಿ ಪಬ್ಲಿಕೇಷನ್ಸ್, ಬೆಂಗಳೂರು. ಮುದ್ರಣ–೨೦೧೬

೧೭೯. ವಿಶ್ವರೂಪಾಚಾರ್ ಎನ್., ಎಂ. ತಾಳಿಕಟ್ಟಿ ಬಿ. ಗಿರೀಶ್
ವೈದ್ಯ ಪದಗಳ ಅರ್ಥವಿವರಣಾ ಕೋಶ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಪ್ರಥಮ ಮುದ್ರಣ–೨೦೧೨

೧೮೦. ವೀರಭದ್ರಪ್ಪ ಬಿ.
ಪಂಪ ಪದ ಪ್ರಪಂಚ
ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು. ಮೊದಲ ಮುದ್ರಣ–೨೦೧೧

೧೮೧. ವೆಂಕಪ್ಪ ಭಟ್ಟ ಕುಳಮರ್ವ
ಜ್ಯೋತಿಷ್ಯ ಮಾರ್ಗದರ್ಶಿ
ಕೈಂತಜೆ ಪ್ರಕಾಶನ, ಪೇರಮುಗೇರು, ದಕ್ಷಿಣಕನ್ನಡ ಜಿಲ್ಲೆ.
ಪ್ರಥಮ ಮುದ್ರಣ–೧೯೯೬

೧೮೨. ವೆಂಕಟಸುಬ್ಬಯ್ಯ ಜಿ.
ಗತಿಪ್ರಜ್ಞೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
ಮೊದಲ ಮುದ್ರಣ–೨೦೧೭

೧೮೩. ವೆಂಕಟಸುಬ್ಬಯ್ಯ, ಗರ್ಗೇಶ್ವರಿ
ಶಾಸ್ತ್ರ ಕುತೂಹಲ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಮೊದಲ ಮುದ್ರಣ–೨೦೦೩

೧೮೪. ವೆಂಕಟಾಚಲ ಶಾಸ್ತ್ರೀ ಟಿ. ವಿ. **ಶಾಸ್ತ್ರೀಯ**
ಸಂಪುಟ ಮೂರು, ಸಪ್ನ ಬುಕ್ ಹೌಸ್, ಬೆಂಗಳೂರು.
ಮೊದಲ ಮುದ್ರಣ – ೧೯೯೯

೧೮೫. ವೆಂಕಟಾಚಲ ಶಾಸ್ತ್ರೀ ಟಿ. ವಿ. **ಕನ್ನಡ ಕವಿಗಳು ಕಂಡ ಗೊಮ್ಮಟೇಶ್ವರ**
ಗೋಮಟೇಶ್ವರ ಭಗವಾನ್ ಬಾಹುಬಲಿ
ಮಹಾಮಸ್ತಕಾಭಿಷೇಕ ಸಮಿತಿ, ಶ್ರವಣಬೆಳಗೊಳ,
ಮೊದಲ ಮುದ್ರಣ–೧೯೯೩

೧೮೬. ವೆಂಕಟಾಚಲ ಶಾಸ್ತ್ರೀ ಟಿ. ವಿ. **ಕನ್ನಡ ಛಂದಸ್ಸು**
ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು.
ಒಂಭತ್ತನೆಯ ಮುದ್ರಣ–೨೦೧೩

೧೮೭. ವೆಂಕಟಾಚಲಶಾಸ್ತ್ರೀ ಟಿ. ವಿ. **ನಮ್ಮ ಕರ್ನಾಟಕ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ನಾಲ್ಕನೆಯ ಮುದ್ರಣ–೨೦೦೯

೧೮೮. ವೆಂಕಟೇಶ ಅಯ್ಯಂಗಾರ್‌ನಂಗಪುರಂ **ಜ್ಯೋತಿರ್ವಿನೋದಿನಿ**
ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.
ಮೊದಲ ಮುದ್ರಣ–೧೯೩೧

೧೮೯. ವೈದ್ಯಭಾನು, ದ. ಕೃ. ಭಾರದ್ವಾಜ್ **ಆಹಾರ ವಿಜ್ಞಾನ, ಪ್ರೇಮ ವಿದ್ಯಾಪೀಠ**
ತುಂಗಭದ್ರಾ, ಎಂ.ಎಸ್.ಎಂ. ರೈಲ್ವೇ.
ಮೊದಲ ಮುದ್ರಣ–೧೯೩೩

೧೯೦. ಶಂಕರ ಎಂ. **ಸಂಸ್ಕೃತಿ ಸಂವಹನ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮೊದಲ ಮುದ್ರಣ–೨೦೧೦

೧೯೧. ಶಂಕರ್ ಪಿ. ಎಸ್. **ವೈದ್ಯ ವಿಜ್ಞಾನಿಗಳು**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
ಮುದ್ರಣ–೨೦೧೧

೧೯೨. ಶಂಕರ್ ಡಿ. ಎ. (ಸಂ) **ಶ್ರೀ ಶುಕಸಪ್ತತಿ**
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು. ಪ್ರಥಮ ಮುದ್ರಣ–೨೦೧೧

೧೯೩. ಶಾಂತಿ ನಾಯಕ **ಜೀವ ಉಳಿಸುವ ಕಳೆಗಳು**
ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.
ಪ್ರಥಮ ಮುದ್ರಣ–೨೦೦೮

೧೯೪. ಶಾನಭಾಗ ಡಿ. ಎನ್. **ಸುಬೋಧ ಸಂಸ್ಕೃತ ವ್ಯಾಕರಣ**
ಭಾರತ ಪ್ರಕಾಶನ, ಧಾರವಾಡ ಮುದ್ರಣ–೧೯೮೦

೧೯೫. ಶಾಮರಾಯ ತ. ಸು. **ಕನ್ನಡ ಸಾಹಿತ್ಯ ಚರಿತ್ರೆ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಎರಡನೆಯ ಮುದ್ರಣ–೨೦೧೨

೧೯೬. ಶಾಸ್ತ್ರಿ ಜಿ. ವಿ. (ಸಂ) **ಸರ್ವಜ್ಞಮೂರ್ತಿ ವಚನಗಳು**
ಪಾರು ಪ್ರಕಾಶನ, ಗದಗ. ಐದನೆಯ ಮುದ್ರಣ–೨೦೦೧

೧೯೭. ಶಾಸ್ತ್ರೀ ರತನಚಂದ ಭಾರಿಲ್ಲ (ಮೂಲ) ಪಾಟೀಲ ಧವಲಶ್ರೀ ಅ. (ಅನು) **ಸಾಮಾನ್ಯ ಶ್ರಾವಕಾಚಾರ**
ಶ್ರೀ ದಿಗಂಬರ ಜೈನ ಟ್ರಸ್ಟ್, ಆಧ್ಯಾತ್ಮ ಪ್ರಕಾಶನ ಸಂಸ್ಥೆ,
ಬೆಂಗಳೂರು. ನಾಲ್ಕನೆಯ ಆವೃತ್ತಿ–೨೦೦೨

೧೯೮. ಶಾಸ್ತ್ರೀ ವರ್ಧಮಾನ ಪಾರ್ಶ್ವನಾಥ **ಆಚಾರ್ಯ ಶ್ರೀ ಉಮಾಸ್ವಾಮಿ ವಿರಚಿತ ಶ್ರಾವಕಾಚಾರ**
ಅಭಿನಂದನ ಪ್ರಕಾಶನ, ವಿಜಾಪುರ
ಎರಡನೆಯ ಮುದ್ರಣ–೨೦೧೦

೧೯೯.	ಶಿರೂರ ಬಿ. ವಿ.	**ರತ್ನಕರಂಡಕದ ಕಥೆಗಳು** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಮೊದಲ ಮುದ್ರಣ–೧೯೯೨
೨೦೦.	ಶಿರೂರ ಬಿ. ವಿ.	**ಸಂಶೋಧನ ಸ್ವರೂಪ** ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ಏಳನೆಯ ಮುದ್ರಣ – ೨೦೧೫
೨೦೧.	ಶಿವಪೂಜಿ ಮಧುಮತಿ ಎಸ್.	**ಶಿಲ್ಪದಲ್ಲಿ ಕಾಮಸೌಂದರ್ಯ** ಕರ್ನಾಟಕ ಇತಿಹಾಸ ಸಂಶೋಧನ ಮಂಡಲ. ಮುದ್ರಣ–೨೦೧೭
೨೦೨.	ಶ್ರೀಕಂಠಶಾಸ್ತ್ರಿ ಎಸ್.	**ಭಾರತೀಯ ಸಂಸ್ಕೃತಿ** ಕಾಮಧೇನು ಪುಸ್ತಕ ಭವನ, ಬೆಂಗಳೂರು ಮುದ್ರಣ–೨೦೧೫
೨೦೩.	ಶ್ರೀಕಂಠಯ್ಯ ಬಿ. ಎಂ. (ಪ್ರ.ಸಂ) ನಂದಿಮಠ ಎಸ್. ಸಿ. (ಲೇ)	**ಕನ್ನಡ ನಾಡಿನ ಚರಿತ್ರೆ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ದ್ವಿತೀಯ ಮುದ್ರಣ–೧೯೫೭
೨೦೪.	ಶ್ರೀಕಂಠಯ್ಯ ತೀ. ನಂ.	**ಭಾರತೀಯ ಕಾವ್ಯಮೀಮಾಂಸೆ** ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು ಹನ್ನೊಂದನೆಯ ಮುದ್ರಣ – ೨೦೧೬
೨೦೫.	ಶ್ರೀಕುಶಲ	**ಪಾಣಿನೀಯ ಸಸ್ವರ ಧಾತುಪಾಠಃ ಕನ್ನಡ ಭಾಷಾಂತರ ಸಹಿತಮ್** ಆರ್ಯಸಮಾಜ, ನೇರಳೆಕಟ್ಟೆ. ಪ್ರಥಮ ಮುದ್ರಣ–೨೦೧೨
೨೦೬.	ಶ್ರೀ ಚಾರುಕೀರ್ತಿ ಸ್ವಾಮೀಜಿ	**ಐತಿಹಾಸಿಕ ಮಹಾಪುರುಷ ಮಹಾವೀರ** ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ. ಮೊದಲ ಮುದ್ರಣ–೧೯೭೬
೨೦೭.	ಶ್ರೀನಿವಾಸಮೂರ್ತಿ ಜಿ., ರಾಮಚಂದ್ರ ಭಟ್ ಎನ್.	**ಶ್ರೀನಿವಾಸಾಚಾರ್ಯ ವಿರಚಿತ ಅಭಿಧಾನ ರತ್ನಮಾಲಾ ಅಥವಾ ಷಡ್ರಸ ನಿಘಂಟು** ಓರಿಯಂಟಲ್ ಸಂಶೋಧನ ಸಂಸ್ಥೆ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್. ಮೊದಲ ಮುದ್ರಣ–೧೯೫೮
೨೦೮.	ಶ್ರೀನಿವಾಸ್ ಅಯ್ಯಂಗಾರ್ ಸಿ. ಎನ್.	**ಗಣಿತ ಶಾಸ್ತ್ರದ ಸ್ವರೂಪ** ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಮುದ್ರಣ–೧೯೪೨
೨೦೯.	ಶ್ರೀಮತಿ ಹರಿಪ್ರಸಾದ್ (ಸಂ)	**ಗಣಿತಲೋಕ ಒಂದು ಇಣುಕು ನೋಟ** ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು. ಎರಡನೆಯ ಮುದ್ರಣ–೨೦೧೬
೨೧೦.	ಶ್ರೀಮದ್ ಎ. ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದ (ಸಂ)	**ಭಗವದ್ಗೀತಾ ಯಥಾರೂಪ** ಭಕ್ತಿವೇದಾಂತ ಬುಕ್ ಟ್ರಸ್ಟ್, ಬೆಂಗಳೂರು ಇಪ್ಪತ್ತೆಂಟನೆಯ ಮುದ್ರಣ–೨೦೦೮
೨೧೧.	ಶೆಟ್ಟರ ಷ.	**ಶ್ರವಣಬೆಳಗೊಳ** ರೂವಾರಿ, ಧಾರವಾಡ ಮುದ್ರಣ–೧೯೮೧
೨೧೨.	ಶೆಟ್ಟಿ ಎಸ್. ಡಿ.	**ನಾಗಚಂದ್ರ ಮತ್ತು ಅವನ ಕೃತಿಗಳು** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಥಮ ಮುದ್ರಣ–೨೦೧೭

೨೧೩.	ಶೇಷಗಿರಿ ಕೆ. ಆರ್. (ಸಂ)	**ಲಕ್ಷ್ಮಕವಿ ವಿರಚಿತ ರುಕ್ಮಾಂಗದ ಚರಿತ್ರೆ** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪ್ರಥಮ ಮುದ್ರಣ–೧೯೭೬
೨೧೪.	ಶೇಷಗಿರಿ ಕೆ. ಆರ್. (ಸಂ)	**ದೇವಚಂದ್ರ ವಿರಚಿತ ಪೂಜ್ಯಪಾದ ಚರಿತೆ** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಮುದ್ರಣ–೧೯೮೮
೨೧೫.	ಶೇಷಗಿರಿರಾವ್ ಡಿ. ವಿ., ವೆಂಕಟೇಶಯ್ಯ ಎಂ. ಜಿ., ಡಾ. ಎಂ. ಮರಿಯಪ್ಪ ಭಟ್ಟ.	**ರನ್ನ** ಐ. ಬಿ. ಎಚ್. ಪ್ರಕಾಶನ, ಬೆಂಗಳೂರು. ಮೊದಲನೆ ಮುದ್ರಣ–೧೯೭೩
೨೧೬.	ಶೈಲೇಶ ಎಂ. ಡಿ.	**ಸಸ್ಯಸಂಜೀವಿನಿ** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಮೊದಲ ಮುದ್ರಣ–೨೦೧೦
೨೧೭.	ಸಣ್ಣಯ್ಯ ಬಿ. ಎಸ್. (ಸಂ)	**ಪ್ರಾಕೃತ ಬಾಲಬೋಧೆ** ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ, ಶ್ರವಣಬೆಳಗೊಳ. ಮುದ್ರಣ–೨೦೦೩
೨೧೮.	ಸಬರದ ವಿಜಯಶ್ರೀ (ಸಂ)	**ವಚನಗಳಲ್ಲಿ ವೈದ್ಯಕೀಯ** ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ಮುದ್ರಣ–೨೦೧೪
೨೧೯.	ಸವದತ್ತಿಮಠ ಸಂಗಮೇಶ	**ಕನ್ನಡ ಭಾಷಾ ಸ್ವರೂಪ** ರೂಪರಶ್ಮಿ ಪ್ರಕಾಶನ, ಧಾರವಾಡ. ಐದನೆಯ ಮುದ್ರಣ–೨೦೦೭
೨೨೦.	ಸವದತ್ತಿಮಠ ಸಂಗಮೇಶ	**ಕನ್ನಡ ಭಾಷಾ ವ್ಯಾಸಂಗ** ರೂಪರಶ್ಮಿ ಪ್ರಕಾಶನ, ಧಾರವಾಡ. ಐದನೆಯ ಮುದ್ರಣ–೨೦೧೦
೨೨೧.	ಸಾಲೆತ್ತೊರೆ ಬಿ. ಎ., ಪಾಂಡುರಂಗರಾಯರು ದೇಸಾಯಿ	**ಕನ್ನಡ ನಾಡಿನ ಚರಿತ್ರೆ ಭಾಗ–೧** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ಹತ್ತನೆಯ ಮುದ್ರಣ–೧೯೯೭
೨೨೨.	ಸ್ಯಾದ್ವಾದಕೇಸರಿ ೧೦೮ ಶ್ರೀ ಆಚಾರ್ಯ ಪಾಯಸಾಗರ ಮುನಿಗಳು	**ಸ್ವಾಮಿ ಕಾರ್ತಿಕೇಯಾನುಪ್ರೇಕ್ಷಾ** ಶ್ರೀ ದಿಗಂಬರ ಜೈನ ಸ್ವಾದ್ವಾದ ಗ್ರಂಥಮಾಲೆ, ಧಾರವಾಡ ದ್ವಿತೀಯ ಮುದ್ರಣ–೨೦೦೮
೨೨೩.	ಸ್ಯಾದ್ವಾದಿ ಸಿ. ರಾಮಚಂದ್ರ	**ಜಿನಧರ್ಮ ದರ್ಪಣ ಪ್ರಶ್ನೋತ್ತರ ಮಾಲಾ** ಶ್ರೀ ಪಚ್ಚೆಪಾರ್ಶ್ವನಾಥಸ್ವಾಮಿ ಧರ್ಮ ಗ್ರಂಥ ಪ್ರಕಾಶನ ಸಮಿತಿ, ತುಮಕೂರು. ಮುದ್ರಣ–೨೦೦೨
೨೨೪.	ಸಿದ್ಧಲಿಂಗಯ್ಯ (ಪ್ರ.ಸಂ) ರಾಗೌ (ಸಂ)	**ದೇವಚಂದ್ರ ವಿರಚಿತ ರಾಜಾವಳಿ ಕಥೆ** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪ್ರಥಮ ಮುದ್ರಣ–೨೦೧೨
೨೨೫.	ಸೀತಾರಾಮಯ್ಯ ಎಂ. ವಿ.	**ಶಾಸ್ತ್ರ ಸಾಹಿತ್ಯ** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ತೃತೀಯ ಮುದ್ರಣ–೨೦೦೮
೨೨೬.	ಸೀತಾರಾಮಯ್ಯ ವಿ. (ಸಂ)	**ಕವಿ ಕಾವ್ಯ ಪರಂಪರೆ ವಡ್ಡಾರಾಧನೆ** ಸಪ್ನ ಬುಕ್ ಹೌಸ್, ಬೆಂಗಳೂರು ಎರಡನೆಯ ಮುದ್ರಣ–೨೦೧೨

೨೨೭. ಸೀತಾರಾಮಯ್ಯ ವಿ. (ಸಂ) **ನೇಮಿಚಂದ್ರ**
ಸಪ್ನ ಬುಕ್ ಹೌಸ್, ಬೆಂಗಳೂರು
ಎರಡನೆಯ ಮುದ್ರಣ–೨೦೧೧

೨೨೮. ಸೀತಾರಾಮಯ್ಯ ವಿ. (ಸಂ) **ಕವಿ ಕಾವ್ಯ ಪರಂಪರೆ ರನ್ನ**
ಸಪ್ನ ಬುಕ್ ಹೌಸ್, ಬೆಂಗಳೂರು.
ಎರಡನೆಯ ಮುದ್ರಣ–೨೦೧೨

೨೨೯. ಸೀತಾರಾಮಯ್ಯ ವಿ. (ಸಂ) **ಕವಿ ಕಾವ್ಯ ಪರಂಪರೆ ಜನ್ನ**
ಸಪ್ನ ಬುಕ್ ಹೌಸ್, ಬೆಂಗಳೂರು.
ಎರಡನೆಯ ಮುದ್ರಣ–೨೦೧೨

೨೩೦. ಸೀತಾರಾಮಯ್ಯ ವಿ. (ಸಂ) **ನಾಗಚಂದ್ರ**
ಸಪ್ನ ಬುಕ್ ಹೌಸ್, ಬೆಂಗಳೂರು.
ಎರಡನೆಯ ಮುದ್ರಣ–೨೦೧೧

೨೩೧. ಸುಂದರಂ ಆರ್ವಿಯಸ್ **ಶಾಸ್ತ್ರ ಸಾಹಿತ್ಯ**
ಚೇತನ ಬುಕ್ ಹೌಸ್, ಮೈಸೂರು.
ಪ್ರಥಮ ಮುದ್ರಣ–೨೦೧೨

೨೩೨. ಸುಜಾತಾ ಎಸ್. ವಿ. **ರತ್ನಾಕರವರ್ಣಿ ಮತ್ತು ಅವನ ಕೃತಿಗಳು**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಪ್ರಥಮ ಮುದ್ರಣ–೨೦೧೭

೨೩೩. ಸುಬ್ಬಣ್ಣ ಕೆ. ವಿ. **ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು**
ಅಕ್ಷರ ಪ್ರಕಾಶನ, ಸಾಗರ. ಪ್ರಥಮ ಮುದ್ರಣ–೨೦೦೦

೨೩೪. ಸುಬ್ರಾಯ ಭಟ್‌ಪಿ., ತಿಮ್ಮಪ್ಪ ಬಿ. ಕೆ. (ಅನು) **ಲೀಲಾ ತಿಲಕಂ**
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು ಮೊದಲ ಮುದ್ರಣ–೧೯೭೪

೨೩೫. ಸುಭದ್ರ ಝಾ (ಮೂಲ) ಕೃಷ್ಣಮೂತಿ ಕೆ. (ಅನು) **ಮಾರಿಸ್ ಮಿಚಿಟರ್ನಿಟ್ಸ್ ಅವರ ಭಾರತೀಯ ಸಾಹಿತ್ಯ ಚರಿತ್ರೆ ಸಂಪುಟ–೩ ಭಾಗ–೨ ಶಾಸ್ತ್ರೀಯ ಸಾಹಿತ್ಯ**
ಕನ್ನಡ ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ
ವಿಶ್ವವಿದ್ಯಾಲಯ ಧಾರವಾಡ. ಪ್ರಥಮ ಮುದ್ರಣ–೧೯೭೪

೨೩೬. ಹಂಪನಾ ಕಮಲಾ **ನಾಗಲದೇವಿ ವಿರಚಿತ ಷೋಡಶಭಾವನಾ ಕಾವ್ಯ**
ಜೈನ ಅಧ್ಯಯನ ಸಂಸ್ಥೆ, ಶ್ರೀಕ್ಷೇತ್ರ, ಶ್ರವಣಬೆಳಗೊಳ.
ಮೊದಲ ಮುದ್ರಣ–೨೦೦೪

೨೩೭. ಹಂಜಿ ಎಸ್. ವಿ. **ಸಂಸ್ಕೃತ ಕನ್ನಡ ನಿಘಂಟು**
ಸಂಕೇಶ್ವರ್ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಗದಗ
ಮೊದಲ ಮುದ್ರಣ–೧೯೬೪

೨೩೮. ಹಾಜವಗೋಳ ಧನವಂತ **ಸಾಹಿತ್ಯ ಶ್ರೀಗಂಧ**
ಮಹಾದೇವಿ ಪ್ರಕಾಶನ, ಧಾರವಾಡ
ಪ್ರಥಮ ಮುದ್ರಣ – ೨೦೦೨

೨೩೯. ಹಾಜವಗೋಳ ಧನವಂತ **ಸಂಶೋಧನ ಸೌಗಂಧ**
ಮಹಾದೇವಿ ಪ್ರಕಾಶನ, ಧಾರವಾಡ. ಮುದ್ರಣ–೨೦೧೨

೨೪೦. ಹಾಜವಗೋಳ ಧನವಂತ **ಕಂಗಳ ಅಳತೆ**
ಮಹಾದೇವಿ ಪ್ರಕಾಶನ, ಧಾರವಾಡ ಮುದ್ರಣ–೨೦೧೨

೨೪೧. ಹಾಸನ ಸುಧಾರ್ಥಿ (ಸಂಗ್ರ) **ಕವಿಕುಮುದೇಂದು ಮುನಿಯ ಸರ್ವಭಾಷಾಮಯೀಭಾಷಾ ಸಿರಿಭೂವಲಯದ ಆಯ್ದ ಸಾಂಗತ್ಯ ಪದ್ಯಗಳ ಸಂಗ್ರಹ**
ಶ್ರೀಮತಿ ಗಿರಿಜಾಶಂಕರ, ಹಾಲುಬಾಗಿಲು, ಹಾಸನ.
ಪ್ರಥಮ ಮುದ್ರಣ–೨೦೧೧

೨೪೨. ಹಿರೇಮಠ ಆರ್. ಸಿ. (ಪ್ರ.ಸಂ) ಕುಲಕರ್ಣಿ ಬಿ. ಎಸ್. (ಸಂ)
ನೇಮರಸ ಕವಿಕೃತ ಲೋಭದತ್ತ ಚರಿತೆ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಮೊದಲ ಮುದ್ರಣ–೧೯೭೩

೨೪೩. ಹೆಗಡೆ ಗಣೇಶ
ಜ್ಯೋತಿಷ್ಯ ಪ್ರವೇಶಿಕಾ
ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.
ಮೊದಲ ಮುದ್ರಣ–೨೦೧೪

೨೪೪. ಹೆರೂರು ವೇಣುಗೋಪಾಲ ದ.
ಶ್ರೀಧರಾಚಾರ್ಯ ವಿರಚಿತ ತ್ರಿಶತಿಕಾ ಅಥವಾ ಪಾಟೀಗಣಿತ ಸಾರ
ಕನ್ನಡ ಇತಿಹಾಸ ಸಂಶೋಧನ ಮಂಡಲ, ಧಾರವಾಡ
ಮೊದಲ ಮುದ್ರಣ–೨೦೦೮

೨೪೫. ಹೋತಪೇಟಿ ಜೀವಂಧರಕುಮಾರ ಕೆ.
ಸ್ವಾಮಿ ಸಮಂತಭದ್ರಾಚಾರ್ಯ ವಿರಚಿತ ರತ್ನಕರಂಡಕ ಶ್ರಾವಕಾಚಾರ
ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಬೆಂಗಳೂರು.
ತೃತೀಯ ಮುದ್ರಣ–೨೦೧೪

೨೪೬. –
ಶಾಸ್ತ್ರಸಾಹಿತ್ಯ ನಿರ್ಮಾಣ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪ್ರಥಮ ಮುದ್ರಣ–೧೯೭೫

೨೪೭. Alur K. R.
INDIAN ARCHAEOLOGY AND PALAEONOLOGY
Shrihari Prakashana, Dharwad.
Published in-1992

೨೪೮. Gai G. S.
INDIAN HISTORY, EPIGRAPHY AND CULTURE
Shrihari Prakashana, Dharwad.
Published in-1992

೨೪೯. Jain Prem Suman
PRAKRIT PRIMER
Bahubali Prakrit Vidyapeeth ®, National Institute of Prakrit Studies and Research, Shravanabelagola. Second Edition-2010

೨೫೦. Malammanavar Somashekhar G., Shivanna M. B.
PLANT PHYSIOLOGY
Kuvempu University, Directorate of Distance Education. Printed-2013

೨೫೧. Parinitha Mahishi. , Shivanna M. B.
MEDICINAL PLANTS AND ECONOMIC BOTONY
Kuvempu University, Directorate of Distance Education. Printed-2013

೨೫೨. Sundaram R. V. S. (Edi.) Patel Deven M. (Trans.)
KAVIRAJAMARGAM The way of the King of Poets,
Manohar Publications, New Delhi.
First Impression-2017

೨೫೩. Upadyaya Kamkumarnandi
Universal Message of Jainism
Upadyaya Kamkumarnandi
Second Edition-1998

೨೫೪. Winternitz M.
A HISTORY OF INDIAN LITERATURE
University of Calcutta.
Published in-1927

ಸಂಶೋಧನ ಗ್ರಂಥಗಳು

೧	ಇಜಾರಿ ಧನ್ಯಕುಮಾರ	**ಜೈನ ವೈದ್ಯಕೀಯ ಪರಂಪರೆ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಥಮ ಮುದ್ರಣ–೨೦೦೪
೨	ಕಲಬುರ್ಗಿ ಎಂ. ಎಂ.	**ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೦
೩	ಗೀತಾನಾವಲ್ ಶ್ರೀನಿವಾಸ್ (ಸಂಶೋ)	**ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತ ಪರಿಕಲ್ಪನೆ** ಮೈಸೂರು ವಿಶ್ವವಿದ್ಯಾಲಯ.
೪	ಚಿದಾನಂದಮೂರ್ತಿ ಎಂ.	**ಪೂರ್ಣ ಸೂರ್ಯಗ್ರಹಣ ಒಂದು ಸಮಾಜೋ ಸಾಂಸ್ಕೃತಿಕ ಸಮೀಕ್ಷೆ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮುದ್ರಣ–೨೦೧೧
೫	ಚಿದಾನಂದಮೂರ್ತಿ ಎಂ.	**ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ** ಸಪ್ನ ಬುಕ್ ಹೌಸ್, ಬೆಂಗಳೂರು. ಮುದ್ರಣ – ೨೦೧೫
೬	ಜೈನ ಹೀರಾಲಾಲ (ಹಿಂದಿ) ಮಿರ್ಜಿ ಅಣ್ಣಾರಾಯ (ಅನು)	**ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ** ಲಾಲಚಂದ ಹೀರಾಚಂದ ದೋಶೀ, ಜೈನ ಸಂಸ್ಕೃತಿ ಸಂರಕ್ಷಣ ಸಂಸ್ಥೆ, ಸೊಲ್ಲಾಪುರ. ಮುದ್ರಣ–೧೯೭೧
೭	ಜೈನಕೇರಿ, ಜಯದೇವಪ್ಪ ಜಗದೀಶ (ಸಂ)	**ಶಿವತತ್ತ್ವ ರತ್ನಾಕರ ಐತಿಹಾಸಿಕ ಮುಖಾಮುಖಿ** ಮರುಳ ಸಿದ್ಧೇಶ್ವರ ಅಧ್ಯಯನ ಕೇಂದ್ರ, ಕೆಳದಿ ಸಂಸ್ಥಾನ ಮಹಾಮಹತ್ತಿನ ಭುವನಗಿರಿ ಸಂಸ್ಥಾನಮಠ, ಕವಲೇದುರ್ಗ, ಶಿವಮೊಗ್ಗ ಮುದ್ರಣ–೨೦೧೧
೮	ತಿಮ್ಮಪ್ಪ ಬಿ. ಕೆ. (ಸಂಶೋ)	**ಶಬ್ದಮಣಿ ದರ್ಪಣ–ಲೀಲಾ ತಿಲಕ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೬
೯	ದೇಜಗೌ	**ಗದುಗಿನ ಭಾರತ ಒಂದು ಸಾಂಸ್ಕೃತಿಕ ಅಧ್ಯಯನ** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಮೊದಲ ಮುದ್ರಣ–೧೯೯೬
೧೦	ದೊರೆಸ್ವಾಮಿ	**ಕನ್ನಡದ ಶ್ರಾವಕಾಚಾರ ಕೃತಿಗಳು : ಒಂದು ಅಧ್ಯಯನ** ಮೈಸೂರು ವಿಶ್ವವಿದ್ಯಾಲಯ. ೨೦೦೩
೧೧	ನೇತ್ರಾವತಿ	**ಮಂಗರಾಜನ ಖಗೇಂದ್ರಮಣಿ ದರ್ಪಣ** ಅಭಿರುಚಿ ಪ್ರಕಾಶನ, ಸರಸ್ವತೀಪುರ, ಮೈಸೂರು. ಪ್ರಥಮ ಮುದ್ರಣ–೨೦೧೫
೧೨	ಪಾಟೀಲ ಶಿವಗೌಡ ಬಾ. (ಸಂಶೋ)	**ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೫
೧೩	ಬಳಿಗೇರ ನಾಗರಾಜ ವೀ. (ಸಂಶೋ)	**ಸಮಯಪರೀಕ್ಷೆ ಮತ್ತು ಧರ್ಮಾಮೃತ : ತೌಲನಿಕ ಅಧ್ಯಯನ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೨೦೧೪
೧೪	ಭಾವಿ ಭರಮಪ್ಪ	**ಉತ್ತರ ಕನ್ನಡ ಜಿಲ್ಲೆಯಲ್ಲಿ ಜೈನಧರ್ಮ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೨೦೧೮
೧೫	ಬಿರಾದಾರ್ ಸಂಗಮೇಶ ಎಂ.	**ವೈಯಾಕರಣಿ ಎರಡನೆಯ ನಾಗವರ್ಮ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೪
೧೬	ಮನಸೂರ ಸುಧಾ ವೆಂಕಟರಾವ	**ಮೂರನೆಯ ಮಂಗರಸ ಕವಿ ಮತ್ತು ಅವನ ಕೃತಿಗಳು** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೦
೧೭	ಮುದಿಗೌಡರ್ ಜಯಶ್ರೀ ಎನ್.	**ಲೋಕೋಪಕಾರಂ ಒಂದು ಸಾಂಸ್ಕೃತಿಕ ಅಧ್ಯಯನ**

		ಚಂದ್ರನಾಥ ಪ್ರಕಾಶನ, ಧಾರವಾಡ ಪ್ರಥಮ ಮುದ್ರಣ–೨೦೧೦
೧೮	ಯಣ್ಣಿಕಟ್ಟಿ ಚಿಕ್ಕಣ್ಣ	**ಸಾಳ್ವಭಾರತ ಒಂದು ಚಾರಿತ್ರಿಕ ಅಧ್ಯಯನ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಮೊದಲ ಮುದ್ರಣ–೨೦೧೧
೧೯	ವಿಘ್ನರಾಜ ಎಸ್. ಆರ್.	**ಕರ್ನಾಟಕದ ಸಂಸ್ಕೃತ ಜೈನಕವಿಗಳು** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪ್ರಥಮ ಮುದ್ರಣ–೨೦೦೮
೨೦	ಸರಸ್ವತಿ ಕೆ. ಎಚ್.	**ಕನ್ನಡ ಕಾವ್ಯಗಳಲ್ಲಿ ಸಂಗೀತ ಮತ್ತು ವಾದ್ಯಗಳು** ಕಾರ್ತಿಕ ಎಂಟರ್‌ಪ್ರೈಸಿಸ್, ಬೆಂಗಳೂರು. ಮೊದಲ ಮುದ್ರಣ–೨೦೧೩
೨೧	ಶಂಭುಲಿಂಗ ಟಿ.	**ಕರ್ಣಾಟಕ ಭಾಷಾಭೂಷಣಂ ಮತ್ತು ಆಂಧ್ರ ಭಾಷಾಭೂಷಣಮು ಒಂದು ತೌಲನಿಕ ಅಧ್ಯಯನ** ಚಿತ್ರದುರ್ಗ ಪ್ರಕಾಶನ, ಚಿತ್ರದುರ್ಗ. ಪ್ರಥಮ ಮುದ್ರಣ–೧೯೯೯
೨೨	ಸೋಸಲೆ ಎನ್. ಚಿನ್ನಸ್ವಾಮಿ	**ಕರಾವಳಿ ಕರ್ನಾಟಕದ ಜೈನ ಅರಸು ಮನೆತನಗಳು ಸಾಂಸ್ಕೃತಿಕ ಅಧ್ಯಯನ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಮೊದಲ ಮುದ್ರಣ–೨೦೧೪
೨೩	ಹಂಜೆ ಸಂಜಯ ಎನ್.	**ಗೋಕಾಕ ಪರಿಸರದಲ್ಲಿ ಜೈನಧರ್ಮ** ವಿದ್ಯಾಶ್ರೀ ಪ್ರಕಾಶನ, ಅಳಗವಾಡಿ ಮೊದಲ ಮುದ್ರಣ–೨೦೧೬
೨೪	ಹಾಜವಗೋಳ ಧನವಂತ	**ಮುಳುಗುಂದನಾಡು ಒಂದು ಅಧ್ಯಯನ** ಮಹಾದೇವಿ ಪ್ರಕಾಶನ, ಧಾರವಾಡ ಮೊದಲ ಮುದ್ರಣ–೨೦೦೪
೨೫	ಹಿರೇಮಠ ಚನ್ನಬಸಯ್ಯ ಮಹಾಕೂಟಯ್ಯ (ಸಂಶೋ)	**ಶ್ರೀಧರಾಚಾರ್ಯನ ಜಾತಕ ತಿಲಕ : ಒಂದು ಅಧ್ಯಯನ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೨೦೦೪
೨೬	ಹೆಗಡೆ ರಾಜೀವ ಆರ್. (ಸಂಶೋ)	**ಸಾಳ್ವ ಕವಿ : ಒಂದು ಅಧ್ಯಯನ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೨೦೦೧